|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಉಪ ಕಥೆಗಳು

ಡಾ| ಬಿ. ಎಮ್. ರಮೇಶ್




ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

# ಉಪಕಥೆಗಳು


ಆರುಣಿ ಉದ್ಧಾಲಕ ........ 6
ಉಪಮನ್ಯು ........ 9
ಸಮುದ್ರಮಥನ ........ 21
ಗರುಡೋತ್ಪತ್ತಿ ಮತ್ತು ಗರುಡನಿಂದ ಅಮೃತದ ಅಪಹರಣ ........ 36
ಶೇಷ ........ 75
ಶಕುಂತಲೋಪಾಖ್ಯಾನ ........ 80
ಯಯಾತಿ ........ 127
ಸಂವರಣ ಮತ್ತು ತಪತಿ ........ 197
ವಸಿಷ್ಠೋಪಾಽಖ್ಯಾನ ........ 208
ಔರ್ವೋಪಾಽಖ್ಯಾನ ........ 232
ಸುಂದೋಪಸುಂದೋಪಾಽಖ್ಯಾನ ........ 240
ಸಾರಂಗಗಳು ........ 256
ಸೌಭವಧೋಽಪಾಖ್ಯಾನ ........ 277
ನಲೋಪಾಽಖ್ಯಾನ ........ 306
ಅಗಸ್ತ್ಯೋಪಾಽಖ್ಯಾನ ........ 436
ಭಗೀರಥ ........ 471
ಋಷ್ಯಶೃಂಗ ........ 489
ಪರಶುರಾಮ ........ 506

ಚ್ಯವನ ....................................................................519
ಮಾಂಧಾತಾ ................................................................532
ಸೋಮಕ-ಜಂತು...........................................................537
ಗಿಡುಗ-ಪಾರಿವಾಳ ......................................................543
ಅಷ್ಟಾವಕ್ರ..................................................................550
ರೈಭ್ಯ-ಯವಕ್ರೀತ.........................................................570
ತಾರ್ಕ್ಷ್ಯ ಅರಿಷ್ಟನೇಮಿ.................................................585
ಅತ್ರಿ..........................................................................589
ವೈವಸ್ವತ ಮನು .........................................................595
ಮಂಡೂಕ-ವಾಮದೇವ...................................................603
ಮಧು-ಕೈಟಭ ವಧೆ .......................................................617
ಧುಂಧುಮಾರ..............................................................621
ಅಂಗಿರಸ...................................................................634
ಕಾರ್ತಿಕೇಯನ ಜನ್ಮ.....................................................650
ಮುದ್ಗಲ ....................................................................704
ರಾಮೋಪಾಽಖ್ಯಾನಃ ರಾಮಕಥೆ ....................................714
ಪತಿವ್ರತಾಮಹಾತ್ಮೆ: ಸಾವಿತ್ರಿ-ಸತ್ಯವಾನರ ಕಥೆ.............833
ಇಂದ್ರವಿಜಯೋಽಪಖ್ಯಾನ .............................................883
ದಂಭೋಧ್ಭವ..............................................................925
ಮಾತಲಿ ವರಾನ್ವೇಷಣೆ................................................931

ಗಾಲವ ಚರಿತೆ ..........................................................955
ವಿದುಲೋಪಾಽಖ್ಯಾನ...................................................1005
ತ್ರಿಪುರವಧೋಪಾಽಖ್ಯಾನ...............................................1027
ಪರಶುರಾಮನು ಅಸ್ತ್ರಗಳನ್ನು ಪಡೆದುದು.................................1046
ಪ್ರಭಾಸಕ್ಷೇತ್ರ ಮಹಾತ್ಮೆ..................................................1050
ತ್ರಿತಾಖ್ಯಾನ ...........................................................1056
ಸಾರಸ್ವತೋಪಾಖ್ಯಾನ...................................................1062
ಮಂಕಣಕ...............................................................1067
ಕಪಾಲಮೋಚನ ತೀರ್ಥ ಮಹಾತ್ಮೆ ..........................................1071
ವಿಶ್ವಾಮಿತ್ರ ...........................................................1073
ಬಕ ದಾಲ್ಭ್ಯನ ಚರಿತ್ರೆ ...................................................1076
ವಸಿಷ್ಠಾಪವಾಹ ಚರಿತ್ರೆ...................................................1079
ಕುಮಾರನ ಪ್ರಭಾವ-ಅಭಿಷೇಕ.............................................1088
ಬದರಿಪಾಚನ ತೀರ್ಥ ....................................................1115
ಅಸಿತದೇವಲ-ಜೈಗೀಷವ್ಯರ ಕಥೆ.........................................1122
ಮಹರ್ಷಿ ದಧೀಚಿ ಮತ್ತು ಸಾರಸ್ವತ ಮುನಿ ...............................1130
ವೃದ್ಧಕನ್ಯೆ.............................................................1136
ಕುರುಕ್ಷೇತ್ರ ಮಹಾತ್ಮೆ ....................................................1140

# ಆರುಣಿ ಉದ್ಧಾಲಕ

**ಆರುಣಿ ಉದ್ಧಾಲಕನ ಕಥೆಯು ವ್ಯಾಸಮಹಾಭಾರತದ ಆದಿಪರ್ವದ ಪೌಷ್ಯ ಪರ್ವದಲ್ಲಿ (ಅಧ್ಯಾಯ ೩) ಬರುತ್ತದೆ. ಈ ಕಥೆಯನ್ನು ನೈಮಿಷಾರಣ್ಯದಲ್ಲಿ ಸೂತ ಪೌರಾಣಿಕ ಉಗ್ರಶ್ರವನು ಶೌನಕಾದಿ ಮುನಿಗಳಿಗೆ ಹೇಳಿದನು.**

ಧೌಮ್ಯ ಎನ್ನುವ ಹೆಸರಿನ ಋಷಿಗೆ ಆರುಣಿ ಎಂಬ ಹೆಸರಿನ ಶಿಷ್ಯನಿದ್ದನು. ಒಂದು ದಿನ ಅವನು ಶಿಷ್ಯ ಆರುಣಿ ಪಾಂಚಾಲನನ್ನು

"ಹೋಗು. ಭತ್ತದ ಗದ್ದೆಗೆ ಒಡ್ಡನ್ನು ಕಟ್ಟು!"


ಎಂದು ಕಳುಹಿಸಿದನು. ಉಪಾಧ್ಯಾಯನಿಂದ ಈ ರೀತಿ ಆದೇಶಪಡೆದ ಪಾಂಚಾಲ ಆರುಣಿಯು ಅಲ್ಲಿಗೆ ಹೋದನು. ಆದರೆ ಭತ್ತದ ಗದ್ದೆಗೆ ಒಡ್ಡನ್ನು ಹಾಕಲು ಅವನಿಗೆ ಸಾದ್ಯವಾಗಲಿಲ್ಲ.

"ಕಷ್ಟವಾಯಿತಲ್ಲ!"

ಎಂದು ಯೋಚಿಸುತ್ತಿರುವಾಗ ಒಂದು ಉಪಾಯವನ್ನು ಕಂಡನು.

"ಈ ರೀತಿ ಮಾಡುತ್ತೇನೆ"

ಎಂದು ಅವನು ಭತ್ತದ ಗದ್ದೆಯಲ್ಲಿ ನೀರು ಹರಿಯುವಲ್ಲಿ ಅಡ್ಡಾಗಿ ಮಲಗಿಕೊಂಡನು. ಸ್ವಲ್ಪ ಸಮಯದ ನಂತರ ಅಯೋದ ಧೌಮ್ಯನು



ಶಿಷ್ಯರನ್ನು ಕೇಳಿದನು:

"ಪಾಂಚಾಲ ಆರುಣಿಯು ಎಲ್ಲಿ ಹೋಗಿದ್ದಾನೆ?"

ಅವರು ಉತ್ತರಿಸಿದರು:

"ನೀವೇ ಕಳುಹಿಸಿದಂತೆ ಅವನು ಭತ್ತದ ಗದ್ದೆಗೆ ಒಡ್ಡನ್ನು ಕಟ್ಟಲು ಹೋಗಿದ್ದಾನೆ."

ಶಿಷ್ಯರ ಈ ಮಾತಿಗೆ

"ನಾವೆಲ್ಲರೂ ಅವನು ಇದ್ದಲ್ಲಿಗೆ ಹೋಗೋಣ"

ಎಂದು ಹೇಳಿ ಅವನು ಅಲ್ಲಿಗೆ ಹೋಗಿ ಗಟ್ಟಿ ಧ್ವನಿಯಲ್ಲಿ ಕೂಗಿ ಕರೆದನು:

"ಪಾಂಚಾಲ ಆರುಣ! ಎಲ್ಲಿದ್ದೀಯೆ? ವತ್ಸ! ಇಲ್ಲಿ ಬಾ."

ಉಪಾಧ್ಯಾಯನ ಮಾತುಗಳನ್ನು ಕೇಳಿ ಆರುಣಿಯು ಭತ್ತದ ಗದ್ದೆಯಿಂದ ಮೇಲೆ ಬಂದು ಉಪಾಧ್ಯಾಯನ ಎದುರು ನಿಂತು ನಮಸ್ಕರಿಸಿ ಹೇಳಿದನು:

"ನಾನು ನೀರು ಹರಿಯುವ ಕಾಲುವೆಯಲ್ಲಿದ್ದೆನು. ಬೇರೆ ಯಾವರೀತಿಯಿಂದಲೂ ನೀರನ್ನು ತಡೆಗಟ್ಟಲು ಅಸಮರ್ಥನಾಗಿ ನಾನೇ ಸ್ವತಃ ಕಾಲುವೆಯ ಅಡ್ಡ ಮಲಗಿಕೊಂಡು ನೀರು ಹರಿಯದಂತೆ ತಡೆಗಟ್ಟಿದೆ. ನಿಮ್ಮ ಧ್ವನಿಯನ್ನು ಕೇಳಿ ಎದ್ದು ನೀರುಹರಿಯಲು ಬಿಟ್ಟೆ. ಭಗವನ್!

> ನಿಮಗೆ ಅಭಿವಾದಿಸುತ್ತೇನೆ. ಆಜ್ಞೆಯನ್ನು ನೀಡಿ. ನಾನೀಗ ಏನು ಮಾಡಲಿ?”

ಆಗ ಉಪಾದ್ಯಾಯನು ಹೇಳಿದನು:

> “ನೀನು ಭತ್ತದ ಗದ್ದೆಯ ಕಾಲುವೆಯಲ್ಲಿ ಅಡ್ಡ ಮಲಗಿ ನೀರು ಹರಿಯುವುದನ್ನು ನಿಲ್ಲಿಸಿದ್ದೀಯೆ. ಆದುದರಿಂದ ನಿನ್ನ ಹೆಸರು ಇನ್ನು ಮುಂದೆ ಉದ್ದಾಲಕ ಎಂದಾಗಲಿ.”

ಉಪಾದ್ಯಾಯನು ಅವನಿಗೆ ಈ ರೀತಿ ಅನುಗ್ರಹವಿತ್ತನು:

> “ನನ್ನ ವಚನವನ್ನು ಪರಿಪಾಲಿಸಿದುದಕ್ಕಾಗಿ ನಿನಗೆ ಶ್ರೇಯಸ್ಸು ದೊರೆಯುತ್ತದೆ. ಸರ್ವ ವೇದಗಳು ಮತ್ತು ಸರ್ವ ಧರ್ಮಶಾಸ್ತ್ರಗಳು ನಿನ್ನಲ್ಲಿ ಪ್ರತಿಭೆಗೊಳ್ಳುತ್ತವೆ.”

ಉಪಾದ್ಯಾಯನ ಈ ಮಾತುಗಳನ್ನು ಕೇಳಿ ಅವನು ತನಗೆ ಇಷ್ಟಬಂದ ದೇಶಕ್ಕೆ ಹೊರಟುಹೋದನು.

# ಉಪಮನ್ಯು

ಉಪಮನ್ಯುವಿನ ಈ ಕಥೆಯು ವ್ಯಾಸ ಮಹಾಭಾರತದ ಆದಿ ಪರ್ವದ ಪೌಷ್ಯಪರ್ವ (ಅಧ್ಯಾಯ ೩) ದಲ್ಲಿ ಬರುತ್ತದೆ. ಈ ಕಥೆಯನ್ನು ನೈಮಿಷಾರಣ್ಯದಲ್ಲಿ ಸೂತ ಪೌರಾಣಿಕ

## ಉಗ್ರಶ್ರವನು ಶೌನಕಾದಿ ಮುನಿಗಳಿಗೆ ಹೇಳಿದನು.

ಅಯೋದ ಧೌಮ್ಯನ ಇನ್ನೊಬ್ಬ ಶಿಷ್ಯನ ಹೆಸರು ಉಪಮನ್ಯು. ಉಪಾಧ್ಯಾಯನು ಅವನನ್ನು

> "ವತ್ಸ ಉಪಮನ್ಯು! ಗೋವುಗಳನ್ನು ರಕ್ಷಿಸು"

ಎಂದು ಕಳುಹಿಸಿದನು. ಉಪಾಧ್ಯಾಯನ ವಚನದಂತೆ ಅವನು ಗೋವುಗಳನ್ನು ರಕ್ಷಿಸಲು ಹೋದನು. ಇಡೀ ದಿನ ಗೋವುಗಳನ್ನು ರಕ್ಷಿಸಿ ದಿವಸಕ್ಷಯವಾಗುತ್ತಿದ್ದಂತೆ ಉಪಾಧ್ಯಾಯನ ಬಳಿಬಂದು ನಮಸ್ಕರಿಸಿ ಅವನ ಎದಿರು ನಿಂತನು. ಅವನು ದಷ್ಟಪುಷ್ಟನಾಗಿರುವುದನ್ನು ನೋಡಿ ಉಪಾಧ್ಯಾಯನು ಹೇಳಿದನು:

> "ವತ್ಸ ಉಪಮನ್ಯು! ಇಷ್ಟು ದಷ್ಟಪುಷ್ಟನಾಗಿರಲು ಏನು ಮಾಡುತ್ತೀಯೆ?"

ಅವನು ಉಪಾಧ್ಯಾಯನಿಗೆ ಉತ್ತರಿಸಿದನು:

> "ಭಿಕ್ಷೆಬೇಡಿ ನನ್ನ ಹೊಟ್ಟೆ ಹೊರೆದುಕೊಳ್ಳುತ್ತೇನೆ."

ಉಪಾಧ್ಯಾಯನು ಅವನಿಗೆ ಪುನಃ ಹೇಳಿದನು:

> "ಭಿಕ್ಷವನ್ನು ನನಗೆ ನೈವೇದ್ಯಮಾಡದೇ ಉಪಯೋಗಿಸಕೂಡದು."

ಹೀಗೆ ಕೇಳಿದನಂತರ ಪುನಃ ಅವನು ಗೋವುಗಳನ್ನು ರಕ್ಷಿಸಲು

ಹೋದನು. ರಕ್ಷಿಸಿಯಾದ ನಂತರ ಉಪಾಧ್ಯಾಯನ ಎದಿರು ನಿಂತು ನಮಸ್ಕರಿಸಿದನು. ಈಗಲೂ ಕೂಡ ಅವನು ದಷ್ಟ ಪುಷ್ಟನಾಗಿದ್ದುದನ್ನು ನೋಡಿ ಕೇಳಿದನು:

"ವತ್ಸ ಉಪಮನ್ಯು! ಏನನ್ನೂ ಇಟ್ಟುಕೊಳ್ಳದೇ ನಿನ್ನ ಸರ್ವ ಭಿಕ್ಷವನ್ನೂ ನನಗೆ ಕೊಟ್ಟಿದ್ದೀಯೆ. ಈಗ ನೀನು ಹೇಗೆ ನಿನ್ನ ಹೊಟ್ಟೆ ಹೊರೆದುಕೊಳ್ಳುತ್ತಿರುವೆ?"

ಹೀಗೆ ಕೇಳಿದ ಉಪಾಧ್ಯಾಯನಿಗೆ ಅವನು ಉತ್ತರಿಸಿದನು:

"ಒಮ್ಮೆ ಪಡೆದ ಭಿಕ್ಷೆಯನ್ನು ನಿಮಗೆ ಒಪ್ಪಿಸಿ ನಂತರ ಪುನಃ ಭಿಕ್ಷೆಬೇಡಲು ಹೋಗುತ್ತೇನೆ. ಈ ರೀತಿ ನನ್ನ ಹೊಟ್ಟೆ ಹೊರೆದುಕೊಳ್ಳುತ್ತೇನೆ."

ಅದಕ್ಕೆ ಉಪಾಧ್ಯಾಯನು ಉತ್ತರಿಸಿದನು:

"ಇದು ಗುರುವಿಗೆ ನಡೆದುಕೊಳ್ಳುವ ನ್ಯಾಯ ಮಾರ್ಗವಲ್ಲ. ಎರಡನೇ ಸಾರಿ ಭಿಕ್ಷೆಬೇಡುವುದರಿಂದ ನೀನು ಅನ್ಯ ಭಿಕ್ಷುಕರಿಗೆ ಹೊಟ್ಟೆ ಹೊರೆದುಕೊಳ್ಳಲು ಅಡ್ಡಿಯಾಗುತ್ತಿರುವೆ. ನಿನ್ನ ಈ ರೀತಿಯು ಲುಬ್ಧವಾಗಿದೆ."

ಹೀಗೆ ಕೇಳಿದ ಅವನು ಗೋವುಗಳನ್ನು ರಕ್ಷಿಸಲು ಹೋದನು. ಗೋವುಗಳನ್ನು ರಕ್ಷಿಸಿ ಪುನಃ ಉಪಾಧ್ಯಾಯನನ ಮನೆಗೆ ಬಂದು ಉಪಾಧ್ಯಾಯನ ಎದುರಿನಲ್ಲಿ ನಿಂತು ನಮಸ್ಕರಿಸಿದನು. ಈಗಲೂ

ಅವನು ದಷ್ಟಪುಷ್ಟನಾಗಿರುವುದನ್ನು ನೋಡಿ ಉಪಾಧ್ಯಾಯನು ಪುನಃ ಕೇಳಿದನು:

"ನಿನ್ನ ಸರ್ವ ಭಿಕ್ಷವನ್ನೂ ನಾನು ತೆಗೆದುಕೊಂಡಿದ್ದೇನೆ, ಮತ್ತು ನೀನು ಎರಡನೇ ಬಾರಿ ಭಿಕ್ಷೆಗೆಂದು ಹೋಗುವುದಿಲ್ಲ. ಆದರೂ ನೀನು ದಷ್ಟಪುಷ್ಟನಾಗಿದ್ದೀಯೆ. ನಿನ್ನ ಹೊಟ್ಟೆಯನ್ನು ಹೊರೆಯಲು ಏನು ಮಾಡುತ್ತಿರುವೆ?"

ಆಗ ಅವನು ಉಪಾಧ್ಯಾಯನಿಗೆ ಉತ್ತರಿಸಿದನು:

"ಈ ಹಸುಗಳ ಹಾಲನ್ನು ಕುಡಿದು ನನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದೇನೆ."

ಅದಕ್ಕೆ ಉಪಾಧ್ಯಾಯನು ಉತ್ತರಿಸಿದನು:

"ನನ್ನ ಅನುಮತಿಯಿಲ್ಲದೇ ನೀನು ಹಾಲನ್ನು ಕುಡಿಯುವುದು ಸರಿಯಲ್ಲ."

"ಹಾಗೆಯೇ ಮಾಡುತ್ತೇನೆ" ಎಂದು ವಚನವನ್ನಿತ್ತ ಅವನು ಗೋವುಗಳನ್ನು ರಕ್ಷಿಸಿ ಪುನಃ ಉಪಾಧ್ಯಾಯನ ಮನೆಗೆ ಬಂದು ಗುರುವಿನ ಎದಿರು ನಿಂತು ಸಮಸ್ಕರಿಸಿದನು. ಪುನಃ ದಷ್ಟಪುಷ್ಟವಾಗಿರುವ ಅವನನ್ನು ನೋಡಿ ಉಪಾಧ್ಯಾಯನು ಹೇಳಿದನು:

"ಭಿಕ್ಷೆಯನ್ನೂ ಬೇಡುತ್ತಿಲ್ಲ. ಹಾಲನ್ನೂ ಕುಡಿಯುವುದಿಲ್ಲ. ಆದರೂ ದಷ್ಟಪುಷ್ಠನಾಗಿರುವೆ. ನಿನ್ನ ಹೊಟ್ಟೆ ಹೊರೆಯಲು

ಏನು ಮಾಡುತ್ತಿರುವೆ?"

ಉಪಾಧ್ಯಾಯನ ಈ ಪ್ರಶ್ನೆಗೆ ಅವನು ಉತ್ತರಿಸಿದನು:

"ಕರುಗಳು ತಾಯಂದಿರ ಮೊಲೆ ಕುಡಿಯುವಾಗ ಹೊರಗೆ ಬೀಳುವ ಹಾಲಿನ ನೊರೆಯನ್ನು ನಾನು ಕುಡಿಯುತ್ತೇನೆ."

ಅದಕ್ಕೆ ಉಪಾಧ್ಯಾಯನು ಉತ್ತರಿಸಿದನು:

"ನಿನ್ನ ಮೇಲಿನ ಅನುಕಂಪದಿಂದ ಈ ಕರುಗಳು ಹೆಚ್ಚು ನೊರೆಯನ್ನು ಚೆಲ್ಲುತ್ತವೆ. ಈ ರೀತಿಯಲ್ಲಿ ಅವುಗಳು ತಮಗೇ ಆಹಾರವನ್ನು ಕಡಿಮೆಮಾಡಿಕೊಳ್ಳುತ್ತವೆ. ಈ ರೀತಿ ಮಾಡುವುದೂ ಸರಿಯಲ್ಲ."

"ಹಾಗೆಯೇ ಮಾಡುತ್ತೇನೆ" ಎಂದು ವಚನವನ್ನಿತ್ತು ಅವನು ನಿರಾಹಾರನಾಗಿ ಗೋವುಗಳನ್ನು ಕಾಯಲು ಹೋದನು. ಅವನು ಭಿಕ್ಷೆ ಬೇಡಲು ಹೋಗಲಿಲ್ಲ, ಹಾಲನ್ನು ಕುಡಿಯಲಿಲ್ಲ, ಕೆನೆಯನ್ನೂ ನೆಕ್ಕಲಿಲ್ಲ.

ಒಮ್ಮೆ ಅರಣ್ಯದಲ್ಲಿ ಹಸಿವೆಯಿಂದ ಬಳಲಿದ ಅವನು ಅರ್ಕಪತ್ರಗಳನ್ನು ತಿಂದನು. ಅರ್ಕಪತ್ರಗಳನ್ನು ಸೇವಿಸಿದುದರಿಂದ ಅದರ ಕ್ಷಾರ, ಕಟು ಮತ್ತು ಉಷ್ಣದ ಗುಣಗಳಿಂದಾಗಿ ಅವನ ಕಣ್ಣುಗಳು ಕುರುಡಾದವು. ಅಂಧನಾಗಿ, ದಾರಿಯನ್ನು ಕಾಣದೇ ಒಂದು ಬಾವಿಯಲ್ಲಿ ಬಿದ್ದನು. ಅವನು ಬರದೇ ಇದ್ದುದನ್ನು ನೋಡಿ ಉಪಾಧ್ಯಾಯನು ತನ್ನ ಶಿಷ್ಯರಿಗೆ ಹೇಳಿದನು:

“ಉಪಮನ್ಯುವು ನನ್ನ ಎಲ್ಲ ರೀತಿಯ ಪ್ರತಿಬಂಧದಿಂದ ಸಿಟ್ಟಾಗಿರಬಹುದು. ಅದಕ್ಕಾಗಿಯೇ ಅವನು ಬರುವುದನ್ನು ತಡಮಾಡುತ್ತಿದ್ದಾನೆ.”

ಹೀಗೆ ಹೇಳುತ್ತಾ ಅವನು ಅರಣ್ಯಕ್ಕೆ ಹೋಗಿ ಅಲ್ಲಿ ಉಪಮನ್ಯುವನ್ನು ಕರೆಯ ತೊಡಗಿದನು:

“ಉಪಮನ್ಯು! ಎಲ್ಲಿದ್ದೀಯೆ? ವತ್ಸ! ಇಲ್ಲಿ ಬಾ.”

ಉಪಾಧ್ಯಾಯನ ಆ ಕರೆಯನ್ನು ಕೇಳಿ ಉಚ್ಛ ಸ್ವರದಲ್ಲಿ ಕೂಗಿ ಹೇಳಿದನು:

“ಉಪಾಧ್ಯಾಯರೇ! ನಾನು ಇಲ್ಲಿ ಬಾವಿಯಲ್ಲಿ ಬಿದ್ದಿದ್ದೇನೆ.”

ಆಗ ಉಪಾಧ್ಯಾಯನು ತಿರುಗಿ ಕೇಳಿದನು:

“ಬಾವಿಯಲ್ಲಿ ಹೇಗೆ ಬಿದ್ದೆ?”

ಅದಕ್ಕೆ ಉತ್ತರಿಸಿದನು:

“ಅರ್ಕಪತ್ರಗಳನ್ನು ತಿಂದು ಅಂಧನಾಗಿದ್ದೇನೆ. ಆದ್ದರಿಂದ ಬಾವಿಯಲ್ಲಿ ಬಿದ್ದಿದ್ದೇನೆ.”

ಆಗ ಉಪಾಧ್ಯಾಯನು ಹೇಳಿದನು:

“ಅಶ್ವಿನಿಯರನ್ನು ಸ್ತುತಿಸು. ಆ ದೇವವೈದ್ಯರು ನಿನ್ನ ದೃಷ್ಟಿಯನ್ನು ಸರಿಮಾಡುವರು.”

ಉಪಾಧ್ಯಾಯನ ಮಾತಿನಂತೆ ಋಗ್ವೇದದಲ್ಲಿರುವ ಶ್ಲೋಕಗಳಿಂದ ಅಶ್ವಿನೀ ದೇವತೆಗಳನ್ನು ಸ್ತುತಿಸಲು ತೊಡಗಿದನು:

"ಅಶ್ವಿನೀ ದೇವತೆಗಳೇ! ನೀವು ಎಲ್ಲರಿಗಿಂತಲೂ ಮೊದಲು ಯಜ್ಞಕ್ಕೆ ಹೋಗುವವರು. ಅಶ್ವಜಾತಿಯ ಸ್ವಭಾವವನ್ನು ಅನುಸರಿಸಿ ಹುಟ್ಟಿದವರು. ನಿಮ್ಮ ಪ್ರಕಾಶವು ಅಗ್ನಿ ಸಮಾನ. ನೀವು ಸ್ವಸಾಮರ್ಥ್ಯದಿಂದ ಅನೇಕ ರೂಪಗಳನ್ನು ಧರಿಸುತ್ತೀರಿ. ನಿಮ್ಮ ಗಮನವು ಮನೋಹರವಾದುದು. ನೀವು ರಜೋಗುಣ ರಹಿತರಾಗಿದ್ದು ಎಲ್ಲ ಲೋಕಗಳಲ್ಲಿಯೂ ನಿಮ್ಮ ವಿಮಾನವನ್ನು ನಡೆಸುತ್ತೀರಿ. ನಿಮ್ಮನ್ನು ನಾನು ಈ ವಾಕ್ಕುಗಳಿಂದ ಸ್ತುತಿಸುತ್ತೇನೆ. ಪಕ್ಷಿಗಳಂತೆ ವೇಗವಾಗಿ ಹೋಗುವ ಸುವರ್ಣಮಯ ವಿಮಾನಗಳಲ್ಲಿ ಕುಳಿತು ನೀವು ಹೋಗುತ್ತೀರಿ. ನಿಮ್ಮ ಮೈ ಚಿನ್ನದ ಬಣ್ಣದ್ದು. ನೀವು ಆರೋಗ್ಯ ಶಕ್ತಿಯನ್ನು ಕೊಡುತ್ತೀರಿ. ನೀವು ಪರಲೋಕ ಬಂಧುಗಳನ್ನೂ ಭಕ್ತರನ್ನೂ ಆಪತ್ತುಗಳಿಂದ ಉದ್ಧರಿಸುತ್ತೀರಿ. ನೀವು ಸುಳ್ಳಾಡುವುದಿಲ್ಲ. ನೀವು ಅಶ್ವರೂಪದಲ್ಲಿದ್ದ ಸೂರ್ಯದೇವನ ಮೂಗಿನ ಹೊಳ್ಳೆಗಳಿಂದ ಹುಟ್ಟಿದಿರಿ. ನಿಮ್ಮ ಮೂಗುಗಳು ಸುಂದರ. ಸೂರ್ಯನ ಮಕ್ಕಳಾಗಿದ್ದು ತಂದೆಯ ಸಾಮರ್ಥ್ಯದಿಂದ ಕೃಷ್ಣ ಕುಷ್ಠ ರೋಗವನ್ನು ಯಶಸ್ವಿಯಾಗಿ ಹೋಗಲಾಡಿಸುವ ವೈದ್ಯರು ನೀವು. ನೀವು ಒಳ್ಳೆಯ ಮೈಬಣ್ಣವನ್ನೂ ನೇತ್ರಶಕ್ತಿಯನ್ನೂ ನೀಡುತ್ತೀರಿ. ಹೇಗೆ ನೇಕಾರರು ದಾರದ



ಜೊತೆ ಸೇರಿದ ಕಪ್ಪು ಕೂದಲು ಮುಂತಾದವುಗಳನ್ನು ತೆಗೆದು ಹಾಕಿ ಶುದ್ಧ ದಾರದಿಂದ ನೇಯುತ್ತಾರೆಯೋ ಹಾಗೆ ನೀವು ಶ್ಯಾಮ ಕುಷ್ಠವನ್ನು ತೊಡೆದುಹಾಕಿ ಒಳ್ಳೆಯ ಶುಕ್ರಕಾಂತಿಯನ್ನು ನೀಡುತ್ತೀರಿ. ಅಶ್ವಿನೀ ದೇವತೆಗಳೇ! ಗರುಡನಷ್ಟೇ ಪರಾಕ್ರಮಿ ಮತ್ತು ವೇಗಶಾಲಿಯಾದ ಒಂದು ನಾಯಿಯು ಗುಬ್ಬಚ್ಚಿಯ ಜಾತಿಯ ಒಂದು ಹೆಣ್ಣು ಪಕ್ಷಿಯನ್ನು ಬಾಯಲ್ಲಿ ಕಚ್ಚಿ ಕೊಂಡಿದ್ದಾಗ ನೀವು ಅದನ್ನು ಬಿಡಿಸಿ ಅದಕ್ಕೆ ಪುನಃ ಜೀವನ ಸೌಖ್ಯವನ್ನು ದೊರಕಿಸಿಕೊಟ್ಟಿರಿ. ಸೋಮಯಾಗದಲ್ಲಿ ಇಂದ್ರನೇ

ಮೊದಲಾದ ದೇವತೆಗಳಿದ್ದರೂ ಯಜಮಾನನನ್ನು ಕಾಡಿಸುವ ತುಂಟ ಹಸುಗಳ ಮೇಲ್ವಿಚಾರಣೆಯು ನಿಮ್ಮಿಬ್ಬರ ಹೊರತು ಬೇರೆ ಯಾರಿಗೂ ಸಾದ್ಯವಿಲ್ಲ ಎಂದು ತಿಳಿದು ಅವುಗಳನ್ನು ಕಾಪಾಡುವುದಕ್ಕೆ ನಿಮ್ಮನ್ನೇ ಪ್ರಾರ್ಥಿಸಿದ್ದನು. ೩೬೦ ಹಸುಗಳು ಒಂದು ವರ್ಷ ಪರ್ಯಂತವೂ ತಮ್ಮ ಸರದಿಯ ಪ್ರಕಾರ ಹಾಲು ಕರೆದು ಘರ್ಮವನ್ನು ಸಿದ್ಧಪಡಿಸಿ ಕೊಡುತ್ತವೆ. ಘರ್ಮವನ್ನು ತಯಾರಿಸಲು ಒಂದೊಂದು ದಿನಕ್ಕೆ ಒಂದೊಂದು ಹಸುವು ಹಾಲನ್ನು ನೀಡುವುದರಿಂದ, ಅವುಗಳೆಲ್ಲವೂ ಪ್ರತ್ಯೇಕ ಕೊಟ್ಟಿಗೆಗಳಲ್ಲಿ ಇರುವಂತೆ ತೋರುತ್ತವೆ. ಅವುಗಳನ್ನು ಅಧ್ವರ್ಯ ಎಂಬ ಒಬ್ಬನೇ ಋತ್ವಿಕನು ಕರೆಯುತ್ತಾನೆ. ಹೀಗೆ ಸಿದ್ಧಪಡಿಸಿದ ಉತ್ತಮ ಘರ್ಮವನ್ನು ಯಾಜ್ಞಿಕರು ಅಶ್ವಿನೀದೇವತೆಗಳಿಗೆ ಸಮರ್ಪಿಸುತ್ತಾರೆ. ಜಗತ್ಪಾಲಕ ಸೂರ್ಯನ ರಥಕ್ಕೆ ಕಾಲವೇ ಚಕ್ರ. ಆ ಕಾಲಚಕ್ರಕ್ಕೆ ಸಂವತ್ಸರವೇ ಒಂದು ಸ್ಥೂಲ ನಾಭಿ. ಕಾಲಚಕ್ರಕ್ಕೆ ಒಟ್ಟು ೭೦೦ ಅರಗಳಿವೆ: ೩೫೦ ಹಗಲುಗಳು ಮತ್ತು ೩೫೦ ರಾತ್ರಿಗಳು. ಈ ಚಕ್ರದ ಹಳಿಗೆ ಸಾವನ ಸಂವತ್ಸರದ ೩೬೦ ದಿವಸಗಳಲ್ಲಿ ಉಳಿದ ಹತ್ತು ಹಗಲುಗಳು ಮತ್ತು ಹತ್ತು ರಾತ್ರಿಗಳು ಉದ್ದವಾದ ಅರಗಳಂತೆ ಸೇರಿಕೊಂಡಿವೆ. ಒಂದು ಚಕ್ರದಿಂದ ರಥವು ಚಲಿಸುವುದಿಲ್ಲ. ಆದುದರಿಂದ ಇನ್ನೊಂದು ಚಕ್ರದ ಕಲ್ಪನೆಯನ್ನು ಮಾಡಿದ್ದಾರೆ.

ಕಾಲಚಕ್ರದ ಸಂವತ್ಸರವೆಂಬ ಸ್ಥೂಲ ನಾಭಿಯಲ್ಲಿ ಹನ್ನೆರಡು ಮಾಸಗಳು ಹನ್ನೆರಡು ಅರಗಳಂತಿವೆ. ಆರು ಋತುಗಳು ಆ ಚಕ್ರದ ಆರು ನಾಭಿಗಳು. ಆ ಚಕ್ರಕ್ಕೆ ಒಂದೇ ಒಂದು ದೃಢ ಅಚ್ಚು ಮರವಿದೆ. ಸ್ವರ್ಗ ರಕ್ಷಕ ಮತ್ತು ಎಲ್ಲ ದೇವತೆಗಳ ಆಧಾರವಾಗಿರುವ ಇಂತಹ ಚಕ್ರವನ್ನು ಅಶ್ವಿನೀ ದೇವತೆಗಳು ನಡೆಸುತ್ತಾರೆ. ಹೀಗೆ ಜಗತ್ತಿಗೆ ಆಧಾರ ಸೂರ್ಯದೇವನ ರಥ ಚಕ್ರವನ್ನು ನಡೆಸುವ ಅಶ್ವಿನೀ ದೇವತೆಗಳೇ! ಸಂಕಟದಲ್ಲಿ ಸಿಕ್ಕಿಬಿದ್ದಿರುವ ನನ್ನನ್ನು ಪಾರುಮಾಡಿ. ಅಶ್ವಿನೀ ದೇವತೆಗಳೇ! ಮನುಷ್ಯರಿಗೆ ಉಪಕಾರಿಯಾದ ನೀರಿನಲ್ಲಿ ಚಂದ್ರನ ಶಕ್ತಿಯು ಇರುವುದರಿಂದ ನೀವು ನೀರಿನಿಂದ ಚಿಕಿತ್ಸೆ ನೀಡುತ್ತೀರಿ. ಮೇರು ಪರ್ವತದಿಂದ ಹೊರಟು ಬರುವ ಅನ್ನವನ್ನು ಕೊಡಬಲ್ಲ ಮಳೆಯನ್ನೂ ನೀವು ಬೇಗ ಉಂಟುಮಾಡುತ್ತೀರಿ. ಅಶ್ವಿನೀ ದೇವತೆಗಳು ಇತರ ದೇವತೆಗಳಿಗಿಂತ ಮೊದಲೇ ಸೋಮಯಾಗಕ್ಕೆ ಹೋಗುತ್ತಾರೆ. ಆದುದರಿಂದ ಇವರು ಇತರ ದೇವತೆಗಳ ಪ್ರಾದುರ್ಭಾವ ಸೂಚಕರು. ಋಷಿಗಳು ಮತ್ತು ಮನುಷ್ಯರು ಈ ದೇವತೆಗಳನ್ನು ಕ್ರಮವರಿದು ಪೂಜಿಸುತ್ತಾರೆ. ದೇವತೆಗಳು ಮತ್ತು ಮನುಷ್ಯರು ನಿಮ್ಮ ಐಶ್ವರ್ಯ ಪ್ರತಿಪಾದಕ ಸ್ತೋತ್ರಮಾಡುತ್ತಾರೆ. ಅಶ್ವಿನೀ ದೇವತೆಗಳು ಸೂರ್ಯಕಿರಣಗಳ ಏಳು ಬಣ್ಣಗಳನ್ನೂ ಆಯಾ ಸಮಯಗಳಲ್ಲಿ ಪ್ರಕಟಪಡಿಸಿ ಅವು ಭೂಮಂಡಲವನ್ನು ಆವರಿಸುವಂತೆ

ಮಾಡುತ್ತಾರೆ. ಅವರ ಇಚ್ಛೆಯಂತೆ ಈ ಕಿರಣಗಳು ಜನರಿಗೆ ರೋಗಪರಿಹಾರಕ ಮತ್ತು ಆರೋಗ್ಯಪ್ರದ. ಈ ರೀತಿಯ ಮಹಿಮೆಯ ಅವರನ್ನು ದೇವತೆಗಳೂ ಮನುಷ್ಯರೂ ಸ್ತುತಿಸುತ್ತಾರೆ. ಕಮಲದ ಮಾಲೆಗಳನ್ನು ಧರಿಸಿ ಅಶ್ವಿನೀ ದೇವತೆಗಳು ಅತೀವ ಸುಂದರರಾಗಿ ಕಾಣುತ್ತಾರೆ. ಅಶ್ವಿನೀ ದೇವತೆಗಳೇ ಸೋಮಯಾಗಕ್ಕೆ ಮೊದಲು ಹೋಗುವವರಾದುದರಿಂದ ಇವರನ್ನು ಬಿಟ್ಟು ಇತರ ದೇವತೆಗಳು ತಮ್ಮ ಅಂಶವನ್ನು ಸ್ವೀಕರಿಸುವುದಿಲ್ಲ. ಅಂಥಹ ಮರಣರಹಿತರೂ, ಯಜ್ಞವರ್ಧಕರೂ ಆದ ಅಶ್ವಿನೀ ದೇವತೆಗಳನ್ನು ಕಣ್ಣುಗಳಿಲ್ಲದೆ ಸಾಧನ ಹೀನನಾಗಿರುವ ನಾನು ಮನಸ್ಸಿನಲ್ಲಿಯೇ ಪೂಜಿಸುತ್ತೇನೆ. ಅಶ್ವಿನೀ ದೇವತೆಗಳು ನವಮಾಸಕಾಲ ಗರ್ಭದಲ್ಲಿದ್ದು ನಂತರ ಹುಟ್ಟಿದವರಲ್ಲ. ಅಶ್ವರೂಪ ಸೂರ್ಯನಿಂದ ವಡವಾ ರೂಪಿಣಿ ಸಂಜ್ಞಾದೇವಿಯಲ್ಲಿ ಮುಖಸಂಬಂಧಮಾತ್ರದಿಂದ ತರುಣರಾಗಿಯೇ ಹುಟ್ಟಿದವರು. ಅಲ್ಪವಾದ ಪ್ರಾಣಶಕ್ತಿ ಮತ್ತು ಆಯುಸ್ಸನ್ನುಳ್ಳ ಮನುಷ್ಯ ಶಿಶುಗಳಿಗೆ ಮಾತ್ರವೇ ಒಂಭತ್ತು ತಿಂಗಳು ತಾಯಿಯ ಗರ್ಭವಾಸವೂ, ಹುಟ್ಟಿದ ನಂತರ ತಮ್ಮ ಜೀವನಕ್ಕೆ ತಾಯಿಯ ಹಾಲಿನ ಅಪೇಕ್ಷೆಯೂ ಇರುತ್ತದೆ. ದೇವತೆಗಳಿಗೆ ಹೀಗಿಲ್ಲ. ಆದುದರಿಂದ ನಿತ್ಯ ತರುಣ ಅಶ್ವಿನೀ ದೇವತೆಗಳೇ! ಸಾಮರ್ಥ್ಯಶಾಲಿಗಳಾದ ನೀವು

ಸುಖಜೀವನವನ್ನು ಮಾಡುವುದಕ್ಕೆ ನನಗೆ ನೇತ್ರಶಕ್ತಿಯನ್ನು ದಾನ ಮಾಡಿ.”

ಹೀಗೆ ಅವರನ್ನು ಸ್ತುತಿಸಿದಾಗ ಅಶ್ವಿನಿಗಳು ಅಲ್ಲಿಗೆ ಬಂದು:

“ನಾವು ನಿನ್ನ ಮೇಲೆ ಪ್ರೀತರಾಗಿದ್ದೇವೆ. ಇದೋ ಈ ಪೂಪವನ್ನು ತಿನ್ನು.”

ಎಂದರು. ಇದನ್ನು ಕೇಳಿದ ಅವನು ಉತ್ತರಿಸಿದನು:

“ನಿಮ್ಮ ವಚನಗಳು ಎಂದೂ ಸುಳ್ಳಾಗಲಾರವು. ಆದರೆ ನೀವು ಕೊಟ್ಟಿರುವ ಈ ಪೂಪವನ್ನು ನನ್ನ ಗುರುವಿಗೆ ಕೊಡದೇ ತಿನ್ನಲು ಸಾದ್ಯವಿಲ್ಲ.”

ಅದಕ್ಕೆ ಅಶ್ವಿನಿ ದೇವತೆಗಳು ಉತ್ತರಿಸಿದರು:

“ಹಿಂದೆ ನಿನ್ನ ಉಪಾಧ್ಯಾಯನೂ ಕೂಡ ನಮ್ಮನ್ನು ಸ್ತುತಿಸಿದಾಗ ಅವನಿಗೆ ಪ್ರೀತಿಯಿಂದ ಪೂಪವನ್ನಿತ್ತಾಗ ತನ್ನ ಗುರುವಿಗೆ ನೀಡದೇ ಸೇವಿಸಿದ್ದನು. ನೀನೂ ಕೂಡ ನಿನ್ನ ಗುರು ಮಾಡಿದಹಾಗೆ ಮಾಡು.”

ಅವರ ಈ ಮಾತುಗಳನ್ನು ಕೇಳಿ ಪುನಃ ಅವನು ಹೇಳಿದನು:

“ಅಶ್ವಿನಿಗಳೇ! ನಿಮ್ಮ ಕ್ಷಮೆಯನ್ನು ಕೇಳುತ್ತೇನೆ. ಮೊದಲು ನನ್ನ ಉಪಾಧ್ಯಾಯನಿಗೆ ಇದನ್ನು ನೀಡದೇ ನಾನು ತಿನ್ನಲಾರೆ.”

ಆಗ ಅಶ್ವಿನಿಯರು ಹೇಳಿದರು:

> “ನಿನ್ನ ಗುರುಭಕ್ತಿಯಿಂದ ಪ್ರೀತರಾಗಿದ್ದೇವೆ. ನಿನ್ನ ಉಪಾಧ್ಯಾಯನ ಹಲ್ಲುಗಳು ಕಪ್ಪು ಕಬ್ಬಿಣದಂತಿವೆ. ನಿನ್ನವು ಚಿನ್ನದವುಗಳಾಗುತ್ತವೆ. ನಿನ್ನ ದೃಷ್ಟಿಯೂ ಮರಳಿ ಬರುತ್ತದೆ. ಮತ್ತು ನಿನಗೆ ಒಳ್ಳೆಯ ಶ್ರೇಯಸ್ಸು ಆಗುತ್ತದೆ.”

ಅಶ್ವಿನಿಯರು ಈ ರೀತಿ ಹೇಳಿದ ನಂತರ, ಪುನಃ ದೃಷ್ಠಿಯನ್ನು ಪಡೆದು ಉಪಾಧ್ಯಾಯನ ಬಳಿ ಬಂದು ಉಪಾಧ್ಯಾಯನನ್ನು ನಮಸ್ಕರಿಸಿ, ನಡೆದುದೆಲ್ಲವನ್ನೂ ಹೇಳಿದನು. ಅವನೂ ಸಹ ಅತ್ಯಂತ ಪ್ರೀತನಾಗಿ ಹೇಳಿದನು:

> "ಅಶ್ವಿನಿಯರು ಹೇಳಿದಂತೆ ನೀನು ಬಹಳ ಶ್ರೇಯಸ್ಸನ್ನು ಹೊಂದುವೆ. ಎಲ್ಲ ವೇದಗಳೂ ನಿನ್ನಲ್ಲಿ ಪ್ರತಿಭೆಗೊಳ್ಳುತ್ತವೆ."

ಇದು ಉಪಮನ್ಯುವಿನ ಪರೀಕ್ಷೆಯಾಗಿತ್ತು.

# ಸಮುದ್ರಮಥನ

**ಸಮುದ್ರ ಮಥನದ ಈ ಕಥೆಯು ವ್ಯಾಸ ಮಹಾಭಾರತದ ಆದಿ ಪರ್ವದ ಆಸ್ತೀಕ ಪರ್ವ (ಅಧ್ಯಾಯ ೧೫-೧೭) ದಲ್ಲಿ ಬರುತ್ತದೆ. ಈ ಕಥೆಯನ್ನು ನೈಮಿಷಾರಣ್ಯದಲ್ಲಿ ಸೂತ**

## ಪೌರಾಣಿಕ ಉಗ್ರಶ್ರವನು ಶೌನಕಾದಿ ಮುನಿಗಳಿಗೆ ಹೇಳಿದನು.

ಅನುತ್ತಮ ತೇಜೋರಾಶಿಯಾಗಿ ಪ್ರಜ್ವಲಿಸುತ್ತಿರುವ ಮೇರು ಎಂಬ ಪರ್ವತವಿದೆ. ಅದರ ಶೃಂಗದ ಮೇಲೆ ಬಿದ್ದ ಸೂರ್ಯ ಕಿರಣಗಳು ಕಾಂಚನ-ಜ್ವಾಲೆಗಳಂತೆ ಹೊರಸೂಸುತ್ತಿದ್ದವು. ಆ ಗಂಧರ್ವಸೇವಿತ ಅಪ್ರಮೇಯ ಚಿತ್ರವರ್ಣದ ಕಾಂಚನಾಭರಣದಂತಿದ್ದ ಆ ಪರ್ವತವು ಅಧರ್ಮಿ ಬಹುಜನರಿಗೆ ಕಾಣದೇ ಇರುವಂಥಹುದು. ದಿವ್ಯೌಷಧಿಗಳಿಂದ ಬೆಳಗುತ್ತಿರುವ ಆ ಮಹಾಗಿರಿಯ ಉತ್ತುಂಗ ಶಿಖರದಲ್ಲಿ ಘೋರಪ್ರಾಣಿಗಳು ಸಂಚರಿಸುತ್ತಿರುತ್ತವೆ. ಮನಸ್ಸಿಗೂ ಅಗಮ್ಯವಾದ ಅದು ಅನೇಕ ನದೀ-ವೃಕ್ಷಗಳಿಂದ ಕೂಡಿ ನಾನಾ ಪಕ್ಷಿಗಳ ಸುಮನೋಹರ ನಾದಗಳಿಂದ ತುಂಬಿದೆ. ಅನಂತ ಕಲ್ಪಗಳಿಂದಲೂ ಅನೇಕ ರತ್ನಗಳಿಂದ ಶೋಭಿಸುತ್ತಾ ಎತ್ತರವಾಗಿ ನಿಂತಿರುವ ಅದರ ಶುಭ ಶಿಖರದ ಮೇಲೆ ಮಹೌಜಸ ಸುರರೆಲ್ಲರೂ ಸಭೆಯನ್ನು ರಚಿಸಿದ್ದರು. ಆ ತಪೋನಿಯಮ ಸಂಸ್ಥಿತ ದಿವೌಕಸರು ಅಲ್ಲಿ ಕುಳಿತು ಅಮೃತವನ್ನು ಹೇಗೆ ಪಡೆಯಬಹುದು ಎಂದು ಪರಸ್ಪರರಲ್ಲಿ ವಿಚಾರಿಸುತ್ತಿದ್ದರು. ಮಂತ್ರಾಲೋಚನೆಯಲ್ಲಿ ತೊಡಗಿದ್ದ ಬ್ರಹ್ಮ ಮತ್ತು ಸುರರೆಲ್ಲರನ್ನೂ ಉದ್ದೇಶಿಸಿ ದೇವ ನಾರಾಯಣನು ಇಂತೆಂದನು: "ದೇವತೆಗಳೂ ಅಸುರರೂ ಒಂದಾಗಿ ಕಲಶೋದಧಿಯನ್ನು ಮಥಿಸಲಿ. ಮಹೌದಧಿಯನ್ನು ಕಡೆಯುವಾಗ ಅಲ್ಲಿ ಅಮೃತವು ಹುಟ್ಟುವುದು. ದೇವತೆಗಳೇ! ಕ್ಷೀರಸಾಗರವನ್ನು ಮಥಿಸುವಾಗ ಅಮೃತದ ಜೊತೆ

ಸರ್ವ ಔಷಧಿ-ರತ್ನಗಳನ್ನೂ ಪಡೆಯುತ್ತೀರಿ!"

ಮೋಡಗಳೇ ಶಿಖರಾಕಾರವಾಗಿರುವ, ಗಿರಿಶೃಂಗಗಳಿಂದ ಅಲಂಕೃತ, ಲತಾಜಾಲ ಸಮಾವೃತ ಪರ್ವತಶ್ರೇಷ್ಠವೇ ಮಂದರ. ಅಲ್ಲಿ ನಾನಾ ಪಕ್ಷಿಸಂಕುಲಗಳು ನಿನಾದಗೈಯುತ್ತಿರುತ್ತವೆ ಮತ್ತು ನಾನಾ ಮೃಗಸಂಕುಲಗಳಿವೆ. ಅಲ್ಲಿ ಕಿನ್ನರ-ಅಪ್ಸರ-ದೇವತೆಗಳು ವಿಹರಿಸುತ್ತಿರುತ್ತಾರೆ. ಅದು ಭೂಮಿಯ ಮೇಲೆ ಹನ್ನೊಂದು ಸಾವಿರ ಯೋಜನ ಮತ್ತು ಕೆಳಗೆ ಹನ್ನೊಂದು ಸಾವಿರ ಯೋಜನ ಆಳದಲ್ಲಿದೆ. ಅದನ್ನು ಕೀಳಲು ಅಶಕ್ತರಾದ ಸರ್ವ ದೇವಗಣಗಳೂ ಬ್ರಹ್ಮನೊಂದಿಗೆ ಆಸೀನನಾಗಿದ್ದ ವಿಷ್ಣುವಿನ ಬಳಿಬಂದು ಹೇಳಿದರು:

> "ಮಂದರವನ್ನು ಎತ್ತುವುದರ ಕುರಿತು ಏನಾದರೂ ಉಪಾಯವನ್ನು ಯೋಚಿಸಿರಿ."

"ಹಾಗೆಯೇ ಆಗಲಿ!" ಎಂದು ಹೇಳಿ ವಿಷ್ಣು-ಬ್ರಹ್ಮರು ಕರ್ಮವೀರ್ಯವಾನ್ ಆದಿಶೇಷನಿಗೆ ಪ್ರಚೋದಿಸಲು ಅವನು ಅದನ್ನು ಎತ್ತಿ ಹಿಡಿದನು. ಆ ಮಹಾಬಲ ಅನಂತನು ಬಲವನ್ನುಪಯೋಗಿಸಿ ವನ-ವೃಕ್ಷಗಳ ಸಹಿತ ಆ ಪರ್ವತರಾಜನನ್ನು ಎಳೆದು ಕಿತ್ತನು.

ನಂತರ ಸುರರೆಲ್ಲರೂ ಸಮುದ್ರತಟವನ್ನು ಸೇರಿ

> "ಸಮುದ್ರ! ಅಮೃತಕ್ಕಾಗಿ ನಿನ್ನನ್ನು ಮಥಿಸಲು ನಾವೆಲ್ಲ ಇಲ್ಲಿ ಸೇರಿದ್ದೇವೆ"

ಎಂದು ಹೇಳಿದರು. ಆಗ ಅಪಾಂಪತಿಯು

> “ಅದರಲ್ಲಿ ಒಂದು ಭಾಗವನ್ನು ನನಗೂ ಕೊಡಿ. ಮಂದರವು ಕಡೆಯುವುದರಿಂದ ಉಂಟಾಗುವ ವಿಪುಲ ಅಲ್ಲೋಲ-ಕಲ್ಲೋಲವನ್ನು ನಾನು ತಡೆಯಬಲ್ಲೆ!”

ಎಂದನು.

ಸುರಾಸುರರೆಲ್ಲರೂ ಕೂರ್ಮರಾಜ ಅಕೂಪಾರನಲ್ಲಿಗೆ ಹೋಗಿ

> “ನಿನ್ನ ಬೆನ್ನ ಮೇಲೆ ಈ ಪರ್ವತವನ್ನು ಎತ್ತಿ ಹಿಡಿದುಕೊಳ್ಳಬೇಕು”

ಎಂದು ಕೇಳಿಕೊಂಡರು. “ಹಾಗೆಯೇ ಆಗಲಿ!” ಎಂದು ಕೂರ್ಮವು ಹೇಳಲು ಅದರ ಬೆನ್ನ ಮೇಲೆ ಇಂದ್ರನು ಒಂದು ಯಂತ್ರದ ಸಹಾಯದಿಂದ ಮಂದರ ಪರ್ವತವನ್ನು ಎತ್ತಿ ನಿಲ್ಲಿಸಿದನು.

ಮಂದರವನ್ನು ಕಡೆಗೋಲನ್ನಾಗಿ ಮತ್ತು ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ದೇವತೆಗಳು ದೈತ್ಯ-ದಾನವರೊಂದಿಗೆ ನಿಧಿಮಾಂಭಸ ಸಮುದ್ರವನ್ನು ಅಮೃತಕ್ಕೋಸ್ಕರ ಕಡೆಯತೊಡಗಿದರು. ಒಂದು ಕಡೆ ನಾಗರಾಜನ ಹೆಡೆಯನ್ನು ಮಹಾ ಅಸುರರು ಹಿಡಿದಿದ್ದರೆ ಇನ್ನೊಂದೆಡೆ ಅದರ ಬಾಲವನ್ನು ಹಿಡಿದು ಸರ್ವದೇವತೆಗಳೂ ನಿಂತಿದ್ದರು. ಭಗವಾನ್ ನಾರಾಯಣ ಸ್ವರೂಪೀ ನಾಗ ಅನಂತನು ಶಿರವನ್ನು ಪುನಃ



ಪುನಃ ಮೇಲೆತ್ತಿ ಕೆಳಗಿಳಿಸುತ್ತಿದ್ದನು. ಸುರರಿಂದ ಜೋರಾಗಿ ಎಳೆದಾಡಲ್ಪಟ್ಟ ನಾಗ ವಾಸುಕಿಯ ಬಾಯಿಯಿಂದ ಆಗ ಧೂಮ-ಜ್ವಾಲೆಗಳಿಂದೊಡಗೂಡಿದ ಹವೆಯು ಹೊರಹೊಮ್ಮಿತು. ಆ ಹವೆಯು ಮಿಂಚಿನಿಂದೊಡಗೂಡಿದ ಮೇಘಗಳಾಗಿ ಶ್ರಮಸಂತಾಪದಿಂದ ಬಳಲಿದ ಸುರಗಣಗಳ ಮೇಲೆ ಮಳೆಸುರಿಸಿತು. ಆ ಗಿರಿಕೂಟದ ಕಣಿವೆಗಳಲ್ಲಿದ್ದ ಮರಗಳಿಂದ ಉದುರುತ್ತಿದ್ದ ಪುಷ್ಪಮಾಲೆಗಳು ಸುರಾಸುರಗಣಗಳೆಲ್ಲರ ಆಯಾಸವನ್ನು ಪರಿಹರಿಸಿದವು.



ಸುರಾಸುರರು ಮಂದರದಿಂದ ಕಡೆಯುತ್ತಿದ್ದ ಸಮುದ್ರದಿಂದ ಮಹಾಮೇಘಗರ್ಜನೆಯಂಥಹ ಮಹಾ ಘೋಷವು ಕೇಳಿಬರುತ್ತಿತ್ತು. ಅಲ್ಲಿದ್ದ ನಾನಾ ಜಲಚರಗಳು ಮಹಾದ್ರಿಯಿಂದ ಪುಡಿಪುಡಿಯಾಗಿ ನೂರಾರು ಸಂಖ್ಯೆಗಳಲ್ಲಿ ಆ ಲವಣಾಂಭಸಿಯಲ್ಲಿ ಲಯವಾದವು. ವರುಣ ಲೋಕದ ವಿವಿಧ ಜೀವಿಗಳು ಮತ್ತು ಪಾತಾಲತಲ ವಾಸಿಗಳು ಈ ಘರ್ಷಣೆಯಲ್ಲಿ ಲಯಹೊಂದಿದವು. ತಿರುಗುತ್ತಿದ್ದ ಮಂದರಪರ್ವತದ ಮೇಲಿದ್ದ ಮಹಾದ್ರುಮಗಳು ಪರಸ್ಪರ ಸಂಘರ್ಷಿಸಿ ಗೂಡುಕಟ್ಟಿದ್ದ ಪಕ್ಷಿಗಳೊಡನೆ ಸಾಗರಕ್ಕೆ ಉರುಳಿದವು. ಅವುಗಳ ಸಂಘರ್ಷದಿಂದ ಹಲವಾರು ಬಾರಿ ಬೆಂಕಿಯು ಭುಗಿಲೆದ್ದು ಆ ಮಂದರ ಗಿರಿಯು ಮಿಂಚಿನಿಂದೊಡಗೂಡಿದ ಕಪ್ಪು ಮೋಡಗಳಿಂದ



ಆವರಿಸಿರುವಂತೆ ಕಂಡುಬರುತ್ತಿತ್ತು. ಅಲ್ಲಿ ವಾಸಿಸುತ್ತಿದ್ದ ವಿವಿಧ ಪಕ್ಷಿ-ಪ್ರಾಣಿಗಳು, ಆನೆ-ಸಿಂಹಗಳು ಎಲ್ಲವೂ ಅದರಲ್ಲಿ ಸುಟ್ಟುಹೋದವು. ಆಗ ಅಮರಶ್ರೇಷ್ಠ ಇಂದ್ರನು ಭಾರೀ ಮಳೆಯನ್ನು ಸುರಿಸಿ ಉರಿಯುತ್ತಿರುವ ಅಗ್ನಿಯನ್ನು ಶಮನಗೊಳಿಸಿದನು. ಆ ಮಹಾದ್ರುಮಗಳಲ್ಲಿದ್ದ ಅಂಟು-ಸ್ರಾವ-ಔಷಧಿ ರಸಗಳು ಸಾಗರದ ನೀರಿನೊಂದಿಗೆ ಸೇರಿ ಕರಗಿದವು. ಆ ರಸ-ಹಾಲು-ಅಂಟುಗಳಲ್ಲಿದ್ದ ಅಮೃತವೀರ್ಯಗಳಿಂದಲೇ ಸುರರು ಅಮರತ್ವವನ್ನು ಪಡೆದರು. ಸಮುದ್ರದ ನೀರಿನಿಂದ ಉತ್ತಮ ರಸಮಿಶ್ರಿತ ಹಾಲು-ತುಪ್ಪಗಳು

ಉತ್ಪನ್ನವಾದವು.

ಆಗ ದೇವತೆಗಳೆಲ್ಲರೂ ವರದ ಬ್ರಹ್ಮನು ಉಪಸ್ಥಿತನಿದ್ದಲ್ಲಿಗೆ ಹೋಗಿ

> “ಬ್ರಹ್ಮ ! ನಾವು ಆಯಾಸದಿಂದ ಬಳಲಿದ್ದೇವೆ. ಇನ್ನೂ ಅಮೃತವು ದೊರಕಲಿಲ್ಲ ! ದೇವ ನಾರಾಯಣನನ್ನು ಬಿಟ್ಟು ಬೇರೆ ಯಾವ ದೈತ್ಯ-ನಾಗೋತ್ತಮರಿಂದಲೂ ಈ ಸಾಗರ ಮಂಥನವನ್ನು ಮುಂದುವರೆಸಲು ಸಾಧ್ಯವಾಗುತ್ತಿಲ್ಲ”


ಎಂದರು. ಆಗ ಬ್ರಹ್ಮನು ದೇವ ನಾರಾಯಣನಲ್ಲಿ

> “ವಿಷ್ಣು ! ನಿನ್ನ ಪರಾಯಣರಾದ ಇವರಿಗೆ ಬಲವನ್ನು ಕರುಣಿಸು !”

ಎಂದನು. ಆಗ ವಿಷ್ಣುವು


> “ಈ ಕರ್ಮದಲ್ಲಿ ತೊಡಗಿರುವ ಸರ್ವರಿಗೂ ಬಲವನ್ನು ಕೊಡುತ್ತಿದ್ದೇನೆ. ಮಂದರವನ್ನು ಮುಳುಗಿಸಿ ಸರ್ವರೂ ಕಡೆಯಲು ಪ್ರಾರಂಭಿಸಿ !”

ಎಂದನು. ನಾರಾಯಣನ ಮಾತುಗಳನ್ನು ಕೇಳಿ ಹೊಸಶಕ್ತಿಯನ್ನು ಪಡೆದ ಅವರು ಪರ್ವತವನ್ನು ಬಳಸಿ ಪುನಃ ಕಡೆಯಲು ಪ್ರಾರಂಭಿಸಿದರು. ನಂತರ ಶತಸಹಸ್ರಾಂಶು ಸಮಾನ, ಪ್ರಸನ್ನ ಪ್ರಖರವನ್ನು ಹೊಂದಿ ಬೆಳಗುತ್ತಿದ್ದ ಶೀತಾಂಶು ಸೋಮನು ಸಾಗರದಿಂದ ಉತ್ಪನ್ನನಾದನು.





ನಂತರ ತುಪ್ಪದಿಂದ ಪಾಂಡುರವಾಸಿನೀ ಶ್ರೀಯು ಉತ್ಪನ್ನಳಾದಳು. ನಂತರ ಸುರಾದೇವಿ ಮತ್ತು ಶ್ವೇತ ತುರಗಗಳು ಉತ್ಪನ್ನರಾದರು. ಶ್ರೀಮಾನ್ನಾರಾಯಣನು ತನ್ನ ಎದೆಯ ಮೇಲೆ ಧರಿಸಿರುವ ದಿವ್ಯ ವಿಕಸಿತ ಕೌಸ್ತುಭಮಣಿಯೂ ಕೂಡ ರೋಗರಹಿತ ಅಮೃತದೊಂದಿಗೆ ಉತ್ಪನ್ನವಾಯಿತು. ಆದಿತ್ಯಮಾರ್ಗವನ್ನಾಶ್ರಯಿಸಿ ಸೋಮ ಮತ್ತು



ತುರಗಗಳು ಮನೋವೇಗದಲ್ಲಿ ಬಂದು ದೇವತೆಗಳನ್ನು ಸೇರಿದರು. ಅನಂತರ ದೇವ ಧನ್ವಂತರಿಯು ಅಮೃತದಿಂದ ತುಂಬಿದ ಶ್ವೇತ ಕಮಂಡಲುವನ್ನು ಹಿಡಿದು ಸಾಗರದಿಂದ ಎದ್ದು ಬಂದನು. ಆ ಅತ್ಯದ್ಭುತವನ್ನು ನೋಡಿ ದಾನವರು ಅಮೃತಕ್ಕಾಗಿ "ಇದು ನಮ್ಮದು!" ಎಂದು ಮಹಾನಾದಗೈದರು. ಆಗ ಪ್ರಭು ನಾರಾಯಣನು ಮಾಯೆಯಿಂದ ಅದ್ಭುತ ಮೋಹಿನೀ ಸ್ತ್ರೀರೂಪವನ್ನು ಧರಿಸಿ ದಾನವರನ್ನು ಮರುಳುಮಾಡಿದನು. ಮೂಢಚೇತಸ ದಾನವ ದೈತ್ಯರೆಲ್ಲರೂ ಅವಳಲ್ಲಿಯೇ ಮನಸ್ಸನ್ನಿಟ್ಟುಕೊಂಡು ಅಮೃತವನ್ನು ಆ ಸ್ತ್ರೀಯ ಕೈಗಳಲ್ಲಿಟ್ಟರು.

ಆಗ ದೇವಗಣಗಳೆಲ್ಲವೂ ವಿಷ್ಣುವಿನಿಂದ ಅಮೃತವನ್ನು ಪಡೆದು ಸಂಭ್ರಮ-ತುಮುಲಗಳೊಂದಿಗೆ ಕುಡಿದರು. ದೇವತೆಗಳು ಬಹಳ ಆಸೆಯಿಂದ ಅಮೃತವನ್ನು ಕುಡಿಯುತ್ತಿರುವಾಗ ದೇವತೆಗಳ ರೂಪದಲ್ಲಿದ್ದ ದಾನವ ರಾಹುವೂ ಅದನ್ನು ಕುಡಿದನು. ಅಮೃತವು ಆ ದಾನವನ ಕಂಠವನ್ನು ಸೇರುವ ಸಮಯದಲ್ಲಿಯೇ ಸುರರ ಹಿತಕಾಮೀ ಚಂದ್ರ-ಸೂರ್ಯರು ಅದರ ಕುರಿತು ಹೇಳಿದರು. ತಕ್ಷಣವೇ ಭಗವಂತನು ತನ್ನ ಚಕ್ರಾಯುಧದಿಂದ ಅಮೃತವನ್ನು ಕುಡಿಯುತ್ತಿದ್ದ ಅವನ ಅಲಂಕೃತ ಶಿರಸ್ಸನ್ನು ತುಂಡರಿಸಿದನು. ಆ ದಾನವನ ಶೈಲಶೃಂಗ ಸಮಾನ ಮಹಾ ಶಿರವು ಚಕ್ರದಿಂದ ಕತ್ತರಿಸಲ್ಪಟ್ಟು ಆಕಾಶವನ್ನೇರಿತು ಮತ್ತು ಶಿರರಹಿತ ದೇಹವು ಭೂತಲದಲ್ಲಿ ಬಿದ್ದಿತು. ಅಂದಿನಿಂದ ರಾಹುವಿನ ಮುಖ ಮತ್ತು ಚಂದ್ರ-ಸೂರ್ಯರ ನಡುವೆ

ಶಾಶ್ವತ ವೈರತ್ವವು ಬೆಳೆಯಿತು ಮತ್ತು ಅವರೀರ್ವರ ಗ್ರಹಣಗಳು ನಿರಂತರವಾಗಿ ನಡೆಯುತ್ತಿವೆ. ಈ ಮಧ್ಯದಲ್ಲಿ ವೀರ್ಯವಾನ್ ಪ್ರಭು ವಿಷ್ಣುದೇವನು ನರನ ಜೊತೆಗೂಡಿ ದಾನವೇಂದ್ರರಿಂದ ಅಮೃತವನ್ನು ಕೊಂಡೊಯ್ದನು.

ಆಗ ಪ್ರಮುಖ ದೈತ್ಯ-ದಾನವರು ಕವಚಧಾರಿಗಳಾಗಿ ನಾನಾ ಆಯುಧಗಳನ್ನು ಹಿಡಿದು ದೇವತೆಗಳನ್ನು ಬೆನ್ನಟ್ಟಿದರು. ನಂತರ ಭಗವಾನ್ ಹರಿಯು ಸರಿಸಾಟಿಯಿಲ್ಲದ ಸ್ತ್ರೀರೂಪವನ್ನು ತೊರೆದು ನಾನಾ ತರಹದ ಭೀಷಣ ಆಯುಧಗಳನ್ನು ಎಸೆಯುತ್ತಾ ದಾನವರು ತತ್ತರಿಸುವಂತೆ ಮಾಡಿದನು. ಆಗ ಲವಣಾಂಭಸದ ತೀರದಲ್ಲಿ ಸುರಾಸುರರ ಸರ್ವ ಘೋರತರ ಮಹಾ ಸಂಗ್ರಾಮವು ಪ್ರಾರಂಭವಾಯಿತು. ಸಹಸ್ರಾರು ಪ್ರಾಸಗಳು, ತೀಕ್ಷ್ಣವಾದ ವಿಮಲ ಈಟಿಗಳು, ಮೊನಚಾದಿ ತುದಿಗಳ ತೋಮರಗಳು ಮತ್ತು ವಿವಿಧ ಶಸ್ತ್ರಗಳನ್ನು ಎಲ್ಲೆಡೆಯಿಂದ ಎಸೆಯಲಾಯಿತು. ಚಕ್ರದಿಂದ ತುಂಡಾದ ಅಸುರರು ರಕ್ತವನ್ನು ಕಾರಿದರು ಮತ್ತು ಬಹಳಷ್ಟು ಮಂದಿ ಖಡ್ಗ-ಈಟಿ-ಗದಾ ಪ್ರಹಾರಗಳಿಂದ ಭೂಮಿಯ ಮೇಲೆ ಉರುಳಿ ಬಿದ್ದರು. ಆ ದಾರುಣ ಯುದ್ಧದಲ್ಲಿ ಬಂಗಾರದ ಕಿರೀಟಗಳಿಂದ ಅಲಂಕೃತ ಕಾಂತಿಯಿಂದ ಹೊಳೆಯುತ್ತಿದ್ದ ಶಿರಗಳು ಚಕ್ರದಿಂದ ಕತ್ತರಿಸಲ್ಪಟ್ಟು ಬೀಳುತ್ತಲೇ ಇದ್ದವು. ರಕ್ತಲಿಪ್ತಾಂಗರಾಗಿ ಎಲ್ಲೆಲ್ಲಿಯೂ ಸತ್ತು ಬಿದ್ದಿದ್ದ ಮಹಾ ಅಸುರರು ರಕ್ತದಿಂದ ಬಳಿಯಲ್ಪಟ್ಟ ಪರ್ವತ ಶಿಖರಗಳಂತೆ ಕಾಣುತ್ತಿದ್ದರು. ಸೂರ್ಯಾಸ್ತವಾಗುತ್ತಿದ್ದಂತೆ ಅನ್ಯೋನ್ಯರ ಶಸ್ತ್ರಗಳ

ಗಾಯದಿಂದ ಸಾಯುತ್ತಿರುವ ಸಾವಿರಾರು ಅಸುರರ ಹಾಹಾಕಾರವು ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿತ್ತು. ಸಮರದಲ್ಲಿ ಒಬ್ಬರನ್ನೊಬ್ಬರು ಪರಿಘಗಳಿಂದ ತುಂಡರಿಸುವ ಮತ್ತು ಮುಷ್ಟಿಗಳಿಂದ ಹೊಡೆದಾಡುವ ಶಬ್ಧವು ಆಕಾಶವನ್ನೇರಿತು. “ಕತ್ತರಿಸು! ಚುಚ್ಚು! ಬೆನ್ನಟ್ಟು! ಮುನ್ನುಗ್ಗು! ಬೀಳಿಸು!” ಮೊದಲಾದ ಮಹಾಘೋರ ಕದನ ಕೂಗುಗಳು ಅಲ್ಲಿ ಕೇಳಿಬರುತ್ತಿದ್ದವು.

ಈ ರೀತಿ ಭಯಾನಕ ಯುದ್ಧವು ನಡೆಯುತ್ತಿರುವಾಗ ದೇವ ನರ ಮತ್ತು ನಾರಾಯಣರು ಸಮರವನ್ನು ಪ್ರವೇಶಿಸಿದರು. ನರನಲ್ಲಿದ್ದ ದಿವ್ಯ ಧನುಸ್ಸನ್ನು ನೋಡಿ ದಾನವಸೂದನ ಭಗವಾನ್ ವಿಷ್ಣುವು ಚಕ್ರವನ್ನು ಸ್ಮರಿಸಿದನು. ಅವನು ಸ್ಮರಿಸುತ್ತಿದ್ದಂತೆಯೇ ಆಕಾಶದಿಂದ ತೇಜಸ್ಸಿನಲ್ಲಿ ವಿಭಾವಸುವಿನಂತಿದ್ದ, ಶತ್ರುತಾಪನ, ಯುದ್ಧಭಯಂಕರ, ಮಹಾಪ್ರಭೆಯ ಉತ್ತಮ ಸುದರ್ಶನ ಚಕ್ರವು ಆಗಮಿಸಿತು. ಅದು ಬಂದಕೂಡಲೇ ಪ್ರಜ್ವಲಿಸುತ್ತಿರುವ ಅಗ್ನಿಪ್ರಭೆಯ ಭಯಂಕರ ಅಚ್ಯುತನು ಆನೆಯ ಸೊಂಡಲಿನಂತಿದ್ದ ತನ್ನ ಬಾಹುಗಳಿಂದ ಅತಿ ವೇಗದಲ್ಲಿ ಶತ್ರುಗಳ ನಗರವನ್ನಿಡೀ ನಾಶಪಡಿಸಬಲ್ಲ ಆ ಮಹಪ್ರಭೆಯ ಚಕ್ರವನ್ನು ಎಸೆದನು. ಪುರುಷಶ್ರೇಷ್ಠನು ಪ್ರಯೋಗಿಸಿದ ಪ್ರಳಯಾಗ್ನಿಯ ಜ್ವಾಲೆಯಂತೆ ಉರಿಯುತ್ತಿದ್ದ ಆ ಚಕ್ರವು ಸಹಸ್ರಾರು ದೈತ್ಯರನ್ನು ನಾಶಪಡಿಸಿತು. ಅದು ಕೆಲವೊಮ್ಮೆ ಅಗ್ನಿಯಂತೆ ಉರಿದು ಅವರನ್ನೆಲ್ಲಾ ಭಸ್ಮಮಾಡುತ್ತಿತ್ತು. ಕೆಲವೊಮ್ಮೆ ಕ್ಷಿಪಣಿಯಂತೆ ಅವರ ಮೇಲೆ ಬಿದ್ದು ಹೊಡೆಯುತ್ತಿತ್ತು. ಕೆಲವೊಮ್ಮೆ ಪಿಶಾಚಿಯಂತೆ ಭೂಮ್ಯಾಕಾಶಗಳಲ್ಲಿ

ತಿರುಗುತ್ತಾ ಕೆಳಗೆ ಬಿದ್ದಿದ್ದ ಅಸುರರ ರಕ್ತವನ್ನು ಕುಡಿಯುತ್ತಿತ್ತು. ಆಗ ನೀರಿಲ್ಲದ ಮೇಘಗಳಂತೆ ತೋರುತ್ತಿದ್ದ ಮಹಾಬಲಶಾಲೀ ಅಸುರರು ಗಗನವನ್ನೇರಿ ಸಹಸ್ರಾರು ಪರ್ವತಗಳನ್ನು ದೇವಗಣಗಳ ಬೀಳಿಸಿ ಹಿಂಸಿಸತೊಡಗಿದರು. ಕಾಡು-ಕಣಿವೆಗಳಿದ್ದ ಆ ಮಹಾಪರ್ವತಗಳು ಆಕಾಶದಿಂದ ಕೆಳಗೆ ಬೀಳುವಾಗ ಪರಸ್ಪರ ತಾಗಿ ಮೇಘಗಳಂತೆ ಮಹಾಗರ್ಜನೆಯನ್ನುಂಟುಮಾಡುತ್ತಿದ್ದವು. ರಣಭೂಮಿಯಲ್ಲಿ ಕಾಡುಗಳಿದ್ದ ಪರ್ವತಗಳು ಬೀಳುವಾಗ ಮತ್ತು ಸಹಾಸ್ರಾರು ಯೋಧರು ಗರ್ಜಿಸುವಾಗ ಭೂಮಿಯು ತತ್ತರಿಸಿತು. ಆಗ ನರನು ಸುರಾಸುರರ ಮಧ್ಯೆ ನಡೆಯುತ್ತಿದ್ದ ಆ ಮಹಾಭಯಂಕರ ಯುದ್ಧವನ್ನು ಪ್ರವೇಶಿಸಿ ಶ್ರೇಷ್ಠ ಕನಕಾಗ್ರದಿಂದ ಅಲಂಕೃತ ಶರಗಳಿಂದ ಆ ಪರ್ವತಗಳನ್ನು ಪುಡಿಮಾಡಿ ಅಂತರಿಕ್ಷವನ್ನು ಧೂಳಿನಿಂದ ತುಂಬಿಸಿದನು. ಪ್ರಜ್ವಲಿಸುತ್ತಿರುವ ಬೆಂಕಿಯಂತೆ ಭೂಮಿಯಲ್ಲಿ ತಿರುಗುತ್ತಾ ಉರಿಯುತ್ತಿದ್ದ ಪರಿಕುಪಿತ ಸುದರ್ಶನವನ್ನು ನೋಡಿ ಸುರರಿಂದ ಪರಾಭವಗೊಂಡ ಮಹಾ ಅಸುರರು ಭೂಮಿಯ ಕೆಳಗೆ ಮತ್ತು ಉಪ್ಪುನೀರಿನ ಸಮುದ್ರವನ್ನು ಸೇರಿದರು. ವಿಜಯಿ ಸುರರು ಮಂದರವನ್ನು ಅದರ ಸ್ಥಳದಲ್ಲಿಯೇ ಕೊಂಡೊಯ್ದಿಟ್ಟು ಪೂಜಿಸಿ, ಸಂತಸಭರಿಸ ಘೋಷಗಳಿಂದ ಆಕಾಶ-ಸ್ವರ್ಗಗಳನ್ನು ತುಂಬಿಸುತ್ತಾ ತಮ್ಮ ತಮ್ಮ ಸ್ಥಾನಗಳನ್ನು ಸೇರಿದರು. ಸ್ವರ್ಗವನ್ನು ಸೇರಿದ ಸುರರು ಪುಷ್ಕಳ ಸಂತೋಷಗೊಂಡು ಆ ಅಮೃತನಿಧಿಯನ್ನು ಜಾಗ್ರತೆಯಿಂದ ಕಾದುಕೊಂಡರು. ಇಂದ್ರ ಮತ್ತು ಇತರ ಅಮರರು ಅದನ್ನು ಒಂದು

ಪಾತ್ರೆಯಲ್ಲಿಟ್ಟು ರಕ್ಷಣೆಗೆಂದು ನರನಿಗೆ ಕೊಟ್ಟರು.

# ಗರುಡೋತ್ಪತ್ತಿ ಮತ್ತು ಗರುಡನಿಂದ ಅಮೃತದ ಅಪಹರಣ

## ಗರುಡೋತ್ಪತ್ತಿಯ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಆಸ್ತೀಕ ಪರ್ವ (ಅಧ್ಯಾಯ ೨೦-೩೦) ದಲ್ಲಿ ಬರುತ್ತದೆ. ಈ ಕಥೆಯನ್ನು ಸೂತ ಪೌರಾಣಿಕ ಉಗ್ರಶ್ರವನು ನೈಮಿಷಾರಣ್ಯದಲ್ಲಿ ಶೌನಕಾದಿ ಮುನಿಗಳಿಗೆ ಹೇಳಿದನು.

ಹಿಂದೆ ದೇವಯುಗದಲ್ಲಿ ಪ್ರಜಾಪತಿ ಬ್ರಹ್ಮನಿಗೆ ಈರ್ವರು ರೂಪವತಿ ಶುಭರೂ ಅನಘರೂ ಆದ ಸುತೆಯರಿದ್ದರು. ಅವರೇ ಕಶ್ಯಪನ ಭಾರ್ಯೆಯರಾದ ಕದ್ರು ಮತ್ತು ವಿನತ. ಪ್ರಜಾಪತಿ ಕಶ್ಯಪನು ಸಂತಾನಕ್ಕೋಸ್ಕರ ಯಜ್ಞವನ್ನು ಕೈಗೊಂಡಾಗ ಋಷಿ-ದೇವತೆ-ಗಂಧರ್ವರೆಲ್ಲರೂ ಬಹಳಷ್ಟು ಸಹಾಯಮಾಡಿದರು. ಕಶ್ಯಪನು ಇಂದ್ರ, ವಾಲಖಿಲ್ಯ ಮುನಿವರ್ಯರು ಮತ್ತು ಇತರ ದೇವಗಣಗಳಿಗೆ ಸಮಿತ್ತುಗಳನ್ನು ತರುವ ಕಾರ್ಯವನ್ನು ವಹಿಸಿದ್ದನು. ಇಂದ್ರನು ಸ್ವಲ್ಪವೂ ಆಯಾಸವಿಲ್ಲದೇ ತನ್ನ ಶಕ್ತಿಗನುಗುಣವಾದ ಒಂದು ಪರ್ವತದಷ್ಟು ಸಮಿತ್ತುಗಳನ್ನು ಹೊತ್ತು ತಂದನು. ದಾರಿಯಲ್ಲಿ ಅವನು

ಅಂಗುಷ್ಟದಷ್ಟು ಸಣ್ಣ ಗಾತ್ರದವರಾಗಿದ್ದ ಋಷಿಗಳೆಲ್ಲರೂ ಸೇರಿ ಒಂದೇ ಒಂದು ಪಲಾಶದ ಕಡ್ಡಿಯನ್ನು ಹೊತ್ತು ತರುತ್ತಿರುವುದನ್ನು ನೋಡಿದನು. ನಿರಾಹಾರದಿಂದ ಬಡಕಲಾಗಿದ್ದ ಆ ತಪೋಧನರು ಮಾರ್ಗದಲ್ಲಿ ಗೋವಿನ ಹೆಜ್ಜೆಯಿಂದ ಉಂಟಾಗಿದ್ದ ಕುಣಿಯೊಂದನ್ನು ನೋಡದೇ ಅದರಲ್ಲಿ ಬಿದ್ದು ಸಾಕಷ್ಟು ಹಿಂಸೆಗೊಳಗಾದರು. ಇದೆಲ್ಲವನ್ನೂ ನೋಡಿ ವೀರ್ಯಮತ್ತ ಇಂದ್ರನು ಅವರನ್ನು ಅಪಹಾಸ್ಯ ಮಾಡಿ ನಗುತ್ತಾ ವೇಗದಿಂದ ಅವರನ್ನು ದಾಟಿ ಹೋದನು. ಈ ಅಪಮಾನದಿಂದ ಅವರಿಗೆ ಅತಿ ಕೋಪವುಂಟಾಯಿತು. ದುಃಖ-ರೋಷಸಮಾವಿಷ್ಟರಾದ ಅವರು ಇಂದ್ರನಿಗೆ ಭಯವನ್ನುಂಟುಮಾಡುವ ಒಂದು ಮಹಾಯಜ್ಞವನ್ನು ಆರಂಭಿಸಿದರು.

> "ದೇವರಾಜನಿಗೆ ಭಯಪ್ರದ ಕಾಮವೀರ್ಯ ಮತ್ತು ಕಾಮಗಾಮಿಯಾದ ಬೇರೊಬ್ಬ ಸರ್ವದೇವತೆಗಳ ಇಂದ್ರನು ಬರಲಿ. ನಮ್ಮ ಈ ತಪಸ್ಸಿನಿಂದ ಇಂದ್ರನಿಗಿಂತಲೂ ನೂರುಪಟ್ಟು ವೀರ್ಯ-ಶೌರ್ಯಗಳಿರುವ ಮನೋವೇಗೀ ದಾರುಣನೋರ್ವನ ಉತ್ಪತ್ತಿಯಾಗಲಿ!"

ಎಂದು ಹೇಳಿ ಆ ಸುತಪಸ್ವಿಗಳು ವಿಧಿವತ್ತಾಗಿ ಯಜ್ಞೇಶ್ವರನಲ್ಲಿ ಮಂತ್ರೋಚ್ಛಾರಣೆಗಳೊಂದಿಗೆ ಹವಿಸ್ಸನ್ನು ಹಾಕಿದರು.

ಇದನ್ನು ತಿಳಿದು ಭಯಸಂತಪ್ತನಾದ ಶತಕ್ರತು ದೇವರಾಜ ಇಂದ್ರನು

ಕಶ್ಯಪನ ಶರಣು ಹೊಕ್ಕನು. ದೇವರಾಜನ ಮಾತುಗಳನ್ನು ಕೇಳಿದ ಕಶ್ಯಪನು ವಾಲಖಿಲ್ಯರ ಬಳಿಬಂದು ಅವರ ಕರ್ಮಸಿದ್ಧಿಯ ಕುರಿತು ವಿಚಾರಿಸಿದನು. ಆ ಸತ್ಯವಾದಿಗಳು "ಇದು ಹಾಗೆಯೇ ಆಗುತ್ತದೆ!" ಎಂದಾಗ, ಅವರನ್ನು ಸಾಂತ್ವನಗೊಳಿಸಲು ಕಶ್ಯಪನು ಹೇಳಿದನು:

> "ಈ ಇಂದ್ರನು ಮೂರು ಲೋಕಗಳ ಇಂದ್ರನೆಂದು ಬ್ರಹ್ಮನೇ ನಿಯುಕ್ತಗೊಳಿಸಿದ್ದಾನೆ. ತಪೋಧನರಾದ ನೀವು ಇನ್ನೊಬ್ಬ ಇಂದ್ರನಿಗಾಗಿ ಪ್ರಯತ್ನಿಸುತ್ತಿದ್ದೀರಿ. ಬ್ರಹ್ಮವಾಕ್ಯವನ್ನು ಸುಳ್ಳುಮಾಡುವುದು ಸರಿಯಲ್ಲ. ನಿಮ್ಮ ಸಂಕಲ್ಪವನ್ನು ಸುಳ್ಳಾಗಿಸಲೂ ನನಗೆ ಇಷ್ಟವಿಲ್ಲ. ಅತಿಬಲನೂ ಸತ್ಯವಂತನೂ ಆದ ಪಕ್ಷಿಗಳ ಇಂದ್ರನೋರ್ವನಾಗಲಿ. ಯಾಚಿಸುತ್ತಿರುವ ದೇವೇಂದ್ರನ ಮೇಲೆ ಪ್ರಸನ್ನರಾಗಿರಿ!"

ಕಶ್ಯಪನು ಹೀಗೆ ಹೇಳಲು ತಪೋಧನ ವಾಲಖಿಲ್ಯರು ಅವನನ್ನು ನಮಸ್ಕರಿಸಿ ಉತ್ತರಿಸಿದರು:

> "ಪ್ರಜಾಪತೇ! ನಮ್ಮ ಈ ಕಾರ್ಯಗಳೆಲ್ಲವೂ ಇಂದ್ರನನ್ನು ಸೃಷ್ಟಿಸುವುದಕ್ಕಾಗಿ. ನಿನಗೆ ನಿನಗಿಷ್ಟವಾದ ಮಗನು ಹುಟ್ಟಲೆಂದೇ ಈ ಕಾರ್ಯವು ನಡೆಯುತ್ತಿದೆ. ಆದುದರಿಂದ ಈ ಸಫಲ ಕರ್ಮವನ್ನು ನೀನು ಪ್ರತಿಗ್ರಹಿಸಬೇಕು. ನೀನು ಹೇಗೆ ಶ್ರೇಯಸ್ಸನ್ನು ಕಾಣುತ್ತೀಯೋ ಹಾಗೆ ನಡೆಸಿಕೋ!"

ಧರ್ಮಪತ್ನಿಯರಿಂದ ಪರಮ ಸುಖವನ್ನುಹೊಂದಿದ ಪ್ರಜಾಪತಿಸಮ ಪತಿ ಕಶ್ಯಪನು ಅವರೀರ್ವರಿಗೆ ಪ್ರೀತಿಯ ವರಗಳನ್ನಿತ್ತನು. ಕಶ್ಯಪನು ಉತ್ತಮ ವರಗಳನ್ನು ನೀಡಲಿದ್ದಾನೆ ಎಂದು ಕೇಳಿ ಆ ವರಸ್ತ್ರೀಯರಿಬ್ಬರಿಗೂ ಹರ್ಷ-ಪ್ರೀತಿಗಳುಂಟಾದವು. ಕದ್ರುವು ತೇಜಸ್ಸಿನಲ್ಲಿ ಸರಿಸಮರಾದ ಸಹಸ್ರ ನಾಗಗಳನ್ನು ತನ್ನ ಪುತ್ರರನ್ನಾಗಿ ಕೇಳಿದಳು. ಕದ್ರುವಿನ ಪುತ್ರರಿಗಿಂತ ಅಧಿಕ ಬಲಾನ್ವಿತ ಓಜಸ್ಸು-ತೇಜಸ್ಸು-ವಿಕ್ರಮಗಳಲ್ಲಿ ಅಧಿಕರಾದ ಈರ್ವರು ಪುತ್ರರನ್ನು ವಿನತೆಯು ಕೇಳಿಕೊಂಡಳು. ಅವರ ಪತಿ ಕಶ್ಯಪನು ಕದ್ರು-ವಿನತೆಯರಿಗೆ “ಹಾಗೆಯೇ ಆಗಲಿ!” ಎಂದು ಬೇಡಿದ ಪುತ್ರರ ವರವನ್ನಿತ್ತನು. ಅಧಿಕವೀರ್ಯ ಸುತರೀರ್ವರನ್ನು ಪಡೆದ ವಿನತೆ ಮತ್ತು ಸರಿಸಮ ತೇಜೋವಂತ ಸಹಸ್ರ ಪುತ್ರರನ್ನು ಪಡೆದ ಕದ್ರು ಇಬ್ಬರೂ ಕೃತಕೃತ್ಯರಾದರು. “ಗರ್ಭವನ್ನು ಜಾಗ್ರತೆಯಲ್ಲಿ ಧರಿಸಿರಿ!” ಎಂದು ಹೇಳಿ ವರಗಳನ್ನಿತ್ತು ಭಾರ್ಯೆಯರನ್ನು ಸಂತುಷ್ಟಗೊಳಿಸಿ ಆ ಮಹಾತಪ ಕಶ್ಯಪನು ವನವನ್ನು ಸೇರಿದನು.

ಬಹಳಕಾಲದ ನಂತರ ಕದ್ರುವು ಒಂದು ಸಾವಿರ ಅಂಡಗಳಿಗೆ ಮತ್ತು ವಿನತೆಯು ಎರಡು ಅಂಡಗಳಿಗೆ ಜನ್ಮವಿತ್ತರು. ಸಂತೋಷಗೊಂಡ ಅವರ ಪರಿಚಾರಿಕೆಯರು ಆ ಅಂಡಗಳನ್ನು ಪ್ರತ್ಯೇಕ ಬಿಸಿ ಪಾತ್ರೆಗಳಲ್ಲಿ ಇಟ್ಟರು. ಹೀಗೆ ಐದು ನೂರು ವರ್ಷಗಳು ಕಳೆದವು. ಐದುನೂರು ವರ್ಷಗಳ ನಂತರ ಕದ್ರುವಿನ ಮಕ್ಕಳು ಅಂಡಗಳಿಂದ ಹೊರಬಂದರು.

ಆದರೆ ವಿನತೆಯ ಎರಡು ಅಂಡಗಳು ಒಡೆಯಲೇ ಇಲ್ಲ. ಆಗ ನಾಚಿಕೊಂಡ ಪುತ್ರಾರ್ಥಿ ವಿನತೆಯು ತನ್ನ ಒಂದು ಅಂಡವನ್ನು ಒಡೆದು ಅದರಲ್ಲಿದ್ದ ತನ್ನ ಪುತ್ರನನ್ನು ನೋಡಿದಳು. ಮೇಲಿನ ದೇಹ ಮಾತ್ರ ಬೆಳೆದು ಕೆಳಗಿನ ಭಾಗ ಇನ್ನೂ ಬೆಳೆಯದೇ ಇದ್ದ ಆ ಪುತ್ರನು ರೋಷಸಂಪನ್ನನಾಗಿ ತಾಯಿಗೆ ಶಾಪವನ್ನಿತ್ತನು:

> "ಮಾತಾ! ದುರಾಸೆಯಿಂದ ಮೊಟ್ಟೆಯನ್ನು ಒಡೆದು ಅಸಮ ಶರೀರನಾದ ನನ್ನನ್ನು ಹೊರತಂದೆ. ಆದುದರಿಂದ ನೀನು ಮುಂದೆ ದಾಸಿಯಾಗುತ್ತೀಯೆ! ಇನ್ನೂ ಐದುನೂರು ವರ್ಷಗಳು ತಾಳ್ಮೆಯಿಂದ ಈ ಇನ್ನೊಂದು ಅಂಡವನ್ನು ಒಡೆಯದೇ ಕಾದರೆ ಅದರಿಂದ ಹುಟ್ಟುವ ನಿನ್ನ ಸುತನು ನಿನ್ನನ್ನು ದಾಸತ್ವದಿಂದ ಮುಕ್ತಗೊಳಿಸುತ್ತಾನೆ! ನೀನು ಈ ಅಂಡವನ್ನು ಒಡೆದು ತಪಸ್ವಿ ಕಶ್ಯಪನ ಇನ್ನೊಬ್ಬ ಮಗನನ್ನು ನನ್ನ ಗಾಗೆ ವ್ಯಂಗ ದೇಹವುಳ್ಳವನನ್ನಾಗಿ ಮಾಡದೇ ಇದ್ದರೆ ಮಾತ್ರ ಇದು ಹೀಗಾಗಲು ಸಾಧ್ಯ. ಅವನು ವಿಶಿಷ್ಟ ಬಲಶಾಲಿಯಾಗಿರಬೇಕೆಂದು ಬಯಸುವೆಯಾದರೆ ನೀನು ಐದುನೂರು ವರ್ಷಗಳ ಪರ್ಯಂತ ಅವನನ್ನು ವಿಶೇಷವಾಗಿ ಪರಿಪಾಲಿಸಬೇಕು!"

ಈ ರೀತಿ ಶಾಪವನ್ನಿತ್ತು ವಿನತೆಯ ಪುತ್ರನು ಅಂತರಿಕ್ಷವನ್ನೇರಿದನು.

ಸದಾ ಪ್ರಭಾತಸಮಯದಲ್ಲಿ ಕಾಣುವ ಅರುಣನೇ ಅವನು.

ರಾತ್ರಿ ಕಳೆದು ಪ್ರಭಾತದಲ್ಲಿ ರವಿಯು ಉದಯಿಸುತ್ತಿದ್ದಂತೆ ದಾಸ್ಯತ್ವದ ಪ್ರಣವನ್ನಿಟ್ಟು ಆತಂಕಗೊಂಡಿದ್ದ ಅಕ್ಕ-ತಂಗಿ ಕದ್ರು-ವಿನತೆಯರು ಕುದುರೆ ಉಚ್ಛೈಶ್ರವಸ್ಸುವನ್ನು ನೋಡಲು ಹೊರಟರು. ಆಗ ಅಲ್ಲಿ ಅವರು ತಿಮಿಂಗಿಲು-ಮೊಸಳೆಗಳ ಕೂಗಿನಿಂದ ತುಂಬಿದ್ದ ನೀರಿನ ಸಮುದ್ರವನ್ನು ಕಂಡರು. ಅದು ನಾನಾ ರೂಪದ ಸಹಸ್ರಾರು ಜೀವಿಗಳ, ಉಗ್ರ ಜಂತುಗಳ ಮತ್ತು ಆಮೆಗಳ ಸಂಕುಲಗಳಿಂದ ತುಂಬಿತ್ತು. ಸರ್ವ ರತ್ನಗಳ ಆಗರ, ವರುಣನ ಆಲಯ, ಸರ್ಪಗಳ ಆಲಯ, ರಮ್ಯ ಉತ್ತಮ ಸರಿತಾ ಪತಿಯನ್ನು ಅವರು ನೋಡಿದರು. ಅಂತ್ಯವಿಲ್ಲದ ಆಳದ ವರೆಗೂ ನೀರಿನಿಂದ ತುಂಬಿರುವ ಆ ಸಮುದ್ರದಲ್ಲಿ ಸಾತ್ವಿಕರಿಗೆ ಭಯಂಕರ ಅಸುರರ ಬಂಧನಸ್ಥಾನವಾದ ಪ್ರಜ್ವಲಿಸುವ ಪಾತಾಳವಿದೆ. ಆ ಶುಭ ಸಮುದ್ರವು ದೇವತೆಗಳಿಗೆ ಪರಮಾಮೃತದ ಆಕರವೂ, ಅಪ್ರಮೇಯವೂ, ಅಚಿಂತ್ಯವೂ, ಸುಪುಣ್ಯವೂ ಮತ್ತು ಅದ್ಭುತವೂ ಆದ ಜಲಾಶಯವಾಗಿತ್ತು. ಘೋರ ಜಲಚರಗಳ ರೌದ್ರ ಗರ್ಜನೆಗಳಿಂದ ಮತ್ತು ಗಂಭೀರ ಸುಳಿಗಳಿಂದ ಕೂಡಿದ ಅದು ಸರ್ವರಿಗೂ ಭಯಂಕರವಾಗಿತ್ತು. ಕೈಗಳನ್ನು ಮೇಲೆತ್ತಿ ನರ್ತಿಸುತ್ತಿರುವಂತೆ ಎಲ್ಲೆಡೆಯೂ ಭಿರುಗಾಳಿಯಿಂದ ಅಲ್ಲೋಲ-ಕಲ್ಲೋಲಗೊಂಡು ಕ್ಷೋಭೋದ್ವೇಗಗಳೊಂದಿಗೆ ಬರುತ್ತಿರುವ ಅಲೆಗಳು ಕುಣಿಯುತ್ತಿದ್ದವು. ಚಂದ್ರನ ವೃದ್ಧಿ-ಕ್ಷಯಗಳೊಂದಿಗೆ ಏರಿಳಿಯುತ್ತಿದ್ದ ಆ ಅನುತ್ತಮ

ಸುಮುದ್ರದಲ್ಲಿಯೇ ಪಾಂಚಜನ್ಯನ ಜನ್ಮವಾಗಿತ್ತು. ಅಮಿತತೇಜಸ್ವಿ ಭಗವಂತ ಗೋವಿಂದನು ಹಂದಿಯ ರೂಪವನ್ನು ಧರಿಸಿ ಆ ಸಮುದ್ರದ ಜಲವನ್ನು ಅಲ್ಲೋಲಕಲ್ಲೋಲಗೊಳಿಸಿ ಅದರಿಂದ ಭೂಮಿಯನ್ನು ಮೇಲೆತ್ತಿದ್ದನು. ಬ್ರಹ್ಮರ್ಷಿ ಅತ್ರಿಯು ನೂರುವರ್ಷ ತಪಸ್ಸನ್ನಾಚರಿಸಿದರೂ ಪಾತಾಳಕ್ಕಿಂತಲೂ ಅಡಿಯಲ್ಲಿರುವ ಇದರ ಆಳವನ್ನು ಅಳೆಯಲು ಸಮರ್ಥನಾಗಲಿಲ್ಲ. ಅಮಿತ ತೇಜಸ ಪದ್ಮನಾಭ ವಿಷ್ಣುವು ಯುಗದ ಆದಿಕಾಲದಲ್ಲಿ ಆಧ್ಯಾತ್ಮಯೋಗನಿದ್ರೆಯಲ್ಲಿದ್ದಾಗ ಇದು ಅವನಿಗೆ ಹಾಸಿಗೆಯಾಗಿ ಸೇವೆ ಸಲ್ಲಿಸಿತ್ತು. ವಡವನ ಬಾಯಿಯಿಂದ ಹೊರಹೊಮ್ಮಿ ಪ್ರಜ್ವಲಿಸುತ್ತಿರುವ ಅಗ್ನಿಗೆ ಅಗಾಧ-ಅಪಾರ-ಅಪ್ರಮೇಯ ವಿಸ್ತೀರ್ಣವನ್ನು ಹೊಂದಿದ ಆ ಶುಭ ಸಮುದ್ರನೇ ಹವಿಸ್ಸಾಗಿದ್ದನು. ಸಹಸ್ರಾರು ಮಹಾನದಿಗಳು ಮತ್ತು ತೊರೆಗಳು ಪ್ರಿಯನನ್ನು ಸೇರಲು ಸ್ಪರ್ಧಿಸುತ್ತಿರುವ ಅಭಿಸಾರಿಕೆಯರಂತೆ ಮಹಾಸಾಗರದೆಡೆಗೆ ಓಡಿ ಬರುತ್ತಿರುವುದನ್ನು ಅವರು ನೋಡಿದರು. ತಿಮಿಂಗಿಲ-ಮಕರ ಸಂಕುಲಗಳ ಉಗ್ರ ಗರ್ಜನೆ ಮತ್ತು ಇತರ ಜಲಚರಗಳ ರೌದ್ರ ನಾದಗಳಿಂದ ಪ್ರತಿಧ್ವನಿಸುತ್ತಿದ್ದ, ಗಗನದ ಪ್ರಕಾಶವನ್ನು ವಿಸ್ತೀರ್ಣವಾಗಿ ಪ್ರತಿಬಿಂಬಿಸುತ್ತಿದ್ದ ಆ ಅಗಾಧ ಮತ್ತು ಗಂಭೀರವಾದ ನೀರಿನ ಅನಂತ ನಿಧಿಯನ್ನು ಅವರು ನೋಡಿದರು. ಹೀಗೆ ಮೊಸಳೆ-ಮೀನುಗಳ ಸಂಕುಲವಿದ್ದ, ಆಕಾಶದ ಪ್ರಕಾಶವನ್ನು ಭಿತ್ತರಿಸುತ್ತಿದ್ದ, ಪಾತಾಳದಲ್ಲಿ ಉರಿಯುತ್ತಿದ್ದ ಅಗ್ನಿಯಿಂದ ಬೆಳಗುತ್ತಿದ್ದ ಆ ಗಂಭೀರ ಸಮುದ್ರವನ್ನು ನೋಡುತ್ತಾ ಅವರು ಅದನ್ನು

ಪಾರುಮಾಡಿದರು.

ಶೀಘ್ರವಾಗಿ ಆ ಸಮುದ್ರವನ್ನು ಅತಿಕ್ರಮಿಸಿ ವಿನತೆಯ ಸಹಿತ ಕದ್ರುವು ತಕ್ಷಣವೇ ಆ ತುರಗದ ಬಳಿ ಬಂದಿಳಿದಳು. ಬಾಲವು ಕಪ್ಪು ಕೂದಲುಗಳಿಂದ ಸುತ್ತಿಕೊಂಡಿದುದನ್ನು ನೋಡಿ ವಿಷಣ್ಣವದನಳಾದ ವಿನತೆಯು ಕದ್ರುವಿನ ದಾಸಿಯಾಗಿ ನಿಯೋಜಿತಗೊಂಡಳು. ಆ ಪಣದಿಂದ ಪರಾಜಿತಳಾದ ವಿನತೆಯು ತನಗೊದಗಿದ ದಾಸೀಭಾವದಿಂದ ಅತ್ಯಂತ ದುಃಖಸಂತಪ್ತಳಾದಳು.

ಈ ಮಧ್ಯೆ ಕಾಲಬಂದಂತೆ ಮಹಾತೇಜಸ್ವಿ ಗರುಡನು ಯಾರ ಸಹಾಯವೂ ಇಲ್ಲದೇ ಅಂಡವನ್ನು ಒಡೆದು ಹೊರಬಂದನು. ಅಗ್ನಿರಾಶಿಯಂತೆ ಬೆಳಗುತ್ತಾ ಅತಿಭಯಂಕರನಾಗಿ ಉರಿಯುತ್ತಿರುವ ಆ ಪಕ್ಷಿಯು ತಕ್ಷಣವೇ ಮಹಾಕಾಯನಾಗಿ ಬೆಳೆದು ಗಗನವನ್ನೇರಿದನು. ಅವನನ್ನು ನೋಡಿದ ಸರ್ವಪ್ರಜೆಗಳು ವಿಭಾವಸು ಅಗ್ನಿದೇವನನ್ನು ಮೊರೆಹೊಕ್ಕರು. ಕುಳಿತಿರುವ ವಿಶ್ವರೂಪಿಯನ್ನು ನಮಸ್ಕರಿಸಿ

> “ಅಗ್ನಿದೇವ! ನಿನ್ನ ಕಾಯವನ್ನು ಇನ್ನೂ ಎಷ್ಟು ಬೆಳೆಸುತ್ತಿದ್ದೀಯೆ? ಈ ನಿನ್ನ ದೊಡ್ಡ ರಾಶಿಯೇ ಎಲ್ಲ ಕಡೆ ಹರಡಿಕೊಂಡಿದೆ!”

ಎಂದು ವಿನಂತಿಸಿಕೊಂಡರು. ಆಗ ಅಗ್ನಿಯು ಅವರಿಗೆ

“ಅಸುರಾರ್ದನರೇ! ನೀವು ತಿಳಿದುಕೊಂಡ ಹಾಗೆ ಇಲ್ಲ. ಅವನು ನನ್ನ ಸರಿಸಮಾನ ತೇಜಸ್ಸುಳ್ಳ ಬಲವಾನ್ ಗರುಡ!”

ಎಂದನು. ಇದನ್ನು ಕೇಳಿದ ದೇವತೆಗಳು ಋಷಿಗಣಗಳೊಂದಿಗೆ ಗರುಡನಲ್ಲಿಗೆ ಹೋಗಿ ದೂರದಲ್ಲಿಯೇ ನಿಂತು ಅವನನು ಸ್ತುತಿಸಿ ಪ್ರಾರ್ಥಿಸಿದರು:

“ಪತಗೇಶ್ವರ! ನೀನು ಋಷಿ. ಮಹಾಭಾಗ. ನೀನು ದೇವ. ನೀನು ಪ್ರಭು. ಸೂರ್ಯನ ಉರಿಯುತ್ತಿರುವ ಕಿರಣ. ನಿನ್ನ ಸರಿಸಾಟಿ ಯಾರೂ ಇಲ್ಲ. ಬಲಶಾಲಿಯಾದರೂ ನೀನು ಸಾಧು. ಸತ್ತ್ವವು ನಿನ್ನ ಅಧೀನದಲ್ಲಿದೆ. ನೀನು ಸಮೃದ್ಧಿವಂತ ಮತ್ತು ದುಷ್ಪ್ರಸಹ. ನೀನು ತಪಸ್ಸು ಮತ್ತು ಕ್ಷೀಣವಾಗದ ಕೀರ್ತಿ. ಕೇಲಿದುದೆಲ್ಲವೂ, ನಡೆದುದೆಲ್ಲವೂ ಮತ್ತು ನಡೆಯುವಂಥಹುದೆಲ್ಲವೂ ನೀನೇ. ಇಲ್ಲಿರುವ ಸರ್ವ ಚರಾಚರಗಳಲ್ಲಿ ಸುರ್ಯನ ಪ್ರಕಾಶವನ್ನೇ ಗ್ರಹಣಗೊಳಿಸುವ ನೀನು ಉತ್ತಮ. ಸೂರ್ಯನ ಪ್ರಭೆಯನ್ನೂ ಮೀರಿದ ನೀನು ನಿಶ್ಚಿತ-ಅನಿಶ್ಚಿತಗಳೆಲ್ಲವುದಕ್ಕೂ ಅಂತಕ. ಪರಿಕುಪಿತ ದಿವಾಕರನು ಹೇಗೆ ಸುಡುತ್ತಾನೋ ಹಾಗೆ ಪ್ರಜೆಗಳು ನಿನ್ನ ಈ ಹುತಾಶನಪ್ರಭೆಯಿಂದ ಸುಡುತ್ತಿದ್ದಾರೆ. ಯುಗವನ್ನು ವಿನಾಶಮಾಡಿ ಪರಿವರ್ತನೆಯನ್ನೇ ಅಂತ್ಯಗೊಳಿಸುವ

ಭಯಂಕರ ಪ್ರಲಯಾಗ್ನಿಯಂತೆ ನಿಂತಿರುವೆ! ಖಗೇಶ್ವರ! ಮಹೌಜಸ! ವರದ! ಪರಾವರ! ಗರುಡ! ನಾವೆಲ್ಲ ನಿನ್ನ ಶರಣು ಬಂದಿದ್ದೇವೆ."

ಋಷಿಗಣಗಳ ಸಹಿತ ದೇವತೆಗಳು ಈ ರೀತಿ ಸ್ತುತಿಸಲು ಸುಪರ್ಣ ಗರುಡನು ತನ್ನ ತೇಜಸ್ಸು-ಗಾತ್ರಗಳನ್ನು ಕಡಿಮೆಮಾಡಿಕೊಂಡನು.

ನಂತರ ಇಚ್ಛೆಯಿದ್ದಲ್ಲಿಗೆ ಹೋಗಬಲ್ಲ ಆ ಮಹಾವೀರ ಮಹಾಬಲ ಪಕ್ಷಿಯು ಸಾಗರದ ಇನ್ನೊಂದು ತೀರದಲ್ಲಿದ್ದ ತಾಯಿಯ ಬಳಿ ಬಂದನು. ಅಲ್ಲಿ ಪಣವನ್ನು ಸೋತು ದಾಸೀಭಾವವನ್ನು ಹೊಂದಿದ್ದ ವಿನತೆಯು ಅತ್ಯಂತ ದುಃಖಸಂತಪ್ತಳಾಗಿದ್ದಳು.

ಅಲ್ಲಿ ಒಮ್ಮೆ ಕದ್ರುವು ವಿನತೆಯನ್ನು ಕರೆದು ಪುತ್ರನ ಸನ್ನಿಧಿಯಲ್ಲಿ ನಮಸ್ಕರಿಸಿ ನಿಂತಿದ್ದ ಅವಳಿಗೆ

"ಭದ್ರೇ ವಿನತೇ! ಸಮುದ್ರತಳದಲ್ಲಿರುವ ರಮ್ಯವೂ ರಮಣೀಯವೂ ಆದ ನಾಗಗಳ ಆಲಯದ ಏಕಾಂತಕ್ಕೆ ನನ್ನನ್ನು ಕರೆದೊಯ್ಯಿ!"

ಎಂದಳು. ಆಗ ಗರುಡನ ಮಾತೆಯು ಸರ್ಪಗಳ ಮಾತೆಯನ್ನು ಹಾಗೆಯೇ ತಾಯಿಯ ಮಾತಿನಂತೆ ಗರುಡನು ಸರ್ಪಗಳನ್ನು ತನ್ನ

ಭುಜದಮೇಲೆ ಹೊತ್ತು ಹೊರಟರು. ವೈನತೇಯ ಗರುಡನು ಸೂರ್ಯನ ಕಡೆ ಏರುತ್ತಿರುವಾಗ ಸೂರ್ಯನ ಕಿರಣಗಳು ತಾಗಿ ಸರ್ಪಗಳೆಲ್ಲವೂ ಮೂರ್ಛಿತಗೊಂಡವು. ಮಕ್ಕಳ ಆ ಅವಸ್ಥೆಯನ್ನು ಕಂಡು ಕದ್ರುವು ಇಂದ್ರನನ್ನು ಸ್ತುತಿಸಿದಳು:

> "ದೇವದೇವೇಶ! ನಿನಗೆ ನಮನಗಳು. ಬಲಸೂದನ! ನಿನಗೆ ನಮನಗಳು. ನಮೂಚಿಘ್ನ! ನಿನಗೆ ನಮನಗಳು. ಸಹಸ್ರಾಕ್ಷ! ಶಚೀಪತೇ! ನಿನಗೆ ನಮನಗಳು. ಸೂರ್ಯನಿಂದ ಸುಡುತ್ತಿರುವ ಸರ್ಪಗಳನ್ನು ಮಳೆಸುರಿಸಿ ಉಳಿಸು! ಅಮರೋತ್ತಮ! ನೀನೊಬ್ಬನೇ ನಮ್ಮ ಉತ್ಕೃಷ್ಟ ತ್ರಾಣ. ಪುರಂದರ! ನೀನು ಮಳೆಯ ಪ್ರಭು ಮತ್ತು ಬೇಕಾದಷ್ಟು ಮಳೆಯನ್ನು ಸುರಿಸಬಲ್ಲೆ. ನೀನೇ ಮೋಡ. ನೀನೇ ವಾಯು. ಅಂಬರದಲ್ಲಿ ಬೆಳಗುವ ಮಿಂಚೂ ನೀನೇ. ಮೋಡಗಳನ್ನು ಒಟ್ಟುಮಾಡುವವನೂ ನೀನೇ. ಮೋಡಗಳನ್ನು ಚದುರಿಸುವವನೂ ನೀನೇ. ನೀನು ಘೋರ ಗುಡುಗು ಮತ್ತು ಘೋಷಗೈಯುವ ಮೋಡಗಳೂ ನೀನೇ. ಲೋಕಗಳನ್ನು ಸೃಷ್ಟಿಸುವವನೂ ಮತ್ತು ಸಂಹರಿಸುವನೂ ನೀನೇ. ನೀನು ಅಪರಾಜಿತ. ಸರ್ವಭೂತಗಳಲ್ಲಿರುವ ಜ್ಯೋತಿಯು ನೀನು. ನೀನೇ ಆದಿತ್ಯ, ವಿಭಾವಸು. ನೀನು ಮಹಾ ಅದ್ಭುತ ಮತ್ತು ಆಶ್ಚರ್ಯ. ನೀನು ರಾಜ. ಸುರೋತ್ತಮ. ನೀನು ವಿಷ್ಣು. ನೀನು ಸಹಸ್ರಾಕ್ಷ. ನೀನು

ದೇವ ಮತ್ತು ಪರಾಯಣನೂ ನೀನೇ. ದೇವ! ನಿನ್ನ ಸರ್ವವೂ ಅಮೃತ. ನೀನು ಪರಮಾರ್ಚಿತ ಸೋಮ. ಮುಹೂರ್ತ, ತಿಥಿ, ಲವ, ಕ್ಷಣ ಇವೆಲ್ಲವೂ ನೀನೇ. ಶುಕ್ಲವೂ ನೀನೇ, ಬಹುಳವೂ ನೀನೇ. ಕಾಲ-ಕಾಷ್ಟ-ತ್ರುಟಿಗಳೂ ನೀನೇ. ಸಂವತ್ಸರವೂ ನೀನೇ. ಮಾಸ-ರಾತ್ರಿ-ಹಗಲುಗಳು ಕೂಡ ನೀನೇ. ಗಿರಿ-ವನಗಳಿಂದ ಕೂಡಿರುವ ಉತ್ತಮ ವಸುಂಧರೆಯೂ ನೀನೇ. ಕತ್ತಲೆಯನ್ನು ದೂರಮಾಡುವ ಭಾಸ್ಕರನಿರುವ ಅಂಬರವೂ ನೀನೇ. ಮಹಾ ತಿಮಿಂಗಿಲ, ಮೊಸಳೆ ಮತ್ತು ಅಂಥಹ ಇತರ ಜೀವಿಗಳ ಆಲಯ ಮಹಾ ಸಮುದ್ರವೂ ನೀನೇ. ಮುದಿತ ಮನಸ್ಕ ಮನೀಷೀ ಮಹರ್ಷಿಗಳಿಂದ ಸದಾ ಪೂಜಿಸಲ್ಪಡುವ ಮಹಾ ಯಶಸ್ವಿ ನೀನು. ಅದ್ವರಗಳಲ್ಲಿ ವಷಟ್ಕರಣ ಮಾಡಿ ಅರ್ಪಿಸುವ ಸೋಮದ ಹವಿಸ್ಸನ್ನು ಸೇವಿಸುವವರಲ್ಲಿ ಅಗ್ರನು ನೀನು. ಫಲಾರ್ಥಿ ವಿಪ್ರರಿಂದ ಸತತವಾಗಿ ಯಾಜಿಸಿಕೊಳ್ಳುವವನು ನೀನು. ಅತುಲಬಲಶಾಲೀ! ವೇದಾಂಗಗಳು ನಿನ್ನ ಕೀರ್ತನೆ ಮಾಡುತ್ತವೆ. ನಿನ್ನನ್ನು ಅರಿತುಕೊಳ್ಳಲು ದ್ವಿಜೇಂದ್ರರು ಸರ್ವ ವೇದ ವೇದಾಂಗಗಳ ಪಾರಾಯಣ ಮಾಡುತ್ತಾರೆ."

ಈ ರೀತಿ ಕದ್ರುವು ಸ್ತುತಿಸಲು ಹರಿವಾಹನ ಇಂದ್ರನು ಆಕಾಶವನ್ನು ಕಪ್ಪು ಮೋಡಗಳಿಂದ ತುಂಬಿದನು. "ಮಳೆ ಸುರಿಸಿ!" ಎಂದು

ಆಜ್ಞಾಪಿಸಲು ಆ ಮೇಘಗಳು ಆಕಾಶದಲ್ಲಿ ಮಿಂಚಿನಿಂದ ಬೆಳಗಿ ಸತತವಾಗಿ ಗುಡುಗತೊಡಗಿದವು. ಹೊಡೆದಾಡುತ್ತಿವೆಯೋ ಎನ್ನುವಂಥಹ ಸುಮಾದ್ಭುತ ಅತುಲ ಮಹಾಶಬ್ಧದೊಂದಿಗೆ ಮಳೆಯನ್ನು ಸುರಿಸಿದವು. ಅನೇಕ ಮಿಂಚು-ಗುಡುಗುಗಳಿಂದ ಮಳೆಯು ಸುರಿಯುತ್ತಿರಲು ಅಂಬರವು ಹುಚ್ಚಾಗಿ ಕುಣಿಯುತ್ತಿರುವಂತೆ ತೋರುತ್ತಿತ್ತು. ಇಂದ್ರನು ಮಳೆಸುರಿಸುತ್ತಿದ್ದಂತೆ ನಾಗಗಳು ತುಂಬಾ ಹರ್ಷಿತರಾದರು. ಭೂಮಿಯೂ ಕೂಡ ಶೀತಲ ಶುದ್ಧ ನೀರಿನಿಂದ ತುಂಬಿಕೊಂಡಿತು.

ಗರುಡನು ಎತ್ತಿಕೊಂಡು ಹೋದ ನಾಗಗಳು ಆ ಸಾಗರದ ನೀರನ್ನು ದಾಟಿ ಪಕ್ಷಿಸಂಘಗಳ ನಿನಾದಗಳಿದ್ದ ದ್ವೀಪವನ್ನು ತಲುಪಿದವು. ಅದು ವಿಚಿತ್ರ ಫಲ-ಪುಷ್ಪಗಳನ್ನು ಹೊತ್ತ ವನರಾಶಿಯಿಂದ ತುಂಬಿಕೊಂಡಿತ್ತು, ಮತ್ತು ಅಲ್ಲಿ ರಮ್ಯ ಭವನ ಪ್ರಸನ್ನ ಜಲವಿದ್ದ ಸುಂದರ ಪದ್ಮಾಕರ ಸರೋವರಗಳಿದ್ದವು. ದಿವ್ಯಗಂಧವನ್ನು ಸೂಸುವ ಪುಣ್ಯ ಮಾರುತದಿಂದ ಆ ದ್ವೀಪವು ಪುನರ್ಜೀವನಗೊಂಡಂತಿತ್ತು. ಮಲಯದಲ್ಲಿ ಹುಟ್ಟಿ ಬೀಸುವ ಗಾಳಿಯು ಆಕಾಶವನ್ನು ಮುತ್ತಿಡುವಂತಿದ್ದ ಸುಂದರ ವೃಕ್ಷಗಳಿಂದ ಪುಷ್ಪವೃಷ್ಟಿಯನ್ನು ಸುರಿಸುತ್ತಿತ್ತು. ಅಲ್ಲಿರುವ ವೃಕ್ಷಗಳು ಪುಷ್ಪಗಳನ್ನೇ ನೀರಿನಂತೆ ಸುರಿಸಿ ಸ್ನಾನಮಾಡಿಸುತ್ತಿರುವಂತೆ ತೋರುತ್ತಿದ್ದವು. ಮನಸ್ಸಿಗೆ ಆನಂದವನ್ನು ನೀಡುವ ಪುಣ್ಯಪ್ರದ ಗಂಧರ್ವ-ಅಪ್ಸರೆಯರಿಗೆ ಪ್ರಿಯಕರವಾದ ನಾನಾ

ಪಕ್ಷಿಗಳ ಕಲರವಗಳೊಂದಿಗೆ ಪ್ರತಿಧ್ವನಿಸುತ್ತಿದ್ದ ಆ ಪ್ರದೇಶವು ಕದ್ರು-ಪುತ್ರರನ್ನು ಹರ್ಷಗೊಳಿಸಿತು.

ಆ ವನವನ್ನು ಸೇರಿದ ನಾಗಗಳು ಸಾಕಷ್ಟು ಮುದಿತರಾದರು ಮತ್ತು ಪತಗೋತ್ತಮ ಮಹಾವೀರ ಗರುಡನಿಗೆ

> "ಇದಕ್ಕಿಂತಲೂ ಹೆಚ್ಚು ನೀರಿರುವ ಸುರಮ್ಯ ದ್ವೀಪಕ್ಕೆ ನಮ್ಮನ್ನು ಕರೆದೊಯ್ಯಿ. ನೀನು ಆಕಾಶದಲ್ಲಿ ಹಾರಿ ಬರುವಾಗ ಬಹಳಷ್ಟು ರಮ್ಯ ಪ್ರದೇಶಗಳನ್ನು ನೋಡಿರಬಹುದು!"

ಎಂದರು. ಸ್ವಲ್ಪಹೊತ್ತು ಯೋಚಿಸಿ ಗರುಡನು ಮಾತೆ ವಿನತೆಯನ್ನು

> "ಮಾತೇ! ಈ ಸರ್ಪಗಳು ಹೇಳುವ ಕೆಲಸಗಳನ್ನೆಲ್ಲಾ ನಾವೇಕೆ ಮಾಡಬೇಕು?"

ಎಂದು ಕೇಳಿದನು. ಆಗ ವಿನತೆಯು ಅವನಿಗೆ

> "ಪತಗೋತ್ತಮ! ಸರ್ಪಗಳ ಮೋಸದಿಂದ ನಾನು ಪಣವನ್ನು ಸೋತು ನನ್ನ ಪತಿಯ ಎರಡನೇ ಪತ್ನಿ ಮತ್ತು ನನ್ನ ಸಹೋದರಿಯ ದಾಸಿಯಾಗಿದ್ದೇನೆ"

ಎಂದು ಹೇಳಿದಳು. ತಾಯಿಯಿಂದ ಕಾರಣವನ್ನು ತಿಳಿದ ಗಗನೇಚರನು

ದುಃಖಿತನಾಗಿ ಸರ್ಪಗಳಿಗೆ

> “ಸರ್ಪಗಳೇ! ಏನನ್ನು ತಂದುಕೊಡುವುದರಿಂದ ಅಥವಾ ಏನನ್ನು ಹೇಳಿಕೊಡುವುದರಿಂದ ಅಥವಾ ಎಂಥಹ ಪೌರುಷ ಕೆಲಸವನ್ನು ಮಾಡುವುದರಿಂದ ನಾವು ಈ ದಾಸತ್ವದಿಂದ ಬಿಡುಗಡೆ ಹೊಂದಬಹುದು ಎನ್ನುವುದನ್ನು ಹೇಳಿರಿ”

ಎಂದು ಕೇಳಿಕೊಂಡನು. ಅವನು ಹೇಳಿದ್ದುದನ್ನು ಕೇಳಿದ ಸರ್ಪಗಳು

> “ಗರುಡ! ನಿನ್ನ ಬಲವನ್ನುಪಯೋಗಿಸಿ ಅಮೃತವನ್ನು ತೆಗೆದುಕೊಂಡು ಬಾ! ಆಗ ನೀವು ದಾಸತ್ವದಿಂದ ಮುಕ್ತರಾಗುವಿರಿ”

ಎಂದವು.

ಸರ್ಪಗಳು ಹೀಗೆ ಹೇಳಲು ಗರುಡನು ಮಾತೆಗೆ

> “ಅಮೃತವನ್ನು ತರಲು ಹೋಗುತ್ತಿದ್ದೇನೆ. ಏನನ್ನಾದರೂ ತಿನ್ನಲು ಬಯಸುತ್ತೇನೆ. ಏನು ತಿನ್ನಲಿ ಹೇಳು!”

ಎಂದು ಕೇಳಿದನು. ಆಗ ವಿನತೆಯು ಅವನಿಗೆ ಇಂತೆಂದಳು:

“ಸಮುದ್ರಕುಕ್ಷದ ಅಡಿಯಲ್ಲಿ ಉತ್ತಮ ನಿಷಾದರ ಆಲಯವಿದೆ. ಸಹಸ್ರಾರು ಸಂಖ್ಯೆಯ ಅವರನ್ನು ತಿಂದು ಅಮೃತವನ್ನು ತೆಗೆದುಕೊಂಡು ಬಾ! ಆದರೆ ಎಂದೂ ನೀನು ಬ್ರಾಹ್ಮಣನನ್ನು ಕೊಲ್ಲುವ ಕೆಲಸವನ್ನು ಮಾಡಬೇಡ. ಸರ್ವಭೂತಗಳಲ್ಲಿಯೂ ಬ್ರಾಹ್ಮಣನು ಅವಧ್ಯ. ಅವನು ಬೆಂಕಿಯ ಹಾಗೆ. ಕುಪಿತ ವಿಪ್ರನು ಅಗ್ನಿ, ಸೂರ್ಯ, ವಿಷ ಅಥವಾ ಹರಿತ ಶಸ್ತ್ರದ ಸಮಾನ. ಎಲ್ಲ ಜೀವಿಗಳಲ್ಲಿಯೂ ವಿಪ್ರನು ಅಗ್ರಸ್ಥಾನವನ್ನು ಹೊಂದಿದ್ದಾನೆ. ಪಿತ ಮತ್ತು ಗುರುವಿನಂತೆ ಅವನ ಸ್ಥಾನವು ಶ್ರೇಷ್ಠವಾದುದು.”

ಗರುಡನು

“ಮಾತೇ! ಬ್ರಾಹ್ಮಣನನ್ನು ಹೇಗೆ ಗುರುತಿಸಬಹುದು ಹೇಳು. ಅವರ ಶುಭ ಲಕ್ಷಣಗಳು ಯಾವುವು?”

ಎಂದು ತಾಯಿಯನ್ನು ಪುನಃ ಕೇಳಿದನು. ಆಗ ವಿನತೆಯು

“ಪುತ್ರ! ಗಂಟಲು ಸೇರುತ್ತಿದ್ದಂತೆ ಮೀನು ಹಿಡಿಯಲು ಬಳಸುವ ಕೊಕ್ಕೆಯ ಹಾಗೆ ಪೀಡಿಸುವವನು ಅಥವಾ ಬಿಸಿ ಕೆಂಡದಂತೆ ಸುಡುವವನೇ ಬ್ರಾಹ್ಮಣರ್ಷಭನೆಂದು ತಿಳಿ!”

ಎಂದಳು. ಮಗನ ಅತುಲ ವೀರ್ಯವನ್ನು ತಿಳಿದಿದ್ದರೂ ವಿನತೆಯು ಹಾರ್ದಿಕವಾಗಿ ಈ ಮಾತುಗಳಿಂದ ಅವನನ್ನು

> "ಪಕ್ಷಿಯೇ! ಮಾರುತಗಳು ನಿನ್ನ ರೆಕ್ಕೆಗಳನ್ನು ರಕ್ಷಿಸಲಿ. ಚಂದ್ರನು ನಿನ್ನ ಬೆನ್ನನ್ನು ರಕ್ಷಿಸಲಿ. ಅಗ್ನಿಯು ನಿನ್ನ ಶಿರವನ್ನು ಮತ್ತು ಭಾಸ್ಕರನು ನಿನ್ನ ಸರ್ವವನ್ನೂ ರಕ್ಷಿಸಲಿ. ಪುತ್ರ! ನಾನೂ ಕೂಡ ಸದಾ ಶಾಂತಿ-ಸ್ವಸ್ತಿ ಪರಾಯಣಳಾಗಿ ನಿನ್ನ ದಾರಿಯನ್ನು ಕಾಯುತ್ತಿರುತ್ತೇನೆ. ವತ್ಸ! ನಿನ್ನ ಕಾರ್ಯಾರ್ಥ ಸಿದ್ಧಿಯಾಗಲಿ!"

ಎಂದು ಆಶೀರ್ವದಿಸಿ ಕಳುಹಿಸಿದಳು.

ಮಾತುರ್ವಚನವನ್ನು ಕೇಳಿದ ಗರುಡನು ತನ್ನ ಎರಡು ರೆಕ್ಕೆಗಳನ್ನೂ ಹರಡಿ ನಭವನ್ನೇರಿದನು. ಹಸಿವೆಯಿಂದ ಬಳಲುತ್ತಿದ್ದ ಆ ಬಲವಂತನು ಅಂತಕ ಮಹಾಕಾಲನೋ ಎಂಬಂತೆ ನಿಷಾದರ ಮೇಲೆ ಎರಗಿದನು. ಆ ನಿಷಾದರನ್ನು ಉಪಸಂಹರಿಸಲು ಉದ್ಯುಕ್ತನಾಗಿ ಅವನು ಆಕಾಶದಲ್ಲಿ ಒಂದು ಮಹತ್ತರ ಧೂಳಿನ ಬಿರುಗಾಳಿಯನ್ನು ಎಬ್ಬಿಸಿ, ಸಮುದ್ರದ ತಳದಿಂದ ನೀರನ್ನು ಹೀರಿಕೊಂಡು ಹತ್ತಿರದ ಪರ್ವತಳಲ್ಲಿ ಬೆಳೆದಿದ್ದ ವೃಕ್ಷಗಳು ತತ್ತರಿಸುವಂತೆ ಮಾಡಿದನು. ಅನಂತರ ಆ ಪಕ್ಷಿರಾಜನು ತನ್ನ ಅಗಲ ಬಾಯನ್ನು ನಿಷಾದರ ಮಾರ್ಗದಲ್ಲಿ ಇಟ್ಟು ಅವರನ್ನು ತಡೆಗಟ್ಟಿದನು. ನಿಷಾದರು ಆ ಭುಜಂಗಭೋಜಿನಿಯ ಬಾಯಿಯೆಡೆಗೆ ಒಟ್ಟಿಗೇ ಸೆಳೆಯಲ್ಪಟ್ಟರು. ಭಯಭರಿತ ಪಕ್ಷಿಗಳು ಹೆದರಿ

ಗಗನವನ್ನೇರುವಂತೆ ಅವರು ಅವನ ಅಗಲ ಬಾಯಿಯಬಳಿ ಮುತ್ತಿಗೆ ಹಾಕಿದರು. ಭಿರುಗಾಳಿಯಿಂದ ಎಬ್ಬಿಸಲ್ಪಟ್ಟ ಧೂಳಿನ ಮೋಡಗಳಿಂದ ಸಮ್ಮೋಹಿತರಾಗಿ ಅವರು ಸಹಸ್ರ ಸಂಖ್ಯೆಗಳಲ್ಲಿ ಭಿರುಗಾಳಿಯಿಂದ ತರುಬಲ್ಪಟ್ಟ ಪಕ್ಷಿಗಳಂತೆ ಗರುಡ ಬಾಯಿಯ ಹತ್ತಿರ ಬಂದರು. ಆಗ ಹಸಿವೆಯಿಂದ ತನ್ನ ಬಾಯಿಯನ್ನು ದೊಡ್ಡದಾಗಿ ತೆರೆದಿಟ್ಟಿದ್ದ ಗರುಡನು ತನ್ನ ಬಾಯಿಯನ್ನು ಮುಚ್ಚಿ ಬಹುವಿಧದ ಮೀನುಗಳನ್ನು ತಿನ್ನುವ ಆ ನಿಷಾದ ಸಂಕುಲವನ್ನು ಭಕ್ಷಿಸಿದನು.

ಪತ್ನಿಸಹಿತ ಓರ್ವ ಬ್ರಾಹ್ಮಣನು ಅವನ ಗಂಟಲನ್ನು ಸೇರಿ ಉರಿಯುತ್ತಿರುವ ಬೆಂಕಿಯ ಕೆಂಡದ ಹಾಗೆ ಸುಡಲು ಗರುಡನು ಅವನನ್ನುದ್ದೇಶಿಸಿ

> "ದ್ವಿಜೋತ್ತಮ! ನಿನಗಾಗಿ ನನ್ನ ಬಾಯಿಯನ್ನು ತೆರೆಯುತ್ತೇನೆ. ತಕ್ಷಣವೇ ಹೊರಗೆ ಬಾ. ನಾನು ಯಾವ ಬ್ರಾಹ್ಮಣನನ್ನೂ, ಅವನು ಸದಾ ಪಾಪಕರ್ಮಗಳಲ್ಲಿ ನಿರತನಾಗಿದ್ದರೂ, ವಧಿಸುವುದಿಲ್ಲ"

ಎಂದನು. ಗರುಡನು ಹೀಗೆ ಹೇಳಿದುದಕ್ಕೆ ಆ ಬ್ರಾಹ್ಮಣನು

> "ನನ್ನೊಡನೆ ನನ್ನ ಪತ್ನಿ ನಿಷದಿಯೂ ಹೊರಬರಲಿ"

ಎಂದು ಕೇಳಿಕೊಂಡನು. ಅದಕ್ಕೆ ಗರುಡನು

> “ನಿಷದಿಯನ್ನೂ ನಿನ್ನ ಸಂಗಡ ಕರೆದುಕೊಂಡು ಕೂಡಲೇ ಹೊರಬೀಳು. ನನ್ನ ತೇಜಸ್ಸಿನಿಂದ ಇನ್ನೂ ಜೀರ್ಣವಾಗಿರದೇ ಇದ್ದ ನೀವು ತಡಮಾಡದೇ ನಿಮ್ಮ ಜೀವವನ್ನು ಉಳಿಸಿಕೊಳ್ಳಿ”

ಎಂದನು. ಆಗ ಆ ವಿಪ್ರನು ನಿಷದಿಯೊಡನೆ ಹೊರಬಂದು, ಗರುಡನಿಗೆ ಕೃತಘ್ನತೆಗಳನ್ನು ಹೇಳಿ, ತನಗಿಷ್ಟ ಪ್ರದೇಶಕ್ಕೆ ತೆರಳಿದನು. ವಿಪ್ರನು ತನ್ನ ಪತ್ನಿಯೊಡನೆ ಹೊರಬಂದ ತಕ್ಷಣವೇ ಗರುಡನು ಒಂದು ಕ್ಷಣದಲ್ಲಿ ತನ್ನ ರೆಕ್ಕೆಗಳನ್ನು ಹರಡಿ ಮನೋವೇಗದಲ್ಲಿ ಗಗನವನ್ನೇರಿದನು.

ಮಾರ್ಗದಲ್ಲಿ ಕಂಡ ತನ್ನ ತಂದೆ ಕಶ್ಯಪನು ಪ್ರಶ್ನಿಸಲು ಗರುಡನು ಅವನಿಗೆ ಇಂತೆಂದನು:

> “ಸರ್ಪಗಳಿಂದ ಕಳುಹಿಸಲ್ಪಟ್ಟ ನಾನು ಸೋಮವನ್ನು ತರನು ಹೊರಟಿದ್ದೇನೆ. ಅದನ್ನು ತಂದು ಇಂದು ನಾನು ನನ್ನ ತಾಯಿಯನ್ನು ದಾಸತ್ವದಿಂದ ವಿಮೋಚನಗೊಳಿಸುತ್ತೇನೆ. ನಿಷಾದರನ್ನು ಭಕ್ಷಿಸಲು ತಾಯಿಯು ಹೇಳಿದಳು. ಅವರನ್ನು ಸಹಸ್ರಾರು ಸಂಖ್ಯೆಗಳಲ್ಲಿ ಭಕ್ಷಿಸಿದರೂ ನನಗೆ ತೃಪ್ತಿಯಾಗಲಿಲ್ಲ. ಭಗವನ್! ಭುಂಜಿಸಿ ಅಮೃತವನ್ನು ತರಲು ಸಮರ್ಥನಾಗುವಂತೆ ಬೇರೆ ಯಾವುದಾದರೂ ಭೋಜನವನ್ನು

ತೋರಿಸಿಕೊಡು!”

ಕಶ್ಯಪನು ಹೇಳಿದನು:

“ಹಿಂದೆ ವಿಭಾವಸು ಎಂಬ ಹೆಸರಿನ ಕೋಪಸ್ವಭಾವದ ಮಹರ್ಷಿಯೊಬ್ಬನಿದ್ದನು. ಅವನಿಗೆ ಸುಪ್ರತೀಕನೆಂಬ ಮಹಾತಪಸ್ವಿ ತಮ್ಮನಿದ್ದನು. ಸುಪ್ರತೀಕನು ಧನವನ್ನು ಅಣ್ಣನಲ್ಲಿ ಇಡಲು ಇಚ್ಛಿಸದೇ ಅದರ ವಿಭಜನೆಯಾಗಬೇಕೆಂದು ನಿತ್ಯವೂ ಕೇಳುತ್ತಿದ್ದನು. ಆಗ ವಿಭಾವಸುವು ತಮ್ಮನಿಗೆ ಹೇಳಿದನು: “ಬಹಳಷ್ಟು ಜನರು ಮೋಹದಿಂದ ವಿಭಜನೆ ಮಾಡಲು ಸದಾ ಬಯಸುತ್ತಿರುತ್ತಾರೆ. ಆದರೆ ವಿಭಜನೆಯಾದ ನಂತರ ಅರ್ಥಮೋಹಿತರಾಗಿ ಅವರು ಅನ್ಯೋನ್ಯರನ್ನು ಕಡೆಗಾಣಿಸುತ್ತಾರೆ. ಅವರು ಬೇರೆಬೇರೆಯಾದದ್ದನ್ನು ತಿಳಿದು ಸ್ವಾರ್ಥಿ ಶತ್ರುಗಳು ಮಿತ್ರರೂಪದಲ್ಲಿ ಬಂದು ಅದೇ ಧನದ ಸಲುವಾಗಿ ಅವರಲ್ಲಿ ಇನ್ನೂ ದೊಡ್ಡ ಬಿರುಕನ್ನು ಹುಟ್ಟಿಸುತ್ತಾರೆ. ಇನ್ನೂ ದೂರವಾಗಿದ್ದಾರೆಂದು ತಿಳಿದು ಇತರರು ಅವರ ಪತನಕ್ಕೆ ಕಾರಣರಾಗುತ್ತಾರೆ. ಹೀಗೆ ಬೇರೆಬೇರೆಯಾದ ಸಹೋದರರು ಬೇಗನೇ ನಾಶಹೊಂದುತ್ತಾರೆ. ಆದುದರಿಂದ ಗುರುಶಾಸ್ತ್ರಗಳಲ್ಲಿ ನಿಬದ್ಧ ಪಂಡಿತರು ಅನ್ಯೋನ್ಯರಲ್ಲಿ

ಪ್ರೀತಿಯಿರುವವರ ನಡುವೆ ಅರ್ಥವಿಭಜನೆಯನ್ನು ಒಪ್ಪುವುದಿಲ್ಲ. ಆದರೆ ಧನವನ್ನು ವಿಂಗಡಿಸಲು ಇಚ್ಛಿಸುತ್ತಿರುವ ನಿನ್ನನ್ನು ನಿಯಂತ್ರಿಸುವುದು ಕಷ್ಟವಾಗುತ್ತಿದೆ. ಆದುದರಿಂದ ನೀನು ಒಂದು ಆನೆಯಾಗುತ್ತೀಯೆ!" ಈ ರೀತಿ ಶಪಿಸಲ್ಪಟ್ಟ ಸುಪ್ರತೀಕನು ವಿಭಾವಸುವಿಗೆ "ನೀನೂ ಕೂಡ ನೀರಿನಲ್ಲಿ ಚಲಿಸುವ ಆಮೆಯಾಗುತ್ತೀಯೆ" ಎಂದು ಹೇಳಿದನು. ಸಂಪತ್ತಿನ ಸಲುವಾಗಿ ಹೀಗೆ ಅನ್ಯೋನ್ಯರಿಗೆ ಶಾಪವನ್ನಿತ್ತು ಮೂಢಚೇತಸ ಸುಪ್ರತೀಕ-ವಿಭಾವಸು ಇಬ್ಬರೂ ಆನೆ-ಆಮೆಗಳ ರೂಪಗಳನ್ನು ಹೊಂದಿದರು. ರೋಷದೋಷದಿಂದ ಕೀಳುಯೋನಿಗಳಲ್ಲಿ ಜನಿಸಿದರೂ ಅವರವರ ಪ್ರಮಾಣ ಮತ್ತು ಬಲದಿಂದ ದರ್ಪಿತ ಅವರೀರ್ವರು ಪರಸ್ಪರರಲ್ಲಿ ದ್ವೇಷವನ್ನು ಸಾಧಿಸಿಕೊಂಡೇ ಬಂದಿದ್ದಾರೆ. ಈ ಈರ್ವರು ಮಹಾಕಾಯರು ಈ ಸರೋವರದಲ್ಲಿ ಅವರ ಪೂರ್ವ ವೈರತ್ವವನ್ನು ಮುಂದುವರೆಸಿದ್ದಾರೆ. ನೋಡು! ಆ ಸುಂದರ ಮಹಾಗಜವು ನೀರಿನ ಕಡೆ ಬರುತ್ತಿದೆ. ಅವನ ಕೂಗಿನ ಶಬ್ಧದಿಂದ ನೀರಿನ ಒಳಗಿದ್ದ ಮಹಕಾಯ ಆಮೆಯು ಸರೋವರವನ್ನು ಅಲ್ಲೋಲಕಲ್ಲೋಲಗೊಳಿಸುತ್ತಾ ಮೇಲೆ ಏರುತ್ತಿದೆ. ಅವನನ್ನು ನೋಡಿದ ವೀರ ಆನೆಯು ತನ್ನ ದಂತ-ಸೊಂಡಿಲು-ಬಾಲಗಳನ್ನು ಸುರುಳಿಸುತ್ತಿ ವೇಗದಿಂದ ನೀರನ್ನು ಪ್ರವೇಶಿಸುತ್ತಿದೆ. ಮೀನುಗಳಿಂದ ತುಂಬಿದ ಸರೋವರವನ್ನು

ಅದು ಅಲ್ಲೋಲಕಲ್ಲೋಲಗೊಳಿಸುತ್ತಿದೆ. ವೀರ ಆಮೆಯೂ ಕೂಡ ತನ್ನ ತಲೆಯನ್ನು ಮೇಲೆತ್ತಿ ಯುದ್ಧಕ್ಕಾಗಿ ಮುಂದೆ ಬರುತ್ತಿದೆ. ಆ ಆನೆಯ ಎತ್ತರ ಆರು ಯೋಜನ ಮತ್ತು ಪರಿಧಿಯು ಅದರ ಎರಡರಷ್ಟು. ಆಮೆಯೂ ಕೂಡ ಮೂರು ಯೋಜನ ಎತ್ತರ ಮತ್ತು ಅದರ ಎರಡು ಪಟ್ಟು ಅಗಲವಾಗಿದೆ. ಈ ರೀತಿ ಪರಸ್ಪರರನ್ನು ಕೊಲ್ಲುವ ಹಠದಿಂದ ಯುದ್ಧನಿರತರಾಗಿರುವ ಇವರೀರ್ವರನ್ನೂ ಭಕ್ಷಿಸಿ ನಿನ್ನ ಕಾರ್ಯವನ್ನು ಮುಂದುವರೆಸು.”

ಪಿತೃವಾಕ್ಯವನ್ನು ಕೇಳಿದ ಗರುಡನು ಭೀಮವೇಗದಲ್ಲಿ ಬಂದು ಉಗುರಿನಿಂದ ಆನೆಯನ್ನೂ ಇನ್ನೊಂದರಿಂದ ಆಮೆಯನ್ನೂ ಹಿಡಿದನು. ಚಂಗನೆ ಆಕಾಶಕ್ಕೆ ಹಾರಿ ಆ ಪಕ್ಷಿಯು ಅಲಂಬತೀರ್ಥವನ್ನು ತಲುಪಿ ಅಲ್ಲಿದ್ದ ದೇವವೃಕ್ಷಗಳ ಮೇಲೆ ಇಳಿದನು. ಬಯಸಿದ ಫಲಗಳನ್ನು ಕೊಡುವ ಆ ವೃಕ್ಷಗಳು ಹೆದರಿ ತತ್ತರಿಸಿದುದನ್ನು ಕಂಡ ಗರುಡನು ರೂಪದಲ್ಲಿ ಸರಿಸಾಟಿಯಾದ ಅನ್ಯ ವೃಕ್ಷಗಳ ಕಡೆ ಹಾರಿದನು. ಕಾಂಚನ-ರಜತ ಫಲಗಳು ಮತ್ತು ವೈಢೂರ್ಯದ ರೆಂಬೆಗಳಿಂದ ಕೂಡಿದ್ದ ಆ ಮಹಾದ್ರುಮಗಳು ಸಾಗರದ ಅಲೆಗಳಿಂದ ತೊಳೆಯಲ್ಪಟ್ಟು ಹೊಳೆಯುತ್ತಿದ್ದವು. ಅಲ್ಲಿಯೇ ವಿಸ್ತಾರವಾಗಿ ಬೆಳೆದಿದ್ದ ಆಲದ ಮರವೊಂದು ಮನೋವೇಗದಲ್ಲಿ ಇಳಿಯುತ್ತಿದ್ದ ಆ ಖಗಶ್ರೇಷ್ಠನಿಗೆ



“ಶತಯೋಜನ ವಿಸ್ತೀರ್ಣವುಳ್ಳ ನನ್ನ ಈ ಮಹಾಶಾಖೆಗಳ
ಮೇಲೆ ಬಂದಿಳಿದು ಆ ಆನೆ-ಆಮೆಗಳನ್ನು ತಿನ್ನು!”

ಎಂದಿತು. ಆಗ ಆ ಖಗೋತ್ತಮನು ತನ್ನ ವೇಗವನ್ನು ಕಡಿಮೆ ಮಾಡಿಕೊಳ್ಳುತ್ತಾ ನಿಧಾನವಾಗಿ ಅದರ ಮೇಲೆ ಬಂದಿಳಿದಾಗ ಸಹಸ್ರಾರು ಪಕ್ಷಿಗಳಿದ್ದ ಆ ಪರ್ವತ ಸಮಾನ ವೃಕ್ಷವು ತತ್ತರಿಸಿ, ದಪ್ಪ ದಪ್ಪ ಎಲೆಗಳ ಆ ರೆಂಬೆಯು ತುಂಡಾಯಿತು.

ಮಹಾಬಲಿ ಗರುಡನು ತನ್ನ ಪಂಜುಗಳಿಂದ ಆ ರೆಂಬೆಯನ್ನು ಮುಟ್ಟಿದಾಕ್ಷಣವೇ ಅದು ಮುರಿಯಲು ಅವನು ಆ ತುಂಡಾದ ರೆಂಬೆಯನ್ನೂ ಹಿಡಿದುಕೊಂಡನು. ತುಂಡಾದ ಆ ಮಹಾಶಾಖೆಯನ್ನು ಮುಗುಳ್ನಗುತ್ತಾ ನೋಡುತ್ತಿರಲು ಅಲ್ಲಿ ಅಧೋಮುಖರಾಗಿ ನೇಲುತ್ತಿದ್ದ ವಾಲಖಿಲ್ಯರನ್ನು ಕಂಡನು. ಅವರ ನಾಶದ ಭಯಪಟ್ಟು ಆ ಖಗಾಧಿಪನು ಅವರನ್ನು ಉಳಿಸುವ ಅಪೇಕ್ಷೆಯಿಂದ ಆ ರೆಂಬೆಯನ್ನು ಕೊಕ್ಕಿನಲ್ಲಿ ಹಿಡಿದು ಪರ್ವತವನ್ನೇ ನಡುಗಿಸುತ್ತಾ ಮೆಲ್ಲನೇ ಮೇಲೇರಿದನು. ಈ ರೀತಿ ಆನೆ-ಆಮೆ-ವಾಲಖಿಲ್ಯರನ್ನು ಹಿಡಿದು ಹಾರುತ್ತಿದ್ದ ಅವನು ಬಹಳಷ್ಟು ಪ್ರದೇಶಗಳನ್ನು ನೋಡಿದರೂ ಇಳಿಯಲು ಯೋಗ್ಯವಾದ ಯಾವ ಪ್ರದೇಶವನ್ನೂ ಕಾಣಲಿಲ್ಲ. ಆಗ ಅವ್ಯಯ ಪರ್ವತಶ್ರೇಷ್ಠ ಗಂಧಮಾದನಕ್ಕೆ ಹೋಗಿ ಅಲ್ಲಿ ತಪಸ್ಸಿನಲ್ಲಿ ನಿರತನಾಗಿದ್ದ ತಂದೆ ಕಶ್ಯಪನನ್ನು ಕಂಡನು. ಗರುಡನನ್ನು ನೋಡಿ

ಕಶ್ಯಪನು ಅವನ ಸಂಕಲ್ಪವೇನೆಂದು ತಿಳಿದು ಅವನನ್ನುದ್ದೇಶಿಸಿ

"ಪುತ್ರ! ಮುಂದೆ ನೋವನ್ನು ಅನುಭವಿಸಬೇಕಾಗಿ
ಬರುವಂಥಹ ಯಾವ ಸಾಹಸವನ್ನೂ ಮಾಡಬೇಡ.
ಸೂರ್ಯನ ಕಿರಣಗಳಿಂದ ಜೀವಿಸುತ್ತಿರುವ ವಾಲಖಿಲ್ಯರು
ಕುಪಿತರಾದರೆ ನಿನ್ನನ್ನು ಸುಟ್ಟುಬಿಡಬಲ್ಲರು!"

ಎಂದನು. ತನ್ನ ಪುತ್ರನ ಪರವಾಗಿ ಕಶ್ಯಪನು ತಪಃಸಿದ್ಧ ವಾಲಖಿಲ್ಯರನ್ನು ಸಂತುಷ್ಟಿಗೊಳಿಸುತ್ತಾ

"ತಪೋಧನರೇ! ಪ್ರಜಾಹಿತಾರ್ಥಕ್ಕಾಗಿಯೇ ಗರುಡನ
ಉದ್ಭವವಾಗಿದೆ. ಒಂದು ಮಹತ್ತರ ಕಾರ್ಯವನ್ನು
ಕೈಗೊಂಡಿದ್ದಾನೆ. ಅದಕ್ಕೆ ನಿಮ್ಮ ಅನುಜ್ಞೆಯನ್ನು ನೀಡಬೇಕು!"

ಎಂದು ಕೇಳಿಕೊಂಡನು. ಮುನಿಯ ಮಾತುಗಳನ್ನು ಕೇಳಿದ ತಪಾರ್ಥಿ ಮುನಿಗಳು ಆ ರೆಂಬೆಯನ್ನು ಬಿಟ್ಟು ಪುಣ್ಯಕರ ಹಿಮವತ್ ಗಿರಿಗೆ ತೆರಳಿದರು.

ಅವರು ಹೊರಟುಹೋದ ನಂತರ ವಿನತಾತ್ಮಜನು ರೆಂಬೆಯನ್ನು ಕಚ್ಚಿಹಿಡಿದ ಬಾಯಿಯಿಂದಲೇ ತನ್ನ ತಂದೆ ಕಶ್ಯಪನನ್ನು

"ಭಗವನ್! ಈ ಮಹಾವೃಕ್ಷದ ಶಾಖೆಯನ್ನು ಎಲ್ಲಿ ಇಳಿಸಲಿ? ಬ್ರಾಹ್ಮಣರಿಲ್ಲದಿರುವ ಒಂದು ಪ್ರದೇಶವನ್ನು ನನಗೆ ತೋರಿಸಿಕೊಡು!"

ಎಂದು ಕೇಳಿದನು. ಆಗ ಕಶ್ಯಪನು ಬ್ರಾಹ್ಮಣರಿಲ್ಲದೇ ಇರುವ ಹಿಮಸಂವೃದ್ಧ ಕಂದರಗಳಿರುವ ಸಾಧಾರಣ ಮನುಷ್ಯರ ಯೋಚನೆಗೂ ಸಿಲುಕದ ಪರ್ವತವೊಂದನ್ನು ತೋರಿಸಿದನು. ಆ ಮಹಾಕಂದರವನ್ನು ಮನಸ್ಸಿನಲ್ಲಿಯೇ ಕಂಡ ಗರುಡನು ರೆಂಬೆ-ಆಮೆ-ಆನೆಗಳನ್ನು ಹಿಡಿದು ಅದರೆಡೆಗೆ ಅತ್ಯಂತ ವೇಗದಿಂದ ಹೊರಟನು. ಗರುಡನು ಕಚ್ಚಿ ಹಾರುತ್ತಿದ್ದ ಆ ಮಹಾಶಾಖೆಯನ್ನು ಒಂದು ನೂರು ಮಹಾಮೃಗಗಳ ಚರ್ಮದಿಂದ ತಯಾರಿಸಿದ ತೆಳು ವಸ್ತ್ರದಿಂದಲೂ ಸುತ್ತಲು ಸಾಧ್ಯವಾಗುತ್ತಿರಲಿಲ್ಲ.

ಗರುಡನು ಸ್ವಲ್ಪವೇ ಸಮಯದಲ್ಲಿ ನೂರು ಸಾವಿರ ಯೋಜನೆಗಳನ್ನು ದಾಟಿದನು. ಕ್ಷಣಮಾತ್ರದಲ್ಲಿ ತಂದೆಯು ಹೇಳಿದ ಪರ್ವತವನ್ನು ತಲುಪಿ ಮಹಾಶಾಖೆಯನ್ನು ಬಿಡುಗಡೆ ಮಾಡಿದಾಗ ಅದು ಅಬ್ಬರದಿಂದ ಕೆಳಗುರುಳಿತು. ಅವನ ರೆಕ್ಕೆಗಳಿಂದ ಎಬ್ಬಿಸಲ್ಪಟ್ಟ ಭಿರುಗಾಳಿಯಿಂದ ಶೈಲರಾಜನು ತತ್ತರಿಸಿದನು ಮತ್ತು ಅಲ್ಲಿರುವ ಮರಗಳು ಕೆಳಗುರುಳಿ ಬೀಳುವಾಗ ಪುಷ್ಪವರ್ಷವೇ ಆಯಿತು. ಆ ಮಹಾಗಿರಿಯ ಶಿಖರಗಳನ್ನು ಅಲಂಕರಿಸಿದ್ದ ಮಣಿ-ಕಾಂಚನಚಿತ್ರಗಳು ಸಡಿಲವಾಗಿ ಪರ್ವತದ ಎಲ್ಲ

ಕಡೆಗಳಿಂದ ಉದುರಿದವು. ಕಾಂಚನ ಕುಸುಮಗಳಿದ್ದ ಹಲವಾರು ರೆಂಬೆಗಳ ಮೇಲೆ ಈ ರೆಂಬೆಯು ಬಿದ್ದಾಗ ಅವು ಮಿಂಚುಬಡಿದ ಕಪ್ಪು ಮೋಡಗಳಂತೆ ಕಂಡವು. ಪರ್ವತ ಖನಿಜಗಳನ್ನೊಡಗೂಡಿ ಕೆಳಗೆ ಉರುಳುತ್ತಿದ್ದ ಬಂಗಾರದ ಹೊಳಪಿನ ರೆಂಬೆಗಳು ಸೂರ್ಯನ ಕಿರಣಗಳನ್ನು ಪ್ರತಿಬಿಂಬಿಸುತ್ತಿದ್ದವು. ಗರುಡನು ಆ ಗಿರಿಶಿಖರದ ಮೇಲೇರಿ ಆನೆ-ಆಮೆಗಳೆರಡನ್ನೂ ಭಕ್ಷಿಸಿದನು.

ಮನಸ್ಸಿನಷ್ಟೇ ವೇಗವಾಗಿ ಅವನು ಆ ಪರ್ವತ ಶಿಖರದಿಂದ ಮೇಲೇರುತ್ತಿದ್ದಂತೆ ದೇವತೆಗಳಿಗೆ ಭಯ-ನೋವುಗಳನ್ನು ಸೂಚಿಸುವ ಅಪಶಕುನಗಳು ಕಾಣಿಸಿಕೊಂಡವು. ಇಂದ್ರನ ಪ್ರಿಯ ವಜ್ರವು ಭಯದಿಂದ ಪ್ರಜ್ವಲಗೊಂಡಿತು. ದಿನದಲ್ಲಿಯೂ ನಭದಿಂದ ಹೊಗೆ-ಬೆಂಕಿಗಳ ಉಲ್ಕೆಗಳು ಬೀಳತೊಡಗಿದವು. ವಸು-ರುದ್ರ-ಆದಿತ್ಯ-ಸಾದ್ಯ-ಮರುತ ಮತ್ತು ಅನ್ಯ ದೇವತೆಗಳ ಆಯುಧಗಳೆಲ್ಲವೂ ಪರಸ್ಪರ ಹೊಡೆದಾಡಲು ಪ್ರಾರಂಭಿಸಿದವು. ಇದಕ್ಕೆ ಮೊದಲು ಎಂದೂ – ದೇವಾಸುರರ ಸಂಗ್ರಾಮದ ಸಮಯದಲ್ಲಿಯೂ – ಹೀಗೆ ಆಗಿರಲಿಲ್ಲ. ಗುಡುಗಿನೊಂದಿಗೆ ಭಿರುಗಾಳಿ ಬೀಸುತ್ತಾ ಒಂದೇ ಸಮನೆ ಉಲ್ಕೆಗಳು ತೂರತೊಡಗಿದವು. ಮೋಡಗಳಿಲ್ಲದಿದ್ದರೂ ಆಕಾಶವು ಜೋರಾಗಿ ಗರ್ಜಿಸಿತು. ದೇವತೆಗಳ ಮಾಲೆಗಳು ಮಾಸಿದವು. ಅವರ ತೇಜಸ್ಸು ಕುಂದಿತು. ಮೋಡಗಳು ಮೇಲೆದ್ದು ರೌದ್ರಾಕಾರವಾಗಿ ಗರ್ಜಿಸುತ್ತಾ ರಕ್ತದ ಮಳೆಯನ್ನು ಸುರಿಸಿದವು. ಭಿರುಗಾಳಿಯಿಂದ ಮೇಲೆದ್ದ ಧೂಳು

ದೇವತೆಗಳ ಕಿರೀಟಗಳನ್ನು ಮರೆಮಾಡಿತು.

ಈ ದಾರುಣ ಉತ್ಪಾತಗಳನ್ನು ಕಂಡು ಉದ್ವಿಗ್ನನಾದ ಇಂದ್ರನು ಇತರ ದೇವತೆಗಳೊಡಗೂಡಿ ಬೃಹಸ್ಪತಿಯನ್ನು

> "ಭಗವನ್! ಈ ಘೋರ ಮಹೋತ್ಪಾತಗಳು ಏಕೆ ಕಾಣಿಸಿಕೊಳ್ಳುತ್ತಿವೆ? ಯುದ್ಧದಲ್ಲಿ ನಮ್ಮ ಮೇಲೆ ಜಯಗಳಿಸುವ ಶತ್ರುವು ಯಾರೂ ಕಾಣಬರುತ್ತಿಲ್ಲವಲ್ಲ?"

ಎಂದು ಕೇಳಿದನು. ಆಗ ಬೃಹಸ್ಪತಿಯು ಹೇಳಿದನು:

> "ಶತಕ್ರತು ದೇವೇಂದ್ರ! ನಿನ್ನದೇ ಅಪರಾಧದಿಂದ ಮತ್ತು ವಾಲಖಿಲ್ಯರ ತಪಸ್ಸಿನಿಂದ ಅದ್ಭುತ ಜೀವಿಯೊಂದು ಮುನಿ ಕಶ್ಯಪ ಮತ್ತು ವಿನತೆಯರ ಪುತ್ರನಾಗಿ ಉತ್ಪನ್ನನಾಗಿದ್ದಾನೆ. ಇಷ್ಟಬಂದ ರೂಪ ಧರಿಸಬಲ್ಲ ಆ ಬಲಶಾಲೀ ಗರುಡನು ಅಮೃತವನ್ನು ಎತ್ತಿಕೊಂಡು ಹೋಗಲು ಬರುತ್ತಿದ್ದಾನೆ. ಬಲಶಾಲಿಗಳಲ್ಲಿಯೇ ಶ್ರೇಷ್ಠ ಆ ಗರುಡನು ಸೋಮವನ್ನು ತೆಗೆದುಕೊಂಡು ಹೋಗಲು ಸಮರ್ಥನಾಗಿದ್ದಾನೆ. ಅವನಿಗೆ ಎಲ್ಲ ಅಸಾಧ್ಯಗಳೂ ಸಾಧ್ಯವಾಗುತ್ತವೆ."

ಈ ವಚನವನ್ನು ಕೇಳಿದ ಇಂದ್ರನು ಅಮೃತ-ರಕ್ಷಕರಿಗೆ

“ಮಹಾವೀರ ಬಲಶಾಲೀ ಪಕ್ಷಿಯೋರ್ವನು ಸೋಮವನ್ನು ಅಪಹರಿಸಲು ನಿಶ್ಚಯಿಸಿದ್ದಾನೆ. ಅವನು ಬಲಾತ್ಕಾರವಾಗಿ ಅದನ್ನು ಎತ್ತಿಕೊಂಡು ಹೋಗಬಾರದೆಂದು ನಿಮಗೆ ಮೊದಲೇ ನಾನು ಚೇತಾಗ್ನಿಯನ್ನು ನೀಡುತ್ತಿದ್ದೇನೆ. ಬೃಹಸ್ಪತಿಯ ಮಾತಿನಂತೆ ಬಲದಲ್ಲಿ ಅವನ ಸರಿಸಾಟಿಯಾರೂ ಇಲ್ಲ”

ಎಂದನು. ಈ ಮಾತನ್ನು ಕೇಳಿ ವಿಸ್ಮಿತರಾದ ದೇವತೆಗಳು ವಜ್ರಧಾರೀ ಶತಕ್ರತು ಇಂದ್ರನ ಜೊತೆಗೂಡಿ ಅಮೃತದ ಸುತ್ತಲೂ ಕಾವಲು ನಿಂತರು. ಅವರು ಮನಸೂಸುವ ಅತ್ಯಮೂಲ್ಯ ಕಾಂಚನ-ವೈಡೂರ್ಯಗಳಿಂದ ತಯಾರಿಸಿದ ವಿಚಿತ್ರ ಕವಚಗಳನ್ನು ಧರಿಸಿದ್ದರು. ಸಹಸ್ರಸಂಖ್ಯೆಗಳಲ್ಲಿದ್ದ ಅವರು ಮೊನಚಾಗಿ ಮಸೆದ ಅನೇಕ ಘೋರರೂಪೀ ಆಯುಧಗಳನ್ನು ಧರಿಸಿದ್ದರು. ಎಲ್ಲರೂ ತಮ್ಮ ತಮ್ಮ ದೇಹಗಳಿಗೆ ತಕ್ಕಂತೆ ಧೂಮ್ರ-ಜ್ವಾಲೆಗಳನ್ನು ಹೊರಚೆಲ್ಲುತ್ತಿದ್ದ ಚಕ್ರ-ಪರಿಘ-ತ್ರಿಶೂಲ-ಪರಶು-ಶಕ್ತಿ-ಕರವಾಲ-ಗದೆಗಳನ್ನು ಧರಿಸಿದ್ದರು. ದಿವ್ಯಾಭರಣ ಭೂಷಿತ ಸುರಗಣವು ಶಸ್ತ್ರಗಳ ಕಾಂತಿಯಿಂದ ಬೆಳಗುತ್ತಾ ನಿರ್ಭಯವಾಗಿ ಅಲ್ಲಿ ನಿಂತಿತು. ಅನುಪಮ ಬಲ-ವೀರ್ಯ-ತೇಜಸರೂ, ಅಸುರಪುರಗಳನ್ನು ಪುಡಿಮಾಡಬಲ್ಲ, ಜ್ವಾಲೆಗಳಂತೆ ಪ್ರಕಾಶಿಸುತ್ತಿದ್ದ ಆ ಸುರರೆಲ್ಲರೂ ದೃಢಮನಸ್ಕರಾಗಿ ಅಮೃತಕ್ಕೆ ಕಾವಲು ನಿಂತರು. ನೂರಾರು ಸಹಸ್ರಾರು ಪರಿಘಗಳನ್ನು ಹಿಡಿದು ನಿಂತಿದ್ದ ಸುರರಿಂದಾಗಿ ಆ ಸಮರಭೂಮಿಯು ಆಕಾಶದಲ್ಲಿ ಸುಡನ

ಸೂರ್ಯನ ಕಿರಣಗಳ ಬಲೆಯಂತೆಯೇ ಕಂಡುಬಂದಿತು.

ದೇವತೆಗಳೆಲ್ಲರೂ ಯುದ್ಧಸನ್ನದ್ಧರಾಗಿ ನಿಂತಿರುವಾಗ ಪಕ್ಷಿರಾಜ ಗುರುತ್ಮಂತನು ಅವರ ಬಳಿ ತಲುಪಿದನು. ಆ ಅತಿಬಲನನ್ನು ಕಂಡು ದೇವತೆಗಳು ಭಯದಿಂದ ತತ್ತರಿಸಿದರು. ಸೋಮದ ಪರಿರಕ್ಷಕರಲ್ಲಿ ಒಂದಾಗಿದ್ದ ಅಮೇಯಾತ್ಮ, ವಿದ್ಯುದಗ್ನಿ ಸಮಪ್ರಭ ಸುಮಹಾವೀರ್ಯ ಭೌವವನು ಒಂದೇ ಕ್ಷಣದಲ್ಲಿ ಗರುಡನ ರೆಕ್ಕೆ-ಕೊಕ್ಕು-ಪಂಜುಗಳಿಗೆ ಸಿಲುಕಿ ರಣಭೂಮಿಯನ್ನು ಮಡಿದನು.

ಆ ಖೇಚರನು ತನ್ನ ವಿಸ್ತಾರ ರೆಕ್ಕೆಗಳಿಂದ ಅತಿದೊಡ್ಡ ಧೂಳಿನ ಭಿರುಗಾಳಿಯನ್ನೇ ಎಬ್ಬಿಸಿ ಮೂರೂ ಲೋಕಗಳನ್ನು ಅಂಧಕಾರದಲ್ಲಿ ಮುಳುಗಿಸಿ, ದೇವತೆಗಳನ್ನು ಉದ್ವಿಗ್ನಗೊಳಿಸಿದನು. ಧೂಳಿನಿಂದ ಆವರಿಸಲ್ಪಟ್ಟು ದೇವತೆಗಳು ಮೂರ್ಛೆ ಹೊಂದಿದರು. ಅಮೃತವನ್ನು ಕಾಯಲು ನಿಂತವರು ಆ ಧೂಳಿನಲ್ಲಿ ಅವನನ್ನು ನೋಡಲು ಅಸಮರ್ಥರಾದರು. ಹೀಗೆ ಗರುಡನು ತನ್ನ ರೆಕ್ಕೆ ಕೊಕ್ಕುಗಳ ಪ್ರಹಾರದಿಂದ ಮೂರುಲೋಕಗಳ ಪಾಲಕರಾದ ದೇವತೆಗಳನ್ನು ಮುದ್ದೆ ಮಾಡಿದನು. ಆಗ ದೇವ ಸಹಸ್ರಾಕ್ಷನು ಗಾಬರಿಯಿಂದ ವಾಯುವಿಗೆ ಆಜ್ಞೆಯನ್ನಿತ್ತನು:

> "ಮಾರುತ! ಈ ಧೂಳಿನ ಮಳೆಯನ್ನು ನಿಲ್ಲಿಸುವುದು ನಿನ್ನ ಕೆಲಸ!"

ಬಲಶಾಲಿ ವಾಯುವು ಆ ಧೂಳಿನ ಮಳೆಯನ್ನು ಹೋಗಲಾಡಿಸಿದನು. ಕತ್ತಲೆಯು ನಾಶವಾದಾಗ ದೇವತೆಗಳು ಪಕ್ಷಿಯ ಮೇಲೆರಗಿದರು. ಈ ರೀತಿ ಸುರಗಣಗಳ ಹೊಡೆತಕ್ಕೆ ಸಿಲುಕಿದ ಆ ಬಲವಾನ್ ಪಕ್ಷಿಯು ಸರ್ವಭೂತಗಳಿಗೂ ಭಯವನ್ನುಂಟುಮಾಡುವ ಮಹಾಮೇಘದಂತೆ ಗರ್ಜಿಸಿದನು. ಮಹಾವೀರ್ಯ ಪಕ್ಷಿರಾಜನು ತನ್ನ ರೆಕ್ಕೆಗಳನ್ನೇರಿ ಹಾರಿದನು. ಮೇಲೆ ಹಾರಿದ ಅವನು ಅಂತರಿಕ್ಷದಲ್ಲಿ ದೇವತೆಗಳ ಮೇಲೆ ನಿಂತನು. ಆಗ ವಾಸವನೂ ಸೇರಿ ಎಲ್ಲ ದೇವತೆಗಳೂ ಅವನ ಮೇಲೆ ನಾನಾ ಶಸ್ತ್ರಗಳಿಂದ, ಪಟ್ಟಿಶ, ಪರಿಘ, ಶೂಲ, ಗದೆ, ಪ್ರಜ್ವಲಿಸುತ್ತಿರುವ ಬಾಣಗಳು ಮತ್ತು ಆದಿತ್ಯರೂಪೀ ಚಕ್ರಗಳಿಂದ ಪ್ರಹಾರಮಾಡಿದರು. ಹೀಗೆ ಒಂದೇಸಮನೆ ನಾನಾ ಶಸ್ತ್ರಗಳ ಪ್ರಹಾರಕ್ಕೊಳಗಾದರೂ ಸರಿಸಾಟಿಯಾಗಿ ಯುದ್ಧ ಮಾಡುತ್ತಿದ್ದ ಪಕ್ಷಿರಾಜನು ಸ್ವಲ್ಪವೂ ಆಯಾಸಗೊಳ್ಳಲಿಲ್ಲ. ಆಕಾಶದಲ್ಲಿ ಉರಿಯುತ್ತಿದ್ದ ಪ್ರತಾಪವನ್ ವೈನತೇಯನು ಸುರರೆಲ್ಲರನ್ನೂ ತನ್ನ ರೆಕ್ಕೆ ಮತ್ತು ಛಾತಿಗಳಿಂದ ಧಾಳಿಮಾಡಿ ಎಲ್ಲ ಕಡೆಗೂ ಓಡಿಹೋಗುವಂತೆ ಮಾಡಿದನು. ಗರುಡನ ಹೊಡೆತಕ್ಕೆ ಸಿಲುಕಿದ ದೇವತೆಗಳು ಸೋತು ಪಲಾಯನ ಮಾಡತೊಡಗಿದರು. ಅವನ ಉಗುರು ಪಂಜಗಳಿಂದ ಪೆಟ್ಟು ತಿಂದವರ ದೇಹದಿಂದ ಬಹಳಷ್ಟು ರಕ್ತ ಸೋರತೊಡಗಿತು. ಪತಗೇಂದ್ರನ ಹೊಡೆತ ತಿಂದ ಸಾಧ್ಯರು ಮತ್ತು ಗಂಧರ್ವರು ಪೂರ್ವದಿಕ್ಕಿಗೆ ಪಲಾಂiನ ಗೈದರು. ವಸುಗಳು ಮತ್ತು ರುದ್ರರು ದಕ್ಷಿಣದ ಕಡೆ ಓಡಿದರು. ಆದಿತ್ಯರು ಪಶ್ಚಿಮಕ್ಕೆ, ನಾಸತ್ಯರು ಉತ್ತರಕ್ಕೆ, ಯುದ್ಧದಲ್ಲಿ ತೊಡಗಿರುವ

ಮಃಹೋಜಸನನ್ನು ಪುನಃ ಪುನಃ ತಿರುಗಿ ನೋಡುತ್ತಾ ಪಲಾಂiiನಗ್ಯೆದರು. ಈ ರೀತಿ ಖೇಚರ ಪಕ್ಷಿಯು ವೀರ ಅಶ್ವಕ್ರಂದ ಮತ್ತು ರೇಣುಕ, ಶೂರ ಕ್ರಥನ ಮತ್ತು ತಪನ, ಉಲೂಕ, ಅಶ್ವಸನ, ನಿಮಿಷ, ಪ್ರರುಜ, ಪ್ರಲಿನ, ಮುಂತಾದವರೊಂದಿಗೆ ಯುದ್ಧ ಮಾಡಿದನು. ಆ ಮಹಾಬಲ ವಿನತಸುತನು ಯುಗಾಂತಕಾಲದಲ್ಲಿ ಸಂಕೃದ್ಧ ಪಿನಾಕಿಯ ಹಾಗೆ ತನ್ನ ರೆಕ್ಕೆ, ಉಗುರು ಮತ್ತು ಪಂಜಗಳ ತುದಿಯಿಂದ ಗಾಯಗೊಳಿಸಿದನು. ಮಹಾವೀರ್ಯ ಮಹೋತ್ಸಾಹೀ ದೇವತೆಗಳು ಅವನಿಂದ ಹೊಡೆತ ತಿಂದು ರಕ್ತದ ಮಳೆ ಸುರಿಸುತ್ತಿರುವ ಕಪ್ಪು ಮೋಡಗಳಂತೆ ಕಂಡುಬಂದರು. ಈ ರೀತಿ ಸರ್ವ ದೇವತೆಗಳನ್ನು ನಿರ್ಜೀವರನ್ನಾಗಿ ಮಾಡಿ ಆ ಪತಗಶ್ರೇಷ್ಠನು ಅಮೃತದ ಕಡೆ ಮುಂದುವರೆದನು. ಅದರ ಎಲ್ಲ ಕಡೆಯಿಂದಲೂ ಅಗ್ನಿಯು ಆವರಿಸಿರುವುದನ್ನು ಕಂಡನು. ಆ ಬೆಂಕಿಯ ಮಹಾಜ್ವಾಲೆಗಳು ಇಡೀ ಆಕಾಶವನ್ನೇ ಆವರಿಸುವಂತಿದ್ದವು ಮತ್ತು ಘೋರ ಭಿರುಗಾಳಿಯಿಂದ ತತ್ತರಿಸುತ್ತಾ ಅವು ಸೂರ್ಯನನ್ನೇ ಸುಡುತ್ತಿವೆಯೋ ಎಂಬಂತೆ ತೋರುತ್ತಿದ್ದವು. ಆಗ ಮಹಾತ್ಮ ಗರುಡನು ಎಂಭತ್ತೊಂದು ಮುಖಗಳನ್ನು ಧರಿಸಿ ಆ ಬಾಯಿಗಳಿಂದ ಹಲವಾರು ನದಿಗಳನ್ನು ಕುಡಿದು ತನ್ನ ರೆಕ್ಕೆಗಳ ರಥವನ್ನೇರಿ ಸುಶೀಘ್ರವಾಗಿ ಮರಳಿ ಬಂದು ಉರಿಯುತ್ತಿರುವ ಅಗ್ನಿಯಲ್ಲಿ ಆ ನದಿಗಳನ್ನು ಸುರುವಿದನು. ಬೆಂಕಿಯನ್ನು ಆರಿಸಿದ ತಕ್ಷಣವೇ ಅಲ್ಪ ರೂಪವನ್ನು ತಾಳಿ ಅಮೃತವನ್ನಿಟ್ಟಿದ್ದ ಸ್ಥಳವನ್ನು ಪ್ರವೇಶಿಸಲು ಸಿದ್ಧನಾದನು.


C.M.Vitankar

ಸೂರ್ಯನ ಕಿರಣಗಳಂತೆ ಪ್ರಜ್ವಲಿಸುತ್ತಿರುವ ಕಾಂಚನದೇಹವನ್ನು ತಾಳಿ ಆ ಪಕ್ಷಿಯು ಸಮುದ್ರವನ್ನು ಸೇರುತ್ತಿರುವ ನದಿಯಂತೆ ವೇಗವಾಗಿ ಒಳ ಹೊಕ್ಕನು. ಅಮೃತವನ್ನು ಕದಿಯಲು ಬರುವವರನ್ನು ಕತ್ತರಿಸಲು ದೇವತೆಗಳು ಪ್ರಯತ್ನಪಟ್ಟು ರಚಿಸಿದ್ದ ಸೂರ್ಯ ಪ್ರಭೆಯಂತೆ ಪ್ರಜ್ವಲಿಸುತ್ತಿದ್ದ ನಿರಂತರವಾಗಿ ಪರಿಭ್ರಮಿಸುತ್ತಿದ್ದ ತೀಕ್ಷ್ಣ ಹಲ್ಲುಗಳ ಘೋರ ಚಕ್ರವೊಂದನ್ನು ಅಮೃತದ ಮುಂದೆ ನೋಡಿದನು. ಅವುಗಳ ಮಧ್ಯದಲ್ಲಿ ದಾರಿಯೊಂದನ್ನು ಕಂಡ ಖೇಚರನು ಒಂದು ಕ್ಷಣದಲ್ಲಿ ಸಣ್ಣದಾಗಿ ಆ ಚಕ್ರದ ಹಲ್ಲುಗಳ ಮಧ್ಯದಿಂದ ಒಳ ಹೊಕ್ಕನು. ಆ ಚಕ್ರದ ಹಿಂದೆ ಉರಿಯುತ್ತಿರುವ ಬೆಂಕಿಯಂತೆ ಪ್ರಜ್ವಲಿಸುತ್ತಿರುವ ಮಿಂಚಿನಂತೆ ನಾಲಿಗೆಗಳನ್ನು ಹೊರಚಾಚುತ್ತಿದ್ದ, ಬೆಂಕಿಯನ್ನು ಕಾರುತ್ತಿದ್ದ ಬಾಯಿ ಮತ್ತು ಉರಿಯುತ್ತಿರುವ ಕಣ್ಣುಗಳನ್ನು ಹೊಂದಿದ್ದ, ವಿಷಕಾರಕ, ಮಹಾಘೋರ, ಮಹಾವೀರ್ಯ, ಸದಾ ಸಿಟ್ಟಿನಲ್ಲಿರುವ, ಕಣ್ಣನ್ನು ಮಚ್ಚದೆಯೇ ಯಾವಾಗಲೂ ಎಚ್ಚರದಲ್ಲಿದ್ದು ಅಮೃತವನ್ನು ರಕ್ಷಿಸುತ್ತಿದ್ದ ಈರ್ವರು ಸರ್ಪೋತ್ತಮರನ್ನು ಕಂಡನು. ಯಾವುದೇ ಸರ್ಪದ ಕಣ್ಣು ಯಾರ ಮೇಲೆ ಬಿದ್ದರೂ ಅವರು ತಕ್ಷಣವೇ ಭಸ್ಮವಾಗಿ ಬಿಡುತ್ತಿದ್ದರು. ಆಗ ಸುಪರ್ಣನು ಅವರ ಕಣ್ಣುಗಳನ್ನು ಧೂಳಿನಿಂದ ಮುಚ್ಚಿ, ಅವರನ್ನು ಅಂಧರನ್ನಾಗಿ ಮಾಡಿ, ಎಲ್ಲ ಕಡೆಯಿಂದಲೂ ಅವರನ್ನು ಆಕ್ರಮಣ ಮಾಡಿದನು. ಆ ಅಂತರಿಕ್ಷಗ ವೈನತೇಯನು ಅವರನ್ನು ತುಂಡುಮಾಡಿ ಮುದ್ದೆಮಾಡಿ ತಡಮಾಡದೇ ಸೋಮದ ಕಡೆ ಧಾವಿಸಿದನು. ಬಲಶಾಲಿ ವೀರ್ಯವಾನ್ ವೈನತೇಯನು ಅಮೃತವನ್ನು ಅಲ್ಲಿಂದ ಎತ್ತಿ, ಆ

ಚಕ್ರವನ್ನು ತುಂಡು ತುಂಡು ಮಾಡಿ ವೇಗದಿಂದ ಮೇಲೇರಿದನು. ಆ ವೀರ ಪಕ್ಷಿಯು ಕುಡಿಯದೆಯೇ ಅಮೃತವನ್ನು ಎತ್ತಿಕೊಂಡು ಸ್ವಲ್ಪವೂ ಆಯಾಸಗೊಳ್ಳದೇ ಮೇಲೆ ಹಾರಿ, ಸೂರ್ಯನ ಪ್ರಭೆಯನ್ನೂ ಕುಂಠಿತಗೊಳಿಸಿದನು. ಆಕಾಶದಲ್ಲಿ ವಿಷ್ಣು ನಾರಾಯಣನು ವೈನತೇಯನನ್ನು, ಅವನ ಸ್ವ-ನಿಯಂತ್ರಣವನ್ನು ಮತ್ತು ಕಾರ್ಯವನ್ನು ಕಂಡು ತುಷ್ಟನಾದನು. ಆ ಅವ್ಯಯ ದೇವನು ಹೇಳಿದನು:

> “ಪಕ್ಷಿಯೇ! ನಿನಗೆ ವರವನ್ನು ನೀಡುತ್ತೇನೆ.”

ಅದಕ್ಕೆ ಅಂತರಿಕ್ಷಗನು

> “ನಿನ್ನ ಮೇಲೆಯೇ ನನಗೆ ಸ್ಥಾನವನ್ನು ಕೊಡು”

ಎಂದನು. ನಾರಾಯಣನಲ್ಲಿ ಇನ್ನೂ ಕೇಳಿಕೊಂಡನು: ಅಮೃತವನ್ನು ಕುಡಿಯದೆಯೇ ನಾನು ಅಜರ ಮತ್ತು ಅಮರನಾಗಲಿ. ಆ ಎರಡು ವರಗಳನ್ನು ಸ್ವೀಕರಿಸಿದ ಗರುಡನು ವಿಷ್ಣುವಿಗೆ  ಹೇಳಿದನು:

> “ಭಗವನ್! ನಾನೂ ಕೂಡ ನಿನಗೆ ವರವನ್ನು ಕೊಡುತ್ತೇನೆ. ಕೇಳಿಕೋ.”

ಆ ಮಾತಿಗೆ ಕೃಷ್ಣನು ಮಹಾಬಲ ಗರುತ್ಮಂತನನ್ನು ತನ್ನ ವಾಹನವನ್ನಾಗಿ ಆರಿಸಿಕೊಂಡನು. ಮತ್ತು ಅವನನ್ನು ಧ್ವಜದಲ್ಲಿ ಇಟ್ಟು

> “ಈ ರೀತಿ ನನ್ನ ಮೇಲೆಯೂ ನೀನು ಇರುತ್ತೀಯೆ”

ಎಂದನು. ಅಮೃತವನ್ನು ಬಲಾತ್ಕಾರವಾಗಿ ಕದ್ದು ಒಯ್ಯುತ್ತಿರುವ ಸುರಶತ್ರು ಗರುಡನನ್ನು ಇಂದ್ರನು ವಜ್ರದಿಂದ ಹೊಡೆದನು. ಪಕ್ಷಿಗಳಲ್ಲಿಯೇ ಶ್ರೇಷ್ಠ ವಜ್ರಸಮಾಹತ ಗರುಡನು ಸಿಟ್ಟಿಗೆದ್ದ ಇಂದ್ರನಿಗೆ ನಗುತ್ತಾ ಶ್ಲಾಘನೀಯ ಮಾತುಗಳಿಂದ ಹೇಳಿದನು:

> "ಯಾವ ಋಷಿಗಳ ಎಲುಬಿನಿಂದ ಈ ವಜ್ರವು ಮಾಡಲ್ಪಟ್ಟಿದೆಯೋ ಅವರನ್ನು, ಈ ವಜ್ರವನ್ನು ಮತ್ತು ಶತಕ್ರತು! ನಿನ್ನನ್ನು ಗೌರವಿಸುತ್ತೇನೆ. ನನ್ನ ಈ ಒಂದು ರೆಕ್ಕೆಯ ಪುಕ್ಕವನ್ನು ಬಿಸಾಡುತ್ತಿದ್ದೇನೆ. ಅದರ ಕೊನೆಯನ್ನು ನೀನೂ ಕೂಡ ಕಾಣಲಾರೆ. ವಜ್ರದ ಹೊಡೆತದಿಂದ ನನಗೆ ಸ್ವಲ್ಪವೂ ನೋವಾಗಲಿಲ್ಲ."

ಆ ಸುಂದರ ರೆಕ್ಕೆಯ ಪುಕ್ಕವನ್ನು ನೋಡಿ ವಿಸ್ಮಿತರಾದ ಸರ್ವ ಜೀವಿಗಳೂ

> "ಇವನು ಸುಪರ್ಣ ಎಂದು ಕರೆಯಲ್ಪಡಲಿ!"

ಎಂದರು. ಆ ಅದ್ಭುತವನ್ನು ಕಂಡ ಸಹಸ್ರಾಕ್ಷ ಪುರಂದರನು ಈ ಪಕ್ಷಿಯು ಒಂದು ಮಹಾ ಜೀವಿ ಎಂದು ಗಮನಿಸಿ ಹೇಳಿದನು:

> "ನಿನ್ನ ಅನುತ್ತಮ ಪರಮ ಬಲವನ್ನು ತಿಳಿಯ ಬಯಸುತ್ತೇನೆ. ಮತ್ತು ಖಗೋತ್ತಮ! ನಿನ್ನೊಡನೆ ಅನಂತ ಸಖ್ಯವನ್ನು ಬಯಸುತ್ತೇನೆ."

ಗರುಡನು ಹೇಳಿದನು:

> “ಪುರಂದರ! ನಿನ್ನ ಬಯಕೆಯಂತೆ ನಮ್ಮಿರ್ವರಲ್ಲಿ ಸಖ್ಯವಿರಲಿ. ನನ್ನ ಬಲವು ಮಹತ್ತರ ಮತ್ತು ಅಸಹನೀಯ ಎಂದು ತಿಳಿ. ಶತಕ್ರತು! ತನ್ನನ್ನು ತಾನೇ ಹೊಗಳಿಕೊಳ್ಳುವುದನ್ನು ಮತ್ತು ತನ್ನ ಬಲವನ್ನು ತಾನೇ ಪ್ರಶಂಸೆ ಮಾಡುವುದನ್ನು ಸಂತರು ಒಪ್ಪಿಕೊಳ್ಳುವುದಿಲ್ಲ. ಸಖ! ನಾವೀರ್ವರೂ ಈಗ ಸ್ನೇಹಿತರಾದುದರಿಂದ ನೀನು ಕೇಳಿದೆಯೆಂದು ಸ್ವ ಸ್ತುತಿಯು ಒಳ್ಳೆಯದಲ್ಲದಿದ್ದರೂ ಹೇಳುತ್ತಿದ್ದೇನೆ. ಶಕ್ರ! ನಾನು ಪರ್ವತ, ಸಮುದ್ರ, ವನ ಮತ್ತು ನಿನ್ನನ್ನೂ ಸೇರಿ ಈ ಭೂಮಿಯನ್ನು ನನ್ನ ರೆಕ್ಕೆಯ ಒಂದು ಪುಕ್ಕದ ಮೇಲೆ ಹೊರಬಲ್ಲೆ. ಸರ್ವ ಲೋಕಗಳನ್ನೂ ಅವುಗಳಲ್ಲಿರುವ ಸ್ಥಾಣು ಜಂಗಮಗಳನ್ನೂ ಸೇರಿ ಆಯಾಸವಿಲ್ಲದೇ ಹೊರಬಲ್ಲೆ. ಇದು ನನ್ನ ಮಹಾ ಬಲವೆಂದು ತಿಳಿ.”

ವೀರನ ಈ ಮಾತುಗಳಿಗೆ ಶ್ರೀಮಂತ ಶ್ರೇಷ್ಠ ವೀರ ಕಿರೀಟೀ ಸರ್ವಭೂತಹಿತ ಪ್ರಭು ದೇವೇಂದ್ರನು ಉತ್ತರಿಸಿದನು:

> “ನಿರಂತರವೂ ಉತ್ತಮವೂ ಆದ ನನ್ನ ಈ ಸಖ್ಯವನ್ನು ಪ್ರತಿಗ್ರಹಿಸು. ನಿನಗೆ ಸೋಮವು ಯಾವ ಪ್ರಯೋಜನಕ್ಕೂ ಬಾರದಿದ್ದರೆ ಸೋಮವನ್ನು ನನಗೆ ಹಿಂದಿರುಗಿಸು. ನೀನು

ಇದನ್ನು ಯಾರಿಗೆ ಕೊಡುತ್ತೀಯೋ ಅವರು ನಮ್ಮ ಜೊತೆ ಯಾವಾಗಲೂ ಹೊಡೆದಾಡುತ್ತಾರೆ.”

ಗರುಡನು ಹೇಳಿದನು:

“ಯಾವುದೋ ಒಂದು ಉದ್ದೇಶದಿಂದ ನಾನು ಈ ಸೋಮವನ್ನು ಒಯ್ಯುತ್ತಿದ್ದೇನೆ. ಈ ಸೋಮವನ್ನು ನಾನು ಯಾರಿಗೂ ಕುಡಿಯಲು ಕೊಡುವುದಿಲ್ಲ. ಸಹಸ್ರಾಕ್ಷ! ತ್ರಿದಶೇಶ್ವರ! ನಾನು ಇದನ್ನು ಕೆಳಗೆ ಇಟ್ಟಕೂಡಲೇ ಅದನ್ನು ನೀನು ಸ್ವತಃ ಅಪಹರಿಸಿ ತೆಗೆದುಕೊಂಡು ಹೋಗು.”

ಶಕ್ರನು ಹೇಳಿದನು:

“ಅಂಡಜ! ನಿನ್ನ ಈ ಮಾತುಗಳಿಂದ ನಾನು ಸಂತುಷ್ಟನಾಗಿದ್ದೇನೆ. ಖಗೋತ್ತಮ! ನನ್ನಿಂದ ನಿನಗಿಷ್ಟವಾದ ವರವನ್ನು ಪಡೆದುಕೋ.”

ಈ ರೀತಿ ಕೇಳಲ್ಪಟ್ಟಾಗ ಅವನು ಕದ್ರುವಿನ ಮಕ್ಕಳನ್ನೂ ಮತ್ತು ಅವರ ಮೋಸದಿಂದ ತನ್ನ ತಾಯಿಗಾದ ದಾಸತ್ವವನ್ನೂ ನೆನೆಸಿಕೊಂಡು ಹೇಳಿದನು:

“ಶಕ್ರ! ನಾನು ಎಲ್ಲವನ್ನು ಮಾಡಲು ಶಕ್ಯನಿದ್ದರೂ ನೀನು ಹೇಳಿದೆಯೆಂದು ಕೇಳುತ್ತಿದ್ದೇನೆ. ಮಹಾಬಲ ನಾಗಗಳು ನನ್ನ ಆಹಾರವಾಗಲಿ.”

"ಹಾಗೆಯೇ ಆಗಲಿ. ನೀನು ಸೋಮವನ್ನು ಕೆಳಗಿಟ್ಟಕೂಡಲೇ ನಾನು ಅಪಹರಿಸುತ್ತೇನೆ!"

ಎಂದು ಹೇಳಿ ಆ ದಾನವ ಸೂದನನು ಹೊರಟುಹೋದನು. ತಕ್ಷಣವೇ ಸುಪರ್ಣನು ವೇಗವಾಗಿ ತನ್ನ ತಾಯಿಯ ಬಳಿ ಬಂದು ಪರಮ ಹರ್ಷಿತನಾಗಿ ಸರ್ವ ಸರ್ಪಗಳಿಗೂ ಹೇಳಿದನು:

"ಇಗೋ ನಾನು ಅಮೃತವನ್ನು ತಂದಿದ್ದೇನೆ. ಕುಶಗಳ ಮಧ್ಯೆ ಇಡುತ್ತಿದ್ದೇನೆ. ಪನ್ನಗಗಳೇ! ಮಂಗಳ ಸ್ನಾನವನ್ನು ಮಾಡಿ ಇದನ್ನು ಕುಡಿಯಿರಿ. ನೀವು ನನಗೆ ಹೇಳಿದುದನ್ನು ನಾನು ಮಾಡಿದ್ದೇನೆ. ನೀವು ಮಾತುಕೊಟ್ಟಹಾಗೆ ಇಂದಿನಿಂದ ನನ್ನ ತಾಯಿಯು ಅದಾಸಿಯಾಗುತ್ತಾಳೆ."

"ಹಾಗೆಯೇ ಆಗಲಿ!" ಎಂದು ಸರ್ಪಗಳು ಸ್ನಾನಕ್ಕೆಂದು ಹೋದವು. ಆಗ ಶಕ್ರನು ಅಮೃತವನ್ನು ಎತ್ತಿಕೊಂಡು ಪುನಃ ಸ್ವರ್ಗಕ್ಕೆ ಕೊಂಡೊಯ್ದನು. ಸ್ನಾನ, ಜಪ ಮತ್ತು ಮಂಗಲ ಕಾರ್ಯಗಳನ್ನು ಮುಗಿಸಿ ಪ್ರಹೃಷ್ಟರಾಗಿ ಸೋಮಾರ್ಥಿ ಸರ್ಪಗಳು ಆ ಸ್ಥಳಕ್ಕೆ ಹಿಂದಿರುಗಿದರು. ಸೋಮವನ್ನು ಇರಿಸಿದ್ದ ದರ್ಭೆಗಳು ಖಾಲಿಯಾಗಿದ್ದುದನ್ನು ಸರ್ಪಗಳು ಕಂಡು ಮೋಸದಿಂದ ಅದನ್ನು ಕೊಂಡೊಯ್ಯಲಾಗಿದೆ ಎಂದು ತಿಳಿದರು. ಆಗ ಅವರು ಅಮೃತವನ್ನು ಇಟ್ಟಿದ್ದ ದರ್ಭೆಗಳನ್ನು ನೆಕ್ಕ ತೊಡಗಿದರು ಮತ್ತು ಇದರಿಂದ ಅವುಗಳ ನಾಲಿಗೆಗಳು ಸೀಳಿಹೋದವು. ಇದೇ ಕಾರಣದಿಂದಲೇ ದರ್ಭೆಗಳು ಪವಿತ್ರವೆನಿಸಿಕೊಂಡವು. ನಂತರ

ಸುಪರ್ಣನು ಪರಮ ಹರ್ಷಿತನಾಗಿ ತನ್ನ ತಾಯಿಯೊಂದಿಗೆ ಆ ಕಾನನದಲ್ಲಿ ವಾಸಿಸಿದನು. ಸರ್ಪಗಳನ್ನು ಭಕ್ಷಿಸುವುದರ ಮೂಲಕ ಮತ್ತು ಇನ್ನೂ ಇತರ ಮಹಾಕಾರ್ಯಗಳನ್ನು ಎಸಗುವುದರ ಮೂಲಕ ಎಲ್ಲ ಪಕ್ಷಿಗಳಿಂದ ಪೂಜಿಸಲ್ಪಟ್ಟ ಗರುಡನು ತನ್ನ ತಾಯಿಯನ್ನು ಸಂತಸಗೊಳಿಸಿದನು.

ಈ ಕಥೆಯನ್ನು ಯಾವ ನರನು ಕೇಳುತ್ತಾನೋ ಅಥವಾ ಮುಖ್ಯ ದ್ವಿಜನರ ಸನ್ನಿದಿಯಲ್ಲಿ ಸದಾ ಓದುತ್ತಾನೋ ಅವನು ಗರುಡನ ಸಂಕೀರ್ತನೆಯಿಂದ ನಿಸ್ಸಂಶಯವಾಗಿ ಪುಣ್ಯವಂತನಾಗಿ ಸ್ವರ್ಗವನ್ನು ಸೇರುತ್ತಾನೆ.

## ಶೇಷ

ಶೇಷನ ಈ ಕಥೆಯು ವ್ಯಾಸ ಮಹಾಭಾರತದ ಆದಿ ಪರ್ವದ ಆಸ್ತೀಕ ಪರ್ವ (ಅಧ್ಯಾಯ ೩೨) ದಲ್ಲಿ ಬರುತ್ತದೆ. ಈ ಕಥೆಯನ್ನು ಸೂತ ಪೌರಾಣಿಕ ಉಗ್ರಶ್ರವನು ನೈಮಿಷಾರಣ್ಯದಲ್ಲಿ ಶೌನಕಾದಿ ಮುನಿಗಳಿಗೆ ಹೇಳಿದನು.

ಕದ್ರುವು ಮಕ್ಕಳಾದ ನಾಗಗಳನ್ನು

“ಜನಮೇಜಯನ ಸರ್ಪಸತ್ರದಲ್ಲಿ ಸುಟ್ಟು ಭಸ್ಮರಾಗಿ!”

ಎಂದು ಶಪಿಸಲು, ಮಹಾಯಶ ಭಗವಾನ್ ಶೇಷನು ತಾಯಿಯನ್ನು ತೊರೆದು ಯತವ್ರತನಾಗಿ, ಗಾಳಿಯನ್ನು ಮಾತ್ರ ಸೇವಿಸುತ್ತಾ ವಿಪುಲ ತಪಸ್ಸನ್ನು ಕೈಗೊಂಡನು. ಗಂಧಮಾದನ, ಬದರಿ, ಗೋಕರ್ಣ, ಮತ್ತು ಪುಷ್ಕರಗಳ ಅರಣ್ಯಗಳಲ್ಲಿ ಮತ್ತು ಹಿಮತ್ ಪರ್ವತದಲ್ಲಿ ತಪಸ್ಸು ಮಾಡಿದನು. ಈ ಎಲ್ಲ ಪುಣ್ಯ ತೀರ್ಥ-ಆಯತನಗಳಲ್ಲಿ ಏಕಾಂತಶೀಲನೂ, ನಿಯತವ್ರತನೂ, ಸತತ ಜಿತೇಂದ್ರಿಯನೂ ಆಗಿದ್ದನು. ಜಟೆ ಕಟ್ಟಿ ಹರುಕು ಬಟ್ಟೆಯನ್ನು ಧರಿಸಿ, ಚರ್ಮ-ಮಾಂಸಗಳು ಒಣಗಿಹೋಗಿ, ಘೋರ ತಪಸ್ಸನ್ನು ತಪಿಸುತ್ತಿರುವ ಆ ಪ್ರಭುವನ್ನು ಪಿತಾಮಹನು ನೋಡಿದನು. ತಪಿಸುತ್ತಿರುವ ಸತ್ಯಧೃತಿಗೆ ಪಿತಾಮಹನು ಹೇಳಿದನು:

> "ಶೇಷ! ಇದೇನು ಮಾಡುತ್ತಿದ್ದೀಯೆ? ಲೋಕಕ್ಕೆ ಒಳಿತನ್ನು ಮಾಡು. ನಿನ್ನ ಈ ತೀವ್ರ ತಪಸ್ಸಿನಿಂದ ಲೋಕಗಳು ಸುಡುತ್ತಿವೆ. ನಿನ್ನ ಹೃದಯದಲ್ಲಿರುವ ಬಯಕೆಯನ್ನು ನನಗೆ ಹೇಳು."

ಶೇಷನು ಹೇಳಿದನು:

> "ನನ್ನ ಸಹೋದರರರೆಲ್ಲರೂ ಮಂದಚೇತಸರು. ನನಗೆ ಅವರೊಡನೆ ವಾಸಿಸುವುದು ಬೇಡ. ಭಗವನ್! ಇದನ್ನೇ ನನಗೆ ಕರುಣಿಸು. ಅವರು ಪರಸ್ಪರರಲ್ಲಿ ಸದಾ ಅಸೂಯೆ ಮತ್ತು ಶತ್ರುತ್ವದಲ್ಲಿಯೇ ನಿರತರಾಗಿದ್ದಾರೆ. ಆದುದರಿಂದಲೇ ನಾನು ತಪಸ್ಸನ್ನು ಕೈಗೊಂಡೆನು. ಅವರನ್ನು ನೋಡುವುದೂ

ಬೇಡವಾಗಿದೆ. ವಿನತೆ ಮತ್ತು ಅವಳ ಮಗ, ನಮ್ಮ ತಮ್ಮ, ವೈನತೇಯರಿಗೆ ಅವರು ಸದಾ ಕಷ್ಟಗಳನ್ನು ಕೊಡುತ್ತಿದ್ದಾರೆ. ತಂದೆ ಮಹಾತ್ಮ ಕಶ್ಯಪನ ವರದಾನದಿಂದ ಮಹಾಬಲನಾದ ಅವನನ್ನು ದ್ವೇಷಿಸುತ್ತಾ ಬಂದಿದ್ದಾರೆ. ಈ ದೇಹದಿಂದ ಮುಕ್ತಿಯನ್ನು ಪಡೆಯಲೋಸುಗವೇ ನಾನು ಈ ತಪಸ್ಸನ್ನು ಮಾಡುತ್ತಿರುವೆನು. ಯಾವ ಕಾರಣದಿಂದಲೂ ನಾನು ಅವರೊಂದಿಗೆ ಜೀವಿಸಲು ಬಯಸುವುದಿಲ್ಲ."

ಬ್ರಹ್ಮನು ಹೇಳಿದನು:

"ಶೇಷ! ನಿನ್ನ ಸಹೋದರರ ಕುರಿತು ಎಲ್ಲವನ್ನೂ ನಾನು ತಿಳಿದಿದ್ದೇನೆ. ಅಪರಾಧಗೈದು ತಾಯಿಯಿಂದ ಪಡೆದ ಶಾಪದಿಂದ ನಿನ್ನ ಸಹೋದರರಲ್ಲಿ ಮಹಾಭಯವಿದೆ. ಪೂರ್ವದಲ್ಲಿಯೇ ನಾನು ಇದಕ್ಕೆ ಪರಿಹಾರವನ್ನು ಮಾಡಿದ್ದೇನೆ. ನಿನ್ನ ಸಹೋದರರೆಲ್ಲರ ಸಲುವಾಗಿ ನೀನು ಶೋಕಿಸ ಬೇಡ. ನಿನಗಿಷ್ಟವಿರುವ ಯಾವ ವರವನ್ನಾದರೂ ಕೇಳು. ನಿನ್ನಿಂದ ಪರಮ ಪ್ರೀತನಾದ ನಾನು ಇಂದು ನಿನಗೆ ವರವನ್ನು ಕೊಡುತ್ತೇನೆ. ನಿನ್ನ ಬುದ್ಧಿಯು ಧರ್ಮದಲ್ಲಿ ನಿರತವಾಗಿರುವುದನ್ನು ಗಮನಿಸಿದ್ದೇನೆ. ನಿನ್ನ ಬುದ್ಧಿಯು ಧರ್ಮದಲ್ಲಿ ಇನ್ನೂ ಸುಸ್ಥಿರವಾಗಿರಲಿ."

ಶೇಷನು ಹೇಳಿದನು:


2012/03/25

“ಪ್ರಪಿತಾಮಹ! ಈಶ್ವರ, ಧರ್ಮ ಮತ್ತು ತಪಸ್ಸಿನಲ್ಲಿ ನನ್ನ ಬುದ್ಧಿಯು ರಮಿಸುತ್ತಿರಲಿ. ಇದೇ ನನ್ನ ಬಯಕೆಯ ವರ.”

ಬ್ರಹ್ಮನು ಹೇಳಿದನು:

“ಶೇಷ! ನಿನ್ನ ಈ ದಮ ಮತ್ತು ಪ್ರಶಮನಗಳಿಂದ ಪ್ರೀತನಾಗಿದ್ದೇನೆ. ಪ್ರಜಾಹಿತಕ್ಕೋಸ್ಕರವಾಗಿ ನನ್ನ ನಿಯೋಗದಂತೆ ನಾನು ಹೇಳುವ ಈ ಕಾರ್ಯವೂ ನಿನ್ನಿಂದ ಆಗಲಿ. ಪರ್ವತ, ಕಣಿವೆ, ಸಾಗರ, ಪಟ್ಟಣಗಳನ್ನು ಹೊತ್ತು ಓಲಾಡುತ್ತಿರುವ ಈ ಭೂಮಿಯು ಅಚಲವಾಗಿರುವಂತೆ ನೀನು ಅವಳನ್ನು ಸರಿಯಾಗಿ ಹೊತ್ತಿ ನಿಲ್ಲು.”

ಶೇಷನು ಹೇಳಿದನು:

“ದೇವ! ವರದ! ಪ್ರಜಾಪತಿ! ಮಹೀಪತಿ! ಭೂತಪತಿ! ಜಗತ್ಪತಿ! ಪ್ರಜಾಪತಿ! ನಿನ್ನ ಹೇಳಿಕೆಯಂತೆ ಈ ಮಹಿಯನ್ನು ನಿಶ್ಚಲವಾಗಿ ನನ್ನ ಶಿರದಮೇಲೆ ಹೊರುತ್ತೇನೆ.”

ಬ್ರಹ್ಮನು ಹೇಳಿದನು:

“ಭುಜಂಗೋತ್ತಮ ಶೇಷ! ಭೂಮಿಯ ಅಡಿಯಲ್ಲಿ ಹೋಗು. ನಿನಗೆ ಅವಳೇ ದಾರಿಯನ್ನು ಮಾಡಿಕೊಡುವಳು. ಈ ಭೂಮಿಯನ್ನು ನೀನು ಹೊರುವುದರಿಂದ ನನಗೆ ಮಹಾ ಪ್ರಿಯವಾದುದನ್ನು ಮಾಡಿದಹಾಗೆ ಆಗುತ್ತದೆ.”

ನಾಗಗಳ ಅಗ್ರಜ ಆ ಪ್ರಭುವು "ಹಾಗೆಯೇ ಆಗಲಿ" ಎಂದು ಹೇಳಿ, ದರವನ್ನು ಪ್ರವೇಶಿಸಿ, ಮಹೀದೇವಿಯನ್ನು ಶಿರದ ಮೇಲೆ ಹೊತ್ತು ಈ ಸಮುದ್ರನೇಮಿಯನ್ನು ಪರಿಗ್ರಹಿಸಿದನು.

ಬ್ರಹ್ಮನು ಹೇಳಿದನು:

> "ಶೇಷ! ಒಬ್ಬನೇ ಈ ಮಹಿಯನ್ನು ಧಾರಣಮಾಡಿದ ನೀನು ನಾಗಗಳಲ್ಲೆಲ್ಲಾ ಉತ್ತಮನೂ ಧರ್ಮದೇವನೂ ಆಗಿದ್ದೀಯೆ. ಇಂದ್ರ ಮತ್ತು ನಾನು ಮಾತ್ರ ಈ ಮಹಿಯನ್ನು ಹೊರಬಲ್ಲೆವು."

ಈ ರೀತಿ ವಿಭು ಬ್ರಹ್ಮನ ಶಾಸನದಂತೆ ಪ್ರತಾಪಿ ನಾಗ ಅನಂತನು ಭೂಮಿಯ ಅಡಿಯಲ್ಲಿ ವಾಸಿಸುತ್ತಾ ಒಬ್ಬನೇ ಈ ವಸುಧೆಯನ್ನು ಹೊತ್ತಿದ್ದಾನೆ. ಭಗವಾನ್ ಅಮರೋತ್ತಮ ಪಿತಾಮಹನು ಅನಂತನಿಗೆ ಸಖನಾಗಿ ವೈನತೇಯ ಸುಪರ್ಣನನ್ನು ನಿಯೋಜಿಸಿದನು.

# ಶಕುಂತಲೋಪಾಖ್ಯಾನ

ದುಃಷಂತ-ಶಕುಂತಲೆಯರ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಸಂಭವ ಪರ್ವ (ಅಧ್ಯಾಯ ೬೨-೬೯) ದಲ್ಲಿ ಬರುತ್ತದೆ. ಈ ಕಥೆಯನ್ನು ಮುನಿ ವೈಶಂಪಾಯನನು ಜನಮೇಜಯನಿಗೆ ಸರ್ಪಸತ್ರದಲ್ಲಿ ಹೇಳಿದನು.

ನಾಲ್ಕೂ ಕಡೆಗಳಲ್ಲಿ ಸಮುದ್ರವು ಆವರಿಸಿರುವ ಈ ಪೃಥ್ವಿಯನ್ನು ದುಃಷಂತ ಎಂಬ ಹೆಸರಿನ ವೀರ ಪೌರವ ವಂಶಕರನು ಆಳುತ್ತಿದ್ದನು. ಆ ಮನುಜೇಶ್ವರನು ಭೋಗಿಸಿದ ದೇಶವು ಸಮುದ್ರದಿಂದ ಆವರಿಸಲ್ಪಟ್ಟ ಭೂಮಿಯ ನಾಲ್ಕೂ ಭಾಗಗಳನ್ನು ಒಳಗೊಂಡಿದ್ದಿತು. ಆ ರಿಪುಮರ್ದನನ ರಾಜ್ಯವು ಮ್ಲೇಚ್ಛರ ರಾಜ್ಯಗಳೆಲ್ಲವನ್ನೂ ಸೇರಿ ರತ್ನಾಕರ ಸಮುದ್ರದ ಅಂತ್ಯದವರೆಗೂ ಕೂಡಿದ್ದು ಚಾತುರ್ವರ್ಣ್ಯದವರನ್ನೂ ಒಳಗೊಂಡಿತ್ತು. ಆ ರಾಜನ ಶಾಸನದಲ್ಲಿ ವರ್ಣಸಂಕರವಿರಲಿಲ್ಲ, ಬೇಸಾಯ ಮಾಡಬೇಕಾಗಿರಲಿಲ್ಲ, ಗಣಿಗಳನ್ನು ತೋಡಬೇಕಾಗಿರಲಿಲ್ಲ, ಪಾಪಕೃತ್ಯಗಳನ್ನು ಮಾಡುವವರು ಯಾರೂ ಇರಲಿಲ್ಲ. ಅವನ ರಾಜ್ಯಭಾರದಲ್ಲಿ ಎಲ್ಲರೂ ಧರ್ಮನಿರತರಾಗಿದ್ದು ಅವರು ಮಾಡುವ ಎಲ್ಲ ಕಾರ್ಯಗಳೂ ಧರ್ಮದ ಸೇವೆಯಲ್ಲಿಯೇ ನಡೆಯುತ್ತಿತ್ತು. ಅವನ ರಾಜ್ಯಭಾರದಲ್ಲಿ ಯಾವುದೇ ರೀತಿಯ ಚೋರ ಭಯವಾಗಲೀ, ಬರಗಾಲದ ಭಯವಾಗಲೀ, ಅಥವಾ ವ್ಯಾಧಿ ಭಯವಾಗಲೀ ಇರಲಿಲ್ಲ. ಎಲ್ಲ ವರ್ಣದವರೂ ಅವರವರ ಧರ್ಮಗಳಲ್ಲಿ ನಿರತರಾಗಿದ್ದು ಯಾವುದೇ ಫಲವನ್ನೂ ಬಯಸದೇ ದೇವಕಾರ್ಯಗಳಲ್ಲಿ ತೊಡಗಿದ್ದರು. ಅವನಲ್ಲಿ ಆಶ್ರಯ ಹೊಂದಿದ ಪ್ರಜೆಗಳ್ಯಾರಿಗೂ ಯಾವುದೇ ರೀತಿಯ ಭಯವಿರಲಿಲ್ಲ. ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆ ಸುರಿಸುತ್ತಿದ್ದನು ಮತ್ತು ಸಸ್ಯಗಳು ಫಲಭರಿತವಾಗಿರುತ್ತಿದ್ದವು. ಆ ಕಾಲದಲ್ಲಿ ವಸುಮತಿ ಭೂಮಿಯು ಸರ್ವರತ್ನ ಸಮೃದ್ಧಳಾಗಿದ್ದಳು. ಆ ಯುವಕನಾದರೋ

ಅದ್ಭುತಮಹಾವೀರ್ಯನೂ, ವಜ್ರಕಾಯನೂ ಆಗಿದ್ದು ವನಕಾನನಗಳ ಸಮೇತ ಮಂದರ ಪರ್ವತವನ್ನು ಎತ್ತಿಹಿಡಿಯಬಲ್ಲಂಥ ಭುಜಯುಕ್ತನಾಗಿದ್ದನು. ಅವನು ಧನುರ್ಯುದ್ಧ, ಗದಾಯುದ್ಧ, ಖಡ್ಗ ಪ್ರಹಾರ, ಆನೆ ಸವಾರಿ ಮತ್ತು ಕುದುರೆ ಸವಾರಿ ಎಲ್ಲದರಲ್ಲಿಯೂ ಪರಿಣಿತನಾಗಿದ್ದನು. ಅವನು ಬಲದಲ್ಲಿ ವಿಷ್ಣುಸಮಾನನೂ, ತೇಜಸ್ಸಿನಲ್ಲಿ ಭಾಸ್ಕರನಂತೆಯೂ, ಶಾಂತತೆಯಲ್ಲಿ ಸಾಗರ ಸಮನೂ, ಮತ್ತು ಸಹಿಷ್ಣುತೆಯಲ್ಲಿ ಭೂಮಿಯ ಸಮನೂ ಆಗಿದ್ದನು. ಆ ಸಮ್ಮತ ಮಹೀಪಾಲನು ಪ್ರಸನ್ನತೆಯಿಂದ ತನ್ನ ಪುರರಾಷ್ಟ್ರಗಳನ್ನು ಆಳುತ್ತಿರಲು ಅಲ್ಲಿಯ ಜನರೆಲ್ಲರೂ ಧರ್ಮ ನಿರತರಾಗಿದ್ದರು.

ಒಮ್ಮೆ ಆ ಮಹಾಬಾಹುವು ನೂರಾರು ಆನೆ ಕುದುರೆಗಳನ್ನೊಡಗೂಡಿದ ಮಹಾಸೇನೆಯೊಂದಿಗೆ ಗಹನ ವನವೊಂದಕ್ಕೆ ಹೋದನು. ಖಡ್ಗ ಮತ್ತು ಶಕ್ತಿಗಳನ್ನು ಧರಿಸಿದ, ಗದೆ ಮುಸಲಗಳನ್ನು ಹಿಡಿದ ನೂರಾರು ವೀರ ಯೋಧರಿಂದ ಆವೃತ ರಾಜನು ಮುಂದೆ ಸಾಗಿದನು. ರಾಜನು ಹೊರಟಾಗ ಯೋಧರ ಸಿಂಹನಾದ, ಶಂಖದುಂಧುಭಿಗಳ ಸ್ವರ, ರಥಗಾಲಿಗಳ ಶಬ್ಧ, ದೊಡ್ಡ ದೊಡ್ಡ ಆನೆಗಳ ಕೂಗಾಟ, ಕುದುರೆಗಳ ಕೂಗು, ನಡೆಯುತ್ತಿರುವ ಸೈನಿಕರ ಆಯುಧಗಳ ಸದ್ದು ಇವುಗಳೆಲ್ಲವುಗಳ ಒಟ್ಟು ಆರ್ಭಟವು ಕಿವಿಗಳನ್ನು ಕಿವುಡುಮಾಡುವಷ್ಟು ಜೋರಿನಲ್ಲಿ ಕೇಳಿಬರುತ್ತಿತ್ತು. ಶೂರನೂ ಆತ್ಮಯಶಸ್ಕರನೂ ಆದ ಆ ಸುಂದರ ನೃಪನನ್ನು ಸ್ತ್ರೀಯರು ಮನೆಗಳ ಮಹಡಿಗಳ ಮೇಲೆ ನಿಂತು ನೋಡುತ್ತಿದ್ದರು. ಶಕ್ರನಂತೆ ಶತ್ರುಗಳನ್ನು

ನಾಶಗೊಳಿಸಬಲ್ಲ, ಪರರ ಆನೆಗಳನ್ನು ಹೊಡೆದೋಡಿಸಬಲ್ಲ ಆ ಶಸ್ತ್ರಪಾಣಿಯನ್ನು ನೋಡಿದ ಸ್ತ್ರೀಗಣಗಳು ಈ ರೀತಿ ಯೋಚಿಸಿಸುತ್ತಿದ್ದವು:

> "ರಣದಲ್ಲಿ ಅದ್ಭುತಪರಾಕ್ರಮಿಯಾದ ಇವನು ಪುರುಷವ್ಯಾಘ್ರ. ಇವನ ಬಾಹುಬಲಕ್ಕೆ ಸಿಲುಕಿದ ಯಾವ ಶತ್ರುವೂ ಉಳಿಯಲಿಕ್ಕಿಲ್ಲ."

ನರಾಧಿಪನ ಕುರಿತು ಪ್ರೇಮದಿಂದ ಸ್ತ್ರೀಯರು ಈ ರೀತಿ ಆಡಿಕೊಂಡರು, ಮತ್ತು ಸಂತಸದಿಂದ ಅವನ ನೆತ್ತಿಯ ಮೇಲೆ ಹೂವಿನ ಮಳೆಯನ್ನೇ ಸುರಿಸಿದರು. ಅವನು ಹೋದಲ್ಲೆಲ್ಲಾ ವಿಪ್ರೇಂದ್ರರು ಸ್ತುತಿಸುತ್ತಿರಲು ಅವನು ಅತಿ ಸಂತಸದಿಂದ ಮೃಗ ಬೇಟೆಗೆಂದು ವನವನ್ನು ಪ್ರವೇಶಿಸಿದನು. ಅವನನ್ನು ಸ್ವಲ್ಪದೂರದವರೆಗೆ ಅನುಸರಿಸಿದ ನಗರ ಮತ್ತು ಗ್ರಾಮೀಣ ಜನರು ಸ್ವಲ್ಪ ಸಮಯದ ನಂತರ ರಾಜನ ಅನುಜ್ಞೆಯಂತೆ ಹಿಂದಿರುಗಿದರು. ಗರುಡನಂತೆ ಅತಿ ವೇಗದಲ್ಲಿ ಪ್ರಯಾಣಿಸುತ್ತಿರುವ ಆ ವಸುಧಾಧಿಪನ ರಥ ಘೋಷವು ಇಡೀ ಭೂಮಿಯನ್ನೂ ಸೇರಿ ಮೂರೂ ಲೋಕಗಳನ್ನೂ ತುಂಬಿತು. ಹೀಗೆ ಹೋಗುತ್ತಿರುವಾಗ ಆ ಧೀಮಂತನು ಬಿಲ್ವಾಕ, ಅರ್ಕ, ಖದಿರ, ಕೀರ್ಣ, ಕಪಿತ್ಥ ಮತ್ತು ಧವ ಸಂಕುಲಗಳಿಂದ ಕೂಡಿದ ನಂದನವನವನ್ನೇ ಹೋಲುವ ವನವೊಂದನ್ನು ಕಂಡನು. ಅದು ಪರ್ವತ, ಕಣಿವೆ, ಬಂಡೆಗಲ್ಲುಗಳನ್ನುಹೊಂದಿದ್ದು ವಿಷಮವಾಗಿತ್ತು; ನಿರ್ಜಲ

ನಿರ್ಮನುಷ್ಯವಾಗಿ ಬಹಳಷ್ಟು ಯೋಜನ ವಿಸ್ತೀರ್ಣಗೊಂಡಿತ್ತು; ಜಿಂಕೆ, ಸಿಂಹ ಮತ್ತು ಇನ್ನೂ ಇತರ ಘೋರ ವನಪ್ರಾಣಿಗಳಿಂದ ತುಂಬಿಕೊಂಡಿತ್ತು. ತನ್ನ ಸೇವಕರು ಮತ್ತು ಸೈನಿಕರೊಡಗೂಡಿದ ಆ ಮನುಜವ್ಯಾಘ್ರ ದುಃಷಂತನು ಆ ವನದಲ್ಲಿ ವಿವಿಧ ಮೃಗಗಳನ್ನು ಬೇಟೆಯಾಡಿದನು. ತನ್ನ ಬಾಣಗಳ ಪರಿಧಿಯಲ್ಲಿ ಸಿಕ್ಕಿದ ಹಲವಾರು ವ್ಯಾಘ್ರಗಳನ್ನು ದುಃಷಂತನು ತನ್ನ ಬಾಣಗಳಿಂದ ಹೊಡೆದು ಉರುಳಿಸಿದನು. ಆ ನರರ್ಷಭನು ದೂರದಲ್ಲಿರುವವನ್ನು ಬಾಣಗಳಿಂದ ಹೊಡೆದನು; ಹತ್ತಿರದಲ್ಲಿರುವವನ್ನು ಖಡ್ಗದಿಂದ ಕತ್ತರಿಸಿದನು. ಆ ಶಕ್ತಿವಂತರಲ್ಲಿ ಶ್ರೇಷ್ಠನು ಕೆಲವು ಪ್ರಾಣಿಗಳನ್ನು ಈಟಿಯಿಂದ ಹೊಡೆದನು; ಆ ಅಮಿತವಿಕ್ರಮಿಯು ಕೆಲವನ್ನು ಗದೆಯಿಂದ ಹೊಡೆದು ಉರುಳಿಸಿದನು. ಈ ರೀತಿ ತೋಮರ, ಖಡ್ಗ, ಗದೆ, ಮುಸಲ ಮುಂತಾದ ಆಯುಧಗಳನ್ನು ಹಿಡಿದು ಬೇಟೆಯಾಡುವಾಗ ಆ ವನದಲ್ಲಿರುವ ಮೃಗಗಳೆಲ್ಲವೂ ಅಲ್ಲಿಂದ ಪಲಾಯನಗೈಯ ತೊಡಗಿದವು. ರಾಜನ ಆ ಸಮರಪ್ರಿಯ ಅದ್ಭುತವೀರ್ಯ ಯೋಧರ ಧಾಳಿಗೊಳಗಾದ ಆ ಮಹಾರಣ್ಯದ ಮಹಾಮೃಗಗಳೆಲ್ಲವೂ ಅಲ್ಲಿಂದ ಓಡತೊಡಗಿದವು. ತಮ್ಮ ಪಡೆಯ ನಾಯಕನನ್ನು ಕಳೆದುಕೊಂಡು ಗಲಿಬಿಲಿಗೊಂಡ ಜಿಂಕೆಗಳ ಪಡೆಯು ಭಯ ಉದ್ವೇಗಗಳ ಆಕ್ರಂದವನ್ನೀಯುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಓಡತೊಡಗಿದವು. ಬತ್ತಿಹೋದ ನದಿಗಳಿಂದ ತಮ್ಮ ಬಾಯಾರಿಕೆಯನ್ನು ನೀಗಿಕೊಳ್ಳಲಾಗದೇ ಕೃಷರಾಗಿ, ಆಯಾಸದಿಂದ ಬಳಲಿದವರಾಗಿ ಅಲ್ಲಿಯೇ ವಿಚೇತಸರಾಗಿ ಬಿದ್ದವು. ಹಸಿವು

ಬಾಯಾರಿಕೆಗಳಿಂದ ಬಳಲಿದವುಗಳು ಭೂಮಿಯ ಮೇಲೆ ಬಿದ್ದವು. ಕೆಲವನ್ನು ಅಲ್ಲಿದ್ದ ನರವ್ಯಾಘ್ರರು ಹಸಿದಾಗಿಯೇ ಭಕ್ಷಿಸಿದರು. ಕೆಲವೊಂದನ್ನು ಆ ವನಚರರು ಬೆಂಕಿಯನ್ನು ಹಾಕಿ ಅದರಲ್ಲಿ ಮಾಂಸವನ್ನು ವಿಧಿವತ್ತಾಗಿ ಸುಟ್ಟು ತಿಂದರು. ಶಸ್ತ್ರಗಳಿಂದ ಗಾಯಗೊಂಡು ಭಯಭೀತರಾದ ಬಲಶಾಲೀ ಮತ್ತ ಗಜಗಳು ತಮ್ಮ ಸೊಂಡಿಲುಗಳನ್ನು ಮೇಲೇರಿಸಿ ಘೀಳಿಡುತ್ತಾ ಓಡತೊಡಗಿದವು. ಭಯಭೀತರಾಗಿ ಮಲ ಮೂತ್ರಗಳನ್ನು ವಿಸರ್ಜಿಸುತ್ತಾ ರಕ್ತವನ್ನು ಕಾರುತ್ತಾ ಓಡುತ್ತಿದ್ದ ಆ ಆನೆಗಳು ಹಲವಾರು ಸೈನಿಕರನ್ನು ತುಳಿದು ಕೊಂದುಹಾಕಿದವು. ಹಲವಾರು ಪ್ರಾಣಿಗಳಿಂದ ತುಂಬಿದ್ದ ಆ ವನವನ್ನು ರಾಜನ ಅಸಂಖ್ಯ ಸೇನೆಯು ಸಿಂಹ, ಹುಲಿ ಮತ್ತು ಇತರ ಪ್ರಾಣಿಗಳಿಂದ ಮುಕ್ತಮಾಡಿತು.

ಸಹಸ್ರಾರು ಮೃಗಗಳನ್ನು ಬೇಟೆಯಾಡಿದ ಆ ವಿಪುಲವಾಹನ ರಾಜನು ಬೇಟೆಯಾಡುತ್ತಾ ಇನ್ನೊಂದು ವನವನ್ನು ಪ್ರವೇಶಿಸಿದನು. ಹಸಿವು ಬಾಯಾರಿಕೆಗಳಿಂದ ಬಳಲಿದ ಆ ಉತ್ತಮ ಬಲಶಾಲಿಯು ಒಬ್ಬನೇ ವನದ ಅಂಚಿನಲ್ಲಿದ್ದ ಒಂದು ಮೈದಾನ ಪ್ರದೇಶವನ್ನು ಸೇರಿದನು. ಅದನ್ನು ದಾಟಿದ ನೃಪತಿಯು ಉತ್ತಮ ಆಶ್ರಮಗಳಿಂದ ಕೂಡಿದ, ಅತೀವ ಸುಂದರವಾಗಿದ್ದು ಮನಸ್ಸಿಗೆ ಸಂತೋಷವನ್ನುಂಟುಮಾಡುವ, ತಂಗಾಳಿ ಬೀಸುತ್ತಿದ್ದ ಇನ್ನೊಂದು ಮಹಾ ವನವನ್ನು ಪ್ರವೇಶಿಸಿದನು. ಹೂತುಂಬಿದ ಮರಗಳು ಮತ್ತು ವಿಶಾಲ ಸಮೃದ್ಧ ಹುಲ್ಲಿನ ಹಾಸಿಗೆಯನ್ನು ಹೊಂದಿದ್ದ ಅಲ್ಲಿ ಪಕ್ಷಿಗಳ ಮಧುರ ಕಲರವಗಳು

ಪ್ರತಿಧ್ವನಿಸುತ್ತಿತ್ತು. ಅಲ್ಲಿ ಸುಖಛಾಯೆಯನ್ನು ನೀಡುವ ವಿಶಾಲ ರೆಂಬೆಗಳನ್ನು ಹೊಂದಿ ಪ್ರವೃದ್ಧವಾಗಿ ಬೆಳೆದಿದ್ದ ವೃಕ್ಷಗಳಿದ್ದವು. ಸುಂದರ ಪೊದೆಗಳು ಮತ್ತು ಹೂವಿನ ಬಳ್ಳಿಗಳನ್ನು ದುಂಬಿಗಳು ಸುತ್ತುವರೆದಿದ್ದವು. ಆ ಕಾನನದಲ್ಲಿ ಹೂ-ಫಲಗಳಿಲ್ಲದ ಮರವೇ ಇರಲಿಲ್ಲ, ಮುಳ್ಳುಗಳಿಂದ ಕೂಡಿದ ಪೊದೆಯೇ ಇರಲಿಲ್ಲ, ಮತ್ತು ದುಂಬಿಗಳು ಮುತ್ತಿಕೊಂಡಿರದ ಯಾವ ಗಿಡವೂ ಇರಲಿಲ್ಲ. ಪಕ್ಷಿಗಳ ನಾದದಿಂದ ತುಂಬಿದ್ದ, ಬಹಳಷ್ಟು ಪುಷ್ಪಗಳಿಂದ ಅಲಂಕೃತವಾಗಿದ್ದ, ಸರ್ವಋತುಗಳಲ್ಲಿ ಕಂಡುಬರುವ ಸುಮವೃಕ್ಷಗಳ ಸುಖ ನೆರಳಿನಿಂದ ಮನೋರಮ ಆ ಉತ್ತಮ ವನವನ್ನು ಮಹೇಷ್ವಾಸನು ಪ್ರವೇಶಿಸಿದನು. ಗಾಳಿಯಿಂದ ಅಲುಗಾಡುತ್ತಿದ್ದ ಕುಸುಮದ್ರುಮಗಳಿಂದ ಪುನಃ ಪುನಃ ಪುಷ್ಪವೃಷ್ಟಿಯಾಗುತ್ತಿತ್ತು. ಸ್ವರ್ಗವನ್ನು ಮುಟ್ಟುತ್ತಿವೆಯೋ ಎನ್ನುವಷ್ಟು ಎತ್ತರ ಬೆಳೆದಿದ್ದ ಪಕ್ಷಿಗಳ ಮಧುರ ಸ್ವರಗಳಿಂದ ವಿರಾಜಿಸುತ್ತಿದ್ದ ಅಲ್ಲಿಯ ಮರಗಳ ರೆಂಬೆಗಳು ವಿಚಿತ್ರ ಕುಸುಮಗಳನ್ನು ಹೊತ್ತು ಆ ಪುಷ್ಪಗಳ ಭಾರದಿಂದಲೋ ಎಂಬಂತೆ ಕೆಳಗೆ ಚಾಚಿ ಸುತ್ತುವರೆದ ಪಕ್ಷಿ-ದುಂಬಿಗಳ ನಾದಸಮೂಹದಲ್ಲಿ ಮುದಿತವಾಗಿದ್ದವು. ಆ ಪ್ರದೇಶದಲ್ಲಿ ಹೂವಿನ ಗೊಂಚಲುಗಳನ್ನು ಹೊಂದಿದ್ದ ಹಲವಾರು ಬಳ್ಳಿಗಳಿದ್ದವು. ಮನಸ್ಸಿನ ಸಂತೋಷವನ್ನು ಹೆಚ್ಚಿಸುವ ಲತಾಗೃಹಗಳಿದ್ದವು. ಇದನ್ನೆಲ್ಲಾ ನೋಡಿದ ಮಹಾತೇಜಸ್ವಿಯು ಆನಂದಿತನಾದನು. ತಮ್ಮ ತಮ್ಮ ಕುಸುಮಾಚ್ಛಾದಿತ ರೆಂಬೆಗಳಿಂದ ಪರಸ್ಪರ ಅಪ್ಪಿಕೊಂಡಂತಿದ್ದ ವೃಕ್ಷಗಳಿಂದ ಕೂಡಿದ ಆ ವನವು ಅನೇಕ ಸುಂದರ

ಕಾಮನಬಿಲ್ಲುಗಳಂತೆ ಶೋಭಿಸುತ್ತಿತ್ತು. ಹೂವುಗಳ ಪರಾಗವನ್ನು ಹೊತ್ತ ಸುಗಂಧಿತ ಸುಖಶೀತಲ ಗಾಳಿಯು ಅಲ್ಲಿಯ ಮರಗಳೊಂದಿಗೆ ಆಟವಾಡುತ್ತಿದೆಯೋ ಎನ್ನುವಂತೆ ವನದ ಸುತ್ತಲೂ ಬೀಸುತ್ತಿತ್ತು.

ಈ ರೀತಿ ಗುಣಸಮಾಯುಕ್ತ ಆ ವನವು ನದಿಯೊಂದರ ತೀರದಲ್ಲಿ ಇಂದ್ರನ ಗೌರವಾರ್ಥ ನೆಟ್ಟಿದ್ದ ಧ್ವಜದಂತಿದೆ ಎನ್ನುವುದನ್ನು ನೃಪನು ಗಮನಿಸಿದನು. ಆ ವನದಲ್ಲಿ ಸದಾ ಸಂತಸದಿಂದ ಚಿಲಿಪಿಲಿಗುಡುತ್ತಿದ್ದ ಪಕ್ಷಿಗಳನ್ನು ಮತ್ತು ಮನೋರಮ ರಮ್ಯ ಆಶ್ರಮಸಂಕುಲವನ್ನು ಕಂಡನು. ಅದು ನಾನಾ ವೃಕ್ಷಗಳಿಂದ ಸುತ್ತುವರೆದಿತ್ತು ಮತ್ತು ಮಧ್ಯದಲ್ಲಿ ಪುಣ್ಯ ಪಾವಕವು ಉರಿಯುತ್ತಿತ್ತು. ವಾಲಖಿಲ್ಯಧಾರಿ ಯತಿ ಮತ್ತು ಮುನಿಗಣಗಳಿಂದ ಕೂಡಿತ್ತು. ಬಹಳ ಅಗ್ನ್ಯಾಗಾರಗಳಿದ್ದವು, ನೆಲದ ಮೇಲೆ ಮರಗಳಿಂದ ಕೆಳಗೆ ಬಿದ್ದ ಪುಷ್ಪಗಳ ದರಿಯೇ ಹಾಸಿತ್ತು. ಮಹಾ ರೆಂಬೆಗಳನ್ನು ಹೊಂದಿದ್ದ ಸುಂದರ ಮರಗಳಿಂದ ಅತೀವ ಸುಂದರವಾಗಿ ಕಾಣುತ್ತಿತ್ತು. ಸುಖೋದಕವನ್ನು ಹೊಂದಿದ್ದ ಪುಣ್ಯಕರ ಮಾಲಿನೀ ನದಿಯು ಅಲ್ಲಿ ಹರಿಯುತ್ತಿತ್ತು. ಹೀಗೆಯೇ ಆ ಶ್ರೀಮಾನ್ ಅತಿರಥನು ಸರ್ವತವೂ ಸುಮನೋಹರವಾಗಿದ್ದ ದೇವಲೋಕದಂತಿದ್ದ ಅಶ್ರಮವನ್ನು ಪ್ರವೇಶಿಸಿದನು. ಅಲ್ಲಿರುವ ಸರ್ವ ಪ್ರಾಣಿಗಳಿಗೂ ಜನನಿಯಂತೆ ಹರಿಯುತ್ತಿರುವ ಪುಣ್ಯ ನದಿಯ ದಂಡೆಯ ಮೇಲೆ ನಿಂತಿದ್ದ ಆ ಆಶ್ರಮವನ್ನು ನೋಡಿದನು.

ಪುಷ್ಪ-ನೊರೆಗಳೊಡನೆ ಪ್ರವಾಹಿಸುತ್ತಿದ್ದ ಅದರ ದಂಡೆಯ ಮೇಲೆ

ಚಕ್ರವಾಕಗಳು ಆಟವಾಡುತ್ತಿದ್ದವು, ತಮ್ಮ ಗಣಗಳೊಂದಿಗೆ ಕಿನ್ನರರು ವಾಸಿಸುತ್ತಿದ್ದರು ಮತ್ತು ವಾನರ-ಕರಡಿಗಳು ಅಲ್ಲಿಗೆ ಬರುತ್ತಿದ್ದವು. ಸ್ವಾಧ್ಯಾಯ ನಿರತ ಪುಣ್ಯಪುರುಷರು ಆ ಸುಂದರ ದಂಡೆಯ ಮೇಲೆ ವಾಸಿಸುತ್ತಿದ್ದರು. ಮದಿಸಿದ ಆನೆಗಳೂ, ಹುಲಿಗಳೂ, ಸರ್ಪಗಳೂ ಅಲ್ಲಿಗೆ ಬರುತ್ತಿದ್ದವು. ನದಿಯ ದಂಡೆಗೇ ಹೊಂದಿಕೊಂಡಿದ್ದ ಆಶ್ರಮಪದವನ್ನು ನೋಡಿದ ನೃಪತಿಯು ಅದನ್ನು ಪ್ರವೇಶಿಸುವ ಮನಸ್ಸುಮಾಡಿದನು. ಮಾಲಿನೀ ನದಿಯು ದ್ವೀಪಗಳಿಂದ ಮತ್ತು ರಮ್ಯ ತೀರಗಳಿಂದ ಅಲಂಕೃತವಾಗಿದ್ದು, ಗಂಗಾ ತೀರದಲ್ಲಿದ್ದ ನರನಾರಾಯಣರ ಆಶ್ರಮದಂತೆ ಶೋಭಿಸುತ್ತಿತ್ತು. ಚೈತ್ರರಥನ ವನದಂತಿರುವ, ಮತ್ತು ನವಿಲು ಸಂಕುಲಗಳಿಂದ ಕೂಡಿದ ಆ ಮಹಾವನವನ್ನು ನರೇಶ್ವರನು ಪ್ರವೇಶಿಸಿದನು. ಅತೀವ ಗುಣಸಂಪನ್ನ ಅನಿರ್ದೇಶ್ಯ ವರ್ಚಸ ಮಹರ್ಷಿ ತಪೋಧನ ಕಾಶ್ಯಪ ಕಣ್ವನನ್ನು ನೋಡಲು ಬಯಸಿದನು. ರಥಿಗಳನ್ನು, ಅಶ್ವಸವಾರಿಗಳನ್ನು ಮತ್ತು ಪದಾತಿಗಣಸಂಕುಲಗಳ ಸೇನೆಯನ್ನು ವನದ ದಾರಿಯಲ್ಲಿಯೇ ನಿಲ್ಲಿಸಿ ಈ ಮಾತುಗಳನ್ನಾಡಿದನು:

> “ನಾನು ಮುನಿ ವಿರಜಸ ತಪೋಧನ ಕಾಶ್ಯಪನನ್ನು ಕಾಣಲು ಹೋಗುತ್ತಿದ್ದೇನೆ. ನಾನು ಬರುವವರೆಗೆ ಇಲ್ಲಿಯೇ ನಿಂತಿರಿ.”

ನಂದನವನದಂತಿರುವ ಆ ವನವನ್ನು ಪ್ರವೇಶಿಸುತ್ತಿದ್ದಂತೆಯೇ ಮನುಜೇಶ್ವರ ರಾಜನು ಹಸಿವು ಬಯಾರಿಕೆಗಳನ್ನು ಕಳೆದುಕೊಂಡು

ಅತ್ಯಂತ ಹರ್ಷಿತನಾದನು. ರಾಜಚಿಹ್ನೆಗಳನ್ನು ಕಳಚಿಟ್ಟು ಅಮಾತ್ಯರು ಮತ್ತು ಪುರೋಹಿತರೊಂದಿಗೆ ಆ ನರಾಧಿಪನು ಉತ್ತಮ ಋಷಿ ತಪೋ ರಾಶಿ ಅವ್ಯಯನನ್ನು ನೋಡಲು ಹೊರಟನು. ಆ ಬ್ರಹ್ಮಲೋಕಪ್ರತೀಕಾಶ ಆಶ್ರಮವನ್ನು ನೋಡಿದನು. ಅಲ್ಲಿ ನಾನಾ ದ್ವಿಜಗಣಗಳ ಮಂತ್ರೋಚ್ಛಾರಣೆಯು ದುಂಬಿಗಳ ಝೇಂಕಾರದಂತೆ ಕೇಳಿಬರುತ್ತಿತ್ತು. ಆಶ್ರಮದ ಒಂದೆಡೆಯಿಂದ ಸುಸ್ವರವಾಗಿ ಕೇಳಿಬರುತ್ತಿದ್ದ ಬ್ರಾಹ್ಮಣ ಪ್ರಮುಖರ ಪದಕ್ರಮ ಪ್ರಕಾರ ಋಕ್ಕುಗಳನ್ನು ಆ ಮನುಜವ್ಯಾಘ್ರನು ಆಲಿಸಿದನು. ಯಜ್ಞವಿಂದ್ಯಾಂಗಗಳನ್ನು ಕ್ರಮಗಳನ್ನು ತಿಳಿದಿದ್ದ ಅಮಿತಾತ್ಮರಿಂದೊಡಗೂಡಿದ ಯಜ್ಞಮಂಟಪಗಳು ಆ ಅಶ್ರಮದಲ್ಲಿ ಶೋಭಿಸುತ್ತಿದ್ದವು. ಪದಕ್ರಮಗಳನ್ನನುಸರಿಸಿ ಅಥರ್ವವೇದಪ್ರವರರು ಸಂಹಿತೆಗಳನ್ನು ಪಠಿಸುತ್ತಿದ್ದರು. ಇನ್ನೊಂದೆಡೆ ದ್ವಿಜರ ಶಬ್ಧಸಂಸ್ಕಾರಗಳಿಂದೊಡಗೂಡಿದ ಮಂತ್ರನಾದವು ಕೇಳಿಬರುತ್ತಿದ್ದು ಆ ಶ್ರೀಮಂತ ಆಶ್ರಮವು ಬ್ರಹ್ಮಲೋಕದಂತೆ ತೋರಿಬರುತ್ತಿತ್ತು. ಅಲ್ಲಿ ಯಜ್ಞಸಂಸ್ಕಾರಗಳನ್ನು ತಿಳಿದವರೂ, ಕ್ರಮಶಿಕ್ಷಾ ವಿಶಾರದರೂ, ನ್ಯಾಯ ತತ್ವಾರ್ಥ ವಿಜ್ಞಾನ ಸಂಪನ್ನರೂ, ವೇದ ಪಾರಂಗತರೂ ಇದ್ದರು. ಅಲ್ಲಿ ನಾನಾ ವಾಕ್ಯ ಸಮಾಹಾರ ಸಮವಾಯ ವಿಶಾರದರಿದ್ದರು, ವಿಶೇಷ ಕಾರ್ಯವಿದ್ವತ್ತರಿದ್ದರು, ಮತ್ತು ಮೋಕ್ಷಧರ್ಮ ಪರಾಯಣರಿದ್ದರು. ಪರವೀರಹ ವಿಪ್ರೇಂದ್ರನು ಎಲ್ಲೆಡೆಯಲ್ಲಿಯೂ ಜಪ ಹೋಮಾದಿಗಳಲ್ಲಿ ನಿರತ ನಿಯತ ಸಂಶಿತವ್ರತ ಸಿದ್ಧರನ್ನು ನೋಡಿದನು. ಪುಷ್ಪಗಳಿಂದ

ತುಂಬಾ ಜಾಗರೂಕತೆಯಿಂದ ರಚಿಸಿದ್ದ ವಿಚಿತ್ರ ಆಸನಗಳನ್ನು ನೋಡಿದ ಮಹೀಪತಿಯು ವಿಸ್ಮಿತನಾದನು. ದ್ವಿಜರಿಂದ ನಡೆಯುತ್ತಿದ್ದ ದೇವತಾ ಪೂಜೆಗಳನ್ನು ನೋಡಿದ ಆ ನೃಪಸತ್ತಮನು ತಾನು ಬ್ರಹ್ಮಲೋಕದಲ್ಲಿದ್ದೇನೋ ಎಂದು ಭಾವಿಸಿದನು. ಕಾಶ್ಯಪನ ತಪೋಬಲದಿಂದ ರಕ್ಷಿಸಲ್ಪಟ್ಟ, ತಪೋಧನ ಗಣಗಳಿಂದ ಕೂಡಿದ್ದ ಶುಭ ಆಶ್ರಮ ಸಂಕುಲವನ್ನು ಎಷ್ಟು ನೋಡಿದರು ಅವನಿಗೆ ತೃಪ್ತಿಯಾಗಲಿಲ್ಲ. ಆ ಅರಿಮರ್ದನನು ತನ್ನ ಅಮಾತ್ಯ ಮತ್ತು ಪುರೋಹಿತನ ಸಹಿತ ಮನೋಹರ, ಮಂಗಳಕರ, ತಪೋಧನ ಋಷಿ ಮಹಾವ್ರತರಿಂದ ಕೂಡಿದ್ದ ಕಾಶ್ಯಪನ ಆ ತಪೋ ಆಶ್ರಮವನ್ನು ಪ್ರವೇಶಿಸಿದನು.

ಆಶ್ರಮದಲ್ಲಿ ಸಂಶಿತವ್ರತ ಋಷಿಯನ್ನು ಕಾಣದೇ ಆ ಮಹಾಬಾಹುವು ತನ್ನ ಅಮಾತ್ಯರನ್ನೆಲ್ಲ ಹಿಂದೆಯೇ ಬಿಟ್ಟು ಒಬ್ಬನೇ ಹೋದನು. ಆ ಋಷಿಯ ಆಶ್ರಮದಲ್ಲಿ ಯಾರನ್ನೂ ಕಾಣದೇ

"ಇಲ್ಲಿ ಯಾರಾದರೂ ಇದ್ದೀರಾ?"

ಎಂದು ವನದಲ್ಲೆಲ್ಲಾ ಪ್ರತಿಧ್ವನಿಸುವಂತೆ ಜೋರಾಗಿ ಕೂಗಿ ಕೇಳಿದನು. ಅವನ ಆ ಮಾತುಗಳನ್ನು ಕೇಳಿ ರೂಪದಲ್ಲಿ ಶ್ರೀಯಂತಿರುವ ತಪಸ್ವಿ ವಸ್ತ್ರಧಾರಿಣಿ ಕನ್ಯೆಯೋರ್ವಳು ಆ ಆಶ್ರಮದಿಂದ ಹೊರಬಂದಳು. ತನ್ನ ಕಪ್ಪು ಕಣ್ಣುಗಳಿಂದ ರಾಜ ದುಃಷಂತನನ್ನು ನೋಡಿದಾಕ್ಷಣವೇ ಸ್ವಾಗತವೆಂದು ಹೇಳಿ ಅವನನ್ನು ಪ್ರತಿಪೂಜಿಸಿದಳು. ಗೌರವಾನ್ವಿತ

ಆಸನವನ್ನಿತ್ತು, ಪಾದಗಳಿಗೆ ಅರ್ಘ್ಯವನ್ನಿತ್ತು, ಆ ಅನಾಮಯ ನರಾಧಿಪ ರಾಜನ ಕುಶಲವನ್ನು ಕೇಳಿದಳು. ಈ ರೀತಿ ಯಥಾವತ್ತಾಗಿ ಅರ್ಚಿಸಿ ಅವನು ಸುಖಾಸೀನನಾಗಿದ್ದುದನ್ನು ನೋಡಿ

“ಯಾವ ಕಾರ್ಯವನ್ನು ಎಸಗಬೇಕು?”

ಎಂದು ಕೇಳಿದಳು. ಯಥಾವತ್ತಾಗಿ ಪ್ರತಿಪೂಜಿತ ರಾಜನು ಆ ಸರ್ವಾನವದ್ಯಾಂಗಿ ಮಧುರಭಾಷಿಣಿಯನ್ನು ನೋಡಿ ಹೇಳಿದನು:

“ಮಹಾಭಾಗ ಕಣ್ವ ಋಷಿಯ ಉಪಾಸನೆಗೆಂದು ನಾನು ಬಂದಿದ್ದೇನೆ. ಭದ್ರೇ! ಭಗವಾನರು ಎಲ್ಲಿ ಹೋಗಿದ್ದಾರೆ ಎಂದು ಹೇಳು.”

ಶಕುಂತಲೆಯು ಹೇಳಿದಳು:

“ನನ್ನ ತಂದೆ ಭಗವಾನನು ಫಲಗಳನ್ನು ತರಲು ಆಶ್ರಮದಿಂದ ಹೋಗಿದ್ದಾನೆ. ಸ್ವಲ್ಪ ಸಮಯ ಕಾಯಬೇಕು. ಅವನು ಹಿಂದಿರುಗಿದ ಕೂಡಲೇ ಅವನನ್ನು ಕಾಣಬಹುದು.”

ಈಗ ಋಷಿಯನ್ನು ನೋಡಲಿಕ್ಕಾಗುವುದಿಲ್ಲವೆಂದು ಹೇಳಿದ ಆ ಚಾರುಹಾಸಿನಿ, ವರಾರೋಹೆಯನ್ನು ನೃಪನು ನೋಡಿದನು. ರೂಪ, ತಪಸ್ಸು ಮತ್ತು ದಮಗಳಿಂದ ವಿಭ್ರಾಜಿಸುತ್ತಿರುವ, ಆ ರೂಪಯೌವನ ಸಂಪನ್ನೆಯನ್ನು ಉದ್ದೇಶಿಸಿ ಮಹೀಪತಿಯು ಹೇಳಿದನು:

“ಸುಶ್ರೋಣಿ! ನೀನು ಯಾರು ಮತ್ತು ಯಾರ ಮಗಳು? ಈ

ವನಕ್ಕೆ ಯಾವ ಕಾರಣಕ್ಕಾಗಿ ಆಗಮಿಸಿರುವೆ? ಈ ರೀತಿ ರೂಪ ಗುಣಯುಕ್ತೆ ನೀನು ಎಲ್ಲಿಂದ ಬಂದಿರುವೆ? ಮೊದಲನೆಯ ನೋಟದಲ್ಲಿಯೇ ನೀನು ನನ್ನ ಮನವನ್ನು ಅಪಹರಿಸಿರುವೆ. ನಿನ್ನನ್ನು ತಿಳಿಯಲು ಬಯಸುತ್ತೇನೆ. ಎಲ್ಲವನ್ನೂ ಹೇಳು."

ಆ ಅಶ್ರಮದಲ್ಲಿ ಈ ರೀತಿ ರಾಜನು ಕೇಳಲಾಗಿ ಆ ಕನ್ಯೆಯು ಮುಗುಳ್ನಗುತ್ತಾ ಸುಮಧುರಾಕ್ಷರಗಳಲ್ಲಿ ಹೇಳಿದಳು:

"ದುಃಷಂತ! ನಾನು ತಪಸ್ವಿ, ಧೃತಿಮತಿ, ಧರ್ಮಜ್ಞ ಯಶಸ್ವಿ ಭಗವಾನ್ ಕಣ್ವನ ಮಗಳು."

ದುಃಷಂತನು ಹೇಳಿದನು:

"ಲೋಕಪೂಜಿತ ಮಹಾಭಾಗ ಭಗವಾನರು ಬ್ರಹ್ಮಚಾರಿಗಳು. ಒಮ್ಮೆ ಧರ್ಮವೇ ದಾರಿತಪ್ಪಬಹುದು. ಆದರೆ ಸಂಶಿತವ್ರತರು ಎಂದೂ ತಪ್ಪುವುದಿಲ್ಲ. ವರವರ್ಣಿನೀ! ನೀನು ಹೇಗೆ ಅವರ ಮಗಳಾಗಲಿಕ್ಕೆ ಸಾಧ್ಯ? ನನ್ನ ಮನಸ್ಸಿನಲ್ಲಿರುವ ಈ ಸಂಶಯವನ್ನು ನೀನು ದೂರಮಾಡಬೇಕು."

ಶಕುಂತಲೆಯು ಹೇಳಿದಳು:

"ನಾನು ಮುನಿಯ ಮಗಳು ಹೇಗೆ ಆದನೆಂದು ನಡೆದುದೆಲ್ಲವನ್ನೂ ನಾನು ಕೇಳಿರುವ ಹಾಗೆ ಹೇಳುತ್ತೇನೆ. ರಾಜನ್! ಸವಿಸ್ತಾರವಾಗಿ ಕೇಳು. ಒಮ್ಮೆ ಋಷಿಯೋರ್ವನು


ಬಂದು ನನ್ನ ಜನ್ಮದ ಕುರಿತು ಕೇಳಿದ್ದನು. ಆಗ ನನ್ನ ಕುರಿತು ಅವನಿಗೆ ಭಗವಾನ್ ಋಷಿಯು ಹೇಳಿದ್ದುದನ್ನು ಕೇಳು. ಹಿಂದೆ ವಿಶ್ವಾಮಿತ್ರನು ಮಹಾತಪಸ್ಸನ್ನು ತಪಿಸುತ್ತಿದ್ದನು. ಇದು ಸುರಗಣೇಶ್ವರ ಶಕ್ರನನ್ನು ಸುಟ್ಟು ಕಾಡತೊಡಗಿತು. ಈ ದೀಪ್ತವೀರನು ಅವನ ತಪಸ್ಸಿನಿಂದ ತನ್ನನ್ನು ತನ್ನ ಸ್ಥಾನದಿಂದ ತೆಗೆದುಹಾಕುವನು ಎಂದು ಭೀತನಾದ ಪುರಂದರನು ಮೇನಕೆಯಲ್ಲಿ ಹೇಳಿದನು: "ಮೇನಕೇ! ಗುಣ ಮತ್ತು ದೇವತ್ವದಲ್ಲಿ ಎಲ್ಲ ಅಪ್ಸರೆಯರೆಯರಲ್ಲಿ ನೀನು ವಿಶೇಷವಾಗಿರುವೆ. ನನಗೊಂದು ಒಳ್ಳೆಯ ಕಾರ್ಯವನ್ನು ಮಾಡಿಕೊಡು. ನಾನು ಹೇಳುವುದನ್ನು ಕೇಳು. ಆದಿತ್ಯಸಂಕಾಶ ಮಹಾತಪಸ್ವಿ ವಿಶ್ವಾಮಿತ್ರನು ತಪಸ್ಸನ್ನು ಮಾಡುತ್ತಿದ್ದಾನೆ. ಆ ಘೋರ ತಪಸ್ಸಿನಿಂದ ನನ್ನ ಮನಸ್ಸು ತತ್ತರಿಸಿದೆ. ನನ್ನ ಈ ಪದದಿಂದ ನನ್ನನ್ನು ತೆಗೆದುಹಾಕಬಲ್ಲ ಉಗ್ರ ತಪಸ್ಸಿನಲ್ಲಿ ನಿರತನಾದ ಸಂಶಿತಾತ್ಮ ವಿಶ್ವಾಮಿತ್ರನಲ್ಲಿಗೆ ಹೋಗಿ ಅವನನ್ನು ಆಕರ್ಷಿಸಿ ಅವನ ತಪೋವಿಘ್ನವನ್ನು ಮಾಡುವುದು ನಿನ್ನ ಹೊಣೆಗಾರಿಕೆ. ಇದೇ ನನಗೆ ಉತ್ತಮ ಸಂತೋಷವನ್ನು ಕೊಡುವಂಥಹುದು. ರೂಪ, ಯೌವನ, ಮಾಧುರ್ಯತೆ, ಚೇಷ್ಟೆ, ಮುಗುಳ್ನಗೆ ಮತ್ತು ಮಾತುಗಳಿಂದ ಅವನಲ್ಲಿ ಲೋಭವನ್ನು ಹುಟ್ಟಿಸಿ ಅವನನ್ನು ತಪಸ್ಸಿನಿಂದ ವಂಚಿಸು."

ಮೇನಕೆಯು ಹೇಳಿದಳು: "ಭಗವನ್! ಆ ಮಹಾತಪಸ್ವಿಯು

ಮಹಾತೇಜಸ್ವಿ, ಸದಾ ಕುಪಿತನಾಗಿರುತ್ತಾನೆ. ಇದನ್ನು ನೀನು ಕೂಡ ತಿಳಿದಿದ್ದೀಯೆ. ಆ ಮಹಾತ್ಮನ ತೇಜಸ್ಸು, ತಪಸ್ಸು ಮತ್ತು ಕೋಪವು ನಿನ್ನನ್ನೂ ಕೂಡ ಉದ್ವಿಗ್ನನನ್ನಾಗಿ ಮಾಡಿದೆ. ನಾನಾದರೂ ಹೇಗೆ ಅವನಿಗೆ ಭಯಪಡದಿರಲಿ? ಮಹಾಭಾಗ ವಸಿಷ್ಠನೂ ಕೂಡ ಇವನಿಂದ ತನ್ನ ಪುತ್ರರನ್ನು ಅಕಾಲದಲ್ಲಿ ಕಳೆದುಕೊಳ್ಳಬೇಕಾಯಿತು. ಕ್ಷತ್ರಿಯನಾಗಿ ಹುಟ್ಟಿದರೂ ತನ್ನ ಬಲದಿಂದ ಬ್ರಾಹ್ಮಣನಾಗಿದ್ದಾನೆ. ಅವನು ಶೌಚಾರ್ಥವಾಗಿ ತುಂಬಾ ನೀರಿರುವ ಮತ್ತು ಆಳವಾದ ಒಂದು ನದಿಯನ್ನೇ ಸೃಷ್ಟಿಸಿದನು. ಆ ಪುಣ್ಯ ನದಿಯು ಈಗಲೂ ಲೋಕದಲ್ಲಿ ಕೌಶಿಕಿಯೆಂದು ಕರೆಯಲ್ಪಡುತ್ತಿದೆ. ಹಿಂದಿನ ಕಾಲದಲ್ಲಿ ಆ ದುರ್ಗದಲ್ಲಿ ಮಹಾತ್ಮ ಧರ್ಮಾತ್ಮ ರಾಜರ್ಷಿ ಮತಂಗನು ತನ್ನ ಪತ್ನಿಯೊಡನೆ ವ್ಯಾಧನಾಗಿ ವಾಸಿಸುತ್ತಿದ್ದನು. ದುರ್ಭಿಕ್ಷವು ಮುಗಿದ ನಂತರ ಪುನಃ ಆಶ್ರಮಕ್ಕೆ ಮರಳಿ ಬಂದು ಆ ಮುನಿ ಪ್ರಭುವು ಆ ನದಿಗೆ ಪಾರ ಎಂಬ ಹೆಸರನ್ನಿತ್ತನು. ಸಂತೋಷಗೊಂಡ ಅವನು ಮತಂಗನ ಯಜ್ಞವನ್ನು ನೆರವೇರಿಸಿಕೊಟ್ಟನು. ಭಯಪಟ್ಟ ನೀನೂ ಕೂಡ ಅಲ್ಲಿಗೆ ಹೋಗಿ ಸೋಮವನ್ನು ಸ್ವೀಕರಿಸಿದೆ. ಕೃದ್ಧನಾದ ಇವನು ಶ್ರವಣ ಮೊದಲಾದ ನಕ್ಷತ್ರಗಳನ್ನು ಸೃಷ್ಟಿಸಿ ಬೇರೆಯೇ ಒಂದು ನಕ್ಷತ್ರ ವಂಶ, ನಕ್ಷತ್ರಮಂಡಲವನ್ನು ರಚಿಸಿದನು. ಇಂಥಹ ಕಾರ್ಯಗಳನ್ನೆಲ್ಲ ಎಸಗಿದ ಅವನ ಬಳಿ ಹೋಗಲು ನನಗೆ

ಭಯ, ಉದ್ವಿಗ್ನತೆ ಉಂಟಾಗಿದೆ. ಅವನ ಕೋಪದಿಂದ ಸುಟ್ಟುಹೋಗುವುದನ್ನು ತಡೆಯಬಲ್ಲಂತಹ ಏನಾದರೂ ಉಪಾಯವನ್ನು ಹೇಳು ಪ್ರಭು! ಅವನು ತನ್ನ ತೇಜಸ್ಸಿನಿಂದ ಲೋಕಗಳನ್ನು ಸುಡಬಲ್ಲ, ತನ್ನ ಪಾದದಿಂದ ಧರಣಿಯನ್ನು ನಡುಗಿಸಬಲ್ಲ, ಮತ್ತು ಮಹಾಮೇರುವನ್ನು ಕಿತ್ತು ಬಹಳಷ್ಟು ದೂರದವರೆಗೆ ಎಸೆಯಬಲ್ಲ. ಇಂಥಹ ತಪಸ್ಸಿನಿಂದ ಪಾವಕನಂತೆ ಉರಿಯುತ್ತಿರುವ ಆ ಜಿತೇಂದ್ರಿಯನನ್ನು ನನ್ನಂಥಹ ಬಾಲಕಿಯು ಹೇಗೆ ತಾನೆ ಮುಟ್ಟಿಯಾಳು? ಅವನ ಬಾಯಿಯು ಹುತಾಶನನಂತೆ ಉರಿಯುತ್ತದೆ, ಅವನ ಕಣ್ಣುಗಳು ಸೂರ್ಯ-ಚಂದ್ರರಂತೆ, ಮತ್ತು ಅವನ ನಾಲಗೆಯು ಯಮನಂತಿವೆ. ಅಂಥವನನ್ನು ನಾನು ಹೇಗೆ ಸ್ಪರ್ಷಿಸಲಿ? ಯಮನೂ, ಸೋಮನೂ, ಮಹರ್ಷಿಗಳೂ, ಸಾಧ್ಯರೂ, ವಿಶ್ವೇದೇವತೆಗಳೂ, ವಾಲಖಿಲ್ಯರೂ ಸರ್ವರೂ ಅವನ ಪ್ರಭಾವದ ಕುರಿತು ಜಾಗರೂಕರಾಗಿರುತ್ತಾರೆ. ನನ್ನಂತಹ ಹೆಣ್ಣು ಹೇಗೆತಾನೆ ಅವನಿಗೆ ಹೆದರುವುದಿಲ್ಲ? ನೀನು ಹೇಳಿದ ಬಳಿಕ ಅವನ ಬಳಿ ಹೇಗೆ ನಾನು ಹೋಗದೇ ಇರಲಿ? ಆದರೂ ನನ್ನನು ರಕ್ಷಿಸುವ ಕುರಿತು ಏನಾದರೂ ಯೋಚಿಸು. ನಿನಗೋಸ್ಕರ ನಾನು ಹೇಗೆ ಸುರಕ್ಷಿತವಾಗಿ ಅವನ ಬಳಿ ಹೋಗಲಿ? ನಾನು ಅಲ್ಲಿ ಆಡುತ್ತಿರುವಾಗ ಮಾರುತನೂ ಅಲ್ಲಿ ಇದ್ದು ನನ್ನ ವಸ್ತ್ರವನ್ನು ಹಾರಿಸಲಿ. ಮನ್ಮಥನೂ ಅಲ್ಲಿದ್ದು ನನ್ನ

ಈ ಕಾರ್ಯದಲ್ಲಿ ನಿನ್ನ ದೇವಪ್ರಸಾದವೆಂದು ಸಹಾಯವನ್ನು ನೀಡಲಿ. ನಾನು ಋಷಿಯಲ್ಲಿ ಆಸೆಯನ್ನು ಹುಟ್ಟಿಸುವಾಗ ವಾಯುವು ವನದಿಂದ ಸುರಭಿ ಸುಗಂಧವನ್ನು ಹೊತ್ತು ತರಲಿ." ಇವೆಲ್ಲವುಗಳ ಏರ್ಪಾಡಾಯಿತೆಂದು ಖಚಿತಪಡಿಸಿಕೊಂಡು ಅವಳು ಕೌಶಿಕನ ಆಶ್ರಮಕ್ಕೆ ಬಂದಳು. ಅವಳು ಹೀಗೆ ಹೇಳಿದ ನಂತರ, ಶಕ್ರನು ಮೇನಕೆಯು ಋಷಿಯ ಸನ್ನಿಧಿಯಲ್ಲಿರುವಾಗ ವಾಯುವೂ ಕೂಡ ಅಲ್ಲಿರುವಂತೆ ಆದೇಶವನ್ನಿತ್ತನು. ಅನಂತರ ಭೀರು ವರಾರೋಹೆ ಮೇನಕೆಯು ತಪಸ್ಸಿನಿಂದ ತನ್ನ ಪಾಪಗಳನ್ನೆಲ್ಲ ಭಸ್ಮಮಾಡಿಕೊಂಡು ತಪಸ್ಸಿನಲ್ಲಿ ತೊಡಗಿದ್ದ ವಿಶ್ವಾಮಿತ್ರನ ಆಶ್ರಮಕ್ಕೆ ಬಂದು ಅವನನ್ನು ನೋಡಿದಳು. ಅವನನ್ನು ಅಭಿವಾದಿಸಿ ಅವಳು ಋಷಿಸನ್ನಿಧಿಯಲ್ಲಿ ಆಟವಾಡತೊಡಗಿದಳು. ಅದೇ ಸಮಯದಲ್ಲಿ ಮಾರುತನು ಅವಳ ಶಶಿಸನ್ನಿಭ ವಸ್ತ್ರವನ್ನು ಹಾರಿಸಿಬಿಟ್ಟನು. ಆಗ ಆ ವರವರ್ಣಿನಿಯು ನಾಚುತ್ತಾ ಮಾರುತನ ಈ ಕ್ರಿಯೆಯಿಂದ ಸಿಡುಕಿದ್ದಾಳೋ ಎಂದು ತೋರುವಂತೆ ತನ್ನ ವಸ್ತ್ರವನ್ನು ಹಿಡಿಯಲು ಅದರ ಹಿಂದೆ ಓಡತೊಡಗಿದಳು. ಅದೇ ಸಮಯದಲ್ಲಿ ಮುನಿಸತ್ತಮನು ಆ ನಗ್ನ ಮೇನಕೆಯು ಯಾವುದೇ ರೀತಿಯ ವಯಸ್ಸಿನ ಗುರುತೇ ಇಲ್ಲದ ಅತೀವ ಸುಂದರಿ ಎನ್ನುವುದನ್ನು ಗಮನಿಸಿದನು. ಅವಳ ರೂಪಗುಣವನ್ನು ಕಂಡು ಆ ವಿಪ್ರರ್ಷಭನು





ಕಾಮವಶನಾಗಿ ಅವಳ ಸಂಸರ್ಗವನ್ನು ಬಯಸಿದನು. ಅವಳನ್ನು ತನ್ನ ಬಳಿ ಬರಲು ಆಮಂತ್ರಿಸಲು ಆ ಅನಿಂದಿತೆಯು ಆಮಂತ್ರಣವನ್ನು ಸ್ವೀಕರಿಸಿದಳು. ಅವರೀರ್ವರೂ ಆ ವನದಲ್ಲಿ ಬಹಳ ಕಾಲ ರಮಿಸಿದರು. ಅವರ ಕಾಮಕೇಳಿಯಲ್ಲಿ ವರ್ಷಗಳೂ ದಿನಗಳಾಗಿ ತೋರಿದವು. ಆ ಮುನಿಯು ಮೇನಕೆಯಲ್ಲಿ ಶಕುಂತಲೆಯನ್ನು ಹುಟ್ಟಿಸಿದನು. ಮೇನಕೆಯು ಹಿಮಾಲಯದ ಕಣಿವೆಯಲ್ಲಿ ಹರಿಯುತ್ತಿರುವ ರಮ್ಯ ಮಾಲಿನೀ ನದಿಯ ತೀರಕ್ಕೆ ಹೋಗಿ ಮಗಳಿಗೆ  ಜನ್ಮವನ್ನಿತ್ತು ಅವಳನ್ನು ಅಲ್ಲಿಯೇ ಬಿಟ್ಟು, ತನ್ನ ಕಾರ್ಯವನ್ನು ಪೂರೈಸಿ ಸ್ವರ್ಗಲೋಕಕ್ಕೆ ತೆರಳಿದಳು.

ಸಿಂಹ ವ್ಯಾಘ್ರಗಳಿಂದ ಕೂಡಿದ ಆ ನಿರ್ಜನ ವನದಲ್ಲಿ ಆ ಮಗುವನ್ನು ಕಂಡ ಶಕುನ ಪಕ್ಷಿಗಳು ಅದರ ಸುತ್ತಲೂ ಕುಳಿತು ರಕ್ಷಿಸಿದವು. ಈ ರೀತಿ ಆ ಹಿಮಾಲಯದ ವನದಲ್ಲಿ ಶಕುಂತ ಪಕ್ಷಿಗಳು ಮೇನಕಾತ್ಮಜೆಯನ್ನು ಯಾವುದೇ ಮಾಂಸಾಹಾರಿ ಪ್ರಾಣಿಗಳಿಂದ ರಕ್ಷಿಸಿದವು. ಸ್ನಾನಕಾರ್ಯಗಳಿಗೆ ಹೋಗಿದ್ದ ನಾನು ಆ ನಿರ್ಜನ ವಿಪಿನಾರಣ್ಯದಲಿ ಶಕುಂತ ಪಕ್ಷಿಗಳಿಂದ ಸುತ್ತುವರೆಯಲ್ಪಟ್ಟು ಮಲಗಿದ್ದ ಈ ಮಗುವನ್ನು ನೋಡಿದೆನು. ಅವಳನ್ನು ಇಲ್ಲಿಗೆ ತಂದು ನನ್ನ ಮಗಳನ್ನಾಗಿ ಮಾಡಿಕೊಂಡೆನು. ಧರ್ಮನಿಶ್ಚಯ ಪ್ರಕಾರ ಕ್ರಮವಾಗಿ ಮೂರು ರೀತಿಯಲ್ಲಿ ತಂದೆಯೆನಿಸಿಕೊಳ್ಳಬಹುದು: ಶರೀರವನ್ನು ನೀಡುವುದರಿಂದ,

ಪ್ರಾಣವನ್ನು ರಕ್ಷಿಸುವುದರಿಂದ ಮತ್ತು ಆಹಾರವನ್ನು ನೀಡುವುದರಿಂದ. ಆ ನಿರ್ಜನ ವನದಲ್ಲಿ ಶಕುಂತಗಳಿಂದ ಪರಿರಕ್ಷಿತ ಅವಳಿಗೆ ನಾನು ಶಕುಂತಲ ಎಂಬ ಹೆಸರನ್ನಿಟ್ಟೆನು. ಈ ರೀತಿ ಶಕುಂತಲೆಯನ್ನು ನನ್ನ ಮಗಳೆಂದು ತಿಳಿಯುತ್ತೇನೆ. ಅನಿಂದಿತೆ ಶಕುಂತಲೆಯೂ ಕೂಡ ನನ್ನನ್ನು ತನ್ನ ತಂದೆಯೆಂದು ಭಾವಿಸುತ್ತಾಳೆ." "ತನ್ನನ್ನು ಕೇಳಿದಾಗ ಆ ಮಹರ್ಷಿಯು ನನ್ನ ಜನ್ಮದ ಕುರಿತು ಈ ರೀತಿ ಹೇಳಿದನು. ಮನುಜಾಧಿಪ! ಆದುದರಿಂದ ನೀನು ನನ್ನನ್ನು ಕಣ್ವನ ಸುತೆಯೆಂದೇ ತಿಳಿ. ನನ್ನ ಪಿತನಾರೆಂದು ತಿಳಿಯದ ನಾನು ಕಣ್ವನನ್ನೇ ನನ್ನ ಪಿತನೆಂದು ಭಾವಿಸುತ್ತೇನೆ. ನಾನು ಕೇಳಿದ್ದುದನ್ನು ಯಥಾವತ್ತಾಗಿ ನಿನಗೆ ಹೇಳಿದ್ದೇನೆ."

ದುಃಷಂತನು ಹೇಳಿದನು:

"ರಾಜಪುತ್ರೀ! ನೀನು ಹೇಳಿದುದೆಲ್ಲವೂ ಸಂಯುಕ್ತವಾಗಿದೆ. ನನ್ನ ಭಾರ್ಯೆಯಾಗು. ನಿನಗಾಗಿ ನಾನು ಏನು ಮಾಡಲಿ ಹೇಳು. ನಿನಗೋಸ್ಕರ ನಾನು ಇಂದೇ ಸುವರ್ಣಮಾಲೆ, ವಸ್ತ್ರಗಳು, ಕುಂಡಲಗಳು, ನಾನಾ ರೀತಿಯ ಮುತ್ತು, ವಜ್ರ, ಶುಭ್ರ ಮಣಿ ರತ್ನಗಳು, ಇನ್ನೂ ಮುಂತಾದ ವಸ್ತುಗಳನ್ನು ತರುತ್ತೇನೆ. ನನ್ನ ಸರ್ವ ರಾಜ್ಯವನ್ನೂ ನಿನಗಾಗಿ ಇಡುತ್ತೇನೆ. ಶೋಭನೇ! ನನ್ನ ಭಾರ್ಯೆಯಾಗು. ಸುಂದರಿ! ಗಾಂಧರ್ವ

ವಿವಾಹ ಮಾಡಿಕೊಳ್ಳೋಣ. ಏಕೆಂದರೆ ವಿವಾಹಗಳಲ್ಲೆಲ್ಲ ಗಾಂಧರ್ವ ವಿವಾಹವು ಶ್ರೇಷ್ಠವೆಂದು ಹೇಳುತ್ತಾರೆ."

ಶಕುಂತಲೆಯು ಹೇಳಿದಳು:

"ರಾಜನ್! ಈಗ ನನ್ನ ಪಿತನು ಫಲಾಹಾರಕ್ಕೆಂದು ಹೋಗಿದ್ದಾನೆ. ಸ್ವಲ್ಪ ಸಮಯ ಪ್ರತೀಕ್ಷಿಸು. ಅವನೇ ನನ್ನನ್ನು ನಿನಗೆ ಒಪ್ಪಿಸುತ್ತಾನೆ."

ದುಃಷಂತನು ಹೇಳಿದನು:

"ವರಾರೋಹೆ! ನೀನೇ ನನ್ನನ್ನು ಸ್ವೀಕರಿಸಬೇಕೆಂಬುದು ನನ್ನ ಇಚ್ಛೆ. ನಾನು ನಿನಗಾಗಿಯೇ ಇದ್ದೇನೆ ಮತ್ತು ನನ್ನ ಮನಸ್ಸು ನಿನ್ನಲ್ಲಿಯೇ ಇದೆ ಎನ್ನುವುದನ್ನು ತಿಳಿ. ತನಗೆ ತಾನೇ ಬಂಧು ಮತ್ತು ತನ್ನನ್ನು ತಾನೇ ಅನುಸರಿಸಬೇಕು. ಆದುದರಿಂದ ಧರ್ಮದ ಪ್ರಕಾರ ತನ್ನನ್ನು ತಾನೇ ದಾನವಾಗಿ ಕೊಟ್ಟುಕೊಳ್ಳಬೇಕು. ಧರ್ಮಸ್ಮೃತಿಗಳು ವಿವಾಹಗಳನ್ನು ಎಂಟು ಪ್ರಕಾರಗಳಲ್ಲಿ ವಿಂಗಡಿಸಿವೆ. ಬ್ರಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ಬಗೆಯವೆಂದು ಹೇಳುತ್ತಾರೆ. ಪೂರ್ವದಲ್ಲಿ ಯಾವ ಪ್ರಕಾರವು ಯಾರಿಗೆ ಧರ್ಮಸಮ್ಮತವಾದದ್ದು ಎಂದು ಸ್ವಯಂಭುವು ಮನುವಿಗೆ ಹೇಳಿದ್ದಾನೆ. ಮೊದಲನೆಯ ನಾಲ್ಕು ಪ್ರಕಾರಗಳು ಬ್ರಾಹ್ಮಣರಿಗೆ ಸರಿಯಾದದ್ದು. ಮತ್ತು

ಮೊದಲನೆಯ ಆರು ಪ್ರಕಾರಗಳು ಕ್ಷತ್ರಿಯರಿಗೆ ಧರ್ಮಯುತವಾದದ್ದು ಎಂದು ತಿಳಿ. ರಾಜರಿಗೆ ರಾಕ್ಷಸ ಪದ್ಧತಿಯ ವಿವಾಹವೂ ಕೂಡ ಸರಿಯೆನಿಸಲ್ಪಟ್ಟಿದೆ. ಅಸುರ ಪದ್ಧತಿಯು ವೈಶ್ಯ ಮತ್ತು ಶೂದ್ರರಿಗೆಂದು ಹೇಳಲ್ಪಟ್ಟಿದೆ. ಮೊದಲನೆಯ ಐದು ಪ್ರಕಾರಗಳಲ್ಲಿ, ಮೂರು ಧರ್ಮಪ್ರಕಾರವಾದದ್ದು ಮತ್ತು ಎರಡು ಅಧರ್ಮವೆಂದು ಹೇಳುತ್ತಾರೆ. ಪೈಶಾಚ ಮತ್ತು ಅಸುರ ಪ್ರಕಾರಗಳಂತೆ ಎಂದೂ ವಿವಾಹವಾಗಬಾರದು. ಧರ್ಮಸ್ಮೃತಿಗಳಲ್ಲಿ ಹೇಳಿರುವಂತಹ ಇವುಗಳೆಲ್ಲವೂ ಪರಿಪಾಲಿಸಬೇಕಾದಂಥವುಗಳು. ಗಾಂಧರ್ವ ಮತ್ತು ರಾಕ್ಷಸ ವಿವಾಹಗಳು ಕ್ಷತ್ರಿಯರಿಗೆ ಧಾರ್ಮಿಕವಾದವುಗಳು. ನೀನು ಶಂಕಿಸಬೇಡ. ಈ ಎರಡರಲ್ಲಿ ಒಂದು ಅಥವಾ ಮಿಶ್ರಣವು ಸರಿ ಎನ್ನುವುದರಲ್ಲಿ ಸಂಶಯವಿಲ್ಲ. ವರವರ್ಣಿನೀ! ನಾನು ಕಾಮದಿಂದ ತುಂಬಿದ್ದೇನೆ, ನೀನೂ ಕೂಡ ಕಾಮದಿಂದಿದ್ದೀಯೆ. ಆದ್ದರಿಂದ ನೀನು ಗಾಂಧರ್ವ ವಿವಾಹದ ಪ್ರಕಾರ ನನ್ನ ಭಾರ್ಯೆಯಾಗಬೇಕು.”

ಶಕುಂತಲೆಯು ಹೇಳಿದಳು:

“ಪೌರವಶ್ರೇಷ್ಠ! ಇವೆಲ್ಲವೂ ಧರ್ಮಪಥದಲ್ಲಿಯೇ ಇದ್ದುದಾದರೆ ಮತ್ತು ನಾನೇ ನನ್ನ ಪ್ರಭು, ಮತ್ತು ನನ್ನನ್ನು

ನಾನೇ ಕೊಡಬಲ್ಲೆ ಎನ್ನುವುದಾದರೆ, ನನ್ನ ಈ ನಿಯಮಗಳನ್ನು ಕೇಳು. ಬೇರೆ ಯಾರೂ ಇಲ್ಲದ, ನಾವಿಬ್ಬರೇ ಇರುವ ಈ ಏಕಾಂತದಲ್ಲಿ ನನಗೆ ಒಂದು ಸತ್ಯ ವಚನವನ್ನು ನೀಡು. ನನ್ನಲ್ಲಿ ಹುಟ್ಟಿದ ಪುತ್ರನು ನಿನ್ನ ನಂತರದಲ್ಲಿ ಯುವರಾಜನಾಗಬೇಕು. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಇದು ಹೀಗೆಯೇ ಆಗುವುದಾದರೆ ನನ್ನ ನಿನ್ನ ಸಂಗಮವಾಗಲಿ."

ರಾಜನು ಒಂದು ಸ್ವಲ್ಪವೂ ವಿಚಾರಿಸದೆ "ಹಾಗೆಯೇ ಆಗಲಿ" ಎಂದನು.

"ಶುಚಿಸ್ಮಿತೇ! ನಿನ್ನನ್ನು ನನ್ನ ನಗರಕ್ಕೆ ಕರೆದೊಯ್ಯುತ್ತೇನೆ. ಸತ್ಯವನ್ನು ಹೇಳಬೇಕೆಂದರೆ ನೀನು ಇವೆಲ್ಲವುಗಳಿಗೂ ಅರ್ಹೆ."

ಹೀಗೆ ಹೇಳಿ ಆ ರಾಜರ್ಷಿಯು ಅನಿಂದಿತಗಾಮಿನಿಯನ್ನು ವಿಧಿವತ್ತಾಗಿ ಪಾಣಿಗ್ರಹಣ ಮಾಡಿ, ಅವಳನ್ನು ಕೂಡಿದನು.

"ಶುಚಿಸ್ಮಿತೇ! ನಿನಗೋಸ್ಕರ ಚತುರಂಗ ಸೇನೆಯನ್ನು ಕಳುಹಿಸಿ ನಿನ್ನನ್ನು ನನ್ನ ನಿವಾಸಕ್ಕೆ ಕರೆಯಿಸಿಕೊಳ್ಳುತ್ತೇನೆ"

ಎಂದು ಪುನಃ ಪುನಃ ಆಶ್ವಾಸನೆಗಳನ್ನಿತ್ತು ಅವನು ತನ್ನ ನಗರಿಗೆ ಹಿಂದಿರುಗಿದನು. ಈ ರೀತಿ ಅವಳಿಗೆ ಭರವಸೆಯನ್ನಿತ್ತು ಆ ನೃಪನು ಹೊರಟುಹೋದನು. ಹೋಗುತ್ತಿರುವಾಗ ಆ ಪಾರ್ಥಿವನು ಮನಸ್ಸಿನಲ್ಲಿಯೇ ಕಾಶ್ಯಪನ ಕುರಿತು ಯೋಚಿಸಿದನು.

"ಆ ತಪಸ್ವಿ ಭಗವಾನನು ಇದನ್ನೆಲ್ಲ ಕೇಳಿ ಏನು

ಮಾಡುತ್ತಾನೋ"

ಎಂದು ಚಿಂತಿಸುತ್ತಾ ಅವನು ತನ್ನ ಪುರವನ್ನು ಸೇರಿದನು.

ಅವನು ಹೊರಟುಹೋದ ಸ್ವಲ್ಪ ಸಮಯದಲ್ಲಿಯೇ ಕಣ್ವನು ಆಶ್ರಮಕ್ಕೆ ಹಿಂದಿರುಗಿದನು. ಆದರೆ ಶಕುಂತಲೆಯು ನಾಚಿಕೊಂಡು ಅವನನ್ನು ಸ್ವಾಗತಿಸಲು ಹೊರಬರಲಿಲ್ಲ. ಮಹಾತಪಸ್ವಿ ಕಣ್ವನಾದರೂ ತನ್ನ ದಿವ್ಯಜ್ಞಾನದಿಂದ ಎಲ್ಲವನ್ನೂ ತಿಳಿದುಕೊಂಡನು. ತನ್ನ ದಿವ್ಯ ದೃಷ್ಟಿಯಿಂದ ಎಲ್ಲವನ್ನೂ ಕಂಡುಕೊಂಡ ಭಗವಾನನು ಸಂತೋಷಗೊಂಡು ಹೇಳಿದನು:

"ಇಂದು ನೀನು ನಾನು ಬರುವುದನ್ನು ಕಾಯದೇ ಗೌಪ್ಯವಾಗಿ ರಾಜನೊಂದಿಗೆ ಸಮಾಗಮ ಮಾಡಿದ ಕಾರ್ಯವು ಒಳ್ಳೆಯದೇ ಆಗಿದೆ. ಇದರಿಂದ ನೀನು ಧರ್ಮಘಾತಕಿಯಾಗಲಿಲ್ಲ. ಸಕಾಮಿಗಳು ಸಕಾಮದಿಂದ ಮಂತ್ರಗಳಿಲ್ಲದೆಯೇ ರಹಸ್ಯದಲ್ಲಿ ಗಾಂಧರ್ವ ವಿವಾಹವನ್ನು ಮಾಡಿಕೊಳ್ಳುವುದು ಕ್ಷತ್ರಿಯರಿಗೆ ಶ್ರೇಷ್ಠವೆಂದೇ ಹೇಳುತ್ತಾರೆ. ಶಕುಂತಲೆ! ನಿನ್ನ ಪತಿಯೆಂದು ಸ್ವೀಕರಿಸಿದ ಆ ಪುರುಷೋತ್ತಮ ದುಃಷಂತನು ಧರ್ಮಾತ್ಮನೂ ಮಹಾತ್ಮನೂ ಆಗಿದ್ದಾನೆ. ನಿನ್ನಲ್ಲಿ ಜನಿಸುವ ಪುತ್ರನು ಲೋಕದಲ್ಲಿ ಮಹಾತ್ಮನೂ ಮಹಾಬಲಶಾಲಿಯೂ ಆಗುತ್ತಾನೆ. ಅವನು ಸಾಗರದಿಂದ ಆವರಿಸಲ್ಪಟ್ಟ ಈ ಎಲ್ಲ ಮೇದಿನಿಯನ್ನೂ ಭೋಗಿಸುತ್ತಾನೆ. ಆ ಮಹಾತ್ಮನು ತನ್ನ

ವೈರಿಗಳ ವಿರುದ್ಧ ಹೊರಟಾಗ ಯಾರಿಗೂ ಅವನನ್ನು ಸೋಲಿಸಲಿಕ್ಕಾಗುವುದಿಲ್ಲ, ಮತ್ತು ಅವನು ಚಕ್ರವರ್ತಿಯೆಂದು ಎನಿಸಿಕೊಳ್ಳುತ್ತಾನೆ."

ಆಗ ಅವಳು ಅವನು ಹೊತ್ತಿದ್ದ ಫಲ ಭಾರವನ್ನು ಕೆಳಗಿಳಿಸಿ ಅವುಗಳನ್ನು ಸರಿಯಾದ ಜಾಗದಲ್ಲಿ ಇರಿಸಿ, ಅವನ ಪಾದಗಳನ್ನು ತೊಳೆದಳು. ಮುನಿಯು ವಿಶ್ರಾಂತಿ ಹೊಂದಿದ ನಂತರ ಹೇಳಿದಳು:

"ನಾನು ಪತಿಯನ್ನಾಗಿ ಸ್ವೀಕರಿಸಿದ ಆ ಪುರುಷೋತ್ತಮ ದುಃಷಂತನಿಗೆ ನೀನು ಅನುಗ್ರಹಿಸಬೇಕು."

ಕಣ್ವನು ಹೇಳಿದನು:

"ವರವರ್ಣಿನಿ! ನಿನಗೋಸ್ಕರ ಅವನಿಗೆ ನಾನು ಅನುಗ್ರಹಿಸುತ್ತೇನೆ. ನನ್ನಿಂದ ಬೇಕಾದ ನಿನಗಿಷ್ಟ ವರವೊಂದನ್ನು ಕೇಳು."

ಆಗ ದುಃಷಂತನಿಗೆ ಹಿತವನ್ನೇ ಬಯಸುತ್ತಿದ್ದ ಶಕುಂತಲೆಯು

"ಪೌರವರು ಸದಾ ಧರ್ಮಿಷ್ಠರಾಗಿರಲಿ ಮತ್ತು ಅವರಿಗೆ ಎಂದೂ ರಾಜ್ಯಚ್ಯುತಿಯಾಗದಿರಲಿ"


ಎಂದು ಕೇಳಿಕೊಂಡಳು.

"ಹಿಂದಿರುಗುತ್ತೇನೆ" ಎಂದು ಪ್ರತಿಜ್ಞೆ ಮಾಡಿ ದುಃಷಂತನು ಹೊರಟು

ಹೋದ ನಂತರ ಆ ವಾಮೋರು ಶಕುಂತಲೆಯು ಅಮಿತೌಜಸ ಕುಮಾರನಿಗೆ ಜನ್ಮವನ್ನಿತ್ತಳು. ಮೂರು ವರ್ಷಗಳು ತುಂಬಿದಾಗಲೇ ದುಃಷಂತನ ಆ ಮಗನು ಅಗ್ನಿಯ ತೇಜಸ್ಸಿನಲ್ಲಿ ಬೆಳಗುತ್ತಿದ್ದನು ಮತ್ತು ರೂಪ ಔದಾರ್ಯ ಗುಣಗಳಿಂದ ತುಂಬಿದ್ದನು. ಪುಣ್ಯಕೃತರಲ್ಲಿ ಶ್ರೇಷ್ಠ ಕಣ್ವನು ಬೆಳೆಯುತ್ತಿರುವ ಆ ಧೀಮಂತನಿಗೆ ಜಾತಕರ್ಮ ಮೊದಲಾದ ಸಂಸ್ಕಾರಗಳನ್ನು ನಡೆಯಿಸಿದನು. ಅವನ ಹಲ್ಲುಗಳು ಬಿಳಿಯಾಗಿದ್ದವು, ಸಿಂಹವನ್ನೂ ಕೊಲ್ಲಬಲ್ಲ ಶಕ್ತಿಯನ್ನು ಹೊಂದಿದ್ದನು, ಚಕ್ರದ ಗುರುತನ್ನು ಹೊಂದಿದ್ದನು, ಶ್ರೀಮಾನ್ ಕುಮಾರನು ಅಗಲವಾದ ಹಣೆ, ಮಹಾಬಲಶಾಲಿ, ದೇವಗರ್ಭದಲ್ಲಿ ಜನಿಸಿದನೋ ಅನ್ನುವ ಹಾಗೆ ಕಾಂತಿಯಿಂದ ಅಲ್ಲಿ ಬೆಳೆದನು. ಆರುವರ್ಷದವನಾಗ ಆ ಬಾಲಕನು ಕಣ್ವಾಶ್ರಮದ ಬಳಿಯಲ್ಲಿ ಹುಲಿ, ಸಿಂಹ, ವರಾಹ, ಆನೆ, ಮತ್ತು ಕಾಡೆಮ್ಮೆಗಳನ್ನು ಮರಗಳಿಗೆ ಕಟ್ಟಿ ಅವುಗಳ ಮೇಲೆ ಸವಾರಿ ಮಾಡುತ್ತಿದ್ದನು ಅಥವಾ ಹೊಡೆದು ಓಡಿಸಿ ಆಟವಾಡುತ್ತಿದ್ದನು. ಸರ್ವ ಪ್ರಾಣಿಗಳನ್ನೂ ಹತೋಟಿಯಲ್ಲಿಡುತ್ತಿರುವುದರಿಂದ ಅವನು "ಸರ್ವದಮನ" ಎಂದು ಕಣ್ವಾಶ್ರಮವಾಸಿಗಳು ಅವನಿಗೆ ಹೆಸರನ್ನಿತ್ತರು. ಹೀಗೆ ವಿಕ್ರಮ, ತೇಜಸ್ಸು ಮತ್ತು ಬಲಗಳಿಂದೊಡಗೂಡಿದ ಆ ಕುಮಾರನು 'ಸರ್ವದಮನ' ಎಂಬ ಹೆಸರಿನಿಂದ ಕರೆಯಲ್ಪಟ್ಟನು. ಅವನ ಅಮಾನುಷ ಕೃತ್ಯಗಳನ್ನು ನೋಡಿದ ಕಣ್ವ ಋಷಿಯು

"ಇವನು ಯುವರಾಜನಾಗುವ ಸಮಯ ಬಂದಿದೆ"






ಎಂದು ಶಕುಂತಲೆಗೆ ಹೇಳಿ ತನ್ನ ಶಿಷ್ಯಬಲವನ್ನು ಕರೆದು ಹೇಳಿದನು:

> "ಈ ಸರ್ವ ಲಕ್ಷಣ ಪೂಜಿತ ಶಕುಂತಲೆಯನ್ನು ಅವಳ ಪುತ್ರನೊಂದಿಗೆ ಶೀಘ್ರದಲ್ಲಿ ಆಶ್ರಮದಿಂದ ಅವಳ ಪತಿಯ ಮನೆಗೆ ಕರೆದೊಯ್ಯಿರಿ. ತನ್ನ ಬಾಂಧವರಲ್ಲಿಯೇ ಸದಾ ವಾಸಿಸಿರುವುದು ನಾರಿಗೆ ಒಳ್ಳೆಯದಲ್ಲ. ಹೀಗೆ ಇರುವುದರಿಂದ ಅವಳ ಕೀರ್ತಿ, ಚಾರಿತ್ರ ಮತ್ತು ಧರ್ಮಕ್ಕೆ ಧಕ್ಕೆಯುಂಟಾಗುತ್ತದೆ. ಆದುದರಿಂದ ಅವಳನ್ನು ಶೀಘ್ರದಲ್ಲಿಯೇ ಕರೆದೊಯ್ಯಿರಿ."

ಅವನು ಹೀಗೆ ಹೇಳಿದ ಬಳಿಕ ಸರ್ವ ಅಮಿತೌಜಸ ಶಿಷ್ಯರೂ ಶಕುಂತಲೆಯನ್ನು ಅವಳ ಪುತ್ರನ ಸಹಿತ ಕರೆದುಕೊಂಡು ಗಜಸಾಹ್ವಯಕ್ಕೆ ಹೊರಟರು. ಕಮಲಲೋಚನೆ ಶುಭ್ರೆಯು ಅಮರಗರ್ಭದ ಕಾಂತಿಯುಳ್ಳ ತನ್ನ ಪುತ್ರನನ್ನು ಕರೆದುಕೊಂಡು ದುಃಷಂತನನ್ನು ಮೊದಲಬಾರಿ ಭೆಟ್ಟಿಯಾದ ಆ ವನವನ್ನು ಬಿಟ್ಟು ಹೊರಟಳು. ರಾಜನಿಗೆ ವಾರ್ತೆಯನ್ನು ಕಳುಹಿಸಿ ಅವಳು ತನ್ನ ಆದಿತ್ಯವರ್ಚಸ ಪುತ್ರನೊಂದಿಗೆ ಪ್ರವೇಶಿಸಿದಳು. ಯಥಾವತ್ತಾಗಿ ಅವನನ್ನು ಪೂಜಿಸಿ ಶಕುಂತಲೆಯು

> "ರಾಜನ್! ಇವನು ನಿನ್ನ ಪುತ್ರ. ಇವನಿಗೆ ಯುವರಾಜ್ಯಾಭಿಷೇಕವನ್ನು ಮಾಡು"

ಎಂದಳು.



> “ರಾಜನ್! ಈ ಸುರೋಪಮನು ನನ್ನಲ್ಲಿ ಹುಟ್ಟಿದ ನಿನ್ನ ಸುತ. ನೀನು ವಚನವಿತ್ತಿದ್ದಹಾಗೆ ನಡೆದುಕೋ. ಹಿಂದೆ ಕಣ್ವಾಶ್ರಮದಲ್ಲಿ ನಮ್ಮ ಸಮಾಗಮದ ಸಮಯದಲ್ಲಿ ನೀನು ಕೊಟ್ಟಿದ್ದ ವಚನವನ್ನು ನೆನಪಿಸಿಕೋ.”

ಅವಳ ಈ ಮಾತುಗಳನ್ನು ಕೇಳಿದ ರಾಜನು ಎಲ್ಲ ನೆನಪಿಸಿಕೊಂಡರೂ ಮರೆತುಹೋದವನ ಹಾಗೆ ಹೇಳಿದನು:

> “ದುಷ್ಟ ತಾಪಸಿ! ನೀನು ಯಾರವಳು? ನಿನ್ನೊಂದಿಗೆ ಧರ್ಮ, ಅರ್ಥ ಅಥವಾ ಕಾಮದಲ್ಲಿ ಯಾವುದೇ ರೀತಿಯ ಸಂಬಂಧವನ್ನಿಟ್ಟಿದ್ದುದೂ ನನಗೆ ನೆನಪಿಲ್ಲ. ಹೊರಟು ಹೋಗು ಅಥವಾ ಇಲ್ಲಿಯೇ ಇರು ಅಥವಾ ನಿನಗಿಷ್ಟವಾದ ಹಾಗೆ ಮಾಡು.”

ಇದನ್ನು ಕೇಳಿದ ಆ ವರಾರೋಹೆ ಮನಸ್ವಿನಿಯು ನಾಚಿಕೆ-ದುಃಖಗಳಿಂದ ಮೂರ್ಛೆಗೊಂಡವಳ ಹಾಗೆ ಮರದ ಕಂಭದಂತೆ ಅಚಲಳಾಗಿ ಅಲ್ಲಿಯೇ ನಿಂತಳು. ತಕ್ಷಣವೇ ಆ ಸುಂದರಿಯ ಕಣ್ಣುಗಳು ಕೆಂಪಾದವು, ತುಟಿಗಳು ಕಂಪಿಸತೊಡಗಿದವು, ಮತ್ತು ರಾಜನನ್ನು ಸುಟ್ಟುಬಿಡುತ್ತಾಳೋ ಎನ್ನುವಂತೆ ಅವನ ಕಡೆ ನೋಡಿದಳು. ಅವಳು ತನ್ನ ತಪೋ ಬಲದಿಂದ ಏರುತ್ತಿರುವ ಸಿಟ್ಟಿನ ತೇಜಸ್ಸನ್ನು ತಡೆಹಿಡಿಯಲು ಪ್ರಯತ್ನಿಸಿದಳು. ಸ್ವಲ್ಪ ಹೊತ್ತು ಯೋಚಿಸಿ ದುಃಖ ಮತ್ತು ಕೋಪಸಮನ್ವಿತಳಾಗಿ ಸಿಟ್ಟಿನಿಂದ

ತನ್ನ ಪತಿಯನ್ನು ನೇರವಾಗಿ ನೋಡುತ್ತಾ ಹೇಳಿದಳು:

"ಮಹಾರಾಜ! ಎಲ್ಲವನ್ನು ತಿಳಿದಿದ್ದರೂ ಏನೂ ತಿಳಿಯದಿರುವವನ ಹಾಗೆ ಒಬ್ಬ ಕೀಳು ಮನುಷ್ಯನಂತೆ ಹೇಗೆ ಈ ರೀತಿ ಮಾತನಾಡುತ್ತಿರುವೆ? ನನ್ನ ಈ ಮಾತುಗಳ ಸತ್ಯ-ಅಸತ್ಯತೆಯ ಕುರಿತು ನಿನ್ನ ಹೃದಯವೇ ತಿಳಿದಿದೆ. ಆದುದರಿಂದ ಸತ್ಯವನ್ನು ಹೇಳು. ನಿನ್ನನ್ನು ನೀನೇ ಅಪಮಾನಿಸಬೇಡ. ಮನಸ್ಸಿನಲ್ಲಿ ಒಂದನ್ನು ಯೋಚಿಸಿ ಇತರರಿಗೆ ಬೇರೆಯದನ್ನೇ ತೋರಿಸುವವನು ತನ್ನ ಆತ್ಮವನ್ನೇ ಅಪಹರಿಸುವ ಕಳ್ಳನಲ್ಲವೇ? ಅವನು ಪಾಪ ಮಾಡಿದ ಹಾಗಲ್ಲವೇ? ನೀನೊಬ್ಬನೇ ಮಾಡಿದ್ದುದು ನಿನಗೊಬ್ಬನಿಗೇ ಗೊತ್ತು ಎಂದು ತಿಳಿಯಬೇಡ. ನಿನ್ನ ಹೃದಯದಲ್ಲಿ ವಾಸಿಸುವ ಅವನಿಗೆ ಎಲ್ಲವೂ ತಿಳಿದಿದೆ. ಎಲ್ಲ ಪಾಪಗಳನ್ನೂ ನೋಡುವ ಅವನ ಎದುರಿನಲ್ಲಿಯೇ ನೀನು ಹೇಗೆ ಪಾಪವನ್ನೆಸಗುತ್ತಿರುವೆ? ಪಾಪಿಯು ಪಾಪವನ್ನೆಸಗಿ ಇದು ಬೇರೆ ಯಾರಿಗೂ ತಿಳಿಯುವುದಿಲ್ಲ ಎಂದು ಭಾವಿಸುತ್ತಾನೆ. ಆದರೆ ದೇವತೆಗಳು ಮತ್ತು ತನ್ನಲ್ಲಿಯೇ ಇರುವ ಪುರುಷನು ನೋಡುತ್ತಿದ್ದಾನೆ ಎಂದು ತಿಳಿಯುವುದಿಲ್ಲ. ಆದಿತ್ಯ, ಚಂದ್ರ, ಅನಿಲ, ಅನಲ, ಆಕಾಶ, ಭೂಮಿ, ಆಪ, ಹೃದಯ, ಯಮ, ಹಗಲು, ರಾತ್ರಿ, ಸಂಧ್ಯಾ, ಧರ್ಮ ಇವೆಲ್ಲವೂ ನರನ ಪ್ರತಿಯೊಂದು ಕಾರ್ಯವನ್ನೂ ತಿಳಿದಿರುತ್ತವೆ. ಹೃದಯಸ್ಥಿತ ಕರ್ಮಸಾಕ್ಷೀ

ಕ್ಷೇತ್ರಜ್ಞನನ್ನು ಸಂತುಷ್ಟಗೊಳಿಸುವವನ ದುಷ್ಕೃತವನ್ನು ವೈವಸ್ವತ ಯಮನೂ ಸಹ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದರೆ ಆ ಪುರುಷನನ್ನು ತೃಪ್ತಿಗೊಳಿಸದ ದುರಾತ್ಮನ ಪಾಪ ಕರ್ಮಗಳನ್ನು ಯಮನು ದುಷ್ಕೃತವೆಂದು ಪರಿಗಣಿಸುತ್ತಾನೆ. ತನ್ನ ಆತ್ಮವನ್ನು ಅನಾದರಣಿಸಿ, ತನ್ನನ್ನು ಅನ್ಯಥಾ ಪ್ರತಿಪಾದಿಸುವವನನ್ನು ದೇವತೆಗಳು ಶ್ರೇಯಸ್ಸನ್ನು ನೀಡುವುದಿಲ್ಲ. ಅವನ ಸ್ವಂತ ಆತ್ಮವೂ ಕೂಡ ಅವನಿಗೆ ಶ್ರೇಯಸ್ಸನ್ನು ನೀಡುವುದಿಲ್ಲ. ಸ್ವಯಂ ತಾನಾಗಿಯೇ ಇಲ್ಲಿಗೆ ಬಂದಿರುವ ಪತಿವ್ರತೆಯನ್ನು ಅಪಮಾನಿಸಬೇಡ. ಅರ್ಘ್ಯಾರ್ಹ ನನ್ನನ್ನು ನಿನ್ನ ಭಾರ್ಯೆಯನ್ನು ಸತ್ಕರಿಸದೇ ಅವಹೇಳನಮಾಡಬೇಡ. ಈ ಸಂಸತ್ತಿನಲ್ಲಿ ನನ್ನನ್ನು ಏಕೆ ಓರ್ವ ಸಾಮಾನ್ಯ ಸ್ತ್ರೀಯಂತೆ ಕಾಣುತ್ತಿರುವೆ? ನಾನು ಸುಮ್ಮನೇ ಇಲ್ಲಿ ರೋದಿಸುತ್ತಿಲ್ಲವಲ್ಲ! ನನ್ನ ಮಾತುಗಳನ್ನು ನೀನು ಏಕೆ ಕೇಳುತ್ತಿಲ್ಲ? ದುಃಷಂತ! ಯಾಚಿಸುತ್ತಿರುವ ನನ್ನ ಮಾತಿನಂತೆ ನಡೆದುಕೊಳ್ಳದಿದ್ದರೆ ನಿನ್ನ ತಲೆಯು ನೂರಾರು ಚೂರುಗಳಾಗಿ ಒಡೆದುಹೋಗುತ್ತದೆ. ಪತಿಯು ತನ್ನ ಭಾರ್ಯೆಯನ್ನು ಪ್ರವೇಷಿಸಿ ಪುನಃ ಹುಟ್ಟಿಬರುವುದರಿಂದ ಭಾರ್ಯೆಯನ್ನು ಜಾಯಾ ಎಂದು ಪುರಾಣಗಳು, ಕವಿಗಳು ಮತ್ತು ವಿದ್ವಾಂಸರು ಕರೆಯುತ್ತಾರೆ. ಒಳ್ಳೆಯವನು ತನ್ನ ಪತ್ನಿಯಲ್ಲಿ ಮಗನನ್ನು ಪಡೆಯುತ್ತಾನೆ ಮತ್ತು ಆ ಸಂತತಿಯಿಂದ

ತನ್ನ ಪೂರ್ವ ಪಿತಾಮಹರ ಪ್ರೇತಾತ್ಮಗಳನ್ನು ಕಾಪಾಡುತ್ತಾನೆ. ಸುತನು ಪು ಎಂಬ ಹೆಸರಿನ ನರಕದಿಂದ ತನ್ನ ಪಿತೃಗಳನ್ನು ದಾಟಿಸುವುದರಿಂದ ಸ್ವಯಂ ಸ್ವಯಂಭುವೇ ಅವನನ್ನು ಪುತ್ರ ಎಂದು ಕರೆದಿದ್ದಾನೆ. ಗೃಹವನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವವಳೇ ಭಾರ್ಯೆ. ಮಕ್ಕಳಿಗೆ ತಾಯಿಯಾಗುವವಳೇ ಭಾರ್ಯೆ. ಪತಿಯಲ್ಲಿಯೇ ಪ್ರಾಣವನ್ನಿಟ್ಟವಳು ಭಾರ್ಯೆ. ಮತ್ತು ಪತಿವ್ರತೆಯಾದವಳೇ ಭಾರ್ಯೆ. ಮನುಷ್ಯನ ಅರ್ಧವೇ ಭಾರ್ಯೆ. ಭಾರ್ಯೆಯೇ ಅವನ ಶ್ರೇಷ್ಠತಮ ಸಖಿ. ಭಾರ್ಯೆಯು ತ್ರಿವರ್ಗಗಳ (ಧರ್ಮ, ಅರ್ಥ ಮತ್ತು ಕಾಮ) ಮೂಲ. ಮತ್ತು ಭಾರ್ಯೆಯೇ ಮನುಷ್ಯನ ಮಿತ್ರೆ. ಭಾರ್ಯೆಯನ್ನು ಪಡೆದವನು ಕ್ರಿಯೆಗಳನ್ನು ಮಾಡಬಹುದು. ಭಾರ್ಯೆಯನ್ನು ಹೊಂದಿದವನು ಗೃಹಸ್ಥಾಶ್ರಮವನ್ನು ನಡೆಸಬಹುದು. ಭಾರ್ಯೆಯನ್ನು ಹೊಂದಿದವರು ಸಂತೋಷದಿಂದಿರುವರು. ಮತ್ತು ಭಾರ್ಯೆಯನ್ನು ಹೊಂದಿದವರು ಧನವನ್ನೂ ಹೊಂದುವರು. ಅವಳು ಏಕಾಂತದಲ್ಲಿ ಸಖನಂತೆ ಪ್ರೀತಿಯ ಮಾತುಗಳನ್ನಾಡುತ್ತಾಳೆ, ಧರ್ಮಕಾರ್ಯಗಳಲ್ಲಿ ತಂದೆಯಂತಿರುತ್ತಾಳೆ ಮತ್ತು ಆರ್ತ ಸಮಯದಲ್ಲಿ ತಾಯಿಯಂತಿರುತ್ತಾಳೆ. ಕಾನನದಲ್ಲಿ ಅಲೆಯುತ್ತಿರುವವನಿಗೆ ಕೂಡ ಅವಳು ವಿಶ್ರಾಮವಿದ್ದಂತೆ. ಪತ್ನಿಸಹಿತನಾದವನನ್ನು ಎಲ್ಲರೂ ವಿಶ್ವಾಸದಿಂದ ಕಾಣುತ್ತಾರೆ.

ಆದುದರಿಂದ ಪತ್ನಿಯು ಪರಮ ಗತಿಯನ್ನು ನೀಡುತ್ತಾಳೆ. ಪತಿಯು ಯಮಲೋಕಕ್ಕೆ ಹೋದಾಗ ಅವನನ್ನು ಹಿಂಬಾಲಿಸುವವಳು ಅವನ ಪತಿವ್ರತೆ ಪತ್ನಿಯೇ! ಒಂದುವೇಳೆ ಭಾರ್ಯೆಯೇ ಮೊದಲು ತೀರಿಕೊಂಡರೆ ಅವಳು ತನ್ನ ಪತಿಗಾಗಿ ಅಲ್ಲಿ ಕಾಯುತ್ತಾಳೆ. ಗಂಡನೇ ಮೊದಲು ತೀರಿಕೊಂಡರೆ, ಆ ಸಾಧ್ವಿಯು ಅವನನ್ನು ಅನುಸರಿಸುತ್ತಾಳೆ. ಈ ಎಲ್ಲ ಕಾರಣಗಳಿಂದ ಪಾಣಿಗ್ರಹಣವಿದೆ. ಪತಿಯು ತನ್ನ ಭಾರ್ಯೆಯನ್ನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅನುಭವಿಸುತ್ತಾನೆ. ತಾನೇ ತನ್ನ ಪುತ್ರನಾಗಿ ಜನಿಸುತ್ತಾನೆ ಎಂದು ತಿಳಿದವರು ಹೇಳುತ್ತಾರೆ. ಆದ್ದರಿಂದ ಮನುಷ್ಯನು ತನ್ನ ಮಗನ ತಾಯಿಯನ್ನು ತನ್ನ ತಾಯಿಯ ಹಾಗೆಯೇ ಕಾಣಬೇಕು. ಕನ್ನಡಿಯಲ್ಲಿ ಕಂಡಂತೆ ಭಾರ್ಯೆಯಿಂದ ಜನಿಸಿದ ಪುತ್ರನ ಮುಖದಲ್ಲಿ ತನ್ನನ್ನು ತಾನೇ ಕಾಣುತ್ತಾನೆ ಮತ್ತು ಪುಣ್ಯಕರ್ಮಗಳಿಂದ ಸ್ವರ್ಗವನ್ನು ಸೇರಿದ ಸಂತೋಷವನ್ನು ಪಡೆಯುತ್ತಾನೆ. ಮನೋದುಃಖ, ವ್ಯಾಧಿ ಮತ್ತು ಆತುರತೆಯಿಂದ ಸುಡುತ್ತಿದ್ದ ನರನಿಗೆ ತನ್ನ ಹೆಂಡತಿಯನ್ನು ನೋಡಿದರೆ ಬೇಸಿಗೆಯ ಬಿಸಿಲಿನಿಂದ ಬಳಲಿತ್ತಿರುವವನು ತಣ್ಣೀರಿನ ಸ್ನಾನಮಾಡಿದಷ್ಟು ಸಂತೋಷವಾಗುತ್ತದೆ. ತಿಳಿದವನು ಕೋಪದಲ್ಲಿಯೂ ತನ್ನ ಪತ್ನಿಗೆ ಇಷ್ಟವಾಗಿಲ್ಲದುದನ್ನು ಮಾಡಬಾರದು; ಯಾಕೆಂದರೆ,

ಸಂತೋಷ, ಪ್ರೀತಿ, ಧರ್ಮ ಮತ್ತು ಎಲ್ಲವೂ ಪತ್ನಿಯನ್ನು ಅವಲಂಬಿಸಿರುತ್ತದೆ. ತನ್ನನ್ನು ತಾನೇ ಹುಟ್ಟಿಸಿಕೊಳ್ಳುವ ಸನಾತನ ಪುಣ್ಯ ಕ್ಷೇತ್ರ ಹೆಣ್ಣು. ಋಷಿಗಳಿಗೂ ಕೂಡ ಹೆಣ್ಣಿಲ್ಲದೇ ಸಂತತಿಯನ್ನು ಹುಟ್ಟಿಸಲು ಶಕ್ತಿಯೆಲ್ಲಿದೆ? ಧೂಳು ಕೊಳಕುಗಳಿಂದ ತುಂಬಿದ್ದರೂ ತನ್ನ ಮಗನು ಓಡಿ ಬಂದು ಬಿಗಿದಪ್ಪಿದಾಗ ಆಗುವ ಸಂತೋಷಕ್ಕಿಂತಲೂ ಹೆಚ್ಚಿನ ಸಂತೋಷ ಇನ್ನು ಯಾವುದಿದೆ? ತಾನಾಗಿಯೇ ಬಂದಿರುವ, ನಿನ್ನನ್ನು ಅಭಿಲಾಷೆಯ ದೃಷ್ಠಿಯಿಂದ ನೋಡುತ್ತಿರುವ ಈ ನಿನ್ನ ಮಗನನ್ನು ನೀನು ಏಕೆ ತಿರಸ್ಕಾರ ದೃಷ್ಠಿಯಿಂದ ನೋಡುತ್ತಿರುವೆ? ಇರುವೆಗಳೂ ಕೂಡ ತಮ್ಮ ಮೊಟ್ಟೆಗಳನ್ನು ಒಡೆಯದ ಹಾಗೆ ರಕ್ಷಿಸುತ್ತವೆ. ಧರ್ಮಜ್ಞನಾದ ನೀನು ಏಕೆ ನಿನ್ನ ಸ್ವಂತ ಮಗನನ್ನು ಪಾಲಿಸುವುದಿಲ್ಲ? ತನ್ನ ಮಗುವಿನ ಗಾಢ ಆಲಿಂಗನ, ಸ್ಪರ್ಷ ಮತ್ತು ಸುವಾಸನೆಯು ಕೊಡುವಷ್ಟು ಸುಖವನ್ನು ಸುಗಂಧವಾಗಲೀ, ಸ್ತ್ರೀಯಾಗಲೀ, ನೀರಾಗಲೀ ಕೊಡುವುದಿಲ್ಲ. ದ್ವಿಪದರಲ್ಲಿ ಬ್ರಾಹ್ಮಣರು ಹೇಗೆ ಶ್ರೇಷ್ಠರೋ, ಚತುಷ್ಪದರಲ್ಲಿ ಗೋವುಗಳು ಹೇಗೆ ಶ್ರೇಷ್ಠವೋ, ಹಿರಿಯರಲ್ಲಿ ಗುರುವು ಹೇಗೆ ಶ್ರೇಷ್ಠವೋ, ಹಾಗೆ ಸ್ಪರ್ಷದಲ್ಲಿ ಪುತ್ರನೇ ಶ್ರೇಷ್ಠ. ಈ ಪ್ರಿಯದರ್ಶನ ಪುತ್ರನು ನಿನ್ನನ್ನು ಆಲಿಂಗಿಸಿ ಸ್ಪರ್ಷಿಸಲಿ. ಪುತ್ರಸ್ಪರ್ಷ ಸುಖಕ್ಕಿಂತ ಹೆಚ್ಚಿನದು ಈ ಲೋಕದಲ್ಲಿ ಇನ್ನಿಲ್ಲ. ಮೂರು ವರ್ಷಗಳು ಪೂರ್ಣವಾದ

ನಂತರ ನಾನು ನಿನ್ನ ಈ ಶೋಕಪ್ರಾಣಾಶ ಕುಮಾರನಿಗೆ ಜನ್ಮವಿತ್ತಿದ್ದೇನೆ. ಹಿಂದೆ ನಾನು ಸೂತಕದಲ್ಲಿದ್ದಾಗ ಇವನು ಒಂದು ನೂರು ಅಶ್ವಮೇಧ ಯಜ್ಞಗಳನ್ನು ನಡೆಸುತ್ತಾನೆ ಎಂದು ಆಕಾಶದಲ್ಲಿ ಅಶರೀರವಾಣಿಯಾಯಿತು. ಮನೆಯನ್ನು ಬಿಟ್ಟು ದೂರ ಪ್ರಯಾಣಮಾಡುವವರು ಬೇರೊಬ್ಬರ ಮಕ್ಕಳನ್ನು ತಮ್ಮ ತೊಡೆಯಮೇಲಿರಿಸಿ, ಅವರ ತಲೆಯನ್ನು ಸೂಸಿ ತಮ್ಮ ಮಕ್ಕಳ ಆನಂದವನ್ನು ಪಡೆಯುತ್ತಾರೆ. ಮಕ್ಕಳ ಜಾತಕರ್ಮದ ಸಮಯದಲ್ಲಿ ದ್ವಿಜರು ಹೇಳುವ ಈ ಮಂತ್ರಗಳನ್ನು ನೀನೂ ಕೂಡ ಕೇಳಿರಬಹುದು. ನೀನು ನನ್ನ ಅಂಗಗಳಿಂದ ಸಂಭವಿಸಿರುವೆ. ಹೃದಯದಿಂದ ಹುಟ್ಟಿರುವೆ. ಪುತ್ರನಾಗಿರುವ ನೀನು ನಾನೇ. ನೂರು ಸಂವತ್ಸರಗಳನ್ನು ಜೀವಿಸು. ನನ್ನ ಪೋಷಣೆಯು ನಿನ್ನನ್ನವಲಂಬಿಸಿದೆ. ನನ್ನ ಸಂತಾನವೂ ನಿನ್ನಿಂದ ಅಕ್ಷಯವಾಗುತ್ತದೆ. ನಿನ್ನಿಂದಲೇ ನನಗೆ ಜೀವ. ನೂರು ಸಂವತ್ಸರಗಳು ಸುಖವಾಗಿ ಬಾಳು. ಇವನು ನಿನ್ನ ಅಂಗಗಳಿಂದ ಹುಟ್ಟಿದವನು, ಪುರುಷನಿಂದ ಹುಟ್ಟಿದ ಇನ್ನೊಬ್ಬ ಪುರುಷನು. ತಿಳಿ ಕೊಳದಂತಿರುವ ನಿನ್ನ ಮಗನಲ್ಲಿ ನಿನ್ನನ್ನೇ ಕಾಣು. ಗಾರ್ಹಪತ್ಯದ ಅಗ್ನಿಯಿಂದ ಹೇಗೆ ಯಜ್ಞೇಶ್ವರನು ಹುಟ್ಟುತ್ತಾನೋ ಹಾಗೆ ಈ ಮಗುವೂ ಕೂಡ ನಿನ್ನಿಂದಲೇ ಹುಟ್ಟಿದವನು. ನೀನು ಒಬ್ಬನೇ ಆದರೂ ನಿನ್ನನ್ನು ನೀನೇ ಎರಡಾಗಿ ವಿಭಜನೆಗೊಂಡಿದ್ದೀಯೆ. ಮೃಗಗಳ

ಬೇಟೆಗೆಂದು ಬಂದು ಆಯಾಸಗೊಂಡಾಗ ನೀನು ಕುಮಾರಿಯಾಗಿದ್ದ ನನ್ನನ್ನು ನನ್ನ ತಂದೆಯ ಆಶ್ರಮದಲ್ಲಿ ಪಡೆದಿದ್ದೆ. ಊರ್ವಶೀ, ಪೂರ್ವಚಿತ್ತಿ, ಸಹಜನ್ಯ, ಮೇನಕಾ, ವಿಶ್ವಾ, ಮತ್ತು ಘೃತಾಚೀ ಈ ಆರು ಮಂದಿ ಅಪ್ಸರೆಯರಲ್ಲಿ ಶ್ರೇಷ್ಠರು. ಅವರಲ್ಲಿಯೇ ಶ್ರೇಷ್ಠ ಬ್ರಹ್ಮಯೋನಿಯಲ್ಲಿ ಜನಿಸಿದ ಮೇನಕಾ ಎಂಬ ಹೆಸರಿನ ಅಪ್ಸರೆಯು ಸ್ವರ್ಗದಿಂದ ಕೆಳಗಿಳಿದು ವಿಶ್ವಾಮಿತ್ರನಿಂದ ನನಗೆ ಜನ್ಮವಿತ್ತಳು. ಅಪ್ಸರೆ ಮೇನಕಾ ನನ್ನನ್ನು ಹಿಮಾಲಯದ ತಪ್ಪಲಿನಲ್ಲಿ ಜನ್ಮವಿತ್ತಳು. ಆ ವಾತ್ಸಲ್ಯವಿಹೀನಳು ಬೇರೆ ಯಾರದ್ದೋ ಮಗುವಿನಂತೆ ನನ್ನನ್ನು ಅಲ್ಲಿಯೇ ಬಿಟ್ಟು ಹೊರಟುಹೋದಳು. ಹಿಂದಿನ ಜನ್ಮದಲ್ಲಿ ನಾನು ಯಾವ ಅಶುಭ ಕರ್ಮವನ್ನು ಮಾಡಿದ್ದೆನೋ ಏನೋ ಬಾಲ್ಯದಲ್ಲಿಯೇ ನನ್ನ ತಂದೆತಾಯಿಗಳು ಬಿಟ್ಟುಹೋದರು. ಈಗ ನಿನ್ನಿಂದ ನಾನು ಪರಿತ್ಯಜಿಸಲ್ಪಟ್ಟಿದ್ದೇನೆ. ನಿನ್ನಿಂದ ಪರಿತ್ಯಕ್ತಳಾದರೆ ನಾನು ಆಶ್ರಮಕ್ಕೆ ಹಿಂದಿರುಗಲು ತಯಾರಿದ್ದೇನೆ. ಆದರೆ ನಿನ್ನದೇ ಮಗನಾಗಿರುವ ಈ ಬಾಲಕನನ್ನು ನೀನು ತ್ಯಜಿಸುವುದು ಸರಿಯಲ್ಲ."

ದುಃಷಂತನು ಹೇಳಿದನುಃ

"ಶಕುಂತಲೇ! ನಿನ್ನಲ್ಲಿ ಹುಟ್ಟಿದ ಈ ಪುತ್ರನು ನನಗೆ ಗೊತ್ತೇ ಇಲ್ಲ. ಸಾಧಾರಣವಾಗಿ ನಾರಿಯರು ಅಸತ್ಯವನ್ನೇ

ನುಡಿಯುವರು. ನಿನ್ನ ಈ ಮಾತುಗಳನ್ನು ಯಾರುತಾನೆ ನಂಬುವರು? ಅನುಕಂಪವಿಲ್ಲದ ವೇಶ್ಯೆ ನಿನ್ನ ಜನನಿ ಮೇನಕೆಯು ದೇವರಿಗೇರಿಸಿದ ಮಾಲೆಯನ್ನು ಹೇಗೋ ಹಾಗೆ ನಿನ್ನನ್ನು ಹಿಮಾಲಯದಲ್ಲಿ ಬಿಸುಟು ಹೋದಳು. ಕ್ಷತ್ರಿಯನಾಗಿ ಹುಟ್ಟಿಯೂ ಬ್ರಾಹ್ಮಣತ್ವದ ಆಸೆಗೊಳಗಾದ ಕಾಮಪರಾಯಣ ನಿನ್ನ ಪಿತ ವಿಶ್ವಾಮಿತ್ರನಿಗೂ ಅನುಕಂಪವಿರಲಿಲ್ಲ. ಮೇನಕೆಯು ಅಪ್ಸರೆಯರಲ್ಲಿ ಮತ್ತು ನಿನ್ನ ಪಿತನು ಮಹರ್ಷಿಗಳಲ್ಲಿ ಶ್ರೇಷ್ಠರೆನಿಸಿದರೂ ಅವರ ಮಗಳಾದ ನೀನು ಯಾವ ಕಾರಣಕ್ಕಾಗಿ ಈ ರೀತಿ ನೆಲೆಗೋಸ್ಕರ ಅಲೆಯುತ್ತಿರುವೆ? ನಿನ್ನ ಈ ಮಾತುಗಳಲ್ಲಿ ಸ್ವಲ್ಪವೂ ವಿಶ್ವಾಸ ಬರುತ್ತಿಲ್ಲ. ಈ ರೀತಿ ವಿಶೇಷತಃ ನನ್ನ ಎದುರು ಇದನ್ನೆಲ್ಲಾ ಹೇಳಿಕೊಳ್ಳಲು ನಾಚಿಕೆಯಾದರೂ ಆಗುತ್ತಿಲ್ಲವೇ? ದುಷ್ಟ ತಾಪಸಿ! ಹೊರಟು ಹೋಗು. ಸದ್ವೈವರಲ್ಲಿ ಅಗ್ರ ಮಹರ್ಷಿಯೆಲ್ಲಿ? ಅಪ್ಸರೆ ಮೇನಕೆ ಎಲ್ಲಿ? ತಾಪಸೀ ವೇಷಧಾರಿಣಿ ಕೃಪಣೆ ನೀನಾದರೂ ಎಲ್ಲಿದ್ದೀಯೆ? ನಿನ್ನ ಈ ಪುತ್ರನು ಅತಿಕಾಯನಾಗಿ ತೋರುತ್ತಿದ್ದಾನೆ, ಬಾಲಕನಾದರೂ ಬಲಶಾಲಿಯಾಗಿದ್ದಾನೆ. ಈ ಅಲ್ಪ ಕಾಲದಲ್ಲಿಯೇ ಇವನು ಹೇಗೆ ಶಾಲಸ್ಕಂಧದ ಹಾಗೆ ಬೆಳೆದಿದ್ದಾನೆ? ಮೇನಕೆಯ ಕಾಮರಾಗದಿಂದ ಜನಿಸಿದ ನೀನು ನೀಚ ಯೋನಿಯಲ್ಲಿ ಜನಿಸಿದವಳು. ನನಗೆ ವ್ಯಭಿಚಾರಿಣಿಯಂತೆ ತೋರುತ್ತಿರುವೆ. ತಾಪಸಿ! ನೀನು ಹೇಳುತ್ತಿರುವ ಸರ್ವವೂ

ನನಗೆ ತಿಳಿಯದಾಗಿದೆ. ನನಗೆ ನೀನು ಗೊತ್ತೇ ಇಲ್ಲ. ನಿನಗಿಷ್ಟವಾದಲ್ಲಿ ನೀನು ಹೋಗಬಹುದು."

ಶಕುಂತಲೆಯು ಹೇಳಿದಳು:

"ರಾಜನ್! ನೀನು ಇನ್ನೊಬ್ಬರ ತಪ್ಪು ಸಾಸಿವೆ ಕಾಳಿನಷ್ಟು ಸಣ್ಣದಾಗಿದ್ದರೂ ಗಮನಿಸುತ್ತೀಯೆ. ಆದರೆ ನಿನ್ನ ತಪ್ಪು ಬಿಲ್ವದಷ್ಟು ದೊಡ್ಡದಾಗಿದ್ದರೂ ನೋಡಿದರೂ ನೋಡದಂತೆ ಇದ್ದೀಯೆ. ಮೇನಕೆಯು ದೇವಲೋಕದವಳು ಮತ್ತು ದೇವತೆಗಳಲ್ಲೇ ಶ್ರೇಷ್ಠಳೆಂದೆನಿಸಿಕೊಂಡವಳು. ಹೀಗೆ ನನ್ನ ಜನ್ಮವು ನಿನ್ನ ಜನ್ಮಕ್ಕಿಂತಲೂ ಶ್ರೇಷ್ಠವಾದದ್ದು. ನೀನು ಭೂಮಿಯ ಮೇಲೆ ನಡೆಯುತ್ತೀಯೆ. ನಾನು ಅಂತರಿಕ್ಷದಲ್ಲಿ ಸಂಚರಿಸುತ್ತೇನೆ. ನನ್ನ ಮತ್ತು ನಿನ್ನ ನಡುವಿನ ಅಂತರ ಮೇರು ಮತ್ತು ಸಾಸಿವೆ ಕಾಳುಗಳ ನಡುವಿರುವ ಅಂತರವೆಂದು ತಿಳಿ. ನನ್ನ ಪ್ರಭಾವವನ್ನು ನೋಡು. ನಾನು ಮಹೇಂದ್ರ, ಕುಬೇರ, ಯಮ, ಮತ್ತು ವರುಣರ ಭವನಗಳಿಗೆ ಹೋಗಬಲ್ಲೆ. ಸತ್ಯವನ್ನು ತೋರಿಸಬಲ್ಲ ಒಂದು ಗಾದೆಯನ್ನು ಹೇಳುತ್ತೇನೆ ಕೇಳು. ಇದನ್ನು ದ್ವೇಷದಿಂದ ಹೇಳುತ್ತಿಲ್ಲ. ಒಂದು ನಿದರ್ಶನದ ರೂಪದಲ್ಲಿ ಹೇಳುತ್ತಿದ್ದೇನೆ. ಇದನ್ನು ಕೇಳಿ ನನ್ನನ್ನು ಕ್ಷಮಿಸಬೇಕು. ವಿರೂಪನು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುವವರೆಗೆ ಎಲ್ಲರಿಗಿಂತ ತಾನೇ ರೂಪವಂತನೆಂದು

ತಿಳಿದುಕೊಂಡಿರುತ್ತಾನೆ. ತನ್ನ ವಿಕೃತ ಮುಖವನ್ನು ಕನ್ನಡಿಯಲ್ಲಿ ನೋಡಿದಾಗಲೇ ಅವನಿಗೆ ತನ್ನ ಮತ್ತು ಇತರರ ನಡುವಿನ ವ್ಯತ್ಯಾಸ ಅರಿವಾಗುತ್ತದೆ. ಅತೀವ ರೂಪಸಂಪನ್ನನು ಇತರರನ್ನು ಎಂದೂ ಅವಹೇಳನ ಮಾಡುವುದಿಲ್ಲ. ಅನ್ಯರನ್ನು ಅತೀವವಾಗಿ ಅವಹೇಳನ ಮಾಡುವವನು ವಿಹಟಕನೆಂದು ಅನ್ನಿಸಿಕೊಳ್ಳುತ್ತಾನೆ. ಹಂದಿಯು ಹೇಗೆ ಹೂವಿನ ತೋಟದಿಂದಲೂ ಹೊಲಸನ್ನೇ ಹೆಕ್ಕುತ್ತದೆಯೋ ಹಾಗೆ ಮೂರ್ಖನೂ ಕೂಡ ಶುಭಾಶುಭಮಾತುಗಳಲ್ಲಿ ಅಶುಭ ಮಾತುಗಳನ್ನೇ ಆರಿಸುತ್ತಾನೆ. ನೀರಿನಿಂದ ಕೂಡಿದ ಕ್ಷೀರದಿಂದ ಹಂಸವು ಕ್ಷೀರವನ್ನೇ ಹೇಗೆ ಆರಿಸುತ್ತದೆಯೋ ಹಾಗೆ ಪ್ರಾಜ್ಞರೂ ಕೂಡ ಶುಭಾಶುಭ ವಚನಗಳಿಂದ ಶುಭಮಾತುಗಳನ್ನೇ ಕೇಳುತ್ತಾರೆ. ಸಾಧು ಜನರು ಅನ್ಯರ ಕುರಿತು ಕೀಳು ಮಾತನ್ನಾಡುವಾಗ ಬಹಳಷ್ಟು ವೇದನೆಗೊಳಗಾಗುತ್ತಾರೆ. ಆದರೆ ದುರ್ಜನರು ಅನ್ಯರ ನಿಂದನೆಗೈಯುವುದರಲ್ಲಿಯೇ ಸಂತುಷ್ಟರಾಗುತ್ತಾರೆ. ಸಂತರು ವೃದ್ಧರನ್ನು ಗೌರವಿಸುವುದರಲ್ಲಿ ಸಂತೋಷ ಹೊಂದುತ್ತಾರೆ. ಆದರೆ ಮೂರ್ಖ ಜನರು ಸಜ್ಜನರನ್ನು ಅವಹೇಳನ ಮಾಡುವುದರಲ್ಲಿ ಸಂತೋಷ ಹೊಂದುತ್ತಾರೆ. ಸಂತರು ಇನ್ನೊಬ್ಬರಲ್ಲಿ ದೋಷವನ್ನು ಕಾಣದೆಯೇ ಸುಖದಿಂದಿರುವರು; ಮೂರ್ಖರು ದೋಷವನ್ನು ಹುಡುಕುವುದರಲ್ಲಿಯೇ ಸುಖವನ್ನು

ಹೊಂದುವರು. ಈ ಲೋಕದಲ್ಲಿ ಇದಕ್ಕಿಂತ ಬೇರೆ ಹಾಸ್ಯದ ವಿಷಯವಾದರೂ ಏನಿದೆ? ಇಲ್ಲಿ ಸಜ್ಜನರನ್ನು ಸ್ವಯಂ ದುರ್ಜನರೇ ದುರ್ಜನರೆಂದು ಕರೆಯುತ್ತಿರುವರಲ್ಲ? ನಾಸ್ತಿಕರೂ ಕೂಡ ಸತ್ಯಧರ್ಮದಿಂದ ಚ್ಯುತರಾದವರನ್ನು ಕಂಡರೆ ಘೋರ ವಿಷಸರ್ಪವನ್ನು ಕಂಡಂತೆ ಭಯಪಡುತ್ತಾರೆ. ನನ್ನಂಥಹ ಆಸ್ತೀಕರ ಗತಿಯೇನು? ಸದೃಶ ಪುತ್ರನನ್ನು ಸ್ವಯಂ ಹುಟ್ಟಿಸಿ ಅವನನ್ನು ಸ್ವೀಕರಿಸದಿರುವವನ ಶ್ರಿಯನ್ನು ದೇವತೆಗಳು ನಾಶಪಡಿಸುತ್ತಾರೆ ಮತ್ತು ಅವನಿಗೆ ಉತ್ತಮ ಲೋಕವು ದೊರೆಯುವುದಿಲ್ಲ. ಪುತ್ರನು ಕುಲವಂಶ ಪ್ರತಿಷ್ಠನೆಂದು ಪಿತೃಗಳು ಹೇಳುತ್ತಾರೆ. ಪುತ್ರನಿಗೆ ಜನ್ಮ ನೀಡುವುದು ಸರ್ವಧರ್ಮಗಳಲ್ಲಿ ಉತ್ತಮವೆಂದು ಹೇಳುತ್ತಾರೆ.  ಆದುದರಿಂದ ಪುತ್ರನನ್ನು ತ್ಯಜಿಸಬಾರದು. ಸ್ವಪತ್ನಿಯಲ್ಲಿ ಪಡೆದವನು, ಬೇರೆಯವರಿಂದ ಪಡೆದವನು, ಖರೀದಿಸಿಕೊಂಡವನು, ವಾತ್ಸಲ್ಯದಿಂದ ಬೆಳೆಸಲ್ಪಟ್ಟವನು, ಮತ್ತು ಅಪತ್ನಿಯಿಂದ ಜನಿಸಿದವನು ಹೀಗೆ ಐದು ತರಹದ ಪುತ್ರರ ಕುರಿತು ಮನುವು ಹೇಳುತ್ತಾನೆ. ಪುತ್ರರು ನರನ ಧರ್ಮ ಕೀರ್ತಿಯನ್ನು ವೃದ್ಧಿಸುತ್ತಾರೆ, ಮನಸ್ಸಿನ ಸಂತೋಷವನ್ನು ವರ್ಧಿಸುತ್ತಾರೆ, ನರಕಕ್ಕೆ ಹೋಗಬಹುದಾದವರನ್ನು ಬಿಡುಗಡೆಗೊಳಿಸುತ್ತಾರೆ. ಆದುದರಿಂದ ನಿನ್ನ ಪುತ್ರನನ್ನು ತ್ಯಜಿಸುವುದು ಸರಿಯಲ್ಲ. ನಿನ್ನ

ಸತ್ಯ-ಧರ್ಮವನ್ನು ಪರಿಪಾಲಿಸು. ನಿನ್ನಂಥವನಿಗೆ ಈ ವಿಷಯದಲ್ಲಿ ಕಪಟನಾಗುವುದು ಸರಿಯಲ್ಲ. ನೂರು ಯಾಗಗಳನ್ನು ಮಾಡುವುದಕ್ಕಿಂತ ನೂರು ಬಾವಿಗಳನ್ನು ತೋಡುವುದೇ ಶ್ರೇಷ್ಠ; ನೂರು ಯಾಗಗಳನ್ನು ಮಾಡುವುದಕ್ಕಿಂಥ ಒಂದು ಪುತ್ರನನ್ನು ಪಡೆಯುವುದು ಶ್ರೇಷ್ಠ; ಆದರೆ ನೂರು ಪುತ್ರರಿಗಿಂತಲೂ ಶ್ರೇಷ್ಠವಾದದ್ದು ಸತ್ಯ. ಸಹಸ್ರ ಅಶ್ವಮೇಧಗಳನ್ನು ಮತ್ತು ಸತ್ಯವನ್ನೂ ತುಲನೆ ಮಾಡಿದರೆ, ಸಹಸ್ರ ಅಶ್ವಮೇಧಗಳಿಗಿಂತಲೂ ಸತ್ಯವೇ ವಿಶೇಷವಾಗುತ್ತದೆ. ರಾಜನ್! ಸತ್ಯವು ಸರ್ವವೇದಗಳ ಪಾಂಡಿತ್ಯ ಮತ್ತು ಸರ್ವ ತೀರ್ಥಗಳ ಯಾತ್ರೆಗೆ ಸಮವೆಂದು ಹೇಳುತ್ತಾರೆ. ಇದಕ್ಕೆ ಸರಿಯಾದುದು ಇನ್ನು ಯಾವುದೂ ಇಲ್ಲ. ಸತ್ಯಕ್ಕಿಂತಲೂ ಶ್ರೇಷ್ಠವಾದ ಧರ್ಮವಿಲ್ಲ, ಸತ್ಯಕ್ಕಿಂತಲೂ ಶ್ರೇಷ್ಠವಾದದ್ದು ಯಾವುದೂ ಇಲ್ಲ. ಅನೃತಕ್ಕಿಂತಲೂ ತೀವ್ರತರ ಪಾಪವಾದರೂ ಏನು? ಸತ್ಯವೇ ಪರಬ್ರಹ್ಮ, ಸತ್ಯವೇ ಪರಮ ತಪಸ್ಸು. ನಿನ್ನ ವಚನವನ್ನು ತೊರೆಯಬೇಡ! ನೀನು ಸತ್ಯದಲ್ಲಿ ಒಂದಾಗು. ಸುಳ್ಳು ನಿನ್ನನ್ನು ಬಿಡದಿದ್ದರೆ ಅಥವಾ ನನ್ನಲ್ಲಿ ನಿನಗೆ ವಿಶ್ವಾಸವಿಲ್ಲದಿದ್ದರೆ ನಾನೇ ಇಲ್ಲಿಂದ ಹೊರಟು ಹೋಗುತ್ತೇನೆ. ನನಗೆ ನಿನ್ನ ಜೊತೆ ಇರುವುದು ಬೇಡ. ದುಃಷಂತ! ನಿನ್ನ ನಂತರ ನಾಲ್ಕೂ ಎಡೆಯಲ್ಲಿ ಸಮುದ್ರದಿಂದ ಕೂಡಿದ ಈ ಶೈಲರಾಜವತಂಸಕ ಭೂಮಿಯನ್ನು ನನ್ನ ಈ ಪುತ್ರನು

ಆಳುವನು.”

ಈ ಮಾತುಗಳನ್ನಾಡಿದ ಶಕುಂತಲೆಯು ಹಿಂದಿರುಗುತ್ತಿದ್ದಂತೆಯೇ ಋತ್ವಿಜರು, ಪುರೋಹಿತರು, ಆಚಾರ್ಯರು ಮತ್ತು ಮಂತ್ರಿಗಳಿಂದ ಸುತ್ತುವರೆಯಲ್ಪಟ್ಟಿದ್ದ ದುಃಷಂತನನ್ನುದ್ದೇಶಿಸಿ ಅಂತರಿಕ್ಷದಿಂದ ಅಶರೀರವಾಣಿಯೊಂದು ಕೇಳಿಬಂದಿತು.

“ದುಃಷಂತ! ತಾಯಿಯು ಮಗನ ಮಾಂಸ ಮತ್ತು ಚರ್ಮ. ಆದರೆ ತಂದೆಯು ಅವನ ಆತ್ಮ. ಆದುದರಿಂದ ನಿನ್ನ ಈ ಮಗನನ್ನು ಸ್ವೀಕರಿಸು. ಶಕುಂತಲೆಯನ್ನು ಅವಮಾನಿಸಬೇಡ. ತನ್ನ ರೇತದಿಂದ ಪಡೆದ ಮಗನು ನರನನ್ನು ಯಮಕ್ಷಯದಿಂದ ರಕ್ಷಿಸುತ್ತಾನೆ. ನೀನೇ ಈ ಗರ್ಭವನ್ನಿತ್ತವನು. ಶಕುಂತಲೆಯು ಸತ್ಯವನ್ನು ನುಡಿದಿದ್ದಾಳೆ. ನರನು ತನ್ನನ್ನು ಎರಡು ಭಾಗಗಳನ್ನಾಗಿ ಮಾಡಿಕೊಂಡು ಪತ್ನಿಯಲ್ಲಿ ಹುಟ್ಟುತ್ತಾನೆ. ಆದುದರಿಂದ ನೃಪ ದುಃಷಂತ! ಶಕುಂತಲೆಯಲ್ಲಿ ಜನಿಸಿದ ನಿನ್ನ ಈ ಪುತ್ರನನ್ನು ಸ್ವೀಕರಿಸು. ತನ್ನ ಮಗನನ್ನು ಪರಿತ್ಯಜಿಸಿ ಜೀವಿಸುವುದು ಅತಿ ದುರಾದೃಷ್ಟ ವಿಷಯ. ದೌಃಷಂತ ಮತ್ತು ಶಕುಂತಲೆಯನ್ನು ಪಾಲಿಸು. ನಮ್ಮ ಈ ಮಾತುಗಳ ಆಧಾರದ ಮೇಲೆ ನೀನು ಇವನನ್ನು ಪಾಲಿಸುವುದರಿಂದ ಇಂದಿನಿಂದ ನಿನ್ನ ಈ ಮಗನ ಹೆಸರು ಭರತ ಎಂದಾಗಲಿ.”

ದಿವೌಕಸರ ಈ ಮಾತುಗಳನ್ನು ಕೇಳಿದ ರಾಜ ಪೌರವನು

ಸಂಪ್ರಹೃಷ್ಟನಾಗಿ ತನ್ನ ಪುರೋಹಿತರು ಮತ್ತು ಅಮಾತ್ಯರನ್ನುದ್ದೇಶಿಸಿ ಹೇಳಿದನು:

> “ದೇವದೂತನಾಡಿದ ಈ ಮಾತುಗಳನ್ನು ಕೇಳಿ. ಇವನು ನನ್ನ ಮಗನೇ ಎಂದು ನನಗೂ ತಿಳಿದಿತ್ತು. ಕೇವಲ ಇವಳ ಮಾತಿನ ಆಧಾರದ ಮೇಲೆ ಇವನನ್ನು ನಾನು ಸ್ವೀಕರಿಸಿದ್ದರೆ ಲೋಕದ ಜನರು ಶಂಕಿತರಾಗುತ್ತಿದ್ದರು, ಮತ್ತು ಇವನನ್ನು ಪರಿಶುದ್ಧನೆಂದು ಪರಿಗಣಿಸುತ್ತಿರಲಿಲ್ಲ.”

ತನ್ನ ಮಗನ ಜನ್ಮದ ಪವಿತ್ರತೆಯು ತಿಳಿದಾದ ನಂತರ ರಾಜನು ತುಂಬಾ ಸಂತೋಷಗೊಂಡನು. ತನ್ನ ಮಗನ ನೆತ್ತಿಯನ್ನು ಆಘ್ರಾಣಿಸಿ ಸ್ನೇಹದಿಂದ ಅಪ್ಪಿಕೊಂಡನು. ಸಭೆಯಲ್ಲಿದ್ದ ವಿಪ್ರರೆಲ್ಲರೂ ಆಶೀರ್ವದಿಸಿದರು. ಸೂತರು ಹೊಗಳಿದರು. ರಾಜನು ತನ್ನ ಮಗುವಿನ ಸ್ಪರ್ಷದ ಪರಮ ಸಂತಸವನ್ನು ಅನುಭವಿಸಿದನು. ಧರ್ಮಜ್ಞ ರಾಜನು ತನ್ನ ಭಾರ್ಯೆಯನ್ನೂ ಧಾರ್ಮಿಕವಾಗಿ ಗೌರವಿಸಿದನು ಮತ್ತು ಅವಳಿಗೆ ಸಾಂತ್ವನದ ಈ ಮಾತುಗಳನ್ನು ನುಡಿದನು:

> “ದೇವಿ! ನಿನ್ನೊಡನೆ ನನ್ನ ಸಂಬಂಧವು ಲೋಕ ಪರೋಕ್ಷವಾಗಿ ನಡೆಯಿತು. ಆದುದರಿಂದ ನಿನ್ನ ಶುದ್ಧತೆಯನ್ನು ಪ್ರತಿಪಾದಿಸುವುದು ಹೇಗೆಂದು ವಿಚಾರಿಸುತ್ತಿದ್ದೆ. ಇಲ್ಲದಿದ್ದರೆ ಲೋಕದ ಜನರು ನಿನ್ನ ಮತ್ತು ನನ್ನ ಸಂಗಮವು ಕೇವಲ ಕಾಮದಿಂದಾಯಿತೆಂದು ತಿಳಿದಾರು. ಮತ್ತು ನನ್ನ ರಾಜ್ಯದ

ಒಡೆಯನಾಗುವ ನನ್ನ ಈ ಮಗನನ್ನು ಅನೈತಿಕವಾಗಿ ಹುಟ್ಟಿದವನೆಂದು ತಿಳಿಯುತ್ತಾರೆ. ಪ್ರಿಯೇ! ಕೋಪದಲ್ಲಿ ನೀನು ನನಗೆ ಹೇಳಿದ ಎಲ್ಲ ಅಪ್ರಿಯ ಮಾತುಗಳನ್ನೂ ಕ್ಷಮಿಸಿದ್ದೇನೆ. ನೀನು ನನ್ನ ಪ್ರಿಯೆ ಶುಭೇ!”

ರಾಜರ್ಷಿ ದುಃಷಂತನು ತನ್ನ ಪ್ರಿಯ ಮಹಿಷಿಗೆ ಈ ರೀತಿ ಹೇಳಿ ಅವಳನ್ನು ವಸ್ತ್ರ, ಆಹಾರ ಮತ್ತು ಪಾನೀಯಗಳನ್ನಿತ್ತು ಸತ್ಕರಿಸಿದನು. ನಂತರ, ರಾಜ ದುಃಷಂತನು ಶಕುಂತಲೆಯ ಪುತ್ರನಿಗೆ ಭರತನೆಂಬ ಹೆಸರಿನಲ್ಲಿ ಯುವರಾಜ್ಯಾಭಿಷೇಕವನ್ನು ನಡೆಸಿದನು. ಅಂದಿನ ನಂತರ ದೇವತೆಗಳ ರಥದಂತಿರುವ ಆ ಮಹಾತ್ಮನ ರಥದ ಹೊಳೆಯುತ್ತಿರುವ ಚಕ್ರಗಳು ತಮ್ಮ ಧ್ವನಿಯನ್ನು ಲೋಕದಲ್ಲೆಲ್ಲ ತುಂಬಿಸುತ್ತಾ ಇಡೀ ಭೂಮಿಯನ್ನೇ ತಿರುಗಿದವು. ಎಲ್ಲ ಮಹೀಪಾಲರನ್ನೂ ಗೆದ್ದು ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಾ ಅನುತ್ತಮ ಯಶಸ್ಸನ್ನು ಗಳಿಸಿದನು. ಆ ಪ್ರತಾಪಿ ರಾಜನು ಚಕ್ರವರ್ತಿ ಸಾರ್ವಭೌಮನೆಂದು ಕರೆಯಲ್ಪಟ್ಟನು. ಮರುತ್ಪತಿ ಇಂದ್ರನಂತೆ ಅವನು ಹಲವಾರು ಯಜ್ಞಗಳನ್ನು ನಡೆಸಿದನು. ಕಣ್ವನು ಈ ಯಜ್ಞಗಳಲ್ಲಿ ಪುರೋಹಿತನಾಗಿದ್ದನು, ಮತ್ತು ಬ್ರಾಹ್ಮಣರಿಗೆ ಸಾಕಷ್ಟು ದಕ್ಷಿಣೆಗಳನ್ನು ನೀಡಲಾಯಿತು. ಆ ಶ್ರೀಮಂತನು ಗೋಮೇಧ-ಅಶ್ವಮೇಧಗಳೆರಡನ್ನೂ ನೆರವೇರಿಸಿದನು. ಭರತನು ಕಣ್ವನಿಗೆ ಸಹಸ್ರ ಚಿನ್ನದ ನಾಣ್ಯಗಳನ್ನು ದಕ್ಷಿಣೆಯನ್ನಾಗಿ ಇತ್ತನು. ಭರತನಿಂದ ಭಾರತ ಕುಲವು ಹುಟ್ಟಿತು, ಅವನ ನಂತರ ಹುಟ್ಟಿದ ರಾಜರು ಭಾರತರೆಂದು ವಿಶ್ರುತರಾದರು.

ಭರತನ ಕುಲದಲ್ಲಿ ಹಲವಾರು ದೇವಕಲ್ಪ-ಬ್ರಹ್ಮಕಲ್ಪ ಮಹೌಜಸ ರಾಜಸತ್ತಮರು ಜನಿಸಿದರು.

# ಯಯಾತಿ

## ರಾಜಾ ಯಯಾತಿಯ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಸಂಭವ ಪರ್ವ (ಅಧ್ಯಾಯ ೭೧-೮೦) ದಲ್ಲಿ ಬರುತ್ತದೆ. ಈ ಕಥೆಯನ್ನು ಮುನಿ ವೈಶಂಪಾಯನನು ಜನಮೇಜಯನಿಗೆ ಸರ್ಪಸತ್ರದಲ್ಲಿ ಹೇಳಿದನು.

ಸಚರಾಚರ ತ್ರೈಲೋಕ್ಯದ ಐಶ್ವರ್ಯಕ್ಕಾಗಿ ಸುರಾಸುರರ ನಡುವೆ ಅತೀ ದೊಡ್ಡ ಹೋರಾಟ ನಡೆಯಿತು. ವಿಜಯಪ್ರಾಪ್ತಿಗಾಗಿ ದೇವತೆಗಳು ಮುನಿ ಅಂಗಿರಸ ಪುತ್ರನನ್ನು ಮತ್ತು ಪರಪಕ್ಷದವರು ಉಶಾನಸ ಕಾವ್ಯನನ್ನು ಯಜ್ಞಾದಿಗಳ ಪುರೋಹಿತರನ್ನಾಗಿ ನಿಯೋಜಿಸಿದನು. ಆ ಈರ್ವರು ಬ್ರಾಹ್ಮಣರೂ ಸದಾ ಪರಸ್ಪರರ ಕಡು ಸ್ಪರ್ಧಿಗಳಾಗಿದ್ದರು. ಯುದ್ಧದಲ್ಲಿ ಸೇರಿದ್ದ ದಾನವರನ್ನು ದೇವತೆಗಳು ಸಂಹರಿಸುತ್ತಿದ್ದರು. ಆದರೆ ಕಾವ್ಯನು ತನ್ನ ವಿದ್ಯಾಬಲದಿಂದ ಅವರನ್ನು ಪುನರ್ಜೀವಿಸುತ್ತಿದ್ದನು, ಮತ್ತು ಅವರು ಪುನಃ ಸುರರೊಂದಿಗೆ ಯುದ್ಧಕ್ಕೆ ತೊಡಗುತ್ತಿದ್ದರು. ಸಮರ ಮಧ್ಯದಲ್ಲಿ ಅಸುರರು ಬಹಳಷ್ಟು ಸುರರನ್ನು ಸಂಹರಿಸುತ್ತಿದ್ದರು. ಆದರೆ ಬೃಹಸ್ಪತಿಯು ಅವರನ್ನು ಪುನಃ ಬದುಕಿಸಲು ಅಸಮರ್ಥನಾಗಿದ್ದನು. ವೀರ್ಯವಂತ ಶುಕ್ರನು ತಿಳಿದಿದ್ದ

ಸಂಜೀವಿನೀ ವಿದ್ಯೆಯು ಅವನಿಗೆ ತಿಳಿದಿರಲಿಲ್ಲ. ಇದರಿಂದಾಗಿ ದೇವತೆಗಳು ಪರಮ ದುಃಖವನ್ನು ಅನುಭವಿಸಿದರು. ಉಶಾನಸ ಕಾವ್ಯನಿಂದ ಭಯೋದ್ವಿಗ್ನರಾದ ದೇವತೆಗಳು ಬೃಹಸ್ಪತಿಯ ಜ್ಯೇಷ್ಠ ಪುತ್ರ ಕಚನ ಬಳಿ ಬಂದು ಕೇಳಿಕೊಂಡರು:

> "ಭಜಿಸಿತ್ತಿರುವ ನಮ್ಮನ್ನು ರಕ್ಷಿಸು ಮತ್ತು ನಮಗೆ ನೆರವನ್ನು ನೀಡು. ಅಮಿತತೇಜಸ್ವಿ ಬ್ರಾಹ್ಮಣ ಶುಕ್ರನಲ್ಲಿರುವ ವಿಧ್ಯೆಯನ್ನು ಕ್ಷಿಪ್ರವಾಗಿ ಪಡೆದು ತಾ. ನಮ್ಮ ಯಜ್ಞಭಾಗಗಳ ಭಾಗಿಯಾಗುತ್ತೀಯೆ. ಆ ದ್ವಿಜನನ್ನು ನೀನು ವೃಷಪರ್ವನ ಬಳಿ ಕಾಣಬಲ್ಲೆ. ಅಲ್ಲಿ ಅವನು ದಾನವರನ್ನು ರಕ್ಷಿಸುತ್ತಾನೆ. ಅದಾನವರ್ಯಾರನ್ನೂ ಅವನು ರಕ್ಷಿಸುವುದಿಲ್ಲ. ವಯಸ್ಸಿನಲ್ಲಿ ನೀನು ಇನ್ನೂ ಚಿಕ್ಕವನು, ಆದುದರಿಂದ ನೀನು ಆ ಮಹಾತ್ಮ ಕವಿಯನ್ನು ಮತ್ತು ಅವನ ಪ್ರಿಯ ಸುತೆ ದೇವಯಾನಿಯನ್ನೂ ಆರಾಧಿಸಬಲ್ಲೆ. ನೀನು ಮಾತ್ರ ಅವನನ್ನು ಆರಾಧಿಸಬಲ್ಲೆ, ಬೇರೆ ಯಾರೂ ಇಲ್ಲ. ನಿನ್ನ ಶೀಲ, ದಾಕ್ಷಿಣ್ಯ, ಮಾಧುರ್ಯ, ನಡವಳಿಕೆ, ಮತ್ತು ದಮಗಳಿಂದ ನೀನು ದೇವಯಾನಿಯನ್ನು ತೃಪ್ತಿಗೊಳಿಸಬಲ್ಲೆ ಮತ್ತು ಖಂಡಿತವಾಗಿಯೂ ಆ ವಿಧ್ಯೆಯನ್ನು ಪ್ರಾಪ್ತಗೊಳಿಸಬಲ್ಲೆ."

"ಹಾಗೆಯೇ ಆಗಲಿ" ಎಂದು ಉತ್ತರಿಸಿದ ಬೃಹಸ್ಪತಿಸುತ ಕಚನು ದೇವತೆಗಳಿಂದ ಗೌರವಿಸಲ್ಪಟ್ಟು ವೃಷಪರ್ವನ ಬಳಿ ಹೋದನು.



ಈ ರೀತಿ ದೇವತೆಗಳಿಂದ ಕಳುಹಿಸಲ್ಪಟ್ಟ ಕಚನು ಸಮಯ ವ್ಯರ್ಥ ಮಾಡದೇ ಅಸುರೇಂದ್ರನ ಪುರವನ್ನು ತಲುಪಿ ಅಲ್ಲಿ ಶುಕ್ರನನ್ನು ಕಂಡು ಹೇಳಿದನು:

> "ಭಗವನ್! ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ. ನಾನು ಅಂಗಿರಸನ ಮೊಮ್ಮಗ ಸಾಕ್ಷಾತ್ ಬೃಹಸ್ಪತಿಯ ಪುತ್ರ. ನನ್ನನ್ನು ಕಚ ಎಂಬ ಹೆಸರಿನಿಂದ ಕರೆಯುತ್ತಾರೆ. ನಿಮ್ಮನ್ನು ನನ್ನ ಪರಮ ಗುರುವೆಂದು ಸ್ವೀಕರಿಸಿ ನಾನು ಸಾವಿರ ವರ್ಷಗಳ ಪರ್ಯಂತ ಬ್ರಹ್ಮಚರ್ಯವನ್ನು ಪಾಲಿಸುತ್ತೇನೆ. ನನಗೆ ಅನುಮತಿಯನ್ನು ನೀಡಿ."

ಶುಕ್ರನು ಹೇಳಿದನು:

> "ಕಚ! ನಿನಗೆ ಸುಸ್ವಾಗತ. ನಿನ್ನ ಮಾತುಗಳನ್ನು ನಾನು ಸ್ವೀಕರಿಸುತ್ತೇನೆ. ಗೌರವಕ್ಕೆ ಅರ್ಹನಾದ ನಿನ್ನನ್ನು ನಾನು ಗೌರವಿಸುತ್ತೇನೆ. ಇದರಿಂದ ಬೃಹಸ್ಪತಿಯನ್ನೂ ಗೌರವಿಸಿದಂತಾಗುತ್ತದೆ."

"ಹಾಗೆಯೇ ಆಗಲಿ" ಎಂದು ಹೇಳಿದ ಕಚನು ಸ್ವಯಂ ಕವಿಪುತ್ರ ಶುಕ್ರ ಉಶನಸನ ಆದೇಶದಂತೆ ವ್ರತದೀಕ್ಷೆಯನ್ನು ಪಡೆದನು. ಹೇಳಿಕೆಯ ಪ್ರಕಾರ ಸರಿಯಾದ ವ್ರತಕಾಲದಲ್ಲಿ ವ್ರತವನ್ನು ಪ್ರಾರಂಭಿಸಿದ ಅವನು ತನ್ನ ಉಪಾಧ್ಯಾಯ ಮತ್ತು ದೇವಯಾನಿಯನ್ನು ಆರಾಧಿಸತೊಡಗಿದನು. ಆ ಯುವಕನು ಯುವತಿ ದೇವಯಾನಿಯನ್ನು ಗಾನ, ನೃತ್ಯ ಮತ್ತು

ವಾದ್ಯಗಳಿಂದ ನಿತ್ಯವೂ ಸಂತುಷ್ಟಗೊಳಿಸುತ್ತಿದ್ದನು. ಯೌವನವನ್ನು ಪಡೆದಿದ್ದ ಕನ್ಯೆ ದೇವಯಾನಿಯನ್ನು ಪುಷ್ಪ ಮತ್ತು ಫಲಗಳನ್ನು ನೀಡುತ್ತಾ, ಅವಳೊಡನೆ ಪ್ರೀತಿಪೂರ್ವಕ ನಡೆನುಡಿಯುತ್ತಾ ಸಂತೃಪ್ತಿಗೊಳಿಸಿದನು. ದೇವಯಾನಿಯೂ ಕೂಡ ಆ ನಿಯಮ ವ್ರತಚಾರಿಣಿ ವಿಪ್ರನೊಡನೆ ಏಕಾಂತದಲ್ಲಿ ಹಾಡುತ್ತಿದ್ದಳು, ಮತ್ತು ಅವನ ಸುತ್ತ ಸಂತೋಷದಿಂದ ಸುಳಿದಾಡುತ್ತಿದ್ದಳು.

ಹೀಗೆ ಕಚನ ವ್ರತದ ಐದು ನೂರು ವರ್ಷಗಳು ಕಳೆಯುತ್ತಾ ಬಂದಾಗ ದಾನವರು ಕಚನ ಉದ್ದೇಶವನ್ನು ತಿಳಿದುಕೊಂಡರು. ವನದಲ್ಲಿ ಗೋವುಗಳನ್ನು ಕಾಯುತ್ತಿದ್ದ ಒಂಟಿ ಕಚನನ್ನು ಕಂಡ ಅವರು ಬೃಹಸ್ಪತಿಯೊಡನಿದ್ದ ದ್ವೇಶದಿಂದ ಮತ್ತು ಆ ವಿದ್ಯೆಯನ್ನು ರಕ್ಷಿಸಲೋಸುಗ ಅವನನ್ನು ಕೊಂದು, ಸಾಸಿವೆಕಾಳಿನ ಗಾತ್ರದಲ್ಲಿ ತುಂಡು ತುಂಡುಮಾಡಿ ಅಲ್ಲಿರುವ ತೋಳಗಳಿಗೆ ತಿನ್ನಿಸಿದರು. ಗೋವುಗಳು ಗೋಪನಿಲ್ಲದೇ ತಾವೇ ತಮ್ಮ ನಿವೇಶನಕ್ಕೆ ಹಿಂದಿರುಗಿದವು. ಕಚನ ಜೊತೆಯಿಲ್ಲದೇ ಗೋವುಗಳು ಹಿಂದಿರುಗಿದುದನ್ನು ನೋಡಿದ ದೇವಯಾನಿಯು ತನ್ನ ತಂದೆಗೆ ಇಂತೆಂದಳು:

> "ಪ್ರಭು! ಅಗ್ನಿಹೋತ್ರವನ್ನು ಉರಿಸಿಯಾಗಿದೆ, ಸೂರ್ಯಾಸ್ತವೂ ಆಗಿದೆ. ಗೋಪನಿಲ್ಲದೇ ಗೋವುಗಳು ಹಿಂದಿರುಗಿವೆ. ಅಪ್ಪಾ! ಅದರೆ ಕಚನು ಇನ್ನೂ ಕಾಣುತ್ತಿಲ್ಲ. ಕಚನು ಸತ್ತಿರಬಹುದು ಅಥವಾ ಅವನನ್ನು ಕೊಂದಿರಬಹುದು. ಅವನಿಲ್ಲದೇ ನಾನು

ನಿಜವಾಗಿಯೂ ಬದುಕಲಾರೆ.”

ಶುಕ್ರನು ಹೇಳಿದನು:

“ಇಲ್ಲಿ ಬಾ ಎಂದು ಹೇಳಿ ಮೃತನನ್ನು ಬದುಕಿಸುತ್ತೇನೆ.”

ನಂತರ ಸಂಜೀವಿನೀ ವಿಧ್ಯೆಯಿಂದ ಕಚನನ್ನು ಆಹ್ವಾನಿಸಿದನು. ಹಾಗೆ ಕರೆಯಲ್ಪಟ್ಟಾಗ, ಕಚನು ಸಂತೋಷದಿಂದ ಕಾಣಿಸಿಕೊಂಡನು.

“ನನ್ನನ್ನು ಕೊಲೆಮಾಡಲಾಗಿತ್ತು”

ಎಂದು ಬ್ರಾಹ್ಮಣ ಕನ್ಯೆಯ ಪ್ರಶ್ನೆಗಳಿಗೆ ಉತ್ತರಿಸಿದನು.

ಪುನಃ ಇನ್ನೊಂದು ದಿನ ದೇವಯಾನಿಗೆ ಪುಷ್ಪಗಳನ್ನು ತೆಗೆದುಕೊಂಡು ಬರಲು ಕಚನು ವನಕ್ಕೆ ಹೋದಾಗ ದಾನವರು ಆ ವಿಪ್ರನನ್ನು ನೋಡಿದರು. ಎರಡನೆಯ ಬಾರಿ ಅವರು ಅವನನ್ನು ಕೊಂದು, ಸುಟ್ಟು, ಭಸ್ಮದ ಚೂರ್ಣವನ್ನು ಮಾಡಿ, ಮದ್ಯದಲ್ಲಿ ಸೇರಿಸಿ ಬ್ರಾಹ್ಮಣನಿಗೆ ಕುಡಿಯಲು ಕೊಟ್ಟರು. ಪುನಃ ದೇವಯಾನಿಯು ತನ್ನ ತಂದೆಯಲ್ಲಿ ಹೇಳಿಕೊಂಡಳು:

“ಪುಷ್ಪಗಳನ್ನು ತರಲೆಂದು ಹೋದ ಕಚನು ಕಾಣುತ್ತಿಲ್ಲ.”

ಶುಕ್ರನು ಹೇಳಿದನು:

“ಪುತ್ರಿ! ಬೃಹಸ್ಪತಿಯ ಸುತ ಕಚನು ಪ್ರೇತಲೋಕವನ್ನು ಸೇರಿದ್ದಾನೆ. ನನ್ನ ವಿದ್ಯೆಯಿಂದ ಅವನನ್ನು ಬದುಕಿಸಿದರೂ

ಪುನಃ ಅವನನ್ನು ಕೊಂದು ಹಾಕಿದ್ದಾರೆ. ನಾನೇನು ಮಾಡಲಿ? ಅವನಿಗಾಗಿ ಶೋಕಿಸಬೇಡ, ರೋದಿಸಬೇಡ. ನಿನ್ನಂಥವರು ಮಾನವನಿಗಾಗಿ ಅಳುವುದಿಲ್ಲ. ನಡೆಯುವ ಬದಲಾವಣೆಗಳಿಗೆ ಸುರರೂ ವಿಶ್ವವೂ ಜಗತ್ತೂ ಮತ್ತು ಸರ್ವವೂ ತಲೆಬಾಗಿಸಲೇಬೇಕು."

ದೇವಯಾನಿಯು ಹೇಳಿದಳು:

"ಯಾರ ಪಿತಾಮಹನು ವೃದ್ಧ ಅಂಗಿರಸನೋ, ಯಾರ ತಂದೆಯು ತಪೋಧನ ಬೃಹಸ್ಪತಿಯೋ, ಯಾರು ಋಷಿಯ ಪುತ್ರನೂ ಪೌತ್ರನೂ ಆಗಿದ್ದಾನೋ ಅಂಥವನ ಕುರಿತು ನಾನು ಹೇಗೆ ಶೋಕಿಸದಿರಲಿ ಅಥವಾ ರೋದಿಸದೇ ಇರಲಿ? ಸ್ವಯಂ ಬ್ರಹ್ಮಚಾರಿಯೂ ತಪೋಧನನೂ ಆದ, ಕೆಲಸಗಳಲ್ಲಿ ಸದಾ ದಕ್ಷ ಆ ಕಚನ ದಾರಿಯಲ್ಲಿಯೇ ನಾನೂ ಹೋಗುತ್ತೇನೆ ತಂದೆ! ನನಗೆ ಊಟವೂ ಬೇಡ. ಸುಂದರ ಕಚನು ನನ್ನ ಪ್ರಿಯಕರ."

ಶುಕ್ರನು ಹೇಳಿದನು:

"ನನ್ನ ಜೊತೆಯಲ್ಲಿಯೇ ವಾಸಿಸುವ ನನ್ನ ಶಿಷ್ಯನನ್ನು ಕೊಂದು ಅಸುರರು ನನಗೆ ಕೆಟ್ಟದ್ದನ್ನೇ ಮಾಡಿದ್ದಾರೆ. ಬ್ರಾಹ್ಮಣ ಹತ್ಯೆಯಲ್ಲಿ ನನ್ನನ್ನೂ ಸೇರಿಸಿ ನನ್ನನ್ನು ಅಬ್ರಾಹ್ಮಣನನ್ನಾಗಿ ಮಾಡಲು ಈ ಅಸುರರು ಪ್ರಯತ್ನಿಸುತ್ತಿದ್ದಾರೆ. ಈ ಪಾಪದ ಅಂತ್ಯವು ಈಗಲೇ ಆಗಲಿ. ಯಾಕೆಂದರೆ ಬ್ರಹ್ಮಹತ್ಯೆಯು

ಇಂದ್ರನನ್ನು ಸುಡುವುದಿಲ್ಲವೇ?”

ದೇವಯಾನಿಯ ಒತ್ತಾಯದಂತೆ ಮಹರ್ಷಿ ಕಾವ್ಯನು ಪುನಃ ಬೃಹಸ್ಪತಿಸುತ ಕಚನನ್ನು ಜೋರಾಗಿ ಕೂಗಿ ಕರೆದನು. ವಿದ್ಯೆಯಿಂದ ಕರೆಯಲ್ಪಟ್ಟಾಗ, ಗುರುವಿಗೆ ಹೆದರಿ ಅವನ ಹೊಟ್ಟೆಯ ಒಳಗಿಂದಲೇ ಸಣ್ಣಸ್ವರದಲ್ಲಿ ಉತ್ತರಿಸಿದನು. ಆಗ ಮುನಿಯು ಅವನನ್ನು ಕೇಳಿದನು:

“ವಿಪ್ರ! ನೀನು ಯಾವ ಮಾರ್ಗದಿಂದ ನನ್ನ ಹೊಟ್ಟೆಯನ್ನು ಸೇರಿದ್ದೀಯೆ ಹೇಳು!”

ಕಚನು ಹೇಳಿದನು:

“ನಿಮ್ಮ ಅನುಗ್ರಹದಿಂದ ನನ್ನ ನೆನಪು ಉಳಿದಿದೆ. ನನಗೆ ಆದ ಪ್ರತಿಯೊಂದು ವಿಷಯವೂ ಯಥಾವತ್ತಾಗಿ ನೆನಪಿದೆ. ನನ್ನ ತಪಸ್ಸಿನ ಶಕ್ತಿಯನ್ನೂ ಕಳೆದುಕೊಂಡಿಲ್ಲ. ಇದರಿಂದಾಗಿ ನಾನು ಈ ಘೋರ ಕ್ಲೇಶವನ್ನು ಸಹಿಸಬಲ್ಲವನಾಗಿದ್ದೇನೆ. ಕಾವ್ಯ! ಅಸುರರು ನನ್ನನ್ನು ಕೊಂದು, ಸುಟ್ಟು, ಚೂರ್ಣವನ್ನಾಗಿ ಮಾಡಿ ಮದ್ಯದಲ್ಲಿ ಸೇರಿಸಿ ನಿನಗೆ ಕೊಟ್ಟರು. ಆದರೆ ಬ್ರಾಹ್ಮೀ ಮಾಯೆಯನ್ನು ಹೊಂದಿರುವ ನೀನಿರುವಾಗ ಅಸುರೀ ಮಾಯೆಯು ಏನು ತಾನೇ ಮಾಡಬಲ್ಲದು?”

ಶುಕ್ರನು ಹೇಳಿದನು:

“ವತ್ಸ! ಈಗ ನಾನು ಹೇಗೆ ತಾನೆ ನೀನು ಕೇಳಿದ್ದುದನ್ನು

ಮಾಡಬಲ್ಲೆ? ನನ್ನ ಮರಣದಿಂದಲೇ ಕಚನು ಜೀವಿತನಾಗಬಲ್ಲ. ನನ್ನ ಹೊಟ್ಟೆಯನ್ನು ಸೀಳಿ ಹೊರಬರುವುದರ ಹೊರತು ಬೇರೆ ಯಾವ ಮಾರ್ಗವೂ ಕಚನಿಗೆ ತೋರುವುದಿಲ್ಲ."

ದೇವಯಾನಿಯು ಹೇಳಿದಳು:

"ಇವೆರಡು ಶೋಕಗಳೂ ನನ್ನನ್ನು ಅಗ್ನಿಯಂತೆ ಸುಡುತ್ತವೆ. ಕಚನ ಮತ್ತು ನಿನ್ನ ನಾಶ ಇವೆರಡು ನನಗೆ ಒಂದೇ. ಕಚನ ನಾಶದಿಂದ ನನಗೆ ಎಲ್ಲಿಯೂ ನೆರಳಿಲ್ಲ; ನೀನಿಲ್ಲದೇ ನಾನು ಜೀವಿಸುವಿದೇ ಅಶಕ್ಯ."

ಶುಕ್ರನು ಹೇಳಿದನು:

"ಬೃಹಸ್ಪತಿಯ ಮಗನೇ! ದೇವಯಾನಿಯ ಪ್ರೀತಿ ಪಾತ್ರನಾದ ನೀನು ಸಂಸಿದ್ಧರೂಪನಾಗಿದ್ದೀಯೆ. ನೀನು ಕಚರೂಪದಲ್ಲಿದ್ದ ಇಂದ್ರನಲ್ಲದಿದ್ದರೆ ನಾನು ನಿನಗೆ ಈಗ ಸಂಜೀವಿನೀ ವಿಧ್ಯೆಯನ್ನು ನೀಡುತ್ತೇನೆ. ನನ್ನ ಉದರದಿಂದ ಬೇರೆ ಯಾರೂ ಜೀವಂತ ಹೊರಗೆ ಬರಲು ಸಾಧ್ಯವಿಲ್ಲ. ಆದರೆ ಬ್ರಾಹ್ಮಣನನ್ನು ಎಂದೂ ಕೊಲ್ಲಬಾರದು. ಆದ್ದರಿಂದ ನಾನು ನಿನಗೆ ಹೇಳಿಕೊಡುವ ಈ ವಿಧ್ಯೆಯನ್ನು ಸ್ವೀಕರಿಸು. ನೀನು ನನ್ನ ಪುತ್ರನಾಗಿ ಈ ದೇಹದಿಂದ ಹೊರಗೆ ಬಾ. ಗುರುವಿನಿಂದ ಈ ಸವಿಧ್ಯೆಯನ್ನು ಪಡೆದ ನೀನು ಈ ವಿಧ್ಯೆಯನ್ನು

ಜಾಗರೂಕತೆಯಿಂದ, ಧರ್ಮಪ್ರಕಾರವಾಗಿ ಬಳಸು."

ಗುರುವಿನ ಸಾಕ್ಷಾತ್ಕಾರದಲ್ಲಿ ವಿಧ್ಯೆಯನ್ನು ಪಡೆದ ವಿಪ್ರನು ಅವನ ಹೊಟ್ಟೆಯನ್ನು ಸೀಳಿ ಹೊರಬಂದನು. ಶುಕ್ಲಪಕ್ಷದ ಪೂರ್ಣಿಮೆಯಂದು ಚಂದ್ರನು ಹೊರಬರುವಂತೆ ಸುಂದರ ಕಚನು ಬ್ರಾಹ್ಮಣನ ಬಲಭಾಗದಿಂದ ಹೊರಬಂದನು. ಕೆಳಗೆ ಬಿದ್ದಿದ್ದ ಆ ಬ್ರಹ್ಮರಾಶಿಯನ್ನು ನೋಡಿ ಕಚನು ತಾನು ಆಗಲೇ ಪಡೆದಿದ್ದ ವಿದ್ಯಸಿದ್ಧಿಯನ್ನು ಬಳಸಿ ಮೃತನನ್ನು ಪುನಃ ಎಬ್ಬಿಸಿದನು. ಆಗ ಕಚನು ಗುರುವನ್ನು ನಮಸ್ಕರಿಸಿ ಹೇಳಿದನು:

"ಅನುತ್ತಮ ಜ್ಞಾನವನ್ನು ನೀಡುವ, ಚತುರಾನ್ವಯ ನಿಧಿಗಳ ನಿಧಿ, ಅರ್ಚನೀಯ ಗುರುವನ್ನು ನಿಂದಿಸುವವನು ನಿಜವಾಗಿಯೂ ಪಾಪಲೋಕವನ್ನು ಪಡೆಯುತ್ತಾನೆ."

ಸುರಾಪಾನದಿಂದ ವಂಚಿತನಾದ, ಅದರಿಂದಾದ ಘೋರ ಪರಿಣಾಮಗಳನ್ನೂ ಪ್ರಜ್ಞಾಹರಣವನ್ನೂ ನೋಡಿದ, ತನ್ನ ಸುಂದರ ದೇಹವನ್ನು ಹೊತ್ತು ಹೊರಬಂದ ಕಚನನ್ನು ನೋಡಿ, ಅವನನ್ನು ಮದ್ಯದ ನಶೆಯಲ್ಲಿ ತಿಳಿಯದೇ ಕುಡಿದಿದ್ದುದನ್ನು ನೋಡಿ, ಆ ಮಹಾನುಭಾವನು ಕೋಪಗೊಂಡು, ವಿಪ್ರರ ಹಿತಕ್ಕಾಗಿ ಸ್ವಯಂ ಕಾವ್ಯನು ಜಗತ್ತಿಗೇ ಸುರಾಪಾನದ ವಿರುದ್ಧ ಉದ್ಗರಿಸಿ ಹೇಳಿದನು:

"ಇಂದಿನಿಂದ ಯಾವ ಬ್ರಾಹ್ಮಣನು ಆಸೆಯಿಂದ ಬುದ್ಧಿಯಿಲ್ಲದೇ ಮದ್ಯವನ್ನು ಸೇವಿಸುತ್ತಾನೋ ಬ್ರಹ್ಮಹತ್ಯೆಯ

> ಪಾಪವನ್ನು ಪಡೆದು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ತಿರಸ್ಕರಿಸಲ್ಪಡುತ್ತಾನೆ. ಈ ರೀತಿ ನಾನು ವಿಪ್ರಧರ್ಮದ ಸೀಮಾರೇಖೆಯನ್ನು ಎಳೆಯುತ್ತಿದ್ದೇನೆ. ಈ ಮರ್ಯಾದೆಯು ಸರ್ವಲೋಕದಲ್ಲಿಯೂ ಸ್ಥಾಪಿತಗೊಳ್ಳಲಿ. ಸಂತ ಬ್ರಾಹ್ಮಣರು, ಗುರುಗಳ ಸೇವೆಮಾಡುವವರು, ದೇವತೆಗಳು ಮತ್ತು ಲೋಕದಲ್ಲಿ ಎಲ್ಲರೂ ಇದನ್ನು ಕೇಳಲಿ."

ಈ ರೀತಿ ಹೇಳಿದ ಆ ತಪೋನಿಧಿಗಳ ಅಪ್ರಮೇಯ ನಿಧಿ ಮಹಾನುಭಾವನು ದೈವಕಾರಣದಿಂದ ವಿಮೂಢರಾಗಿದ್ದ ದಾನವರನ್ನು ತನ್ನಲ್ಲಿಗೆ ಕರೆಯಿಸಿ ಈ ಮಾತುಗಳನ್ನಾಡಿದನು:

> "ಬಾಲಿಶರಾಗಿ ನಿಂತಿರುವ ದಾನವರೇ! ಕೇಳಿ. ಕಚನು ನನ್ನ ಮಗನಾಗಿ ನನ್ನ ಬಳಿಯಲ್ಲಿಯೇ ಇರುವುದು ಸಿದ್ಧ. ನನ್ನಿಂದ ಸಂಜೀವಿನೀ ವಿಧ್ಯೆಯನ್ನು ಪಡೆದು ಈ ಬ್ರಾಹ್ಮಣನು ತನ್ನ ಪ್ರಭಾವದಲ್ಲಿ ಬ್ರಹ್ಮನ ಸರಿಸಾಟಿಯಾಗಿದ್ದಾನೆ."

ಒಂದು ಸಾವಿರ ವರುಷಗಳ ಕಾಲ ತನ್ನ ಗುರುವಿನಲ್ಲಿಯೇ ಇದ್ದ ಕಚನು ಗುರುವಿನ ಅನುಜ್ಞೆಯನ್ನು ಪಡೆದು ಸ್ವರ್ಗಲೋಕಕ್ಕೆ ಹೋಗಲು ತಯಾರಿ ನಡೆಸಿದನು. ವ್ರತದ ಅವಧಿಯು ಮುಗಿದು, ಗುರುವಿನಿಂದ ಅಪ್ಪಣೆಯನ್ನು ಪಡೆದು ಅವನು ಸ್ವರ್ಗಲೋಕಕ್ಕೆ ಹೊರಡುವಾಗ ದೇವಯಾನಿಯು ಹೇಳಿದಳು:

> "ಋಷಿ ಅಂಗಿರಸನ ಮೊಮ್ಮಗನೇ! ನೀನು ನಿನ್ನ

ನಡವಳಿಕೆಯಲ್ಲಿ, ವಿದ್ಯೆಯಲ್ಲಿ, ತಪಸ್ಸಿನಲ್ಲಿ, ದಮದಲ್ಲಿ ಎಲ್ಲರಿಗಿಂತ ಹೆಚ್ಚು ಬೆಳಗುತ್ತಿದ್ದೀಯೆ. ನನ್ನ ತಂದೆಯು ಮಹಾಯಶ ಋಷಿ ಅಂಗಿರಸನನ್ನು ಹೇಗೆ ಗೌರವಿಸುತ್ತಾನೋ ಹಾಗೆ ನಾನೂ ಕೂಡ ಬೃಹಸ್ಪತಿಯನ್ನು ಗೌರವಿಸುತ್ತೇನೆ ಮತ್ತು ಪೂಜಿಸುತ್ತೇನೆ. ಇದನ್ನು ತಿಳಿದ ನೀನು ನಾನು ಈಗ ಹೇಳುವುದನ್ನು ಕೇಳು. ನೀನು ವ್ರತನಿಯಮಗಳಲ್ಲಿರುವಾಗ ನಾನು ನಿನ್ನೊಂದಿಗೆ ಹೇಗೆ ವರ್ತಿಸುತ್ತಿದ್ದೆ ಎನ್ನುವುದು ನಿನಗೆ ತಿಳಿದೇ ಇದೆ. ಈಗ ನಿನ್ನ ಕಲಿಕೆಯು ಮುಗಿದಿದೆ. ಆದರಿಂದ ನಾನು ನಿನ್ನನ್ನು ಪ್ರೀತಿಸುವ ಹಾಗೆ ನೀನೂ ನನ್ನನ್ನು ಪ್ರೀತಿಸು. ಮಂತ್ರ ಪುರಸ್ಕರವಾಗಿ ವಿಧಿವತ್ತಾಗಿ ನನ್ನ ಪಾಣಿಗ್ರಹಣ ಮಾಡು."

ಕಚನು ಹೇಳಿದನು:

"ನಿನ್ನ ತಂದೆಯು ಹೇಗೋ ಹಾಗೆ ನೀನೂ ಕೂಡ ನನ್ನ ಪೂಜೆ ಮತ್ತು ಗೌರವಕ್ಕೆ ಪಾತ್ರಳು. ಅನವದ್ಯಾಂಗೀ! ನೀನು ನನಗೆ ಇನ್ನೂ ಹೆಚ್ಚು ಪೂಜನೀಯಳಾಗಿದ್ದೀಯೆ. ನೀನು ಮಹಾತ್ಮ ಭಾರ್ಗವನಿಗೆ ಅವನ ಪ್ರಾಣಕ್ಕಿಂತಲೂ ಪ್ರಿಯೆಯಾಗಿದ್ದೀಯೆ. ಧರ್ಮದ ಪ್ರಕಾರ ನಾನು ಗುರುಪುತ್ರಿಯಾದ ನಿನ್ನನ್ನು ಸದಾ ಪೂಜಿಸಬೇಕು. ನಿನ್ನ ತಂದೆ ಮತ್ತು ನನ್ನ ಗುರು ಶುಕ್ರನನ್ನು ನಾನು ಹೇಗೆ ನಿತ್ಯವೂ ಗೌರವಿಸುತ್ತೇನೋ ಅದೇರೀತಿ ನೀನೂ

ಇರುವೆ. ಆದ್ದರಿಂದ, ದೇವಯಾನಿ ! ಈ ತರಹದ ಮಾತುಗಳನ್ನು ನೀನು ನನ್ನಲ್ಲಿ ಹೇಳುವುದು ಸರಿಯಲ್ಲ."

ದೇವಯಾನಿಯು ಹೇಳಿದಳು:

"ನೀನು ನನ್ನ ತಂದೆಯ ಗುರುಪುತ್ರನ ಮಗನೇ ಹೊರತು ಅವನ ಮಗನಲ್ಲ. ಹೀಗಾಗಿ, ದ್ವಿಜೋತ್ತಮ ! ನಾನೂ ಕೂಡ ನಿನ್ನನ್ನು ಗೌರವಿಸಬೇಕು, ಪೂಜಿಸಬೇಕು. ನಿನ್ನನ್ನು ದಾನವರು ಪುನಃ ಪುನಃ ಕೊಲ್ಲುತ್ತಿದ್ದಾಗ ನಿನ್ನಮೇಲೆ ನಾನು ತೋರಿಸಿದ ಮತ್ತು ಎಂದೂ ತೋರಿಸುತ್ತಿದ್ದ ಪ್ರೀತಿಯನ್ನು ನೆನಪಿಸಿಕೋ. ಸೌಹಾರ್ದತೆಯಿಂದ, ಅನುರಾಗದಿಂದ ಅನುತ್ತಮ ಭಕ್ತಿಯಿಂದ ನಿನ್ನನ್ನು ಪ್ರೀತಿಸುವ ನನ್ನನ್ನು ತ್ಯಜಿಸುವುದು ಸರಿಯಲ್ಲ."

ಕಚನು ಹೇಳಿದನು:

"ಶುಭವ್ರತೇ ! ಒತ್ತಾಯ ಮಾಡಬಾರದುದಕ್ಕೆ ಒತ್ತಾಯ ಪಡಿಸಬೇಡ. ಕರುಣೆ ತೋರು. ನೀನು ನನಗೆ ನನ್ನ ಗುರುವಿಗಿಂತಲೂ ಹೆಚ್ಚು. ನೀನು ವಾಸಿಸುತ್ತಿದ್ದ ಕಾವ್ಯನ ಹೊಟ್ಟೆಯಲ್ಲಿ ನಾನೂ ಕೂಡ ವಾಸಿಸಿದ್ದೆ. ಧಾರ್ಮಿಕವಾಗಿ ನೀನು ನನ್ನ ಸಹೋದರಿ. ಈ ರೀತಿ ಹೇಳಬೇಡ. ನಾನು ಇಲ್ಲಿ ಸಂತೋಷದಿಂದ ಉಳಿದೆ. ಇಲ್ಲಿ ನಾನು ಸಮಯವನ್ನು ಅತ್ಯಂತ ಸುಖದಿಂದ ಕಳೆದೆ. ನನಗೆ ನಿನ್ನಲ್ಲಿ ಯಾವುದೇ ರೀತಿ ಮನಸ್ತಾಪವಿಲ್ಲ. ನನ್ನ ದಾರಿಯು ಮಂಗಳಕರವಾಗಿರಲಿ

ಎಂದು ನಿನ್ನಿಂದ ಬೀಳ್ಕೊಡುಗೆಯನ್ನು ಕೇಳುತ್ತಿದ್ದೇನೆ. ಧರ್ಮಕ್ಕೆ ಚ್ಯುತಿ ಬಾರದ ಹಾಗೆ ನಡೆದುಕೊಂಡ ನನ್ನನ್ನು ಯಾವಾಗಲಾದರೊಮ್ಮೆ ನೆನಪಿಸಿಕೊಳ್ಳುತ್ತಿರು. ನಿತ್ಯವೂ ನನ್ನ ಗುರುವನ್ನು ಆರಾಧಿಸುತ್ತಿರು."

ದೇವಯಾನಿಯು ಹೇಳಿದಳು:

"ನಾನು ಕೇಳಿಕೊಂಡಂತೆ ನೀನು ನನ್ನನ್ನು ನಿನ್ನ ಭಾರ್ಯೆಯನ್ನಾಗಿ ಮಾಡಿಕೊಳ್ಳದಿದ್ದರೆ ಕಚ ! ನಿನಗೆ ಈ ವಿಧ್ಯೆಯು ಸಿದ್ಧಿಯಾಗಲಾರದು !"

ಕಚನು ಹೇಳಿದನು:

"ನೀನು ಗುರುಪುತ್ರಿಯೆಂದು ಮಾತ್ರ ನಾನು ನಿನ್ನ ಬೇಡಿಕೆಯನ್ನು ಪೂರೈಸುತ್ತಿಲ್ಲ. ನಿನ್ನಲ್ಲಿದ್ದ ಯಾವ ದೋಷದ ಕಾರಣದಿಂದಲ್ಲ. ಗುರುವಿನಿಂದಲೂ ನನಗೆ ಈ ರೀತಿಯ ಅನುಜ್ಞೆಯಾಗಲಿಲ್ಲ. ನಿನಗೆ ಬೇಕೆನಿಸಿದರೆ ನನ್ನನ್ನು ಶಪಿಸು. ದೇವಯಾನಿ ! ನೀನು ಋಷಿಧರ್ಮವನ್ನು ಪಾಲಿಸಬೇಕೆಂದು ನಾನು ನಿನಗೆ ಹೇಳಿದ್ದೇನೆ. ನಿನ್ನ ಈ ಶಾಪಕ್ಕೆ ನಾನು ಅರ್ಹನಲ್ಲ. ನೀನು ಧರ್ಮದಿಂದಲ್ಲ, ಕಾಮದಿಂದ ನನಗೆ ಶಾಪವನ್ನಿತ್ತಿದ್ದೀಯೆ. ಆದರೆ ನಿನ್ನ ಈ ಆಸೆಯು ಎಂದೂ ಪೂರೈಸುವುದಿಲ್ಲ. ಯಾವ ಋಷಿಪುತ್ರನೂ ನಿನ್ನ ಪಾಣಿಗ್ರಹಣ ಮಾಡಿಕೊಳ್ಳುವುದಿಲ್ಲ. ನೀನು ಹೇಳಿದಹಾಗೆ ನನ್ನ ಈ ವಿಧ್ಯೆಯು ಫಲಿಸದೇ

ಇರಬಹುದು. ಆದರೆ ನಾನು ಇದನ್ನು ಹೇಳಿಕೊಟ್ಟವನಲ್ಲಿಯಾದರೂ ಇದು ಫಲಿಸುತ್ತದೆ.”

ಈ ರೀತಿ ದೇವಯಾನಿಗೆ ಹೇಳಿ ದ್ವಿಜಶ್ರೇಷ್ಠ ದ್ವಿಜಸತ್ತಮ ಕಚನು ಶೀಘ್ರವಾಗಿ ದೇವಲೋಕವನ್ನು ಸೇರಿದನು. ಅವನು ಬಂದಿರುವುದನ್ನು ಕಂಡ ಇಂದ್ರನೇ ಮೊದಲಾದ ದೇವತೆಗಳು ಸಂತೋಷದಿಂದ ಬೃಹಸ್ಪತಿಯನ್ನು ನೋಡುತ್ತಾ ಕಚನಿಗೆ ಹೇಳಿದರು:

“ನಮಗೆ ಅತ್ಯಂತ ಉತ್ತಮ ಪರಮಾದ್ಭುತ ಕಾರ್ಯವನ್ನು ಮಾಡಿದ್ದೀಯೆ. ನಿನ್ನ ಕೀರ್ತಿಯು ಎಂದೂ ಅಳಿಯುವುದಿಲ್ಲ. ನಮ್ಮ ಹವಿಸ್ಸುಗಳ ಪಾಲುದಾರನಾಗುತ್ತೀಯೆ.”

ವಿಧ್ಯೆಯನ್ನು ಕಲಿತು ಬಂದ ಕಚನನ್ನು ಪಡೆದು ದಿವೌಕಸರು ಬಹಳ ಸಂತಸಗೊಂಡರು. ಕಚನಿಂದ ಆ ವಿಧ್ಯೆಯನ್ನು ಪಡೆದು ಕೃತಾರ್ಥರಾದರು. ಸರ್ವರೂ ಸೇರಿ ಶತಕ್ರತುವಿಗೆ ಹೇಳಿದರು:

“ಪುರಂದರ! ಶತ್ರುಗಳನ್ನು ಸಂಹರಿಸಿ ನಿನ್ನ ವಿಕ್ರಮವನ್ನು ಅವರಿಗೆ ತೋರಿಸುವ ಕಾಲ ಬಂದಿದೆ.”

“ಹಾಗೆಯೇ ಆಗಲಿ” ಎಂದು ಹೇಳಿದ ಮಘವತನು ತ್ರಿದಶರೆಲ್ಲರನ್ನೂ ಸೇರಿಕೊಂಡು ಹೊರಟನು. ಅವರು ವನದಲ್ಲಿ ಸ್ತ್ರೀಯರನ್ನು ಕಂಡರು. ಚೈತ್ರರಥನಂತಿರುವ ವನದಲ್ಲಿ ಕನ್ಯೆಯರು ಜಲಕ್ರೀಡೆಯಾಡುತ್ತಿದ್ದರು. ಆಗ ಅವನು ವಾಯು ರೂಪವನ್ನು ತಾಳಿ ಅವರ ವಸ್ತ್ರಗಳನ್ನೆಲ್ಲಾ

ಅದಲು ಬದಲು ಮಾಡಿದನು. ಎಲ್ಲರೂ ಒಟ್ಟಿಗೇ ನೀರಿನಿಂದ ಹೊರಬಂದ ಕನ್ಯೆಯರು ಅದಲು ಬದಲಾದ ವಸ್ತ್ರಗಳಲ್ಲಿ ತಮಗೆ ಸಿಕ್ಕ ವಸ್ತ್ರಗಳನ್ನು ಧರಿಸಿಕೊಂಡರು. ದೇವಯಾನಿಯ ವಸ್ತ್ರವನ್ನು ವೃಷಪರ್ವಣನ ಮಗಳು ಶರ್ಮಿಷ್ಠೆಯು ಅದು ತನ್ನದಲ್ಲ ಎಂದು ತಿಳಿಯದೇ ಧರಿಸಿಕೊಂಡಳು. ಈ ರೀತಿ ದೇವಯಾನಿ ಮತ್ತು ಶರ್ಮಿಷ್ಠೆಯರಲ್ಲಿ ಇದೇ ವಿಷಯದ ಕುರಿತು ಮನಸ್ತಾಪ ಮತ್ತು ತಪ್ಪು ತಿಳುವಳಿಕೆಗಳು ಉಂಟಾದವು.

ದೇವಯಾನಿಯು ಹೇಳಿದಳು:

> “ನನ್ನ ಶಿಷ್ಯೆ ಅಸುರಿ ನೀನು ಹೇಗೆ ನನ್ನ ವಸ್ತ್ರವನ್ನು ಧರಿಸಿದ್ದೀಯೆ? ಒಳ್ಳೆಯ ನಡತೆಯನ್ನು ಕಳೆದುಕೊಂಡ ನಿನಗೆ ಎಂದೂ ಶ್ರೇಯಸ್ಸು ಉಂಟಾಗಲಾರದು.”

ಶರ್ಮಿಷ್ಠೆಯು ಹೇಳಿದಳು:

> “ನನ್ನ ತಂದೆಯು ಕುಳಿತಿರಲಿ ಅಥವಾ ಮಲಗಿರಲಿ, ನಿನ್ನ ತಂದೆಯು ಅವನಿಗಿಂಥ ಕೆಳ ಸ್ಥಾನದಲ್ಲಿ ನಿಂತು ವಿನೀತನಾಗಿ ಶ್ಲಾಘನೀಯವಾಗಿ ಸ್ತುತಿಸುತ್ತಾನೆ. ಸ್ತುತಿಸುವ, ಸ್ವೀಕರಿಸುವ, ಬೇಡುವವನ ಮಗಳು ನೀನು. ನಾನು ಸ್ತುತಿಸಲ್ಪಡುವ, ಕೊಡುವ ಮತ್ತು ಏನನ್ನೂ ಸ್ವೀಕರಿಸದೇ ಇರುವವನ ಮಗಳು. ಭಿಕ್ಷುಕೀ ! ಅನಾಯುಧಳಾದ ಮತ್ತು ಯಾರ ಬೆಂಬಲವೂ ಇಲ್ಲದ ನೀನು ನನ್ನ ಮುಂದೆ ಥರಥರಿಸುತ್ತೀಯೆ. ನಿನ್ನ

ಸರಿಸಾಟಿಯಾದವಳನ್ನು ಹುಡಿಕಿಕೋ. ನಾನು ನಿನ್ನನ್ನು ನನ್ನ ಸರಿಸಾಟಿಯೆಂದು ಪರಿಗಣಿಸುವುದಿಲ್ಲ.”

ಸಿಟ್ಟಿನಿಂದ ದೇವಯಾನಿಯು ತನ್ನ ಬಟ್ಟೆಗಳನ್ನು ಹರಿಯತೊಡಗಿದಳು. ಶರ್ಮಿಷ್ಠೆಯು ಅವಳನ್ನು ಒಂದು ಬಾವಿಯಲ್ಲಿ ದೂಡಿ ತನ್ನ ನಗರಕ್ಕೆ ತೆರಳಿದಳು. ಪಾಪನಿಶ್ಚಯೆ ಶರ್ಮಿಷ್ಠೆಯು ಅವಳು ತೀರಿಕೊಂಡಳೆಂದು ಯೋಚಿಸುತ್ತಾ, ಕ್ರೋಧವಶಾತ್ ಬಾವಿಯಲ್ಲಿ ಇಣುಕಿ ನೋಡದೇ, ತನ್ನ ಮನೆಗೆ ಹೊರಟು ಹೋದಳು.

ಇದೇ ಸಮಯದಲ್ಲಿ ನಹುಷಾತ್ಮಜ ಯಯಾತಿಯು ಜಿಂಕೆಯೊಂದನ್ನು ಅರಸುತ್ತಾ ಅಲ್ಲಿಗೆ ಬಂದನು. ಅವನ ಸಾರಥಿಯು ಬಳಲಿದ್ದನು, ಕುದುರೆಗಳು ಬಳಲಿದ್ದವು ಮತ್ತು ಅವನೂ ಕೂಡ ಬಹಳಷ್ಟು ಬಾಯಾರಿದ್ದನು. ನಾಹುಷನು ಬತ್ತಿಹೋಗಿದ್ದ ಆ ಬಾವಿಯಲ್ಲಿ ಇಣುಕಿದಾಗ ಅಲ್ಲಿ ಆ ಅಗ್ನಿಶಿಖೆಯಂತೆ ತೇಜೋಮಯ ಕನ್ಯೆಯನ್ನು ನೋಡಿದನು. ಆ ದೇವಕನ್ಯೆಯಂಥಹ ರೂಪವತಿಯನ್ನು ನೋಡಿದ ನೃಪಶ್ರೇಷ್ಠನು ಸಂತಯಿಸುತ್ತಾ, ಅತ್ಯಂತ ಮೃದು ಮಾತುಗಳಿಂದ ಕೇಳಿದನು:

“ತಾಮ್ರಬಣ್ಣದ ಉಗುರುಗಳು, ಸುಂದರ ಮಣಿಕುಂಡಲಗಳನ್ನು ಹೊಂದಿರುವ ಶ್ಯಾಮ ಸುಂದರಿ ನೀನು ಯಾರು? ಯಾವ ಕಾರಣದಿಂದಾಗಿ ನೀನು ಈ ರೀತಿ ನಿಟ್ಟುಸಿರು ಬಿಡುತ್ತಾ ವ್ಯಾಕುಲಳಾಗಿದ್ದೀಯೆ? ಹುಲ್ಲು

ಗಿಡಗಂಟಿಗಳಿಂದ ತುಂಬಿದ ಈ ಬಾವಿಯಲ್ಲಿ ಹೇಗೆ ಬಿದ್ದೆ?
ಸುಮಧ್ಯಮೇ! ನೀನು ಯಾರ ಮಗಳು? ಎಲ್ಲವನ್ನೂ



ಸವಿಸ್ತಾರವಾಗಿ ಹೇಳು."

ದೇವಯಾನಿಯು ಹೇಳಿದಳು:

"ದೇವತೆಗಳಿಂದ ಹತರಾಗಿ ಬಿದ್ದ ದೈತ್ಯರನ್ನು ತನ್ನ

ವಿದ್ಯೆಯಿಂದ ಮೇಲೆಬ್ಬಿಸುವ ಶುಕ್ರನ ಮಗಳು ನಾನು. ಆದರೆ ಅವನಿಗೆ ನಾನು ಈ ಸ್ಥಿತಿಯಲ್ಲಿರುವುದು ತಿಳಿದಿಲ್ಲ. ರಾಜನ್! ತಾಮ್ರನಖಾಂಗುಲಿಗಳನ್ನು ಹೊಂದಿದ ಈ ನನ್ನ ಬಲಗೈಯನ್ನು ಹಿಡಿದು ನನ್ನನ್ನು ಮೇಲೆತ್ತು. ನೀನು ಒಳ್ಳೆಯ ಕುಲದವನು ಎಂದು ನನಗೆ ತೋರುತ್ತಿದೆ. ನೀನು ಶಾಂತಸ್ವಭಾವದವನೂ, ವೀರವಂತನೂ, ಯಶಸ್ವಿಯೂ ಎಂದು ತಿಳಿಯುತ್ತೇನೆ. ಈ ಬಾವಿಯಲ್ಲಿ ಬಿದ್ದಿರುವ ನನ್ನನ್ನು ನೀನು ಮೇಲೆತ್ತಬೇಕು."

ಅವಳು ಬ್ರಾಹ್ಮಣ ಸ್ತ್ರೀಯೆಂದು ತಿಳಿದ ನಹುಷಾತ್ಮಜನು ಅವಳ ಬಲಗೈಯನ್ನು ಹಿಡಿದು ಅವಳನ್ನು ಆ ಬಾವಿಯಿಂದ ಮೇಲೆತ್ತಿದನು. ಬೇಗನೆ ಅವಳನ್ನು ಆ ಬಾವಿಯಿಂದ ಮೇಲಕ್ಕೆಳೆದ ನರಾಧಿಪ ಯಯಾತಿಯು ಆ ಸುಶ್ರೋಣಿಯಿಂದ ಬೀಳ್ಕೊಂಡು ತನ್ನ ನಗರಕ್ಕೆ ತೆರಳಿದನು.

ದೇವಯಾನಿಯು ಹೇಳಿದಳು:

"ಘೂರ್ಣಿಕೇ! ಬೇಗನೆ ಹೋಗಿ ನನ್ನ ತಂದೆಗೆ ನಡೆದುದೆಲ್ಲವನ್ನೂ ವರದಿಮಾಡು. ಇಂದಿನಿಂದ ನಾನು ವೃಷಪರ್ವನ ನಗರವನ್ನು ಪ್ರವೇಶಿಸಲು ನಿರಾಕರಿಸುತ್ತೇನೆ."

ಘೂರ್ಣಿಕೆಯು ತ್ವರಿತದಲ್ಲಿಯೇ ಅಸುರಮಂದಿರವನ್ನು ಪ್ರವೇಶಿಸಿ, ಅಲ್ಲಿ ಕಾವ್ಯನನ್ನು ಕಂಡು, ದುಗುಡದಿಂದ ಈ ರೀತಿ ಹೇಳಿದಳು:

“ಮಹಾಪ್ರಾಜ್ಞ! ನಾನು ಹೇಳುವುದನ್ನು ಕೇಳು. ವೃಷಪರ್ವನ ಮಗಳು ಶರ್ಮಿಷ್ಠೆಯು ವನದಲ್ಲಿ ದೇವಯಾನಿಯನ್ನು ಹೊಡೆದಳು.”

ತನ್ನ ಮಗಳನ್ನು ಶರ್ಮಿಷ್ಠೆಯು ಹೊಡೆದಳು ಎಂದು ಕೇಳಿ ದುಃಖಿತನಾದ ಕಾವ್ಯನು ತಕ್ಷಣವೇ ಮಗಳನ್ನು ಹುಡುಕುತ್ತಾ ವನಕ್ಕೆ ಹೋದನು. ವನದಲ್ಲಿ ಮಗಳು ದೇವಯಾನಿಯನ್ನು ಕಂಡ ಕಾವ್ಯನು ತನ್ನ ಬಾಹುಗಳಿಂದ ಅವಳನ್ನು ಬಿಗಿದಪ್ಪಿ, ದುಃಖಭರಿತನಾಗಿ ಈ ಮಾತುಗಳನ್ನಾಡಿದನು:

“ತಾವೇ ಮಾಡಿದ ತಪ್ಪುಗಳಿಂದಾಗಿ ಜನರು ಸುಖ-ದುಃಖಗಳೆಲ್ಲವನ್ನೂ ಅನುಭವಿಸುತ್ತಾರೆ. ಈ ಅವಸ್ಥೆಯನ್ನು ಪಡೆದಿರುವ ನೀನೂ ಕೂಡ ಯಾವುದೋ ಪಾಪವನ್ನು ಮಾಡಿರಬೇಕು ಎಂದು ನನಗನ್ನಿಸುತ್ತದೆ.”

ದೇವಯಾನಿಯು ಹೇಳಿದಳು:

“ನನ್ನ ತಪ್ಪಿರಬಹುದು ಅಥವಾ ಇಲ್ಲದಿರಬಹುದು. ನಾನು ಹೇಳುವುದನ್ನು ಗಮನವಿಟ್ಟು ಕೇಳು. ವೃಷಪರ್ವನ ಮಗಳು ಶರ್ಮಿಷ್ಠೆಯು ಸತ್ಯವನ್ನೇ ನುಡಿದಿರಬಹುದು. ನೀನು ದೈತ್ಯರ ಹೊಗಳು ಭಟ್ಟನೆಂದು ಅವಳು ಹೇಳಿದಳು. ವೃಷಪರ್ವಣಿ ಶರ್ಮಿಷ್ಠೆಯು ಕಣ್ಣುಗಳನ್ನು ಕೆಂಪುಮಾಡಿ ಕ್ರೋಧದಿಂದ ಈ ರೀತಿಯ ಹರಿತವಾದ ನೋಯಿಸುವ ಮಾತುಗಳನ್ನಾಡಿದಳು.

‘ಬೇಡುವ ಮತ್ತು ತೆಗೆದುಕೊಳ್ಳುವ ಹೊಗಳು ಭಟ್ಟನ ಮಗಳು ನೀನು. ನಾನಾದರೂ ಹೊಗಳಿಸಿಕೊಳ್ಳುವವನ, ಕೊಡುವವನ ಮತ್ತು ಬೇರೆಯವರಿಂದ ಏನನ್ನೂ ಸ್ವೀಕರಿಸದೇ ಇರುವವನ ಮಗಳು.’ ವೃಷಪರ್ವನ ಮಗಳು ಶರ್ಮಿಷ್ಠೆಯು ಸಿಟ್ಟಿನಿಂದ ಕಣ್ಣನು ಕೆಂಪುಮಾಡಿಕೊಂಡು ಸೊಕ್ಕಿನಿಂದ ಉಬ್ಬಿ ಮೇಲಿಂದ ಮೇಲೆ ಇದೇ ಮಾತುಗಳನ್ನಾಡಿದಳು. ಒಂದುವೇಳೆ ನಾನು ಹೊಗಳುಭಟ್ಟನ, ಬೇಡುವವನ ಮತ್ತು ತೆಗೆದುಕೊಳ್ಳುವವನ ಮಗಳೇ ಆಗಿದ್ದರೆ ನಾನು ಅವಳಿಗಿಷ್ಟವಾದುದನ್ನು ಮಾಡುತ್ತೇನೆಂದು ನನ್ನ ಸಖಿ ಶರ್ಮಿಷ್ಠೆಗೆ ಹೇಳಿದ್ದೇನೆ.”

ಶುಕ್ರನು ಹೇಳಿದನು:

“ಭದ್ರೇ ದೇವಯಾನಿ! ನೀನು ಹೊಗಳು ಭಟ್ಟನ ಮಗಳಲ್ಲ, ಬೇಡುವವನ ಮತ್ತು ತೆಗೆದುಕೊಳ್ಳುವವನ ಮಗಳೂ ಅಲ್ಲ. ಎಲ್ಲರಿಂದ ಸ್ತುತಿಸಲ್ಪಡುವ ಯಾರ ಸ್ತುತಿಯನ್ನೂ ಮಾಡದವನ ಮಗಳು ನೀನು. ಅಚಿಂತ್ಯನೂ ನಿರ್ದ್ವಂದ್ಯನೂ ಆದ ಈಶ್ವರ ಬ್ರಹ್ಮನೇ ನನ್ನ ಬಲವೆಂದು ವೃಷಪರ್ವನೂ ಇಂದ್ರನೂ ರಾಜ ನಹುಷನೂ ಅರಿತುಕೊಂಡಿದ್ದಾರೆ.

ಇನ್ನೊಬ್ಬರ ನಿಂದನೆಯ ಮಾತುಗಳನ್ನು ಸಹಿಸಿಕೊಳ್ಳುವವನು ಸರ್ವವನ್ನೂ ಜಯಿಸಿದಂತೆ ಎನ್ನುವುದನ್ನು ತಿಳಿದುಕೋ, ದೇವಯಾನಿ! ಏರುತ್ತಿರುವ ಕೋಪವನ್ನು ಹಗ್ಗಗಳನ್ನು

ಹಿಡಿದೆಳೆದು ಕುದುರೆಗಳನ್ನು ಹೇಗೋ ಹಾಗೆ ಹಿಡಿತದಲ್ಲಿ ತೆಗೆದುಕೊಳ್ಳುವವನೇ ನಿಜವಾದ ಸಾರಥಿ. ಕ್ರೋಧವನ್ನು ಅಕ್ರೋಧದಿಂದ ಶಾಂತಗೊಳಿಸವವನು ಸರ್ವವನ್ನೂ ಗೆದ್ದವನು ಎಂದು ತಿಳಿ. ಏರುತ್ತಿರುವ ಕ್ರೋಧವನ್ನು ಕ್ಷಮೆಯಿಂದ ಯಾರು ಶಾಂತಗೊಳಿಸುತ್ತಾರೋ ಅಂಥಹ ಪುರುಷರನ್ನು ಪೊರೆಬಿಡುವ ಹಾವಿಗೆ ಹೋಲಿಸುತ್ತಾರೆ. ಸಿಟ್ಟನ್ನು ಹಿಡಿತದಲ್ಲಿಟ್ಟುಕೊಂಡು, ನಿಂದನೆಯ ಮಾತುಗಳನ್ನು ಸಹಿಸಿ, ತಾನು ನೊಂದರೂ ಇತರರನ್ನು ನೋಯಿಸದವನು ನಿಶ್ಚಯವಾಗಿಯೂ ಸಂಪತ್ತಿನ ಕೊಪ್ಪರಿಗೆಯೇ. ಒಂದು ನೂರು ವರುಷಗಳ ವರೆಗೆ ತಿಂಗಳು ತಿಂಗಳೂ ಯಜ್ಞಮಾಡುವವನು ಮತ್ತು ಯಾರ ಮೇಲೂ ಸಿಟ್ಟಾಗದೇ ಇರುವವನು ಈ ಈರ್ವರಲ್ಲಿ ಸಿಟ್ಟಾಗದೇ ಇರುವವನೇ ಶ್ರೇಷ್ಠನು. ಬುದ್ಧಿಯಿಲ್ಲದ ಮಕ್ಕಳು ಮಕ್ಕಳಲ್ಲೇ ಜಗಳವಾಗುತ್ತದೆ. ಆದರೆ ಅದನ್ನು ಪ್ರಾಜ್ಞರು ಅನುಸರಿಸುವುದಿಲ್ಲ. ಯಾಕೆಂದರೆ ಅವರಿಗೆ ಬಲ ಮತ್ತು ದುರ್ಬಲಗಳೇನು ಎಂದು ತಿಳಿದಿರುವುದಿಲ್ಲ."

ದೇವಯಾನಿಯು ಹೇಳಿದಳು:

"ತಂದೇ! ಬಾಲಕಿಯಾದರೂ ನಾನು ಧರ್ಮಗಳ ಕುರಿತು ತಿಳಿದಿದ್ದೇನೆ. ಕ್ರೋಧ-ಅಕ್ರೋಧಗಳ ಅಂತರವನ್ನೂ ತಿಳಿದಿದ್ದೇನೆ. ಬಲಾಬಲಗಳನ್ನು ಅರಿತಿದ್ದೇನೆ. ಆದರೆ ಯಾವ

ಗುರುವೂ ಅಶಿಷ್ಯರಾಗಿ ವರ್ತಿಸುವ ತಮ್ಮ ಶಿಷ್ಯರನ್ನು ಕ್ಷಮಿಸಬಾರದು. ಕೆಟ್ಟದಾಗಿ ನಡೆದುಕೊಂಡಿರುವವರ ಮಧ್ಯೆ ವಾಸಿಸಲು ನನಗಿಷ್ಟವಿಲ್ಲ. ಶ್ರೇಯೋರ್ಥಿಯಾದ ಯಾರೂ ತನ್ನ ಕುಲ ಮತ್ತು ನಡತೆಯನ್ನು ನಿಂದಿಸುವ ಪಾಪಬುದ್ಧಿಗಳೊಡನೆ ವಾಸಿಸಬಾರದು. ಉತ್ತಮ ಕುಲ ಮತ್ತು ನಡತೆಯನ್ನು ತಿಳಿದು ಗೌರವಿಸುವವರ ಜೊತೆ ವಾಸಿಸುವುದು ಶ್ರೇಷ್ಠವೆಂದು ಹೇಳುತ್ತಾರೆ. ಅಂಥವರಲ್ಲಿಯೇ ನಾವು ವಾಸಿಸೋಣ. ವೃಷಪರ್ವನ ಮಗಳ ಮಹಾ ಘೋರ ಮತ್ತು ಕ್ರೂರ ಮಾತುಗಳಷ್ಟು ದುಷ್ಕರತರವಾದದ್ದು ಈ ಮೂರೂ ಲೋಕಗಳಲ್ಲಿಯೇ ಇಲ್ಲವೆಂದು ನನ್ನ ಅನಿಸಿಕೆ. ತನ್ನ ಪ್ರತಿದ್ವಂದಿಯ ಬೆಳಗುತ್ತಿರುವ ಕೀರ್ತಿಯನ್ನು ನೋಡಿ ಸಂತೋಷಪಡುವವನು ಸೋತವನೇ ಸರಿ.”

ಆಗ ಭೃಗುಶ್ರೇಷ್ಠ ಕಾವ್ಯನು ಕೋಪಗೊಂಡು ಆಸೀನನಾಗಿದ್ದ ವೃಷಪರ್ವನಲ್ಲಿಗೆ ಬಂದು ಏನನ್ನೂ ವಿಚಾರಮಾಡದೆಯೇ ಹೇಳಿದನು:

“ರಾಜನ್! ಅಧರ್ಮದ ನಡವಳಿಕೆಯು ಭೂಮಿಯಂತೆ ತಕ್ಷಣವೇ ಫಲವನ್ನೀಡುವುದಿಲ್ಲ. ಅದರ ಫಲವು ಕ್ರಮೇಣವಾಗಿ ತನ್ನಲ್ಲಿ, ಅಥವಾ ಪುತ್ರನಲ್ಲಿ ಅಥವಾ ಮೊಮ್ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತವೆ. ಒಳ್ಳೆಯದಾಗಿ ತಿಂದ ಊಟವನ್ನು ಹೊಟ್ಟೆಯು ಹೇಗೆ ಜೀರ್ಣಿಸಿಕೊಳ್ಳುತ್ತದೆಯೋ

ಹಾಗೆ ಪಾಪದ ಫಲವನ್ನೂ ನಿಶ್ಚಯವಾಗಿ ಜೀರ್ಣಿಸಿಕೊಳ್ಳಬೇಕಾಗುತ್ತದೆ. ನನ್ನ ಮನೆಯಲ್ಲಿದ್ದು ನನ್ನ ಶುಶ್ರೂಶೆಯಲ್ಲಿ ನಿರತನಾದ ಅಪಾಪಶೀಲ ಧರ್ಮಜ್ಞ ವಿಪ್ರ ಆಂಗೀರಸ ಕಚನನ್ನು ನೀನು ಕೊಲ್ಲಿಸಿದೆ. ವಧಾರ್ಹನಲ್ಲದವನ ವಧೆಗೈದುದಕ್ಕಾಗಿ ಮತ್ತು ನನ್ನ ಮಗಳನ್ನು ನೋಯಿಸಿದುದಕ್ಕಾಗಿ ನಿನ್ನನ್ನು ಮತ್ತು ನಿನ್ನ ಬಂಧುಗಳನ್ನು ನಾನು ತ್ಯಜಿಸುತ್ತೇನೆ. ಇನ್ನು ನಿನ್ನ ಈ ರಾಜ್ಯದಲ್ಲಿ ಇರಲಾರೆ. ನಾನು ಸುಳ್ಳು ಪ್ರಲಾಪನೆಮಾಡುತ್ತಿದ್ದೇನೆಂದು ತಿಳಿಯಬೇಡ. ನಿನ್ನ ತಪ್ಪುಗಳನ್ನು ತಡೆ ಹಿಡಿಯುವುದರ ಬದಲು ಮುಂದುವರಿಸಿಕೊಂಡು ಹೋಗುತ್ತಿದ್ದೀಯೆ."

ವೃಷಪರ್ವನು ಹೇಳಿದನು:

"ಭಾರ್ಗವ! ನೀನು ಎಂದೂ ಅಧರ್ಮದ ಮತ್ತು ಸುಳ್ಳಿನ ಮಾತನಾಡಿದ್ದುದು ನನಗೆ ಗೊತ್ತಿಲ್ಲ. ನಿನ್ನಲ್ಲಿ ಧರ್ಮ ಮತ್ತು ಸತ್ಯ ಇವೆರಡೂ ಇವೆ. ನನ್ನ ಮೇಲೆ ಕರುಣೆತೋರು. ನಿಜವಾಗಿಯೂ ನೀನು ನಮ್ಮನ್ನು ಬಿಟ್ಟು ಹೋದರೆ ನಮಗೆ ಸಮುದ್ರದ ಅಡಿಯನ್ನು ಸೇರುವುದರ ಹೊರತಾದ ಬೇರೆ ಮಾರ್ಗವೇ ಇಲ್ಲ."

ಶುಕ್ರನು ಹೇಳಿದನು:

"ಅಸುರರೇ! ಸಮುದ್ರದಲ್ಲಾದರೂ ಮುಳುಗಿ ಅಥವಾ

ದಿಕ್ಕಾಪಾಲಾಗಿ ಓಡಿಹೋಗಿ. ನನ್ನ ಪ್ರೀತಿಯ ಮಗಳಿಗಾದ ನಿಂದನೆಯನ್ನು ನನಗೆ ಸಹಿಸಲಾಗುತ್ತಿಲ್ಲ. ದೇವಯಾನಿಯನ್ನು ಸಂತೋಷದಿಂದಿಡುವುದರ ಮೇಲೆಯೇ ನನ್ನ ಜೀವನವು ನಿಂತಿದೆ. ಬೃಹಸ್ಪತಿಯು ಇಂದ್ರನ ಯೋಗಕ್ಷೇಮವನ್ನು ಹೇಗೆ ನೋಡಿಕೊಳ್ಳುತ್ತಾನೋ ಹಾಗೆ ನಾನು ಸದಾ ನನ್ನ ಮಗಳ ಯೋಗಕ್ಷೇಮವನ್ನು ಬಯಸುತ್ತೇನೆ."

ವೃಷಪರ್ವನು ಹೇಳಿದನು:

"ಭಾರ್ಗವ! ಈ ಅಸುರೇಂದ್ರರ ಎಲ್ಲ ಸಂಪತ್ತಿಗೂ - ನನ್ನನ್ನೂ ಸೇರಿ ಈ ಭೂಮಿ, ಆನೆಗಳು, ಕುದುರೆಗಳು, ಗೋವುಗಳೂ - ಎಲ್ಲಕ್ಕೂ ನೀನೇ ಒಡೆಯ."

ಶುಕ್ರನು ಹೇಳಿದನು:

"ಮಹಾಸುರ! ದೈತ್ಯೇಂದ್ರರ ಎಲ್ಲ ಸಂಪತ್ತಿಗೂ ನಾನು ಒಡೆಯನೆಂದಾದರೆ, ದೇವಯಾನಿಯನ್ನು ನೀನು ಸಂತುಷ್ಟಗೊಳಿಸಬೇಕು."

ದೇವಯಾನಿಯು ಹೇಳಿದಳು:

"ಭಾರ್ಗವ! ತಂದೇ! ಒಂದುವೇಳೆ ನೀನೇ ರಾಜನ ಮತ್ತು ಅವನ ಸರ್ವಸ್ವದ ಒಡೆಯನೆಂದಾದರೆ ಅದನ್ನು ಸ್ವಯಂ ರಾಜನೇ ನನ್ನ ಮುಂದೆ ಬಂದು ಹೇಳಲಿ."

ವೃಷಪರ್ವನು ಹೇಳಿದನು:

> “ದೇವಯಾನೀ! ನೀನು ಬಯಸಿದ ಎಲ್ಲ ಬಯಕೆಗಳನ್ನೂ ಅದೆಷ್ಟೇ ದುರ್ಲಭವಾಗಿದ್ದರೂ ನಾನು ಪೂರೈಸುತ್ತೇನೆ.”

ದೇವಯಾನಿಯು ಹೇಳಿದಳು:

> “ಒಂದು ಸಾವಿರ ದಾಸಿಯರೊಂದಿಗೆ ಶರ್ಮಿಷ್ಠೆಯೂ ನನ್ನ ದಾಸಿಯಾಗಲೆಂದು ಬಯಸುತ್ತೇನೆ. ನನ್ನ ತಂದೆಯು ನನ್ನನ್ನು ಕೊಟ್ಟಲ್ಲಿಗೂ ಅವಳು ನನ್ನನ್ನು ಅನುಸರಿಸಬೇಕು.”

ವೃಷಪರ್ವನು ಹೇಳಿದನು:

> “ಸಂಗ್ರಹೀತ್ರಿ! ಎದ್ದು ಹೋಗಿ ಶರ್ಮಿಷ್ಠೆಯನ್ನು ಬೇಗನೆ ಕರೆದು ತಾ. ದೇವಯಾನಿಯು ಬಯಸಿದಂತೆ ಅವಳು ನಡೆದುಕೊಳ್ಳಲಿ.”

ಆಗ ಆ ಧಾತ್ರಿಯು ಶರ್ಮಿಷ್ಠೆಯಲ್ಲಿ ಹೋಗಿ ಹೇಳಿದಳು:

> “ಭದ್ರೇ ಶರ್ಮಿಷ್ಠೇ! ಎದ್ದೇಳು. ನಿನ್ನವರಿಗೆ ಒಳಿತನ್ನು ಮಾಡು. ದೇವಯಾನಿಯಿಂದ ಪ್ರಚೋದಿತ ಬ್ರಾಹ್ಮಣನು ತನ್ನ ಶಿಷ್ಯರನ್ನು ಬಿಟ್ಟು ಹೋಗುವುದರಲ್ಲಿದ್ದಾನೆ. ನೀನು ಅವಳು ಬಯಸಿದ ಹಾಗೆ ನಡೆದುಕೊಳ್ಳಬೇಕಾಗಿದೆ.”

ಶರ್ಮಿಷ್ಠೆಯು ಹೇಳಿದಳು:

“ಇಂದು ಅವಳು ಏನನ್ನೇ ಬಯಸಿದರೂ ಅದರಂತೆ ನಡೆದುಕೊಳ್ಳಲು ಸಿದ್ಧಳಿದ್ದೇನೆ. ನನ್ನ ಕಾರಣದಿಂದಾಗಿ ಶುಕ್ರ ಮತ್ತು ದೇವಯಾನಿಯರು ಹೊರಟು ಹೋಗಬಾರದು.”

ತಕ್ಷಣವೇ ಅವಳು ತನ್ನ ತಂದೆಯ ಆಜ್ಞೆಯಂತೆ ಸಹಸ್ರ ದಾಸಿಕನ್ಯೆಯರೊಡಗೊಂಡು ಆ ಉತ್ತಮ ಅರಮನೆಯನ್ನು ಬಿಟ್ಟು ಬಂದಳು. ಶರ್ಮಿಷ್ಠೆಯು ಹೇಳಿದಳು:

“ಈ ಸಹಸ್ರ ದಾಸಿಕನ್ಯೆರೊಡನೆ ನಾನು ನಿನ್ನ ಪರಿಚಾರಿಕೆಯಾಗಿ ನಿನ್ನ ತಂದೆಯು ನಿನ್ನನ್ನು ಎಲ್ಲಿಗೆ ಕೊಡುತ್ತಾರೋ ಅಲ್ಲಿಗೂ ಹಿಂಬಾಲಿಸುತ್ತೇನೆ.”

ದೇವಯಾನಿಯು ಹೇಳಿದಳು:

“ಬೇಡುವ, ಸ್ತುತಿಸುವ ಬಂಡಿಯ ಮಗಳು ನಾನು. ಸ್ತುತಿಸಲ್ಪಡುವವನ ಮಗಳಾದ ನೀನು ಹೇಗೆ ನನ್ನ ದಾಸಿಯಾಗಬಲ್ಲೆ?”

ಶರ್ಮಿಷ್ಠೆಯು ಹೇಳಿದಳು:

“ಏನಾದರೂ ಮಾಡಿ ಆರ್ತರಾದ ನನ್ನವರಿಗೆ ಸುಖವನ್ನು ತರಲು ಬಯಸುತ್ತೇನೆ. ಆದುದರಿಂದ ನಿನ್ನ ತಂದೆಯು ನಿನ್ನನ್ನು ಎಲ್ಲಿಗೆ ಕೊಡುತ್ತಾರೋ ಅಲ್ಲಿಗೆ ನಾನು ಅನುಸರಿಸುವೆ.”

ಈ ರೀತಿ ವೃಷಪರ್ವನ ಮಗಳು ತನ್ನ ದಾಸಿಯಾದ ನಂತರ

ದೇವಯಾನಿಯು ತನ್ನ ತಂದೆಗೆ ಹೇಳಿದಳು:

> "ತಂದೆ ದ್ವಿಜಸತ್ತಮ! ನಾನು ಸಂತುಷ್ಠಳಾಗಿ ಪುರವನ್ನು ಪ್ರವೇಶಿಸುತ್ತಿದ್ದೇನೆ. ನಿನ್ನ ವಿದ್ಯಾಬಲ ಮತ್ತು ವಿಜ್ಞಾನವು ಅಮೋಘವೆಂದು ಈಗ ನನಗೆ ತಿಳಿಯಿತು."

ಮಗಳ ಈ ಮಾತುಗಳನ್ನು ಕೇಳಿ ಸಂತುಷ್ಠನಾದ ಮಹಾಯಶಸ್ವಿ ದ್ವಿಜಶ್ರೇಷ್ಠನು ತನ್ನ ಪುತ್ರಿಯೊಂದಿಗೆ ಸರ್ವ ದಾನವರಿಂದ ಆದರಗೊಂಡು ಪುರವನ್ನು ಪ್ರವೇಶಿಸಿದನು.

ದೀರ್ಘಕಾಲದ ನಂತರ ವರವರ್ಣಿನಿ ದೇವಯಾನಿಯು ಕ್ರೀಡಾರ್ಥವಾಗಿ ವನವನ್ನು ಸೇರಿದಳು. ಶರ್ಮಿಷ್ಠೆಯನ್ನೂ ಒಳಗೊಂಡ ತನ್ನ ಸಾವಿರ ದಾಸಿಯರೊಂದಿಗೆ ಅದೇ ಸ್ಥಳವನ್ನು ಸೇರಿ ಅಲ್ಲಿ ತನಗಿಷ್ಟವಾದ ರೀತಿಯಲ್ಲಿ ತಿರುಗಾಡಿದಳು. ಸರ್ವ ಸಖಿಯರಿಂದ ಸೇವಿಸಲ್ಪಟ್ಟ ಅವಳು ಅತೀವ ಸಂತೋಷದಿಂದಿದ್ದಳು. ಹೂವಿನ ಮಕರಂದವನ್ನು ಸವಿಯುತ್ತಾ, ಹಣ್ಣುಗಳನ್ನು ಕಚ್ಚಿ ತಿನ್ನುತ್ತಾ, ವಿವಿಧ ಭಕ್ಷ್ಯಗಳನ್ನು ಸೇವಿಸುತ್ತಾ ಅವರೆಲ್ಲರೂ ಆಡುತ್ತಿದ್ದರು.

ಪುನಃ ಬೇಟೆಯಾಡಲು ಜಿಂಕೆಗಳನ್ನು ಅರಸುತ್ತಿದ್ದ ರಾಜ ನಾಹುಷನು ಆಯಾಸಗೊಂಡು ಬಾಯಾರಿ ನೀರನ್ನು ಹುಡುಕುತ್ತಾ ಅದೇ ಸ್ಥಳಕ್ಕೆ ಬಂದನು. ಅಲ್ಲಿ ಅವನು ಕುಡಿದು ಆಡುತ್ತಿದ್ದ ದಿವ್ಯಾಭರಣಭೂಷಿತೆ ದೇವಯಾನಿ-ಶರ್ಮಿಷ್ಠೆಯರನ್ನೂ, ಇತರ ಸ್ತ್ರೀಯರನ್ನೂ ಕಂಡನು. ಆ ಎಲ್ಲ ವರಾಂಗನೆ ಸ್ತ್ರೀಯರ ಮಧ್ಯದಲ್ಲಿ, ಶರ್ಮಿಷ್ಠೆಯಿಂದ ಕಾಲುಗಳನ್ನು

ಒತ್ತಿಸಿ ಸೇವೆ ಮಾಡಿಸಿಕೊಳ್ಳುತ್ತಾ ಕುಳಿತಿದ್ದ ಅಪ್ರತಿಮ ರೂಪಿಣಿ ಶುಚಿಸ್ಮಿತೆ ದೇವಯಾನಿಯನ್ನು ಕಂಡನು. ಯಯಾತಿಯು ಹೇಳಿದನು:

> "ಎರಡು ಸಾವಿರ ಕನ್ಯೆಯರಿಂದ ಸುತ್ತುವರೆಯಲ್ಪಟ್ಟಿರುವ ನೀವಿಬ್ಬರು ಕನ್ಯೆಯರ ಗೋತ್ರ ಮತ್ತು ಹೆಸರುಗಳೇನೆಂದು ಕೇಳಬಹುದೇ?"

ದೇವಯಾನಿಯು ಹೇಳಿದಳು:

> "ನರಾಧಿಪ! ನಾನು ಹೇಳುವ ಮಾತುಗಳನ್ನು ಕೇಳು. ನಾನು ಶುಕ್ರ ಎಂಬ ಹೆಸರಿನ ಅಸುರಗುರುವಿನ ಮಗಳು. ನಾನೆಲ್ಲಿದ್ದರೂ ಅಲ್ಲಿಗೆ ಬರುವ ಈ ಸಖಿಯು ನನ್ನ ದಾಸಿ; ದಾನವೇಂದ್ರ ವೃಷಪರ್ವನ ಮಗಳು ಶರ್ಮಿಷ್ಠಾ."

ಯಯಾತಿಯು ಹೇಳಿದನು:

> "ಅಸುರೇಂದ್ರನ ಮಗಳು, ಸುಂದರ ಹುಬ್ಬಿನ ವರವರ್ಣಿನಿ ಈ ಕನ್ಯೆಯು ನಿನಗೆ ಸಖೀ ದಾಸಿ ಹೇಗಾದಳು ಎನ್ನುವುದೇ ನನಗೆ ಪರಮ ಕುತೂಹಲವೆನಿಸುತ್ತದೆ."

ದೇವಯಾನಿಯು ಹೇಳಿದಳು:

> "ನರವ್ಯಾಘ್ರ! ಸರ್ವವೂ ವಿಧಿಯನ್ನು ಅನುಸರಿಸಿಯೇ ನಡೆಯುತ್ತದೆ. ಇದೂ ಕೂಡ ವಿಧಿವಿಹಿತವೆಂದು ಸ್ವೀಕರಿಸಿ, ವಿಚಿತ್ರ ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸು. ರೂಪವೇಷದಲ್ಲಿ

ನೀನು ರಾಜನಂತಿದ್ದೀಯೆ; ನಿನ್ನ ಮಾತುಗಳು ವೇದವಾಖ್ಯಗಳಂತಿವೆ. ನಿನ್ನ ಹೆಸರೇನು, ನೀನು ಎಲ್ಲಿಯವನು ಮತ್ತು ಯಾರ ಮಗನೆಂದು ಹೇಳು."

ಯಯಾತಿಯು ಹೇಳಿದನು:

"ಬ್ರಹ್ಮಚರ್ಯದ ದಿನಗಳಲ್ಲಿ ವೇದವು ನನ್ನ ಕಿವಿಗಳನ್ನು ಹೊಕ್ಕವು. ರಾಜಪುತ್ರನಾದ ನಾನೊಬ್ಬ ರಾಜ. ಯಾಯಾತಿಯೆಂದು ಕರೆಯುತ್ತಾರೆ."

ದೇವಯಾನಿಯು ಹೇಳಿದಳು:

"ನೃಪ! ನೀನು ಯಾವ ಕಾರಣಕ್ಕಾಗಿ ಈ ಸ್ಥಳಕ್ಕೆ ಬಂದಿದ್ದೀಯೆ - ಕಮಲಗಳನ್ನು ಕೊಯ್ಯಲೋ ಅಥವಾ ಮೃಗಗಳ ಬೇಟೆಗೆಂದೋ?"

ಯಯಾತಿಯು ಹೇಳಿದನು:

"ಭದ್ರೇ! ಬೇಟೆಯಾಡಲು ಬಂದ ನಾನು ಕುಡಿಯುವ ನೀರಿಗಾಗಿ ಇಲ್ಲಿಗೆ ಬಂದಿದ್ದೇನೆ. ನೀನು ಬಹಳಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದೀಯೆ. ನನಗೆ ಹಿಂದಿರುಗಲು ಅಪ್ಪಣೆ ಕೊಡು."

ದೇವಯಾನಿಯು ಹೇಳಿದಳು:

"ಈ ನನ್ನ ದಾಸಿ ಶರ್ಮಿಷ್ಠೆ ಮತ್ತು ಈ ಸಹಸ್ರ ಕನ್ಯೆಯರೊಡನೆ

ನಾನೂ ಕೂಡ ನಿನ್ನ ಅಧೀನಳಾಗಿದ್ದೇನೆ. ನಿನಗೆ ಮಂಗಳವಾಗಲಿ. ನನ್ನ ಸಖ ಮತ್ತು ಪತಿಯಾಗು."

ಯಯಾತಿಯು ಹೇಳಿದನು:

"ಉಶನನ ಮಗಳು ಭಾಮಿನೀ! ನಿನಗೆ ಮಂಗಳವಾಗಲಿ. ನಾನು ನಿನ್ನ ಅರ್ಹನಲ್ಲ. ದೇವಯಾನಿ! ನಿನ್ನ ತಂದೆಯು ನಿನ್ನನ್ನು ರಾಜನಿಗೆ ವಿವಾಹ ಮಾಡಿಸುವುದಿಲ್ಲ."

ದೇವಯಾನಿಯು ಹೇಳಿದಳು:

"ಈ ಮೊದಲೂ ಕೂಡ ಬ್ರಾಹ್ಮಣರು ಕ್ಷತ್ರಿಯರನ್ನೂ ಕ್ರತ್ರಿಯರು ಬ್ರಾಹ್ಮಣರನ್ನೂ ಸೇರಿದ್ದಿದೆ. ಋಷಿಪುತ್ರನಾದ ನೀನೂ ಕೂಡ ಓರ್ವ ಋಷಿಯೇ. ನಾಹುಷ! ನನ್ನನ್ನು ವರಿಸು."

ಯಯಾತಿಯು ಹೇಳಿದನು:

"ವರಾಂಗನೇ! ನಾಲ್ಕು ವರ್ಣಗಳೂ ಒಂದೇ ದೇಹದಿಂದ ಉದ್ಭವವಾಗಿದ್ದರೂ ಅವರ ಧರ್ಮಗಳು ಬೇರೆ ಮತ್ತು ಅವರ ಶುದ್ಧತೆ ಬೇರೆ. ಅವರೆಲ್ಲರಲ್ಲಿ ಬ್ರಾಹ್ಮಣನೇ ಶ್ರೇಷ್ಠ."

ದೇವಯಾನಿಯು ಹೇಳಿದಳು:

"ನಾಹುಷ! ಈ ನನ್ನ ಕೈಗಳನ್ನು ಮೊದಲು ಬೇರೆ ಯಾರೂ

ಮುಟ್ಟಿರಲಿಲ್ಲ. ಮೊದಲಬಾರಿ ನನ್ನ ಕೈ ಹಿಡಿದವನು ನೀನೇ. ಆದುದರಿಂದ ನಿನ್ನನ್ನು ನಾನು ವರಿಸುತ್ತೇನೆ. ಋಷಿಪುತ್ರನೂ ಸ್ವಯಂ ಋಷಿಯೂ ಆದ ನೀನು ಹಿಡಿದ ಈ ಕೈಯನ್ನು ಬೇರೆಯವರು ಹಿಡಿಯುವುದನ್ನು ಸ್ವಾಭಿಮಾನಿಯಾದ ನಾನು ಹೇಗೆ ತಾನೆ ಸಹಿಸಲಿ?"

ಯಯಾತಿಯು ಹೇಳಿದನು:

"ಘೋರವಿಷ ಸರ್ಪ ಮತ್ತು ಎಲ್ಲಕಡೆ ಉರಿಯುತ್ತಿರುವ ಬೆಂಕಿಗಿಂತಲೂ ಬ್ರಾಹ್ಮಣರಿಂದ ದೂರವಿರುವುದು ಹೆಚ್ಚು ಒಳ್ಳೆಯದು ಎಂದು ತಿಳಿದವರು ಹೇಳುತ್ತಾರೆ."

ದೇವಯಾನಿಯು ಹೇಳಿದಳು:

"ಪುರುಷರ್ಷಭ! ವಿಷಸರ್ಪ ಮತ್ತು ಸರ್ವತೋಮುಖ ಅಗ್ನಿಗಿಂತ ವಿಪ್ರರಿಂದ ದೂರವಿರುವುದು ಒಳ್ಳೆಯದೆಂದು ಯಾಕೆ ಹೇಳುತ್ತಿದ್ದೀಯೆ?"

ಯಯಾತಿಯು ಹೇಳಿದನು:

"ವಿಷಸರ್ಪವೂ ಒಬ್ಬನನ್ನೇ ಕೊಲ್ಲುತ್ತದೆ, ಖಡ್ಗವೂ ಒಬ್ಬನನ್ನೇ ಕೊಲ್ಲುತ್ತದೆ. ಆದರೆ ಕೋಪಿತ ಬ್ರಾಹ್ಮಣನು ಇಡೀ ರಾಷ್ಟ್ರ ಅಥವಾ ಪುರವನ್ನೇ ನಾಶಪಡಿಸಬಲ್ಲ. ಆದುದರಿಂದ ಸುಂದರಿ! ವಿಪ್ರನನ್ನು ಎದುರಿಸುವುದು ಬಹಳ ಕಷ್ಟವೆಂದು

ನನ್ನ ಅನಿಸಿಕೆ. ನಿನ್ನ ತಂದೆಯು ನಿನ್ನನ್ನು ನನಗೆ ಕೊಡದೇ ನಾನು ನಿನ್ನನ್ನು ಮದುವೆಯಾಗಲಾರೆ.”

ದೇವಯಾನಿಯು ಹೇಳಿದಳು:

“ತಂದೆಯು ನನ್ನನ್ನು ನಿನಗೆ ಕೊಟ್ಟಾಗಲೇ ವರಿಸು. ರಾಜನ್! ನಾನು ಈಗಾಗಲೇ ನಿನ್ನನ್ನು ವರಿಸಿಯಾಗಿದೆ. ಕೇಳದೇ ಇದ್ದುದನ್ನು ಕೊಟ್ಟಾಗ ಸ್ವೀಕರಿಸುವುದರಲ್ಲಿ ಯಾವ ಭಯವೂ ಇಲ್ಲ.”

ತಕ್ಷಣವೇ ದೇವಯಾನಿಯು ತನ್ನ ತಂದೆಗೆ ವಿಷಯವನ್ನು ಹೇಳಿ ಕಳುಹಿಸಿದಳು. ವಿಷಯ ತಿಳಿದ ಭಾರ್ಗವನು ರಾಜನನ್ನು ಕಾಣಲು ಬಂದನು. ಪೃಥಿವೀಪತಿ ಯಯಾತಿಯು ಆಗಮಿಸಿದ ಬ್ರಾಹ್ಮಣ ಕಾವ್ಯ ಶುಕ್ರನನ್ನು ಕಂಡು ಅಂಜಲೀ ಬದ್ಧನಾಗಿ ನಮಸ್ಕರಿಸಿ, ಪ್ರಣೀತನಾಗಿ ನಿಂತುಕೊಂಡನು. ದೇವಯಾನಿಯು ಹೇಳಿದಳು:

“ತಂದೇ! ನಾನು ದುಃಖದಲ್ಲಿದ್ದಾಗ ನನ್ನ ಕೈಹಿಡಿದ ಇವನು ರಾಜ ನಹುಷನ ಪುತ್ರ. ಇವನಿಗೇ ನನ್ನನ್ನು ಕೊಡು. ಈ ಲೋಕಗಳಲ್ಲಿ ಬೇರೆ ಯಾರನ್ನೂ ನನ್ನ ಪತಿಯನ್ನಾಗಿ ವರಿಸುವುದಿಲ್ಲ.”

ಶುಕ್ರನು ಹೇಳಿದನು:

“ವೀರ! ನನ್ನ ಪ್ರೀತಿಯ ಮಗಳು ನಿನ್ನನ್ನು ಪತಿಯನ್ನಾಗಿ

ವರಿಸಿದ್ದಾಳೆ. ನಾನು ನಿನಗೆ ನೀಡುತ್ತಿರುವ ಇವಳನ್ನು ನಿನ್ನ ರಾಣಿಯನ್ನಾಗಿ ಸ್ವೀಕರಿಸು.”

ಯಯಾತಿಯು ಹೇಳಿದನು:

“ಭಾರ್ಗವ! ವರ್ಣಸಂಕರ ಪಾಪವು ನನ್ನನ್ನು ಮುಟ್ಟದಿರಲಿ ಎನ್ನುವ ವರವನ್ನು ನನಗೆ ಅನುಗ್ರಹಿಸು.”

ಶುಕ್ರನು ಹೇಳಿದನು:

“ಅಧರ್ಮದಿಂದ ನಿನ್ನನ್ನು ವಿಮೋಚಿಸುತ್ತೇನೆ. ನಿನಗಿಷ್ಟವಾದಂತೆ ಅವಳನ್ನು ವರಿಸು. ಈ ವಿವಾಹದಿಂದ ಹಿಂಜರಿಯಬೇಡ. ನಿನ್ನನ್ನು ಪಾಪಗಳಿಂದ ವಿಮುಕ್ತನನ್ನಾಗಿ ಮಾಡುತ್ತೇನೆ. ನಿನ್ನ ಹೆಂಡತಿ ಸುಮಧ್ಯಮೆ ದೇವಯಾನಿಯನ್ನು ಧರ್ಮದಿಂದ ನೋಡಿಕೋ. ಇವಳ ಜೊತೆಗೂಡಿ ನೀನು ಅತುಲ ಸಂತೋಷವನ್ನು ಹೊಂದುತ್ತೀಯೆ. ರಾಜನ್! ವಾರ್ಷವಪರ್ವಣಿ ಕುಮಾರಿ ಶರ್ಮಿಷ್ಠೆಯನ್ನೂ ಗೌರವದಿಂದ ಸತತ ಕಾಣು. ಅವಳನ್ನು ಎಂದೂ ನಿನ್ನ ಹಾಸಿಗೆಯ ಮೇಲೆ ಕರೆದುಕೊಳ್ಳಬೇಡ.”

ಇದನ್ನು ಕೇಳಿದ ಯಯಾತಿಯು ಮಹಾತ್ಮ ಶುಕ್ರನಿಗೆ ಪ್ರದಕ್ಷಿಣೆ ಮಾಡಿ, ಅಪ್ಪಣೆಯನ್ನು ಪಡೆದು ಸಂತೋಷದಿಂದ ತನ್ನ ಪುರಕ್ಕೆ ತೆರಳಿದನು.

ಯಯಾತಿಯು ಮಹೇಂದ್ರಪುರಸನ್ನಿಭ ತನ್ನ ಪುರವನ್ನು ಸೇರಿ

ಅಂತಃಪುರವನ್ನು ಪ್ರವೇಶಿಸಿ ಅಲ್ಲಿ ದೇವಯಾನಿಯನ್ನಿರಿಸಿದನು. ದೇವಯಾನಿಯ ಹೇಳಿಕೆಯಂತೆ ವೃಷಪರ್ವನ ಮಗಳನ್ನು ಅಶೋಕವನದ ಬಳಿ ಒಂದು ಮನೆಯನ್ನು ನಿರ್ಮಿಸಿ ಅಲ್ಲಿ ಇರಿಸಿದನು. ಸಹಸ್ರ ದಾಸಿಯರಿಂದ ಆವೃತಳಾದ ಅಸುರಾಯಿಣೀ ಶರ್ಮಿಷ್ಠೆಗೆ ಸುಸಜ್ಜಿತ ಅನ್ನ, ಪಾನೀಯ ಮತ್ತು ವಸ್ತ್ರಗಳ ವ್ಯವಸ್ಥೆಯನ್ನು ಮಾಡಿದನು. ಆ ನೃಪ ನಹುಷಾತ್ಮಜನು ದೇವಯಾನಿಯ ಸಹಿತ ದೇವತೆಯಂತೆ ಬಹಳ ವರ್ಷಗಳ ಕಾಲ ವಿಹರಿಸುತ್ತಾ ಅತ್ಯಂತ ಸಂತೋಷವನ್ನು ಹೊಂದಿದನು. ಋತುಕಾಲ ಸಂಪ್ರಾಪ್ತವಾದಾಗ ವರಾಂಗನೆ ದೇವಯಾನಿಯು ಗರ್ಭವನ್ನು ಧರಿಸಿ ಮೊದಲನೆಯ ಕುಮಾರನಿಗೆ ಜನ್ಮವಿತ್ತಳು.

ಈ ರೀತಿ ಒಂದು ಸಾವಿರ ವರ್ಷಗಳು ಕಳೆಯುತ್ತಿದ್ದಂತೆ ವಾರ್ಷಪರ್ವಣೀ ಶರ್ಮಿಷ್ಠೆಯು ಯೌವನವನ್ನು ಹೊಂದಿ ತನ್ನ ಋತುವು ಪ್ರಯೋಜನಕ್ಕೆ ಬಾರದೆ ಇರುವುದನ್ನು ಕಂಡು ಯೋಚಿಸತೊಡಗಿದಳು:

> "ಋತುಕಾಲವನ್ನು ಪಡೆದಿದ್ದೇನೆ. ಆದರೆ ಇದೂವರೆಗೂ ನಾನು ಯಾರನ್ನೂ ಪತಿಯನ್ನಾಗಿ ವರಿಸಿಲ್ಲ. ಇದೇನಾಯಿತು? ಏನು ಮಾಡಲಿ? ಆಗಬೇಕಾದುದನ್ನು ಹೇಗೆ ಮಾಡಲಿ? ದೇವಯಾನಿಯು ಮಕ್ಕಳಿಗೆ ಜನ್ಮವಿತ್ತಿದ್ದಾಳೆ. ನನ್ನ ಯೌವನವು ವ್ಯರ್ಥವಾಗುತ್ತಿದೆ. ಅವಳು ಯಾರನ್ನು ತನ್ನ ಪತಿಯನ್ನಾಗಿ

ವರಿಸಿದ್ದಾಳೆಯೋ ಅವನನ್ನೇ ನನ್ನ ಪತಿಯನ್ನಾಗಿ ವರಿಸುತ್ತೇನೆ. ರಾಜನು ನನಗೆ ಪುತ್ರಫಲ ನೀಡಬೇಕೆಂದು ನನ್ನ ಬುದ್ಧಿ ನಿಶ್ಚಯಿಸಿದೆ. ಆದರೆ ಆ ಧರ್ಮಾತ್ಮನು ಇಲ್ಲಿ ನನಗೆ ಏಕಾಂತದಲ್ಲಿ ಕಾಣಲು ದೊರಕುತ್ತಾನೆಯೇ?"

ಅದೇ ವೇಳೆಯಲ್ಲಿ ರಾಜನು ಹಾಗೆಯೇ ಹೊರಬಂದು ಅಶೋಕವನದ ಬಳಿ ಶರ್ಮಿಷ್ಠೆಯನ್ನು ಕಂಡು ಅವಳ ಎದುರೇ ನಿಂತನು. ಅವನೊಬ್ಬನೇ ಇರುವುದನ್ನು ನೋಡಿದ ಚಾರುಹಾಸಿನಿ ಶರ್ಮಿಷ್ಠೆಯು ಕೈಜೋಡಿಸಿ ವಂದಿಸಿ ರಾಜನಲ್ಲಿ ಕೇಳಿಕೊಂಡಳು:

"ನಾಹುಷ! ಸೋಮ, ಇಂದ್ರ, ವಿಷ್ಣು, ಯಮ, ವರುಣ ಮತ್ತು ನಿನ್ನ ಮನೆಯಲ್ಲಿರುವ ಸ್ತ್ರೀಯರನ್ನು ಯಾರುತಾನೆ ಮುಟ್ಟಲು ಪ್ರಯತ್ನಿಸುತ್ತಾರೆ? ನೀನು ನನ್ನ ರೂಪ, ಜನ್ಮ ಮತ್ತು ನಡತೆಯ ಕುರಿತು ಸದಾ ತಿಳಿದಿದ್ದೀಯೆ. ಆದುದರಿಂದ ನನ್ನ ಈ ಋತುವು ನಿಷ್ಫಲವಾಗದಂತೆ ಅನುಗ್ರಹಿಸು ಎಂದು ನಿನ್ನಲ್ಲಿ ಕೇಳಿಕೊಳ್ಳುತ್ತೇನೆ."

ಯಯಾತಿಯು ಹೇಳಿದನು:

"ನೀನು ಶೀಲಸಂಪನ್ನಳೂ, ಅನಿಂದಿತೆಯೂ ಆದ ದೈತ್ಯಕನ್ಯೆಯೆಂದು ನನಗೆ ತಿಳಿದಿದೆ. ನಿನ್ನ ರೂಪದಲ್ಲಿ ಒಂದು ಸೂಜಿಯ ಮೊನೆಯಷ್ಟು ದೋಷವನ್ನೂ ನಾನು ಕಾಣುತ್ತಿಲ್ಲ. ಆದರೆ ದೇವಯಾನಿಯನ್ನು ವಿವಾಹವಾದ ಸಮಯದಲ್ಲಿ

ಉಶನ ಕಾವ್ಯನು ವಾರ್ಷಪರ್ವಣಿಯನ್ನು ನಿನ್ನ ಹಾಸಿಗೆಯ ಮೇಲೆ ಕರೆದುಕೊಳ್ಳಬೇಡ ಎಂಬ ನಿಯಮವನ್ನು ಹಾಕಿದ್ದಾನೆ."

ಶರ್ಮಿಷ್ಠೆಯು ಹೇಳಿದಳು:

"ರಾಜನ್! ಐದು ಪರಿಸ್ಥಿತಿಗಳಲ್ಲಿ - ಹಾಸ್ಯ, ಸ್ತ್ರೀ, ವಿವಾಹಕಾಲ, ಪ್ರಾಣಾಪತ್ತು ಮತ್ತು ಸರ್ವ ಧನವನ್ನೂ ಕಳೆದುಕೊಂಡ ಸಮಯ - ಹೇಳಿದ ಸುಳ್ಳು ಪಾಪವಲ್ಲ. ಸಾಕ್ಷಿಯನ್ನು ಕೇಳಿದಾಗ ಸುಳ್ಳುಹೇಳುವವನನ್ನು ನಿಜವಾದ ಸುಳ್ಳುಗಾರನೆಂದು ಹೇಳುತ್ತಾರೆ. ಒಂದೇ ಉದ್ದೇಶವನ್ನು ನೆರವೇರಿಸಲೋಸುಗ ಹೇಳುವ ಸುಳ್ಳು ನಿಜವಾದ ಸುಳ್ಳು."

ಯಯಾತಿಯು ಹೇಳಿದನು:

"ರಾಜನು ಪ್ರಜೆಗಳಿಗೆ ಪ್ರಮಾಣವಿದ್ದಂತೆ. ಅವನೇ ಸುಳ್ಳು ಹೇಳಿದರೆ ಎಲ್ಲವನ್ನೂ ಕಳೆದುಕೊಂಡಹಾಗೆ. ಬಹಳಷ್ಟು ಅನಿಷ್ಟವಾಗುತ್ತದೆ ಎಂದಾದರೂ ನಾನು ಸುಳ್ಳನ್ನು ಹೇಳ ಬಯಸುವುದಿಲ್ಲ."

ಶರ್ಮಿಷ್ಠೆಯು ಹೇಳಿದಳು:

"ಸಖಿಯ ಪತಿ ಮತ್ತು ತನ್ನ ಪತಿ ಇವರೀರ್ವರಿಗೂ ಗಾಢ ಸಂಬಂಧವಿದೆ ಎಂದು ಹೇಳುತ್ತಾರೆ. ಸಖಿಯ ವಿವಾಹವೂ ತನ್ನ ವಿವಾಹವಿದ್ದಂತೆ ಎಂದೂ ಹೇಳುತ್ತಾರೆ. ನನ್ನ ಸಖಿಯ

ಪತಿ ನಿನ್ನನ್ನು ನನ್ನ ಪತಿಯನ್ನಾಗಿ ವರಿಸಿದ್ದೇನೆ."

ಯಯಾತಿಯು ಹೇಳಿದನು:

"ಯಾಚಿಸಿದ್ದುದನ್ನು ಕೊಟ್ಟುಬಿಡಬೇಕು ಎನ್ನುವುದು ನಾನು ಪಾಲಿಸಿಕೊಂಡು ಬಂದ ವ್ರತ. ನನ್ನ ಪ್ರೀತಿಯನ್ನು ನೀನು ಯಾಚಿಸುತ್ತಿದ್ದೀಯೆ. ನಾನೇನು ಮಾಡಲಿ ಹೇಳು."

ಶರ್ಮಿಷ್ಠೆಯು ಹೇಳಿದಳು:

"ರಾಜನ್! ಅಧರ್ಮದಿಂದ ನನ್ನನ್ನು ಉದ್ಧರಿಸು ಮತ್ತು ಧರ್ಮದಲ್ಲಿ ನಡೆಯುವಹಾಗೆ ಮಾಡು. ನಿನ್ನಿಂದ ಒಂದು ಮಗುವಿನ ತಾಯಿಯಾದರೆ ನಾನು ಈ ಲೋಕದಲ್ಲಿ ಉತ್ತಮ ಧರ್ಮವನ್ನು ಪರಿಪಾಲಿಸಿದಂತಾಗುತ್ತದೆ. ಭಾರ್ಯೆ, ದಾಸಿ ಮತ್ತು ಸುತ ಈ ಮೂವರೂ ಅಧನರೆಂದು ಹೇಳಬಹುದು. ಅವರು ಗಳಿಸಿದ ಸಂಪತ್ತೆಲ್ಲವೂ ಅವರ ಒಡೆಯನಿಗೇ ಸೇರುತ್ತವೆ. ನಾನು ದೇವಯಾನಿಯ ದಾಸಿಯಾದರೆ ಭಾರ್ಗವಿಯು ನಿನ್ನ ವಶದಲ್ಲಿದ್ದಾಳೆ. ಅವಳು ಮತ್ತು ನಾನು ಇಬ್ಬರೂ ನಿನ್ನನ್ನೇ ಅವಲಂಬಿಸಿದ್ದೇವೆ. ನನ್ನನ್ನು ತೃಪ್ತಿಗೊಳಿಸು."

ಅವಳು ಹೀಗೆ ಹೇಳಿದಾಗ ರಾಜನು ಅವಳಲ್ಲಿರುವ ಸತ್ಯವನ್ನು ತಿಳಿದನು. ಶರ್ಮಿಷ್ಠೆಯನ್ನು ಗೌರವದಿಂದ ಸ್ವೀಕರಿಸಿ, ಅವಳಿಗೆ ಧರ್ಮ

ಮಾರ್ಗವನ್ನು ತೋರಿಸಿದನು. ಶರ್ಮಿಷ್ಠೆಯನ್ನು ಒಂದುಗೂಡಿ ಸುಖವನ್ನು ಪಡೆದನು. ನಂತರ ಪರಸ್ಪರರನ್ನು ಬೀಳ್ಕೊಂಡು ತಮ್ಮ ತಮ್ಮ ದಾರಿಯನ್ನು ಕೂಡಿದರು. ಆ ಸಮಾಗಮದಿಂದ ಸುಭ್ರು, ಚಾರುಹಾಸಿನಿ ಶರ್ಮಿಷ್ಠೆಯು ನೃಪತಿ ಸತ್ತಮನಿಂದ ಪ್ರಥಮ ಗರ್ಭವನ್ನು ಧರಿಸಿದಳು. ಕಾಲಪ್ರಾಪ್ತವಾದಾಗ ಆ ರಾಜೀವಲೋಚನೆಯು ದೇವಗರ್ಭ ಕಾಂತಿಯನ್ನು ಹೊಂದಿದ ರಾಜೀವಲೋಚನ ಕುಮಾರನಿಗೆ ಜನ್ಮವಿತ್ತಳು.

ಕುಮಾರನ ಜನನದ ಕುರಿತು ಕೇಳಿದ ಶುಚಿಸ್ಮಿತೆ ದೇವಯಾನಿಯು ದುಃಖಾರ್ತಳಾಗಿ ಶರ್ಮಿಷ್ಠೆಯ ಕುರಿತು ಚಿಂತಿಸತೊಡಗಿದಳು. ಶರ್ಮಿಷ್ಠೆಯ ಬಳಿಹೋಗಿ ದೇವಯಾನಿಯು ಕೇಳಿದಳು:

> “ಸುಂದರ ಹುಬ್ಬಿನವಳೇ! ಕಾಮಲುಬ್ಧಳಾಗಿ ಇದೇನು ಮಾಡಿಬಿಟ್ಟೆ?”

ಶರ್ಮಿಷ್ಠೆಯು ಹೇಳಿದಳು:

> “ಧರ್ಮಾತ್ಮನೂ ವೇದಪಾರಂಗತನೂ ಆದ ಓರ್ವ ಋಷಿಯು ಬಂದಾಗ ಧರ್ಮಸಂಹಿತವಾಗಿ ಕೇಳಿಕೊಂಡಾಗ ಅವನು ನನಗೆ ನನ್ನ ಆಸೆಯನ್ನು ನೆರವೇರಿಸಿಕೊಟ್ಟನು. ನಾನು ಅನ್ಯಾಯದಿಂದ ಕಾಮವನ್ನು ಆಚರಿಸಲಿಲ್ಲ. ಸತ್ಯವನ್ನು ಹೇಳುತ್ತಿದ್ದೇನೆ. ಆ ಋಷಿಯಿಂದಲೇ ನಾನು ಈ ಮಗುವನ್ನು ಪಡೆದಿದ್ದೇನೆ.”

ದೇವಯಾನಿಯು ಹೇಳಿದಳು:

> “ಸುಂದರಿ! ಇದು ಸತ್ಯವೆಂದಾದರೆ ನಾನೇನೂ ಹೇಳಲಾರೆ. ನಿನಗೆ ಆ ದ್ವಿಜನ ಕುರಿತು ತಿಳಿದಿರಬಹುದು. ಆ ದ್ವಿಜನ ಗೋತ್ರ ಮತ್ತು ಹೆಸರನ್ನು ತಿಳಿಯ ಬಯಸುತ್ತೇನೆ.”

ಶರ್ಮಿಷ್ಠೆಯು ಹೇಳಿದಳು:

> “ಶುಚಿಸ್ಮಿತೇ! ಓಜಸ್ಸು ಮತ್ತು ತೇಜಸ್ಸಿನಲ್ಲಿ ರವಿಯಂತೆ ಬೆಳಗುತ್ತಿದ್ದ ಅವನನ್ನು ನೋಡಿದ ನನಗೆ ಇದನ್ನೆಲ್ಲಾ ಕೇಳಿ ತಿಳಿಯುವ ಶಕ್ತಿಯೇ ಇರಲಿಲ್ಲ.”

ದೇವಯಾನಿಯು ಹೇಳಿದಳು:

> “ಶರ್ಮಿಷ್ಠೇ! ಸತ್ಯವಾಗಿ ನಿನ್ನ ಮಗುವನ್ನು ಜ್ಯೇಷ್ಠ ಮತ್ತು ಶ್ರೇಷ್ಠ ದ್ವಿಜನೋರ್ವನಿಂದ ಪಡೆದಿದ್ದೀಯೆ ಎಂದಾದರೆ ನಾನು ಸಿಟ್ಟಿಗೇಳುವ ಕಾರಣವೇ ಇಲ್ಲ.”

ಈ ರೀತಿ ಅನ್ಯೋನ್ಯರಲ್ಲಿ ಮಾತನಾಡಿ, ಹಾಸ್ಯಗೇಲಿಯಲ್ಲಿ ನಕ್ಕರು. ತಾನು ಕೇಳಿದ ಸುಳ್ಳನ್ನು ಸತ್ಯವೆಂದೇ ನಂಬಿ, ಭಾರ್ಗವಿಯು ತನ್ನ ಮನೆ ಸೇರಿದಳು. ನೃಪ ಯಯಾತಿಯು ದೇವಯಾನಿಯಲ್ಲಿ ಇಂದ್ರ-ವಿಷ್ಣುವಿನಂತಿರುವ ಯದು ಮತ್ತು ತುರ್ವಸುವೆಂಬ ಇನ್ನೂ ಎರಡು ಪುತ್ರರನ್ನು ಪಡೆದನು. ಅದೇ ರಾಜರ್ಷಿಯಲ್ಲಿ ವಾರ್ಷಪರ್ವಣೀ ಶರ್ಮಿಷ್ಠೆಯು ದ್ರುಹ್ಯು, ಅನು ಮತ್ತು ಪುರು ಎನ್ನುವ ಮೂರು

ಕುಮಾರರಿಗೆ ಜನ್ಮವಿತ್ತಳು.

ಒಮ್ಮೆ ಶುಚಿಸ್ಮಿತೆ ದೇವಯಾನಿಯು ರಾಜ ಯಯಾತಿಯ ಸಹಿತ ಆ ಮಹಾವನಕ್ಕೆ ಬಂದಳು. ಅಲ್ಲಿ ಸ್ವಚ್ಛಂದವಾಗಿ ಆಡುತ್ತಿರುವ ಮೂರು ದೇವರೂಪಿ ಕುಮಾರರನ್ನು ಕಂಡು ಕೇಳಿದಳು:

> "ರಾಜನ್! ದೇವಪುತ್ರರಂತಿರುವ ಈ ಸುಂದರ ಮಕ್ಕಳು ಯಾರದ್ದಿರಬಹುದು? ವರ್ಚಸ್ಸು ಮತ್ತು ರೂಪದಲ್ಲಿ ನಿನ್ನ ಹಾಗೆಯೇ ಇದ್ದಾರೆಂದು ನನಗನ್ನಿಸುತ್ತಿದೆ."

ಈ ರೀತಿ ರಾಜನನ್ನು ಪ್ರಶ್ನಿಸಿದ ಅವಳು ಪುನಃ ಕುಮಾರರನ್ನೇ ಕೇಳಿದಳು:

> "ಮಕ್ಕಳೇ! ನಿಮ್ಮ ಬ್ರಾಹ್ಮಣ ತಂದೆಯ ಹೆಸರು ಮತ್ತು ಗೋತ್ರವೇನು? ತಿಳಿಯ ಬಯಸುವ ನನಗೆ ನಿಜವನ್ನು ಹೇಳಿ."

ಆ ಮಕ್ಕಳು ತಮ್ಮ ಕೈಬೆರಳಿನಿಂದ ಅದೇ ನೃಪಸತ್ತಮನನ್ನು ತೋರಿಸಿ, ತಾಯಿಯು ಶರ್ಮಿಷ್ಠೆಯೆಂದು ಹೇಳಿದರು. ಹೀಗೆ ಹೇಳಿ ಅವರೆಲ್ಲರೂ ರಾಜನೆಡೆಗೆ ಹೋದರು. ಆದರೆ ರಾಜನು ಹತ್ತಿರದಲ್ಲಿದ್ದ ದೇವಯಾನಿಯನ್ನು ನೋಡಿ ಅವರನ್ನು ಅಭಿನಂದಿಸಲಿಲ್ಲ. ಆಗ ಆ ಬಾಲಕರು ಅಳುತ್ತಾ ಶರ್ಮಿಷ್ಠೆಯಿದ್ದಲ್ಲಿಗೆ ಹೋದರು.

ಆ ಬಾಲಕರು ರಾಜನೊಂದಿಗೆ ಈ ರೀತಿ ಪ್ರೀತಿಯಲ್ಲಿ ವರ್ತಿಸಿದ್ದುದನ್ನು ನೋಡಿದ ಆ ದೇವಿಯು ಸತ್ಯವೇನೆಂದು ಊಹಿಸಿ, ಶರ್ಮಿಷ್ಠೆಯನ್ನು

ಉದ್ದೇಶಿಸಿ ಹೇಳಿದಳು:

“ನನ್ನ ಅಧೀನಳಾಗಿದ್ದುಕೊಂಡು ನನ್ನನ್ನೇ ಕಡೆಮಾಡುವ ಸಾಹಸವನ್ನು ಹೇಗೆ ಮಾಡಿದೆ? ಈ ರೀತಿ ನಿನ್ನ ಅಸುರಧರ್ಮಕ್ಕೇ ಹಿಂದಿರುಗಿದ್ದೀಯೆ. ಭಯವೇ ಆಗಲಿಲ್ಲವೇ ನಿನಗೆ?”

ಶರ್ಮಿಷ್ಠೆಯು ಹೇಳಿದಳು:

“ಚಾರುಹಾಸಿನೀ! ಅವನು ಓರ್ವ ಋಶಷಿಯೆಂದು ಹೇಳಿದಾಗ ನಾನು ನಿನಗೆ ಸತ್ಯವನ್ನೇ ಹೇಳಿದೆ. ನ್ಯಾಯ ಮತ್ತು ಧರ್ಮಕ್ಕನುಗುಣವಾಗಿಯೇ ನಡೆದುಕೊಂಡಿದ್ದೇನೆ. ಆದುದರಿಂದ ನನಗೆ ನಿನ್ನ ಮೇಲಿನ ಭಯವಾದರೂ ಏಕೆ? ಎಂದು ನೀನು ರಾಜನನ್ನು ವರಿಸಿದೆಯೋ ಅಂದೇ ನಾನೂ ಕೂಡ ಅವನನ್ನು ವರಿಸಿದೆ. ಧರ್ಮದ ಪ್ರಕಾರ, ಸಖಿಯ ಪತಿಯು ನಿನ್ನ ಪತಿಯೂ ಆಗಬಲ್ಲ. ನನ್ನ ಜ್ಯೇಷ್ಠ ಮತ್ತು ಶ್ರೇಷ್ಠ ಬ್ರಾಹ್ಮಣಿ! ನೀನು ನನ್ನ ಪೂಜನೀಯಳು. ಆದರೆ ನನಗೆ ಈ ರಾಜರ್ಷಿಯು ನಿನಗಿಂತ ಹೆಚ್ಚು ಪೂಜನೀಯ ಎಂದು ನಿನಗನಿಸುವುದಿಲ್ಲವೇ?”

ಈ ಮಾತುಗಳನ್ನು ಕೇಳಿದ ದೇವಯಾನಿಯು ಹೇಳಿದಳು:

“ರಾಜನ್! ನೀನು ನನ್ನ ಮೇಲೆ ತಪ್ಪನ್ನೆಸಗಿದ್ದೀಯೆ.

ಇಂದಿನಿಂದ ನಾನು ಇಲ್ಲಿ ಇರಲಾರೆ.”

ಹೀಗೆ ಹೇಳಿ ತಕ್ಷಣವೇ ಕಣ್ಣಿನಲ್ಲಿ ನೀರು ತುಂಬಿಸಿಕೊಂಡು ಕಾವ್ಯನ ಬಳಿ ಹೋಗಲು ಮೇಲೆದ್ದ ಅವಳನ್ನು ನೋಡಿ ರಾಜನು ದುಃಖಿತನಾದನು. ಸಂಭ್ರಾಂತ ನೃಪನು ಅವಳ ಹಿಂದೆಯೇ ಹೋಗಿ ಅವಳನ್ನು ತಡೆಹಿಡಿದು ಸಂತವಿಸಲು ಪ್ರಯತ್ನಿಸಿದನು. ಆದರೆ ಕ್ರೋಧದಿಂದ ರಕ್ತಲೋಚನಳಾದ ಅವಳು ಹಿಂದಿರುಗಲಿಲ್ಲ. ಆ ಚಾರುಲೋಚನಳು ರಾಜನಿಗೆ ಏನನ್ನೂ ಹೇಳದೇ ತಕ್ಷಣವೇ ಕಾವ್ಯ ಉಶನಸನ ಬಳಿ ತಲುಪಿದಳು. ತಂದೆಯನ್ನು ನೋಡಿದಾಕ್ಷಣವೇ ಅವಳು ಅವನಿಗೆ ನಮಸ್ಕರಿಸಿ ಎದುರು ನಿಂತುಕೊಂಡಳು. ಅನಂತರ ಯಯಾತಿಯೂ ಅಲ್ಲಿಗೆ ಬಂದು ಭಾರ್ಗವನಿಗೆ ನಮಸ್ಕರಿಸಿದನು. ದೇವಯಾನಿಯು ಹೇಳಿದಳು:

“ಧರ್ಮದ ಮೇಲೆ ಅಧರ್ಮದ ವಿಜಯವಾಯಿತು. ಎಲ್ಲವೂ ತಲೆಕೆಳಗಾದವು. ವೃಷಪರ್ವನ ಮಗಳು ಶರ್ಮಿಷ್ಠೆಯು ನನ್ನನ್ನು ಹಿಂದೆ ಹಾಕಿದಳು. ರಾಜ ಯಯಾತಿಯಿಂದ ದುರ್ಭಾಗ್ಯಳಾದ ಅವಳಲ್ಲಿ ಮೂರು ಪುತ್ರರು ಜನಿಸಿದ್ದಾರೆ. ಆದರೆ ನನ್ನಲ್ಲಿ ಎರಡೇ ಪುತ್ರರು ಜನಿಸಿದ್ದಾರೆ. ಕಾವ್ಯ! ಧರ್ಮಜ್ಞನೆಂದು ವಿಖ್ಯಾತ ಈ ರಾಜನು ಎಲ್ಲ ಮರ್ಯಾದೆಗಳನ್ನೂ ಅತಿಕ್ರಮಿಸಿದ್ದಾನೆ ಎಂದು ನಾನು ಹೇಳುತ್ತಿದ್ದೇನೆ.”



ಶುಕ್ರನು ಹೇಳಿದನು:

"ಮಹಾರಾಜ! ಧರ್ಮಜ್ಞನಾಗಿದ್ದರೂ ಕಾಮಕ್ಕಾಗಿ ಅಧರ್ಮವನ್ನೆಸಗಿದುದಕ್ಕಾಗಿ ಜಯಿಸಲಸಾಧ್ಯ ವೃದ್ಧಾಪ್ಯವು ಈ ಕ್ಷಣದಲ್ಲಿಯೇ ನಿನ್ನನ್ನು ಕಾಡುತ್ತದೆ."

ಯಯಾತಿಯು ಹೇಳಿದನು:

"ಭಗವನ್! ದಾನವೇಂದ್ರನ ಈ ಅಚೇತಸ ಮಗಳು ತನ್ನ ಋತುವಿಗೋಸ್ಕರ ನನ್ನನ್ನು ಯಾಚಿಸಿದಾಗ ಅದು ಧರ್ಮವೆಂದೇ ತಿಳಿದು ನಾನು ಈ ರೀತಿ ಮಾಡಿದೆ. ಋತುಕಾಲದಲ್ಲಿದ್ದವಳು ವರಿಸಿ ಯಾಚಿಸಿದಾಗ ತನ್ನನ್ನು ತಾನು ಅವಳಿಗೆ ಸಮರ್ಪಿಸದಿದ್ದರೆ ಅಂಥವನನ್ನು ಭ್ರೂಣಹತ್ಯೆ ಮಾಡಿದವನು ಎಂದು ಬ್ರಹ್ಮವಾದಿಗಳು ಹೇಳುತ್ತಾರೆ. ಅಭಿಕಾಮಿ ಸ್ತ್ರೀಯು ರಹಸ್ಯದಲ್ಲಿ ಅವನನ್ನು ಕರೆದಾಗ ಧರ್ಮದ ಪ್ರಕಾರ ಅವಳೊಡನೆ ಮಲಗದೇ ಇದ್ದವನನ್ನು ಭ್ರೂಣಹತ್ಯೆ ಮಾಡಿದವನು ಎಂದು ತಿಳಿದವರು ಕರೆಯುತ್ತಾರೆ. ಈ ಎಲ್ಲ ಕಾರಣಗಳನ್ನೂ ಸಮೀಕ್ಷಿಸಿ, ಅಧರ್ಮದ ಭಯಸಂವಿಗ್ನನಾಗಿ ಶರ್ಮಿಷ್ಠೆಯೊಡನೆ ಕೂಡಿದೆನು."

ಶುಕ್ರನು ಹೇಳಿದನು:

"ಪಾರ್ಥಿವ! ನೀನು ನನ್ನ ಸಲಹೆಯನ್ನು ಕೇಳಬಹುದಾಗಿತ್ತು.

ಧರ್ಮದ ಹೆಸರಿನಲ್ಲಿ ಮಿಥ್ಯಾಚಾರವನ್ನೆಸಗಿದ ನೀನು ಕಳ್ಳತನವನ್ನು ಮಾಡಿದ್ದೀಯೆ.”

ಈ ರೀತಿ ನಾಹುಷ ಯಯಾತಿಯು ಕೃದ್ಧ ಉಶನನಿಂದ ಶಪಿಸಲ್ಪಟ್ಟು ಕ್ಷಣಮಾತ್ರದಲ್ಲಿ ತನ್ನ ಹಿಂದಿನ ಯೌವನವನ್ನು ಕಳೆದುಕೊಂಡು ವೃದ್ಧಾಪ್ಯವನ್ನು ಹೊಂದಿದನು.

ಯಯಾತಿಯು ಹೇಳಿದನು:

“ಭೃಗುದ್ವಹ! ಇನ್ನೂ ಕೂಡ ನಾನು ದೇವಯಾನಿಯೊಂದಿಗೆ ಯೌವನ ಸುಖದಲ್ಲಿ ಅತೃಪ್ತನಾಗಿದ್ದೇನೆ. ಈ ವೃದ್ಧಾಪ್ಯವು ನನ್ನನ್ನು ಆವರಿಸದಹಾಗೆ ಕರುಣಿಸು.”

ಶುಕ್ರನು ಹೇಳಿದನು:

“ಭೂಮಿಪ! ನಾನು ಈ ಮಾತುಗಳನ್ನು ಸುಮ್ಮನೇ ಹೇಳಿಲ್ಲ. ವೃದ್ಧಾಪ್ಯವು ನಿನ್ನನ್ನು ಹಿಡಿದಿದೆ. ಆದರೆ, ನೀನು ಇಚ್ಛಿಸಿದರೆ ನಿನ್ನ ಈ ವೃದ್ಧಾಪ್ಯವನ್ನು ಇನ್ನೊಬ್ಬನಿಗೆ ಕೊಡಬಹುದು.”

ಯಯಾತಿಯು ಹೇಳಿದನು:

“ಬ್ರಾಹ್ಮಣ! ತನ್ನ ಯೌವನವನ್ನು ನನಗೆ ಕೊಡುವ ಮಗನು ನನ್ನ ರಾಜ್ಯ, ಪುಣ್ಯ ಮತ್ತು ಕೀರ್ತಿಗಳಿಗೆ ಪಾತ್ರನಾಗಲಿ ಎಂದು ಅನುಮತಿಯನ್ನು ನೀಡು.”

ಶುಕ್ರನು ಹೇಳಿದನು:

> "ನಹುಷಾತ್ಮಜ! ನೀನು ನನ್ನನ್ನು ಮನಸ್ಸಿನಲ್ಲಿ ನೆನೆಸಿಕೊಂಡು ನಿನಗಿಷ್ಟವಿದ್ದವನಿಗೆ ನಿನ್ನ ವೃದ್ಧಾಪ್ಯವನ್ನು ಕೊಡಬಲ್ಲೆ. ಈ ರೀತಿ ನೀನು ಯಾವ ಪಾಪವನ್ನೂ ಹೊಂದುವುದಿಲ್ಲ. ತನ್ನ ಯೌವನವನ್ನು ನಿನಗಿತ್ತ ಮಗನು ರಾಜನಾಗುತ್ತಾನೆ, ಆಯುಷ್ಮಂತನಾಗುತ್ತಾನೆ, ಕೀರ್ತಿವಂತನಾಗುತ್ತಾನೆ, ಮತ್ತು ಬಹಳ ಪುತ್ರರನ್ನು ಪಡೆಯುತ್ತಾನೆ."

ವೃದ್ಧಾಪ್ಯವನ್ನು ಪಡೆದ ಯಯಾತಿಯು ತನ್ನ ನಗರವನ್ನು ಸೇರಿ ಜ್ಯೇಷ್ಠನೂ ವರಿಷ್ಠನೂ ಆದ ಯದುವನ್ನು ಕರೆದು ಹೇಳಿದನು:

> "ಮಗನೇ! ಉಶನಸ ಕಾವ್ಯನ ಶಾಪದಿಂದ ವೃದ್ಧಾಪ್ಯವು ನನ್ನನ್ನು ಆವರಿಸಿಬಿಟ್ಟಿದೆ - ಕೂದಲು ನೆರೆತಿದೆ ಮತ್ತು ಚರ್ಮ ನೆರೆಕಟ್ಟಿದೆ. ಆದರೆ ಯೌವನದ ಸುಖಗಳಿಂದ ನಾನಿನ್ನೂ ತೃಪ್ತನಾಗಿಲ್ಲ. ಯದು! ನೀನು ನನ್ನ ಪಾಪದ ಜೊತೆ ಈ ವೃದ್ಧಾಪ್ಯವನ್ನು ಸ್ವೀಕರಿಸು. ನಿನ್ನ ಈ ಯೌವನದಿಂದ ನಾನು ವಿಷಯಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರ ವರ್ಷಗಳು ತುಂಬಿದ ನಂತರ ನಿನ್ನ ಯೌವನವನ್ನು ನಿನಗೆ ಹಿಂದಿರುಗಿಸಿ, ನನ್ನ ಪಾಪ-ವೃದ್ಧಾಪ್ಯಗಳನ್ನು ಹಿಂದೆ ತೆಗೆದುಕೊಳ್ಳುತ್ತೇನೆ."

ಯದುವು ಹೇಳಿದನು:

"ಗಡ್ಡತಲೆಕೂದಲುಗಳು ಬಿಳಿಯಾಗಿ, ದೀನನಾಗಿ, ವೃದ್ಧಾಪ್ಯದಿಂದ ಶಿಥಿಲೀಕೃತನಾಗಿ, ದೇಹವು ನೆರೆಹಿಡಿದು, ದುರ್ದಶ, ದುರ್ಬಲ ಮತ್ತು ಕೃಷನಾಗಿ, ಯಾವ ಕೆಲಸವನ್ನು ಮಾಡಲೂ ಅಶಕ್ತನಾದವನನ್ನು ಯುವಕರು ಮತ್ತು ಸಹೋಪಜೀವಿಗಳು ಯಾರೂ ಗೌರವಿಸುವುದಿಲ್ಲ. ಅಂಥಹ ವೃದ್ಧಾಪ್ಯವನ್ನು ನಾನು ಬಯಸುವುದಿಲ್ಲ."

ಯಯಾತಿಯು ಹೇಳಿದನು:

"ನನ್ನ ಹೃದಯದಿಂದ ಜನಿಸಿದೆಯಾದರೂ ನೀನು ನಿನ್ನ ಯೌವನವನ್ನು ನನಗೆ ಕೊಡುತ್ತಿಲ್ಲ. ಆದುದರಿಂದ, ಮಗನೇ! ನಿನ್ನ ಸಂತತಿಯು ರಾಜ್ಯವಿಹೀನವಾಗುತ್ತದೆ. ತುರ್ವಸು! ಈ ವೃದ್ಧಾಪ್ಯದ ಜೊತೆ ನನ್ನ ಪಾಪವನ್ನೂ ಸ್ವೀಕರಿಸು. ನಿನ್ನ ಯೌವನದಿಂದ ನಾನು ವಿಷಯಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರ ವರ್ಷಗಳು ತುಂಬಿದ ನಂತರ ನಿನ್ನ ಯೌವನವನ್ನು ನಿನಗೆ ಹಿಂದಿರುಗಿಸಿ, ನನ್ನ ಪಾಪ-ವೃದ್ಧಾಪ್ಯಗಳನ್ನು ಹಿಂದೆ ತೆಗೆದುಕೊಳ್ಳುತ್ತೇನೆ."

ತುರ್ವಸುವು ಹೇಳಿದನು:

"ಕಾಮಭೋಗಗಳನ್ನು ನಾಶಪಡಿಸುವ, ಬಲ ಮತ್ತು ರೂಪವನ್ನು ಅಂತ್ಯಗೊಳಿಸುವ, ಬುದ್ಧಿಪ್ರಾಣಗಳನ್ನು ವಿನಾಶಮಾಡುವ ವೃದ್ಧಾಪ್ಯವು ನನಗೆ ಬೇಡ ತಂದೇ!"

ಯಯಾತಿಯು ಹೇಳಿದನು:

> "ನನ್ನ ಹೃದಯದಿಂದ ಜನಿಸಿದೆಯಾದರೂ ನೀನು ನಿನ್ನ ಯೌವನವನ್ನು ನನಗೆ ಕೊಡುತ್ತಿಲ್ಲ. ಆದುದರಿಂದ, ತುರ್ವಸು, ನಿನ್ನ ಸಂತಾನವು ಕ್ಷೀಣವಾಗುತ್ತದೆ. ನೀನು ಸಂಕೀರ್ಣ ಆಚಾರಧರ್ಮಗಳನ್ನುಳ್ಳ, ಶಿಷ್ಟಾಚಾರಗಳನ್ನು ಬಿಟ್ಟ, ಮಾಂಸವನ್ನೇ ತಿನ್ನುವ ಕೀಳು ಜನಾಂಗದ ರಾಜನಾಗುತ್ತೀಯೆ. ನೀನು ಆಳುವ ಮ್ಲೇಚ್ಛರು ಗುರುಪತ್ನಿಯರಲ್ಲಿ ಆಸಕ್ತರಾಗಿರುತ್ತಾರೆ, ಅತ್ಯಂತ ಕೀಳು ಯೋನಿಗಳೊಡನೆ ಸಂಭೋಗಿಸುತ್ತಾರೆ, ಪಶುಧರ್ಮಿಗಳಾಗಿದ್ದು ಪಾಪಕೃತ್ಯಗಳಲ್ಲಿ ತೊಡಗಿರುತ್ತಾರೆ."

ತನ್ನದೇ ಮಗ ತುರ್ವಸುವಿಗೆ ಯಯಾತಿಯು ಈ ರೀತಿಯಾಗಿ ಶಪಿಸಿ, ಶರ್ಮಿಷ್ಠೆಯ ಮಗ ದ್ರುಹ್ಯುವನ್ನು ಕರೆದು ಹೇಳಿದನು:

> "ದ್ರುಹ್ಯು! ಬಣ್ಣ ಮತ್ತು ರೂಪಗಳನ್ನು ನಾಶಪಡಿಸುವ ನನ್ನ ಈ ವೃದ್ಧಾಪ್ಯವನ್ನು ಒಂದು ಸಾವಿರ ವರ್ಷಗಳವರೆಗೆ ತೆಗೆದುಕೊಂಡು, ನನಗೆ ನಿನ್ನ ಯೌವನವನ್ನು ಕೊಡು. ಒಂದು ಸಾವಿರ ವರ್ಷಗಳು ತುಂಬಿದ ನಂತರ ಯೌವನವನ್ನು ಹಿಂದಿರುಗಿಸುತ್ತೇನೆ, ಮತ್ತು ನನ್ನ ಈ ಪಾಪದ ಜೊತೆಗೆ ವೃದ್ಧಾಪ್ಯವನ್ನೂ ಹಿಂದೆ ತೆಗೆದುಕೊಳ್ಳುತ್ತೇನೆ."

ದ್ರುಹ್ಯುವು ಹೇಳಿದನು:

"ವೃದ್ಧನು ಗಜ, ರಥ, ಅಶ್ವ, ಆಹಾರ, ಮತ್ತು ಸ್ತ್ರೀಯರನ್ನು ಅನುಭವಿಸಲು ಶಕ್ಯನಾಗಿರುವುದಿಲ್ಲ ಮತ್ತು ಸರಿಯಾಗಿ ಮಾತನಾಡಲೂ ಆಗುವುದಿಲ್ಲ. ಅಂಥಹ ವೃದ್ಧಾಪ್ಯವು ನನಗೆ ಬೇಡ."

ಯಯಾತಿಯು ಹೇಳಿದನು:

"ನನ್ನ ಹೃದಯದಿಂದ ಜನಿಸಿದೆಯಾದರೂ ನೀನು ನಿನ್ನ ಯೌವನವನ್ನು ನನಗೆ ಕೊಡುತ್ತಿಲ್ಲ. ಆದುದರಿಂದ ನಿನ್ನ ಪ್ರಿಯ ಆಸೆಯು ಎಂದೂ ಪೂರೈಸಲ್ಪಡುವುದಿಲ್ಲ. ಎಲ್ಲಿ ದೋಣಿ ತೆಪ್ಪಗಳನ್ನು ಮಾತ್ರ ಬಳಸಿ ತಿರುಗಾಡಬಹುದೋ ಅಂತಹ ಸ್ಥಳದಲ್ಲಿ ವಾಸಿಸಿ, ಭೋಜನೆಂದೂ ರಾಜನೆಂದೂ ಕರೆಯಿಸಿ ಕೊಳ್ಳುವುದಿಲ್ಲ. ಅನು! ನೀನು ನನ್ನ ಪಾಪದ ಜೊತೆಗೆ ಈ ವೃದ್ಧಾಪ್ಯವನ್ನೂ ಸ್ವೀಕರಿಸು. ಒಂದು ಸಾವಿರವರ್ಷಗಳ ಪರ್ಯಂತ ನಾನು ನಿನ್ನ ಯೌವನವನ್ನು ಜೀವಿಸುತ್ತೇನೆ."

ಅನುವು ಹೇಳಿದನು:

"ವೃದ್ಧನು ಒಂದು ಮಗುವಿನಂತೆ ದಿನದ ಯಾವ ಸಮಯದಲ್ಲಿಯೂ ಜೊಲ್ಲುಸುರಿಸುತ್ತಾ, ಸ್ವಚ್ಛವಾಗಿರದೇ, ತಿನ್ನುತ್ತಾನೆ. ಮತ್ತು ಅವನು ಎಂದೂ ಸಕಾಲದಲ್ಲಿ ಅಗ್ನಿಕಾರ್ಯವನ್ನು ಮಾಡಲಾರ. ಅಂತಹ ವೃದ್ಧಾಪ್ಯವು ನನಗೆ ಬೇಡ."

ಯಯಾತಿಯು ಹೇಳಿದನು:

> “ನನ್ನ ಹೃದಯದಿಂದ ಜನಿಸಿದೆಯಾದರೂ ನೀನು ನಿನ್ನ ಯೌವನವನ್ನು ನನಗೆ ಕೊಡುತ್ತಿಲ್ಲ. ಆದುದರಿಂದ ನೀನು ಹೇಳಿದ ವೃದ್ಧಾಪ್ಯದ ದೋಷಗಳನ್ನು ನೀನೇ ಪಡೆಯುತ್ತೀಯೆ. ನಿನ್ನ ಜೊತೆ ನಿನ್ನ ಸಂತಾನವೂ ಯೌವನ ಪ್ರಾಪ್ತಿಯಾಗುತ್ತಿದ್ದಂತೇ ವಿನಾಶವನ್ನು ಹೊಂದುತ್ತದೆ. ನೀನೇ ಅಗ್ನಿಕಾರ್ಯವನ್ನು ಸರಿಯಾದ ರೀತಿಯಲ್ಲಿ ಮಾಡದವನಾಗುತ್ತೀಯೆ. ಪುರು! ನೀನು ನನ್ನ ಪ್ರೀತಿಯ ಮಗ. ನೀನು ಶ್ರೇಷ್ಠ. ಮಗನೇ! ಉಶನಸ ಕಾವ್ಯನ ಶಾಪದಿಂದ ವೃದ್ಧಾಪ್ಯವು ನನ್ನನ್ನು ಆವರಿಸಿಬಿಟ್ಟಿದೆ - ಕೂದಲು ನೆರೆತಿದೆ ಮತ್ತು ಚರ್ಮ ನೆರೆಕಟ್ಟಿದೆ. ಆದರೆ ಯೌವನದ ಸುಖಗಳಿಂದ ನಾನಿನ್ನೂ ತೃಪ್ತನಾಗಿಲ್ಲ. ಪುರು! ನನ್ನ ಈ ಪಾಪದ ಜೊತೆ ವೃದ್ಧಾಪ್ಯವನ್ನೂ ಸ್ವೀಕರಿಸು. ನಿನ್ನ ಯೌವನವನ್ನು ಪಡೆದು ಕೆಲವು ಕಾಲ ನಾನು ವಿಷಯಸುಖವನ್ನು ಅನುಭವಿಸುತ್ತೇನೆ. ಒಂದು ಸಹಸ್ರ ವರ್ಷಗಳು ತುಂಬಿದ ನಂತರ ನಿನ್ನ ಯೌವನವನ್ನು ನಿನಗೆ ಹಿಂದಿರುಗಿಸಿ, ನನ್ನ ಪಾಪ ಮತ್ತು ವೃದ್ಧಾಪ್ಯವನ್ನು ಹಿಂದೆ ತೆಗೆದುಕೊಳ್ಳುತ್ತೇನೆ.”

ತಂದೆಯ ಈ ಮಾತುಗಳಿಗೆ ತಕ್ಷಣವೇ ಪುರುವು ಉತ್ತರಿಸಿದನು:

> “ಮಹಾರಾಜ! ನೀನು ಹೇಳಿದಂತೆಯೇ ಮಾಡುತ್ತೇನೆ.

> ವೃದ್ಧಾಪ್ಯದ ಜೊತೆ ನಿನ್ನ ಪಾಪವನ್ನೂ ಸ್ವೀಕರಿಸುತ್ತೇನೆ. ನನ್ನ ಈ ಯೌವನವನ್ನು ಪಡೆದು ಯಥೇಚ್ಛವಾಗಿ ನಿನ್ನ ಆಸೆಗಳನ್ನು ಪೂರೈಸಿಕೋ. ನಿನ್ನ ವಯೋರೂಪವನ್ನು ತಾಳಿ ವೃದ್ಧಾಪ್ಯವನ್ನು ಹೊದ್ದುಕೊಳ್ಳುತ್ತೇನೆ. ನನ್ನ ಯೌವನವನ್ನು ನಿನಗಿತ್ತು ನೀನು ಹೇಳಿದಹಾಗೆ ಜೀವಿಸುತ್ತೇನೆ."

ಯಯಾತಿಯು ಹೇಳಿದನು:

> "ಪುರು! ನನ್ನ ಮಗನೇ! ನಿನ್ನಿಂದ ನಾನು ಬಹಳ ಪ್ರೀತನಾಗಿದ್ದೇನೆ. ಪ್ರೀತಿಯಿಂದ ನಿನಗೆ ಇದನ್ನು ಕೊಡುತ್ತಿದ್ದೇನೆ. ನಿನ್ನ ಸಂತತಿಯು ಸರ್ವಕಾಮಗಳಲ್ಲಿ ಸಮೃದ್ಧರಾಗಿ ರಾಜ್ಯವನ್ನಾಳುತ್ತಾರೆ."

ನೃಪಶ್ರೇಷ್ಠ ನಹುಷಾತ್ಮಜ ಯಯಾತಿಯು ಪೌರವನ ಯೌವನದ ಮೂಲಕ ತನಗೆ ಇಷ್ಟವಾದಂತೆ, ಉತ್ಸಾಹವಿದ್ದಷ್ಟು, ಸಮಯವಿದ್ದಷ್ಟೂ, ಸುಖವೆನಿಸುವಷ್ಟು, ಧರ್ಮಕ್ಕೆ ವಿರುದ್ಧವಾಗದ ರೀತಿಯಲ್ಲಿ, ಅವನಿಗೆ ತಕ್ಕುದಾದ ರೀತಿಯಲ್ಲಿ, ಕಾಮನಿರತನಾಗಿ ವಿಷಯ ಸುಖವನ್ನು ಅನುಭವಿಸಿದನು. ದೇವತೆಗಳನ್ನು ಯಜ್ಞಗಳಿಂದಲೂ, ಪಿತೃಗಳನ್ನು ಶ್ರಾದ್ಧಗಳಿಂದಲೂ, ದೀನರರನ್ನು ಅವರಿಗಿಷ್ಟವಾದುದನ್ನು ನೀಡುವುದರಿಂದಲೂ, ದ್ವಿಜಸತ್ತಮರನ್ನು ಉಡುಗೊರೆಗಳಿಂದಲೂ, ಅತಿಥಿಗಳನ್ನು ಅನ್ನ-ಪಾನೀಯಗಳಿಂದಲೂ, ಪ್ರಜೆಗಳನ್ನು ಪರಿಪಾಲನೆಯಿಂದಲೂ, ಶೂದ್ರರನ್ನು ಅನುಕಂಪದಿಂದಲೂ,

ದಸ್ಯುಗಳನ್ನು ನಿಗ್ರಹದಿಂದಲೂ ತೃಪ್ತಿಪಡಿಸಿದನು. ಸಾಕ್ಷಾತ್ ಇನ್ನೊಬ್ಬ ಇಂದ್ರನೋ ಎಂಬಂತೆ ಯಯಾತಿಯು ಸರ್ವ ಪ್ರಜೆಗಳನ್ನೂ ಧರ್ಮದಿಂದ ಅನುರಂಜಿಸುತ್ತಾ ಪಾಲಿಸಿದನು. ಆ ಸಿಂಹವಿಕ್ರಾಂತ ಯುವರಾಜನು ವಿಷಯಗೋಚರನಾಗಿದ್ದು ಧರ್ಮಕ್ಕೆ ವಿರೋಧಬಾರದಂತೆ ಉತ್ತಮ ಸುಖವನ್ನು ಹೊಂದಿದನು. ಎಲ್ಲ ಕಾಮಸುಖಗಳನ್ನೂ ಹೊಂದಿ ತೃಪ್ತನಾದ ಪಾರ್ಥಿವ ಮನುಜಾಧಿಪನು ಒಂದು ಸಾವಿರ ವರ್ಷಗಳ ಅವಧಿಯು ಮುಗಿದಿದ್ದುದನ್ನು ನೆನಪಿಸಿಕೊಂಡು ಖಿನ್ನನಾದನು. ದಿನಗಳು ಮತ್ತು ಘಂಟೆಗಳನ್ನು ಲೆಕ್ಕಹಾಕುತ್ತಾ ಬಂದಿದ್ದ ಆ ಕಾಲಜ್ಞ ವೀರನು ತನ್ನ ಸಮಯವು ಮುಗಿಯಿತೆಂದು ತಿಳಿದು ಪುತ್ರ ಪುರುವನ್ನು ಕರೆದು ಹೇಳಿದನು:

> “ಅರಿಂದಮ! ನಿನ್ನ ಈ ಯೌವನದಿಂದ ನಾನು ಯಥೇಚ್ಛವಾಗಿ, ಉತ್ಸಾಹವಿದ್ದಷ್ಟು, ಸಮಯ ಸಿಕ್ಕಿದಷ್ಟು, ವಿಷಯ ಸುಖವನ್ನು ಸೇವಿಸಿದೆ. ಪುರು! ನಿನಗೆ ಮಂಗಳವಾಗಲಿ. ನಾನು ನಿನ್ನಿಂದ ಬಹಳ ಸಂತೋಷಗೊಂಡಿದ್ದೇನೆ. ನಿನ್ನ ಯೌವನವನ್ನು ಹಿಂತೆಗೆದುಕೋ. ನನಗೆ ಪ್ರಿಯವಾದುದನ್ನೆಸಗಿದ ಮಗನಾದ ನೀನು ಈ ರಾಜ್ಯವನ್ನೂ ತೆಗೆದುಕೋ.”

ನಾಹುಷ ಯಯಾತಿ ರಾಜನು ವೃದ್ಧಾಪ್ಯವನ್ನು ಹಿಂತೆಗೆದುಕೊಂಡನು ಮತ್ತು ಪುರುವು ತನ್ನ ಯೌವನವನ್ನು ಪುನಃ ಹಿಂತೆಗೆದುಕೊಂಡನು.

ನೃಪತಿಯು ತನ್ನ ಕಿರಿಯ ಮಗ ಪುರುವಿಗೆ ರಾಜ್ಯಾಭಿಷೇಕವನ್ನು ಮಾಡಲು ಬಯಸಿದನು. ಆದರೆ, ಬ್ರಾಹ್ಮಣರ ನಾಯಕತ್ವದಲ್ಲಿ ನಾಲ್ಕೂ ವರ್ಣದವರೂ ಬಂದು ಈ ಮಾತುಗಳನ್ನು ಹೇಳಿದರು:

> "ಪ್ರಭೋ! ಶುಕ್ರನ ಮೊಮ್ಮಗನೂ ದೇವಯಾನಿಯ ಮಗನೂ ನಿನ್ನ ಜ್ಯೇಷ್ಠ ಪುತ್ರನೂ ಆದ ಯದುವನ್ನು ಬಿಟ್ಟು ಪುರುವಿಗೆ ಏಕೆ ರಾಜ್ಯವನ್ನು ಕೊಡುತ್ತಿರುವೆ? ಯದು ನಿನ್ನ ಜ್ಯೇಷ್ಠ ಪುತ್ರ. ನಂತರ ಹುಟ್ಟಿದವನು ತುರ್ವಸು. ಶರ್ಮಿಷ್ಠೆಯ ಮಕ್ಕಳಲ್ಲಿ ದ್ರುಹ್ಯು, ನಂತರ ಅನು ಮತ್ತು ಕೊನೆಯವನು ಪುರು. ಹಿರಿಯವನನ್ನು ಅತಿಕ್ರಮಿಸಿ ಕಿರಿಯವನು ಹೇಗೆ ರಾಜ್ಯಕ್ಕೆ ಹಕ್ಕುದಾರನಾಗುತ್ತಾನೆ? ಇದನ್ನು ನೀನು ಸಂಬೋಧಿಸಬೇಕು. ಧರ್ಮವನ್ನು ಅನುಸರಿಸಬೇಕು."

ಯಯಾತಿಯು ಹೇಳಿದನು:

> "ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಬಂದ ಸರ್ವ ವರ್ಣದವರೇ! ನಾನು ಏಕೆ ಜ್ಯೇಷ್ಠ ಪುತ್ರನಿಗೆ ರಾಜ್ಯವನ್ನು ಕೊಡುವುದಿಲ್ಲ ಎನ್ನುವುದಕ್ಕೆ ನನ್ನ ಮಾತುಗಳನ್ನು ಕೇಳಿ. ನನ್ನ ಜ್ಯೇಷ್ಠ ಪುತ್ರ ಯದುವು ನನ್ನ ನಿಯೋಗವನ್ನು ಪರಿಪಾಲಿಸಲಿಲ್ಲ. ತಂದೆಯ ಪ್ರತಿಕೂಲನಾದವನನ್ನು ಪುತ್ರನೆಂದು ಸಂತರು ಪರಿಗಣಿಸುವುದಿಲ್ಲ. ತಂದೆ ತಾಯಿಗಳ ಮಾತಿನಂತೆ ಯಾರು ನಡೆಯುತ್ತಾನೋ ಅವನೇ ಮಗನೆನಿಸಿಕೊಳ್ಳುತ್ತಾನೆ. ತಂದೆ

ತಾಯಿಗಳ ಒಳಿತು ಯಾರ ಹೃದಯದಲ್ಲಿರುತ್ತದೆಯೋ ಅವನೇ ಪುತ್ರನೆನಿಸಿಕೊಳ್ಳುತ್ತಾನೆ. ಯದುವು ನನ್ನನ್ನು ಕಡೆಗಣಿಸಿದನು. ಹಾಗೆಯೇ ತುರ್ವಸು, ದ್ರುಹ್ಯು, ಮತ್ತು ಅನು ಎಲ್ಲರೂ ನನ್ನ ಕುರಿತು ಅತೀವ ತಿರಸ್ಕಾರವನ್ನು ತೋರಿಸಿದರು. ನನ್ನ ಮಾತನ್ನು ಪರಿಪಾಲಿಸಿದ ಪುರುವು ಕಿರಿಯವನಾಗಿದ್ದರೂ ನನ್ನ ವಿಶೇಷಗೌರವವನ್ನು ಹೊಂದಿದ್ದಾನೆ. ಆ ನನ್ನ ಮಗ ಪುರುವು ನನ್ನ ವೃದ್ಧಾಪ್ಯವನ್ನು ಧರಿಸಿ ನಿಜವಾದ ಪುತ್ರನಂತೆ ನನ್ನ ಆಸೆಯನ್ನು ನೆರವೇರಿಸಿಕೊಟ್ಟನು. ಇದೂ ಅಲ್ಲದೇ ಸ್ವಯಂ ಕಾವ್ಯ ಉಸನಸ ಶುಕ್ರನೇ ಇತ್ತ ವರದಂತೆ ನನಗೆ ವಿಧೇಯನಾದ ಮಗನು ರಾಜ ಪೃಥ್ವೀಪತಿಯಾಗುತ್ತಾನೆ. ಆದುದರಿಂದ ಪುರುವಿಗೆ ರಾಜ್ಯಾಭಿಷೇಕವನ್ನು ಮಾಡುತ್ತಿದ್ದೇನೆ.”

ಪ್ರಜೆಗಳು ಹೇಳಿದರು:

“ಪ್ರಭೋ! ಯಾವ ಮಗನು ಗುಣಸಂಪನ್ನನಾಗಿದ್ದು ತಂದೆ ತಾಯಿಗಳ ಹಿತವನ್ನು ಸದಾ ಯೋಚಿಸುತ್ತಿರುತ್ತಾನೋ ಅವನು ಕಿರಿಯವನಾಗಿದ್ದರೂ ಒಳ್ಳೆಯದೆಲ್ಲವುದಕ್ಕೂ ಅರ್ಹನಾಗುತ್ತಾನೆ. ನಿನಗೆ ಪ್ರಿಯವಾದುದನ್ನು ಮಾಡಿದ ಸುತ ಪುರುವು ಈ ರಾಜ್ಯಕ್ಕೆ ಅರ್ಹನಾಗಿದ್ದಾನೆ. ಶುಕ್ರನಿಂದಲೂ ಈ ರೀತಿಯ ವರದಾನವಾಗಿದೆಯೆಂದರೆ ಇನ್ನು ಮುಂದೆ

ಹೇಳುವುದಕ್ಕೇ ಸಾಧ್ಯವಿಲ್ಲ."

ಪೌರಜನ ಪದಜನರು ಈ ರೀತಿ ಹೇಳಿದ ನಂತರ ನಾಹುಷನು ತನ್ನ ಸುತ ಪುರುವಿಗೆ ಸ್ವಯಂ ಅಭೀಷೇಕವನ್ನು ಮಾಡಿದನು. ರಾಜ್ಯವನ್ನು ಪುರುವಿಗಿತ್ತು, ವನವಾಸ ದೀಕ್ಷೆಯನ್ನು ಕೈಗೊಂಡು, ಬ್ರಾಹ್ಮಣ-ತಾಪಸರನ್ನೊಡಗೂಡಿ ಪುರದಿಂದ ಹೊರ ಹೊರಟನು. ಯದುವಿನಿಂದ ಯಾದವರು ಹುಟ್ಟಿದರು. ತುರ್ವಾಸುವಿನ ಮಕ್ಕಳು ಯವನರು. ದ್ರುಹ್ಯುವಿನ ಮಕ್ಕಳು ಭೋಜರು. ಮತ್ತು ಅನುವಿನ ಮಕ್ಕಳು ಮ್ಲೇಚ್ಛರು. ಪುರುವಿನ ವಂಶದಲ್ಲಿ ಹುಟ್ಟಿದ ಪೌರವರು ಸಹಸ್ರಾರು ವರ್ಷಗಳು ಈ ರಾಜ್ಯವನ್ನು ಆಳಿದರು.

ಈ ರೀತಿ ನಾಹುಷ ರಾಜ ಯಯಾತಿಯು ಪ್ರಿಯಪುತ್ರನಿಗೆ ರಾಜ್ಯಾಭಿಷೇಕ ಮಾಡಿ ಸಂತೋಷದಿಂದ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಮುನಿಯಾದನು. ತನ್ನೊಡನೆ ಬಂದಿದ್ದ ಬ್ರಾಹ್ಮಣರೊಂದಿಗೆ ವನದಲ್ಲಿ ವಾಸಿಸಿ, ಫಲಮೂಲಗಳನ್ನು ತಿನ್ನುತ್ತಾ ಸಂಶ್ರಿತನಾಗಿ ಸ್ವರ್ಗವನ್ನು ಸೇರಿದನು. ಅವನು ಸ್ವರ್ಗದಲ್ಲಿ ಸುಖ ಸಂತೋಷಗಳಿಂದ ವಾಸಿಸಿದನು. ಆದರೆ ಇನ್ನೂ ಹೆಚ್ಚು ಸಮಯ ಕಳೆಯುವುದರೊಳಗೇ ಶಕ್ರನಿಂದ ಪುನಃ ಕೆಳಗುರುಳಿಸಲ್ಪಟ್ಟನು. ಅವನು ಸ್ವರ್ಗವನ್ನು ಬಿಟ್ಟು ಕೆಳಗೆ ಬಿದ್ದು ಮೇದಿನಿತಲವು ಸಿಕ್ಕದೇ ಅಂತರಿಕ್ಷದಲ್ಲಿಯೇ ನಿಂತುಬಿಟ್ಟ ಎಂದು ಕೇಳಿದ್ದೇನೆ. ನಂತರ ಪುನಃ ಆ ವೀರ್ಯವಂತನು ವಸುಮತಿ, ಅಷ್ಟಕ, ಶಿಬಿ ಮತ್ತು ಪ್ರತರ್ದನ ಮೊದಲಾದ ರಾಜರ ಸಂಘದಿಂದ

ಅವರ ಜೊತೆಗೇ ಸ್ವರ್ಗವನ್ನು ಸೇರಿದನು ಎಂದೂ ಕೇಳಿದ್ದೇನೆ.”

ಹಾಗಿದ್ದರೆ ನಿನಗೆ ಇಲ್ಲಿಯೂ ಮತ್ತು ದಿವಿಯಲ್ಲಿಯೂ ಪುಣ್ಯವನ್ನು ನೀಡುವ, ಸರ್ವಪಾಪವನ್ನೂ ನಾಶಪಡಿಸಬಲ್ಲ ಯಯಾತಿಯ ಉತ್ತರ ಕಥೆಯನ್ನು ಹೇಳುತ್ತೇನೆ. ನಾಹುಷ ರಾಜಾ ಯಯಾತಿಯು ತನ್ನ ಕಿರಿಯ ಮಗ ಪುರುವಿಗೆ ರಾಜ್ಯಾಭಿಷೇಕವನ್ನು ಮಾಡಿ ಸಂತೋಷಗೊಂಡು ವನಕ್ಕೆ ತೆರಳಿದನು. ಯದುವೇ ಮೊದಲಾದ ಮಕ್ಕಳನ್ನು ಗಡಿಯಿಂದ ಹೊರಹಾಕಿದ್ದನು. ವನದಲ್ಲಿ ರಾಜನು ವಾನಪ್ರಸ್ಥವಿಧಾನದಂತೆ ಫಲಮೂಲಗಳನ್ನು ಸೇವಿಸುತ್ತಾ, ಸಂಶಿತಾತ್ಮನಾಗಿ, ಜಿತಕ್ರೋಧನಾಗಿ, ಪಿತೃ-ದೇವತೆಗಳನ್ನು ತೃಪ್ತಿಗೊಳಿಸುತ್ತಾ, ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಮಾಡುತ್ತಾ ಬಹಳ ಸಮಯ ವಾಸಿಸಿದನು. ವನ್ಯ ವಸ್ತುಗಳಿಂದ ವಿಭುವು ಅತಿಥಿಗಳನ್ನು ಪೂಜಿಸಿದನು. ಭಿಕ್ಷುಕನ ವೃತ್ತಿಯನ್ನು ಅನುಸರಿಸಿ ಇತರರ ಭೋಜನದಿಂದ ಉಳಿದ ಆಹಾರವನ್ನು ಸೇವಿಸುತ್ತಿದ್ದನು. ಈ ವೃತ್ತಿಯನ್ನನುಸರಿಸಿ ನೃಪನು ಒಂದು ಸಾವಿರ ವರ್ಷಗಳನ್ನು ಪೂರ್ಣಗೊಳಿಸಿದನು. ಮೂರು ಶರದಗಳನ್ನು ಮಾತು ಮತ್ತು ಮನಸ್ಸುಗಳನ್ನು ನಿಯಂತ್ರಣದಲಿಟ್ಟುಕೊಂಡು ಕೇವಲ ನೀರನ್ನು ಸೇವಿಸಿ ವಾಸಿಸಿದನು.ಆಯಾಸಗೊಳ್ಳದೇ ಅವನು ಒಂದು ವರ್ಷ ಕೇವಲ ವಾಯುಸೇವನೆಯಿಂದ ಜೀವಿಸಿದನು. ಇನ್ನೊಂದು ವರ್ಷ ಆ ನೃಪನು ಪಂಚಾಗ್ನಿಗಳ ಮಧ್ಯೆ ತಪಸ್ಸನ್ನು ತಪಿಸಿದನು. ಆರು ತಿಂಗಳು ಅವನು ವಾಯುವನ್ನು ಸೇವಿಸುತ್ತಾ ಒಂದೇ ಕಾಲಮೇಲೆ ನಿಂತಿದ್ದನು. ಹೀಗೆ ಭೂಮಿ ಸ್ವರ್ಗಗಳನ್ನು ತನ್ನ ಪುಣ್ಯಕೀರ್ತಿಯಿಂದ ತುಂಬಿಸಿ

ಅವನು ಸ್ವರ್ಗವನ್ನೇರಿದನು.

ಸ್ವರ್ಗವನ್ನು ಸೇರಿದ ಆ ರಾಜೇಂದ್ರನು ಸಾಧ್ಯ, ಮರುತ್ತು ವಸುಗಳಿಂದ ಮತ್ತು ತ್ರಿದಶರಿಂದ ಪೂಜಿತನಾಗಿ ದೇವಸದ್ಮನಿಯಲ್ಲಿ ವಾಸಿಸಿದನು. ಪುಣ್ಯಕರ್ಮಗಳಿಂದ ಅಧಿಕಾರವನ್ನು ಪಡೆದ ಆ ಪೃಥಿವೀಪಾಲನು ದೇವಲೋಕದಿಂದ ಬ್ರಹ್ಮಲೋಕಕ್ಕೂ ಹೋಗಿ ಅಲ್ಲಿ ದೀರ್ಘಕಾಲ ನೆಲೆಸಿದ್ದನೆಂದೂ ಕೇಳಿದ್ದೇವೆ. ಒಮ್ಮೆ ಆ ನೃಪತಿಶ್ರೇಷ್ಠ ಯಯಾತಿಯು ಶಕ್ರನಲ್ಲಿಗೆ ಹೋಗಿ ಮಾತನಾಡುತ್ತಿರಲು ಶಕ್ರನು ಪೃಥಿವೀಪತಿಗೆ ಕೇಳಿದನು.

ಶಕ್ರನು ಹೇಳಿದನು:

> "ರಾಜನ್! ಪುರುವು ನಿನ್ನ ರೂಪ ಮತ್ತು ಮುಪ್ಪನ್ನು ತೆಗೆದುಕೊಂಡು ಭೂಮಿಯಲ್ಲಿ ಸಂಚರಿಸುತ್ತಿರುವಾಗ ಅವನಿಗೆ ರಾಜ್ಯವನ್ನು ಕೊಡುವಾಗ ನೀನು ಏನು ಹೇಳಿದೆ? ಸತ್ಯವನ್ನು ಹೇಳು."

ಯಯಾತಿಯು ಹೇಳಿದನು:

> "ಗಂಗೆ ಮತ್ತು ಯಮುನೆಯರ ಮಧ್ಯದಲ್ಲಿರುವ ಎಲ್ಲವೂ ನಿನ್ನ ರಾಜ್ಯ. ಈ ಭೂಮಿಯ ಮಧ್ಯೆ ನೀನು ರಾಜನಾಗಿರು. ಅನಿನ್ನ ಅಣ್ಣಂದಿರು ಆಚೆಯಿರುವವುಗಳನ್ನು ಪಾಲಿಸಲಿ. ಕ್ರೋಧಗೊಳ್ಳದವನು ಕ್ರೋಧಿಗಳನ್ನು, ಹಾಗೆಯೇ

ಕ್ಷಮಿಸುವವನು ಕ್ಷಮೆಯಿಲ್ಲದವನನ್ನು ಮೀರಿಸುತ್ತಾನೆ. ಅಮಾನುಷರಲ್ಲಿ ಮನುಷ್ಯನು ಪ್ರಧಾನನು. ಅವಿದುಷರಲ್ಲಿ ವಿದ್ವಾಂಸರು ಪ್ರಧಾನರು. ಇತರರು ದೂರುವಾಗ ದೂರಬಾರದು. ಕ್ಷಮಾವಂತನ ಸಿಟ್ಟೇ ನಿಂದಿಸುವವನನ್ನು ಸುಟ್ಟುಹಾಕುತ್ತದೆ ಮತ್ತು ಅವನ ಸುಕೃತಗಳನ್ನು ಗಳಿಸುತ್ತಾನೆ. ಇತರರನ್ನು ಅಳಿಸಬೇಡ. ಕ್ರೂರವಾಗಿ ಮಾತನಾಡಬೇಡ. ಕಡುಬಡವನಿಂದ ಅವನ ಕೊನೆಯದನ್ನು ಕಸಿದುಕೊಳ್ಳಬೇಡ. ಗಾಯಗೊಳಿಸುವಂತಹ, ನರಕವನ್ನು ದೊರಕಿಸುವಂತಹ, ಮಾತನಾಡಿದರೆ ಇತರರನ್ನು ನೋಯಿಸುವಂತಹ ಮಾತುಗಳನ್ನಾಡಬೇಡ. ನೋಯಿಸುವ, ಭಿರುಸಾದ, ಕಟುಮಾತುಗಳನ್ನು ಆಡುವ, ಮಾತಿನ ಮುಳ್ಳಿನಿಂದ ಇತರರನ್ನು ಗಾಯಗೊಳಿಸುವವನು ಜನರಲ್ಲಿ ಅತ್ಯಂತ ಅಲಕ್ಷ್ಮೀವಂತನಾಗಿರುತ್ತಾನೆ. ಬಾಯಿಯಲ್ಲಿ ಪಾಪದ ಕಿಡಿಯನ್ನು ಇಟ್ಟುಕೊಂಡಿರುತ್ತಾನೆ. ಎದುರಲ್ಲಿ ಒಳ್ಳೆಯುವರಿಂದ ಪೂಜಿತನಾಗಿರು. ಹಿಂದಿನಿಂದ ಒಳ್ಳೆಯವರ ರಕ್ಷಣೆಯಿರಲಿ. ಕೆಟ್ಟವರ ನಿಂದನೆಯ ಮಾತುಗಳನ್ನು ಸದಾ ಸಹಿಸಿಕೊಂಡಿರು. ಆರ್ಯನು ಸತ್ಯವಂತರ ನಡತೆಯನ್ನೇ ತನ್ನದಾಗಿಸಿಕೊಳ್ಳುತ್ತಾನೆ. ಮಾತುಗಳು ಬಾಯಿಯಿಂದ ಬಾಣಗಳಂತೆ ಹೊರಬೀಳುತ್ತವೆ. ತಾಗಿದವನಿಗೆ ಅವು ಹಗಲು ರಾತ್ರಿ ನೋಯಿಸುತ್ತವೆ. ಇತರರಿಗೆ ತಾಗಿ

ನೋಯಿಸುವವಂಥವುಗಳನ್ನು ಪಂಡಿತನು ಪರರ ಮೇಲೆ ಪ್ರಯೋಗಿಸುವುದಿಲ್ಲ. ಸಂವನನ, ಇರುವ ಎಲ್ಲದರೊದಿಗೆ ಮೈತ್ರಿ ಮತ್ತು ಮಧುರ ಮಾತು ಇವುಗಳಿಗಿಂತ ಹೆಚ್ಚಿನ ಯಾವುದೂ ಈ ಮೂರು ಲೋಕಗಳಲ್ಲಿಲ್ಲ. ಆದುದರಿಂದ ಸದಾ ಸಾಂತ್ವನದ ಮಾತನ್ನಾಡಬೇಕು. ಎಂದೂ ಕಟುವಾಗಿ ಮಾತನಾಡಬಾರದು. ಪೂಜಿಸಲರ್ಹರಾದವರನ್ನು ಪೂಜಿಸು. ಕೊಡು. ಎಂದೂ ಕೇಳಬೇಡ.”

ಇಂದ್ರನು ಹೇಳಿದನು:

“ರಾಜನ್! ಸರ್ವಕರ್ಮಗಳನ್ನು ಪೂರೈಸಿ ಮನೆಯನ್ನು ತ್ಯಜಿಸಿ ವನಕ್ಕೆ ಹೋದೆ. ನಹುಷಪುತ್ರ! ಈಗ ನಿನ್ನನ್ನು ಕೇಳುತ್ತಿದ್ದೇನೆ. ತಪಸ್ಸಿನಲ್ಲಿ ಯಯಾತಿಯ ಸಮನಾದವರು ಯಾರಿದ್ದಾರೆ?”

ಯಯಾತಿಯು ಹೇಳಿದನು:

“ವಾಸವ! ತಪಸ್ಸಿನಲ್ಲಿ ನನ್ನ ಸರಿಸಮನಾದವರನ್ನು ನಾನು ದೇವ-ಮನುಷ್ಯರಲ್ಲಿ, ಗಂಧರ್ವ-ಮಹರ್ಷಿಗಳಲ್ಲಿ ಯಾರನ್ನೂ ಕಾಣುತ್ತಿಲ್ಲ.”

ಇಂದ್ರನು ಹೇಳಿದನು:

“ರಾಜನ್! ನಿನ್ನ ಸದೃಶರಾಗಿರುವವರನ್ನು, ನಿನಗಿಂತಲೂ ಹೆಚ್ಚಿನವರನ್ನು ಮತ್ತು ಕೀಳಾದವರನ್ನು ಅವರ

ಪ್ರಭಾವಗಳನ್ನು ತಿಳಿದುಕೊಳ್ಳದೇ ಅಪಮಾನಿಸಿದುದಕ್ಕಾಗಿ ಈ ಲೋಕಗಳು ನಿನಗೆ ಕೊನೆಗೊಳ್ಳುತ್ತವೆ. ಕ್ಷೀಣಪುಣ್ಯನಾಗಿ ಇಂದು ಬೀಳುತ್ತೀಯೆ!"

ಯಯಾತಿಯು ಹೇಳಿದನು:

"ಶಕ್ರ! ದೇವರಾಜ! ಸುರ-ಋಷಿ-ಗಂಧರ್ವರನ್ನು ಅಪಮಾನಿಸಿದುದಕ್ಕಾಗಿ ನನಗೆ ಲೋಕಗಳು ಕೊನೆಯಾಗುವವೆಂದಾದರೆ ಸುರಲೋಕದಿಂದ ವಿಹೀನಾಗಿ ಸತ್ಯವಂತರ ಮಧ್ಯೆ ಬೀಳಲು ಬಯಸುತ್ತೇನೆ."

ಇಂದ್ರನು ಹೇಳಿದನು:

"ರಾಜನ್! ಚ್ಯುತನಾಗಿ ಸತ್ಯವಂತರ ಸಮೀಪದಲ್ಲಿಯೇ ಬೀಳುತ್ತೀಯೆ. ಅಲ್ಲಿ ಪುನಃ ಪ್ರತಿಷ್ಠೆಯನ್ನು ಪಡೆಯುತ್ತೀಯೆ. ಯುಯಾತಿ! ಇದನ್ನು ತಿಳಿದ ನೀನು ಪುನಃ ನಿನ್ನ ಸದೃಶ ಶ್ರೇಯಸ್ಕರರನ್ನು ಅವಮಾಸಿಸುವುದಿಲ್ಲ."

ಅಮರರಾಜನು ಆಳುವ ಪುಣ್ಯಲೋಕಗಳನ್ನು ತೊರೆದು ಬೀಳುತ್ತಿರುವ ಯಯಾತಿಯನ್ನು ನೋಡಿ ರಾಜರ್ಷಿಶ್ರೇಷ್ಠ, ಸದ್ಧರ್ಮವಿಧಾನಗೋಪ್ತ ಅಷ್ಟಕನು ಹೇಳಿದನು:

"ರೂಪದಲ್ಲಿ ವಾಸವನಂತಿರುವ ಯುವಕನೇ ನೀನು ಯಾರು? ಅನಿನ್ನದೇ ತೇಜಸ್ಸಿನಿಂದ ಅಗ್ನಿಯಂತೆ ಬೆಳಗುತ್ತಿದ್ದೀಯೆ.



ಆಕಾಶದಲ್ಲಿ ಮೋಡಕವಿದ ಕತ್ತಲೆಯಿಂದ ಹೊರಬರುವ ಖೇಚರಗಳ ಪ್ರವರ ಸೂರ್ಯನಂತೆ ಹೊರಬೀಳುತ್ತಿದ್ದೀಯೆ. ಅಪ್ರಮೇಯವಾದ ಅಗ್ನಿ-ಸೂರ್ಯರ ಪ್ರಕಾಶದಿಂದ ಸೂರ್ಯಪಥದಿಂದ ಬೀಳುತ್ತಿರುವ ನಿನ್ನನ್ನು ನೋಡಿ ಹೀಗೆ ಬೀಳುತ್ತಿರುವವನು ಯಾರೆಂದು ನಾವೆಲ್ಲರೂ ಪರಿಮೋಹಿತರಾಗಿ ತರ್ಕಿಸುತ್ತಿದ್ದೇವೆ! ಶಕ್ರ, ಅರ್ಕ, ವಿಷ್ಣುಗಳ ಅಪ್ರತಿಮ ಪ್ರಭಾವದಿಂದ ದೇವಮಾರ್ಗವನ್ನು ಬಳಸಿದ ನಿನ್ನನ್ನು ಎದುರುಗೊಂಡು ನಿನ್ನ ಪತನಕ್ಕೆ ಕಾರಣವೇನೆಂದು ಕೇಳಲು ನಾವೆಲ್ಲರೂ ಎದ್ದು ನಿಂತಿದ್ದೇವೆ. ನಮ್ಮ ಕುರಿತು ನೀನೇ ಮೊದಲು ಕೇಳಲಿಲ್ಲವಾದುದರಿಂದ ನಾವು ನಿನ್ನನ್ನು ಪ್ರಶ್ನಿಸುವ ಸಾಹಸವನ್ನು ಮಾಡಿದ್ದೇವೆ. ಸ್ಪೃಹಣೀಯರೂಪೀ! ನಿನ್ನನ್ನು ಕೇಳುತ್ತಿದ್ದೇವೆ - ನೀನು ಯಾರವನು? ಯಾವ ಕರಣದಿಂದ ನೀನು ಇಲ್ಲಿಗೆ ಆಗಮಿಸಿರುವೆ? ದೇವೇಂದ್ರಸಮಾನ ರೂಪಿಯೇ! ಭಯ, ವಿಷಾದ, ಮೋಹಗಳನ್ನು ನೀನು ತೊರೆಯುಬೇಕು. ಏಕೆಂದರೆ ವರ್ತಮಾನದಲ್ಲಿ ನೀನು ಸತ್ಯವಂತರ ಬಳಿ ಇದ್ದೀಯೆ. ಬಲಹ ಶಕ್ರನೂ ಇಲ್ಲಿ ನಿನ್ನನ್ನು ಪೀಡಿಸಲಾರ.

ಅಮರರಾಜಕಲ್ಪ! ಸುಖದಿಂದ ಚ್ಯುತರಾದ ಸತ್ಯವಂತರಿಗೆ ಸತ್ಯವಂತರೇ ಪ್ರತಿಷ್ಠೆ. ನಿನ್ನ ಜೊತೆಯಿರುವವರು ಸ್ಥಾವರಜಂಗಮಗಳಿಗೆ ಒಡೆಯರು. ನಿನ್ನ ಸದೃಷರಾದ

ಸತ್ಯವಂತರಲ್ಲಿ ನೀನು ಪ್ರತಿಷ್ಠೆಯನ್ನು ಕಾಣುತ್ತೀಯೆ. ಸುಡುವುದರಲ್ಲಿ ಅಗ್ನಿಯು ಪ್ರಭುವು. ಬಿತ್ತುವುದರಲ್ಲಿ ಭೂಮಿಯು ಪ್ರಭುವು. ಪ್ರಕಾಶಿಸುವುದರಲ್ಲಿ ಸೂರ್ಯನು ಪ್ರಭುವು. ಸತ್ಯವಂತರಲ್ಲಿ ಅಭ್ಯಾಗತನು ಪ್ರಭುವು."

ಯಯಾತಿಯು ಹೇಳಿದನು:

"ನಾನು ಯಯಾತಿ, ನಹುಷನ ಪುತ್ರ, ಮತ್ತು ಪುರುವಿನ ಪಿತ. ರಸರ್ವಭೂತಗಳನ್ನು ಅವಮಾನಿಸಿದುದರಿಂದ ಸುರಸಿದ್ಧಋಷಿಲೋಕಗಳಿಂದ ಹೊರದೋಡಿಸಲ್ಪಟ್ಟು, ಪುಣ್ಯವು ಕಡಿಮೆಯಾಗಿ ಕಳಚಿ ಬಿದ್ದಿದ್ದೇನೆ. ವಯಸ್ಸಿನಲ್ಲಿ ನಾನು ನಿಮ್ಮೆಲ್ಲರಿಗಿಂತ ಹಿರಿಯವನಾದುದರಿಂದ ನಾನೇ ನಿಮ್ಮನ್ನು ಮೊದಲು ಅಭಿವಾದಿಸಲಿಲ್ಲ. ವಿದ್ಯೆಯಲ್ಲಿ, ತಪಸ್ಸಿನಲ್ಲಿ ಅಥವಾ ಜನ್ಮದಲ್ಲಿ ವೃದ್ದನಾದವನು ದ್ವಿಜರಿಗೆ ಪೂಜ್ಯನಾಗುತ್ತಾನೆ."

ಅಷ್ಟಕನು ಹೇಳಿದನು:

"ರಾಜನ್! ವಯಸ್ಸಿನಲ್ಲಿ ನಮಗಿಂತ ವೃದ್ಧನಾಗಿದ್ದುದರಿಂದ ನೀನು ನಮ್ಮನ್ನು ಮೊದಲು ಅಭಿವಾದಿಸಲಿಲ್ಲವೆಂದು ಹೇಳಿದೆಯಲ್ಲ! ವಿದ್ಯೆಯಲ್ಲಿ ವಯಸ್ಸಿನಲ್ಲಿ ವೃದ್ಧನಾದವನು ದ್ವಿಜರಿಗೆ ಪೂಜನೀಯನಾಗುತ್ತಾನೆ."

ಯಯಾತಿಯು ಹೇಳಿದನು:

"ಪಾಪವು ಕರ್ಮಗಳನ್ನು ನಾಶಪಡಿಸುತ್ತದೆ ಮತ್ತು ನಿಧಾನವಾಗಿ ಪಾಪಲೋಕಕ್ಕೆ ಒಯ್ಯುತ್ತದೆ ಎಂದು ಹೇಳುತ್ತಾರೆ. ಒಳ್ಳೆಯದು ಎಂದೂ ಕೆಟ್ಟದ್ದನ್ನು ಅನುಸರಿಸುವುದಿಲ್ಲ. ಅದರಿಂದ ಅವರ ಆತ್ಮಗಳು ಅದಕ್ಕೆ ಅನುಕೂಲವಾದುದನ್ನೇ ಹೇಳುತ್ತವೆ. ನನ್ನಲ್ಲಿದ್ದ ಧನವು ವಿಪುಲವೂ ಮಹತ್ತರವೂ ಆಗಿತ್ತು. ಪ್ರಯತ್ನಪಟ್ಟರೂ ಈಗ ಅದನ್ನು ಹಿಂದೆ ಪಡೆಯಲಾಗುತ್ತಿಲ್ಲ. ಹೀಗೆ ಆತ್ಮಹಿತದಲ್ಲಿ ನಿರತನಾದವನು ಹಾಗೆಯೇ ನಡೆದುಕೊಳ್ಳುವನು ಬದುಕಿರುವಾಗಲೇ ತಿಳಿದವನಾಗುತ್ತಾನೆ. ಜೀವಲೋಕದಲ್ಲಿ ಬಹುಜೀವಿಗಳು ದೈವಾಧೀನರಾಗಿದ್ದು ಅಧಿಕಾರದಿಂದಿರುವರೆಂದು ನಷ್ಟವಾಗಿ ನಡೆದುಕೊಳ್ಳುತ್ತಾರೆ. ಏನನ್ನು ಪಡೆದರೂ ಧೀರನು ವಿಚಲಿತನಾಗುವುದಿಲ್ಲ. ವಿಧಿಯೇ ಬಲವಾದುದೆಂದು ಅತ್ಮಬುದ್ಧಿಯು ತಿಳಿದುಕೊಂಡಿರುತ್ತದೆ. ಜಂತುವು ಸುಖವನ್ನು ಪಡೆಯಲಿ ಅಥವಾ ದುಃಖವನ್ನು ಪಡೆಯಲಿ. ಅದು ದೈವಾದೀನದಿಂದಲ್ಲದೇ ಆತ್ಮಶಕ್ತಿಯಿಂದಲ್ಲವೆಂಬುದನ್ನು ತಿಳಿದಿರುತ್ತಾರೆ. ಆದುದರಿಂದ ವಿಧಿಯೇ ಬಲವಾದುದೆಂದು ತಿಳಿದು ಅವರು ಎಂದೂ ದುಃಖಿಸುವುದಿಲ್ಲ ಅಥವಾ ಹರ್ಷಿಸುವುದಿಲ್ಲ. ದುಃಖದಲ್ಲಿ ತಪಿಸುವುದಿಲ್ಲ; ಸುಖದಲ್ಲಿ ಹರ್ಷಿಸುವುದಿಲ್ಲ; ಧೀರನು

ಸದೈವ ಸಮನಾಗಿ ವರ್ತಿಸುತ್ತಾನೆ. ವಿಧಿಯೇ ಬಲವಾದುದೆಂದು ತಿಳಿದು ಅವರು ಎಂದೂ ದುಃಖಿಸುವುದಿಲ್ಲ ಅಥವಾ ಹರ್ಷಿಸುವುದಿಲ್ಲ. ಅಷ್ಟಕ! ಭಯವು ಎಂದೂ ನನ್ನನ್ನು ಮೋಹಿಸುವುದಿಲ್ಲ. ಸಂತಾಪವು ಎಂದೂ ನನ್ನ ಮನಸ್ಸಿನಲ್ಲಿರುವುದಿಲ್ಲ. ಧಾತನು ನನಗೆ ಲೋಕದಲ್ಲಿ ಹೇಗೆ ವಿಧಿಸಿದ್ದಾನೋ ಅದು ಖಂಡಿತವಾಗಿ ಹಾಗೆಯೇ ಆಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಬೆವರಿನಿಂದ ಹುಟ್ಟಿದವು, ಅಂಡದಲ್ಲಿ ಹುಟ್ಟಿದವು, ಸರೀಸೃಪಗಳು, ಕ್ರಿಮಿಗಳು, ನೀರಿನಲ್ಲಿರುವ ಮೀನುಗಳು, ಕಲ್ಲು, ತೃಣ-ಕಾಷ್ಠಗಳೆಲ್ಲವೂ ನೋಡುತ್ತಿರುವಂತೆಯೇ ಕ್ಷಯಹೊಂದಿ ತಮ್ಮ ತಮ್ಮ ಪ್ರಕೃತಿಗಳನ್ನು ಸೇರುತ್ತವೆ. ಸುಖದುಃಖಗಳು ಅನಿತ್ಯವೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಅಷ್ಟಕ! ಅವುಗಳು ನನ್ನಲ್ಲಿ ಹೇಗೆ ಸಂತಾಪವನ್ನುಂಟುಮಾಡುತ್ತವೆ? ಏನು ಮಾಡಬೇಕು, ಏನನ್ನು ಮಾಡಬಾರದು ಇವು ನನ್ನನ್ನು ಕಾಡುವುದಿಲ್ಲ. ಹೀಗೆ ಅಪ್ರಮತ್ತನಾಗಿದ್ದುಕೊಂಡು ಸಂತಾಪವನ್ನು ವರ್ಜಿಸಿದ್ದೇನೆ."

ಅಷ್ಟಕನು ಹೇಳಿದನು:

"ಪಾರ್ಥಿವೇಂದ್ರ! ನೀನು ಭೋಗಿಸಿದ ಯಾವ ಯಾವ ಪ್ರಧಾನ ಲೋಕಗಳಿವೆಯೋ ಅವುಗಳ ಕಾಲ ರೀತಿಗಳಿಗನುಗುಣವಾಗಿ

ಎಲ್ಲವನ್ನೂ ಇದ್ದಹಾಗೆ ನಮಗೆ ಹೇಳು. ಏಕೆಂದರೆ ನೀನು ಧರ್ಮಗಳ ಕುರಿತು ಕ್ಷೇತ್ರವನ್ನು ಚೆನ್ನಾಗಿ ತಿಳಿದುಕೊಂಡವನಂತೆ ಮಾತನಾಡುತ್ತಿರುವೆ.”

ಯಯಾತಿಯು ಹೇಳಿದನು:

“ನಾನು ಇಲ್ಲಿ ಸಾರ್ವಭೌಮ ರಾಜನಾಗಿದ್ದೆ. ಅನಂತರ ಮಹತ್ತರವಾದ ಅಜಯ ಲೋಕಗಳನ್ನು ಪಡೆದೆನು. ಅವುಗಳಲ್ಲಿ ನಾನು ಒಂದೊಂದು ಸಾವಿರ ವರ್ಷಗಳು ನೆಲೆಸಿದನು. ಅನಂತರ ಅವುಗಳಿಗಿಂತಲೂ ಮೇಲಿನ ಲೋಕಗಳನ್ನು ಪಡೆದೆನು. ಅನಂತರ ಸಹಸ್ರ ದ್ವಾರಗಳಿರುವ, ನೂರುಯೋಜನ ವಿಸ್ತೀರ್ಣದ ಪುರುಹೂತನ ರಮ್ಯ ಪುರಿಯಲ್ಲಿ ಒಂದು ಸಾವಿರ ವರ್ಷಗಳು ವಾಸಿಸಿದೆನು. ಅನಂತರ ಅದಕ್ಕೂ ಉನ್ನತ ಲೋಕಕ್ಕೆ ಹೋದೆನು. ಕೆಲವರೇ ಪಡೆಯಬಲ್ಲ, ದಿವ್ಯ ಅಜರ ಪ್ರಜಾಪತಿಯ ಲೋಕವನ್ನು ಪಡೆದೆನು. ಅಲ್ಲಿ ಒಂದು ಸಾವಿರ ವರ್ಷವಿದ್ದು ನಂತರ ಅದಕ್ಕೂ ಮೇಲಿನ ಲೋಕಕ್ಕೆ ಹೋದೆನು. ಆ ಲೋಕಗಳನ್ನು ಗೆದ್ದು ದೇವ ದೇವನ ನಿವೇಶನದಲ್ಲಿ ಯಥೇಷ್ಟವಾಗಿ ವಾಸಿಸಿದೆನು. ಸಮಸ್ತ ತ್ರಿದಶರಿಂದ ಸಂಪೂಜಿತನಾಗಿ, ಆ ಈಶ್ವರರ ಪ್ರಭಾವ-ದ್ಯುತಿಗಳಲ್ಲಿ ಆ ಈಶ್ವರರ ಸಮನಾಗಿದ್ದೆನು. ಹಾಗೆಯೇ ನಂದನದಲ್ಲಿ, ಬೇಕಾದ

ರೂಪಗಳನ್ನು ತಳೆದು, ನೂರಾರು ಸಾವಿರಾರು ವರ್ಷಗಳು ಅಪ್ಸರೆಯರೊಡನೆ ಪುಣ್ಯ ಗಂಧಗಳನ್ನು ಸೇವಿಸುತ್ತಾ, ಅನುರೂಪ ಪುಷ್ಟಿಗಳನ್ನು ನೋಡುತ್ತಾ ಕಳೆದೆನು. ಹೀಗೆ ದೇವಸುಖದಲ್ಲಿ ನಾನು ಸಕ್ತನಾಗಿರಲು ಮಹಾ ಕಾಲವು ಅತಿಮಾತ್ರದಲ್ಲಿ ಉರುಳಿತು. ಆಗ ಉಗ್ರರೂಪೀ ದೇವದೂತನು "ಬೀಳು" ಎಂದೂ ಮೂರುಬಾರಿ ದೀರ್ಘಸ್ವರದಲ್ಲಿ ಹೇಳಲು ಇವೆಲ್ಲವೂ ಧ್ವಂಸವಾದವು. ರಾಜಸಿಂಹ! ಇದಿಷ್ಟೇ ನನಗೆ ತಿಳಿದಿದೆ. ಆಗ ಕ್ಷೀಣಪುಣ್ಯನಾಗಿ ನಂದನದಿಂದ ಭ್ರಷ್ಟನಾಗಿ ಬಿದ್ದೆ. ಮಾನವೇಂದ್ರ! ಅಂತರಿಕ್ಷದಲ್ಲಿ ಸುರರು ಬೀಳುತ್ತಿರುವ ನನ್ನನ್ನು ನೋಡಿ ಅನುಕ್ರೋಶರಾಗಿ ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿದೆ. "ಅಯ್ಯೋ ಕಷ್ಟವೇ! ಕ್ಷೀಣಪುಣ್ಯನಾಗಿ ಈ ಪುಣ್ಯಕರ್ಮಿ, ಪುಣ್ಯಕೀರ್ತಿ ಯಯಾತಿಯು ಬೇಳುತ್ತಿದ್ದಾನಲ್ಲ!" ಬೀಳುತ್ತಿರುವ ನಾನು ಕೇಳಿಕೊಂಡೆ - "ಹೇಗಾದರೂ ಸತ್ಯವಂತರ ಮಧ್ಯೆ ಬೀಳುವಂತಾಗಲಿ!" ಅವರು ನಿಮ್ಮ ಯಜ್ಞಭೂಮಿಯನ್ನು ತೋರಿಸಿದರು. ಅದನ್ನು ನೋಡಿ ತ್ವರಿತವಾಗಿ ಇಲ್ಲಿಗೆ ಬಂದೆ. ಯಜ್ಞಭೂಮಿಯ ಹವಿಸ್ಸಿನ ಗಂಧವನ್ನು ಮೂಸಿದೆ. ಹೊಗೆಯ ದಾರಿಯನ್ನೇ ಹಿಡಿದು ಬಂದೆ."

ಅಷ್ಟಕನು ಹೇಳಿದನು:

“ಕೃತಯುಗಪ್ರಧಾನ! ಕಾಮರೂಪಿಯಾಗಿ ನಂದನವನದಲ್ಲಿ ಅನೇಕ ಲಕ್ಷವರ್ಷಗಳ ಕಾಲ ವಾಸಿಸುತ್ತಿದ್ದ ನೀನು ಯಾವ ಕಾರಣಕ್ಕಾಗಿ ಅಲ್ಲಿಂದ ತೊಗಲಿ ಭೂಮಿಯ ಮೇಲೆ ಬಿದ್ದೆ?”

ಯಯಾತಿಯು ಹೇಳಿದನು:

“ಮಾನವ ಲೋಕದಲ್ಲಿ ಐಶ್ವರ್ಯವನ್ನು ಕಳೆದುಕೊಂಡವನನ್ನು ಬಂಧುಗಳು ಮತ್ತು ಸ್ನೇಹಿತರು ಹೇಗೆ ತ್ಯಜಿಸುತ್ತಾರೋ ಹಾಗೆ ಪುಣ್ಯವನ್ನು ಕಳೆದುಕೊಂಡ ಮನುಷ್ಯನನ್ನು ಈಶ್ವರನೊಂದಿಗೆ ದೇವಸಂಘಗಳೂ ಕೂಡ ಪರಿತ್ಯಜಿಸುತ್ತಾರೆ.”

ಅಷ್ಟಕನು ಹೇಳಿದನು:

“ಅಲ್ಲಿ ಮನುಷ್ಯನ ಪುಣ್ಯವು ಹೇಗೆ ಕ್ಷೀಣವಾಗುತ್ತದೆ? ಈ ವಿಷಯದಲ್ಲಿ ನನಗೆ ಅತಿದೊಡ್ಡ ಸಂಶಯವುಂಟಾಗಿದೆ. ವಿಶಿಷ್ಟರಾದವರು ಯಾವ ಕರ್ಮಗಳನ್ನು ಮಾಡಿ ಯಾವ ಲೋಕಗಳನ್ನು ಪಡೆಯುತ್ತಾರೆ? ಅದನ್ನು ಹೇಳು. ನೀನೊಬ್ಬ ಆತ್ಮಜ್ಞಾನಿಯೆಂದು ನನಗನ್ನಿಸುತ್ತದೆ.”

ಯಯಾತಿಯು ಹೇಳಿದನು:

“ನರದೇವ! ನಾನು-ನನ್ನದು ಎಂದು ಕೊಚ್ಚಿಕೊಳ್ಳುವವರು ಎಲ್ಲರೂ ಭೌಮವೆಂಬ ಈ ನರಕದಲ್ಲಿ ಬೀಳುತ್ತಾರೆ. ಅವರು ರಣಹದ್ದು-ನರಿ-ಕಾಗೆಗಳಿಗೆ ಆಹಾರವಾಗಿ ಅನೇಕವಿಧದ

ದೇಹಗಳನ್ನು ಧರಿಸುತ್ತಲೇ ಇರುತ್ತಾರೆ. ಆದುದರಿಂದ ನರರು ಲೋಕದಲ್ಲಿ ದುಷ್ಟ-ನಿಂದ್ಯಕರ್ಮಗಳನ್ನು ತ್ಯಜಿಸಬೇಕು. ಪಾರ್ಥಿವ! ಇದರ ಕುರಿತು ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೂ ಹೇಳುವುದಿದ್ದರೆ ಕೇಳು. ಹೇಳುತ್ತೇನೆ."

ಅಷ್ಟಕನು ಹೇಳಿದನು:

"ಶರೀರವನ್ನು ರಣಹದ್ದುಗಳೂ, ನವಿಲುಗಳೂ ಮತ್ತು ಕ್ರಿಮಿಕೀಟಗಳೂ ತಿಂದನಂತರ ಅವನು ಎಲ್ಲಿರುತ್ತಾನೆ ಮತ್ತು ಹೇಗಿರುತ್ತಾನೆ? ಭೌಮವೆಂಬ ಬೇರೊಂದು ನರಕವನ್ನು ನಾನು ಕೇಳಿಲ್ಲ!"

ಯಯಾತಿಯು ಹೇಳಿದನು:

"ದೇಹವನ್ನು ತೊರೆದರೂ ಕರ್ಮಫಲಗಳಿಂದ ಅನುಲಿಪ್ತನಾದ ಜೀವನು ಭೂಮಿಯ ಮೇಲೆಯೇ ಸಂಚರಿಸುತ್ತಿರುತ್ತಾನೆ. ಈ ಭೌಮವೆಂಬ ನರಕದಲ್ಲಿ ಬಿದ್ದು ಅನೇಕಾನೇಕ ವರ್ಷಗಳಾದರೂ ಹಿಂದಿನ ಜನ್ಮಗಳ ಸ್ಮರಣೆಯಿಲ್ಲದೇ ಇರುತ್ತಾನೆ. ಅರವತ್ತು ಸಾವಿರ ಅಥವಾ ಎಂಭತ್ತು ಸಾವಿರ ವರ್ಷಗಳ ನಂತರ, ಪುಣ್ಯವು ಕ್ಷೀಣವಾದಾಗ ಅವರು ಆಕಾಶದಿಂದ ಕೆಳಗೆ ಅಂತ್ಯವೇ ಇಲ್ಲದ ತೀಕ್ಷ್ಣ ಹಲ್ಲುಗಳ ರಾಕ್ಷಸರಿರುವ ಈ ಭೌಮನರಕದಲ್ಲಿ ಬೀಳುತ್ತಾರೆ."

ಅಷ್ಟಕನು ಹೇಳಿದನು:

> "ಯಾವಕಾರಣದಿಂದ ಅವರು ಭಯಂಕರ ಭೌಮರೆಂಬ ರಾಕ್ಷಸರ ತೀಕ್ಷ್ಣ ಕೋರೆದಾಡೆಗಳಿಗೆ ಬೀಳುತ್ತಾರೆ? ಜೀವವು ಹೇಗೆ ಇರುತ್ತದೆ ಮತ್ತು ಇಲ್ಲವಾಗುತ್ತದೆ? ಅದು ಹೇಗೆ ಉಂಟಾಗುತ್ತದೆ? ಅದು ಹೇಗೆ ಗರ್ಭವನ್ನು ಸೇರುತ್ತದೆ?"

# ಸಂವರಣ ಮತ್ತು ತಪತಿ

[ಸಂವರಣ-ತಪತಿಯರ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಚೈತ್ರರಥ ಪರ್ವ (ಅಧ್ಯಾಯ ೧೬೦-೧೬೩) ದಲ್ಲಿ ಬರುತ್ತದೆ. ಈ ಕಥೆಯನ್ನು ಗಂಧರ್ವ ಅಂಗಾರಪರ್ಣನು ಅರ್ಜುನನಿಗೆ ಪಾಂಡವರು ದ್ರೌಪದಿಯ ಸ್ವಯಂವರಕ್ಕೆ ಪ್ರಯಾಣಿಸುತ್ತಿರುವಾಗ ಮಾರ್ಗದಲ್ಲಿ ಹೇಳಿದನು.]

ದಿವಿಯಲ್ಲಿದ್ದುಕೊಂಡು ನಾಕದವರೆಗೂ ತನ್ನ ತೇಜಸ್ಸಿನಿಂದ ಬೆಳಗಿಸುವ ಸೂರ್ಯನಿಗೆ ತಪತೀ ಎಂಬ ಹೆಸರಿನ ಅಸದೃಶಿ ಮಗಳಿದ್ದಳು. ಸಾವಿತ್ರಿಯಿಂದ ವಿವಸ್ವತನಲ್ಲಿ ಹುಟ್ಟಿದ ಈ ತಪತಿಯು ಮೂರೂ ಲೋಕಗಳಲ್ಲಿ ತಪಸ್ಸಿನಿಂದ ಯುಕ್ತಳಾಗಿ ವಿಶ್ರುತಳಾಗಿದ್ದಳು. ಯಾರೇ ದೇವಿಯಾಗಲೀ, ಅಸುರಿಯಾಗಲೀ, ಯಕ್ಷಿಯಾಗಲೀ, ರಾಕ್ಷಸಿಯಾಗಲೀ,

ಅಪ್ಸರೆಯಾಗಲೀ, ಗಂಧರ್ವಿಯಾಗಲೀ ಅವಳಷ್ಟು ರೂಪವಂತಳಾಗಿರಲಿಲ್ಲ. ಆ ಭಾಮಿನಿಯು ಸುವಿಭಕ್ತಳಾಗಿದ್ದಳು. ಅನವದ್ಯಾಂಗಿಯಾಗಿದ್ದಳು, ಕಪ್ಪಾದ ಅಗಲ ಕಣ್ಣುಗಳುಳ್ಳವಳಾಗಿದ್ದಳು, ಒಳ್ಳೆಯ ನಡತೆಯುಳ್ಳವಳಾಗಿದ್ದಳು, ಸಾಧ್ವಿಯಾಗಿದ್ದಳು ಮತ್ತು ಸುಂದರ ವೇಷ ಭೂಷಣಗಳನ್ನು ಧರಿಸುತ್ತಿದ್ದಳು. ಸವಿತುವು ರೂಪ, ಶೀಲ, ಕುಲ ಮತ್ತು ಕಲಿಕೆ ಇವ್ಯಾವುದರಲ್ಲಿಯೂ ಅವಳ ಸದೃಶರಾದವ ಈ ಮೂರೂ ಲೋಕಗಳಲ್ಲಿ ಯಾರೂ ಇಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದನು. ಅವಳು ಯೌವನವನ್ನು ಹೊಂದಲು ಮಗಳನ್ನು ಕೊಡಬೇಕು ಎನ್ನುವುದನ್ನು ನೋಡಿದ ಅವನು ಅವಳ ಮದುವೆಯ ಕುರಿತು ಯೋಚಿಸುತ್ತಾ ಚಿಂತೆಗೊಳಗಾದನು.

ಆಗ ಅರ್ಕ್ಷಪುತ್ರ ಕುರುಋಷಭ ಬಲಶಾಲಿ ರಾಜ ಸಂವರಣನು ಸದಾ ಅರ್ಘ್ಯ ಮಾಲೆ ಉಪಹಾರಗಳಿಂದ, ಉಪವಾಸ ವ್ರತಗಳಿಂದ ಮತ್ತು ವಿವಿಧ ತಪಸ್ಸುಗಳಿಂದ ನಿಯಮಬದ್ಧನಾಗಿ ಸೂರ್ಯಾರಾಧನೆಯಲ್ಲಿ ತೊಡಗಿದ್ದನು. ಆ ಪೌರವನಂದನನು ವಿನಯದಿಂದ, ಅಹಂಕಾರವಿಲ್ಲದೆ ಶುಚಿರ್ಭೂತನಾಗಿ ಭಕ್ತಿಯಿಂದ ಆ ಅಂಶುಮಂತನನ್ನು ಪೂಜಿಸುತ್ತಿದ್ದನು. ಆಗ ಕೃತಜ್ಞನೂ, ಧರ್ಮಜ್ಞನೂ, ಭುಮಿಯಲ್ಲಿಯೇ ರೂಪದಲ್ಲಿ ಅಸದೃಶನೂ ಆದ ಸಂವರಣನು ತಪತಿಗೆ ಸದೃಶ ಪತಿಯೆಂದು ಸೂರ್ಯನು ಅಭಿಪ್ರಾಯಪಟ್ಟನು. ಆಗ ಅವನು ತನ್ನ ಕನ್ಯೆಯನ್ನು ವಿಶ್ರುತ ಅಭಿಜನ ನೃಪೋತ್ತಮ ಸಂವರಣನಿಗೆ ಕೊಡಲು ಇಚ್ಛಿಸಿದನು.

ದಿವಿಯಲ್ಲಿ ದೀಪ್ತಾಂಶುವು ತನ್ನ ತೇಜಸ್ಸಿನಿಂದ ಹೇಗೆ ಬೆಳಗುತ್ತಾನೋ ಹಾಗೆ ಭುವಿಯಲ್ಲಿ ಮಹೀಪಾಲ ಸಂವರಣನು ಬೆಳಗುತ್ತಿದ್ದನು. ಬ್ರಹ್ಮವಾದಿಗಳು ಹೇಗೆ ಉದಯಿಸುತ್ತಿರುವ ಆದಿತ್ಯನನ್ನು ಅರ್ಚಿಸುತ್ತಾರೋ ಹಾಗೆ ಬ್ರಾಹ್ಮಣರೇ ಮೊದಲಾದ ಪ್ರಜೆಗಳು ಸಂವರಣನನ್ನು ಪೂಜಿಸುತ್ತಿದ್ದರು. ಆ ಶ್ರೀಮಾನ್ ನೃಪತಿಯು ತನ್ನ ಸುಹೃದಯರಿಗೆ ತೋರಿಸುವ ಕಾಂತಿಯಲ್ಲಿ ಸೋಮನಂತಿದ್ದನು ಮತ್ತು ದುಹೃದಯರಿಗೆ ತೋರಿಸಿದ ತೇಜಸ್ಸಿನಲ್ಲಿ ಆದಿತ್ಯನಂತಿದ್ದನು. ಈ ರೀತಿಯ ಗುಣ ಚಾರಿತ್ರ್ಯವುಳ್ಳ ನೃಪತಿಗೆ ಸ್ವಯಂ ತಪನನೇ ತಪತಿಯನ್ನು ಕೊಡಲು ನಿಶ್ಚಯಿಸಿದನು.

ಹೀಗಿರಲು ಭೂವಿಯಲ್ಲಿಯೇ ಅತ್ಯಂತ ಪ್ರಸಿದ್ಧ ಆ ಶ್ರೀಮಾನ್ ರಾಜನು ಒಮ್ಮೆ ಬೇಟೆಯಾಡಲು ಪರ್ವತದ ಉಪವನವೊಂದಕ್ಕೆ ಹೋದನು. ಬೇಟೆಯಾಡುತ್ತಿರುವಾಗ ಆ ರಾಜನ ಅಪ್ರತಿಮ ಕುದುರೆಯು ಹಸಿವು, ಬಾಯಾರಿಕೆ ಮತ್ತು ಆಯಾಸಗಳಿಂದ ಬಳಲಿ ಅಲ್ಲಿಯೇ ಬಿದ್ದು ಸತ್ತುಹೋಯಿತು. ಕುದುರೆಯು ಸಾಯಲು ನೃಪನು ನಡೆದುಕೊಂಡೇ ಆ ಗಿರಿಯಮೇಲೆ ಹೋದನು. ಅಲ್ಲಿ ಅವನು ಲೋಕದಲ್ಲಿಯೇ ಅಸದೃಷಿ ಆಯತಲೋಚನೆ ಕನ್ಯೆಯೋರ್ವಳನ್ನು ನೋಡಿದನು. ಅಲ್ಲಿ ಅವನು ಒಬ್ಬನೇ ಇದ್ದನು. ಅವಳೂ ಒಬ್ಬಳೇ ಇದ್ದಳು. ಆ ಅರಿಮರ್ದನ ನೃಪತಿಶಾರ್ದೂಲನು ಕನ್ಯೆಯನ್ನು ಅವಿಚಲೇಕ್ಷಣನಾಗಿ ನೋಡತೊಡಗಿದನು. ಅವಳ ರೂಪದಿಂದ ಅವಳು ಶ್ರೀಯಿರಬಹುದೆಂದು ನೃಪತಿಯು ತರ್ಕಿಸಿದನು. ಪುನಃ ಅವಳು

ಭೂಮಿಯ ಮೇಲೆ ಬಿದ್ದಿರುವ ರವಿಯ ಪ್ರಭೆಯೇ ಇರಬಹುದು ಎಂದು ಯೋಚಿಸಿದನು. ಆ ಅಸಿತಲೋಚನೆಯು ನಿಂತಿದ್ದ ಆ ಗಿರಿಪ್ರದೇಶ, ಅಲ್ಲಿರುವ ವೃಕ್ಷ ಕ್ಷುಪ ಲತೆಗಳ ಜೊತೆಗೆ ಹಿರಣ್ಮಯದಂತೆ ತೋರುತ್ತಿದ್ದವು. ಅವಳನ್ನು ನೋಡಿದ ಅವನು ಸರ್ವ ಪ್ರಾಣಿಗಳ ಸೌಂದರ್ಯವನ್ನು ಅವಹೇಳನ ಮಾಡಿದನು ಮತ್ತು ಆ ರಾಜನು ತನ್ನ ಕಣ್ಣುಗಳು ತಮ್ಮ ಉದ್ದೇಶಗಳ ಫಲವನ್ನು ಹೊಂದಿದವು ಎಂದು ತಿಳಿದನು. ಜನ್ಮಪ್ರಭೃತಿಯಾಗಿ ಏನೆಲ್ಲ ನೋಡಿದ್ದನೋ ರೂಪದಲ್ಲಿ ಅವಳ ಸದೃಶವಾದ ಬೇರೆ ಏನನ್ನೂ ನೋಡಲಿಲ್ಲ ಎಂದು ಆ ಮಹೀಪತಿಯು ತರ್ಕಿಸಿದನು. ಅವಳ ಗುಣಪಾಶಗಳಿಂದ ಅವನ ಬುದ್ಧಿ, ಮನಸ್ಸು ಮತ್ತು ಕಣ್ಣುಗಳು ಬಂಧಿತವಾಗಿ ಅವನು ಆ ಸ್ಥಳದಿಂದ ಚಂಚಲಿಸಲಿಲ್ಲ ಮತ್ತು ಅಲ್ಲಿರುವ ಯಾವುದರ ಪರಿಜ್ಞಾನವೂ ಅವನಿಗಿರಲಿಲ್ಲ. ದೇವಾಸುರಮಾನುಷರ ಲೋಕವನ್ನೆಲ್ಲಾ ಮಥಿಸಿ ಧಾತ್ರಿಯು ಈ ವಿಶಾಲಾಕ್ಷಿಯ ರೂಪವನ್ನು ಆವಿಷ್ಕೃತಗೊಳಿಸಿರಬೇಕು. ಈ ರೀತಿ ರೂಪದ್ರವಿಣಸಂಪನ್ನೆ ಲೋಕದಲ್ಲಿಯೇ ಅಸದೃಶಿ ಕನ್ಯೆಯ ಕುರಿತು ನೃಪ ಸಂವರಣನು ಯೋಚಿಸಿದನು. ಕಲ್ಯಾಣಾಭಿಜನ ನೃಪನು ಆ ಕಲ್ಯಾಣಿಯನ್ನು ನೋಡುತ್ತಲೇ ಅವನ ಮನಸ್ಸು ಕಾಮಮಾರ್ಗಪೀಡಿತವಾಗಿ ಚಿಂತೆಗೊಳಗಾದನು. ಮನ್ಮಥಾಗ್ನಿಯಿಂದ ತೀವ್ರವಾಗಿ ದಹಿಸುತ್ತಿದ್ದ ಆ ನೃಪತಿಯು ಅಪ್ರಗಲ್ಭರಲ್ಲಿ ಪ್ರಗಲ್ಭಳಾದ ಯಶಸ್ವಿನಿಯನ್ನು ಕುರಿತು ಹೇಳಿದನು:

"ನೀನು ಯಾರು? ನೀನು ಯಾರವಳು? ರಂಭೋರು! ಇಲ್ಲಿ

ಯಾವ ಕಾರಣಕ್ಕಾಗಿ ನಿಂತಿರುವೆ? ನಿರ್ಜನ ಅರಣ್ಯದಲ್ಲಿ ಒಬ್ಬಂಟಿಯಾಗಿ ಏಕೆ ತಿರುಗುತ್ತಿರುವೆ? ಸರ್ವಾಭರಣ ಭೂಷಿತೆಯಾದ ನಿನ್ನ ವಿಭೂಷಣಗಳೆಲ್ಲವೂ ನಿನ್ನನ್ನೇ ಭೂಷಣವನ್ನಾಗಿ ಬಯಸುತ್ತಿರುವಂತಿದೆ. ನೀನು ದೇವಿ ಅಥವಾ ಅಸುರಿ ಅಥವಾ ಯಕ್ಷೀ ಅಥವಾ ರಾಕ್ಷಸೀ ಅಥವಾ ಭೋಗವತೀ ಅಥವಾ ಗಂಧರ್ವಿ ಅಥವಾ ಮಾನುಷಿಯೆಂದು ನನಗೆ ಅನ್ನಿಸುವುದಿಲ್ಲ. ಮತ್ತಕಾಶಿನೀ! ಇದೂವರೆಗೆ ನಾನು ಯಾವ ವರಾಂಗನೆಯರನ್ನು ನೋಡಿದ್ದೆನೋ ಅಥವಾ ಅವರ ಕುರಿತು ಕೇಳಿದ್ದೆನೋ ಅವರಲ್ಲಿ ಯಾರೂ ನಿನ್ನ ಸದೃಶರೆಂದು ನಾನು ತಿಳಿಯುವುದಿಲ್ಲ.”

ಈ ರೀತಿ ಆ ಮಹೀಪಾಲನು ಅವಳಲ್ಲಿ ಮಾತನಾಡಿದನು. ಆದರೆ ಆ ನಿರ್ಜನ ಅರಣ್ಯದಲ್ಲಿ ಅವಳು ಕಾಮಾರ್ತನಿಗೆ ಏನನ್ನೂ ಪ್ರತ್ಯುತ್ತರಿಸಲಿಲ್ಲ. ಆ ಪಾರ್ಥಿವನು ಈ ರೀತಿ ಲಾಲಪಿಸುತ್ತಿರಲು ಆ ಆಯತೇಕ್ಷಣೆಯು ಮೋಡಗಳಲ್ಲಿ ಮಿಂಚಿನಂತೆ ಅಲ್ಲಿಯೇ ಅಂತರ್ಧಾನಳಾದಳು. ಭ್ರಮೆಗೊಳಗಾದವನಂತೆ ಆ ನೃಪತಿಯು ಆ ವನಜಪತ್ರಾಕ್ಷಿಯನ್ನು ವನದಲ್ಲೆಲ್ಲಾ ಹುಡುಕಾಡತೊಡಗಿದನು. ಅವಳನ್ನು ಅಲ್ಲಿ ಕಾಣದಿರಲು ಆ ಕೌರವಶ್ರೇಷ್ಠನು ವಿಲಪಿಸುತ್ತಾ ಸ್ವಲ್ಪ ಹೊತ್ತು ಅಲ್ಲಿಯೇ ನಿಂತುಬಿಟ್ಟನು. ಅವಳು ಅದೃಶ್ಯಳಾದ ನಂತರ ಶತ್ರುಸಂಘಗಳನ್ನು ಕೆಳಗುರುಳಿಸಬಲ್ಲ ನೃಪತಿಯು ಕಾಮಮೋಹಿತನಾಗಿ ಧರಣೀತಲದಲ್ಲಿ ಬಿದ್ದನು.

ಅವನು ಆ ರೀತಿ ಭೂಮಿಯ ಮೇಲೆ ಬೀಳಲು ಆ ಚಾರುಹಾಸಿನೀ ಪೀನಾಯತಶ್ರೋಣಿಯು ಪುನಃ ನೃಪತಿಗೆ ಕಾಣಿಸಿಕೊಂಡಳು. ಆ ಕಲ್ಯಾಣಿಯು ತನ್ನ ಮಧುರ ಮಾತುಗಳಿಂದ ಕಾಮಾಭಿಹತಚೇತನ ಆ ಕುರುಕುಲಕರ ನೃಪತಿಯನ್ನುದ್ದೇಶಿಸಿ ಹೇಳಿದಳು:

> "ಎದ್ದೇಳು! ಅರಿಂದಮ! ನಿನಗೆ ಮಂಗಳವಾಗಲಿ! ಮೋಹ ಆವಿಷ್ಕೃತನಾಗಿ ಈ ರೀತಿ ಭೂಮಿಯ ಮೇಲೆ ಬೀಳುವುದು ನಿನಗೆ ಅರ್ಹವಾದುದಲ್ಲ."

ಈ ಮಧುರ ಮಾತುಗಳನ್ನು ಕೇಳಿದ ನೃಪತಿಯು ಮೇಲೆ ನೋಡಲು ತನ್ನ ಎದುರೇ ನಿಂತಿದ್ದ ಆ ವಿಪುಲಶ್ರೋಣಿಯನ್ನು ಕಂಡನು. ಆಗ ಮನ್ಮಥಾಗ್ನಿ ಪರೀತಾತ್ಮ ಆ ನರಾಧಿಪನು ತಾಮಸಿತಾ ಅಪಾಂಗಿಗೆ ಸಂದಿಗ್ಧಾಕ್ಷರಗಳನ್ನೊಡಗೂಡಿದ ಮಾತಿನಿಂದ ಉತ್ತರಿಸಿದನು:

> "ಮತ್ತಕಾಶಿನೀ! ಕಾಮಾರ್ತನಾದ ನನ್ನನ್ನು ಪ್ರೀತಿಸು. ಬಯಸುತ್ತಿರುವ ನನ್ನನ್ನು ಬಯಸು. ನನ್ನ ಪ್ರಾಣವೇ ನನ್ನನ್ನು ತೊರೆಯುತ್ತಿದೆ. ಕಾಮದ ಈ ನಿಶಿತ ಶರಗಳು ನಿನ್ನಿಂದಾಗಿ ನನ್ನನ್ನು ಚುಚ್ಚುವುದನ್ನು ನಿಲ್ಲಿಸುತ್ತಲೇ ಇಲ್ಲ. ಕಾಮದ ವಿಷದಿಂದ ಗ್ರಸ್ತನಾಗಿದ್ದೇನೆ. ಶುಭಾನನೇ! ನನ್ನನ್ನು ತೃಪ್ತಿಗೊಳಿಸು. ನನ್ನ ಈ ಪ್ರಾಣವು ಕಿನ್ನರರ ಗೀತಭಾಷಿಣಿ ನಿನ್ನ ಅಧೀನವಾಗಿದೆ. ನಿನ್ನ ಹೊರತಾಗಿ ನಾನು ನಾನೇ ಜೀವಿತವಿರಲು ಶಕ್ಯನಿಲ್ಲ. ಆದುದರಿಂದ ನನ್ನ ಮೇಲೆ

ಅನುಕ್ರೋಶವನ್ನು ತೋರು. ಭಕ್ತನಾದ ನನ್ನನ್ನು ತ್ಯಜಿಸಬೇಡ. ಭಾಮಿನೀ! ನೀನೇ ನನ್ನನ್ನು ಪ್ರೀತಿಯೋಗದಿಂದ ಉದ್ಧಾರ ಮಾಡಬಹುದು. ಸುಂದರಿ! ಗಾಂಧರ್ವ ವಿವಾಹದಿಂದಲೇ ನನ್ನವಳಾಗು. ವಿವಾಹಗಳಲ್ಲಿಯೇ ಗಂಧರ್ವ ವಿವಾಹವು ಶ್ರೇಷ್ಠವೆಂದು ಹೇಳುತ್ತಾರೆ."

ತಪತಿಯು ಹೇಳಿದಳು:

"ರಾಜನ್! ನನ್ನ ಒಡತಿ ನಾನಲ್ಲ. ನನ್ನ ತಂದೆಯು ಇದ್ದಾನೆ. ನನ್ನಲ್ಲಿ ನಿನ್ನ ಪ್ರೀತಿಯಿದ್ದರೆ ನನ್ನ ತಂದೆಯಲ್ಲಿ ಕೇಳಿಕೋ. ನಿನ್ನ ಪ್ರಾಣವು ಹೇಗೆ ನನ್ನಿಂದ ಬಂಧಿಸಲ್ಪಟ್ಟಿದೆಯೋ ಅದೇರೀತಿ ನಿನ್ನನ್ನು ನೋಡಿದ ಕ್ಷಣದಿಂದ ನನ್ನ ಪ್ರಾಣವನ್ನೂ ನೀನು ಅಪಹರಿಸಿದ್ದೀಯೆ. ನಾನು ನನ್ನ ಈ ದೇಹದ ಒಡತಿಯಲ್ಲ. ಆದುದರಿಂದ ನಿನ್ನ ಸಮೀಪ ಬರಲಾರೆನು. ಕನ್ಯೆಯು ಸ್ವತಂತ್ರಳಲ್ಲ. ಆದರೆ ಯಾವ ಕನ್ಯೆಯು ತಾನೆ ಸರ್ವ ಲೋಕಗಳಲ್ಲಿಯೂ ವಿಶ್ರುತ ಕುಲದಲ್ಲಿ ಜನಿಸಿದ ನೃಪನನ್ನು ತನ್ನ ನಾಥ, ಭಕ್ತವತ್ಸಲ ಭರ್ತಾರನನ್ನಾಗಿ ಅಭಿಲಾಷಿಸುವುದಿಲ್ಲ? ಆದುದರಿಂದ ಈಗ ಸಮಯ ಬಂದಿರುವುದರಿಂದ ನನ್ನ ತಂದೆ ಆದಿತ್ಯನಲ್ಲಿ ಪ್ರಣಿಪಾತ, ತಪಸ್ಸು ಮತ್ತು ನಿಯಮಗಳಿಂದ ಬೇಡಿಕೋ. ಒಂದು ವೇಳೆ ಅವನು ನನ್ನನ್ನು ನಿನಗೆ ಕೊಡಲು ಬಯಸಿದರೆ

ಸತತವಾಗಿಯೂ ನಿನ್ನ ವಶವರ್ತಿನಿಯಾಗಿರುತ್ತೇನೆ. ನಾನು ಈ ಲೋಕಪ್ರದೀಪ ಸವಿತುವಿನ ಮಗಳು, ಸಾವಿತ್ರಿಯ ತಂಗಿ. ನನ್ನ ಹೆಸರು ತಪತೀ."

ಹೀಗೆ ಹೇಳಿದ ತಕ್ಷಣವೇ ಆ ಅನಿಂದಿತೆಯು ಮೇಲೆ ಹೋದಳು ಮತ್ತು ರಾಜನು ಪುನಃ ಅಲ್ಲಿಯೇ ಭೂಮಿಯ ಮೇಲೆ ಬಿದ್ದನು. ಅವನ ಅಮಾತ್ಯ ಮತ್ತು ಅನುಯಾಯಿಗಳು ಆ ಮಹಾವನದಲ್ಲಿ ಕಾಲದಲ್ಲಿ ಶಕ್ರಧ್ವಜವು ಬಿದ್ದಂತೆ ಭೂಮಿಯ ಮೇಲೆ ಮೂರ್ಛಿತನಾಗಿ ಬಿದ್ದಿದ್ದ ಅವನನ್ನು ಕಂಡರು. ಬೆಳಗುತ್ತಿರುವ ಅಗ್ನಿಯಂತೆ ನಿರಶ್ವನಾಗಿ ಕ್ಷಿತಿಯಲ್ಲಿ ಬಿದ್ದಿರುವ ಮಹೇಷ್ವಾಸನನ್ನು ನೋಡಿದ ಅವನನ್ನು ಅವನ ಸಚಿವನು ನೋಡಿದನು. ತ್ವರೆಮಾಡಿ ಅವನ ಬಳಿ ಹೋಗಿ ಸ್ನೇಹಭಾವದಿಂದ ಸಂಭ್ರಮಗೊಂಡು ಪ್ರಜ್ಞೆ, ವಯಸ್ಸು, ಕೀರ್ತಿ ಮತ್ತು ದಮದಲ್ಲಿ ವೃದ್ಧನಾಗಿದ್ದ ಅವನು ಕಾಮಮೋಹಿತ ನೃಪತಿಯನ್ನು ಭೂಮಿಯ ಮೇಲೆ ಬಿದ್ದಿರುವ ಸುತನನ್ನು ತಂದೆಯು ಹೇಗೋ ಹಾಗೆ ಭೂಮಿಯಿಂದ ಮೇಲಕ್ಕೆ ಎತ್ತಿದನು. ಅವನನ್ನು ಮೇಲಕ್ಕೆತ್ತಿದ ಅಮಾತ್ಯನು ಉದ್ವೇಗವು ಹೊರಟುಹೋಗಿ ಎದ್ದುನಿಂತಿರುವ ಕಲ್ಯಾಣಕರನಿಗೆ ಈ ರೀತಿಯ ಮಧುರ ಮಾತುಗಳನ್ನಾಡಿದನು:

"ಮನುಜಶಾರ್ದೂಲ! ಭಯಪಡಬೇಡ! ಎಲ್ಲವೂ ಮಂಗಳಕರವಾಗುತ್ತದೆ."

ಹಲವಾರು ಶತ್ರುಗಳನ್ನು ರಣರಂಗದಲ್ಲಿ ಬೀಳಿಸುವ ನೃಪನು ಹಸಿವು

ಬಾಯಾರಿಕೆಗಳಿಂದ ಬಳಲಿ ಮಹೀತಲದಲ್ಲಿ ಬಿದ್ದಿದ್ದಾನೆ ಎಂದು ಅವನು ಯೋಚಿಸಿದನು. ರಾಜನ ಮುಕುಟವನ್ನು ಮುಟ್ಟದೆಯೇ ಅವನು ಪುಂಡರೀಕಸುಗಂಧಿತ ತಣ್ಣನೆಯ ನೀರನ್ನು ಅವನ ತಲೆಯ ಮೇಲೆ ಸಿಂಚಿಸಿದನು. ಪುನಃ ಚೇತರಿಸಿಕೊಂಡ ಬಲವಾನ್ ನೃಪನು ತನ್ನ ಸಚಿವ ಮಾತ್ರನನ್ನು ಬಿಟ್ಟು ಉಳಿದ ಎಲ್ಲ ಬಲವನ್ನೂ ವಿಸರ್ಜಿಸಿದನು. ರಾಜನ ಆಜ್ಞೆಯಂತೆ ಆ ಮಹಾಬಲವು ಹೊರಟುಹೋದ ನಂತರ ರಾಜನು ಪುನಃ ಗಿರಿಪ್ರಸ್ಥದಲ್ಲಿ ಕುಳಿತುಕೊಂಡನು. ಆಗ ಆ ಗಿರಿವರದಲ್ಲಿ ಅವನು ಶುಚಿರ್ಭೂತನಾಗಿ ಅಂಜಲೀಬದ್ಧನಾಗಿ ಭುಜಗಳನ್ನು ಮೇಲಕ್ಕೆತ್ತಿ ಸೂರ್ಯನನ್ನು ಆರಾಧಿಸುತ್ತಾ ನಿಂತುಕೊಂಡನು.

ಆ ಅಮಿತ್ರಘ್ನ ನೃಪ ಸಂವರಣನು ತನ್ನ ಪುರೋಹಿತ ಋಷಿಸತ್ತಮ ವಸಿಷ್ಠನನ್ನು ಮನಸ್ಸಿನಲ್ಲಿಯೇ ನೆನೆಸಿಕೊಂಡನು. ಹನ್ನೆರಡು ದಿನಗಳ ಪರ್ಯಂತ ಆ ಜನಾಧಿಪನು ಅದೇ ಸ್ಥಳದಲ್ಲಿ ನಿಂತುಕೊಂಡಿದ್ದನು. ಹನ್ನೆರಡನೆಯ ದಿನ ಆ ವಿಪ್ರರ್ಷಿಯು ಅಲ್ಲಿಗೆ ಬಂದನು. ನೃಪತಿಯು ತಪತಿಯಲ್ಲಿ ಮನಸ್ಸನ್ನು ಕಳೆದುಕೊಂಡಿದ್ದಾನೆ ಎಂದು ದಿವ್ಯ ವಿಧಿಯಿಂದ ಆ ಭಾವಿತಾತ್ಮ ಮಹಾನೃಷಿಯು ತಿಳಿದುಕೊಂಡನು. ಆಗ ಅವನಿಗೆ ಒಳ್ಳೆಯದನ್ನೇ ಮಾಡಬೇಕೆಂದು ಬಯಸಿದ ಆ ಧರ್ಮಾತ್ಮನು ನಿಯತಾತ್ಮ ನೃಪತಿಸತ್ತಮನಲ್ಲಿ ಮಾತನಾಡಿದನು. ಆ ಮನುಜೇಂದ್ರನು ನೋಡುತ್ತಿದ್ದಂತೆಯೇ ಭಗವಾನೃಷಿಯು ಭಾಸ್ಕರದ್ಯುತಿ ಭಾಸ್ಕರನನ್ನು ನೋಡಲು ಮೇಲೆ ಹೋದನು. ಆಗ ಸಹಸ್ರಾಂಶುವಲ್ಲಿ ಕೃತಾಂಜಲಿಯಾಗಿ ನಿಂತು ವಿಪ್ರನು “ನಾನು ವಸಿಷ್ಠ!” ಎಂದು ತನ್ನನ್ನು

ತಾನೇ ನಿವೇದಿಸಿದನು. ಆಗ ಮಹಾತೇಜಸ್ವಿ ವಿವಸ್ವತನು ಆ ಮುನಿಸತ್ತಮನಿಗೆ

> “ಮಹರ್ಷೇ ! ನಿನಗೆ ಸ್ವಾಗತವು ! ಏನನ್ನು ಇಚ್ಛಿಸಿ ಬಂದೆ ಹೇಳು”

ಎಂದನು. ವಸಿಷ್ಠನು ಹೇಳಿದನು:

> “ವಿಭಾವಸೋ ! ಸಂವರಣನಿಗಾಗಿ ತಪತೀ ಎಂಬ ಹೆಸರಿನ ನಿನ್ನ ಮಗಳು ಮತ್ತು ಸಾವಿತ್ರಿಯ ತಂಗಿಯನ್ನು ಕೇಳಿಕೊಂಡು ಬಂದಿದ್ದೇನೆ. ಉದಾರ ಮನಸ್ಕನಾದ, ಬೃಹತ್ಕೀರ್ತಿ, ಧರ್ಮ, ಮತ್ತು ಅರ್ಥವನ್ನು ಹೊಂದಿರುವ ರಾಜ ಸಂವರಣನು ನಿನ್ನ ಮಗಳಿಗೆ ಯೋಗ್ಯ ವರನಾಗುತ್ತಾನೆ.”

ಅವಳನ್ನು ಅವನಿಗೇ ಕೊಡಬೇಕೆಂದು ಮೊದಲೇ ನಿಶ್ಚಯಿಸಿದ್ದ ಸವಿತು ದಿವಾಕರನು ಆ ವಿಪ್ರನನ್ನು ನಮಸ್ಕರಿಸಿ ಉತ್ತರಿಸಿದನು:

> “ನೀನು ಋಷಿಗಳಲ್ಲಿ ಶ್ರೇಷ್ಠನು ಹೇಗೋ ಹಾಗೆ ರಾಜರಲ್ಲಿ ಸಂವರಣನು ಶ್ರೇಷ್ಠ ಮತ್ತು ಕನ್ಯೆಯರಲ್ಲಿ ತಪತಿಯು ಶ್ರೇಷ್ಠೆ. ಹೀಗಿರುವಾಗ ಅವಳನ್ನು ಬೇರೆ ಎಲ್ಲಿ ಯಾಕೆ ಕೊಡಬೇಕು?”

ಆಗ ಸ್ವಯಂ ತಪನನು ಸರ್ವಾನವದ್ಯಾಂಗಿ ತಪತಿಯನ್ನು ಸಂವರಣನಿಗಾಗಿ ಮಹಾತ್ಮ ವಸಿಷ್ಠನಿಗೆ ಕೊಟ್ಟನು. ಮಹರ್ಷಿಯು ಕನ್ಯೆ ತಪತಿಯನ್ನು ಸ್ವೀಕರಿಸಿದನು. ಅವನಿಂದ ಬೀಳ್ಕೊಂಡ ವಸಿಷ್ಠನು ಪುನಃ

ವಿಖ್ಯಾತಕೀರ್ತಿ ಕುರುಗಳ ವೃಷಭನಿದ್ದಲ್ಲಿಗೆ ಬಂದನು. ಮನ್ಮಥಾವಿಷ್ಟನಾಗಿ ಅಂತರಾತ್ಮವನ್ನೇ ಅವಳೊಡನೆ ಕಳುಹಿಸಿಕೊಟ್ಟಿದ್ದ ರಾಜನು ವಸಿಷ್ಠನೊಡನೆ ಬಂದಿದ್ದ ಚಾರುಹಾಸಿನಿ ದೇವಕನ್ಯೆ ತಪತಿಯನ್ನು ನೋಡಿ ಅತ್ಯಧಿಕ ಹರ್ಷಗೊಂಡನು. ರಾಜನು ದ್ವಾದಶ ರಾತ್ರಿಗಳ ಕೃಚ್ಛ್ರವನ್ನು ಪೂರೈಸುತ್ತಿದ್ದಂತೆಯೇ ವಿಶುದ್ಧಾತ್ಮ ಭಗವಾನ್ನೃಷಿ ವಸಿಷ್ಠನು ಬಂದನು. ವರದ, ದೇವ, ಗೋಪತಿ, ಈಶ್ವರನನ್ನು ತಪಸ್ಸಿನಿಂದ ಆರಾಧಿಸಿ ವಸಿಷ್ಠನ ತೇಜಸ್ಸಿನಿಂದ ಸಂವರಣನು ಭಾರ್ಯೆಯನ್ನು ಪಡೆದನು. ದೇವಗಂಧರ್ವಸೇವಿತ ಆ ಶ್ರೇಷ್ಠ ಗಿರಿಯಲ್ಲಿಯೇ ಆ ನರರ್ಷಭನು ವಿಧಿವತ್ತಾಗಿ ತಪತಿಯ ಪಾಣಿಗ್ರಹಣ ಮಾಡಿದನು. ವಸಿಷ್ಠನ ಅನುಜ್ಞೆಯನ್ನು ಪಡೆದು ಆ ರಾಜರ್ಷಿಯು ತನ್ನ ಭಾರ್ಯೆಯೊಂದಿಗೆ ಅದೇ ಧರಾಧರದಲ್ಲಿ ಕಾಮಿಸಿದನು. ಮಹೀಪಾಲನು ಅದೇ ಸಚಿವನನ್ನು ಪುರ, ರಾಷ್ಟ್ರ, ವಾಹನ ಮತ್ತು ಸೇನೆಗಳ ಮೇಲ್ವಿಚಾರಣೆಗೆ ನೇಮಿಸಿದನು. ನೃಪತಿಯಿಂದ ಬೀಳ್ಕೊಂಡ ವಸಿಷ್ಠನು ಹಿಂದಿರುಗಿದನು.

ರಾಜನಾದರೂ ಆ ಗಿರಿಯಲ್ಲಿ ಅಮರನಂತೆ ವಿಹರಿಸಿದನು. ರಾಜನು ತನ್ನ ಪತ್ನಿಯೊಡನೆ ಹನ್ನೆರಡು ವರ್ಷಗಳು ಆ ಗಿರಿಯ ಕಾನನಗಳಲ್ಲಿ ಮತ್ತು ಜಲದಲ್ಲಿ ರಮಿಸಿದನು. ಆ ರಾಜನ ಪುರ ಮತ್ತು ರಾಷ್ಟ್ರದ ಎಲ್ಲೆಡೆಯಲ್ಲಿಯೂ ಹನ್ನೆರಡು ವರ್ಷಗಳ ಪರ್ಯಂತ ಸಹಸ್ರಾಕ್ಷನು ಮಳೆಯನ್ನು ಸುರಿಸಲಿಲ್ಲ. ಬರಗಾಲ ಪೀಡಿತರಾಗಿ ಸುಖವನ್ನೇ ಕಾಣದ ನರರು ಶವಗಳಾಗಿ ಪ್ರೇತರಾಜನ ಪುರವನ್ನು ಮುತ್ತುವಂತೆ ಮುತ್ತಿಗೆ

ಹಾಕಿದರು. ಆ ದೃಶ್ಯವನ್ನು ನೋಡಿದ ಧರ್ಮಾತ್ಮ ಭಗವಾನೃಷಿ ವಸಿಷ್ಠನು ರಾಜಶರ್ದೂಲನಿದ್ದಲ್ಲಿಗೆ ಹೋಗಿ ಹನ್ನೆರಡು ವರ್ಷಗಳು ರಾಜ್ಯದಿಂದ ಹೊರಗೆ ವಾಸಿಸುತ್ತಿದ್ದ ಆ ಪಾರ್ಥಿವ ಶಾರ್ದೂಲನನ್ನು ತಪತಿಯ ಸಹಿತ ಪುರಕ್ಕೆ ಮರಳಿ ಕರೆತಂದನು. ಆ ನೃಪತಿಶಾರ್ದೂಲನು ಪುನಃ ನಗರವನ್ನು ಪ್ರವೇಶಿಸಿದ ನಂತರ ಸುರಾರಿಹನು ಅಲ್ಲಿ ಮೊದಲಿನಂತೆಯೇ ಮಳೆಯನ್ನು ಸುರಿಸಿದನು. ಭಾವಿತಾತ್ಮ ಪಾರ್ಥಿವ ಮುಖ್ಯನ ಮೂಲಕ ಅವರ ರಾಷ್ಟ್ರ ಮತ್ತು ಪುರವು ಪರಮ ಸಂತಸವನ್ನು ಹೊಂದಿತು. ಪತ್ನಿ ತಪತಿಯ ಸಹಿತ ನರಾಧಿಪನು ಇನ್ನೂ ಹನ್ನೆರಡು ವರ್ಷಗಳು ಮರುತ್ಪತಿ ಶಕ್ರನ ಹಾಗೆ ಯಜ್ಞಗಳನ್ನು ನೆರವೇರಿಸಿದನು.

# ವಸಿಷ್ಠೋಪಾಽಖ್ಯಾನ

[ವಸಿಷ್ಠ-ವಿಶ್ವಾಮಿತ್ರರ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಚೈತ್ರರಥ ಪರ್ವ (ಅಧ್ಯಾಯ ೧೬೪-೧೬೮) ದಲ್ಲಿ ಬರುತ್ತದೆ. ಈ ಕಥೆಯನ್ನು ಗಂಧರ್ವ ಅಂಗಾರಪರ್ಣನು ಅರ್ಜುನನಿಗೆ ಪಾಂಡವರು ದ್ರೌಪದಿಯ ಸ್ವಯಂವರಕ್ಕೆ ಪ್ರಯಾಣಿಸುತ್ತಿರುವಾಗ ಮಾರ್ಗದಲ್ಲಿ ಹೇಳಿದನು.]

ಕನ್ಯಕುಬ್ಜದಲ್ಲಿ ಮಹಾ ಪಾರ್ಥಿವನಿರುತ್ತಿದ್ದನು. ಸತ್ಯಧರ್ಮಪರಾಯಣನಾದ ಅವನು ಲೋಕಗಳಲ್ಲಿ ಗಾಧೀ ಎಂದು ವಿಶ್ರುತನಾಗಿದ್ದನು. ಈ ಧರ್ಮಾತ್ಮನಿಗೆ ಸಮೃದ್ಧಬಲವಾಹನ ರಿಪುಮರ್ದನ ವಿಶ್ವಾಮಿತ್ರ ಎಂಬ ಖ್ಯಾತ ಮಗನೊಬ್ಬನಿದ್ದನು. ಅವನು ಅಮಾತ್ಯರೊಂದಿಗೆ ಬೇಟೆಯಾಡುತ್ತಾ ರಮ್ಯ ಮರುಭೂಮಿ ಮತ್ತು ಹುಲ್ಲುಗಾವಲುಗಳಲ್ಲಿ ಜಿಂಕೆ ವರಾಹಗಳನ್ನು ಕೊಲ್ಲುತ್ತಾ ಗಹನ ವನಕ್ಕೆ ಹೋದನು. ಒಮ್ಮೆ ಜಿಂಕೆಯೊಂದನ್ನು ಅರಸುತ್ತಾ ಬರುತ್ತಿರುವಾಗ ಬಾಯಾರಿಕೆಯಿಂದ ಬಳಲಿದ ಆ ನರಶ್ರೇಷ್ಠನು ವಸಿಷ್ಠನ ಆಶ್ರಮದ ಬಳಿ ಬಂದನು. ಅವನ ಆಗಮನವನ್ನು ಕಂಡ ಶ್ರೇಷ್ಠ ಮಹಾಋಷಿ ವಸಿಷ್ಠನು ನರಶ್ರೇಷ್ಠ ವಿಶ್ವಾಮಿತ್ರನನ್ನು ಆದರದಿಂದ ಸ್ವಾಗತಿಸಿದನು. ಅವನನ್ನು ಪಾದ್ಯಾರ್ಘ್ಯ, ಆಚಮನೀಯಗಳಿಂದ ಸ್ವಾಗತಿಸಿ, ವನಗಳಲ್ಲಿ ದೊರೆಯುವ ಸಂಗ್ರಹಗಳನ್ನು ಅರ್ಪಿಸಿದನು. ಮಹಾತ್ಮ ವಸಿಷ್ಠನಲ್ಲಿ ಕಾಮಧುಗ್ಧೇನುವೊಂದಿತ್ತು. ಅದು ಅವನು ಇಷ್ಟಪಟ್ಟು ಕೊಡಲು ಹೇಳಿದ ಯಾವುದನ್ನೂ ಕೊಡುತ್ತಿತ್ತು. ಗ್ರಾಮ ಮತ್ತು ಅರಣ್ಯಗಳ ಔಷಧಿಗಳು, ಹಾಲು, ಷಡ್ರಸ, ಅಮೃತರಸ, ಉತ್ತಮ ರಸಾಯನ, ಭೋಜನ, ಪಾನೀಯಗಳು, ವಿವಿಧ ಭಕ್ಷ್ಯಗಳು, ಲೇಹ, ಮತ್ತು ಇತರ ಅಮೃತಕಲ್ಪಗಳನ್ನು, ರುಚಿಯಾಗಿ ಅವಳು ನೀಡುತ್ತಿದ್ದಳು. ಮಹೀಪತಿಯು ಬಯಸಿದ ಎಲ್ಲವುಗಳನ್ನು ಸಂಪೂರ್ಣವಾಗಿ ಪಡೆದನು. ಸೇನೆ ಮತ್ತು ಅಮಾತ್ಯರ ಸಹಿತ ನೃಪನು ಅತ್ಯಂತ ತೃಪ್ತಿಹೊಂದಿದನು. ಆರು ಅಳತೆ ಉದ್ದ, ಮೂರು ಅಳತೆ ಅಗಲ, ಮತ್ತು ಐದು ಅಳತೆ



ಸುತ್ತಳತೆಯನ್ನು ಹೊಂದಿದ್ದ, ಸುಂದರ ಕಾಲು ತೊಡೆಗಳ, ಕಪ್ಪೆಯಂಥ ಕಣ್ಣುಗಳ, ಒಳ್ಳೆಯ ನಡಿಗೆಯ, ತುಂಬಿದ ಮೊಲೆಗಳ, ಸುಂದರ ಬಾಲವನ್ನುಳ್ಳ, ಶಂಖದಂತಹ ಕಿವಿಗಳನ್ನು ಹೊಂದಿದ್ದ, ಸುಂದರ ಕೊಂಬಿನ, ಉದ್ದ ಮತ್ತು ದಪ್ಪನಾಗಿರುವ ತಲೆ ಮತ್ತು ಕುತ್ತಿಗೆಯನ್ನು ಹೊಂದಿದ್ದ ಆ ಮನೋರಮೆ ಹಸುವನ್ನು ವಿಸ್ಮಿತನಾಗಿ ನೋಡಿದನು. ವಸಿಷ್ಠನ ಆ ಪಯಸ್ವಿನೀ ನಂದಿನಿಯನ್ನು ಅಭಿನಂದಿಸಿ ಅತೀವ ತೃಪ್ತನಾದ ವಿಶ್ವಾಮಿತ್ರನು ಮುನಿಯನ್ನುದ್ದೇಶಿಸಿ ಹೇಳಿದನು:

> “ಬ್ರಹ್ಮನ್! ಮಹಾಮುನಿ! ಲೆಕ್ಕವಿಲ್ಲದಷ್ಟು ಗೋವುಗಳು ಅಥವಾ ನನ್ನ ರಾಜ್ಯಕ್ಕೆ ಬದಲಾಗಿ ಈ ನಂದಿನಿಯನ್ನು ನನಗಿತ್ತು ನನ್ನ ರಾಜ್ಯವನ್ನು ಆಳು.”

ವಸಿಷ್ಠನು ಹೇಳಿದನು:

> “ದೇವತೆ, ಅತಿಥಿ, ಮತ್ತು ಪಿತೃಗಳಿಗೆ ಊಟಕ್ಕೆ ನೀಡಲು ಮತ್ತು ತುಪ್ಪಕ್ಕಾಗಿ ಈ ಯಶಸ್ವಿನಿ ನಂದಿನಿಯು ನನ್ನಲ್ಲಿದ್ದಾಳೆ. ಅನಘ! ರಾಜ್ಯವನ್ನಿತ್ತರೂ ಇದನ್ನು ನಿನಗೆ ಕೊಡಲಾರೆ.”

ವಿಶ್ವಾಮಿತ್ರನು ಹೇಳಿದನು:

> “ನಾನು ಕ್ಷತ್ರಿಯ ಮತ್ತು ನೀನು ತಪಸ್ಸು, ಅಧ್ಯಾಯ, ಸಾಧನೆಗಳಲ್ಲಿರುವ ವಿಪ್ರ. ಆತ್ಮವನ್ನು ಗೆದ್ದ ಪ್ರಶಾಂತ ಬ್ರಾಹ್ಮಣರಲ್ಲಿ ಇಂಥಹ ಪ್ರತಿಭಟನೆ ಎಲ್ಲಿಂದ ಬರುತ್ತದೆ?

ನನಗೆ ಬೇಕಾದ ಗೋವನ್ನು ಅರ್ಬುದ ಗೋವುಗಳಿಗೂ ನೀನು ಕೊಡದೇ ಇದ್ದರೆ ಸ್ವಧರ್ಮವನ್ನು ನಾನು ಬಿಡುವುದಿಲ್ಲ. ಗೋವನ್ನು ನಾನು ಬಲವಂತವಾಗಿ ನಿನ್ನಿಂದ ಹಿಡಿದೊಯ್ಯುತ್ತೇನೆ."

ವಸಿಷ್ಠನು ಹೇಳಿದನು:

"ರಾಜ! ನಿನ್ನಲ್ಲಿ ಸೇನೆಯಿದೆ ಮತ್ತು ಕ್ಷತ್ರಿಯನ ಬಾಹುವೀರ್ಯವಿದೆ. ತಡಮಾಡದೇ, ಏನನ್ನೂ ವಿಚಾರಮಾಡದೇ ನಿನಗಿಷ್ಟಬಂದಂತೆ ಮಾಡು."

ಈ ಮಾತುಗಳನ್ನು ಕೇಳಿದ ವಿಶ್ವಾಮಿತ್ರನು ಬಲವಂತವಾಗಿ ಹಂಸ ಅಥವ ಚಂದ್ರನಂತಿರುವ ನಂದಿನಿಯನ್ನು ಎಳೆದುಕೊಂಡು ಹೊರಟನು. ಕಾಶ ಮತ್ತು ದಂಡಗಳಿಂದ ಹೊಡೆತ ತಿನ್ನುತ್ತಾ ಎಳೆದುಕೊಂಡು ಕರೆದೊಯ್ಯಲ್ಪಟ್ಟ ವಸಿಷ್ಠನ ಕಲ್ಯಾಣಿ ನಂದಿನಿಯು ಕೂಗತೊಡಗಿದಳು. ಅವಳು ಹಿಂದಿರುಗಿ ಬಂದು ಭಗವಾನ್ ಋಷಿಯ ಎದುರಿಗೆ ನಿಂತುಕೊಂಡಳು ಮತ್ತು ಎಷ್ಟೇ ಜೋರಾಗಿ ಹೊಡೆದರೂ ಆಶ್ರಮದಿಂದ ಹೊರಹೋಗಲಿಲ್ಲ. ವಸಿಷ್ಠನು ಹೇಳಿದನು:

"ಭದ್ರೇ! ನೋವಿನಿಂದ ನರಳುತ್ತಿರುವ ನಿನ್ನ ಕೂಗನ್ನು ಪುನಃ ಪುನಃ ಕೇಳುತ್ತಿದ್ದೇನೆ. ನಾನೋರ್ವ ಕ್ಷಮಾವಂತ ಬ್ರಾಹ್ಮಣನಾದುದರಿಂದ ನಿನ್ನನ್ನು ನನ್ನಿಂದ ಬಲಾತ್ಕಾರವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ."

ಆ ಸೈನಿಕರ ಬಲ ಮತ್ತು ವಿಶ್ವಾಮಿತ್ರರಿಂದ ಭಯೋದ್ವಿಗ್ನಳಾಗ ಆ ನಂದಿನಿಯು ವಸಿಷ್ಠನ ಇನ್ನೂ ಹತ್ತಿರ ಬಂದಳು. ಗೋವು ಹೇಳಿತು:

> “ಭಗವನ್! ವಿಶ್ವಾಮಿತ್ರನ ಬಲದಿಂದ ಘೋರವಾಗಿ ಪಾಷಾಣ ದಂಡಗಳಿಂದ ಹೊಡೆತತಿಂದು ಅನಾಥಳಂತೆ ಕೂಗುತ್ತಿರುವ ನನ್ನನ್ನು ಏಕೆ ಉಪೇಕ್ಷಿಸುತ್ತಿರುವೆ?”

ಈ ರೀತಿ ಗೋವು ಆಕ್ರಮಣಕ್ಕೊಳಗಾದಾಗ ಆ ಮಹಾಮುನಿ ಧೃತವ್ರತನು ಯಾವುದೇ ರೀತಿಯ ಆತಂಕವನ್ನಾಗಲೀ ಕೋಪವನ್ನಾಗಲೀ ಹೊಂದದೇ ವಿಚಲಿತನಾಗಲಿಲ್ಲ. ವಸಿಷ್ಠನು ಹೇಳಿದನು:

> “ಕ್ಷತ್ರಿಯರಿಗೆ ತೇಜಸ್ಸು ಬಲ ಮತ್ತು ಬ್ರಾಹ್ಮಣರಿಗೆ ಕ್ಷಮೆಯೇ ಬಲ. ಕ್ಷಮೆಯೇ ನನ್ನನ್ನು ಆವರಿಸಿದೆ. ಆದುದರಿಂದ ನಿನಗಿಷ್ಟವಾದರೆ ನೀನು ಹೋಗಬಹುದು.”

ಗೋವು ಹೇಳಿತು:

> “ಭಗವನ್! ನೀನು ಈ ರೀತಿ ಮಾತನಾಡುತ್ತಿದ್ದೀಯಲ್ಲ! ನನ್ನನ್ನು ತ್ಯಜಿಸಿಬಿಟ್ಟಿದ್ದೀಯಾ ಹೇಗೆ? ನೀನು ನನ್ನನ್ನು ತೊರೆದಿಲ್ಲವೆಂದಾದರೆ ಅವರು ನನ್ನನ್ನು ಬಲಾತ್ಕಾರವಾಗಿ ಕೊಂಡೊಯ್ಯಲು ಶಕ್ಯರಾಗುವುದಿಲ್ಲ.”

ವಸಿಷ್ಠನು ಹೇಳಿದನು:

> “ನಾನು ನಿನ್ನನ್ನು ತ್ಯಜಿಸಿಲ್ಲ ಕಲ್ಯಾಣಿ! ಶಕ್ಯವಾದರೆ ಇಲ್ಲಿಯೇ ನಿಲ್ಲು. ಅವರು ನಿನ್ನ ಕರುವನ್ನು ಗಟ್ಟಿಯಾಗಿ ಕಟ್ಟಿಹಾಕಿ ಬಲಾತ್ಕಾರವಾಗಿ ಕೊಂಡೊಯ್ಯುತ್ತಿದ್ದಾರೆ.”

“ನಿಲ್ಲು!” ಎಂಬ ವಶಿಷ್ಠನ ಮಾತನ್ನು ಕೇಳಿದ ಆ ಯಶಸ್ವಿನಿಯು ತನ್ನ ತಲೆ ಮತ್ತು ಕುತ್ತಿಗೆಯನ್ನು ಮೇಲೆತ್ತಲು ಅವಳು ಘೋರರೂಪಿಣಿಯಾಗಿ ಕಂಡಳು. ಕ್ರೋಧದಿಂದ ಅವಳ ಕಣ್ಣುಗಳು ಕೆಂಪಾದವು. ಗುಡುಗಿನಂತೆ “ಅಂಬಾ!” ಎಂದು ಕೂಗುತ್ತಾ ಅವಳು ವಿಶ್ವಾಮಿತ್ರನ ಸೇನೆಯನ್ನು ಎಲ್ಲಕಡೆ ಓಡಿಸಿದಳು. ಕಟ್ಟಿಗೆ ದಂಡಗಳಿಂದ ಪೆಟ್ಟುತಿಂದು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡುತ್ತಿರುವಾಗ ಅವಳ ಕಣ್ಣುಗಳು ಕ್ರೋಧದಿಂದ ಉರಿದೆದ್ದವು ಮತ್ತು ಕ್ರೋಧವು ಹೆಚ್ಚಾಗುತ್ತಲೇ ಹೋಯಿತು. ಮಧ್ಯಾಹ್ನದ ಆದಿತ್ಯನಂತೆ ಅವಳ ದೇಹವು ಕ್ರೋಧದಿಂದ ಉರಿದೆದ್ದಿತು ಮತ್ತು ಅವಳ ಬಾಯಿ-ಬಾಲಗಳಿಂದ ಮಹಾ ಕೆಂಡಗಳ ಸುರಿಮಳೆಯೇ ಹೊರಹೊಮ್ಮಿತು. ಕ್ರೋಧಮೂರ್ಛಿತಳಾದ ಅವಳು ಹಿಂಬಾಗದಿಂದ ಪಹ್ಲವರನ್ನು ಸೃಷ್ಟಿಸಿದಳು, ಶಬರ-ಶಕರನ್ನು ಸಗಣಿಯಿಂದ, ಮತ್ತು ಮೂತ್ರದಿಂದ ಯವನರನ್ನು ಸೃಷ್ಟಿಸಿದಳು. ಹಾಲಿನ ನೊರೆಯಿಂದ ಪುಂಡ್ರ, ಕಿರಾತ, ದ್ರಮಿಡ, ಸಿಂಹಲ, ಬರ್ಬರ, ದರದ, ಮತ್ತು ಮ್ಲೇಚ್ಛರನ್ನು ಸೃಷ್ಟಿಸಿದಳು. ಈ ರೀತಿ ಅವಳು ಸೃಷ್ಟಿಸಿದ ಮ್ಲೇಚ್ಛರ ನಾನಾ ಗುಂಪಿನ ಮಹಾ ಸೇನೆಯು ನಾನಾ ರೀತಿಯ ಕವಚಗಳನ್ನು ಮತ್ತು ನಾನಾ ರೀತಿಯ ಆಯುಧಗಳನ್ನು ಧರಿಸಿದವರಾಗಿ, ವಿಶ್ವಾಮಿತ್ರನು ನೋಡುತ್ತಿದ್ದಂತೆಯೇ ಅವನ ಸೇನೆಯನ್ನು ಚದುರಿಸಿ

ಓಡಿಸಿತು. ಪ್ರತಿಯೊಬ್ಬ ಯೋಧನೂ ಇನ್ನೂ ಐದು ಯೋಧರಿಂದ ಸುತ್ತುವರೆಯಲ್ಪಟ್ಟಿದ್ದನು. ವಿಶ್ವಾಮಿತ್ರನು ನೋಡುತ್ತಿದ್ದಂತೆಯೇ ಅವನ ಬಲವು ಎಲ್ಲಾ ಕಡೆಯಿಂದಲೂ ಮಹಾ ಅಸ್ತ್ರವರ್ಷಗಳಿಗೆ ಸಿಲುಕಿ ಎಲ್ಲಕಡೆಯಿಂದಲೂ ನಾಶಹೊಂದಿತು. ಆದರೂ ವಿಶ್ವಾಮಿತ್ರನ ಯಾರೊಬ್ಬ ಸೈನಿಕನೂ ವಸಿಷ್ಠನ ಸಂಕೃದ್ಧ ಸೈನಿಕರಿಂದ ಪ್ರಾಣವನ್ನು ಕಳೆದುಕೊಳ್ಳಲಿಲ್ಲ. ಭಯೋದ್ವಿಗ್ನವಾಗಿ ಕೂಗುತ್ತಿದ್ದರೂ ಯಾವ ತ್ರಾತಾರನನ್ನೂ ಕಾಣದ ವಿಶ್ವಾಮಿತ್ರನ ಸೈನ್ಯವು ಮೂರು ಯೋಜನೆಗಳವರೆಗೆ ಓಡಿಹೋಯಿತು. ಬ್ರಹ್ಮತೇಜಸ್ಸಿನಿಂದ ಹುಟ್ಟಿದ ಆ ಮಹದಾಶ್ಚರ್ಯವನ್ನು ಕಂಡ ವಿಶ್ವಾಮಿತ್ರನು ತನ್ನ ಕ್ಷಾತ್ರಭಾವದಿಂದ ನಿರ್ವಿಣ್ಣನಾಗಿ ಈ ಮಾತುಗಳನ್ನಾಡಿದನು:

> “ಕ್ಷತ್ರಿಯ ಬಲವೆಂದೆನಿಸಿಕೊಂಡ ಬಲಕ್ಕೆ ಧಿಕ್ಕಾರ!
> ಬ್ರಹ್ಮತೇಜೋಬಲವೇ ಬಲವು. ಬಲಾಬಲವನ್ನು ನೋಡಿದರೆ
> ತಪಸ್ಸಿನ ಬಲವೇ ಪರಮ ಬಲವೆಂದು ನಿಶ್ಚಿತವಾಗುತ್ತದೆ.”

ಅವನು ತನ್ನ ಶ್ರೀಮಂತ ರಾಜ್ಯ ಮತ್ತು ಬೆಳಗುತ್ತಿರುವ ನೃಪಶ್ರೀಯನ್ನು ತಿರಸ್ಕರಿಸಿ ಎಲ್ಲ ಭೋಗಗಳನ್ನು ಹಿಂದಕ್ಕೆ ತಳ್ಳಿ ತಪಸ್ಸಿನಲ್ಲಿಯೇ ತನ್ನ ಮನಸ್ಸನ್ನು ತೊಡಗಿಸಿದನು. ಅವನು ತಪಸ್ಸಿನಲ್ಲಿ ಸಿದ್ಧಿಯನ್ನು ಪಡೆದು ತನ್ನ ತೇಜಸ್ಸಿನಿಂದ ಲೋಕಗಳನ್ನೆಲ್ಲಾ ತುಂಬಿಸಿ ತನ್ನ ಓಜಸ್ಸಿನ ದೀಪದಿಂದ ಎಲ್ಲವನ್ನು ಬೆಳಗಿಸಿ ಬ್ರಾಹ್ಮಣತ್ವವನ್ನು ಪಡೆದನು. ಇಂದ್ರನ ಸಹಿತ ಕೌಶಿಕನು ಸೋಮವನ್ನು ಸೇವಿಸಿದನು.

ಈ ಲೋಕದಲ್ಲಿ ಕಲ್ಮಾಷಪಾದನೆಂಬ ರಾಜನಿದ್ದನು. ಇಕ್ಷ್ವಾಕು ವಂಶಜನಾದ ಅವನ ತೇಜಸ್ಸಿಗೆ ಸದೃಶರಾದವರು ಭುವಿಯಲ್ಲಿಯೇ ಯಾರೂ ಇರಲಿಲ್ಲ. ಒಮ್ಮೆ ಆ ರಾಜನು ಬೇಟೆಯಾಡಲು ಪುರದಿಂದ ಹೊರಗೆ ಹೋಗಿದ್ದನು. ಆ ರಿಪುಮರ್ದನನು ಜಿಂಕೆ ಮತ್ತು ಹಂದಿಗಳನ್ನು ಹೊಡೆಯುತ್ತಾ ತಿರುಗುತ್ತಿದ್ದನು. ತೃಷಾರ್ತನೂ ಕ್ಷುಧಾರ್ತನೂ ಆದ ಆ ರಾಜನು ಒಂದು ಚಿಕ್ಕ ದಾರಿಯಲ್ಲಿ ಮಹಾತ್ಮ ಮುನಿಸತ್ತಮ ವಾಸಿಷ್ಠನನ್ನು ಎದುರಾದನು. ಆ ಮಹಾಭಾಗ, ವಸಿಷ್ಠಕುಲನಂದನನ ಹೆಸರು ಶಕ್ತಿ ಎಂದಿತ್ತು. ಅವನು ಮಹಾತ್ಮ ವಸಿಷ್ಠನ ನೂರು ಪುತ್ರರಲ್ಲಿ ಜ್ಯೇಷ್ಠ ಪುತ್ರನಾಗಿದ್ದನು.

“ಇದು ನಮ್ಮ ದಾರಿ. ಇದನ್ನು ಬಿಟ್ಟು ಹೋಗು !”

ಎಂದು ಪಾರ್ಥಿವನು ಹೇಳಿದನು. ಆಗ ಋಷಿಯು ಶ್ಲಾಘನೀಯ ಸಾಂತ್ವನದ ಮಾತುಗಳನ್ನಾಡಿದನು. ತನ್ನ ಧರ್ಮಪಥದಲ್ಲಿ ನಿಂತಿದ್ದ ಋಷಿಯು ದಾರಿಯನ್ನು ಬಿಡಲಿಲ್ಲ. ಮುನಿಯ ಮೇಲಿನ ಕೋಪದಿಂದ ಮತ್ತು ತನ್ನ ಮಾನದಿಂದ ರಾಜನೂ ಕೂಡ ದಾರಿಯನ್ನು ಬಿಡಲಿಲ್ಲ. ದಾರಿಯನ್ನು ಕೊಡದೇ ಇದ್ದ ಆ ಋಷಿಗೆ ನೃಪಸತ್ತಮನು ತನ್ನ ಬಾರಿಕೋಲಿನಿಂದ ಮೋಹಿತ ರಾಕ್ಷಸನಂತೆ ಆ ಮುನಿಗೆ ಹೊಡೆದನು. ಬಾರಿಕೋಲಿನ ಹೊಡೆತತಿಂದ ಮುನಿಸತ್ತಮ ವಾಸಿಷ್ಠನು ಕ್ರೋಧ ಮೂರ್ಛಿತನಾಗಿ ಆ ನೃಪಸತ್ತಮನಿಗೆ ಶಪಿಸಿದನು.

“ತಾಪಸಿಯನ್ನು ಓರ್ವ ರಾಕ್ಷಸನಂತೆ ಹೊಡೆಯುತ್ತಿರುವ

ರಾಜನೇ! ಇಂದಿನಿಂದ ನೀನು ನರಭಕ್ಷಕನಾಗುವೆ. ಮನುಷ್ಯರ ಮಾಂಸವನ್ನು ತಿನ್ನುತ್ತಾ ನೀನು ಈ ಭೂಮಿಯನ್ನೆಲ್ಲಾ ತಿರುಗಾಡುವೆ. ರಾಜಾಧಮ! ಹೋಗು!"

ಎಂದು ವೀರ್ಯಶಕ್ತಿವಂತ ಶಕ್ತಿಯು ನುಡಿದನು.

ಯಾವುದೋ ಯಜ್ಞದ ನಿಮಿತ್ತವಾಗಿ ವಿಶ್ವಾಮಿತ್ರ ಮತ್ತು ವಸಿಷ್ಠರ ನಡುವೆ ವೈರತ್ವವಿದ್ದಿತ್ತು. ಅದರ ಕಾರಣದಿಂದ ವಿಶ್ವಾಮಿತ್ರನು ರಾಜನನ್ನು ಹಿಂಬಾಲಿಸಿ ಬರುತ್ತಿದ್ದನು. ಅವರೀರ್ವರೂ ವಿವಾದದಲ್ಲಿರುವಾಗ ಉಗ್ರತಪಸ್ವಿ ಪ್ರತಾಪಿ ಋಷಿ ವಿಶ್ವಾಮಿತ್ರನು ಸಮೀಪ ಬಂದನು. ಹಿಂದಿನಿಂದಲೇ ನೃಪಸತ್ತಮ ಆ ಋಷಿಯು ವಸಿಷ್ಠನ ತೇಜಸ್ಸನ್ನೇ ಹೊಂದಿದ್ದ ಋಷಿ ವಸಿಷ್ಠನ ಪುತ್ರನನ್ನು ಗುರುತಿಸಿದನು. ವಿಶ್ವಾಮಿತ್ರನು ತನ್ನನ್ನು ಅಡಗಿಸಿಕೊಂಡು ತನಗೆ ಒಳ್ಳೆಯದಾಗುವ ಕಾರ್ಯವನ್ನೆಸಗಲು ಯೋಚಿಸಿದನು. ಶಕ್ತಿಯಿಂದ ಶಪಿತ ಆ ನೃಪೋತ್ತಮನು ಶಕ್ತಿಯ ಶರಣುಹೋಗಿ ಅವನನ್ನು ಶಾಂತಗೊಳಿಸಲು ಪ್ರಯತ್ನಿಸಿದನು. ಆ ನೃಪತಿಯ ಉದ್ದೇಶವನ್ನು ತಿಳಿದ ವಿಶ್ವಾಮಿತ್ರನು ರಾಕ್ಷಸನೋರ್ವನಿಗೆ ರಾಜನನ್ನು ಪ್ರವೇಶಿಸಲು ಆಜ್ಞೆಯಿತ್ತನು. ವಿಪ್ರರ್ಷಿಯ ಶಾಪದಿಂದಾಗಿ ಮತ್ತು ವಿಶ್ವಾಮಿತ್ರನ ಆಜ್ಞೆಯಿಂದ ಕಿಂಕರ ಎಂಬ ಹೆಸರಿನ ಆ ರಾಕ್ಷಸನು ನೃಪತಿಯನ್ನು ಪ್ರವೇಶಿಸಿದನು. ರಾಕ್ಷಸನು ಅವನನ್ನು ಹಿಡಿದ ಎಂದು ತಿಳಿದ ಮುನಿ ವಿಶ್ವಾಮಿತ್ರನು ಅಲ್ಲಿಂದ ಹೊರಟುಹೋದನು.

ಆಗ ಆ ವಿದ್ವಾನ್ ನೃಪತಿಯು ತನ್ನೊಳಗಿರುವ ರಾಕ್ಷಸನು ಬಹಳಷ್ಟು ಪೀಡಿಸುತ್ತಿದ್ದರೂ ತನ್ನನ್ನು ತಾನು ರಕ್ಷಿಸಿಕೊಂಡನು. ಹಿಂದಿರುಗಿದ ರಾಜನನ್ನು ಯಾರೋ ಒಬ್ಬ ಹಸಿವೆಯಿಂದಿದ್ದ ದ್ವಿಜನು ನೋಡಿ ಅವನಲ್ಲಿ ಮಾಂಸದ ಭೋಜನವನ್ನು ಯಾಚಿಸಿದನು. ಆಗ ರಾಜರ್ಷಿ ಮಿತ್ರಸಹನು ಅವನನ್ನು ಸಂತವಿಸುತ್ತಾ

> "ಬ್ರಾಹ್ಮಣ! ಒಂದು ಕ್ಷಣ ಇಲ್ಲಿಯೇ ಕಾಯುತ್ತಿರು!"

ಎಂದು ಹೇಳಿದನು.

> "ನಾನು ಮನೆಗೆ ಮರಳಿದನಂತರ ನಿನಗಿಷ್ಟವಾದ
> ಭೋಜನವನ್ನು ಕಳುಹಿಸುತ್ತೇನೆ!"

ಎಂದು ಹೇಳಿದ ರಾಜನು ಆ ದ್ವಿಜಸತ್ತಮನನ್ನು ಅಲ್ಲಿಯೇ ನಿಲ್ಲಿಸಿ ಹಿಂದಿರುಗಿದನು. ಆದರೆ ರಾಜನು ಬ್ರಾಹ್ಮಣನ ಮಾತುಗಳನ್ನು ಮರೆತುಬಿಟ್ಟನು ಮತ್ತು ಆ ನರಾಧಿಪನು ಅಂತಃಪುರವನ್ನು ಪ್ರವೇಶಿಸಿ ನಿದ್ರಿಸಿದನು. ಅರ್ಧರಾತ್ರಿಯಲ್ಲಿ ಎಚ್ಚೆತ್ತ ರಾಜನು ಬ್ರಾಹ್ಮಣನಿಗೆ ಇತ್ತಿದ್ದ ಮಾತನ್ನು ನೆನಪಿಸಿಕೊಂಡು ತ್ವರೆಮಾಡಿ ಅಡುಗೆಯವನನ್ನು ಕರೆಯಿಸಿ ಹೇಳಿದನು:

> "ಬೇಗನೆ ಹೋಗು! ಇಂಥಹ ಪ್ರದೇಶದಲ್ಲಿ ಅನ್ನಾರ್ಥಿಯಾದ
> ಬ್ರಾಹ್ಮಣನೋರ್ವನು ನನ್ನ ದಾರಿಕಾಯುತ್ತಿದ್ದಾನೆ. ಅವನಿಗೆ
> ಮಾಂಸದ ಊಟವನ್ನು ತೆಗೆದುಕೊಂಡು ಹೋಗಿ ಕೊಡು."

ಆ ಅಡುಗೆಯವನು ಎಲ್ಲಿಯೂ ಮಾಂಸವು ದೊರೆಯದಿರಲು ವಿಷಯವನ್ನು ರಾಜನಲ್ಲಿಗೆ ವ್ಯಥಾನ್ವಿತನಾಗಿ ವರದಿಮಾಡಿದನು. ಆದರೆ ರಾಕ್ಷಸನಿಂದ ಆವಿಷ್ಟನಾಗಿದ್ದ ರಾಜನು ಹೆಚ್ಚು ಚಿಂತೆಮಾಡದೇ

"ಹಾಗಾದರೆ ಅವನಿಗೆ ನರಮಾಂಸವನ್ನು ತಿನ್ನಿಸು!"

ಎಂದು ಪುನಃ ಪುನಃ ಹೇಳಿದನು. "ಹಾಗೆಯೇ ಆಗಲಿ!" ಎಂದು ಹೇಳಿ ಅಡುಗೆಯವನು ವಧ್ಯಘಾತಿಗಳಿದ್ದ ಸ್ಥಳಕ್ಕೆ ಹೋಗಿ ಅಲ್ಲಿಂದ ನರಮಾಂಸವನ್ನು ಸ್ವಲ್ಪವೂ ಭಯವಿಲ್ಲದೇ ತೆಗೆದುಕೊಂಡು ಬಂದನು. ಅದಕ್ಕೆ ಅನ್ನವನ್ನು ಸೇರಿಸಿ ವಿಧಿವತ್ತಾಗಿ ಬೇಯಿಸಿ ಹಸಿದಿದ್ದ ತಾಪಸಿ ಬ್ರಾಹ್ಮಣನಿಗೆ ಕೊಟ್ಟನು. ತನ್ನ ಸಿದ್ಧ ಚಕ್ಷುಷುಗಳಿಂದ ಆ ಅನ್ನವನ್ನು ನೋಡಿದ ದ್ವಿಜಸತ್ತಮನು "ಇದು ಅಭೋಜ್ಯವಾದದ್ದು!" ಎಂದು ಕ್ರೋಧದಿಂದ ಕಣ್ಣುಗಳನ್ನು ತಿರುಗಿಸುತ್ತಾ ಹೇಳಿದನು.

"ನನಗೆ ಯಾವ ಅನ್ನವನ್ನು ಭೋಜನಕ್ಕೆಂದು ನೀಡಿದ್ದಾನೋ ಆ ಮೂಢ ನರಾಧಿಪನು ಇನ್ನುಮುಂದೆ ಅಂಥಹದೇ ಅನ್ನದ ಲೋಲುಪನಾಗುತ್ತಾನೆ. ಹಿಂದೆ ಶಕ್ತಿಯು ಹೇಳಿದ ಹಾಗೆಯೇ ಮನುಷ್ಯ ಮಾಂಸದಲ್ಲಿ ಆಸಕ್ತಿಯನ್ನಿಟ್ಟುಕೊಂಡು ಈ ಭೂಮಿಯನ್ನು ತಿರುಗುತ್ತಿರುತ್ತಾನೆ."

ಎರಡು ಬಾರಿ ಹೇಳಲ್ಪಟ್ಟ ರಾಜನ ಆ ಶಾಪವು ಹೆಚ್ಚು ಪರಿಣಾಮಕಾರಿಯಾಗಲು ಅವನನ್ನು ಆವಿಷ್ಕರಿಸಿದ ರಾಕ್ಷಸನು ಹೆಚ್ಚಿನ ಶಕ್ತಿಯನ್ನು ಪಡೆದು ತನ್ನ ಬುದ್ಧಿಯನ್ನೇ ಕಳೆದುಕೊಂಡನು. ತಕ್ಷಣವೇ

ರಾಕ್ಷಸನಿಂದ ತನ್ನ ಇಂದ್ರಿಯಗಳನ್ನೆಲ್ಲ ಕಳೆದುಕೊಂಡ ಆ ನೃಪತಿಶ್ರೇಷ್ಠನು ಶಕ್ತಿಯನ್ನು ಕಂಡು ಹೇಳಿದನು:

> "ನೀನು ನನಗೆ ಇಂಥಹ ಅಸದೃಶ ಶಾಪವನ್ನು ಕೊಟ್ಟಿದ್ದುದರಿಂದ ನರಮಾಂಸವನ್ನು ತಿನ್ನುವ ಈ ಪ್ರವೃತ್ತಿಯನ್ನು ನಿನ್ನಿಂದ ಪ್ರಾರಂಭಿಸುತ್ತೇನೆ."

ಹೀಗೆ ಹೇಳಿ ತಕ್ಷಣವೇ ಶಕ್ತಿಯ ಪ್ರಾಣವನ್ನು ತೆಗೆದು ವ್ಯಾಘ್ರವು ಪಶುವನ್ನು ಹೇಗೋ ಹಾಗೆ ತಿಂದುಬಿಟ್ಟನು.

ಮಹಾತ್ಮ ವಾಸಿಷ್ಠ ಶಕ್ತಿಯಿಂದ ಕಲ್ಮಾಶಪಾದನು ಶಪಿತನಾದ ನಂತರ ಶಾಪವಶ ಆ ಪರಂತಪ ರಾಜನು ಕ್ರೋಧದಿಂದ ತನ್ನ ಕಣ್ಣುಗಳನ್ನು ತಿರುಗಿಸುತ್ತಾ ಪತ್ನಿಯೊಡಗೂಡಿ ಪುರವನ್ನು ತೊರೆದು ಹೊರಟನು. ಅವಳೊಂದಿಗೆ ಅವನು ನಿರ್ಜನ ಅರಣ್ಯವನ್ನು ಸೇರಿ ನಾನಾಮೃಗಗಣ ಸಂಕೀರ್ಣಗಳನ್ನೂ ನಾನಾ ಸತ್ವಸಮಾಕುಲವನ್ನು ಅರಸುತ್ತಾ ತಿರುಗುತ್ತಿದ್ದನು. ನಾನಾ ತರಹದ ಹೂ ಬಳ್ಳಿಗಳಿಂದ ಮುಚ್ಚಲ್ಪಟ್ಟ, ನಾನಾ ತರಹದ ಮರಗಳಿಂದ ಕೂಡಿದ, ಘೋರ ಕೂಗುಗಳು ಕೇಳಿಬರುತ್ತಿರುವ ಅರಣ್ಯದಲ್ಲಿ ಶಾಪಗ್ರಸ್ತನು ಪರಿಭ್ರಮಿಸುತ್ತಿದ್ದನು. ಒಮ್ಮೆ ಹಸಿವೆಯಿಂದ ಬಳಲಿ ತನಗೆ ಆಹಾರಕ್ಕಾಗಿ ಬೇಟೆಯಾಡುತ್ತಿರುವಾಗ ಒಂದು ದಟ್ಟ ವನದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣಿಯರು ಸಂಭೋಗದಲ್ಲಿ ನಿರತರಾಗಿರುದ್ದುದನ್ನು ಕಂಡನು. ಇನ್ನೂ ತೃಪ್ತಿಹೊಂದದೇ ಇದ್ದ ಅವರು ಅವನನ್ನು ನೋಡಿ

ಭಯಭೀತರಾಗಿ ಓಡಲು ತೊಡಗಿದರು. ಆಗ ಆ ನೃಪತಿಯು ಬ್ರಾಹ್ಮಣನನ್ನು ಬಲವಂತವಾಗಿ ಹಿಡಿದನು. ತನ್ನ ಪತಿಯು ಸಿಕ್ಕಿಕೊಂಡಿದ್ದನ್ನು ನೋಡಿದ ಬ್ರಾಹ್ಮಣಿಯು ಹೇಳಿದಳು:

> "ಸುವ್ರತ ರಾಜನ್! ನಾನು ಈಗ ಹೇಳುವ ಮಾತುಗಳನ್ನು ಕೇಳು. ಆದಿತ್ಯವಂಶಜನಾದ ನೀನು ಲೋಕಪರಿಶ್ರುತನಾಗಿದ್ದೀಯೆ. ನೀನು ಅಪ್ರಮತ್ತನಾಗಿದ್ದು, ಧರ್ಮನಿರತನಾಗಿದ್ದು ಗುರುಶುಶ್ರೂಷಣೆಯಲ್ಲೇ ನಿರತನಾಗಿದ್ದೀ. ದುರ್ದರ್ಶ ಶಾಪವನ್ನು ಹೊಂದಿದ್ದೀಯೆ. ಪಾಪಕರ್ಮವನ್ನು ಮಾಡಬೇಡ. ನನ್ನ ಋತುಕಾಲವು ಬಂದೊದಗಿದ್ದುದರಿಂದ ಇಂದು ನನ್ನ ಪತಿಯನ್ನು ಸೇರುತ್ತಿದ್ದೆ. ನಾವು ಇನ್ನೂ ಅಕೃತಾರ್ಥರಾಗಿದ್ದೇವೆ. ನನಗೆ ಮಗುವಿನ ಮಹಾ ಅವಶ್ಯಕತೆಯಿದೆ. ಕರುಣೆತೋರು. ನನ್ನ ಪತಿಯನ್ನು ಬಿಟ್ಟುಬಿಡು."

ಈ ರೀತಿ ಅವಳು ರೋದಿಸುತ್ತಿರಲು ಅವಳು ನೋಡುತ್ತಿದ್ದಂತೆಯೇ ವ್ಯಾಘ್ರವು ತನಗಿಷ್ಟ ಪ್ರಾಣಿಯನ್ನು ತಿನ್ನುವಂತೆ ಅವಳ ಗಂಡನನ್ನು ಭಕ್ಷಿಸಿದನು. ಕ್ರೋಧಾಭಿಭೂತಳಾದ ಅವಳಿಂದ ನೆಲದ ಮೇಲೆ ಬಿದ್ದ ಕಣ್ಣೀರು ಬೆಂಕಿಯಾಗಿ ಉರಿದು ಆ ಪ್ರದೇಶವನ್ನು ಸುಡತೊಡಗಿತು. ತನ್ನ ಪತಿಯನ್ನು ಕಳೆದುಕೊಂಡು ದುಃಖಿತಳಾದ ಶೋಕಸಂತಪ್ತ ಬ್ರಾಹ್ಮಣಿಯು ರೋಷದಿಂದ ರಾಜರ್ಷಿ ಕಲ್ಮಾಶಪಾದನಿಗೆ

ಶಾಪವನ್ನಿತ್ತಳು:

> "ಇಂದು ಅಕೃತಾರ್ಥ ಮಹಾಯಶಸ್ವಿ ನನ್ನ ಪತಿ ಪ್ರಭುವನ್ನು ಕ್ಷುದ್ರನಾಗಿ ನನ್ನ ಮುಂದೆಯೇ ಭಕ್ಷಿಸಿದುದಕ್ಕಾಗಿ ದುರ್ಬುದ್ಧಿಯೇ! ನೀನೂ ಕೂಡ ನನ್ನ ಶಾಪದಿಂದಾಗಿ ನಿನ್ನ ಪತ್ನಿಯನ್ನು ಕೂಡಿದಾಗ ನಿನ್ನ ಜೀವವನ್ನು ತೊರೆಯುತ್ತೀಯೆ! ಯಾರ ನೂರು ಪುತ್ರರನ್ನೂ ನೀನು ನಾಶಮಾಡಿದೆಯೋ ಆ ವಸಿಷ್ಠನು ನಿನ್ನ ಭಾರ್ಯೆಯನ್ನು ಸೇರಿ ತನಯನನ್ನು ಹುಟ್ಟಿಸುತ್ತಾನೆ. ಆ ಪುತ್ರನೇ ನಿನ್ನ ವಂಶಕರನಾಗುತ್ತಾನೆ."

ರಾಜನನ್ನು ಈ ರೀತಿ ಶಪಿಸಿ ಆ ಶುಭೆ ಆಂಗಿರಸಿಯು ಹತ್ತಿರದಲ್ಲಿಯೇ ಉರಿಯುತ್ತಿದ್ದ ಹುತಾಶನನನ್ನು ಪ್ರವೇಶಿಸಿದಳು.

ಶಕ್ತಿಯು ಹತನಾದುದನ್ನು ನೋಡಿದ ವಿಶ್ವಾಮಿತ್ರನು ಪುನಃ ಆ ರಾಕ್ಷಸನನ್ನು ವಸಿಷ್ಠನ ಇತರ ಪುತ್ರರೆಡೆಗೆ ಕಳುಹಿಸಿದನು. ಸಂಕೃದ್ಧ ಸಿಂಹವು ಕ್ಷುದ್ರ ಮೃಗಗಳನ್ನು ಹೇಗೋ ಹಾಗೆ ಅವನು ಮಹಾತ್ಮ ವಸಿಷ್ಠನ ಇತರ ಮಕ್ಕಳನ್ನೂ ಭಕ್ಷಿಸಿದನು. ತನ್ನ ಮಕ್ಕಳ ಸಾವನ್ನು ವಿಶ್ವಾಮಿತ್ರನೇ ಆಯೋಜಿಸಿದ್ದ ಎಂದು ಕೇಳಿದ ವಸಿಷ್ಠನು ತನ್ನ ಆ ಶೋಕವನ್ನು ಮಹಾದ್ರಿಯು ಮೇದಿನಿಯನ್ನು ಹೇಗೋ ಹಾಗೆ ಹಿಡಿದಿಟ್ಟುಕೊಂಡನು. ಮತಿವಂತರಲ್ಲೇ ಶ್ರೇಷ್ಠ ಆ ಮುನಿಸತ್ತಮನು ಕೌಶಿಕರ ಕುಲವನ್ನೇ ನಾಶಮಾಡುವುದರ ಹೊರತಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ನಿಶ್ಚಯಿಸಿದನು.

ಆ ಭಗವಾನ್ ಋಷಿಯು ಮೇರು ಪರ್ವತದ ಶಿಖರದಿಂದ ಹಾರಿದನು. ಆದರೆ ಅವನ ಶಿರವು ಶಿಲದ ಮೇಲೆ ಬಿದ್ದಾಗ ಶಿಲೆಯು ಹತ್ತಿಯ ರಾಶಿಯಾಗಿತ್ತು. ಬೀಳುವುದರಿಂದ ತಾನು ಸಾಯದೇ ಇದ್ದಾಗ ಆ ಭಗವಾನನು ಮಹಾವನದಲ್ಲಿ ಒಂದು ಅಗ್ನಿಯನ್ನು ನಿರ್ಮಿಸಿ ಅದರಲ್ಲಿ ಪ್ರವೇಶಿಸಿದನು. ಬಹಳ ಎತ್ತರದ ವರೆಗೆ ಉರಿಯುತ್ತಿದ್ದರೂ ಹುತಾಶನನು ಅವನನ್ನು ಸುಡಲಿಲ್ಲ. ಉರಿಯುತ್ತಿರುವ ಜ್ವಾಲೆಗಳು ಶೀತಾಗ್ನಿಗಳಾದವು. ಶೋಕಾವಿಷ್ಟ ಮಹಾಮುನಿಯು ಸಮುದ್ರವನ್ನು ಸೇರಿ, ಕಂಠಕ್ಕೆ ಒಂದು ಭಾರ ಶಿಲೆಯನ್ನು ಕಟ್ಟಿ, ಅದರ ನೀರಿನಲ್ಲಿ ಬಿದ್ದನು. ಸಮುದ್ರದ ಅಲೆಗಳು ಆ ಮಹಾಮುನಿಯನ್ನು ತೀರಕ್ಕೆ ತಂದು ಬಿಟ್ಟವು. ಖಿನ್ನನಾದ ಅವನು ಪುನಃ ಅಶ್ರಮಕ್ಕೆ ತೆರಳಿದನು. ಮಕ್ಕಳಿಲ್ಲದ ಆಶ್ರಮಪದವನ್ನು ನೋಡಿದ ಮುನಿಯು ಅತೀವ ದುಃಖಾರ್ತನಾಗಿ ಪುನಃ ಆಶ್ರಮದಿಂದ ಹೊರ ಹೊರಟನು. ಮಳೆಗಾಲದ ಹೊಸನೀರಿನಿಂದ ಹರಿಯುತ್ತಿರುವ ನದಿಯೊಂದನ್ನು ಕಂಡನು. ಅದರಲ್ಲಿ ದಡದಲ್ಲಿ ಹುಟ್ಟಿದ ಬಹುವಿಧ ವೃಕ್ಷಗಳು ತೇಲುತ್ತಿದ್ದವು. ಆಗ ಆ ದುಃಖಸಮನ್ವಿತನು ಮತ್ತೊಮ್ಮೆ ಈ ನೀರಿನಲ್ಲಿ ಬಿದ್ದು ಮುಳುಗಿಹೋಗುತ್ತೇನೆ ಎಂದು ಯೋಚಿಸಿದನು. ಸುದುಃಖಿತನಾದ ಮಹಾಮುನಿಯು ಹಗ್ಗಗಳಿಂದ ತನ್ನನ್ನು ತಾನೇ ಬಿಗಿಯಾಗಿ ಕಟ್ಟಿ ಮಹಾನದಿಯ ನೀರಿನಲ್ಲಿ ಧುಮುಕಿದನು. ಆದರೆ ನದಿಯು ಅವನ ಪಾಶಗಳನ್ನು ಕತ್ತರಿಸಿ, ಅವನನ್ನು ವಿಪಾಶನನ್ನಾಗಿ ಮಾಡಿ ಸಮಸ್ಥ ಋಷಿಯನ್ನು ತನ್ನ ತೀರಕ್ಕೆ ತಂದು ಬಿಟ್ಟಿತು.

ಪಾಶಗಳಿಂದ ವಿಮುಕ್ತನಾದ ಮಹಾನ್ನೃಷಿಯು ನದಿಯಿಂದ ಮೇಲಕ್ಕೆದ್ದನು. ಮಹಾನ್ನೃಷಿಯು ಆ ನದಿಗೆ ವಿಪಾಶ ಎಂಬ ಹೆಸರನ್ನಿತ್ತನು. ತನ್ನ ಬುದ್ಧಿಯನ್ನು ಶೋಕದಲ್ಲಿಯೇ ನಿರತವಾಗಿರಿಸಿ ಒಂದೇ ಸ್ಥಳದಲ್ಲಿ ನಿಲ್ಲದೇ ಪರ್ವತ, ಸರಿತ ಮತ್ತು ಸಾರಸಗಳ ಕಡೆ ಹೋದನು. ಕ್ರೂರ ಮೊಸಳೆಗಳಿಂದ ತುಂಬಿದ ಹಿಮಾಲಯದಿಂದ ಹರಿದು ಬರುತ್ತಿರುವ ನದಿಯೊಂದನ್ನು ನೋಡಿದ ಋಷಿಯು ಪುನಃ ಅದರಲ್ಲಿ ಧುಮುಕಿದನು. ಆದರೆ ಆ ಸರಿದ್ವರೆಯು ಅವನು ಅಗ್ನಿಸಮ ವಿಪ್ರನೆಂದು ಭಾವಿಸಿ ನೂರಾರು ದಿಕ್ಕುಗಳಲ್ಲಿ ಹರಿಯ ತೊಡಗಿತು. ಆದುದರಿಂದಲೇ ಅದು ಶತಾದ್ರು ಎಂದು ವಿಶ್ರುತವಾಗಿದೆ. ತಾನು ದಡದ ಮೇಲೆಯೇ ಇದ್ದುದನ್ನು ಕಂಡ ಅವನು ನನಗೆ ಸಾಯಲು ಶಕ್ಯವಿಲ್ಲ ಎಂದು ಪುನಃ ತನ್ನ ಆಶ್ರಮಕ್ಕೆ ಬಂದನು.

ಆಶ್ರಮಾಭಿಮುಖನಾಗಿ ಬರುತ್ತಿರುವಾಗ ಅವನ ಸೊಸೆ ಅದೃಶ್ಯಂತಿಯು ಹಿಂಬಾಲಿಸುತ್ತಿದ್ದಳು. ಆಗ ಹತ್ತಿರದಲ್ಲಿಯೇ ಷಡಂಗಗಳಿಂದ ಅಲಂಕೃತ ಪರಿಪೂರ್ಣಾರ್ಥಗಳಿಂದ ಕೂಡಿದ ವೇದಾಧ್ಯಯನದ ಸ್ವರವನ್ನು ಕೇಳಿದನು.

> “ನನ್ನನ್ನು ಈ ರೀತಿ ಅನುಸರಿಸುತ್ತಿರುವವರು ಯಾರು?”

ಎಂದು ಅವನು ಕೇಳಿದನು. ಅವಳು

> “ನಾನು ಅದೃಶ್ಯತೀ ಎಂಬ ಹೆಸರಿನ ನಿನ್ನ ಸೊಸೆ.
> ಮಹಾಭಾಗ! ಶಕ್ತಿಯ ಪತ್ನಿ, ತಪೋನಿರತೆ ತಪಸ್ವಿನೀ!”

ಎಂದಳು. ವಸಿಷ್ಠನು ಹೇಳಿದನು:

> "ಪುತ್ರಿ! ಹಿಂದೆ ಶಕ್ತಿಯಿಂದ ನನಗೆ ಕೇಳಿಬರುತ್ತಿದ್ದಂತೆ ಈಗಲೂ ಹತ್ತಿರದಿಂದ ಕೇಳಿಬರುತ್ತಿರುವ ಈ ವೇದಾಧ್ಯಯನದ ಸ್ವರವು ಯಾರಿಂದ ಕೇಳಿಬರುತ್ತಿದೆ?"

ಅದೃಶ್ಯಂತಿಯು ಹೇಳಿದಳು:

> "ಕಳೆದ ಹನ್ನೆರಡು ವರ್ಷಗಳಿಂದ ನಿನ್ನ ಸುತ ಶಕ್ತಿಯ ಗರ್ಭವು ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿದೆ. ಮುನಿ! ಇದು ವೇದಾಭ್ಯಾಸ ಮಾಡುತ್ತಿರುವ ಅವನ ಸ್ವರ."

ಇದನ್ನು ಕೇಳಿದ ಶ್ರೇಷ್ಠಭಾಗ ಋಷಿ ವಸಿಷ್ಠನು ಹೃಷ್ಟನಾಗಿ "ಸಂತಾನವಿದೆ!" ಎಂದು ಹೇಳಿ ಮೃತ್ಯುವಿನ ದಾರಿಯಿಂದ ಹಿಂದುರಿಗಿದನು.

ತನ್ನ ಸೊಸೆಯೊಂದಿಗೆ ಹಿಂದಿರುಗಿ ಬರುತ್ತಿರುವಾಗ ನಿರ್ಜನ ವನದಲ್ಲಿ ಕುಳಿತಿದ್ದ ಕಲ್ಮಾಷಪಾದನನ್ನು ಕಂಡನು. ಅವನನ್ನು ನೋಡಿದ ಕೂಡಲೇ ಉಗ್ರ ರಾಕ್ಷಸನಿಂದ ಆವಿಷ್ಟಗೊಂಡಿದ್ದ ಆ ರಾಜನು ಕೃದ್ಧನಾಗಿ ಮೇಲೆದ್ದು ಅವನನ್ನೇ ಕಬಳಿಸಲು ಮುಂದಾದನು. ಅದೃಶ್ಯಂತಿಯು ಕ್ರೂರಕರ್ಮಕ್ಕೆ ಮುಂದಾಗುತ್ತಿದ್ದ ಅವನನ್ನು ನೋಡಿ ಭಯಸಂವಿಗ್ನಳಾಗಿ ವಸಿಷ್ಠನಲ್ಲಿ ಹೇಳಿದಳು:

> "ಇದೋ! ಉಗ್ರ ದಂಡವನ್ನು ಹಿಡಿದ ಮೃತ್ಯುವಿನಂತೆ

> ಕಾಷ್ಟವನ್ನು ಹಿಡಿದು ಭೀಷಣ ರಾಕ್ಷಸನು ಬರುತ್ತಿದ್ದಾನೆ. ನಿನ್ನನ್ನು ಬಿಟ್ಟು ಭೂಮಿಯಲ್ಲಿ ಯಾರಿಗೂ ಅವನನ್ನು ತಡೆಯಲು ಸಾಧ್ಯವಿಲ್ಲ. ಇಂಥಹ ದಾರುಣದೃಷ್ಯದ ಪಾಪದಿಂದ ನನ್ನನ್ನು ರಕ್ಷಿಸು. ನಿಜವಾಗಿಯೂ ಅವನು ನಮ್ಮನ್ನು ತಿನ್ನಲು ಬರುತ್ತಿದ್ದಾನೆ.”

ವಸಿಷ್ಠನು ಹೇಳಿದನು:

> “ಪುತ್ರಿ! ಭಯಪಡಬೇಡ! ರಾಕ್ಷಸನಿಂದ ನಿನಗೆ ಯಾವುದೇ ರೀತಿಯ ಭಯವೂ ಇಲ್ಲ. ನೀನು ನೋಡುತ್ತಿರುವ ಭಯವನ್ನುಂಟುಮಾಡುವ ಇವನು ರಾಕ್ಷಸನಲ್ಲ. ಅವನು ಭುವಿಯಲ್ಲಿಯೇ ಪ್ರಥಿತ ವೀರ್ಯವಾನ್ ರಾಜ ಕಲ್ಮಾಷಪಾದ. ಅವನು ಈ ವನ ಪ್ರದೇಶದಲ್ಲಿ ಭೀಷಣನಾಗಿ ವಾಸಿಸುತ್ತಿದ್ದಾನೆ.”

ತನ್ನ ಮೇಲೆ ಬೀಳುತ್ತಿರುವ ಅವನನ್ನು ನೋಡಿದ ಭಗವಾನೃಷಿ ತೇಜಸ್ವಿ ವಸಿಷ್ಠನು ಹುಂಕಾರ ಮಾತ್ರದಿಂದಲೇ ಅವನನ್ನು ತಡೆಹಿಡಿದನು. ಮಂತ್ರಗಳಿಂದ ಪುನೀತಗೊಂಡಿದ್ದ ನೀರನ್ನು ಅವನ ಮೇಲೆ ಚಿಮುಕಿಸಿ ಆ ರಾಜಸತ್ತಮನನ್ನು ಘೋರ ರಾಕ್ಷಸನಿಂದ ಬಿಡುಗಡೆಮಾಡಿದನು. ಹನ್ನೆರಡು ವರ್ಷಗಳ ನಂತರ ಅವನು ಪರ್ವಕಾಲದಲ್ಲಿ ದಿವಾಕರನು ಗ್ರಹಣದಿಂದ ಹೇಗೋ ಹಾಗೆ ವಸಿಷ್ಠನ ತೇಜಸ್ಸಿನಿಂದ ಬಿಡುಗಡೆ ಹೊಂದಿದನು.

ರಾಕ್ಷಸನಿಂದ ವಿಮುಕ್ತ ಆ ನೃಪತಿಯು ತನ್ನ ತೇಜಸ್ಸಿನಿಂದ ಆ ಮಹಾ ವನವನ್ನು ಭಾಸ್ಕರನು ತನ್ನ ಸಂಧ್ಯಾಕಿರಣಗಳಿಂದ ಹೇಗೋ ಹಾಗೆ ಕೆಂಪಾಗಿಸಿದನು. ಜ್ಞಾನವನ್ನು ಪುನಃ ಗಳಿಸಿದ ನೃಪತಿಯು ಅಂಜಲೀ ಬದ್ಧನಾಗಿ ಅಭಿವಂದಿಸಿ ಋಷಿಸತ್ತಮ ವಸಿಷ್ಠನಲ್ಲಿ ಹೇಳಿದನು:

> "ದ್ವಿಜಸತ್ತಮ! ನಾನು ಸೌದಾಸ. ನಿನ್ನ ಯಾಜಿ. ಈಗ ನಿಮಗಿಷ್ಟವಾದದನ್ನು ಹೇಳಿ. ನಾನು ಏನು ಮಾಡಬೇಕು ಎನ್ನುವುದನ್ನು ಹೇಳು."

ವಸಿಷ್ಠನು ಹೇಳಿದನು:

> "ಕಾಲವು ನಿಶ್ಚಯಿಸಿದ ಹಾಗೆ ನಡೆದು ಹೋಯಿತು. ಹೋಗು. ರಾಜ್ಯವನ್ನು ಆಳು. ಮನುಷ್ಯೇಂದ್ರ! ಎಂದೂ ಬ್ರಾಹ್ಮಣರನ್ನು ಅವಮಾನಗೊಳಿಸಬೇಡ."

ರಾಜನು ಹೇಳಿದನು:

> "ಬ್ರಾಹ್ಮಣ! ಬ್ರಾಹ್ಮಣರ್ಷಭರನ್ನು ಎಂದೂ ನಾನು ಅವಮಾನಿಸುವುದಿಲ್ಲ. ನಿನ್ನ ನಿದೇಶದಂತೆ ನಾನು ದ್ವಿಜರನ್ನು ಎಂದೂ ಪೂಜಿಸುತ್ತೇನೆ. ನಾನು ಇಕ್ಷ್ವಾಕು ಕುಲದ ಋಣವನ್ನು ತೀರಿಸಬಲ್ಲಂಥಹ ಒಂದು ವರವನ್ನು ನಿನ್ನಿಂದ ಪಡೆಯಲು ಬಯಸುತ್ತೇನೆ. ಇಕ್ಷ್ವಾಕುಕುಲದ ವೃದ್ಧಿಗೋಸ್ಕರ ಶೀಲರೂಪಗುಣೋಪೇತಳಾದ ನನ್ನ ಮಹಿಷಿಯಲ್ಲಿ ನೀನು

ಮಕ್ಕಳನ್ನು ಪಡೆಯಬೇಕು."

ಆಗ ಪರಮೇಷ್ವಾಸ ಸತ್ಯಸಂಧ ದ್ವಿಜೋತ್ತಮ ವಸಿಷ್ಠನು

"ನಾನು ನಿನಗೆ ಕೊಡುತ್ತೇನೆ!"

ಎಂದು ರಾಜನಿಗೆ ಹೇಳಿದನು. ನಂತರ ಆ ಮನುಜೇಶ್ವರನು ವಸಿಷ್ಠನ ಸಹಿತ ಲೋಕಗಳಲ್ಲಿಯೇ ಶ್ರೇಷ್ಠ ನಗರಿಯೆಂದು ಖ್ಯಾತ ಅಯೋಧ್ಯೆಗೆ ಹಿಂದಿರುಗಿದನು. ದಿವೌಕಸರು ತಮ್ಮ ಈಶ್ವರನನ್ನು ಸ್ವಾಗತಿಸುವಂತೆ ಪ್ರಜೆಗಳೆಲ್ಲರೂ ಸಂತೋಷದಿಂದ ವಿಪತ್ತಿನಿಂದ ಮುಕ್ತ ಮಹಾತ್ಮನನ್ನು ಸ್ವಾಗತಿಸಿದರು. ತಕ್ಷಣವೇ ಆ ಮನುಷ್ಯೇಂದ್ರನು ಪುಣ್ಯಕರ್ಮಿಗಳ ನಗರಿಯನ್ನು ಮಹಾತ್ಮ ವಸಿಷ್ಠನ ಸಹಿತ ಪ್ರವೇಶಿಸಿದನು. ಅಯೋಧ್ಯಾವಾಸಿ ಜನರು ಪುಷ್ಯದ ಸಹಿತವಿರುವ ದಿವಾಕಸನನ್ನು ನೋಡುವಂತೆ ನೋಡಿ ಸಂತಸಗೊಂಡರು. ಲಕ್ಷ್ಮೀವಂತರಲ್ಲಿಯೇ ಶ್ರೇಷ್ಠ ಶ್ರೀಮಂತನು ಶರತ್ಕಾಲದ ಶೀತಾಂಶುವು ದಿಗಂತದಲ್ಲಿ ಉದಯವಾಗುತ್ತಿರುವಂತೆ ಅಯೋಧ್ಯೆಯಲ್ಲಿ ಕಾಣಿಸಿಕೊಂಡನು. ತೊಳೆದು ತಯಾರುಮಾಡಿದ್ದ ರಸ್ತೆಗಳು ಮತ್ತು ಪತಾಕೆಗಳಿಂದ ಭೂಷಿತ ಮೇಲ್ಮಹಡಿಗಳು ಮತ್ತು ಆ ಅನುತ್ತಮ ಪುರವನ್ನು ನೋಡಿ ರಾಜನ ಮನಸ್ಸೂ ಆಹ್ಲಾದಗೊಂಡಿತು. ತುಷ್ಟ ಪುಷ್ಟ ಜನರಿಂದ ತುಂಬಿದ್ದ ಆ ಪುರವು ಶಕ್ರನೊಂದಿಗೆ ಹೊಳೆಯುತ್ತಿರುವ ಅಮರಾವತಿಯಂತೆ ತೋರಿತು. ರಾಜೇಂದ್ರ ರಾಜನು ಆ ಪುರಿಯನ್ನು ಪ್ರವೇಶಿಸಿದ ನಂತರ ಅವನ ಆಜ್ಞೆಯಂತೆ ರಾಣಿ ದೇವಿಯು ವಸಿಷ್ಠನ ಬಳಿಸಾರಿದಳು.

ಋತುಕಾಲ ಬಂದಾಗ ಶ್ರೇಷ್ಠಭಾಗಿ ಋಷಿ ಮಹರ್ಷಿ ಮಸಿಷ್ಠನು ದೇವಿಯೊಡನೆ ದಿವ್ಯ ವಿಧಿಯಲ್ಲಿ ಕೂಡಿದನು. ಅವಳಲ್ಲಿ ಮುನಿಸತ್ತಮನ ಗರ್ಭವು ತಾಳಿದ ನಂತರ ರಾಜನಿಂದ ಬೀಳ್ಕೊಂಡು ಅವನು ಪುನಃ ಆಶ್ರಮಕ್ಕೆ ತೆರಳಿದನು. ಅವಳು ಆ ಗರ್ಭವನ್ನು ದೀರ್ಘಕಾಲದವರೆಗೆ ಹೊತ್ತಳು. ನಂತರ ಅವಳು ಗರ್ಭವನ್ನು ಒಂದು ಕಲ್ಲಿನಿಂದ ಹೊಡೆದು ಸೀಳಿದಳು. ಅದು ಹನ್ನೆರಡನೆಯ ವರ್ಷವಾಗಿತ್ತು. ಆಗ ಪೋತನದಲ್ಲಿ ವಾಸಿಸುತ್ತಿದ್ದ ಅಶ್ಮಕ ಎಂಬ ರಾಜರ್ಷಿಯು ಹುಟ್ಟಿದನು.

ಆಶ್ರಮದಲ್ಲಿಯೇ ಉಳಿದಿದ್ದ ಅದೃಶ್ಯಂತಿಯು ಶಕ್ತಿಯ ಕುಲಕರ, ಎರಡನೆಯ ಶಕ್ತಿಯೋ ಎನ್ನುವಂತಿರುವ ಪುತ್ರನಿಗೆ ಜನ್ಮವಿತ್ತಳು. ತನ್ನ ಮೊಮ್ಮಗನ ಜಾತಕರ್ಮಾದಿ ಕ್ರಿಯೆಗಳನ್ನು ಸ್ವಯಂ ಭಗವಾನ್ ಮುನಿಪುಂಗವನೇ ನೆರವೇರಿಸಿದನು. ಗರ್ಭದಲ್ಲಿರುವಾಗಲೇ ಸಾಯಲು ತಯಾರಿರುವ ವಸಿಷ್ಠನನ್ನು ತಡೆಹಿಡಿದುದಕ್ಕಾಗಿ ಅವನು ಪರಾಶರನೆಂದು ಲೋಕದಲ್ಲಿ ಹೇಳಿಸಿಕೊಂಡನು. ಹುಟ್ಟಿದಾಗಿನಿಂದ ಧರ್ಮಾತ್ಮನಾದ ಅವನು ವಸಿಷ್ಠನೇ ತನ್ನ ತಂದೆಯೆಂದು ತಿಳಿದು ಅವನೊಡನೆ ತಂದೆಯೊಡನೆ ಹೇಗೋ ಹಾಗೆಯೇ ವರ್ತಿಸುತ್ತಿದ್ದನು. ಒಮ್ಮೆ ಅವನು ತಾಯಿಯ ಸಮಕ್ಷಮದಲ್ಲಿ ವಿಪ್ರರ್ಷಿ ವಸಿಷ್ಠನನ್ನು “ತಂದೆ” ಎಂದು ಕರೆದಾಗ ಅದೃಶ್ಯವಂತಿಯು ಕಣ್ಣುಗಳನ್ನು ಕಣ್ಣೀರಿನಿಂದ ತುಂಬಿಸಿಕೊಂಡು ಅವನಿಗೆ ಕೇಳುವಂತೆ ಹೇಳಿದಳು:

“ಅವನನ್ನು ಅಪ್ಪಾ ಅಪ್ಪಾ ಎಂದು ಕರೆಯಬೇಡ.

> ಮಹಾಮುನಿಯು ನಿನ್ನ ತಂದೆಯಲ್ಲ. ನಿನ್ನ ತಂದೆಯನ್ನು ವನದಲ್ಲಿ ರಾಕ್ಷಸರು ಭಕ್ಷಿಸಿದರು. ತಂದೆಯೆಂದು ನೀನು ತಿಳಿದಿರುವವನು ನಿನ್ನ ತಂದೆಯಲ್ಲ! ಈ ಮಹಾತ್ಮನು ನಿನ್ನ ತಂದೆಯ ತಂದೆ."

ಇದನ್ನು ಕೇಳಿದ ಸತ್ಯವಾಗ್ಮಿ ಮಹಾಮನಸ್ವಿ ಮುನಿಸತ್ತಮನು ದುಃಖಾರ್ತನಾಗಿ ಸರ್ವಲೋಕವಿನಾಶದ ಕುರಿತು ಯೋಚಿಸತೊಡಗಿದನು. ಈಗ ಮಹಾತ್ಮ ಮಹಾತಪಸ್ವಿ ವಸಿಷ್ಠನು ಔರ್ವೋಪಾಽಖ್ಯಾನವನ್ನು ಹೇಳಿ ಕಾರಣಗಳನ್ನಿತ್ತು ಆ ನಿಶ್ಚಿತಾತ್ಮನನ್ನು ತಡೆದು ಹೇಳಿದನು:

> "ಪರಮ ಧರ್ಮವನ್ನು ಅರಿತಿರುವ ನೀನೂ ಕೂಡ ಲೋಕವನ್ನು ನಾಶಪಡಿಸುವುದು ಸರಿಯಲ್ಲ. ನಿನಗೆ ಮಂಗಳವಾಗಲಿ."

ಮಹಾತ್ಮ ವಸಿಷ್ಠನಿಂದ ಇದನ್ನು ಕೇಳಿದ ಆ ವಿಪ್ರರ್ಷಿಯು ಸರ್ವಲೋಕವನ್ನೂ ಪರಾಭವಗೊಳಿಸುವ ತನ್ನ ಕೋಪವನ್ನು ತಡೆಹಿಡಿದಿಟ್ಟುಕೊಂಡನು. ಆ ಮಹಾತೇಜಸ್ವಿ, ಸರ್ವವೇದವಿದರಲ್ಲಿ ಶ್ರೇಷ್ಠ ಶಾಕ್ತೇಯ ಪರಾಶರ ಋಷಿಯು ರಾಕ್ಷಸಸತ್ರವನ್ನು ನಡೆಸಿದನು. ಶಕ್ತಿಯ ವಧೆಯ ನೆನಪಿನಲ್ಲಿ ಮಹಾಮುನಿಯು ಆ ಯಜ್ಞದಲ್ಲಿ ವೃದ್ಧ, ಬಾಲಕ ರಾಕ್ಷಸರನ್ನು ಸುಟ್ಟುಹಾಕಿದನು. ಅವನ ಎರಡನೆಯ ಪ್ರತಿಜ್ಞೆಯನ್ನು ಭಂಗಗೊಳಿಸಬಾರದೆಂದು ನಿಶ್ಚಯಿಸಿ ವಸಿಷ್ಠನೂ ಕೂಡ

ಆ ರಾಕ್ಷಸರ ವಧೆಯನ್ನು ನಿಲ್ಲಿಸಲಿಲ್ಲ. ಆ ಸತ್ರದಲ್ಲಿ ಮೂರು ಪಾವಕಗಳ ಜೊತೆ ಕುಳಿತಿದ್ದ ಆ ಮಹಾಮುನಿಯು ನಾಲ್ಕನೆಯ ಪಾವಕನೋ ಎನ್ನುವಂತೆ ಬೆಳಗುತ್ತಿದ್ದನು. ಆ ಶುಭ್ರ ಯಜ್ಞದಲ್ಲಿ ಶಾಸ್ತ್ರೋಕ್ತವಾಗಿ ಹಾಕಿದ ಹವಿಸ್ಸುಗಳಿಂದ ಬೆಂಕಿಯು ಮಳೆಗಾಲದ ಅಂತ್ಯದಲ್ಲಿ ಆಕಾಶದಲ್ಲಿ ಸೂರ್ಯನು ಹೇಗೋ ಹಾಗೆ ಪ್ರಜ್ವಲಿಸುತ್ತಿತ್ತು. ವಸಿಷ್ಠರೇ ಮೊದಲಾದ ಎಲ್ಲ ಮುನಿಗಳೂ ಅವನು ತೇಜಸ್ಸಿನಿಂದ ದಿವಿಯಲ್ಲಿ ದೇದೀಪ್ಯಮಾನನಾದ ಎರಡನೆಯ ಭಾಸ್ಕರನೆಂದು ಅಭಿಪ್ರಾಯಪಟ್ಟರು. ಅನ್ಯರಿಂದ ಪರಮ ದುರ್ಲಭ ಆ ಸತ್ರದ ಬಳಿಗೆ ಉದಾರ ಮನಸ್ಕ ಅತ್ರಿಯು ಬಂದು ಅದನ್ನು ನಿಲ್ಲಿಸಲು ಪ್ರಯತ್ನಿಸಿದನು. ಅದೇ ರೀತಿ ರಾಕ್ಷಸರು ಜೀವಂತವಿರಬೇಕೆಂದು ಬಯಸಿದ ಪುಲಸ್ತ್ಯ, ಪುಲಹ ಮತ್ತು ಕ್ರತು ಆ ಮಹಾಕ್ರತುವಿಗೆ ಬಂದರು. ಆ ರಾಕ್ಷಸರ ವಧೆಯನ್ನು ಕುರಿತು ಅರಿಂದಮ ಪರಾಶರನಲ್ಲಿ ಪುಲಸ್ತ್ಯನು ಈ ಮಾತುಗಳನ್ನಾಡಿದನು:

> “ಪುತ್ರಕ! ನಿನ್ನನ್ನು ಯಾವುದೂ ತಡೆಹಿಡಿಯುವುದಿಲ್ಲವೇ? ಅಜಾನತ ಅದೋಷಣ ಸರ್ವ ರಾಕ್ಷಸರ ವಧೆಗೈಯುವುದರಲ್ಲಿ ನಿನಗೆ ಯಾವರೀತಿಯ ಆನಂದವು ದೊರೆಯುತ್ತದೆ? ಪರಾಶರ! ನನ್ನ ಕುಲದ ಸರ್ವರನ್ನೂ ಕೊಲ್ಲುವುದರಿಂದ ನೀನು ಅತಿ ದೊಡ್ಡ ಅಧರ್ಮವನ್ನು ಎಸಗುತ್ತಿರುವೆ. ರಾಜ ಕಲ್ಮಾಷಪಾದನು ಸ್ವರ್ಗವನ್ನು ಸೇರುತ್ತಾನೆ. ಮಹಾಮುನಿ ವಸಿಷ್ಠನ ಪುತ್ರರು ಶಕ್ತಿ ಮತ್ತು ಇತರ ಸರ್ವರೂ

ಸಂತೋಷದಿಂದ ಸುರರ ಸಹಿತ ವಿನೋದದಿಂದಿದ್ದಾರೆ. ಇದೆಲ್ಲವೂ ಮತ್ತು ಕಾಡಿಸುವ ರಾಕ್ಷಸರ ಸಮುಚ್ಛೇದವೂ ವಸಿಷ್ಠನಿಗೆ ತಿಳಿದಿದ್ದುದೇ ಆಗಿದೆ. ನೀನು ಈ ಕ್ರತುವಿನ ನಿಮಿತ್ತನಾಗಿದ್ದೀಯೆ. ಈ ಸತ್ರವನ್ನು ಮುಗಿಸು. ನಿನಗೆ ಮಂಗಳವಾಗಲಿ. ನಿನ್ನಿಂದಲೇ ಇದು ಸಮಾಪ್ತಿಯಾಗಲಿ."

ಪುಲಸ್ತ್ಯ ಮತ್ತು ವಸಿಷ್ಠರಿಂದ ಇದನ್ನು ಕೇಳಿದ ಧೀಮಂತ ಶಾಕ್ತಿ ಪರಾಶರನು ಆ ಸತ್ರವನ್ನು ಅಲ್ಲಿಯೇ ನಿಲ್ಲಿಸಿದನು. ಸರ್ವ ರಾಕ್ಷಸಸತ್ರಕ್ಕಾಗಿ ಸಂಭೃತಗೊಂಡ ಪಾವಕನನ್ನು ಮುನಿಯು ಹಿಮವತ್ ಪರ್ವತದ ಉತ್ತರ ಭಾಗದಲ್ಲಿರುವ ಮಹಾವನದಲ್ಲಿ ವಿಸರ್ಜಿಸಿದನು. ರಾಕ್ಷಸರನ್ನು, ವೃಕ್ಷಗಳನ್ನು ಮತ್ತು ಶಿಲೆಬಂಡೆಗಳನ್ನು ಭಕ್ಷಿಸುತ್ತಿರುವ ಆ ವಹ್ನಿಯು ಈಗಲೂ ಕೂಡ ಪರ್ವ ಪರ್ವಗಳಲ್ಲಿ ಕಾಣಿಸಿಕೊಳ್ಳುತ್ತದೆ.

# ಔರ್ವೋಪಾಽಖ್ಯಾನ

[ಔರ್ವನ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಚೈತ್ರರಥ ಪರ್ವ (ಅಧ್ಯಾಯ ೧೬೯-೧೭೧) ದಲ್ಲಿ ಬರುತ್ತದೆ. ಈ ಕಥೆಯನ್ನು ವಸಿಷ್ಠನು ರಾಕ್ಷಸರ ಮೇಲೆ ಕುಪಿತಗೊಂಡ ಮೊಮ್ಮಗ ಪರಾಶರನಿಗೆ ಹೇಳಿದನು.]

ಭೂಮಿಯಲ್ಲಿ ಹಿಂದೆ ಕೃತವೀರ್ಯ ಎಂದು ಖ್ಯಾತಗೊಂಡ

ಪಾರ್ಥಿವರ್ಷಭ ನೃಪತಿಯು ಇದ್ದನು. ಅವನು ಲೋಕದಲ್ಲಿ ವೇದವಿದರಾದ ಭೃಗುಗಳನ್ನು ಯಾಜಕರನಾಗಿರಿಸಿದ್ದನು. ಸೋಮಯಾಗದ ಅಂತ್ಯದಲ್ಲಿ ವಿಶಾಂಪತಿಯು ಆ ಅಗ್ರಭುಜರಿಗೆ ವಿಪುಲ ಧನ ಧಾನ್ಯಗಳನ್ನಿತ್ತು ತೃಪ್ತಿಪಡಿಸಿದನು. ಈ ನೃಪತಿಶಾರ್ದೂಲನು ಸ್ವರ್ಗವಾಸಿಯಾದ ನಂತರ ಅವನ ಕುಲದವರಿಗೆ ದ್ರವ್ಯದ ಅವಶ್ಯಕತೆಯುಂಟಾಯಿತು. ಭೃಗುಗಳಲ್ಲಿರುವ ಸಂಪತ್ತನ್ನು ತಿಳಿದ ಆ ಎಲ್ಲ ರಾಜರುಗಳೂ ಭಾರ್ಗವಸತ್ತಮರಲ್ಲಿ ಸಂಪತ್ತನ್ನು ಕೇಳಿಕೊಂಡರು. ಕ್ಷತ್ರಿಯರ ಭಯದಿಂದ ಭೃಗುಗಳಲ್ಲಿ ಕೆಲವರು ಸಂಪತ್ತನ್ನು ಭೂಮಿಯಲ್ಲಿ ಹುಗಿದಿಟ್ಟರು. ಕೆಲವರು ಬ್ರಾಹ್ಮಣರಿಗೆ ದಾನವನ್ನಿತ್ತರು. ಭೃಗುಗಳಲ್ಲಿಯೂ ಕೆಲವರು, ಅದರ ಲಾಭವನ್ನು ಯೋಚಿಸಿ, ಕ್ಷತ್ರಿಯರಿಗೆ ಅವರು ಇಷ್ಟಪಟ್ಟಷ್ಟು ವಿತ್ತವನ್ನು ನೀಡಿದರು. ಒಮ್ಮೆ ಕ್ಷತ್ರಿಯರು ಮಹೀತಲವನ್ನು ಅಗೆಯುತ್ತಿದ್ದಾಗ ಎಲ್ಲಿಯೋ ಒಂದು ಕಡೆ ಭೃಗುವಿನ ಮನೆಯಲ್ಲಿ ವಿತ್ತವು ದೊರೆಯಿತು. ಕ್ಷತ್ರಿಯರ್ಷಭರೆಲ್ಲರೂ ಸೇರಿ ಆ ವಿತ್ತವನ್ನು ನೋಡಿದರು. ಅನಂತರ ಕೋಪ ಮತ್ತು ಅಪಮಾನದಿಂದ ಭೃಗುಗಳನ್ನೆಲ್ಲರನ್ನೂ, ಅವರು ಶರಣು ಬಂದರೂ, ತೀಕ್ಷ್ಣ ಶರಗಳಿಂದ ಹೊಡೆದು ಕೊಂದರು. ಅವರು ಭೂಮಿಯನ್ನೆಲ್ಲಾ ತಿರುಗಾಡಿ ಗರ್ಭದಲ್ಲಿರುವ ಮಕ್ಕಳನ್ನೂ ಬಿಡದೇ ಎಲ್ಲ ಭೃಗುಗಳನ್ನೂ ಕೊಂದರು. ಈ ರೀತಿ ಭೃಗುಗಳ ಕೊಲೆಯಾಗುತ್ತಿರಲು ಭೃಗು ಪತ್ನಿಯರು ಭಯದಿಂದ ಹಿಮವತ್ ಗಿರಿಯನ್ನು ಸೇರಿದರು.

ಅವರಲ್ಲಿಯೇ ಓರ್ವ ವಾಮೋರುವು ತನ್ನ ಪತಿಯ ಕುಲವೃದ್ಧಿಗೋಸ್ಕರ ಕಂಡುಹಿಡಿದುಬಿಡುತ್ತಾರೋ ಎನ್ನುವ ಭಯದಿಂದ ತನ್ನ ಗರ್ಭವನ್ನು ತೊಡೆಯಲ್ಲಿ ಇರಿಸಿಕೊಂಡಿದ್ದಳು. ಸ್ವತೇಜಸ್ಸಿನಿಂದ ದೀಪ್ಯಮಾನಳಾಗಿದ್ದ ಆ ಬ್ರಾಹ್ಮಣಿಯನ್ನು ಕಂಡರು. ಆಗ ಆ ಗರ್ಭವು ಬ್ರಾಹ್ಮಣಿಯ ತೊಡೆಯನ್ನು ಸೀಳಿ ಮಧ್ಯಾಹ್ನದ ಭಾಸ್ಕರನಂತೆ ಕ್ಷತ್ರಿಯರ ದೃಷ್ಟಿಯನ್ನು ಕುರುಡುಮಾಡುತ್ತಾ ಹೊರಬಂದಿತು. ಕಣ್ಣು ಕುರುಡಾದ ಅವರು ಗಿರಿದುರ್ಗಗಳಲ್ಲಿ ಅಲೆಯತೊಡಗಿದರು. ತಮ್ಮ ಉದ್ದೇಶಗಳು ಪೂರೈಸದೇ ಇದ್ದುದರಿಂದ ಭಯಾರ್ತ ಕ್ಷತ್ರಿಯರ್ಷಭರು ತಮ್ಮ ದೃಷ್ಟಿಯನ್ನು ಪಡೆಯಲು ಅನಿಂದಿತೆ ಬ್ರಾಹ್ಮಣಿಯನ್ನು ಶರಣು ಹೊಕ್ಕರು. ಆರಿಹೋದ ಅಗ್ನಿಯಂತೆ ಕಣ್ಣಿನ ಜ್ಯೋತಿಯನ್ನೇ ಕಳೆದುಕೊಂಡು ವಿಚೇತಸ ಕ್ಷತ್ರಿಯರು ಆ ಮಹಾಭಾಗೆಯಲ್ಲಿ ಹೇಳಿದರು:

> “ನಿನ್ನ ಕರುಣೆಯಿಂದ ಕ್ಷತ್ರಿಯರಿಗೆ ದೃಷ್ಟಿಯು ಹಿಂದಿರುಗಿ ಬರಲಿ. ನಾವೆಲ್ಲರೂ ಒಟ್ಟಿಗೇ ಪಾಪಕರ್ಮಗಳನ್ನು ನಿಲ್ಲಿಸಿ ಹೊರಟು ಹೋಗುತ್ತೇವೆ. ಪುತ್ರನ ಸಹಿತ ನೀನು ನಮ್ಮೆಲ್ಲರಿಗೂ ಕರುಣೆ ತೋರಿಸಬೇಕು. ಪುನಃ ದೃಷ್ಟಿಯನ್ನಿತ್ತು ರಾಜರುಗಳನ್ನು ಉಳಿಸಬೇಕು.”

ಬ್ರಾಹ್ಮಣಿಯು ಹೇಳಿದಳು:

> “ನಾನೇನೂ ನಿಮ್ಮ ಕಣ್ಣುಗಳನ್ನು ತೆಗೆದುಕೊಂಡಿಲ್ಲ ಅಥವಾ ನಾನು ರೋಶಾನ್ವಿತಳೂ ಆಗಿಲ್ಲ. ನನ್ನ ತೊಡೆಯಿಂದ ಹುಟ್ಟಿದ

ಈ ಭಾರ್ಗವನು ನಿಮ್ಮ ಮೇಲೆ ಕುಪಿತನಾಗಿದ್ದಾನೆ. ಅವನೇ ನಿಮ್ಮ ಕಣ್ಣುಗಳನ್ನು ತೆಗೆದುಕೊಂಡ. ಏಕೆಂದರೆ ಅವನ ಬಂಧುಗಳ ವಧೆಗೈದ ನಿಮ್ಮನ್ನು ನೆನಪಿಸಿಕೊಂಡು ಆ ಮಹಾತ್ಮನು ನಿಸ್ಸಂಶಯವಾಗಿ ನಿಮ್ಮ ಮೇಲೆ ಕುಪಿತನಾಗಿರಬಹುದು. ಗರ್ಭದಲ್ಲಿರುವ ಭೃಗು ಮಕ್ಕಳನ್ನು ನೀವು ಕೊಲ್ಲುತ್ತಿದ್ದುದರಿಂದ ನಾನು ನನ್ನ ಈ ಗರ್ಭವನ್ನು ಒಂದು ನೂರು ವರ್ಷಗಳ ಪರ್ಯಂತ ನನ್ನ ತೊಡೆಯಲ್ಲಿಯೇ ಇರಿಸಿಕೊಂಡಿದ್ದೆ. ಭವಿಷ್ಯದಲ್ಲಿ ಭೃಗುವಂಶಕ್ಕೆ ಒಳ್ಳೆಯದಾಗಲೆಂದು ಗರ್ಭಧಾರಣೆಯ ಸಮಯದಲ್ಲಿಯೇ ಷಡಂಗಸಮೇತ ಅಖಿಲ ವೇದವೂ ಇವನನ್ನು ಪ್ರವೇಶಿಸಿತ್ತು. ಪಿತೃವಧೆಗೈದವರನ್ನು ಕ್ರೋಧದಿಂದ ಕೊಲ್ಲಲ್ಲು ಬಯಸುತ್ತಿದ್ದಾನೆ ಮತ್ತು ತನ್ನ ದಿವ್ಯ ತೇಜಸ್ಸಿನಿಂದ ನಿಮ್ಮ ದೃಷ್ಟಿಗಳನ್ನು ಕುರುಡುಮಾಡಿದ್ದಾನೆ. ನನ್ನ ಸುತೋತ್ತಮ ಔರ್ವನಲ್ಲಿ ಯಾಚಿಸಿರಿ. ನೀವು ಅವನಿಗೆ ಶರಣು ಬೀಳುವುದರಿಂದ ತುಷ್ಟನಾಗಿ ನಿಮಗೆ ದೃಷ್ಟಿಯನ್ನು ನೀಡುತ್ತಾನೆ.”

ಇದನ್ನು ಕೇಳಿದ ಸರ್ವ ರಾಜರುಗಳೂ ಆ ಊರುಜನನ್ನು ಪ್ರಸೀದ ಎಂದು ಕೇಳಿಕೊಂಡಾಗ ಅವನು ಸಂತುಷ್ಟನಾದನು. ಊರುವನ್ನು ಸೀಳಿ ಹೊರಬಂದ ಆ ವಿಪ್ರರ್ಷಿ ಸತ್ತಮನು ಔರ್ವ ಎಂಬ ಹೆಸರಿನಿಂದ ಲೋಕಗಳಲ್ಲಿ ವಿಖ್ಯಾತನಾದನು. ದೃಷ್ಟಿಯನ್ನು ಹಿಂದಕ್ಕೆ ಪಡೆದು

ನೃಪರು ಹಿಂದಿರುಗಿದರು. ಆದರೆ ಆ ಭಾರ್ಗವ ಮುನಿಯು ಮಾತ್ರ ಸರ್ವ ಲೋಕಪರಾಭವದ ಕುರಿತು ಯೋಚಿಸಿದನು. ಆ ಮಹಾತ್ಮನು ಲೋಕಗಳ ವಿನಾಶಕ್ಕೆ ತೊಡಗಿದನು. ತನ್ನ ಸಂಪೂರ್ಣ ಮನಸ್ಸನ್ನೂ ಅದೊಂದಕ್ಕೇ ತೊಡಗಿಸಿದನು. ಭೃಗುಗಳಿಗೆ ಕೀರ್ತಿಯನ್ನು ತರಲೋಸುಗ ಆ ಭೃಗುಸತ್ತಮನು ಸರ್ವಲೋಕವಿನಾಶಕ್ಕಾಗಿ ಮಹಾ ತಪಸ್ಸಿನಲ್ಲಿ ತೊಡಗಿದನು. ತನ್ನ ಪಿತಾಮಹರಿಗೆ ಮಹತ್ತರ ಆನಂದವನ್ನು ತರಲು ಉಗ್ರ ತಪಸ್ಸಿನಿಂದ ದೇವಾಸುರ-ಮನುಷ್ಯರಿಂದೊಡಗೂಡಿದ ಲೋಕಗಳನ್ನು ಸುಡತೊಡಗಿದನು. ಆ ಭೃಗುಸತ್ತಮನನ್ನು ಅರ್ಥಮಾಡಿಕೊಂಡ ಅವನ ಸರ್ವ ಪಿತೃಗಳು ಪಿತೃಲೋಕದಿಂದ ಕೆಳಗಿಳಿದು ಬಂದು ಅವನಿಗೆ ಈ ಮಾತುಗಳನ್ನು ಹೇಳಿದರು:

> “ಔರ್ವ ! ಪುತ್ರಕ ! ನಿನ್ನ ಈ ಉಗ್ರ ತಪಸ್ಸಿನ ಪ್ರಭಾವವನ್ನು ನೋಡಿದ್ದೇವೆ. ಲೋಕಗಳ ಮೇಲೆ ಕರುಣೆತೋರು. ನಿನ್ನ ಸಿಟ್ಟನ್ನು ಹಿಂತೆಗೆದುಕೋ. ಭಾವಿತಾತ್ಮ ಭೃಗುಗಳಲ್ಲಿ ಶಕ್ತಿ ಇರಲಿಲ್ಲವೆಂದು ಅವರು ಕ್ಷತ್ರಿಯರಿಂದ ಸರ್ವರ ಹಿಂಸಾತ್ಮಕ ವಧೆಯನ್ನು ನಿರ್ಲಕ್ಷಿಸಲಿಲ್ಲ. ಆಯುಷ್ಯ ತುಂಬಾ ಹೆಚ್ಚಿದ್ದ ನಾವೇ ಬೇಸತ್ತು ನಾವೆಲ್ಲರೂ ಕ್ಷತ್ರಿಯರಿಂದ ಹತರಾಗಬೇಕೆಂದು ಬಯಸಿದ್ದೆವು. ಆದುದರಿಂದ ನಮ್ಮಲ್ಲಿಯೇ ಒಬ್ಬರು ಕ್ಷತ್ರಿಯರಿಗೆ ನಮ್ಮ ಮೇಲೆ ಕೋಪ ಬರಲಿ ಎನ್ನುವ ಉದ್ದೇಶದಿಂದ ಭೃಗುವಿನ ಮನೆಯಲ್ಲಿ

ವಿತ್ತವನ್ನು ಹುಗಿದಿಟ್ಟಿದ್ದೆವು. ಸ್ವರ್ಗವನ್ನೇ ಬಯಸುವ ನಮಗೆ ವಿತ್ತದಲ್ಲಿ ಏನು ಆಸಕ್ತಿ? ನಮ್ಮೆಲ್ಲರನ್ನೂ ತೆಗೆದುಕೊಂಡು ಹೋಗಲು ಮೃತ್ಯುವೂ ಅಶಕ್ಯನೆಂದು ನೋಡಿ ಈ ಉಪಾಯವನ್ನು ಸಮ್ಮತಿಯಿಂದ ಮಾಡಿದೆವು. ಆತ್ಮಹತ್ಯೆ ಮಾಡಿಕೊಳ್ಳುವವನು ಶ್ರೇಷ್ಠ ಶುಭ ಲೋಕಗಳನ್ನು ಪಡೆಯುವುದಿಲ್ಲ. ಈ ಕಾರಣದಿಂದಲೇ ನಮ್ಮನ್ನು ನಾವೇ ನಾಶಪಡಿಸಿಕೊಳ್ಳಲಿಲ್ಲ. ಆದುದರಿಂದ ನೀನು ಈಗ ಮಾಡಲು ಇಚ್ಛಿಸಿರುವುದು ನಮಗೆ ಸ್ವಲ್ಪವೂ ಇಷ್ಟವಿಲ್ಲ. ಸರ್ವಲೋಕಪರಾಭವದ ಪಾಪ ಮನಸ್ಸನ್ನು ತಡೆಹಿಡಿದುಕೋ. ಕ್ಷತ್ರಿಯರಾಗಲೀ ಈ ಸಪ್ತ ಲೋಕಗಳೇ ಆಗಲಿ ನಮ್ಮ ಈ ತಪೋ ತೇಜಸ್ಸನ್ನು ದೂಷಿಸಲು ಸಾದ್ಯವಿಲ್ಲ. ನಿನ್ನಲ್ಲಿರುವ ಕ್ರೋಧವನ್ನು ಕಿತ್ತು ಹಾಕು."

ಔರ್ವನು ಹೇಳಿದನು:

"ಪಿತೃಗಳೇ! ಕ್ರೋಧದಿಂದ ಸರ್ವಲೋಕಗಳನ್ನೂ ವಿನಾಶ ಮಾಡುತ್ತೇನೆ ಎಂದು ಹೇಳಿದ ನನ್ನ ಆ ಪ್ರತಿಜ್ಞೆಯ ಮಾತುಗಳು ಮಿಥ್ಯವಾಗಲಾರದು. ವೃಥಾ ರೋಷ ಮತ್ತು ಪ್ರತಿಜ್ಞೆಗಳನ್ನು ಮಾಡುವವನ ಜೀವನವನ್ನು ಜೀವಿಸುವುದು ನನಗೆ ಇಷ್ಟವಿಲ್ಲ. ಅದನ್ನು ನಾನು ಬೇರೆಕಡೆ ತಿರುಗಿಸದಿದ್ದರೆ ಇಟ್ಟಿಗೆಯನ್ನು ಸುಡುವ ಬೆಂಕಿಯಂತೆ ಅದು ನನ್ನನ್ನೇ ಸುಟ್ಟುಬಿಡುತ್ತದೆ.

ಯಾವ ಕಾರಣಕ್ಕಾಗಿ ಕ್ರೋಧವು ಹುಟ್ಟಿದೆಯೋ ಅದು ಶಾಂತವಾಗಬೇಕು. ಇಲ್ಲದಿದ್ದರೆ ಆ ಮನುಷ್ಯನು ತ್ರಿವರ್ಗಗಳನ್ನು ಸರಿಯಾಗಿ ಪರಿರಕ್ಷಿಸಲು ಸಾದ್ಯವಾಗುವುದಿಲ್ಲ. ಅಶಿಷ್ಟರನ್ನು ಶಿಕ್ಷಿಸುವುದೇ ಶಿಷ್ಟರನ್ನು ಪರಿರಕ್ಷಿಸಿದಂತೆ. ಸ್ವರ್ಗವನ್ನು ಗೆಲ್ಲ ಬಯಸುವ ನೃಪರು ತಮ್ಮ ರೋಷವನ್ನು ಸರಿಯಾದ ಕಡೆಯಲ್ಲೇ ಪ್ರಯೋಗಿಸುತ್ತಾರೆ. ನಾನಿನ್ನೂ ಹುಟ್ಟದಿದ್ದಾಗ, ತಾಯಿಯ ತೊಡೆಯಲ್ಲಿ ಗರ್ಭಶಯ್ಯಾಗತನಾಗಿದ್ದಾಗ ನಾನು ಕ್ಷತ್ರಿಯರಿಂದ ವಧೆಗೈಯಲ್ಪಟ್ಟ ಭೃಗುಗಣ ಮತ್ತು ಮಾತೃವರ್ಗದವರ ಕೂಗನ್ನು ಕೇಳಿದ್ದೆ. ಕ್ಷತ್ರಿಯಾಧಮರಿಂದ ಗರ್ಭದಲ್ಲಿರುವ ಭೃಗುಗಳ ನಾಶವಾಗುತ್ತಿರುವುದನ್ನು ಲೋಕಗಳು ಮತ್ತು ಅವುಗಳಲ್ಲಿರುವ ಅಮರರು ಪ್ರತಿಭಟಿಸದೇ ಸುಮ್ಮನೆ ಇದ್ದುದನ್ನು ನೋಡಿ ಕೋಪ ಬಂದಿತು. ತುಂಬು ಗರ್ಭಿಣಿಯರಾದ ನನ್ನ ತಾಯಂದಿರು ಮತ್ತು ತಂದೆಯರು ಭಯದಿಂದಿದ್ದಾಗ ಯಾವ ಲೋಕದ ಯಾರಿಂದಲೂ ರಕ್ಷಣೆಯು ದೊರೆಯಲಿಲ್ಲ. ಆ ಭೃಗುಗಳ ಪತ್ನಿಯರಿಗೆ ಎಲ್ಲಿಂದಲೂ ಸಹಾಯವು ದೊರೆಯದಿದ್ದುದರಿಂದ ನನ್ನ ಶುಭೆ ತಾಯಿಯು ನನ್ನನ್ನು ತನ್ನ ತೊಡೆಯಲ್ಲಿ ಇಟ್ಟುಕೊಂಡಳು. ಲೋಕಗಳಲ್ಲಿ ಪಾಪವನ್ನು ತಡೆಗಟ್ಟುವವರು ಯಾರಾದರೂ ಇದ್ದರೆ ಲೋಕಗಳಲ್ಲಿ ಪಾಪವೇ ನಡೆಯುವುದಿಲ್ಲ. ಆದರೆ

ಪಾಪಿಯು ತನ್ನನ್ನು ಎದುರಿಸಿ ತಡೆಯುವವನು ಯಾರೂ ಸಿಗದಿದ್ದಾಗ ಲೋಕದಲ್ಲಿ ಬಹಳಷ್ಟು ಜನರು ಪಾಪಕರ್ಮದಲ್ಲಿ ತೊಡಗುತ್ತಾರೆ. ಅದು ಪಾಪವೆಂದು ತಿಳಿದಿದ್ದರೂ ಮತ್ತು ತಡೆಗಟ್ಟುವ ಶಕ್ತಿಯಿದ್ದರೂ ಅದನ್ನು ನಿಯಂತ್ರಿಸದೇ ಇದ್ದವನು ಈಶ್ವರನಾಗಿದ್ದರೂ ಅವನಿಗೂ ಆ ಕರ್ಮದ ಪಾಪವು ತಗಲುತ್ತದೆ. ರಾಜರು ಮತ್ತು ಈಶ್ವರರು ಸಮರ್ಥರಿದ್ದರೂ ಎಲ್ಲವೂ ಸರಿಯಾಗಿಯೇ ನಡೆಯುತ್ತಿದೆ ಎಂದು ಯೋಚಿಸಿ ನನ್ನ ತಂದೆಯರನ್ನು ಉಳಿಸಲಿಲ್ಲ ಎಂದಾಗ ನಾನು ಲೋಕಗಳ ಮತ್ತು ಅವುಗಳ ಈಶ್ವರರ ಮೇಲೆ ಕೃದ್ಧನಾಗಿದ್ದೇನೆ. ಆದರೂ ನಾನು ನಿಮ್ಮ ಮಾತುಗಳನ್ನು ಉಲ್ಲಂಘಿಸಲಾರೆ. ನಾನು ನಿಮ್ಮ ಮಾತಿನಂತೆ ನಡೆದುಕೊಳ್ಳದಿದ್ದರೆ ಪುನಃ ಲೋಕಗಳ ಕಷ್ಟವನ್ನು ತಿಳಿದೂ ಸಮರ್ಥನಾಗಿದ್ದರೂ ಉಪೇಕ್ಷೆಮಾಡಿದುದರ ಪಾಪವು ನನಗೆ ಬರುತ್ತದೆ. ಲೋಕವನ್ನೇ ಸುಡಲು ಹೊರಟಿರುವ ನನ್ನ ಸಿಟ್ಟಿನಿಂದ ಹುಟ್ಟಿದ ಈ ಅಗ್ನಿಯನ್ನು ನಾನು ನಿಗ್ರಹಿಸಿದೆನೆಂದಾದರೆ ನನ್ನನ್ನೇ ತನ್ನ ತೇಜಸ್ಸಿನಿಂದ ಸುಟ್ಟುಬಿಡುತ್ತದೆ. ನೀವೆಲ್ಲರೂ ಸರ್ವಲೋಕಹಿತಾಕಾಂಕ್ಷಿಗಳೆಂದು ತಿಳಿದಿದ್ದೇನೆ. ಆದುದರಿಂದ ನನಗೂ ಲೋಕಗಳಿಗೂ ಒಳ್ಳೆಯದಾಗುವಂಥಹ ಉಪಾಯವನ್ನು ಹೇಳಿ.”

ಪಿತೃಗಳು ಹೇಳಿದರು:

“ಲೋಕಗಳನ್ನು ಸುಡಲು ಇಚ್ಛಿಸುವ ನಿನ್ನ ಸಿಟ್ಟಿನಿಂದ ಹುಟ್ಟಿದ ಅಗ್ನಿಯನ್ನು ನೀರಿನಲ್ಲಿ ಬಿಟ್ಟು ಬಿಡು. ಲೋಕಗಳು ನೀರಿನ ಮೇಲೆಯೇ ನಿಂತಿವೆ. ನಿನಗೆ ಮಂಗಳವಾಗಲಿ. ಸರ್ವ ರಸಗಳೂ ಆಪೋಮಯ ಮತ್ತು ಸರ್ವ ಜಗತ್ತೂ ಆಪೋಮಯ. ಆದುದರಿಂದ ನಿನ್ನ ಈ ಕ್ರೋಧಾಗ್ನಿಯನ್ನು ನೀರಿನಲ್ಲಿಯೇ ಬಿಟ್ಟುಬಿಡು. ಈ ರೀತಿ ನಿನ್ನ ಪ್ರತಿಜ್ಞೆಯೂ ಸತ್ಯವಾಗುತ್ತದೆ ಮತ್ತು ಅಮರರಿಂದ ಕೂಡಿದ ಲೋಕಗಳು ಪರಾಭವಹೊಂದುವುದಿಲ್ಲ.”

ನಂತರ ಔರ್ವನು ಕ್ರೋಧದಿಂದ ಜನಿಸಿದ ಆ ಅಗ್ನಿಯನ್ನು ವರುಣಾಲಯದಲ್ಲಿ ವಿಸರ್ಜಿಸಿದನು. ಅದು ಒಂದು ಮಹಾ ಹಯಶಿರವಾಗಿ ಅದರ ಬಾಯಿಯಿಂದ ಅಗ್ನಿಯನ್ನು ಉಗುಳುತ್ತಾ ಮಹೋದಧಿಯ ನೀರನ್ನು ಕುಡಿಯುತ್ತದೆ ಎಂದು ವೇದವಿದರು ತಿಳಿದಿದ್ದಾರೆ.

# ಸುಂದೋಪಸುಂದೋಪಾಽಖ್ಯಾನ

[ಸುಂದ-ಉಪಸುಂದರ ಈ ಕಥೆಯು ವ್ಯಾಸ ಮಹಾಭಾರತದ ಆದಿಪರ್ವದ ಅರ್ಜುನವನವಾಸ ಪರ್ವ (ಅಧ್ಯಾಯ ೨೦೧-೨೦೪) ದಲ್ಲಿ ಬರುತ್ತದೆ. ಈ ಕಥೆಯನ್ನು ಇಂದ್ರಪ್ರಸ್ಥದಲ್ಲಿ

## ನಾರದನು ಪಾಂಡವರಿಗೆ ಹೇಳಿದನು.]

ಹಿಂದೆ ಮಹಾಸುರ ಹಿರಣ್ಯಕಶಿಪುವಿನ ವಂಶದಲ್ಲಿ ನಿಕುಂಭ ಎಂಬ ಹೆಸರಿನ ತೇಜಸ್ವಿ ಬಲವಾನ ದೈತ್ಯೇಂದ್ರನಿದ್ದನು. ಅವನಿಗೆ ಮಹಾವೀರ ಭೀಮಪರಾಕ್ರಮಿ ಪುತ್ರರಿಬ್ಬರು ಜನಿಸಿದರು. ಅವರು ಒಟ್ಟಿಗೇ ಊಟಮಾಡುತ್ತಿದ್ದರು, ಒಬ್ಬರಿಲ್ಲದೆ ಇನ್ನೊಬ್ಬರು ಎಲ್ಲಿಗೂ ಹೋಗುತ್ತಿರಲಿಲ್ಲ, ಅನ್ಯೋನ್ಯರಿಗೆ ಪ್ರಿಯಕರವಾದುದನ್ನೇ ಮಾಡುತ್ತಿದ್ದರು, ಅನ್ಯೋನ್ಯರಿಗೆ ಪ್ರಿಯವಾದುದನ್ನೇ ಮಾತನಾಡುತ್ತಿದ್ದರು, ಮತ್ತು ಇಬ್ಬರೂ ಒಂದೇ ರೀತಿಯಲ್ಲಿ ವರ್ತಿಸುತ್ತಿದ್ದರು, ನಡೆದುಕೊಳ್ಳುತ್ತಿದ್ದರು. ಒಬ್ಬನೇ ಇಬ್ಬರಾದಂತೆ ವರ್ತಿಸುತ್ತಿದ್ದರು. ಎಲ್ಲ ವಿಷಯಗಳಲ್ಲಿಯೂ ಏಕನಿಶ್ಚಯರಾದ ಆ ಮಹಾವೀರರು ದೊಡ್ಡವರಾದ ಮೇಲೆ ತ್ರೈಲೋಕ್ಯವಿಜಯದ ಒಂದೇ ನಿರ್ಧಾರವನ್ನು ಕೈಗೊಂಡರು. ದೀಕ್ಷಾಬದ್ಧರಾಗಿ ಅವರು ವಿಂಧ್ಯಪರ್ವತಕ್ಕೆ ಹೋಗಿ ಅಲ್ಲಿ ಉಗ್ರ ತಪಸ್ಸನ್ನು ತಪಿಸಿದರು. ಅವರು ದೀರ್ಘಕಾಲ ತಪೋಯುಕ್ತರಾದರು. ಹಸಿವು ಬಾಯಾರಿಕೆಗಳಿಂದ ಬಳಲಿ, ಜಟಾವಲ್ಕಲಧಾರಿಗಳಾಗಿ, ಸರ್ವಾಂಗಗಳು ಮಲಿನದಿಂದ ತುಂಬಿಹೋಗಿ, ಕೇವಲ ಗಾಳಿಯನ್ನು ಸೇವಿಸುತ್ತಿದ್ದರು. ಅವರು ತಮ್ಮ ಮಾಂಸದ ತುಂಡುಗಳನ್ನು ಅಗ್ನಿಯಲ್ಲಿ ಆಹುತಿಗಳನ್ನಾಗಿತ್ತರು. ಅವರ ತೋಳುಗಳನ್ನು ಮೇಲೆತ್ತಿ, ಪಾದಾಂಗುಷ್ಠದ ಮೇಲೆ ನಿಂತು ದೀರ್ಘಕಾಲದವರೆಗೆ ಧೃತವ್ರತರಾಗಿದ್ದರು. ದೀರ್ಘಕಾಲದ ಅವರ

ತಪಸ್ಸಿನ ಪ್ರತಾಪದ ಪ್ರಭಾವದಿಂದ ಅದ್ಭುತವೋ ಎಂಬಂತೆ ವಿಂಧ್ಯವು ಹೊಗೆಕಾರತೊಡಗಿತು. ಅವರ ಉಗ್ರ ತಪಸ್ಸನ್ನು ನೋಡಿ ದೇವತೆಗಳು ಭೀತರಾದರು. ದೇವತೆಗಳು ಅವರ ತಪಸ್ಸನ್ನು ಕೆಡಿಸಲೋಸುಗ ವಿಘ್ನಗಳನ್ನು ತಂದೊಟ್ಟಿದರು. ರತ್ನಗಳಿಂದ ಮತ್ತು ಸುಂದರ ಸ್ತ್ರೀಯರ ಮೂಲಕ ಪುನಃ ಪುನಃ ಪ್ರಲೋಭಿಸಿದರು. ಆದರೂ ಆ ಇಬ್ಬರು ಸುಮಹಾವ್ರತರ ವ್ರತಭಂಗಮಾಡಲು ಸಾಧ್ಯವಾಗಲಿಲ್ಲ. ಇದರ ನಂತರ ಪುನಃ ದೇವತೆಗಳು ನಡುಗುತ್ತಿರುವ, ವಸ್ತ್ರಾಭರಣಗಳು, ತಲೆಕೂದಲು ಕೆದರಿದ, ಬಟ್ಟೆಯು ಒಂದೆಡೆ ಕಳಚಿ ಹೋಗುತ್ತಿರುವ ಆ ಮಹಾತ್ಮರ ಸಹೋದರಿಯರು, ತಾಯಂದಿರು ಭಾರ್ಯೆಯರು ಮತ್ತು ಇತರ ಪರಿಜನರನ್ನು ರಾಕ್ಷಸರು ಶೂಲಹಸ್ತದಿಂದ ತಿವಿಯುತ್ತಿರಂತೆ ಮಾಯೆಯನ್ನು ಸೃಷ್ಟಿಸಿದರು. ಆ ಸರ್ವ ಸ್ತ್ರೀಯರು ಅವರ ಬಳಿ ಓಡಿಬಂದು “ತ್ರಾಹಿ ! ತ್ರಾಹಿ !” ಎಂದು ಚೀರಿಕೊಂಡರು. ಆದರೂ ಆ ಸುಮಹಾವ್ರತರು ತಮ್ಮ ವ್ರತವನ್ನು ಮುರಿಯಲಿಲ್ಲ. ಅವರು ಯಾವುದೇ ರೀತಿಯ ಉದ್ವೇಗ ಮತ್ತು ದುಃಖಗಳನ್ನು ತೋರಿಸದೇ ಇದ್ದಾಗ ಸ್ತ್ರೀಯರೆಲ್ಲರೂ ಅಲ್ಲಿಯೇ ಅಂತರ್ಧಾನರಾದರು. ಆಗ ಸಾಕ್ಷಾತ್ ಸರ್ವಲೋಕಪಿತಾಮಹ ಪಿತಾಮಹನು ಆ ಮಹಾಸುರರಲ್ಲಿಗೆ ಬಂದು ವರಗಳನ್ನಿತ್ತನು. ಆಗ ದೃಢವಿಕ್ರಮಿ ಸುಂದೋಪಸುಂದ ಸಹೋದರರು ದೇವ ಪಿತಾಮಹನನ್ನು ಕಂಡು ಅಂಜಲೀಬದ್ಧರಾಗಿ ನಿಂತು ಇಬ್ಬರೂ ಒಟ್ಟಿಗೇ ಪ್ರಭು ದೇವನಲ್ಲಿ ಕೇಳಿಕೊಂಡರು:

“ನಮ್ಮ ಈ ತಪಸ್ಸಿನಿಂದ ಪಿತಾಮಹನು ಪ್ರೀತನಾಗಿದ್ದರೆ

ನಾವಿಬ್ಬರೂ ಮಯಾವಿದ, ಅಸ್ತ್ರವಿದ, ಬಲಶಾಲಿ, ಕಾಮರೂಪಿಗಳಾಗಲಿ. ಪ್ರಭುವು ಪ್ರಸನ್ನನಾಗಿದ್ದಾನೆಂದರೆ ನಾವಿಬ್ಬರೂ ಅಮರರಾಗಲಿ.”

ಪಿತಾಮಹನು ಹೇಳಿದನು:

“ಅಮರತ್ವವೊಂದನ್ನು ಬಿಟ್ಟು ನೀವು ಹೇಳಿದ ಬೇರೆಲ್ಲವೂ ಆಗುತ್ತದೆ. ಅಮರರಿಗೆ ಸಮಾನ ಬೇರೆ ಯಾವುದಾದರು ಮೃತ್ಯುವಿನ ವಿಧಾನವನ್ನು ಕೇಳಿಕೊಳ್ಳಿ. ಯಾವುದೋ ಕಾರಣಕ್ಕಾಗಿ ನೀವು ಈ ಮಹಾ ತಪಸ್ಸನ್ನು ನೆರವೇರಿಸಿದುದರಿಂದ ನಿಮಗೆ ಅಮರತ್ವವು ದೊರೆಯಲಾರದು. ದೈತ್ಯೇಂದ್ರರೇ! ತ್ರೈಲೋಕ್ಯವಿಜಯಾರ್ಥವಾಗಿ ನೀವು ಇದನ್ನು ಕೈಗೊಂಡಿದ್ದೀರಿ. ಆದುದರಿಂದ ನಾನು ನಿಮ್ಮ ಇಚ್ಛೆಯನ್ನು ಪೂರೈಸಲಾರೆ.”

ಸುಂದೋಪಸುಂದರು ಹೇಳಿದರು:

“ಪಿತಾಮಹ! ಈ ಮೂರೂ ಲೋಕದಲ್ಲಿ ನಮ್ಮಿರ್ವರ ಹೊರತಾಗಿ ಬೇರೆ ಯಾವುದೇ ಸ್ಥಾವರಜಂಗಮದಿಂದಲೂ ಮೃತ್ಯುಭಯ ಇಲ್ಲದಿರಲಿ.”

ಪಿತಾಮಹನು ಹೇಳಿದನು:

> “ನೀವು ಕೇಳಿದಂತೆ ಈ ಆಸೆಯನ್ನು ನಾನು ಪೂರೈಸಬಲ್ಲೆ. ನಿಮ್ಮ ಮೃತ್ಯುವಿಧಿಯು ನೀವು ಕೇಳಿಕೊಂಡಂತೆಯೇ ಆಗುತ್ತದೆ.”

ನಂತರ ಪಿತಾಮಹನು ಈ ವರಗಳನ್ನಿತ್ತು ಅವರೀರ್ವರನ್ನೂ ತಪಸ್ಸಿನಿಂದ ಹಿಂದಿರುಗಿಸಿ, ಬ್ರಹ್ಮಲೋಕಕ್ಕೆ ಹೋದನು. ಸರ್ವ ವರಗಳನ್ನೂ ಪಡೆದು ಸರ್ವಲೋಕಕ್ಕೆ ಅವಧ್ಯ ಆ ದೈತ್ಯೇಂದ್ರರು ತಮ್ಮ ಮನೆಗೆ ತೆರಳಿದರು. ವರಗಳನ್ನು ಗಳಿಸಿ ಆ ಕೃತಕಾಮಿ ಮಹಾಸುರರನ್ನು ನೋಡಿದ ಸರ್ವ ಸುಹೃಜ್ಜನರೂ ಪ್ರಮೋದಿತರಾದರು. ಅವರ ಜಟೆಗಳನ್ನು ಕತ್ತರಿಸಿ, ಮಾಲಿನ್ಯವನ್ನು ತೊಳೆದು, ಮಹಾ ಬೆಲೆಬಾಳುವ ಆಭರಣಗಳು ಮತ್ತು ವಸ್ತ್ರಗಳನ್ನು ಧರಿಸಿ ವಿರಾಜಿಸಿದರು. ಅದಕ್ಕೆ ಕಾಲವಲ್ಲದಿದ್ದರೂ ಅವರು ಸಾರ್ವಕಾಮಿಕಿ ಕೌಮುದಿಯನ್ನು ನೆರವೇರಿಸಿದರು. ಮತ್ತು ಆ ದೈತ್ಯೇಂದ್ರರೀರ್ವರು ತಮ್ಮ ಸುಹೃಜ್ಜನರೊಂದಿಗೆ ಪರಮಪ್ರೀತರಾದರು. ಮನೆಮನೆಗಳಲ್ಲಿ

> “ತಿನ್ನು! ಔತಣಮಾಡು! ರಮಿಸು! ಹಾಡು! ಕುಡಿ! ಮತ್ತು ಕೊಡು!”

ಎನ್ನುವ ಮಾತುಗಳೇ ನಿತ್ಯವೂ ಕೇಳಿಬರುತ್ತಿದ್ದವು. ಅಲ್ಲಲ್ಲಿ ಮಹಾಪಾನಗಳಿಂದ, ಚಪ್ಪಾಳೆಯ ಶಬ್ಧಗಳಿಂದ ಆ ದೈತ್ಯರ ಪುರವಿಡೀ ಹರ್ಷದಿಂದ ತೇಲಾಡಿತು. ಈ ರೀತಿ ಆ ಕಾಮರೂಪಿ ದೈತ್ಯರು ಬಹಳ ಕ್ರೀಡೆಗಳಲ್ಲಿ ತೊಡಗಿರಲು ವರ್ಷಗಳು ಒಂದೇ ಒಂದು ದಿನದಂತೆ




ಕಳೆದವು.

ಉತ್ಸವಗಳು ನಡೆಯುತ್ತಿರುವಾಗ ತ್ರೈಲೋಕ್ಯದ ಆಕಾಂಕ್ಷಿಗಳಾದ ಆ ಈರ್ವರು ಸಮಾಲೋಚನೆ ನಡೆಸಿ ತಮ್ಮ ಸೇನೆಗೆ ಆಜ್ಞೆಯಿತ್ತರು. ಅವರ ಸುಹೃದಯರು, ದೈತ್ಯ ವೃದ್ಧರು ಮತ್ತು ಮಂತ್ರಿಗಳು ಅವರಿಗೆ ಅನುಜ್ಞೆಯನ್ನು ನೀಡಲು ಪ್ರಾಸ್ಥಾನಿಕವನ್ನು ಪೂರೈಸಿ ಮಘಾನಕ್ಷತ್ರದ ರಾತ್ರಿಯಲ್ಲಿ ಹೊರಟರು. ಗದೆ, ಪಟ್ಟಿಶಗಳನ್ನು ಹಿಡಿದು ಶೂಲಮುದ್ಗರಗಳನ್ನೆತ್ತಿ ಸಹಧರ್ಮಿ ಮಹಾ ದೈತ್ಯಸೇನೆಯೊಂದಿಗೆ ನಡೆದರು. ಚಾರಣರು ಮಂಗಲಸ್ತುತಿಗಳನ್ನು,

ವಿಜಯಪ್ರತಿಸಂಹಿತಗಳನ್ನು ಸ್ತುತಿಸುತ್ತಿರಲು ಈರ್ವರೂ ಪರಮ ಸಂತೋಷದಿಂದ ಹೊರಟರು. ಯುದ್ಧದ ಮದದಲ್ಲಿದ್ದ ಕಾಮಗಾಮಿ ಆ ಇಬ್ಬರು ದೈತ್ಯರು ಅಂತರಿಕ್ಷಕ್ಕೇರಿ ದೇವತೆಗಳ ಭವನಕ್ಕೆ ಧಾಳಿಯಿಟ್ಟರು. ಅವರ ಆಗಮನವನ್ನು ಮತ್ತು ಪ್ರಭುವು ಅವರಿಗಿತ್ತ ವರವನ್ನು ತಿಳಿದಿದ್ದ ಸುರರು ಸ್ವರ್ಗವನ್ನು ಬಿಟ್ಟು ಬ್ರಹ್ಮಲೋಕವನ್ನು ಸೇರಿದರು. ಆ ತೀವ್ರವಿಕ್ರಮಿಗಳು ಇಂದ್ರಲೋಕವನ್ನು ಜಯಿಸಿ ಯಕ್ಷ-ರಕ್ಷಗಣಗಳನ್ನೂ ಖೇಚರಗಣಗಳನ್ನು ಭೂತಗಳನ್ನು ಜಯಿಸಿದರು. ಅಂತರ್ಭೂಮಿಗೆ ಹೋಗಿ ನಾಗಗಳನ್ನು ಗೆದ್ದು ಆ ಮಹಾಸುರರು ಸರ್ವ ಸಮುದ್ರವಾಸಿಗಳನ್ನೂ ಮ್ಲೇಚ್ಛಜಾತಿಯವರನ್ನೂ ಗೆದ್ದರು. ಆ ಇಬ್ಬರು ಉಗ್ರಶಾಸಕರು ಸರ್ವ ಮಹಿಯನ್ನೂ ಗೆಲ್ಲಲು ತೊಡಗಿ ಸೈನಿಕರನ್ನು ಒಟ್ಟುಗೂಡಿಸಿ ಈ ಸುತೀಕ್ಷ್ಣ ಮಾತುಗಳನ್ನಾಡಿದರು:

> "ರಾಜರ್ಷಿಗಳು ಮತ್ತು ದ್ವಿಜರು ಮಹಾಯಜ್ಞ ಮತ್ತು ಹವ್ಯಕವ್ಯಗಳಿಂದ ದೇವತೆಗಳ ಬಲ ಮತ್ತು ಶ್ರಿಯನ್ನು ವೃದ್ಧಿಸುತ್ತಾರೆ. ಅಸುರರ ವೈರಿಗಳಾದ ದೇವತೆಗಳೆಲ್ಲರಿಗೆ ಇವರೇ ತೇಜೋಬಲವನ್ನು ಹೆಚ್ಚಿಸುತ್ತಿರುವುದರಿಂದ ಅವರೂ ನಮಗೆ ಶತ್ರುಗಳಾಗುತ್ತಾರೆ. ದೇವತೆಗಳ ತೇಜೋಬಲಗಳನ್ನು ನೀಡುವವರನ್ನು ತೀರಿಸಿಬಿಟ್ಟರೆ ದೇವತೆಗಳೂ ಶಕ್ತಿ ಹೀನರಾಗುವರು."

ಈ ರೀತಿ ಮಹೋದಧಿಯ ಪೂರ್ವತೀರದಲ್ಲಿ ಸರ್ವರಿಗೂ

ಆದೇಶವನ್ನಿತ್ತು ಕ್ರೂರಮತಿಯನ್ನು ತಳೆದ ಅವರು ಸರ್ವತೋಮುಖವಾಗಿ ಹೊರಟರು. ಆ ಬಲಿಗಳಿಬ್ಬರೂ ಯಾರು ಯಾರು ಯಜ್ಞಗಳನ್ನು ಮಾಡುತ್ತಿದ್ದರೋ ಮತ್ತು ಯಾವ ಯಾವ ದ್ವಿಜರು ಯಜ್ಞಗಳನ್ನು ಮಾಡಿಸುತ್ತಿದ್ದರೋ ಆ ಎಲ್ಲರನ್ನೂ ಹುಡುಕಿ ಬಲಾತ್ಕಾರವಾಗಿ ಸಂಹರಿಸಿದರು. ಅವರ ನಿರ್ಭೀತ ಸೈನಿಕರು ಆಶ್ರಮಗಳಲ್ಲಿ ಭಾವಿತಾತ್ಮ ಋಷಿಗಳ ಅಗ್ನಿಹೋತ್ರಗಳನ್ನು ತೆಗೆದು ನೀರಿನಲ್ಲಿ ಎಸೆದರು. ಮಹಾತ್ಮ ತಪೋಧನರು ಕ್ರುದ್ಧರಾಗಿ ನೀಡಿದ ಶಾಪಗಳೂ ಕೂಡ ವರದಾನದಿಂದ ಮೆರೆಯುತ್ತಿದ್ದ ಅವರನ್ನು ಮುಟ್ಟಲಿಲ್ಲ. ಶಿಲೆಗಳ ಮೇಲೆ ಬಿಟ್ಟ ಬಾಣಗಳು ಹೇಗೋ ಹಾಗೆ ಶಾಪಗಳು ಅವರನ್ನು ಮುಟ್ಟದಿರಲು ದ್ವಿಜರು ತಮ್ಮ ತಮ್ಮ ವ್ರತ ನಿಯಮಗಳನ್ನು ಪರಿತ್ಯಜಿಸಿ ಓಡಿ ಹೋದರು. ವೈನತೇಯನ ಭಯದಿಂದ ಉರಗಗಳು ಓಡುವಂತೆ ಅವರಿಬ್ಬರ ಭಯದಿಂದ ಪೃಥ್ವಿಯ ಎಲ್ಲ ತಪಃಸಿದ್ಧರೂ, ಜಿತೇಂದ್ರಿಯರೂ, ಶಮಪರಾಯಣರೂ ಓಡಿಹೋದರು. ಹಾಳುಬಿದ್ದಿದ್ದ ಆಶ್ರಮಗಳು ಮತ್ತು ಅಲ್ಲಲ್ಲಿ ಹರಡಿ ಬಿದ್ದಿದ್ದ ಕಲಶ-ಸಟ್ಟುಗಗಳಿಂದ ಜಗತ್ತೆಲ್ಲವೂ ಕಾಲನಿಂದ ಹತವಾದವೋ ಎಂಬಂತೆ ಬರಿದಾಗಿ ತೋರುತ್ತಿತ್ತು. ರಾಜರ್ಷಿ ಮತ್ತು ಋಷಿಗಳು ಅದೃಶ್ಯರಾಗಲು ಅವರನ್ನು ವಧಿಸಲು ನಿಶ್ಚಯಿಸಿದ ಆ ಈರ್ವರು ಮಹಾಸುರರೂ ಬೇರೆ ಬೇರೆ ರೂಪಗಳನ್ನು ಧರಿಸಿದರು. ಮದಜಲ ಸೋರುತ್ತಿರುವ ಕುಂಭಸ್ಥಲದ ಮತ್ತಗಜಗಳ ರೂಪವನ್ನು ತಾಳಿ ದುರ್ಗಮ ಪದೇಶಗಳಲ್ಲಿ ಅಡಗಿಕೊಂಡಿದ್ದವರನ್ನು

ಯಮಾಲಯಕ್ಕೆ ಕಳುಹಿಸಿದರು. ಸಿಂಹಗಳಾಗಿ, ಪುನಃ ವ್ಯಾಘ್ರಗಳಾಗಿ, ಪುನಃ ಅಂತರ್ಹಿತರಾಗಿ, ಹೀಗೆ ಅನೇಕ ಉಪಾಯಗಳಿಂದ ಆ ಕ್ರೂರರು ಋಷಿಗಳನ್ನು ಹುಡುಕಿ ಸಂಹರಿಸಿದರು. ಆಗ ವಸುಧೆಯಲ್ಲಿ ಯಜ್ಞ-ಸ್ವಾಧ್ಯಾಯಗಳು ನಿಂತುಹೋದವು. ನೃಪತಿದ್ವಿಜರು ನಷ್ಟರಾದರು. ಯಜ್ಞ-ಉತ್ಸವಗಳು ನಿಂತುಹೋದವು. ಭೂಮಿಯು ಭಯಪೀಡಿತವಾಗಿ ಹಾಹಾಕರಿಸಿತು. ಅಂಗಡಿ-ವ್ಯಾಪಾರಗಳು ನಿಂತುಹೋದವು. ದೇವತಾಕಾರ್ಯಗಳು ನಿಂತುಹೋದವು. ಪುಣ್ಯಕಾರ್ಯಗಳೂ ವಿವಾಹಗಳೂ ಇಲ್ಲವಾದವು. ಕೃಷಿ-ಗೋಪಾಲನೆಗಳು ನಿಂತುಹೋದವು. ನಗರ-ಆಶ್ರಮಗಳು ವಿಧ್ವಂಸವಾದವು. ಎಲುಬು ಮತ್ತು ಅಸ್ತಿಪಂಜರಗಳಿಂದ ತುಂಬಿಹೋದ ಭೂಮಿಯು ಭಯಂಕರವಾಗಿ ತೋರಿತು. ಪಿತೃಕಾರ್ಯಗಳು ನಿಂತುಹೋದವು. ಮಂಗಲ ವಷಟ್ಕಾರಗಳು ನಿಂತುಹೋದವು. ಜಗತ್ತು ನೋಡಲಿಕ್ಕಾಗದಷ್ಟು ಭಯಾಕಾರವಾಗಿ ತೋರುತ್ತಿತ್ತು. ಸುಂದೋಪಸುಂದರ ಈ ಕೃತ್ಯಗಳಿಂದ ಚಂದ್ರಾದಿತ್ಯರು, ಗ್ರಹತಾರೆಗಳು, ನಕ್ಷತ್ರಗಳು ಮತ್ತು ದಿವೌಕಸರು ವಿಷಾದಿತರಾದರು. ಈ ರೀತಿ ಕ್ರೂರಕರ್ಮಗಳಿಂದ ಸರ್ವದಿಶಗಳನ್ನು ಜಯಿಸಿ ಆ ದೈತ್ಯರು ಯಾವುದೇ ವಿರೋಧವಿಲ್ಲದೇ ಕುರುಕ್ಷೇತ್ರದಲ್ಲಿ ವಾಸಿಸತೊಡಗಿದರು.

ಆಗ ದೇವರ್ಷಿಗಳು, ಸರ್ವ ಸಿದ್ಧರೂ, ಮತ್ತು ಪರಮರ್ಷಿಗಳೆಲ್ಲರೂ ಆ ಮಹಾ ಕದನವನ್ನು ನೋಡಿ ಬಹುದುಃಖಿತರಾದರು. ಆ ಜಿತಕ್ರೋಧ, ಜಿತಾತ್ಮ, ಜಿತೇಂದ್ರಿಯರು ಜಗತ್ತಿನ ಮೇಲಿನ ಕೃಪೆಯಿಂದ ಭವನದ

ಪಿತಾಮಹನಲ್ಲಿಗೆ ಹೋದರು. ಸಿದ್ಧ-ಬ್ರಹ್ಮರ್ಷಿಗಳಿಂದ ಪರಿವೃತರಾಗಿ ಅವರು ದೇವತೆಗಳೊಡನೆ ಕುಳಿತಿದ್ದ ಪಿತಾಮಹನನ್ನು ಕಂಡರು. ಅಲ್ಲಿ ದೇವ ಮಹಾದೇವ, ಅಗ್ನಿವಾಯುಗಳ ಸಹಿತ ಚಂದ್ರಾದಿತ್ಯರು, ಧರ್ಮ, ಪರಮೇಷ್ಠಿ, ಬುಧ, ವೈಖಾನಸರು, ವಾಲಖಿಲ್ಯರು, ವಾನಪ್ರಸ್ಥರು, ಮರೀಚಿಗಳು, ಅಜರು, ಅವಿಮೂಢರು, ತೇಜೋಗರ್ಭ ತಪಸ್ವಿಗಳೂ, ಸರ್ವ ಋಷಿಗಳೂ ಪಿತಾಮಹನನ್ನು ಉಪಾಸಿಸುತ್ತಿದ್ದರು. ಆಗ ಸರ್ವ ಮಹರ್ಷಿಗಳೂ ಒಟ್ಟಾಗಿ ಹೋಗಿ ಸುಂದೋಪಸುಂದರ ಸರ್ವ ಕರ್ಮಗಳನ್ನೂ ವರದಿಮಾಡಿದರು. ಯಾವ ಕ್ರಮದಲ್ಲಿ ಏನೆಲ್ಲ ಮಾಡಿದರೆನ್ನುವುದನ್ನು ಎಲ್ಲವನ್ನೂ ಪಿತಾಮಹನಿಗೆ ನಿವೇದಿಸಿದರು. ಆಗ ದೇವಗಣ-ಪರಮ ಋಷಿ ಸರ್ವರೂ ಆ ವಿಷಯವನ್ನೇ ಮುಂದಿಟ್ಟುಕೊಂಡು ಪಿತಾಮಹನನ್ನು ಪ್ರೇರಿಸಿದರು. ಅವರೆಲ್ಲರ ಆ ಮಾತುಗಳನ್ನು ಕೇಳಿದ ಪಿತಾಮಹನು ಒಂದು ಮುಹೂರ್ತ ಯೋಚಿಸಿ ಮುಂದಿನ ಕರ್ತವ್ಯದ ಕುರಿತು ನಿಶ್ಚಯಿಸಿದನು.

ಅವರಿಬ್ಬರ ವಧೆಯನ್ನು ಕಲ್ಪಿಸಿ, ವಿಶ್ವಕರ್ಮನನ್ನು ಕರೆಯಿಸಿದನು. ವಿಶ್ವಕರ್ಮನನ್ನು ಕಂಡ ಪಿತಾಮಹನು:

> "ಮಹಾತಪಸ್ವಿಗಳೂ ಬೇಡುವಂಥಹ ಸುಂದರಿಯನ್ನು ಸೃಷ್ಟಿಸು!"

ಎಂದು ಆದೇಶವನ್ನಿತ್ತನು. ಪಿತಾಮಹನನ್ನು ನಮಸ್ಕರಿಸಿ, ಅವನ ವಾಖ್ಯವನ್ನು ಅಭಿನಂದಿಸಿ ವಿಶ್ವಕರ್ಮನು ಪ್ರಯತ್ನಿಸಿ ಯೋಚಿಸಿ ಓರ್ವ



ದಿವ್ಯ ಸ್ತ್ರೀಯನ್ನು ಸೃಷ್ಟಿಸಿದನು. ಮೂರು ಲೋಕಗಳಲ್ಲಿನ ಸ್ಥಾವರಜಂಗಮಗಳಲ್ಲಿ ಯಾವುದೇ ಸೌಂದರ್ಯವಿದ್ದರೂ ಅದನ್ನು ಅಲ್ಲಲ್ಲಿಂದ ತೆಗೆದುಕೊಂಡು ಒಟ್ಟುಗೂಡಿಸಿದನು. ಕೋಟಿಗಟ್ಟಲೆ ರತ್ನಗಳನ್ನು ಅವಳ ದೇಹದಲ್ಲಿ ಅಳವಡಿಸಿದನು. ಹೀಗೆ ಆ ರತ್ನಸಂಘಾತಮಯಿ ದೇವರೂಪಿಣಿಯನ್ನು ಸೃಷ್ಟಿಸಿದನು. ವಿಶ್ವಕರ್ಮನ ಮಹಾ ಪ್ರಯತ್ನದಿಂದ ನಿರ್ಮಿತಳಾದ ಅವಳು ರೂಪದಲ್ಲಿ ಮೂರು ಲೋಕದ ನಾರಿಯರನ್ನು ಮೀರಿಸಿದ್ದಳು. ಅವಳ ದೇಹದಲ್ಲಿ ರೂಪಸಂಪದವಾಗಿರದಿದ್ದ ಅಥವಾ ನೋಡುವವರ ದೃಷ್ಟಿಯು ಅಲ್ಲಿಯೇ ನಿಲ್ಲುವಂತೆ ಮಾಡದಿರುವ ಯಾವುದೊಂದು ಸೂಕ್ಷ್ಮ ಭಾಗವೂ ಇರಲಿಲ್ಲ. ವಿಗ್ರಹದಂದಿರುವ ಆ ಕಾಂತರೂಪಿಣಿ, ಮಪುಷ್ಮತೀ ಶ್ರೀಯು ಸರ್ವಭೂತಗಳ ಕಣ್ಮನಗಳನ್ನು ಸೆಳೆಯುತ್ತಿದ್ದಳು. ಸಣ್ಣ ಸಣ್ಣ ರತ್ನಗಳನ್ನು ಒಟ್ಟುಗೂಡಿಸಿ ರತ್ನಗಳಿಂದಲೇ ನಿರ್ಮಿತ ಅವಳಿಗೆ ಪಿತಾಮಹನು ತಿಲೋತ್ತಮೆಯೆಂಬ ಹೆಸರನ್ನಿಟ್ಟನು.

ಪಿತಾಮಹನು ಹೇಳಿದನು:

> “ತಿಲೋತ್ತಮೇ! ಅಸುರ ಸುಂದೋಪಸುಂದರ ಬಳಿ ಹೋಗು. ಭದ್ರೇ! ನಿನ್ನ ಈ ಪ್ರಾರ್ಥನೀಯ ರೂಪದಿಂದ ಅವರನ್ನು ಪ್ರಲೋಭಿಸು. ರೂಪಸಂಪತ್ತಿನ ನಿನ್ನನ್ನು ನೋಡಿದ ಕೂಡಲೇ ಅವರಲ್ಲಿ ಅನ್ಯೋನ್ಯ ವಿರೋಧವುಂಟಾಗುವಂತೆ ಮಾಡು.”

ಹಾಗೆಯೇ ಆಗಲೆಂದು ಪ್ರತಿಜ್ಞಾಪಿಸಿ ಅವಳು ಪಿತಾಮಹನನ್ನು

ಸಮಸ್ಕರಿಸಿ ಅಲ್ಲಿದ್ದ ವಿಭುಧ ಮಂಡಲಕ್ಕೆ ಪ್ರದಕ್ಷಿಣೆ ಮಾಡಿದಳು. ಭಗವಾನನು ಪೂರ್ವಾಭಿಮುಖನಾಗಿ ಕುಳಿತಿದ್ದನು. ದಕ್ಷಿಣದಲ್ಲಿ ಮಹೇಶ್ವರನಿದ್ದನು, ಉತ್ತರದಲ್ಲಿ ದೇವತೆಗಳು ಕುಳಿತಿದ್ದರು ಮತ್ತು ಋಷಿಗಳು ಸರ್ವತೋಮುಖ ಕುಳಿತಿದ್ದರು. ಅವಳು ಆ ಮಂಡಲವನ್ನು ಪ್ರದಕ್ಷಿಣೆ ಮಾಡುತ್ತಿರಲು ಇಂದ್ರ ಮತ್ತು ಭಗವಾನ್ ಸ್ಥಾಣುವು ಅಲುಗಾಡದೆ ಸ್ಥಿರವಾಗಿ ಕುಳಿತಿದ್ದರು. ಪಕ್ಕದಲ್ಲಿಯೇ ಹೋಗುತ್ತಿರುವ ಅವಳನ್ನು ನೋಡುವ ಆಸೆಯಿಂದ ಅವನ ದಕ್ಷಿಣಭಾಗದಲ್ಲಿ ಇನ್ನೊಂದು ಮುಖವು ಮೂಡಿತು. ಅವಳು ಹಿಂದೆ ಹಾಯುವಾಗ ಅವನ ಪಶ್ಚಿಮ ಭಾಗದಲ್ಲಿ ಇನ್ನೊಂದು ಮುಖವು ಹೊರಮೂಡಿತು. ಅವಳು ಉತ್ತರದ ಕಡೆ ಬರಲು ಅಲ್ಲಿಯೂ ಒಂದು ಮುಖವು ಮೂಡಿತು. ಮಹೇಂದ್ರನಿಗೆ ಕೂಡ ಪಕ್ಕದಲ್ಲಿ, ಹಿಂದೆ, ಮತ್ತು ಮುಂದೆ ಎಲ್ಲ ಕಡೆಯಲ್ಲಿ ಸಹಸ್ರಾರು ರಕ್ತಾಂತ ವಿಶಾಲ ಕಣ್ಣುಗಳು ಉದ್ಭವಿಸಿದವು. ಹೀಗೆ ಹಿಂದೆ ಮಹಾದೇವ ಸ್ಥಾಣುವು ಚತುರ್ಮುಖನಾದನು. ಹಾಗೆಯೇ ಬಲಸೂದನನು ಸಹಸ್ರನೇತ್ರನಾದನು. ಹಾಗೆ ತಿಲೋತ್ತಮೆಯು ಹೋದಕಡೆಗೆಲ್ಲಾ ದೇವ-ಋಷಿಗಳ ಮುಖಗಳು ತಿರುಗುತ್ತಿದ್ದವು. ಅವಳ ದೇಹದ ಮೇಲೆ ಬಿದ್ದಿದ್ದ - ದೇವ ಪಿತಾಮಹನನ್ನು ಬಿಟ್ಟು - ಉಳಿದ ಎಲ್ಲ ಮಹಾತ್ಮರ ದೃಷ್ಟಿಗಳು ಅಲ್ಲಿಯೇ ನೆಟ್ಟುಹೋದವು. ಅವಳು ಹೋಗುತ್ತಿರುವಾಗ ಅಲ್ಲಿರುವ ಸರ್ವ ದೇವತೆಗಳೂ ಪರಮ ಋಷಿಗಳೂ

“ಅವಳ ರೂಪಸಂಪತ್ತಿನಿಂದ ನಡೆಯ ಬೇಕಾದ ಕಾರ್ಯವು

ಆಗಿಯೇ ಆಗುತ್ತದೆ!”

ಎಂದು ಭಾವಿಸಿದರು. ತಿಲೋತ್ತಮೆಯು ಹೊರಟು ಹೋದ ನಂತರ ಲೋಕ ಭಾವನನು ಸರ್ವ ದೇವ ಋಷಿಗಣಗಳನ್ನು ವಿಸರ್ಜಿಸಿದನು.

ಆ ದೈತ್ಯರೀರ್ವರು ಪೃಥ್ವಿಯನ್ನು ಜಯಿಸಿ, ಎದುರಾಳಿಗಳಿಲ್ಲದೇ, ನಿಶ್ಚಿಂತೆಯಾಗಿ, ಮೂರೂ ಲೋಕಗಳನ್ನೂ ತಮ್ಮದಾಗಿಸಿಕೊಂಡು ಕೃತಕೃತ್ಯರಾಗಿದ್ದರು. ದೇವ-ಗಂಧರ್ವ-ಯಕ್ಷ-ನಾಗ-ಪಾರ್ಥಿವ-ರಾಕ್ಷಸರ ಸರ್ವ ರತ್ನಗಳನ್ನೂ ಪಡೆದು ಪರಾತುಷ್ಟರಾಗಿದ್ದರು. ಪ್ರತಿಸ್ಪರ್ಧಿಗಳು ಯಾರೂ ಎಲ್ಲಿಯೂ ಉಳಿಯದೇ ಇಲ್ಲವಾದುದರಿಂದ ನಿರುದ್ಯೋಗಿಗಳಾದ ಅಮರರಂತೆ ಅವರು ಪುಷ್ಕಲ ಸ್ತ್ರೀಯರು, ಮಾಲೆಗಳು, ಗಂಧ, ಭಕ್ಷ-ಭೋಜ್ಯಗಳಿಂದ ವಿಹರಿಸತೊಡಗಿದರು. ಅಮರರಂತೆ ಅವರು ಅಂತಃಪುರದಲ್ಲಿ, ವನೋದ್ಯಾನಗಳಲ್ಲಿ, ಪರ್ವತ ಉಪವನಗಳಲ್ಲಿ ಮತ್ತು ಮನಬಂದ ಪ್ರದೇಶಗಳಲ್ಲಿ ವಿಹರಿಸಿದರು. ಒಮ್ಮೆ ಅವರು ವಿಂಧ್ಯದ ಹಿಂಬಾಗದಲ್ಲಿ ಸಮಶಿಲಾತಲದಲ್ಲಿ ಹೂಬಿಟ್ಟ ಎತ್ತರ ಶಾಲವೃಕ್ಷಗಳ ಮಧ್ಯೆ ವಿಹರಿಸುತ್ತಿದ್ದರು. ಸರ್ವಕಾಮಗಳನ್ನೂ ಪೂರೈಸಬಲ್ಲ ವಸ್ತುಗಳನ್ನು ಅಲ್ಲಿಗೆ ಕೊಂಡೊಯ್ದಿದ್ದರು. ಸ್ತ್ರೀಯರೊಂದಿಗೆ ಅವರೀರ್ವರು ಸಂಹೃಷ್ಟರಾಗಿ ಶ್ರೇಷ್ಠ ಆಸನಗಳಲ್ಲಿ ಒರಗಿ ಕುಳಿತುಕೊಂಡಿದ್ದರು. ಅಲ್ಲಿ ಅವರನ್ನು ಸಂತೋಷಗೊಳಿಸಲು ಸ್ತ್ರೀಯರು ವಾದ್ಯ ನುಡಿಸುತ್ತಾ, ನೃತ್ಯ ಮಾಡುತ್ತಾ, ಸ್ತುತಿಸಂಯುಕ್ತ ಗೀತೆಗಳನ್ನು ಹಾಡುತ್ತಾ ನಿಂತಿದ್ದರು. ಆಗ ಆ ವನದಲ್ಲಿ

ತಿಲೋತ್ತಮೆಯು, ಕಾಮವನ್ನು ಹೆಚ್ಚಿಸುವ ಒಂದೇ ಒಂದು ಕೆಂಪು ವಸ್ತ್ರವನ್ನುಟ್ಟು, ಹೂಗಳನ್ನು ಕೊಯ್ಯುತ್ತಾ ಕಾಣಿಸಿಕೊಂಡಳು. ನದೀತೀರದಲ್ಲಿ ಹುಟ್ಟಿದ್ದ ಕರ್ಣಿಕೆಗಳನ್ನು ಕೊಯ್ಯುತ್ತಾ ಅವಳು ನಿಧಾನವಾಗಿ ಆ ಮಹಾಸುರರು ಇದ್ದ ಸ್ಥಳಕ್ಕೆ ಬಂದಳು. ಶ್ರೇಷ್ಠ ಮದಿರವನ್ನು ಕುಡಿದ ಮದೋನ್ಮತ್ತ ರಕ್ತಾಂತಲೋಚನರು ಆ ವರಾರೋಹೆಯನ್ನು ಕಂಡೊಡನೆಯೇ ವ್ಯಥಿತರಾದರು. ಕಾಮಸಮನ್ವಿತ ಅವರಿಬ್ಬರೂ ತಮ್ಮ ಆಸನಗಳಿಂದ ಜಿಗಿದೆದ್ದು ಅವಳಿದ್ದ ಕಡೆ ಹೋಗಿ ಅವಳನ್ನು ಯಾಚಿಸಿದರು. ಸುಂದನು ಆ ಸುಭ್ರುವಿನ ಎಡಗೈಯನ್ನು ಹಿಡಿದನು ಮತ್ತು ಉಪಸುಂದನು ತಿಲೋತ್ತಮೆಯ ಬಲ ಕೈಯನ್ನು ಹಿಡಿದನು. ವರಪ್ರದಾನಮತ್ತರಾದ, ದೇಹಬಲದಿಂದ ಹಿಗ್ಗಿದ್ದ, ಕೂಡಿಟ್ಟ ಧನರತ್ನಗಳಿಂದ, ಸುರಾಪಾನಮದದಿಂದ, ಹೀಗೆ ಎಲ್ಲ ರೀತಿಗಳಲ್ಲಿ ಹುಚ್ಚಾದ ಅವರು ಅನ್ಯೋನ್ಯರನ್ನು ದುರುಗುಟ್ಟಿ ನೋಡಿದರು. ಆ ಮದಕಾಮಸಮಾವಿಷ್ಟರು ಪರಸ್ಪರರಲ್ಲಿ ಕೂಗಾಡಿದರು.

"ನನ್ನ ಹೆಂಡತಿ ನಿನಗೆ ಹಿರಿಯವಳು!"

ಎಂದು ಸುಂದನು ಹೇಳಿದನು.

"ನನ್ನ ಹೆಂಡತಿ ನಿನಗೆ ಸೊಸೆ!"

ಎಂದು ಉಪಸುಂದನು ಹೇಳಿದನು.

ಸಿಟ್ಟಿನಿಂದ ಆವೇಶಗೊಂಡ ಅವರು "ನಿನ್ನವಳಲ್ಲ! ನನ್ನವಳು!" ಎಂದು




ಅವಳ ಸಲುವಾಗಿ ಭಯಂಕರ ಗದೆಗಳನ್ನು ಎತ್ತಿಕೊಂಡರು. ಅವರವರ ಭಯಂಕರ ಗದೆಗಳನ್ನು ಹಿಡಿದು ಕಾಮಮೋಹಿತರಾದ ಅವರು ನಾನು ಮೊದಲು ತಾನು ಮೊದಲು ಎನ್ನುತ್ತಾ ಅನ್ಯೋನ್ಯರನ್ನು ಹೊಡೆದರು. ಗದೆಗಳಿಂದ ಹೊಡೆಯಲ್ಪಟ್ಟ ಆ ಭಯಂಕರರು ರಕ್ತಲಿಪ್ತಾಂಗರಾಗಿ ಎರಡು ಸೂರ್ಯಗಳು ನಭದಿಂದ ಬೀಳುವಂತೆ ಭೂಮಿಯ ಮೇಲೆ ಬಿದ್ದರು. ಆಗ ಅಲ್ಲಿದ್ದ ನಾರಿಯರು ಮತ್ತು ದೈತ್ಯಗಣ ಎಲ್ಲವೂ ವಿಷಾದಭಯಕಂಪಿತರಾಗಿ ಪಾತಾಲವನ್ನು ಸೇರಿದರು. ಆಗ ದೇವಮಹರ್ಷಿಗಳನ್ನೊಡಗೊಂಡು ವಿಶುದ್ಧಾತ್ಮ ಪಿತಾಮಹನು ಅಲ್ಲಿಗೆ

ಬಂದು ತಿಲೋತ್ತಮೆಯನ್ನು ಸತ್ಕರಿಸಿದನು. ಬ್ರಹ್ಮನು "ವರವನ್ನು ಕೇಳು!" ಎನ್ನಲು ಅವಳು ಬ್ರಹ್ಮನಿಂದ ಪ್ರೀತಿಯನ್ನೇ ವರವನ್ನಾಗಿ ಕೇಳಿದಳು. ಅವಳಿಂದ ಪ್ರೀತನಾದ ಪಿತಾಮಹನು ಹೇಳಿದನು:

"ಭಾಮಿನಿ! ಆದಿತ್ಯರಿಂದೊಡಗೂಡಿ ಲೋಕಗಳನ್ನು ಸಂಚರಿಸುತ್ತೀಯೆ! ನಿನ್ನ ತೇಜಸ್ಸಿನಿಂದಾಗಿ ನಿನ್ನನ್ನು ಯಾರೂ ಎಂದೂ ತುಂಬಾ ಹೊತ್ತು ನೋಡಲು ಶಕ್ಯರಾಗುವುದಿಲ್ಲ!"

ಅವಳಿಗೆ ಈ ರೀತಿ ವರವನ್ನಿತ್ತು ಸರ್ವಲೋಕಪಿತಮಹ ಪ್ರಭುವು ಇಂದ್ರನಿಗೆ ತ್ರೈಲೋಕ್ಯವನ್ನಿತ್ತು ಬ್ರಹ್ಮಲೋಕಕ್ಕೆ ಹೋದನು. ಈ ರೀತಿ ಎಲ್ಲ ವಿಷಯಗಳಲ್ಲಿಯೂ ಒಟ್ಟಿಗೇ ಒಂದೇ ನಿಶ್ಚಯಗಳನ್ನಿಟ್ಟುಕೊಂಡಿದ್ದ ಆ ದಾನವರು ತಿಲೋತ್ತಮೆಗಾಗಿ ಸಂಕೃದ್ಧರಾಗಿ ಅನ್ಯೋನ್ಯರನ್ನು ಸಂಹರಿಸಿದರು.

# ಸಾರಂಗಗಳು

[ಸಾರಂಗಗಳ ಈ ಕಥೆಯು ವ್ಯಾಸ ಮಹಾಭಾರತದ ಆದಿ ಪರ್ವದ ಖಾಂಡವದಾಹ ಪರ್ವ (ಅಧ್ಯಾಯ ೨೨೦-೨೨೫) ದಲ್ಲಿ ಬರುತ್ತದೆ. ಖಾಂಡವ ದಹನದಲ್ಲಿ ಸುಟ್ಟುಹೋಗದ ಉಳಿದ ನಾಲ್ಕು ಸಾರಂಗಗಳ ಕುರಿತು ಜನಮೇಜಯನು ಕೇಳಿದಾಗ ಈ ಕಥೆಯನ್ನು ಮುನಿ ವೈಶಂಪಾಯನನು

ಹೇಳಿದನು.]

ಮಂದಪಾಲನೆಂದು ಪ್ರಸಿದ್ಧ ಧರ್ಮಜ್ಞರಲ್ಲಿ ಮುಖ್ಯತಮ ಸಂಶಿತವ್ರತ ತಪಸ್ವಿ ಮಹರ್ಷಿಯಿದ್ದನು. ಊರ್ಧ್ವರೇತಸ ಋಷಿಗಳ ಮಾರ್ಗವನ್ನು ಹಿಡಿದಿದ್ದ ಆ ವಿಜಿತೇಂದ್ರಿಯ ತಪಸ್ವಿಯು ಧರ್ಮರತನಾಗಿ ಸ್ವಾಧ್ಯಾಯದಲ್ಲಿ ನಿರತನಾಗಿದ್ದನು. ತಪಸ್ಸಿನ ಪರಾಕಾಷ್ಟೆಯನ್ನು ತಲುಪಿದ ಅವನು ದೇಹವನ್ನು ತೊರೆದು ಪಿತೃಲೋಕವನ್ನು ಸೇರಿದನು. ಆದರೆ ಅಲ್ಲಿ ಅವನಿಗೆ ಫಲವು ದೊರೆಯಲಿಲ್ಲ. ಗಳಿಸಿದ್ದರೂ ತನ್ನ ತಪಸ್ಸಿನಿಂದ ಫಲವು ದೊರೆಯದೇ ಇದ್ದ ಲೋಕಗಳನ್ನು ಕಂಡ ಅವನು ಧರ್ಮರಾಜನ ಸಮೀಪದಲ್ಲಿ ಕುಳಿತಿದ್ದ ದಿವೌಕಸರಿಗೆ ಕೇಳಿದನು:

> "ನಾನು ತಪಸ್ಸಿನಿಂದ ಗಳಿಸಿದ ಈ ಲೋಕಗಳು ನನಗೆ ಏಕೆ ಮುಚ್ಚಿಹೋಗಿವೆ? ನಾನು ಏನನ್ನು ಮಾಡಿಲ್ಲವೆಂದು ಇದು ನನ್ನ ಕರ್ಮ ಫಲವಾಗಿದೆ? ಯಾವುದರಿಂದಾಗಿ ನನ್ನ ತಪಸ್ಸಿನ ಫಲವು ದೊರೆಯದೇ ಇದೆಯೋ ಅದನ್ನು ಮಾಡುತ್ತೇನೆ. ಹೇಳಿರಿ."

ದೇವತೆಗಳು ಹೇಳಿದರು:

> "ಬ್ರಹ್ಮನ್! ಮಾನವರು ಯಾವುದಕ್ಕೆ ಋಣಿಗಳಾಗಿ ಹುಟ್ಟುತ್ತಾರೆ ಎನ್ನುವುದನ್ನು ಕೇಳು: ಕ್ರಿಯೆ, ಬ್ರಹ್ಮಚರ್ಯ ಮತ್ತು ಸಂತಾನ. ಇದರಲ್ಲಿ ಸಂಶಯವಿಲ್ಲ. ಇವೆಲ್ಲವುಗಳನ್ನೂ

> ಯಜ್ಞ, ತಪಸ್ಸು ಮತ್ತು ಸುತರಿಂದ ತೀರಿಸಬಹುದು. ನೀನು ತಪಸ್ವಿ ಮತ್ತು ಯಜ್ಞಕರ್ತೃವಾಗಿದ್ದೀಯೆ. ಆದರೆ ನಿನಗೆ ಮಕ್ಕಳಿಲ್ಲ. ಪು ಎಂಬ ಹೆಸರಿನ ನರಕದಿಂದ ಪಿತೃಗಳನ್ನು ಪಾರುಮಾಡುವವನನ್ನು ಪುತ್ರ ಎಂದು ಕರೆಯುತ್ತಾರೆ. ಆದುದರಿಂದ ಕುಲವನ್ನು ಮುಂದುವರೆಸಿಕೊಂಡು ಹೋಗುವ ಸಂತಾನಕ್ಕೆ ಪ್ರಯತ್ನಿಸು.”

ದಿವೌಕಸರ ಆ ಮಾತುಗಳನ್ನು ಕೇಳಿದ ಮಂದಪಾಲನು ತಾನು ಎಲ್ಲಿ ಶೀಘ್ರವಾಗಿ ಬಹಳ ಮಕ್ಕಳನ್ನು ಪಡೆಯಬಹುದು ಎಂದು ಯೋಚಿಸಿದನು. ಹೀಗೆ ಯೋಚಿಸುತ್ತಿರುವಾಗ ಪಕ್ಷಿಗಳಿಗೆ ಬಹಳ ಮಕ್ಕಳು ಆಗುತ್ತವೆ ಎಂಬ ಯೋಚನೆಯು ಅವನಿಗೆ ಬಂದಿತು. ಅವನು ಶಾಂಗ್ರ್ಯಕನಾಗಿ ಜರಿತಾ ಎನ್ನುವ ಶಾಂಗ್ರ್ಯಕೆಯೊಡನೆ ಸೇರಿದನು. ಅವಳಲ್ಲಿ ಅವನು ಬ್ರಹ್ಮವಾದಿಗಳಾದ ನಾಲ್ಕು ಪುತ್ರರನ್ನು ಪಡೆದನು. ಇನ್ನೂ ಅಂಡದಲ್ಲಿಯೇ ಇದ್ದ ತನ್ನ ಬಾಲ ಸುತರನ್ನು ತಾಯಿಯೊಡನೆ ವನದಲ್ಲಿಯೇ ಬಿಟ್ಟು ಆ ಮುನಿಯು ಲಪಿತಳ ಕಡೆ ಹೊರಟುಹೋದನು. ಆ ಮಹಾಭಾಗನು ಲಪಿತೆಯ ಕಡೆ ಹೊರಟುಹೋದ ನಂತರ ಜರಿತೆಯು ಮಕ್ಕಳ ಮೇಲಿನ ಪ್ರೀತಿಯಿಂದಾಗಿ ಬಹಳ ಚಿಂತಿಸಿದಳು. ಇನ್ನೂ ಹುಟ್ಟದೇ ಅಂಡದಲ್ಲಿಯೇ ಇದ್ದ ಆ ಪುತ್ರ ಋಷಿಗಳನ್ನು ಖಾಂಡವವನದಲ್ಲಿ ಆರ್ತ ಜರಿತೆಯು ಬಿಟ್ಟು ಹೋಗಲಾರದೇ ಸ್ನೇಹವಿಹ್ವಲಳಾಗಿ ಹುಟ್ಟಿದ ಅವರನ್ನು ಪಾಲಿಸಿದಳು.

ನಂತರ ಅಗ್ನಿಯು ಖಾಂಡವವನ್ನು ಸುಡಲು ಬರುತ್ತಿರುವುದನ್ನು ನೋಡಿದ ಋಷಿ ಮಂದಪಾಲನು ಲಪಿತಳೊಡನೆ ಆ ವನಕ್ಕೆ ಧಾವಿಸಿದನು. ಅವನ ಸಂಕಲ್ಪವನ್ನು ತಿಳಿದು ಮತ್ತು ಪುತ್ರರು ಬಾಲಕರೆಂದು ತಿಳಿದು ಆ ವಿಪ್ರರ್ಷಿ ಬ್ರಾಹ್ಮಣನು ತನ್ನ ಪುತ್ರರ ರಕ್ಷಣೆಗೆ ಭೀತನಾಗಿ ಮಹೌಜಸ ಲೋಕಪಾಲ ಜಾತವೇದಸನನ್ನು ಸ್ತುತಿಸ ತೊಡಗಿದನು:

> "ಅಗ್ನಿ! ನೀನು ಸರ್ವದೇವತೆಗಳ ಬಾಯಿ! ನೀನು ಹವ್ಯವನ್ನು ಸಾಗಿಸುವವನು! ನೀನು ಸರ್ವಭೂತಗಳ ಅಂತರಾಳದಲ್ಲಿ ಗೂಢವಾಗಿದ್ದೀ! ಕವ್ಯರು ನಿನ್ನನ್ನು ಒಂದೇ ಎಂದು ಕರೆಯುತ್ತಾರೆ ಆದರೆ ಪುನಃ ತ್ರಿವಿಧವೆಂದೂ ಕರೆಯುತ್ತಾರೆ. ನಿನ್ನನ್ನು ಅಷ್ಟಧಾ ಎಂದು ಕಲ್ಪಿಸಿ ಯಜ್ಞವಾಹನನೆಂದೂ ಕಲ್ಪಿಸುತ್ತಾರೆ. ನೀನು ಈ ವಿಶ್ವವನ್ನು ಸೃಷ್ಟಿಸಿದವನು ಎಂದು ಪರಮಋಷಿಗಳು ಹೇಳುತ್ತಾರೆ. ಹುತಾಶನ! ನೀನಿಲ್ಲದೇ ಈ ಜಗತ್ತು ಕ್ಷಣಮಾತ್ರದಲ್ಲಿ ಅದೃಶ್ಯವಾಗಿಬಿಡುತ್ತದೆ! ವಿಪ್ರರು ಪತ್ನಿ ಮತ್ತು ಸುತರ ಸಹಿತ ನಿನ್ನನ್ನು ನಮಸ್ಕರಿಸಿಯೇ ಸ್ವಕರ್ಮಗಳನ್ನು ಮಾಡಲು ಶಾಶ್ವತ ಜಯದ ದಾರಿಯಲ್ಲಿ ನಡೆಯುತ್ತಾರೆ. ನೀನು ತಮ್ಮ ಮಿಂಚುಗಳಿಂದ ಪೂರ್ವದಿಕ್ಕಿನ ಆಕಾಶವನ್ನು ಮುಟ್ಟುವ ಮೋಡಗಳೆಂದು ಹೇಳುತ್ತಾರೆ. ನಿನ್ನ ಮುಖದಿಂದ ಹೊರಬರುವ ಜ್ವಾಲೆಯು ಸರ್ವಭೂತಗಳನ್ನು ಸುಡುತ್ತದೆ. ಮಹಾದ್ಯುತೇ! ಜಾತವೇದ! ಈ ವಿಶ್ವವು ನಿನ್ನದೇ

ಸೃಷ್ಟಿ! ಸರ್ವ ಕರ್ಮಗಳೂ ಚರಾಚರ ಭೂತಗಳೂ ನಿನ್ನಿಂದಲೇ ವಿಹಿತವಾಗಿವೆ. ಹಿಂದೆ ನೀರು ನಿನ್ನಿಂದಲೇ ವಿಹಿತವಾಗಿತ್ತು. ಈ ಸರ್ವ ಜಗತ್ತೂ ನಿನ್ನಿಂದಲೇ ವಿಹಿತವಾಗಿದೆ. ಹವ್ಯ ಕವ್ಯಗಳೆಲ್ಲವೂ ಯಥಾವತ್ತಾಗಿ ನಿನ್ನನ್ನೇ ಆಧರಿಸಿವೆ. ಅಗ್ನಿ! ನೀನೇ ಜ್ವಲನ! ನೀನೇ ಧಾತಾ ಮತ್ತು ಬೃಹಸ್ಪತಿ! ನೀನೆ ಅಶ್ವಿನೀ ದೇವತೆಗಳು! ಯಮ, ಮಿತ್ರ, ಸೋಮ ಮತ್ತು ಅನಿಲನೂ ನೀನೇ!"

ಮಂದಪಾಲನ ಈ ಸ್ತುತಿಯಿಂದ ಪಾವಕನು ಆ ಅಮಿತತೇಜಸ ಮುನಿಯಲ್ಲಿ ಸಂತುಷ್ಟನಾದನು. ಪ್ರೀತಾತ್ಮನಾಗಿ ಅವನಲ್ಲಿ "ನಿನಗಿಷ್ಟವಾದ ಏನನ್ನು ಮಾಡಲಿ?" ಎಂದು ಕೇಳಿದನು. ಮಂದಪಾಲನು ಅಂಜಲೀಬದ್ಧನಾಗಿ ಹವ್ಯವಾಹನನಿಗೆ ಹೇಳಿದನು:

"ಖಾಂಡವವನವನ್ನು ದಹಿಸುವಾಗ ನನ್ನ ಪುತ್ರರನ್ನು ಬಿಟ್ಟುಬಿಡು!"

ಭಗವಾನ್ ಹವ್ಯವಾಹನನು ಹಾಗೆಯೇ ಆಗಲೆಂದು ಉತ್ತರಿಸಿ, ಅದೇ ಸಮಯದಲ್ಲಿ ಖಾಂಡವವನವನ್ನು ಸುಡುವ ಇಚ್ಛೆಯಿಂದ ತನ್ನ ಜ್ವಾಲೆಗಳನ್ನು ಪಸರಿಸಿದನು.

ಅಗ್ನಿಯು ಪ್ರಜ್ವಲಿಸುತ್ತಿರುವಾಗ ಸುದುಃಖಿತ ಶಾಂಗ್ರಕಗಳು ವ್ಯಥಿತ-ಪರಮೋದ್ವಿಗ್ನರಾಗಿ ವಿಮೋಚನೆಯ ದಾರಿಯನ್ನೇ ಕಾಣದಾದರು. ಬಾಲ ಪುತ್ರರನ್ನು ನೋಡಿ ಅವರ ಮಾತೆ ತಪಸ್ವಿನೀ ಜರಿತೆಯು

ದುಃಖಸಂತಪ್ತಳಾಗಿ ವಿಲಪಿಸಿದಳು:

“ಈ ಭೀಷಣ ಅಗ್ನಿಯು ಹುಲ್ಲುಗಳನ್ನು ಸುಡುತ್ತಾ, ಜಗತ್ತನೇ ಉರಿಸುತ್ತಾ ಭಯಂಕರನಾಗಿ ಇಲ್ಲಿಗೇ ಬರುತ್ತಿದ್ದಾನೆ ಮತ್ತು ನನ್ನ ದುಃಖವನ್ನು ಹೆಚ್ಚಿಸುತ್ತಿದ್ದಾನೆ. ಕೈಕಾಲುಗಳಿಲ್ಲದ ಆದರೂ ನಮ್ಮ ಪೂರ್ವಜರ ಪರಾಯಣರಾದ ಈ ಮಂದಚೇತಸ ಶಿಶುಗಳು ನನ್ನನ್ನು ಎಳೆಯುತ್ತಿವೆ. ಇಗೋ! ಮರಗಳನ್ನು ನೆಕ್ಕುತ್ತಾ ಈ ಭೀಷಣ ಅಗ್ನಿಯು ಬರುತ್ತಿದೆ! ಅಶಕ್ತರಾದ ನನ್ನ ಈ ಮಕ್ಕಳು ತಪ್ಪಿಸಿಕೊಳ್ಳಲು ಶಕ್ತರಿಲ್ಲ. ನಾನೇ ಈ ಮಕ್ಕಳನ್ನು ಎತ್ತಿಕೊಂಡು ಹೋಗೋಣವೆಂದರೆ ನನಗೂ ದಾರಿಯಿಲ್ಲ! ನಾನು ಇವರನ್ನು ಇಲ್ಲಿಯೇ ಬಿಟ್ಟುಹೋಗಲೂ ಸಾಧ್ಯವಿಲ್ಲ. ನನ್ನ ಹೃದಯವು ಎರಡಾಗಿದೆ. ನನ್ನ ಮಕ್ಕಳಲ್ಲಿ ಯಾರನ್ನು ಬಿಟ್ಟು ಹೋಗಲಿ ಯಾರನ್ನು ಕರೆದುಕೊಂಡು ಹೋಗಲಿ? ನಾನು ಏನುತಾನೆ ಮಾಡಬಲ್ಲೆ? ಪುತ್ರರೇ! ನಿಮ್ಮ ಅಭಿಪ್ರಾಯಗಳೇನು? ನಿಮ್ಮ ವಿಮೋಚನೆಗೆ ಎಷ್ಟು ಚಿಂತಿಸಿದರೂ ನನಗೆ ದಾರಿಯೇ ತೋಚುತ್ತಿಲ್ಲ. ನನ್ನ ದೇಹದಿಂದ ನಿಮ್ಮನ್ನು ಮುಚ್ಚಿ ನಿಮ್ಮೊಂದಿಗೆ ನಾನೂ ಸಾಯುತ್ತೇನೆ. ಜ್ಯೇಷ್ಠ ಜರಿತಾರಿಯ ಮೇಲೆ ಈ ಕುಲವು ನಿಂತಿದೆ. ಸಾರಿಸೃಕ್ವನು ಪುತ್ರರನ್ನು ಪಡೆದು ಪಿತೃಗಳ ಕುಲವನ್ನು ವರ್ಧಿಸುತ್ತಾನೆ. ಸ್ತಂಬಮಿತ್ರನು ತಪಸ್ವಿಯಾಗುತ್ತಾನೆ ಮತ್ತು ದ್ರೋಣನು ಉತ್ತಮ ಬ್ರಹ್ಮವಿದ್ವಾಂಸನಾಗುತ್ತಾನೆ.

ಇದೇ ಮಾತುಗಳನ್ನು ಹೇಳಿ ನಿಮ್ಮ ಆ ಕಠೋರ ತಂದೆಯು ಹಿಂದೆ ಹೊರಟುಹೋದನು. ಯಾರನ್ನು ತೆಗೆದುಕೊಂಡು ಓಡಿ ಹೋಗಲಿ? ಯಾರ ಮೇಲೆ ಈ ಅತಿ ದೊಡ್ಡ ಆಪತ್ತು ಬರುತ್ತದೆ?"

ಈ ರೀತಿ ಯಾವುದನ್ನು ಮಾಡುವುದು ಒಳ್ಳೆಯದು ಎಂದು ವಿಹ್ವಲಳಾಗಿ ಅನಲನಿಂದ ತನ್ನ ಸುತರು ಹೇಗೆ ಬಿಡಿಸಿಕೊಳ್ಳಬಹುದು ಎನ್ನುವುದನ್ನು ಕಾಣಲಾರದೇ ಹೋದಳು. ಈ ರೀತಿ ಅವಳು ಹೇಳುತ್ತಿರಲು ಆ ಶಾಂಙ್ಕ ಪಕ್ಷಿಗಳು ತಾಯಿಗೆ ಉತ್ತರಿಸಿದವು:

"ಮಾತಾ! ನೀನು ಸ್ನೇಹಭಾವವನ್ನು ತೊರೆದು ಹವ್ಯವಾಹನನು ಇಲ್ಲದೇ ಇರುವ ಸ್ಥಳಕ್ಕೆ ಹೋಗು. ನಾವು ವಿನಷ್ಟರಾದರೂ ನಿನಗೆ ಇನ್ನೂ ಮಕ್ಕಳಾಗುತ್ತವೆ. ಆದರೆ ಮಾತೆಯಾದ ನೀನೇ ವಿನಷ್ಟಳಾದರೆ ಕುಲಸಂತತಿಯು ಇಲ್ಲದಂತಾಗುತ್ತದೆ. ಈ ಎರಡು ಪರಿಣಾಮಗಳ ಕುರಿತು ಯೋಚಿಸಿ ಕುಲದ ಒಳಿತಿಗೆ ಏನನ್ನು ಮಾಡುವುದು ಸರಿಯೆನಿಸುತ್ತದೆಯೋ ಅದನ್ನು ಮಾಡು. ಇದಕ್ಕೆ ಸರಿಯಾದ ಕಾಲವು ಬಂದಿದೆ. ನಿನ್ನ ಸುತರ ಮೇಲಿನ ಸ್ನೇಹದಿಂದ ನಿನ್ನ ಕುಲವಿನಾಶದ ಕಡೆ ಎಳೆದೊಯ್ಯಲ್ಪಡಬೇಡ. ಲೋಕಕಾಮಕ್ಕಾಗಿ ಮಾಡಿದ ಈ ಕಾರ್ಯವು ಎಂದೂ ನಿಷ್ಫಲವಾಗುವುದಿಲ್ಲ."

ಜರಿತಳು ಹೇಳಿದಳು:

"ಈ ವೃಕ್ಷದ ಸಮೀಪದಲ್ಲಿ ಭೂಮಿಯೊಳಗೆ ಒಂದು ಇಲಿಯ ಬಿಲವಿದೆ. ತಕ್ಷಣವೇ ಅದನ್ನು ಪ್ರವೇಶಿಸಿ. ಅಲ್ಲಿ ನಿಮಗೆ ಅಗ್ನಿಯ ಭಯವಿರುವುದಿಲ್ಲ. ಮಕ್ಕಳೇ! ಆಗ ನಾನು ಮಣ್ಣಿನಿಂದ ಬಿಲದ ಬಾಯಿಯನ್ನು ಮುಚ್ಚುತ್ತೇನೆ. ಹೀಗೆ ಜ್ವಲಿಸುತ್ತಿರುವ ಕೃಷ್ಣವರ್ತ್ಮನನಿಂದ ತಪ್ಪಿಸಿಕೊಳ್ಳಬಹುದು. ಅಗ್ನಿಯು ಆರಿಹೋದ ನಂತರ ಮಣ್ಣಿನ ರಾಶಿಯನ್ನು ತೆಗೆಯಲು ನಾನು ಹಿಂದಿರುಗಿ ಬರುತ್ತೇನೆ. ಹುತಾಶನನಿಂದ ತಪ್ಪಿಸಿಕೊಳ್ಳಲು ಈ ಉಪಾಯವನ್ನು ನೀವು ಒಪ್ಪಿಕೊಳ್ಳುತ್ತೀರಾ?"

ಶಾಂಙ್ರ್ಯಕಗಳು ಹೇಳಿದವು:

"ರೆಕ್ಕೆಗಳೇ ಇಲ್ಲದ ಮಾಂಸದ ಮುದ್ದೆಗಳು ನಾವು. ಮಾಂಸಾಹಾರಿ ಇಲಿಯು ನಮ್ಮನು ವಿನಾಶಗೊಳಿಸುತ್ತದೆ. ಈ ಭಯವನ್ನು ಕಂಡರೆ ಅಲ್ಲಿ ನಾವು ಉಳಿಯಲು ಸಾಧ್ಯವಿಲ್ಲ. ಅಗ್ನಿಯು ನಮ್ಮನ್ನು ಹೇಗೆ ಸುಡದೇ ಇರುತ್ತಾನೆ ಅಥವಾ ಹೇಗೆ ಇಲಿಯು ನಮ್ಮನ್ನು ಭಕ್ಷಿಸದೇ ಇರುತ್ತದೆ? ತಂದೆಗೆ ಸೋಲಲ್ಲದೇ ಇನ್ನೇನಾದರೂ ಆಗುವುದು ಹೇಗೆ? ತಾಯಿಯು ಉಳಿಯುವುದಾದರೂ ಹೇಗೆ? ಪಕ್ಷಿಗಳು ಬೆಂಕಿಯಲ್ಲಿ ಅಥವಾ ಬಿಲದಲ್ಲಿ ಇಲಿಯಿಂದ ಸಾವನ್ನು ಕಾಣುತ್ತವೆ. ಇವೆರಡನ್ನೂ

ನೋಡಿದರೆ ಸುಟ್ಟುಹೋಗುವುದು ತಿನ್ನಲ್ಪಡುವುದಕ್ಕಿಂತ ಒಳ್ಳೆಯದು. ಬಿಲದಲ್ಲಿ ಇಲಿಯಿಂದ ತಿನ್ನಲ್ಪಟ್ಟು ಸತ್ತರೆ ಅದು ಹೀನ ಮರಣವಾಗುತ್ತದೆ. ಆದರೆ ಹುತಾಶನನಲ್ಲಿ ಶರೀರ ಪರಿತ್ಯಾಗವನ್ನು ಶಿಷ್ಟರು ಒಳ್ಳೆಯದೆಂದು ಹೇಳುತ್ತಾರೆ."

ಜರಿತಳು ಹೇಳಿದಳು:

"ಇಲಿಯು ಈ ಬಿಲದಿಂದ ಹೊರಬಂದಿತು ಮತ್ತು ಒಂದು ಗಿಡುಗವು ತನ್ನ ಪಂಜಗಳಿಂದ ಅದನ್ನು ಎತ್ತಿಕೊಂಡು ಹಾರಿಹೋಯಿತು. ನೀವು ಇನ್ನು ಭಯಪಡಬೇಕಾದುದು ಏನೂ ಇಲ್ಲ."

ಶಾಂಙ್ರ್ಯಕಗಳು ಹೇಳಿದವು:

"ಗಿಡುಗವು ಇಲಿಯನ್ನು ಎತ್ತಿಕೊಂಡು ಹೋಯಿತು ಎನ್ನುವುದು ನಮಗೆ ತಿಳಿಯಲೇ ಇಲ್ಲ. ಈ ಬಿಲದಲ್ಲಿ ಇನ್ನೂ ಇತರ ಇಲಿಗಳು ಇರಬಹುದು. ನಮಗೆ ಅವುಗಳ ಭಯವಾಗುತ್ತದೆ. ಗಾಳಿಯು ಹಿಂದಿರುಗಿದ ಹಾಗೆ ಕಾಣುತ್ತದೆ. ಅಗ್ನಿಯು ಇಲ್ಲಿಗೆ ಬರುತ್ತಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಮಾತಾ! ಬಿಲದಲ್ಲಿ ವಾಸಿಸುವವರಿಂದ ನಮಗೆ ಮೃತ್ಯು ಆಗುತ್ತದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಸಂಶಯವಿದ್ದವರನ್ನು ಸಾವು ಗೆಲ್ಲುತ್ತದೆ ಎನ್ನುವುದು ನಿಃಸಂಶಯ. ಈಗ ನೀನು ಆಕಾಶಕ್ಕೆ ಹಾರು. ನಮಗಿಂತಲೂ ಸುಂದರ ಪುತ್ರರನ್ನು

ಪಡೆಯುವೆ.”

ಜರಿತಳು ಹೇಳಿದಳು:

“ಆ ಬಲಶಾಲಿ ಗಿಡುಗವು ಬಿಲದ ಹತ್ತಿರ ಬಂದಿದ್ದುದನ್ನು, ಹತ್ತಿರ ಸುಳಿದಾಡಿದ್ದುದನ್ನು, ಮತ್ತು ಇಲಿಯನ್ನು ಹಿಡಿದು ಬಿಲದಿಂದ ಎತ್ತಿಕೊಂಡು ಹಾರಿ ಹೋಗಿದ್ದುದನ್ನು ನಾನೇ ನೋಡಿದ್ದೇನೆ. ಅದು ಹಾರಿದ ತಕ್ಷಣವೇ ಆ ಗಿಡುಗದ ಹಿಂದೆ ನಾನೂ ಹಾರಿಹೋದೆ ಮತ್ತು ಆ ಬಿಲದಿಂದ ಇಲಿಯನ್ನು ತೆಗೆದುಕೊಂಡು ಹೋಗಿದ್ದುದಕ್ಕೆ ನಾನು ಅದಕ್ಕೆ ಆಶೀರ್ವದಿಸಿದೆ. ನಮ್ಮ ವೈರಿಯನ್ನು ಎತ್ತಿಕೊಂಡು ಹಾರಿ ಹೋಗುತ್ತಿರುವ ಶ್ಯೇನರಾಜನೇ! ನೀನು ನಿರಮಿತ್ರ ಹಿರಣ್ಮಯ ದಿವವನ್ನು ಹೊಂದು! ಹಸಿವೆಯಿಂದಿದ್ದ ಆ ಪಕ್ಷಿಯು ಅದನ್ನು ತಿಂದ ಬಳಿಕ ಅದರ ಅನುಜ್ಞೆಯನ್ನು ಪಡೆದು ನನ್ನ ಮನೆಗೆ ಹಿಂದಿರುಗಿದೆನು. ಪುತ್ರರೇ! ವಿಶ್ವಾಸದಿಂದ ಬಿಲವನ್ನು ಪ್ರವೇಶಿಸಿ. ಭಯಪಡಬೇಕಾದದ್ದು ಏನೂ ಇಲ್ಲ. ಗಿಡುಗವು ಇಲಿಯನ್ನು ಎತ್ತಿಕೊಂಡು ಹೋಗಿದ್ದುದನ್ನು ನಾನು ನೋಡಿದ್ದೇನೆ. ಅದರಲ್ಲಿ ಸಂಶಯವೇ ಇಲ್ಲ.”

ಶಾಂಙ್ರಕಗಳು ಹೇಳಿದವು:

“ಮಾತಾ! ಇಲಿಯನ್ನು ಎತ್ತಿಕೊಂಡು ಹೋಗಿದ್ದುದು ನಮಗೆ ತಿಳಿದಿಲ್ಲ. ಅದನ್ನು ತಿಳಿಯದೇ ನಾವು ಬಿಲವನ್ನು

ಪ್ರವೇಶಿಸುವುದು ಅಶಕ್ಯ."

ಜರಿತಾಳು ಹೇಳಿದಳು:

"ಆದರೆ ಗಿಡುಗವು ಇಲಿಯನ್ನು ಎತ್ತಿಕೊಂಡು ಹೋಯಿತು ಎಂದು ನನಗೆ ಸಂಪೂರ್ಣ ತಿಳಿದಿದೆ. ಆದುದರಿಂದ ಭಯಪಡಬೇಕಾಗಿದ್ದುದು ಇಲ್ಲ. ನಾನು ಹೇಳಿದಂತೆ ಮಾಡಿರಿ."

ಶಾಂಙ್ಗ್ರಕಗಳು ಹೇಳಿದವು:

"ಮಿಥ್ಯೋಪಚಾರದಿಂದ ನೀನು ನಮ್ಮ ಈ ಮಹಾಭಯವನ್ನು ಹೋಗಲಾಡಿಸಲಾರೆ. ಒಂದೇ ಕುಲದ ಬಾಂಧವರೊಡನೆ ಬುದ್ಧಿವಂತಿಕೆಯನ್ನು ತೋರಿಸಬೇಡ. ನಾವು ನಿನಗೆ ಉಪಕಾರವೇನನ್ನೂ ಮಾಡಿಲ್ಲ. ನೀನು ನಮ್ಮನ್ನು ಸರಿಯಾಗಿ ತಿಳಿದೂ ಇಲ್ಲ. ಪೀಡಿತರಾದ ನಮ್ಮನ್ನು ನೋಡಿಕೊಳ್ಳುತ್ತಿರುವ ಸತೀ ನೀನು ಯಾರು? ತರುಣಿಯಾಗಿದ್ದೀಯೆ, ಸುಂದರಿಯಾಗಿದ್ದೀಯೆ ಮತ್ತು ಭರ್ತುವಿನ ಅರ್ಹಳಾಗಿರುವೆ. ನಿನ್ನ ಪತಿಯ ಹಿಂದೆ ಹೋಗು. ಸುಂದರ ಪುತ್ರರನ್ನು ಪಡೆಯುವೆ. ನಾವು ಅಗ್ನಿಯನ್ನು ಪ್ರವೇಶಿಸಿ ಶುಭಲೋಕಗಳನ್ನು ಪಡೆಯುತ್ತೇವೆ. ಅಥವಾ ಒಂದುವೇಳೆ ಅಗ್ನಿಯು ನಮ್ಮನ್ನು ಸುಡದಿದ್ದರೆ ನೀನು ಪುನಃ ನಮ್ಮಲ್ಲಿಗೆ ಹಿಂದಿರುಗಿ ಬರಬಹುದು."

ಈ ಮಾತುಗಳನ್ನು ಕೇಳಿದ ಆ ಶಾಂಗ್ರಿಯು ಪುತ್ರರನ್ನು ಖಾಂಡವದಲ್ಲಿಯೇ ಬಿಟ್ಟು ಅಗ್ನಿಯಿಲ್ಲದ ಸುರಕ್ಷಿತ ಸ್ಥಳಕ್ಕೆ ಹಾರಿ ಹೋದಳು. ನಂತರ ತೀಕ್ಷ್ಣ ಜ್ವಾಲೆಗಳಿಂದ ಉರಿಯುತ್ತಿರುವ ಹವ್ಯವಾಹನನು ಮಂದಪಾಲನ ಪುತ್ರರಾದ ಶಾಂಗ್ಯಗಳು ಇರುವಲ್ಲಿಗೆ ಬಂದನು. ತನ್ನ ತೇಜಸ್ಸಿನಿಂದ ಜ್ವಲಿಸುತ್ತಿರುವ ಜ್ವಲನನನ್ನು ನೋಡಿ ಶಾಂಗ್ಯ ಜರಿತಾರನು ಪಾವಕನಿಗೆ ಕೇಳುವಹಾಗೆ ಈ ಮಾತುಗಳನ್ನಾಡಿದನು. ಜರಿತಾರಿಯು ಹೇಳಿದನು:

> “ಕಷ್ಟಕಾಲವು ಬರುವ ಮೊದಲೇ ಧೀಮಂತ ಪುರುಷನು ಎಚ್ಚೆತ್ತಿರುತ್ತಾನೆ. ಅವನು ಎಂದೂ ಕಷ್ಟಕಾಲ ಬಂದೊದಗಿದಾಗ ವ್ಯಥಿಸುವುದಿಲ್ಲ. ಕಷ್ಟಕಾಲ ಬಂದಾಗ ಎಚ್ಚೆತ್ತಿರದ ದಡ್ಡನು ಕಷ್ಟಕಾಲವು ಬಂದಾಗ ವ್ಯಥಿತನಾಗುತ್ತಾನೆ ಮತ್ತು ಅವನಿಗೆ ಏನೂ ತಿಳಿಯುವುದಿಲ್ಲ.”

ಸಾರಿಸೃಕ್ವನು ಹೇಳಿದನು:

> “ನೀನು ಧೀರನೂ ಮೇಧಾವಿಯೂ ಆಗಿರುವೆ. ಈಗ ನಮ್ಮ ಪ್ರಾಣವೇ ಕಷ್ಟದಲ್ಲಿದೆ. ಬಹುಜನರಲ್ಲಿ ಒಬ್ಬನೇ ಶೂರ ಮತ್ತು ಪ್ರಾಜ್ಞ ಎನ್ನುವುದರಲ್ಲಿ ಸಂಶಯವಿಲ್ಲ.”

ಸ್ತಂಬಮಿತ್ರನು ಹೇಳಿದನು:

> “ಹಿರಿಯವನು ಉಳಿಸುವವನಾಗುತ್ತಾನೆ. ಹಿರಿಯವನೇ

ಕಷ್ಟದಿಂದ ಬಿಡುಗಡೆ ನೀಡುತ್ತಾನೆ. ಹಿರಿಯವನಿಗೆ ಏನುಮಾಡಬೇಕೆಂದು ತಿಳಿಯದಿದ್ದರೆ ಕಿರಿಯವಾದರೂ ಏನು ಮಾಡಿಯಾರು?"

ದ್ರೋಣನು ಹೇಳಿದನು:

"ಜ್ವಲಿಸುತ್ತಿರುವ ಹಿರಣ್ಯರೇತನು ನಮ್ಮ ಮನೆಯ ಹತ್ತಿರ ಬರುತ್ತಿದ್ದಾನೆ. ಅನಲನು ತನ್ನ ಏಳು ನಾಲಗೆಗಳಿಂದ ನೆಕ್ಕುತ್ತಾ ನಮ್ಮಲ್ಲಿಗೆ ಹರಿದು ಬರುತ್ತಿದ್ದಾನೆ."

ಭ್ರಾತನ ಈ ಮಾತುಗಳನ್ನು ಕೇಳಿದ ಜರಿತಾರಿಯು ತನ್ನ ನೆತ್ತಿಯ ಮೇಲೆ ಕೈಗಳನ್ನು ಮುಗಿದು ವಿಭಾವಸುವನ್ನು ಸ್ತುತಿಸಿದನು:

"ನೀನು ವಾಯುವಿನ ಆತ್ಮ! ಪಾವನ! ನೀನು ಔಷಧ ಮೂಲಿಕೆಗಳ ಶರೀರ. ನೀರು ನಿನ್ನ ಮೂಲ. ನೀನು ಶುಕ್ರನ ಮೂಲ. ಮತ್ತು ನೀನು ನೀರಿನ ಮೂಲವೂ ಹೌದು. ಮಹಾವೀರ! ಸೂರ್ಯನ ರಷ್ಮಿಗಳಂತೆ ನಿನ್ನ ಜ್ವಾಲೆಗಳು ಮೇಲೆ, ಕೆಳಗೆ, ಪಕ್ಕದಲ್ಲಿ ಹರಡುತ್ತವೆ."

ಸಾರಿಸೃಕ್ವನು ಹೇಳಿದನು:

"ಮಾತೆಯು ತೊರೆದಿದ್ದಾಳೆ. ತಂದೆಯನ್ನು ತಿಳಿದಿಲ್ಲ. ಮೋಡಗಳಂತ ಹೊಗೆಯುಳ್ಳವನೇ! ನಮ್ಮ ರೆಕ್ಕೆಗಳು ಇನ್ನೂ ಬೆಳೆದಿಲ್ಲ. ಅಗ್ನಿ! ನಿನ್ನನ್ನು ಬಿಟ್ಟು ಬೇರೆ ಯಾವ ತ್ರಾತರನ್ನೂ

ನಾವು ಬಲ್ಲೆವು. ಆದುದರಿಂದ ಏಕೈಕವೀರ! ನಮ್ಮನ್ನು ಪರಿರಕ್ಷಿಸು. ಅಗ್ನಿ! ನಿನ್ನ ಶಿವರೂಪದಿಂದ ಮತ್ತು ನಿನ್ನ ಏಳು ಜ್ವಾಲೆಗಳಿಂದ ನಿನ್ನ ಶರಣುಬಂದಿರುವ ನಮ್ಮನ್ನು ಕಷ್ಟದಿಂದ ಪರಿರಕ್ಷಿಸು. ನೀನೇ ಏಕೈಕ ತಪಸ್ವಿ. ಜಾತವೇದ! ದೇವ! ನಿನ್ನಷ್ಟು ಉರಿಯುಳ್ಳವರು ಲೋಕದಲ್ಲಿಯೇ ಬೇರೆ ಇಲ್ಲ. ಬಾಲಕ ಋಷಿಗಳಾದ ನಮ್ಮನ್ನು ಪಾಲಿಸು. ಹವ್ಯವಾಹ! ನಮ್ಮನ್ನು ದಾಟಿ ಹೋಗು."

ಸ್ತಂಬಮಿತ್ರನು ಹೇಳಿದನು:

"ಅಗ್ನಿ! ಸರ್ವವೂ ನೀನೇ! ಈ ಸರ್ವ ಜಗತ್ತೂ ನಿನ್ನಲ್ಲಿಯೇ ಇದೆ. ನಿನ್ನ ಮೇಲೆ ವಿಶ್ವವೇ ನಿಂತಿದೆ. ನೀನು ಇರುವ ಎಲ್ಲವುಗಳನ್ನೂ ಪೋಷಿಸುತ್ತೀಯೆ. ಅಗ್ನಿ! ನೀನು ಹವ್ಯವಾಹನ! ನೀನೇ ಪರಮ ಹವಿಸ್ಸು. ಮನುಷ್ಯರು ನಿನ್ನಲ್ಲಿ ಯಜಿಸುತ್ತಾರೆ. ಹವ್ಯವಾಹನ! ಈ ಮೂರೂ ಲೋಕಗಳನ್ನು ರಚಿಸಿದವನೂ ನೀನೇ! ಕಾಲ ಬಂದಾಗ ಪುನಃ ಅವುಗಳನ್ನು ಸಮಿದ್ಧಗಳಂತೆ ಸುಡುತ್ತೀಯೆ. ಅಗ್ನಿ! ಈ ಸರ್ವ ಭುವನಗಳ ಪ್ರಸೂತಿಯು ನೀನೇ ಮತ್ತು ಪುನಃ ಅವು ನಿನ್ನಲ್ಲಿಗೇ ಹಿಂದಿರುಗುತ್ತವೆ. ಜಗತ್ಪತೇ! ನೀನು ಪ್ರಾಣಿಗಳು ತಿಂದ ಆಹಾರವನ್ನು ಜೀರ್ಣಿಸುತ್ತೀಯೆ. ನಿತ್ಯವೂ ಪ್ರಬುದ್ಧನಾದ ನಿನ್ನ ಮೇಲೆ ಸರ್ವವೂ ಪ್ರತಿಷ್ಠಿತವಾಗಿದೆ."

ದ್ರೋಣನು ಹೇಳಿದನು:

> “ಜಾತವೇದ! ಸೂರ್ಯನಾಗಿ ನೀನು ನಿನ್ನ ರಶ್ಮಿಗಳ ಮೂಲಕ ಭೂಮಿಯ ನೀರು ಮತ್ತು ರಸಗಳನ್ನು ಎಳೆದುಕೊಳ್ಳುತ್ತೀಯೆ. ಶುಕ್ರ! ಅವೆಲ್ಲವನ್ನೂ ಹೀರಿಕೊಂಡು ಪುನಃ ಉತ್ಸರ್ಗಕಾಲದಲ್ಲಿ ಮಳೆಯನ್ನಾಗಿ ಸೃಷ್ಟಿಸಿ ಸುರಿಸುತ್ತೀಯೆ! ಶುಕ್ರ! ನಿನ್ನಿಂದ ಪುನಃ ಔಷಧ ಹಸಿರುಗಳು, ಪುಷ್ಕರಣಿಗಳು ಮತ್ತು ಮಹೋದಧಿ ಸಮುದ್ರಗಳು ಜೀವತಾಳುತ್ತವೆ. ತಿಗ್ಮಾಂಶು! ನಿನ್ನ ಈ ಪೀಠವು ವರುಣನ ಪರಾಯಣ! ನೀನು ಶಿವಸ್ರಾತ! ಆದುದರಿಂದ ನಮ್ಮನ್ನು ಇಂದು ವಿನಾಶಮಾಡಬೇಡ! ಪಿಂಗಾಕ್ಷ! ಲೋಹಿತಗ್ರೀವ! ಕೃಷ್ಣವರ್ತ್ಮನ್! ಹುತಾಶನ! ನಮ್ಮನ್ನು ದಾಟಿಹೋಗಿ ಸಾಗರಗೃಹವನ್ನು ಬಿಟ್ಟುಬಿಡುವಂತೆ ನಮ್ಮನ್ನು ಬಿಟ್ಟುಬಿಡು.”

ಅಕ್ಲಿಷ್ಟಕರ್ಮಿ ದ್ರೋಣನು ಈ ರೀತಿ ಜಾತವೇದನನ್ನು ಸ್ತುತಿಸಲಾಗಿ ಪ್ರೀತಾತ್ಮ ಅಗ್ನಿಯು ಮಂದಾಪಾಲನಿಗೆ ತಾನು ಮಾಡಿದ್ದ ಪ್ರತಿಜ್ಞೆಯಂತೆ ದ್ರೋಣನಿಗೆ ಹೇಳಿದನು:

> “ದ್ರೋಣ! ನೀನು ಓರ್ವ ಋಷಿ. ನೀನು ಹೇಳಿದ್ದುದೇ ಬ್ರಹ್ಮ. ನಿನ್ನ ಈಪ್ಸಿತವನ್ನು ಪೂರೈಸುತ್ತೇನೆ, ನಿನ್ನಲ್ಲಿ ಯಾವುದೇ ಭಯವೂ ಇಲ್ಲದಿರಲಿ. ಇದರ ಹಿಂದೆಯೇ ಮಂದಪಾಲನು ನಿಮ್ಮೆಲ್ಲರ ಕುರಿತು ಹೇಳಿದ್ದನು. ವನವನ್ನು ದಹಿಸುವಾಗ ನನ್ನ

ಪುತ್ರಕರನ್ನು ಬಿಟ್ಟುಬಿಡು ಎಂದು ಹೇಳಿದ್ದನು. ಅವನ ಮಾತುಗಳು ಮತ್ತು ನೀನು ಈಗತಾನೆ ಹೇಳಿದ್ದುದು ಇವೆರಡೂ ನನಗೆ ಮಹತ್ವದ್ದು. ಆದುದರಿಂದ ಹೇಳು. ನಾನು ನಿನಗೆ ಏನು ಮಾಡಬೇಕು? ನಿನ್ನ ಈ ಸ್ತುತಿಯಿಂದ ನಾನು ಅತ್ಯಂತ ಪ್ರೀತನಾಗಿದ್ದೇನೆ. ನಿನಗೆ ಮಂಗಳವಾಗಲಿ."

ದ್ರೋಣನು ಹೇಳಿದನು:

"ಶುಕ್ರ! ಈ ಬೆಕ್ಕು ನಮ್ಮನ್ನು ನಿತ್ಯವೂ ಕಾಡಿಸುತ್ತಿದೆ. ಹವ್ಯವಾಹ! ಬಂಧುಗಳೊಂದಿಗೆ ಇದನ್ನು ಕಬಳಿಸು!" ಹಾಗೆಯೇ ಮಾಡಿದ ವಹ್ನಿಯು ಶಾಂಗ್ರ್ಯಕಗಳನ್ನು ಕಳುಹಿಸಿಕೊಟ್ಟನು ಮತ್ತು ಖಾಂಡವವನ್ನು ಸಮಿತ್ತದಂತೆ ಸುಟ್ಟುಹಾಕಿದನು.

ಮಂದಪಾಲನು ತನ್ನ ಮಕ್ಕಳ ಕುರಿತು ಚಿಂತಿಸತೊಡಗಿದನು. ಶೀತಾಂಶುವೊಂದಿಗೆ ಅವನು ಮಾತನಾಡಿದ್ದರೂ ಅವನು ಉದ್ವಿಗ್ನನಾಗಿದ್ದನು. ಅವನ ಪುತ್ರರ ಮೇಲಿದ್ದ ಚಿಂತೆಯಿಂದ ಅವನು ಲಪಿತಳಲ್ಲಿ ಹೇಳಿದನು:

"ಲಪಿತ! ನನ್ನ ಆ ಸಣ್ಣ ಮಕ್ಕಳು ತಪ್ಪಿಸಿಕೊಂಡು ಹೋಗಲು ಅಶಕ್ತರು. ಬೆಂಕಿಯು ಹೆಚ್ಚಾಗಿ ಉರಿಯುತ್ತಿದ್ದಾಗ, ಮತ್ತು ಗಾಳಿಯು ಜೋರಾಗಿ ಬೀಸುತ್ತಿರುವಾಗ ನನ್ನ ಮಕ್ಕಳು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಅಸಮರ್ಥರಾಗುತ್ತಾರೆ. ಅವರ

ತಪಸ್ವಿನಿ ತಾಯಿಯೂ ಕೂಡ ಅವರನ್ನು ಉಳಿಸಲು ಅಶಕ್ತಳಾಗುತ್ತಾಳೆ. ಪುತ್ರರನ್ನು ಉಳಿಸಲು ಸಾಧ್ಯವಾಗಲಿಲ್ಲವೆಂದು ಅವಳು ತುಂಬಾ ದುಃಖಿಯಾಗಿರಬಹುದು. ನನ್ನ ಪುತ್ರರಿಗಾಗಿ ಚಡಪಡಿಸುತ್ತಾ, ಓಡಲಿಕ್ಕೂ ಆಗದೇ, ಹಾರಿಹೋಗಲಿಕ್ಕೂ ಆಗದೇ ತಪಿಸುತ್ತಾ ಅಲ್ಲಿಯೇ ಕಿರುಚುತ್ತಾ ಹಾರಾಡುತ್ತಾ ಇರಬಹುದು! ಪುತ್ರ ಜರಿತಾರಿಯು ಹೇಗಿರಬಹುದು? ನನ್ನ ಸಾರಿಸೃಕ್ವನು ಹೇಗಿರಬಹುದು? ಸ್ತಂಬಮಿತ್ರನು ಹೇಗಿರಬಹುದು? ಮತ್ತು ಆ ತಪಸ್ವಿನೀ ದ್ರೋಣನು ಹೇಗಿರಬಹುದು?"

ಈ ರೀತಿ ವನದಲ್ಲಿ ಋಷಿ ಮಂದಪಾಲನು ವಿಲಪಿಸುತ್ತಿರಲು ಲಪಿತಾಳು ಅಸೂಯೆಯಿಂದ ಅವನಿಗೆ ಹೇಳಿದಳು:

"ನೀನು ನಿನ್ನ ಸುತರ ರಕ್ಷಣೆಮಾಡುತ್ತಿಲ್ಲ! ಅವರು ತೇಜಸ್ವಿ, ವೀರ್ಯವಂತ ಋಷಿಗಳೆಂದೂ ಅವರಿಗೆ ಅಗ್ನಿಯ ಭಯವಿಲ್ಲ ಎಂದು ನೀನೇ ಹೇಳಿದ್ದೆ. ಹಾಗೆಯೇ ನನ್ನ ಸನ್ನಿಧಿಯಲ್ಲಿಯೇ ನೀನು ಅವರನ್ನು ಅಗ್ನಿಗೆ ರಕ್ಷಣೆಯಲ್ಲಿ ಇಟ್ಟಿದ್ದೆ ಮತ್ತು ಆ ಮಹಾತ್ಮನು ಭರವಸೆಯನ್ನು ನೀಡಿದ್ದನು. ಲೋಕಪಾಲಕರು ಎಂದೂ ಸುಳ್ಳನ್ನು ಹೇಳುವುದಿಲ್ಲ. ಮತ್ತು ಅವರು ಸಮರ್ಥ ವಾಗ್ಮಿಗಳು. ಇಲ್ಲ. ಅವರ ಮೇಲೆ ನಿನ್ನ ಮನಸ್ಸಿಲ್ಲ. ನೀನು ನನ್ನ ಸವತಿಯ ಕುರಿತು ಚಿಂತಿಸಿ ಪರಿತಪಿಸುತ್ತಿದ್ದೀಯೆ! ಹಿಂದೆ

ನೀನು ಅವಳನ್ನು ಎಷ್ಟು ಪ್ರೀತಿಸುತ್ತಿದ್ದೆಯೋ ಅಷ್ಟು ನನ್ನನ್ನು ಪ್ರೀತಿಸುತ್ತಿಲ್ಲ ಎನ್ನುವುದು ಸತ್ಯ. ಸುಹೃಜ್ಜನರಲ್ಲಿ ನಿಃಸ್ನೇಹದಿಂದ ಎಂದೂ ನ್ಯಾಯ ಮತ್ತು ಪಕ್ಷಪಾತವನ್ನು ಮಾಡಬಾರದು. ಚಡಪಡಿಸುತ್ತಿರುವವನನ್ನು ನೋಡಲು ನನಗೆ ಎಂದೂ ಶಕ್ಯವಿಲ್ಲ. ನೀನು ಯಾರ ಕುರಿತು ಪರಿತಪಿಸುತ್ತಿದ್ದೀಯೋ ಆ ನಿನ್ನ ಜರಿತಾಳ ಬಳಿ ಹೋಗು. ನಾನು ಕಾಪುರುಷನೊಂದಿಗಿರುವವಳಂತೆ ಏಕಾಂಗಿಯಾಗಿ ಅಲೆಯುತ್ತಿರುತ್ತೇನೆ."

ಮಂದಪಾಲನು ಹೇಳಿದನು:

"ನೀನು ಕಲ್ಪಿಸಿದ ಕಾರಣಕ್ಕಾಗಿ ನಾನು ಲೋಕದಲ್ಲಿ ಸಂಚರಿಸುತ್ತಿದ್ದೇನೆ ಎಂದು ತಿಳಿಯಬೇಡ! ನಾನು ಸಂತಾನಕ್ಕೆಂದು ಈ ಲೋಕದಲ್ಲಿ ಸಂಚರಿಸುತ್ತಿದ್ದೇನೆ ಮತ್ತು ಈ ಸಮಯದಲ್ಲಿ ನನ್ನ ಮಕ್ಕಳು ಕಷ್ಟದಲ್ಲಿದ್ದಾರೆ. ಇರುವುದನ್ನು ತೊರೆದು ಭವಿಷ್ಯದಲ್ಲಿ ಆಗಬಹುದಾದುದನ್ನು ಅವಲಂಬಿಸಿರುವವನು ಮೂಢ. ಅಂಥವವನ್ನು ಲೋಕವು ಕೀಳಾಗಿ ಕಾಣುತ್ತದೆ. ನಿನಗೆ ಇಷ್ಟಬಂದಹಾಗೆ ಮಾಡು. ಈ ಜ್ವಲಿಸುತ್ತಿರುವ ಮಹಾ ವೃಕ್ಷಗಳನ್ನು ನೆಕ್ಕುತ್ತಾ ಕೆಟ್ಟದನ್ನು ತರುವ ಈ ಅಗ್ನಿಯು ನನ್ನ ಹೃದಯದಲ್ಲಿ ಅಶುಭ ಸಂತಾಪವನ್ನು ಹುಟ್ಟಿಸುತ್ತಿದ್ದಾನೆ."

ಅಗ್ನಿಯು ತನ್ನ ಪುತ್ರರಿರುವ ಆ ಸ್ಥಳವನ್ನು ದಾಟಿ ಹೋದನಂತರ ತಕ್ಷಣವೇ ಪುತ್ರರ ಮೇಲಿನ ಪ್ರೀತಿಯಿಂದ ಜರಿತಾಳು ಅಲ್ಲಿಗೆ ಬಂದಳು. ದುಃಖದಿಂದ ರೋದಿಸುತ್ತಿರುವ ಅವಳು ಆ ವನದಲ್ಲಿ ಜಾತವೇದಸ ಅಗ್ನಿಯಿಂದ ಮುಕ್ತರಾಗಿ ಕುಶಲರಾಗಿದ್ದ ತನ್ನ ಸುತರನ್ನು ಕಂಡಳು. ನೋಡಲಿಕ್ಕೆ ಅದೊಂದು ಅದ್ಭುತ ದೃಶ್ಯವಾಗಿತ್ತು. ಪುನಃ ಪುನಃ ಅವಳು ಆ ಪುತ್ರರನ್ನು ಒಬ್ಬೊಬ್ಬರನ್ನಾಗಿಯೇ ಅಪ್ಪಿಕೊಂಡು ರೋದಿಸಿದಳು. ಆಗ ತಕ್ಷಣವೇ ಅಲ್ಲಿಗೆ ಮಂದಪಾಲನೂ ಬಂದನು. ಆದರೆ ಅವನ ಮಕ್ಕಳೆಲ್ಲರಲ್ಲಿ ಯಾರೊಬ್ಬನೂ ಅವನನ್ನು ಅಭಿನಂದಿಸಲಿಲ್ಲ. ಅವನು ಪುನಃ ಪುನಃ ಒಬ್ಬೊಬ್ಬರಲ್ಲಿಯೂ ಜರಿತಾಳಲ್ಲಿಯೂ ಮಾತನ್ನಾಡುತ್ತಿರಲು ಅವರು ಯಾರೂ ಆ ಋಷಿಯನ್ನು ಕುರಿತು ಒಳ್ಳೆಯ ಅಥವಾ ಕೆಟ್ಟ ಮಾತುಗಳನ್ನು ಆಡಲಿಲ್ಲ. ಮಂದಪಾಲನು ಹೇಳಿದನು:

> "ನಿಮ್ಮಲ್ಲಿ ಯಾರು ನನ್ನ ಜ್ಯೇಷ್ಠ ಪುತ್ರ? ಯಾರು ಅವನ ನಂತರದವನು? ನಿಮ್ಮಲ್ಲಿ ಯಾರು ಮಧ್ಯಮ ಪುತ್ರ ಮತ್ತು ಕನಿಷ್ಠನು ಯಾರು? ಹೀಗೆ ದುಃಖಾರ್ತನಾಗಿ ಮಾತನಾಡುತ್ತಿರುವ ನನ್ನಲ್ಲಿ ನೀವು ಯಾಕೆ ಪ್ರತಿಯಾಗಿ ಮಾತನಾಡುತ್ತಿಲ್ಲ? ಹವ್ಯವಾಹನನಿಗೆ ನಿಮ್ಮನ್ನು ಒಪ್ಪಿಸಿ ಹೋಗಿದ್ದರೂ ನನಗೆ ಶಾಂತಿಯೇ ದೊರೆಯಲಿಲ್ಲ."

ಜರಿತಾಳು ಹೇಳಿದಳು:

“ನಿನ್ನ ಜ್ಯೇಷ್ಠ ಸುತ ಯಾರಾದರೆ ನಿನಗೇನು? ಅನಂತರದವನು ಯಾರಾದರೆ ನಿನಗೇನು? ನಿನ್ನ ಮಧ್ಯಮನಲ್ಲಿ ನಿನಗೇನು ಕೆಲಸ ಮತ್ತು ತಪಸ್ವಿನಿ ಕನಿಷ್ಠನಲ್ಲಿ ಏನು ಕೆಲಸ? ಹಿಂದೆ ನನ್ನನ್ನು ಸಂಪೂರ್ಣವಾಗಿ ತೊರೆದು ನೀನು ಹೊರಟುಹೋದೆ. ನಿನ್ನ ಆ ತರುಣಿ ಚಾರುಹಾಸಿನಿ ಲಪಿತಾಳ ಬಳಿ ಹೋಗು.”

ಮಂದಪಾಲನು ಹೇಳಿದನು:

“ಇನ್ನೊಬ್ಬ ಪುರುಷನನ್ನು ಬಿಟ್ಟು ಬೇರೆ ಯಾವುದೂ ಒಬ್ಬ ಸ್ತ್ರೀಗೆ ಸವತಿಯ ಜೊತೆಗಿರುವ ಪೈಪೋಟಿಯಷ್ಟು ಮಾರಕವಲ್ಲ. ಯಾಕೆಂದರೆ ಸುವ್ರತ, ಕಲ್ಯಾಣಿ, ಸರ್ವಲೋಕಪರಿಶ್ರುತ ಅರುಂಧತಿಯೂ ಕೂಡ ಋಷಿಸತ್ತಮ ವಸಿಷ್ಠನನ್ನು ಶಂಕಿಸಿದಳು. ಸಪ್ತರ್ಷಿಮಧ್ಯಗ ಅವನು ಸದಾ ಅತ್ಯಂತ ವಿಶುದ್ಧಭಾವದಿಂದ ಅವಳ ಪ್ರಿಯಹಿತರತನಾಗಿದ್ದನು. ಆದರೂ ಅವಳು ಆ ಮುನಿಯನ್ನು ಹೀಯಾಳಿಸಿದಳು. ಈ ರೀತಿ ಅಸಡ್ಡೆತನ ತೋರಿಸಿದ್ದುದಕ್ಕಾಗಿ ಅವಳು ಧೂಮದಿಂದ ಆವೃತ ಅರುಣನ ಸಮಪ್ರಭೆಯಾಗಿ, ಅಷ್ಟೊಂದು ಸುಂದರವಾಗಿ ಕಾಣದೇ, ಒಮ್ಮೆ ಕಾಣಿಸಿಕೊಳ್ಳುತ್ತಾ ಇನ್ನೊಮ್ಮೆ ಕಾಣಿಸಿಕೊಳ್ಳದೆಯೇ, ನಿಮಿತ್ತದಂತೆ ತೋರಿಸಿಕೊಳ್ಳುತ್ತಾಳೆ. ನೀನೂ ಕೂಡ ಸಂತಾನಕ್ಕೆಂದೇ ನನ್ನನು ಕೂಡಿದೆ ಮತ್ತು

ನಿನ್ನಗಿಷ್ಟವಾದವನನ್ನು ತೊರೆದೆ. ಈಗ ನೀನು ಅವಳಂತೆಯೇ ವರ್ತಿಸುತ್ತಿದ್ದೀಯೆ. ಪುರುಷನು ಎಂದೂ ತನ್ನ ಭಾರ್ಯೆಯಲ್ಲಿ ಹೆಂಡತಿಯೆಂದು ವಿಶ್ವಾಸವನ್ನು ಇಡುವ ಕೆಲಸ ಮಾಡಬಾರದು. ಯಾಕೆಂದರೆ ಪುತ್ರವತಿಯಾದ ಸತಿಯು ತನ್ನ ಕೆಲಸವನ್ನು ಅನುಸರಿಸುವುದಿಲ್ಲ."

ಅದರ ನಂತರ ಅವನ ಪುತ್ರರೆಲ್ಲರೂ ಅವನನ್ನು ಸರಿಯಾಗಿ ಉಪಾಸಿಸಿದರು ಮತ್ತು ಅವನೂ ತನ್ನ ಮಕ್ಕಳಿಗೆ ಅಶ್ವಾಸನೆಯನ್ನಿತ್ತು ಪಾಲಿಸಿದನು. ಮಂದಪಾಲನು ಹೇಳಿದನು:

"ನಿಮ್ಮನ್ನು ಪರಿರಕ್ಷಿಸಲು ನಾನು ಅಗ್ನಿಯಲ್ಲಿ ವಿಜ್ಞಾಪಿಸಿದ್ದೇನೆ. ಹಾಗೆಯೇ ಆಗಲೆಂದು ಈ ಹಿಂದೆಯೇ ಅಗ್ನಿಯು ಉತ್ತರಿಸಿದ್ದನು. ಅಗ್ನಿಯ ವಚನವನ್ನು ನಿನಪಿನಲ್ಲಿಟ್ಟುಕೊಂಡು, ನಿಮ್ಮ ತಾಯಿಯ ಧರ್ಮವೃತ್ತಿಯನ್ನು ತಿಳಿದು ಮತ್ತು ನಿಮ್ಮದೇ ಪರಮ ವೀರ್ಯವನ್ನು ತಿಳಿದು ನಾನು ಇಲ್ಲಿಗೆ ಈ ಮೊದಲೇ ಬರಲಿಲ್ಲ. ಪುತ್ರರೇ! ಮರಣದ ಕುರಿತು ನೀವು ಸಂತಾಪ ಪಾಡಬೇಕಾಗಿಲ್ಲ. ನೀವು ವೇದ ಮತ್ತು ಬ್ರಹ್ಮವನ್ನು ತಿಳಿದಿರುವ ಋಷಿಗಳು ಎಂದು ಅಗ್ನಿಯೂ ತಿಳಿದಿದ್ದಾನೆ."

ಈ ರೀತಿ ತನ್ನ ಮಕ್ಕಳಿಗೆ ಆಶ್ವಾಸನೆಯನ್ನಿತ್ತು ಮಂದಪಾಲನು ಅವರು ಮತ್ತು ತನ್ನ ಪತ್ನಿಯೊಡನೆ ಆ ದೇಶವನ್ನು ತೊರೆದು ಇನ್ನೊಂದು ದೇಶಕ್ಕೆ ಹೋದನು.

# ಸೌಭವಧೋಽಪಾಖ್ಯಾನ

[ಸೌಭವಧೆಯ ಈ ಕಥೆಯು ವ್ಯಾಸ ಮಹಾಭಾರತದ ವನ ಪರ್ವದ ಕೈರಾತ ಪರ್ವ (ಅಧ್ಯಾಯ ೧೫-೨೩) ದಲ್ಲಿ ಬರುತ್ತದೆ. ದ್ಯೂತದ ಸಮಯದಲ್ಲಿ ಕೃಷ್ಣನು ದ್ವಾರಕೆಯಲ್ಲಿ ಏಕೆ ಇರಲಿಲ್ಲ ಎಂದು ಯುಧಿಷ್ಠಿರನು ಕಾಮ್ಯಕ ವನದಲ್ಲಿ ಕೇಳಿದಾಗ ಕೃಷ್ಣನು ಈ ಕಥೆಯನ್ನು ಹೇಳಿದನು.]

ಮಹಾಬಾಹು ನೃಪ ಶ್ರೌತಶ್ರವ ಶಿಶುಪಾಲನು ಕೃಷ್ಣನಿಂದ ಹತನಾದನು ಎಂದು ಕೇಳಿ ಶಾಲ್ವನು ಉಪಾಯದಿಂದ ದ್ವಾರವತೀ ಪುರಕ್ಕೆ ಧಾಳಿಯಿಟ್ಟನು. ಆ ಸುದುಷ್ಟಾತ್ಮ ಶಾಲ್ವನು ಎಲ್ಲ ಕಡೆಯಿಂದಲೂ ಮತ್ತು ಆಕಾಶದಿಂದಲೂ ತನ್ನ ಸೇನೆಯೊಂದಿಗೆ ಪುರವನ್ನು ಮುತ್ತಿಗೆ ಹಾಕಿದನು. ಪುರವನ್ನು ಹಿಡಿದಿಟ್ಟು ನಿಂತ ಆ ಮಹೀಪಾಲನು ಯುದ್ಧಮಾಡಿದನು. ಅಲ್ಲಿ ಎಲ್ಲಕಡೆಯಲ್ಲಿಯೂ ಎಲ್ಲರ ನಡುವೆಯೂ ಯುದ್ಧವು ನಡೆಯಿತು. ಆ ಪುರಿಯು ಎಲ್ಲೆಲ್ಲಿಯೂ ಸುರಕ್ಷತೆಯ ತಯಾರಿ ನಡೆಸಿತ್ತು - ಎಲ್ಲೆಡೆಯೂ ಪತಾಕೆಗಳು, ತೋರಣಗಳು, ಚಕ್ರಗಳು, ಪಹರೆಗಳು, ಶೌಚಾಲಯಗಳು, ಯಂತ್ರಗಳು, ಕಂದಕಗಳು, ಬೇಕಾದಲ್ಲಿ ಸಾಗಿಸಬಲ್ಲ ಮಂಚಗಳು, ಅಟ್ಟಗಳು, ಏಣಿಗಳು, ಗೋಪುರಗಳು, ಕೂದಲು ಎಳೆಯುವ ಸಾಧನಗಳು, ದೀವಟಿಗೆ ಮತ್ತು ಬೆಂಕಿಯ ಚಂಡುಗಳನ್ನು ಹಾರಿಸಬಲ್ಲ ಚಾಟಿಬಿಲ್ಲುಗಳು, ಒಂಟೆಗಳು, ಭೇರಿ-

ನಗಾರಿಗಳು, ಉರಿಸಲು ಕಟ್ಟಿಗೆ ಮತ್ತು ಹುಲ್ಲು, ನೂರಾರು ಕೊಲ್ಲುವ ಆಯುಧಗಳು - ಕಲ್ಲುಗಳು, ಬೆಂಕಿಚಂಡುಗಳು, ಕಬ್ಬಿಣದ ಮತ್ತು ಚರ್ಮದ ಆಯುಧಗಳು, ಕೊಡಲಿಗಳು, ಮಲವನ್ನು ಎಸೆಯುವವರು ಹೀಗೆ ಶಾಸ್ತ್ರದಲ್ಲಿ ತೋರಿಸಿದ ವಿಧದಲ್ಲಿಯೇ ತಯಾರಿಗೊಂಡಿತ್ತು. ಅನೇಕ ವಿಧದ ದ್ರವ್ಯಗಳಿಂದ ತುಂಬಿದ್ದ ಪುರಿಯನ್ನು ಗದ, ಸಾಂಬ ಮತ್ತು ಉದ್ಧವ ಮೊದಲಾದ ಹಿಂದಿರುಗಿ ಆಕ್ರಮಿಸಬಲ್ಲ, ಯುದ್ಧದಲ್ಲಿ ತಮ್ಮ ವೀರತ್ವವನ್ನು ಹಿಂದೆ ತೋರಿಸಿದ್ದ, ಅಭಿಖ್ಯಾತ ಕುಲಗಳಲ್ಲಿ ಹುಟ್ಟಿದ್ದ ಸಮರ್ಥ ಪುರುಷರು ಕಾಯುತ್ತಿದ್ದರು. ಅದರ ಸಾರಕ್ಕೆ ಹೆಸರಾದ ಸೇನೆಯು ಮಧ್ಯದಲ್ಲಿ ಉತ್ತಮ ಸೇನೆಯಿಂದಲೂ ಕುದುರೆಗಳಿಂದಲೂ ಪದಾತಿಗಳಿಂದಲೂ ರಕ್ಷಿತಗೊಂಡಿತ್ತು. ಉಗ್ರಸೇನ, ಉದ್ಧವ ಮೊದಲಾದ ಅಧಿಕಾರಿಗಳು, ಪ್ರಮಾದವಾಗಬಾರದೆಂದು ನಗರದಲ್ಲಿ ಯಾರೂ ಮದ್ಯಸೇವನೆ ಮಾಡಬಾರದು ಎಂದು ಆದೇಶವನ್ನು ಘೋಷಿಸಿದರು. ಕುಡಿದ ಅಮಲಿನಲ್ಲಿದ್ದರೆ ನರಾಧಿಪ ಶಾಲ್ವನು ತಮ್ಮನ್ನು ಸುಲಭವಾಗಿ ನಾಶಪಡಿಸಬಲ್ಲನು ಎಂದು ಎಲ್ಲ ವೃಷ್ಣಿ ಅಂಧಕರೂ ಕುಡಿಯದೇ ಇದ್ದರು. ಅನಾರ್ತದ ಎಲ್ಲ ನಟ, ನರ್ತಕ, ಗಾಯಕರನ್ನು ಪುರದ ಹೊರಗೆ ವಾಸಿಸುವಂತೆ ಎಲ್ಲ ವಿತ್ತಸಂಚಯದ ರಕ್ಷಕರು ಏರ್ಪಡಿಸಿದರು. ಸೇತುವೆಗಳನ್ನು ಒಡೆಯಲಾಯಿತು ಮತ್ತು ಎಲ್ಲ ನೌಕೆಗಳ ಪ್ರಯಾಣವನ್ನೂ ಪ್ರತಿಬಂಧಿಸಲಾಯಿತು. ಎಲ್ಲ ಗೋಡೆಗಳನ್ನೂ ಮೊಳೆಗಳನ್ನಿರಿಸಿ ಸುರಕ್ಷಿತಗೊಳಿಸಲಾಯಿತು ಮತ್ತು ಕಣಿವೆ ಕಂದರಗಳನ್ನು

ಮುಚ್ಚಿಸಲಾಯಿತು. ಎರಡು ಯೋಜನೆಯ ದೂರದವರೆಗೆ ಪುರದ ಸುತ್ತಲೂ ಭೂಮಿಯನ್ನು ವಿಷಮವನ್ನಾಗಿ ಮಾಡಲಾಯಿತು. ಪ್ರಾಕೃತಿಕವಾಗಿ ನಮ್ಮ ದುರ್ಗವು ವಿಷಮವಾದುದು, ಮತ್ತು ಪ್ರಾಕೃತಿಕವಾಗಿ ಸುರಕ್ಷಿತವಾಗಿದೆ, ಮತ್ತು ವಿಶೇಷವಾಗಿ ಪ್ರಾಕೃತಿಕವಾಗಿ ಆಯುಧಗಳಿಂದ ತುಂಬಿದೆ. ಸುರಕ್ಷಿತವೂ, ಗುಪ್ತವೂ, ಸರ್ವಾಯುಧಗಳಿಂದ ಕೂಡಿದ ಆ ಪುರವು ಇಂದ್ರನ ಪುರದಂತೆ ತೋರುತ್ತಿತ್ತು. ಸೌಭನು ಆಕ್ರಮಣ ಮಾಡಿದ ಸಮಯದಲ್ಲಿ ವೃಷ್ಣಿ-ಅಂಧಕರ ಪುರದಿಂದ ಮುದ್ರೆಯಿಲ್ಲದೇ ಯಾರೂ ಹೊರಹೋಗಲು ಸಾಧ್ಯವಿರಲಿಲ್ಲ ಮತ್ತು ಮುದ್ರೆಯಿಲ್ಲದೇ ಒಳಬರಲೂ ಸಾಧ್ಯವಿರಲಿಲ್ಲ. ಪ್ರತಿಯೊಂದು ರಥದಾರಿಗಳಲ್ಲೂ ಮತ್ತು ಎಲ್ಲ ಚೌಕಗಳಲ್ಲಿಯೂ ಕುದುರೆ ಮತ್ತು ಆನೆಗಳನ್ನೇರಿದ ಸೈನಿಕರು ಇರುತ್ತಿದ್ದರು. ಸೇನೆಗೆ ವೇತನಭತ್ತೆಗಳನ್ನು ಕೊಡಲಾಗಿತ್ತು. ಆಯುಧ-ಕವಚಗಳನ್ನು ಕೊಡಲಾಗಿತ್ತು ಮತ್ತು ಅಲ್ಲಿಯವರೆಗೆ ಸೇನೆಗೆ ಕೊಡಬೇಕಾದ ಎಲ್ಲವನ್ನೂ ಕೊಡಲಾಗಿತ್ತು. ಯಾರೂ ತನ್ನ ವೇತನದ ಕುರಿತು ಸಿಟ್ಟುಮಾಡಿರಲಿಲ್ಲ. ಯಾರಿಗೂ ಅಧಿಕ ವೇತನವನ್ನು ನೀಡಿರಲಿಲ್ಲ. ಯಾರಿಗೂ ವಿಶೇಷ ಅನುಗ್ರಹವಿರಲಿಲ್ಲ ಮತ್ತು ಯಾರ ಪರಾಕ್ರಮವನ್ನೂ ನೋಡದೇ ಇರಲಿಲ್ಲ. ಹೀಗೆ ದ್ವಾರಕೆಯು ಚೆನ್ನಾದ ವೇತನವನ್ನು ಹೊಂದಿದ್ದ ಸೇನೆಯೊಂದಿಗೆ ಆಹುಕನಿಂದ ರಕ್ಷಿತಗೊಂಡಿತ್ತು.

ಆದರೆ ಸೌಭಪತಿ ಶಾಲ್ವನು ಸೈನಿಕರು ಮತ್ತು ಆನೆಗಳಿಂದ ತುಂಬಿದ ಸೇನೆಯೊಂದಿಗೆ ನಗರವನ್ನು ಆಕ್ರಮಣಿಸಿದನು. ಶಾಲ್ವರಾಜನಿಂದ

ಪಾಲಿತ ಆ ಚತುರಂಗಬಲವು ನೀರಿನ ಸೌಲಭ್ಯವು ಚೆನ್ನಾಗಿರುವ ಸಮಪ್ರದೇಶದಲ್ಲಿ ತಂಗಿತು. ಶ್ಮಶಾನಗಳನ್ನೂ, ದೇವಾಲಯಗಳನ್ನೂ ಹುತ್ತಗಳನ್ನೂ ಬಿಟ್ಟು ಉಳಿದ ಎಲ್ಲ ಕಡೆ ಅವನ ಸೇನೆಯು ಬೀಳುಬಿಟ್ಟಿತ್ತು. ಶಾಲ್ವನ ಸೇನಾಶಿಬಿರಗಳು ಅನೇಕ ಭಾಗಗಳಾಗಿ ವಿಭಜನೆಗೊಂಡು ಆರು ಮಾರ್ಗಗಳಲ್ಲಿಯೂ, ಒಂಭತ್ತು ಇಳಿಜಾರುಗಳಲ್ಲಿಯೂ ಹರಡಿಕೊಂಡಿತ್ತು. ಸರ್ವಾಯುಧಗಳಿಂದ ಕೂಡಿದ, ಸರ್ವಶಸ್ತ್ರವಿಶಾರದರನ್ನೂ, ರಥ, ಆನೆ, ಕುದುರೆಗಳಿಂದ ಕೂಡಿದ, ಪದಾತಿ-ಧ್ವಜಸಂಕುಲಗಳನ್ನು, ವೀರಲಕ್ಷಣಗಳಿಂದ ಲಕ್ಷಿತ ತುಷ್ಟಪುಷ್ಟ ಜನರನ್ನೂ, ವಿಚಿತ್ರಧ್ವಜಸನ್ನಾಹಗಳನ್ನೂ, ವಿಚಿತ್ರವಾಗಿ ರಚಿತಗೊಂಡ ರಥಗಳನ್ನೂ, ದ್ವಾರಗಳಲ್ಲಿ ನಿಲ್ಲಿಸಿ, ಪತಗೇಂದ್ರನಂತೆ ವೇಗದಿಂದ ಮುತ್ತಿಗೆಹಾಕಿದನು. ಶಾಲ್ವಪತಿಯ ಸೇನೆಯ ಆಕ್ರಮಣವನ್ನು ನೋಡಿದ ವೃಷ್ಣಿನಂದನ ಕುಮಾರರು ಯುದ್ಧಕ್ಕೆ ಸಜ್ಜರಾಗಿ ಹೊರಟರು. ಶಾಲ್ವರಾಜನನ್ನು ಎದುರಿಸಿ ಹೋರಾಡಲು ಚಾರುದೇಷ್ಣ, ಸಾಂಬ, ಮತ್ತು ಮಹಾರಥಿ ಪ್ರದ್ಯುಮ್ನರು ಹೊರಟರು. ಅವರ ವಿಚಿತ್ರ ಆಭರಣ-ಧ್ವಜಗಳಿಂದ ಅಲಂಕೃತ ರಥಗಳಲ್ಲಿ ಸರ್ವರೂ ಶಾಲ್ವರಾಜನ ಬಹುಸಂಖ್ಯೆಯಲ್ಲಿದ್ದ ಯೋಧಪುಂಗವರೊಂದಿಗೆ ಯುದ್ಧ ನಿರತರಾದರು. ಧನುಸ್ಸನ್ನು ಹಿಡಿದು ಸಂತೋಷದಿಂದ ಸಾಂಬನು ಶಾಲ್ವನ ಸಚಿವ, ಚಮೂಪತಿ, ಕ್ಷೇಮವೃದ್ಧಿಯೊಂದಿಗೆ ರಣದಲ್ಲಿ ಹೋರಾಡಿದನು. ಜಾಂಬವತಿಯ ಮಗನು ಸಹಸ್ರಾಕ್ಷನು ಮಳೆಯನ್ನು ಸುರಿಸುವಂತೆ ಅವನ ಮೇಲೆ

ಬಾಣಗಳ ಮಳೆಯನ್ನೇ ಸುರಿಸಿದನು. ಆ ಚಮೂಪತಿ ಕ್ಷೇಮವೃದ್ಧಿಯಾದರೂ ಅವನ ಬಾಣಗಳ ಮಳೆಯ ತುಮುಲವನ್ನು ಸಹಿಸಿಕೊಂಡು ಹಿಮವತ್ಪರ್ವತದಂತೆ ನಿಶ್ಚಲವಾಗಿ ನಿಂತನು. ಆಗ ಕ್ಷೇಮವೃದ್ಧಿಯೂ ಸಹ ಸಾಂಬನ ಮೇಲೆ ಮಯಾವಿಹಿತ ಮಹತ್ತರ ಶರಜಾಲವನ್ನು ಬಿಟ್ಟನು. ನಂತರ ಆ ಮಾಯಾಜಾಲವನ್ನು ತನ್ನದೇ ಮಾಯೆಯಿಂದ ತುಂಡುಮಾಡಿ, ಸಾಂಬನು ಅವನ ರಥದ ಮೇಲೆ ಸಹಸ್ರ ಶರಗಳ ಮಳೆಯನ್ನೇ ಸುರಿಸಿದನು. ಸಾಂಬನಿಂದ ಹೊಡೆತತಿಂದ ಆ ಚಮೂಪತಿ ಕ್ಷೇಮವೃದ್ಧಿಯು ಸಾಂಬನ ಬಾಣಗಳಿಂದ ಪೀಡಿತನಾಗಿ ವೇಗವಾಗಿ ಅಶ್ವಗಳನ್ನು ಹಿಂದೆ ಸರಿಸಿದನು. ಶಾಲ್ವನ ಆ ಕ್ರೂರ ಚಮೂಪತಿಯು ಪಲಾಯನ ಮಾಡಲು ವೇಗವಾನ್ ಎಂಬ ಹೆಸರಿನ ಬಲಶಾಲಿ ದೈತ್ಯನು ಕೃಷ್ಣನ ಮಗನ ಮೇಲೆ ಆಕ್ರಮಣ ಮಾಡಿದನು. ಆಕ್ರಮಣಕ್ಕೊಳಗಾದ ವೃಷ್ಣಿಕುಲೋದ್ದಹ ವೀರ ಸಾಂಬನು ವೇಗದಿಂದ ಬರುತ್ತಿದ್ದ ವೇಗವತನನ್ನು ಎದುರಿಸಿ ನಿಂತನು. ವೀರ ಸತ್ಯವಿಕ್ರಮ ಸಾಂಬನು ವೇಗವತನ ಮೇಲೆ ವೇಗದಿಂದ ತನ್ನ ಗದೆಯನ್ನು ಬೀಸಿ ಎಸೆದು ತಕ್ಷಣವೇ ಅವನನ್ನು ಘಾತಿಗೊಳಿಸಿದನು. ಅವನಿಂದ ಹೊಡೆತತಿಂದ ವೇಗವಾನನು, ಬೇರುಗಳು ಜೀರ್ಣವಾಗಿದ್ದ ವನಸ್ಪತಿಯು ಭಿರುಗಾಳಿಗೆ ಸಿಲುಕಿ ಬೀಳುವಂತೆ ನೆಲದ ಮೇಲೆ ವೇಗದಿಂದ ಉರುಳಿದನು. ಗದಾಪ್ರಹಾರಕ್ಕೆ ಸಿಲುಕಿದ ಆ ವೀರ ಮಹಾ ಅಸುರನು ಕೆಳಗೆ ಬೀಳಲು ಕೃಷ್ಣನ ಮಗನು ಮಹಾ ಸೇನೆಯೊಂದಿಗೆ ಯುದ್ಧಕ್ಕೆ ಪ್ರವೇಶಮಾಡಿದನು. ಮಹಾರಥಿ ಮತ್ತು ಮಹಾಧನ್ವಿಯೆಂದು

ತಿಳಿಯಲ್ಪಟ್ಟ ವಿವಿಂಧ್ಯ ಎನ್ನುವ ಹೆಸರಿನ ದಾನವನು ಚಾರುದೇಷ್ಣನೊಂದಿಗೆ ಯುದ್ಧದಲ್ಲಿ ತೊಡಗಿದನು. ಆಗ ಹಿಂದೆ ವೃತ್ರ ಮತ್ತು ವಾಸವರ ಮಧ್ಯೆ ಹೇಗೆ ನಡೆಯಿತೋ ಹಾಗೆ ಚಾರುದೇಷ್ಣ ಮತ್ತು ವಿವಿಂಧ್ಯರ ನಡುವೆ ತುಮುಲ ಯುದ್ಧವು ನಡೆಯಿತು. ಅವರು ಅನ್ಯೋನ್ಯರಲ್ಲಿ ಕೋಪಗೊಂಡು ಅನ್ಯೋನ್ಯರನ್ನು ಶರಗಳಿಂದ ಗಾಯಗೊಳಿಸಿದರು ಮತ್ತು ಅವರೀರ್ವರು ಮಹಾಬಲರೂ ಸಿಂಹಗಳಂತೆ ಘರ್ಜಿಸಿದರು.

ರುಕ್ಮಿಣಿಯ ಮಗನು ಅಗ್ನಿ ಮತ್ತು ಅರ್ಕನ ವರ್ಚಸ್ಸಿಗೆ ಸಮನಾದ ಬಾಣವನ್ನು ಅಭಿಮಂತ್ರಿಸಿ, ಶತ್ರುಗಳನ್ನು ನಾಶಪಡಿಸಬಲ್ಲ ಮಹಾಸ್ತ್ರವನ್ನು ಧನುಸ್ಸಿಗೆ ಸಂಧಿಸಿದನು. ವಿವಿಂಧ್ಯನ ಮೇಲೆ ಸಂಕೃದ್ಧನಾದ ಕೃಷ್ಣನ ಮಗ ಮಹಾರಥಿಯು ಅದನ್ನು ಅ ಅಸುರನ ಮೇಲೆ ಎಸೆಯಲು ಅವನು ಅಸುನೀಗಿ ಬಿದ್ದನು. ವಿವಿಂಧ್ಯನು ಮರಣಹೊಂದಿದನ್ನು ಮತ್ತು ಸೈನ್ಯವು ಚದುರಿ ಹೋಗುತ್ತಿರುವುದನ್ನು ನೋಡಿದ ಶಾಲ್ವನು ಬೇಕಾದಲ್ಲಿ ಹೋಗಬಲ್ಲ ಸೌಭವನ್ನು ಏರಿ ಹಿಂದಿರುಗಿದನು. ದ್ವಾರಕಾವಾಸಿ ಆ ಸೇನೆಯಲ್ಲಿ ಎಲ್ಲರೂ ಸೌಭವನ್ನೇರಿ ಭೂಮಿಯ ಕಡೆ ಬರುತ್ತಿದ್ದ ಮಹಾಬಾಹು ಶಾಲ್ವನನ್ನು ನೋಡಿ ವ್ಯಾಕುಲಿತಗೊಂಡರು. ಆಗ ಆನರ್ತರ ಆ ಬಲವನ್ನು ವ್ಯವಸ್ಥೆಯಲ್ಲಿ ತರಲು ಹೊರಟ ಪ್ರದ್ಯುಮ್ನನು ಹೇಳಿದನು:

“ನೀವೆಲ್ಲರೂ ನಿಮ್ಮ ನಿಮ್ಮ ಸ್ಥಾನಗಳಲ್ಲಿ ನಿಂತು ನಾನು

ಸಂಗ್ರಾಮದಲ್ಲಿ ಬಲದಿಂದ ಯುದ್ಧಮಾಡಿ ರಾಜನೊಂದಿಗೆ ಸೌಭವನ್ನು ತಡೆಹಿಡಿಯುವುದನ್ನು ನೋಡಿ! ಯಾದವರೇ! ಇಂದು ನಾನು ಸೌಭಪತಿಯ ಈ ಸೇನೆಯನ್ನು ನನ್ನ ಧನುಸ್ಸಿನ ಭುಜದಿಂದ ಬಿಡಲ್ಪಟ್ಟ ಸರ್ಪಗಳಂತಿರುವ ಕಬ್ಬಿಣದ ಬಾಣಗಳಿಂದ ನಾಶಪಡಿಸುತ್ತೇನೆ! ಉಸಿರಾಡಿ! ಭಯಪಡಬೇಡಿ! ಇಂದು ಸೌಭರಾಜನು ನಾಶಹೊಂದುತ್ತಾನೆ. ನನ್ನಿಂದ ಹೊಡೆತತಿಂದು ಆ ದುಷ್ಟಾತ್ಮನು ಸೌಭದೊಂದಿಗೆ ವಿನಾಶಹೊಂದುತ್ತಾನೆ.”

ಹೀಗೆ ಸಂಹೃಷ್ಟನಾಗಿ ಪ್ರದ್ಯುಮ್ನನು ಕೂಗಿ ಹೇಳಲು ಅವನ ಸೇನೆಯು ತನ್ನ ಸ್ಥಾನದಲ್ಲಿಯೇ ನಿಂತು ಉತ್ತಮ ಹೋರಾಟವನ್ನು ನೀಡಿತು.

ರೌಕ್ಮಿಣೇಯನು ಯಾದವರಿಗೆ ಈ ರೀತಿ ಹೇಳಿ, ಮೊನಚಾದ ಬಾಣಗಳನ್ನು ತೆಗೆದುಕೊಂಡು, ವೇಗವಾಗಿ ಹೋಗಬಲ್ಲ ಶ್ರೇಷ್ಠ ಕುದುರೆಗಳನ್ನು ಕಟ್ಟಿದ, ಬಾಯಿತೆರದ ಮೊಸಳೆಯ ಅಲಂಕೃತ ಧ್ವಜವು ಮೇಲೆ ಹಾರಾಡುತ್ತಿದ್ದ, ಕಾಂಚನ ರಥವನ್ನೇರಿದನು. ಗಾಳಿಯಲ್ಲಿ ಹಾರಿಹೋಗುತ್ತಿವೆಯೋ ಎಂದು ಅವನ ಕುದುರೆಗಳು ತೋರುತ್ತಿರಲು ತೂರಣಖಡ್ಗಗಳನ್ನು ಧರಿಸಿ, ಕೈ ಮತ್ತು ಬೆರಳುಗಳಿಗೆ ಕಟ್ಟಿಕೊಂಡು ಆ ಧನುಃಶ್ರೇಷ್ಠ, ಮಹಾಬಲ ಶೂರನು ಧಾಳಿಯಿಟ್ಟನು. ಅವನು ಮಿಂಚಿನಿಂದ ಧನುಸ್ಸನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಾಯಿಸುತ್ತಾ ಸೌಭದಲ್ಲಿದ್ದ ದೈತ್ಯರೆಲ್ಲರನ್ನೂ

ಕಂಗಾಲುಗೊಳಿಸಿದನು. ಯಾರೂ ಕೂಡ ಅವನು ಬಾಣವನ್ನು ಹೂಡುವ ಮತ್ತು ಬಿಡುವುದರ ನಡುವಿನ ಅಂತರವನ್ನು ನೋಡಲಾಗುತ್ತಿರಲಿಲ್ಲ. ಹಾಗೆ ಅವನು ಶತ್ರುಗಳನ್ನು ರಣದಲ್ಲಿ ಒಂದೇ ಸಮನೆ ಕೊಲ್ಲುತ್ತಾ ಹೋದನು. ಅವನ ಮುಖದ ಬಣ್ಣವು ಬದಲಾಗಲಿಲ್ಲ. ಅವನ ದೇಹದಲ್ಲಿ ಕೂಡ ಏನೊಂದು ಕಂಪನವೂ ಕಂಡುಬರಲಿಲ್ಲ. ಆ ಅದ್ಭುತ ರೂಪಿ ನಾಯಕನು ಜೋರಾಗಿ ಗರ್ಜಿಸಿ ಸಿಂಹನಾದ ಮಾಡಿದ್ದುದನ್ನು ಲೋಕವೇ ಕೇಳಿಸಿಕೊಂಡಿತು. ಕಾಂಚನದ ಧ್ವಜಸ್ಥಂಭದಮೇಲಿದ್ದ ದೊಡ್ಡದಾಗಿ ಬಾಯಿತೆರೆದಿದ್ದ ಜಲಚರ ಮೊಸಳೆಯು ರಥದ ಮೇಲೆ ಹಾರಾಡುತ್ತಾ ಸಾಲ್ವನ ಸೇನೆಯಲ್ಲಿ ಭಯದ ಬೀಜವನ್ನು ಬಿತ್ತಿತು. ಆಗ ಆ ಶತ್ರುಕರ್ಶನ ಪ್ರದ್ಯುಮ್ನನು ವೇಗದಿಂದ ಮುನ್ನುಗ್ಗಿ ಹೋರಾಟಕ್ಕೆ ತಯಾರಾಗಿ ಶಾಲ್ವನ ಮೇಲೆ ಎರಗಿದನು. ಆದರೆ ಮಹಾಹವ ಸಂಕ್ರುದ್ಧ ಶಾಲ್ವನು ವೀರ ಪ್ರದ್ಯುಮ್ನನ ಆಕ್ರಮಣದಿಂದ ಕಷ್ಟಪಡಲಿಲ್ಲ. ರೋಷಮದಮತ್ತನಾದ ಆ ಪರಪುರಂಜಯ ಶಾಲ್ವನು ಕಾಮಗವನ್ನು ಏರಿ ಪ್ರದ್ಯುಮ್ನನೊಡನೆ ಯುದ್ಧಮಾಡಲು ತೊಡಗಿದನು. ಬಲಿ ಮತ್ತು ವಾಸವರೊಡನೆ ನಡೆದ ಯುದ್ಧದಂತಿದ್ದ ಶಾಲ್ವ ಮತ್ತು ವೃಷ್ಣಿಪ್ರವೀರನ ನಡುವಿನ ತುಮುಲ ಯುದ್ಧವನ್ನು ನೋಡಲು ಜನರು ಒಟ್ಟು ಸೇರಿದರು. ಆ ವೀರನ ಧ್ವಜಯುಕ್ತ, ಪತಾಕಯುಕ್ತ, ಗಾಲಿಗಳನ್ನು ಹೊಂದಿದ, ಭತ್ತಳಿಕೆಗಳನ್ನು ಹೊಂದಿದ ರಥವು ಮಾಯೆಯಿಂದ ಕೂಡಿದ್ದು ಚಿನ್ನದಿಂದ ಮಾಡಲ್ಪಟ್ಟಿತ್ತು. ಶ್ರೀಮಾನನು ಆ ಶ್ರೇಷ್ಠ ರಥವನ್ನು ಏರಿ ಮಹಾಬಲ ಪ್ರದ್ಯುಮ್ನನ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಆ

ಯುದ್ಧದಲ್ಲಿ ಪ್ರದ್ಯುಮ್ನನು ತನ್ನ ಭುಜವೇಗದಿಂದ ಶಾಲ್ವನನ್ನು ಮೋಹಗೊಳಿಸುವಂತೆ ವೇಗವಾಗಿ ಬಾಣಗಳ ಮಳೆಯನ್ನೇ ಸುರಿಸಿದನು. ಈ ರೀತಿಯ ಅಸಂಖ್ಯ ಬಾಣಗಳನ್ನು ತಡೆಯಲಾಗದೇ ಸೌಭರಾಜನು ಕೃಷ್ಣನ ಮಗನ ಮೇಲೆ ಉರಿಯುತ್ತಿರುವ ಬೆಂಕಿಯಂತಿರುವ ಬಾಣಗಳನ್ನು ಪ್ರಯೋಗಿಸಿದನು. ಶಾಲ್ವನ ಬಾಣಗಳ ಹೊಡೆತಕ್ಕೆ ಸಿಲುಕಿದ ರುಕ್ಮಿಣಿನಂದನನು ತಕ್ಷಣವೇ ಶತ್ರುವಿನ ದುರ್ಬಲ ಸ್ಥಾನವನ್ನು ಹುಡುಕಿಕೊಂಡು ಹೋಗುವ ಮರ್ಮಭೇದಿನಿ ಬಾಣವನ್ನು ಪ್ರಯೋಗಿಸಿದನು. ಕೃಷ್ಣನ ಮಗನು ಬಿಟ್ಟ ಆ ಬಾಣವು ಅವನ ಕವಚವನ್ನು ಬೇಧಿಸಿ ಹೃದಯವನ್ನು ಚುಚ್ಚಲು, ಅವನು ಮೂರ್ಛೆತಪ್ಪಿ ಬಿದ್ದನು. ವೀರ ಶಾಲ್ವರಾಜನು ವಿಚೇತಸನಾಗಿ ಬೀಳಲು ದಾನವೇಂದ್ರರು ಭೂಮಿಯನ್ನೇ ಸೀಳಿಬಿಡುವರೋ ಎನ್ನುವಂತೆ ಮುನ್ನುಗ್ಗಿದರು.

ಸೌಭಪತಿಯು ಮೂರ್ಛೆ ತಪ್ಪಿ ಕೆಳಗೆ ಬೀಳಲು ಶಾಲ್ವನ ಸೈನ್ಯವು ಹಾಹಾಕಾರವನ್ನು ಮಾಡಿತು. ಅನಂತರ ಪುನಃ ಚೇತರಿಸಿಕೊಂಡು ಎದ್ದು ತಕ್ಷಣವೇ ಮಹಾಬಲ ಪ್ರದ್ಯುಮ್ನನ ಮೇಲೆ ಬಾಣವನ್ನು ಪ್ರಯೋಗಿಸಿದನು. ಸಮರದಲ್ಲಿ ಎದುರಿಸಿ ನಿಂತಿದ್ದ ಮಹಾಬಾಹು ವೀರ ಪ್ರದ್ಯುಮ್ನನು ಅವನಿಂದ ಜತ್ರುಪ್ರದೇಶದಲ್ಲಿ ಹೊಡೆತ ತಿಂದು ರಥದಲ್ಲಿಯೇ ಕುಸಿದು ಬಿದ್ದನು. ರುಕ್ಮಿಣೀನಂದನನನ್ನು ಈ ರೀತಿ ಹೊಡೆದು ಶಾಲ್ವನು ಸಿಂದನಾದವನ್ನು ಗೈದು ತನ್ನ ನಿನಾದದಿಂದ ಇಡೀ ಭೂಮಿಯನ್ನೇ ತುಂಬಿಸಿದನು. ಕೃಷ್ಣನ ಮಗನು ಮೂರ್ಛೆ

ಹೊಂದಿರಲು ಅವನು ಪುನಃ ಇನ್ನೂ ತಡೆಯಲಸಾಧ್ಯ ಬಾಣಗಳನ್ನು ಪ್ರಯೋಗಿಸಿದನು. ಆ ರಣರಂಗದಲ್ಲಿ ಪ್ರದ್ಯುಮ್ನನು ಬಹಳ ಬಾಣಗಳಿಂದ ಚುಚ್ಚಲ್ಪಟ್ಟು ಮೂರ್ಛಿತನಾಗಿ ನಿಶ್ಚೇಷ್ಟನಾಗಿದ್ದನು.

ಬಲಿಶ್ರೇಷ್ಠ ಪ್ರದ್ಯುಮ್ನನನ್ನು ಶಾಲ್ವನ ಬಾಣಗಳು ಚುಚ್ಚಲು, ಹೋರಾಡಲು ಬಂದಿದ್ದ ವೃಷ್ಣಿಗಳು ಗುರಿತಪ್ಪಿ ಬುದ್ಧಿಯನ್ನು ಕಳೆದುಕೊಂಡರು. ಪ್ರದ್ಯುಮ್ನನು ಕೆಳಗುರುಳಲು ವೃಷ್ಣಿ ಮತ್ತು ಅಂಧಕರ ಸೇನೆಯು ಹಾಹಾಕಾರವನ್ನುಂಟುಮಾಡಿತು ಮತ್ತು ಶತ್ರುಸೇನೆಯು ಸಂತಸಗೊಂಡಿತು. ಅವನು ಮೂರ್ಛೆಗೊಂಡಿದುದನ್ನು ನೋಡಿ, ಅವನ ಕುಶಲ ಸಾರಥಿ ದಾರುಕನು ಅವನನ್ನು ತಕ್ಷಣವೇ ಅತಿವೇಗದ ಕುದುರೆಗಳೊಂದಿಗೆ ರಣರಂಗದಿಂದ ಆಚೆ ಕರೆದುಕೊಂಡು ಹೋದನು. ರಥವು ಹೋಗುತ್ತಿರಲು ಸ್ವಲ್ಪ ದೂರದಲ್ಲಿಯೇ ಶತ್ರುಗಳ ರಥಗಳನ್ನು ತಡೆಹಿಡಿಯುವುದರಲ್ಲಿ ಪ್ರವೀಣನು ಎಚ್ಚೆದ್ದು ಧನುಸ್ಸನ್ನು ಎತ್ತಿ ಹಿಡಿದು ಸಾರಥಿಗೆ ಹೇಳಿದನು:

> “ಸೌತಿ! ಏನೆಂದು ಯೋಚಿಸಿ ಈ ರಥವನ್ನು ಹಿಂದೆ ತೆಗೆದುಕೊಂಡು ಹೋಗುತ್ತಿದ್ದೀಯೆ? ಇದು ವೃಷ್ಣಿಪ್ರವೀರರು ರಣರಂಗದಲ್ಲಿ ಅನುಸರಿಸುವ ಧರ್ಮ ಎಂದು ಹೇಳುವುದಿಲ್ಲವೇ? ಈ ಮಹಾಯುದ್ಧದಲ್ಲಿ ಶಾಲ್ವನನ್ನು ನೋಡಿ ನಿನ್ನ ಬುದ್ಧಿಯನ್ನು ಕಳೆದುಕೊಂಡಿಲ್ಲ ತಾನೇ? ಅಥವಾ ರಣವನ್ನು ನೋಡಿ ವಿಷಾದಗೊಂಡೆಯೇ? ಯಥಾವತ್ತಾಗಿ

ನೀನು ನನಗೆ ಹೇಳು!”

ಸೂತನು ಹೇಳಿದನು:

“ನನಗೆ ಬುದ್ಧಿನಾಶವೂ ಆಗಲಿಲ್ಲ ಅಥವಾ ಭಯವೂ ಆವರಿಸಲಿಲ್ಲ. ಕೇಶವನಂದನ! ಆದರೆ ಶಾಲ್ವನು ನಿನಗೆ ಅತಿ ಭಾರದವನು ಎಂದು ನನಗನ್ನಿಸುತ್ತದೆ. ಆ ಪಾಪಿಯು ಹೆಚ್ಚು ಬಲಶಾಲಿಯಾದುದರಿಂದ ನಾನು ನಿಧಾನವಾಗಿ ಹಿಂದೆ ಸರಿದೆನು. ರಣರಂಗದಲ್ಲಿ ಮೂರ್ಛೆತಪ್ಪಿ ಬಿದ್ದ ಶೂರನನ್ನು ರಥದ ಸಾರಥಿಯು ರಕ್ಷಿಸಬೇಕು. ನೀನು ಹೇಗೆ ನನ್ನನ್ನು ರಕ್ಷಿಸುತ್ತೀಯೋ ಹಾಗೆ ನಾನೂ ಕೂಡ ಸದಾ ನಿನ್ನನ್ನು ರಕ್ಷಿಸಬೇಕು. ರಥಿಯನ್ನು ಯಾವಾಗಲೂ ರಕ್ಷಿಸಬೇಕು ಎಂದು ನಾನು ಹಿಂದೆ ಸರಿದೆನು. ನೀನಾದರೋ ಒಬ್ಬನೇ ಇದ್ದೀಯೆ. ದಾನವರು ಬಹುಸಂಖ್ಯೆಯಲ್ಲಿ ಇದ್ದಾರೆ. ರೌಕ್ಮಿಣೇಯ! ಯುದ್ಧವು ಅಸಮವಾಗಿದೆ ಎಂದು ತಿಳಿದು ನಾನು ಹಿಂದೆ ಸರಿದೆ.”

ಸೂತನು ಈ ರೀತಿ ಮಾತನಾಡುತ್ತಿರಲು ಆ ಮಕರಕೇತುವು ಸೂತನಿಗೆ “ರಥವನ್ನು ಪುನಃ ಹಿಂದೆ ತೆಗೆದುಕೊಂಡು ಹೋಗು!” ಎಂದು ಆಜ್ಞೆಯನ್ನಿತ್ತನು.

“ದಾರುಕಾತ್ಮಜ! ಇನ್ನು ಮುಂದೆ ಎಂದೂ ಈ ರೀತಿ ನಾನು ಜೀವಂತವಿರುವಾಗಲೇ ರಣದಿಂದ ಹಿಂದೆಸರಿಯುವ

ಕೆಲಸವನ್ನು ಪುನಃ ಮಾಡಬೇಡ! ವೃಷ್ಣಿಕುಲದಲ್ಲಿ ಹುಟ್ಟಿದ ಯಾರೂ ಸಂಗರವನ್ನು ಬಿಟ್ಟುಬರುವುದಿಲ್ಲ ಅಥವಾ ಬಿದ್ದವನನ್ನು ಕೊಲ್ಲುವುದಿಲ್ಲ ಮತ್ತು ಶರಣು ಬಂದವನನ್ನು ಕೊಲ್ಲುವುದಿಲ್ಲ. ಹಾಗೆಯೇ ಯಾರೂ ಸ್ತ್ರೀ, ವೃದ್ಧ, ಅಥವಾ ಬಾಲಕನನ್ನು, ರಥದಿಂದ ಬಿದ್ದವನನ್ನು, ಗುಂಪಿನಿಂದ ಬೇರೆಯಾದವನನ್ನು, ಶಸ್ತ್ರ-ಆಯುಧಗಳು ತುಂಡಾಗಿರುವವನನ್ನು ಕೊಲ್ಲುವುದಿಲ್ಲ. ನೀನಾದರೋ ಸೂತಕರ್ಮದಲ್ಲಿ ಪಳಗಿದ ಸೂತಕುಲದಲ್ಲಿ ಜನಿಸಿದ್ದೀಯೆ ಮತ್ತು ದಾರುಕ! ನೀನು ಮಹೇಷ್ವಾಸ ವೃಷ್ಣಿಯರ ಧರ್ಮವನ್ನು ತಿಳಿದಿದ್ದೀಯೆ. ಯುದ್ಧದ ಎದುರಿನಲ್ಲಿ ವೃಷ್ಣಿಗಳ ನಡತೆಯ ಕುರಿತು ಚೆನ್ನಾಗಿ ತಿಳಿದುಕೊಂಡಿದ್ದ ನೀನು ಪುನಃ ಎಂದೂ ಯಾವುದೇ ಸಂದರ್ಭದಲ್ಲಿಯೂ ಈ ರೀತಿ ಹಿಂದೆ ಸರಿಯಕೂಡದು! ಹಿಂಜರಿದರೆ, ಹಿಂದಿನಿಂದ ಹೊಡೆದರೆ ಅಥವಾ ಭಯದಿಂದ ರಣಪಲಾಯನ ಮಾಡಿದರೆ ಗದಾಗ್ರಜ, ದುರಾಧರ್ಷ ಮಾಧವನು ನನ್ನ ಕುರಿತು ಏನೆಂದು ಯೋಚಿಸುವುದಿಲ್ಲ? ಮತ್ತು ಕೇಶವನ ಅಣ್ಣ ಆ ನೀಲವಸ್ತ್ರಧಾರಿ, ಮದೋತ್ಕಟ, ಮಹಾಬಾಹು, ಬಲದೇವನು ಹಿಂದಿರುಗಿ ಬಂದು ಏನು ಹೇಳಿಯಾನು? ನಾನು ರಣದಿಂದ ಪಲಾಯನಮಾಡಿದೆನೆಂದರೆ ಶಿನಿಯ ಮೊಮ್ಮಗ, ನರಸಿಂಹ, ಮಹಾಧನು ಸಮಿತಿಂಜಯ, ಸಾಂಬ, ದುರ್ಧರ್ಷ

ಚಾರುದೇಷ್ಣ, ಗದ ಮತ್ತು ಸಾರಣರು, ಮಹಾಬಾಹು ಅಕ್ರೂರನೂ ಏನು ಹೇಳಿಯಾರು? ವೃಷ್ಣಿವೀರರು ಶೂರರೂ ಸಂಭಾವಿತರೂ, ಸಂತರೂ ಮತ್ತು ನಿತ್ಯವೂ ಪುರುಷರೆಂದು ಅಭಿಪ್ರಾಯ ಪಟ್ಟಿರುವ ಸ್ತ್ರೀಯರು ಒಟ್ಟಿಗೇ ನನ್ನ ಕುರಿತು ಏನು ಮಾತನಾಡಿಕೊಂಡಾರು? ಪ್ರದ್ಯುಮ್ನನು ಭಯಪಟ್ಟುಕೊಂಡಿದ್ದಾನೆ! ಮಹಾಯುದ್ಧವನ್ನು ತ್ಯಜಿಸಿ ಓಡಿಹೋಗುತ್ತಾನೆ! ಅವನಿಗೆ ಧಿಕ್ಕಾರ! ಎಂದು ಹೇಳುತ್ತಾರೆ. ಅವನು ಸಾಧು ಎಂದು ಹೇಳುವುದಿಲ್ಲ! ನನಗೆ ಧಿಕ್ಕಾರವನ್ನು ಹೇಳಿ ಪರಿಹಾಸಮಾಡುವುದಕ್ಕಿಂತ ನನ್ನ ಸಾವೇ ನನಗೆ ಒಳ್ಳೆಯದು. ನನ್ನನ್ನು ಪುನಃ ಹಿಂದೆ ಕರೆದುಕೊಂಡು ಬರಬೇಡ. ಮಧುಸಂಹಾರಕ ಹರಿಯು ನನ್ನ ಮೇಲೆ ಭಾರವನ್ನು ಒಪ್ಪಿಸಿ ಅಮಿತತೇಜಸ ಭರತಸಿಂಹ ಪಾರ್ಥನ ಯಜ್ಞಕ್ಕೆ ಹೋದನು. ವೀರ ಕೃತವರ್ಮನು ಶಾಲ್ವನನ್ನು ನಾನು ತಡೆಯುತ್ತೇನೆ, ನೀನು ನಿಲ್ಲು ಎಂದು ಹೇಳಿ ನನ್ನನ್ನು ತಡೆಗಟ್ಟಿದ್ದ. ಆ ಹೃದಿಕಾತ್ಮಜನಿಗೆ ಹಿಂದಿರುಗಿ ಬರಬೇಡ ಎಂದು ಹೇಳಿದ್ದ. ಈಗ ನಾನು ರಣವನ್ನು ತ್ಯಜಿಸಿ ಹಿಂದಿರುಗಿ ಬಂದು ಆ ಮಹಾರಥಿಗೆ ಏನು ಹೇಳಲಿ? ದುರಾದರ್ಷ, ಶಂಖಚಕ್ರಗದಾಧರ, ಪುರುಷ, ಪುಂಡರೀಕಾಕ್ಷ, ಮಹಾಭುಜನು ಮರಳಿ ಬಂದಾಗ ಅವನಿಗೆ ನಾನು ಏನು ಹೇಳಲಿ? ಸಾತ್ಯಕಿ, ಬಲದೇವ ಮತ್ತು ನನ್ನೊಂದಿಗೆ ಸತತವೂ

ಸ್ಪರ್ಧಿಸುತ್ತಿರುವ ಇತರ ಅಂಧಕವೃಷ್ಣಿಗಳಿಗೆ ನಾನು ಏನು ಹೇಳಲಿ? ವಿವಶನಾಗಿರುವಾಗ ಈ ರಣವನ್ನು ತ್ಯಜಿಸಿ ನಿನ್ನಿಂದ ಹಿಂದೆ ಕರೆತರಲ್ಪಟ್ಟ ನನ್ನ ಹಿಂದಿನಿಂದ ಬಿದ್ದ ಬಾಣಗಳಿಂದ ನಾನು ಹೇಗೆ ತಾನೇ ಜೀವಿಸಲಿ? ತಕ್ಷಣವೇ ಈ ರಥವನ್ನು ಹಿಂದಿರುಗಿಸು ಮತ್ತು ಇಂಥಹ ಕೆಲಸವನ್ನು ಎಂದೂ ಯಾವುದೇ ಸಂದರ್ಭದಲ್ಲಿಯೂ ಮಾಡಬೇಡ! ಭೀತನಾಗಿ ರಣದಿಂದ ಓಡಿಹೋಗುತ್ತಿರುವಾಗ ಹಿಂದಿನಿಂದ ಶರಗಳ ಪೆಟ್ಟುತಿಂದ ನಾನು ನನ್ನ ಜೀವದ ಕುರಿತು ಎಂದೂ ಆಲೋಚಿಸುವುದಿಲ್ಲ! ಕಾಪುರುಷನಂತೆ (ಹೇಡಿಯಂತೆ) ನಾನು ಭಯಾರ್ದಿತನಾಗಿ ರಣವನ್ನು ತೊರೆದು ಓಡಿಹೋಗಿದ್ದುದನ್ನು ನೀನು ಎಂದಾದರೂ ನೋಡಿದ್ದೀಯಾ? ಯುದ್ಧದಲ್ಲಿ ನನಗೆ ಇನ್ನೂ ಆಸೆಯಿರುವಾಗ ಸಂಗ್ರಾಮವನ್ನು ಬಿಟ್ಟು ಬಂದಿದ್ದುದು ನಿನಗೆ ಯುಕ್ತವಲ್ಲ. ರಣರಂಗಕ್ಕೆ ಹಿಂದಿರುಗು!"

ಈ ಮಾತುಗಳಿಗೆ ಸೂತಪುತ್ರನು ರಣರಂಗದಲ್ಲಿಯೇ ಪ್ರದ್ಯುಮ್ನನಿಗೆ ಶ್ಲಾಘನೀಯ ಮಧುರ ಮಾತುಗಳಿಂದ ಉತ್ತರಿಸಿದನು:

"ರೌಕ್ಮಿಣೇಯ! ಕುದುರೆಗಳನ್ನು ಓಡಿಸುವ ನನಗೆ ಸಂಗ್ರಾಮದಲ್ಲಿ ಯಾವುದೇ ರೀತಿಯ ಭಯವಿಲ್ಲ. ವೃಷ್ಣಿಗಳು ಹೇಗೆ ಯುದ್ಧಮಾಡುತ್ತಾರೆಂದು ನನಗೆ ತಿಳಿದಿದೆ. ಈ ವಿಷಯದಲ್ಲಿ ನೀನು ಹೇಳಿದುದಕಿಂತ ಹೊರತಾಗಿ ಏನೂ ಇಲ್ಲ.

ಆದರೆ ಸಾರಥ್ಯದಲ್ಲಿ ತೊಡಗಿರುವ ನಮಗೆ ಒಂದು ಉಪದೇಶವಿದೆ: ಎಲ್ಲ ಸಂದರ್ಭಗಳಲ್ಲಿಯೂ ಕಷ್ಟದಲ್ಲಿರುವ ರಥಿಯನ್ನು ರಕ್ಷಿಸಬೇಕು. ನೀನಾದರೋ ಶಾಲ್ವನು ಪ್ರಯೋಗಿಸಿದ ಬಾಣಗಳಿಂದ ಚೆನ್ನಾಗಿ ಹೊಡೆತ ತಿಂದು ಮೂರ್ಛಿತನಾಗಿದ್ದೆ. ಆದುದರಿಂದಲೇ ನಾನು ಹಿಂದೆ ಸರಿದೆ. ಈಗ ನೀನು ನಿನ್ನ ಎಚ್ಚರವನ್ನು ಪುನಃ ಪಡೆದುಕೊಂಡಿರುವೆಯಾದುದರಿಂದ ಕುದುರೆಗಳನ್ನು ಓಡಿಸುವುದರಲ್ಲಿ ನನ್ನಲ್ಲಿದ್ದ ಕುಶಲತೆಯನ್ನು ನೋಡು! ದಾರುಕನಿಂದ ಉತ್ಪನ್ನನಾದ ನಾನು ಅವನಿಂದ ಯಥಾವತ್ತಾಗಿ ತರಬೇತಿಯನ್ನು ಪಡೆದಿದ್ದೇನೆ. ಏನೂ ಭಯವಿಲ್ಲದೇ ಶಾಲ್ವನ ಮಹಾಸೇನೆಯನ್ನು ಪ್ರವೇಶಿಸುತ್ತೇನೆ.”

ಹೀಗೆ ಹೇಳಿ ಅವನು ಕುದುರೆಗಳನ್ನು ರಣರಂಗದಲ್ಲಿ ಮುಂದೆಹೋಗುವಂತೆ ಗಾಳದಿಂದ ಚೋದಿಸಿ, ವೇಗವಾಗಿ ಮುನ್ನುಗ್ಗಿದನು. ಆಗ ಬಾರಿಕೋಲಿನಿಂದ ಪ್ರಚೋದಿಸಲ್ಪಟ್ಟ, ಗಾಳಗಳಿಂದ ನಿಯಂತ್ರಿಸಲ್ಪಟ್ಟ ಆ ಉತ್ತಮ ಕುದುರೆಗಳು ವಿಚಿತ್ರ ವೃತ್ತಾಕಾರದಲ್ಲಿ, ಬಲ ಮತ್ತು ಎಡದಿಕ್ಕುಗಳಲ್ಲಿ ಎಲ್ಲೆಲ್ಲೂ ವಿಚಿತ್ರವಾಗಿ ಓಡುತ್ತಾ  ಅವು ಆಕಾಶದಲ್ಲಿ ಹಾರುತ್ತಿವೆಯೋ ಎಂಬಂತೆ ತೋರಿದವು. ದಾರುಕನ ಹಸ್ತಕೌಶಲವನ್ನು ತಿಳಿದ ಆ ಕುದುರೆಗಳ ಹೆಜ್ಜೆಗಳು ಭೂಮಿಯನ್ನು ಮುಟ್ಟುತ್ತಿರುವಾಗಲೆಲ್ಲ ಬೆಂಕಿಯ ಕಿಡಿಗಳನ್ನು ಹಾರಿಸುತ್ತಾ ಓಡಿದವು. ಏನೂ ಕಷ್ಟವಿಲ್ಲದೇ ಅವನು ಶಾಲ್ವನ

ಸೇನೆಯನ್ನು ಎಡಬದಿಯಿಂದ ಬಂದು ಸುತ್ತುಹಾಕಿದನು. ಇದೊಂದು ಅದ್ಭುತವೇ ಆಗಿತ್ತು! ಪ್ರದ್ಯುಮ್ನನ ಕಿರುಕುಳಕ್ಕೊಳಗಾದ ಆ ಸೌಭರಾಜನು ತಕ್ಷಣವೇ ತನ್ನ ಬಲಗಡೆಯಲ್ಲಿದ್ದ ಸಾರಥಿಯ ಮೇಲೆ ಮೂರು ತೀಕ್ಷ್ಣ ಬಾಣಗಳನ್ನು ಪ್ರಯೋಗಿಸಿದನು. ಆದರೆ ದ್ವಾರಕನ ಮಗನು ಆ ಬಾಣಗಳಿಗೆ ಲಕ್ಷ್ಯಕೊಡದೇ ತನ್ನ ಮಾತನ್ನು ಕೇಳುತ್ತಿದ್ದ ಕುದುರೆಗಳನ್ನು ಇನ್ನೂ ಮುಂದುವರೆಸಿದನು. ಆಗ ಪುನಃ ಸೌಭರಾಜನು ಬಹುವಿಧದ ಬಾಣಗಳನ್ನು ನನ್ನ ಮಗ ವೀರ ರುಕ್ಮಿಣೀನಂದನನ ಮೇಲೆ ಪ್ರಯೋಗಿಸಿದನು. ಅವು ತಲುಪುವುದರೊಳಗೇ ಆ ಪರವೀರಹನು ತನ್ನ ತೀಕ್ಷ್ಣ ಬಾಣಗಳಿಂದ ಅವುಗಳನ್ನು ತುಂಡರಿಸಿದನು ಮತ್ತು ತನ್ನ ಹಸ್ತಲಾಘವವನ್ನು ತೋರಿಸಿ ರೌಕ್ಮಿಣೇಯನು ಮುಗುಳ್ನಕ್ಕನು. ಅವನ ಬಾಣಗಳನ್ನು ಪ್ರದ್ಯುಮ್ನನು ತುಂಡರಿಸಿದುದನ್ನು ನೋಡಿದ ಸೌಭರಾಜನು ದಾರುಣ ಅಸುರೀ ಮಾಯೆಯನ್ನುಪಯೋಗಿಸಿ ಬಾಣಗಳನ್ನು ಬಿಟ್ಟನು. ಆದರೆ ದೈತೇಯಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದಾನೆ ಎಂದು ತಿಳಿದ ಮಹಾಬಲನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಅವುಗಳನ್ನು ಮಧ್ಯದಲ್ಲಿಯೇ ತುಂಡರಿಸಿದನು. ರಕ್ತವನ್ನು ಕುಡಿಯುವ ಆ ಅಸ್ತ್ರವು ಅವನ ಬಾಣಗಳನ್ನು ದಾಟಿ ಮುಂದೆ ಹೋಗಿ ಅವನ ತಲೆ, ಎದೆ ಮತ್ತು ಮುಖಗಳನ್ನು ಹೊಡೆಯಲು ಅವನು ಮೂರ್ಛಿತನಾಗಿ ಕೆಳಗೆ ಬಿದ್ದನು. ಬಾಣದ ಹೊಡೆತದಿಂದ ಪೀಡಿತನಾದ ಆ ಕ್ಷುದ್ರ ಶಾಲ್ವನು ಕೆಳಗುರುಳಲು ರೌಕ್ಮಿಣೇಯನು ಇನ್ನೊಂದು ಶತ್ರುನಾಶಕ ಬಾಣವನ್ನು ಹೂಡಿದನು. ಬಿಲ್ಲಿನ

ಹೆದೆಗೇರಿಸಿದ ಸರ್ವ ದಾಶಾರ್ಹರೂ ಪೂಜಿಸುವ, ಸೂರ್ಯನ ತಾಪದಂತೆ ಬೆಳಗುತ್ತಿದ್ದ ಆ ಶರವನ್ನು ನೋಡಿ ಅಂತರಿಕ್ಷದಲ್ಲಿ ಹಾಹಾಕಾರವುಂಟಾಯಿತು. ಆಗ ಇಂದ್ರ ಮತ್ತು ಧನೇಶ್ವರನೂ ಸೇರಿ ಎಲ್ಲ ದೇವಗಣಗಳೂ ನಾರದ ಮತ್ತು ಮಹಾಬಲ ವಾಯುವನ್ನು ಕಳುಹಿಸಿದರು. ಅವರಿಬ್ಬರೂ ರೌಕ್ಮಿಣೇಯನಲ್ಲಿಗೆ ಬಂದು ದಿವೌಕಸರ ಸಂದೇಶವನ್ನು ಕೊಟ್ಟರು:

> "ವೀರ! ಶಾಲ್ವರಾಜನು ಎಂದೂ ನಿನ್ನಿಂದ ವಧೆಗೊಳ್ಳಲು ಸಾಧ್ಯವಿಲ್ಲ! ಎಷ್ಟೇ ಬಾರಿ ಬಾಣಗಳನ್ನು ಪ್ರಯೋಗಿಸಿದರೂ ರಣದಲ್ಲಿ ಇವನು ನಿನ್ನಿಂದ ಮರಣಹೊಂದುವುದಿಲ್ಲ. ನೀನು ಬಿಲ್ಲಿಗೇರಿಸಿದ ಈ ಶ್ರೇಷ್ಠ ಬಾಣವು ಎಂದೂ ಇವನನ್ನು ಕೊಲ್ಲುವುದಿಲ್ಲ. ರಣದಲ್ಲಿ ಇವನ ಮೃತ್ಯುವು ದೇವಕಿನಂದನ ಕೃಷ್ಣನಿಂದ ಎಂದು ಧಾತ್ರನ ಸಂಕಲ್ಪವಾಗಿದೆ. ಅದು ಸುಳ್ಳಾಗುವುದಿಲ್ಲ!"

ಆಗ ಪರಮಸಂಹೃಷ್ಟ ಪ್ರದ್ಯುಮ್ನನು ಆ ಉತ್ತಮ ಶರವನ್ನು ತನ್ನ ಆ ಶ್ರೇಷ್ಠ ಧನುಸ್ಸಿನಿಂದ ಹಿಂದೆ ತೆಗೆದುಕೊಂಡು ಭತ್ತಳಿಕೆಯಲ್ಲಿ ಇರಿಸಿದನು. ಆಗ ಶಾಲ್ವನು ಪರಮ ದುರ್ಬಲನಾಗಿ ಮೇಲೆದ್ದು, ಪ್ರದ್ಯುಮ್ನನ ಶರಗಳಿಂದ ಪೀಡಿತನಾಗಿ ತನ್ನ ಸೇನೆಯೊಂದಿಗೆ ಹಿಂದೆ ಸರಿದನು. ವೃಷ್ಣಿಗಳಿಂದ ಪೆಟ್ಟುತಿಂದ ಆ ಕ್ರೂರನು ದ್ವಾರಕೆಯನ್ನು ಬಿಟ್ಟು ಸೌಭವನ್ನೇರಿ ಆಕಾಶದ ಕಡೆ ಪ್ರಯಾಣಿಸಿದನು.

ಅನಾರ್ತನಗರವು ಮುಕ್ತವಾದ ನಂತರ, ಯುಧಿಷ್ಠಿರನ ಮಹಾಕ್ರತು ರಾಜಸೂಯದಿಂದ ಕೃಷ್ಣನು ಅಲ್ಲಿಗೆ ಹಿಂದಿರುಗಿ ಬಂದನು. ಆಗ ಅವನು ಸತ್ವವನ್ನು ಕಳೆದುಕೊಂಡಿದ್ದ ದ್ವಾರಕೆಯನ್ನು, ಅದರ ಸ್ವಾಧ್ಯಾಯ ವಷಟ್ಕಾರಗಳು ನಿಂತಿರುವುದನ್ನೂ, ಆಭರಣಗಳನ್ನು ಧರಿಸದೇ ಇದ್ದ ವರಸ್ತ್ರೀಯರನ್ನೂ ನೋಡಿದನು ದ್ವಾರಕೆಯ ಉಪವನಗಳು ಗುರುತಿಸಲಾಗದಂತಿರುವುದನ್ನು ನೋಡಿ ಶಂಕೆಗೊಳಗಾಗಿ ಅವನು ಹೃದಿಕಾತ್ಮಜನನ್ನು (ಕೃತವರ್ಮನನ್ನು) ಕೇಳಿದನು:

> “ವೃಷ್ಣಿಪುರದ ನರನಾರಿಯರು ತುಂಬಾ
> ಅಸ್ವಸ್ಥರಾಗಿರುವವರಂತೆ ತೋರುತ್ತಿದ್ದಾರೆ! ನರಶಾರ್ದೂಲ!
> ಇದು ಏಕೆ ಎಂದು ಕೇಳಲು ಬಯಸುತ್ತೇನೆ.”

ಕೃಷ್ಣನು ಹೀಗೆ ಕೇಳಲು ಆ ಹಾರ್ದಿಕ್ಯನು ಶಾಲ್ವನು ಪುರವನ್ನು ಮುತ್ತಿಗೆ ಹಾಕಿದುದರ ಮತ್ತು ಅವನಿಂದ ಬಿಡುಗಡೆಹೊಂದಿದುದರ ಕುರಿತು ವಿಸ್ತಾರವಾಗಿ ಹೇಳಿದನು. ಅದೆಲ್ಲವನ್ನೂ ಕೃಷ್ಣನು ಸಂಪೂರ್ಣವಾಗಿ ಕೇಳಿ, ಶಾಲ್ವರಾಜನ ವಿನಾಶದ ಕುರಿತು ಮನಸ್ಸು ಮಾಡಿದನು. ಅನಂತರ ಅವನು ಪುರಜನರನ್ನು ಮತ್ತು ರಾಜ ಆಹುಕನನ್ನು, ಹಾಗೆಯೇ ಅನಕದುಂದುಭಿಯನ್ನು, ಸರ್ವ ವೃಷ್ಣಿಪ್ರವೀರರನ್ನು ಸಮಾಧಾನಪಡಿಸಿ ಸಂತೋಷದಿಂದ ಹೇಳಿದನು:

> “ಯಾದವರ್ಷಭರೇ! ಸದಾ ನಗರದ ರಕ್ಷಣೆಯಲ್ಲಿಯೇ
> ನಿರತರಾಗಿರಿ. ಶಾಲ್ವರಾಜನ ವಿನಾಶಕ್ಕಾಗಿ ನಾನು

ಹೊರಡುತ್ತಿದ್ದೇನೆ. ಅವನನ್ನು ಕೊಲ್ಲದೆಯೇ ನಾನು ದ್ವಾರವತೀ ನಗರಕ್ಕೆ ಹಿಂದಿರುಗುವುದಿಲ್ಲ ಎಂದು ತಿಳಿಯಿರಿ. ಶಾಲ್ವನೊಂದಿಗೆ ಸೌಭನಗರವನ್ನೂ ನಾಶಪಡಿಸಿಯೇ ನಾನು ನಿಮ್ಮನ್ನು ಪುನಃ ನೋಡುತ್ತೇನೆ. ಮೂರೂ ಸಾಮಗಳಲ್ಲಿ ಶತ್ರುಭೀಷಣ ದುಂದುಭಿಯನ್ನು ಮೊಳಗಿಸಿ.”

ಅವನಿಂದ ಯಥಾವತ್ತಾಗಿ ಆಶ್ವಾಸಿತರಾದ ಆ ವೀರರು ಎಲ್ಲರೂ ಸಂತೋಷದಿಂದ “ಹೊರಡು ! ಶತ್ರುವನ್ನು ಕತ್ತರಿಸಿಹಾಕು !” ಎಂದು ಕೃಷ್ಣನಿಗೆ ಕೂಗಿ ಹೇಳಿದರು. ಆ ಪ್ರಹೃಷ್ಟ ವೀರರಿಂದ ಆಶೀರ್ವಾದ ಅಭಿನಂದನೆಗಳನ್ನು ಪಡೆದು, ದ್ವಿಜಶ್ರೇಷ್ಠರು ವಾಚನಮಾಡಿದ ನಂತರ, ಆಹುಕನಿಗೆ ಶಿರಸಾ ಪ್ರಣಮಿಸಿ, ಸೈನ್ಯ-ಸುಗ್ರೀವರಿಂದ ಕೂಡಿದ ರಥವನ್ನೇರಿ, ಅದರ ಶಬ್ಧವು ದಿಕ್ಕುಗಳಲ್ಲಿ ಮೊಳಗುತ್ತಿರಲು ತನ್ನ ಶ್ರೇಷ್ಠ ಶಂಖ ಪಾಂಚಜನ್ಯವನ್ನು ಮೊಳಗಿಸುತ್ತಾ, ವಿಜಯವನ್ನೇ ಗುರಿಯನ್ನಾಗಿಟ್ಟುಕೊಂಡ, ಚತುರಂಗ ಬಲದ ಮಹಾ ಸೇನೆಯಿಂದ ಸುತ್ತುವರೆಯಲ್ಪಟ್ಟು ಕೃಷ್ಣನು ಹೊರಟನು. ಬಹಳಷ್ಟು ದೇಶಗಳನ್ನೂ, ಗಿರಿಗಳನ್ನೂ, ವನಗಳನ್ನೂ, ಸರೋವರಗಳನ್ನೂ, ಝರಿಗಳನ್ನೂ ದಾಟಿ ಮಾರ್ತಿಕಾವತವನ್ನು ತಲುಪಿದನು. ಅಲ್ಲಿ ಅವನಿಗೆ ಶಾಲ್ವನು ನಗರವನ್ನು ಬಿಟ್ಟು, ಸೌಭವನ್ನೇರಿ ಹತ್ತಿರದಲ್ಲಿಯೇ ಹೋಗಿದ್ದಾನೆ ಎಂದು ತಿಳಿಯಿತು ಮತ್ತು ಅವನನ್ನು ಹುಡುಕಿಕೊಂಡು ಹಿಂಬಾಲಿಸಿದನು. ಸಾಗರತೀರವನ್ನು ಸೇರಿ, ಸಮುದ್ರದ ಮಧ್ಯದಲ್ಲಿ ಮಹಾ ಅಲೆಗಳಿಂದ ಆವೃತ ದ್ವೀಪದಲ್ಲಿ ಸೌಭವನ್ನೇರಿ ಶಾಲ್ವನು

ಇದ್ದಾನೆ ಎಂದು ಅವನಿಗೆ ತಿಳಿಯಿತು. ಕೃಷ್ಣನು ಬರುತ್ತಿರುವುದನ್ನು ದೂರದಿಂದಲೇ ನೋಡಿದ ಆ ದುಷ್ಟನು ಮುಗುಳ್ನಗುತ್ತಾ ಮತ್ತೆ ಮತ್ತೆ ಯುದ್ಧಕ್ಕೆ ಆಹ್ವಾನಿಸಿದನು. ತನ್ನ ಶಾಂಙ್ರಧನುಸ್ಸಿನಿಂದ ಪ್ರಯೋಗಿಸಿದ ಬಾಣಗಳು ಅವನ ಪುರವನ್ನು ತಲುಪುವುದರೊಳಗೇ ಕತ್ತರಿಸಿ ಬೀಳಲು ಕೃಷ್ಣನಿಗೆ ಅತ್ಯಂತ ರೋಷವುಂಟಾಯಿತು. ಆ ಪಾಪಪ್ರಕೃತಿಯ ದೈತ್ಯನು ಒಂದೇ ಸಮನೆ ಕೃಷ್ಣನ ಮೇಲೆ, ಅವನ ಸೈನಿಕರ ಮೇಲೆ, ಸೂತ ಮತ್ತು ಕುದುರೆಗಳ ಮೇಲೆ ಸಹಸ್ರಾರು ದುರ್ಧರ್ಷ ಶರಗಳ ಮಳೆಯನ್ನೇ ಸುರಿಸಿದನು. ಆ ಶರಗಳ ಕುರಿತು ಯೋಚನೆ ಮಾಡದೇ ಕೃಷ್ಣನು ಯುದ್ಧದಲ್ಲಿ ಮುಂದುವರಿದನು. ಶಾಲ್ವನನ್ನು ಅನುಸರಿಸಿ ಹೋರಾಡುತ್ತಿದ್ದ ವೀರ ಅಸುರರು ನೂರಾರು ಸಾವಿರಾರು ನುಣುಪಾದ, ಮರ್ಮಭೇದಿ ಬಾಣಗಳನ್ನು ಕೃಷ್ಣನ ಮೇಲೆ, ಅವನ ಕುದುರೆಗಳ ಮೇಲೆ, ರಥದ ಮೇಲೆ ಮತ್ತು ದಾರುಕನ ಮೇಲೆ ಪ್ರಯೋಗಿಸಿದರು. ಕೃಷ್ಣನ ಕುದುರೆಗಳಾಗಲೀ, ರಥವಾಗಲೀ, ದಾರುಕನಾಗಲೀ ಅಥವಾ ಸೈನಿಕರಾಗಲೀ ಆ ಶರಗಳ ದಟ್ಟ ಮುಸುಕಿನಲ್ಲಿ ಅವನಿಗ್ ಕಾಣುತ್ತಿರಲಿಲ್ಲ. ಕೃಷ್ಣನೂ ಕೂಡ ತನ್ನ ದಿವ್ಯ ಧನುಸ್ಸಿನಿಂದ ಬಹಳಷ್ಟು ರೀತಿಯ ಬಾಣಗಳನ್ನು ಅಭಿಮಂತ್ರಿಸಿ ಪ್ರಯೋಗಿಸಿದನು. ಆದರೆ ಅವನಿಗಾಗಲೀ ಅವನ ಸೈನ್ಯಕ್ಕಾಗಲೀ ಗುರಿಯೇ ಇರಲಿಲ್ಲ. ಯಾಕೆಂದರೆ ಶಾಲ್ವನು ಕ್ರೋಷಮಾತ್ರದಲ್ಲಿ ಸೌಭದಲ್ಲಿ ಆಕಾಶದಲ್ಲಿ ತಿರುಗಾಡುತ್ತಿದ್ದನು. ಆಗ ಅಲ್ಲಿ ಸುತ್ತುವರೆದು ನಿಂತಿದ್ದ ಪ್ರೇಕ್ಷಕರೆಲ್ಲರೂ ಹರ್ಷಿತರಾಗಿ ಸಿಂಹನಾದ ಮತ್ತು ಚಪ್ಪಾಳೆಗಳಿಂದ ಕೃಷ್ಣನನ್ನು

ಹುರಿದುಂಬಿಸಿದರು. ಆ ಮಹಾರಣದಲ್ಲಿ ಅವನ ಧನುಸ್ಸಿನಿಂದ ಹೊರಟ ಬಾಣಗಳು ರಕ್ತದಾಹಿಗಳಾದ ಕೀಟಗಳಂತೆ ಹಾರಿ ದಾನವರ ಅಂಗಗಳನ್ನು ಚುಚ್ಚಿದವು. ಸೌಭದ ಮಧ್ಯದಲ್ಲಿ ಹಾಹಾಕಾರ ಶಬ್ಧವು ಹೆಚ್ಚಾಯಿತು ಮತ್ತು ತೀಕ್ಷ್ಣ ಬಾಣಗಳಿಂದ ಸತ್ತವರು ಮಹಾಸಾಗರದಲ್ಲಿ ಬಿದ್ದರು. ಭುಜಗಳಿಂದ ಕತ್ತರಿಸಲ್ಪಟ್ಟ ಬಾಹುಗಳ ಕದಂಬಾಕೃತಿಯಲ್ಲಿ ಕಾಣುತ್ತಿದ್ದ ದಾನವರು ಭೈರವ ಕೂಗನ್ನು ಕೂಗುತ್ತಾ ಒಂದೇ ಸಮನೆ ಬೀಳುತ್ತಿದ್ದರು. ಆಗ ಗೋವಿನ ಹಾಲಿನ, ಮಲ್ಲಿಗೆಯ, ಚಂದ್ರನ, ತಾವರೆಯ ಮತ್ತು ಬೆಳ್ಳಿಯ ಪ್ರಭೆಯುಳ್ಳ ಜಲಜ ಪಾಂಚಜನ್ಯಕ್ಕೆ ತನ್ನ ಉಸಿರನ್ನು ತುಂಬಿಸಿ ಕೃಷ್ಣನು ಮೊಳಗಿಸಿದನು.

ರಣರಂಗದಲ್ಲಿ ಅವರು ಬೀಳುತ್ತಿರುವುದನ್ನು ನೋಡಿದ ಸೌಭಪತಿ ಶಾಲ್ವನು ಕೃಷ್ಣನೊಂದಿಗೆ ಮಹಾ ಮಾಯಯುದ್ಧವನ್ನು ಪ್ರಾರಂಭಿಸಿದನು. ಅವನು ಒಂದೇ ಸಮನೆ ಕೃಷ್ಣನ ಮೇಲೆ ಹುಡಹುಡಾ, ಪ್ರಾಸ, ಶಕ್ತಿ, ಶೂಲ, ಪರಶು, ಪಟ್ಟಿಷ, ಮತ್ತು ಭುಶುಂಡಗಳನ್ನು ಎಸೆಯತೊಡಗಿದನು. ಅವುಗಳನ್ನು ಅವನು ತನ್ನದೇ ಮಾಯೆಯಿಂದ ಹಿಡಿದು ನಾಶಪಡಿಸಿದನು. ಮಾಯೆಯನ್ನು ನಾಶಪಡಿಸಿದ ನಂತರ ಶಾಲ್ವನು ಕೃಷ್ಣನೊಡನೆ ಗಿರಿಶೃಂಗಗಳಿಂದ ಯುದ್ಧ ಮಾಡತೊಡಗಿದನು. ಒಂದು ಕ್ಷಣದಲ್ಲಿ ರಾತ್ರಿಯಾಗುತ್ತಿತ್ತು, ಇನ್ನೊಂದು ಕ್ಷಣದಲ್ಲಿ ಬೆಳಗಾಗುತ್ತಿತ್ತು. ದುರ್ದಿನವಾಗುತ್ತಿತ್ತು, ಸುದಿನವೆನಿಸುತ್ತಿತ್ತು, ಛಳಿಯಾಗುತ್ತಿತ್ತು, ಮತ್ತು ಸೆಖೆಯಾಗುತ್ತಿತ್ತು. ಈ ರೀತಿ ಆ ಶತ್ರುವು ಕೃಷ್ಣನೊಡನೆ ಮಾಯೆಯಿಂದ ಮೋಸಗೊಳಿಸಿ

ಯುದ್ಧಮಾಡಿದನು. ಅದನ್ನು ತಿಳಿದ ಕೃಷ್ಣನು ಸ್ವಲ್ಪ ಸಮಯದಲ್ಲಿಯೇ ಮಾಯಾಯುದ್ಧದ ಬಾಣಗಳಿಂದ ಎಲ್ಲವನ್ನೂ ಎಲ್ಲಕಡೆಯೂ ನಾಶಪಡಿಸಿದನು. ಆಕಾಶದಲ್ಲಿ ಶತಸೂರ್ಯಗಳಿರುವಂತೆ, ಶತಚಂದ್ರಗಳಿರುವಂತೆ ಮತ್ತು ಸಹಸ್ರ ನಕ್ಷತ್ರಗಳಿರುವಂತೆ ತೋರಿತು. ಆಗ ಹಗಲಾಗಲೀ, ರಾತ್ರಿಯಾಗಲೀ, ದಿಕ್ಕುಗಳಾಗಲೀ ಗೊತ್ತಾಗುತ್ತಿರಲಿಲ್ಲ. ಮೋಹವಾಚ್ಛಾದಿಸಿದ ಕೃಷ್ಣನು ಆಗ ಪ್ರಜ್ಞಾಸ್ತ್ರವನ್ನು ಹೂಡಿದನು ಮತ್ತು ಅದು ಅವನ ಅಸ್ತ್ರಗಳನ್ನು ಹತ್ತಿಯ ಎಸಳುಗಳಂತೆ ಹಾರಿಸಿತು. ಕೃಷ್ಣನು ಶತ್ರುವನ್ನೂ ಮತ್ತು ಇತರ ದೃಶ್ಯಗಳನ್ನೂ ಕಾಣಲು ಶಕ್ತನಾದ ನಂತರ ಪುನಃ ಮೈನವಿರೇಳಿಸುವ ತುಮುಲ ಯುದ್ಧವು ನಡೆಯಿತು.

ಹೀಗೆ ಆ ಮಹಾರಿಪು ಶಾಲ್ವರಾಜನು ಕೃಷ್ಣನೊಡನೆ ಯುದ್ಧಮಾಡುತ್ತಿರಲು ಅವನು ಪುನಃ ಆಕಾಶವನ್ನೇರಿದನು. ಆಗ ವಿಜಯವನ್ನು ಬಯಸುತ್ತಿದ್ದ ಆ ಮಂದಬುದ್ಧಿ ಶಾಲ್ವನು ರೋಷದಿಂದ ಕೃಷ್ಣನ ಮೇಲೆ ಕೊಲ್ಲುವ ನೂರು ಮಹಾ ಗದೆಗಳನ್ನೂ, ಉರಿಯುತ್ತಿರುವ ಶೂಲ-ಮುಸಲ-ಖಡ್ಗಗಳನ್ನು ಎಸೆದನು. ಆಕಾಶದಲ್ಲಿ ಮಿಂಚಿ ಹಾರಿ ತನ್ನ ಕಡೆ ಬಂದು ಬೀಳುತ್ತಿದ್ದ ಅವುಗಳನ್ನು ಕೃಷ್ಣನು ವೇಗವಾಗಿ ಹೋಗುತ್ತಿದ್ದ ಶರಗಳಿಂದ ತಡೆಹಿಡಿದು ಅಂತರಿಕ್ಷದಲ್ಲಿಯೇ ಎರಡು ಮೂರು ತುಂಡುಗಳನ್ನಾಗಿ ಕತ್ತರಿಸಿದಾಗ ಆಕಾಶದಲ್ಲಿ ದೊಡ್ಡ ತುಮುಲವುಂಟಾಯಿತು. ಶಾಲ್ವನು ಕೃಷ್ಣನ ಮೇಲೆ, ದಾರುಕ-ಕುದುರೆ-ರಥಗಳ ಮೇಲೆ ನೂರಾರು ಸಹಸ್ರಾರು ನುಣುಪಾದ ಬಾಣಗಳನ್ನು

ಸುರಿಸಿ ಮುಚ್ಚಿದನು. ವೀರ ದಾರುಕನು ವಿಹ್ವಲನಾಗಿ ಕೃಷ್ಣನಿಗೆ ಹೇಳಿದನು:

> “ಶಾಲ್ವಬಾಣಗಳಿಂದ ಪೀಡಿತನಾಗಿ ನನಗೆ ಸುಧಾರಿಸಿಕೊಳ್ಳಬೇಕಾಗಿದೆ. ಸುಧಾರಿಸಿಕೊಳ್ಳುತ್ತೇನೆ.”

ಸಾರಥಿಯ ಈ ಕರುಣಾಜನಕ ಮಾತುಗಳನ್ನು ಕೇಳಿ ಕೃಷ್ಣನು ಅವನ ಕಡೆ ನೋಡಿದನು. ಅವನು ಶರಗಳಿಂದ ಹೊಡೆತತಿಂದುದನ್ನು ನೋಡಿದನು. ಅವನ ತಲೆಯ ಮೇಲೆ, ದೇಹದ ಮೇಲೆ, ಎರಡೂ ಭುಜಗಳ ಮೇಲೆ ಶರಗಳಿಂದ ಚುಚ್ಚಲ್ಪಡದ ಭಾಗವನ್ನೇ ಅವನು ಕಾಣಲಿಲ್ಲ! ಆ ಬಾಣದ ಮಳೆಯ ಆಘಾತಕ್ಕೆ ಸಿಲುಕಿದ ಅವನ ರಕ್ತವು ಧಾರಾಕಾರವಾಗಿ ಸುರಿಯುತ್ತಿರಲು ಅವನು ಮಳೆಸುರಿಯುತ್ತಿದ್ದ ಕೆಂಪು ಧಾತುವಿನ ಗುಡ್ಡದಂತೆ ತೋರಿದನು. ಕೃಷ್ಣನ ಸಾರಥಿಯು ರಥದ ಗಾಳಗಳನ್ನು ಹಿಡಿದುಕೊಂಡಿದ್ದರೂ, ಎಚ್ಚರತಪ್ಪಿ ಬೀಳುವುದರಲ್ಲಿದ್ದನು. ಆಗ ಕೃಷ್ಣನು ಶಾಲ್ವನ ಬಾಣಗಳಿಂದ ಪೀಡಿತನಾದ ಅವನನ್ನು ಹಿಡಿದು ನಿಲ್ಲಲು ಸಹಾಯಮಾಡಿದನು. ಆಗ ದ್ವಾರಕೆಯಿಂದ ಬಂದಿದ್ದ ಆಹುಕನ ಗೆಳೆಯನಾಗಿದ್ದ, ವಿಷಣ್ಣನೂ ಸಂಕಟದಲ್ಲಿದ್ದವನೂ ಆದ ಒಬ್ಬ ಪುರುಷನೂ ಅವಸರದಲ್ಲಿ ಕೃಷ್ಣನ ರಥದ ಬಳಿ ಬಂದು ಅವನಿಗೆ ಒಂದು ಸಂದೇಶವನ್ನು ಹೇಳಿದನು:

> “ವೀರ! ಕೇಶವ! ನಾನು ದ್ವಾರಕಾಧಿಪತಿ ಆಹುಕ ನಿನಗೆ ಈ ಮಾತನ್ನು ಹೇಳುತ್ತಿದ್ದೇನೆ. ನಿನ್ನ ತಂದೆಯ ಸಖನೆಂದು ನನ್ನನ್ನು

ತಿಳಿ. ಇಂದು ಶಾಲ್ವನು ದ್ವಾರಕೆಯನ್ನು ಮುತ್ತಿಗೆಹಾಕಿದ್ದಾನೆ ಮತ್ತು ನಿನ್ನನ್ನು ಎದುರಿಸಿ ತಡೆಯುತ್ತಿದ್ದಾನೆ. ಅವನು ಶೂರನ ಮಗನನ್ನು ಬಲದಿಂದ ಸಂಹರಿಸಿದ್ದಾನೆ. ನಿನ್ನ ಯುದ್ಧವು ಸಾಕು. ಹಿಂದಿರುಗು. ದ್ವಾರಕೆಯನ್ನೇ ರಕ್ಷಿಸುವುದು ನಿನ್ನ ಮಹತ್ವದ ಕರ್ತವ್ಯವಾಗಿದೆ."

ಆ ಸಂದೇಶವನ್ನು ಕೇಳಿ ಕೃಷ್ಣನು ಪರಮ ದುಃಖಿತನಾದನು. ತನ್ನ ಕರ್ತವ್ಯವು ಏನು ಎನ್ನುವುದನ್ನು ನಿಶ್ಚಯಿಸಲು ಅಸಮರ್ಥನಾದನು. ಆ ಅಪ್ರಿಯ ಮಾತನ್ನು ಕೇಳಿ ಮನದಲ್ಲಿಯೇ ಸಾತ್ಯಕಿ, ಬಲದೇವ, ಮಹಾರಥಿ ಪ್ರದ್ಯುಮ್ನರನ್ನು ದೂರಿದನು. ಯಾಕೆಂದರೆ ಸೌಭನನ್ನು ಸೋಲಿಸಲು ಹೊರಡುವಾಗ ದ್ವಾರಕೆಯ ಮತ್ತು ತಂದೆಯ ರಕ್ಷಣೆಯನ್ನು ಕೃಷ್ಣನೇ ಅವರ ಮೇಲಿರಿಸಿದ್ದನು. ಮಹಾಬಾಹು ಬಲದೇವ, ಶತ್ರುಹ ಸಾತ್ಯಕಿ, ರೌಕ್ಮಿಣೇಯ ವೀರವಾನ್ ಚಾರುದೇಷ್ಣ ಮತ್ತು ಸಾಂಬನ ನಾಯಕತ್ವದಲ್ಲಿರುವ ಇತರರು ಜೀವದಿಂದಿರಬಹುದೇ ಎನ್ನುವ ಕೆಟ್ಟ ಯೋಚನೆಯು ಅವನ ಮನಸ್ಸನ್ನು ಕಾಡಿತು. ಯಾಕೆಂದರೆ ಈ ನರವ್ಯಾಘ್ರರು ಜೀವಂತವಿರುವಾಗಲೇ ಎಂದೂ ಶೂರಸುತನನ್ನು ಸಂಹರಿಸಲು ಸ್ವಯಂ ವಜ್ರಭೃತನಿಗೂ ಶಕ್ಯವಿಲ್ಲ. ಶೂರಸುತನು ಹತನಾದುದು ನಿಶ್ಚಯವೆಂದರೆ ಬಲದೇವನ ನಾಯಕತ್ವದಲ್ಲಿದ್ದ ಅವರೂ ಕೂಡ ಪರಾಭವ ಹೊಂದಿದ್ದುದು ನಿಶ್ಚಯ ಎಂದು ಕೃಷ್ಣನು ಮನಸ್ಸಿನಲ್ಲಿಯೇ ನಿರ್ಧರಿಸಿದನು. ಪುನಃ ಪುನಃ ಅವರ ಸರ್ವವಿನಾಶವಾದುದರ ಕುರಿತು ಚಿಂತಿಸಿದನು. ಆಗ ತುಂಬಾ

ವಿಹ್ವಲನಾಗಿ ಪುನಃ ಶಾಲ್ವನೊಂದಿಗೆ ಯುದ್ಧಮಾಡಿದನು.

ಕೃಷ್ಣನು ಸೌಭದಿಂದ ವೀರ ಶೂರಸುತನು (ವಸುದೇವನು) ಬೀಳುತ್ತಿರುವುದನ್ನು ನೋಡಿದನು. ತನ್ನ ಪುಣ್ಯವನ್ನು ಕಳೆದುಕೊಂಡು ಸ್ವರ್ಗದಿಂದ ಭೂಮಿಯ ಕಡೆಗೆ ಬೀಳುತ್ತಿದ್ದ ಯಯಾತಿಯಂತೆ ತನ್ನ ತಂದೆಯು ಬೀಳುತ್ತಿರುವ ದೃಶ್ಯವನ್ನು ನೋಡಿ ಅವನಿಗೆ ಮೂರ್ಛೆ ಆವರಿಸಿತು. ವಸುದೇವನ ಮುಂಡಾಸು ಹೊರಬಿದ್ದಿತ್ತು, ಅವನ ವಸ್ತ್ರಗಳು ಚೆಲ್ಲಪಿಲ್ಲಿಯಾಗಿದ್ದವು, ಮತ್ತು ಅವನ ತಲೆಕೂದಲು ಕೆದರಿತ್ತು. ಪುಣ್ಯವನ್ನು ಕಳೆದುಕೊಂಡ ಗ್ರಹವು ಬೀಳುತ್ತಿರುವಂತೆ ಅವನು ಕಂಡನು. ಆಗ ಕೃಷ್ಣನ ಶ್ರೇಷ್ಠ ಧನುಸ್ಸು ಶಾಙ್ರವು ಕೈಯಿಂದ ಬಿದ್ದಿತು ಮತ್ತು ದುಃಖ ಉಕ್ಕಿಬಂದು ಅವನು ರಥದಲ್ಲಿಯೇ ಕುಸಿದು ಬಿದ್ದನು. ಅವನು ಎಚ್ಚರ ತಪ್ಪಿ ಜೀವಕಳೆದುಕೊಂಡವನಂತೆ ರಥದಲ್ಲಿ ಕುಸಿದುದನ್ನು ನೋಡಿ ಅವನ ಸರ್ವ ಸೈನ್ಯವೂ ಹಾಹಾಕಾರಮಾಡಿತು. ಪಕ್ಷಿಯು ಬೀಳುವಂತೆ ಕೈಕಾಲುಗಳನ್ನು ಬೀಸಿ ತನ್ನ ತಂದೆಯು ಬೀಳುತ್ತಿರುವ ದೃಶ್ಯವನ್ನು ಕೃಷ್ಣನು ನೋಡಿದನು. ಅವನು ಬೀಳುತ್ತಿರುವಾಗ ಶೂಲ-ಪಟ್ಟಿಶಗಳನ್ನು ಹಿಡಿದು ಚೆನ್ನಾಗಿ ಹೊಡೆಯುತ್ತಿರುವುದನ್ನು ನೋಡಿ ಅವನ ಚೇತನವು ಕಂಪಿಸಿತು. ಒಂದು ಕ್ಷಣ ಅವನ ಚೇತನವು ಗರಗರನೆ ತಿರುಗಿತು. ಆದರೆ ಅದೇ ಕ್ಷಣದಲ್ಲಿ ಅವನು ಚೇತರಿಸಿಕೊಂಡನು. ಆಗ ಅವನು ಸೌಭವನ್ನೂ ನೋಡಲಿಲ್ಲ, ಶತ್ರುವನ್ನೂ ಕಾಣಲಿಲ್ಲ, ಶಾಲ್ವನನ್ನೂ ಕಾಣಲಿಲ್ಲ ಮತ್ತು ಅವನ ವೃದ್ಧ ತಂದೆಯನ್ನೂ ಕಾಣಲಿಲ್ಲ. ಆಗ ಅವನು ಮನಸ್ಸಿನಲ್ಲಿ ಇದು ಮಾಯೆ

ಎಂದು ತಿಳಿದು ನಿಶ್ಚಯ ಮಾಡಿದನು. ಪುನಃ ಎಚ್ಚೆತ್ತು ನೂರಾರು ಶರಗಳನ್ನು ಹರಡಿಸಿದನು.

ಆಗ ಕೃಷ್ಣನು ಸುಂದರ ಧನುಸ್ಸನ್ನು ಹಿಡಿದು ಸೌಭದಲ್ಲಿದ್ದ ದೇವತೆಗಳ ಶತ್ರುಗಳನ್ನು ಶರಗಳಿಂದ ತುಂಡರಿಸಿದನು. ಅವನ ಶಾರ್ಙದಿಂದ ವಿಷವನ್ನು ಕಾರುತ್ತಿದ್ದ ಸರ್ಪಗಳಂತಿರುವ ಅಗ್ನಿಯ ತೇಜಸ್ಸಿನಿಂದ ಮೇಲೆ ಹಾರುವ ಮೊನಚಾದ ಬಾಣಗಳನ್ನು ಪ್ರಯೋಗಿಸಿ ಶಾಲ್ವರಾಜನೆಡೆಗೆ ಎಸೆದನು. ಆಗ ಸೌಭವು ಅದೃಶ್ಯವಾಯಿತು. ಮಾಯೆಯಿಂದ ಅದು ಅದೃಶ್ಯವಾದುದನ್ನು ನೋಡಿ ಕೃಷ್ಣನು ವಿಸ್ಮಿತನಾದನು. ಆಗ ಅವನು ನಿಂತಿರುವಂತೆಯೇ ವಿಕಾರ ಮುಖ-ಹಣೆಗಳ ದಾನವರ ಗುಂಪು ಜೋರಾಗಿ ಕಿರಿಚಿತು. ತಕ್ಷಣವೇ ಅವನು ಮಹಾರಣದಲ್ಲಿ ಅವರನ್ನು ವಧಿಸಲು ಶಬ್ಧಸಾಹ ಅಸ್ತ್ರವನ್ನು (ಶಬ್ಧವನ್ನು ಹುಡುಕಿ ಕೊಲ್ಲುವ ಅಸ್ತ್ರ) ಪ್ರಯೋಗಿಸಲು ಅವರ ಶಬ್ಧವು ನಿಂತಿತು. ಶಬ್ಧಸಾಧನಗಳಿಂದ ಹೊರಟ ಆದಿತ್ಯನಂತೆ ಉರಿಯುತ್ತಿರುವ ಶರಗಳಿಂದ ಆ ಎಲ್ಲ ದಾನವರೂ ಹತರಾಗಿ ಅವರ ಶಬ್ಧವು ಕಡಿಮೆಯಾಯಿತು. ಆ ಶಬ್ಧವು ಕಡಿಮೆಯಾಗಲು ಪುನಃ ಇನ್ನೊಂದು ಕಡೆಯಿಂದ ಹೊಸ ತುಮುಲವು ಪ್ರಾರಂಭವಾಯಿತು. ಆ ಕಡೆ ಕೂಡ ಕೃಷ್ಣನು ಬಾಣಗಳನ್ನು ಪ್ರಯೋಗಿಸಿದನು. ಹೀಗೆ ಹತ್ತೂ ದಿಕ್ಕುಗಳಲ್ಲಿ ಮೇಲೆ ಮತ್ತು ಕೆಳಗೆ ಎಲ್ಲಕಡೆಯಿಂದ ಅಸುರರು ಕಿರುಚಲು ಅವರೆಲ್ಲರನ್ನೂ ಅವನು ಸಂಹರಿಸಿದನು.

ಆಗ ಬೇಕಾದಲ್ಲಿ ಹೋಗಬಲ್ಲ ಸೌಭವು ಪ್ರಾಗ್ಜ್ಯೋತಿಷಕ್ಕೆ ಹೋಗಿ ಪುನಃ ಕಾಣಿಸಿಕೊಂಡಿತು ಮತ್ತು ಕೃಷ್ಣನ ಕಣ್ಣುಗಳನ್ನು ಕುರುಡುಮಾಡಿತು. ನಂತರ ತಕ್ಷಣವೇ ಲೋಕಾಂತಕನಂತೆ ತೋರುತ್ತಿದ್ದ ದಾನವನು ವಾನರ ವೇಶದಲ್ಲಿ ಬಂದು ಕೃಷ್ಣನ ಮೇಲೆ ದೊಡ್ಡ ದೊಡ್ಡ ಕಲ್ಲುಗಳ ಮಳೆಯನ್ನೇ ಸುರಿಸಿದನು. ಕೃಷ್ಣನು ಎಲ್ಲ ಕಡೆಗಳಿಂದಲೂ ಪರ್ವತಗಳ ಮಳೆಯ ಹೊಡೆತಕ್ಕೆ ಸಿಕ್ಕನು ಮತ್ತು ಅವನು ಪರ್ವತಗಳಿಂದ ಮುಚ್ಚಲ್ಪಟ್ಟ ಒಂದು ಹುತ್ತದಂತೆ ಆದನು. ಸಾರಥಿಯೊಂದಿಗೆ ಮತ್ತು ಧ್ವಜದೊಂದಿಗೆ ಅವನು ಪರ್ವತಗಳ ಕೆಳಗಿ ಹುಗಿಯಲ್ಪಟ್ಟು ಸಂಪೂರ್ಣವಾಗಿ ಕಾಣದೇ ಹೋದನು. ಅವನೊಡನಿದ್ದ ವೃಷ್ಣಿ ಪ್ರವೀರ ಸೈನಿಕರೆಲ್ಲಾ ಆಗ ಭಯಾರ್ತರಾಗಿ ಎಲ್ಲ ದಿಕ್ಕುಗಳಲ್ಲಿ ಅವಸರದಿಂದ ಓಡಿಹೋಗ ತೊಡಗಿದರು. ಕೃಷ್ಣನು ಹಾಗೆ ಕಾಣದಂತಾಗಲು ಇಡೀ ಆಕಾಶ, ಭೂಮಿ, ದೇವಲೋಕ ಸರ್ವವೂ ಹಾಹಾಕಾರಮಾಡಿದವು. ಅವನ ಸ್ನೇಹಿತರು ವಿಷಣ್ಣ ಮನಸ್ಕರಾಗಿ ದುಃಖಶೋಕಸಮನ್ವಿತರಾಗಿ ರೋದಿಸಿದರು ಮತ್ತು ಅತ್ತರು. ಆಗ ವೈರಿಗಳು ಹರ್ಷಿತರಾದರು ಮತ್ತು ಸ್ನೇಹಿತರು ದುಃಖಿತರಾದರು. ಕೃಷ್ಣನು ಸರ್ವ ಪಾಶಾಣಗಳನ್ನೂ ಬೇದಿಸಬಲ್ಲ ವಜ್ರಾಸ್ತ್ರವನ್ನು ತೆಗೆದುಕೊಂಡು ಆ ಎಲ್ಲ ಪರ್ವತಗಳನ್ನೂ ಪುಡಿಪುಡಿಮಾಡಿದನು. ಪರ್ವತಗಳ ಭಾರದಿಂದ ಕಷ್ಟಪಟ್ಟ ಅವನ ಕುದುರೆಗಳು ತಮ್ಮ ಉಸಿರು ಮತ್ತು ಚಲನೆಗಳನ್ನು ಕಳೆದುಕೊಂಡು ನಡುಗುತ್ತಿದ್ದವು. ಮೇಘಜಾಲಮುಕ್ತ ಆಕಾಶದಿಂದ ಮೇಲೇಳುವ

ರವಿಯಂತೆ ಮೇಲೆದ್ದ ಅವನನ್ನು ನೋಡಿದ ಸರ್ವ ಬಾಂಧವರೂ ಪುನಃ ಹರ್ಷಿತರಾದರು. ಆಗ ಅಂಜಲೀಬದ್ಧನಾಗಿ ನಮಸ್ಕರಿಸಿ ಸೂತನು ಅವನಿಗೆ ಹೇಳಿದನು:

> "ವಾರ್ಷ್ಣೇಯ! ನಿಂತಿರುವ ಸೌಭಪತಿಯನ್ನು ಚೆನ್ನಾಗಿ ನೋಡು! ಅಪಮಾನಗೊಳಿಸುವ ಇದನ್ನು ಸಾಕುಮಾಡು. ಇನ್ನೂ ಒಳ್ಳೆಯ ಪ್ರಯತ್ನವನ್ನು ಮಾಡು. ಶಾಲ್ವನ ಮೇಲಿದ್ದ ನಿನ್ನ ಸಖ್ಯಭಾವವನ್ನು ಅಥವಾ ಮೃದುತ್ವವನ್ನು ಹಿಂದೆ ತೆಗೆದುಕೋ! ಶಾಲ್ವನನ್ನು ಜೀವಂತ ಬಿಡಬೇಡ! ನಿನ್ನ ಎಲ್ಲ ಪರಾಕ್ರಮವನ್ನೂ ಬಳಸಿ ಈ ಶತ್ರುವನ್ನು ವಧಿಸು! ಶತ್ರುವು ಎಷ್ಟೇ ದುರ್ಬಲನಾಗಿದ್ದರೂ, ಕಾಲಕೆಳಗಿನವನಾಗಿದ್ದರೂ, ಸಮರದಲ್ಲಿ ಎದುರಾದಾಗ ಬಲಶಾಲಿಯು ಅಪಮಾನಿಸ ಕೂಡದು. ಸರ್ವ ಯತ್ನಗಳಿಂದ ನೀನು ಈ ಶತ್ರುವನ್ನು ಕೊಲ್ಲಬೇಕು. ಪುನಃ ಸುಮ್ಮನೆ ಕಾಲವನ್ನು ಕಳೆಯಬೇಡ. ಮೃದುತ್ವದಿಂದ ಅವನನ್ನು ಗೆಲ್ಲಲು ಸಾಧ್ಯವಿಲ್ಲ. ದ್ವಾರಕೆಯನ್ನು ಅಸ್ತವ್ಯಸ್ತಗೊಳಿಸಿ ನಿನ್ನೊಡನೆ ಯುದ್ಧ ಮಾಡುತ್ತಿರುವ ಅವನು ನಿನ್ನ ಸಖನಲ್ಲ ಎಂದು ನನ್ನ ಅಭಿಪ್ರಾಯ!"

ಈ ರೀತಿಯ ಮಾತುಗಳನ್ನು ಸಾರಥಿಯಿಂದ ಕೇಳಿದ ಕೃಷ್ಣನು ಅವನು ಹೇಳಿದುದು ಸತ್ಯ ಎಂದು ತಿಳಿದು ಯುದ್ಧದಲ್ಲಿ ಶಾಲ್ವರಾಜನ ವಧೆ

ಮತ್ತು ಸೌಭವನ್ನು ಉರುಳಿಸುವ ಕುರಿತು ಮನಸ್ಸನ್ನಿಟ್ಟನು. "ಒಂದು ಕ್ಷಣ ನಿಲ್ಲು!" ಎಂದು ದಾರುಕನಿಗೆ ಹೇಳಿದನು. ನಂತರ ಅವನು ಯಾರನ್ನೂ ಸಂಹರಿಸಬಲ್ಲ, ದಿವ್ಯ, ಅಭೇದ್ಯ, ಅತಿವೀರ್ಯವಂತ, ಮಹಾಪ್ರಭೆಯನ್ನುಳ್ಳ, ಸರ್ವಸಾಹ, ಯಕ್ಷ-ರಾಕ್ಷಸ-ದಾನವರನ್ನು, ಮತ್ತು ಅಧರ್ಮಿ ರಾಜರನ್ನು ಒಟ್ಟಿಗೇ ಭಸ್ಮಮಾಡಬಲ್ಲ, ತೀಕ್ಷ್ಣ ಕೊನೆಗಳನ್ನುಳ್ಳ, ಅಮಲ, ಕಾಲಾಂತಕ ಯಮನಂತಿದ್ದ, ಆಗ್ನೇಯಾಸ್ತ್ರ ಚಕ್ರವನ್ನು ಹಿಡಿದು, ಶತ್ರುಗಳನ್ನು ಸಂಹರಿಸಬಲ್ಲ, ಸರಿಸಾಟಿಯಿಲ್ಲದ ಅದನ್ನು ಅಭಿಮಂತ್ರಿಸಿದನು:

> "ನಿನ್ನ ವೀರತ್ವದಿಂದ ಸೌಭವನ್ನು ಮತ್ತು ಅದರಲ್ಲಿರುವ ನಾನಾ ಶತ್ರುಗಳನ್ನು ಕೊಲ್ಲು!"

ಎಂದು ಹೇಳಿ ರೋಷಗೊಂಡು ತನ್ನ ಬಾಹುಬಲದಿಂದ ಅದನ್ನು ಪ್ರಯೋಗಿಸಿದನು. ಆಕಾಶದಲ್ಲಿ ಹಾರಿಹೋಗುತ್ತಿದ್ದ ಆ ಸುದರ್ಶನವು ಯುಗಾಂತದಲ್ಲಿ ಪ್ರಕಾಶಿತ ಎರಡನೇ ಸೂರ್ಯನೋ ಎನ್ನುವಂತೆ ತೋರುತ್ತಿತ್ತು. ಅದು ಸತ್ವವನ್ನು ಕಳೆದುಕೊಂಡ ಸೌಭನಗರವನ್ನು ತಲುಪಿ ಗರಗಸದಂತೆ ಅದನ್ನು ಮಧ್ಯದಲ್ಲಿ ಎರಡನ್ನಾಗಿ ಕತ್ತರಿಸಿತು. ಸುದರ್ಶನದ ಬಲಕ್ಕೆ ಸಿಲುಕಿ ಎರಡಾಗಿ ತುಂಡಾದ ಆ ಸೌಭವು ಮಹೇಶ್ವರನ ಶರದಿಂದ ಒಡೆದು ಕೆಳಗೆ ಬಿದ್ದ ತ್ರಿಪುರದಂತೆ ಕಂಡಿತು. ಸೌಭವು ಕೆಳಗುರುಳಲು ಚಕ್ರವು ಕೃಷ್ಣನ ಕೈಗೆ ಬಂದು ಸೇರಿತು. ಪುನಃ ಅದನ್ನು ಪ್ರಯೋಗಿಸುತ್ತಾ ಅವನು "ವೇಗದಿಂದ ಶಾಲ್ವನನ್ನು ಕೊಲ್ಲು!"

ಎಂದು ಹೇಳಿದನು. ಆ ಮಹಾಯುದ್ಧದಲ್ಲಿ ಶಾಲ್ವನು ಭಾರೀ ಗದೆಯನ್ನು ಪ್ರಹಾರಿಸಲು ಮುಂದೆಬರುತ್ತಿರುವಾಗ ಅದು ತಕ್ಷಣವೇ ಅವನನ್ನು ಎರಡಾಗಿ ಕತ್ತರಿಸಿ ತೇಜಸ್ಸಿನಿಂದ ಬೆಳಗಿತು. ಆ ವೀರನು ಕೆಳಗೆ ಬೀಳಲು ವೀರ ದಾನವರು ಅಸ್ತ್ರದಿಂದ ತತ್ತರಿಸಿ, ಕೃಷ್ಣನ ಬಾಣಗಳಿಂದ ಪೀಡಿತರಾಗಿ ಹಾಹಾಕಾರ ಮಾಡುತ್ತಾ ದಿಕ್ಕು ದಿಕ್ಕಿಗೆ ಚದುರಿದರು. ಸೌಭದ ಬಳಿಯಲ್ಲಿ ರಥವನ್ನು ನಿಲ್ಲಿಸಿ ಕೃಷ್ಣನು ಸಂತೋಷದಿಂದ ಶಂಖವನ್ನು ಊದಿ ತನ್ನ ಸ್ನೇಹಿತರಿಗೆ ಹರ್ಷವನ್ನುಂಟುಮಾಡಿದನು. ಮೇರುಶಿಖರದ ಆಕಾರದಲ್ಲಿದ್ದ ಮಹಾದ್ವಾರಗಳು ಮತ್ತು ಗೋಪುರಗಳಿಂದ ಕೂಡಿದ್ದ ಅದು ಉರಿಯುತ್ತಿರುವುದನ್ನು ನೋಡಿ ಸ್ತ್ರೀಯರು ಓಡಿ ಹೋದರು. ಈ ರೀತಿ ಸಮರದಲ್ಲಿ ಶಾಲ್ವನನ್ನು ಕೊಂದು ಸೌಭವನ್ನು ಕೆಳಗುರುಳಿಸಿ, ಆನರ್ತರ ಪುರಕ್ಕೆ ಹಿಂದಿರುಗಿ ಕೃಷ್ಣನು ಸುಹೃದಯರಿಗೆ ಸಂತೋಷವನ್ನು ತಂದನು.

# ನಲೋಪಾಽಖ್ಯಾನ

[ನಲ-ದಮಯಂತಿಯರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಇಂದ್ರಲೋಕಾಭಿಗಮನ ಪರ್ವ (ಅಧ್ಯಾಯ ೫೦-೭೭) ದಲ್ಲಿ ಬರುತ್ತದೆ. ಅರ್ಜುನನಿಲ್ಲದೇ ವನದಲ್ಲಿ ಪಾಂಡವರು ದುಃಖಿತರಾಗಿರುವಾಗ ಋಷಿ ಬೃಹದಶ್ವನು ಈ ಕಥೆಯನ್ನು

ಯುಧಿಷ್ಠಿರನಿಗೆ ಹೇಳಿದನು.]

## ನಲ, ದಮಯಂತಿ ಮತ್ತು ಹಂಸ

ವೀರಸೇನನ ಬಲಶಾಲಿ ಮಗ, ಎಲ್ಲಾ ಸದ್ಗುಣ ಸಂಪನ್ನ, ರೂಪವಂತ, ಅಶ್ವಕೋವಿದ, ದೇವಪತಿಯಂತೆ ಮನುಜೇಂದ್ರರೆಲ್ಲರ ಮೇಲ್ಪಟ್ಟ, ಅವರೆಲ್ಲರಿಗಿಂತ ತೇಜಸ್ಸಿನಲ್ಲಿ ಸೂರ್ಯನಂತೆ ಶೋಭಿಸುತ್ತಿದ್ದ ನಲ ಎಂಬ ಹೆಸರಿನ ಒಬ್ಬ ರಾಜನಿದ್ದನು. ಶೂರನೂ, ಬ್ರಹ್ಮಜ್ಞನೂ, ವೇದಪಾರಂಗತನೂ, ಸತ್ಯವಾದಿಯೂ, ಮಹಾ ಅಕ್ಷೌಹಿಣಿಪತಿಯೂ ಆದ ಈ ನಿಷಧ ಮಹೀಪತಿಯು ಜೂಜಿನಲ್ಲಿ ಪ್ರೀತಿ ಹೊಂದಿದ್ದನು. ಸುಂದರ ನಾರಿಯರೆಲ್ಲರೂ ಆಸೆ ಪಡುವಂತಿದ್ದ ಅವನು ಉದಾರನೂ, ಇಂದ್ರಿಯಸಂಯಮನೂ ಆಗಿದ್ದು, ಧನುರ್ಧಾರಿಗಳಲ್ಲಿ ಶ್ರೇಷ್ಠನೂ, ಎಲ್ಲರ ರಕ್ಷಕನೂ ಆಗಿ ಸ್ವತಃ ಸಾಕ್ಷಾತ್ ಮನುವಿನಂತಿದ್ದನು. ಹಾಗೆಯೇ ವಿದರ್ಭದಲ್ಲಿ ಶೂರನೂ, ಸರ್ವಗುಣಯುಕ್ತನೂ, ಭೀಮಪರಾಕ್ರಮಿಯೂ, ಸಂತಾನವಿಲ್ಲದೆ, ಸಂತಾನವನ್ನು ಬಯಸುತ್ತಿದ್ದ ಭೀಮ ಎನ್ನುವ ರಾಜನಿದ್ದನು. ಅವನು ಸಂತಾನಕ್ಕೋಸ್ಕರ ನಿರಂತರ ಪರಮ ಯತ್ನವನ್ನು ಮಾಡಿದನು. ಆಗ ದಮನ ಎಂಬ ಹೆಸರಿನ ಬ್ರಹ್ಮರ್ಷಿಯೊಬ್ಬನು ಅವನಲ್ಲಿಗೆ ಆಗಮಿಸಿದನು. ಆ ದರ್ಮವಿತ್ತ, ಪ್ರಜಾಕಾಮಿ ರಾಜೇಂದ್ರ ಭೀಮನು ತನ್ನ ಮಹಿಷಿಯೊಡಗೊಂಡು ಆ ಸುವರ್ಚಸನನ್ನು ಸತ್ಕರಿಸಿದನು. ಅದರಿಂದ ಪ್ರಸನ್ನನಾದ ದಮನನು ರಾಜ-ರಾಣಿಯರಿಗೆ ವರವನ್ನಿತ್ತನು: ಒಂದು ಕನ್ಯಾರತ್ನ - ದಮಯಂತಿ,

ಮತ್ತು ಮಹಾಯಶರೂ, ಉದಾರರೂ ಆದ ಮೂವರು ಕುಮಾರರು - ದಮ, ದಾಂತ, ಮತ್ತು ಸುವರ್ಚಸಿಯಾದ ದಮನ. ಇವರೆಲ್ಲರೂ ಗುಣಸಂಪನ್ನರೂ, ಘೋರರರೂ, ಘೋರಪರಾಕ್ರಮಿಗಳೂ ಆಗಿದ್ದರು.

ಸುಮಧ್ಯಮೆ ದಮಯಂತಿಯು ರೂಪ, ತೇಜಸ್ಸು, ಯಶಸ್ಸು, ಸೌಂದರ್ಯ ಮತ್ತು ಸೌಭಾಗ್ಯಗಳಲ್ಲಿ ಲೋಕಗಳಲ್ಲೆಲ್ಲಾ ಪ್ರಸಿದ್ಧಳಾಗಿದ್ದಳು. ವಯಸ್ಸಿಗೆ ಬಂದ ಅವಳನ್ನು ಒಂದು ನೂರು ಸಮಲಂಕೃತ ಸಖಿಯರು, ಶಚಿಯಂತೆ ಸುತ್ತುವರೆಯುತ್ತಿದ್ದರು. ತನ್ನ ಸಖಿಯರ ಮಧ್ಯದಲ್ಲಿ, ಅನವದ್ಯಾಂಗಿ, ಸರ್ವಾಭರಣಭೂಷಿತೆ ಪುಷ್ಪಗಳಿಂದಲಂಕೃತ ಭೈಮಿಯು ಮಿಂಚಿನಂತೆ ಶೋಭಿಸುತ್ತಿದ್ದಳು. ಆ ಆಯತ ಲೋಚನೆಯು ಲಕ್ಷ್ಮಿಯಂತೆ ಅತೀವ ರೂಪಸಂಪನ್ನಳಾಗಿದ್ದಳು. ಇದಕ್ಕೂ ಪೂರ್ವದಲ್ಲಿ ದೇವ, ಯಕ್ಷ ಅಥವಾ ಮನುಷ್ಯರಲ್ಲಿ ಇಷ್ಟೊಂದು ರೂಪವತಿಯನ್ನು ಕಂಡಿರಲಿಲ್ಲ ಮತ್ತು ಕೇಳಿರಲಿಲ್ಲ. ಆ ಸುಂದರ ಬಾಲಕಿಯು ದೇವತೆಗಳ ಚಿತ್ತವನ್ನೂ ಕಡೆಯುತ್ತಿದ್ದಳು.

ನರಶಾರ್ದೂಲ ನಲನು ರೂಪದಲ್ಲಿ ಭುವಿಯಲ್ಲೇ ಅಪ್ರತಿಮನಾಗಿದ್ದನು, ಮತ್ತು ರೂಪದಲ್ಲಿ ಕಂದರ್ಪನೇ ಸ್ವಯಂ ಅವತರಿಸಿದಂತಿದ್ದನು. ಜನರು ಕುತೂಹಲದಿಂದ ದಮಯಂತಿಯ ಸಮೀಪದಲ್ಲಿ ನಲನನ್ನು ಪ್ರಶಂಸಿಸುತ್ತಿದ್ದರು; ಮತ್ತು ನೈಷಧನ ಸಮೀಪದಲ್ಲಿ ಪುನಃ ಪುನಃ ಅವಳನ್ನು ಪ್ರಶಂಸಿಸುತ್ತಿದ್ದರು. ಹೀಗೆ ಸತತವಾಗಿ ಪರಸ್ಪರರ ಗುಣಗಳನ್ನು ಕೇಳುತ್ತಿದ್ದಂತೆ, ಇನ್ನೂ ನೋಡದಿರದ ಆ ವ್ಯಕ್ತಿಯ ಕುರಿತು

ಕಾಮ ಬೆಳೆಯಿತು ಮತ್ತು ಅವರ ಹೃದಯಗಳಲ್ಲಿ ಪರಸ್ಪರರಿಗೆ ಪ್ರೀತಿ ವರ್ಧಿಸಿತು.

ಒಮ್ಮೆ ಈ ಕಾಮವನ್ನು ಹೃದಯದಲ್ಲೇ ಸಹಿಸಿಟ್ಟುಕೊಳ್ಳಲು ಅಸಮರ್ಥನಾದ ನಲನು ಯಾರಿಗೂ ತಿಳಿಯದಂತೆ ಅಂತಃಪುರದ ಸಮೀಪದ ವನದಲ್ಲಿ ಹೋಗಿ ಕುಳಿತುಕೊಂಡಿದ್ದನು. ಅಲ್ಲಿ ಅವನು ಬಂಗಾರದ ಹೊದಿಕೆಹೊಂದಿದ್ದ ಹಂಸಗಳನ್ನು ನೋಡಿದನು ಮತ್ತು ವನದಲ್ಲಿ ಓಡಾಡುತ್ತಿದ್ದ ಆ ಪಕ್ಷಿಗಳಲ್ಲಿ ಒಂದನ್ನು ಹಿಡಿದನು. ಆಗ ಆ ಅಂತರಿಕ್ಷಗ ನಲನಿಗೆ ಕೂಗಿ ಹೇಳಿದನು:

> “ರಾಜ! ನನ್ನನ್ನು ಕೊಲ್ಲಬೇಡ. ನಿನಗೆ ಪ್ರಿಯವಾದದ್ದನ್ನು ನಾನು ಮಾಡಿಕೊಡುತ್ತೇನೆ. ನೈಷಧ! ದಮಯಂತಿಯ ಸಮಕ್ಷಮದಲ್ಲಿ, ಅವಳು ನಿನ್ನ ಹೊರತಾಗಿ ಬೇರೆ ಯಾವ ಪುರುಷನ ಕುರಿತೂ ಯೋಚಿಸದ ಹಾಗೆ, ನಿನ್ನ ಕುರಿತು ಅವಳಿಗೆ ಹೇಳುತ್ತೇನೆ.”

ಈ ಮಾತುಗಳನ್ನು ಕೇಳಿ ಮಹೀಪತಿಯು ಆ ಹಂಸವನ್ನು ಬಿಡುಗಡೆಮಾಡಿದನು ಮತ್ತು ಹಂಸಗಳೆಲ್ಲವೂ ಮೇಲೆ ಹಾರಿ ವಿದರ್ಭದ ಕಡೆ ಹೋದವು.

ಆ ಗುರುತ್ಮಂತಗಳು ವಿದರ್ಭನಗರಕ್ಕೆ ಹೋಗಿ ಅಲ್ಲಿ ದಮಯಂತಿಯ ಬಳಿಗೆ ಬಂದಿಳಿದವು ಮತ್ತು ಅವಳು ಆ ಪಕ್ಷಿಗಳನ್ನು ನೋಡಿದಳು. ಆ ಅದ್ಭುತ ರೂಪಿಗಳನ್ನು ನೋಡಿ ಸಖೀಗಣಗಳಿಂದ



ಸುತ್ತುವರೆಯಲ್ಪಟ್ಟಿದ್ದ ಅವಳು ಹರ್ಷದಿಂದ ಪಕ್ಷಿಗಳನ್ನು ಹಿಡಿಯಲೋಸುಗ ಅವುಗಳನ್ನು ಬೆನ್ನಟ್ಟಿದಳು. ಎಲ್ಲ ಸಖಿಯರೂ ಒಬ್ಬೊಬ್ಬರು ಅವರವರ ಹಂಸಗಳನ್ನು ಹಿಡಿಯಲು ಬೆನ್ನಟ್ಟಿದರು. ಆದರೆ ದಮಯಂತಿಯು ಅನುಸರಿಸುತ್ತಿದ್ದ ಹಂಸವು ಅವಳು ಸಮೀಪ ಬರುತ್ತಿದ್ದಂತಯೇ ಮನುಷ್ಯಧ್ವನಿಯನ್ನು ಧರಿಸಿ ದಮಯಂತಿಯನ್ನುದ್ದೇಶಿಸಿ ಮಾತನಾಡಿತು:

> “ದಮಯಂತಿ! ನಿಷಧದಲ್ಲಿ ನಲ ಎಂಬ ಹೆಸರಿನ ರಾಜನಿದ್ದಾನೆ. ಅವನು ಅಶ್ವಿನಿಯರ ಸದೃಶನಾಗಿದ್ದಾನೆ ಮತ್ತು ಮನುಷ್ಯರಲ್ಲೇ ರೂಪದಲ್ಲಿ ಅವನ ಸರಿಸಾಟಿಯಾದವರು ಯಾರೂ ಇಲ್ಲ. ಒಂದುವೇಳೆ ನೀನು ಅವನ ಭಾರ್ಯೆಯಾದೆ ಎಂದರೆ ನಿನ್ನ ಈ ರೂಪ ಮತ್ತು ಜನ್ಮ ಸಾರ್ಥಕವಾದಂತಾಗುತ್ತದೆ. ನಾವು ದೇವತೆ, ಗಂಧರ್ವ, ಮನುಷ್ಯ, ಉರಗ ಮತ್ತು ರಾಕ್ಷಸರನ್ನು ನೋಡಿದ್ದೇವೆ. ಆದರೆ ಇವನಂತವನನ್ನು ಇದೂವರೆಗೂ ಯಾರಲ್ಲಿಯೂ ಕಂಡಿಲ್ಲ. ನೀನೂ ಕೂಡ ನಾರಿಯರಲ್ಲಿ ರತ್ನದಂತಿದ್ದೀಯೆ. ಮತ್ತು ನಲನು ನರರಲಿಯೇ ಶ್ರೇಷ್ಟನಾಗಿದ್ದಾನೆ. ವಿಶಿಷ್ಟವಾದ ವ್ಯಕ್ತಿಯ ಸಂಗಮವು ವಿಶಿಷ್ಟವಾದ ವ್ಯಕ್ತಿಯೊಡನೆ ಆಯಿತೆಂದರೆ ಒಳ್ಳೆಯದೇ ಆಗುತ್ತದೆ.”

ಹಂಸದ ಈ ಮಾತುಗಳನ್ನು ಕೇಳಿ ದಮಯಂತಿಯು ಆ ಹಂಸಕ್ಕೆ



“ನಲನಿಗೂ ಇದೇ ರೀತಿ ಹೇಳು”

ಎಂದಳು. ಆ ಪಕ್ಷಿಯು ವೈದರ್ಭಿಗೆ “ಹಾಗೆಯೇ ಮಾಡುತ್ತೇನೆ!” ಎಂದು ವಚನವನ್ನಿತ್ತು, ನಿಷಧಕ್ಕೆ ಮರಳಿ, ನಲನಿಗೆ ಸರ್ವವನ್ನೂ ವರದಿಮಾಡಿತು.

## ದಮಯಂತೀ ಸ್ವಯಂವರಕ್ಕೆ ಇಂದ್ರಾದಿ ದೇವತೆಗಳ ಆಗಮನ

ಹಂಸದ ಮಾತುಗಳನ್ನು ಕೇಳಿದ ದಮಯಂತಿಯು, ನಲನ ಕಾರಣದಿಂದಾಗಿ ಬಹಳಷ್ಟು ಅಸ್ವಸ್ಥಳಾದಳು. ದಮಯಂತಿಯು ಚಿಂತಾಪರಳಾಗಿ, ದೀನಳಾಗಿ, ಮುಖದ ಬಣ್ಣವನ್ನೇ ಕಳೆದುಕೊಂಡು, ಕೃಶಳಾಗಿ, ದೀರ್ಘ ನಿಟ್ಟುಸಿರು ಬಿಡುತ್ತಿದ್ದಳು. ಅವಳು ದಿಟ್ಟು ಹಿಡಿದು ಮೇಲೆಯೇ ನೋಡುತ್ತಿದ್ದು ಅಥವಾ ಯೋಚನೆಯಲ್ಲಿ ಮಗ್ನಳಾಗಿಯೇ ಇರುತ್ತಿದ್ದು, ಉನ್ಮತ್ತಳಾದಂತೆ ಕಾಣುತ್ತಿದ್ದಳು. ಅವಳು ಶಯನದಲ್ಲಿಯಾಗಲೀ, ಕುಳಿತುಕೊಳ್ಳುವುದರಲ್ಲಾಗಲೀ, ಅಥವಾ ಊಟದಲ್ಲಿಯಾಗಲೀ ಯಾವುದೇ ರೀತಿಯ ಆನಂದವನ್ನು ಕಾಣುತ್ತಿರಲಿಲ್ಲ. ಮತ್ತೆ ಮತ್ತೆ ಹಾ ಹಾ ಎಂದು ನರಳುತ್ತಾ ಅವಳು ದಿನ-ರಾತ್ರಿ ಎರಡರಲ್ಲಿಯೂ ನಿದ್ರಿಸುತ್ತಿರಲಿಲ್ಲ, ಅವಳ ಈ ಅವಸ್ಥೆಯನ್ನು ನೋಡಿದ ಸಖಿಯರು ಅವಳ ಇಂಗಿತವನ್ನು ಅರಿತರು. ನಂತರ ದಮಯಂತಿಯ ಸಖೀಗಣವು ದಮಯಂತಿಯು ಸ್ವಸ್ಥಳಿಲ್ಲ ಎಂದು ವಿದರ್ಭಪತಿಗೆ ನಿವೇದಿಸಿದರು. ದಮಯಂತಿಯ ಸಖೀಗಣದಿಂದ ಈ ಮಾತನ್ನು ಕೇಳಿದ ನೃಪತಿ ಭೀಮನು ತನ್ನ ಸುತೆಯ ಸಲುವಾಗಿ

ಮಾಡಬೇಕಾದ ಕಾರ್ಯದ ಕುರಿತು ಯೋಚಿಸತೊಡಗಿದನು. ಮಹೀಪಾಲನು ತನ್ನ ಸುತೆಯು ಯೌವನವನ್ನು ಹೊಂದಿದ್ದಾಳೆ ಎಂದು ಸಮೀಕ್ಷಿಸಿ, ದಮಯಂತಿಯ ಸ್ವಯಂವರವನ್ನು ಏರ್ಪಡಿಸುವುದು ತನ್ನ ಕಾರ್ಯ ಎಂದು ಕಂಡುಕೊಂಡನು. ಅವನು

> "ವೀರರೇ! ನಮ್ಮ ಈ ಸ್ವಯಂವರಕ್ಕೆ ಬನ್ನಿ!"

ಎಂದು ಎಲ್ಲ ಮಹೀಪಾಲರನ್ನೂ ಒಂದುಗೂಡಿಸಿದನು. ದಮಯಂತಿಯ ಸ್ವಯಂವರವನ್ನು ಕೇಳಿ ಪಾರ್ಥಿವ ಸರ್ವರೂ ರಾಜ ಭೀಮನ ಕರೆಯಂತೆ ಭೀಮನಲ್ಲಿಗೆ ಹೊರಟರು. ತಮ್ಮ ತಮ್ಮ ಆನೆ, ಕುದುರೆ, ರಥ ಮತ್ತು ವಿಚಿತ್ರ ಮಾಲ್ಯಾಭರಣಗಳಿಂದ ಅಲಂಕೃತರಾದ ಸೇನೆಗಳ ಘರ್ಜನೆಯಿಂದಾಗಿ ಇಡೀ ವಸುಂಧರೆಯೇ ಘರ್ಜಿಸುತ್ತಿದೆಯೋ ಎಂಬಂತೆ ಕಂಡುಬಂದಿತು.

ಇದೇ ಸಮಯದಲ್ಲಿ, ಮಹಾತ್ಮರೂ, ಮಹಾವ್ರತರೂ, ಪುರಾಣ ಋಷಿಸತ್ತಮರೂ ಆದ ನಾರದ ಮತ್ತು ಪರ್ವತರು ಸಂಚರಿಸುತ್ತಾ ಇಂದ್ರಲೋಕಕ್ಕೆ ಆಗಮಿಸಿದರು. ದೇವರಾಜನ ಭವನವನ್ನು ಪ್ರವೇಶಿಸಿ, ಸುಪೂಜಿತರಾದರು. ಅವರನ್ನು ಅರ್ಚಿಸಿದ ಸಹಸ್ರಾಕ್ಷ ವಿಭುವು ಅವರು ಎಲ್ಲಿ ಹೋದರೂ ಅವ್ಯಯವಾದ ಅವರ ಕುಶಲತೆಯ ಕುರಿತು ವಿಚಾರಿಸಿದನು. ನಾರದನು ಹೇಳಿದನು:

> "ಈಶ್ವರ! ನಾವೀರ್ವರು ಹೋದಲ್ಲೆಲ್ಲಾ ಕುಶಲವಾಗಿಯೇ
> ಇದ್ದೇವೆ. ಮತ್ತು ಮಘವತ್! ಭೂಲೋಕದಲ್ಲಿಯೂ ಕೂಡ

ನೃಪರೆಲ್ಲರೂ ಉತ್ತಮ ಕುಶಲತೆಯಿಂದ ಇದ್ದಾರೆ.”

ನಾರದನ ಮಾತನ್ನು ಕೇಳಿ ಬಲವೃತ್ರಹನು ಪ್ರಶ್ನಿಸಿದನು:

“ಜೀವವನ್ನೇ ತ್ಯಜಿಸಿ ಯುದ್ಧ ಮಾಡುವ ಧರ್ಮಜ್ಞರಾದ ಪೃಥಿವೀಪಾಲರು ಪರಾಙ್ಮುಖರಾಗದೇ, ಕಾಲಬಂದಾಗ ಶಸ್ತ್ರಗಳಿಂದ ನಿಧನಹೊಂದಿ ಈ ಲೋಕಕ್ಕೆ ಬರುತ್ತಾರೆ. ಆದರೆ ಈಗ ಅಂಥವರ ಸಂಖ್ಯೆಯು ಕಡಿಮೆಯಾಗುತ್ತಿದೆ. ಆದರೆ ಆ ಎಲ್ಲ ಶೂರ ಕ್ಷತ್ರಿಯರು ಈಗ ಎಲ್ಲಿದ್ದಾರೆ? ನನ್ನ ಪ್ರೀತಿಯ ಅತಿಥಿಗಳಾಗಿ ಮಹೀಪಾಲರು ಯಾರೂ ಬರುತ್ತಿರುವಂತೆ ಕಾಣುವುದಿಲ್ಲವಲ್ಲ!”

ಶಕ್ರನ ಈ ಪ್ರಶ್ನೆಗೆ ನಾರದನು ಉತ್ತರಿಸಿದನು:

“ಭಗವನ್! ನೀನು ಏಕೆ ಮಹೀಕ್ಷಿತರ್ಯಾರನ್ನೂ ನೋಡುತ್ತಿಲ್ಲ ಎಂದು ನನ್ನಿಂದ ಕೇಳು. ವಿದರ್ಭ ರಾಜನಿಗೆ ದಮಯಂತಿ ಎನ್ನುವ ಮಗಳಿದ್ದಾಳೆ. ರೂಪದಲ್ಲಿ ಅವಳು ಪೃಥ್ವಿಯ ಎಲ್ಲರನ್ನೂ ಮೀರಿಸಿದವಳು. ಸದ್ಯದಲ್ಲಿಯೇ ಅವಳ ಸ್ವಯಂವರವು ನಡೆಯಲಿದೆ. ಆದುದರಿಂದ ರಾಜರು ಮತ್ತು ರಾಜಪುತ್ರರೆಲ್ಲರೂ ಅಲ್ಲಿಗೆ ಹೋಗುತ್ತಿದ್ದಾರೆ. ಈ ಭೂರತ್ನವನ್ನು ಪಡೆಯಲು ಹೊರಟಿರುವ ಎಲ್ಲ ಮಹೀಕ್ಷಿತರೂ ಅವಳನ್ನು ವಿಶೇಷವಾಗಿ ಆಕಾಂಕ್ಷಿಸುತ್ತಿದ್ದಾರೆ!”

ಹೀಗೆ ಹೇಳುತ್ತಿರುವಾಗಲೇ, ಅಮರೋತ್ತಮ ಲೋಕಪಾಲಕರು ಅಗ್ನಿಯನ್ನೂ ಒಡಗೊಂಡು, ದೇವರಾಜನ ಬಳಿ ಆಗಮಿಸಿದರು. ಅವರೆಲ್ಲರೂ ನಾರದನ ಮಹತ್ತರ ಮಾತುಗಳನ್ನು ಕೇಳಿ ಹರ್ಷಗೊಂಡು

"ನಾವೂ ಕೂಡ ಅಲ್ಲಿಗೆ ಹೋಗೋಣ !"

ಎಂದರು. ಹೀಗೆ ಅವರೆಲ್ಲರೂ ಗಣ-ವಾಹನ ಸಮೇತರಾಗಿ ಎಲ್ಲ ಮಹೀಕ್ಷಿತರೂ ಸೇರಿದ್ದ ವಿದರ್ಭಕ್ಕೆ ಹೊರಟರು.

ದಮಯಂತಿಯಲ್ಲಿಯೇ ಅನುವೃತನಾದ ರಾಜ ನಲನೂ ಕೂಡ ರಾಜರ ಸಮಾಗಮದ ಕುರಿತು ಕೇಳಿ, ಮುದದಿಂದ ಅಲ್ಲಿಗೆ ಹೊರಟನು. ಮಾರ್ಗದಲ್ಲಿ ದೇವತೆಗಳು ಭೂತಲದಲ್ಲಿ ಪಯಣಿಸುತ್ತಿದ್ದ ಸಾಕ್ಷಾತ್ ಮನ್ಮಥನೇ ಅವತರಿಸಿದ್ದಾನೋ ಎನ್ನುವ ರೂಪ ಸಂಪದ ನಲನನ್ನು ನೋಡಿದರು. ಸೂರ್ಯನಂತೆ ಶೋಭಿಸುತ್ತಿದ್ದ ಅವನನ್ನು ನೋಡಿದ ಲೋಕಪಾಲರು, ತಮ್ಮ ತಮ್ಮ ಉದ್ದೇಶಗಳನ್ನೇ ಮರೆತು, ವಿಸ್ಮಿತರಾಗಿ ಅವನ ರೂಪಸಂಪತ್ತನ್ನೇ ನೋಡತೊಡಗಿದರು. ಆ ದಿವೌಕಸರು ಅಂತರಿಕ್ಷದಲ್ಲಿಯೇ ತಮ್ಮ ತಮ್ಮ ವಿಮಾನಗಳನ್ನು ನಿಲ್ಲಿಸಿ, ನಭಸ್ತಲದಿಂದ ಕೆಳಗಿಳಿದು, ನೈಷಧನನ್ನುದ್ದೇಶಿಸಿ ಹೇಳಿದರು:

"ಭೋ ಭೋ ನೈಷಧ ! ನಲ ! ಸತ್ಯವ್ರತ ನೀನು ನಮ್ಮ ದೂತನಾಗಿ ನಮಗೆ ಸಹಾಯವನ್ನು ಮಾಡು."

## ನಲನ ದೇವ ದೂತತ್ವ

“ಮಾಡುತ್ತೇನೆ!” ಎಂದು ಅವರಿಗೆ ಪ್ರತಿಜ್ಞೆಯನ್ನಿತ್ತ ನಲನು ಅಂಜಲೀಬದ್ಧನಾಗಿ ನಿಂತು ಅವರನ್ನು ಪ್ರಶ್ನಿಸಿದನು:

> “ನೀವು ಯಾರು? ನನ್ನನ್ನು ದೂತನನ್ನಾಗಿ ಬಳಸಲು ಇಚ್ಛಿಸುವ ಇವನು ಯಾರು? ಇದರಲ್ಲಿ ನನ್ನ ಕಾರ್ಯವೇನು? ಯಥಾವತ್ತಾಗಿ ತಿಳಿಸಿರಿ.”

ನೈಷಧನ ಈ ಮಾತುಗಳಿಗೆ ಮಘವಾನನು ಉತ್ತರಿಸಿದನು:

> “ದಮಯಂತಿಯನ್ನು ಬಯಸಿ ಬಂದ ಅಮರರು ನಾವು ಎಂದು ತಿಳಿ. ನಾನು ಇಂದ್ರ. ಇವನು ಅಗ್ನಿ. ಮತ್ತು ಈತನು ಅಪಾಂಪತಿ. ಮತ್ತು ಇವನು ನೃಣರ ಶರೀರಾಂತಕರ ಯಮ. ನೀನು “ನಾವು ಬಂದಿದ್ದೇವೆ!” ಎಂದು ದಮಯಂತಿಗೆ ಹೇಳು: “ಇಂದ್ರನೂ ಸೇರಿ ಲೋಕಪಾಲಕರು ನಿನ್ನನ್ನು ನೋಡುವ ಇಚ್ಛೆಯಿಂದ ಬರುತ್ತಿದ್ದಾರೆ. ದೇವತೆಗಳಾದ ಶಕ್ರ, ಅಗ್ನಿ, ವರುಣ ಮತ್ತು ಯಮರು ನಿನ್ನನ್ನು ಹೊಂದಲು ಇಚ್ಛಿಸುತ್ತಾರೆ. ಈ ದೇವತೆಗಳಲ್ಲಿ ಒಬ್ಬರನ್ನು ನಿನ್ನ ಪತಿಯನ್ನಾಗಿ ವರಿಸು!””

ಶಕ್ರನ ಈ ಮಾತುಗಳನ್ನು ಕೇಳಿದ ನಲನು ಅಂಜಲೀಬದ್ಧನಾಗಿ ಹೇಳಿದನು:

> “ಅದೇ ಉದ್ದೇಶವನ್ನಿಟ್ಟುಕೊಂಡು ಹೊರಟ ನನ್ನನ್ನು ಕಳುಹಿಸುವುದು ಸರಿಯೆನಿಸುವುದಿಲ್ಲ!”

ದೇವತೆಗಳು ಹೇಳಿದರು:

> "ನೈಷಧ! ಮಾಡುತ್ತೇನೆ ಎಂದು ಮೊದಲೇ ನಮಗೆ ಮಾತು ಕೊಟ್ಟಿದ್ದೀಯೆ. ಈಗ ಏಕೆ ನೀನು ಹಾಗೆ ಮಾಡುವುದಿಲ್ಲ? ನೈಷಧ! ಹೋಗು, ತಡಮಾಡಬೇಡ."

ಹೀಗೆ ಹೇಳಿದ ದೇವತೆಗಳಿಗೆ ನೈಷಧನು ಉತ್ತರಿಸಿದನು:

> "ಸುರಕ್ಷಿತ ಅರಮನೆಯನ್ನು ಹೇಗೆ ಪ್ರವೇಶಿಸಲು ಸಾದ್ಯ?"

> "ನೀನು ಪ್ರವೇಶಿಸುತ್ತೀಯೆ!"

ಎಂದು ಶಕ್ರನು ಉತ್ತರಿಸಿದನು. "ಹಾಗೆಯೇ ಆಗಲಿ" ಎಂದು ಅವನು ದಮಯಂತಿಯ ನಿವೇಶನಕ್ಕೆ ಹೋದನು.

ಅಲ್ಲಿ ಸಖೀಗಣದಿಂದ ಸಮಾವೃತಗೊಂಡ, ರೂಪದಿಂದ ದೇದೀಪ್ಯಮಾನಳಾದ, ವರವರ್ಣಿನೀ ವೈದರ್ಭಿಯನ್ನು ಕಂಡನು. ಅತೀವ ಸುಕುಮಾರಾಂಗಿ ತನುಮಧ್ಯೆ ಸುಲೋಚನೆಯು ತನ್ನ ತೇಜಸ್ಸಿನಿಂದ ಶಶಿಯ ಕಿರಣಗಳನ್ನು ಹಿಡಿದಿಟ್ಟಹಾಗಿದ್ದಳು. ಆ ಚಾರುಹಾಸಿನಿಯನ್ನು ನೋಡಿದೊಡನೆಯೇ ಅವನಲ್ಲಿ ಕಾಮವು ವೃದ್ಧಿಸಿತು; ಆದರೆ ಕೊಟ್ಟ ಮಾತನ್ನು ಸತ್ಯಮಾಡಲೋಸುಗ ಆಕರ್ಷಣೆಯನ್ನು ಹೃದಯದಲ್ಲಿಯೇ ಹಿಡಿದಿಟ್ಟುಕೊಂಡನು. ನೈಷಧನನ್ನು ನೋಡಿದ ಆ ಪರಮಾಂಗನೆಯರು ಸಂಭ್ರಾಂತರಾಗಿ, ಅವನ ತೇಜಸ್ಸಿನಿಂದ ಘರ್ಶಿತರಾಗಿ ತಮ್ಮ ತಮ್ಮ ಆಸನಗಳಿಂದ ಎದ್ದು

ನಿಂತರು. ಸುಪ್ರೀತರೂ ವಿಸ್ಮಯರೂ ಆದ ಅವರು ಅವನೊಡನೆ ಮಾತನಾಡದೇ, ತಮ್ಮ ಮನಸ್ಸಿನೊಳಗೆ ಅವನನ್ನು ಬಹಳಷ್ಟು ಪ್ರಶಂಸಿಸಿದರು:

> "ಆಹಾ ರೂಪವೇ! ಆಹಾ ಕಾಂತಿಯೇ! ಆಹಾ ಈ ಮಹಾತ್ಮನ ಧೈರ್ಯವೇ! ಇವನ್ಯಾರು? ದೇವನಿರಬಹುದೇ? ಯಕ್ಷನಿರಬಹುದೇ? ಅಥವಾ ಗಂಧರ್ವನಿರಬಹುದೇ?"

ಅವರಲ್ಲಿ ಯಾರೂ ಒಂದು ಶಬ್ಧವನ್ನೂ ಮಾತನಾಡಲು ಶಕ್ಯರಿರಲಿಲ್ಲ. ಎಲ್ಲ ವರಾಂಗನೆಯರೂ ಅವನ ತೇಜಸ್ಸಿನಿಂದ ಘರ್ಶಿತರಾಗಿ ನಾಚಿಕೊಂಡಿದ್ದರು. ಆದರೆ ವಿಸ್ಮಿತ ದಮಯಂತಿಯು ವೀರ ನಲನನ್ನುದ್ದೇಶಿಸಿ ಮಾತನಾಡಿದಳು:

> "ನನ್ನ ಹೃದಯದ ಆಸೆಯನ್ನು ವೃದ್ಧಿಸುವ, ಸರ್ವಾನವದ್ಯಾಂಗ ನೀನು ಯಾರು? ವೀರ! ಒಬ್ಬ ಅಮರನಂತೆ ನೀನು ಇಲ್ಲಿಗೆ ಬಂದಿದ್ದೀಯೆ. ನೀನು ಯಾರಿಗೂ ಕಾಣದಂತೆ ಇಲ್ಲಿಗೆ ಹೇಗೆ ಆಗಮಿಸಿದೆ ಎಂದು ತಿಳಿಯಲು ಬಯಸುತ್ತೇನೆ. ಯಾಕೆಂದರೆ ನನ್ನ ಈ ಅರಮನೆಯು ಸುರಕ್ಷಿತವಾಗಿದೆ ಮತ್ತು ರಾಜನ ಉಗ್ರಶಾಸನವಿದೆ."

ವೈದರ್ಭಿಯ ಈ ಮಾತುಗಳಿಗೆ ನಲನು ಉತ್ತರಿಸಿದನು:

> "ಕಲ್ಯಾಣಿ! ನನ್ನನ್ನು ನಲನೆಂದು ತಿಳಿ. ದೇವದೂತನಾಗಿ ಇಲ್ಲಿಗೆ

ಆಗಮಿಸಿದ್ದೇನೆ. ದೇವತೆಗಳು ನಿನ್ನನ್ನು ಹೊಂದಲು ಇಚ್ಛಿಸುವರು - ಶಕ್ರ, ಅಗ್ನಿ, ವರುಣ ಮತ್ತು ಯಮ. ಈ ದೇವರುಗಳಲ್ಲಿ ಯಾರಾದರೂ ಒಬ್ಬನನ್ನು ಪತಿಯಾಗಿ ವರಿಸು. ಅವರ ಪ್ರಭಾವದಿಂದಲೇ ನಾನು ಇಲ್ಲಿಗೆ ಯಾರಿಗೂ ಕಾಣಿಸಿಕೊಳ್ಳದೇ ಪ್ರವೇಶಿಸಿದ್ದೇನೆ. ನಾನು ಪ್ರವೇಶಿಸುವಾಗ ಯಾರೂ ನನ್ನನ್ನು ನೋಡಲಿಲ್ಲ ಮತ್ತು ತಡೆಯಲಿಲ್ಲ. ಈ ಉದ್ದೇಶಕ್ಕೋಸ್ಕರವೇ ಸುರಸತ್ತಮರಿಂದ ನಾನು ಕಳುಹಿಸಲ್ಪಟ್ಟಿದ್ದೇನೆ. ಇದನ್ನು ಕೇಳಿದನಂತರ ನಿನಗೆ ಇಷ್ಟಬಂದಹಾಗೆ ಮಾಡು.”

ಆ ದೇವತೆಗಳಿಗೆ ನಮಸ್ಕರಿಸಿ, ಅವಳು ಮುಗುಳ್ನಗುತ್ತಾ ನಲನಿಗೆ ಹೇಳಿದಳು:

“ರಾಜ! ನಿನ್ನ ಉದ್ದೇಶಗಳನ್ನು ಯಥಾವತ್ತಾಗಿ ಹೇಳು. ನಿನಗೆ ನನ್ನಿಂದ ಏನಾಗಬೇಕು? ನಾನು ಮತ್ತು ನನ್ನಲ್ಲಿರುವ ಎಲ್ಲವೂ ನಿನ್ನದೇ ಅಲ್ಲವೇ? ನಿನ್ನ ಇಚ್ಛೆಯನ್ನು ವಿಶ್ವಾಸದಿಂದ ಬಹಿರಂಗಪಡಿಸು. ಹಂಸಗಳ ವಚನಗಳು ನನ್ನ ದೇಹವನ್ನು ದಹಿಸುತ್ತಿವೆ! ನಿನಗೋಸ್ಕರವೇ ನಾನು ಈ ರಾಜರುಗಳನ್ನೆಲ್ಲಾ ಒಟ್ಟು ಸೇರಿಸಿದ್ದೇನೆ. ನಿನ್ನನ್ನು ಪ್ರೀತಿಸುತ್ತಿದ್ದ ನನ್ನನ್ನು ನೀನು ತಿರಸ್ಕರಿಸಿದರೆ ನಾನು ನಿನ್ನ ಕಾರಣದಿಂದಾಗಿ ವಿಷವನ್ನೋ, ಅಗ್ನಿಯನ್ನೋ, ಜಲವನ್ನೋ ಅಥವಾ ನೇಣನ್ನೋ

ಮೊರೆಹೊಗುತ್ತೇನೆ."

ವೈದರ್ಭಿಯ ಈ ಮಾತುಗಳಿಗೆ ನಲನು ಉತ್ತರಿಸಿದನು:

"ಲೋಕಪಾಲಕರೇ ಇರುವಾಗ ನೀನು ಮನುಷ್ಯನನ್ನು ಹೇಗೆ ಇಚ್ಛಿಸುತ್ತೀಯೆ? ನಾನು ಆ ಮಹಾತ್ಮ ಲೋಕಕೃತ ಈಶ್ವರರ ಪಾದಧೂಳಿಗೂ ಸಮನಲ್ಲ. ನಿನ್ನ ಮನಸ್ಸನ್ನು ಅವರೆಡೆಗೇ ಒಲೆಯಿಸು. ದೇವತೆಗಳಿಗೆ ಅಪ್ರಿಯವಾಗಿ ನಡೆದುಕೊಂಡ ಮರ್ತ್ಯನಿಗೆ ಮೃತ್ಯುವೇ ಗತಿ. ಸುರೋತ್ತಮರನ್ನು ವರಿಸಿ ನನ್ನನ್ನು ರಕ್ಷಿಸು."

ಆಗ ಶುಚಿಸ್ಮಿತೆ ದಮಯಂತಿಯು ಬಾಷ್ಪಗಳಿಂದೊಡಗೂಡಿದ ಮಾತಿನಿಂದ ನಿಧಾನವಾಗಿ ರಾಜನಿಗೆ ಉತ್ತರಿಸಿದಳು:

"ನರೇಶ್ವರ! ನನ್ನ ದೃಷ್ಟಿಯಲ್ಲಿ ಅಪಾಯವಿಲ್ಲದಂತಹ ಒಂದು ಉಪಾಯವಿದೆ. ಇದರಿಂದ ನಿನಗೆ ಯಾವುದೇರೀತಿಯ ದೋಷವೂ ಬರುವುದಿಲ್ಲ. ಅಗ್ನಿಪುರೋಗಮ ದೇವತೆಗಳನ್ನೂ ಸೇರಿಕೊಂಡು ನೀವೆಲ್ಲರೂ ನನ್ನ ಸ್ವಯಂವರಕ್ಕೆ ಬರಬೇಕು. ಆಗ ನಾನು ಲೋಕಪಾಲಕರ ಸನ್ನಿಧಿಯಲ್ಲಿಯೇ ನಿನ್ನನ್ನು ವರಿಸುತ್ತೇನೆ. ಈ ರೀತಿ ನಿನಗೆ ಯಾವ ದೋಷವೂ ಬರುವುದಿಲ್ಲ."

ವೈದರ್ಭಿಯು ಈ ರೀತಿ ಹೇಳಲು, ರಾಜ ನಲನು ಪುನಃ ದೇವತೆಗಳು

ಎಲ್ಲಿ ಸಮಾಗತರಾಗಿದ್ದರೋ ಅಲ್ಲಿಗೆ ಮರಳಿದನು. ಅಲ್ಲಿಗೆ ಅವನು ಬರುತ್ತಿರುವುದನ್ನು ಈಶ್ವರನೂ ಸಹಿತ ಲೋಕಪಾಲಕರು ನೋಡಿ ಸರ್ವ ವೃತ್ತಾಂತವನ್ನೂ ಕೇಳಿದರು. ದೇವತೆಗಳು ಹೇಳಿದರು:

> "ರಾಜ! ನೀನು ಶುಚಿಸ್ಮಿತೆ ದಮಯಂತಿಯನ್ನು ನೋಡಿದೆಯಾ? ನಮಗೆಲ್ಲರಿಗೆ ಅವಳು ಏನು ಹೇಳಿದಳು ಹೇಳು."

ನಲನು ಹೇಳಿದನು:

> "ನಿಮ್ಮೆಲ್ಲರ ಆದೇಶದಂತೆ ಎತ್ತರ ಗೋಡೆಗಳಿಂದ ಮತ್ತು ದಂಡಪಾಣಿ ಕಾವಲುಗಾರರಿಂದ ಆವೃತ ದಮಯಂತಿಯ ನಿವೇಶನವನ್ನು ಪ್ರವೇಶಿಸಿದೆನು. ಆದರೆ ನಿಮ್ಮ ತೇಜಸ್ಸಿನ ಪ್ರಭಾವದಿಂದ ಆ ಪಾರ್ಥಿವಸುತೆಯನ್ನು ಬಿಟ್ಟು ಬೇರೆ ಯಾರೂ ನಾನು ಪ್ರವೇಶಿಸುವುದನ್ನು ನೋಡಲಿಲ್ಲ. ನಾನು ಅವಳ ಸಖಿಯರನ್ನು ನೋಡಿದೆ, ಅವರೂ ನನ್ನನ್ನು ನೋಡಿದರು. ನನ್ನನ್ನು ನೋಡಿ ಅವರೆಲ್ಲರೂ ವಿಸ್ಮಿತರಾದರು. ನಿಮ್ಮ ಕುರಿತು ನಾನು ಆ ರುಚಿರಾನನೆಗೆ ಹೇಳಿದೆ. ಆದರೆ ಅವಳಿಗೆ ನನ್ನ ಮೇಲೆಯೇ ಸಂಕಲ್ಪವಿದೆ ಎಂದು ಹೇಳಿದಳು. "ನಿನ್ನ ಜೊತೆಗೆ ಸುರರೂ ಕೂಡ ನನ್ನ ಸ್ವಯಂವರಕ್ಕೆ ಬರಲಿ!" ಎಂದು ಆ ಬಾಲೆಯು ನನಗೆ ಹೇಳಿದಳು. "ಅವರ ಸನ್ನಿಧಿಯಲ್ಲಿಯೇ ನಿನ್ನನ್ನು ವರಿಸುತ್ತೇನೆ. ಈ ರೀತಿ ನಿನಗೆ

ಯಾವುದೇ ದೋಷವೂ ಬರುವುದಿಲ್ಲ.” ತ್ರಿದಶೇಶ್ವರರೇ! ಅಲ್ಲಿ ನಡೆದಿದ್ದನ್ನು ಯಥಾವತ್ತಾಗಿ ನಾನು ನಿಮಗೆ ತಿಳಿಸಿದ್ದೇನೆ. ಇನ್ನು ನಿಮಗೆ ತಿಳಿದಹಾಗೆ ಮಾಡಿ.”

## ದಮಯಂತೀ ಸ್ವಯಂವರ

ನಂತರ ಪುಣ್ಯ ತಿಥಿ, ಕ್ಷಣ ಮತ್ತು ಶುಭ ಕಾಲವು ಪ್ರಾಪ್ತಿಯಾದಾಗ, ಭೀಮರಾಜನು ಮಹೀಪಾಲರಿಗೆ ಸ್ವಯಂವರದ ಕರೆಕೊಟ್ಟನು. ಅದನ್ನು ಕೇಳಿ ಕಾಮ ಪೀಡಿತ ಎಲ್ಲ ಪೃಥಿವೀಪಾಲರೂ ದಮಯಂತಿಯನ್ನು ಗೆಲ್ಲುವ ಭರವಸೆಯಿಂದ ತ್ವರಿತವಾಗಿ ಬಂದು ಸೇರಿದರು. ಕನಕಸ್ತಂಭಗಳಿಂದ ಮತ್ತು ತೋರಣಗಳಿಂದ ವಿರಾಜಿಸುತ್ತಿರುವ ಮಹಾರಂಗವನ್ನು ನೃಪರು ಸಿಂಹಗಳು ಪರ್ವತವನ್ನು ಪ್ರವೇಶಿಸುವಂತೆ ಪ್ರವೇಶಿಸಿದರು. ಅಲ್ಲಿ ಪೃಥಿವೀಕ್ಷಿತರು ಪುಷ್ಪಮಾಲೆಗಳನ್ನು ಮತ್ತು ಜಗಜಗಿಸುವ ಮಣಿಕುಂಡಲಗಳನ್ನು ಧರಿಸಿ, ವಿವಿಧ ಆಸನಗಳಲ್ಲಿ ಆಸೀನರಾದರು. ಆ ರಾಜ ಸಮಿತಿಯು ಭೋಗವತಿಯು ನಾಗಗಳಿಂದ ಮತ್ತು ಗಿರಿಗುಹೆಯು ವ್ಯಾಘ್ರಗಳಿಂದ ತುಂಬಿರುವ ಹಾಗೆ ನರವ್ಯಾಘ್ರರಿಂದ ತುಂಬಿಕೊಂಡಿತು. ಅಲ್ಲಿ ಅವರ ಬಾಹುಗಳು ಪರಿಘಗಳಂತೆ ಕಾಣುತ್ತಿದ್ದವು. ಐದುತಲೆಯ ಉರಗಗಳಂತೆ ಆಕಾರಗಳನ್ನು ಹೊಂದಿದ್ದು ನುಣುಪಾಗಿದ್ದವು. ಆಕಾಶದಲ್ಲಿ ನಕ್ಷತ್ರಗಳು ಶೋಭಿಸುವಂತೆ ರಾಜರ ಮುಖಗಳು ಸುಂದರ ಕೇಶಗಳಿಂದ, ಸುಂದರ ಹೊಳೆಯುತ್ತಿರುವ ನಾಸಿಕಗಳಿಂದ ಶೋಭಿಸುತ್ತಿದ್ದವು. ಆಗ ಶುಭಾನನೆ



ದಮಯಂತಿಯು ತನ್ನ ಪ್ರಭೆಯಿಂದ ರಾಜರುಗಳ ಕಣ್ಣುಗಳನ್ನೂ, ಮನಸ್ಸುಗಳನ್ನೂ ಕದಿಯುತ್ತಾ ರಂಗವನ್ನು ಪ್ರವೇಶಿಸಿದಳು. ಅವಳ ಯಾವ ಯಾವ ಅಂಗದ ಮೇಲೆ ಆ ಮಹಾತ್ಮರ ದೃಷ್ಟಿಯು ಬಿದ್ದಿತೋ, ಬೇರೆಲ್ಲಿಯೂ ಹಾಯದಂತೆ ಅಲ್ಲಿಯೇ ಅವರ ದೃಷ್ಟಿಯು ಸಿಲುಕಿಕೊಂಡಿತು. ರಾಜರ ಹೆಸರುಗಳ ಸಂಕೀರ್ತನೆ ಮಾಡುತ್ತಿರುವಾಗ ಭೈಮಿಯು ಒಂದೇತರಹ ಕಾಣುತ್ತಿರುವ ಐವರು ಪುರುಷರನ್ನು ನೋಡಿದಳು. ರೂಪದಲ್ಲಿ ಯಾವ ವ್ಯತ್ಯಾಸಗಳೂ ಇಲ್ಲದೇ ಅಲ್ಲಿ ಕುಳಿತಿರುವ ಅವರನ್ನೆಲ್ಲ ನೋಡಿ ವೈದರ್ಭಿಯು ನೃಪ ನಲನು ಯಾರೆಂದು ಗುರುತಿಸಲಾಗದೇ ಸಂದೇಹಕ್ಕೊಳಗಾದಳು. ಯಾಕೆಂದರೆ ಅವರಲ್ಲಿ ಯಾರನ್ನು ನೋಡಿದರೂ ನೃಪ ನಲನನ್ನೇ ನೋಡುತ್ತಿದ್ದೇನೆ ಎಂದು ಅವಳಿಗನ್ನಿಸುತ್ತಿತ್ತು.

ಚಿಂತೆಯಿಂದ ಭಾಮಿನಿಯು ಮನಸ್ಸಿನಲ್ಲಿಯೇ ತರ್ಕಿಸತೊಡಗಿದಳು:

> “ದೇವತೆಗಳು ಯಾರೆಂದು ನಾನು ಹೇಗೆ ತಿಳಿಯಲಿ ಮತ್ತು ಹೇಗೆ ನೃಪ ನಲನನ್ನು ಗುರುತಿಸಲಿ?”

ಹೀಗೆ ದುಃಖಿತಳಾಗಿ ಚಿಂತಿಸುತ್ತಿದ್ದ ಆ ವೈದರ್ಭಿಯು ಕೇಳಿದ್ದ ದೇವಚಿಹ್ನೆಗಳ ಕುರಿತು ಯೋಚಿಸತೊಡಗಿದಳು:

> “ಇವರೇ ದೇವತೆಗಳು ಎಂದು ಗುರುತಿಸುವಂತಹ ಚಿಹ್ನೆಗಳ ಕುರಿತು ವೃದ್ಧರಿಂದ ಕೇಳಿದ್ದೇನೆ. ಆದರೆ ಅವುಗಳಲ್ಲಿ ಯಾವುದೂ ಭೂಮಿಯಮೇಲಿರುವ ಇವರಲ್ಲಿ




7

ಕಂಡುಬರುತ್ತಿಲ್ಲವಲ್ಲಾ!"

ಪುನಃ ಪುನಃ ಬೇರೆ ಬೇರೆ ರೀತಿಗಳಲ್ಲಿ ವಿಚಾರಿಸುತ್ತಾ ಅವಳು ದೇವತೆಗಳಿಗೆ ಶರಣುಹೋಗುವ ಕಾಲ ಪ್ರಾಪ್ತವಾಗಿದೆ ಎಂದು ಅರಿತಳು. ವಾಚಾ-ಮನಸಾ ನಮಸ್ಕರಿಸಿ, ಪ್ರಾಂಜಲಿಬದ್ಧಳಾಗಿ, ನಡುಗುತ್ತಾ ದೇವತೆಗಳನ್ನುದ್ದೇಶಿಸಿ ಪ್ರಾರ್ಥಿಸಿದಳು:

"ಹಂಸಗಳ ವಚನವನ್ನು ಕೇಳಿ ನೈಷಧನೇ ನನ್ನ ಪತಿಯಾಗಲಿ ಎಂಬ ನನ್ನ ಈ ಸತ್ಯವು ದೇವತೆಗಳನ್ನು ನನಗೆ ತೋರಿಸಿ ಕೊಡಲಿ! ವಾಚಾ-ಮನಸಾ ನಾನು ಅಭಿಚರಳಾಗಿಲ್ಲ ಎಂಬ ಈ ಸತ್ಯವು ದೇವತೆಗಳನ್ನು ನನಗೆ ತೋರಿಸಲಿ! ದೇವತೆಗಳೇ ನನಗೆ ನಿಷಧಾಧಿಪನು ಪತಿಯಾಗಲಿ ಎಂದು ನಿರ್ಧರಿಸಿದ್ದರೆ, ಈ ಸತ್ಯದ ಮೂಲಕ ದೇವತೆಗಳು ನನಗೆ ಕಾಣಿಸಿಕೊಳ್ಳಲಿ! ನರಾಧಿಪ ಪುಣ್ಯಶ್ಲೋಕನನ್ನು ಗುರುತಿಸಲು ಸಹಾಯವಾಗುವಂತೆ ಈಶ್ವರಸಮೇತ ಈ ಲೋಕಪಾಲಕರು ತಮ್ಮ ಸ್ವರೂಪಗಳನ್ನು ಕಾಣಿಸಲಿ!"

ದಮಯಂತಿಯ ಆ ಕರುಣ ಪರಿವೇದನೆಯನ್ನು ಕೇಳಿ ಮತ್ತು ನೈಷಧನ ಕುರಿತು ಅವಳಿಗಿದ್ದ ಪರಮ ನಿಶ್ಚಯ ಮತ್ತು ಅನುರಾಗ, ಅವಳ ಮನೋವಿಶುದ್ಧಿ, ಬುದ್ಧಿ, ಮತ್ತು ಭಕ್ತಿ, ರಾಗವನ್ನು ನೋಡಿ, ಅವಳು ಕೇಳಿಕೊಂಡ ಹಾಗೆ ದೇವತೆಗಳು ತಮ್ಮ ಚಿಹ್ನೆಧಾರಣೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ತೋರಿಸಿದರು. ಬೆವರೇ ಇಲ್ಲದ, ಸ್ತಬ್ಧಲೋಚನರಾದ,

ಶುಭ್ರಕುಸುಮಮಾಲೆಗಳನ್ನು ಧರಿಸಿದ, ಮಲಿನತೆಯೇ ಇಲ್ಲದೇ, ಕ್ಷಿತಿಯನ್ನು ಸ್ಪರ್ಶಿಸದೇ ನಿಂತಿರುವ ದೇವತೆಗಳನ್ನು ಅವಳು ನೋಡಿದಳು. ಮತ್ತು ನಲನು ತನ್ನ ನೆರಳಿನ ಮೂಲಕ, ಮಲಿನಮಾಲೆಯಿಂದ, ಬೆವರು ಮತ್ತು ಕೊಳೆಯಿಂದ, ಕಣ್ಣುರೆಪ್ಪೆಗಳ ಮಿಡಿತದಿಂದ ಮತ್ತು ಭೂಮಿಯನ್ನು ಮೆಟ್ಟಿ ನಿಂತಿರುವುದರಿಂದ ಗುರುತಿಸಲ್ಪಟ್ಟನು. ಈಗ ಭೈಮಿಯು ದೇವತೆಗಳನ್ನು ಮತ್ತು ಪುಣ್ಯಶ್ಲೋಕನನ್ನು ನೋಡಬಹುದಾದುದರಿಂದ ಧರ್ಮಪ್ರಕಾರವಾಗಿ ನೈಷಧನನ್ನು ವರಿಸಿದಳು. ಆ ವಿಲಜ್ಜಮಾನಿ ಆಯತಲೋಚನೆಯು ಅವನ ವಸ್ತ್ರದ ಅಂಚನ್ನು ಹಿಡಿದಳು ಮತ್ತು ಪರಮ ಶೋಭನೀಯ ಮಾಲೆಯನ್ನು ಅವನ ಸ್ಕಂಧದ ಮೇಲೆ ಹಾಕಿದಳು. ಹೀಗೆ ಆ ವರವರ್ಣಿನಿಯು ಅವನನ್ನೇ ತನ್ನ ಪತಿಯನ್ನಾಗಿ ವರಿಸಿದಳು. ನೆರೆದಿದ್ದ ನರಾಧಿಪರೆಲ್ಲರೂ ಹಾಹಾಕಾರ ಮಾಡಿದರು, ಮತ್ತು ದೇವ-ಮಹರ್ಷಿಗಳು ವಿಸ್ಮಿತರಾಗಿ, ನೃಪ ನಲನನ್ನು ಪ್ರಶಂಸಿಸುತ್ತಾ, “ಸಾಧು! ಸಾಧು!” ಎಂದು ಉದ್ಗರಿಸಿದರು.

ಮಹೌಜಸ ಲೋಕಪಾಲಕರು ಭೈಮ್ಯಳಿಂದ ವರಿಸಿಕೊಂಡ ನೈಷಧನ ಕುರಿತು ಪ್ರಹೃಷ್ಟಮನಸರಾಗಿ, ನಲನಿಗೆ ಒಟ್ಟು ಎಂಟು ವರಗಳನ್ನಿತ್ತರು. ಶಚೀಪತಿ ಶಕ್ರನು ಪ್ರೀತನಾಗಿ ನೈಷಧನಿಗೆ ಯಜ್ಞಗಳಲ್ಲಿ ತನ್ನ ಪ್ರತ್ಯಕ್ಷ್ಯದರ್ಶನದ ಮತ್ತು ನಡೆಯುವಲ್ಲೆಲ್ಲಾ ದಾರಿಯಲ್ಲಿ ವಿಘ್ನಬರದಂತೆ ವರವನ್ನಿತ್ತನು. ಹುತಾಶನನು ನೈಷಧನಿಗೆ ಬೇಕಾದಲ್ಲಿ ಅಗ್ನಿಯು ಸ್ವಯಂಭೂತನಾಗುವಹಾಗೆ, ಮತ್ತು ಅಗ್ನಿಯಿಂದ ಪ್ರಭಾವಿತ

ಪ್ರದೇಶಗಳಿಗೆ ಪ್ರವೇಶಿಸಬಹುದೆಂಬ ವರವನ್ನಿತ್ತನು. ಯಮನು ಅನ್ನರಸವನ್ನೂ ಮತ್ತು ಧರ್ಮದಲ್ಲಿ ಪರಮಸ್ಥಿತಿಯನ್ನೂ ನೀಡಿದನು. ಅಪಾಂಪತಿಯು ನೈಷಧನು ಬಯಸಿದಲ್ಲಿ ಜಲವು ಇರುವಂತೆ, ಮತ್ತು ಸುಗಂಧದ ಉತ್ತಮ ಮಾಲೆಯನ್ನಿತ್ತನು. ಸರ್ವರೂ ಸೇರಿ ಅವನಿಗೆ ಅವಳಿ ಮಕ್ಕಳನ್ನು ಕೊಟ್ಟರು. ಈ ರೀತಿ ವರಗಳನ್ನಿತ್ತು ದೇವತೆಗಳು ತ್ರಿದಿವಕ್ಕೆ ತೆರಳಿದರು. ವಿವಾಹವನ್ನು ನೋಡಿದ ಪಾರ್ಥಿವರೆಲ್ಲರೂ ವಿಸ್ಮಯಾನ್ವಿತರಾಗಿ, ದಮಯಂತಿಯ ಸಲುವಾಗಿ ಸಂತೋಷಗೊಂಡು, ಬಂದ ದಾರಿಯಲ್ಲಿಯೇ ಹಿಂತೆರಳಿದರು.

ಪಾರ್ಥಿವ ಪುಣ್ಯಶ್ಲೋಕನೂ ಕೂಡ ನಾರೀರತ್ನವನ್ನು ಹೊಂದಿ, ಬಲವೃತ್ರಹನು ಶಚಿಯೊಂದಿಗೆ ರಮಿಸುವಹಾಗೆ ಅವಳೊಂದಿಗೆ ರಮಿಸಿದನು. ಅತೀವ ಮುದಿತನಾದ ವೀರ ರಾಜನು ಹೊಳೆಯುತ್ತಿರುವ ಅಂಶುಮಾನನಂತೆ ಧರ್ಮದಲ್ಲಿ ರಂಜಿಸುತ್ತಾ ಪ್ರಜೆಗಳನ್ನು ಪರಿಪಾಲಿಸಿದನು. ನಾಹುಷ ಯಯಾತಿಯಂತೆ ಅಶ್ವಮೇಧ ಮತ್ತು ಇನ್ನೂ ಇತರ, ಬಹಳಷ್ಟು ಆಪ್ತದಕ್ಷಿಣೆಗಳನ್ನೊಡಗೂಡಿದ ಕ್ರತುಗಳನ್ನು ಆ ಧೀಮಂತನು ನೆರವೇರಿಸಿದನು. ಅಮರನಂತೆ ನಲನು ದಮಯಂತಿಯ ಸಹಿತ ಪುನಃ ಪುನಃ ರಮಣೀಯ ವನ-ಉಪವನಗಳಲ್ಲಿ ವಿಹರಿಸಿದನು. ಹೀಗೆ ಯಜ್ಞಗಳನ್ನು ನಡೆಸುತ್ತಾ ಮತ್ತು ವಿಹರಿಸುತ್ತಾ ನರಾಧಿಪ ವಸುಧಾಧಿಪನು ವಸುಸಂಪೂರ್ಣ ವಸುಧೆಯನ್ನು ರಕ್ಷಿಸುತ್ತಿದ್ದನು.

## ಕಲಿಕೋಪ

ನೈಷಧನು ಭೈಮಿಯಿಂದ ವರಿಸಲ್ಪಟ್ಟ ನಂತರ ಮಹೌಜಸ ಲೋಕಪಾಲಕರು ತೆರಳುತ್ತಿರುವಾಗ ದ್ವಾಪರನ ಜೊತೆಗೂಡಿ ಬರುತ್ತಿದ್ದ ಕಲಿಯನ್ನು ಕಂಡರು. ಬಲವೃತ್ರಹ ಶಕ್ರನು ಕಲಿಯನ್ನು ನೋಡಿ ಕೇಳಿದನು:

> "ಕಲಿ! ದ್ವಾಪರನನ್ನೊಡಗೂಡಿ ಎಲ್ಲಿಗೆ ಹೋಗುತ್ತಿರುವೆ ಹೇಳು."

ಕಲಿಯು ಶಕ್ರನಿಗೆ ಉತ್ತರಿಸಿದನು:

> "ದಮಯಂತಿಯ ಸ್ವಯಂವರಕ್ಕೆ ಹೋಗುತ್ತಿದ್ದೇನೆ. ಅಲ್ಲಿ ನಾನು ಅವಳನ್ನು ವರಿಸುತ್ತೇನೆ, ಯಾಕೆಂದರೆ ನನ್ನ ಮನಸ್ಸು ಅವಳಿಗಾಗಿಯೇ ಮಾರಿಹೋಗಿದೆ."

ಇಂದ್ರನು ನಗುತ್ತಾ ಹೇಳಿದನು:

> "ಸ್ವಯಂವರವು ಮುಗಿದು ಹೋಯಿತು! ನನ್ನ ಎದುರಿನಲ್ಲಿಯೇ ಅವಳು ರಾಜ ನಲನನ್ನು ಪತಿಯನ್ನಾಗಿ ವರಿಸಿದಳು."

ಶಕ್ರನ ಈ ಮಾತುಗಳನ್ನು ಕೇಳಿ ಕಲಿಯು ಕೋಪಸಮನ್ವಿತನಾದನು. ಆ ಎಲ್ಲ ದೇವತೆಗಳನ್ನು ಉದ್ದೇಶಿಸಿ ಹೇಳಿದನು:

> "ದೇವತೆಗಳ ಮಧ್ಯದಲ್ಲಿ ಒಬ್ಬ ಮನುಷ್ಯನನ್ನು ಪತಿಯನ್ನಾಗಿ

ಆರಿಸಿಕೊಂಡರೆ ಅವಳಿಗೆ ನಿಜವಾಗಿಯೂ ವಿಪುಲ ದಂಡವೇ ದೊರೆಯಬೇಕು!"

ಕಲಿಯ ಈ ಮಾತುಗಳಿಗೆ ದಿವೌಕಸರು ಉತ್ತರಿಸಿದರು:

"ದಮಯಂತಿಯು ನಲನನ್ನು ವರಿಸಲು ನಾವೇ ಸಮ್ಮತಿಯನ್ನು ನೀಡಿದ್ದೇವೆ. ಯಥಾವತ್ತಾಗಿ ವ್ರತಚರಿತ, ಅಖಿಲ ಧರ್ಮವನ್ನೂ ತಿಳಿದಿರುವ, ಸರ್ವಗುಣೋಪೇತ ನೃಪ ನಲನನ್ನು ಯಾರುತಾನೆ ವರಿಸುವುದಿಲ್ಲ? ಸತ್ಯ, ಧೃತಿ, ದಾನ, ತಪ, ಶೌಚ, ದಮ, ಮತ್ತು ಶಮ ಇವು ಆ ಪುರುಷವ್ಯಾಘ್ರನಲ್ಲಿ ನೆಲೆಗೊಂಡಿವೆ; ಆ ನೃಪನು ಲೋಕಪಾಲಕರಿಗೆ ಸಮನಾಗಿದ್ದಾನೆ. ಕಲಿ! ಇಂತಹ ಸದ್ಗುಣಿ ನಲನನ್ನು ಶಪಿಸಲು ಇಚ್ಛಿಸುವವನು ತನ್ನನ್ನು ತಾನೇ ಶಪಿಸಿ ತನ್ನನ್ನು ತಾನೇ ಹತ್ಯೆಮಾಡಿಕೊಳ್ಳುವ ಮೂಢನಂತೆ. ಅಂಥವನು ಕೃಚ್ಛ್ರ ನರಕದಲ್ಲಿ ತುಂಬಾ ಸಮಯ ಅಗಾಧ ನೋವನ್ನು ಅನುಭವಿಸುತ್ತಾನೆ."

ಕಲಿ ಮತ್ತು ದ್ವಾಪರರಿಗೆ ಈ ರೀತಿ ಹೇಳಿದ ದೇವತೆಗಳು ದಿವಕ್ಕೆ ತೆರಳಿದರು.

ದೇವತೆಗಳು ಹೋದನಂತರ ಕಲಿಯು ದ್ವಾಪರನಿಗೆ ಹೇಳಿದನು:

"ನನ್ನ ಕೋಪವನ್ನು ಸಹಿಸಲು ಸಾಧ್ಯವಾಗುತ್ತಿಲ್ಲ ದ್ವಾಪರ!

ನಲನನ್ನು ಹಿಡಿಯುತ್ತೇನೆ. ಅವನನ್ನು ರಾಜ್ಯಭ್ರಂಶನನ್ನಾಗಿ ಮಾಡುತ್ತೇನೆ; ಮತ್ತು ಅವನು ಭೈಮಿಯ ಜೊತೆ ರಮಿಸದಂತೆ ಮಾಡುತ್ತೇನೆ. ನೀನು ದಾಳಗಳನ್ನು ಪ್ರವೇಶಿಸಿ ನನಗೆ ಸಹಾಯವನ್ನು ಮಾಡಬೇಕು."

## ನಲ-ಪುಷ್ಕರರ ದ್ಯೂತ

ಈ ರೀತಿ ದ್ವಾಪರನ ಜೊತೆ ಒಪ್ಪಂದ ಮಾಡಿಕೊಂಡ ಕಲಿಯು ರಾಜ ನೈಷಧನಿರುವಲ್ಲಿಗೆ ಆಗಮಿಸಿದನು. ನೈಷಧನಲ್ಲಿ ಚಿರವಾಗಿ ವಾಸಿಸುವ ಸಲುವಾಗಿ ನಿತ್ಯವೂ ಅವಕಾಶವನ್ನು ಅಪೇಕ್ಷಿಸುತ್ತಿದ್ದ ಕಲಿಯು ಹನ್ನೆರಡನೆಯ ವರ್ಷಗಳ ನಂತರ ಅವಕಾಶವನ್ನು ಕಂಡನು. ಒಮ್ಮೆ ನೈಷಧನು ಮೂತ್ರವಿಸರ್ಜನೆ ಮಾಡಿ ಪಾದಗಳನ್ನು ತೊಳೆಯದೆಯೇ ಸಂಧ್ಯಾವಂದನೆ ಮಾಡಿದಾಗ ಕಲಿಯು ಅವನನ್ನು ಪ್ರವೇಶಿಸಿದನು. ನಲನನ್ನು ಪ್ರವೇಶಿಸಿದ ಅವನು ಪುಷ್ಕರನ ಸಮೀಪ ಹೋಗಿ

"ಪುಷ್ಕರ! ನಲನೊಟ್ಟಿಗೆ ಜೂಜನ್ನಾಡು ಬಾ! ನನ್ನ ಸಹಾಯದಿಂದ ನೀನು ನಿರ್ದಿಷ್ಟವಾಗಿ ನಲನನ್ನು ದ್ಯೂತದಲ್ಲಿ ಗೆಲ್ಲುತ್ತೀಯೆ. ನೃಪ ನಲನನ್ನು ಸೋಲಿಸಿ ನಿಷಧವನ್ನು ಗೆಲ್ಲು!"

ಎಂದನು.  ಕಲಿಯ ಈ ಮಾತುಗಳಂತೆ ಪುಷ್ಕರನು ನಲನಲ್ಲಿಗೆ ಹೋದನು. ಕಲಿಯಾದರೂ ಗೋವುಗಳ ಹೋರಿಯಾಗಿ ಪುಷ್ಕರನನ್ನು ಸೇರಿಕೊಂಡನು. ಪರವೀರಹ ಪುಷ್ಕರನು ನಲನ ಬಳಿಸಾರಿ

ಸಹೋದರನಿಗೆ

> "ಹೋರಿಗಳೊಂದಿಗೆ ಜೂಜಾಡೋಣ !"

ಎಂದು ಪುನಃ ಪುನಃ ಹೇಳಿದನು. ಮಹಾಮನ ರಾಜನು ಸಮಾಹ್ವಾನವನ್ನು ಬೇಡ ಎನ್ನದೇ, ವೈದರ್ಭಿಯು ನೋಡುತ್ತಿದ್ದಂತೆಯೇ ಇದು ಜೂಜಾಡುವ ಸಮಯವೆಂದು ನಿರ್ಧರಿಸಿಬಿಟ್ಟನು. ಕಲಿಯಿಂದ ಆವಿಷ್ಟಗೊಂಡ ನಲನು ಹಿರಣ್ಯ, ಸುವರ್ಣ, ರಥಗಳು ಮತ್ತು ವಸ್ತ್ರಗಳನ್ನು ದ್ಯೂತದಲ್ಲಿ ಸೋತನು. ಜೂಜಿನ ಮತ್ತಿನಲ್ಲಿ ಹುಚ್ಚಾಗಿ ಬಿಟ್ಟಿದ್ದ ಮತ್ತು ಪ್ರಜ್ಞೆಯೇ ಇಲ್ಲದೇ ಜೂಜಾಡುತ್ತಿದ್ದ ಅವನನ್ನು ತಡೆಯಲು ಅವನ ಸುಹೃದಯರು ಯಾರೂ ಶಕ್ತರಾಗಿರಲಿಲ್ಲ.

ಅನಂತರ ಸರ್ವ ಪೌರಜನರೂ ಮಂತ್ರಿಗಳನ್ನೊಡಗೂಡಿ ರಾಜನನ್ನು ನೋಡಿ ಅವನ ರೋಗವನ್ನು ನಿವಾರಿಸಲು ಬಂದರು. ಸೂತನು ಬಂದು ದಮಯಂತಿಗೆ ನಿವೇದಿಸಿದನು:

> "ಸರ್ವ ಪೌರಜನರೂ ದ್ವಾರದಲ್ಲಿ ಕಾರ್ಯಕ್ಕೆಂದು ನಿಂತಿದ್ದಾರೆ. ಧರ್ಮಾರ್ಥದರ್ಶಿನಿ ರಾಜನ ವ್ಯಸನವನ್ನು ಸಹಿಸಲಾಗದೇ ಎಲ್ಲ ಪ್ರಜೆಗಳೂ ಬಂದು ನಿಂತಿದ್ದಾರೆ ಎಂದು ನೈಷಧನಿಗೆ ನಿವೇದಿಸಬೇಕು."

ಶೋಕದಿಂದ ಹತಚೇತನಳಾದ ಭೈಮಿಯು ದುಃಖದಿಂದ ನಡುಗುತ್ತಾ,

ಬಾಷ್ಪಗಳಿಂದೊಡಗೂಡಿದ ಮಾತುಗಳನ್ನು ನೈಷಧನಿಗೆ ಹೇಳಿದಳು:

> “ರಾಜ! ರಾಜಭಕ್ತಿ ಪುರಸ್ಕೃತ ಸರ್ವ ಪೌರಜನರೂ
> ಮಂತ್ರಿಗಳನ್ನೊಡಗೊಂಡು ನಿನ್ನನ್ನು ಕಾಣಲು ಬಂದು
> ದ್ವಾರದಲ್ಲಿ ನಿಂತಿದ್ದಾರೆ. ನೀನು ಅವರನ್ನು ಕಾಣಬೇಕು!”

ಎಂದು ಪುನಃ ಪುನಃ ಕೇಳಿಕೊಂಡಳು. ಆದರೆ ಕಲಿಯಿಂದ ಆವಿಷ್ಟನಾಗಿದ್ದ ರಾಜನು ಆ ರುಚಿರಾಪಾಂಗಿ ಸುಮಧ್ಯಮಳಿಗೆ ಏನನ್ನೂ ಹೇಳಲಿಲ್ಲ. ಅನಂತರ ಮಂತ್ರಿಗಳ ಸಹಿತ ಸರ್ವ ಪುರವಾಸಿಗಳು

> “ಅವನು ಇಲ್ಲಿ ಇಲ್ಲವೇ ಇಲ್ಲ!”

ಎನ್ನುತ್ತಾ ದುಃಖಾರ್ತ ವ್ರೀಡಿತರಾಗಿ ಮನೆಗಳಿಗೆ ತೆರಳಿದರು. ಈ ರೀತಿ ಪುಷ್ಕರ ಮತ್ತು ನಲನ ಈ ದ್ಯೂತವು ಬಹಳ ಮಾಸಗಳು ನಡೆಯಿತು ಮತ್ತು ಪುಣ್ಯಶ್ಲೋಕನು ಸೋಲುತ್ತಾ ಬಂದನು.

ನರಾಧಿಪ ಪುಣ್ಯಶ್ಲೋಕನು ಆಟದಲ್ಲಿ ಉನ್ಮತ್ತನಾಗಿ ಚೇತನವನ್ನೇ ಕಳೆದುಕೊಂಡಿರುವುದನ್ನು ಉನ್ಮತ್ತಳಲ್ಲದ ದಮಯಂತಿಯು ನೋಡಿದಳು. ನಂತರ ಭಯಶೋಕಸಮಾವಿಷ್ಟಳಾದ ಭೀಮಸುತೆಯು ಪಾರ್ಥಿವನ ಸಲುವಾಗಿ ಸುಮಹತ್ ಕಾರ್ಯದ ಬಗ್ಗೆ ಯೋಚಿಸಿದಳು. ಅವನ ಪಾಪವನ್ನು ಶಂಕಿಸುತ್ತಾ, ಅವನಿಗೆ ಪ್ರಿಯವಾದುದನ್ನು ಮಾಡುವ ಇಚ್ಛೆಯಿಂದ, ನಲನು ಸರ್ವವನ್ನೂ ಕಳೆದುಕೊಳ್ಳುತ್ತಿದ್ದಾನೆ ಎಂದು ಕೇಳಿ ಅವಳ ಸೇವಕಿಗೆ ಹೇಳಿದಳು:

“ಬೃಹತ್ಸೇನೆ! ನಲನ ಶಾಸನದಂತೆ ಹೋಗಿ ಅಮಾತ್ಯರನ್ನೆಲ್ಲರನ್ನೂ ಕರೆದುಕೊಂಡು ಬಾ. ಯಾವ ವಸ್ತುಗಳನ್ನು ಈಗಾಗಲೇ ಕಳೆದುಕೊಂಡಿದ್ದೇವೆ ಮತ್ತು ಯಾವವು ಇನ್ನೂ ನಮ್ಮ ಹತ್ತಿರ ಇವೆ ಎನ್ನುವುದನ್ನೂ ಅವರಿಗೆ ಹೇಳು.”

ಸರ್ವ ಮಂತ್ರಿಗಳೂ ನಲಶಾಸನವನ್ನು ತಿಳಿದು ಭಾಗ್ಯವು ನಮಗೆ ಈಗ ಮರಳಿಬಂದಿದೆಯೋ ಎನ್ನುತ್ತಾ ಬಂದರು. ಭೀಮಸುತೆಯು ಅವನಿಗೆ ಪ್ರಜೆಗಳು ಎರಡನೇ ಬಾರಿ ಮತ್ತೆ ಬಂದು ಉಪಸ್ಥಿತರಾಗಿದ್ದಾರೆ ಎಂದು ನಿವೇದಿಸಿದಳು, ಆದರೆ ಇದು ಅವನಿಗೆ ಇಷ್ಟವಾಗಲಿಲ್ಲ. ತನ್ನ ಈ ವಾಕ್ಯಗಳು ಪತಿಗೆ ಸಂತಸವನ್ನು ತರಲಿಲ್ಲ ಎಂದು ನೋಡಿದ ದಮಯಂತಿಯು ಬಹು ದುಃಖದಿಂದ ಪುನಃ ತನ್ನ ಮನೆಗೆ ಮರಳಿದಳು. ದಾಳಗಳು ಸತತವಾಗಿ ಪುಣ್ಯಶ್ಲೋಕನಿಗೆ ಪರಾಙ್ಮುಖವಾಗಿದ್ದವು ಮತ್ತು ನಲನು ಸರ್ವಸ್ವವನ್ನೂ ಕಳೆದುಕೊಂಡ ಎನ್ನುವುದನ್ನು ಕೇಳಿ ತನ್ನ ಸೇವಕಿಗೆ ಪುನಃ ಹೇಳಿದಳು.

“ಬೃಹತ್ಸೇನೆ! ನಲಶಾಸನದಂತೆ ಸೂತ ವಾರ್ಷ್ಣೇಯನನ್ನು ಕರೆದುಕೊಂಡು ಬಾ. ಕಲ್ಯಾಣಿ! ಮಹತ್ತರ ಕಾರ್ಯವೊಂದನ್ನು ಮಾಡುವುದಿದೆ.”

ದಮಯಂತಿಯ ಈ ಮಾತುಗಳನ್ನು ಕೇಳಿದ ಬೃಹತ್ಸೇನೆಯು ಆಪ್ತಕಾರಿ ಪುರುಷರ ಮೂಲಕ ವಾರ್ಷ್ಣೇಯನನ್ನು ಕರೆಸಿದಳು. ದೇಶಕಾಲಜ್ಞೆ

ಭೈಮಿಯು ಕಾಲವು ಪ್ರಾಪ್ತವಾಗಿದೆ ಎಂದು ತಿಳಿದು ಮೃದುವಾದ ಮಾತುಗಳಲ್ಲಿ, ಸಾಂತ್ವನಿಸುತ್ತಾ ವಾರ್ಷ್ಣೇಯನಿಗೆ ಹೇಳಿದಳು:

"ರಾಜನು ನಿನ್ನ ಕುರಿತು ಹೇಗೆ ಸದಾ ಒಳ್ಳೆಯದಾಗಿ ನಡೆದುಕೊಳ್ಳುತ್ತಿದ್ದನು ಎಂದು ನೀನು ತಿಳಿದಿದ್ದೀಯೆ. ಈ ವಿಷಮ ಸಮಯದಲ್ಲಿ ಅವನಿಗೆ ನೀನು ಸಹಾಯಮಾಡಬೇಕಾಗಿದೆ. ಪುಷ್ಕರನಿಂದ ನೃಪತಿಯು ಜಯಸಲ್ಪಡುತ್ತಾ ಬಂದ ಹಾಗೆ ದ್ಯೂತದಲ್ಲಿ ಅವನ ಆಸಕ್ತಿ ಹೆಚ್ಚಾಗುತ್ತಾ ಬರುತ್ತಿದೆ. ದಾಳಗಳು ಪುಷ್ಕರನ ವಶದಲ್ಲಿರುವಂತೆ ವರ್ತಿಸುತ್ತಿವೆ. ಹಾಗೆಯೇ ದಾಳಗಳು ನಲನಿಗೆ ವಿನಾಶವನ್ನೇ ತರುತ್ತಿರುವುದು ಕಾಣುತ್ತಿದೆ. ಸುಹೃದಯರ ಮತ್ತು ಸ್ವಜನರ ವಾಕ್ಯಗಳನ್ನು ಕೇಳಬೇಕಿದ್ದರೂ ಕೇಳುತ್ತಿಲ್ಲ. ಮಹಾತ್ಮ ನೈಷಧನ ಹತ್ತಿರ ಏನೂ ಉಳಿದಿಲ್ಲ ಎಂದು ನನಗನ್ನಿಸುತ್ತಿದೆ. ಸಾರಥಿ! ಮೋಹಿತ ರಾಜನು ನನ್ನ ಮಾತನ್ನು ಅಭಿನಂದಿಸದೇ ಇದ್ದುದರಿಂದ ನಾನು ನಿನ್ನ ಶರಣು ಬಂದಿದ್ದೇನೆ. ನನ್ನ ಮಾತಿನಂತೆ ಮಾಡು. ಯಾವಾಗಲಾದರೂ ವಿನಾಶವೊದಗುತ್ತದೆ ಎಂದು ನನ್ನ ಮನಸ್ಸಿಗೆ ಶಾಂತಿಯೇ ಇಲ್ಲದಾಗಿದೆ. ನಲನ ಪ್ರೀತಿಯ ಮಹಾವೇಗವುಳ್ಳ ಅಶ್ವಗಳನ್ನು ರಥಕ್ಕೆ ಕಟ್ಟಿ, ಅದರಲ್ಲಿ ನನ್ನ ಅವಳಿ ಮಕ್ಕಳನ್ನು ಕುಂಡಿನಪುರಕ್ಕೆ ಕರೆದುಕೊಂಡು ಹೋಗು. ನನ್ನ ಬಂಧುಗಳಲ್ಲಿ ಮಕ್ಕಳನ್ನು, ಕುದುರೆಗಳನ್ನು ಮತ್ತು ರಥವನ್ನು ಇರಿಸಿ, ನೀನು

> ಅಲ್ಲಿ ಉಳಿಯಬಹುದು ಅಥವಾ ಬೇಕಾದ ಬೇರೆ ಕಡೆ ಹೋಗಬಹುದು.”

ದಮಯಂತಿಯ ಈ ವಾಖ್ಯಗಳೆಲ್ಲವನ್ನೂ ನಲಸಾರಥಿ ವಾರ್ಷ್ಣೇಯನು ನಲನ ಮುಖ್ಯ ಅಮಾತ್ಯರುಗಳಲ್ಲಿ ನಿವೇದಿಸಿದನು. ಅವರೆಲ್ಲರೂ ಸೇರಿ ನಿಶ್ಚಯಿಸಿ ಅವನಿಗೆ ಅನುಮತಿಯನ್ನು ಕೊಟ್ಟನಂತರ ಅವನು ಮಿಥುನರನ್ನು ವಾಹನದಲ್ಲಿ ಕುಳ್ಳಿರಿಸಿ ವಿದರ್ಭಕ್ಕೆ ಕರೆದೊಯ್ದನು. ಸೂತನು ಅಲ್ಲಿ ಕನ್ಯೆ ಇಂದ್ರಸೇನೆಯನ್ನು ಮತ್ತು ಬಾಲಕ ಇಂದ್ರಸೇನನನ್ನು ಹಾಗೂ ಕುದುರೆ-ರಥಗಳನ್ನಿರಿಸಿದನು. ಆರ್ತನಾಗಿ ಶೋಕದಿಂದ ನೃಪ ನಲನ ಕುರಿತು ಭೀಮನಿಗೆ ತಿಳಿಸಿದನು ಮತ್ತು ಹಾಗೆಯೇ ತಿರುಗಾಡುತ್ತಾ ಅಯೋಧ್ಯಾ ನಗರಿಗೆ ಬಂದನು. ದುಃಖಿತನಾಗಿ ಅಲ್ಲಿ ರಾಜ ಋತುಪರ್ಣನನ್ನು ಭೆಟ್ಟಿಮಾಡಿ ಅವನ ಸಾರಥಿಯಾಗಿ ಸೇರಿಕೊಂಡನು.

## ನಲನ ವನಯಾತ್ರೆ

ವಾರ್ಷ್ಣೇಯನು ಹೋದ ನಂತರ ಪುಣ್ಯಶ್ಲೋಕನು ಜೂಜಾಡುತ್ತಾ ಪುಷ್ಕರನಿಂದ ರಾಜ್ಯ ಮತ್ತು ತನ್ನಲಿದ್ದ ಎಲ್ಲ ಸಂಪತ್ತನ್ನೂ ಕಳೆದುಕೊಂಡನು. ರಾಜ್ಯವನ್ನು ಕಳಿದುಕೊಂಡ ನಲನಿಗೆ ಪುಷ್ಕರನು ನಗುತ್ತಾ ಹೇಳಿದನು:

> “ದ್ಯೂತವು ಮುಂದುವರಿಯಲಿ. ಈಗ ನಿನ್ನಲ್ಲಿ ಪಣವಾಗಿಡಲು ಏನಿದೆ? ದಮಯಂತಿ ಮಾತ್ರ ನಿನ್ನಲ್ಲಿ ಉಳಿದಿದ್ದಾಳೆ. ಬೇರೆ

> ಎಲ್ಲವನ್ನು ನಾನು ಗೆದ್ದಿದ್ದೇನೆ. ನಿನಗೆ ಮನಸ್ಸಿದ್ದರೆ ದಮಯಂತಿಯನ್ನು ಪಣವಾಗಿಡು."

ಪುಷ್ಕರನ ಈ ಮಾತುಗಳನ್ನು ಕೇಳಿ ಪುಣ್ಯಶ್ಲೋಕನ ಹೃದಯವು ಸಿಟ್ಟಿನಿಂದ ಉರಿಕೊಂಡಿತು ಮತ್ತು ಅವನೇನೂ ಮಾತನಾಡಲಿಲ್ಲ. ಪರಮ ಕೋಪದಿಂದ ನಲನು ಪುಷ್ಕರನ ಕಡೆ ನೋಡಿ ಆ ಮಹಾಯಶನು ತನ್ನ ದೇಹದ ಮೇಲಿದ್ದ ಎಲ್ಲ ಭೂಷಣಗಳನ್ನು ತೆಗೆದು ಎಸೆದನು. ನಂತರ ವಿಪುಲ ಸಂಪತ್ತನ್ನು ತ್ಯಜಿಸಿ, ಏಕವಸ್ತ್ರದಲ್ಲಿ ಅತೀವ ದುಃಖದಿಂದ, ಸುಹೃದಯರ ಶೋಕವನ್ನು ವೃದ್ಧಿಸುತ್ತಾ ರಾಜನು ಹೊರ ಹೊರಟನು. ದಮಯಂತಿಯೂ ತನ್ನ ಉಟ್ಟ ವಸ್ತ್ರದಲ್ಲಿ ಅವನನ್ನು ಹಿಂಬಾಲಿಸಿದಳು. ನೈಷಧನು ಅವಳೊಡನೆ ನಿಷಧದ ಹೊರಗೆ ಮೂರು ರಾತ್ರಿಗಳನ್ನು ಕಳೆದನು.

ಪುಷ್ಕರನು

> "ಯಾರಾದರೂ ನಲನನ್ನು ಸೇರಿದರೆ ಅವನು ನನ್ನಿಂದ ವಧಿಸಲ್ಪಡುತ್ತಾನೆ!"

ಎಂದು ಪುರದಲ್ಲೆಲ್ಲ ಘೋಷಣೆ ಮಾಡಿಸಿದನು. ಪುಷ್ಕರನ ಈ ವಾಕ್ಯಗಳಿಂದ ಮತ್ತು ಅವನ ವಿದ್ವೇಷದ ಕಾರಣ ಪುರಜನರು ಅವನಿಗೆ ಸತ್ಕಾರವನ್ನು ಮಾಡಲಿಲ್ಲ. ಹೀಗೆ ಸತ್ಕಾರಾರ್ಹನಾಗಿದ್ದರೂ ಸತ್ಕೃತನಾಗದೇ ನಗರದ ಬಳಿಯಲ್ಲಿಯೇ ರಾಜನು ಕೇವಲ ಜಲ ಸೇವನೆ ಮಾಡಿಕೊಂಡು ಮೂರು ರಾತ್ರಿಗಳನ್ನು ಕಳೆದನು. ಬಹಳ

ದಿನಗಳು ಹಸಿವೆಯಿಂದ ಪೀಡಿತನಾದ ನಲನು ಒಮ್ಮೆ ಹಿರಣ್ಯಸದೃಷ ರೆಕ್ಕೆಗಳನ್ನು ಹೊಂದಿದ ಪಕ್ಷಿಗಳನ್ನು ಕಂಡನು. ಆಗ ಬಲಿ ನಿಷಧಾಧಿಪತಿಯು ಯೋಚಿಸಿದನು:

> "ಇವುಗಳು ನನ್ನ ಇಂದಿನ ಭೋಜನವಾಗುವವು ಮತ್ತು ಇವು ನನ್ನ ನಿಧಿ."

ನಂತರ ಅವನು ತನ್ನ ಉಟ್ಟ ಬಟ್ಟೆಯನ್ನು ಆ ಪಕ್ಷಿಗಳ ಮೇಲೆ ಹಾಕಿದನು. ಆದರೆ ಅವೆಲ್ಲವೂ ಆ ಬಟ್ಟೆಯನ್ನೇ ಎತ್ತಿಕೊಂಡು ಆಕಾಶಕ್ಕೆ ಹಾರಿದವು. ವಿವಸ್ತ್ರನಾಗಿ, ದೀನನಾಗಿ, ಅಧೋಮುಖನಾಗಿ ಭೌಮಿಯ ಪಕ್ಕದಲ್ಲಿ ನಿಂತಿದ್ದ ನಲನನ್ನು ನೋಡಿ ಹಾರುತ್ತಿರುವ ಆ ಪಕ್ಷಿಗಳು ಕೂಗಿ ಹೇಳಿದವು:

> "ದುರ್ಬುದ್ಧಿಯೇ! ನಾವು ದಾಳಗಳು. ನಿನ್ನ ವಸ್ತ್ರಗಳನ್ನು ಕಸಿಯಲು ಬಂದಿದ್ದೇವೆ. ಯಾಕೆಂದರೆ ನೀನು ವಸ್ತ್ರಗಳನ್ನು ಧರಿಸಿ ಹೋಗುತ್ತಿರುವುದು ನಮಗೆ ಒಳ್ಳೆಯದೆನಿಸಲಿಲ್ಲ."

ಹೋಗುತ್ತಿರುವ ದಾಳಗಳನ್ನು ಮತ್ತು ವಿವಸ್ತ್ರನಾದ ತನ್ನನ್ನು ನೋಡಿದ ರಾಜ ಪುಣ್ಯಶ್ಲೋಕನು ದಮಯಂತಿಗೆ ಹೇಳಿದನು:

> "ಅನಿಂದಿತೇ! ಯಾರ ಪ್ರಕೋಪದಿಂದ ನಾವು ಈ ಐಶ್ವರ್ಯ ಚ್ಯುತಿ ಹೊಂದಿದ್ದೇವೋ, ಮತ್ತು ಈಗ ಜೀವನಕ್ಕೆ ಯಾವುದೂ ಉಪಾಯಗಳಿಲ್ಲದೇ ದುಃಖ ಮತ್ತು ಹಸಿವೆಗಳಿಂದ

ಬಳಲುತ್ತಿದ್ದೇವೋ, ಯಾರ ಕಾರಣದಿಂದ ನಿಷಧ ಪುರಜನರು ನನಗೆ ಸತ್ಕಾರವನ್ನು ಮಾಡಲಿಲ್ಲವೋ ಅವರೇ ಈಗ ಪಕ್ಷಿಗಳಾಗಿ ಬಂದು ನನ್ನ ವಸ್ತ್ರಗಳನ್ನು ಅಪಹರಿಸಿದರು. ಮಹತ್ತರ ಕಷ್ಟಗಳನ್ನು ಹೊಂದಿ, ದುಃಖಿತನಾದ ನಾನು ನನ್ನ ಬುದ್ಧಿಯನ್ನೇ ಕಳೆದುಕೊಳ್ಳುತ್ತಿದ್ದೇನೆ. ನಾನು ನಿನ್ನ ಪತಿ. ನಿನ್ನ ಹಿತಕ್ಕಾಗಿಯೇ ಹೇಳುವ ಈ ಮಾತುಗಳನ್ನು ಕೇಳು. ಈ ದಕ್ಷಿಣಾಭಿಮುಖವಾಗಿ ಹೋಗುವ ದಾರಿ ಅವಂತಿ ಮತ್ತು ಋಕ್ಷವತ್ ಪರ್ವತವನ್ನು ದಾಟಿ ಹೋಗುತ್ತವೆ. ಅಲ್ಲಿ ಮಹಾಶೈಲ ವಿಂಧ್ಯವಿದೆ, ಸಮುದ್ರಕ್ಕೆ ಸೇರುತ್ತಿರುವ ನದಿ ಪಯೋಷ್ಣೀ, ಮತ್ತು ಪುಷ್ಪ-ಫಲಗಳಿಂದ ಕೂಡಿದ ಮಹಾ ಋಷಿಗಳ ಆಶ್ರಮಗಳಿವೆ. ಈ ದಾರಿಯು ವಿದರ್ಭಕ್ಕೆ ಮತ್ತು ಇದು ಕೋಸಲಕ್ಕೆ ಹೋಗುತ್ತದೆ. ಮತ್ತು ಮುಂದೆ ದಕ್ಷಿಣದಲ್ಲಿ ದಕ್ಷಿಣಾಪಥ ದೇಶವಿದೆ.”

ಆಗ ದಮಯಂತಿಯು ಕಣ್ಣೀರಿಡುತ್ತಾ, ದುಃಖದಲ್ಲಿ ಮಾತೇ ಬಾರದೇ ನೈಷಧನಿಗೆ ಈ ಕರುಣ ವಚನವನ್ನು ಹೇಳಿದಳು.

“ಪಾರ್ಥಿವ! ನಿನ್ನ ಸಂಕಲ್ಪವನ್ನು ಪುನಃ ಪುನಃ ಯೊಚಿಸುತ್ತಾ ನನ್ನ ಹೃದಯವು ಬಡಿಯುತ್ತಿದೆ ಮತ್ತು ಸರ್ವಾಂಗಗಳೂ ದುರ್ಬಲವಾಗುತ್ತಿವೆ. ರಾಜ್ಯ-ಧನಗಳನ್ನು ಕಳೆದುಕೊಂಡ, ವಿವಸ್ತ್ರನಾದ, ಹಸಿವೆ-ಬಾಯಾರಿಕೆಗಳಿಂದ ಬಳಲುತ್ತಿರುವ

ನಿನ್ನನ್ನು ಈ ನಿರ್ಜನ ವನದಲ್ಲಿ ಬಿಟ್ಟು ನಾನು ಹೇಗೆ ಹೋಗಲಿ? ಇಲ್ಲ ಮಹಾರಾಜ! ಈ ಘೋರ ವನದಲ್ಲಿ ನಿನ್ನ ಈ ಬಳಲಿಕೆಯನ್ನು, ಹಸಿವೆಯನ್ನು ನಾಶಮಾಡುತ್ತೇನೆ ಮತ್ತು ಚಿಂತೆ-ದುಗುಡಗಳಿಂದ ನಿನಗೆ ಸುಖವನ್ನು ತರಲು ಪ್ರಯತಿಸುತ್ತೇನೆ. ಸರ್ವ ದುಃಖದಲ್ಲಿಯೂ ಭಾರ್ಯೆಯ ಸಮನಾದ ಔಷಧಿಯಿಲ್ಲ ಎಂದು ವೈದ್ಯರ ಮತ. ಈ ಸತ್ಯವನ್ನು ನಾನು ನಿನಗೆ ಹೇಳುತ್ತಿದ್ದೇನೆ."

ನಲನು ಹೇಳಿದನು:

"ಸುಮಧ್ಯಮೆ ದಮಯಂತಿ! ನೀನು ಹೇಳಿದುದೆಲ್ಲವೂ ಸರಿಯೇ. ಆರ್ತನಿಗೆ ಹೆಂಡತಿಯಂಥ ಮಿತ್ರ ಅಥವಾ ಔಷಧ ಇನ್ನೊಂದಿಲ್ಲ. ನಿನ್ನನ್ನು ತ್ಯಜಿಸುವ ಇಚ್ಛೆ ನನ್ನಲ್ಲಿಲ್ಲ. ಸುಮ್ಮನೆ ಏಕೆ ಶಂಕಿಸುವೆ. ನಿನ್ನನ್ನು ತ್ಯಜಿಸುವ ಮೊದಲು ನನ್ನನ್ನು ನಾನೇ ತ್ಯಜಿಸಿಬಿಡುತ್ತೇನೆ."

ದಮಯಂತಿಯು ಹೇಳಿದಳು:

"ಮಹಾರಾಜ! ನೀನು ನನ್ನನ್ನು ಬಿಡಲು ಬಯಸದಿದ್ದರೆ ನೀನು ನನಗೆ ವಿದರ್ಭದ ದಾರಿಯನ್ನು ಏಕೆ ತೋರಿಸಿದೆ? ನಾನೂ ಕೂಡ ನೀನು ನನ್ನನ್ನು ತ್ಯಜಿಸಬಾರದೆಂದೇ ಬಯಸುತ್ತೇನೆ. ಕಷ್ಟದಲ್ಲಿ ನೊಂದವನಾಗಿ ನನ್ನನ್ನು ತ್ಯಜಿಸಬೇಡ. ದಾರಿಗಳನ್ನೇ ನನಗೆ ತೋರಿಸುತ್ತಿದ್ದೀಯೆ. ಇದರಿಂದಲೇ ನನ್ನ ಶೋಕವು

ಹೆಚ್ಚಾಗುತ್ತಿದೆ. ನಾನು ವಿದರ್ಭಕ್ಕೆ ಹೋಗಬೇಕೆಂದು ನಿನ್ನ ಅಭಿಪ್ರಾಯವಿದ್ದರೆ, ನಿನ್ನ ಅನುಮತಿಯಿದ್ದರೆ, ನಾವಿಬ್ಬರೂ ಒಟ್ಟಿಗೇ ಹೋಗೋಣ. ವಿದರ್ಭರಾಜನು ನಿನ್ನನ್ನು ಪೂಜಿಸುತ್ತಾನೆ. ಅವನಿಂದ ಸತ್ಕೃತನಾಗಿ ನಾವು ನಮ್ಮ ಗೃಹದಲ್ಲಿ ಸುಖವಾಗಿ ಇರೋಣ."

ನಲನು ಹೇಳಿದನು:

"ಆ ರಾಜ್ಯವು ಹೇಗೆ ನಿನ್ನ ತಂದೆಯದೋ ಹಾಗೆಯೇ ಅದು ನನ್ನದೂ ಹೌದು. ಸಂಶಯವೇ ಇಲ್ಲ.  ಆದರೆ ನಾನು ಈ ವಿಷಮ ಪರಿಸ್ಥಿತಿಯಲ್ಲಿ ಹೋಗುವುದಿಲ್ಲ. ಹಿಂದೆ ಸಮೃದ್ಧನಾದ ನಾನು ನಿನ್ನ ಸಂತಸವನ್ನು ಹೆಚ್ಚಿಸಲು ಹೋಗಿದ್ದೆ. ಈಗ ಹೇಗೆ ಎಲ್ಲವನ್ನೂ ಕಳೆದುಕೊಂಡು, ನಿನ್ನ ದುಃಖವನ್ನು ಹೆಚ್ಚಿಸುತ್ತಾ ಅಲ್ಲಿಗೆ ಹೋಗಲಿ?"

## ದಮಯಂತೀ ಪರಿತ್ಯಾಗ

ಅವಳ ಅರ್ಧ ವಸ್ತ್ರವನ್ನು ಸುತ್ತಿಕೊಂಡ ರಾಜ ನಲನು ಈ ರೀತಿ ಕಲ್ಯಾಣಿ ದಮಯಂತಿಗೆ ಪುನಃ ಪುನಃ ಸಂತವಿಸಿದನು. ಇಬ್ಬರೂ ಒಂದೇವಸ್ತ್ರವನ್ನು ಸುತ್ತಿಕೊಂಡು, ಅಲ್ಲಿಲ್ಲಿ ಸುತ್ತಾಡುತ್ತಾ, ಹಸಿವು-ಬಾಯಾರಿಕೆಗಳಿಂದ ಬಳಲಿ, ಯಾವುದೋ ಒಂದು ಭವನವನ್ನು ಸೇರಿದರು. ಆ ಭವನವನ್ನು ತಲುಪಿದೊಡನೆಯೇ ನಿಷಧಾಧಿಪನು



ವೈದರ್ಭಿಯ ಸಹಿತ ನೆಲದ ಮೇಲೆಯೇ ಮಲಗಿಕೊಂಡನು. ಮಲಿನನಾದ, ತಲೆಕೂದಲು ಕಳೆದುಕೊಂಡ, ಸುಸ್ತಾದ ಅವನು ವಿವಸ್ತ್ರನಾಗಿ ದಮಯಂತಿಯ ಸಹಿತ ಆ ಧರಣೀತಲದಲ್ಲಿಯೇ ಮಲಗಿದನು. ಸುಕುಮಾರಿ, ತಪಸ್ವಿನಿ, ಒಮ್ಮೆಲೇ ಅಸಾಧ್ಯ ದುಃಖವನ್ನು ಕಂಡ ಆ ಕಲ್ಯಾಣಿ ದಮಯಂತಿಯೂ ನಿದ್ರೆಯ ವಶಳಾಗಿಬಿಟ್ಟಳು. ದಮಯಂತಿಯು ನಿದ್ರೆಮಾಡಿದರೂ ಚಿತ್ತ ಮತ್ತು ಆತ್ಮಗಳು ಶೋಕದಿಂದ ಮಥನವಾಗುತ್ತಿದ್ದ ನಲನು ಮೊದಲಿನ ಹಾಗೆ ನಿದ್ದೆ ಮಾಡಲಿಲ್ಲ. ಅವನು ತನ್ನ ರಾಜ್ಯಾಪಹರಣ, ಸ್ನೇಹಿತರು ತನ್ನನ್ನು ತ್ಯಜಿಸಿದುದು ಮತ್ತು ವನದಲ್ಲಿ ತಾನು ಕಾಲಕಳೆಯುತ್ತಿರುವುದು ಈ ಎಲ್ಲದರ ಕುರಿತು ಚಿಂತಿಸತೊಡಗಿದನು.

“ನಾನು ಇದನ್ನು ಮಾಡಿದರೆ ಹೇಗೆ? ಇದನ್ನು ಮಾಡದಿದ್ದರೆ ಹೇಗೆ? ನಾನು ಸಾಯುವುದು ಒಳ್ಳೆಯದೋ ಅಥವಾ ಈ ಸ್ತ್ರೀಯನ್ನು ಪರಿತ್ಯಜಿಸುವುದು ಒಳ್ಳೆಯದೋ? ನನ್ನಲ್ಲೇ ಅನುರಕ್ತಳಾದ ಇವಳು ನನ್ನಿಂದಾಗಿ ದುಃಖವನ್ನು ಹೊಂದಿದ್ದಾಳೆ. ಆದರೆ ನಾನು ಇಲ್ಲದಿದ್ದರೆ ಇವಳು ಮುಂದೆ ಯಾವಾಗಲಾದರೂ ತನ್ನ ಜನರ ಕಡೆ ಹೋಗಿಯಾಳು. ನಾನು ಜೊತೆಯಲ್ಲಿದ್ದರೆ ಇವಳು ನಿರಂತರವಾಗಿ ದುಃಖವನ್ನು ಅನುಭವಿಸುವುದು ನಿಃಸಂಶಯ. ಬಿಟ್ಟುಹೋದರೆ ಆಪತ್ತು ಬರಬಹುದು. ಆದರೂ ಮುಂದೆ ಯಾವಾಗಲಾದರೂ ಸುಖವನ್ನು ಹೊಂದಬಹುದು.”

ಹೀಗೆ ಪುನಃ ಪುನಃ ಇದೇ ವಿಷಯವನ್ನು ಮನಸ್ಸಿನಲ್ಲಿ ತಿರುವಿ ಹಾಕಿ ಬಹಳಷ್ಟು ಸಾರಿ ನಿಶ್ಚಯ ಮಾಡಿ, ನಂತರ ಆ ನರಾಧಿಪನು ದಮಯಂತಿಯನ್ನು ಬಿಡುವುದೇ ಸರಿಯೆಂದು ನಿರ್ಧರಿಸಿದನು. ತಾನು ವಿವಸ್ತ್ರನಾಗಿದ್ದುದನ್ನು ಮತ್ತು ಅವಳು ಏಕವಸ್ತ್ರಳಾಗಿದ್ದುದನ್ನು ಚಿಂತಿಸಿ, ಅವಳ ವಸ್ತ್ರವನ್ನು ಅರ್ಧ ತುಂಡುಮಾಡುವುದಾಗಿ ನಿರ್ಧರಿಸಿದನು. ಆದರೆ

“ನನ್ನ ಪ್ರಿಯೆಯನ್ನು ಎಚ್ಚರಿಸದ ಹಾಗೆ ಹೇಗೆ ವಸ್ತ್ರವನ್ನು ಕತ್ತರಿಸುವುದು?”

ಎಂದು ಚಿಂತಿಸುತ್ತಾ ರಾಜಾ ನೈಷಧನು ಆ ಭವನದಲ್ಲಿಯೇ



ಒಂದೆಡೆಯಿಂದ ಇನ್ನೊಂದೆಡೆ ಓಡಾಡುತ್ತಿದ್ದನು. ಹೀಗೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡುತ್ತಿದ್ದ ನಲನು ಭವನದ ಮೂಲೆಯಲ್ಲಿದ್ದ, ತೆರೆದಿಟ್ಟ ಉತ್ತಮವಾದ ಖಡ್ಗವೊಂದನ್ನು ಕಂಡನು. ಅದರಿಂದ ಪರಂತಪನು ಅವಳ ವಸ್ತ್ರವನ್ನು ಅರ್ಧ ಕತ್ತರಿಸಿ ಸುತ್ತಿಕೊಂಡನು. ನಂತರ ನಿದ್ರಿಸುತ್ತಿದ್ದ ವೈದರ್ಭಿಯನ್ನು ಬಿಟ್ಟು, ಬುದ್ಧಿ ಕಳೆದುಕೊಂಡವನಂತೆ ಓಡಿಹೋದನು. ಆದರೆ ನಿಬದ್ಧಹೃದಯ ನಿಷಧಾಧಿಪನು ಪುನಃ ಆ ಭವನಕ್ಕೆ ಬಂದು ದಮಯಂತಿಯನ್ನು ನೋಡಿ ಕಣ್ಣೀರಿಟ್ಟನು:

> “ಈ ಮೊದಲು ವಾಯುವಾಗಲೀ ಆದಿತ್ಯನಾಗಲೀ ನನ್ನ ಪ್ರಿಯೆಯನ್ನು ಕಂಡಿರಲಿಲ್ಲ. ಆದರೆ ಈಗ ಅವಳು ಈ ಭವನಮಧ್ಯದಲ್ಲಿ ಬರೀ ನೆಲದ ಮೇಲೆ, ಅನಾಥಳಾಗಿ ಮಲಗಿದ್ದಾಳೆ. ತುಂಡು ವಸ್ತ್ರವನ್ನು ಸುತ್ತಿಕೊಂಡು ಈ ಚಾರುಹಾಸಿನಿ ವರಾರೋಹೆಯು ಉನ್ಮತ್ತಳಾದಂತೆ ಮಲಗಿದ್ದಾಳೆ. ಎಚ್ಚರವಾದ ನಂತರ ಇವಳು ಹೇಗಿರುವಳು? ನನ್ನಿಂದ ವಿರಹಿತಳಾದ ಈ ಶುಭೆ ಸತಿ ಭೈಮಿಯು ಮೃಗವ್ಯಾಲಗಳಿಂದ ತುಂಬಿದ ಈ ಘೋರ ವನದಲ್ಲಿ ಹೇಗೆ ಸಂಚರಿಸುವಳು?”

ಕಲಿಯಿಂದ ಆಕರ್ಷಿತನಾಗಿ ಮತ್ತು ಸೌಹೃದಯಳಿಂದ ಅಪಕೃಷ್ಯನಾಗಿ ನಲನು ಹೋಗುವುದು, ಪುನಃ ಭವನಕ್ಕೆ ಬರುವುದು, ಮತ್ತೆ

ಹೋಗುವುದು ಈ ರೀತಿ ಮಾಡುತ್ತಿದ್ದನು. ದುಃಖಿತನಾದ ಅವನ ಹೃದಯವು ಎರಡಾಗಿ ಹರಿದಿತ್ತು; ಉಯ್ಯಾಲೆಯಂತೆ ಅದು ಒಮ್ಮೆ ಭವನದಿಂದ ದೂರ ಮತ್ತು ಇನ್ನೊಮ್ಮೆ ಅದರ ಹತ್ತಿರ ಡೋಲಾಡುತ್ತಿತ್ತು. ಕೊನೆಯಲ್ಲಿ ಕಲಿಯಿಂದ ಅಪಕೃಷ್ಟನಾಗಿ ಮೋಹಿತನಾದ ನಲನು ಬಹಳ ಕರುಣದಾಯಕವಾಗಿ ವಿಲಪಿಸುತ್ತಾ ನಿದ್ರಿಸುತ್ತಿರುವ ಭಾರ್ಯೆಯನ್ನು ಬಿಟ್ಟು ಓಡಿ ಹೋದನು. ಕಲಿಯಿಂದ ಆತ್ಮವನ್ನೇ ಕಳೆದುಕೊಂಡು, ಅದು ಇದು ಎಂದು ಏನನ್ನೂ ಯೋಚಿಸದೇ, ನಿರ್ಜನ ವನದಲ್ಲಿ ಭಾರ್ಯೆಯನ್ನು ಬಿಟ್ಟು ದುಃಖಿತನಾಗಿ ಹೊರಟುಹೋದನು.

## ಅಜಗರನಿಂದ ದಮಯಂತಿಯ ಬಿಡುಗಡೆ

ಆಯಾಸವನ್ನು ನಿವಾರಿಸಿಕೊಂಡ ವರಾರೋಹೆ ದಮಯಂತಿಯು ನಲನು ಹೊರಟುಹೋದ ಬಳಿಕ ನಿರ್ಜನ ವನದಲ್ಲಿ ನಡುಗುತ್ತಾ ಎಚ್ಚರಗೊಂಡಳು. ಪತಿಯನ್ನು ಕಾಣದೇ, ದುಃಖಶೋಕಸಮನ್ವಿತಳಾಗಿ “ಮಹಾರಾಜ!” ಎಂದು ನೈಷಧನನ್ನು ಜೋರಾಗಿ ಕೂಗಿ ಕರೆದಳು:

> “ಹಾ ನಾಥ! ಹಾ ಮಹಾರಾಜ! ಹಾ ಸ್ವಾಮೀ! ನನ್ನನ್ನು ಏಕೆ ಬಿಟ್ಟುಹೋದೆ? ನಾನು ಈ ನಿರ್ಜನ ವನದಲ್ಲಿ ಹತಳಾಗಿದ್ದೇನೆ! ವಿನಷ್ಟಳಾಗಿದ್ದೇನೆ! ಭೀತಳಾಗಿದ್ದೇನೆ! ನೀನು ಸದಾ ಧರ್ಮಜ್ಞ ಮತ್ತು ಸತ್ಯವಾದಿ. ಆದರೆ ಈಗ ಅಸತ್ಯವನ್ನು ನುಡಿದು ಮಲಗಿದ್ದ ನನ್ನನ್ನು ಹೇಗೆ ಬಿಟ್ಟು ಹೋದೆ?

ವಿಶೇಷವಾಗಿ ಯಾರಿಗೂ ಕೆಟ್ಟದ್ದನ್ನು ಮಾಡದ, ಬೇರೆಯವರಿಂದ ಕೆಟ್ಟದ್ದನ್ನು ಮಾಡಿಸಿಕೊಂಡ ನೀನು - ನಿನ್ನ ವಶದಲ್ಲಿಯೇ ಇರುವ, ನಿನ್ನನ್ನೇ ಅನುಸರಿಸುವ - ಭಾರ್ಯೆಯನ್ನು ಹೇಗೆ ಬಿಟ್ಟು ಹೋದೆ? ಹಿಂದೆ ಲೋಕಪಾಲಕರ ಸನ್ನಿಧಿಯಲ್ಲಿ ನನಗೆ ಕೊಟ್ಟ ವಚನವನ್ನು ಸತ್ಯವನ್ನಾಗಿ ಮಾಡಲು ನಿನಗೆ ಸಾಧ್ಯವಿಲ್ಲವೇ? ಸಾಕು ಈ ಪರಿಹಾಸ! ನಾನು ಭೀತಳಾಗಿದ್ದೇನೆ! ನಿನ್ನನ್ನು ಕಾಣಿಸಿಕೋ. ನಿನ್ನನ್ನು ನೋಡಿದೆ! ರಾಜ! ನಿನ್ನನ್ನು ನೋಡಿದೆ! ನೀನು ಅಲ್ಲಿ ನಿಂತಿದ್ದೀಯೆ. ಗಿಡಗಳ ಹಿಂದಿ ಅಡಗಿಕೊಂಡಿದ್ದೀಯೆ. ನೀನು ಯಾಕೆ ನನಗೆ ಉತ್ತರಿಸುತ್ತಿಲ್ಲ? ನನ್ನನ್ನು ಇನ್ನು ಹಿಂಸಿಸಬೇಡ! ನಾನು ಇಲ್ಲಿ ವಿಲಪಿಸುತ್ತಿದ್ದೇನೆ ಎಂದು ತಿಳಿದರೂ ನೀನು ನನ್ನನ್ನು ನಿನ್ನ ಬಾಹುಗಳಲ್ಲಿರಿಸಿ ಸಂತವಿಸುತ್ತಿಲ್ಲವಲ್ಲ! ನಾನು ನಿನ್ನನ್ನು ಬಿಟ್ಟು ನನ್ನ ಬಗ್ಗೆ ಅಥವಾ ಬೇರೆ ಯಾವುದರ ಕುರಿತೂ ಯೋಚಿಸುತ್ತಿಲ್ಲ. ನೀನು ಒಬ್ಬನೇ ಹೇಗೆ ಇರುತ್ತೀಯೆ ಎಂದು ಶೋಕಿಸುತ್ತಿದ್ದೇನೆ. ರಾತ್ರಿ ಬಿದ್ದಮೇಲೆ ಹಸಿವು ಬಾಯಾರಿಕೆಗಳಿಂದ ಬಳಲಿದ ನೀನು ವೃಕ್ಷದ ಅಡಿಯಲ್ಲಿ ಕುಳಿತು ನನ್ನನ್ನೂ ನೋಡದೇ ಹೇಗೆ ಇರಬಲ್ಲೆ?”

ತೀವ್ರ ಶೋಕ-ಕೋಪಗಳಿಂದ ಉರಿಯುತ್ತಿದ್ದ ಅವಳು ದುಃಖದಿಂದ ಅಳುತ್ತಾ ಅತ್ತಿತ್ತ ಓಡತೊಡಗಿದಳು. ಆ ಬಾಲೆಯು ಒಂದು ಕ್ಷಣ ಮೇಲೇಳುತ್ತಿದ್ದಳು, ಇನ್ನೊಂದು ಕ್ಷಣ ವಿಹ್ವಲಳಾಗಿ ಬೀಳುತ್ತಿದ್ದಳು.

ಒಂದು ಕ್ಷಣ ಬೀತಳಾಗಿ ಮುದುಡಿಕೊಂಡಿರುತ್ತಿದ್ದಳು, ಮತ್ತೊಂದು ಕ್ಷಣ ಜೋರಾಗಿ ಅಳುತ್ತಿದ್ದಳು. ತೀವ್ರ ಶೋಕ ಸಂತಪ್ತಳಾಗಿ ವಿಹ್ವಲಳಾದ ಆ ಪತಿವ್ರತೆ ಭೈಮಿಯು ನಿಟ್ಟುಸಿರು ಬಿಡುತ್ತಾ ಹೊರ ಬಂದು ಅಳುತ್ತಾ ಹೇಳಿದಳು:

> "ಯಾರ ಅಭಿಶಾಪದಿಂದ ದುಃಖಾರ್ತನಾದ ನೈಷಧನು ದುಃಖವನ್ನು ಪಡೆದಿದ್ದಾನೋ ಅವನ ದುಃಖವೂ ಈ ದುಃಖಕ್ಕಿಂತ ಅಧಿಕವಾಗಲಿ! ಅಪಾಪಚೇತಸನಾದ ನಲನಿಗೆ ಈ ರೀತಿ ಮಾಡಿದ ಪಾಪಿಯು ಇದಕ್ಕಿಂತಲೂ ಹೆಚ್ಚು ದುಃಖವನ್ನು ಹೊಂದಿ, ಅಸುಖೀ ಜೀವನವನ್ನು ಬದುಕಲಿ!"

ಈ ರೀತಿ ಮಹಾತ್ಮ ರಾಜನ ಭಾರ್ಯೆಯು ವಿಲಪಿಸುತ್ತಾ ಮೃಗಗಳಿಂದ ತುಂಬಿದ ವನದಲ್ಲಿ ತನ್ನ ಪತಿಯನ್ನು ಅನ್ವೇಷಿಸಿದಳು. ಭೀಮಸುತೆಯು "ಹಾ ಹಾ ರಾಜ!" ಎಂದು ವಿಲಪಿಸುತ್ತಾ ಉನ್ಮತ್ತಳಾದವಳಂತೆ ಒಮ್ಮೆ ಅಲ್ಲಿ ಮತ್ತೊಮ್ಮೆ ಇಲ್ಲಿ ಓಡತೊಡಗಿದಳು. ಕಾರುಣ್ಯದಿಂದ ಬಹಳವಾಗಿ ರೋದಿಸಿ ಮತ್ತೆ ಮತ್ತೆ ವಿಲಪಿಸುತ್ತಾ ವೇಗದಲ್ಲಿ ಬರುತ್ತಿರುವಾಗ ಭೈಮಿಯು ಒಂದು ದೊಡ್ಡ ಹೆಬ್ಬಾವನ್ನು ಕಾಣದೇ ಎಡವಲು ಅದು ಅವಳನ್ನು ಹಿಡಿದುಕೊಂಡಿತು. ಆ ಹೆಬ್ಬಾವು ನುಂಗುವಾಗ ಕೂಡ ಶೋಕದಿಂದ ಪರಾಜಿತಳಾದ ಅವಳು ನೈಷಧನ ಕುರಿತು ದುಃಖಪಟ್ಟಷ್ಟು ತನಗಾಗಿ ದುಃಖಪಡಲಿಲ್ಲ.

> "ಹಾ ನಾಥ! ಈ ನಿರ್ಜನ ವನದಲ್ಲಿ ನಾನು ಈ ಹೆಬ್ಬಾವಿನ

ಬಾಯಿಗೆ ಅನಾಥಳಾಗಿ ಬಲಿಯಾಗಿದ್ದೇನೆ. ನೀನು ಏಕೆ ಬೇಗ ಬರುವುದಿಲ್ಲ? ಪಾಪದಿಂದ ಮುಕ್ತನಾಗಿ, ಪುನಃ ಬುದ್ಧಿ ಮತ್ತು ಧನವನ್ನು ಪಡೆದ ನಂತರ ನನ್ನನ್ನು ನೆನಪಿಸಿಕೊಂಡಾಗ ಹೇಗಿರುವೆ? ಬಳಲಿ ಹಸಿದಿದ್ದಾಗ ನಿನಗೆ ಶ್ರಮವನ್ನು ಹೋಗಲಾಡಿಸಲು ಯಾರಿದ್ದಾರೆ?”

ಅದೇ ವೇಳೆಯಲ್ಲಿ ಆ ಗಹನ ವನದಲ್ಲಿ ಸಂಚರಿಸುತ್ತಿದ್ದ ಮೃಗವ್ಯಾಧನೋರ್ವನು ಅವಳ ಆಕ್ರಂದನವನ್ನು ಕೇಳಿ ಓಡಿ ಬಳಿ ಬಂದನು. ಆ ಆಯತಾಕ್ಷಿಯನ್ನು ಹೆಬ್ಬಾವು ನುಂಗುತ್ತಿರುವುದನ್ನು ನೋಡಿ ಮೃಗವ್ಯಾಧನು ಬೇಗ ಅಲ್ಲಿಗೆ ಬಂದು ತಕ್ಷಣವೇ ತನ್ನ ಶಸ್ತ್ರದಿಂದ ಅದರ ಮುಖವನ್ನು ಕತ್ತರಿಸಿ ಕೆಳಗೆ ಬೀಳಿಸಿ ಆ ಹಾವು ಜೀವವಿಲ್ಲದೇ ನಿರ್ವಿಚೇಷ್ಟವಾಗುವರೆಗೂ ಕತ್ತರಿಸಿದನು. ನಂತರ ಅವಳನ್ನು ಅದರಿಂದ ಬಿಡಿಸಿ ವ್ಯಾಧನು ನೀರಿನಿಂದ ತೊಳೆದನು. ಅವಳಿಗೆ ಆಹಾರವನ್ನು ಕೊಟ್ಟು ಸಂತೈಸಿ ಕೇಳಿದನು:

“ಮೃಗಶಾವಾಕ್ಷಿ! ನೀನು ಯಾರವಳು? ಈ ವನಕ್ಕೆ ಏಕೆ ಬಂದೆ? ಭಾಮಿನಿ! ಇಂಥ ದೊಡ್ಡ ಅಪಾಯದಲ್ಲಿ ಹೇಗೆ ಸಿಲುಕಿಕೊಂಡೆ?”

ಈ ರೀತಿ ಕೇಳಿದುದಕ್ಕೆ ದಮಯಂತಿಯು ಎಲ್ಲವನ್ನೂ ಯಥಾವತ್ತಾಗಿ ಅವನಿಗೆ ಹೇಳಿದಳು. ಅರ್ಧವಸ್ತ್ರದಲ್ಲಿದ್ದ, ಪೂರ್ಣಚಂದ್ರನಂತೆ ಮುಖವುಳ್ಳ ಆ ಪೀನಶ್ರೋಣಿಪಯೋಧರೆ, ಸುಕುಮಾರಿ, ಅನವದ್ಯಾಂಗಿ,

ಅರಾಲಪಕ್ಷನಯನೆ ಮತ್ತು ಮಧುರಭಾಷಿಣಿಯನ್ನು ನೋಡಿ ಮೃಗವ್ಯಾಧನು ಕಾಮವಶನಾದನು. ಶ್ಲಾಘನೀಯ ಮೃದು ಮಾತುಗಳಿಂದ ಸಂತವಿಸುತ್ತಿದ್ದ ಅವನು ತನ್ನನ್ನು ಬಯಸುತ್ತಿದ್ದಾನೆ ಎಂದು ಭಾಮಿನಿಯು ತಿಳಿದಳು. ಪತಿವ್ರತೆ ದಮಯಂತಿಯು ಅವನ ದುಷ್ಟತನವನ್ನು ಅರಿತು ತೀವ್ರ ರೋಷ ಸಮಾವಿಷ್ಟಳಾಗಿ, ಸಿಟ್ಟಿನಿಂದ ಪ್ರಜ್ವಲಿಸುವಂತೆ ಕಂಡಳು. ಕಾಮದಿಂದ ಅವಳನ್ನು ವಶಪಡಿಸಿಕೊಳ್ಳಲು ಆತುರನಾಗಿದ್ದ ಆ ಪಾಪಮತಿಯು ಭುಗಿಯುತ್ತಿರುವ ಬೆಂಕಿಯ ಶಿಖೆಯಂತಿರುವ ಅವಳನ್ನು ಹೊಂದಲಸಾಧ್ಯ ಎಂದು ಯೋಚಿಸಿದನು. ಆದರೆ ದುಃಖಾರ್ತಳಾದ, ಪತಿ-ರಾಜ್ಯಗಳನ್ನು ಕಳೆದುಕೊಂಡ ದಮಯಂತಿಯು ಒಂದೆರಡು ಹೆಜ್ಜೆ ಹಿಂದೆ ಸರಿದು ರೋಷದಿಂದ ಶಪಿಸಿದಳು:

> "ನಾನು ನೈಷಧನ ಹೊರತಾಗಿ ಅನ್ಯರನ್ನು ಮನಸ್ಸಿನಲ್ಲಿಯೂ ಯೋಚಿಸದೇ ಇದ್ದರೆ, ಮೃಗಗಳನ್ನು ಅವಲಂಬಿಸಿ ಜೀವನ ಮಾಡುವ ಈ ಪಾಪಿಯು ಸತ್ತು ಬೀಳಲಿ !"

ಈ ವಚನವನ್ನು ಹೇಳಿದ ಮಾತ್ರದಲ್ಲಿ ಬೆಂಕಿ ಹಿಡಿದು ಸುಟ್ಟ ಮರದಂತೆ ಆ ವ್ಯಾಧನು ಭೂಮಿಯ ಮೇಲೆ ಬಿದ್ದನು.

## ದಮಯಂತೀ ವಿಲಾಪ

ಮೃಗವ್ಯಾಧನನ್ನು ಕೊಂದ ಕಮಲಾಕ್ಷಿಯು ಝಿಲ್ಲೀಕ ಗಣಗಳ

ನಿನಾದದೊಂದೊಡಗೂಡಿದ ಶೂನ್ಯವಾದ ಭಯಂಕರ ವನವನ್ನು ಪ್ರವೇಶಿಸಿದಳು. ಆ ವನವು ಸಿಂಹ, ವ್ಯಾಘ್ರ, ವರಾಹ, ರುರು ಮತ್ತು ಆನೆಗಳಿಂದೊಡಗೂಡಿತ್ತು. ನಾನಾ ಪಕ್ಷಿಗಣಗಳು ತುಂಬಿಕೊಂಡಿದ್ದವು ಮತ್ತು ಮ್ಲೇಚ್ಛ-ಡಕಾಯಿತರಿಂದ ಒಡಗೂಡಿತ್ತು. ಶಾಲ, ವೇಣು [ಬಿದಿರು], ಧವ, ಅಶ್ವತ್ಥ, ತಿಂಡುಕ, ಇಂಗುದ, ಕಿಂಶುಕ, ಅರ್ಜುನ, ಅರಿಷ್ಟ, ಸಂಚನ್ನ [ಬೇವು], ಚಂದನ, ಶಾಲ್ಮಲ, ಜಂಬೂ [ನೇರಳೆ], ಮಾವು, ಲೋಧ್ರ, ಖದಿರ, ಸಾಲ, ವೇತ್ರ, ಪದ್ಮಕ, ಸ್ಯಂದನ, ಅಮಲಕ, ಪ್ಲಕ್ಷ, ಕದಂಬ, ಉದುಂಬರ, ಬದರಿ, ಬಿಲ್ವ, ಆಲ, ಪ್ರಿಯಾಲ, ತಾಲ, ಖರ್ಜೂರ, ಹರೀತಕ ಮತ್ತು ಬಿಭೀತಕ ಮೊದಲಾದ ವೃಕ್ಷಗಳ ಸಂಕುಲವೇ ಇತ್ತು. ಅಲ್ಲಿ ಅನೇಕವಿಧದ ಧಾತುಗಳನ್ನೂ, ಲೋಹಗಳ ಅದಿರನ್ನೂ, ಪಕ್ಷಿಗಳು ಗುಂಪಾಗಿ ನಿನಾದ ಮಾಡುತ್ತಿರುವುದನ್ನೂ, ಅದ್ಭುತವಾಗಿ ತೋರುತ್ತಿದ್ದ ಕಣಿವೆಗಳನ್ನೂ, ನದೀ, ಸರೋವರ, ಬಾವಿಗಳನ್ನೂ, ವಿವಿಧ ಮೃಗಗಳನ್ನೂ, ಬಹಳಷ್ಟು ಘೋರರೂಪಿ ಪಿಶಾಚ, ಉರಗ ಮತು ರಾಕ್ಷಸರನ್ನೂ, ಅನೇಕ ಚಿಲುಮೆಗಳನ್ನೂ, ತಟಾಕಗಳನ್ನೂ, ಬೆಟ್ಟ-ಶಿಖರಗಳನ್ನೂ, ನದಿ-ಸಾಗರಗಳು ಮತ್ತು ಅವುಗಳ ಅದ್ಭುತ ಪ್ರವಾಹಗಳನ್ನು, ಕಾಡೆಮ್ಮೆ-ಹಂದಿ-ಕರಡಿ-ಹಾವುಗಳು ಎಲ್ಲವನ್ನೂ ವಿದರ್ಭಾಧಿಪನ ಮಗಳು ನೋಡಿದಳು. ಪತಿಯ ವ್ಯಸನದಿಂದ ಸೋತುಹೋಗಿದ್ದ ಆ ತೇಜಸ್ವಿನಿ, ಯಶಸ್ವಿನಿ, ಶ್ರೀ, ಪರಮ ಸಹನಾಶಕ್ತಿಯನ್ನು ಹೊಂದಿದ್ದ, ನಲನನ್ನು ಹುಡುಕುವ ಒಂದೇ



ಒಂದು ವಿಚಾರವನ್ನಿಟ್ಟುಕೊಂಡಿದ್ದ ನೃಪಸುತೆ ಭೈಮಿಯು ಅಂಥ ದಾರುಣ ಅಡವಿಯನ್ನು ಸೇರಿಯೂ ಯಾವುದರ ಕುರಿತೂ ಭಯ ಪಟ್ಟುಕೊಳ್ಳಲಿಲ್ಲ. ಒಂದು ಶಿಲೆಯಮೇಲೆ ಕುಳಿತುಕೊಂಡು ಭರ್ತೃಶೋಕದಿಂದ ಪೀಡಿತಳಾದ ವಿದರ್ಭತನಯೆಯು ದುಃಖಿತಳಾಗಿ ವಿಲಪಿಸಿದಳು. ದಮಯಂತಿಯು ಹೇಳಿದಳು:

“ಸಿಂಹೋರಸ್ಕ! ಮಹಾಬಾಹೋ! ನಿಷಧ ಜನಾಧಿಪ! ರಾಜನ್! ಈ ನಿರ್ಜನ ವನದಲ್ಲಿ ನನ್ನನ್ನು ಬಿಟ್ಟು ಎಲ್ಲಿ ಹೋಗಿರುವೆ? ಶ್ರೀಮಂತ ದಕ್ಷಿಣೆಗಳನ್ನಿತ್ತು ಅಶ್ವಮೇಧ ಮುಂತಾದ ಕ್ರತುಗಳನ್ನು ಮಾಡಿದ ನರವ್ಯಾಘ್ರ! ನೀನು ನನಗೆ ಹೇಗೆ ಸುಳ್ಳಾಗಿ ವರ್ತಿಸಿದೆ? ನನ್ನ ಎದುರು ನೀನು ಹೇಳಿದುದನ್ನು ಸತ್ಯವನ್ನಾಗಿಸು. ನಿನ್ನ ಮತ್ತು ನನ್ನೊಡನೆ ಹಂಸಪಕ್ಷಿಗಳು ಹೇಳಿದ್ದುದನ್ನು ನೆನಪಿಸಿಕೋ. ನಾಲ್ಕೂ ವೇದಗಳನ್ನೂ ಸಾಂಗೋಪಾಂಗವಾಗಿ ಸವಿಸ್ತಾರವಾಗಿ ತನ್ನದಾಗಿಸಿಕೊಂಡ ಮನುಜವ್ಯಾಘ್ರನು ಸತ್ಯವಂತನಲ್ಲವೇ? ಹಿಂದೆ ನೀನು ನನ್ನ ಎದಿರು ಆಡಿದ ಮಾತನ್ನು ಸತ್ಯವನ್ನಾಗಿಸು. ನಿನಗೆ ನಾನು ಇನ್ನು ಇಷ್ಟವೇ ಇಲ್ಲದವಳಾದೆನೇ? ಈ ಘೋರ ಅಡವಿಯಲ್ಲಿ ಯಾಕೆ ನೀನು ಉತ್ತರಿಸುತ್ತಿಲ್ಲ? ಈ ರೌದ್ರ ದಾರುಣಾಕಾರದ ಅರಣ್ಯರಾಜನು ನನ್ನನ್ನು ತಿನ್ನಲು ಬಾಯಿ ತೆರೆದಿದ್ದಾನೆಯಾದರೂ ನೀನು ಬಂದು ನನ್ನನ್ನು ಏಕೆ ರಕ್ಷಿಸುವುದಿಲ್ಲ? ಅಂದು ನೀನು ಸುಭಗೇ! ನಿನಗಿಂತ ಬೇರೆ

ಯಾರೂ ಪ್ರಿಯರಿಲ್ಲ ಎಂದು ಹೇಳಿದ್ದೆ. ಹಿಂದೆ ಹೇಳಿದ ಈ ಮಾತನ್ನು ಸತ್ಯಗೊಳಿಸು. ಈ ಪತ್ನಿಯನ್ನು ನೀನು ಪ್ರೀತಿಸುವುದೇ ಆದರೆ ಉನ್ಮತ್ತಳಾಗಿ ವಿಲಪಿಸುತ್ತಿರುವ ನನಗೆ ಯಾಕೆ ಉತ್ತರಿಸುತ್ತಿಲ್ಲ? ನಾನು ಕೃಶಳಾಗಿದ್ದೇನೆ, ದೀನಳಾಗಿದ್ದೇನೆ, ವಿವರ್ಣಳಾಗಿದ್ದೇನೆ. ಅರ್ಧವಸ್ತ್ರವನ್ನು ಸುತ್ತಿಕೊಂಡು, ಏಕಾಂಗಿಯಾಗಿ, ಅನಾಥಳಂತೆ ವಿಲಪಿಸುತ್ತಿದ್ದೇನೆ. ಗುಂಪಿನಿಂದ ಭ್ರಷ್ಟವಾದ ಹರಿಣಿಯಂತಾಗಿದ್ದೇನೆ. ರೋದಿಸುತ್ತಿರುವ ನನ್ನನ್ನು ಯಾಕೆ ಗೌರವಿಸುತ್ತಿಲ್ಲ? ಮಹಾರಣ್ಯದಲ್ಲಿ ಏಕಾಕಿಯಾಗಿ ಮಾತನಾಡುತ್ತಿರುವ ಸತಿಗೆ ನೀನು ಏಕೆ ಉತ್ತರಿಸುತ್ತಿಲ್ಲ? ನಿನ್ನನ್ನು ಇಂದು ಈ ಗಿರಿಯ ಮೇಲೆ ಕಾಣುತ್ತಿಲ್ಲ. ಸಿಂಹವ್ಯಾಘ್ರಗಳಿಂದೊಡಗೂಡಿದ ಈ ಮಹಾಘೋರ ವನದಲ್ಲಿ ಮಲಗಿದ್ದೀಯಾ, ಕುಳಿತಿದ್ದೀಯಾ, ನಿಂತಿದ್ದೀಯಾ ಅಥವಾ ನನ್ನ ಶೋಕವನ್ನು ಹೆಚ್ಚಿಸಲು ಹೊರಟುಹೋಗುತ್ತಿದ್ದೀಯಾ? ನಿನ್ನ ಶೋಕದಿಂದ ಸೋತುಹೋದ, ದುಃಖಾರ್ತಳಾದ ನಾನು ಈ ಅರಣ್ಯದಲ್ಲಿ ನೃಪ ನಲನನ್ನು ನೋಡಿದ್ದೀರಾ ಅಥವಾ ಭೆಟ್ಟಿಯಾಗಿದ್ದೀರಾ ಎಂದು ಯಾರನ್ನು ಕೇಳಲಿ? ಕಳೆದುಹೋದ ಪರವ್ಯೂಹವಿನಾಶಕ, ಮಹಾತ್ಮ, ಅಭಿರೂಪಿ ನಲನ ಕುರಿತು ನನಗೆ ಹೇಳುವವರು ಇಲ್ಲಿ ಯಾರಿದ್ದಾರೆ? ನಾನು

ಅನ್ವೇಷಿಸುತ್ತಿರುವ ಪದ್ಮನಿಭೇಕ್ಷಣ ರಾಜ ನಲನು ಇಲ್ಲಿ ಇದ್ದಾನೆ ಎನ್ನುವ ಮಧುರ ವಾಖ್ಯವನ್ನು ಇಂದು ಇಲ್ಲಿ ಹೇಳುವವರು ಯಾರಿದ್ದಾರೆ? ಅದೋ ಅಲ್ಲಿ ಶ್ರೀಮಾನ್ ಅರಣ್ಯರಾಜ ಚತುರ್ದಂಷ್ಟ್ರ ಮಹಾಹನು ಶಾರ್ದೂಲನು ನನ್ನನ್ನು ಭೆಟ್ಟಿಯಾಗಲು ಎದುರಾಗುತ್ತಿದ್ದಾನೆ. ಅಶಂಕಿತಳಾಗಿ ಅವನನ್ನೇ ಕೇಳುತ್ತೇನೆ: "ಭವಾನ್! ಮೃಗಗಳ ಅಧಿಪತಿ! ನನ್ನನ್ನು ವಿದರ್ಭರಾಜತನಯೆ ದಮಯಂತಿ, ಅಮಿತ್ರಘಾತಿ ನಿಷಧಾಧಿಪತಿ ನಲನ ಭಾರ್ಯೆಯೆಂದು ತಿಳಿ. ಪತಿಯನ್ನು ಅನ್ವೇಶಿಸುತ್ತಾ ಒಬ್ಬಳೇ ಕೃಪಣಳಾಗಿ ಶೋಕದಿಂದ ಸೋತುಹೋಗಿದ್ದೇನೆ. ಮೃಗೇಂದ್ರ! ನೀನು ನಲನನ್ನು ಕಂಡಿದ್ದೀಯಾ? ಆಶ್ವಾಸನೆ ಕೊಡು. ಒಂದುವೇಳೆ ನಲನ ಕುರಿತು ಮಾತನಾಡುವುದಿಲ್ಲವಾದರೆ ದುಃಖಿತಳಾದ ನನ್ನನ್ನು ತಿಂದು ವಿಶೋಕಳನ್ನಾಗಿ ಮಾಡು." ಮೃಗರಾಜನು ಅರಣ್ಯದಲ್ಲಿ ನನ್ನ ಈ ವಿಲಾಪವನ್ನು ಕೇಳಿ ತನ್ನಷ್ಟಕ್ಕೇ ಸಾಗರವನ್ನು ಸೇರಲು ಸಲಿಲವಾಗಿ ಹರಿಯುತ್ತಿರುವ ನದಿಯ ಕಡೆ ಹೋಗುತ್ತಿದ್ದಾನೆ. ಶಿಲೆಗಳಿಂದ ಕೂಡಿದ, ಪುಣ್ಯಕರ, ಆಕಾಶವನ್ನೆ ಮುಟ್ಟುತ್ತವೆಯೋ ಎಂದು ತೋರುತ್ತಿರುವ ಎತ್ತರವಾಗಿರುವ ಬಹಳ ಶಿಖರಗಳಿಂದ ಕೂಡಿದ, ಅದರ ತಪ್ಪಲಿನಲ್ಲಿ ಗೈರಿಕಾದಿ ಧಾತುಗಳನ್ನು ಹೊಂದಿರುವ, ವಿವಿಧ ಪಲಗಳಿಂದ ಭೂಷಿತ, ಸಿಂಹ-ಹುಲಿ-ಆನೆ-ಹಂದಿ-ಬಲ್ಲೂಕ

ಮೊದಲಾದ ಪ್ರಾಣಿಗಳಿಂದ ಕೂಡಿದ, ಬಹುವಿಧ ಪಕ್ಷಿಸಂಕುಲಗಳ ನಿನಾದದಿಂದೊಡಗೂಡಿದ, ಕಿಂಶುಕ-ಅಶೋಕ-ಬಕುಲ-ಪುನ್ನಾಗಗಳಿಂದ ಶೋಭಿತ, ಜಲಪಕ್ಷಿ ಸಂಕುಲಗಳಿಂದ ಕೂಡಿದ ನದಿ ಮತ್ತು ಶಿಖರಗಳಿಂದ ಪರಿಶೋಭಿತ ಈ ಗಿರಿರಾಜನನ್ನು ನೃಪತಿಯ ಕುರಿತು ಕೇಳುತ್ತೇನೆ. "ಭಗವನ್! ಅಚಲಶ್ರೇಷ್ಠ! ನಿನಗೆ ನನ್ನ ನಮಸ್ಕಾರಗಳು. ನಾನು ನಿನ್ನಲ್ಲಿಗೆ ಬಂದು ನಮಿಸುತ್ತಿದ್ದೇನೆ. ನನ್ನನ್ನು ರಾಜಪುತ್ರಿ, ರಾಜನ ಸೊಸೆ, ರಾಜನ ಪತ್ನಿ, ವಿಶ್ರುತ ದಮಯಂತಿಯೆಂದು ತಿಳಿ. ವಿದರ್ಭಾಧಿಪತಿ ರಾಜ ಮಹಾರಥಿ, ಚಾತುರ್ವರ್ಣ್ಯವನ್ನೂ ರಕ್ಷಿಸುವ ಭೀಮ ಎಂಬ ಹೆಸರಿನ ಕ್ಷಿತಿಪತಿಯು ನನ್ನ ಪಿತ. ದಕ್ಷಿಣೆಗಳನ್ನು ಕೊಟ್ಟು ರಾಜಸೂಯ, ಅಶ್ವಮೇಧ ಮೊದಲಾದ ಕ್ರತುಗಳನ್ನು ಮಾಡಿದ, ಪಾರ್ಥಿವಶ್ರೇಷ್ಠ, ಸುಂದರ ವಿಶಾಲ ಕಣ್ಣುಗಳನ್ನುಳ್ಳ, ಬ್ರಹ್ಮಣ್ಯ, ಸಾಧುವೃತ್ತಿ, ಸತ್ಯವಾನ್, ಅನಸೂಯಕ, ಶೀಲವಂತ, ಸುಸಮಾಚಾರ, ಪೃಥುಶ್ರೀ, ಧರ್ಮವಿಂಚುಷಿ, ಅರಿಗಣಗಳನ್ನು ಜಯಿಸಿದ, ವಿದರ್ಭರನ್ನು ಚೆನ್ನಾಗಿ ಪರಿಪಾಲಿಸುತ್ತಿರುವ ಪ್ರಭು ಅವನ ಮಗಳೇ ನಾನು. ನಿನ್ನ ಬಳಿ ಬಂದಿದ್ದೇನೆ ಎಂದು ತಿಳಿ. ವೀರಸೇನ ಎಂಬ ತಕ್ಕುದಾದ ಹೆಸರಿನಿಂದ ವಿಖ್ಯಾತ ನಿಷಧದ ಮಹಾನೃಪ ನನ್ನ ಮಾವ. ಆ ರಾಜನ ಸುತ ವೀರ, ಶ್ರೀಮಾನ್, ಸತ್ಯಪರಾಕ್ರಮಿ, ಕ್ರಮದಂತೆ

ಪ್ರಾಪ್ತವಾದ ಪಿತನ ಈ ರಾಜ್ಯವನ್ನು ಶಾಸನಮಾಡುತ್ತಿದ್ದಾನೆ. ಆ ಬ್ರಹ್ಮಣ್ಯ, ವೇದವಿದ್, ವಾಗ್ಮೀ, ಪುಣ್ಯಕೃತ, ಸೋಮಪೋಗ್ನಿಚಿತ್ತ, ಅರಿಂದಮ ಪುಣ್ಯಶ್ಲೋಕನು ನಲ ಎಂಬ ಹೆಸರಿನಿಂದ ಕೇಳಲ್ಪಟ್ಟಿದ್ದಾನೆ. ಯಾಗಮಾಡುತ್ತಾನೆ. ದಾನ ಮಾಡುತ್ತಾನೆ. ಯುದ್ಧ ಮಾಡುತ್ತಾನೆ. ಮತ್ತು ಸರಿಯಾಗಿ ಪ್ರಶಾಸನ ಮಾಡುತ್ತಾನೆ. ಸಂಪತ್ತನ್ನು ಕಳೆದುಕೊಂಡು ಪತಿಯನ್ನೂ ಕಳೆದುಕೊಂಡು ಅನಾಥಳಾಗಿ ವ್ಯಸನಗೊಂಡಿರುವ ನಾನು ಆ ಪತಿ ನರೋತ್ತಮನನ್ನು ಅನ್ವೇಷಿಸುತ್ತಾ ಇಲ್ಲಿಗೆ ಬಂದಿರುವ ಅವನ ಭಾರ್ಯೆಯೆಂದು ತಿಳಿ. ಗಗನವನ್ನು ಮುಟ್ಟುತ್ತಿರುವ ನಿನ್ನ ಈ ಶತ ಶೃಂಗಗಳಿಂದ ಎಲ್ಲಿಯಾದರೂ ಈ ದಾರುಣ ವನದಲ್ಲಿ ನಲನನ್ನು ನೋಡಿದ್ದೀಯಾ? ಗಜೇಂದ್ರವಿಕ್ರಮಿ, ಧೀಮಾನ್, ದೀರ್ಘಬಾಹು, ಅಮರ್ಶಣ, ವಿಕ್ರಾಂತ, ಸತ್ಯವಾಗ್ಮಿ, ಧೀರ, ಮಹಾಯಶ, ನಿಷಾಧಾಧಿಪತಿ ನನ್ನ ಪತಿ ನಲನನ್ನು ನೀನು ಎಲ್ಲಿಯಾದರೂ ನೋಡಿದ್ದೀಯಾ? ಈ ಪರ್ವತದಲ್ಲಿ ಏಕಾಕಿಯಾಗಿ ದುಃಖಿತಳಾಗಿ ವಿಲಪಿಸುತ್ತಿರುವ ನಿನ್ನ ಮಗಳಂತಿರುವ ನನ್ನನ್ನು ಇಂದು ಯಾಕೆ ಸಂತಯಿಸುತ್ತಿಲ್ಲ?” ಈ ವನದಲ್ಲಿ ಇದ್ದರೆ ನಿನ್ನನ್ನು ಕಾಣಿಸಿಕೋ. ನೈಷಧನ ಸ್ನಿಗ್ಧ, ಗಂಭೀರ, ಜೀಮೂತಸ್ವರಸನ್ನಿಭ, ಅಮೃತಸಮಾನ ಆ ಮಾತುಗಳನ್ನು ಯಾವಾಗ ಕೇಳುವೆನು? ಮಹಾತ್ಮ ರಾಜನ,

ಶುಭವಾದ, ನನ್ನ ಶೋಕವನ್ನು ಹರಣಮಾಡುವ ವೈದರ್ಭೀ
ಎಂದು ಕರೆಯುವ ಆ ಮಾತನ್ನು ಎಂದು ಕೇಳುತ್ತೇನೆ?”

ಈ ರೀತಿಯಲ್ಲಿ ಆ ಪಾರ್ಥಿವನಂದಿನಿ ದಮಯಂತಿಯು ಗಿರಿಶ್ರೇಷ್ಠನನ್ನುದ್ದೇಶಿಸಿ ಮಾತನಾಡಿದ ನಂತರ ಉತ್ತರ ದಿಶೆಯಲ್ಲಿ ಹೊರಟಳು. ಮೂರು ಹಗಲು ಮತ್ತು ರಾತ್ರಿ ಪ್ರಯಣ ಮಾಡಿ ಆ ಪರಮಾಂಗನೆಯು ಅತುಲ ತಾಪಸಿಗಳಿರುವ ದಿವ್ಯ ಕಾನನ ಅರಣ್ಯವೊಂದನ್ನು ಕಂಡಳು. ಅದು ವಸಿಷ್ಠ, ಭೃಗು, ಅತ್ರಿ ಮೊದಲಾದ, ನಿಯತ, ಸಂಯಮ, ಅಲ್ಪಾಹಾರಿ, ಶುಚಿಸಮನ್ವಿತ, ನೀರು ಅಥವಾ ವಾಯುವನ್ನೇ ಸೇವಿಸುತ್ತಿರುವ, ಪತ್ರಾಹಾರಿ, ಸ್ವರ್ಗಮಾರ್ಗವನ್ನೇ ನೋಡುತ್ತಿರುವ, ಜಿತೇಂದ್ರಿಯ ಮಹಾಭಾಗರಿಂದ ಉಪಶೋಭಿತವಾಗಿತ್ತು. ವಲ್ಕಲ-ಜಿನಗಳನ್ನು ಧರಿಸಿದ್ದ, ಆ ಇಂದ್ರಿಯಸಂಯಮಿ ಮುನಿ-ತಾಪಸಿಗಳ ರಮ್ಯ ಆಶ್ರಮ ಮಂಡಲವನ್ನು ನೋಡಿದಳು. ವಾನರ ಮತ್ತಿತರ ನಾನಾ ಮೃಗಗಳು ವಾಸಿಸುತ್ತಿರುವ, ತಾಪಸಿಗಳು ಸಮಾನ್ವಿತರಿರುವ  ಆ ಆಶ್ರಮಪದವನ್ನು ನೋಡಿ, ಸುಂದರ ಹುಬ್ಬಿನ, ಸುಕೇಶೀ, ಸುಶ್ರೋಣೀ, ಸುಕುಚಾ, ಸುದ್ವಿಜಾನನೆ, ವರ್ಚಸ್ವಿನೀ, ಸುಪ್ರತಿಷ್ಠೆ, ಸಂಚಿತೋದ್ಯತಗಾಮಿನೀ, ವೀರಸೇನ ಸುತನ ಪ್ರಿಯೆ, ಸ್ತ್ರೀರತ್ನ, ಮನಸ್ವಿನೀ, ದಮಯಂತಿಯು ಆ ಆಶ್ರಮಪದವನ್ನು ಪ್ರವೇಶಿಸಿದಳು. ವಿನಯಾವನತಳಾಗಿ ನಿಂತು ಆ ತಪೋವೃದ್ಧರನ್ನು ಅಭಿನಂದಿಸಿದಳು. ಸರ್ವ ತಪಸ್ವಿಗಳೂ

“ಸ್ವಾಗತ!”

ಎಂದರು. ಅಲ್ಲಿ ತಪೋಧನರು ಅವಳನ್ನು ಯಥಾವತ್ತಾಗಿ ಸತ್ಕರಿಸಿ, ಕುಳಿತುಕೊಳ್ಳಲು ಹೇಳಿ,

“ನಾವು ಏನು ಮಾಡಬಹುದು? ಹೇಳು!”

ಎಂದು ಕೇಳಿದರು. ವರಾರೋಹೆಯು ಅವರಿಗೆ ಹೇಳಿದಳು:

“ಮಹಾಭಾಗರೇ! ಇಲ್ಲಿ ನಿಮ್ಮ ತಪಸ್ಸು, ಅಗ್ನಿ, ಧರ್ಮ, ಮೃಗಪಕ್ಷಿಗಳು ಮತ್ತು ಅನಘರಾದ ನೀವು ಕುಶಲದಿಂದಿದ್ದೀರಾ? ಸ್ವಧರ್ಮದಲ್ಲಿ ನಿರತರಾಗಿದ್ದೀರಾ?”

ಅವರು ಉತ್ತರಿಸಿದರು:

“ಭದ್ರೇ! ಯಶಸ್ವಿನೀ! ಇಲ್ಲಿ ಎಲ್ಲವೂ ಕುಶಲವಾಗಿದೆ. ಆದರೆ ಸರ್ವಾನವದ್ಯಾಂಗಿಯಾದ ನೀನು ಯಾರು ಮತ್ತು ಏನು ಮಾಡಲು ಇಚ್ಛಿಸಿರುವೆ ಹೇಳು. ನಿನ್ನ ಈ ಪರಮ ರೂಪ ಮತ್ತು ಕಾಂತಿಯನ್ನು ನೋಡಿ ನಾವೆಲ್ಲ ಬಹುವಿಸ್ಮಿತರಾಗಿದ್ದೇವೆ. ದುಃಖಿಸಬೇಡ, ಸಂತವಿಸಿಕೋ. ನೀನು ಈ ಅರಣ್ಯ, ಪರ್ವತ ಅಥವಾ ನದಿಗಳ ಮಹಾ ದೇವಿಯಾಗಿರಬಹುದೇ? ಸತ್ಯವನ್ನು ಹೇಳು.”

“ಅಲ್ಲ. ವಿಪ್ರರೇ! ನಾನು ಈ ಅರಣ್ಯದ, ಗಿರಿಯ ಅಥವಾ ನದಿಯ ದೇವತೆಯಲ್ಲ!”

ಎಂದು ಅವಳು ಋಷಿಗಳಿಗೆ ಹೇಳಿದಳು.

“ತಪೋಧನರಾದ ನೀವೆಲ್ಲರೂ ನನ್ನನ್ನು ಮಾನುಷಿಯೆಂದು ತಿಳಿಯಿರಿ. ನೀವು ಕೇಳುತ್ತೀರಿ ಎಂದಾದರೆ ನಾನು ಸರ್ವವನ್ನೂ ವಿಸ್ತಾರವಾಗಿ ಹೇಳುತ್ತೇನೆ. ದ್ವಿಜಸತ್ತಮರೇ! ನಾನು ವಿದರ್ಭದ ಭೀಮ ಎಂಬ ಹೆಸರಿನ ಮಹಾದ್ಯುತಿ ಮಹೀಪಾಲನ ತನಯೆ ಎಂದು ಸರ್ವರೂ ತಿಳಿಯಿರಿ. ಧೀಮಾನ್, ಮಹಾಯಶ, ವೀರ, ಸಂಗ್ರಾಮಗಳಲ್ಲಿ ವಿಜಯಿ, ವಿದ್ವಾನ್, ವಿಶಾಂಪತಿ, ನಲ ಎಂಬ ಹೆಸರಿನ ನಿಷಧಾಧಿಪತಿಯು ನನ್ನ ಪತಿ. ಅವನು ದೇವತೆಗಳ ಅರ್ಚನಪರನಾಗಿದ್ದನು. ದ್ವಿಜರೇ ಮೊದಲಾದ ಜನರ ವತ್ಸಲನಾಗಿದ್ದನು ಮತ್ತು ನಿಷಧವಂಶದ ಮಹಾಭಾಗ ಮಹಾದ್ಯುತಿ ದೊರೆಯಾಗಿದ್ದನು. ಸತ್ಯವಾಗ್ಮಿ, ಧರ್ಮವಿದ, ಪ್ರಾಜ್ಞ, ಸತ್ಯಸಂಧ, ಅರಿಮರ್ದನ, ಬ್ರಹ್ಮಣ್ಯ, ದೈವತಪರ, ಶ್ರೀಮಾನ್ ಮತ್ತು ಪರಪುರಂಜಯ, ದೇವರಾಜ ಸಮದ್ಯುತಿ, ವಿಶಾಲಾಕ್ಷ, ಪೂರ್ಣೇಂದುವದನ ನಲ ಎಂಬ ಹೆಸರಿನ ನೃಪಶ್ರೇಷ್ಠನು ನನ್ನ ಪತಿ. ವೇದವೇದಾಂಗಪಾರಂಗತನಾಗಿದ್ದ ಅವನು ಪ್ರಧಾನ ಕ್ರತುಗಳನ್ನು ನೆರವೇರಿಸಿದನು. ರವಿ-ಸೋಮ ಸಮಪ್ರಭನಾದ ಅವನು ಯುದ್ಧದಲ್ಲಿ ತನ್ನ ಸ್ಪರ್ಧಾಳುಗಳನ್ನು ಸಂಹರಿಸಿದನು. ಕೆಲವು ನಿಕೃತಿಪ್ರಜ್ಞ, ಅಕಲ್ಯಾಣ, ನರಾಧಮರು ಸತ್ಯಧರ್ಮ ಪರಾಯಣನಾದ ಆ

ಪೃಥಿವೀಪಾಲನನ್ನು ಜೂಜಾಡಲು ಕರೆದರು ಮತ್ತು ಜೂಜಿನಲ್ಲಿ ಕುಶಲರಾಗಿದ್ದ ಅವರು ರಾಜ್ಯ-ಸಂಪತ್ತನ್ನು ಗೆದ್ದರು. ದಮಯಂತಿಯೆಂದು ವಿಖ್ಯಾತಳಾದ ನಾನು ಆ ರಾಜರ್ಷಭನ ಪತ್ನಿ. ಪತಿಯನ್ನು ಕಾಣಲು ಕಾತುರಳಾಗಿದ್ದೇನೆ. ಆ ರಣವಿಶಾರದ, ಮಹಾತ್ಮ, ಕೃತಾಸ್ತ್ರ ಪತಿ ನಲನನ್ನು ಅನ್ವೇಷಿಸುತ್ತಾ ಈ ವನ-ಗಿರಿ-ಸರೋವರ-ನದಿಗಳಲ್ಲಿ, ರಮ್ಯ ಹುಲ್ಲುಗಾವಲುಗಳಲ್ಲಿ, ಮತ್ತು ಸರ್ವ ಅರಣ್ಯಗಳಲ್ಲಿ ದುಃಖಿತಳಾಗಿ ಸಂಚರಿಸುತ್ತಿದ್ದೇನೆ. ನಲ ಎಂಬ ಹೆಸರಿನ ನಿಷಾಧ ಜನಾಧಿಪ ನೃಪನು ನಿಮ್ಮ ಈ ಪುಣ್ಯ ತಪೋವನಕ್ಕೆ ಎಂದಾದರೂ ಬಂದಿದ್ದನೇ? ವಿಪ್ರರೇ! ಅವನ ಸಲುವಾಗಿಯೇ ನಾನು ಈ ಭಯಂಕರ, ಘೋರ, ಶಾರ್ದೂಲಮೃಗಗಳಿಂದ ಕೂಡಿದ, ದಾರುಣ ವನವನ್ನು ಸೇರಿದ್ದೇನೆ. ಇನ್ನು ಕೆಲವೇ ಅಹೋರಾತ್ರಿಗಳಲ್ಲಿ ನೃಪ ನಲನನ್ನು ನೋಡದಿದ್ದರೆ ನನ್ನ ದೇಹವನ್ನು ತ್ಯಾಗಮಾಡಿ ಶ್ರೇಯ ಲೋಕಕ್ಕೆ ಹೋಗುತ್ತೇನೆ. ಆ ಪುರುಷರ್ಷಭನನ್ನು ಬಿಟ್ಟು ನನ್ನ ಜೀವನದಲ್ಲಿ ಬೇರೆ ಯಾವುದಾದರೂ ಅರ್ಥವಿದೆಯೇ? ಭರ್ತೃಶೋಕಪೀಡಿತಳಾದ ನನಗೆ ಇನ್ನು ಯಾವ ಭವಿಷ್ಯವಿದೆ?”

ಈ ರೀತಿ ಏಕಾಂಗಿಯಾಗಿ ಅರಣ್ಯದಲ್ಲಿ ವಿಲಪಿಸುತ್ತಿರುವ ಭೀಮನಂದಿನಿ ದಮಯಂತಿಗೆ ಸತ್ಯವಾದಿ ತಾಪಸರು ಉತ್ತರಿಸಿದರು:

> “ಶುಭೇ! ನಿನಗೆ ಕಲ್ಯಾಣವಾಗುತ್ತದೆ. ರಿಪುನಿಘಾತಿ, ನಿಷಾಧಾಧಿಪತಿ ನಲ ನೈಷಧನನ್ನು ಶೀಘ್ರದಲ್ಲಿಯೇ ಕಾಣುತ್ತೀಯೆ ಎಂದು ನಮ್ಮ ತಪಸ್ಸಿನ ಮೂಲಕ ತಿಳಿದಿದ್ದೇವೆ. ಆ ಶ್ರೇಷ್ಠ ಅರಿಂದಮ ಧರ್ಮಭೂತನು ಪೀಡೆಯಿಂದ ಬಿಡುಗಡೆಹೊಂದಿ, ಸರ್ವಪಾಪಗಳಿಂದ ವಿಮುಕ್ತನಾಗಿ, ಸರ್ವರತ್ನಗಳನ್ನು ಪಡೆದು ಅದೇ ಶ್ರೇಷ್ಠ ನಗರದಲ್ಲಿ ಪ್ರಶಾಸನಮಾಡುತ್ತಿರುವುದನ್ನು ನೀನು ಕಾಣುತ್ತೀಯೆ. ದ್ವೇಷಿಗಳಿಗೆ ಭಯವನ್ನು ಕೊಡುವ, ಸುಹೃದಯರ ಶೋಕವನ್ನು ನಾಶಪಡಿಸುವ, ಅಭಿಜನರ ಕಲ್ಯಾಣವನ್ನು ಮಾಡುವ, ನಿನ್ನ ಪತಿ ನೃಪನನ್ನು ನೋಡುವವಳಿದ್ದೀಯೆ!”

ನಲನ ಇಷ್ಟ ಮಹಿಷಿ, ಪಾರ್ಥಿವಾತ್ಮಜೆಗೆ ಈ ರೀತಿ ಹೇಳಿದ ಆ ತಾಪಸಿಗಳು ಅಗ್ನಿಹೋತ್ರ ಮತ್ತು ಆಶ್ರಮಗಳ ಸಹಿತ ಅಂತರ್ಧಾನರಾದರು. ಆ ಮಹದಾಶ್ಚರ್ಯವನ್ನು ಕಂಡ ವೀರಸೇನನ ಸೊಸೆ ಅನವದ್ಯಾಂಗಿ ದಮಯಂತಿಯು ವಿಸ್ಮಿತಳಾದಳು:

> “ನಾನು ನೋಡಿದ್ದುದು ಸ್ವಪ್ನವೇ? ಇಲ್ಲಿ ನಡೆದದ್ದಾದರೂ ಏನು? ಆ ಎಲ್ಲ ತಾಪಸರೂ ಎಲ್ಲಿದ್ದಾರೆ? ಫಲಪುಷ್ಪಶೋಭಿತ, ಸುಂದರ ಗಿರಿಗಳು ಮತ್ತು ನಾನಾ ದ್ವಿಜರಿಂದ ಕೂಡಿದ, ರಮ್ಯ ಪುಣ್ಯಜಲದ ನದಿಯಿದ್ದಿದ್ದ ಆ ಆಶ್ರಮ ಮಂಡಲವು ಎಲ್ಲಿ ಹೋಯಿತು?” ಶುಚಿಸ್ಮಿತೆ ಭೀಮಸುತೆ ದಮಯಂತಿಯು

ಯೋಚನೆಯಲ್ಲಿ ಬಿದ್ದು, ಭರ್ತೃಶೋಕಪರಳಾಗಿ, ದೀನಳಾಗಿ, ವಿವರ್ಣವದನಳಾದಳು. ಅವಳು ಬೇರೊಂದು ಸ್ಥಳಕ್ಕೆ ಹೋಗಿ ಅಲ್ಲಿ ಒಂದು ಅಶೋಕ ವೃಕ್ಷವನ್ನು ನೋಡಿ ಬಾಷ್ಪಗಳಿಂದ ಸಂದಿಗ್ಧ ದನಿಯಲ್ಲಿ, ಕಣ್ಣುಗಳಲ್ಲಿ ಅಶ್ರುಗಳು ತುಂಬಿ ವಿಲಪಿಸಿದಳು. ತನ್ನ ರೆಂಬೆಗಳ ಭಾರಕ್ಕೆ ಬಗ್ಗಿದ್ದ, ಪಕ್ಷಿಗಳ ನಿನಾದದಿಂದ ಮನಸೆಳೆಯುತ್ತಿದ್ದ, ಪುಷ್ಪಿತ ಆ ತರುಶ್ರೇಷ್ಠ ಅಶೋಕದ ಬಳಿ ಹೋದಳು:

"ಈ ವನಮದ್ಯದಲ್ಲಿ ನಿಂತಿರುವ ಈ ಶ್ರೀಮಾನ್ ವೃಕ್ಷವು ಬಹು ಚಿಗುರುಗಳಿಂದ ಶೋಭಿಸಿ ದ್ರಮಿಡದಂತೆ ಸುಂದರವಾಗಿರುವೆ. ನೋಡಲು ಸುಂದರವಾದ ಅಶೋಕವೇ! ನನ್ನ ದುಃಖವನ್ನು ದೂರಮಾಡು. ಶೋಕ, ಭಯ, ಬಾಧೆಗಳ ರಹಿತನಾದ ನೃಪನನ್ನು ಎಲ್ಲಿಯಾದರೂ ನೋಡಿದ್ದೀಯಾ? ಅರಿದಮನ, ದಮಯಂತಿಯ ಪ್ರಿಯ ಪತಿ ನಿಷಾಧರ ಅಧಿಪತಿ ನನ್ನ ಪ್ರಿಯ ನಲ ಎನ್ನುವವನನ್ನು ನೋಡಿದ್ದೀಯಾ? ಏಕವಸ್ತ್ರಾರ್ಧವನ್ನು ಸುತ್ತಿಕೊಂಡು ಈ ಅರಣ್ಯಕ್ಕೆ ಆಗಮಿಸಿರುವ ಸುಕುಮಾರ ತನು ಮತ್ತು ತ್ವಚೆಯನ್ನು ಹೊಂದಿದ, ವ್ಯಸನದಿಂದ ಆರ್ದಿತನಾದ, ವೀರನನ್ನು ತೋರಿಸು. ಅಶೋಕ ಎನ್ನುವ ನಿನ್ನ ಹೆಸರನ್ನು ಸತ್ಯವನ್ನಾಗಿ ಮಾಡಿ ನನ್ನ ಶೋಕವನ್ನು ನಾಶಪಡಿಸು!"

ಈ ರೀತಿ ಆರ್ತಳಾದ ವರಾಂಗನೆ ಭೈಮಿಯು ಆ ಅಶೋಕ ವೃಕ್ಷವನ್ನು ಮೂರುಸಾರಿ ಸುತ್ತುವರೆದು, ಅದಕ್ಕೂ ಹೆಚ್ಚಿನ ದಾರುಣ

ಪ್ರದೇಶವೊಂದಕ್ಕೆ ಹೋದಳು. ಪತಿಯನ್ನು ಅನ್ವೇಷಿಸುತ್ತಾ ಆ ಭೀಮಸುತೆಯು ಹಲವಾರು ವೃಕ್ಷಗಳು, ಅನೇಕ ಝರಿಗಳು, ಅನೇಕ ಪರ್ವತಗಳು, ಅನೇಕ ಮೃಗಪಕ್ಷಿಗಳು, ಕಂದರ-ಕಣಿವೆಗಳು ಮತ್ತು ಅದ್ಭುತ ನದಿಗಳನ್ನು ನೋಡಿದಳು. ಹಾಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಶುಚಿಸ್ಮಿತೆ ದಮಯಂತಿಯು ಆನೆ-ಕುದುರೆ-ರಥಗಳ ಸಂಕುಲಗಳೊಂದಿಗೆ ಪ್ರಸನ್ನ ಸಲಿಲದಿಂದೊಡಗೂಡಿದ ಶುಭ ಮತ್ತು ರಮ್ಯ ನದಿಯ ಕಡೆ ಹೋಗುತ್ತಿದ್ದ ಒಂದು ದೊಡ್ಡ ಪ್ರಯಾಣಿಕರ ಗುಂಪನ್ನು ಕಂಡಳು. ವಿಸ್ತೀರ್ಣವಾದ ಆ ಆನಂದಕರ ನದಿಯಲ್ಲಿ ತಂಪಾದ ನೀರಿತ್ತು, ಕಳೆಗಳಿದ್ದವು. ಕ್ರೌಂಚ, ಕುರರ ಮತ್ತು ಚಕ್ರವಾಕಗಳ ಕರೆಗಳ ಗದ್ದಲದಿಂದೊಡಗೂಡಿತ್ತು. ಆಮೆ, ಮೊಸಳೆಗಳಿಂದೊಡಗೂಡಿತ್ತು. ಮರಳು ಮತ್ತು ದ್ವೀಪಗಳನ್ನು ಹೊಂದಿತ್ತು. ಆ ಮಹಾ ದಂಡನ್ನು ನೋಡಿದ ವರಾರೋಹೆ ಯಶಸ್ವಿನೀ ನಲಪತ್ನಿಯು ಓಡಿ ಹೋಗಿ ಆ ದಂಡಿನ ಮಧ್ಯದಲ್ಲಿ ಸೇರಿಕೊಂಡಳು. ಅರ್ಧವೇ ವಸ್ತ್ರವನ್ನು ಧರಿಸಿದ್ದ, ಕೃಶಳಾಗಿದ್ದ, ವಿವರ್ಣಳಾಗಿದ್ದ, ಮಲಿನಳಾಗಿದ್ದ, ಧೂಳುತುಂಬಿದ ತಲೆಗೂದಲಿನ ಆ ಶೋಕಾರ್ತೆಯು ಹುಚ್ಚಿಯಂತೆ ಕಂಡಳು. ಅವಳನ್ನು ನೋಡಿದ ಕೆಲವು ಜನರು ಭೀತರಾಗಿ ಓಡಿದರು. ಕೆಲವರು ಚಿಂತಾಪರರಾದರು. ಮತ್ತು ಇನ್ನು ಕೆಲವರು ಮಾತನಾಡಿಕೊಂಡರು. ಕೆಲವರು ನಕ್ಕರೆ ಇನ್ನು ಕೆಲವರು ಅಸಹ್ಯ ಪಟ್ಟುಕೊಂಡರು. ಅದರೆ ಕೆಲವರು ಅವಳಮೇಲೆ ದಯಪಟ್ಟುಕೊಂಡು ಕೇಳಿದರು:

“ಕಲ್ಯಾಣಿ! ನೀನು ಯಾರು? ನೀನು ಯಾರವಳು? ವನದಲ್ಲಿ ಏನನ್ನು ಅರಸುತ್ತಿದ್ದೀಯೆ? ನಿನ್ನನ್ನು ನೋಡಿ ನೀನು ಮನುಷ್ಯಳೇ ಎಂದು ವ್ಯಥಿತರಾಗಿದ್ದೇವೆ. ಸತ್ಯವನ್ನು ಹೇಳು. ನೀನು ಈ ವನ, ಪರ್ವತ ಅಥವಾ ದಿಕ್ಕಿನ ದೇವತೆಯೇ? ಕಲ್ಯಾಣಿ! ನಾವು ನಿನ್ನ ಶರಣಾಗುತ್ತೇವೆ. ನೀನು ಯಕ್ಷಿಯೋ ಅಥವಾ ರಾಕ್ಷಸಿಯೋ? ನೀನು ಯಾರಿದ್ದರೂ ನಮಗೆ ಒಳ್ಳೆಯ ಅದೃಷ್ಟವನ್ನಿತ್ತು ರಕ್ಷಿಸು. ಈ ನಮ್ಮ ದಂಡು ಇಲ್ಲಿಂದ ಶೀಘ್ರವಾಗಿ ಕ್ಷೇಮದಿಂದ ಹೊರಡುವಂತೆ ಮಾಡು. ನಿನ್ನನ್ನು ಶರಣು ಹೋಗುತ್ತೇವೆ!”

ದಂಡಿನಲ್ಲಿ ಪ್ರಯಾಣಿಸುತ್ತಿದ್ದವರ ಈ ಮಾತುಗಳಿಗೆ ನೃಪಾತ್ಮಜೆ, ಭರ್ತೃವ್ಯಸನ ದುಃಖಿತಳಾದ ಸಾಧ್ವಿ ದಮಯಂತಿಯು ದಂಡಿನ ನಾಯಕ ಮತ್ತು ದಂಡಿನ ಇತರ ಜನರಿಗೆ, ವೃದ್ಧರಿಗೆ ಬಾಲಕರಿಗೆ ಮತ್ತು ದಂಡಿನ ಮಾರ್ಗದರ್ಶಿಗಳಿಗೆ ಉತ್ತರಿಸಿದಳು:

“ನಾನೊಬ್ಬ ಮಾನುಷಿ. ಮನುಜಧಿಪತಿಯ ಸುತೆ, ನೃಪನ ಸೊಸೆ, ಮತ್ತು ಪತಿಯನ್ನು ನೋಡಲು ಕಾತರಿಸುತ್ತಿರುವ ರಾಜಭಾರ್ಯೆ ಎಂದು ತಿಳಿಯಿರಿ. ವಿದರ್ಭರಾಜ ನನ್ನ ಪಿತ ಮತ್ತು ಅಪರಾಜಿತ ಮಹಾಭಾಗ ನಲ ಎಂಬ ಹೆಸರಿನ ನೈಷಧ ರಾಜ ನನ್ನ ಪತಿ. ಅವನನ್ನೇ ನಾನು ಅರಸುತ್ತಿರುವೆ. ನನ್ನ ಪ್ರಿಯ, ಪಾರ್ಥಿವಶಾರ್ದೂಲ, ಅಮಿತ್ರಗಣಸೂದನ,

ನೃಪತಿ ನಲನನ್ನು ನೋಡಿದ್ದರೆ ಬೇಗ ಹೇಳಿ!"

ಆಗ ಶುಚಿ ಎನ್ನುವ ಆ ದೊಡ್ಡ ದಂಡಿನ ಪ್ರಭು, ದಂಡಿನ ನಾಯಕನು ಅವಳಿಗೆ ಹೇಳಿದನು:

"ಕಲ್ಯಾಣಿ! ನನ್ನ ಮಾತನ್ನು ಕೇಳು. ನಾನು ಈ ದಂಡಿನ ನಾಯಕ ಸಾರ್ಥವಾಹ. ಯಶಸ್ವಿನೀ! ನಲ ಎನ್ನುವ ಯಾರನ್ನೂ ನಾನು ನೋಡಿಲ್ಲ. ಈ ಕಷ್ಟ ವನದಲ್ಲಿ ಆನೆ, ಚಿರತೆ, ಎಮ್ಮೆ, ಹುಲಿ, ಕರಡಿ ಮತ್ತು ಜಿಂಕೆಗಳನ್ನು ನೋಡಿದ್ದೇನೆ. ಮನುಷ್ಯರು ಯಾರೂ ಇಲ್ಲಿ ವಾಸಿಸುತ್ತಿಲ್ಲ. ಯಕ್ಷರಾಜ ಮಣಿಭದ್ರನು ಮಂಗಳವನ್ನುಂಟು ಮಾಡಲಿ!"

ಅವಳು ಎಲ್ಲ ವರ್ತಕರ ದಂಡಿನ ನಾಯಕನಿಗೆ ಕೇಳಿದಳು:

"ಈ ದಂಡು ಎಲ್ಲಿಗೆ ಹೋಗುತ್ತಿದೆ? ದಯವಿಟ್ಟು ಹೇಳು!"

ಸಾರ್ಥವಾಹನು ಹೇಳಿದನು:

"ಇದು ಸತ್ಯವಾದಿ ಚೇದಿರಾಜ ಸುಬಾಹುವಿನ ಸಾರ್ಥ. ಮನುಜಾತ್ಮಜೇ! ಕ್ಷಿಪ್ರವಾಗಿ ಲಾಭವನ್ನು ಪಡೆಯಲು ಆ ರಾಜ್ಯಕ್ಕೆ ಹೋಗುತ್ತಿದ್ದೇವೆ."

## ಚೇದಿನಗರದಲ್ಲಿ ದಮಯಂತಿ

ಆ ಅನವದ್ಯಾಂಗಿಯು ದಂಡಿನ ನಾಯಕನ ಮಾತುಗಳನ್ನು ಕೇಳಿ ತನ್ನ

ಪತಿಯನ್ನು ಕಾಣುವ ಆಸೆಯಿಂದ ಅವನ ಜೊತೆ ನಡೆದಳು. ಕಾಲಾನಂತರದಲ್ಲಿ ಆ ವರ್ತಕರು ದಾರುಣ ಮಹಾ ವನದಲ್ಲಿ ಸರ್ವತೋಭದ್ರವಾದ, ದಡದಲ್ಲಿ ಸಾಕಷ್ಟು ಹುಲ್ಲು, ಕಟ್ಟಿಗೆ, ಫಲ-ಗಡ್ಡೆಗಳನ್ನು ಹೊಂದಿದ್ದ, ನಾನಾ ಪಕ್ಷಿಗಳು ಮತ್ತು ಪದ್ಮಸೌಗಂಧಿಕಗಳಿಂದೊಡಗೂಡಿದ ಒಂದು ವಿಶಾಲ, ರಮ್ಯ ಸರೋವರವನ್ನು ಕಂಡರು. ಸಂತೋಷವನ್ನು ನೀಡುವ ಆ ಮನೋಹರ ಶುದ್ಧ ನೀರನ್ನು ನೋಡಿ, ಪ್ರಾಣಿಗಳು ದಣಿದಿದ್ದರಿಂದ, ಅಲ್ಲೇ ತಂಗಲು ನಿರ್ಧರಿಸಿದರು. ದಂಡಿನ ನಾಯಕನ ಅನುಮತಿಯಂತೆ ಆ ಉತ್ತಮ ವನವನ್ನು ಪ್ರವೇಶಿಸಿದ ದಂಡು ಆ ರಾತ್ರಿಯನ್ನು ಅಲ್ಲೇ ಕಳೆಯಲು ತಯಾರಿಮಾಡಿತು. ಅರ್ಧರಾತ್ರಿಯ ಸಮಯದಲ್ಲಿ, ನಿಃಶಬ್ಧರಾಗಿ ದಂಡಿನ ಎಲ್ಲರೂ ಮಲಗಿರುವ ಸಮಯದಲ್ಲಿ, ಆನೆಗಳ ಗುಂಪೊಂದು ಆ ಗಿರಿನದಿಯಲ್ಲಿ ನೀರು ಕುಡಿಯಲೆಂದು ಬಂದಿತು. ಪದ್ಮಗಳಿಂದೊಡಗೂಡಿದ ಸರೋವರದ ಮಾರ್ಗವನ್ನು ತಡೆಹಿಡಿದು ಮಲಗಿದ್ದ ಆ ಉತ್ತಮ ದಂಡನ್ನು ಅವುಗಳ ಗುಂಪು ತುಳಿದಾಡಿತು. ಮತ್ತು ಮಲಗಿದ್ದವರೆಲ್ಲ ನೆಲದಮೇಲೆ ಒದ್ದಾಡತೊಡಗಿದರು. ಹಾಹಾಕಾರ ಮಾಡುತ್ತಾ ಶರಣಾರ್ಥಿಗಳಾದ ವರ್ತಕರು, ಇನ್ನೂ ನಿದ್ದೆಯಿಂದ ಕುರುಡರಾಗಿ, ಮಹತ್ತರ ಭಯದಿಂದ ತಪ್ಪಿಸಿಕೊಳ್ಳಲು ವನದಲ್ಲಿನ ಗಿಡಗಂಟಿಗಳ ಹಿಂದೆ ಓಡಿದರು. ಕೆಲವರು ದಂತಗಳಿಂದ ಸೀಳಿಹೋದರು, ಇನ್ನು ಕೆಲವರು ತುಳಿಯಲ್ಪಟ್ಟು ಹತರಾದರು. ಎತ್ತು, ಕತ್ತೆ, ಒಂಟೆ, ಕುದುರೆ ಮತ್ತು ಕಾಲ್ದಾಳುಗಳ ಸಂಕುಲವು ಭಯದಿಂದ

ಓಡುತ್ತಿದ್ದಾಗ ಪರಸ್ಪರರನ್ನು ಕೊಂದು ಹಾಕಿದವು. ಘೋರವಾಗಿ ಕೂಗುತ್ತಾ ಧರಣೀತಲದಲ್ಲಿ ಬಿದ್ದರು. ಭಗ್ನವಾದ ಅಂಗಗಳಿಂದ ವೃಕ್ಷಗಳನ್ನು ಹಿಡಿದು ಕಣಿವೆಗಳಲ್ಲಿ ಬಿದ್ದರು. ಹೀಗೆ ವರ್ತಕರ ಆ ಸಮೃದ್ಧ ಮಂಡಲವೆಲ್ಲವೂ ನಿಹತವಾಯಿತು.

ಬೆಳಕು ಹರಿಯುತ್ತಿದ್ದಂತೆ ಸಾವಿನಿಂದ ಬದುಕಿದ ಜನರು ಗಿಡ ಮಟ್ಟಿಗಳಿಂದ ಹೊರಬಂದು ಎಲ್ಲರ ಹತ್ಯೆಯನ್ನು ಕಂಡು "ಸಹೋದರ! ತಂದೇ! ಪುತ್ರ! ಸಖಾ!" ಎಂದು ಶೋಕಿಸಿದರು.

> "ನಾನೇನು ದುಷ್ಕೃತವನ್ನು ಮಾಡಿದ್ದೇನೆಂದು ಈ ನಿರ್ಜನ ಅರಣ್ಯದಲ್ಲಿ ಈ ಜನಸಾಗರವು ಆನೆಗಳಿಂದ ತುಳಿಯಲ್ಪಟ್ಟು ನಾಶವಾಯಿತು? ಇದು ನನ್ನ ಮಂದಭಾಗ್ಯವೇ ಸರಿ!"

ಎಂದು ಆ ವೈದರ್ಭಿಯು ಶೋಕಿಸಿದಳು.

> "ನಿಸ್ಸಂಶಯವಾಗಿಯೂ ನನಗೆ ಮುಂದೆ ದುಃಖಪ್ರಾಪ್ತಿಯಾಗುವುದಿದೆ. ಅಕಾಲದಲ್ಲಿ ಮೃತ್ಯು ಪ್ರಾಪ್ತಿಯಾಗುವುದಿಲ್ಲ ಎಂದು ವೃದ್ಧರು ಹೇಳಿದುದನ್ನು ಕೇಳಿದ್ದೇನೆ. ನಾನು ಆನೆಗಳಿಂದ ತುಳಿಯಲ್ಪಟ್ಟು ಸಾಯಲಿಲ್ಲ. ಇದರಿಂದ ತಿಳಿಯುವುದೇನೆಂದರೆ, ವಿಧಿಯು ನಿಶ್ಚಯಿಸದೇ ಯಾವುದೂ ಆಗುವುದಿಲ್ಲ. ಆದರೆ ನಾನು ಬಾಲ್ಯದಲ್ಲಿಯೂ ಕರ್ಮದಲ್ಲಿಯಾಗಲೀ, ಮನಸ್ಸಿನಲ್ಲಿಯಾಗಲೀ ಅಥವಾ ಮಾತಿನಲ್ಲಿಯಾಗಲೀ ಅಪಕೃತವನ್ನು ಮಾಡಿಲ್ಲ. ಹಾಗಿದ್ದರೆ ಈ

ದುಃಖವು ಬರಲು ಕಾರಣವೇನು? ನನ್ನ ಯೋಚನೆಯಂತೆ ಸ್ವಯಂವರದಲ್ಲಿ ಸೇರಿದ್ದ ದೇವತೆ ಲೋಕಪಾಲಕರನ್ನು ನಲನಿಗೋಸ್ಕರವಾಗಿ ತಿರಸ್ಕರಿಸಿದ್ದುದಕ್ಕಾಗಿ, ಅವರ ಪ್ರಭಾವದಿಂದ ಈ ರೀತಿಯ ವಿಯೋಗ ಪ್ರಾಪ್ತಿಯಾಯಿತೇನೋ!”

ಈ ರೀತಿ ದುಃಖಿತಳಾದ ಆ ದೀನ ವರಾಂಗನೆಯು ದುಃಖಶೋಕಪರಾಯಣಳಾಗಿ ವಿಲಪಿಸುತ್ತಾ ವೇದಪಾರಂಗತ ಬ್ರಾಹ್ಮಣರೊಡಗೂಡಿ ಹೊರಟಳು. ಬಹಳ ದೂರ ಪ್ರಯಾಣಮಾಡಿದ ನಂತರ ಅವಳು ಒಂದು ದೊಡ್ಡ ಪಟ್ಟಣಕ್ಕೆ ಆಗಮಿಸಿದಳು. ಸುಬಾಹುವೂ ಸತ್ಯವಾದಿಯೂ ಆದ ಚೇದಿ ರಾಜನ ಆ ಉತ್ತಮವಾದ ಪುರವನ್ನು ಅರ್ಧವಸ್ತ್ರವನ್ನೇ ಧರಿಸಿಯೇ ಅವಳು ಪ್ರವೇಶಿಸಿದಳು. ವಿವರ್ಣಳೂ, ಕೃಶಳೂ, ದೀನಳೂ, ಬಿಚ್ಚಿದ ತಲೆಗೂದಲಿನವಳೂ, ಹೊಲಸು ತುಂಬಿದವಳೂ, ಮತ್ತು ಹುಚ್ಚಿಯಂತೆ ಹೋಗುತ್ತಿರುವ ಅವಳನ್ನು ಪುರವಾಸಿಗಳು ನೋಡಿದರು. ಚೇದಿರಾಜಪುರವನ್ನು ಪ್ರವೇಶಿಸುತ್ತಿರುವ ಅವಳನ್ನು ನೋಡಿದ ಬಾಲಕರೂ ಗ್ರಾಮಪುತ್ರರೂ ಕುತೂಹಲದಿಂದ ಅವಳನ್ನು ಹಿಂಬಾಲಿಸಿದರು. ಅವಳು ರಾಜಭವನದ ಸಮೀಪ ಹೋಗುತ್ತಿದ್ದಂತೆಯೇ ಅವರೆಲ್ಲರೂ ಅವಳನ್ನು ಸುತ್ತುವರಿದರು. ಜನರಿಂದ ಸುತ್ತುವರಿಯಲ್ಪಟ್ಟಿದ್ದ ಅವಳನ್ನು ರಾಜಮಾತೆಯು ಅರಮನೆಯ ಮೇಲ್ಗಚ್ಚಿನಿಂದ ನೋಡಿದಳು. ಉತ್ತಮ ಪೀಠದಲ್ಲಿ ಕುಳಿತಿದ್ದ ಅವಳು ವಿಸ್ಮಿತಳಾಗಿ ಜನರೆಲ್ಲರನ್ನೂ ಹಿಂದೆಸರಿಸಿ

ದಮಯಂತಿಯನ್ನು ಪ್ರಶ್ನಿಸಿದಳು:

“ದುಃಖಾವಿಷ್ಟಳಾಗಿದ್ದರೂ ಸುಂದರವಾದ ದೇಹವನ್ನು ಧರಿಸಿದ್ದೀಯೆ ಮತ್ತು ಮಿಂಚಿನಿಂದೊಡಗೂಡಿದ ಮೋಡದಂತೆ ಹೊಳೆಯುತ್ತಿರುವೆ. ನೀನು ಯಾರು ಮತ್ತು ಯಾರವಳು ಎನ್ನುವುದನ್ನು ಹೇಳು! ಅಮರಪ್ರಭೆ! ಭೂಷಣಗಳಿಲ್ಲದಿದ್ದರೂ ರೂಪದಲ್ಲಿ ನೀನು ಮನುಷ್ಯಳೆಂದು ಅನ್ನಿಸುವುದಿಲ್ಲ. ಅಸಹಾಯಕಳಾಗಿದ್ದರೂ ನಿನಗೆ ಈ ಜನರ ಭಯವಾಗುತ್ತಿಲ್ಲವಲ್ಲ!”

ಅವಳ ಈ ಮಾತುಗಳನ್ನು ಕೇಳಿ ಭೈಮಿಯು ಹೇಳಿದಳು:

“ಪತಿಯ ಅನುವ್ರತಳಾದ ಓರ್ವ ಮಾನುಷಿಯೆಂದು ನನ್ನನ್ನು ತಿಳಿ. ನಾನು ಇಷ್ಟವಿದ್ದಲ್ಲಿ ವಾಸಿಸುವ, ಫಲಮೂಲಗಳನ್ನು ಸೇವಿಸುವ, ಏಕಾಂಗಿ. ಸಾಯಂಕಾಲ ಎಲ್ಲಿ ಆಗುತ್ತದೆಯೋ ಅಲ್ಲಿಯೇ ಉಳಿಯುವ, ಜಾತಿಸಂಪನ್ನಳಾದ ಓರ್ವ ಸೈರಂಧ್ರೀ. ಅಸಂಖ್ಯಗುಣಿಯಾದ ನನ್ನ ಪತಿಯು ನಿತ್ಯವೂ ನನ್ನಲ್ಲಿಯೇ ಅನುವ್ರತನಾದವನು. ನಾನೂ ಕೂಡ ನನ್ನ ವೀರ ಪತಿಯನ್ನು ನೆರಳಿನಂತೆ ಹಿಂಬಾಲಿಸಿಕೊಂಡು ಬಂದಿದ್ದೇನೆ. ದುರ್ದೈವವಶಾತ್ ಅವನಿಗೆ ಜೂಜಿನಲ್ಲಿ ಅತಿಯಾದ ಚಟವಿತ್ತು. ದ್ಯೂತದಲ್ಲಿ ಎಲ್ಲವನ್ನೂ ಕಳೆದುಕೊಂಡ ಅವನು ಒಬ್ಬನೇ ಅರಣ್ಯಕ್ಕೆ ಹೊರಟುಹೋದನು. ಏಕವಸ್ತ್ರನಾಗಿ,

ಹುಚ್ಚನಂತೆ ವಿಹ್ವಲನಾಗಿದ್ದ ಆ ವೀರ ಪತಿಯನ್ನು ಅನುಸರಿಸಿ ನಾನೂ ಕಾಡಿಗೆ ಬಂದೆ. ಒಂದುದಿನ ವನದಲ್ಲಿ ಹಸಿವೆಯಿಂದ ಬಳಲಿದ್ದ ಆ ವೀರನು ಯಾವುದೋ ಕಾರಣದಿಂದಾಗಿ ಅವನಲ್ಲಿದ್ದ ಒಂದು ವಸ್ತ್ರವನ್ನೂ ಕಳೆದುಕೊಂಡನು. ಆ ನಗ್ನ, ಉನ್ಮತ್ತ, ಅರಿವನ್ನೇ ಕಳೆದುಕೊಂಡಿದ್ದ ಏಕವಸ್ತ್ರಧಾರಿಯನ್ನು ಅನುಸರಿಸುತ್ತಾ ಬಹಳಷ್ಟು ರಾತ್ರಿಗಳು ನಾನು ನಿದ್ದೆಯನ್ನೇ ಮಾಡಲಿಲ್ಲ. ಬಹುದಿನಗಳ ನಂತರ ಯಾವಾಗಲೋ ಒಮ್ಮೆ ನಾನು ನಿದ್ದೆಮಾಡುತ್ತಿರುವಾಗ ನನ್ನ ವಸ್ತ್ರವನ್ನು ಅರ್ಧ ಕತ್ತರಿಸಿ ಅದನ್ನೇ ಸುತ್ತಿಕೊಂಡು ತಪ್ಪನ್ನೇನೂ ಮಾಡಿರದ ನನ್ನನ್ನು ಬಿಟ್ಟು ಹೊರಟು ಹೋದನು. ನನ್ನ ಮನಸ್ಸು ದಹಿಸುತ್ತಿದ್ದಂತೆ ದಿನ ರಾತ್ರಿಯೂ ಪತಿಯನ್ನು ಹುಡುಕುತ್ತಿದ್ದೇನೆ. ಆದರೆ ನನ್ನ ಪ್ರಿಯನನ್ನು, ಪ್ರಾಣಧನೇಶ್ವರನನ್ನು ಕಾಣದಾಗಿದ್ದೇನೆ.”

ಅಶ್ರುಪರಿಪೂರ್ಣಾಕ್ಷಿಯಾಗಿ ಬಹುವಾಗಿ ವಿಲಪಿಸುತ್ತಿದ್ದ ಆರ್ತ ಭೈಮಿಗೆ ತಾನೇ ಸ್ವತಃ ದುಃಖದಲ್ಲಿದ್ದಾಳೋ ಎನ್ನುವಂಥೆ ರಾಜಮಾತೆಯು ಹೇಳಿದಳು:

“ಕಲ್ಯಾಣಿ! ನೀನು ನನ್ನಲ್ಲಿಯೇ ಇರು. ನಿನ್ನ ವರ್ತನೆಯಿಂದ ನಾನು ಸಂತೋಷಗೊಂಡಿದ್ದೇನೆ. ನನ್ನ ಪುರುಷರು ನಿನ್ನ ಪತಿಯನ್ನು ಹುಡುಕುವರು. ಅಥವಾ ತಾನಾಗಿಯೇ ಇಲ್ಲಿ ಅಲ್ಲಿ ಸುತ್ತಾಡುತ್ತಾ ಅವನೇ ಇಲ್ಲಿಗೆ ಬರಬಹುದು. ನೀನು ಇಲ್ಲಿ

ವಾಸಿಸುತ್ತಿರುವಾಗಲೇ ನಿನ್ನ ಪತಿಯನ್ನು ಪುನಃ ಹೊಂದುವೆ."

ರಾಜಮಾತೆಯ ವಚನಗಳನ್ನು ಕೇಳಿ ದಮಯಂತಿಯು ಹೇಳಿದಳು:

"ವೀರಮಾತೆ! ನಿನ್ನಲ್ಲಿ ನಾನು ಇರುತ್ತೇನೆ. ಆದರೆ ಕೆಲವು ನಿಯಮಗಳಡಿಯಲ್ಲಿ! ನಾನು ಎಂಜಲನ್ನು ತಿನ್ನುವುದಿಲ್ಲ, ಬೇರೆಯವರ ಪಾದಗಳನ್ನು ತೊಳೆಯುವುದಿಲ್ಲ, ಮತ್ತು ಅನ್ಯ ಪುರುಷರೊಂದಿಗೆ ಎಂದೂ ಮಾತನಾಡುವುದಿಲ್ಲ. ಯಾರಾದರೂ ನನ್ನಜೊತೆ ಸರಿಯಾಗಿ ವರ್ತಿಸದೇ ಇದ್ದರೆ ಅವರಿಗೆ ಸರಿಯಾದ ದಂಡವು ದೊರೆಯಬೇಕು. ಆದರೆ, ಪತಿಯನ್ನು ಅನ್ವೇಷಿಸುವ ಸಲುವಾಗಿ ನಾನು ಬ್ರಾಹ್ಮಣರನ್ನು ಕಾಣುತ್ತೇನೆ. ಈ ರೀತಿ ಮಾಡುವುದು ಸಾದ್ಯವಾದರೆ ನಾನು ಇಲ್ಲಿ ವಾಸಿಸುವುದಕ್ಕೆ ಸಂಶಯವೇ ಇಲ್ಲ. ಅನ್ಯಥಾ ನನಗೆ ಇಲ್ಲಿ ವಾಸಿಸಲು ಸ್ವಲ್ಪವೂ ಮನಸ್ಸಿಲ್ಲ."

ಪ್ರಹೃಷ್ಟಮನಸಳಾದ ರಾಜಮಾತೆಯು ಅವಳಿಗೆ ಹೇಳಿದಳು:

"ನಿನ್ನ ವ್ರತದ ನಿಯಮಗಳ ತಕ್ಕಂತೆ ಎಲ್ಲವನ್ನೂ ಮಾಡುತ್ತೇನೆ."

ಭೈಮಿಗೆ ಈ ರೀತಿ ಹೇಳಿದ ನಂತರ ರಾಜಮಾತೆಯು ಸುನಂದ ಎಂಬ ಹೆಸರಿನ ತನ್ನ ಮಗಳಿಗೆ ಹೇಳಿದಳು:

"ಸುನಂದ! ಈ ದೇವರೂಪಿಣಿಯು ನಿನ್ನ ಸೈರಂಧ್ರಿಯಾಗಿ

ಇರುವಳು, ಗುರುತಿಟ್ಟುಕೋ. ಇವಳೊಂದಿಗೆ ಯಾವ ಉದ್ವೇಗವೂ ಇಲ್ಲದೇ ಸ್ವತಃ ಆನಂದವಾಗಿರು!"

## ನಲ-ಕಾರ್ಕೋಟಕ

ದಮಯಂತಿಯನ್ನು ತೊರೆದ ರಾಜ ನಲನು ಗಹನ ವನದಲ್ಲಿ ಉರಿಯುತ್ತಿರುವ ಒಂದು ದೊಡ್ಡ ಕಾಡ್ಗಿಚ್ಚನ್ನು ಕಂಡನು. ಕಿಚ್ಚಿನ ಮಧ್ಯದಿಂದ

"ನಲ! ಇಲ್ಲಿಗೆ ಬಾ! ಪುಣ್ಯಶ್ಲೋಕ! ಬಾ!"

ಎಂದು ಯಾವುದೋ ಜೀವಿಯು ಪುನಃ ಪುನಃ ಕರೆಯುವ ಶಬ್ಧವನ್ನು ಕೇಳಿದನು.

"ಭಯಪಡಬೇಡ!"

ಎಂದು ಕೂಗಿ ಹೇಳುತ್ತಾ ನಲನು ಆ ಅಗ್ನಿಯನ್ನು ಪ್ರವೇಶಿಸಿ, ಮಧ್ಯದಲ್ಲಿ ಸುರುಳಿಸುತ್ತಿ ಮಲಗಿದ್ದ ನಾಗರಾಜನನ್ನು ಕಂಡನು. ಆಗ ಆ ನಾಗವು ತರತರಿಸುತ್ತಾ ಅಂಜಲೀಬದ್ಧನಾಗಿ ನಲನನ್ನುದ್ದೇಶಿಸಿ ಮಾತನಾಡಿತು:

"ನೃಪ! ನನ್ನನ್ನು ನಾಗರಾಜ ಕಾರ್ಕೋಟಕನೆಂದು ತಿಳಿ. ಮಹಾತಪ ಮುಗ್ಧ ಬ್ರಾಹ್ಮಣನೊಬ್ಬನನ್ನು ನಾನು ಹಿಡಿದಿದ್ದೆ. ಕೋಪವಶನಾದ ಅವನಿಂದ ಶಪಿತನಾಗಿದ್ದೇನೆ. ಅವನ ಶಾಪದಿಂದಾಗಿ ಈ ಜಾಗದಿಂದ ಸ್ವಲ್ಪ ದೂರ ಚಲಿಸಲೂ

ಅಶಕ್ಯನಾಗಿದ್ದೇನೆ. ನೀನು ನನ್ನನ್ನು ಉಳಿಸಿದರೆ, ನಿನಗೆ ಶ್ರೇಯಸ್ಸಾಗುವ ಉಪದೇಶವನ್ನು ನೀಡುತ್ತೇನೆ. ನಿನ್ನ ಸಖನಾಗಿರುವೆ. ನನ್ನಂತಹ ಪನ್ನಗವು ಇನ್ನೊಂದಿಲ್ಲ. ನಿನಗಾಗಿ ನಾನು ಹಗುರವಾಗುತ್ತೇನೆ. ಶೀಘ್ರವಾಗಿ ನನ್ನನ್ನು ಎತ್ತಿಕೊಂಡು ಹೋಗು!"

ಹೀಗೆ ಹೇಳಿದ ಆ ನಾಗೇಂದ್ರನು ಅಂಗುಷ್ಠಮಾತ್ರದಂತಾದನು. ನಲನು ಅವನನ್ನು ಎತ್ತಿ ಬೆಂಕಿಯು ಇಲ್ಲದೇ ಇರುವ ಸ್ಥಳಕ್ಕೆ ಕೊಂಡೊಯ್ದನು. ಸುಟ್ಟ ಕರಿಯಿಲ್ಲದೇ ಇರುವ ಜಾಗಕ್ಕೆ ಬಂದು ಆ ನಾಗನನ್ನು ಕೆಳಗಿಡುವಷ್ಟರಲ್ಲಿಯೇ ಕಾರ್ಕೋಟಕನು ಪುನಃ ಹೇಳಿದನು:

"ನಿಷಾಧ! ಹೆಜ್ಜೆಗಳನ್ನು ಎಣಿಸುತ್ತಾ ಇನ್ನೂ ಸ್ವಲ್ಪ ಮುಂದೆ ಹೋಗು. ಮಹಾರಾಜ! ಅಲ್ಲಿ ನಿನಗೆ ಪರಮ ಶ್ರೇಯವಾದದ್ದನ್ನು ಕೊಡುತ್ತೇನೆ."

ಎಣಿಸುತ್ತಿದ್ದಂತೆಯೇ, ಹತ್ತನೇ ಹೆಜ್ಜೆಯಲ್ಲಿ ನಾಗನು ನಲನನ್ನು ಕಚ್ಚಿಬಿಟ್ಟನು. ಕಚ್ಚಿದಾಕ್ಷಣ ರೂಪವು ಕ್ಷಣದಲ್ಲಿ ಬದಲಾಗಿ ಹೋಯಿತು. ಮಹೀಪತಿ ನಲನು ತಾನು ವಿಕೃತನಾಗಿರುವುದನ್ನು ನೋಡಿ ವಿಸ್ಮಿತನಾಗಿ ನಿಂತನು ಮತ್ತು ಸ್ವರೂಪಧಾರಣ ಮಾಡಿದ ನಾಗನನ್ನು ನೋಡಿದನು. ಆಗ ನಾಗ ಕಾರ್ಕೋಟಕನು ನಲನನ್ನು ಸಂತವಿಸುತ್ತಾ ಹೇಳಿದನು:

"ಜನರು ನಿನ್ನನ್ನು ಗುರುತಿಸಬಾರದೆಂದು ನಾನು ನಿನ್ನ

ರೂಪವನ್ನು ಅಪಹರಿಸಿದ್ದೇನೆ. ನಲ! ಯಾರಿಂದ ನೀನು ಈ ಮಹಾ ದುಃಖವನ್ನು ಅನುಭವಿಸುತ್ತಿದ್ದೀಯೋ, ಯಾರು ನಿನ್ನ ದೇಹದಲ್ಲಿ ವಾಸಿಸುತ್ತಿದ್ದನೋ ಅವನು ನನ್ನ ಈ ವಿಷದಿಂದ ದುಃಖವನ್ನು ಅನುಭವಿಸುತ್ತಾನೆ. ಎಲ್ಲಿಯವರೆಗೆ ನಿನ್ನನ್ನು ಬಿಡುವುದಿಲ್ಲವೋ ಅಲ್ಲಿಯ ವರೆಗೆ ಅವನು ನಿನ್ನಲ್ಲಿದ್ದು ದೇಹವನ್ನೆಲ್ಲಾ ಆವರಿಸಿರುವ ಈ ವಿಷದಿಂದ ದುಃಖಿತನಾಗಿರುವನು. ಕ್ರೋಧ ಅಸೂಯೆಗೊಳಗಾಗಿ ಯಾರು ಮುಗ್ಧನೂ ಕಷ್ಟಗಳಿಗೆ ಅನರ್ಹನೂ ಆದ ನಿನಗೆ ಮೋಸಮಾಡಿದನೋ ಅವನಿಂದ ನಿನ್ನನ್ನು ನಾನು ರಕ್ಷಿಸುತ್ತೇನೆ. ನನ್ನ ವರದಿಂದ ನೀನು ಯಾವ ಮೃಗಗಳಿಂದಲೂ, ಶತೃಗಳಿಂದಲೂ ಮತ್ತು ಬ್ರಹ್ಮವಿದರಿಂದಲೂ ಭಯಪಡಬೇಕಾಗಿಲ್ಲ. ಈ ವಿಷದಿಂದಾಗಿ ನಿನಗೆ ಯಾವುದೇ ರೀತಿಯ ಪೀಡೆಯೂ ಆಗುವುದಿಲ್ಲ. ಸಂಗ್ರಾಮಗಳಲ್ಲಿ ನೀನು ಯಾವತ್ತೂ ಜಯವನ್ನು ಗಳಿಸುವೆ. ನೀನೊಬ್ಬ ಬಾಹುಕ ಎಂಬ ಹೆಸರಿನ ಸೂತ ಎಂದು ಹೇಳಿಕೊಂಡು ಇಲ್ಲಿಂದ ಅಕ್ಷವಿದ್ಯ ನಿಪುಣನಾದ ಋತುಪರ್ಣನೆಡೆಗೆ ಹೋಗು. ನಿಷಧೇಶ್ವರ! ರಮ್ಯ ಅಯೋಧ್ಯಾ ನಗರಿಗೆ ಇಂದೇ ಹೊರಡು. ಆ ರಾಜನು ನಿನ್ನ ಅಶ್ವನೈಪುಣ್ಯತೆಗೆ ಬದಲಾಗಿ ನಿನಗೆ ಅಕ್ಷ ನೈಪುಣ್ಯತೆಯನ್ನು ನೀಡುತ್ತಾನೆ. ಆ ಶ್ರೀಮಾನ್ ಇಕ್ಷ್ವಾಕುಕುಲಜನು ನಿನ್ನ ಮಿತ್ರನಾಗುತ್ತಾನೆ. ಯಾವಾಗ ನೀನು

> ಅಕ್ಷ ವಿದ್ಯೆಯನ್ನು ಪಡೆಯುತ್ತೀಯೋ ಆ ನಂತರ ಶ್ರೇಯಸ್ಸು, ಪತ್ನಿ, ರಾಜ್ಯ ಮತ್ತು ಮಕ್ಕಳೀರ್ವರನ್ನೂ ಪುನಃ ಪಡೆಯುತ್ತೀಯೆ. ನಿನ್ನ ಮನಸ್ಸಿನಿಂದ ಶೋಕವನ್ನು ಹೊರಹಾಕು. ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಯಾವಾಗ ನಿನಗೆ ನಿನ್ನ ಸ್ವರೂಪವನ್ನು ಪಡೆಯಲು ಮನಸ್ಸಾಗುತ್ತದೆಯೋ ಅವಾಗ ನನ್ನನ್ನು ನೆನಪಿಸಿಕೋ ಮತ್ತು ಈ ವಸ್ತ್ರವನ್ನು ಧರಿಸು. ಈ ವಸ್ತ್ರವನ್ನು ಧರಿಸಿದ ಕೂಡಲೇ ನೀನು ನಿನ್ನ ಸ್ವರೂಪವನ್ನು ಪುನಃ ಹೊಂದುತ್ತೀಯೆ!"

ಹೀಗೆ ಹೇಳಿ ಒಂದು ಜೊತೆ ದಿವ್ಯವಸ್ತ್ರಗಳನ್ನು ಅವನಿಗಿತ್ತನು. ಈ ರೀತಿ ನಲನಿಗೆ ಆದೇಶ ಮತ್ತು ವಸ್ತ್ರಗಳನ್ನಿತ್ತು ಆ ನಾಗರಾಜನು ಅಲ್ಲಿಯೇ ಅಂತರ್ಧಾನನಾದನು.

## ನಲ ವಿಲಾಪ

ಈ ರೀತಿ ನಾಗವು ಅಂತರ್ಧಾನನಾದ ನಂತರ ನೈಷಧ ನಲನು ಹೊರಟು ಹತ್ತು ದಿನಗಳ ನಂತರ ಋತುಪರ್ಣನ ನಗರವನ್ನು ಪ್ರವೇಶಿಸಿದನು. ಅವನು ರಾಜನ ಬಳಿ ಹೋಗಿ ಹೇಳಿದನು:

> "ನಾನು ಬಾಹುಕ! ಅಶ್ವಗಳನ್ನು ಓಡಿಸುವುದರಲ್ಲಿ ನನ್ನ ಸರಿಸಾಟಿಯಾದ ಇನ್ನೊಬ್ಬನು ಈ ಪೃಥ್ವಿಯಲ್ಲಿಯೇ ಇಲ್ಲ. ಎಲ್ಲ ಕಷ್ಟಗಳಲ್ಲಿ, ನೈಪುಣ್ಯತೆ ಬೇಕಾಗುವ ವಿಷಯಗಳಲ್ಲಿ ನನ್ನ

ಸಲಹೆಯನ್ನು ಪಡೆಯಬಹುದು. ಎಲ್ಲದಕ್ಕೂ ವಿಶೇಷವಾಗಿ ನಾನು ಅಡುಗೆ ಮಾಡುವುದನ್ನೂ ತಿಳಿದಿದ್ದೇನೆ. ಇನ್ನೂ ಇತರ ಕುಶಲ ಮತ್ತು ದುಷ್ಕರ ಕರ್ಮಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತೇನೆ. ಋತುಪರ್ಣ ! ನನ್ನನ್ನು ನಿನ್ನಲ್ಲಿ ಇರಿಸಿಕೋ."

ಋತುಪರ್ಣನು ಹೇಳಿದನು:

"ಬಾಹುಕ ! ನೀನು ಇಲ್ಲಿಯೇ ಇರು. ನಿನಗೆ ಮಂಗಳವಾಗಲಿ. ಈ ಎಲ್ಲ ಕೆಲಸಗಳನ್ನೂ ನೀನು ಮಾಡಬಹುದು. ನನಗೆ ಯಾವಾಗಲೂ ವೇಗವಾಗಿ ಪ್ರಯಾಣಮಾಡಲು ವಿಶೇಷ ಅಭಿರುಚಿಯಿದೆ. ನನ್ನ ಕುದುರೆಗಳು ಶೀಘ್ರವಾಗಿ ಓಡುವಹಾಗೆ ತಯಾರಿ ಮಾಡು. ನೀನು ನನ್ನ ಅಶ್ವಾಧ್ಯಕ್ಷನಾಗಿರು ಮತ್ತು ನಿನ್ನ ವೇತನವು ನೂರು ನೂರು. ವಾರ್ಷ್ಣೇಯ ಮತ್ತು ಜೀವಲರು ಇಂದಿನಿಂದ ನಿತ್ಯವೂ ನಿನ್ನ ಜೊತೆಯಲ್ಲಿಯೇ ಕೆಲಸಮಾಡುವರು. ನೀನು ಅವರೊಂದಿಗೆ ರಮಿಸುತ್ತಾ ನನ್ನಲ್ಲಿಯೇ ವಾಸವಾಗಿರು."

ಹೀಗೆ ಹೇಳಲ್ಪಟ್ಟ ನಲನು ಅಲ್ಲಿಯೇ ಋತುಪರ್ಣನ ನಗರಿಯಲ್ಲಿ ವಾರ್ಷ್ಣೇಯ ಜೀವಲರೊಂದಿಗೆ ಸತ್ಕಾರಗೊಂಡು ವಾಸಿಸುತ್ತಿದ್ದನು. ಅಲ್ಲಿ ವಾಸಿಸುತ್ತಿರುವಾಗ ರಾಜನು ವೈದರ್ಭಿಯ ಕುರಿತು ಚಿಂತಿಸುತ್ತಲೇ ಇದ್ದನು ಮತ್ತು ಯಾವಾಗಲೂ ಪ್ರತಿ ಸಂಜೆ ಈ ಒಂದು ಶ್ಲೋಕವನ್ನು ಹೇಳುತ್ತಿದ್ದನು:

“ಹಸಿವೆ ಬಾಯಾರಿಕೆಗಳಿಂದ ಬಳಲಿರುವ ತಪಸ್ವಿನೀ! ನೀನು ಎಲ್ಲಿ ಮಲಗಿರಬಹುದು? ಆ ಮಂದಬುದ್ಧಿಯನ್ನು ಸ್ಮರಿಸುತ್ತಾ ನೀನು ಯಾರ ಸೇವೆಯನ್ನು ಮಾಡುತ್ತಿರುವೆ?”

ರಾತ್ರಿವೇಳೆಯಲ್ಲಿ ಹೀಗೆ ಹೇಳುತ್ತಿದ್ದ ರಾಜನಲ್ಲಿ ಜೀವಲನು ಕೇಳಿದನು:

“ಬಾಹುಕ! ನಿತ್ಯವೂ ಯಾರ ಕುರಿತು ಶೋಕಿಸುತ್ತಿದ್ದೀಯೆ ಎಂದು ತಿಳಿಯಲು ಬಯಸುತ್ತೇನೆ.”

ರಾಜ ನಲನು ಅವನಿಗೆ ಹೇಳಿದನು:

“ಯಾವನೋ ಒಬ್ಬ ನಾರಿಯ ಮಂದಪ್ರಜ್ಞ ಪತಿಯು ಅವಳ ಕುರಿತು ಬಹಳಷ್ಟು ಚಿಂತಿಸುತ್ತಿದ್ದ. ಯಾವುದೋ ಕಾರಣದಿಂದ ಆ ಮಂದಬುದ್ಧಿಯು ಅವಳಿಂದ ಬೇರೆಯಾದನು ಮತ್ತು ಅಗಲಿದ ಆ ಮಂದಾತ್ಮನು ದುಃಖಪೀಡಿತನಾಗಿ ಹೀಗೆ ಭ್ರಮಿಸುತ್ತಿರುವನು. ಅವಳಿಲ್ಲದೇ ದಿನ ರಾತ್ರಿ ಶೋಕದಿಂದ ದಹಿಸುತ್ತಿದ್ದ ಅವನು ಸಾಯಂಕಾಲದಲ್ಲಿ ಅವಳನ್ನು ಸ್ಮರಿಸುತ್ತಾ ಒಂದು ಶ್ಲೋಕವನ್ನು ಹಾಡುವನು. ಭೂಮಿಯನ್ನೆಲ್ಲಾ ತಿರುಗಿ ಅವನಿಗೆ ಎಲ್ಲಿಯೋ ಏನೋ ದೊರಕಿತು. ಅಲ್ಲಿ ಅನರ್ಹನಾದ ಅವನು ದುಃಖಿಸುತ್ತಾ ಅವಳನ್ನು ಯಾವಾಗಲೂ ಸ್ಮರಿಸುತ್ತಿರುವನು. ಆ ನಾರಿಯಾದರೂ ಅಪಾಯಕಾರಿಯಾದ ವನಕ್ಕೂ ಆ ಪುರುಷನನ್ನು ಹಿಂಬಾಲಿಸಿದಳು. ಆ ಅಲ್ಪಪುಣ್ಯದವನಿಂದ ತ್ಯಜಿಸಲ್ಪಟ್ಟ ಅವಳು

ಜೀವಂತವಿರುವುದೇ ದುಷ್ಕರ. ಅವಳು ಒಂಟಿ ಬಾಲಕಿ. ಮಾರ್ಗಗಳನ್ನು ತಿಳಿಯದವಳು. ವಿಷಯಗಳಲ್ಲಿ ಅನುಭವವಿಲ್ಲದವಳು. ಹಸಿದವಳು. ಬಾಯಾರಿದವಳು. ಅಂಥವಳು ಇನ್ನೂ ಜೀವಂತವಿರುವುದು ದುಷ್ಕರ. ನಿತ್ಯವೂ ಪ್ರಾಣಿಗಳು ಓಡಾಡುತ್ತಿರುವ ಅತಿ ದಾರುಣ ವನದಲ್ಲಿ ಅವಳ ಅಲ್ಪಪುಣ್ಯ, ಮಂದಪ್ರಜ್ಞ ಪತಿಯಿಂದ ತ್ಯಕ್ತಳಾದಳು."

ಈ ರೀತಿ ರಾಜ ನೈಷಧನು ದಮಯಂತಿಯನ್ನು ಅನುಸ್ಮರಿಸುತ್ತಾ ರಾಜನ ನಿವೇಶನದಲ್ಲಿ ಅಜ್ಞಾತವಾಸವನ್ನು ವಾಸಿಸಿದನು.

## ದಮಯಂತೀ-ಸುದೇವ ಸಂವಾದ

ರಾಜ್ಯವನ್ನು ಕಳೆದುಕೊಂಡ ನಲನು ಭಾರ್ಯೆ ಸಹಿತ ಹೊರಟುಹೋದ ನಂತರ ಭೀಮನು ನಲನನ್ನು ಹುಡುಕಲೋಸುಗ ದ್ವಿಜರನ್ನು ಕಳುಹಿಸಿದನು. ಪುಷ್ಕಳ ಧನವನ್ನಿತ್ತು ಭೀಮನು ಅವರಿಗೆ ಆದೇಶವನ್ನಿತ್ತನು:

"ನಲ ಮತ್ತು ನನ್ನ ಮಗಳು ದಮಯಂತಿಯನ್ನು ಹುಡುಕಿ. ಈ ಕಾರ್ಯವು ಸಂಪನ್ನವಾದ ನಂತರ, ನಿಷಾಧಾಧಿಪತಿಯನ್ನು ಕಂಡುಹಿಡಿದಲ್ಲಿ ಯಾರು ಅವರನ್ನು ಇಲ್ಲಿಗೆ ಕರೆತರುತ್ತೀರೋ ಅವರಿಗೆ ಸಹಸ್ರ ಗೋವುಗಳನ್ನು ಕೊಡುತ್ತೇನೆ. ಮತ್ತು ಅವನಿಗೆ ನಗರಕ್ಕೆ ಸಮನಾದ ದೊಡ್ಡ ಗ್ರಾಮವನ್ನು ಅಗ್ರಹಾರವನ್ನಾಗಿ

ಕೊಡುತ್ತೇನೆ. ಒಂದುವೇಳೆ ದಮಯಂತಿ ಮತ್ತು ನಲರನ್ನು ಇಲ್ಲಿಗೆ ಕರೆತರಲು ಸಾಧ್ಯವಾಗದಿದ್ದರೆ ಅವರನ್ನು ಪತ್ತೆಮಾಡಿದರೂ ಸಾಕು ಅಂಥವನಿಗೆ ಸಾವಿರ ಗೋಧನವನ್ನು ಕೊಡುತ್ತೇನೆ."

ಈ ರೀತಿ ಆದೇಶಗೊಂಡ ಬ್ರಾಹ್ಮಣರು ಸಂತೋಷದಿಂದ ನೈಷಧ ಮತ್ತು ಅವನ ಪತ್ನಿಯನ್ನು ಅರಸುತ್ತಾ ಎಲ್ಲ ದಿಕ್ಕುಗಳಿಗೂ ಹೊರಟರು.

ಸುದೇವ ಎಂಬ ಹೆಸರಿನ ದ್ವಿಜನೊಬ್ಬನು ಅವರನ್ನು ಹುಡುಕುತ್ತಾ ರಮ್ಯ ಚೇದಿಪುರಿಗೆ ಬಂದು ಅಲ್ಲಿ ಅರಮನೆಯಲ್ಲಿ ರಾಜನ ಪುಣ್ಯಾಹವಾಚನದಲ್ಲಿ ಸುನಂದಳ ಪಕ್ಕದಲ್ಲಿ ನಿಂತಿರುವ, ತನ್ನ ಅಪ್ರತಿಮ ರೂಪದಿಂದ ಧೂಮ ಆವರಿಸಿದ ಸೂರ್ಯನ ಕಿರಣಗಳಂತೆ ಮಂದವಾಗಿ ಪ್ರಖರಿಸುತ್ತಿರುವ ವೈದರ್ಭಿಯನ್ನು ನೋಡಿದನು. ಬಹಳಷ್ಟು ಮಲಿನಳೂ ಕೃಶಳೂ ಆಗಿದ್ದ ಆ ವಿಶಾಲಾಕ್ಷಿಯನ್ನು ನೋಡಿ, ಹಲವಾರು ಕಾರಣಗಳನ್ನು ಕೊಡುತ್ತಾ ಅವಳು ಭೈಮಿಯೇ ಇರಬಹುದೆಂದು ತರ್ಕಿಸಿದನು. ಸುದೇವನು ಹೇಳಿದನು:

"ಈ ಅಂಗನೆಯು ರೂಪದಲ್ಲಿ ನಾನು ಹಿಂದೆ ನೋಡಿದವಳ ಹಾಗೆಯೇ ಇದ್ದಾಳೆ. ಈಗ ನಾನು ಈ ಲೋಕಕಾಂತೆ ಶ್ರೀಯನ್ನು ನೋಡಿ ಕೃತಾರ್ಥನಾದೆ. ಅವಳ ಮುಖವು ಪೂರ್ಣಚಂದ್ರನಂತಿದೆ. ಮೈ ಶ್ಯಾಮ ವರ್ಣ. ಅವಳ ಸ್ತನಗಳು ಸುಂದರವಾಗಿ ದುಂಡಾಗಿವೆ. ದೇವಿಯಂತೆ ತನ್ನ ಪ್ರಭೆಯಿಂದ

ಸರ್ವ ದಿಶೆಗಳನ್ನೂ ಕತ್ತಲೆಯಿಲ್ಲದಂತೆ ಮಾಡುತ್ತಿದ್ದಾಳೆ. ಕಣ್ಣುಗಳು ಪದ್ಮ ಅಥವಾ ಪಲಾಶ ಪತ್ರಗಳಂತಿವೆ. ಮನ್ಮಥನ ರತಿಯಂತಿದ್ದಾಳೆ. ಜಗತ್ತಿನಲ್ಲಿ ಸರ್ವರಿಗೂ ಇಷ್ಟವಾಗುವ ಪೂರ್ಣಚಂದ್ರನ ಬೆಳಕಿನಂತೆ ಇದ್ದಾಳೆ. ದೈವ ದೋಷದಿಂದ ವಿದರ್ಭವೆಂಬ ಸರೋವರದಿಂದ ಎಳೆದು ಕಿತ್ತಂತೆ ಇದ್ದಾಳೆ. ಧೂಳು ತುಂಬಿದ ಎಸಳಿನಂತ ದೇಹವುಳ್ಳವಳಾಗಿದ್ದಾಳೆ. ಕೆಸರಿನಿಂದ ತುಂಬಿದ ಕಮಲದ ದಂಟಿನಂತಿದ್ದಾಳೆ. ಪೂರ್ಣಿಮೆಯ ರಾತ್ರಿ ರಾಹುಗ್ರಸ್ತನಾದ ನಿಶಾಕರನಂತೆ ತೋರುತ್ತಿದ್ದಾಳೆ. ಪತಿಶೋಕಸಂತಪ್ತಳಾಗಿ, ದೀನಳಾಗಿ ಬತ್ತಿಹೋದ ನದಿಯಂತಿದ್ದಾಳೆ.  ಎಸಳುಗಳು ವಿಧ್ವಸ್ತವಾದ ಕಮಲಗಳಿಂದೊಡಗೂಡಿದ, ಪಕ್ಷಿಗಳನ್ನು ಓಡಿಸಿದ, ಆನೆಗಳ ಸೊಂಡಿಲುಗಳಿಂದ ಕೆಸರೆಲ್ಲ ಮೇಲೆಬಂದಿದ್ದ, ವ್ಯಾಕುಲಗೊಂಡ ಪದ್ಮಿನಿಯಂತೆ ತೋರುತ್ತಿದ್ದಾಳೆ. ಸುಕುಮಾರಿಯೂ, ಸುಜಾತಾಂಗಿಯೂ, ರತ್ನಗಳಿಂದ ತುಂಬಿದ ಮನೆಯಲ್ಲಿರಲು ಯೋಗ್ಯಳೂ ಆದ ಇವಳು ಬಹಳ ಬೇಗನೆಯೇ ಕಿತ್ತು ತೆಗೆದ ಕಮಲವು ಉಷ್ಣದಿಂದ ಬಾಡುವಂತೆ ಬಾಡುತ್ತಿದ್ದಾಳೆ. ರೂಪ ಔದಾರ್ಯ ಗುಣಗಳಿಂದೊಡಗೂಡಿದ ಅವಳು ಆಭರಣಗಳಿಗೆ ಅರ್ಹಳಾದರೂ ಆಭರಣಗಳಿಲ್ಲ; ಆಕಾಶದಲ್ಲಿ ಮೋಡಕವಿದ ಚಂದ್ರಲೇಖೆಯಂತಿದ್ದಾಳೆ. ಪ್ರಿಯ ಕಾಮಭೋಗಗಳಿಂದ,

ಬಂಧುಜನರಿಂದ ವಂಚಿತಳಾದ ಇವಳು ಪತಿಯ ದರ್ಶನಾಕಾಂಕ್ಷಿಯಾಗಿ ದೀನ ದೇಹವನ್ನು ಧರಿಸಿದ್ದಾಳೆ. ಭೂಷಣಗಳಿಲ್ಲದ ನಾರಿಗೆ ಪತಿಯೇ ಅತಿ ಉತ್ತಮ ಭೂಷಣ. ಇದು ಇಲ್ಲದೇ ಅವಳು ಎಷ್ಟು ಶೋಭನೆಯಾಗಿದ್ದರೂ ಶೋಭಿಸುವುದಿಲ್ಲ. ನಲನಿಗಾದರೂ ಇವಳಿಲ್ಲದೇ ಇರುವುದು ದುಷ್ಕರವಾಗಿರಬಹುದು - ಅವನು ಇನ್ನೂ ದೇಹವನ್ನು ಧರಿಸಿದ್ದಾನೆಯೋ ಅಥವಾ ಶೋಕದಿಂದ ಅವಸೀನನಾಗಿದ್ದಾನೋ? ಶತಪತ್ರಾಯತಾಕ್ಷಿ ಅಸಿತಕೇಶಳಾದ ಇವಳು ಇಲ್ಲಿದ್ದಾಳೆ. ಸುಖಾರ್ಹಳಾದ ಇವಳು ದುಖಿಯಾಗಿರುವುದನ್ನು ನೋಡಿ ನನ್ನ ಮನಸ್ಸಿಗೂ ವ್ಯಥೆಯಾಗುತ್ತಿದೆ. ಆದರೆ ಈ ಶುಭೆ ಸಾಧ್ವಿಯು ಯಾವಾಗ ರೋಹಿಣಿಯು ಶಶಿಯನ್ನು ಸೇರುವಂತೆ ಪತಿಯನ್ನು ಸಮಾಗಮಿಸಿ ದುಃಖದ ಆ ದಡವನ್ನು ಸೇರುತ್ತಾಳೋ! ಇವಳನ್ನು ಪುನಃ ಪಡೆದ ನೈಷಧನು ನಿಃಸಂದೇಹವಾಗಿ ಹರ್ಷಿತನಾಗುವನು ಮತ್ತು ರಾಜ್ಯಭ್ರಷ್ಟನಾದ ಆ ರಾಜನು ಮೇದಿನಿಯನ್ನು ಪುನಃ ಪಡೆಯುವನು. ಶೀಲ ಮತ್ತು ವಯಸ್ಸಿನಲ್ಲಿ ಇಬ್ಬರೂ ಸರಿಸಮಾನರಾಗಿದ್ದಾರೆ; ಅಭಿಜನಸಂಯುತದಲ್ಲಿಯೂ ಸರಿಸಮಾನರಾಗಿದ್ದಾರೆ. ನೈಷಧನು ವೈದರ್ಭಿಗೆ ಅರ್ಹನಾದವನು ಮತ್ತು ಈ ಅಸಿತೇಕ್ಷಣೆಯು ಅವನಿಗೆ ಅರ್ಹಳು. ಪತಿದರ್ಶನಕ್ಕೆಂದು

> ಕಾತರಳಾದ ಆ ಅಪ್ರಮೇಯ ವೀರ ಸತ್ವವತನ ಪತ್ನಿಯನ್ನು ಸಂತಯಿಸುವುದು ನನಗೆ ಯುಕ್ತವಾದದ್ದು. ಪೂರ್ಣಚಂದ್ರನಂತೆ ಮುಖವುಳ್ಳ, ಪೂರ್ವದಲ್ಲಿ ದುಃಖವನ್ನೇ ಕಂಡಿರದ, ಈಗ ದುಃಖಾರ್ತಳಾದ, ಧ್ಯಾನತತ್ಪರಳಾದ ಅವಳಿಗೆ ಆಶ್ವಾಸನೆಯನ್ನು ಕೊಡುತ್ತೇನೆ.”

ವಿವಿಧ ಕಾರಣ ಲಕ್ಷಣಗಳಿಂದ ಈ ರೀತಿ ವಿಮರ್ಶೆಮಾಡಿದ ಆ ಬ್ರಾಹ್ಮಣ ಸುದೇವನು ಭೈಮಿಯ ಬಳಿ ಹೋಗಿ ಹೇಳಿದನು:

> “ವೈದರ್ಭೀ ! ನಾನು ಸುದೇವ. ನಿನ್ನ ಸಹೋದರನ ಸಖ. ಭೀಮನ ವಚನದಂತೆ ನಿನ್ನನ್ನು ಅನ್ವೇಷಿಸುತ್ತಾ ಇಲ್ಲಿಗೆ ಬಂದಿದ್ದೇನೆ. ರಾಣಿ ! ನಿನ್ನ ಪಿತ, ಜನನಿ ಮತ್ತು ಸಹೋದರರು ಕುಶಲದಿಂದಿರುವರು. ಆಯುಶ್ಮಂತರಾದ ನಿನ್ನ ಮಕ್ಕಳೂ ಅವರೊಂದಿಗೆ ಕುಶಲದಿಂದಿದ್ದಾರೆ. ಆದರೆ ನಿನಗಾಗಿ ನಿನ್ನ ಬಂಧುವರ್ಗವೆಲ್ಲವೂ ಸತ್ವವನ್ನು ಕಳೆದುಕೊಂಡವರಂತೆ ಇರುವರು.”

ದಮಯಂತಿಯು ಸುದೇವನನ್ನು ಗುರುತಿಸಿದಳು ಮತ್ತು ಕ್ರಮೇಣವಾಗಿ ತನ್ನ ಸುಹೃದಯರ ಮತ್ತು ತನ್ನವರ ಎಲ್ಲವರ ಕುರಿತು ಕೇಳಿದಳು. ಸಹೋದರನ ಇಷ್ಟನಾದ, ದ್ವಿಜೋತ್ತಮ ಸುದೇವನನ್ನು ಒಮ್ಮಿಂದೊಮ್ಮೆಲೇ ನೋಡಿ ಶೋಕಕರ್ಶಿತಳಾದ ವೈದರ್ಭಿಯು ಗಟ್ಟಿಯಾಗಿ ಅತ್ತಳು. ಸುದೇವನೊಡನೆ ಏಕಾಂತದಲ್ಲಿ ಮಾತನಾಡುತ್ತಿದ್ದ



ಮತ್ತು ಶೋಕಕರ್ಶಿತಳಾಗಿ ಅಳುತ್ತಿದ್ದ ಅವಳನ್ನು ನೋಡಿದ ಸುನಂದೆಯು

> “ಸೈರಂಧ್ರಿಯು ಬ್ರಾಹ್ಮಣನನ್ನು ಭೆಟ್ಟಿಯಾಗಿ ಜೋರಾಗಿ ಅಳುತ್ತಿದ್ದಾಳೆ; ಒಪ್ಪಿಗೆಯಿದ್ದರೆ ಯಾಕೆಂದು ತಿಳಿ”

ಎಂದು ತನ್ನ ಜನನಿಗೆ ಹೇಳಿ ಕಳುಹಿಸಿದಳು. ಆಗ ಚೇದಿಪತಿಯ ಮಾತೆಯು ರಾಜನ ಅಂತಃಪುರದಿಂದ ಆ ಬಾಲಕಿಯು ಬ್ರಾಹ್ಮಣನ ಸಂಗಡ ಮಾತನಾಡುತ್ತಿದ್ದಲ್ಲಿಗೆ ಬಂದಳು. ರಾಜಮಾತೆಯು ಸುದೇವನನ್ನು ಕರೆಯಿಸಿ ಕೇಳಿದಳು:

> “ಈ ಭಾಮಿನಿಯು ಯಾರ ಭಾರ್ಯೆ ಮತ್ತು ಯಾರ ಸುತೆ? ಈ ವಾಮಲೋಚನೆಯು ಹೇಗೆ ಗೊತ್ತಿದ್ದವರೆಲ್ಲರನ್ನೂ ಮತ್ತು ಪತಿಯನ್ನೂ ಕಳೆದುಕೊಂಡಿದ್ದಾಳೆ? ವಿಪ್ರ! ಈ ಸತಿಯು ಹೀಗೆ ಹೇಗೆ ಆದಳು ಎಂದು ನಿನಗೇನಾದರೂ ತಿಳಿದಿದೆಯಾ? ಈ ಎಲ್ಲವನ್ನೂ ಏನನ್ನೂ ಬಿಡದೆ ನಿನ್ನಿಂದ ನಾನು ಕೇಳಲು ಇಚ್ಛಿಸುತ್ತೇನೆ. ದೇವರೂಪಿಣಿಯಾದವಳ ಕುರಿತು ನಾನು ನಿನ್ನಲ್ಲಿ ಕೇಳುತ್ತಿದ್ದೇನೆ. ಏನನ್ನೂ ಮುಚ್ಚಿಡದೇ ಹೇಳು.”

ಅವಳ ಹೇಳಿಕೆಯಂತೆ ದ್ವಿಜಸತ್ತಮ ಸುದೇವನು ಸುಖವಾಗಿ ಕುಳಿತುಕೊಂಡು ದಮಯಂತಿಯ ನಿಜ ಕಥೆಯನ್ನು ಯಥಾವತ್ತಾಗಿ ವರದಿಮಾಡಿದನು:

“ಭೀಮಪರಾಕ್ರಮಿ ಧರ್ಮಾತ್ಮಾ ಭೀಮನು ವಿದರ್ಭದ ರಾಜ. ದಮಯಂತಿ ಎಂದು ವಿಶ್ರುತ ಕಲ್ಯಾಣಿ ಅವನ ಮಗಳು. ರಾಜ ನೈಷಧನು ನಲ ಎಂಬ ಹೆಸರಿನ ವೀರಸೇನನ ಮಗ. ಆ ಧೀಮತ ಪುಣ್ಯಶ್ಲೋಕನ ಭಾರ್ಯೆಯೇ ಆ ಕಲ್ಯಾಣಿ. ಆ ಮಹೀಪತಿಯು ದ್ಯೂತದಲ್ಲಿ ಸಹೋದರನಿಂದ ಗೆಲ್ಲಲ್ಪಟ್ಟು, ರಾಜ್ಯವನ್ನು ಕಳೆದುಕೊಂಡು ದಮಯಂತಿಯೊಡಗೂಡಿ ಹೊರಟುಹೋದನು. ಅವನು ಎಲ್ಲಿಗೆ ಹೋದನೆಂದು ಯಾರಿಗೂ ತಿಳಿಯದು. ದಮಯಂತಿಗೋಸ್ಕರವಾಗಿ ನಾವು ಈ ಪೃಥ್ವಿಯನ್ನೇ ತಿರುಗುತ್ತಿದ್ದೇವೆ. ಈಗ ನಿನ್ನ ಪುತ್ರನ ನಿವೇಶನದಲ್ಲಿ ಆ ಬಾಲಕಿಯನ್ನು ನೋಡಿದ್ದೇನೆ. ರೂಪದಲ್ಲಿ ಇವಳ ಸದೃಶಳಾದ ಇನ್ನೊಬ್ಬ ಮಾನುಷಿಯಿಲ್ಲ. ಈ ಶ್ಯಾಮೆಯ ಹುಬ್ಬುಗಳ ಮಧ್ಯೆ ಸಹಜವಾದ ಉತ್ತಮವಾದ, ಪದ್ಮದ ಆಕಾರದ ಮಚ್ಚೆಯಿದ್ದುದನ್ನು ನಾನು ನೋಡಿದ್ದೆ; ಈಗ ಅದು ಕಾಣುತ್ತಿಲ್ಲ. ಚಂದ್ರಮನು ಹಗುರಾದ ಮೋಡಗಳಿಂದ ಮುಚ್ಚಿಕೊಂಡಿರುವಂತೆ, ವಿಧಾತನು ವಿಭೂತಿ ಮತ್ತು ಐಶ್ವರ್ಯಗಳ ಚಿಹ್ನೆಯೆಂದು ಅವಳ ಮುಖದ ಮೇಲೆ ಇಟ್ಟ ಮಚ್ಚೆಯು ಕೊಳೆಯಿಂದ ಆವೃತವಾಗಿದೆ. ಮೋಡ ಆವರಿಸಿದ ಅಮವಾಸ್ಯೆಯ ರಾತ್ರಿ ಚಂದ್ರನ ಹೊರ ನಕ್ಷೆ ಹೇಗೋ ಹಾಗೆ ಈಗ ಅದು ಸರಿಯಾಗಿ ಕಾಣುತ್ತಿಲ್ಲ. ಆದರೆ ಅವಳ ರೂಪವು ಸ್ವಲ್ಪವೂ ನಶಿಸಿಲ್ಲ; ಅವಳು

ಮಲಿನಳಾಗಿರಬಹುದು ಮತ್ತು ಏನೂ ಅಲಂಕಾರಗಳನ್ನು ಮಾಡಿಕೊಳ್ಳದೇ ಇರಬಹುದು. ಆದರೂ ನೋಡುವವರಿಗೆ ಅವಳು ಕಾಂಚನದಂತೆ ಬೆಳಗುತ್ತಿದ್ದಾಳೆ. ಈ ದೇಹ ಮತ್ತು ಮಚ್ಚೆಯನ್ನು ನೋಡಿಯೇ ನಾನು ನನ್ನ ಬಾಲಕಿ ದೇವಿಯನ್ನು ಹೊಗೆಯಿಂದ ಮುಚ್ಚಿಕೊಂಡ ಬೆಂಕಿಯನ್ನು ಹೇಗೋ ಹಾಗೆ ಗುರುತಿಸಿದೆ."

ಸುದೇವನ ಈ ಮಾತುಗಳನ್ನು ಕೇಳಿದ ಸುನಂದಳು ಆ ಮಚ್ಚೆಯನ್ನು ಮುಚ್ಚಿದ್ದ ಕೊಳೆಯನ್ನು ತೊಳೆಸಿದಳು. ಕೊಳೆಯನ್ನು ತೊಳೆದನಂತರ, ಮೋಡವಿಲ್ಲದ ಆಕಾಶದಲ್ಲಿ ನಿಶಾಕರನು ಹೊಳೆಯುವಂತೆ ದಮಯಂತಿಯ ಮಚ್ಚೆಯು ಕಾಣಿಸಿಕೊಂಡಿತು. ಮಚ್ಚೆಯನ್ನು ನೋಡಿದ ಸುನಂದ ಮತ್ತು ರಾಜಮಾತೆಯು ಅವಳನ್ನು ಸ್ವಲ್ಪ ಹೊತ್ತು ಅಪ್ಪಿ ಹಿಡಿದು ರೋದಿಸಿದರು. ಕಣ್ಣೀರನ್ನು ಒರೆಸಿಕೊಂಡು ರಾಜಮಾತೆಯು ಮೃದುವಾಗಿ ಹೇಳಿದಳು:

"ನೀನು ನನ್ನ ತಂಗಿಯ ಮಗಳು. ನಿನ್ನ ಮಚ್ಚೆಯು ಸೂಚಿಸುತ್ತಿದೆ. ನಾನು ಮತ್ತು ನಿನ್ನ ತಾಯಿ ದಶಾರ್ಣಾಧಿಪತಿ ಮಹಾತ್ಮ ರಾಜ ಸುದಾಮನ ಪುತ್ರಿಯರು. ಅವಳನ್ನು ಭೀಮರಾಜನಿಗೆ ಮತ್ತು ನನ್ನನ್ನು ವೀರಬಾಹುವಿಗೆ ಕೊಡಲಾಯಿತು. ನೀನು ಹುಟ್ಟಿದಾಗ ನಿನ್ನನ್ನು ನಾನು ನನ್ನ ತಂದೆಯ ಮನೆಯಲ್ಲಿ ನೋಡಿದ್ದೆ. ದಮಯಂತಿ! ಈ ಮನೆಯೂ

ಕೂಡ ನಿನ್ನ ತಂದೆಯ ಮನೆ. ಮತ್ತು ನನ್ನ ಈ ಐಶ್ವರ್ಯವು ನಿನ್ನದಿದ್ದಂತೆಯೇ.”

ಪ್ರಹೃಷ್ಟ ಮನಸ್ಕಳಾದ ದಮಯಂತಿಯು ತಾಯಿಯ ತಂಗಿಯನ್ನು ಅಭಿವಂದಿಸಿ ಈ ಮಾತುಗಳನ್ನು ಹೇಳಿದಳು:

“ನಾನು ಯಾರೆಂದು ಗುರುತಿಸಲ್ಪಡದಿದ್ದರೂ ಇಲ್ಲಿ ನಿನ್ನ ರಕ್ಷಣೆಯಲ್ಲಿ ನನ್ನ ಎಲ್ಲ ಬಯಕೆಗಳೂ ಪೂರೈಸಲ್ಪಟ್ಟು ನಾನು ಸದಾ ಸುಖವಾಗಿಯೇ ಇದ್ದೆ. ಇನ್ನು ಮುಂದೆಯೂ ಇಲ್ಲಿ ನನ್ನ ವಾಸವು ಇನ್ನೂ ಸುಖಕರವಾಗಿರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮಾತಾ! ಆದರೆ ನನಗೆ ಹೋಗಲು ಅನುಮತಿಯನ್ನು ಕೊಡಬೇಕು. ನನ್ನ ಇಬ್ಬರು ಬಾಲಕ ಮಕ್ಕಳು ಅಲ್ಲಿ ವಾಸಿಸುತ್ತಿದ್ದಾರೆ. ಪಿತೃ ವಿಹೀನರಾಗಿ ಶೋಕಾರ್ತರಾದ ಅವರು ನಾನೂ ಇಲ್ಲದೇ ಹೇಗಿದ್ದಾರೋ! ನಾನು ವಿದರ್ಭಕ್ಕೆ ಹೋಗಲು ಬಯಸುತ್ತೇನೆ. ಇನ್ನೂ ನನಗೆ ಪ್ರಿಯವಾದುದ್ದನ್ನು ಮಾಡಬೇಕೆಂದೆನಿಸಿದರೆ, ಈಗಲೇ ಒಂದು ಯಾನವನ್ನು ತರಿಸಿಕೊಡು.”

ಅವಳ ತಾಯಿಯ ಭಗಿನಿ ರಾಜಮಾತೆಯು ಹರ್ಷದಿಂದ ಖಂಡಿತ ಹಾಗೆಯೇ ಆಗಲಿ ಎಂದು ಪುತ್ರನ ಅನುಮತಿಯನ್ನು ಪಡೆದು ಪುರುಷರಿಂದ ಹೊರಲ್ಪಟ್ಟ, ಸಾಕಷ್ಟು ಅನ್ನ-ಪಾನ-ಸರಕುಗಳಿಂದ ತುಂಬಲ್ಪಟ್ಟ ಸುಂದರ ಪಲ್ಲಕ್ಕಿಯಲ್ಲಿ ದೊಡ್ಡ ದಂಡಿನೊಡನೆ ಅವಳನ್ನು

ಕಳುಹಿಸಿಕೊಟ್ಟಳು. ಹೀಗೆ ಆ ಶುಭೆಯು ಅಲ್ಪ ಸಮಯದಲ್ಲಿಯೇ ವಿದರ್ಭಕ್ಕೆ ಆಗಮಿಸಿದಳು. ಅವಳ ಬಂಧು ಜನರೆಲ್ಲರೂ ಪ್ರಹೃಷ್ಟರಾಗಿ ಅವಳನ್ನು ಸ್ವಾಗತಿಸಿದರು. ಮಕ್ಕಳು ಮತ್ತು ಮಾತಾ-ಪಿತರನ್ನೂ ಸೇರಿ ಎಲ್ಲ ಬಂಧುಗಳು ಮತ್ತು ಸಖಿಜನರು ಕುಶಲದಿಂದಿದ್ದಾರೆಂದು ನೋಡಿ ಯಶಸ್ವಿನಿ ಕಲ್ಯಾಣಿ ದಮಯಂತಿಯು ವಿಧಿವತ್ತಾಗಿ ಬ್ರಾಹ್ಮಣ-ದೇವತೆಗಳ ಪೂಜೆಗೈದಳು. ಮಗಳನ್ನು ನೋಡಿ ಹರ್ಷಿತನಾದ ಪಾರ್ಥಿವನು ಸುದೇವನಿಗೆ ಗ್ರಾಮ, ದಕ್ಷಿಣೆ ಮತ್ತು ಸಹಸ್ರ ಗೋವುಗಳನ್ನಿತ್ತು ತೃಪ್ತಿಪಡಿಸಿದನು. ಅಲ್ಲಿ ತಂದೆಯ ಮನೆಯಲ್ಲಿ ರಾತ್ರಿಯನ್ನು ಕಳೆದು ವಿಶ್ರಾಂತಿಹೊಂದಿದ ಭಾಮಿನಿಯು ತನ್ನ ಮಾತೆಯೊಡನೆ ಈ ಮಾತುಗಳನ್ನಾಡಿದಳು.

## ನಲಾನ್ವೇಷಣೆ

ದಮಯಂತಿಯು ಹೇಳಿದಳು:

> “ಮಾತಾ! ನಾನು ಸತ್ಯವನ್ನು ಹೇಳುತ್ತಿದ್ದೇನೆ. ನನ್ನನ್ನು ಜೀವಂತ ನೋಡಬೇಕೆಂದು ನಿನ್ನ ಇಚ್ಛೆ ಇದ್ದರೆ ಆ ನರವೀರ ನಲನನ್ನು ಇಲ್ಲಿಗೆ ಕರೆತರೆಸು.”

ದಮಯಂತಿಯ ಈ ಮಾತುಗಳನ್ನು ಕೇಳಿ ಬಹುದುಃಖಿತಳಾಗಿ ಕಣ್ಣೀರಿಡುತ್ತಿದ್ದ ಆ ದೇವಿಗೆ ಯಾವುದೇ ರೀತಿಯ ಉತ್ತರವನ್ನು ಕೊಡಲೂ ಆಗಲಿಲ್ಲ. ಈ ಅವಸ್ಥೆಯನ್ನು ನೋಡಿ

ಅಂತಃಪುರದಲ್ಲಿದ್ದವರೆಲ್ಲರೂ "ಹಾ! ಹಾ!" ಎಂದು ಅತೀವ ದುಃಖದಿಂದ ರೋದಿಸಿದರು. ಆಗ ಮಹಾರಾಣಿಯು ಭೀಮನಿಗೆ ಹೇಳಿದಳು:

> "ನಿನ್ನ ಸುತೆ ದಮಯಂತಿಯು ತನ್ನ ಪತಿಯನ್ನು ಕುರಿತು ಶೋಕಿಸುತ್ತಿದ್ದಾಳೆ. ರಾಜ! ಸ್ವಲ್ಪವೂ ಲಜ್ಜಿಸದೇ ಅವಳು ಸ್ವತಃ ನನ್ನಲ್ಲಿ ಈ ಮಾತನ್ನು ಹೇಳಿಕೊಂಡಿದ್ದಾಳೆ. ಪುಣ್ಯಶ್ಲೋಕನನ್ನು ಹುಡುಕಲು ನಿನ್ನ ಜನರನ್ನು ಕಳುಹಿಸಿಕೊಡು."

ಅವಳಿಂದ ಪ್ರಚೋದಿತನಾದ ರಾಜನು ನಲನನ್ನು ಹುಡುಕಲು ತನ್ನ ಕೆಳಗೆ ಕೆಲಸ ಮಾಡುತ್ತಿದ್ದ ಬ್ರಾಹ್ಮಣರನ್ನು ಎಲ್ಲ ದಿಕ್ಕುಗಳಿಗೂ ಕಳುಹಿಸಿದನು. ವಿದರ್ಭಾಧಿಪತಿಯ ಆದೇಶದಂತೆ ಆ ಬ್ರಾಹ್ಮಣರ್ಷಭರು ದಮಯಂತಿಯನ್ನು ಕಂಡು

> "ನಾವು ಹೊರಡುತ್ತಿದ್ದೇವೆ!"

ಎಂದರು. ಭೈಮಿಯು ಅವರನ್ನುದ್ದೇಶಿಸಿ ಹೇಳಿದಳು:

> "ಎಲ್ಲಾ ರಾಷ್ಟ್ರಗಳಲ್ಲಿ ಮತ್ತು ಎಲ್ಲೆಲ್ಲಿ ಜನಸಮೂಹಗಳಿರುತ್ತವೆಯೋ ಅಲ್ಲಲ್ಲಿ ಈ ಪ್ರಶ್ನೆಯನ್ನು ಪುನಃ ಪುನಃ ವಾಚಿಸಿ:
>
> > "ಪ್ರಿಯ! ವಿಪಿನದಲ್ಲಿ ಅನುರಕ್ತಳಾಗಿ ಮಲಗಿದ್ದ ನಿನ್ನ ಈ ಪ್ರಿಯೆಯ ಅರ್ಧ ವಸ್ತ್ರವನ್ನು ಕತ್ತರಿಸಿ ಬಿಟ್ಟು

> ಹೊರಟು ಹೋದ ನೀನು ಎಲ್ಲಿದ್ದೀಯೆ? ನೀನು ಅವಳಿಗೆ ಎಲ್ಲಿಗೆ ಹೋಗಲು ತೋರಿಸಿದ್ದೆಯೋ ಅಲ್ಲಿಯೇ ಮುಗ್ಧಳಾದ ಅವಳು ಅರ್ಧವಸ್ತ್ರವನ್ನೇ ಧರಿಸಿ ಶೋಕಸಂತಪ್ತಳಾಗಿ ನಿನ್ನನ್ನು ಪ್ರತೀಕ್ಷಿಸುತ್ತಿದ್ದಾಳೆ. ನಿನ್ನ ಶೋಕದಿಂದ ಸತತವಾಗಿ ರೋದಿಸುತ್ತಿರುವ ಅವಳಿಗೆ ಪ್ರೀತಿಯುತ ಮಾತುಗಳನ್ನಿತ್ತು ಅನುಗ್ರಹಿಸು.”

ವಾಯುವಿನಿಂದ ಹಬ್ಬಿಸಿದ ಪಾವಕನು ಹೇಗೆ ವನವನ್ನಿಡೀ ದಹಿಸುವನೋ ಹಾಗೆ ಎಲ್ಲೆಡೆಯೂ ಈ ವಾಖ್ಯವನ್ನು ಇದೇರೀತಿ ವಾಚಿಸಿ ನನ್ನ ಮೇಲೆ ಕೃಪೆ ಮಾಡಿ.

> “ಪತಿಯು ಯಾವಾಗಲೂ ಪತ್ನಿಯ ಸಹಾಯ ಮತ್ತು ರಕ್ಷಣೆ ಮಾಡಬೇಕಲ್ಲವೇ? ಆದರೆ ಧರ್ಮಜ್ಞನಾದ ನೀನು ಏಕೆ ಈ ಎರಡನ್ನೂ ತಿರಸ್ಕರಿಸಿದೆ? ನನ್ನ ಭಾಗ್ಯ ಕಳೆದು ಹೋದುದರಿಂದಲೇ ಸದಾ ಖ್ಯಾತನೂ. ಪ್ರಾಜ್ಞನೂ, ಕುಲೀನನೂ, ಅನುಕಂಪಿತನೂ ಆಗಿದ್ದ ನೀನು ಈಗ ನಿರನುಕ್ರೋಷನಾಗಿದ್ದೀಯೆ ಎಂದು ಶಂಕಿಸುತ್ತೇನೆ. ನನ್ನ ಮೇಲೆ ದಯೆತೋರು! ದಯೆಯೇ ಪರಮ ಧರ್ಮವೆಂದು ನಾನು ನಿನ್ನಿಂದಲೇ ಕೇಳಿದ್ದೇನೆ.”

> ನಿಮ್ಮ ಈ ಮಾತುಗಳಿಗೆ ಯಾರಾದರೂ ಪ್ರತಿಯಾಗಿ ಮಾತನಾಡಿದರೆ, ಆ ಮನುಷ್ಯನ ಕುರಿತು ಎಲ್ಲವನ್ನೂ - ಯಾರು, ಎಲ್ಲಿ ಏನು ಮಾಡುತ್ತಾನೆ - ತಿಳಿಯಿರಿ. ಈ ಮಾತುಗಳನ್ನು ಕೇಳಿ ಪ್ರತಿಯಾಗಿ ಯಾರಾದರೂ ಹೇಳಿದರೆ ತಕ್ಷಣವೇ ಅವರು ಹೇಳಿದ್ದುದನ್ನು ನನಗೆ ಬಂದು ತಿಳಿಸಿ. ಹಿಂದಿರುಗುವಾಗ ತಡಮಾಡಬಾರದು. ಮತ್ತು ನೀವು ಭೀಮನ ಹೇಳಿಕೆಯಂತೆ ಹೊರಗೆ ತಿರುಗುತ್ತಿದ್ದೀರಿ ಎಂದು ಅವನಿಗೆ ತಿಳಿಯಬಾರದು. ಅವನು ಶ್ರೀಮಂತನಿರಲಿ ಅಥವಾ ಬಡವನಿರಲಿ ಅಥವಾ ಐಶ್ವರ್ಯದ ಹಸಿವೆಯಿಂದಿರಲಿ, ಅವನ ಉದ್ದೇಶಗಳನ್ನು ತಿಳಿಯಿರಿ."

ಇದನ್ನು ಕೇಳಿ ಹೊರಟ ಬ್ರಾಹ್ಮಣರು ವ್ಯಸನಿ ರಾಜ ನಲನನ್ನು ಅರಸುತ್ತಾ ಸರ್ವದಿಕ್ಕುಗಳಲ್ಲಿ ಹೊರಟರು. ನಲನನ್ನು ಅನ್ವೇಶಿಸುತ್ತಾ ಆ ದ್ವಿಜರು ಪುರ, ರಾಷ್ಟ್ರ, ಗ್ರಾಮ, ಗೋಶಾಲೆ, ಆಶ್ರಮ, ಎಲ್ಲಾ ಕಡೆ ಹೋದರು. ವಿಪ್ರರು ಹೋದಲ್ಲೆಲ್ಲಾ ದಮಯಂತಿಯು ಕೊಟ್ಟಿದ್ದ ವಾಖ್ಯವನ್ನು ಎಲ್ಲರಿಗೂ ಕೇಳುವಂತೆ ಹೇಳಿದರು.

## <u>ದಮಯಂತೀ ಪುನಃಸ್ವಯಂವರ</u>

ದೀರ್ಘ ಕಾಲದ ನಂತರ ಪರ್ಣಾದ ಎಂಬ ಹೆಸರಿನ ದ್ವಿಜನು ನಗರಕ್ಕೆ ಹಿಂದಿರುಗಿ ಭೈಮಿಯಲ್ಲಿ ಈ ವಚನಗಳನ್ನು ಹೇಳಿದನು:

“ದಮಯಂತಿ! ದಿನ-ರಾತ್ರಿ ನೈಷಧನನ್ನು ಅರಸುತ್ತಾ ಅಯೋಧ್ಯಾ ನಗರಿಗೆ ಹೋಗಿ ಭಾಂಗಸ್ವರಿಯ ಉಪಸ್ಥಿತಿಯಲ್ಲಿದ್ದೆ. ಅಲ್ಲಿ ನೀನು ಇತ್ತ ವಾಕ್ಯವನ್ನು ಯಥೋಕ್ತವಾಗಿ ಮಹಾಭಾಗ ಋತುಪರ್ಣ ಮತ್ತು ಮಹಾಜನರಲ್ಲಿ ಹೇಳಿದೆನು. ಅದನ್ನು ಕೇಳಿದ ನರಾಧಿಪ ಋತುಪರ್ಣನು ಏನನ್ನೂ ಹೇಳಲಿಲ್ಲ. ಪರಿಷತ್ತಿನಲ್ಲಿದ್ದ ಇನ್ನು ಯಾರೂ ನಾನು ಹೇಳಿದುದಕ್ಕೆ ಉತ್ತರಿಸಲಿಲ್ಲ. ರಾಜನಿಂದ ಅನುಮತಿಯನ್ನು ಪಡೆದ ನಾನು ಒಬ್ಬನೇ ಇರುವಾಗ ಋತುಪರ್ಣನ ಪುರುಷನೋರ್ವನು-ಬಾಹುಕ ಎಂಬ ಹೆಸರು ಅವನದಾಗಿತ್ತು-ನನ್ನಲ್ಲಿ ಮಾತನಾಡಿದನು. ನರೇಂದ್ರನ ಸೂತನಾಗಿದ್ದ ಅವನು ಗಿಡ್ಡ ಕೈಕಾಲುಗಳುಳ್ಳವನಾಗಿ ವಿರೂಪಿಯಾಗಿದ್ದನು. ಅವನು ಶೀಘ್ರಯಾನದಲ್ಲಿ ಸುಕುಶಲನೂ, ಅಡುಗೆಯಲ್ಲಿ ಪರಿಣಿತನೂ ಆಗಿದ್ದನು. ಅವನು ಬಹಳಷ್ಟು ನಿಟ್ಟುಸಿರು ಬಿಡುತ್ತಿದ್ದ ಮತ್ತು ಪುನಃ ಪುನಃ ರೋದಿಸುತ್ತಿದ್ದ. ನನ್ನ ಕುಶಲವನ್ನು ಕೇಳಿದ ನಂತರದಲ್ಲಿ ಅವನು ನನಗೆ ಹೇಳಿದನು:

> “ಕುಲಸ್ತ್ರೀಯರು ಕಷ್ಟಗಳು ಬಂದರೂ ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಾರೆ. ನಿಜವಾಗಿಯೂ ಅವರು ಜಿತಸ್ವರ್ಗಿಗಳು ಎನ್ನುವುದರಲ್ಲಿ ಸಂಶಯವೇ ಇಲ್ಲ. ಪತಿಯು ಇಲ್ಲದಿದ್ದರೂ ಅವರು ಎಂದೂ

ಕೃದ್ಧರಾಗುವುದಿಲ್ಲ. ಸುಖದಿಂದ ಪ್ರರಿಭ್ರಷ್ಠನಾಗಿ ವಿಷಮ ಸ್ಥಿತಿಯಲ್ಲಿದ್ದ ಮೂಢನು ಅವಳನ್ನು ಪರಿತ್ಯಜಿಸಿರಬಹುದು. ಆದರೆ ಅದಕ್ಕಾಗಿ ಸಿಟ್ಟಿಗೇಳುವುದು ಸರಿಯಲ್ಲ. ಪಕ್ಷಿಗಳಿಂದ ವಸ್ತ್ರಗಳನ್ನು ಅಪಹರಿಸಲ್ಪಟ್ಟು ಅವನ ಮನಸ್ಸು ಸುಡುತ್ತಿರುವಾಗ ಅವನು ಬಿಟ್ಟು ಹೋಗಿದ್ದುದಕ್ಕೆ ಆ ಸುಂದರಿಯು ಸಿಟ್ಟಾಗುವುದು ಸರಿಯಲ್ಲ. ಸತ್ಕೃತನಾಗಿರಲಿ ಅಥವಾ ಅಸತ್ಕೃತನಾಗಿರಲಿ, ತನ್ನ ಪತಿಯು ರಾಜ್ಯಭ್ರಷ್ಟನಾಗಿ, ಸಂಪತ್ತನ್ನು ಕಳೆದುಕೊಂಡುದ್ದುದಕ್ಕೆ ಆ ಸುಂದರಿಯು ಕೋಪಿಸುವುದು ಸರಿಯಲ್ಲ."

ಅವನ ಆ ಮಾತುಗಳನ್ನು ಕೇಳಿ ತಡಮಾಡದೇ ಇಲ್ಲಿಗೆ ಬಂದಿದ್ದೇನೆ. ಇವುಗಳನ್ನು ಕೇಳಿದ ನೀನೇ ರಾಜನಿಗೆ ನಿವೇದಿಸು."

ಪರ್ಣಾದನ ಮಾತುಗಳನ್ನು ಕೇಳಿ ಕಣ್ಣುಗಳಲ್ಲಿ ಕಣ್ಣೀರನ್ನು ತುಂಬಿಕೊಂಡ ದಮಯಂತಿಯು ತಾಯಿಯ ಬಳಿಹೋಗಿ ಏಕಾಂತದಲ್ಲಿ ಹೇಳಿದಳು:

"ಅಮ್ಮ! ಈ ಮಾತು ರಾಜ ಭೀಮನಿಗೆ ಯಾವರೀತಿಯಲ್ಲೂ ತಿಳಿಯಬಾರದು! ನಿನ್ನ ಸನ್ನಿಧಿಯಲ್ಲಿ ದ್ವಿಜಸತ್ತಮ ಸುದೇವನಿಗೆ ಸೂಚನೆಗಳನ್ನು ಕೊಡುತ್ತೇನೆ. ನೀನು ನನಗೆ ಪ್ರಿಯವಾದುದನ್ನು ಮಾಡಲು ಇಚ್ಛಿಸಿದರೆ, ನನ್ನ ಈ ಉದ್ದೇಶವು ನೃಪತಿ

ಭೀಮನಿಗೆ ತಿಳಿಯದಂತೆ ನೋಡಿಕೊಳ್ಳಬೇಕು. ಹೇಗೆ ಸುದೇವನು ನನ್ನನ್ನು ಬಂಧುಗಳೊಡನೆ ಕೂಡಿಸಿದನೋ ಅದೇ ಮಂಗಲಕಾರಕ ಸುದೇವನು ಈಗಲೇ ಅಯೋಧ್ಯಾ ನಗರಿಗೆ ಹೋಗಿ ನಲನೊಂದಿಗೆ ನನ್ನ ಸಮಾಗಮವಾಗುವಂತೆ ಮಾಡಲಿ.”

ದ್ವಿಜಸತ್ತಮ ಪರ್ಣಾದನು ವಿಶ್ರಾಂತಿಯನ್ನು ಪಡೆದ ನಂತರ ಭಾಮಿನಿ ವೈದರ್ಭಿಯು ಅವನನ್ನು ಅತೀವ ಧನದಿಂದ ಅರ್ಚಿಸಿದಳು.

“ವಿಪ್ರ! ನಲನು ಇಲ್ಲಿಗೆ ಬಂದಮೇಲೆ ಇನ್ನೂ ಹೆಚ್ಚಿನ ಸಂಪತ್ತನ್ನು ನಿನಗೆ ಕೊಡುತ್ತೇನೆ. ಯಾಕೆಂದರೆ ಬೇರೆ ಯಾರೂ ಮಾಡಲಿಕ್ಕಾಗದೇ ಇರುವುದನ್ನು ನೀನು ನನಗೆ ಮಾಡಿದ್ದೀಯೆ. ಶೀಘ್ರದಲ್ಲಿಯೇ ನಾನು ನನ್ನ ಪತಿಯನ್ನು ಸೇರುತ್ತೇನೆ.”

ಈ ರೀತಿ ಕೇಳಿ ಕೃತಾರ್ಥನಾದ ಆ ಮಹಾಮನಸ್ಕನು ಸುಮಂಗಲ ಆಶೀರ್ವಾದಗಳಿಂದ ಅವಳನ್ನು ಅರ್ಚಿಸಿ ತನ್ನ ಮನೆಗೆ ತೆರಳಿದನು. ನಂತರ ದಮಯಂತಿಯು ಸುದೇವನನ್ನು ಪುನಃ ಕರೆಯಿಸಿ ತಾಯಿಯ ಸನ್ನಿಧಿಯಲ್ಲಿ ಶೋಕಸಮನ್ವಿತಳಾಗಿ ಹೇಳಿದಳು:

“ಸುದೇವ! ಅಯೋಧ್ಯಾವಾಸಿ ನೃಪ ಋತುಪರ್ಣನಲ್ಲಿ ಹೋಗಿ ಹೇಳು: “ಭೈಮಿ ದಮಯಂತಿಯು ಅನ್ಯ ಪತಿಯನ್ನು ಬಯಸಿ ಪುನಃ ಇಂದು ಸ್ವಯಂವರವನ್ನು ಇಟ್ಟುಕೊಂಡಿದ್ದಾಳೆ. ಎಲ್ಲ ರಾಜರೂ ರಾಜಪುತ್ರರೂ ಅಲ್ಲಿಗೆ ಹೋಗುತ್ತಿದ್ದಾರೆ. ಕಾಲ

> ಗಣಿತದ ಪ್ರಕಾರ ಅದು ನಾಳೆಯೇ ನಡೆಯುತ್ತಿದೆ. ಸಾಧ್ಯವಿದ್ದರೆ ಶೀಘ್ರದಲ್ಲಿಯೇ ಹೊರಡು. ಸೂರ್ಯೋದಯದಲ್ಲಿಯೇ ಅವಳು ಎರಡನೆಯ ಪತಿಯನ್ನು ವರಿಸುತ್ತಾಳೆ. ಆ ವೀರ ನಲನು ಜೀವಂತನಿದ್ದಾನೋ ಮೃತನಾಗಿದ್ದಾನೋ ತಿಳಿಯದು.””

ನಂತರ ಬ್ರಾಹ್ಮಣ ಸುದೇವನು ಮಹಾರಾಜ ಋತುಪರ್ಣನಲ್ಲಿಗೆ ಹೋಗಿ ಅವಳು ಹೇಳಿಕೊಟ್ಟ ಹಾಗೆಯೇ ಹೇಳಿದನು.

## ವಿದರ್ಭಕ್ಕೆ ಋತುಪರ್ಣನ ಪ್ರಯಾಣ

ಸುದೇವನ ಮಾತುಗಳನ್ನು ಕೇಳಿದ ನರಾಧಿಪ ಋತುಪರ್ಣನು ಸಾಂತ್ವನ ಮತ್ತು ಶ್ಲಾಘನೀಯ ಮಾತುಗಳಿಂದ ಬಾಹುಕನಿಗೆ ಹೇಳಿದನು:

> “ಬಾಹುಕ! ದಮಯಂತಿಯ ಸ್ವಯಂವರಕ್ಕೆ ವಿದರ್ಭಕ್ಕೆ ಹೋಗಲು ಇಚ್ಛಿಸುತ್ತೇನೆ. ನೀನು ಅಶ್ವ ತತ್ವಜ್ಞ. ಒಂದೇ ದಿನದಲ್ಲಿ ಅಲ್ಲಿಗೆ ಹೋಗಲಿಕ್ಕಾಗುವುದಾದರೆ ಹೇಳು.”

ರಾಜನ ಈ ಮಾತುಗಳನ್ನು ಕೇಳಿದ ನಲನ ಮನಸ್ಸು ದುಃಖದಿಂದ ಮುದುಡಿಕೊಂಡಿತು ಮತ್ತು ಆ ಮಹಾಮನಸ್ಕನು ಚಿಂತಿಸತೊಡಗಿದನು:

> “ದಮಯಂತಿಯು ಈ ರೀತಿ ಮಾಡುತ್ತಿದ್ದಾಳೆ ಎಂದರೆ ಅವಳು ದುಃಖದಿಂದ ಮೋಹಿತಳಾಗಿರಬಹುದು ಅಥವಾ ಇದು ನನಗಾಗಿಯೇ ಅವಳು ಯೋಚಿಸಿರುವ ಒಂದು ಮಹಾ ಉಪಾಯವಿರಬಹುದು. ಕ್ಷುದ್ರ ಪಾಪಿ ಬುದ್ಧಿಯಿಲ್ಲದ ನಾನು

ಅವಳಿಗೆ ಮೋಸ ಮಾಡಿದ್ದೇನೆ. ಆದುದರಿಂದಲೇ ಆ ತಪಸ್ವಿನಿ ವೈದರ್ಭಿಯು ಈ ಕ್ರೂರ ಕೃತ್ಯವನ್ನು ಮಾಡಲು ಬಯಸಿರಬಹುದು. ಈ ಲೋಕದಲ್ಲಿ ಸ್ತ್ರೀ ಸ್ವಭಾವವು ಅಚಲ; ಆದರೆ ನನ್ನ ದೋಷವೂ ದಾರುಣವಾಗಿದೆ. ಇದೆಲ್ಲವೂ ಇರಲಿ. ಆದರೂ ಈ ತನುಮದ್ಯಮಳು, ಸೌಹಾರ್ದತೆಯನ್ನು ಮರೆತು, ನನ್ನ ಮೇಲಿನ ಶೋಕದಿಂದ ನಿರಾಶಳಾಗಿ, ಇಂತಹ ಕೆಲಸವನ್ನು ಮಾಡಬಹುದೇ? ಇಲ್ಲ ಅವಳು ಈ ರೀತಿ ಮಾಡುವವಳಲ್ಲ. ಅದರಲ್ಲೂ ವಿಶೇಷವಾಗಿ ಅವಳ ಮಕ್ಕಳಿದ್ದಾರೆ. ಆದ್ದರಿಂದ ನಾನೇ ಅಲ್ಲಿಗೆ ಹೋಗಿ ನಿಶ್ಚಯವಾಗಿ ತಿಳಿದುಕೊಳ್ಳುತ್ತೇನೆ. ನನಗೋಸ್ಕರ ಋತುಪರ್ಣನ ಇಚ್ಛೆಯಂತೆ ಮಾಡುತ್ತೇನೆ.”

ಈ ರೀತಿ ಮನಸ್ಸಿನಲ್ಲಿ ನಿಶ್ಚಯಿಸಿ, ದೀನಮನಸ್ಕ ಬಾಹುಕನು ಅಂಜಲೀಬದ್ಧನಾಗಿ ನರಾಧಿಪ ಋತುಪರ್ಣನನ್ನುದ್ದೇಶಿಸಿ ಹೇಳಿದನು:

“ನರಾಧಿಪ! ನಿನಗೆ ನನ್ನ ನಿಜವಾದ ಮಾತುಗಳನ್ನು ಹೇಳುವುದಾದರೆ ಒಂದೇ ದಿನದಲ್ಲಿ ವಿದರ್ಭನಗರಿಯನ್ನು ತಲುಪಬಹುದು.”

ನೃಪ ಭಾಂಗಸ್ವರಿಯ ಆಜ್ಞೆಯಂತೆ ಬಾಹುಕನು ಅಶ್ವಶಾಲೆಗೆ ಹೋಗಿ ಅಶ್ವಗಳನ್ನು ಪರೀಕ್ಷಿಸಿದನು. ಋತುಪರ್ಣನು ಬಹಳಷ್ಟು ಅವಸರಮಾಡಲು, ಬಾಹುಕನು ನಾಲ್ಕು ತೆಳ್ಳಗಿನ, ಮಾರ್ಗದಲ್ಲಿ

ಸಮರ್ಥ, ತೇಜೋಬಲಸಮಾಯುಕ್ತ, ಕುಲಶೀಲಸಮನ್ವಿತ ವಾಯುವೇಗಿ ಸಿಂಧುಜ ಅಶ್ವಗಳನ್ನು ಆರಿಸಿದನು. ವಿಶಾಲ ಹೊರಳೆ ಮತ್ತು ಬಾಯಿಗಳನ್ನು ಹೊಂದಿದ್ದ ಆ ಅಶ್ವಗಳು ಹೀನ ಲಕ್ಷಣಗಳಿಂದ ವರ್ಜಿತವಾಗಿದ್ದವು. ಹತ್ತು ಕುರುಳುಗಳಿಂದ ಶುದ್ಧವಾಗಿದ್ದವು. ಅವುಗಳನ್ನು ನೋಡಿದ ರಾಜನು ಸ್ವಲ್ಪ ಸಿಟ್ಟಿಗೆದ್ದು ಹೇಳಿದನು:

> "ಇದೇನು ನೀನು ಮಾಡುತ್ತಿರುವೆ? ನನ್ನನ್ನು ಮೋಸಗೊಳಿಸಲಿಕ್ಕೆಂದೇ ನೀನು ಈ ರೀತಿ ಮಾಡುತ್ತಿರಬಹುದು. ಈ ಅಲ್ಪಬಲಪ್ರಾಣ ಹಯಗಳು ನನ್ನ ರಥವನ್ನು ಎಳೆಯಬಲ್ಲವೇ? ಹೀಗೆ ಕಾಣುತ್ತಿರುವ ಈ ತುರಂಗಗಳು ಹೇಗೆ ಅ ಮಹಾ ದೂರವನ್ನು ಗಮಿಸಬಲ್ಲವು?"

ಬಾಹುಕನು ಹೇಳಿದನು:

> "ಈ ಹಯಗಳು ವಿದರ್ಭಕ್ಕೆ ಹೋಗುವವು ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ರಾಜನ್! ಬೇಕೆಂದರೆ ನಿನಗಿಷ್ಟವಾದ ಯಾವ ಕುದುರೆಗಳನ್ನು ಕಟ್ಟಬೇಕೆಂದು ಹೇಳು. ಅವುಗಳನ್ನೇ ಕಟ್ಟುತ್ತೇನೆ."

ಋತುಪರ್ಣನು ಹೇಳಿದನು:

> "ಬಾಹುಕ! ನೀನೇ ಹಯ ತತ್ವಜ್ಞ ಮತ್ತು ಕುಶಲ. ಇವುಗಳು ಆಗುತ್ತವೆ ಎಂದು ನೀನೆಂದರೆ ಬೇಗ ಅವುಗಳನ್ನು ಕಟ್ಟು."

ನಂತರ ನಲನು ಕುಶಲತೆಯಿಂದ ಆ ನಾಲ್ಕು ಕುಲಶೀಲಸಮನ್ವಿತ ಅಶ್ವಗಳನ್ನು ರಥಕ್ಕೆ ಕಟ್ಟಿದನು. ರಾಜನು ತಯಾರಿದ್ದ ರಥವನ್ನು ಬೇಗನೇ ಏರಿದನು ಮತ್ತು ಆ ಉತ್ತಮ ಹಯಗಳು ಭೂಮಿಯಮೇಲೆ ಕಾಲುಗಳನ್ನೂರಿದವು. ನರವರ ಶ್ರೀಮಾನ್ ನಲರಾಜನು ಸೂತ ವಾರ್ಷ್ಣೇಯನನ್ನು ರಥದಲ್ಲಿ ಕೂರಿಸಿಕೊಂಡು ತೇಜೋಬಲಸಮನ್ವಿತ ಆ ಅಶ್ವಗಳನ್ನು ಸಂತವಿಸಿ, ಹಗ್ಗಗಳಿಂದ ಅವುಗಳನ್ನು ನಿಯಂತ್ರಿಸುತ್ತಾ ಹೊರಟನು. ಬಾಹುಕನಿಂದ ವಿಧಿವತ್ತಾಗಿ ಚೋದಿತಗೊಂಡ ಆ ಉತ್ತಮ ಹಯಗಳು ರಥದಲ್ಲಿ ಕುಳಿತವರನ್ನು ಮೂರ್ಛೆಗೊಳಿಸುವಂತೆ ಆಕಾಶದಲ್ಲಿ ಹಾರಿದವು. ವಾಯುವೇಗದಲ್ಲಿ ಓಡುತ್ತಿದ್ದ ಆ ಅಶ್ವಗಳನ್ನು ನೋಡಿದ ಅಯೋಧ್ಯಾಧಿಪತಿ ಧೀಮಂತನು ಪರಮ ವಿಸ್ಮಿತನಾದನು. ರಥಘೋಷವನ್ನು ಕೇಳಿ ಮತ್ತು ಹಯಗಳ ನಿಯಂತ್ರಣವನ್ನು ನೋಡಿ ವಾರ್ಷ್ಣೇಯನು ಬಾಹುಕನ ಹಯವಿದ್ಯೆಯ ಕುರಿತು ಯೋಚಿಸತೊಡಗಿದನು.

> "ಇವನು ದೇವರಾಜನ ಸಾರಥಿ ಮಾತಲಿಯಿರಬಹುದೇ? ಯಾಕೆಂದರೆ ಈ ವೀರ ಬಾಹುಕನಲ್ಲಿ ಅದೇ ಮಾಹಾ ಲಕ್ಷಣಗಳು ಕಾಣುತ್ತಿವೆ. ಅಥವಾ ಇವನು ಅಶ್ವಗಳ ಕುಲತತ್ವವನ್ನು ಅರಿತ, ಈಗ ಇಷ್ಟು ಕುರೂಪಿಯಾದ ಮನುಷ್ಯನ ದೇಹವನ್ನು ಹೊಂದಿರುವ ಶಾಲಿಹೋತ್ರನೇ? ಅಥವಾ ಇವನು ಪರಪುರಂಜಯ ರಾಜ ನಲನಾಗಿರಬಹುದೇ? ಆ ನೃಪತಿಯು ಇಲ್ಲಿಗೆ

ಬಂದಿರಬಹುದೇ?"

ಎಂದು ಅವನು ಯೋಚಿಸಿದನು.

"ನಲನಿಗೆ ತಿಳಿದಿದ್ದ ವಿದ್ಯೆ ಬಾಹುಕನಿಗೂ ತಿಳಿದಂತಿದೆ. ಬಾಹುಕ ಮತ್ತು ನಲನ ಜ್ಞಾನವು ಸರಿಸಮನಾಗಿ ತೋರುತ್ತಿದೆ. ಇವನ ಮತ್ತು ನಲನ ವಯಸ್ಸು ಕೂಡ ಒಂದೇ ಇರಬಹುದು ಎಂದು ನನಗನ್ನಿಸುತ್ತದೆ. ಇವನು ಮಹಾವೀರ ನಲನಲ್ಲ; ಆದರೂ ಇವನಲ್ಲಿ ಆ ವಿದ್ವತ್ತು ಇದೆ. ಶಾಸ್ತ್ರಗಳಲ್ಲಿ ಹೇಳಿರುವಂತೆ ಮಹಾತ್ಮರು ದೈವ ವಿಧಿಗಳೆರಡರಿಂದಲೂ ಕೂಡಿ ಈ ಪೃಥಿವಿಯನ್ನು ತಿರುಗಿಸುತ್ತಿರುತ್ತಾರೆ ಎಂದು ಕೇಳಿದ್ದೇನೆ. ಆದರೂ ಈ ಅಕಾರ ವಿರೂಪಗಳ ಕುರಿತು ಸಂದಿಗ್ಧನಾಗಿದ್ದೇನೆ. ನನ್ನ ಮತಕ್ಕೆ ಪ್ರಮಾಣಗಳಿಲ್ಲ ಎಂದನ್ನಿಸುತ್ತದೆ. ವಯಸ್ಸಿನಲ್ಲಿ ಅವನ ಸರಿಸಮಾನನಾಗಿದ್ದಾನೆ ಆದರೆ ರೂಪದಲ್ಲಿ ವಿಪರ್ಯನಾಗಿದ್ದಾನೆ. ಆದರೂ ಕೊನೆಯಲ್ಲಿ ಬಾಹುಕನೇ ಸರ್ವಗುಣಯುಕ್ತ ನಲನೆಂದು ತೀರ್ಮಾನಿಸುತ್ತೇನೆ."

ಈ ರೀತಿ ಮಹಾರಾಜ ಪುಣ್ಯಶ್ಲೋಕನ ಸಾರಥಿ ವಾರ್ಷ್ಣೇಯನು ಬಹಳಷ್ಟು ವಿಚಾರಿಸಿ ತನ್ನ ಹೃದಯದಲ್ಲಿ ಚಿಂತಿಸತೊಡಗಿದನು. ಆದರೆ ರಾಜೇಂದ್ರ ಋತುಪರ್ಣನು ಬಾಹುಕನ ಹಯಜ್ಞಾನದ ಕುರಿತು ಯೋಚಿಸಿ ಸಾರಥಿ ವಾರ್ಷ್ಣೇಯನೊಂದಿಗೆ ಹರ್ಷಿತನಾದನು. ಅವನ

ಬಲ, ವೀರ್ಯ, ಉತ್ಸಾಹ, ಹಯಗಳ ಮೇಲಿದ್ದ ನಿಯಂತ್ರಣ ಮತ್ತು ಪರಮ ಯತ್ನವನ್ನು ನೋಡಿ ಅವನು ಅತೀವ ಸಂತಸಗೊಂಡನು.

## ಕಲಿನಿರ್ಗಮನ

ಅವನು ಎಲ್ಲಿಯೂ ನಿಲ್ಲದೇ ಖೇಚರನು ಆಕಾಶದಲ್ಲಿ ಹಾರುವಂತೆ ನದಿ-ಪರ್ವತ-ವನ-ಸರೋವರಗಳನ್ನು ಅತಿಕ್ರಮಿಸಿದನು. ಹೀಗೆ ರಥವು ವೇಗದಿಂದ ಓಡುತ್ತಿರುವಾಗ ಪರಪುರಂಜಯ ನೃಪ ಭಾಂಗಸ್ವರಿಯು ತನ್ನ ಉತ್ತರೀಯವು ಕಳಚಿ ಬಿದ್ದುದನ್ನು ನೋಡಿದನು. ವೇಗದಲ್ಲಿ ಹೋಗುತ್ತಿರುವಾಗ ಉತ್ತರೀಯವು ಬಿದ್ದ ಕೂಡಲೇ ಮಹಾಮನ ರಾಜನು ನಲನಿಗೆ ಹೇಳಿದನು:

> “ಅದನ್ನು ತೆಗೆದುಕೊಳ್ಳುತ್ತೇನೆ. ಮಹಾಬುದ್ಧಿ ! ಈ ಮಹಾವೇಗದಲ್ಲಿ ಚಲಿಸುತ್ತಿರುವ ಹಯಗಳನ್ನು ನಿಲ್ಲಿಸು. ಯಾಕೆಂದರೆ ವಾರ್ಷ್ಣೇಯನು ಬಿದ್ದುಹೋದ ನನ್ನ ಉತ್ತರೀಯವನ್ನು ತೆಗೆದುಕೊಂಡು ಬರುತ್ತಾನೆ.”

ನಲನು ಉತ್ತರಿಸಿದನು:

> “ಬಹಳ ದೂರದ ಹಿಂದೆಯೇ ನಿನ್ನ ಉತ್ತರೀಯವು ಬಿದ್ದುಹೋಯಿತು. ಅಲ್ಲಿಂದ ಒಂದು ಯೋಜನ ದೂರ ಈಗಾಗಲೇ ಬಂದುಬಿಟ್ಟಿದ್ದೇವೆ. ಪುನಃ ಅದನ್ನು ತೆಗೆದುಕೊಂಡು ಬರಲು ಶಕ್ಯವಾಗುವುದಿಲ್ಲ.”

ನಲನು ಹೀಗೆ ಹೇಳುತ್ತಿರುವಾಗಲೇ ನೃಪ ಭಾಂಗಸ್ವರಿಯು ಆ ವನದಲ್ಲಿ ಹಣ್ಣುಗಳಿಂದ ತುಂಬಿದ್ದ ಒಂದು ಬಿಭೀತಕವನ್ನು ಕಂಡನು. ಅದನ್ನು ನೋಡಿ, ಅವಸರದಲ್ಲಿದ್ದ ರಾಜನು ಬಾಹುಕನಿಗೆ ಹೇಳಿದನು:

> "ಸೂತ! ಎಣಿಸುವುದರಲ್ಲಿ ನನಗಿದ್ದ ಈ ಪರಮ ಬಲವನ್ನು ನೋಡು. ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ. ಸರ್ವಜ್ಞನೆನ್ನುವನು ಯಾರೂ ಇಲ್ಲ. ಜ್ಞಾನವು ಒಬ್ಬನೇ ಪುರುಷನಲ್ಲಿ ಏಕತ್ರವಾಗಿ ಯಾವಾಗಲೂ ಇರುವುದಿಲ್ಲ. ಕೆಳಗೆ ಬಿದ್ದ ಮತ್ತು ಮೇಲೆ ಇರುವ ಎಲ್ಲವನ್ನೂ ಸೇರಿ ಈ ವೃಕ್ಷದಲ್ಲಿ ನೂರಾ ಒಂದು ಎಲೆ ಮತ್ತು ಪುಷ್ಪಗಳಿವೆ. ಒಂದು ಎಲೆ ಮತ್ತು ಒಂದು ಫಲ ಮಾತ್ರ ಅಧಿಕವಾಗಿದೆ. ಆ ಎರಡೂ ಶಾಖೆಗಳಲ್ಲಿ ಐದು ಕೋಟಿ ಎಲೆಗಳಿವೆ. ಆ ಎರಡೂ ಶಾಖೆಗಳನ್ನು ಮತ್ತು ರೆಂಬೆಗಳನ್ನು ತೆಗೆದುಕೊಂಡರೆ, ಅವುಗಳಲ್ಲಿ ಎರಡು ಸಾವಿರದ ಒಂದು ನೂರಾ ತೊಂಭತ್ತೈದು ಫಲಗಳು ದೊರಕುವವು."

ಆಗ ಬಾಹುಕನು ರಥದಿಂದ ಕೆಳಗಿಳಿದು ರಾಜನನ್ನು ಉದ್ದೇಶಿಸಿ ಹೇಳಿದನು:

> "ಶತ್ರುಕರ್ಶನ ರಾಜನ್! ನೀನು ಹೇಳುತ್ತಿರುವುದು ನನಗೆ ಮೀರಿದ್ದು. ಆದ್ದರಿಂದ ನೀನು ಲೆಖ್ಖ ಮಾಡಿದುದರಲ್ಲಿ ವಿಶೇಷವೇನೂ ಇಲ್ಲ. ನಿನ್ನ ಪ್ರತ್ಯಕ್ಷದಲ್ಲಿಯೇ ನಾನು ಈ ಬಿಭೀತಕವನ್ನು ಎಣಿಸುತ್ತೇನೆ. ಯಾಕೆಂದರೆ ನೀನು

ಮಾಡಿದುದು ಸರಿಯೋ ಇಲ್ಲವೋ ಎಂದು ನನಗೆ ತಿಳಿಯದು. ನಿನ್ನ ಎದುರಿನಲ್ಲಿಯೇ ನಾನು ಇದರಲ್ಲಿರುವ ಫಲಗಳನ್ನು ಎಣಿಸುತ್ತೇನೆ. ವಾರ್ಷ್ಣೇಯ! ಸ್ವಲ್ಪ ಹೊತ್ತು ಈ ಕುದುರೆಗಳ ಹಗ್ಗವನ್ನು ಹಿಡಿದುಕೋ."

ಆಗ ನೃಪನು

"ವಿಲಂಬ ಮಾಡಲು ನಮಗೆ ಈಗ ಸಮಯವಿಲ್ಲ!"

ಎಂದು ಸೂತನಿಗೆ ಹೇಳಿದನು. ಆದರೂ ಬಾಹುಕನು ಒತ್ತಾಯಮಾಡಿ ಹೇಳಿದುದರಿಂದ ನಿಂತರು.

"ಒಂದು ಸ್ವಲ್ಪವೇ ಸಮಯ ಪ್ರತೀಕ್ಷಿಸು. ಅಥವಾ ನೀನು ಮುಂದೆ ಹೋಗು. ಇಲ್ಲಿಂದ ದಾರಿಯು ಸುಗಮವಾಗಿದೆ. ಹೋಗು. ವಾರ್ಷ್ಣೇಯನು ಸಾರಥಿಯಾಗುತ್ತಾನೆ."

ಋತುಪರ್ಣನು ಆಗ ಸಾಂತ್ವನ ಮಾತುಗಳನ್ನು ನುಡಿದನು:

"ಬಾಹುಕ! ಇಡೀ ಪೃಥಿವಿಯಲ್ಲಿ ನಿನ್ನಂತಹ ಸಾರಥಿಯು ಬೇರೆ ಯಾರೂ ಇಲ್ಲ. ನಿನ್ನಿಂದಾಗಿಯೇ ನನಗೆ ವಿದರ್ಭವನ್ನು ತಲುಪುವ ಭರವಸೆಯಿದೆ. ನಿನ್ನಲ್ಲಿ ನಾನು ಶರಣು ಹೋಗುತ್ತೇನೆ. ವಿಘ್ನವನ್ನು ಮಾಡಬೇಡ. ವಿದರ್ಭಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನನಗೆ ಸೂರ್ಯೋದಯದ ದರ್ಶನವನ್ನು ಮಾಡಿಸಿದೆಯಾದರೆ ನೀನು ಹೇಳಿದ ಕೆಲಸವನ್ನು

ಮಾಡುತ್ತೇನೆ."

"ಬಿಭೀತಕವನ್ನು ಎಣಿಸಿದ ನಂತರವೇ ವಿದರ್ಭಕ್ಕೆ ಕರೆದೊಯ್ಯುತ್ತೇನೆ. ನಾನು ಹೇಳಿದಂತೆಯೇ ಮಾಡು !"

ಎಂದು ಬಾಹುಕನು ಅವನಿಗೆ ಹೇಳಿದನು. ಇಷ್ಟವಿಲ್ಲದಿದ್ದರೂ ರಾಜನು ಅವನಿಗೆ

"ಎಣಿಸು !"

ಎಂದನು. ಆತನು ರಥದಿಂದ ಕೆಳಗಿಳಿದು ಆ ಮರವನ್ನು ಕಡಿದು ಬೀಳಿಸಿದನು. ನಂತರ ಅವನು ವಿಸ್ಮಯಗೊಂಡು ರಾಜನನ್ನುದ್ದೇಶಿಸಿ ಹೇಳಿದನು:

"ನೀನು ಹೇಳಿದಷ್ಟೇ ಎಲೆಗಳು ಮತ್ತು ಫಲಗಳನ್ನು ಎಣಿಸಿದ್ದೇನೆ. ಇದೊಂದು ಅತ್ಯದ್ಭುತವಾದದ್ದು ! ನಿನ್ನ ಬಲವನ್ನು ನಾನು ನೋಡಿದೆ. ನೃಪ ! ನೀನು ಯಾವ ವಿದ್ಯೆಯ ಮೂಲಕ ಎಣಿಸಿದೆಯೋ ಅದನ್ನು ತಿಳಿಯಲು ಬಯಸುತ್ತೇನೆ."

ಹೋಗುವುದರ ಅವಸರದಲ್ಲಿದ್ದ ರಾಜನು ಅವನಿಗೆ ಹೇಳಿದನು:

"ನನಗೆ ಅಕ್ಷಹೃದಯದ ಜ್ಞಾನವಿದೆ ಮತ್ತು ಸಂಖ್ಯೆಗಳಲ್ಲಿ ನಾನು ವಿಶಾರದನು."

ಬಾಹುಕನು ಹೇಳಿದನು:

“ಪುರುಷರ್ಷಭ! ಈ ವಿದ್ಯೆಯನ್ನು ನನಗೆ ಕೊಟ್ಟು ನನ್ನಿಂದ ಈ ಅಶ್ವಹೃದಯವನ್ನು ಸ್ವೀಕರಿಸು.”

ಆಗ ರಾಜ ಋತುಪರ್ಣನು ಕಾರ್ಯಗೌರವಾರ್ಥವಾಗಿ ಮತ್ತು ಹಯಜ್ಞಾನದ ಆಸೆಯಿಂದ ಬಾಹುಕನಿಗೆ ಹೇಳಿದನು:

“ಬಾಹುಕ! ಹಾಗೆಯೇ ಆಗಲಿ. ಶ್ರೇಷ್ಠವಾದ ಅಕ್ಷಹೃದಯವನ್ನು ಸ್ವೀಕರಿಸು. ಆದರೆ ನನಗಾಗಿ ಅಶ್ವಹೃದಯವನ್ನು ನಿನ್ನಲ್ಲಿಯೇ ಇಟ್ಟುಕೋ!”

ಎಂದು ಹೇಳಿ ಋತುಪರ್ಣನು ನಲನಿಗೆ ಆ ವಿದ್ಯೆಯನ್ನು ಕೊಟ್ಟನು. ಅವನು ಅಕ್ಷಹೃದಯವನ್ನು ತಿಳಿದೊಡನೆಯೇ ಕಲಿಯು ಅವನ ಶರೀರದಿಂದ ಕಾರ್ಕೋಟಕ ವಿಷವನ್ನು ಮುಖದಿಂದ ಕಾರುತ್ತಾ ಹೊರಬಿದ್ದನು. ಯಾವ ಕಾರಣದಿಂದ ರಾಜನು ಬತ್ತಿಹೋಗಿದ್ದನೋ ಮತ್ತು ದೀರ್ಘಕಾಲದಿಂದ ತಾನು ತಾನಾಗಿಯೇ ಇರಲಿಲ್ಲವೋ ಆ ಕಲಿಯ ಶಾಪಾಗ್ನಿಯು ಆರ್ತನಾದ ಅವನಿಂದ ಹೊರಬಂದಿತು. ವಿಷದಿಂದ ವಿಮುಕ್ತನಾದ ಕಲಿಯು ಸ್ವರೂಪವನ್ನು ಹೊಂದಲು ಕುಪಿತನಾದ ನಿಷಧಾಧಿಪ ನಲನು ಅವನಿಗೆ ಶಪಿಸಲು ಬಯಸಿದನು. ಭೀತಿಗೊಡ ಕಲಿಯು ನಡುಗುತ್ತಾ, ಅಂಜಲೀಬದ್ಧನಾಗಿ ಅವನಿಗೆ ಹೇಳಿದನು:

“ನೃಪತೇ! ನಿನ್ನ ಕೋಪವನ್ನು ಹಿಡಿದಿಟ್ಟುಕೋ. ನಿನಗೆ ಶ್ರೇಷ್ಠವಾದ ಕೀರ್ತಿಯನ್ನು ಕೊಡುತ್ತೇನೆ. ಹಿಂದೆ ನಿನ್ನಿಂದ

ಪರಿತ್ಯಕ್ತಳಾದಾಗ ಕೋಪದಿಂದ ಇಂದ್ರಸೇನನ ಜನನಿಯು ನನ್ನನ್ನು ಶಪಿಸಿದ್ದಳು. ಅಂದಿನಿಂದ ನಾನು ನೋವಿನಿಂದ ಪೀಡಿತನಾಗಿದ್ದೇನೆ. ನಿನ್ನಲ್ಲಿ ಬಹಳಷ್ಟು ದುಃಖದಿಂದ ನಾಗರಾಜನ ವಿಷದಿಂದ ದಿನರಾತ್ರಿ ಬೇಯುತ್ತಾ ವಾಸಿಸುತ್ತಿದ್ದೆ. ಈ ಲೋಕದಲ್ಲಿ ಯಾವ ಮನುಜರು ನಿನ್ನ ಕೀರ್ತಿಯನ್ನು ನಿರಂತರವಾಗಿ ಹಾಡುತ್ತಾರೋ ಅವರಿಗೆ ನನ್ನಿಂದ ಎಂದೂ ಯಾವ ಭಯವೂ ಇರುವುದಿಲ್ಲ."

ಇದನ್ನು ಕೇಳಿದ ರಾಜ ನಲನು ತನ್ನ ಕೋಪವನ್ನು ನಿಯಂತ್ರಿಸಿಕೊಂಡನು. ಕೂಡಲೇ ಭೀತಿಗೊಂಡ ಕಲಿಯು ಬಿಭೀತಕವನ್ನು ಪ್ರವೇಶಿಸಿದನು. ಕಲಿಯು ನೈಷಧನೊಡನೆ ಮಾತನಾಡಿದ್ದುದನ್ನು ಯಾರೂ ನೋಡಲಿಲ್ಲ. ಹೀಗೆ ಜ್ವರ ಬಿಟ್ಟ ಪರವೀರಹ ರಾಜ ನೈಷಧನು ಕಲಿಯು ನಾಶನಾದನೆಂದು ಮತ್ತು ಫಲಗಳನ್ನು ಎಣಿಸಲು ಕಲಿತೆನೆಂದು ಪರಮ ಸಂತಸಗೊಂಡು ಹಿಂದಿನ ತನ್ನ ಪರಮ ತೇಜಸ್ಸನ್ನು ಪುನಃ ಪಡೆದುಕೊಂಡನು. ಆ ತೇಜಸ್ವಿಯು ರಥವನ್ನೇರಿ ಹಯಗಳನ್ನು ವೇಗವಾಗಿ ಓಡಿಸಿದನು. ಕಲಿಯು ಆವರಿಸಿದುದರಿಂದ ಅಂದಿನಿಂದ ಬಿಭೀತಕವು ಅಪ್ರಸಿದ್ಧವಾಗಿದೆ. ಉತ್ತೇಜನಗೊಂಡ ನಲನು ಅಂತರಾತ್ಮದಲ್ಲಿ ಪ್ರಹೃಷ್ಟನಾಗಿ ಆ ಉತ್ತಮ ಕುದುರೆಗಳನ್ನು ಪುನಃ ಪುನಃ ಹುರಿದುಂಬಿಸಿದನು ಮತ್ತು ಅವು ಪಕ್ಷಿಗಳಂತೆ ಹಾರತೊಡಗಿದವು. ಮಹಾಮನ ರಾಜನು ವಿದರ್ಭಾಭಿಮುಖವಾಗಿ ಪ್ರಯಾಣಿಸಿದನು ಮತ್ತು ನಲನು ಸಾಕಷ್ಟು ದೂರ ಹೋದ ನಂತರ

ಕಲಿಯು ತನ್ನ ಮನೆಗೆ ತೆರಳಿದನು. ಕಲಿಯಿಂದ ವಿಮುಕ್ತನಾದ ರಾಜ ನಲನು ಜ್ವರವನ್ನು ಕಳೆದುಕೊಂಡನು. ಆದರೆ ತನ್ನ ರೂಪವನ್ನು ಮಾತ್ರ ಪಡೆಯಲಿಲ್ಲ.

## ಭೀಮಪುರಕ್ಕೆ ಋತುಪರ್ಣನ ಆಗಮನ

ಸತ್ಯವಿಕ್ರಮ ಋತುಪರ್ಣನು ಸಾಯಂಕಾಲದಲ್ಲಿ ವಿದರ್ಭವನ್ನು ತಲುಪಿದನು. ಅವನು ಬಂದಿರುವುದರನ್ನು ಜನರು ರಾಜ ಭೀಮನಿಗೆ ತಿಳಿಸಿದರು. ರಾಜ ಭೀಮನ ವಚನದಂತೆ ತನ್ನ ರಥಘೋಶವು ಎಲ್ಲ ದಶದಿಕ್ಕುಗಳಲ್ಲಿಯೂ ಮೊಳಗುತ್ತಿರಲು ಕುಂಡಿನ ಪುರವನ್ನು ಪ್ರವೇಶಿಸಿದನು. ನಲನ ಕುದುರೆಗಳು ರಥದ ಧ್ವನಿಯನ್ನು ಕೇಳಿದವು ಮತ್ತು ಕೇಳಿ ಹಿಂದೆ ನಲಸನ್ನಿಧಿಯಲ್ಲಿದ್ದಂತೆ ಹರ್ಷಗೊಂಡವು. ಮಳೆಗಾಲದ ಆದಿಯಲ್ಲಿ ಮೇಘದ ಗಂಭೀರ ಗುಡುಗಿನಂತಿದ್ದ ನಲನ ಆ ರಥಘೋಷವನ್ನು ದಮಯಂತಿಯೂ ಕೇಳಿದಳು. ಹಯಗಳು ಯೋಚಿಸಿದ್ದಂತೆ ಭೈಮಿಯೂ ಕೂಡ ಹಿಂದೆ ನಲನು ತನ್ನ ಕುದುರೆಗಳನ್ನು ಹೂಡಿ ರಥ ಓಡಿಸುತ್ತಿದ್ದ ಹಾಗೆಯೇ ಈ ರಥಘೋಷವೂ ಇದೆ ಎಂದು ಯೋಚಿಸಿದಳು. ಗಚ್ಚಿನ ಮೇಲಿದ್ದ ನವಿಲುಗಳು, ಗಜಶಾಲೆಯಲ್ಲಿದ್ದ ಆನೆಗಳು, ಮತ್ತು ಕುದುರೆಗಳು ಮಹೀಪತಿಯ ಈ ರಥಘೋಶವನ್ನು ಕೇಳಿ, ಮಳೆಗಾಲ ಪ್ರಾರಂಭವಾಯಿತೇನೋ ಎಂದು ನೋಡುವರೀತಿಯಲ್ಲಿ ಮೇಲೆ ನೋಡತೊಡಗಿದವು. ದಮಯಂತಿಯು ಹೇಳಿದಳು:

“ಮೇದಿನಿಯನ್ನೇ ಆವರಿಸುವಂತಿದ್ದ ಈ ರಥನಿರ್ಘೋಷವು ನನಗೆ ಇಷ್ಟೊಂದು ಸಂತೋಷವನ್ನು ಕೊಡುತ್ತಿದೆಯಾದರೆ ಇವನು ಮಹೀಪತಿ ನಲನೇ ಇರಬೇಕು. ಇಂದು ಆ ಚಂದ್ರಾಭವಕ್ತ್ರ ಅಸಂಕೇಯಗುಣ ವೀರ ನಲನನ್ನು ನೋಡದೇ ಇದ್ದರೆ ನಾನು ನಿಸ್ಸಂದೇಹವಾಗಿ ನಾಶವಾಗಿ ಹೋಗುತ್ತೇನೆ. ಇಂದು ನಾನು ಆ ವೀರನ ಬಾಹುಗಳ ಸುಖಸ್ಪರ್ಷವನ್ನು ಹೊಂದದೇ ಇದ್ದರೆ ನಿಸ್ಸಂದೇಹವಾಗಿ ನಾಶವಾಗಿ ಹೋಗುತ್ತೇನೆ. ಇಂದು ಆ ಮೇಘನಿರ್ಘೋಷ, ಬಂಗಾರದಂತೆ ಹೊಳೆಯುವ ನೈಷಧನು ನನ್ನಲ್ಲಿಗೆ ಬರದೇ ಇದ್ದರೆ ನಿಸ್ಸಂದೇಹವಾಗಿ ನಾನು ನಾಶವಾಗುತ್ತೇನೆ. ಇಂದು ಮತ್ತಗಜವನ್ನೂ ನಿಲ್ಲಿಸುವಂತಹ ಸಿಂಹವಿಕ್ರಾಂತ ರಾಜೇಂದ್ರನು ಬರದೇ ಇದ್ದರೆ ನಾನು ನಿಸ್ಸಂದೇಹವಾಗಿಯೂ ನಾಶವಾಗುತ್ತೇನೆ. ಸುಳ್ಳನ್ನಾಡಿದ್ದೇ ನೆನಪಿಲ್ಲ. ಮಾಡಿದ ತಪ್ಪುಗಳು ಯಾವುದೂ ನೆನಪಿಲ್ಲ. ಆ ಮಹಾತ್ಮನು ತಮಾಷೆಗೆಂದಾದರೂ ಕೊಟ್ಟ ಮಾತನ್ನು ಇಟ್ಟುಕೊಳ್ಳದೇ ಇದ್ದುದು ನೆನಪಿಲ್ಲ. ವೀರನೂ, ಕ್ಷಮಾವಂತನೂ, ಮೃದುಸ್ವಭಾವದವನೂ, ಜಿತೇಂದ್ರಿಯನೂ ಆದ ಆ ನನ್ನ ಪ್ರಭು ನನ್ನ ನೈಷಧನಿಗೆ ಯಾವ ನೀಚ ವೃತ್ತಿಗಳೂ ಇಲ್ಲ. ಅವನ ಗುಣಗಳನ್ನು ಸ್ಮರಿಸುತ್ತಾ, ದಿನ ರಾತ್ರಿಯೂ ಅವನ ಕುರಿತೇ ಚಿಂತಿಸುತ್ತಾ, ಪ್ರಿಯನಿಂದ ದೂರವಾದ ಈ

ಹೃದಯವು ಶೋಕದಿಂದ ದೀನವಾಗಿದೆ.”

ಈ ರೀತಿ ವಿಲಪಿಸುತ್ತಾ ಬುದ್ದಿ ಕಳೆದುಕೊಂಡವಳಂತೆ ಅವಳು ಪುಣ್ಯಶ್ಲೋಕನನ್ನು ನೋಡಲೋಸುಗ ಅರಮನೆಯ ಮಹಾ ಮಹಡಿಗೆ ಹತ್ತಿ ಹೋದಳು. ಅಲ್ಲಿಂದ ರಥದ ಮಧ್ಯಮ ಕಕ್ಷದಲ್ಲಿ ಬಾಹುಕ ಮತ್ತು ವಾರ್ಷ್ಣೇಯರ ಸಹಿತ ಕುಳಿತಿದ್ದ ಮಹೀಪಾಲ ಋತುಪರ್ಣನನ್ನು ನೋಡಿದಳು. ವಾರ್ಷ್ಣೇಯ ಮತ್ತು ಬಾಹುಕರು ಆ ಉತ್ತಮ ರಥವನ್ನು ನಿಲ್ಲಿಸಿ ರಥದಿಂದಿಳಿದು ಹಯಗಳನ್ನು ಬಿಚ್ಚಿದರು. ನರಾಧಿಪ ಋತುಪರ್ಣನು ರಥದಿಂದ ಇಳಿದು ಭೀಮಪರಾಕ್ರಮಿ ಮಹಾರಾಜ ಭೀಮನ ಬಳಿಬಂದನು. ಭೀಮನು ಅಕಸ್ಮಾತ್ತಾಗಿ ಯಾವುದೇ ಕಾರಣವೂ ಇಲ್ಲದೇ ಬಂದಿದ್ದ ಅವನನ್ನು ಉತ್ತಮ ಗೌರವದಿಂದ ಸ್ವಾಗತಿಸಿದನು. ಅವನಿಗೆ ಸ್ತ್ರೀಯರು ಹೂಡಿದ್ದ ಉಪಾಯವು ತಿಳಿದಿರಲಿಲ್ಲ. ತನ್ನ ಮಗಳ ಸಲುವಾಗಿಯೇ ಆ ನೃಪತಿಯು ಬಂದಿದ್ದಾನೆ ಎಂದು ತಿಳಿಯದೇ,

“ಸ್ವಾಗತ! ನನ್ನಿಂದ ಯಾವ ಕಾರ್ಯವಾಗಬೇಕು?”

ಎಂದು ರಾಜನು ಕೇಳಿದನು.

ಧೀಮಂತ ಸತ್ಯಪರಾಕ್ರಮಿ ರಾಜ ಋತುಪರ್ಣನಾದರೂ ರಾಜರನ್ನಾಗಲೀ, ರಾಜಪುತ್ರರನ್ನಾಗಲೀ ಯಾರನ್ನೂ ನೋಡಲಿಲ್ಲ. ಸ್ವಯಂವರದ ಮಾತನ್ನೂ ಕೇಳಲಿಲ್ಲ ಮತ್ತು ವಿಪ್ರರ ಸಮಾಗಮವನ್ನೂ ನೋಡಲಿಲ್ಲ. ಮನಸ್ಸಿನಲ್ಲಿಯೇ ಇದನ್ನೆಲ್ಲಾ ಯೋಚಿಸಿ ಕೋಸಲಾಧಿಪನು

"ನಿಮ್ಮನ್ನು ಅಭಿನಂದಿಸಲು ನಾನು ಬಂದಿದ್ದೇನೆ!"

ಎಂದು ಹೇಳಿದನು. ರಾಜ ಭೀಮನಾದರೂ ಮುಗುಳ್ನಕ್ಕು ತನ್ನ ಮನಸ್ಸಿನಲ್ಲಿಯೇ ಯೋಚಿಸಿದನು:

"ಬಹು ಗ್ರಾಮಗಳನ್ನು ಅತಿಕ್ರಮಿಸಿ ಶತಯೋಜನಕ್ಕಿಂತಲೂ ಅಧಿಕ ದೂರ ಬರಲು ಇವನಿಗೆ ಏನಾದರೊಂದು ಕಾರಣವಿರಬಹುದು. ಸುಮ್ಮನೇ ಇಲ್ಲಿಗೆ ಬಂದಿರಲಿಕ್ಕಿಲ್ಲ. ಇವನು ಇಲ್ಲಿಗೆ ಬರಲು ನಿರ್ದಿಷ್ಟವಾದ ಅಲ್ಪಕಾರ್ಯವೊಂದು ಇದ್ದಿರಬಹುದು."

ಆ ನೃಪತಿಯನ್ನು ಸತ್ಕರಿಸಿ

"ವಿಶ್ರಮಿಸು!"

ಎಂದು ಕಳುಹಿಸಿದನು.

"ಸತ್ಕೃತನಾಗಿದ್ದೇನೆ!"

ಎಂದು ಪುನಃ ಪುನಃ ಅವನು ಹೇಳಿದನು. ಸತ್ಕಾರದಿಂದ ಹರ್ಷಿತನಾದ ಅವನು ರಾಜನ ಸಹಚರರೊಡಗೂಡಿ ತೋರಿಸಿದ ಅತಿಥಿಗೃಹಕ್ಕೆ ಹೋದನು.

ವಾರ್ಷ್ಣೇಯನ ಜೊತೆಯಲ್ಲಿ ನೃಪ ಋತುಪರ್ಣನು ಹೋದ ನಂತರ ಬಾಹುಕನು ರಥಶಾಲೆಗೆ ಹೋಗಿ ರಥವನ್ನು ನಿಲ್ಲಿಸಿದನು. ಆ

ಅಶ್ವಗಳನ್ನು ಬಿಚ್ಚಿ ಅವುಗಳಿಗೆ ಶಾಸ್ತ್ರೋಕ್ತ ಪರಿಚರಿ ಮಾಡಿದನು. ಅವುಗಳ ನೀಡಿಕೆಗಳನ್ನು ಸ್ವಯಂ ಪೂರೈಸಿ ರಥವನ್ನೇರಿ ಕುಳಿತುಕೊಂಡನು. ನೃಪ ಭಾಂಗಸ್ವರಿ, ಸೂತಪುತ್ರ ವಾರ್ಷ್ಣೇಯ ಮತ್ತು ಕುರೂಪಿ ಬಾಹುಕನನ್ನು ಕಂಡು ಶೋಕಾರ್ತಳಾದ ವೈದರ್ಭಿ ದಮಯಂತಿಯು ಚಿಂತಿಸತೊಡಗಿದಳು:

> "ನಲನಂತೆಯೇ ರಥಧ್ವನಿಯನ್ನು ಮಾಡಿದವರು ಯಾರು? ನೈಷಧನೇ ಕಾಣುತ್ತಿಲ್ಲವಲ್ಲ! ಬಹುಷಃ ವಾರ್ಷ್ಣೇಯನೇ ಈ ವಿದ್ಯೆಯನ್ನು ಕಲಿತಿರಬಹುದು. ಆದರಿಂದಲೇ ಅವನು ನಲನಂತೆಯೇ ರಥ ನಿರ್ಘೋಷ ಮಾಡಿರಬಹುದು. ಅಥವಾ ರಾಜ ಋತುಪರ್ಣನು ನಲನಷ್ಟೇ ನಿಪುಣನಿರಬಹುದು. ಆದ್ದರಿಂದ ಅವನ ರಥನಿರ್ಘೋಶವು ನಲನಂತೆಯೇ ಕೇಳಿರಬಹುದು."

ಈ ರೀತಿ ತರ್ಕಿಸುತ್ತಾ ದಮಯಂತಿಯು ನೃಪ ನೈಷಧನನ್ನು ಹುಡುಕಲೋಸುಗ ದೂತಿಯೊಬ್ಬಳನ್ನು ಕಳುಹಿಸಿದಳು.

## ನಲ-ಕೇಶಿನಿ ಸಂವಾದ

ದಮಯಂತಿಯು ಹೇಳಿದಳು:

> "ಕೇಶಿನಿ! ಹೋಗಿ ರಥದಲ್ಲಿ ಕುಳಿತಿದ್ದ ವಿಕೃತ, ಹೃಸ್ವಬಾಹಿಕ ಆ ರಥವಾಹಕನು ಯಾರೆಂದು ತಿಳಿದುಕೋ. ಅವನಲ್ಲಿಗೆ

ಹೋಗಿ ಮೃದುವಾಗಿ ಅವನು ಕುಶಲದಿಂದ್ದಾನೆಯೇ ಕೇಳು. ಈ ಪುರುಷನು ಯಾರೆಂದು ಯಥಾವತ್ತಾಗಿ ಕೇಳಿ ತಿಳಿದುಕೋ. ಅವನೇ ನೃಪ ನಲನಿರಬಹುದೆಂದು ಮಹತ್ತರ ಶಂಕೆ ನನ್ನಲ್ಲಿದೆ. ಯಾಕೆಂದರೆ ನನ್ನ ಮನಸ್ಸು ಸಂತೃಪ್ತಿಯಿಂದಿದೆ ಮತ್ತು ಹೃದಯವು ಶಾಂತವಾಗಿದೆ. ನೀನು ಮಾತನಾಡುವಾಗ ಪರ್ಣಾದನ ವಚನಗಳನ್ನೂ ಸೇರಿಸಿಕೋ ಮತ್ತು ಅವನಾಡಿದ ಪ್ರತಿಯೊಂದು ವಾಕ್ಯವನ್ನೂ ಸರಿಯಾಗಿ ಕೇಳಿ ತಿಳಿದುಕೋ."

ಈ ರೀತಿ ದೂತಿಯು ಬಾಹುಕನನ್ನು ಸಮೀಪಿಸಿ ಅವನಲ್ಲಿ ಮಾತನಾಡಿದಳು. ಕಲ್ಯಾಣಿ ದಮಯತಿಯು ಗಚ್ಚಿನಮೇಲೆ ನಿಂತು ನೋಡುತ್ತಿದ್ದಳು. ಕೇಶಿನಿಯು ಹೇಳಿದಳು:

"ಮನುಷ್ಯೇಂದ್ರ! ನಿನಗೆ ಸ್ವಾಗತ. ನಿನ್ನ ಕುಶಲವನ್ನು ಕೇಳುತ್ತಿದ್ದೇನೆ. ದಮಯಂತಿಯು ಒಂದು ಮಾತನ್ನು ಹೇಳಿ ಕಳುಹಿಸಿದ್ದಾಳೆ. ಗಮನವಿಟ್ಟು ಕೇಳು. ನೀವೆಲ್ಲರೂ ಎಂದು ಹೊರಟಿದ್ದಿರಿ ಮತ್ತು ಇಲ್ಲಿಗೆ ಏಕೆ ಆಗಮಿಸಿದ್ದೀರಿ? ನ್ಯಾಯವೆನಿಸಿದರೆ ಸತ್ಯವನ್ನು ಹೇಳು. ವೈದರ್ಭಿಯು ಕೇಳಲು ಇಚ್ಛಿಸುತ್ತಾಳೆ."

ಬಾಹುಕನು ಹೇಳಿದನು:

"ಭಾಮಿನೀ! ಕೌಸಲದ ಯಶಸ್ವಿ ರಾಜನು ದಮಯಂತಿಯ ಎರಡನೆಯ ಸ್ವಯಂವರವು ನಡೆಯುತ್ತಿದೆ ಎಂದು ಕೇಳಿದನು.

ಅದನ್ನು ಕೇಳಿದ ರಾಜನು ಶತಯೋಜನದೂರವನ್ನು ದಾಟುವ ವಾಯುವೇಗಗಳನ್ನುಳ್ಳ ಹಯಗಳೊಂದಿಗೆ ಹೊರಟನು. ನಾನು ಅವನ ಸಾರಥಿ."

ಕೇಶಿನಿಯು ಹೇಳಿದನು:

"ನಿಮ್ಮಲ್ಲಿರುವ ಈ ಮೂರನೆಯವನು ಎಲ್ಲಿಯವನು ಮತ್ತು ಯಾರವನು? ಮತ್ತು ನೀನು ಯಾರು ಮತ್ತು ನಿನಗೆ ಈ ಕೆಲಸವು ಹೇಗೆ ಪ್ರಾಪ್ತವಾಯಿತು?"

ಬಾಹುಕನು ಹೇಳಿದನು:

"ಭದ್ರೇ! ಅವನು ಪುಣ್ಯಶ್ಲೋಕನ ಸೂತ; ವಾರ್ಷ್ಣೇಯನೆಂದು ಹೆಸರು. ನಲನು ಹೊರಟು ಹೋದ ನಂತರ ಅವನು ಭಾಂಗಸ್ವರಿಯಲ್ಲಿ ವಾಸಿಸುತ್ತಿದ್ದಾನೆ. ನಾನಾದರೂ ಓರ್ವ ಅಶ್ವಕುಶಲ ಮತ್ತು ಉತ್ತಮ ಅಡುಗೆಗಳನ್ನು ಮಾಡಬಲ್ಲವ. ಸ್ವಯಂ ಋತುಪರ್ಣನೇ ನನ್ನನ್ನು ಅವನ ಸಾರಥಿ ಮತ್ತು ಅಡುಗೆ ಭಟನನ್ನಾಗಿ ಇರಿಸಿಕೊಂಡಿದ್ದಾನೆ."

ಕೇಶಿನಿಯು ಹೇಳಿದಳು:

"ಬಾಹುಕ! ರಾಜ ನಲನು ಎಲ್ಲಿಗೆ ಹೋದನೆಂದು ವಾರ್ಷ್ಣೇಯನಿಗೆ ತಿಳಿದಿದೆಯೇ? ನಿನ್ನ ಸಮ್ಮುಖದಲ್ಲಿ ಅವನು ಎಂದಾದರೂ ಅವನ ಕುರಿತು ಹೇಳಿದ್ದುಂಟೇ?"

ಬಾಹುಕನು ಹೇಳಿದನು:

“ಆ ಅಶುಭಕರ್ಮಿ ನಲನ ಪುತ್ರರನ್ನು ಇಲ್ಲಿಯೇ ಇರಿಸಿ ಅವನು ಹೊರಟುಹೋದ. ನೈಷಧನು ಎಲ್ಲಿದ್ದಾನೆಂದು ಅವನಿಗೂ ಗೊತ್ತಿಲ್ಲ. ನಲನು ಎಲ್ಲಿದ್ದಾನೆ ಎಂದು ಬೇರೆ ಯಾರಿಗೂ ಗೊತ್ತಿಲ್ಲ. ಅವನು ಎಲ್ಲಿಯೋ ಗೂಢವಾಗಿ ವಾಸಿಸುತ್ತಿರಬಹುದು. ಆ ಮಹೀಪತಿಯು ಅದೃಶ್ಯನಾಗಿದ್ದಾನೆ. ತದನಂತರದಲ್ಲಿ ಇವನೇ ನಲನೆಂದು ಹೇಳುವ ಯಾವರೀತಿಯ ಲಕ್ಷಣಗಳೂ ಉಳಿಯಲಿಲ್ಲ. ಅವನಿಗೆ ಮತ್ತು ಅವನವಳಿಗೆ ಮಾತ್ರ ಅವನ ಲಕ್ಷಣಗಳು ಗೊತ್ತು.”

ಕೇಶಿನಿಯು ಹೇಳಿದಳು:

“ಮೊದಲು ಅಯೋಧ್ಯೆಗೆ ಬಂದಿದ್ದ ಬ್ರಾಹ್ಮಣನೊಬ್ಬನು ಓರ್ವ ನಾರಿಯ ಈ ಮಾತುಗಳನ್ನು ಪುನಃ ಪುನಃ ಹೇಳುತ್ತಿದ್ದನು:

“ಜೂಜುಗಾರ! ನನ್ನ ವಸ್ತ್ರವನ್ನು ಕತ್ತರಿಸಿ ಹೊರಟುಹೋದ ನೀನು ಎಲ್ಲಿದ್ದೀಯೆ? ಪ್ರಿಯ! ಮಲಗಿ ನಿದ್ರಿಸುತ್ತಿದ್ದ ಪ್ರಿಯೆಯನ್ನು ವಿಪಿನದಲ್ಲಿಯೇ ಬಿಟ್ಟು ಹೋದೆಯಲ್ಲ? ನೀನು ತೋರಿಸಿದಲ್ಲಿಯೇ ಅವಳು ಹಗಲು ರಾತ್ರಿಯೂ ದಹಿಸುತ್ತಾ ಅರ್ಧವಸ್ತ್ರವನ್ನೇ ಧರಿಸಿ ನಿನ್ನನ್ನು ಪ್ರತೀಕ್ಷಿಸುತ್ತಾ

ಇದ್ದಾಳೆ.! ನಿನ್ನ ದುಃಖದಿಂದಲೇ ಅವಳು ಸತತವಾಗಿ ರೋದಿಸುತ್ತಿದ್ದಾಳೆ. ಅವಳಲ್ಲಿ ದಯೆತೋರಿಸಿ ಪ್ರತಿವಾಕ್ಯವನ್ನು ನೀಡು. ಅವಳಿಗೆ ಪ್ರಿಯವಾದ ಕಥೆಯನ್ನು ಪುನಃ ಹೇಳು."

ಅದೇ ಮಾತುಗಳನ್ನು ಅನಿಂದಿತೆ ವೈದರ್ಭಿಯು ಕೇಳಲಿಚ್ಛಿಸುತ್ತಾಳೆ. ನೀನು ಕೊಟ್ಟ ಪ್ರತಿವಾಕ್ಯವನ್ನು ಕೇಳಿದಾಗಿನಿಂದ ಅದೇ ಹಿಂದಿನ ಮಾತುಗಳನ್ನು ಪುನಃ ಕೇಳಲು ವೈದರ್ಭಿಯು ಇಚ್ಛಿಸುತ್ತಾಳೆ."

ಈ ರೀತಿ ಕೇಶಿನಿಯು ಹೇಳಿದಾಗ ನಲನ ಹೃದಯವು ವ್ಯಥಿತಗೊಂದು ಕಣ್ಣುಗಳಲ್ಲಿ ಕಣ್ಣೀರು ತುಂಬಿಕೊಂಡಿತು. ದಹಿಸುತ್ತಿರುವ ದುಃಖವನ್ನು ಅದುಮಿಟ್ಟು ಮಹೀಪತಿಯು ಕಣ್ಣೀರಿನಿಂದ ಕಟ್ಟಿದ ಕಂಠದಲ್ಲಿ ಆ ಮಾತುಗಳನ್ನು ಪುನಃ ಹೇಳಿದನು:

"ಕುಲಸ್ತ್ರೀಯರು ಕಷ್ಟಗಳು ಬಂದರೂ ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಾರೆ. ನಿಜವಾಗಿಯೂ ಅವರು ಜಿತಸ್ವರ್ಗಿಗಳು ಎನ್ನುವುದರಲ್ಲಿ ಸಂಶಯವೇ ಇಲ್ಲ. ಪತಿಯು ಇಲ್ಲದಿದ್ದರೂ ಇವರು ಎಂದೂ ಕೃದ್ಧರಾಗುವುದಿಲ್ಲ. ವಿಷಮ ಸ್ಥಿತಿಯಲ್ಲಿದ್ದ, ಸುಖದಿಂದ ಪರಿಭ್ರಷ್ಟನಾದ ಮೂಢನೊಬ್ಬನು ಅವಳನ್ನು ಪರಿತ್ಯಜಿಸಿರಬಹುದು. ಆದರೆ ಅಲ್ಲಿ ಕ್ರೋಧಿಸುವುದು ಸರಿಯಲ್ಲ. ಪಕ್ಷಿಗಳಿಂದ ವಸ್ತ್ರಗಳನ್ನು ಅಪಹರಿಸಲ್ಪಟ್ಟವನಾಗಿ,

> ಸುಡುತ್ತಿರುವ ಮನಸ್ಸುಳ್ಳವನಾಗಿದ್ದ ಅವನು ಬಿಟ್ಟು ಹೋಗಿದ್ದುದಕ್ಕೆ ಸುಂದರಿಯು ಕ್ರೋಧಿಸುವುದು ಸರಿಯಲ್ಲ. ಸತ್ಕೃತನಾಗಿರಲಿ ಅಥವಾ ಅಸತ್ಕೃತನಾಗಿರಲಿ, ತನ್ನ ಪತಿಯು ರಾಜ್ಯಭ್ರಷ್ಟನಾಗಿ, ಸಂಪತ್ತನ್ನು ಕಳೆದುಕೊಂಡುದ್ದುದಕ್ಕೆ ಸುಂದರಿಯು ಕೋಪಿಸುವುದು ಸರಿಯಲ್ಲ."

ಈ ರೀತಿ ನಲನು ಈ ವಾಕ್ಯಗಳನ್ನು ಹೇಳುತ್ತಿದ್ದಂತೆಯೇ ಪರಮ ದುಃಖಿತನಾಗಿ, ಕಣ್ಣೀರನ್ನು ತಡೆಹಿಡಿಯಲು ಅಶಕ್ತನಾಗಿ ಜೋರಾಗಿ ಅಳ ತೊಡಗಿದನು. ಕೇಶಿನಿಯು ದಮಯಂತಿಯ ಬಳಿ ಹೋಗಿ ನಡೆದಿದ್ದೆಲ್ಲವನ್ನೂ ಮತ್ತು ಅವನ ವಿಕಾರ ರೂಪವನ್ನೂ ವರದಿಮಾಡಿದಳು.

## ನಲನಿಗೆ ಮಕ್ಕಳ ದರ್ಶನ

ಶೋಕಪರಾಯಣೆ ದಮಯಂತಿಯು ಅದನ್ನು ಕೇಳಿ ಅವನು ನಲನೇ ಇರಬಹುದೆಂದು ಶಂಕಿಸಿ ಕೇಶಿನಿಯಲ್ಲಿ ಹೇಳಿದಳು:

> "ಕೇಶಿನಿ! ಹೋಗು. ಬಾಹುಕನ ಕುರಿತು ಇನ್ನೂ ಪರೀಕ್ಷೆ ಮಾಡು. ಏನನ್ನೂ ಹೇಳಬೇಡ; ಆದರೆ ಅವನ ಹತ್ತಿರವೇ ಇದ್ದು ಅವನು ಮಾಡುವುದನ್ನು ಗಮನಿಸು. ಅವನು ಏನಾದರೂ ವಿಶಿಷ್ಟವಾದದ್ದನ್ನು ಮಾಡಿದರೆ ಅವನು ಯಾಕೆ ಮತ್ತು ಎಂದು ಹಾಗೆ ಮಾಡಿದ ಎಂದು ಸರಿಯಾಗಿ ಗಮನಿಸು.

> ಅವನನ್ನು ಪ್ರತಿಬಂಧಿಸುವುದಕ್ಕಾಗಿ ಅವನಿಗೆ ಅಗ್ನಿಯನ್ನು ಕೂಡ ಕೊಡಬೇಡ; ನೀರನ್ನು ಕೇಳಿದರೆ ಅದನ್ನೂ ಕೊಡಬೇಡ. ನಿಧಾನವಾಗಿ ಇವನ್ನೆಲ್ಲ ಮಾಡು. ಅವನು ಮಾಡುವುದೆಲ್ಲವನ್ನೂ ನೋಡಿ ನನ್ನಲ್ಲಿಗೆ ಬಂದು ಹೇಳು. ಮತ್ತಿನ್ನೇನಾದರೂ ನಡೆದರೂ ನನ್ನಲ್ಲಿಗೆ ಬಂದು ಹೇಳು."

ದಮಯಂತಿಯು ಹೀಗೆ ಹೇಳಿದ ನಂತರ ಕೇಶಿನಿಯು ಬೇಗನೆ ಹೋದಳು ಮತ್ತು ಆ ಹಯಜ್ಞನ ಲಕ್ಷಣಗಳನ್ನೆಲ್ಲಾ ಗಮನಿಸಿ ಮರಳಿ ಬಂದು ಆ ಬಾಹುಕನಲ್ಲಿ ಕಂಡ ದೇವ ಮತ್ತು ಮಾನುಷ ನಿಮಿತ್ತಗಳೆಲ್ಲವನ್ನೂ ಯಥಾವತ್ತಾಗಿ ದಮಯಂತಿಯಲ್ಲಿ ನಿವೇದಿಸಿದಳು. ಕೇಶಿನಿಯು ಹೇಳಿದಳು:

> "ದಮಯಂತಿ! ಇಷ್ಟೊಂದು ಧೃಢನಾಗಿರುವ ಮತ್ತು ಉಚ್ಛನಾಗಿರುವ ಬೇರೆ ಯಾವ ಮನುಷ್ಯನನ್ನು ಈ ಹಿಂದೆ ನಾನು ಕೇಳಿರಲಿಲ್ಲ ಮತ್ತು ನೋಡಿಯೂ ಇರಲಿಲ್ಲ. ಗಿಡ್ಡವಾದ ಬಾಗಿಲಿನಿಂದ ಬಂದರೆ ತನ್ನ ತಲೆಯನ್ನು ಅವನು ತಗ್ಗಿಸುವುದಿಲ್ಲ. ಆದರೆ ಮೇಲ್ಛಾವಣಿಯೇ ಅವನು ಸುಖವಾಗಿ ಹೋಗಲಿ ಎಂದು ಮೇಲೇರುತ್ತದೆ. ಕಿರಿದಾದ ಪ್ರವೇಶದ್ವಾರವು ಅವನಿಗಾಗಿ ತಾನಾಗಿಯೇ ಅಗಲವಾಗುತ್ತದೆ. ರಾಜನು ಋತುಪರ್ಣನಿಗಾಗಿ ಅನೇಕ ಆಹಾರ ಪದಾರ್ಥಗಳನ್ನು ಮತ್ತು ಮಾಂಸಗಳನ್ನು ಕಳುಹಿಸಿದ್ದಾನೆ. ಅವುಗಳನ್ನು ತೊಳೆಯಲು

ಅಲ್ಲಿ ಒಂದು ತೊಟ್ಟಿಯೂ ಇದೆ. ಅವನ ದೃಷ್ಟಿಮಾತ್ರದಿಂದಲೇ ಆ ಕುಂಭವು ನೀರಿನಿಂದ ತುಂಬಿಕೊಂಡಿತು. ಬಾಹುಕನು ಮಾಂಸವನ್ನು ತೊಳೆದಿಟ್ಟು, ಒಂದು ಮುಷ್ಠಿ ಕಟ್ಟಿಗೆಯನ್ನು ಹಿಡಿದು, ತುಂಡುಮಾಡಿ ಗುಂಪಿನಲ್ಲಿ ಇಟ್ಟೊಡನೆಯೇ ಒಮ್ಮಿಂದೊಮ್ಮೆಲೇ ಹವ್ಯವಾಹನನು ಅದರಲ್ಲಿ ಪ್ರಜ್ವಲಿಸಲು ಪ್ರಾರಂಭಿಸಿದನು. ಆ ಅದ್ಭುತವನ್ನು ಕಂಡು ವಿಸ್ಮಿತನಾದ ನಾನು ಇಲ್ಲಿಗೆ ಬಂದಿದ್ದೇನೆ. ಅಲ್ಲಿ ಇನ್ನೊಂದು ಸುಮಹದಾಶ್ಚರ್ಯವನ್ನು ನೋಡಿದೆ: ಶುಭೇ! ಅಗ್ನಿಯನ್ನು ಸ್ಪರ್ಷಮಾಡಿದರೂ ಅವನನ್ನು ಸುಡಲಿಲ್ಲ. ಅವನಿಗೆ ಬೇಕಾದಲಾಗಲೆಲ್ಲಾ ನೀರು ಒಮ್ಮಿಂದೊಮ್ಮೆಲೇ ಹರಿಯುತ್ತದೆ. ಇನ್ನೂ ಒಂದು ಸುಮದಾಶ್ವರ್ಯವನ್ನು ನೋಡಿದೆ: ಪುಷ್ಪಗಳನ್ನು ಕೈಯಲ್ಲಿ ಹಿಡಿದು ತಿಕ್ಕಿದರೂ ಆ ಹೂಗಳು ತಾಜಾ ಮತ್ತು ಸುಗಂಧಿತವಾಗುತ್ತವೆ. ಈ ಅದ್ಭುತಗಳನ್ನು ನೋಡಿದ ನಾನು ಬೇಗನೆ ಇಲ್ಲಿಗೆ ಬಂದೆ."

ಪುಣ್ಯಶ್ಲೋಕನ ಈ ಕೃತ್ಯಗಳನ್ನು ಕೇಳಿದ ದಮಯಂತಿಯು ನಲನು ಪ್ರಾಪ್ತನಾದನೆಂದು ಆ ಕರ್ಮಚೇಷ್ಟೆಗಳು ಸೂಚಿಸುತ್ತವೆ ಎಂದು ತೀರ್ಮಾನಿಸಿದಳು. ತನ್ನ ಪತಿ ನಲನೇ ಬಾಹುಕನ ರೂಪಧರಿಸಿದ್ದಾನೆ ಎಂದು ಶಂಕಿಸಿ ರೋದಿಸಿದಳು ಮತ್ತು ಕೇಶಿನಿಗೆ ಮೃದು ವಾಕ್ಯಗಳಲ್ಲಿ ಹೇಳಿದಳು:

“ಭಾಮಿನಿ ! ಪುನಃ ಹೋಗು. ಬಾಹುಕನು ಗಮನಿಸದೇ ಇರುವಾಗ ಅಡುಗೆ ಮನೆಯಿಂದ ಅವನು ತಯಾರಿಸಿದ ಮಾಂಸವನ್ನು ಸ್ವಲ್ಪ ತೆಗೆದುಕೊಂಡು ಇಲ್ಲಿಗೆ ಬಾ !”

ಕೇಶಿನಿಯು ಹೋಗಿ, ಬಾಹುಕನು ಯಾವುದರಲ್ಲಿಯೋ ಮಗ್ನನಾಗಿರುವಾಗ ಬಿಸಿಬಿಸಿಯಾದ ಮಾಂಸದ ತುಂಡೊಂದನ್ನು ಪ್ರಿಯಕಾರಿಣಿ ದಮಯಂತಿಗೆಂದು ತೆಗೆದು ತಕ್ಷಣ ತಂದು ಕೊಟ್ಟಳು. ಹಿಂದೆ ನಲನು ತಯಾರಿಸಿದ ಮಾಂಸದ ರುಚಿಯನ್ನು ಬಹಳಷ್ಟು ಅರಿತಿದ್ದ ಅವಳು ಅದರ ರುಚಿನೋಡಿದ ಕೂಡಲೇ ಇದನ್ನು ತಯಾರಿಸಿದ್ದು ನಲನೇ ಹೌದು ಎಂದು ತಿಳಿದು ಬಹುದುಃಖಿತಳಾದಳು. ಬಹಳಷ್ಟು ರೋದಿಸಿದ ನಂತರ ಮುಖವನ್ನು ತೊಳೆದು, ತನ್ನ ಅವಳಿ ಮಕ್ಕಳನ್ನು ಕೇಶಿನಿಯ ಸಂಗಡ ಕಳುಹಿಸಿದಳು. ಭ್ರಾತನೊಡನೆ ಇಂದ್ರಸೇನೆಯನ್ನು ಬಾಹುಕನು ಗುರುತಿಸಿದನು, ಮತ್ತು ರಾಜನು ಅವರಲ್ಲಿಗೆ ಓಡಿಹೋಗಿ ಬಿಗಿಯಾಗಿ ಅಪ್ಪಿಕೊಂಡನು. ಸುರಸುತರಂತಿದ್ದ ಮಕ್ಕಳನ್ನು ಸೇರಿದ ಬಾಹುಕನು ದುಃಖಪರಿತಾತ್ಮನಾಗಿ ಜೋರಾಗಿ ರೋದಿಸತೊಡಗಿದನು. ಈ ರೀತಿ ನೈಷಧನು ತನ್ನ ಭಾವನೆಗಳನ್ನು ಹಲವು ಬಾರಿ ತೋರಿಸುತ್ತಾ, ಒಮ್ಮೆಲೇ ಆ ಪುತ್ರರನ್ನು ಬಿಟ್ಟು ಕೇಶಿನಿಗೆ ಈ ರೀತಿ ಹೇಳಿದನು:

“ಭದ್ರೆ ! ಈ ಅವಳಿಗಳು ನನ್ನ ಮಕ್ಕಳ ಸುಸದೃಶರಾಗಿದ್ದಾರೆ. ಒಮ್ಮಿಂದೊಮ್ಮೆಲೇ ಅವರನ್ನು ನೋಡಿದಾಗ

ಕಣ್ಣೀರುಹರಿಸಿಬಿಟ್ಟೆ! ನೀನು ಇಲ್ಲಿಗೆ ಬಹಳಷ್ಟು ಸಾರಿ ಬರುತ್ತಿದ್ದೇಯೆ. ಜನರು ಕೆಟ್ಟದ್ದಾಗಿ ಯೋಚಿಸಬಹುದು. ನಾವು ಈ ದೇಶದಲ್ಲಿ ಅತಿಥಿಗಳು. ಹೋಗು ಭದ್ರೇ! ನಿನಗೆ ನನ್ನ ನಮನಗಳು."

## ನಲ-ದಮಯಂತೀ ಸಮಾಗಮ

ಧೀಮತ ಪುಣ್ಯಶ್ಲೋಕನ ಈ ಎಲ್ಲ ಭಾವುಕತೆಯನ್ನೂ ನೋಡಿದ ಕೇಶಿನಿಯು ಕ್ಷಿಪ್ರವಾಗಿ ಬಂದು ದಮಯಂತಿಯಲ್ಲಿ ನಿವೇದಿಸಿದಳು. ಅನಂತರ ಅವನು ನಲನೇ ಇರಬಹುದೆಂಬ ಶಂಕೆಯಿಂದ ಉತ್ಸುಕಳೂ, ದುಃಖಾರ್ತಳೂ ಆದ ದಮಯಂತಿಯು ಕೇಶಿನಿಯನ್ನು ತನ್ನ ತಾಯಿಯ ಬಳಿ ಹೀಗೆ ಹೇಳಿ ಕಳುಹಿಸಿದಳು:

"ಅವನು ನಲನಿರಬಹುದೆಂಬ ಶಂಕೆಯಿಂದ ನಾನು ಬಾಹುಕನನ್ನು ಬಹು ರೀತಿಗಳಿಂದ ಪರೀಕ್ಷಿಸಿದ್ದೇನೆ. ಅವನ ರೂಪವೊಂದರಲ್ಲಿ ಮಾತ್ರ ಶಂಕೆಯಿದೆ. ಅದನ್ನು ನಾನೇ ಸ್ವತಃ ತಿಳಿಯಬೇಕಾಗಿದೆ. ಅಮ್ಮ! ಅವನನ್ನು ಹೇಗಾದರೂ ಇಲ್ಲಿಗೆ ಕರೆಯಿಸು ಅಥವಾ ನನಗಾದರೂ ಅಲ್ಲಿಗೆ ಹೋಗಲು ಅನುಮತಿಯನ್ನು ಕೊಡು. ಇದನ್ನು ತಂದೆಯವರಿಗೆ ತಿಳಿಸಿಯೂ ಅಥವಾ ತಿಳಿಸದೆಯೂ ಮಾಡಬಹುದು."

ವೈದರ್ಭಿಯ ಈ ಮಾತುಗಳನ್ನು ಕೇಳಿದ ದೇವಿಯು ಭೀಮನಲ್ಲಿ

ಹೇಳಲು ಆ ಪಾರ್ಥಿವನು ಮಗಳ ಅಭಿಪ್ರಾಯಕ್ಕೆ ಅನುಮತಿಯನ್ನು ಕೊಟ್ಟನು. ತನ್ನ ಮಾತಾ ಪಿತೃಗಳ ಅನುಮತಿಯನ್ನು ಪಡೆದ ಅವಳು ತಾನು ವಾಸಿಸುತ್ತಿದ್ದಲ್ಲಿಗೆ ನಲನನ್ನು ಕರೆತರಿಸಿದಳು. ನಲನನ್ನು ನೋಡಿದ ಕೂಡಲೇ ಆ ವರವರ್ಣಿನಿ ದಮಯಂತಿಯು ತೀವ್ರ ಶೋಕಾವಿಷ್ಟಳಾದಳು. ಆಗ ಕಾಶಾಯ ವಸ್ತ್ರವನ್ನು ಧರಿಸಿದ್ದ, ಜಟಿಲಳಾದ, ಕೊಳೆ-ಧೂಳಿನಿಂದ ಕಲುಷಿತಳಾದ ದಮಯಂತಿಯು ಬಾಹುಕನನ್ನುದ್ದೇಶಿಸಿ ಮಾತನಾಡಿದಳು:

> “ಬಾಹುಕ! ನೀನು ಈ ಹಿಂದೆ ಮಲಗಿದ್ದ ಸ್ತ್ರೀಯನ್ನು ವಿಪಿನದಲ್ಲಿ ಬಿಟ್ಟುಹೋದ ಧರ್ಮಜ್ಞ ಎಂಬ ಹೆಸರಿನ ಪುರುಷನನ್ನು ಯಾವಾಗಲಾದರೂ ನೋಡಿದ್ದೀಯಾ? ಪುಣ್ಯಶ್ಲೋಕ ನಲನನ್ನು ಬಿಟ್ಟು ಇನ್ಯಾರು ಮುಗ್ಧಳಾದ, ಶ್ರಮದಿಂದ ಆಯಾಸಗೊಂಡಿದ್ದ ತನ್ನ ಪ್ರಿಯೆ ಹೆಂಡತಿಯನ್ನು ವಿಜನ ಪ್ರದೇಶದಲ್ಲಿ ಬಿಟ್ಟು ಹೋಗುತ್ತಾರೆ? ನನ್ನಿಂದ ಯಾವ ಮಹಾ ಅಪರಾಧವು ಆಯಿತೆಂದು ಆ ಮಹೀಪತಿಯು ನಿದ್ರೆಯಲ್ಲಿ ಪರವಶಳಾಗಿದ್ದ ನನ್ನನ್ನು ವಿಪಿನದಲ್ಲಿ ಬಿಟ್ಟು ಹೋದ? ಹಿಂದೆ ನಾನು ಸಾಕ್ಷಾತ್ ದೇವತೆಗಳನ್ನೇ ತಿರಸ್ಕರಿಸಿ ವರಿಸಿದ, ಅವನಲ್ಲೇ ಅನುವ್ರತಳಾದ, ಪುತ್ರಿಣಿ, ಅಭಿಕಾಮಿ ನನ್ನನ್ನು ಅವನು ಹೇಗೆ ಬಿಟ್ಟುಹೋದ? ಅಗ್ನಿಯ ಮುಂದೆ ಕೈ ಹಿಡಿಯುವಾಗ ಮತ್ತು ಹಂಸಗಳಿಗೆ ಅವಳಿಗೆ ಬೆಂಬಾಲಕನಾಗಿರುತ್ತೇನೆ ಎಂದು ಕೊಟ್ಟ ವಚನವಾದರೂ

ಎಲ್ಲಿಗೆ ಹೋಯಿತು?”

ಈ ರೀತಿ ದಮಯಂತಿಯು ಹೇಳುತ್ತಿದ್ದಂತೆಯೇ ಅವಳ ಕಣ್ಣುಗಳಿಂದ ಶೋಕಜ ಕಣ್ಣೀರು ಧಾರಾಕಾರವಾಗಿ ಹರಿಯಿತು.

ಕೃಷ್ಣತಾರೆಗಳಂತೆ ಕೆಂಪಾಗಿದ್ದ ಆ ಕಣ್ಣುಗಳಲ್ಲಿ ನೀರು ಹರಿಯುತ್ತಿದ್ದುದನ್ನು ಕಂಡ ನಲನು ಶೋಕಾರ್ತನಾಗಿ ಹೇಳಿದನು:

“ಭೀರು! ನಾನು ರಾಜ್ಯವನ್ನು ಕಳೆದುಕೊಂಡಿದ್ದುದು ನನ್ನ ಸ್ವಂತ ಕರ್ಮದಿಂದಲ್ಲ; ಅದೆಲ್ಲಾ ಆದದ್ದು ಕಲಿಯಿಂದ. ನಿನ್ನನ್ನು ನಾನು ತ್ಯಜಿಸಿದ್ದೂ ಅವನಿಂದಲೇ! ಶ್ರೇಷ್ಠಳಾದ ನೀನು ವನದಲ್ಲಿರುವಾಗ ನಿನ್ನಿಂದಲೇ ಹಿಂದೆ ಶಪಿತನಾದ ಅವನು ವಸ್ತ್ರಗಳನ್ನು ಕಳೆದುಕೊಂಡ ನನ್ನೊಡನೆ ದುಃಖಿತನಾಗಿ ಶೋಕಿತನಾಗಿದ್ದನು. ಅಂದಿನಿಂದಲೂ ಕಲಿಯು ನನ್ನ ದೇಹದಲ್ಲಿದ್ದುಕೊಂಡು ನಿನ್ನ ಶಾಪದಿಂದಾಗಿ ಸತತವಾಗಿ ದಹಿಸುತ್ತಿದ್ದನು. ಈಗ ನಾನು ನನ್ನ ಪ್ರಯತ್ನ ಮತ್ತು ತಪಸ್ಸಿನಿಂದ ಅವನನ್ನು ಜಯಿಸಿದ್ದೇನೆ. ನಮ್ಮ ಈ ದುಃಖಕ್ಕೆ ಅಂತ್ಯವು ಇದ್ದೇ ಇದೆ. ಆ ಪಾಪಿಯು ನನ್ನನ್ನು ಬಿಟ್ಟು ಹೊರಟು ಹೋದನು. ಆನಂತರವೇ ನಾನು ನಿನಗೋಸ್ಕರ ಇಲ್ಲಿಗೆ ಬಂದಿದ್ದೇನೆ. ಇನ್ಯಾವುದೂ ಉದ್ದೇಶವಿಲ್ಲ. ಆದರೆ, ಅನುರಕ್ತ ಮತ್ತು ಅನುವ್ರತ ಪತಿಯನ್ನು ತಿರಸ್ಕರಿಸಿ ನಿನ್ನ ಹಾಗಿನ ಒಬ್ಬ ನಾರಿಯು ಹೇಗೆ ಇನ್ನೊಬ್ಬನನ್ನು

ವರಿಸಬಹುದು? ಪೃಥಿವಿಯನ್ನೆಲ್ಲಾ ತಿರುಗುತ್ತಿದ್ದ ದೂತರು ನೃಪಶಾಸನದಂತೆ ಭೈಮಿಯು ತನ್ನ ಬಯಕೆಯಂತೆಯೇ ತನಗೆ ಅನುರೂಪ ಎರಡನೆಯ ಪತಿಯನ್ನು ವರಿಸುವವಳಿದ್ದಾಳೆ ಎಂದು ಹೇಳಿದರು. ಅದನ್ನು ಕೇಳಿದ ತಕ್ಷಣವೇ ಭಾಂಗಸ್ವರಿಯು ತ್ವರಿತದಿಂದ ಇಲ್ಲಿಗೆ ಬಂದಿದ್ದಾನೆ."

ನಲನ ಆ ಪರಿವೇದನೆಯನ್ನು ಕೇಳಿದ ದಮಯಂತಿಯು ಭೀತಳಾಗಿ, ನಡುಗುತ್ತಾ, ಕೈ ಮುಗಿದು ಈ ಮಾತುಗಳನ್ನು ಹೇಳಿದಳು:

"ನಿಷಧಾಧಿಪ! ಕಲ್ಯಾಣ! ನನ್ನನ್ನು ಪಾಪಿಯೆಂದು ಪರಿಶಂಕಿಸಬೇಡ. ಯಾಕೆಂದರೆ ನಾನು ದೇವತೆಗಳನ್ನೂ ತಿರಸ್ಕರಿಸಿ ನಿನ್ನನ್ನು ವರಿಸಿದ್ದೇನೆ. ನಿನ್ನನ್ನು ಬರುವಂತೆ ಮಾಡಲೋಸುಗವೇ ಎಲ್ಲಕಡೆಗೂ ಬ್ರಾಹ್ಮಣರು ಹೋಗಿ ದಶ ದಿಶೆಗಳಲ್ಲಿಯೂ ನನ್ನ ವಾಖ್ಯಗಳನ್ನು ಹಾಡಿ ಹೇಳಿದರು. ಈ ರೀತಿ ಪರ್ಣಾದ ಎಂಬ ಹೆಸರಿನ ವಿದ್ವಾನ್ ಬ್ರಾಹ್ಮಣನು ಕೋಸಲಕ್ಕೆ ಹೋದಾಗ ಅಲ್ಲಿ ಋತುಪರ್ಣನ ನಿವೇಶನದಲ್ಲಿ ನಿನ್ನನ್ನು ಕಂಡನು. ನನ್ನ ವಾಖ್ಯಗಳಿಗೆ ಸರಿಯಾದ ಪ್ರತಿವಾಖ್ಯವನ್ನು ನೀನು ಹೇಳಿದಹಾಗೆಯೇ ಅವನು ತಂದ ನಂತರ ನಿನ್ನನ್ನು ಇಲ್ಲಿಗೆ ಬರುವಂತೆ ಮಾಡುವ ಉಪಾಯವನ್ನು ನಾನು ಕಂಡೆ. ನಿನ್ನನ್ನು ಬಿಟ್ಟು ಈ ಲೋಕಗಳಲ್ಲಿ ಒಂದು ದಿನದಲ್ಲಿ ನೂರು ಯೋಜನೆಗಳನ್ನು


ಅಶ್ವಗಳಮೇಲೆ ಪ್ರಯಾಣ ಮಾಡಲು ಸಮರ್ಥರಾದವರು ಬೇರೆ ಯಾರೊಬ್ಬರೂ ಇಲ್ಲ. ನಿನ್ನ ಈ ಚರಣಗಳನ್ನು ನಾನು ಹೇಗೆ ಅಪ್ಪಿ ಹಿಡಿದಿದ್ದೇನೋ ಹಾಗೆ ಎಂದೂ ನನ್ನ ಮನಸ್ಸಿನಲ್ಲಿಯೂ ನಿನಗೆ ಅಪಕೃತಿಯನ್ನು ಎಸೆಗಲಿಲ್ಲ. ಒಮ್ಮೆಯಾದರೂ ನಾನು ಪಾಪದಿಂದ ನಡೆದುಕೊಂಡಿದ್ದರೆ ಸದಾ ಚಲಿಸುತ್ತಿರುವ, ಈ ಲೋಕದಲ್ಲಿ ಇರುವವೆಲ್ಲವಕ್ಕೂ ಸಾಕ್ಷಿಯಾಗಿರುವ, ಯಾವಾಗಲೂ ಚಲಿಸುತ್ತಿರುವ ವಾಯುವು ನನ್ನ ಪ್ರಾಣವನ್ನು ಹಾರಿಸಲಿ. ಅದೇರೀತಿ ನಾನು ಎಂದಾದರೂ ಪಾಪದಿಂದ ನಡೆದುಕೊಂಡಿದ್ದರೆ ಬೇರೆಯವರ ಮನೆಗಳಿಗೆ ಸದಾ ಹೋಗುತ್ತಿರುವ ಸೂರ್ಯನು ನನ್ನ ಪ್ರಾಣವನ್ನು ಬಿಡುಗಡೆಮಾಡಲಿ. ಸರ್ವ ಭೂತಗಳೊಳಗೆ ಸಾಕ್ಷಿಯಾಗಿ ಸಂಚರಿಸುತ್ತಿರುವ ಚಂದ್ರಮನು ನಾನು ಎಂದಾದರೂ ಪಾಪದಿಂದ ನಡೆದುಕೊಂಡಿದ್ದರೆ ನನ್ನ ಪ್ರಾಣವನ್ನು ಕೊಂಡೊಯ್ಯಲಿ. ಮೂರೂ ಲೋಕಗಳಿಗೆ ಧಾರಕ ಈ ಮೂರೂ ದೇವತೆಗಳು ಸತ್ಯವೇನೆಂದು ಹೇಳುವರು ಅಥವಾ ನನ್ನನ್ನು ಇಲ್ಲಿಯೇ ತ್ಯಜಿಸುವರು.”

ಹೀಗೆ ಹೇಳುತ್ತಿದ್ದಂತೆಯೇ ಅಂತರಿಕ್ಷದಲ್ಲಿ ವಾಯುವು ಹೇಳಿದನು:

“ನಲ! ಇವಳಿಂದ ಯಾವ ಪಾಪವೂ ನಡೆದಿಲ್ಲ. ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ. ದಮಯಂತಿಯು ತನ್ನ

ಶೀಲನಿಧಿಯನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದಿದ್ದಾಳೆ. ಈ ಮೂರು ವರ್ಷಗಳು ಅವಳನ್ನು ರಕ್ಷಿಸುತ್ತಾ ಬಂದಿರುವ ನಾವೇ ಅದಕ್ಕೆ ಸಾಕ್ಷಿ. ನಿನಗಾಗಿ ಬಳಸಿದ ಈ ಉಪಾಯಕ್ಕೆ ಸರಿಸಾಟಿ ಇನ್ನೊಂದಿಲ್ಲ. ಯಾಕೆಂದರೆ ನಿನ್ನನ್ನು ಹೊರತು ಈ ಭುಮಿಯಲ್ಲಿ ಒಂದೇ ದಿನದಲ್ಲಿ ನೂರು ಯೋಜನೆ ಹೋಗುವಂತವರು ಇನ್ನೊಬ್ಬರಿಲ್ಲ. ಭೈಮಿಯು ನಿನ್ನನ್ನು ಪಡೆದಿದ್ದಾಳೆ. ನೀನು ಅವಳನ್ನು ಪಡೆದಿದ್ದೀಯೆ. ಈ ವಿಷಯದಲ್ಲಿ ಯಾವುದೇ ಸಂಶಯವನ್ನು ತಾಳದಿರು. ನಿನ್ನ ಭಾರ್ಯೆಯನ್ನು ಕೂಡು!”

ವಾಯುವು ಹೇಳುತ್ತಿದ್ದ ಹಾಗೆಯೇ ಪುಷ್ಪವೃಷ್ಟಿಯಾಯಿತು, ದೇವ ದುಂದುಭಿಗಳು ಮೊಳಗಿದವು ಮತ್ತು ಮಂಗಲಕರ ಗಾಳಿ ಬೀಸಿತು. ಆ ಅದ್ಭುತವನ್ನು ನೋಡಿ ಅರಿಂದಮ ರಾಜ ನಲನು ದಮಯಂತಿಯ ಮೇಲಿದ್ದ ಎಲ್ಲ ಶಂಕೆಗಳನ್ನು ಕಳೆದುಕೊಂಡನು. ವಸುಧಾಧಿಪನು ನಾಗರಾಜನನ್ನು ಸಂಸ್ಮರಿಸುತ್ತಾ ಶುದ್ಧ ವಸ್ತ್ರವನ್ನು ಧರಿಸಿದನು ಮತ್ತು ತನ್ನ ಸ್ವ-ರೂಪವನ್ನು ಹೊಂದಿದನು. ಸ್ವರೂಪಿ ತನ್ನ ಪತಿಯನ್ನು ನೋಡಿ ಅನಿಂದಿತೆ ಭೀಮಸುತೆಯು ಗಟ್ಟಿಯಾಗಿ ಕೂಗುತ್ತಾ ಪುಣ್ಯಶ್ಲೋಕನನ್ನು



ಆಲಿಂಗಿಸಿದಳು. ಮೊದಲಿನಂತೆ ಹೊಳೆಯುತ್ತಿದ್ದ ರಾಜ ನಲನೂ ಕೂಡ ಭೈಮಿಯನ್ನು ಆಲಂಗಿಸಿದನು ಮತ್ತು ತನ್ನ ಸುತರೀರ್ವರನ್ನೂ ಆನಂದದಿಂದ ಬರಮಾಡಿಕೊಂಡನು. ಅನಂತರ ಆ ಆಯತಾಕ್ಷಿ ಶುಭಾನನೆಯು ತನ್ನ ಮುಖವನ್ನು ಅವನ ಎದೆಯ ಮೇಲಿರಿಸಿ ದುಃಖ ತುಂಬಿಬಂದು ನಿಟ್ಟುಸಿರು ಬಿಟ್ಟಳು. ಕೊಳೆಯಿಂದ ಲೇಪಿತಗೊಂಡಿದ್ದ ಆ ಶುಚಿಸ್ಮಿತೆಯು ಕಣ್ಣೀರುತುಂಬಿದವಳಾಗಿ  ಆ ಪುರುಷವ್ಯಾಘ್ರನನ್ನು ತುಂಬಾ ಹೊತ್ತು ಅಪ್ಪಿಕೊಂಡೇ ಇದ್ದಳು. ಆಗ ವೈದರ್ಭಿಯ ಜನನಿಯು ಭೀಮನಿಗೆ ದಮಯಂತಿ ಮತ್ತು ನಲರ ಮಧ್ಯೆ ನಡೆದುದೆಲ್ಲವನ್ನೂ ಹೇಳಿದಳು. ಆಗ ಮಹಾರಾಜನು ಹೇಳಿದನು: “ಸುಖವಾಗಿ ವಿಶ್ರಮಿಸಿ ನಾಳೆ ಶೌಚಾದಿಗಳನ್ನು ಮುಗಿಸಿದನಂತರ ನಲ ಮತ್ತು ದಮಯಂತಿಯರನ್ನು ಒಟ್ಟಿಗೇ ನೋಡುತ್ತೇನೆ!”

ಆ ರಾತ್ರಿಯನ್ನು ಅವರಿಬ್ಬರೂ ಹಿಂದೆ ಅರಣ್ಯದಲ್ಲಿ ನಡೆದುದನ್ನು ಪರಸ್ಪರರಲ್ಲಿ ಹೇಳಿಕೊಳ್ಳುತ್ತಾ ಸಂತೋಷದಿಂದ ಕಳೆದರು. ಮೂರು ವರ್ಷಗಳ ನಂತರ ಭಾರ್ಯೆಯನ್ನು ಸೇರಿ ಅವನು ಸರ್ವಕಾಮಗಳನ್ನೂ ಪೂರೈಸಿದಂಥವನಾಗಿ ಪರಮ ಸುಖವನ್ನು ಹೊಂದಿದನು. ದಮಯಂತಿಯೂ ಕೂಡ ತನ್ನ ಪತಿಯನ್ನು ಕೂಡಿ ಅರ್ಧವೇ ಬೆಳೆದಿರುವ ಸಸಿಗಳ ಮೇಲೆ ಮಳೆ ಬಿದ್ದರೆ ಹೇಗೆ ಭೂಮಿಯು ಹರ್ಷಗೊಳ್ಳುವುದೋ ಹಾಗೆ ಹರ್ಷಿತಳಾದಳು. ಅವಳ ಪತಿಯನ್ನು ಪುನಃ ಸೇರಿ, ಆಯಾಸವನ್ನು ಕಳೆದುಕೊಂಡು, ಜ್ವರವು ಶಾಂತವಾಗಿ, ಹೃದಯವು ಹರ್ಷಭರಿತವಾಗಿ, ಎಲ್ಲ ಆಸೆಗಳನ್ನೂ

ಪೂರೈಸಿಕೊಂಡವಳಾಗಿ ಭೌಮಿಯು ಉದಯಿಸುತ್ತಿರುವ ಚಂದ್ರನೊಡನಿರುವ ರಾತ್ರಿಯಂತೆ ಕಂಗೊಳಿಸಿದಳು.

## ಋತುಪರ್ಣನ ಸ್ವದೇಶ ಗಮನ

ಆ ರಾತ್ರಿಯನ್ನು ಕಳೆದ ನಂತರ ರಾಜ ನಲನು ಸ್ವಲಂಕೃತನಾಗಿ ವೈದರ್ಭಿಯ ಸಹಿತ ವಸುಧಾಧಿಪನನ್ನು ಕಂಡನು. ನಲನು ತನ್ನ ಮಾವನಿಗೆ ವಿನಯದಿಂದ ನಮಸ್ಕರಿಸಿದನು ಮತ್ತು ಅವನ ನಂತರದಲ್ಲಿ ಶುಭೆ ದಮಯಂತಿಯು ತಂದೆಗೆ ವಂದಿಸಿದಳು. ಭೀಮನು ತನ್ನ ಮಗನೋ ಎನ್ನುವ ರೀತಿಯಲ್ಲಿ ಅವನನ್ನು ಸಂತೋಷದಿಂದ ಸ್ವಾಗತಿಸಿದನು ಮತ್ತು ತಕ್ಕುದಾದ ಗೌರವವನ್ನಿತ್ತನು. ನಲನ ಜೊತೆಗಿದ್ದ ಪತಿವ್ರತೆ ದಮಯಂತಿಯನ್ನು ಪ್ರಭುವು ಸಂತವಿಸಿದನು. ಯಥಾವಿಧಿಯಲ್ಲಿ ಗೌರವವನ್ನು ಸ್ವೀಕರಿಸಿ ರಾಜ ನಲನು ಅವನಿಗೆ ತನ್ನ ಗೌರವವನ್ನು ಅರ್ಪಿಸಿದನು. ಈ ರೀತಿ ನಲನ ಆಗಮನವನ್ನು ನೋಡಿ ನಗರದಲ್ಲೆಲ್ಲಾ ಸಂಪ್ರಹೃಷ್ಟ ಜನರ ಮಹತ್ತರ ಹರ್ಷೋದ್ಗಾರವಾಯಿತು. ಪತಾಕ ಧ್ವಜ ಮಾಲೆಗಳಿಂದ ನಗರವು ಶೋಭೆಗೊಂಡಿತು. ರಾಜ ಮಾರ್ಗವು ಸಿಂಚಿಸಲ್ಪಟ್ಟಿತು ಮತ್ತು ಪುಷ್ಪಗಳಿಂದ ಹಾಸಿಸಲ್ಪಟ್ಟಿತು. ಪೌರರ ದ್ವಾರ ದ್ವಾರಗಳಲ್ಲಿ ಪುಷ್ಪಗುಚ್ಛಗಳನ್ನು ಇಡಲಾಗಿತ್ತು ಮತ್ತು ಎಲ್ಲಾ ದೇವಾಲಯಗಳಲ್ಲಿ ಅರ್ಚನೆಗಳನ್ನು ಏರ್ಪಡಿಸಲಾಯಿತು. ನರಾಧಿಪ ಋತುಪರ್ಣನೂ ಕೂಡ ಬಾಹುಕನು ವೇಷಬದಲಿಸಿ ನಲನಾಗಿದ್ದುದನ್ನು ಮತ್ತು

ದಮಯಂತಿಯನ್ನು ಪುನಃ ಸೇರಿದುದನ್ನು ಕೇಳಿ ಬಹಳ ಹರ್ಷಿತನಾದನು. ರಾಜ ನಲನು ಅವನನ್ನು ಕರೆಯಿಸಿ ಪಾರ್ಥಿವನ ಕ್ಷಮೆಯನ್ನು ಕೇಳಿದನು. ಅವನು ಕೂಡ ಬುದ್ಧಿಸಮ್ಮತ ಕಾರಣಗಳಿಗಾಗಿ ಕ್ಷಮಿಸಿದನು. ಸತ್ಕೃತ ಮಹೀಪಾಲನು ವಿಸ್ಮಯಾನ್ವಿತನಾಗಿ ನೈಷಧನು ತನ್ನ ಪತ್ನಿಯನ್ನು ಪುನಃ ಸೇರಿದ್ದುದಕ್ಕಾಗಿ ಅಭಿನಂದಿಸಿದನು:

> "ನೈಷಧ! ಅಜ್ಞಾತವಾಸಿಯಾಗಿ ನನ್ನ ಮನೆಯಲ್ಲಿ ವಾಸಿಸುತ್ತಿರುವಾಗ ನಿನಗೆ ಏನಾದರೂ ಅಪರಾಧವನ್ನು ಮಾಡಿರಬಹುದು. ಒಮ್ಮೆ ನಾನು ತಿಳಿದೋ ಅಥವಾ ತಿಳಿಯದೆಯೋ ನಿನಗೆ ನನ್ನಿಂದ ಏನಾದರೂ ತಪ್ಪಾಗಿದ್ದರೆ ನನ್ನನ್ನು ನೀನು ಕ್ಷಮಿಸ ತಕ್ಕದ್ದು."

ನಲನು ಹೇಳಿದನು:

> "ಪಾರ್ಥಿವ! ನಿನ್ನಿಂದ ನನ್ನ ಮೇಲೆ ಸ್ವಲ್ಪವೂ ಅಪರಾಧವಾಗಲಿಲ್ಲ. ಒಮ್ಮೆ ಆಗಿದ್ದರೂ ನನಗೆ ಅದರ ಕುರಿತು ಕೋಪವಿಲ್ಲ. ನಾನು ಅದನ್ನು ಕ್ಷಮಿಸಲೇ ಬೇಕು. ಈ ಪೂರ್ವದಲ್ಲಿ ನೀನು ನನ್ನ ಸಖನೂ ಮತ್ತು ಸಂಬಂಧಿಯೂ ಆಗಿರುವೆ. ಇನ್ನು ಮುಂದೆಯೂ ಕೂಡ ನನ್ನ ಮೇಲೆ ನಿನ್ನ ಪ್ರೀತಿಯಿರತಕ್ಕದ್ದು. ನನ್ನ ಮನೆಯಲ್ಲಿಗಿಂತಲೂ ನಿನ್ನ ಮನೆಯಲ್ಲಿ ನನ್ನ ಎಲ್ಲ ಆಸೆಗಳೂ ವಿಹಿತವಾಗಿ ಸುಖವಾಗಿದ್ದೆ. ನಿನ್ನ ಅನುಮತಿಯಿದ್ದರೆ ನನ್ನಲ್ಲಿರುವ ಈ ಅಶ್ವಜ್ಞಾನವನ್ನು

ನಿನಗೆ ಕೊಡಲು ಇಚ್ಛಿಸುತ್ತೇನೆ.”

ಹೀಗೆ ಹೇಳಿ ನೈಷಧನು ಋತುಪರ್ಣನಿಗೆ ವಿದ್ಯೆಯನ್ನಿತ್ತನು; ಮತ್ತು ಅವನು ಅದನ್ನು ವಿಧಿಕರ್ಮಪೂರಕವಾಗಿ ಸ್ವೀಕರಿಸಿದನು. ಅಶ್ವಹೃದಯವನ್ನು ಪಡೆದ ನಂತರ ನೃಪ ಭಾಂಗಸ್ವರಿಯು ಬೇರೆ ಸೂತನೊಬ್ಬನನ್ನು ನಿಯೋಜಿಸಿ ತನ್ನ ನಗರಿಗೆ ತೆರಳಿದನು. ಋತುಪರ್ಣನು ತೆರಳಿದ ನಂತರ ರಾಜ ನಲನು ಕುಂಡಿನೀ ನಗರದಲ್ಲಿ ದೀರ್ಘಕಾಲದವರೆಗೆ ವಾಸಿಸಲಿಲ್ಲ.

## ಪುಷ್ಕರ ಪರಾಭವ-ರಾಜ್ಯ ಪ್ರಾಪ್ತಿ

ಒಂದು ತಿಂಗಳ ನಂತರ ನೈಷಧನು ಭೀಮನ ಅನುಜ್ಞೆಯನ್ನು ಪಡೆದು, ಕೆಲವೇ ಜನರಿಂದೊಡಗೂಡಿ, ಒಂದೇ ಶುಭ್ರ ರಥದಲ್ಲಿ, ಹದಿನಾರು ಆನೆಗಳು, ಐವತ್ತು ಕುದುರೆಗಳು, ಮತ್ತು ಆರುನೂರು ಪದಸೈನಿಕರಿಂದೊಡಗೂಡಿ ನಗರದಿಂದ ನಿಷಧದ ಕಡೆ ಹೊರಟನು. ಮಹಿಯನ್ನೇ ನಡುಗಿಸುತ್ತಾ ಮಹಾಮನ ಮಹೀಪತಿಯು ಶೀಘ್ರದಲ್ಲಿಯೇ ಪುರವನ್ನು ಪ್ರವೇಶಿಸಿದನು. ವೀರಸೇನಸುತ ನಲನು ಪುಷ್ಕರನ ಬಳಿ ಹೋಗಿ ಹೇಳಿದನು:

> “ಪುನಃ ಜೂಜಾಡೋಣ! ಈಗ ನಾನು ಬಹು ಸಂಪತ್ತನ್ನು ಗಳಿಸಿದ್ದೇನೆ. ದಮಯಂತಿ ಮತ್ತು ನಾನು ಏನೆಲ್ಲ ಸಂಪತ್ತನ್ನು ಅರ್ಜಿಸಿದ್ದೀನೋ ಆ ಎಲ್ಲವನ್ನೂ ಪಣವಿಡುತ್ತೇನೆ. ಪುಷ್ಕರ!

ನೀನು ರಾಜ್ಯವನ್ನು ಪಣವಾಗಿಡು. ಒಂದೇ ಒಂದು ಪಣವನ್ನಿಟ್ಟು ಪುನಃ ದ್ಯೂತವನ್ನು ಮುಂದುವರಿಸಬೇಕೆಂದು ನಾನು ಸಿಶ್ಚಯಿಸಿದ್ದೇನೆ. ನಮ್ಮ ಪ್ರಾಣಗಳನ್ನೇ ಪಣವನ್ನಾಗಿಡೋಣ. ನಿನಗೆ ಒಳ್ಳೆಯದಾಗಲಿ. ಯಾರಾದರೂ ಇನ್ನೊಬ್ಬನ ರಾಜ್ಯವನ್ನಾಗಲೀ ಅಥವಾ ಸಂಪತ್ತನ್ನಾಗಲೀ ಗೆದ್ದು ತೆಗೆದುಕೊಂಡರೆ, ಅದಕ್ಕೊಂದು ಪ್ರತಿ ಪಣವನ್ನು ಇಡಬೇಕಾಗುತ್ತದೆ; ಇದನ್ನೇ ಕೊನೆಯ ಪಣವೆಂದು ಹೇಳಲಾಗುತ್ತದೆ. ನೀನು ದ್ಯೂತವನ್ನಾಡಲು ಇಚ್ಛಿಸದಿದ್ದರೆ, ನಿನಗೆ ಅಥವಾ ನನಗೆ ಚಿರಶಾಂತಿ ದೊರೆಯುವವರೆಗೆ ಎರಡು ರಥಗಳ ಮೇಲೆ ಯುದ್ಧದ ದ್ಯೂತವಾದರೂ ಪ್ರಾರಂಭವಾಗಬೇಕು. ವಂಶೀಯವಾಗಿ ಪಡೆದುಕೊಂಡ ಈ ರಾಜ್ಯವನ್ನು ಯಾವ ಮಾರ್ಗವನ್ನಾದರೂ ಅನುಸರಿಸಿ ಪುನಃ ಪಡೆದುಕೊಳ್ಳಬಹುದು ಎಂದು ವೃದ್ಧರು ಹೇಳುತ್ತಾರೆ. ಈ ಎರಡರಲ್ಲಿ ಒಂದನ್ನು ಈಗ ನಿಶ್ಚಯಮಾಡು. ದ್ಯೂತದಲ್ಲಿ ದಾಳಗಳನ್ನಾದರೂ ಎಸೆ ಅಥವಾ ಯುದ್ಧದಲ್ಲಿ ಧನುಸ್ಸನ್ನಾದರೂ ಎಳೆದು ಬಿಡು.”

ನೈಷಧನ ಈ ಮಾತುಗಳಿಗೆ ಪುಷ್ಕರನು ನಕ್ಕನು. ತನಗೇ ಜಯ ನಿಶ್ಚಯ ಎಂದು ತಿಳಿದು ಪೃಥಿವೀಪತಿಗೆ ಉತ್ತರಿಸಿದನು:

“ನೈಷಧ! ಪ್ರತಿಯಾಗಿ ಪಣವನ್ನಿಡಲು ನೀನು ಸಂಪತ್ತನ್ನು

ಗಳಿಸಿದ್ದೀಯೆ ಎಂದರೆ ಎಷ್ಟು ಸಂತೋಷದ ವಿಷಯ! ದಮಯಂತಿಯ ದುಷ್ಕೃತ ಕರ್ಮಗಳೆಲ್ಲ ನಾಶವಾದವು ಎಂದರೆ ಎಷ್ಟು ಸಂತೋಷದ ವಿಷಯ! ಹೆಂಡತಿಯೊಂದಿಗೆ ನೀನೂ ಜೀವಂತವಾಗಿದ್ದೀಯಲ್ಲ ಇದು ಇನ್ನೂ ಸಂತೋಷದ ವಿಷಯ! ನಾನು  ಗೆಲ್ಲುವ ಈ ಸಂಪತ್ತಿನಿಂದ ಸ್ವರ್ಗದಲ್ಲಿ ಸಮಲಂಕೃತ ಅಪ್ಸರೆಯರು ಶಕ್ರನನ್ನು ಸೇವಿಸುವಂತೆ ನನ್ನನ್ನು ವೈದರ್ಭಿಯು ಸೇವಿಸುವಳು ಎನ್ನುವುದು ನಿಜವಾಗುತ್ತಿದೆ. ನಿನ್ನನ್ನು ನಿತ್ಯವೂ ಸ್ಮರಿಸುತ್ತಿದ್ದೆ ಮತ್ತು ನಿನ್ನ ಪ್ರತೀಕ್ಷೆ ಮಾಡುತ್ತಿದ್ದೆ. ನನ್ನ ಸುಹೃದಯರಲ್ಲದವರ ಜೊತೆ ದ್ಯೂತವನ್ನಾಡಲು ನನಗೆ ಮನಸ್ಸೇ ಇರಲಿಲ್ಲ. ಇಂದು ಅನಿಂದಿತೆ ವರಾರೋಹೆ ದಮಯಂತಿಯನ್ನು ಗೆದ್ದು ನಾನು ಕೃತಕೃತ್ಯನಾಗುತ್ತೇನೆ; ಏಕೆಂದರೆ ಅವಳು ನಿತ್ಯವೂ ನನ್ನ ಹೃದಯದಲ್ಲಿ ಇದ್ದವಳು!”

ಅವನ ಈ ಬಾಲಿಶ ಮಾತುಗಳನ್ನು ಕೇಳಿದ ನಲನು ಖಡ್ಗದಿಂದ ಅವನ ಶಿರವನ್ನು ಛೇಧಿಸಬೇಕೆನ್ನುವಷ್ಟು ಕುಪಿತನಾದನು. ಆಗ ನೃಪನು ಸಿಟ್ಟಿನಿಂದ ಕಣ್ಣುಗಳು ಕೆಂಪಾಗಿದ್ದರೂ ನಗುತ್ತಾ ಹೇಳಿದನು:

“ಆಡೋಣ ಬಾ! ಮಾತನಾಡುವುದು ಯಾಕೆ? ಗೆದ್ದು ಮಾತನಾಡುವೆಯೆಂತೆ!”

ಹೀಗೆ ನಲ-ಪುಷ್ಕರರ ದ್ಯೂತವು ಪುನಃ ಪ್ರಾರಂಭವಾಯಿತು. ಒಂದೇ

ಒಂದು ಪಣದಲ್ಲಿ ಅವನು ನಲನಿಂದ ಪರಾಜಿತನಾದನು. ತನ್ನ ರತ್ನಕೋಶಗಳ ರಾಶಿಯನ್ನು ಮತ್ತು ತನ್ನ ಪ್ರಾಣವನ್ನೂ ಪಣವಿಟ್ಟು ಸೋತನು. ಪುಷ್ಕರನನ್ನು ಗೆದ್ದ ರಾಜನು ಮುಗುಳ್ನಗುತ್ತಾ ಹೇಳಿದನು:

> "ಹತಕಂಟಕ! ಈ ಎಲ್ಲ ರಾಜ್ಯವೂ ನನ್ನದು. ಇದಕ್ಕೆ ಸ್ಪರ್ಧಿಗಳು ಯಾರೂ ಇಲ್ಲ. ರಾಜಭ್ರಷ್ಠ! ನೀನು ಇನ್ನು ವೈದರ್ಭಿಯಮೇಲೆ ಕಣ್ಣನ್ನು ಇಡಲು ಶಕ್ಯನಲ್ಲ. ಮೂಢನೇ ನೀನು ಮತ್ತು ನಿನ್ನ ಪರಿವಾರವೆಲ್ಲವೂ ದಾಸತ್ವವನ್ನು ಪಡೆದವರಾಗಿದ್ದೀರಿ. ಹಿಂದೆ ನಾನು ಸೋತಿದ್ದುದು ನಿನ್ನಿಂದಾಗಿ ಅಲ್ಲ. ಅದು ಕಲಿಯು ಮಾಡಿದ ಕರ್ಮವಾಗಿತ್ತು. ಆದರೆ ಮೂಢ! ಅದು ನಿನಗೆ ತಿಳಿದಿರಲಿಲ್ಲ. ಪರರು ಮಾಡಿದ ದೋಷಕ್ಕೆ ನಾನಾದರೂ ನಿನ್ನನ್ನು ಹೇಗೆ ನಿಂದಿಸಲಿ? ನೀನು ನಿನಗಿಷ್ಟವಿದ್ದಂತೆ ಜೀವಿಸು. ನಿನ್ನ ಪ್ರಾಣವನ್ನು ನಿನಗೇ ಹಿಂದಿರುಗಿಸುತ್ತಿದ್ದೇನೆ. ಹಾಗೆಯೇ ವೀರ! ನಿನ್ನ ಮೇಲೆ ನನ್ನ ಪ್ರೀತಿಯಿರುತ್ತದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ನನ್ನ ಭ್ರಾತೃ ಪ್ರೇಮವು ನಿನ್ನನ್ನು ಇಂದೂ ವಂಚಿಸುವುದಿಲ್ಲ. ಪುಷ್ಕರ! ನೀನು ನನ್ನ ಭ್ರಾತೃ. ನೂರು ವರ್ಷ ಜೀವಿಸು!"

ಈ ರೀತಿ ಸತ್ಯವಿಕ್ರಮ ನಲನು ಭ್ರಾತನನ್ನು ಸಂತವಿಸಿ, ಪುನಃ ಪುನಃ ಅಪ್ಪಿಕೊಳ್ಳುತ್ತಾ ಅವನ ಪುರಕ್ಕೆ ಬೀಳ್ಕೊಟ್ಟನು. ನೈಷಧನಿಂದ ಸಾಂತ್ವನಗೊಂಡ ಪುಷ್ಕರನು ಆ ಪುಣ್ಯಶ್ಲೋಕನಿಗೆ ಕೃತಾಂಜಲಿಯಾಗಿ

ಅಭಿವಂದಿಸಿ ಉತ್ತರಿಸಿದನು:

> "ನನ್ನ ಪ್ರಾಣ ಮತ್ತು ಅಧಿಷ್ಠಾನವನ್ನು ಹಿಂದಿರುಗಿಸಿದ
> ಪಾರ್ಥಿವ! ನೀನು ಅನೇಕ ವರ್ಷಗಳ ಪರ್ಯಂತ ಜೀವಿಸು
> ಮತ್ತು ನಿನ್ನ ಕೀರ್ತಿಯು ಅಕ್ಷಯವಾಗಿರಲಿ!"

ರಾಜ ಪುಷ್ಕರನು ನೃಪನ ಅತಿಥಿಯಾಗಿ ಒಂದು ತಿಂಗಳು ಅಲ್ಲಿಯೇ ಇದ್ದು ನಂತರ ಸಂತಸದಿಂದ ಸ್ವಜನರೊನ್ನೊಡಗೂಡಿ, ಮಹತ್ತರ ಸೇನೆಯೊಂದಿಗೆ, ವಿನೀತ ಪರಿಚಾರಕರೊಂದಿಗೆ, ರೂಪದಲ್ಲಿ ಆದಿತ್ಯನಂತೆ ಬೆಳಗುತ್ತಾ ಸ್ವಪುರಕ್ಕೆ ಪ್ರಯಾಣಿಸಿದನು. ವಿತ್ತವಂತ ಅನಾಮಯ ಪುಷ್ಕರನನ್ನು ಕಳುಹಿಸಿ, ರಾಜನು ಅದ್ಭುತವಾಗಿ ಅಲಂಕೃತವಾಗಿದ್ದ ತನ್ನ ಪುರವನ್ನು ಪ್ರವೇಶಿಸಿದನು. ಪ್ರವೇಶಿಸಿ ನಿಷಧಾಧಿಪನು ಪುರಜನರನ್ನು ಸಾಂತ್ವಯಿಸಿದನು. ಹೃಷ್ಟ ಪುರಜನರು ಪ್ರಶಾಂತರಾದಂತೆ ಮಹಾ ಉತ್ಸವವು ಪ್ರಾರಂಭವಾಗಿತ್ತು. ರಾಜನು ಮಹತ್ತರ ಸೇನೆಯೊಂದಿಗೆ ದಮಯಂತಿಯನ್ನು ಕರೆತಂದನು. ದಮಯಂತಿಯನ್ನು ತಂದೆ ಪರಮ ವೀರ ಅದಮೇಯಾತ್ಮ ಭೀಮಪರಾಕ್ರಮಿ ಭೀಮನು ಸತ್ಕರಿಸಿ ಕಳುಹಿಸಿಕೊಟ್ಟನು. ಪುತ್ರರೊಡನೆ ಆಗಮಿಸಿದ ವೈದರ್ಭಿಯೊಡನೆ ನೃಪ ನಲನು ನಂದನವನದಲ್ಲಿ ದೇವತೆಗಳಂತೆ ಸಂತೋಷದಿಂದ ಇದ್ದನು. ಜಂಬೂದ್ವೀಪದಲ್ಲಿರುವ ರಾಜರುಗಳಲ್ಲೇ ಪ್ರಕಾಶಿಸುತ್ತಾ ಆ ಮಹಾಯಶನು ಮರಳಿ ಗಳಿಸಿದ ರಾಜ್ಯದಲ್ಲಿ ಪುನಃ ವಾಸಿಸಿದನು. ಅವನು ಸಾಕಷ್ಟು ದಕ್ಷಿಣೆಗಳಿಂದ

ವಿವಿಧ ಯಜ್ಞಗಳನ್ನು ವಿಧಿವತ್ತಾಗಿ ನೆರವೇರಿಸಿದನು.

# ಅಗಸ್ತ್ಯೋಪಾಖ್ಯಾನ

[ಅಗಸ್ತ್ಯನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೯೪-೧೦೩) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

## ಅಗಸ್ತ್ಯನಿಂದ ಇಲ್ವಲನ ಸಂಹಾರ

ಹಿಂದೆ ಮಣಿಮತಿ ಪುರದಲ್ಲಿ ಇಲ್ವಲ ಎಂಬ ಹೆಸರಿನ ದೈತ್ಯನಿದ್ದನು. ವಾತಾಪಿಯು ಅವನ ಅನುಜ. ಆ ದಿತಿನಂದನನು ಒಮ್ಮೆ ತಪೋಯುಕ್ತನಾದ ಓರ್ವ ಬ್ರಾಹ್ಮಣನಲ್ಲಿ ಕೇಳಿಕೊಂಡನು:

> "ಭಗವನ್! ನನಗೆ ಇಂದ್ರನಿಗೆ ಸಮಾನ ಪುತ್ರನೋರ್ವನನ್ನು ಪರಿಪಾಲಿಸು."

ವಾಸವನ ಸಮನಾದ ಪುತ್ರನನ್ನು ಅವನಿಗೆ ಆ ಬ್ರಾಹ್ಮಣನು ಕೊಡದೇ ಇರಲು ಆ ಅಸುರನು ಬ್ರಾಹ್ಮಣನ ಮೇಲೆ ಅತ್ಯಂತ ಕೋಪಗೊಂಡನು. ಅವನು ವೈವಸ್ವತಕ್ಷಯಕ್ಕೆ ಹೋಗಿದ್ದ ಯಾರನ್ನು ಕರೆದರೂ ಅವನು



ಪುನಃ ದೇಹವನ್ನು ಧರಿಸಿ ಜೀವಂತನಾಗಿ ಬಂದು ಕಾಣಿಸಿಕೊಳ್ಳುತ್ತಿದ್ದನು. ಅವನು ಅಸುರ ವಾತಾಪಿಯನ್ನು ಆಡನ್ನಾಗಿ ಮಾಡಿ, ಅದನ್ನೇ ರುಚಿಯಾಗಿ ಬೇಯಿಸಿ ಆ ಬ್ರಾಹ್ಮಣನಿಗೆ ತಿನ್ನಿಸಿ ಪುನಃ ಅವನನ್ನು ಕೂಗಿ ಕರೆದನು. ಆಗ ಆ ಮಹಾಸುರ ವಾತಾಪಿಯು ಬ್ರಾಹ್ಮಣನ ಪಾರ್ಶ್ವವನ್ನು ಸೀಳಿ ನಗುತ್ತಾ ಹೊರಬಂದನು. ಈ ರೀತಿಯಲ್ಲಿ ಆ ದುಷ್ಟಚೇತನ ದೈತ್ಯ ಇಲ್ವಲನು ಬ್ರಾಹ್ಮಣರಿಗೆ ಪುನಃ ಪುನಃ ಭೋಜನವನ್ನಿತ್ತು ಹಿಂಸಿಸತೊಡಗಿದನು.

ಇದೇ ಸಮಯದಲ್ಲಿ ಭಗವಾನ್ ಅಗಸ್ತ್ಯನು ಒಂದು ಬಾವಿಯಲ್ಲಿ ತಲೆಕೆಳಗಾಗಿ ನೇತಾಡುತ್ತಿರುವ ತನ್ನ ಪಿತೃಗಳನ್ನು ಕಂಡನು. ಆ ರೀತಿಯಾಗಿ ನೇತಾಡುತ್ತಿರುವ ಅವರನ್ನು ಕೇಳಿದನು:

“ನಿಮ್ಮ ತೊಂದರೆಯೇನು?”

ಆಗ ಆ ಬ್ರಹ್ಮವಾದಿಗಳು

“ಸಂತಾನ!”

ಎಂದು ಹೇಳಿದರು. ಅವನಿಗೆ ಹೇಳಿದರು:

“ನಾವು ನಿನ್ನ ಸ್ವಂತ ಪಿತೃಗಳು. ಪ್ರಸವಾರ್ಥಿಗಳಾದ ನಾವು ಈ ಕೂಪದಲ್ಲಿ ನೇತಾಡುವ ಪರಿಸ್ಥಿತಿಗೆ ಬಂದಿಳಿದಿದ್ದೇವೆ. ಅಗಸ್ತ್ಯ! ನೀನು ಉತ್ತಮ ಮಕ್ಕಳನ್ನೇನಾದರೂ ಪಡೆದರೆ ನಾವು ಈ ನರಕದಿಂದ ಮೋಕ್ಷಹೊಂದುತ್ತೇವೆ ಮತ್ತು ಪುತ್ರರಿಂದ ನೀನೂ ಕೂಡ ಗತಿಯನ್ನು ಹೊಂದುತ್ತೀಯೆ.”

ಆ ತೇಜಸ್ವೀ ಸತ್ಯಧರ್ಮಪರಾಯಣನು ಅವರಿಗೆ ಹೇಳಿದನು:

“ಪಿತೃಗಳೇ! ನಿಮ್ಮ ಇಚ್ಛೆಯಂತೆಯೇ ಮಾಡುತ್ತೇನೆ. ನಿಮ್ಮ ಮನಸ್ಸಿನ ಜ್ವರವನ್ನು ತೊರೆಯಿರಿ.”

ಪ್ರಸವ ಸಂತಾನದ ಕುರಿತು ಚಿಂತಿಸುತ್ತಾ ಆ ಭಗವಾನ್ ಋಷಿಯು ತನ್ನ ಮಗುವನ್ನು ಹಡೆಯಬಲ್ಲಂಥ ಯಾವ ಸ್ತ್ರೀಯನ್ನೂ ಕಾಣಲಿಲ್ಲ. ಆಗ ಅವನು ಬೇರೆ ಬೇರೆ ಪ್ರಾಣಿಗಳಿಂದ ಅನುತ್ತಮವಾದ ಬೇರೆ ಬೇರೆ ಅಂಗಗಳನ್ನು ಒಟ್ಟುಹಾಕಿ, ಆ ಅಂಗಗಳಿಂದ ಒಂದು ಉತ್ತಮ ಸ್ತ್ರೀಯನ್ನು ನಿರ್ಮಿಸಿದನು. ಆ ಮಹಾತಪಸ್ವಿ ಮುನಿಯು ಅವಳನ್ನು ತನಗಾಗಿ ಸುರಕ್ಷಿತವಾಗಿ ಇಟ್ಟುಕೊಳ್ಳುವಂತೆ ಪುತ್ರರನ್ನು ಬಯಸುತ್ತಿದ್ದ

ವಿದರ್ಭರಾಜನಿಗೆ ಕೊಟ್ಟನು. ಅಲ್ಲಿ ಆ ಸುಭಗೆ ವಿದ್ಯುತ್ತಿನ ಮಾಲೆಯು ಜನಿಸಿದಳು ಮತ್ತು ಆ ಶುಭಾನನೆಯು ವಿಭ್ರಾಜಿಸುವ ಸೌಂದರ್ಯದಿಂದ ವೃದ್ಧಿಸಿದಳು. ಅವಳು ಹುಟ್ಟಿದೊಡನೆಯೇ ಆ ಪೃಥ್ವೀಪತಿ ವೈದರ್ಭನು ಸಂತೋಷದಿಂದ ದ್ವಿಜರಿಗೆ ಅವಳನ್ನು ನಿವೇದಿಸಿದನು. ಸರ್ವ ಬ್ರಾಹ್ಮಣರೂ ಅವಳನ್ನು ಸ್ವಾಗತಿಸಿದರು ಮತ್ತು ಆ ದ್ವಿಜರು ಅವಳಿಗೆ ಲೋಪಾಮುದ್ರ ಎನ್ನುವ ಹೆಸರನ್ನು ಇಟ್ಟರು. ಅವಳು ಅನುತ್ತಮ ರೂಪವಂತಳಾಗಿ ಕಾಂತಿಯುಕ್ತಳಾಗಿ, ನೀರಿನಲ್ಲಿ ತಾವರೆಯಂತೆ ಅಥವಾ ಶುಭ ಅಗ್ನಿಯ ಶಿಖೆಯಂತೆ ಬೇಗನೆ ಬೆಳೆದಳು. ಅವಳಿಗೆ ಯೌವನಪ್ರಾಪ್ತಿಯಾದಾಗ ಸ್ವಲಂಕೃತರಾದ ನೂರು ಕನ್ಯೆಯರು ಮತ್ತು ನೂರು ದಾಸಿಯರು ಆ ಕಲ್ಯಾಣಿಯ ಬೇಕುಬೇಡಗಳನ್ನು ನೋಡಿಕೊಳ್ಳುತ್ತಾ ಸೇವಿಸುತ್ತಿದ್ದರು. ಸುತ್ತುವರೆದ ನೂರು ದಾಸಿಯರ ಮತ್ತು ನೂರು ಕನ್ಯೆಯರ ಮಧ್ಯೆ ಆ ಕನ್ಯೆಯು ಆಕಾಶದಲ್ಲಿ ರೋಹಿಣಿಯಂತೆ ಬೆಳಗುತ್ತಿದ್ದಳು. ಯೌವನಸ್ಥೆಯಾಗಿದ್ದರೂ, ಶೀಲಾಚಾರ ಸಮನ್ವಿತಳಾಗಿದ್ದರೂ ಕೂಡ ಮಹಾತ್ಮ ಅಗಸ್ತ್ಯನ ಭಯದಿಂದ ಯಾವ ಪುರುಷನೂ ಅವಳನ್ನು ವರಿಸಲಿಲ್ಲ. ಆದರೂ ರೂಪದಲ್ಲಿ ಅಪ್ಸರೆಯರನ್ನೂ ಮೀರಿಸಿದ್ದ ಆ ಸತ್ಯವತಿ ಕನ್ಯೆಯು ತನ್ನ ಶೀಲದಿಂದ ತಂದೆ ಮತ್ತು ಸ್ವಜನರಿಗೆ ಸಂತೋಷವನ್ನು ತಂದಳು. ಆ ವೈದರ್ಭಿಯು ಹೀಗೆ ಯುವತಿಯಾಗಿದ್ದುದನ್ನು ನೊಡಿದ ಅವಳ ತಂದೆಯು

"ಈ ನನ್ನ ಮಗಳನ್ನು ಯಾರಿಗೆ ಕೊಡಲಿ?"

ಎಂದು ಮನಸ್ಸಿನಲ್ಲಿಯೇ ಚಿಂತಿಸಿದನು.

ಅವಳು ಗೃಹಿಣಿಯಾಗಲು ತಯಾರಾಗಿದ್ದಾಳೆ ಎಂದು ಯೋಚಿಸಿದ ಅಗಸ್ತ್ಯನು ಪೃಥ್ವೀಪತಿ ವಿದರ್ಭರಾಜನಲ್ಲಿಗೆ ಹೋಗಿ ಹೇಳಿದನು:

> "ರಾಜನ್! ಪುತ್ರನು ಬೇಕೆಂಬ ಕಾರಣದಿಂದ ನಾನು ಮದುವೆಯಾಗಲು ಮನಸ್ಸುಮಾಡಿದ್ದೇನೆ. ನಿನ್ನಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ - ಲೋಪಾಮುದ್ರೆಯನ್ನು ನನಗೆ ಕೊಡು."

ಮುನಿಯು ಹೀಗೆ ಹೇಳಲು ಮಹೀಪಾಲನು ನಿರಾಕರಿಸಲು ಅಶಕ್ತನಾಗಿ, ಕೊಡಲು ಮನಸ್ಸಿಲ್ಲದವನಾಗಿ ದ್ವಂದ್ವದಲ್ಲಿ ಸಿಲುಕಿದನು. ಆಗ ಆ ರಾಜನು ತನ್ನ ಹೆಂಡತಿಯಲ್ಲಿಗೆ ಹೋಗಿ ಹೇಳಿದನು:

> "ಈ ಮಹರ್ಷಿಯು ಮಹಾವೀರ್ಯವಂತ! ಸಿಟ್ಟಾದರೆ ತನ್ನ ಶಾಪಾಗ್ನಿಯಿಂದ ಸುಟ್ಟುಬಿಡುತ್ತಾನೆ."

ಈ ರೀತಿ ತನ್ನ ಪತ್ನಿಯೊಂದಿಗೆ ದುಃಖಿತನಾಗಿದ್ದ ರಾಜನನ್ನು ನೋಡಿದ ಲೋಪಾಮುದ್ರೆಯು ಅವರಲ್ಲಿಗೆ ಹೋಗಿ ಸಮಯಕ್ಕೆ ಸರಿಯಾಗಿ ಈ ಮಾತುಗಳನ್ನಾಡಿದಳು:

> "ಅಪ್ಪಾ! ನನ್ನಿಂದಾಗಿ ಈ ರೀತಿಯ ಪೀಡೆಯನ್ನು ಅನುಭವಿಸುವುದು ಸರಿಯಲ್ಲ. ನನ್ನನ್ನು ಅಗಸ್ತ್ಯನಿಗೆ ಕೊಡು. ಈ ರೀತಿ ನನ್ನಿಂದ ನಿನ್ನನ್ನು ಉಳಿಸಿಕೊಳ್ಳಬಹುದು."

ತನ್ನ ಮಗಳ ಮಾತಿನಂತೆ ಆ ರಾಜನು ಮಹಾತ್ಮ ಅಗಸ್ತ್ಯನಿಗೆ



ಲೋಪಾಮುದ್ರೆಯನ್ನು ವಿಧಿವತ್ತಾಗಿ ಕೊಟ್ಟನು.

ಹೆಂಡತಿಯನ್ನು ಪಡೆದ ಅಗಸ್ತ್ಯನು ಲೋಪಾಮುದ್ರೆಗೆ ಹೇಳಿದನುಃ

> "ಈ ಬೆಲೆಬಾಳುವ ಉಡುಗೆಯನ್ನೂ ಆಭರಣಗಳನ್ನು ತೆಗೆದು ಬಿಸಾಡು !"

ಅವುಗಳು ಅತೀವ ಸುಂದರವಾಗಿದ್ದರೂ ಬೆಲೆಬಾಳುವವುಗಳಾಗಿದ್ದರೂ ಆ ರಂಭೋರು, ಉದ್ದ ಕಣ್ಣಿನವಳು ತನ್ನ ಉಡುಗೆತೊಡುಗೆಗಳನ್ನು ಬಿಸುಟಳು. ಅನಂತರ ಆ ಆಯತಲೋಚನೆಯು ಜೀರಾಣಿಯನ್ನು ತೆಗೆದುಕೊಂಡು ವಲ್ಕಲ ಮತ್ತು ಇತರ ಜಿನ ವಸ್ತ್ರಗಳನ್ನು ಉಟ್ಟು ತನ್ನ ಪತಿಯೊಂದಿಗೆ ಸಮಾನ ವ್ರತವನ್ನು ಕೈಗೊಂಡಳು. ಭಗವಾನ್

ಋಷಿಸತ್ತಮನು ಗಂಗಾದ್ವಾರಕ್ಕೆ ಬಂದು ತನ್ನ ಅನುಕೂಲಗಳನ್ನು ನಡೆಸಿಕೊಡುತ್ತಿದ್ದ ಪತ್ನಿಯೊಂದಿಗೆ ಉಗ್ರತಮ ತಪಸ್ಸನ್ನು ಕೈಗೊಂಡನು. ಅವಳು ಪ್ರೀತಿ ಮತ್ತು ಗೌರವಗಳಿಂದ ತನ್ನ ಪತಿಯ ಪರಿಚರಿಯನ್ನು ಮಾಡಿದಳು, ಮತ್ತು ಪ್ರಭು ಅಗಸ್ತ್ಯನು ತನ್ನ ಪತ್ನಿಯಿಂದ ಪರಮ ಪ್ರೀತಿಯನ್ನು ಪಡೆದನು. ಬಹಳ ದಿನಗಳ ನಂತರ ಭಗವಾನ್ ಋಷಿಯು ಸ್ನಾನಮಾಡಿದ, ತಪಸ್ಸಿನಿಂದ ಕಾಂತಿಯುಕ್ತಳಾಗಿದ್ದ ಲೋಪಾಮುದ್ರೆಯನ್ನು ನೋಡಿದನು. ಅವಳ ಶೌಚ, ದಮ, ಪರಿಚಾರಿಕೆ, ರೂಪ ಮತ್ತು ಗುಣಗಳಿಂದ ಪ್ರೀತನಾಗಿ ಅವಳನ್ನು ಸಂಭೋಗಕ್ಕೆ ಕರೆದನು. ಆಗ ಆ ಭಾಮಿನಿಯು ಅಂಜಲೀ ಬದ್ಧಳಾಗಿ, ನಾಚಿಕೊಂಡು, ಆ ಭಗವಂತನಲ್ಲಿ ಈ ಸಪ್ರಣಯ ಮಾತುಗಳನ್ನಾಡಿದಳು:

> “ಮಕ್ಕಳಿಗೋಸ್ಕರ ಪತಿಯು ಪತ್ನಿಯನ್ನು ಮಾಡಿಕೊಳ್ಳುತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಋಷೇ! ನನ್ನಿಂದ ನಿನಗೆ ದೊರೆಯುವ ಸುಖವನ್ನು ನನಗೂ ನೀನು ನೀಡಬೇಕು. ನನ್ನ ತಂದೆಯ ಮನೆಯಲ್ಲಿ ಅಂತಃಪುರದಲ್ಲಿ ಯಾವರೀತಿಯ ಹಾಸಿಗೆಯಿತ್ತೋ ಅದೇ ರೀತಿಯ ಹಾಸಿಗೆಯ ಮೇಲೆ ನನ್ನೊಡನೆ ಮಲಗಬೇಕು. ನನಗಿಷ್ಟವಾದ ದಿವ್ಯಾಭರಣಗಳಿಂದ ನಾನು ಅಲಂಕರಿಸಿಕೊಳ್ಳುವ ಹಾಗೆ ನೀನೂ ಕೂಡ ಮಾಲೆ ಮತ್ತು ಭೂಷಣಗಳಿಂದ ವಿಭೂಷಿತನಾಗಿ ಬರಬೇಕೆಂದು ಬಯಸುತ್ತೇನೆ.”

ಅಗಸ್ತ್ಯನು ಹೇಳಿದನು:

"ಲೋಪಾಮುದ್ರಾ! ಆದರೆ ನಿನ್ನ ತಂದೆಯಲ್ಲಿ ಇರುವ ಹಾಗಿನ ಧನವು ನನ್ನಲ್ಲಿ ಇಲ್ಲವಲ್ಲ!"

ಲೋಪಾಮುದ್ರೆಯು ಹೇಳಿದಳು:

"ಮಹೇಶ್ವರ! ನಿನ್ನ ತಪಸ್ಸಿನ ಶಕ್ತಿಯಿಂದ ಈ ಜೀವಲೋಕದಲ್ಲಿರುವ ಯಾವುದನ್ನಾಗಲೀ ನೀನು ಒಂದೇ ಕ್ಷಣದಲ್ಲಿ ಪಡೆದುಕೊಳ್ಳಬಹುದು."

ಅಗಸ್ತ್ಯನು ಹೇಳಿದನು:

"ನೀನು ಹೇಳಿದಂತೆ ಮಾಡಿದರೆ ನನ್ನ ತಪೋಶಕ್ತಿಯ ವ್ಯಯವಾಗುತ್ತದೆ. ನನ್ನ ತಪೋಶಕ್ತಿಯು ನಾಶವಾಗದಂತೆ ನನ್ನಲ್ಲಿ ಕೇಳಿಕೋ."

ಲೋಪಾಮುದ್ರೆಯು ಹೇಳಿದಳು:

"ತಪೋಧನ! ನನ್ನ ಋತುವಿನ ಸ್ವಲ್ಪವೇ ಸಮಯ ಉಳಿದಿದೆ. ಅನ್ಯಥಾ ನಾನು ನಿನ್ನೊಡನೆ ಸಂಭೋಗ ಮಾಡಲು ಬಯಸುವುದಿಲ್ಲ. ನಾನು ನಿನ್ನನ್ನು ಧರ್ಮಭ್ರಷ್ಟನನ್ನಾಗಿ ಮಾಡಲೂ ಬಯಸುವುದಿಲ್ಲ. ನಾನು ಬಯಸಿದಂತೆ ಇವುಗಳನ್ನು ನೀನು ಸಂಪಾದಿಸಬೇಕು."

ಅಗಸ್ತ್ಯನು ಹೇಳಿದನು:

> “ಸುಭಗೇ! ನಿನ್ನ ಬುದ್ಧಿಯು ನಿಶ್ಚಯಿಸಿದಂತೆಯೇ ನೀನು ಬಯಸಿದ್ದೀಯೆ. ಆಗಲಿ. ನಾನು ಹೋಗುತ್ತೇನೆ. ನೀನು ಇಲ್ಲಿ ನಿನಗಿಷ್ಟವಾದ ಹಾಗೆ ಇರು.”

ಅನಂತರ ಅಗಸ್ತ್ಯನು ಸಂಪತ್ತನ್ನು ಕೇಳಿಕೊಂಡು ಇವನಲ್ಲಿ ಇತರ ರಾಜರುಗಳಿಗಿಂತ ಹೆಚ್ಚು ಧನವಿದೆ ಎಂದು ತಿಳಿದು, ಮಹೀಪಾಲ ಶ್ರುತರ್ವಾಣನಲ್ಲಿಗೆ ಹೋದನು. ಕುಂಭಯೋನಿಯಲ್ಲಿ ಹುಟ್ಟಿದ್ದ ಅವನು ಬಂದಿದ್ದಾನೆಂದು ತಿಳಿದ ನೃಪತಿಯು ತನ್ನ ದೇಶದ ಗಡಿಗೆ ಅಮಾತ್ಯರೊಂದಿಗೆ ಬಂದು ಅವನನ್ನು ಚೆನ್ನಾಗಿ ಸತ್ಕರಿಸಿ ಬರಮಾಡಿಕೊಂಡನು. ಅವನಿಗೆ ಯಥಾವಿಧಿಯಾಗಿ ಅರ್ಘ್ಯವನ್ನಿತ್ತ ನಂತರ ಪೃಥಿವೀಪತಿಯು ಅಂಜಲೀ ಬದ್ಧನಾಗಿ, ತಲೆಬಾಗಿ, ಅವನ ಆಗಮನದ ಕಾರಣವನ್ನು ಕೇಳಿದನು. ಅಗಸ್ತ್ಯನು ಹೇಳಿದನು:

> “ಪೃಥಿವೀಪತೇ! ವಿತ್ತವನ್ನು ಪಡೆಯಲೋಸುಗ ನಾನು ಬಂದಿದ್ದೇನೆ ಎಂದು ತಿಳಿ. ಇನ್ನೊಬ್ಬರಿಗೆ ಕಡಿಮೆಯಾಗದಂತೆ, ಅದರಲ್ಲಿಯ ಭಾಗವನ್ನು ನನಗೆ ಕೊಡು.”

ಆಗ ರಾಜನು ಅವನಿಗೆ ತನ್ನ ಆದಾಯ ವೆಚ್ಚಗಳ ಕುರಿತು ಸಂಪೂರ್ಣವಾಗಿ ವಿವರಿಸಿ, ನಿವೇದಿಸಿದನು:

> “ಈಗ ನಿನಗೆ ತಿಳಿದಿದೆ. ಇದರಲ್ಲಿ ನಿನಗೆ ಎಷ್ಟು ಬೇಕೋ

ಅಷ್ಟನ್ನು ತೆಗೆದುಕೋ!”

ಅವನ ಆದಾಯ ವೆಚ್ಚಗಳು ಸರಿಸಮನಾಗಿವೆ ಎಂದು ನೋಡಿದ ಸಮಮತಿ ದ್ವಿಜನು ಏನನ್ನೂ ತೆಗೆದೊಕೊಂಡರೂ ಅದು ಪ್ರಜೆಗಳಿಗೆ ಕಷ್ಟವನ್ನೊಡ್ಡಿದ ಹಾಗೆ ಎಂದು ಯೋಚಿಸಿದನು.

ಅವನು ಶ್ರುತರ್ವಾಣನನ್ನೂ ಕರೆದುಕೊಂಡು ವಧ್ರ್ಯಶ್ವನಲ್ಲಿಗೆ ಹೋದನು. ಅವರಿರ್ವರನ್ನೂ ಅವನು ತನ್ನ ದೇಶದ ಗಡಿಯಲ್ಲಿ ಯಥಾವಿಧಿಯಾಗಿ ಸ್ವಾಗತಿಸಿದನು. ವಧ್ರ್ಯಶ್ವನು ಅವನಿಗೆ ಅರ್ಘ್ಯ ಪಾದ್ಯಗಳನ್ನು ನೀಡಿದ ನಂತರ ಅವನು

“ಬಂದ ಕಾರಣದ ಕುರಿತು ಅಪ್ಪಣೆಯಾಗಬೇಕು!”

ಎಂದು ಕೇಳಿಕೊಂಡನು. ಅಗಸ್ತ್ಯನು ಹೇಳಿದನು:

“ಪೃಥಿವೀಪತೇ! ವಿತ್ತವನ್ನು ಬಯಸಿ ನಾವಿಬ್ಬರೂ ಇಲ್ಲಿಗೆ ಬಂದಿದ್ದೇವೆ ಎಂದು ತಿಳಿ. ಇನ್ನೊಬ್ಬರಿಗೆ ಕಷ್ಟವಾಗದ ರೀತಿಯಲ್ಲಿ ನಿನ್ನ ಸಂಪತ್ತಿನ ಭಾಗವನ್ನು ನಮಗೆ ನೀಡು.”

ಆಗ ರಾಜನು ಇಬ್ಬರಿಗೂ ತನ್ನ ಆದಾಯ ವೆಚ್ಚಗಳ ಕುರಿತು ಹೇಳಿ,

“ಇದನ್ನು ತಿಳಿದ ನೀವು ಉಳಿದಿದ್ದನ್ನು ತೆಗೆದುಕೊಂಡು ಹೋಗಿ”

ಎಂದನು. ಆಯವ್ಯಯಗಳು ಸಮನಾಗಿವೆ ಎಂದು ನೋಡಿದ ಆ

ಸಮಮತಿ ದ್ವಿಜನು ಏನನ್ನು ತೆಗೆದುಕೊಂಡರೂ ಅದು ಪ್ರಜೆಗಳಿಗೆ ಕಷ್ಟವನ್ನು ಕೊಟ್ಟಹಾಗೆ ಎಂದು ಯೋಚಿಸಿದನು.

ಅನಂತರ ಅಗಸ್ತ್ಯ, ಶ್ರುತರ್ವ ಮತ್ತು ವಧ್ರ್ಯಶ್ವ ಮೂವರೂ ಮಹಾಧನಿ ಮಹೀಪತಿ ಪೌರುಕುತ್ಸ ತ್ರಸದಸ್ಯನಲ್ಲಿಗೆ ಹೋದರು. ಮಹಾರಾಜ ತ್ರಸದಸ್ಯುವು ವಾಹನವನ್ನೇರಿ ತನ್ನ ರಾಜ್ಯದ ಗಡಿಯವರೆಗೂ ಬಂದು ಅವರೆಲ್ಲರನ್ನೂ ಯಥಾವಿಧಿಯಾಗಿ ಬರಮಾಡಿಕೊಂಡನು. ಆ ಇಕ್ಷ್ವಾಕು ರಾಜಸತ್ತಮನು ಯಥಾನ್ಯಾಯವಾಗಿ ಪೂಜಿಸಿದನು. ಅವರೆಲ್ಲರೂ ವಿಶ್ರಾಂತಿಯನ್ನು ತೆಗೆದುಕೊಂಡ ಬಳಿಕ ಅವರ ಬರವಿನ ಕಾರಣವನ್ನು ಕೇಳಿದನು. ಅಗಸ್ತ್ಯನು ಹೇಳಿದನು:

> “ಪೃಥಿವೀಪತೇ! ನಾವು ಇಲ್ಲಿಗೆ ಸಂಪತ್ತನ್ನು ಅರಸಿ ಬಂದಿದ್ದೇವೆ ಎಂದು ತಿಳಿ. ಇತರರಿಗೆ ಹಿಂಸೆಯಾಗದ ರೀತಿಯಲ್ಲಿ ನಮಗೆ ನಿನ್ನ ಸಂಪತ್ತಿನ ಭಾಗವನ್ನು ನೀಡು.”

ಅನಂತರ ರಾಜನು ಅವರಿಗೆ ತನ್ನ ಆದಾಯ ವೆಚ್ಚಗಳ ಕುರಿತು ಸಂಪೂರ್ಣವಾಗಿ ವಿವರಿಸಿ,

> “ಇದನ್ನು ತಿಳಿದ ನೀವು ಉಳಿದಿದ್ದುದನ್ನು ತೆಗೆದುಕೊಂಡು ಹೋಗಿ”

ಎಂದು ನಿವೇದಿಸಿದನು. ಆದಾಯ-ವೆಚ್ಚಗಳು ಸರಿಸಮವಾಗಿರುವುದನ್ನು ನೋಡಿದ ಆ ಸಮಮತಿ ದ್ವಿಜನು ಏನನ್ನೂ ತೆಗೆದುಕೊಂಡರೂ ಅದು

ಇತರರಿಗೆ ಕಷ್ಟವನ್ನು ತರುತ್ತದೆ ಎಂದು ತಿಳಿದನು.


ಆಗ ಎಲ್ಲ ರಾಜರೂ ಪರಸ್ಪರರನ್ನು ನೋಡಿ, ಆ ಮಹಾಮುನಿಗೆ ಹೇಳಿದರು:

> "ಬ್ರಹ್ಮನ್! ಈ ಭುವಿಯಲ್ಲಿ ಮಹಾ ಧನವನ್ನು ಹೊಂದಿದ ಇಲ್ವಲ ಎನ್ನುವ ದಾನವನಿದ್ದಾನೆ. ನಾವೆಲ್ಲರೂ ಅವನಲ್ಲಿಗೆ ಹೋಗಿ ಹಣವನ್ನು ಕೇಳೋಣ!"

ಅವರೆಲ್ಲರೂ ಇಲ್ವಲನಲ್ಲಿಗೆ ಹೋಗಿ ಧನವನ್ನು ಕೇಳುವುದು ಸರಿಯೆಂದು ಯೋಚಿಸಿ, ಒಟ್ಟಿಗೇ ಇಲ್ವಲನಲ್ಲಿಗೆ ಪ್ರಯಾಣ ಬೆಳೆಸಿದರು. ನೃಪರೊಂದಿಗೆ ಮಹರ್ಷಿಯು ಬಂದಿದ್ದಾನೆ ಎಂದು ತಿಳಿದ ಇಲ್ವಲನು ಅಮಾತ್ಯರೊಂದಿಗೆ ತನ್ನ ರಾಜ್ಯದ ಗಡಿಯವರೆಗೂ ಬಂದು ಅವರನ್ನು ಪೂಜಿಸಿ ಬರಮಾಡಿಕೊಂಡನು. ಆ ಅಸುರಶ್ರೇಷ್ಠನು ಅವರಿಗೆ ಆತಿಥ್ಯವನ್ನು ನೀಡಿದನು ಮತ್ತು ತನ್ನ ತಮ್ಮ ವಾತಾಪಿಯನ್ನೇ ಅಡುಗೆ ಮಾಡಿ ಅವರಿಗೆ ಬಡಿಸಿದನು. ಆಗ ಎಲ್ಲ ರಾಜರ್ಷಿಗಳೂ ಮಹಾಸುರ ವಾತಾಪಿಯನ್ನು ಕುರಿಯ ಮಾಂಸದಂತೆ ಅಡುಗೆಮಾಡಿದ್ದುದನ್ನು ನೋಡಿ ವಿಷಣ್ಣರಾಗಿ ಮೂರ್ಛಿತರಾದರು. ಋಷಿಸತ್ತಮ ಅಗಸ್ತ್ಯನು ಆ ರಾಜರ್ಷಿಗಳಿಗೆ ಹೇಳಿದನು:

> "ವಿಷಾದಿಸ ಬೇಡಿ. ಈ ಮಹಾಸುರನನ್ನು ನಾನು ತಿನ್ನುತ್ತೇನೆ!"

ಮಹಾಮುನಿಯು ಉತ್ತಮ ಆಸನವನ್ನು ಹಿಡಿದು ಕುಳಿತುಕೊಂಡನಂತರ



ದೈತ್ಯೇಂದ್ರ ಇಲ್ವಲನು ನಸುನಗುತ್ತಾ ಬಡಿಸಿದನು. ಅಗಸ್ತ್ಯನು ವಾತಾಪಿಯನ್ನು ಸಂಪೂರ್ಣವಾಗಿ ಭುಂಜಿಸಿದನು. ಅವನು ಊಟವನ್ನು ಮುಗಿಸಿದ ನಂತರ ಅಸುರ ಇಲ್ವಲನು ತನ್ನ ತಮ್ಮನನ್ನು ಕೂಗಿ ಕರೆದನು. ಆಗ ಮಹಾತ್ಮ ಅಗಸ್ತ್ಯನು ತೇಗು ಬಿಟ್ಟನು. ಆ ಮಹಾಸುರನನ್ನು ಜೀರ್ಣಗೊಳಿಸಿಕೊಂಡಿದುದನ್ನು ಕಂಡು ಇಲ್ವಲನು ವಿಷಣ್ಣನಾದನು. ಅವನು ಅಮಾತ್ಯರೊಂದಿಗೆ ಕೈಜೋಡಿಸಿ ಹೀಗೆ ಹೇಳಿದನು:

> “ನೀವು ಇಲ್ಲಿಗೆ ಯಾವ ಕಾರಣದಿಂದ ಬಂದಿದ್ದೀರಿ? ನಾನು ನಿಮಗೆ ಏನು ಮಾಡಬೇಕು?”

ಆಗ ಅಗಸ್ತ್ಯನು ನಸುನಗುತ್ತಾ ಉತ್ತರಿಸಿದನು:

> “ಅಸುರ! ನೀನು ತುಂಬಾ ಧನೇಶ್ವರನೆಂದು ನಾವೆಲ್ಲರೂ ತಿಳಿದಿದ್ದೇವೆ. ನನಗೆ ಧನದ ತುಂಬಾ ಅವಶ್ಯಕತೆಯಿದೆ. ಇನ್ನೊಬ್ಬರಿಗೆ ಹಿಂಸೆಯಾಗದ ರೀತಿಯಲ್ಲಿ ನಿನ್ನ ಧನದ ಭಾಗವೊಂದನ್ನು ಯಥಾಶಕ್ತಿಯಾಗಿ ನೀಡು.”

ಆಗ ಆ ಋಷಿಗೆ ನಮಸ್ಕರಿಸಿ ಇಲ್ವಲನು ಹೇಳಿದನು:

> “ನಾನು ಏನನ್ನು ಕೊಡಬೇಕೆಂದಿರುವೆನೋ ಅದು ನಿನಗೆ ತಿಳಿದಿದ್ದರೆ ಆ ಸಂಪತ್ತನ್ನು ನಿನಗೆ ನೀಡುತ್ತೇನೆ.”

ಅಗಸ್ತ್ಯನು ಹೇಳಿದನು:

> “ಅಸುರ! ಪ್ರತಿಯೊಬ್ಬ ರಾಜನಿಗೂ ನೀನು ಹತ್ತು ಸಹಸ್ರ ಗೋವುಗಳನ್ನು ಮತ್ತು ಅಷ್ಟೇ ಸುವರ್ಣಗಳನ್ನು ನೀಡಬೇಕೆಂದು ನೀನು ಬಯಸಿರುವೆ. ನನಗೆ ಇದರ ಎರಡು ಪಟ್ಟು ಮತ್ತು ಬಂಗಾರದ ರಥವನ್ನೂ, ಮನೋವೇಗದಲ್ಲಿ ಹೋಗುವ ಎರಡು ಕುದುರೆಗಳನ್ನೂ ನೀಡಲು ಬಯಸುತ್ತೀಯೆ. ತಕ್ಷಣವೇ ರಥವನ್ನು ಪರೀಕ್ಷಿಸು - ಅದು ಸಂಪೂರ್ಣವಾಗಿ ಬಂಗಾರದಿಂದ ಮಾಡಿರಬೇಕು.”

ಆ ರಥವು ಸಂಪೂರ್ಣವಾಗಿ ಬಂಗಾರದಿಂದ ಮಾಡಿದುದೆಂದು ಪರೀಕ್ಷಿಸಲಾಯಿತು. ಅನಂತರ ಆ ದೈತ್ಯನು ಬಹಳ ವ್ಯಥೆಯಿಂದ ಆ ಅಧಿಕ ಸಂಪತ್ತನ್ನು ನೀಡಿದನು. ವಿವಾಜ ಮತ್ತು ಸುವಾಜ ಎಂಬ ಕುದುರೆಗಳನ್ನು ರಥಕ್ಕೆ ಕಟ್ಟಲಾಯಿತು. ಕಣ್ಣು ಮುಚ್ಚಿ ಬಿಡುವುದರೊಳಗೆ ಆ ಸಂಪತ್ತನ್ನು ಅಗಸ್ತ್ಯನ ಆಶ್ರಮಕ್ಕೆ ತರಲಾಯಿತು. ಆಗ ಅಗಸ್ತ್ಯನು ಎಲ್ಲ ರಾಜರನ್ನೂ ಬೀಳ್ಕೊಂಡನು. ಅಗಸ್ತ್ಯನಿಂದ ಬೀಳ್ಕೊಂಡ ರಾಜರ್ಷಿಗಳು ತೆರಳಿದರು. ಮತ್ತು ಆ ಮುನಿಯು ಲೋಪಾಮುದ್ರೆಯು ಬಯಸಿದಂತೆ ಎಲ್ಲವನ್ನೂ ಮಾಡಿದನು. ಲೋಪಾಮುದ್ರೆಯು ಹೇಳಿದಳು:

> “ಭಗವನ್! ನನ್ನ ಎಲ್ಲ ಬಯಕೆಗಳನ್ನೂ ಪೂರೈಸಿದ್ದೀಯೆ. ಈಗ ಮಹಾ ವೀರ್ಯಶಾಲಿಯಾದ ಮಗನನ್ನು ನನ್ನಲ್ಲಿ ಹುಟ್ಟಿಸು.”

ಅಗಸ್ತ್ಯನು ಹೇಳಿದನು:

> “ಕಲ್ಯಾಣಿ! ನಿನ್ನ ನಡವಳಿಕೆಯಿಂದ ನಾನು ಸಂತುಷ್ಟನಾಗಿದ್ದೇನೆ. ನಿನ್ನ ಸಂತಾನದ ಕುರಿತು ನಾನು ಏನನ್ನು ಯೋಚಿಸುತ್ತಿದ್ದೇನೆ ಎನ್ನುವುದನ್ನು ಹೇಳುತ್ತೇನೆ. ಕೇಳು. ನೀನು ಒಂದು ಸಾವಿರ ಪುತ್ರರನ್ನು ಬಯಸುತ್ತೀಯಾ ಅಥವಾ ಪ್ರತಿಯೊಬ್ಬರೂ ಹತ್ತು ಮಕ್ಕಳಿಗೆ ಸಮರಾದ ನೂರು ಮಕ್ಕಳನ್ನು ಬಯಸುತ್ತೀಯಾ ಅಥವಾ ಪ್ರತಿಯೊಬ್ಬರೂ ನೂರು ಮಕ್ಕಳಿಗೆ ಸಮನಾದ ಹತ್ತು ಮಕ್ಕಳನ್ನು ಬಯಸುತ್ತೀಯಾ ಅಥವಾ ಸಾವಿರ ಮಕ್ಕಳಿಗೆ ಸಮನಾದ ಓರ್ವನೇ ಮಗನನ್ನು ಬಯಸುತ್ತೀಯಾ?”

ಲೋಪಾಮುದ್ರೆಯು ಹೇಳಿದಳು:

> “ತಪೋಧನ! ಸಾವಿರ ಮಕ್ಕಳಿಗೆ ಸಮನಾದ ಓರ್ವನೇ ಪುತ್ರನು ಬೇಕು. ಒಳ್ಳೆಯತನವಿರುವ ಸಹಸ್ರಾರು ಮಕ್ಕಳಿಗಿಂತ ವಿದ್ವಾಂಸನೂ ಸಾಧುವೂ ಆದ ಒಬ್ಬನೇ ಮಗನು ಶ್ರೇಯಸ್ಕರ.”

ಹಾಗೆಯೇ ಆಗಲಿ ಎಂದು ಮಾತುಕೊಟ್ಟ ಮುನಿಯು ಸರಿಯಾದ ಸಮಯದಲ್ಲಿ ಶ್ರದ್ಧಾವಂತನಾಗಿ ಶ್ರದ್ಧಾವಂತ ಸಮಶೀಲೆಯೊಡನೆ ಕೂಡಿದನು. ಗರ್ಭವನ್ನು ನೀಡಿ ಅವನು ವನವನ್ನು ಸೇರಿದನು. ಅವನು ವನಕ್ಕೆ ಹೋಗಲು, ಗರ್ಭವು ಏಳು ವರ್ಷಗಳ ಪರ್ಯಂತ ಬೆಳೆಯಿತು.

ಏಳು ವರ್ಷಗಳು ಕಳೆದ ನಂತರ ಧೃಡಸ್ಯು ಎಂಬ ಹೆಸರಿನ ಶಕ್ತಿಯಿಂದ ಉರಿಯುತ್ತಿರುವ ಮಹಾಕವಿಯು, ಉಪನಿಷತ್ತುಗಳ ಜೊತೆ ಮಹಾಯಶ ವೇದಗಳನ್ನು ಜಪಿಸುತ್ತಾ ಜನಿಸಿದನು. ಆ ತೇಜಸ್ವಿ ಮಹಾನೃಷಿಯು ಅಗಸ್ತ್ಯನ ಮಗನಾದನು. ಬಾಲಕನಾಗಿದ್ದಾಗಲೇ ಆ ತೇಜಸ್ವಿಯು ತನ್ನ ತಂದೆಯ ಮನೆಯಲ್ಲಿ ಭಾರವಾದ ಇಂಧನಗಳನ್ನು ಹೊತ್ತು ತರುತ್ತಿರುವುದರಿಂದ ಅವನು ಇಧ್ಮವಾಹನೆಂದು ಕರೆಯಲ್ಪಟ್ಟನು. ಈ ರೀತಿ ಸಮರ್ಥನಾಗಿರುವ ಮಗನನ್ನು ನೋಡಿ ಮುನಿಯು ಸಂತೋಷಗೊಂಡನು. ಹೀಗೆ ಅವನ ಪಿತೃಗಳು ಅವರು ಬಯಸಿದ ಲೋಕಗಳನ್ನು ಪಡೆದರು.

## ಅಗಸ್ತ್ಯನು ಸಮುದ್ರವನ್ನು ಕುಡಿದು ಬರಿದುಮಾಡಿದುದು

ಕೃತಯುಗದಲ್ಲಿ ಕಾಲೇಯರೆಂದು ವಿಖ್ಯಾತ ಯುದ್ಧ ದುರ್ಮದ ಘೋರ, ಪರಮ ದಾರುಣ ದಾನವರ ಗಣವಿತ್ತು. ಅವರೆಲ್ಲರೂ ಒಂದಾಗಿ ವೃತ್ರನ ಆಶ್ರಯದಲ್ಲಿ ನಾನಾ ಆಯುಧಗಳೊಂದಿಗೆ ದಂಗೆಯೆದ್ದು ಮಹೇಂದ್ರನ ನೇತೃತ್ವದಲ್ಲಿದ್ದ ಸುರರ ಮೇಲೆ ಧಾಳಿಮಾಡಿದರು. ಆಗ ವೃತ್ರನನ್ನು ಕೊಲ್ಲಲ್ಲು ಮೊದಲೇ ಪ್ರಯತ್ನಮಾಡಿದ್ದ ಮೂವತ್ತು ದೇವತೆಗಳು ಪುರಂದರನನ್ನು ಮುಂದಿಟ್ಟುಕೊಂಡು ಬ್ರಹ್ಮನ ಉಪಸ್ಥಿತಿಗೆ ಬಂದರು. ಕೈಜೋಡಿಸಿದ ಅವರೆಲ್ಲರಿಗೆ ಪರಮೇಷ್ಠಿಯು ಹೇಳಿದನು:

"ಸುರರೇ! ನೀವು ಏನು ಮಾಡಬೇಕೆಂದಿರುವಿರೆಂದು ನನಗೆ

ತಿಳಿದಿದೆ. ವೃತ್ರನನ್ನು ಕೊಲ್ಲುವ ಉಪಾಯವನ್ನು ಹೇಳುತ್ತೇನೆ. ದಧೀಚ ಎಂದು ವಿಖ್ಯಾತನಾದ ಉದಾರಬುದ್ಧಿಯ ಮಹಾ ಋಷಿಯಿದ್ದಾನೆ. ನಿವೆಲ್ಲರೂ ಅವನಲ್ಲಿಗೆ ಹೋಗಿ ವರವೊಂದನ್ನು ಕೇಳಿಕೊಳ್ಳಿ. ಆ ಧರ್ಮಾತ್ಮನು ಅಂತರಾತ್ಮದಲ್ಲಿಯ ಸಂತೋಷದಿಂದ ನಿಮಗೆ ಅದನ್ನು ನೀಡುತ್ತಾನೆ. ನೀವು ಎಲ್ಲರೂ ಒಟ್ಟಿಗೇ ವಿಜಯಾಕಾಂಕ್ಷಿಗಳಾಗಿ ತ್ರಿಲೋಕಗಳ ಹಿತಕ್ಕಾಗಿ ನಿನ್ನ ಅಸ್ಥಿಯನ್ನು ಕೊಡು ಎಂದು ಕೇಳಿಕೊಂಡರೆ ಅವನು ತನ್ನ ಶರೀರವನ್ನು ತೊರೆದು ನಿಮಗೆ ಅವನ ಅಸ್ತಿಯನ್ನು ನೀಡುತ್ತಾನೆ. ಅವನ ಅಸ್ತಿಯಿಂದ ಮಹಾಘೋರ, ಧೃಢವಾದ, ತೀಕ್ಷ್ಣವಾದ, ಆರು ಅರಗಳುಳ್ಳ, ಭಯಂಕರ ಶಬ್ಧವನ್ನುಳ್ಳ ಮಹಾಶತ್ರುವನ್ನು ಸಂಹರಿಸಬಲ್ಲ ವಜ್ರಾಯುಧವನ್ನು ತಯಾರಿಸಿರಿ. ಈ ವಜ್ರದಿಂದ ಶತಕ್ರತು ಆ ವೃತ್ರನನ್ನು ವಧಿಸುತ್ತಾನೆ. ನಿಮಗೆ ಎಲ್ಲವನ್ನೂ ಹೇಳಿ ತಿಳಿಸಿದ್ದೇನೆ. ಶೀಘ್ರದಲ್ಲಿಯೇ ಇದನ್ನು ಕಾರ್ಯಗತಗೊಳಿಸಿ."

ಈ ರೀತಿ ಹೇಳಲು ದೇವತೆಗಳು ಪಿತಾಮಹನಿಂದ ಬೀಳ್ಕೊಂಡು ನಾರಾಯಣನನ್ನು ಮುಂದಿಟ್ಟುಕೊಂಡು ಸರಸ್ವತೀ ನದಿಯ ಆಚೆಯ ದಡದಲ್ಲಿರುವ ನಾನಾ ಮರ ಬಳ್ಳಿಗಳಿಂದ ಆವೃತವಾದ ದಧೀಚಿಯ ಆಶ್ರಮಕ್ಕೆ ಬಂದರು. ಆ ಆಶ್ರಮವು ಸಾಮಗಾನದಂತಿರುವ ದುಂಬಿಗಳ ಗೀತನಾದದಿಂದ ತುಂಬಿತ್ತು. ಗಂಡು ಕೋಕಿಲಗಳ ಕಲರವದಿಂದ ಮಿಶ್ರಿತವಾಗಿತ್ತು ಮತ್ತು ಕೀಟಗಳ ಝೀಂಕಾರದಿಂದ ತುಂಬಿತ್ತು. ಅಲ್ಲಿ

ಎಮ್ಮೆ, ಹಂದಿ, ಜಿಂಕೆ, ಶಾರ್ದೂಲಗಳು ಭಯವನ್ನು ತೊರೆದು ಅಲ್ಲಲ್ಲಿ ಸಂಚರಿಸುತ್ತಿದ್ದವು. ಕೆನ್ನೆಗಳು ಒಡೆದು ಮದವನ್ನು ಸುರಿಸುತ್ತಿರುವ ಗಂಡು ಆನೆಗಳು ಹೆಣ್ಣು ಆನೆಗಳೊಂದಿಗೆ ಕೆರೆಗಳಲ್ಲಿ ಧುಮುಕಿ ಆಡುತ್ತಾ ಒಟ್ಟಿಗೇ ನಿನಾದಿಸುತ್ತಿದ್ದವು. ಸಿಂಹ, ಹುಲಿ ಮತ್ತು ಗುಹೆಗಳಲ್ಲಿ ವಾಸಿಸುವ ಇತರ ಪ್ರಾಣಿಗಳ ಮಹಾನಾದದಿಂದ ಆ ಆಶ್ರಮವು ಭೋರ್ಗರೆಯುತ್ತಿತ್ತು. ಈ ರೀತಿ ಸುಮನೋಹರವಾಗಿ ಶೋಭಿಸುತ್ತಿದ್ದ ದಧೀಚಿಯ ಆಶ್ರಮಕ್ಕೆ ತ್ರಿವಿಷ್ಠರು ಆಗಮಿಸಿದರು. ಅಲ್ಲಿ ದಿವಾಕರನಂತೆ ಬೆಳಗುತ್ತಿದ್ದ, ಲಕ್ಷ್ಮಿಯೊಂದಿಗೆ ಪಿತಾಮಹನಂತೆ ಜಾಜ್ವಲ್ಯಮಾನನಾದ ದಧೀಚಿಯನ್ನು ನೋಡಿದರು. ಸುರರು ಅವನ ಪಾದಗಳಿಂದ ತಲೆಬಾಗಿ ವಂದಿಸಿದರು ಮತ್ತು ಅವರೆಲ್ಲರೂ ಪರಮೇಷ್ಠಿಯು ಹೇಳಿದಂತೆ ಅವನಲ್ಲಿ ವರವನ್ನು ಬೇಡಿದರು. ಆಗ ಪರಮಪ್ರೀತನಾದ ದಧೀಚಿಯು ಆ ಸುರೋತ್ತಮರಿಗೆ ಹೇಳಿದನು:

> “ನಿಮಗೆ ಹಿತವಾದುದನ್ನು ನಾನು ಇಂದು ಮಾಡುತ್ತೇನೆ.
> ನಿಮಗೋಸ್ಕರ ನನ್ನ ದೇಹವನ್ನೂ ತ್ಯಜಿಸುತ್ತೇನೆ.”

ಹೀಗೆ ಹೇಳಿದ ಆ ಮನುಷ್ಯರಲ್ಲಿಯೇ ಶ್ರೇಷ್ಠ ನಿಯಂತ್ರಕನು ತನ್ನ ಪ್ರಾಣವನ್ನು ತಕ್ಷಣವೇ ತ್ಯಜಿಸಿದನು. ಅನಂತರ ಸುರರು ಸಂತೋಷ ಮತ್ತು ಭರವಸೆಗಳೊಂದಿಗೆ ಅವನ ಅಸ್ತಿಯನ್ನು ಬ್ರಹ್ಮನ ಉಪದೇಶದಂತೆ ತೆಗೆದರು. ಜಯವು ದೊರೆಯುವುದೆಂಬ ಸಂತೋಷದಿಂದ ದೇವತೆಗಳು ತ್ವಷ್ಟಾರನಲ್ಲಿಗೆ ಹೋಗಿ ಅವನಿಗೆ

ವಿವರಿಸಿ ಹೇಳಿದರು. ಅವರ ವಚನವನ್ನು ಕೇಳಿದ ತ್ವಷ್ಟನು ಸಂತೋಷದಿಂದ, ಪ್ರಯತ್ನದಿಂದ ಕೆಲಸದಲ್ಲಿ ತೊಡಗಿದನು. ಹರಿತವಾದ ಉಗ್ರರೂಪದ ಹರಿತ ವಜ್ರವನ್ನು ತಯಾರಿಸಿ ಸಂತೋಷದಿಂದ ಇಂದ್ರನಿಗೆ ಹೇಳಿದನು:

> "ದೇವ! ಈ ಶ್ರೇಷ್ಠ ವಜ್ರದಿಂದ ಉಗ್ರ ಸುರಾರಿಗಳನ್ನು ಇಂದು ಭಸ್ಮಮಾಡು! ಅವರನ್ನು ಸಂಹರಿಸಿ ನೀನು ನಿನ್ನ ಗಣಗಳೊಂದಿಗೆ ತ್ರಿದಿವದಲ್ಲಿ ಸುಖವಾಗಿ ವಿರಾಜಿಸು."

ತ್ವಷ್ಟನು ಹೀಗೆ ಹೇಳಲು ಪುರಂದರನು ಸಂತೋಷದಿಂದ ವಿನೀತನಾಗಿ ವಜ್ರವನ್ನು ಹಿಡಿದನು.

ಅನಂತರ ಆ ವಜ್ರಿಯು ಬಲಶಾಲಿ ದೇವತೆಗಳ ರಕ್ಷಣೆಯಲ್ಲಿ ಪರ್ವತ ಶೃಂಗಗಳಂತೆ ಮಹಾಕಾಯರಾದ, ಆಯುಧಗಳನ್ನು ಎತ್ತಿಹಿಡಿದ ಕಾಲಕೇಯರ ಒಗ್ಗಟ್ಟಿನ ರಕ್ಷಣೆಯಲ್ಲಿ ಭೂಮಿ ಮತ್ತು ಸ್ವರ್ಗಗಳನ್ನು ಆವರಿಸಿ ಬರುತ್ತಿರುವ ವೃತ್ರನನ್ನು ಎದುರಿಸಿದನು. ತಕ್ಷಣವೇ ದೇವತೆಗಳೊಂದಿಗೆ ದಾನವರ ಲೋಕಕ್ಕೇ ಮಹಾ ಸಂಕಟವನ್ನು ತಂದ ಯುದ್ಧವು ಪ್ರಾರಂಭವಾಯಿತು. ತಮ್ಮ ವೀರಬಾಹುಗಳಿಂದ ಖಡ್ಗಗಳನ್ನು ಮೇಲೆತ್ತಿ, ಗುಂಪಾಗಿ ಯುದ್ಧಕ್ಕೆ ಬಂದು ಎರಗುವಾಗ ಪರಸ್ಪರರ ಶರೀರಗಳು ಒಂದಕ್ಕೊಂದು ತಾಗಿ ಶಬ್ಧದ ತುಮುಲವುಂಟಾಯಿತು. ಅಂತರಿಕ್ಷದಿಂದ ಭೂಮಿಯ ಮೇಲೆ ಉರುಳುತ್ತಿದ್ದ ಶಿರಗಳು ತಾಲವೃಕ್ಷದಿಂದ ಉದುರಿ ಕೆಳಗೆ ಬೀಳುತ್ತಿದ್ದ

ತಾಳೆಕಾಯಿಗಳಂತೆ ಕಂಡವು. ಬಂಗಾರದ ಕವಚಗಳನ್ನು ಧರಿಸಿದ್ದ ಕಾಲಕೇಯರು ಪರಿಘಾಯುಧಗಳನ್ನು ಹಿಡಿದು ಬೆಟ್ಟಕ್ಕೆ ತಗುಲಿದ ಕಾಡ್ಗಿಚ್ಚಿನಂತೆ ದೇವತೆಗಳಮೇಲೆ ಎರಗಿದರು. ವೇಗದಿಂದ ಓಡಿ ಬರುತ್ತಿರುವ ಅವರ ವೇಗವನ್ನು ಸಹಿಸಲಾರದೇ, ಅವರ ಸೇನೆಯನ್ನು ಒಡೆದು ಮುನ್ನುಗ್ಗಲಾರದೇ ದೇವತೆಗಳ ಸೇನೆಯು ಒಡೆದು ಭಯದಿಂದ ಪಲಾಯನಗೈಯಿತು. ಭಯಭೀತರಾಗಿ ಈ ರೀತಿ ಅವರು ಪಲಾಯನಮಾಡುತ್ತಿರುವುದನ್ನು ಮತ್ತು ವೃತ್ರನು ಇನ್ನೂ ಅಧಿಕವಾಗಿ ಬೆಳೆಯುತ್ತಿರುವುದನ್ನು ಕಂಡ ಸಹಸ್ರಾಕ್ಷ ಪುರಂದರನು ಅತೀವ ದುಃಖಪರನಾದನು. ಕುಗ್ಗುತ್ತಿರುವ ಶಕ್ರನನ್ನು ನೋಡಿದ ಸನಾತನ ವಿಷ್ಣುವು ತನ್ನದೇ ತೇಜಸ್ಸನ್ನಿತ್ತು ಶಕ್ರನ ಬಲವನ್ನು ಹೆಚ್ಚಿಸಿದನು. ವಿಷ್ಣುವಿನಿಂದ ವೃದ್ಧಿಹೊಂದಿದ ಶಕ್ರನನ್ನು ನೋಡಿ ದೇವಗಣಗಳು ಮತ್ತು ಅಮಲ ಬ್ರಹ್ಮರ್ಷಿಗಳು ತಮ್ಮ ತಮ್ಮ ತೇಜಸ್ಸನ್ನು ಅವನಿಗೆ ನೀಡಿದರು. ವಿಷ್ಣು, ದೇವತೆಗಳು ಮತ್ತು ಮಹಾಭಾಗ ಋಷಿಗಳ ಸಹಾಯದಿಂದ ಶಕ್ರನ ಬಲವು ವೃದ್ಧಿಸಿತು. ತ್ರಿದಶಾಧಿಪನು ಬಲಶಾಲಿಯಾದುದನ್ನು ತಿಳಿದ ವೃತ್ರನು ಮಹಾ ಗರ್ಜನೆಯನ್ನು ಗೈದನು. ಅವನ ನಿನಾದದಿಂದ ಭೂಮಿ, ದಿಕ್ಕುಗಳು, ಆಕಾಶ, ಸ್ವರ್ಗ ಮತ್ತು ಪರ್ವತಗಳು ಎಲ್ಲವೂ ತತ್ತರಿಸಿ ನಡುಗಿದವು. ಆ ಘೋರರೂಪೀ ಮಹಾಕಾಯನ ರವವನ್ನು ಕೇಳಿದ ಪರಮಭೀತಪ್ತ ಮಹೇಂದ್ರನು ಭಯದಿಂದ ಅವಸರದಲ್ಲಿ ಅವನ ವಧೆಗೆಂದು ಮಹಾ ವಜ್ರವನ್ನು ಬಿಟ್ಟನು. ಆ ಕಾಂಚನಮಾಲಧಾರಿ ಮಹಾಸುರನು ಶಕ್ರನ ವಜ್ರದಿಂದ

ಹೊಡೆಯಲ್ಪಟ್ಟು, ಹಿಂದೆ ಪರ್ವತಗಳಲ್ಲಿ ಶ್ರೇಷ್ಠ ಮಹಾ ಪರ್ವತ ಮಂದರವು ವಿಷ್ಣುವಿನ ಕೈಯಿಂದ ಕಳಚಿ ಬಿದ್ದಂತೆ ಕೆಳಗುರುಳಿದನು. ಆ ದೈತ್ರಶ್ರೇಷ್ಠನು ಹತನಾದರೂ ಭಯಾರ್ತನಾದ ಶಕ್ರನು ಸರೋವರಕ್ಕೆ ಧುಮುಕಿ ಮುಳುಗಿದನು. ತನ್ನ ಕೈಯಿಂದಲೇ ಪ್ರಯೋಗಿಸಿದ್ದ ವಜ್ರವು ವೃತ್ರನನ್ನು ಕೊಲ್ಲುತ್ತದೆ ಎನ್ನುವುದರಲ್ಲಿ ನಂಬಿಕೆ ಇಲ್ಲದೆ ಭಯದಲ್ಲಿ ಹಾಗೆ ಮಾಡಿದನು.

ದೇವತೆಗಳೆಲ್ಲರೂ ಸಂತೋಷದಿಂದ ನಲಿದಾಡಿದರು. ಮಹರ್ಷಿಗಳು ಇಂದ್ರನನ್ನು ಕೊಂಡಾಡಿದರು. ಬೇಗನೇ ಎಲ್ಲ ಸುರರೂ ಸೇರಿ ವೃತ್ರನ ವಧೆಯಿಂದ ಪರಿತಪಿಸುತ್ತಿದ್ದ ದೈತ್ಯರನ್ನು ಸಂಹರಿಸಿದರು. ದೇವತೆಗಳಿಂದ ಹತರಾಗುತ್ತಿದ್ದ ಅವರು ಭಯಾರ್ತರಾಗಿ ಸಮುದ್ರವನ್ನು ಪ್ರವೇಶಿಸಿದರು. ರತ್ನದಿಂದೊಡಗೂಡಿದ, ತಿಮಿಂಗಿಲ ಸಂಕುಲಗಳಿಂದೊಡಗೂಡಿದ ಅಳತೆಯೇ ಇಲ್ಲದ ಆಳವನ್ನು ಪ್ರವೇಶಿಸಿದರು. ಅಲ್ಲಿ ಎಲ್ಲರೂ ಒಟ್ಟಿಗೆ ನಸುನಗುತ್ತಾ ಮೂರೂ ಲೋಕಗಳ ವಿನಾಶಾರ್ಥವಾಗಿ ಮಂತ್ರಾಲೋಚನೆ ಮಾಡಿದರು. ಅಲ್ಲಿ ಕೆಲವರು ಯೋಚಿಸಿ ನಿರ್ಧರಿಸುವವರಿದ್ದರೆ ಇತರರು ಆ ಉಪಾಯಗಳನ್ನು ಅನುಸರಿಸಿ ಕಾರ್ಯಗತಗೊಳಿಸುವವರಿದ್ದರು. ಅಲ್ಲಿ ಚಿಂತಿಸಿದ ವಿಚಾರಗಳು ಕ್ರಮೇಣ ಕಾಲಯೋಗದಂತೆ ಘೋರವಾಯಿತು. ವಿದ್ಯೆ ತಪಸ್ಸಿನಲ್ಲಿ ನಿರತರಾದರ ವಿನಾಶವು ಮೊಟ್ಟ ಮೊದಲ  ಕಾರ್ಯವಾಗಬೇಕೆಂದು ನಿಶ್ಚಯಿಸಿದರು.

> “ತಪಸ್ಸೇ ಈ ಸರ್ವ ಲೋಕಗಳನ್ನು ನಡೆಸುತ್ತಿದೆ. ಆದುದರಿಂದ ತಪಸ್ಸನ್ನು ನಾಶಪಡಿಸಲು ಅವಸರ ಮಾಡಬೇಕು. ಈ ಭೂಮಿಯಲ್ಲಿ ಎಷ್ಟು ಮಂದಿ ಯಾರ್ಯಾರು ಧರ್ಮವಿದುಗಳು, ತಪಸ್ವಿಗಳು, ತಿಳಿದಿರುವವರು ಇದ್ದಾರೋ ಅವರೆಲ್ಲರನ್ನೂ ಕ್ಷಿಪ್ರವಾಗಿ ವಧಿಸಬೇಕು. ಅವರು ನಾಶವಾದರೆ ಜಗತ್ತೇ ನಾಶವಾಗುತ್ತದೆ.”

ಈ ರೀತಿ ಸಂತೋಷದಿಂದ ಜಗತ್ತಿನ ವಿನಾಶವನ್ನು ನಿರ್ಧರಿಸಿದ ಅವರೆಲ್ಲರೂ ರತ್ನಾಕರ ವರುಣಾಲಯವನ್ನು ತಮ್ಮ ಮಹಾ ಕೋಟೆಯನ್ನಾಗಿಸಿ ಆಶ್ರಯ ಹೊಂದಿದರು. ವಾರುಣ ನಿಧಿಮಾಂಬುಸ ಸಮುದ್ರವನ್ನು ಆಶ್ರಯಿಸಿದ ಕಾಲೇಯರು ತ್ರೈಲೋಕ್ಯದ ವಿನಾಶನಕ್ಕೆ ತಯಾರಿ ನಡೆಸಿದರು. ಪ್ರತಿ ರಾತ್ರಿಯೂ ಆ ಕೃದ್ಧ ಅಸುರರು ಆಶ್ರಮಗಳಲ್ಲಿ ಮತ್ತು ಪುಣ್ಯಕ್ಷೇತ್ರಗಳಲ್ಲಿದ್ದ ಮುನಿಗಳನ್ನು ಭಕ್ಷಿಸಿದರು. ವಸಿಷ್ಠನ ಆಶ್ರಮದಲ್ಲಿ ಆ ದುರಾತ್ಮರು ನೂರಾಎಂಟು ವಿಪ್ರರನ್ನೂ ಮತ್ತು ಇನ್ನೂ ಇತರ ಒಂಭತ್ತು ತಪಸ್ವಿಗಳನ್ನು ಭಕ್ಷಿಸಿದರು. ಪುಣ್ಯ ದ್ವಿಜನಿಷೇವಿತ ಚ್ಯವನಾಶ್ರಮಕ್ಕೆ ಹೋಗಿ ಫಲಮೂಲಗಳನ್ನೇ ಆಹಾರವಾಗಿಸಿಕೊಂಡಿದ್ದ ಒಂದು ನೂರು ಮುನಿಗಳನ್ನು ಭಕ್ಷಿಸಿದರು. ರಾತ್ರಿಯಸಮದಲ್ಲಿ ಹೀಗೆ ಮಾಡಿ ಹಗಲಿನಲ್ಲಿ ಸಮುದ್ರದಲ್ಲಿ ಅಡಗಿರುತ್ತಿದ್ದರು. ಭರದ್ವಾಜನ ಆಶ್ರಮದಲ್ಲಿ ನಿಯತರಾಗಿದ್ದ, ಕೇವಲ ಗಾಳಿ ಮತ್ತು ನೀರನ್ನು ಸೇವಿಸುತ್ತಿದ್ದ ಇಪ್ಪತ್ತು ಬ್ರಹ್ಮಚಾರಿಗಳನ್ನು ಕೊಂದು ಉರುಳಿಸಿದರು. ಈ ರೀತಿ ಕ್ರಮೇಣವಾಗಿ ಕಾಲವೇ ಅವರನ್ನು

ಸುತ್ತುವರೆಯುವವರೆಗೆ ಕಾಲೇಯ ದಾನವರು ತಮ್ಮ ಭುಜಬಲವನ್ನು ಆಶ್ರಯಿಸಿ ಮತ್ತರಾಗಿ ರಾತ್ರಿ ಎಲ್ಲ ಆಶ್ರಮಗಳನ್ನು ಆಕ್ರಮಣಿಸಿ ಬಹಳಷ್ಟು ದ್ವಿಜಗಣಗಳನ್ನು ಸಂಹರಿಸಿದರು. ಈ ರೀತಿ ತಾಪಸರನ್ನು ಪೀಡಿಸುತ್ತಿರುವವರು ದೈತ್ಯರು ಎಂದು ಮನುಷ್ಯರ್ಯಾರಿಗೂ ತಿಳಿದಿರಲಿಲ್ಲ. ಬೆಳಿಗ್ಗೆ ಸಮಯದಲ್ಲಿ ನಿಯತಾಹಾರಗಳಿಂದ ಕೃಶರಾಗಿದ್ದ ಮುನಿಗಳ ನಿರ್ಜೀವ ಶರೀರಗಳು ಭೂಮಿಯ ಮೇಲೆ ಬಿದ್ದಿರುವುದನ್ನು ನೋಡುತ್ತಿದ್ದರು. ಕೃಶರಾದ, ಮಾಂಸ-ರಕ್ತ-ಮಜ್ಜಗಳಿಲ್ಲದ, ಕೈಕಾಲುಗಳನ್ನು ತುಂಡರಿಸಿದ, ಅಕೀರ್ಣ ಶಂಖಗಳ ರಾಶಿಯಂತಿದ್ದ ಹೆಣಗಳ ರಾಶಿಗಳಿಂದ ಭೂಮಿಯು ತುಂಬಿ ಕೊಂಡಿತು. ವಿಪ್ರವಿದರ ಒಡೆದ ಕಲಶಗಳ ಚೂರುಗಳಿಂದ ಮತ್ತು ಅಗ್ನಿಹೋತ್ರಗಳ ತುಂಡುಗಳಿಂದ ಭೂಮಿಯು ತುಂಬಿಕೊಂಡಿತು. ಸ್ವಾಧ್ಯಾಯ, ವಷಟ್ಕಾರಗಳು ನಿಂತು, ಯಜ್ಞವೇ ಮೊದಲಾದ ಉತ್ಸವ ಕ್ರಿಯೆಗಳು ನಿಂತು ಕಾಲೇಯರ ಭಯಪೀಡಿತವಾದ ಜಗತ್ತು ಉತ್ಸಾಹವನ್ನೇ ಕಳೆದುಕೊಂಡಿತು. ಈ ರೀತಿ ಮಾನವರು ಕುಂದುತ್ತಿರಲು ತಮ್ಮನ್ನು ರಕ್ಷಿಸಿಕೊಳ್ಳಲು ಭಯಭೀತರಾಗಿ ದಿಕ್ಕುದಿಕ್ಕುಗಳಿಗೆ ಓಡಿದರು. ಕೆಲವರು ಗುಹೆಗಳಲ್ಲಿ ಅಡಗಿಕೊಂಡರೆ, ಇತರರು ಜಲಪಾತಗಳ ಹಿಂದೆ ಅಡಗಿಕೊಂಡರು. ಇನ್ನು ಕೆಲವರು ಸಾವಿಗೆ ಎಷ್ಟು ಹೆದರಿದರೆಂದರೆ ಭಯವೇ ಅವರನ್ನು ಸಾಯಿಸಿತು. ಅಲ್ಲಿದ್ದ ಕೆಲವು ಮಹಾದರ್ಪಿತ ಮಹೇಷ್ವಾಸ ಶೂರರು ದಾನವರನ್ನು ಬೇಟೆಯಾಡಲು ಪರಮ ಯತ್ನವನ್ನು ಮಾಡಿದರು. ಆದರೆ ಆ ದಾನವರು ಸಮುದ್ರದಲ್ಲಿ ಅಡಗಿ

ಕೊಂಡಿದ್ದುದರಿಂದ ಅವರನ್ನು ಕಾಣದೇ ಅವರ ಪ್ರಯತ್ನದಲ್ಲಿಯೇ ಸೋತು ಮರಣ ಹೊಂದಿದರು. ಯಜ್ಞೋತ್ಸವಗಳು ನಿಂತು ಜಗತ್ತೇ ನಾಶದ ಅಂಚಿನಲ್ಲಿರಲು ದೇವತೆಗಳು ಅತೀವ ಚಿಂತೆಗೊಳಗಾದರು. ಭಯದಿಂದ ಇಂದ್ರನೊಡನೆ ಸೇರಿ ಮಂತ್ರಾಲೋಚನೆ ಮಾಡಿ, ಅಪರಾಜಿತ ವೈಕುಂಠ ನಾರಾಯಣನಲ್ಲಿಗೆ ಬಂದರು.

ಅಲ್ಲಿ ಸೇರಿದ್ದ ದೇವತೆಗಳು ಮಧುಸೂದನನಿಗೆ ಹೇಳಿದರು:

> “ನೀನೇ ನಮ್ಮ ಸೃಷ್ಟ, ನಮ್ಮ ಪಾಲಕ, ನಮ್ಮ ಒಡೆಯ, ಮತ್ತು ಜಗತ್ತಿನ ಪ್ರಭು! ಹಂದಾಡುವ ಮತ್ತು ಹಂದಾಡದೇ ಇರುವ ಎಲ್ಲವನ್ನೂ ನೀನೇ ಸೃಷ್ಟಿಸಿದೆ. ಪುಷ್ಕರೇಕ್ಷಣ! ಹಿಂದೆ ಭೂಮಿಯು ಸಮುದ್ರದಲ್ಲಿ ನಷ್ಟವಾದಾಗ ಜಗತ್ತಿಗಾಗಿ ನೀನು ವರಾಹದ ರೂಪವನ್ನು ತಾಳಿ ಸಮದ್ರದಿಂದ ಮೇಲ್ತಂದೆ! ಪುರುಷೋತ್ತಮ! ಮಹಾವೀರ್ಯ! ಆದಿದೈತ್ಯ ಹಿರಣ್ಯಕಶಿಪುವನ್ನು ನಾರಸಿಂಹನ ದೇಹತಾಳಿ ಸಂಹರಿಸಿದೆ. ಸರ್ವಭೂತಗಳಿಂದಲೂ ಅವಧ್ಯನಾಗಿದ್ದ ಮಹಾಸುರ ಬಲಿಯನ್ನೂ ಕೂಡ ನೀನು ವಾಮನನ ರೂಪಧರಿಸಿ ಮೂರೂ ಲೋಕಗಳಿಂದ ಹೊರಹಾಕಿದೆ. ಯಜ್ಞಗಳನ್ನು ಧ್ವಂಸಮಾಡುತ್ತಿದ್ದ ಜಂಭ ಎನ್ನುವ ಮಹೇಷ್ವಾಸ ಕ್ರೂರ ಅಸುರನು ನಿನ್ನಿಂದಲೇ ಕೆಳಗುರಿಳಿದನು. ಮಧುಸೂದನ! ಭಯಭೀತರಾದ ನಮಗೆ ಗತಿಯಾದ ನೀನು ಇವೇ

ಮೊದಲಾಗಿ ಸಂಖ್ಯೆಯೇ ಸಿಗದಷ್ಟು ಕಾರ್ಯಗಳನ್ನು ಮಾಡಿದ್ದೀಯೆ! ದೇವದೇವೇಶ! ಆದುದರಿಂದಲೇ ಲೋಕಾರ್ಥವಾಗಿ ನಾವು ನಿನ್ನಲ್ಲಿ ಬೇಡಿಕೊಳ್ಳುತ್ತಿದ್ದೇವೆ. ಲೋಕಗಳನ್ನೂ, ದೇವತೆಗಳನ್ನು ಮತ್ತು ಇಂದ್ರನನ್ನು ಈ ಮಹಾಭಯದಿಂದ ರಕ್ಷಿಸು! ಚತುರ್ವಿಧ ಪ್ರಜೆಗಳೆಲ್ಲರೂ ಇಲ್ಲಿಂದ ಬರುವ ಅನುಗ್ರಹದಿಂದಲೇ ಜೀವಿಸುತ್ತವೆ. ಹೀಗೆ ಅಭಿವೃದ್ಧಿಹೊಂದಿದ ಅವರು ಹವ್ಯಕವ್ಯಗಳ ಮೂಲಕ ದೇವತೆಗಳ ಅಭಿವೃದ್ಧಿಗೆ ಕಾರಣರಾಗುತ್ತಾರೆ. ಹೀಗೆ ಲೋಕಗಳು ಅನ್ಯೋನ್ಯರನ್ನು ಅವಲಂಬಿಸಿ ನಡೆಯುತ್ತವೆ. ನಿನ್ನ ಪ್ರಸಾದದಿಂದ ಪರಿರಕ್ಷಿತರಾಗಿ ಲೋಕಗಳು ವಿಘ್ನಗಳಿಲ್ಲದೇ ಹೀಗೆಯೇ ನಡೆಯುತ್ತಿವೆ. ಈಗ ಈ ಅತೀವ ಭಯವು ಲೋಕಗಳಿಗೆ ಬಂದೊದಗಿದೆ. ರಾತ್ರಿಯಲ್ಲಿ ಬ್ರಾಹ್ಮಣರನ್ನು ಯಾರು ಕೊಲ್ಲುತ್ತಿದ್ದಾರೆ ಎಂದು ತಿಳಿಯಲಾರೆವು. ಬ್ರಾಹ್ಮಣರು ನಾಶವಾದರೆ ಭೂಮಿಯೂ ವಿನಾಶ ಹೊಂದುತ್ತದೆ. ಮತ್ತು ಭೂಮಿಯು ಕ್ಷೀಣವಾದರೆ, ದೇವಲೋಕವೂ ನಾಶಗೊಳ್ಳುತ್ತದೆ. ಮಹಾಬಾಹೋ! ಜಗತ್ಪತೇ! ನಿನ್ನ ಕರುಣೆಯಿಂದ ಲೋಕಗಳೆಲ್ಲವೂ ನಾಶವಾಗದಿರಲಿ. ಅವೆಲ್ಲವನ್ನೂ ಪರಿರಕ್ಷಿಸು.”

ವಿಷ್ಣುವು ಹೇಳಿದನು:

“ಸುರರೇ! ಪ್ರಜೆಗಳೆಲ್ಲರೂ ನಾಶಗೊಳ್ಳುತ್ತಿರುವುದರ ಕಾರಣವನ್ನು ನಾನು ತಿಳಿದಿದ್ದೇನೆ. ನಾನು ಹೇಳುತ್ತೇನೆ - ಭಯವನ್ನು ತೊರೆದು ಕೇಳಿ. ಕಾಲೇಯರೆಂದು ವಿಖ್ಯಾತರಾದ ಒಂದು ಪರಮದಾರುಣ ಗುಂಪಿದೆ. ಅವರು ವೃತ್ರನನ್ನು ಆಶ್ರಯಿಸಿ ಜಗತ್ತುಗಳನ್ನೆಲ್ಲವನ್ನೂ ಬಾಧಿಸುತ್ತಿದ್ದರು. ಧೀಮಂತ ಸಹಸ್ರಾಕ್ಷನು ವೃತ್ರನನ್ನು ಸಂಹರಿಸಿದುದನ್ನು ಕಂಡು ಅವರು ವರುಣಾಲಯವನ್ನು ಹೊಕ್ಕಿ ತಮ್ಮ ಜೀವಗಳನ್ನು ರಕ್ಷಿಸಿಕೊಂಡರು. ಈಗ ಅವರು ಘೋರ ಮೊಸಳೆ ತಿಮಿಂಗಿಲಗಳು ತುಂಬಿರುವ ಸಮುದ್ರವನ್ನು ಸೇರಿದ್ದಾರೆ. ಲೋಕಗಳ ವಿನಾಶಕ್ಕಾಗಿ ಅವರು ರಾತ್ರಿಯಲ್ಲಿ ಇಲ್ಲಿರುವ ಮುನಿಗಳನ್ನು ಕೊಲ್ಲುತ್ತಿದ್ದಾರೆ. ಸಮುದ್ರದಲ್ಲಿ ಆಶ್ರಯ ಪಡೆದಿರುವ ಅವರನ್ನು ಕೊಲ್ಲಲು ಶಕ್ಯವಿಲ್ಲ. ಸಮುದ್ರವನ್ನೇ ನಾಶಗೊಳಿಸುವುದರ ಕುರಿತು ನಿಮ್ಮ ಬುದ್ಧಿಯನ್ನು ಓಡಿಸಬೇಕು. ಅಗಸ್ತ್ಯನನ್ನು ಬಿಟ್ಟು ಬೇರೆ ಯಾರು ತಾನೇ ಸಮುದ್ರವನ್ನು ಬತ್ತಿಸಲು ಶಕ್ಯರಿದ್ದಾರೆ?”

ವಿಷ್ಣುವಿನ ಈ ಮಾತುಗಳನ್ನು ಕೇಳಿ ಸಂತೋಷಗೊಂಡ ದೇವತೆಗಳು ಪರಮೇಷ್ಠಿಯಿಂದ ಬೀಳ್ಕೊಂಡು ಅಗಸ್ತ್ಯನ ಆಶ್ರಮಕ್ಕೆ ಬಂದರು. ಅಲ್ಲಿ ಅವರು ದೇವತೆಗಳ ಮಧ್ಯೆ ಪಿತಾಮಹನಂತೆ ಋಷಿಗಳ ಮಧ್ಯೆ ಕುಳಿತಿದ್ದ ದೀಪ್ತತೇಜಸ್ವಿ ಮಹಾತ್ಮ ವಾರುಣಿಯನ್ನು ಕಂಡರು. ಆಶ್ರಮದಲ್ಲಿದ್ದ ಆ ಮಹಾತ್ಮ, ಮೈತ್ರಾವರುಣಿ, ಅಚ್ಯುತ,

ತಪೋರಾಶಿಯನ್ನು ಅವನ ಕರ್ಮಗಳನ್ನು ಪ್ರಶಂಸಿಸುತ್ತಾ ಭೇಟಿಯಾಗಿ ಹೇಳಿದರು:

"ಹಿಂದೆ ನಹುಷನಡಿಯಲ್ಲಿ ಪರಿತಪ್ತ ಲೋಕಗಳಿಗೆ ನೀನೇ ಗತಿಯಾಗಿದ್ದೆ. ಲೋಕಗಳ ಮೇಲೆ ಸುರರ ಅಧಿಪತ್ಯಕ್ಕಾಗಿ ಆ ಲೋಕಕಂಟಕನನ್ನು ಹೊರಹಾಕಿದ್ದೆ. ಭಾಸ್ಕರನ ಮೇಲಿನ ಕೋಪದಿಂದ ಪರ್ವತೋತ್ತಮ ವಿಂಧ್ಯವು ಒಂದೇಸಮನ ಬೆಳೆಯತೊಡಗಿದಾಗ ನಿನ್ನ ಮಾತನ್ನು ಮೀರಲಾಗದೇ ಆ ಶೈಲವು ಬೆಳೆಯುವುದನ್ನು ನಿಲ್ಲಿಸಿತು. ಲೋಕವು ಕತ್ತಲೆಯಲ್ಲಿ ಮುಳುಗಿದಾಗ ಮತ್ತು ಪ್ರಜೆಗಳು ಮೃತ್ಯುವಿನ ಹಿಂಸೆಗೊಳಗಾಗಿದ್ದಾಗ ನೀನೇ ನಾಥನಾಗಿ ಅವರಿಗೆ ಬಿಡುಗಡೆ ನೀಡಿ ಪರಮ ಗತಿಯನ್ನು ಒದಗಿಸಿದೆ. ಭಗವನ್! ಭಯಭೀತರಾದ ನಮಗೆ ನಿತ್ಯವೂ ನೀನು ಗತಿಯಾಗಿದ್ದೀಯೆ. ಆದುದರಿಂದ, ಆರ್ತರಾದ ನಾವು ನಿನ್ನಲ್ಲಿ ವರವೊಂದನ್ನು ಕೇಳುತ್ತಿದ್ದೇವೆ."

ಮೂವತ್ತು ದೇವತೆಗಳ ಮಾತುಗಳನ್ನು ಕೇಳಿದ ಆ ಮೈತ್ರಾವರುಣಿಯು ಹೇಳಿದನು:

"ನೀವು ಇಲ್ಲಿಗೆ ಏಕೆ ಬಂದಿದ್ದೀರಿ? ನನ್ನಿಂದ ಏನು ವರವನ್ನು ಕೇಳುತ್ತಿದ್ದೀರಿ?"

ಅವನು ಹೀಗೆ ಹೇಳಲು ದೇವತೆಗಳು ಮುನಿಗೆ ಹೇಳಿದರು:

“ಮಹರ್ಷೇ ! ನೀನು ಸಮುದ್ರವನ್ನು ಕುಡಿಯಬೇಕು ಎಂದು ಬಯಸುತ್ತೇವೆ. ಅನಂತರ ನಾವು ಆ ಸುರದ್ವೇಷಿ ಕಾಲೇಯರನ್ನು ಅವರ ಬಾಂಧವರೊಂದಿಗೆ ವಧಿಸುತ್ತೇವೆ.”

ದೇವತೆಗಳ ಮಾತನ್ನು ಕೇಳಿ ಮುನಿಯು

“ಹಾಗೆಯೇ ಆಗಲಿ ! ಲೋಕಗಳ ಮಹಾ ಹಿತಕ್ಕಾಗಿ ನಿಮ್ಮ ಆಸೆಯನ್ನು ನೆರವೇರಿಸುತ್ತೇನೆ”

ಎಂದು ಹೇಳಿದನು. ಹೀಗೆ ಹೇಳಿದ ನಂತರ ಅವನು ಋಷಿ, ತಪಃಸಿದ್ಧ, ಸುವ್ರತರು ಮತ್ತು ದೇವತೆಗಳೊಡಗೂಡಿ ಸರಿತಾಪತಿ ಸಮುದ್ರನ ಬಳಿ ಹೋದನು. ಮನಷ್ಯ-ಉರಗ-ಗಂಧರ್ವ-ಯಕ್ಷ-ಕಿಂಪುರುಷರು ಆ ಮಹಾತ್ಮನ ಅದ್ಭುತ ಕಾರ್ಯವನ್ನು ನೋಡಲು ಅಲ್ಲಿಗೆ ಬಂದು ಸೇರಿದರು. ಅವರೆಲ್ಲರೂ ಒಟ್ಟಿಗೇ ಭಯಂಕರವಾಗಿ ಭೋರ್ಗರೆಯುತ್ತಿರುವ, ಗಾಳಿಯಿಂದ ಅಲ್ಲೋಲಕಲ್ಲೋಲಗೊಂಡ ಅಲೆಗಳು ನಾಟ್ಯಮಾಡುವಂತೆ ತೋರುತ್ತಿರುವ, ನಗುತ್ತಿರುವಂತಿರುವ ನೊರೆಯ, ಒಡೆದ ಕಂದರಗಳುಳ್ಳ, ನಾನಾ ತರಹದ ಮೀನುಗಳಿಂದ ಮತ್ತು ನಾನಾ ವಿಧದ ಪಕ್ಷಿಗಣಗಳಿಂದ ಕೂಡಿದ ಸಮುದ್ರದ ಬಳಿ ಬಂದರು. ಅಗಸ್ತ್ಯನೊಂದಿಗೆ ದೇವತೆಗಳು, ಜೊತೆಗೆ ಗಂಧರ್ವರೂ, ಮಹಾಉರುಗಗಳೂ, ಮಹಾಭಾಗ ಋಷಿಗಳೂ ಸುಮುದ್ರತೀರದಲ್ಲಿ ಬಂದು ಸೇರಿದರು.

ಭಗವಾನ್ ಋಷಿ ವಾರುಣಿಯು ಸಮುದ್ರವನ್ನು ಸೇರಿ ಅಲ್ಲಿ ಕೂಡಿದ್ದ



ದೇವತೆಗಳಿಗೆ ಮತ್ತು ಋಷಿಗಳಿಗೆ ಹೇಳಿದನು:

> "ಈಗ ಲೋಕಹಿತಕ್ಕಾಗಿ ನಾನು ಈ ವರುಣಾಲಯವನ್ನು ಕುಡಿಯುತ್ತೇನೆ. ನೀವು ಏನು ಮಾಡಬೇಕೆಂದಿರುವಿರೋ ಅದನ್ನು ಶೀಘ್ರದಲ್ಲಿಯೇ ಮಾಡಿ."

ಈ ಮಾತನ್ನು ಹೇಳಿ ಅಚ್ಯುತ ಮೈತ್ರಾವರುಣಿಯು ಕೃದ್ಧನಾಗಿ ಸರ್ವ ಲೋಕವೂ ನೋಡುತ್ತಿದ್ದಂತೆ ಸಮುದ್ರವನ್ನು ಸಂಪೂರ್ಣವಾಗಿ ಕುಡಿದು ಬರಿದುಮಾಡಿದನು. ಅವನು ಸಮುದ್ರವನ್ನು ಕುಡಿದಿದ್ದುದನ್ನು ನೋಡಿ ಇಂದ್ರನೂ ಸೇರಿ ದೇವತೆಗಳು ಪರಮ ವಿಸ್ಮಿತರಾದರು ಮತ್ತು

ಅವನನ್ನು ಸ್ತುತಿಸಿ ಪೂಜಿಸಿದರು.

> “ಲೋಕಭಾವನ! ನೀನೇ ನಮ್ಮ ಮತ್ತು ಲೋಕಗಳ ತ್ರಾತ, ವಿಧಾತ. ನಿನ್ನ ಪ್ರಸಾದದಿಂದ ಅಮರರು ಮತ್ತು ಜಗತ್ತು ಈ ಕಷ್ಟದಿಂದ ಪಾರುಗೊಂಡಿವೆ.”

ಆ ಮಹಾತ್ಮನು ಮಹಾಸಾಗರವನ್ನು ನೀರಿಲ್ಲದೇ ಮಾಡಿದ ನಂತರ ದೇವತೆಗಳಿಂದ ಪೂಜಿಸಲ್ಪಡಲು ಗಂಧರ್ವರು ಎಲ್ಲೆಡೆಯೂ ನಾದವನ್ನು ತುಂಬಿಸಿದರು. ಅವನ ಮೇಲೆ ದಿವ್ಯ ಪುಷ್ಪಗಳನ್ನು ಸುರಿಸಲಾಯಿತು. ಆ ಮಹಾಸಾಗರವು ನೀರಿಲ್ಲದೇ ಬತ್ತಿಹೋದದನ್ನು ಕಂಡು ಸುರರೆಲ್ಲರೂ ಪರಮ ಹೃಷ್ಟರಾದರು. ದಿವ್ಯ ಶ್ರೇಷ್ಠ ಆಯುಧಗಳನ್ನು ಹಿಡಿದು ಸಂತೋಷದಿಂದ ಆ ದಾನವರನ್ನು ಸಂಹರಿಸಿದರು. ಮಹಾತ್ಮ ದೇವತೆಗಳಿಂದ ಮಹಾವೀರ, ಮಹಾ ವೇಗದಲ್ಲಿ ಹೋಗಬಲ್ಲ ಆ ದಾನವರು ನಿರ್ನಾಮಗೊಂಡರು. ವೇಗಶಾಲಿ ಮಹಾತ್ಮ ದಿವೌಕಸರ ವೇಗದ ಧಾಳಿಯನ್ನು ಅವರು ಸಹಿಸಲಾರದಾದರು. ಭಯಂಕರ ಘರ್ಜನೆಯೊಂದಿಗೆ ನಡೆದ ಆ ಮಹಾ ಯುದ್ಧದಲ್ಲಿ ಒಂದೇ ಕ್ಷಣದಲ್ಲಿ ದೇವತೆಗಳು ದಾನವರನ್ನು ವಧಿಸಿದರು. ಭಾವಿತಾತ್ಮರಾದ ಮುನಿಗಳ ತಪಸ್ಸಿನಿಂದ ಮೊದಲೇ ದಗ್ಧರಾಗಿದ್ದ ಪರಮ ಶಕ್ತಿಯನ್ನುಪಯೋಗಿಸಿ ಹೋರಾಡಿದರೂ ದೇವತೆಗಳಿಂದ ನಾಶಹೊಂದಿದರು. ಬಂಗಾರದ ಕವಚಾಭರಣಗಳು, ಕುಂಡಲ ಮತ್ತು ಅಂಗಗಳನ್ನು ಧರಿಸಿದ್ದ ಅವರು ವಧಿಸಲ್ಪಟ್ಟು

ಹೂಬಿಟ್ಟ ಕಿಂಶುಕಗಳಂತೆ ಶೋಭಿಸಿದರು. ಸಾಯದೇ ಉಳಿದ ಕೆಲವು ಕಾಲೇಯರು ದೇವಿ ವಸುಧೆಯನ್ನು ಬಗೆದು ಪಾತಾಲತಳವನ್ನು ಆಶ್ರಯಿಸಿದರು. ದಾನವರು ಹತರಾದುದನ್ನು ನೋಡಿದ ದೇವತೆಗಳು ಮುನಿಪುಂಗವನನ್ನು ವಿವಿಧ ವಾಕ್ಯಗಳಿಂದ ಪ್ರಶಂಸಿಸಿ ಹೇಳಿದರು:

> "ಮಹಾಭಾಗ! ನಿನ್ನ ಪ್ರಸಾದದಿಂದ ಲೋಕಗಳಿಗೆ ಮಹಾ ಸುಖವು ಪ್ರಾಪ್ತವಾಯಿತು. ಮತ್ತು ನಿನ್ನ ತೇಜಸ್ಸಿನಿಂದ ಈ ಕ್ರೂರವಿಕ್ರಮಿ ಕಾಲೇಯರು ಹತರಾದರು. ಈಗ ಈ ಸಮುದ್ರವನ್ನು ತುಂಬಿಸು. ನೀನು ಕುಡಿದ ನೀರನ್ನು ಪುನಃ ಇದರಲ್ಲಿ ಬಿಡು."

ಇದನ್ನು ಕೇಳಿದ ಭಗವಾನ್ ಮುನಿಪುಂಗವನು ಉತ್ತರಿಸಿದನು:

> "ನಾನು ಕುಡಿದ ನೀರನ್ನು ಈಗಾಗಲೇ ನಾನು ಜೀರ್ಣಿಸಿಕೊಂಡಿದ್ದೇನೆ. ಸಮುದ್ರವನ್ನು ತುಂಬಿಸಲು ಬೇರೆ ಯಾವುದಾದರೂ ಉಪಾಯವನ್ನು ಯೋಚಿಸಬೇಕು. ನೀವೇ ಪ್ರಯತ್ನ ಮಾಡಬೇಕು."

ಭಾವಿತಾತ್ಮ ಮಹರ್ಷಿಯ ಈ ಮಾತುಗಳನ್ನು ಕೇಳಿದ ಸುರರು ಒಟ್ಟಿಗೇ ವಿಸ್ಮಿತರೂ ವಿಷಣ್ಣರೂ ಆದರು. ಮುನಿಪುಂಗವನಿಗೆ ನಮಸ್ಕರಿಸಿ, ಪರಸ್ಪರರನ್ನು ಬೀಳ್ಕೊಂಡು ಎಲ್ಲರೂ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು. ಸಮುದ್ರವನ್ನು ಪುನಃ ತುಂಬಿಸುವುದರ ಕುರಿತು ಮತ್ತೆ ಮತ್ತೆ ಮಂತ್ರಾಲೋಚನೆ ಮಾಡಿ ದೇವತೆಗಳು ವಿಷ್ಣುವಿನೊಂದಿಗೆ

ಪಿತಾಮಹನಲ್ಲಿಗೆ ಹೋದರು. ಅವರೆಲ್ಲರೂ ಕೈಜೋಡಿಸಿ ಸಾಗರವನ್ನು ತುಂಬಿಸುವುದರ ಕುರಿತು ಹೇಳಿದರು. ಲೋಕಪಿತಾಮಹ ಬ್ರಹ್ಮನು ಅಲ್ಲಿ ಸೇರಿದ್ದ ದೇವತೆಗಳಿಗೆ ಹೇಳಿದನು:

> "ವಿಬುಧರೇ! ನೀವೆಲ್ಲರೂ ನಿಮಗಿಷ್ಟವಾದಲ್ಲಿಗೆ ಹೋಗಿ. ಮಹಾ ಕಾಲದ ನಂತರ ಮಹಾರಾಜ ಭಗೀರಥನು ತನ್ನ ಬಾಂಧವರ ಕಾರಣದಿಂದ ಸಮುದ್ರವು ತನ್ನ ಪ್ರಾಕೃತಿಕ ಸ್ವರೂಪವನ್ನು ಪಡೆಯುವಂತೆ ಮಾಡುತ್ತಾನೆ."

## ಅಗಸ್ತ್ಯನು ವಿಂಧ್ಯಪರ್ವತವು ಬೆಳೆಯದಂತೆ ತಡೆದುದು

ಭಾನುವು ಉದಯವಾಗುವ ಮತ್ತು ಅಸ್ತನಾಗುವ ಸಮಯಗಳಲ್ಲಿ ಅದ್ರಿರಾಜ, ಮಹಾಶೈಲ ಕನಕಪರ್ವತ ಮೇರುವನ್ನು ಪ್ರದಕ್ಷಿಣೆ ಮಾಡುತ್ತಿದ್ದನು. ಅದನ್ನು ಕಂಡ ವಿಂಧ್ಯ ಪರ್ವತನು ಸೂರ್ಯನಿಗೆ ಹೇಳಿದನು:

> "ಭಾಸ್ಕರ! ಹೇಗೆ ಮೇರುವನ್ನು ಪ್ರತಿದಿನ ಸುತ್ತುವರೆಯುತ್ತೀಯೋ ಹಾಗೆ ನನ್ನನ್ನೂ ಕೂಡ ಪ್ರದಕ್ಷಿಣೆ ಮಾಡು."

ಸೂರ್ಯನು ಶೈಲೇಂದ್ರನ ಈ ಮಾತಿಗೆ ಉತ್ತರಿಸಿದನು:

> "ಶೈಲ! ನನ್ನ ಇಚ್ಛೆಯಿಂದ ನಾನು ಅವನಿಗೆ ಪ್ರದಕ್ಷಿಣೆ



> ಮಾಡುತ್ತಿಲ್ಲ. ಈ ಜಗತ್ತನ್ನು ಯಾರು ಸೃಷ್ಟಿಸಿದನೋ ಅವನೇ ನನಗೆ ಈ ಮಾರ್ಗವನ್ನು ಹಾಕಿ ಕೊಟ್ಟಿದ್ದಾನೆ.” ಇದನ್ನು ಕೇಳಿ ಕೋಪಗೊಂಡ ಆ ಪರ್ವತನು ತಕ್ಷಣವೇ ಬೆಳೆದು ಸೂರ್ಯ ಮತ್ತು ಚಂದ್ರರ ಮಾರ್ಗವನ್ನು ತಡೆಗಟ್ಟಿದನು. ಆಗ ಇಂದ್ರನೂ ಸೇರಿ ಸರ್ವ ದೇವತೆಗಳೂ ಆ ಮಹಾ ಪರ್ವತರಾಜನಲ್ಲಿಗೆ ಹೋಗಿ ಅವನನ್ನು ತಡೆಯಲು ಪ್ರಯತ್ನಿಸಿದರು. ಆದರೆ ಅವರು ಹೇಳಿದಂತೆ ಮಾಡಲು ಅವನು ನಿರಾಕರಿಸಿದನು. ಅನಂತರ ಆ ಸುರರು ಒಟ್ಟಿಗೇ ಆಶ್ರಮದಲ್ಲಿದ್ದ ತಪಸ್ವಿ, ಧಾರ್ಮಿಕರಲ್ಲಿಯೇ ವರಿಷ್ಠ ಮುನಿ, ಅದ್ಭುತ ವೀರ್ಯದೀಪ್ತ ಅಗಸ್ತ್ಯನಲ್ಲಿಗೆ ಹೋಗಿ ವಿಷಯವನ್ನು ತಿಳಿಸಿ ಹೇಳಿದರು: “ಕ್ರೋಧವಶನಾದ ಶೈಲರಾಜ ವಿಂಧ್ಯನು ಸೂರ್ಯ-ಚಂದ್ರರ ಮತ್ತು ನಕ್ಷತ್ರಗಳ ಗತಿಯನ್ನು ನಿಲ್ಲಿಸಿದ್ದಾನೆ. ನಿನ್ನ ಹೊರತಾಗಿ ಬೇರೆ ಯಾರೂ ಅವನನ್ನು ನಿಲ್ಲಿಸಲು ಶಕ್ಯರಿಲ್ಲ. ಆದುದರಿಂದ ಇದನ್ನು ನಿಲ್ಲಿಸು.”

ಸುರರ ಆ ಮಾತುಗಳನ್ನು ಕೇಳಿದ ವಿಪ್ರನು ತನ್ನ ಪತ್ನಿಯೊಡನೆ ವಿಂಧ್ಯಪರ್ವತನಲ್ಲಿಗೆ ಹೋಗಿ ಅವನಿಗೆ ಹೇಳಿದನು:

> “ಪರ್ವತೋತ್ತಮ! ನಿನ್ನಿಂದ ನಾನು ದಾರಿಯನ್ನು ಕೇಳುತ್ತಿದ್ದೇನೆ. ನೀಡು. ಯಾವುದೋ ಕಾರ್ಯಕ್ಕಾಗಿ

ದಕ್ಷಿಣದಿಕ್ಕಿಗೆ ಹೋಗುತ್ತಿದ್ದೇನೆ. ನಾನು ಹಿಂದಿರುಗಿ ಬರುವವರೆಗೆ ನಿನ್ನ ಎತ್ತರವನ್ನೂ ಹೀಗೆಯೇ ಇಟ್ಟಿರು. ನಾನು ಹಿಂದಿರುಗಿದ ನಂತರ ನಿನಗಿಷ್ಟವಾದಷ್ಟು ಬೆಳೆಯಬಹುದು!"

ಹೀಗೆ ಆ ಅಮಿತ್ರಕರ್ಷಣನು ವಿಂಧ್ಯನೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ಇದೂವರೆಗೂ ವಾರುಣಿಯು ದಕ್ಷಿಣದೇಶದಿಂದ ಹಿಂದಿರುಗಲಿಲ್ಲ!

# ಭಗೀರಥ

[ಭಗೀರಥನು ಗಂಗೆಯನ್ನು ಭೂಮಿಗೆ ತಂದು ಬರಿದಾದ ಸಾಗರಗಳನ್ನು ತುಂಬಿಸಿದ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೦೪-೧೦೮) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಇಕ್ಷ್ವಾಕುಗಳ ಕುಲದಲ್ಲಿ ಸಗರ ಎಂಬ ಹೆಸರಿನ ರೂಪ, ಸಂಪತ್ತು ಮತ್ತು ಬಲಾನ್ವಿತ ರಾಜನು ಜನಿಸಿದನು. ಆ ಪ್ರತಾಪವಂತನಿಗೆ ಪುತ್ರರಿರಲಿಲ್ಲ. ಅವನು ಹೈಹಯರನ್ನು ಹೊರಹೊಟ್ಟು, ತಾಲಜಂಘರನ್ನು ಮತ್ತು ಇತರ ರಾಜರನ್ನು ವಶೀಕರಿಸಿ ತನ್ನ ರಾಜ್ಯವನ್ನು ಆಳಿದನು. ಅವನಿಗೆ

ರೂಪಯೌವನದರ್ಪಿತರಾದ ಇಬ್ಬರು ಪತ್ನಿಯರಿದ್ದರು - ವಿದರ್ಭರಾಜಕುಮಾರಿ ಮತ್ತು ಶಿಬಿಯ ಮಗಳು. ಪುತ್ರರನ್ನು ಬಯಸಿದ ಆ ನೃಪತಿಯು ತನ್ನ ಇಬ್ಬರೂ ಪತ್ನಿಯರೊಂದಿಗೆ ಕೈಲಾಸ ಗಿರಿಯನ್ನು ಸೇರಿ ಮಹಾ ತಪಸ್ಸನ್ನು ಆಚರಿಸಿದನು. ಯೋಗಸಮನ್ವಿತನಾಗಿ ಮಹಾತಪಸ್ಸನ್ನು ಅವನು ತಪಿಸುತ್ತಿರಲು ಅಲ್ಲಿಗೆ ಮಹಾತ್ಮ, ಮುಕ್ಕಣ್ಣ, ತ್ರಿಪುರಮರ್ದನ, ಶಂಕರ, ಭವ, ಈಶ, ಶೂಲಪಾಣಿ, ಪಿನಾಕಿ, ತ್ರ್ಯಂಬಕ, ಉಗ್ರೇಶ, ಬಹುರೂಪಿ, ಉಮಾಪತಿ ಶಿವನು ಬಂದನು. ಆ ವರದನನ್ನು ಕಂಡ ತಕ್ಷಣ ಪತ್ನಿಯರ ಸಹಿತ ಆ ಮಹಾಬಾಹು ನೃಪನು ಸಾಷ್ಟಾಂಗ ನಮಸ್ಕರಿಸಿ ಪುತ್ರನನ್ನು ಬೇಡಿದನು. ಅವನಿಂದ ಸಂತೋಷಗೊಂಡ ಹರನು ಭಾರ್ಯೆಯರೊಂದಿಗಿದ್ದ ನೃಪಸತ್ತಮನಿಗೆ ಹೇಳಿದನು:

> “ನೃಪತೇ! ನೀನು ಯಾವ ಮುಹೂರ್ತದಲ್ಲಿ ನನ್ನಲ್ಲಿ ವರವನ್ನು ಕೇಳಿಕೊಂಡಿದ್ದೀಯೋ ಅದರಂತೆ ನಿನಗೆ ಅರವತ್ತು ಸಾವಿರ ಶೂರರಾದ, ಸಮರದರ್ಪಿತ ಪುತ್ರರು ನಿನ್ನ ಪತ್ನಿಯೊಬ್ಬಳಲ್ಲಿ ಹುಟ್ಟುತ್ತಾರೆ. ಆದರೆ ಅವರೆಲ್ಲರೂ ಒಟ್ಟಿಗೇ ಕ್ಷಯವನ್ನು ಹೊಂದುವರು. ಇನ್ನೊಬ್ಬ ಪತ್ನಿಯಲ್ಲಿ ವಂಶವನ್ನು ನಡೆಸಿಕೊಂಡು ಹೋಗುವ ಒಬ್ಬನೇ ಶೂರನು ಹುಟ್ಟುತ್ತಾನೆ.”

ಹೀಗೆ ಹೇಳಿದ ರುದ್ರ ಶಂಕರನು ಅಲ್ಲಿಯೇ ಅಂತರ್ಧಾನನಾದನು.

ಅನಂತರ ರಾಜ ಸಗರನು ತನ್ನ ಈರ್ವರು ಪತ್ನಿಯರೊಂದಿಗೆ ಅತೀವ ಸಂತೋಷಗೊಂಡು ಅರಮನೆಗೆ ಮರಳಿದನು. ಆಗ ಅವರೀರ್ವರು

ಕಮಲೇಕ್ಷಣೆ ಭಾರ್ಯೆಯರು - ವೈದರ್ಭಿ ಮತ್ತು ಶೈಬ್ಯೆ - ಗರ್ಭಿಣಿಯರಾದರು. ಕಾಲಾಂತರದಲ್ಲಿ ವೈದರ್ಭಿಯ ಗರ್ಭದಿಂದ ಚೀನೀಕಾಯಿಯಂತಹ ಪಿಂಡವು ಹುಟ್ಟಿತು ಮತ್ತು ಶೈಬ್ಯೆಯಲ್ಲಿ ದೇವರೂಪಿ, ಕುಮಾರ ಪುತ್ರನು ಹುಟ್ಟಿದನು. ರಾಜನು ಆ ಚೀನೀಕಾಯಿಯನ್ನು (ಗರ್ಭಪಿಂಡವನ್ನು) ಬಿಸಾಡಲು ಮನಸ್ಸುಮಾಡಿದಾಗ ಅಂತರಿಕ್ಷದಿಂದ ಗಂಭೀರ ಧ್ವನಿಯಲ್ಲಿ ವಾಣಿಯೊಂದು ಕೇಳಿಸಿತು:

> “ರಾಜನ್! ದುಡಕಬೇಡ! ನಿನ್ನ ಪುತ್ರರನ್ನು ತ್ಯಜಿಸಬೇಡ! ಈ ಚೀನೀಕಾಯಿಯಿಂದ ಬೀಜಗಳನ್ನು ತೆಗೆದು, ಒಂದೊಂದನ್ನೂ ಪ್ರತ್ಯೇಕ ತುಪ್ಪ ತುಂಬಿದ ಕೊಡಗಳಲ್ಲಿ ಇಟ್ಟು ಜಾಗರೂಕತೆಯಿಂದ ಕಾದಿರಿಸು. ಅನಂತರ ಅರವತ್ತು ಸಾವಿರ ಪುತ್ರರನ್ನು ಪಡೆಯುತ್ತೀಯೆ. ಹೀಗೆಯೇ ನಿನ್ನ ಪುತ್ರರು ಜನಿಸಬೇಕೆಂದು ಮಹಾದೇವನು ನಿರ್ಧರಿಸಿದ್ದಾನೆ. ಬೇರೆ ಯಾವ ಕೆಲಸ-ಯೋಚನೆಗಳನ್ನೂ ನೀನು ಮಾಡಬಾರದು.”

ಈ ಆಕಾಶವಾಣಿಯನ್ನು ಕೇಳಿ ಆ ರಾಜನು ಹೇಳಿದಂತೆಯೇ ಶ್ರದ್ಧೆಯಿಂದ ಮಾಡಿದನು. ಹೀಗೆ ಆ ರಾಜರ್ಷಿಗೆ ರುದ್ರನ ಪ್ರಸಾದದಿಂದ ಅರವತ್ತು ಸಾವಿರ ಅಪ್ರತಿಮ ತೇಜಸ್ವಿ ಮಕ್ಕಳು ಜನಿಸಿದರು. ಅವರು ಘೋರರೂ, ಕ್ರೂರಕರ್ಮಿಗಳೂ, ಆಕಾಶದಲ್ಲಿ ಸರ್ಪಗಳಂತೆ ಹರಿದಾಡುವವರೂ ಆಗಿದ್ದರು. ಬಹುಸಂಖ್ಯೆಯಲ್ಲಿದ್ದ

ಅವರು ಅಮರರನ್ನೂ ಸೇರಿ ಸರ್ವಲೋಕಗಳನ್ನೂ ಅಣಕಿಸಿದರು. ಆ ಶೂರ ಸಮರಶಾಲಿಗಳು ದೇವತೆಗಳನ್ನೂ, ಗಂಧರ್ವ-ರಾಕ್ಷಸರನ್ನೂ ಮತ್ತು ಸರ್ವ ಜೀವಿಗಳನ್ನೂ ಬಾಧಿಸುತ್ತಿದ್ದರು. ಈ ಮಂದಬುದ್ಧಿ ಸಾಗರರಿಂದ ಲೋಕಗಳು ಧ್ವಂಸಗೊಳಿಸಲ್ಪಟ್ಟಾಗ ದೇವತೆಗಳೊಂದಿಗೆ ಎಲ್ಲರೂ ಬ್ರಹ್ಮನ ಶರಣು ಹೊಕ್ಕರು. ಸರ್ವಲೋಕಪಿತಾಮಹ ಮಹಾಭಾಗನು ಅವರಿಗೆ ಹೇಳಿದನು:

> "ದೇವತೆಗಳೇ! ಎಲ್ಲರೂ ಲೋಕಗಳೊಂದಿಗೆ ಎಲ್ಲಿಂದ ಬಂದಿದ್ದೀರೋ ಅಲ್ಲಿಗೆ ಮರಳಿ! ಸ್ವಲ್ಪವೇ ಸಮಯದಲ್ಲಿ ಮಹಾ ಸಾಗರರ ಮಹಾಘೋರ ಕ್ಷಯವು ಅವರೇ ಮಾಡುವ ಕರ್ಮದಿಂದ ನಡೆಯುತ್ತದೆ."

ಇದನ್ನು ಕೇಳಿ ದೇವತೆಗಳೂ ಪ್ರಜೆಗಳೂ ಪಿತಾಮಹನ ಅಪ್ಪಣೆಪಡೆದು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

ಬಹಳಷ್ಟು ದಿನಗಳ ಕಳೆದ ನಂತರ ವೀರ್ಯವಾನ್ ರಾಜ ಸಗರನು ಅಶ್ವಮೇಧಯಾಗದ ದೀಕ್ಷೆಯನ್ನು ತೆಗೆದುಕೊಂಡನು. ಆ ಅಶ್ವವು ಪುತ್ರರ ರಕ್ಷಣೆಯಲ್ಲಿ ಭೂಮಿಯನ್ನೆಲ್ಲಾ ತಿರುಗಾಡಿತು. ಅದು ನೀರೇ ಇಲ್ಲದೆ ಭಯಂಕರವಾಗಿ ಕಾಣುತ್ತಿದ್ದ ಸಮುದ್ರವನ್ನು ಪ್ರವೇಶಿಸಿತು. ಪ್ರಯತ್ನದಿಂದ ರಕ್ಷಣೆಗೊಳಗೊಂಡಿದ್ದರೂ ಅದು ಅಲ್ಲಿಯೇ ಅಂತರ್ಧಾನವಾಯಿತು. ಆಗ ಸಾಗರರು ಆ ಉತ್ತಮ ಕುದುರೆಯನ್ನು ಯಾರೋ ಅಪಹರಿಸಿದ್ದಾರೆಂದು ಯೋಚಿಸಿ ತಂದೆಯಲ್ಲಿಗೆ ಬಂದು

ಕುದುರೆಯು ಕಾಣದಂತೆ ಯಾರಿಂದಲೋ ಅಪಹರಿಸಲ್ಪಟ್ಟಿದೆ ಎಂದು ತಿಳಿಸಿದರು. ದೀಕ್ಷೆಯಲ್ಲಿದ್ದ ಅವನು

> “ಎಲ್ಲರೂ ಸೇರಿ ಎಲ್ಲ ದಿಕ್ಕುಗಳಲ್ಲಿಯೂ ಕುದುರೆಯನ್ನು ಹುಡುಕಿ!”

ಎಂದು ಆಜ್ಞಾಪಿಸಿದನು. ಅನಂತರ ತಂದೆಯ ಆಜ್ಞೆಯಂತೆ ಅವರು ಭೂಮಿಯ ಮೇಲೆಲ್ಲಾ, ಎಲ್ಲ ದಿಕ್ಕುಗಳಲ್ಲಿಯೂ ಆ ಕುದುರೆಯನ್ನು ಹುಡುಕಿದರು. ಆ ಸಾಗರರೆಲ್ಲರೂ ಪರಸ್ಪರರನ್ನು ಸೇರಿದರು. ಆದರೆ ಅವರು ಕುದುರೆಯನ್ನಾಗಲೀ ಕುದುರೆಯನ್ನು ಕದ್ದವರನ್ನಾಗಲೀ ಹುಡುಕಲಿಕ್ಕಾಗಲಿಲ್ಲ. ತಂದೆಯ ಬಳಿ ಮರಳಿಬಂದು ಕೈಜೋಡಿಸಿ ಹೇಳಿದರು:

> “ನೃಪ! ನಿನ್ನ ಶಾಸನದಂತೆ ನಾವು ಸಮುದ್ರ, ವನ, ದ್ವೀಪಗಳನ್ನೂ, ನದೀಕಂದರಗಳನ್ನೂ, ಪರ್ವತ ವನಪ್ರದೇಶಗಳನ್ನೂ ಸೇರಿ ಇಡೀ ಭೂಮಿಯನ್ನು ಹುಡುಕಿದೆವು. ಆದರೆ ಕುದುರೆಯಾಗಲೀ ಕುದುರೆಯನ್ನು ಅಪಹರಿಸಿದವರಾಗಲೀ ದೊರೆಯಲಿಲ್ಲ.”

ಅವರ ಆ ಮಾತುಗಳನ್ನು ಕೇಳಿ ಕ್ರೋಧಮೂರ್ಛಿತನಾದ ರಾಜನು ದೈವವಶನಾಗಿ ಅವರೆಲ್ಲರಿಗೆ ಈ ಮಾತನ್ನಾಡಿದನು:

> “ಬರಬೇಡಿ! ಹೋಗಿ! ಮಕ್ಕಳೇ! ಇನ್ನೊಮ್ಮೆ ಕುದುರೆಯನ್ನು

ಹುಡುಕಿ! ಯಜ್ಞದ ಕುದುರೆಯಿಲ್ಲದೇ ಹಿಂದಿರುಗಿ ಬರಬೇಡಿ!”

ಆಗ ಆ ಸಗರಾತ್ಮಜರು ಅವನ ಸಂದೇಶವನ್ನು ಸ್ವೀಕರಿಸಿ, ಪುನಃ ಇಡೀ ಭೂಮಿಯಲ್ಲಿ ಅಲೆದಾಡಿ ಹುಡುಕಿದರು. ಅಲ್ಲಿ ಒಂದು ಬಿಲವನ್ನು ಕಂಡು ಸಗರಾತ್ಮಜರು ಆ ಸಮುದ್ರದ ತಳವನ್ನು ಹಾರೆ ಗುದ್ದಲಿಗಳಿಂದ ಅಗೆಯತೊಡಗಿದರು. ಹಾಗೆ ಸಾಗರರು ಒಟ್ಟಿಗೇ ಅಗೆಯುತ್ತಿರಲು ಸಮುದ್ರವು ಎಲ್ಲ ಕಡೆಯಿಂದಲೂ ನೋವನ್ನು ಅನುಭವಿಸಿ ಪರಮ ದುಃಖವನ್ನು ಅನುಭವಿಸಿತು. ಅಸುರರು, ಉರಗಗಳು, ರಾಕ್ಷಸರು ಮತ್ತು ಇತರ ವಿವಿಧ ಜೀವಿಗಳು ಸಾಗರರಿಂದ ವಧಿಸಲ್ಪಡುವಾಗ ಆರ್ತನಾದಗೈದರು. ನೂರಾರು ಸಹಸ್ರಾರು ಪ್ರಾಣಿಗಳು ತಲೆಗಳನ್ನು ಕಡಿದು, ದೇಹತುಂಡಾಗಿ, ಎಲುಬು ಮತ್ತು ಬುರುಡೆಗಳು ಪುಡಿಯಾಗಿ ಬಿದ್ದಿರುವುದು ಕಂಡುಬಂದಿತು. ಈ ರೀತಿ ಅವರು ಮಕರಾಲಯದವರೆಗೂ ಸಮುದ್ರವನ್ನು ಅಗೆದು ತುಂಬಾ ಸಮಯವು ಕಳೆದರೂ ಕುದುರೆಯು ಕಾಣಲಿಲ್ಲ. ಸಮುದ್ರದ ಪೂರ್ವೋತ್ತರ ಪ್ರದೇಶದಲ್ಲಿ ಸಿಟ್ಟಿಗೆದ್ದ ಸಗರನ ಮಕ್ಕಳು ಪಾತಾಳದವರೆಗೂ ಅಗೆದರು. ಅಲ್ಲಿ ಮೇಯುತ್ತಿದ್ದ ಕುದುರೆಯನ್ನು ಕಂಡರು. ಅಲ್ಲಿಯೇ ತೇಜೋರಾಶಿಯ ಮಹಾತ್ಮ ಅನುತ್ತಮ ತಪಸ್ಸಿನಿಂದ ಉರಿಯುತ್ತಿರುವ ಅಗ್ನಿಯ ಜ್ವಾಲೆಯಂತೆ ಬೆಳಗುತ್ತಿರುವ ಕಪಿಲನನ್ನೂ ನೋಡಿದರು.

ಆ ಕುದುರೆಯನ್ನು ಕಂಡ ಅವರ ದೇಹವು ಸಂತೋಷದಿಂದ ಪುಳಕಿತಗೊಂಡಿತು. ಕಾಲಚೋದಿತರಾಗಿ, ಅಲ್ಲಿದ್ದ ಮಹಾತ್ಮ



ಕಪಿಲನನ್ನು ಅನಾದರಿಸಿ, ಸಂಕೃದ್ಧರಾಗಿ ಅಶ್ವವನ್ನು ಹಿಡಿಯಲು ಬಯಸಿ ಓಡಿ ಬಂದರು. ಆಗ ಯಾವ ಮುನಿಸತ್ತಮ ಕಪಿಲನನ್ನು ವಾಸುದೇವನೆಂದು ಹೇಳುತ್ತಾರೋ ಆ ಮುನಿಸತ್ತಮ ಕಪಿಲನು ಕೃದ್ಧನಾದನು. ಅವನು ಕಣ್ಣನ್ನು ತೆರೆದು ತನ್ನ ತೇಜಸ್ಸನ್ನು ಅವರ ಮೇಲೆ ಎಸೆದನು. ಆ ಸುಮಹಾತೇಜಸ್ವಿಯು ಮಂದಬುದ್ಧಿ ಸಾಗರರನ್ನು ಸುಟ್ಟುಹಾಕಿದನು. ಅವರು ಭಸ್ಮೀಭೂತರಾದುದನ್ನು ನೋಡಿದ ಸುಮಹಾತಪ ನಾರದನು ಸಗರನಲ್ಲಿಗೆ ಬಂದು ಅವನಿಗೆ ಅಲ್ಲಿ

ನಡೆದುದನ್ನು ನಿವೇದಿಸಿದನು. ಮುನಿಯ ಬಾಯಿಂದ ಆ ಘೋರ ವಚನವನ್ನು ಕೇಳಿದ ರಾಜನು ಒಂದು ಮುಹೂರ್ತಕಾಲ ಮನಸ್ಸನ್ನೇ ಕಳೆದುಕೊಂಡು ಸ್ಥಾಣುವಿನ ವಾಕ್ಯವನ್ನು ನೆನಪಿಸಿಕೊಂಡನು. ತನಗೆ ತಾನೇ ಆಶ್ವಾಸನೆಯನ್ನಿತ್ತು, ಕುದುರೆಯ ಕುರಿತು ಚಿಂತಿಸಿದನು. ಆಗ ಅಸಮಂಜಸನ ಮಗ, ತನ್ನ ಮೊಮ್ಮಗ ಅಂಶುಮಂತನನ್ನು ಕರೆದು ಹೇಳಿದನು:

> “ಆ ಅರವತ್ತು ಸಾವಿರ ಅಮಿತೌಜಸ ಪುತ್ರರು ನನಗಾಗಿ ತೇಜಸ್ವಿ ಕಪಿಲನ ತೇಜಸ್ಸಿಗೆ ಸಿಲುಕಿ ನಿಧನಹೊಂದಿದ್ದಾರೆ. ನಿನ್ನ ತಂದೆಯನ್ನು ನಾನು ಧರ್ಮಸಂರಕ್ಷಣೆ ಮಾಡಲೋಸುಗ ಪೌರರ ಹಿತವನ್ನು ಬಯಸಿ ಪರಿತ್ಯಜಿಸಿದ್ದೇನೆ.”

ಅಸಮಂಜಸನೆಂದು ಖ್ಯಾತ ಸಗರನ ಮಗನಿದ್ದನು. ಅವನು ಶೈಭ್ಯೆಯಲ್ಲಿ ಜನಿಸಿದ್ದನು. ಅವನು ದುರ್ಬಲ ಪೌರರ ಮಕ್ಕಳನ್ನು ಕಾಲುಗಳಲ್ಲಿ ಹಿಡಿದು ನದಿಯಲ್ಲಿ ಎಸೆಯತ್ತಿದ್ದನು. ಆಗ ಭಯ-ಶೋಕ ಪೀಡಿತ ಪೌರರು ಒಂದಾಗಿ ಸಗರನಲ್ಲಿಗೆ ಹೋಗಿ ಎಲ್ಲರೂ ಕೈಜೋಡಿಸಿ ನಿಂತು ಬೇಡಿಕೊಂಡರು.

> “ಮಹಾರಾಜ! ಶತ್ರು ರಥಚಕ್ರಗಳ ಭಯದಿಂದ ನಮ್ಮನ್ನು ರಕ್ಷಿಸುವ ನೀನು ಈ ಅಸಮಂಜಸನ ಭಯದಿಂದ ನಮ್ಮನ್ನು ರಕ್ಷಿಸಬೇಕು.”

ಪೌರರ ಘೋರ ವಚನವನ್ನು ಕೇಳಿದ ನೃಪತಿಸತ್ತಮನು ಒಂದು

ಮುಹೂರ್ತ ಮನಸ್ಸನ್ನು ಕಳೆದುಕೊಂಡು ಸಚಿವರಿಗೆ ಹೇಳಿದನು:

> "ಇಂದೇ ನನ್ನ ಮಗ ಅಸಮಂಜಸನನ್ನು ಪುರದಿಂದ ಹೊರಗೆ ಕಳುಹಿಸಿ. ನನಗೆ ಪ್ರಿಯವಾದುದನ್ನು ಮಾಡಬೇಕೆಂದರೆ ಇದನ್ನು ಶೀಘ್ರದಲ್ಲಿಯೇ ಮಾಡಬೇಕು."

ನರೇಂದ್ರನು ಹೀಗೆ ಹೇಳಲು ಅವನ ಸಚಿವರು ತಕ್ಷಣವೇ ನೃಪನು ಹೇಳಿದಂತೆ, ಅವನ ಆಜ್ಞೆಯನ್ನು ನೆರವೇರಿಸಿದರು. ಹೀಗೆ ಮಹಾತ್ಮ ಸಗರನು ಪೌರರ ಹಿತವನ್ನು ಬಯಸಿ ತನ್ನ ಪುತ್ರನನ್ನು ಹೊರಗಟ್ಟಿದನು.

ಸಗರನು ತನ್ನ ಮೊಮ್ಮಗ ಅಂಶುಮಂತನಿಗೆ ಮುಂದುವರೆದು ಹೇಳಿದನು:

> "ಮಗೂ! ನಿನ್ನ ತಂದೆಯನ್ನು ತ್ಯಜಿಸಿದುದರಿಂದ, ನನ್ನ ಮಕ್ಕಳ ಸಾವಿನಿಂದ ಮತ್ತು ಕುದುರೆಯು ದೊರೆಯದೇ ಇದ್ದುದರಿಂದ ಪರಿತಪಿಸುತ್ತಿದ್ದೇನೆ. ಮೊಮ್ಮಗನೇ! ಆ ದುಃಖದಿಂದ ಪರಿತಪಿಸುತ್ತಿರುವ, ಯಜ್ಞದ ವಿಘ್ನವಾಗುವುದೆಂದು ಮೂರ್ಛೆಗೊಂಡಿರುವ ನನ್ನನ್ನು ಆ ಕುದುರೆಯನ್ನು ತರುವುದರ ಮೂಲಕ ಈ ನರಕದಿಂದ ಮೇಲೆತ್ತು."

ಮಹಾತ್ಮ ಸಗರನ ಈ ಮಾತುಗಳಂತೆ ಅಂಶುಮಂತನು ದುಃಖದಿಂದ ಭೂಮಿಯನ್ನು ಅಗೆದ ಪ್ರದೇಶಕ್ಕೆ ಹೋದನು. ಅದೇ ಮಾರ್ಗದಲ್ಲಿ ಸಮುದ್ರವನ್ನು ಪ್ರವೇಶಿಸಿ ಮುಂದುವರೆದು ಮಹಾತ್ಮ ಕಪಿಲನನ್ನೂ

ಕುದುರೆಯನ್ನೂ ಕಂಡನು. ಆ ತೇಜಸ್ಸಿನ ರಾಶಿ ಪುರಾಣ ಋಷಿಸತ್ತಮನನಿಗೆ ಶಿರಬಾಗಿ ನಮಸ್ಕರಿಸಿ ತಾನು ಬಂದ ಕಾರ್ಯದ ಕುರಿತು ನಿವೇದಿಸಿದನು. ಆಗ ಮಹಾತೇಜಸ್ವಿ ಧರ್ಮಾತ್ಮ ಕಪಿಲನು ಅಂಶುಮತನಿಂದ ಪ್ರೀತನಾಗಿ ಅವನಿಗೆ "ವರವನ್ನು ಕೇಳು!" ಎಂದನು. ಅವನು ಯಜ್ಞಕಾಗಿ ಕುದುರೆಯನ್ನು ಮೊದಲನೆಯ ವರವಾಗಿ ಕೇಳಿದನು. ಪಿತೃಗಳನ್ನು ಪಾವನಗೊಳಿಸಲು ಇಚ್ಛಿಸಿ ನೀರನ್ನು ಎರಡನೆಯ ವರವಾಗಿ ಕೇಳಿದನು. ಮಹಾತೇಜಸ್ವಿ ಮುನಿಪುಂಗವ ಕಪಿಲನು ಅವನಿಗೆ ಹೇಳಿದನು:

> "ನಿನಗೆ ಮಂಗಳವಾಗಲಿ! ನಿನ್ನ ಮೊದಲನೆಯ ವರವನ್ನು ಕೊಡುತ್ತೇನೆ. ನಿನ್ನಲ್ಲಿ ಕ್ಷಮೆ, ಧರ್ಮ ಮತ್ತು ಸತ್ಯವೂ ನೆಲೆಸಿವೆ. ನಿನ್ನಿಂದ ಸಗರನು ಕೃತಾರ್ಥನಾಗುತ್ತಾನೆ ಮತ್ತು ನಿನ್ನ ತಂದೆಯು ಪುತ್ರರನ್ನು ಪಡೆಯುತ್ತಾನೆ. ನಿನ್ನ ಪ್ರಭಾವದಿಂದಲೇ ಸಾಗರರು ಸ್ವರ್ಗವನ್ನು ಸೇರುತ್ತಾರೆ. ನಿನ್ನ ಮೊಮ್ಮಗನು, ಸಾಗರರನ್ನು ಪಾವನಗೊಳಿಸಲು ಮಹೇಶ್ವರನನ್ನು ತೃಪ್ತಿಪಡಿಸಿ ತ್ರಿದಿವದಿಂದ ತ್ರಿಪಥಗೆಯನ್ನು ಬರಿಸುತ್ತಾನೆ. ನಿನಗೆ ಮಂಗಳವಾಗಲಿ! ಈ ಯಜ್ಞಕುದುರೆಯನ್ನು ಕೊಂಡೊಯ್ಯಿ! ಮಗೂ! ಮಹಾತ್ಮ ಸಗರನ ಯಜ್ಞವನ್ನು ಸಮಾಪ್ತಿಗೊಳಿಸು!"

ಮಹಾತ್ಮ ಕಪಿಲನ ಆ ಮಾತುಗಳನ್ನು ಕೇಳಿ ಅಂಶುಮಂತನು ಕುದುರೆಯನ್ನು ಹಿಡಿದು ಮಹಾತ್ಮನ ಯಜ್ಞಶಾಲೆಗೆ ಬಂದನು. ಆಗ

ಅವನು ಮಹಾತ್ಮ ಸಗರನಿಗೆ ನಮಸ್ಕರಿಸಿದನು. ಅವನು ಅವನ ನೆತ್ತಿಯನ್ನು ಆಘ್ರಾಣಿಸಲು, ಎಲ್ಲವನ್ನೂ ನಿವೇದಿಸಿದನು. ಸಾಗರರ ನಾಶದ ಕುರಿತು ತಾನು ಕಂಡು-ಕೇಳಿದ್ದುದನ್ನು ಮತ್ತು ಯಜ್ಞಶಾಲೆಗೆ ಕುದುರೆಯು ಆಗಮಿಸಿದುದನ್ನು ಹೇಳಿದನು. ಅದನ್ನು ಕೇಳಿದ ರಾಜ ಸಗರನು ತನ್ನ ಪುತ್ರರಿಂದಾದ ದುಃಖವನ್ನು ತೊರೆದು, ಅಂಶುಮಂತನನ್ನು ಸತ್ಕರಿಸಿ, ಯಜ್ಞವನ್ನು ಪೂರೈಸಿದನು. ಯಜ್ಞವನ್ನು ಸಮಾಪ್ತಿಗೊಳಿಸಿ ಸಗರನು ಎಲ್ಲ ದೇವತೆಗಳೊಂದಿಗೆ ಸಹಭೋಜನ ಮಾಡಿದನು. ವರುಣಾಲಯ ಸಮುದ್ರವನ್ನು ತನ್ನ ಪುತ್ರನಾಗಿ ಮಾಡಿಕೊಂಡನು.

ಬಹುಕಾಲದ ವರೆಗೆ ರಾಜ್ಯವನ್ನಾಳಿ ಆ ರಾಜೀವಲೋಚನನು ಮೊಮ್ಮಗನಿಗೆ ಪಟ್ಟವನ್ನು ಕಟ್ಟಿ ಸ್ವರ್ಗವನ್ನು ಸೇರಿದನು. ಧರ್ಮಾತ್ಮ ಅಂಶುಮತನಾದರೋ ಸಾಗರ ಮೇಖಲ ಭೂಮಿಯನ್ನು ತನ್ನ ಪಿತಾಮಹನಂತೆ ರಾಜ್ಯವನಾಳಿದನು. ಅವನಿಗೆ ದಿಲೀಪ ಎಂಬ ಹೆಸರಿನ ಧರ್ಮವಂತ ಮಗನು ಜನಿಸಿದನು. ಅವನಿಗೆ ರಾಜ್ಯವನ್ನು ಕೊಟ್ಟು ಅಂಶುಮಂತನು ನಿವೃತ್ತನಾದನು. ಆಗ ಪಿತೃಗಳ ಮಹಾನಾಶದ ಕುರಿತು ಕೇಳಿದ ದಿಲೀಪನು ಅವರ ಗತಿಯನ್ನು ಚಿಂತಿಸಿ ದುಃಖದಿಂದ ಪರಿತಪಿಸಿದನು. ಆ ನೃಪನು ಗಂಗಾವತರಣಕ್ಕೆ ಬಹಳಷ್ಟು ಪ್ರಯತ್ನಮಾಡಿದನು. ಶಕ್ತಿಯಿದ್ದಷ್ಟು ಪ್ರಯತ್ನಿಸಿದರೂ ಅವನಿಗೆ ಅವಳನ್ನು ಕೆಳತರಲು ಸಾಧ್ಯವಾಗಲಿಲ್ಲ. ಅವನ ಮಗ ಶ್ರೀಮಾನ್ ಧರ್ಮಪರಾಯಣ, ಸತ್ಯವಾದಿ, ಅನಸೂಯಕನು

ಭಗೀರಥನೆಂದು ಖ್ಯಾತನಾದನು. ಅವನಿಗೆ ರಾಜ್ಯಾಭಿಷೇಕವನ್ನು ಮಾಡಿ ದಿಲೀಪನು ವನವನ್ನು ಸೇರಿದನು. ತಪಸ್ಸು ಮತ್ತು ಸಿದ್ಧಿಗಳ ಸಮಾಯೋಗದಿಂದ ಆ ರಾಜನು ಸ್ವರ್ಗದ ಕಾಲಯೋಗದಿಂದ ವನಕ್ಕೆ ಹೋದನು.

ಆ ಮಹೇಷ್ವಾಸ, ಚಕ್ರವರ್ತೀ ಮಹಾರಥೀ ರಾಜನಾದರೋ ಸರ್ವಲೋಕದ ಮನೋನಯನ ನಂದನನಾದನು. ಆ ಮಹಾಬಾಹುವು ತನ್ನ ಪಿತೃಗಳು ಮಹಾತ್ಮ ಕಪಿಲನಿಂದ ಘೋರಮರಣವನ್ನು ಅನುಭವಿಸಿ ಸ್ವರ್ಗವನ್ನು ಪಡೆಯಲಿಲ್ಲ ಎನ್ನುವುದನ್ನು ಕೇಳಿದನು. ಆ ರಾಜ್ಯವನ್ನು ಸಚಿವನಲ್ಲಿಟ್ಟು ನರೇಶ್ವರನು ದುಃಖಿತ ಹೃದಯದೊಂದಿಗೆ ತಪಸ್ಸನ್ನು ತಪಿಸಿ, ಕಿಲ್ಬಿಷಗಳನ್ನು ತಪಸ್ಸಿನಿಂದ ಸುಟ್ಟು ಗಂಗೆಯನ್ನು ಆರಾಧಿಸಲು ಹಿಮವತ್ ಪರ್ವತದ ಇಳಿಜಾರಿಗೆ ಹೋದನು. ಆ ನರಶ್ರೇಷ್ಠನು ನಗೋತ್ತಮ, ಖನಿಜಗಳಿಂದ ಅಲಂಕೃತಗೊಂಡ ಬಹುವಿಧದ ಆಕಾರಗಳುಳ್ಳ ಶಿಖರಗಳನ್ನು ಹೊಂದಿದ, ಎಲ್ಲೆಡೆಗಳಲ್ಲಿ ಗಾಳಿಯಿಂದ ತೇಲಿ ಬರುತ್ತಿರುವ ಮೋಡಗಳಿಂದ ಅಪ್ಪಿಹಿಡಿಯಲ್ಪಟ್ಟ; ಸದಾ ನೀರಿರುವ ನದೀ, ಕೊಳ, ಬಾವಿಗಳಿಂದ ಕಂಗೊಳಿಸುವ; ಗುಹೆ ಕಂದರಗಳಲ್ಲಿ ವಾಸಿಸುವ ಸಿಂಹ ವ್ಯಾಘ್ರಗಳಿಗೆ ಮನೆಯಾದ; ವಿಚಿತ್ರ ಅಂಗಾಂಗಳ ವಿಚಿತ್ರ ಆಕಾರಗಳ, ವಿಚಿತ್ರ ಧ್ವನಿಗಳ, ಕಪ್ಪು ಕಣ್ಣಿನ, ಪುತ್ರಪ್ರಿಯರಾದ ದುಂಬಿ, ಹಂಸ, ಕಾಡುಕೋಳಿ, ನವಿಲು, ಶತಪತ್ರಿ, ಕೋಕಿಲ, ಮರಕುಟುಕ, ಚಕೋರವೇ ಮೊದಲಾದ, ಪಕ್ಷಿಗಳಿಂದ, ಮಧುರವಾಗಿ ಅರಳುತ್ತಿರುವ ಕಮಲದ ರಾಶಿಗಳಿಂದ ಅಲಂಕೃತವಾದ

ರಮ್ಯ ಸರೋವರಗಳೇ ಮೊದಲಾದ ಜಲಸ್ಥಾನಗಳಿಂದ ಕೂಡಿದ್ದ; ಕಿನ್ನರ ಅಪ್ಸರೆಯರು ಆಗಾಗ್ಗೆ ಬರುತ್ತಿದ್ದ ಶಿಲಾತಲಗಳು ಆನೆಗಳ ಕೋರೆದಾಡೆಗಳ ತುದಿಗೆ ಸಿಲುಕಿ ಗಾಯಗೊಂಡ ಮರಗಳುಳ್ಳ; ವಿಧ್ಯಾಧರರು ಸಂಚರಿಸುತ್ತಿರುವ, ನಾನಾರತ್ನಸಮಾಕುಲ, ಉರಿನಾಲಿಗೆಯ ತೀವ್ರ ವಿಷದ ಹಾವುಗಳುಳ್ಳ ಹಿಮವಂತನನ್ನು ಕಂಡನು. ಒಮ್ಮೆ ಬಂಗಾರದಂತೆ ತೋರುವ, ಒಮ್ಮೆ ಬೆಳ್ಳಿಯಂತೆ ತೋರುವ, ಒಮ್ಮೊಮ್ಮೆ ಕಪ್ಪಾಗಿ ಕಾಣುವ ಹಿಮಾಲಯಕ್ಕೆ ಆಗಮಿಸಿದನು. ಅಲ್ಲಿಯೇ ಆ ನರಶ್ರೇಷ್ಠನು ಫಲಮೂಲ ಮತ್ತು ನೀರನ್ನು ಸೇವಿಸುತ್ತಾ ಒಂದು ಸಾವಿರ ವರ್ಷಗಳ ಘೋರ ತಪಸ್ಸನ್ನಾಚರಿಸಿದನು. ಒಂದು ಸಾವಿರ ವರ್ಷಗಳು ಕಳೆದ ನಂತರ ದಿವ್ಯ ಮಹಾನದಿ ಗಂಗೆಯು ಸ್ವಯಂ ಮೂರ್ತಿಮತ್ತಾಗಿ ಕಾಣಿಸಿಕೊಂಡಳು. ಗಂಗೆಯು ಹೇಳಿದಳು:

> “ಮಹಾರಾಜ! ಏನನ್ನು ಇಚ್ಛಿಸಿದ್ದೀಯೆ? ನಾನು ನಿನಗೆ ಏನನ್ನು ನೀಡಲಿ? ಹೇಳು! ನಿನ್ನ ಮಾತನ್ನು ನಡೆಸಿಕೊಡುತ್ತೇನೆ.”

ಈ ಮಾತಿಗೆ ರಾಜನು ಹೈಮವತಿಗೆ ಉತ್ತರಿಸಿದನು:

> “ವರದೇ! ಮಹಾನದೀ! ಯಜ್ಞಾಶ್ವವನ್ನು ಹುಡುಕುತ್ತಿದ್ದ ನನ್ನ ಪಿತಾಮಹರನ್ನು ಕಪಿಲನು ಯಮನಾಲಯಕ್ಕೆ ಕಳುಹಿಸಿದನು. ಅರವತ್ತು ಸಾವಿರ ಮಹಾತ್ಮ ಸಾಗರರು ಕಪಿಲನ ತೇಜಸ್ಸಿನ ಬಳಿಬಂದು ಕ್ಷಣದಲ್ಲಿಯೇ ನಿಧನಹೊಂದಿದರು. ವಿನಷ್ಟರಾದ

> ಅವರ ಶರೀರಗಳನ್ನು ನೀನು ನೀರಿನಿಂದ ತೊಳೆಯದೇ ಆ ನನ್ನವರಿಗೆ ಸ್ವರ್ಗದಲ್ಲಿ ಸ್ಥಾನ ದೊರೆಯುವುದಿಲ್ಲ ಎಂದು ತಿಳಿದಿದೆ. ಸಗರನ ಮಕ್ಕಳು ನನ್ನ ಪಿತೃಗಳನ್ನು ಸ್ವರ್ಗಕ್ಕೆ ಕರೆದೊಯ್ಯಿ! ಇದನ್ನೇ ನಾನು ನಿನ್ನಲ್ಲಿ ಬೇಡ ಬಯಸುತ್ತೇನೆ."

ರಾಜನ ಈ ಮಾತುಗಳನ್ನು ಕೇಳಿ, ಲೋಕನಮಸ್ಕೃತೆ ಗಂಗೆಯು ಸುಪ್ರೀತಳಾಗಿ ಭಗೀರಥನಿಗೆ ಈ ಮಾತುಗಳಲ್ಲಿ ಉತ್ತರಿಸಿದಳು:

> "ಮಹಾರಾಜ! ನಿನ್ನ ಹೇಳಿಕೆಯಂತೆ ಮಾಡುತ್ತೇನೆ. ಅದರಲ್ಲಿ ಸಂಶಯವಿಲ್ಲ. ಆದರೆ ನಾನು ಗಗನದಿಂದ ಕಳಚಿ ಬೀಳುವ ವೇಗವನ್ನು ಸಹಿಸಲು ಅಸಾಧ್ಯವಾಗುತ್ತದೆ. ವಿಬುಧಶ್ರೇಷ್ಠ ನೀಲಕಂಠ ಮಹೇಶ್ವರನ ಹೊರತು ಈ ಮೂರು ಲೋಕಗಳಲ್ಲಿ ಬೇರೆ ಯಾರೂ ಅದನ್ನು ತಡೆದುಕೊಳ್ಳಲು ಶಕ್ತರಿಲ್ಲ. ತಪಸ್ಸಿನಿಂದ ಆ ವರದ ಹರನನ್ನು ಮೆಚ್ಚಿಸು. ನಾನು ಕೆಳಗೆ ಬೀಳುವಾಗ ಆ ದೇವನು ನನ್ನನ್ನು ಶಿರದಲ್ಲಿ ಧರಿಸುತ್ತಾನೆ ಮತ್ತು ನಿನ್ನ ಪಿತೃಗಳಿಗಾಗಿ ನೀನು ಬಯಸಿದುದನ್ನು ನೆರವೇರಿಸಿಕೊಡುತ್ತಾನೆ."

ಈ ಮಾತುಗಳನ್ನು ಕೇಳಿದ ಮಹಾರಾಜ ಭಗೀರಥನು ಕೈಲಾಸ ಪರ್ವತಕ್ಕೆ ಹೋಗಿ ಶಂಕರನನ್ನು ಮೆಚ್ಚಿಸಿದನು. ಕೆಲವು ಕಾಲಾಂತರದಲ್ಲಿ ಆ ನರೋತ್ತಮ ನೃಪನು ಅವನನ್ನು ಕಂಡು ಗಂಗೆಯನ್ನು ಧರಿಸಿ ತನ್ನ ಪಿತೃಗಳಿಗೆ ಸ್ವರ್ಗವಾಸವು ದೊರಕಿಸುವ


www.cyberkerala.com

ವರವನ್ನು ಅವನಿಂದ ಕೇಳಿದನು.

ಭಗೀರಥನ ಮಾತನ್ನು ಕೇಳಿ ಮತ್ತು ದೇವತೆಗಳ ಹಿತಕ್ಕಾಗಿ ಭಗವಂತನು ರಾಜನಿಗೆ ಈ ರೀತಿ ಉತ್ತರಿಸಿದನು.

> "ಮಹಾಬಾಹೋ! ಗಗನದಿಂದ ಕೆಳಬೀಳುವ ಶಿವೆ, ಪುಣ್ಯೆ, ದಿವ್ಯ ದೇವನದಿಯನ್ನು ನಿನಗೋಸ್ಕರ ಧರಿಸುತ್ತೇನೆ."

ಹೀಗೆ ಹೇಳಿ ಅವನು ನಾನಾ ತರಹದ ಘೋರ ಆಯುಧಗಳನ್ನು ಹಿಡಿದ ಗಣಗಳಿಂದ ಸುತ್ತುವರೆಯಲ್ಪಟ್ಟು ಹಿಮಾಲಯಕ್ಕೆ ಹೋದನು. ಅಲ್ಲಿ ನಿಂತು ನರಶ್ರೇಷ್ಠ ಭಗೀರಥನಿಗೆ ಹೇಳಿದನು:

> "ಮಹಾಬಾಹೋ! ಈಗ ಶೈಲರಾಜಸುತೆ ನದಿಯಲ್ಲಿ ಪ್ರಾರ್ಥನೆಮಾಡು. ಸ್ವರ್ಗದಿಂದ ಬೀಳುತ್ತಿರುವ ಆ ನದಿಶ್ರೇಷ್ಠೆಯನ್ನು ಧರಿಸುತ್ತೇನೆ."

ಶರ್ವನ ಈ ಮಾತನ್ನು ಕೇಳಿ ರಾಜನು ಸಂತೋಷದಿಂದ ವಿನೀತನಾಗಿ, ತಲೆಬಾಗಿ ನಮಸ್ಕರಿಸಿ ತನ್ನ ಮನಸ್ಸಿನೊಂದಿಗೆ ಗಂಗೆಯನ್ನು ನೆನೆದನು. ಆಗ ತನ್ನನ್ನೇ ಚಿಂತಿಸುತ್ತಿರುವ ರಾಜ ಮತ್ತು ಅಲ್ಲೇ ನಿಂತಿರುವ ಈಶಾನನನ್ನು ನೋಡಿ ರಮ್ಯ ಪುಣ್ಯಜಲೆಯು ಒಮ್ಮೆಗೇ ಜೋರಾಗಿ ಗಗನದಿಂದ ಕಳಚಿ ಧುಮುಕಿದಳು. ಧುಮುಕಿ ಬರುತ್ತಿದ್ದ ಅವಳನ್ನು ನೋಡಿ ದೇವತೆಗಳೊಂದಿಗೆ ಮಹರ್ಷಿಗಳೂ, ಗಂಧರ್ವ-ಉರಗ-ರಾಕ್ಷಸರೂ ಕೂಡ ನೋಡಲು ಬಂದು ಸೇರಿದರು. ಆಗ ಮೀನು-



ಮೊಸಳೆಗಳ ಮಹಾ ಸಂಕುಲಗಳನ್ನು ಎಲ್ಲವನ್ನೂ ತನ್ನಲ್ಲಿಟ್ಟುಕೊಂಡ ಹಿಮವಂತನ ಮಗಳು ಗಂಗೆಯು ಗಗನದಿಂದ ಧುಮುಕಿ ಬಿದ್ದಳು. ಆಗ ಹರನು ತನ್ನ ಲಲಾಟದ ಮೇಲೆ ಬೀಳುತ್ತಿದ್ದ ಗಗನಮೇಖಲೆ ಗಂಗೆಯನ್ನು ಮುತ್ತುಗಳನ್ನು ಹಾರದಲ್ಲಿ ಪೋಣಿಸುವಂತೆ ಧರಿಸಿದನು. ಪ್ರವಾಹವನ್ನು ಕಟ್ಟಿಹಿಡಿದುದರಿಂದುಂಟಾದ ನೊರೆಯಿಂದ ಅಲ್ಲಿ ಆ ಸಮುದ್ರಗೆಯು ಹಂಸಗಳ ಸಾಲಿನಂತೆ ಕಂಡಳು. ಅವಳು ಹೊರಬರಲು ಪ್ರಯತ್ನಿಸುತ್ತಾ ಮೂರು ಧಾರೆಗಳಾಗಿ ಚಿಮ್ಮಿದಳು. ಅವಳು ಒಮ್ಮೆಮ್ಮೆ ಸಿಟ್ಟಿನಿಂದ ಭುಸುಗುಟ್ಟಿ ರೋಷದಲ್ಲಿ ಮುನ್ನುಗ್ಗುವವಳಂತೆ ಮತ್ತು ಇನ್ನೊಮ್ಮೆ ತನ್ನದೇ ನೊರೆಯ ಸೀರೆಯನ್ನುಟ್ಟು, ಅಮಲಿನಲ್ಲಿ ಜೋಲಾಡಿಬರುವ ಸ್ತ್ರೀಯಂತೆ ತೋರುತ್ತಿದ್ದಳು. ಇನ್ನೊಮ್ಮೆ ಅವಳ ಪ್ರವಾಹದಲ್ಲಿ ಇಂಪಾದ ನಾದವನ್ನು ಮಾಡುತ್ತಾ ಬರುವವಳಂತೆ ಕಂಡು ಬರುತ್ತಿದ್ದಳು. ಈ ರೀತಿ ಹಲವು ಪ್ರಕಾರಗಳಲ್ಲಿ ಹಲವನ್ನು ಮಾಡುತ್ತಾ ಗಗನವನ್ನು ಬಿಟ್ಟು ಭೂಮಿಯ ತಲವನ್ನು ತಲುಪಿದ ಅವಳು ಭಗೀರಥನಿಗೆ ಹೇಳಿದಳು:

> “ಮಹಾರಾಜ! ನಾನು ಯಾವ ಮಾರ್ಗದಲ್ಲಿ ಹೋಗಬೇಕೆನ್ನುವುದನ್ನು ನೀನೇ ತೋರಿಸು. ನಿನಗೋಸ್ಕರವೇ ನಾನು ಭೂಮಿಗೆ ಇಳಿದು ಬಂದಿದ್ದೇನೆ.”

ಈ ಮಾತುಗಳನ್ನು ಕೇಳಿದ ರಾಜ ಭಗೀರಥನು ಆ ಪುಣ್ಯ ಜಲದಿಂದ ಪಾವನಗೊಳಿಸಲು ಮಹಾತ್ಮ ಸಾಗರರ ಶರೀರಗಳಿರುವಲ್ಲಿ ಹೋದನು.

ಗಂಗೆಯನ್ನು ಧರಿಸಿ ಲೋಕನಮಸ್ಕೃತ ಹರನು ದೇವತೆಗಳೊಂದಿಗೆ ಪರ್ವತಶ್ರೇಷ್ಠ ಕೈಲಾಸಕ್ಕೆ ಹೋದನು. ಗಂಗೆಯೊಡನೆ ನೃಪನು ಸಮುದ್ರವನ್ನು ತಲುಪಿದೊಡನೆಯೇ ವರುಣಾಲಯ ಸಮುದ್ರವು ತುಂಬಿಕೊಂಡಿತು. ನೃಪತಿಯಾದರೋ ಅಲ್ಲಿ ಗಂಗೆಯನ್ನು ತನ್ನ ಮಗಳಾಗಿ ಮಾಡಿಕೊಂಡನು ಮತ್ತು ಪಿತೃಗಳಿಗೆ ನೀರನ್ನಿತ್ತು ಪೂರ್ಣಮನೋರಥನಾದನು.

# ಋಷ್ಯಶೃಂಗ

[ಋಷ್ಯಶೃಂಗನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೧೦-೧೧೩) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಬ್ರಹ್ಮರ್ಷಿ, ತಪಸ್ಸಿನಿಂದ ಆತ್ಮವನ್ನು ಅನುಭವಿಸಿದ ಅಮೋಘವೀರ್ಯ, ಸತ್ಯವಂತ, ಪ್ರಜಾಪತಿಯಂತೆ ಬೆಳಗುವ ವಿಭಾಂಡಕನಲ್ಲಿ ಪ್ರತಾಪಿ, ಮಹಾಹೃದ, ಮಹಾತೇಜಸ್ವಿ, ಸ್ಥವಿರಸಂಹಿತ ಬಾಲಕ ಋಷ್ಯಶೃಂಗನು ಮಗನಾಗಿ ಜನಿಸಿದನು. ಕಾಶ್ಯಪ ವಿಭಾಂಡಕನು ಕೌಶಿಕೀ ನದಿಯನ್ನು ಸೇರಿ ಅಲ್ಲಿ ದೀರ್ಘಕಾಲ

ಪರಿಶ್ರಮಿಸಿ ಋಷಿ-ದೇವತೆಗಳಿಂದ ಗೌರವಿಸಲ್ಪಟ್ಟು ತಪಸ್ಸಿನಲ್ಲಿ ನಿರತನಾಗಿದ್ದನು. ಅವನು ನೀರಿನಲ್ಲಿ ಸ್ನಾನಮಾಡುತ್ತಿರುವಾಗ ಅಪ್ಸರೆ ಊರ್ವಶಿಯನ್ನು ನೋಡಿ ಅವನ ವೀರ್ಯವು ಸ್ಖಲನವಾಯಿತು. ಆಗಲೇ ಅಲ್ಲಿಗೆ ಬಾಯಾರಿಕೆಯಿಂದ ಬಂದು ನೀರನ್ನು ಕುಡಿಯುತ್ತಿದ್ದ ಹೆಣ್ಣು ಜಿಂಕೆಯೊಂದು ಅದನ್ನು ಕುಡಿಯಿತು ಮತ್ತು ಅದು ಗರ್ಭಿಣಿಯಾಯಿತು. ದೈವನಿರ್ಮಿತವಾದ ವಿಧಿಯು ನಿಶ್ಚಯಿಸಿದುದು ಎಷ್ಟೇ ಅಮೋಘವಾಗಿದ್ದರೂ ನಡೆಯುತ್ತದೆ. ಆ ಜಿಂಕೆಯಲ್ಲಿ ಅವನ ಪುತ್ರ ಮಹಾನೃಷಿ ಋಷ್ಯಶೃಂಗನು ಜನಿಸಿದನು. ನಿತ್ಯವೂ ತಪಸ್ಸಿನಲ್ಲಿದ್ದ ಅವನು ವನದಲ್ಲಿಯೇ ಬೆಳೆದನು. ಆ ಮಹಾತ್ಮನ ಶಿರದಲ್ಲಿ ಜಿಂಕೆಯ ಕೋಡುಗಳಿದ್ದವು. ಆದುದರಿಂದ ಋಷ್ಯಶೃಂಗ ಎಂಬ ಹೆಸರು ಅವನಿಗೆ ಬಂದಿತು. ತನ್ನ ತಂದೆಯ ಹೊರತಾಗಿ ಬೇರೆ ಯಾವ ಮನುಷ್ಯರನ್ನೂ ಅವನು ನೋಡಿರಲಿಲ್ಲ. ನೃಪ! ಆದುದರಿಂದ ಅವನ ಮನಸ್ಸು ನಿತ್ಯವೂ ಬ್ರಹ್ಮಚರ್ಯದಲ್ಲಿತ್ತು.

ಅದೇ ಸಮಯದಲ್ಲಿ ದಶರಥನ ಸಖ ಲೋಮಪಾದನೆಂಬ ಖ್ಯಾತನು ಅಂಗ ದೇಶದ ರಾಜನಾಗಿದ್ದನು. ಅವನು ತನ್ನ ಮನಬಂದಂತೆ ಬ್ರಾಹ್ಮಣರನ್ನು ನಡೆಸಿಕೊಳ್ಳುತ್ತಿದ್ದನು. ಆದುದರಿಂದ ಬ್ರಾಹ್ಮಣರು ಆ ರಾಜನನ್ನು ಪರಿತ್ಯಜಿಸಿದರು. ರಾಜನ ಪುರೋಹಿತನೇ ಹೊರಟು ಹೋದುದರಿಂದ ಸಹಸ್ರಾಕ್ಷನು ಅಲ್ಲಿ ಮಳೆಯನ್ನು ಸುರಿಸಲಿಲ್ಲ ಮತ್ತು ಪ್ರಜೆಗಳು ಪೀಡಿತರಾದರು. ರಾಜನು ಇಂದ್ರನಿಂದ ಮಳೆತರಿಸಲು ತಪೋಧನ, ತಿಳಿದ, ಸಮರ್ಥ ಬ್ರಾಹ್ಮಣರಲ್ಲಿ ಕೇಳಿದನು:

“ಮಳೆಯನ್ನು ಹೇಗೆ ಸುರಿಸಬಹುದು? ಉಪಾಯವನ್ನು ಹುಡುಕಿ!”

ಈ ರೀತಿ ಪ್ರಶ್ನಿಸಲ್ಪಟ್ಟ ವಿವೇಕಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಂಡರು. ಅವರಲ್ಲಿ ಒಬ್ಬ ಮುನಿಯು ರಾಜನಿಗೆ ಹೇಳಿದನು:

“ರಾಜೇಂದ್ರ! ಬ್ರಾಹ್ಮಣರು ನಿನ್ನಮೇಲೆ ಕುಪಿತರಾಗಿದ್ದಾರೆ. ಅದನ್ನು ಸರಿಮಾಡು! ವನದಲ್ಲಿಯೇ ಬೆಳೆದ, ನಾರಿಗಳ ಕುರಿತು ತಿಳಿಯದೇ ಇದ್ದ, ಸತ್ಯರತನಾದ, ಮುನಿಸುತ ಋಷ್ಯಶೃಂಗನನ್ನು ಕರೆಯಿಸು. ಆ ಮಹಾತಪಸ್ವಿಯು ನಿನ್ನ ರಾಜ್ಯಕ್ಕೆ ಬಂದರೆ ತಕ್ಷಣವೇ ಮಳೆ ಸುರಿಯುತ್ತದೆ ಎನ್ನುವುದರಲ್ಲಿ ಸಂಶಯವೇ ಇಲ್ಲ!”

ಈ ಮಾತನ್ನು ಕೇಳಿದ ರಾಜನು ತನಗೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡನು. ಅವನು ಹೊರ ಹೋಗಿ ಬ್ರಾಹ್ಮಣರು ಪ್ರಸನ್ನರಾದ ನಂತರ ಹಿಂದಿರುಗಿದನು. ಆಗಮಿಸಿದ ರಾಜನನ್ನು ಪ್ರಜೆಗಳು ಸ್ವೀಕರಿಸಿದರು. ಅನಂತರ ಅಂಗಪತಿಯು ಮಂತ್ರಕೋವಿದ ಸಚಿವರನ್ನು ಕರೆಯಿಸಿ ಋಷ್ಯಶೃಂಗನನ್ನು ಕರೆತರಿಸುವುದರ ಕುರಿತು ಮಂತ್ರಾಲೋಚನೆ ಮಾಡಿ ನಿಶ್ಚಯಿಸಿದನು. ಶಾಸ್ತ್ರಜ್ಞರೂ, ಅರ್ಥಜ್ಞರೂ, ನೀತಿಪ್ರವೀಣರೂ ಆದ ಅಮಾತ್ಯರ ಸಹಾಯದಿಂದ ಆ ಅಚ್ಯುತನು ಒಂದು ಉಪಾಯವನ್ನು ತಯಾರಿಸಿದನು. ಪಾರ್ಥಿವ ಮಹೀಪತಿಯು ಅತ್ಯಂತ ಶ್ರೇಷ್ಠ, ಎಲ್ಲದರಲ್ಲಿ ಪಳಗಿದ ವೇಶ್ಯೆಯರನ್ನು ಕರೆಯಿಸಿ ಅವರಿಗೆ

ಹೇಳಿದನು:

> "ಸುಂದರಿಯರೇ! ಏನಾದರೂ ಉಪಾಯದಿಂದ - ಆಸೆತೋರಿಸಿ ಅಥವಾ ಭರವಸೆಗಳನ್ನಿತ್ತು ಋಷಿಪುತ್ರ ಋಷ್ಯಶೃಂಗನನ್ನು ನನ್ನ ರಾಜ್ಯಕ್ಕೆ ಕರೆತರಬೇಕು!"

ಆ ಮಹಿಳೆಯರು ರಾಜನ ಭಯದಿಂದ ಮತ್ತು ಶಾಪದ ಭಯದಿಂದ ಹೆದರಿ ವಿವರ್ಣರಾಗಿ, ಮನಸ್ಸನ್ನು ಕಳೆದುಕೊಂಡು,

> "ಇದು ಸಾಧ್ಯವೇ ಇಲ್ಲ!"

ಎಂದರು. ಆದರೆ ಅಲ್ಲಿದ್ದ ಓರ್ವ ವೃದ್ಧ ಮಹಿಳೆಯು ರಾಜನಿಗೆ ಹೇಳಿದಳು:

> "ಮಹಾರಾಜ! ಆ ತಪೋಧನನನ್ನು ಕರೆತರಲು ನಾನು ಪ್ರಯತ್ನಿಸುತ್ತೇನೆ. ನಾನು ಬಯಸಿದ ಕೆಲವು ಸೌಲಭ್ಯಗಳಿಗೆ ಅಪ್ಪಣೆ ಕೊಡಬೇಕು. ಆಗ ಆ ಋಷಿಸುತ ಋಷ್ಯಶೃಂಗನನ್ನು ಆಸೆತೋರಿಸಿ ಕರೆತರಬಲ್ಲೆ!"

ಆಗ ರಾಜನು ಅವಳ ಎಲ್ಲ ಬೇಡಿಕೆಗಳನ್ನೂ ಪೂರೈಸುವಂತೆ ಮಾಡಿ, ಹೆಚ್ಚಿನ ಪ್ರಮಾಣದಲ್ಲಿ ಹಣ ಮತ್ತು ವಿವಿಧ ರತ್ನಗಳನ್ನು ಕೊಡಿಸಿದನು. ರೂಪ ಮತ್ತು ವಯಸ್ಸಿನಲ್ಲಿ ಸಂಪನ್ನರಾದ ಹಲವಾರು ಸ್ತ್ರೀಯರೊಂದಿಗೆ ಅಂಜಿಕೊಂಡೇ ಅವರು ವನಕ್ಕೆ ಹೋದರು. ರಾಜಕಾರ್ಯವನ್ನು ಯಶಸ್ವಿಗೊಳಿಸಲೋಸುಗ ನೃಪತಿಯ ಆದೇಶದಂತೆ ಮತ್ತು ಸ್ವಂತ

ಬುದ್ಧಿಯನ್ನು ಓಡಿಸಿ ಅವಳು ಒಂದು ದೋಣಿಯಲ್ಲಿ ಆಶ್ರಮವೊಂದನ್ನು ನಿರ್ಮಿಸಿದಳು. ಅದು ಕೃತ್ರಿಮವಾದ ನಾನಾ ಹೂವು-ಹಣ್ಣುಗಳ ಮರಗಳಿಂದ, ನಾನಾತರಹದ ಗೊಂಚಲು ಹೂವುಗಳಿರುವ ಬಳ್ಳಿಗಳಿಂದ, ಎಲ್ಲ ತರಹದ ರುಚಿಗಳಿರುವ ಹಣ್ಣುಗಳಿಂದ ತುಂಬಿತ್ತು. ಆ ದೋಣಿಯ ಮೇಲಿನ ಆಶ್ರಮವು ಅತೀವ ರಮಣೀಯವಾಗಿಯೂ, ಅತೀವ ಮನೋಹರವಾಗಿಯೂ ಇದ್ದು ನೋಡಲು ಅದ್ಭುತವೂ ರಮ್ಯವೂ ಆಗಿತ್ತು. ಆ ನಾವೆಯನ್ನು ಕಾಶ್ಯಪಾಶ್ರಮದ ಸ್ವಲ್ಪವೇ ದೂರದಲ್ಲಿ ನಿಲ್ಲಿಸಿ, ಪುರುಷರು ಆ ಮುನಿಯ ಆಶ್ರಮದಲ್ಲಿ ತಿರುಗಾಡಿದರು. ಆಗ ವೇಶ್ಯೆಯು ಮಾಡಬೇಕಾದ ಕೆಲಸವನ್ನೇ ಮನಸ್ಸಿನಲ್ಲಿಟ್ಟುಕೊಂಡು ಅವಕಾಶ ಹುಡುಕಿ ಬುದ್ಧಿವಂತೆ ಮಗಳನ್ನು ಕಾಶ್ಯಪನ ಹತ್ತಿರ ಕಳುಹಿಸಿದಳು. ಆ ಕುಶಲೆಯು ತಪೋನಿತ್ಯನ ಆಶ್ರಮದಲ್ಲಿ ಅವನ ಸನ್ನಿಧಿಗೆ ಹೋಗಿ ಅಲ್ಲಿ ಋಷಿಸುತನನ್ನು ಕಂಡಳು. ವೈಶ್ಯೆಯು ಹೇಳಿದಳು:

> “ತಾಪಸಿ ಮುನಿಯು ಕುಶಲದಿಂದಿದ್ದಾನೆಯೇ? ಸಾಕಷ್ಟು ಫಲಮೂಲಗಳು ದೊರೆಯುತ್ತವೆಯೇ? ಈ ಆಶ್ರಮದಲ್ಲಿ ನಿನಗೆ ಸಂತೋಷವಾಗುತ್ತಿದೆಯೇ? ನಿನ್ನನ್ನು ಭೇಟಿಯಾಗಲು ಇಂದು ನಾನು ಇಲ್ಲಿಗೆ ಬಂದಿದ್ದೇನೆ. ತಾಪಸರ ತಪಸ್ಸು ವೃದ್ಧಿಯಾಗುತ್ತಿದೆಯೇ? ನಿನ್ನ ತಂದೆಯು ತನ್ನ ತೇಜಸ್ಸನ್ನು ಕಳೆದುಕೊಳ್ಳಲಿಲ್ಲ ತಾನೇ? ಆ ವಿಪ್ರನು ನಿನ್ನಿಂದ ಸಂತೋಷಗೊಂಡಿದ್ದಾನೆ ತಾನೇ? ಋಷ್ಯಶೃಂಗ! ನೀನು



ಅಧ್ಯಾಯನವನ್ನು ಮಾಡಿಮುಗಿಸಿದ್ದೀಯಾ?"

ಋಷ್ಯಶೃಂಗನು ಹೇಳಿದನು:

"ನೀನು ಅತಿ ದೊಡ್ಡ ದೀಪದಂತೆ ಬೆಳಗುತ್ತಿದ್ದೀಯೆ! ನಿನಗೆ ಸಮಸ್ಕರಿಸುವುದು ಸರಿ ಎಂದು ನನಗನ್ನಿಸುತ್ತಿದೆ. ನಾನು ಬಯಸಿದಂತೆ ನಿನಗೆ ಪಾದ್ಯವನ್ನು ನೀಡುತ್ತೇನೆ ಮತ್ತು ಯಥಾಧರ್ಮವಾಗಿ ಫಲಮೂಲಗಳನ್ನು ಅರ್ಪಿಸುತ್ತೇನೆ. ಕೃಷ್ಣಾಜಿನವನ್ನು ಹಾಸಿ ಸುಖವನ್ನು ನೀಡುವ ದರ್ಭೆಯ ಆಸನದಲ್ಲಿ ಸುಖಾಸೀನನಾಗು. ನಿನ್ನ ಆಶ್ರಮವು ಎಲ್ಲಿದೆ ಮತ್ತು ಬ್ರಹ್ಮನ್! ದೇವತೆಗಳಂತೆ ಆಚರಿಸುತ್ತಿರುವ ಈ ವ್ರತದ ಹೆಸರೇನು?"

ವೈಶ್ಯೆಯು ಹೇಳಿದಳು:

"ಸುಂದರ ಕಾಶ್ಯಪಪುತ್ರ! ನನ್ನ ಆಶ್ರಮವು ಈ ಬೆಟ್ಟವನ್ನು ದಾಟಿ ಮೂರು ಯೋಜನ ದೂರದಲ್ಲಿದೆ. ಅಲ್ಲಿ ನಮ್ಮ ಧರ್ಮದ ಪ್ರಕಾರ ಇನ್ನೊಬ್ಬರಿಗೆ ನಮಸ್ಕರಿಸುವುದಿಲ್ಲ ಮತ್ತು ಕಾಲು ತೊಳೆಯಲು ನೀರನ್ನು ಬಳಸುವುದಿಲ್ಲ."

ಋಷ್ಯಶೃಂಗನು ಹೇಳಿದನು:

"ನಾನು ಭಲ್ಲಾತಕ, ಪರೂಷಕ, ಇಂಗುಧ, ಧನ್ವನ, ಪ್ರಿಯಾಲ, ಮೊದಲಾದ ಗಳಿತ ಹಣ್ಣುಗಳನ್ನು ಮತ್ತು ಬೀಜಗಳನ್ನು ನಿನಗೆ

ಋಚಿಯನ್ನು ಸವಿದು ಸಂತೋಷಪಡಲು ಕೊಡುತ್ತೇನೆ.”

ಆ ಎಲ್ಲವನ್ನೂ ತಿರಸ್ಕರಿಸಿ ಅವಳು ಅವನಿಗೆ ಬೆಲೆಬಾಳುವ, ಅತ್ಯಂತ ರುಚಿಕರ ಮತ್ತು ನೋಡಲು ಸುಂದರವಾಗಿದ್ದ ತಿಂಡಿಗಳನ್ನು ಕೊಟ್ಟಳು. ಅವುಗಳು ಋಷ್ಯಶೃಂಗನಿಗೆ ಮಹಾ ಆನಂದವನ್ನು ನೀಡಿದವು. ಸುಗಂಧಯುಕ್ತ ಮಾಲೆಗಳನ್ನೂ, ಬಣ್ಣಬಣ್ಣದ ಹೊಳೆಯುವ ಬಟ್ಟೆಗಳನ್ನೂ, ಮತ್ತು ಉತ್ತಮ ಮಾದಕ ಪಾನೀಯಗಳನ್ನೂ ಕೊಟ್ಟು, ನಗುನಗುತ್ತಾ ಆಟವಾಡುತ್ತಾ ಅವನನ್ನು ರಂಜಿಸಿದಳು. ಅವನ ಹತ್ತಿರ ಒಂದು ಚೆಂಡನ್ನಿಟ್ಟು, ಅರಳುವ ಹೂಗಳ ಬಳ್ಳಿಯಂತೆ ಅವನ ಅಂಗಾಂಗಗಳಿಗೆ ತನ್ನ ಅಂಗಾಂಗಳನ್ನು ಮುಟ್ಟಿಸುತ್ತಾ ಋಷ್ಯಶೃಂಗನನ್ನು ಮತ್ತೆ ಮತ್ತೆ ಆಲಂಗಿಸಿದಳು. ಅವಳು ಸರ್ಜಾ, ಅಶೋಕ ಮತ್ತು ತಿಲಕ ವೃಕ್ಷಗಳ ರೆಂಬೆಗಳನ್ನು ಬಗ್ಗಿಸಿ ಹೂವನ್ನು ಕಿತ್ತಳು. ಮತ್ತೇರಿದವಳಾಗಿ ನಾಚಿಕೆಯೇ ಇಲ್ಲವೋ ಎನ್ನುವಂತೆ ಆ ಮಹರ್ಷಿಯ ಮಗನ ಕಾಮವನ್ನು ಹೆಚ್ಚಿಸಲು ಪ್ರಯತ್ನಿಸಿದಳು. ಆಗ ಋಷ್ಯಶೃಂಗನ ದೇಹದಲ್ಲಿ ಬದಲಾವಣೆಗಳನ್ನು ಕಂಡು ಅವನ ದೇಹವನ್ನು ಪುನಃ ಪುನಃ ಅಪ್ಪಿ ಹಿಂಡಿದಳು. ಆಗ ನಿಧಾನವಾಗಿ ಅಗ್ನಿಹೋತ್ರದ ನೆಪವನ್ನು ಹೇಳಿ, ಅವನನ್ನೇ ನೋಡುತ್ತಾ, ಹಿಂದೆ ಹೋದಳು.

ಅವಳ ಹೋದನಂತರ ಮದನನಿಂದ ಮತ್ತನಾದ ಋಷ್ಯಶೃಂಗನು ತನ್ನ ಮನಸ್ಸನ್ನು ಕಳೆದುಕೊಂಡವನಂತಾದನು. ಅವಳು ಹೋದ ಕಡೆಯಲ್ಲಿಯೇ ಶೂನ್ಯ ದೃಷ್ಟಿಯಿಟ್ಟು ನೋಡುತ್ತಾ, ನಿಟ್ಟಿಸುರು ಬಿಡುತ್ತಾ,

ಅವನ ಮುಖವು ಆರ್ತರೂಪವನ್ನು ತಾಳಿತು. ಆಗ ಸ್ವಲ್ಪವೇ ಕ್ಷಣದಲ್ಲಿ ಸಿಂಹದಂತಿದ್ದ ಪಿಂಗಲಾಕ್ಷ, ಉಗುರುಗಳ ವರೆಗೆ ತಲೆಕೂದಲನ್ನು ಬಿಟ್ಟಿದ್ದ, ಸ್ವಾಧ್ಯಾಯದಲ್ಲಿ ನಿರತನಾದ, ಸಮಾಧಿಯುಕ್ತನಾದ, ಕಾಶ್ಯಪ ವಿಭಾಂಡಕನು ಹತ್ತಿರ ಬಂದನು. ಅವನು ವಿಪರೀತಚಿತ್ತನಾಗಿ ಒಬ್ಬನೇ ಯೋಚಿಸುತ್ತಾ ಕುಳಿತಿರುವ ಮಗನನ್ನು ನೋಡಿದನು. ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತಾ ಮೇಲೆ ನೋಡುತ್ತಾ ದೀನನಾಗಿದ್ದ ಮಗನಿಗೆ ವಿಭಾಂಡಕನು ಹೇಳಿದನು:

> "ಮಗೂ! ಇನ್ನೂ ಸಮಿಧೆಗಳನ್ನು ತರಲಿಲ್ಲ ಏಕೆ? ಇನ್ನೂ ಇಂದಿನ ಅಗ್ನಿಹೋತ್ರವನ್ನು ನಡೆಸಲಿಲ್ಲವೇ? ಹೋಮದ ಹುಟ್ಟುಗಳನ್ನು ತೊಳೆದಿಟ್ಟಿದ್ದೀಯಾ? ಹೋಮಕ್ಕೆ ಕರುವಿನೊಂದಿಗೆ ಹಸುವನ್ನು ತಂದಿದ್ದೀಯಾ? ಮಗಾ! ಮೊದಲಿನಂತೆ ನೀನಿಲ್ಲ! ಚೇತನವನ್ನು ಕಳೆದುಕೊಂಡು ಚಿಂತಾಪರನಾಗಿ ಮನಸ್ಸನ್ನು ಕಳೆದುಕೊಂಡಿದ್ದೀಯೆ. ಇಂದು ನೀನು ತುಂಬಾ ದುಃಖಕ್ಕೊಳಗಾದ ಹಾಗಿದೆ. ಆದರೆ ಏಕೆ? ಇಂದು ಇಲ್ಲಿಯೇ ಇದ್ದ ನಿನ್ನನ್ನು ಕೇಳುತ್ತಿದ್ದೇನೆ."

ಋಷ್ಯಶೃಂಗನು ಹೇಳಿದನು:

> "ಇಲ್ಲಿಗೆ ಒಬ್ಬ ಜಡೆಹಾಕಿದ ಬ್ರಹ್ಮಚಾರಿಯು ಬಂದಿದ್ದ. ಅವನು ಕುಳ್ಳಗೂ ಇರಲಿಲ್ಲ ಮತು ಅತಿಯಾಗಿ ಎತ್ತರವೂ ಇರಲಿಲ್ಲ. ತುಂಬಾ ಉತ್ಸಾಹಿಯಾಗಿದ್ದ. ಬಂಗಾರದ



ಬಣ್ಣವನ್ನು ಹೊಂದಿದ್ದ ಅವನ ಕಣ್ಣುಗಳು ಕಮಲದ ಎಸಳುಗಳಂತಿದ್ದವು. ಸುರರ ಮಗನಂತೆ ಶೋಭಿಸುತ್ತಿದ್ದನು. ಅವನ ಸಮೃದ್ಧ ದೇಹವು ಸೂರ್ಯನಂತೆ ಬೆಳಗುತ್ತಿತ್ತು. ಅವನ ಕಣ್ಣುಗಳು ಚಕೋರಗಳಂತೆ ಬಿಳಿ ಮತ್ತು ಕಪ್ಪಾಗಿದ್ದವು. ಅವನ ಜಡೆಯು ನೀಲವಾಗಿ, ನೋಡಲು ಸುಂದರವಾಗಿ, ಸುಗಂಧಿತವಾಗಿತ್ತು. ಅದು ನೀಳವಾಗಿದ್ದು ಬಂಗಾರದ ದಾರದಿಂದ ಕಟ್ಟಲ್ಪಟ್ಟಿತ್ತು. ಅವನ ಕಂಠದಲ್ಲಿ ಅಂತರಿಕ್ಷದಲ್ಲಿ ಬೆಳಗುವ ಮಿಂಚಿನಂತೆ ಹೊಳೆಯುವ ಲೋಟಗಳಿಂತಿರುವವುಗಳನ್ನು ಧರಿಸಿದ್ದನು. ಅವನ ಕಂಠದ ಕೆಳಗೆ ರೋಮಗಳೇ ಇಲ್ಲದ ಅತಿ ಸುಂದರ ಎರಡು ಗೋಲಗಳಿದ್ದವು. ಅವನ ಹೊಕ್ಕಳು ಪ್ರದೇಶದಲ್ಲಿ ಚುಚ್ಚಲಾಗಿತ್ತು. ಅವನ ಸೊಂಟವೂ ದೊಡ್ಡದಾಗಿತ್ತು. ಅವನ ಪೋಷಾಕಿನ ಕೆಳಗೆ ನನಗಿದ್ದಹಾಗೆ ಪಟ್ಟಿಯಿತ್ತು – ಆದರೆ ಅದು ಬಂಗಾರದ್ದಾಗಿತ್ತು. ಇನ್ನೂ ಅನೇಕ ಅದ್ಭುತಗಳು ಅವನಲ್ಲಿ ಕಂಡುಬಂದವು. ಅವನ ಕಾಲುಗಳಲ್ಲಿ ಧ್ವನಿಮಾಡುವ ಗೆಜ್ಜೆಗಳಿದ್ದವು. ಕೈಗಳಲ್ಲಿಯೂ ಕೂಡ ಅಂತಹದೇ, ನನ್ನ ರುದ್ರಾಕ್ಷದಂತಿರುವ ದಾರವನ್ನು ಕಟ್ಟಿದ್ದನು. ಆದರೆ ಅದು ಝುಣ ಝುಣ ಶಬ್ದಮಾಡುತ್ತಿತ್ತು. ಅವನು ಹಂದಾಡಿದಾಗಲೆಲ್ಲ ಅವುಗಳು ಸರೋವರದಲ್ಲಿ ಮತ್ತೇರಿದ ಹಂಸಗಳಂತೆ ಶಬ್ಧಮಾಡುತ್ತಿದ್ದವು. ಅವನ ಉಡುಪು ನೋಡಲು

ಅದ್ಭುತವಾಗಿತ್ತು. ಅವು ನನ್ನ ಉಡುಪಿನ ಹಾಗಿರದೇ, ತುಂಬಾ ಸುಂದರವಾಗಿತ್ತು. ಅವನ ಮುಖವೂ ನೋಡಲು ಅದ್ಭುತವಾಗಿತ್ತು. ಅವನ ಮಾತು ಹೃದಯಕ್ಕೆ ಸಂತಸವನ್ನು ನೀಡುತ್ತಿತ್ತು. ಅವನ ಮಾತು ಕೋಗಿಲೆಯ ಹಾಡಿನಂತಿತ್ತು. ಅವನನ್ನು ಕೇಳಿದಾಗಲೆಲ್ಲ ನನ್ನ ಅಂತರಾತ್ಮವು ವ್ಯಥಿತಗೊಳ್ಳುತ್ತಿತ್ತು. ಮಾಧವ ಮಾಸದ ಮಧ್ಯೆ ವನದಲ್ಲಿ ಗಾಳಿಯು ಪರಿಮಳವನ್ನು ಹೊತ್ತು ತರುವಂತೆ ಅವನೂ ಕೂಡ ಗಾಳಿಯು ಅವನ ಮೇಲೆ ಬಿದ್ದಾಗಲೆಲ್ಲ ಉತ್ತಮ ಪುಣ್ಯ ಸುಗಂಧವನ್ನು ಸೂಸುತ್ತಿದ್ದನು. ನೆತ್ತಿಯಮೇಲೆ ಸಮನಾಗಿ ಎರಡು ಭಾಗಗಳನ್ನಾಗಿಸಿ ಚೆನ್ನಾಗಿ ಜಡೆಕಟ್ಟಿದ್ದನು. ಸರಿಯಾದ ದುಂಡಾಗಿ ಕೂದಲುಗಳು ಗುಂಗುರಾಗಿ ಅವನ ಕಿವಿಗಳನ್ನು ಸುಂದರವಾಗಿ ಮುಚ್ಚಿದ್ದವು. ಅವನ ಬಲಗೈನಲ್ಲಿ ಹಣ್ಣಿನಂತೆ ಗೋಲಾಕಾರದ ಬಣ್ಣಬಣ್ಣದ ವಸ್ತುವೊಂದನ್ನು ಹಿಡಿದಿದ್ದನು. ಅದು ಭೂಮಿಯನ್ನು ಮುಟ್ಟಿದ ಕೂಡಲೆ ಪುನಃ ಪುನಃ ಮೇಲೆ ಅದ್ಭುತವಾಗಿ ಪುಟಿಯುತ್ತಿತ್ತು. ಅದನ್ನು ಹೊಡೆದು ಅವನು ತನ್ನ ದೇಹವನ್ನು ಗಾಳಿಗೆ ಸಿಕ್ಕ ಮರದಂತೆ ತಿರುಗಿಸುತ್ತಿದ್ದನು. ಅಪ್ಪಾ ! ಅಮರರ ಮಗನಂತಿರುವ ಅವನನ್ನು ನೋಡಿದಾಗಲೆಲ್ಲ ನನ್ನಲ್ಲಿ ಅತ್ಯಂತ ಪ್ರೀತಿ ಮತ್ತು ಸಂತೋಷವು ಹುಟ್ಟುತ್ತಿತ್ತು. ಅವನು ನನ್ನ ಶರೀರವನ್ನು ಪುನಃ ಪುನಃ ಅಪ್ಪಿ ಹಿಡಿದು ನನ್ನ ಕೂದಲನ್ನು ಎಳೆದು ನನ್ನ

ಮುಖವನ್ನು ಕೆಳಮಾಡಿ ಬಾಯಿಯ ಮೇಲೆ ಬಾಯಿಯನ್ನಿಟ್ಟು ಶಬ್ಧಮಾಡಿದನು. ಅದರಿಂದ ನನ್ನಲ್ಲಿ ಅತ್ಯಂತ ಸಂತೋಷವು ಹುಟ್ಟಿತು. ಅವನು ಪಾದ್ಯಕ್ಕೆ ಹೆಚ್ಚು ಗಮನಕೊಡಲಿಲ್ಲ. ನಾನು ಕೊಟ್ಟ ಹಣ್ಣುಗಳನ್ನೂ ಸ್ವೀಕರಿಸಲಿಲ್ಲ. ಇದೇ ನನ್ನ ವ್ರತ ಎಂದು ನನಗೆ ಹೇಳಿದನು ಮತ್ತು ನನಗೆ ಬೇರೆ ಹೊಸ ಹಣ್ಣುಗಳನ್ನು ಕೊಟ್ಟ. ಅವನ ಎಲ್ಲ ಹಣ್ಣುಗಳನ್ನೂ ನಾನು ತಿಂದೆ. ಅವುಗಳ ರುಚಿಯು ಈ ಹಣ್ಣುಗಳಂತೆ ಇರಲೇ ಇಲ್ಲ. ಈ ಹಣ್ಣುಗಳಿಗಿರುವಂತೆ ಅವುಗಳಲ್ಲಿ ತೊಗಟೆಯೂ ಇರಲಿಲ್ಲ ಮತ್ತು ನಮ್ಮ ಹಣ್ಣುಗಳಲ್ಲಿರುವಂತೆ ಅವುಗಳಲ್ಲಿ ಕಲ್ಲುಗಳಿರಲಿಲ್ಲ. ಆ ಉದಾರರೂಪಿಯು ನನಗೆ ಈ ಅತಿ ರುಚಿಯಾಗುಳ್ಳ ಪಾನೀಯವನ್ನು ನೀಡಿದನು.
ಅದನು ಕುಡಿಯುತ್ತಲೇ ಅತೀವ ಖುಷಿಯು ನನ್ನನ್ನು ಸೆರೆಹಿಡಿಯಿತು ಮತ್ತು ಭೂಮಿಯೇ ಓಲಾಡುವಂತೆ ಆಯಿತು. ಇವು ರಂಗುರಂಗಿನ ಸುಗಂಧಯುಕ್ತ, ಅವನೇ ಕಟ್ಟಿದ ಮಾಲೆಗಳು. ಈ ಮಾಲೆಗಳನ್ನು ಇಲ್ಲಿ ಚೆಲ್ಲಿ ಅವನು ಬೆಳಗುತ್ತಾ ತನ್ನ ಆಶ್ರಮಕ್ಕೆ ತಪಸ್ಸಿಗೆಂದು ಹೊರಟುಹೋದನು. ಅವನು ಬಿಟ್ಟುಹೋದದ್ದು ನನ್ನನ್ನು ಮನಸ್ಸು ಕಳೆದುಕೊಂಡವನಂತೆ ಮಾಡಿದೆ. ನನ್ನ ದೇಹವು ಜ್ವರಬಂದವರಂತೆ ಬಿಸಿಯಾಗಿದೆ. ನೇರವಾಗಿ ಅವನಿರುವಲ್ಲಿಗೆ ಹೋಗ ಬಯಸುತ್ತೇನೆ ಮತ್ತು ಪ್ರತಿದಿನ ಅವನು ಇಲ್ಲಿಗೆ ಬರುವಂತೆ ಮಾಡಬಯಸುತ್ತೇನೆ.

ಅಪ್ಪಾ! ಅವನಿರುವಲ್ಲಿ ತಿರುಗಿ ಹೋಗುತ್ತಿದ್ದೇನೆ. ಅವನ ವ್ರತಚರ್ಯದ ಹೆಸರೇನು? ಅವನೊಂದಿಗೆ ಅವನ ಹಾಗೆ ಇರಲು ಮತ್ತು ಆ ಉಗ್ರತಪಸ್ಸನ್ನು ಆಚರಿಸಲು ಬಯಸುತ್ತೇನೆ.”

ವಿಭಾಂಡಕನು ಹೇಳಿದನು:

“ಮಗನೇ! ಅವರು ನೋಡಲು ಅದ್ಭುತ ರೂಪಧರಿಸಿ ತಿರುಗಾಡುವ ರಾಕ್ಷಸರು. ಅತುಲ್ಯ ರೂಪವಂತರಾದ ಆದರೆ ಘೋರರಾದ ಅವರು ಸದಾ ತಪಸ್ಸಿಗೆ ವಿಘ್ನವನ್ನು ತಂದು ನಿಲ್ಲಿಸುತ್ತಾರೆ. ಅವರ ಸುಂದರ ದೇಹಗಳನ್ನು ತೋರಿಸಿ ವಿವಿಧ ತರಹಗಳಲ್ಲಿ ಅವರು ಪ್ರಲೋಭಗೊಳಿಸಲು ನೋಡುತ್ತಿರುತ್ತಾರೆ. ತಮ್ಮ ಉಗ್ರ ಕರ್ಮಗಳಿಂದ ವನಗಳಲ್ಲಿದ್ದ ಮುನಿಗಳನ್ನು ಸುಖ ಮತ್ತು ಲೋಕಗಳಿಂದ ಬೀಳಿಸುತ್ತಾರೆ. ಅತ್ಮವನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ಮುನಿಯು, ಸತ್ಯವಂತರ ಲೋಕಗಳನ್ನು ಪ್ರಾರ್ಥಿಸುತ್ತಿದ್ದರೆ, ಅವರನ್ನು ದೂರವಿಡಬೇಕು. ಪಾಪವನ್ನು ತಿಳಿಯದ ಮಗನೇ! ತಾಪಸರಿಗೆ ವಿಘ್ನವನ್ನು ತಂದು ಆ ಪಾಪಚಾರಿಗಳು ಸಂತೋಷಪಡುತ್ತಾರೆ. ಆ ಮದ್ಯ ಪಾನೀಯಗಳು ಪಾಪಗಳು, ಅಸಚ್ಚ ಜನರು ತೆಗೆದುಕೊಳ್ಳುವವು. ಈ ಬಣ್ಣ ಬಣ್ಣದ, ಕಾಂತಿಯುಕ್ತ ಸುಗಂಧಿತ ಮಾಲೆಗಳು ಮುನಿಗಳಿಗಲ್ಲ. ಅವು

ರಾಕ್ಷಸರಿಗೆ.”

ಅವರು ರಾಕ್ಷಸರೆಂದು ಮಗನನ್ನು ತಡೆದು ವಿಭಾಂಡಕನು ಅವಳನ್ನು ಹುಡುಕಲು ಹೋದನು. ಮೂರು ದಿನಗಳು ಹುಡುಕಿ ಅವಳನ್ನು ಕಾಣದೇ, ತನ್ನ ಆಶ್ರಮಕ್ಕೆ ಹಿಂದಿರುಗಿದನು. ಆದರೆ ಪುನಃ ಕಾಶ್ಯಪನು ಹಣ್ಣುಗಳನ್ನು ಹುಡುಕಲು ಹೋದಾಗ, ಆ ವೈಶ್ಯೆಯು ಮುನಿ ಋಷ್ಯಶೃಂಗನನ್ನು ಪುನಃ ಲೋಭಗೊಳಿಸಲು ಬಂದಳು. ಅವಳನ್ನು ನೋಡಿದೊಡನೆಯೇ ಪ್ರಹೃಷ್ಟನಾದ ಋಷ್ಯಶೃಂಗನು ಸಂಭ್ರಾಂತಗೊಂಡವನಂತೆ ಅವಳನ್ನು ಭೇಟಿಮಾಡಿದನು. ಮತ್ತು ಹೇಳಿದನು:

“ಬೇಗನೆ ನನ್ನ ತಂದೆಯು ಬರುವುದರೊಳಗೆ ನಿನ್ನ ಆಶ್ರಮಕ್ಕೆ ಹೋಗೋಣ!”

ಆಗ ಅವಳು ಕಾಶ್ಯಪನ ಒಬ್ಬನೇ ಮಗನನ್ನು ವಿವಿಧರೀತಿಗಳಲ್ಲಿ ಪ್ರಲೋಭಗೊಳಿಸುತ್ತಾ ದೋಣಿಯ ಮೇಲೆ ಕೂರಿಸಿ, ಅಂಗರಾಜನ ಬಳಿಗೆ ಕರೆದೊಯ್ದಳು. ಆಶ್ರಮದಂತೆ ಕಾಣುತ್ತಿದ್ದ ಅತೀವ ಶುಭ್ರವಾಗಿದ್ದ ಆ ನಾವೆಯನ್ನು ಅದರಂತೆಯೇ ತೋರುತ್ತಿದ್ದ ರಾಜಾಶ್ರಮ ಎಂಬ ಹೆಸರಿನ ಬಣ್ಣ ಬಣ್ಣದ ವನದ ಹತ್ತಿರ ನಿಲ್ಲಿಸಿದರು. ರಾಜನು ವಿಭಾಂಡಕನ ಒಬ್ಬನೇ ಮಗನನ್ನು ಅಂತಃಪುರದಲ್ಲಿ ಇರಿಸಿದನು. ತಕ್ಷಣವೇ ದೇವತೆಗಳು ಮಳೆಸುರಿಸಿದುದನ್ನು ನೋಡಿದನು. ಭೂಮಿಯು ನೀರಿನಿಂದ ತುಂಬಿಕೊಂಡಿತು. ತನ್ನ ಆಸೆಯು ಪರಿಪೂರ್ಣವಾಗಲು

ಲೋಮಪಾದನು ತನ್ನ ಮಗಳು ಶಾಂತಿಯನ್ನು ಋಷ್ಯಶೃಂಗನಿಗೆ ಕೊಟ್ಟನು. ಕ್ರೋಧಕ್ಕೆ ಪ್ರತೀಕಾರವಾಗಿ ಅವನು ಮಾರ್ಗವನ್ನು ರಚಿಸಿ ಅಲ್ಲಲ್ಲಿ ಗೋವುಗಳನ್ನೂ ಗೋಪಾಲಕರನ್ನೂ ಇರಿಸಿದನು. ವಿಭಾಂಡಕನು ಬರುತ್ತಾನೆ ಎಂದು ರಾಜನು ವೀರ ಗೋಪಾಲಕರಿಗೆ ಹೇಳಿದನು:

> "ಮಹರ್ಷಿ ವಿಭಾಂಡಕನು ತನ್ನ ಮಗನನ್ನು ಹುಡುಕಿಕೊಂಡು ಬಂದು ನಿಮ್ಮನ್ನು ಪ್ರಶ್ನಿಸಿದರೆ ಅವನಿಗೆ ಪ್ರಾಂಜಲಿ ಬದ್ಧರಾಗಿ ಹೇಳಬೇಕು:
>
> "ಈ ಪಶುಗಳು ನಿನ್ನ ಮಗನಿಗೆ ಸೇರಿದ್ದು, ಈ ಬೆಳೆಗಳೂ ಕೂಡ. ಮಹರ್ಷೇ! ನಿನಗೆ ಪ್ರಿಯವಾಗುವ ಏನು ಕೆಲಸವನ್ನು ಮಾಡಬೇಕು? ನಾವೆಲ್ಲರೂ ನಿನ್ನ ದಾಸರು ಮತ್ತು ಮಾತಿಗೆ ಬದ್ಧರು.""

ಫಲಮೂಲಗಳನ್ನು ಹಿಡಿದು ತನ್ನ ಆಶ್ರಮಕ್ಕೆ ಹಿಂದಿರುಗಿದ ಮುನಿಯು ಚಂಡಕೋಪಿಷ್ಟನಾದನು. ಅಲ್ಲಿ ತನ್ನ ಪುತ್ರನನ್ನು ಹುಡುಕಿದರೂ ಇಲ್ಲದಿರುವುದನ್ನು ನೋಡಿದ ಅವನು ಇನ್ನೂ ಹೆಚ್ಚು ಕುಪಿತನಾದನು. ಅವನು ಕೋಪಕ್ಕೆ ಸಿಲುಕಿ, ಇದು ರಾಜನ ಕೆಲಸ ಎಂದು ಶಂಕಿಸಿ ಅಂಗರಾಜ ಮತ್ತು ಅವನ ರಾಜ್ಯವನ್ನು ಸುಟ್ಟುಬಿಡಲು ಚಂಪಾನಗರಿಗೆ ಹೋದನು. ಆಯಾಸಗೊಂಡು ಹಸಿವೆಯಿಂದ ಬಳಲಿದ ಕಾಶ್ಯಪನು ಮಾರ್ಗದಲ್ಲಿ ಸಮೃದ್ಧವಾಗಿದ್ದ ಗೋವುಗಳ ಹಿಂಡನ್ನು ನೋಡಿದನು. ಗೋಪರು ಅವನಿಗೆ ಅವನೇ ರಾಜನೋ ಎಂಬಂತೆ ವಿಧಿವತ್ತಾಗಿ

ಪೂಜಿಸಿದರು ಮತ್ತು ರಾತ್ರಿ ಅಲ್ಲಿಯೇ ತಂಗಿದನು. ಅವರಿಂದ ಅತೀವ ಸತ್ಕಾರವನ್ನು ಪಡೆದು

“ಸೌಮ್ಯರೇ! ಇದು ಯಾರದ್ದು?”

ಎಂದು ಕೇಳಿದನು. ಆಗ ಎಲ್ಲರೂ ಅವನ ಬಳಿಬಂದು

“ಈ ಧನವೆಲ್ಲವೂ ನಿನ್ನ ಮಗನದ್ದು!”

ಎಂದು ಹೇಳಿದರು. ಸ್ಥಳ ಸ್ಥಳಗಳಲ್ಲಿ ಅವನಿಗೆ ಪೂಜೆ ದೊರೆಯಿತು ಮತ್ತು ಅವರಿಂದ ಅದೇ ಮಧುರ ಪ್ರಲಾಪಗಳನ್ನು ಕೇಳಿ ಸಿಟ್ಟನ್ನು ಕಳೆದು ಪ್ರಶಾಂತನಾಗಿ ಸಂತೋಷಗೊಂಡೇ ಅಂಗಪತಿಯ ಪುರವನ್ನು ಪ್ರವೇಶಿಸಿದನು. ಆ ನರರ್ಷಭನು ಅವನನ್ನು ಸಂಪೂಜಿಸಿದನು. ಅಲ್ಲಿ ವಿಭಾಂಡಕನು ದಿವಿಯಲ್ಲಿ ಇಂದ್ರದೇವನಂತಿರುವ ಮಗನನ್ನು ಮತ್ತು ಮಿಂಚಿನಂತೆ ಓಡಾಡುತ್ತಿರುವ ಸೊಸೆ ಶಾಂತಿಯನ್ನು ಕಂಡನು. ಗ್ರಾಮಗಳನ್ನೂ, ಗೋ ಹಿಂಡುಗಳನ್ನೂ, ಮಗ ಮತ್ತು ಶಾಂತಿಯನ್ನೂ ನೋಡಿದ ಅವನ ತೀವ್ರ ಕೋಪವು ಶಾಂತವಾಯಿತು. ಆಗ ವಿಭಾಂಡಕನು ಭೂಮಿಪತಿಗೆ ಪರಮ ಕರುಣೆಯನ್ನು ತೋರಿಸಿದನು. ಅಲ್ಲಿಯೇ ಮಗನನ್ನು ಇರಿಸಿ ಸೂರ್ಯಾಗ್ನಿಸಮಪ್ರಭಾವಿ ಮಹರ್ಷಿಯು ಹೇಳಿದನು:

“ಮಗನು ಜನಿಸಿದ ಕೂಡಲೇ, ರಾಜನಿಗೆ
ಪ್ರಿಯವಾದುದೆಲ್ಲವನ್ನೂ ಮಾಡಿ ವನಕ್ಕೆ ಮರಳಬೇಕು.”

ಅವನ ಮಾತುಗಳನ್ನು ನೆರವೇರಿಸಿ ಋಷ್ಯಶೃಂಗನು ತನ್ನ ತಂದೆಯಿರುವಲ್ಲಿಗೆ ಹೋದನು. ಶಾಂತಿಯಾದರೋ ಅವನನ್ನು ಅನುಸರಿಸಿ ಹೋದಳು. ಆಕಾಶದಲ್ಲಿ ರೋಹಿಣಿಯು ಚಂದ್ರನನ್ನು ಹಿಂಬಾಲಿಸುವಂತೆ, ಸುಭಗೆ ಅರುಂಧತಿಯು ವಸಿಷ್ಠನನ್ನು, ಲೋಪಾಮುದ್ರೆಯು ಅಗಸ್ತ್ಯನನ್ನು, ದಮಯಂತಿಯು ನಲನನ್ನು, ಶಚಿಯು ವಜ್ರಧರನನ್ನು, ನಾಡಾಯನಿಯು ಚಂದ್ರಸೇನನನ್ನು, ಮತ್ತು ವಶ್ಯೆಯು ನಿತ್ಯವೂ ಮುದ್ಗಲನನ್ನು ಸೇವೆಗೈಯುವಂತೆ ವನಸ್ಥನಾದ ಋಷ್ಯಶೃಂಗನಿಗೆ ಪ್ರೀತಿಯಿಂದ ಅವಳು ಪರಿಚರಿಯನ್ನು ಮಾಡಿದಳು.

# ಪರಶುರಾಮ

[ಪರಶುರಾಮನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೧೫-೧೧೭) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ರಾಜರ್ಷಿ ಅಕೃತವ್ರಣನು ಯುಧಿಷ್ಠಿರನಿಗೆ ಹೇಳಿದನು.]

ಕನ್ಯಕುಬ್ಜದಲ್ಲಿ ಗಾಧಿ ಎಂದು ಲೋಕದಲ್ಲಿ ವಿಶ್ರುತನಾದ ಮಹಾಬಲಿ ಮಹಾ ರಾಜನಿದ್ದನು. ಅವನು ವನವಾಸಕ್ಕೆ ಹೋದನು. ವನದಲ್ಲಿ ವಾಸಿಸುತ್ತಿರುವಾಗ ಅವನಿಗೆ ಅಪ್ಸರೆಯಂತಿರುವ ಕನ್ಯೆಯು ಜನಿಸಿದಳು.

ಭಾರ್ಗವ ಋಚೀಕನು ಅವಳನ್ನು ವರಿಸಿದನು. ಆಗ ರಾಜನು ಆ ಸಂಶಿತವ್ರತ ಬ್ರಾಹ್ಮಣನಿಗೆ ಹೇಳಿದನು:

> "ಹಿಂದಿನಿಂದಲೂ ನಡೆದುಕೊಂಡು ಬಂದಂತ ಒಂದು ಒಳ್ಳೆಯ ಸಂಪ್ರದಾಯವು ನಮ್ಮ ಕುಲದಲ್ಲಿದೆ. ದ್ವಿಜೋತ್ತಮ! ಒಂದೇ ಕಿವಿಯು ಕಪ್ಪಾಗಿರುವ ವೇಗವಾಗಿ ಹೋಗಬಲ್ಲ ಒಂದು ಸಾವಿರ ಬಿಳಿಯ ಕುದುರೆಗಳು ಕನ್ಯಾಶುಲ್ಕ ಎಂದು ತಿಳಿ. ಆದರೂ ಈ ಮಾತನ್ನು ನಿನ್ನಲ್ಲಿ ಹೇಳಬಾರದು. ಏಕೆಂದರೆ ನನ್ನ ಮಗಳನ್ನು ನಿನ್ನಂತಹ ಮಹಾತ್ಮನಿಗೆ ಕೊಡಬೇಕು."

ಋಚೀಕನು ಹೇಳಿದನು:

> "ಒಂದೇ ಕಿವಿಯು ಕಪ್ಪಾಗಿರುವ ವೇಗದಲ್ಲಿ ಓಡುವ ಒಂದು ಸಾವಿರ ಬಿಳೀ ಕುದುರೆಗಳನ್ನು ಕೊಡುತ್ತೇನೆ, ಮತ್ತು ನಿನ್ನ ಮಗಳು ನನ್ನ ಪತ್ನಿಯಾಗುವಳು."

ಹೀಗೆ ಪ್ರತಿಜ್ಞೆಮಾಡಿದ ಅವನು ವರುಣನಿಗೆ ಹೇಳಿದನು:

> "ಒಂದೇ ಕಿವಿಯು ಕಪ್ಪಾಗಿರುವ ವೇಗದಲ್ಲಿ ಓಡುವ ಒಂದು ಸಾವಿರ ಬಿಳೀ ಕುದುರೆಗಳನ್ನು ಶುಲ್ಕವಾಗಿ ನನಗೆ ಕೊಡಬೇಕು."

ಆಗ ವರುಣನು ಅವನಿಗೆ ಒಂದು ಸಹಸ್ರ ಕುದುರೆಗಳನ್ನು ಕೊಟ್ಟನು. ಆ

ಕುದುರೆಗಳು ಹೊರಬಂದ ಸ್ಥಳವು ಅಶ್ವತೀರ್ಥವೆಂದು ವಿಖ್ಯಾತವಾಗಿದೆ. ಅನಂತರ ಗಾಧಿಯು ತನ್ನ ಮಗಳು ಸತ್ಯವತಿಯನ್ನು ಗಂಗಾತೀರದ ಕನ್ಯಕುಬ್ಜದಲ್ಲಿ ಅವನಿಗೆ ಕೊಟ್ಟನು. ಆಗ ದೇವತೆಗಳೂ ವರನ ದಿಬ್ಬಣದಲ್ಲಿ ಇದ್ದರು. ಸಾವಿರ ಕುದುರೆಗಳನ್ನು ಪಡೆದು, ದೇವತೆಗಳನ್ನೂ ಕಂಡು, ಮತ್ತು ಧರ್ಮದಿಂದ ಪತ್ನಿಯನ್ನು ಪಡೆದ ದ್ವಿಜಸತ್ತಮ ಋಚೀಕನು ಬಯಸಿದ ಹಾಗೆ ಬೇಕಾದಷ್ಟು ಆ ಸುಮಧ್ಯಮೆಯೊಡನೆ ರಮಿಸಿದನು.

ವಿವಾಹದ ನಂತರ ಪತ್ನಿಯೊಂದಿಗೆ ಮಗನನ್ನು ನೋಡಲು ಭೃಗುಶ್ರೇಷ್ಠನು ಬಂದನು ಮತ್ತ ಅವರನ್ನು ನೋಡಿ ಸಂತೋಷಗೊಂಡನು. ಪತಿಪತ್ನಿಯರು ಆ ಸುರಗಣಾರ್ಚಿತ ಗುರುವನ್ನು ಕುಳ್ಳಿರಿಸಿ ಅರ್ಚಿಸಿ ಕೈಜೋಡಿಸಿ ಅವನ ಹತ್ತಿರ ನಿಂತುಕೊಂಡರು. ಆಗ ಸೊಸೆಯನ್ನು ನೋಡಿ ಸಂತೋಷಗೊಂಡ ಭೃಗುವು ಹೇಳಿದನು:

> "ಸುಭಗೇ! ವರವನ್ನು ಕೇಳು. ನಿನಗೆ ಬೇಕಾದುದನ್ನು ಕೊಡುತ್ತೇನೆ."

ಅವಳು ಆ ಗುರುವಲ್ಲಿ ತನಗೆ ಮತ್ತು ತನ್ನ ತಾಯಿಗೆ ಪುತ್ರರನ್ನು ಕೇಳಿಕೊಂಡಾಗ ಅವನು ಆ ಪ್ರಸಾದವನ್ನು ನೀಡಿ ಹೇಳಿದನು:

> "ಋತುವಾದ ನಂತರ ನೀನು ಮತ್ತು ನಿನ್ನ ತಾಯಿಯು ಪುಂಸವನ ಸ್ನಾನಮಾಡಿ ಅವಳು ಅಶ್ವತ್ಥ ವೃಕ್ಷವನ್ನೂ ನೀನು ಔದುಂಬರ ವೃಕ್ಷವನ್ನೂ ಆಲಂಗಿಸಬೇಕು."

ಆದರೆ ಅವರು ಆಲಿಂಗನ ಮಾಡುವಾಗ ಅದಲು ಬದಲು ಮಾಡಿಕೊಂಡರು. ಈ ವಿಪರ್ಯಾಸವನ್ನು ತಿಳಿದ ಭೃಗುವು ಮತ್ತೊಂದು ದಿನ ಬಂದನು. ಆಗ ಮಹಾತೇಜಸ್ವಿ ಭೃಗುವು ಸೊಸೆ ಸತ್ಯವತಿಗೆ ಹೇಳಿದನು:

> "ಬ್ರಾಹ್ಮಣನಾಗಿದ್ದರೂ ಕ್ಷತ್ರಿಯನಾಗಿ ವರ್ತಿಸುವ ಮಗನು ನಿನಗೆ ಹುಟ್ಟುತ್ತಾನೆ. ಕ್ಷತ್ರಿಯನಾದರೂ ಮಹಾ ಬ್ರಾಹ್ಮಣನಾಗಿ ನಡೆದುಕೊಳ್ಳುವ, ಮಹಾವೀರನಾಗಿದ್ದರೂ ಸಾಧುಗಳ ಮಾರ್ಗದಲ್ಲಿ ನಡೆಯುವ ಮಗನು ನಿನ್ನ ತಾಯಿಗೆ ಹುಟ್ಟುತ್ತಾನೆ."

ಆಗ ಅವಳು ತನ್ನ ಮಾವನನ್ನು ಪುನಃ ಪುನಃ ಕೇಳಿಕೊಂಡಳು:

> "ಹೀಗೆ ನನ್ನ ಮಗನು ಆಗುವುದು ಬೇಡ. ನನ್ನ ಮೊಮ್ಮಗನು ಹಾಗೆ ಆಗಲಿ."

"ಹಾಗೆಯೇ ಆಗಲಿ!" ಎಂದು ಅವನು ಅವಳಿಗೆ ಸಂತೋಷವನ್ನು ತಂದನು. ಕಾಲ ಬಂದಾಗ ಅವಳಿಗೆ ತೇಜಸ್ಸು ಮತ್ತು ವರ್ಚಸ್ಸಿನಿಂದ ಕೂಡಿದ ಭಾರ್ಗವನಂದನ ಜಮದಗ್ನಿಯು ಪುತ್ರನಾಗಿ ಜನಿಸಿದನು. ಆ ತೇಜಸ್ವಿಯು ವೇದಾಧ್ಯಯನದಲ್ಲಿ ಮಹಾತೇಜಸ್ವಿಗಳಾದ ಬಹಳ ಋಷಿಗಳನ್ನೂ ಮೀರಿ ಬೆಳೆದನು. ವರ್ಚಸ್ಸಿನಲ್ಲಿ ಭಾಸ್ಕರನಂತಿರುವ ಅವನಿಗೆ ಸಂಪೂರ್ಣ ಧನುರ್ವೇದ ಮತ್ತು ನಾಲ್ಕು ವಿಧದ ಶಾಸ್ತ್ರಗಳು ತಾವಾಗಿಯೇ ಬಂದವು. ಆ ಮಹಾತಪಸ್ವಿ ಜಮದಗ್ನಿಯು

ವೇದಾಧ್ಯಯನದಲ್ಲಿ ನಿರತನಾಗಿ ತಪಸ್ಸನ್ನು ತಪಿಸಿ ತನ್ನ ನಿಯಮದಿಂದ ದೇವತೆಗಳನ್ನೂ ವಶಪಡಿಸಿಕೊಂಡನು. ಅವನು ನರಾಧಿಪ ಪ್ರಸೇನಜಿತನಲ್ಲಿಗೆ ಹೋಗಿ ರೇಣುಕೆಯನ್ನು ವರಿಸಿದನು. ರಾಜನು ಅವಳನ್ನು ಅವನಿಗೆ ಕೊಟ್ಟನು. ರೇಣುಕೆಯನ್ನು ಪತ್ನಿಯಾಗಿ ಪಡೆದ ಭಾರ್ಗವನಂದನನು ಆ ಅನುಕೂಲೆಯೊಂದಿಗೆ ತನ್ನ ಆಶ್ರಮದಲ್ಲಿ ಇನ್ನೂ ಹೆಚ್ಚು ತಪಸ್ಸನ್ನು ತಪಿಸಿದನು. ಅವಳಲ್ಲಿ ನಾಲ್ಕು ಕುಮಾರರು ಜನಿಸಿದರು. ರಾಮನು ಐದನೆಯವನು. ಎಲ್ಲರಿಗಿಂತ ಕಡೆಯವನಾಗಿದ್ದರೂ ರಾಮನು ಎಲ್ಲದರಲ್ಲಿಯೂ ಎಲ್ಲರಿಗಿಂತ ಮೊದಲನೆಯವನಾಗಿದ್ದನು.

ಒಮ್ಮೆ ಮಕ್ಕಳೆಲ್ಲರೂ ಹಣ್ಣು ಹುಡುಕಿ ತರಲು ಹೋಗಿದ್ದಾಗ ನಿಯತವ್ರತೆ ರೇಣುಕೆಯು ಸ್ನಾನಕ್ಕೆಂದು ಹೋದಳು. ಆ ರೇಣುಕೆಯಾದರೋ ಬರುತ್ತಿರುವಾಗ ಚಿತ್ರರಥನೆಂಬ ಹೆಸರಿನ ಮಾರ್ತ್ತಿಕಾವತಕದ ರಾಜನನ್ನು ನೋಡಿದಳು. ಸರೋವರದಲ್ಲಿ ಭಾರ್ಯೆಯರೊಂದಿಗೆ ಆಡುತ್ತಿದ್ದ ಆ ಶ್ರೀಮಂತ ಪದ್ಮಮಾಲಿನಿಯನ್ನು ನೋಡಿ ರೇಣುಕೆಯು ಅವನ ಸಾಮೀಪ್ಯವನ್ನು ಬಯಸಿದಳು. ಆ ವ್ಯಭಿಚಾರದಿಂದ ಬುದ್ಧಿಕಳೆದುಕೊಂಡ ಅವಳು ನೀರಿನಲ್ಲಿ ಒದ್ದೆಯಾಗಿ ನಡುಗುತ್ತಾ ಆಶ್ರಮವನ್ನು ಪ್ರವೇಶಿಸಿದಳು. ಅವಳ ಗಂಡನು ಎಲ್ಲವನ್ನೂ ತಿಳಿದುಕೊಂಡನು. ಅವಳು ತನ್ನ ಧೈರ್ಯದಿಂದ ಚ್ಯುತಳಾಗಿದ್ದಾಳೆ ಮತ್ತು ತನ್ನ ಬ್ರಹ್ಮಲಕ್ಷ್ಮಿಯನ್ನು ತೊರೆದಿದ್ದಾಳೆ ಎಂದು ತಿಳಿದ ಆ ವೀರ್ಯವಂತ ಮಹಾತೇಜಸ್ವಿಯು ಅವಳನ್ನು ಧಿಕ್ಕರಿಸುವ



ಮಾತುಗಳಿಂದ ಜರೆದನು. ಆಗ ರುಮಣ್ವಂತ ಎಂಬ ಹೆಸರಿನ ಜಮದಗ್ನಿಯ ಜ್ಯೇಷ್ಠ ಪುತ್ರನೂ, ಹಾಗೆಯೇ ಸುಷೇಣನೂ, ವಸುವೂ ಮತ್ತು ವಿಶ್ವಾವಸುವೂ ಬಂದರು. ಆ ಭಗವಾನನು ಅವರಲ್ಲಿ ಅನುಕ್ರಮವಾಗಿ ಒಬ್ಬಬ್ಬರಲ್ಲಿಯೂ ತಾಯಿಯನ್ನು ವಧಿಸಲು ಅಜ್ಞಾಪಿಸಿದನು. ಆದರೆ ತಾಯಿಯ ಮೇಲಿನ ಮೋಹದಿಂದ ಬುದ್ಧಿಕಳೆದುಕೊಂಡ ಅವರು ಯಾರೂ ಉತ್ತರಿಸಲಿಲ್ಲ. ಆಗ ಕೋಪದಿಂದ ಅವರನ್ನು ಶಪಿಸಿದನು. ಅವರು ಶಾಪದಿಂದ ತಮ್ಮ ಚೇತನಗಳನ್ನು ಕಳೆದುಕೊಂಡು ತಕ್ಷಣವೇ ಮೃಗಪಕ್ಷಿಗಳಂತೆ ಮತ್ತು ಜಡವಸ್ತುಗಳಂತೆ ವರ್ತಿಸತೊಡಗಿದರು. ಅನಂತರ ಅಲ್ಲಿಗೆ ಪರವೀರಹ ರಾಮನು ಆಶ್ರಮಕ್ಕೆ ಬಂದನು. ಮಹಾತಪಸ್ವಿ ಜಮದಗ್ನಿಯು ಮಹಾಕೋಪದಿಂದ ಅವನಿಗೆ ಹೇಳಿದನು:

> “ಮಗಾ! ಈ ಪಾಪಿ ತಾಯಿಯನ್ನು ಕೊಲ್ಲು.
> ವ್ಯಥೆಮಾಡಬೇಡ!”


ಆಗ ರಾಮನು ಕೊಡಲಿಯನ್ನು ಹಿಡಿದು ತಾಯಿಯ ತಲೆಯನ್ನು ಕಡಿದನು. ಮಹಾತ್ಮ ಜಮದಗ್ನಿಯ ಕೋಪವು ತಕ್ಷಣವೇ ಕಡಿಮೆಯಾಯಿತು ಮತ್ತು ಪ್ರಸನ್ನನಾಗಿ ಅವನು ಹೇಳಿದನು:

> “ಮಗೂ! ನನ್ನ ಈ ಮಾತಿನಂತೆ ನೀನು ಈ ದುಷ್ಕರ ಕೆಲಸವನ್ನು ಮಾಡಿದ್ದೀಯೆ! ಧರ್ಮಜ್ಞ! ನಿನ್ನ ಹೃದಯದಲ್ಲಿ ಎಷ್ಟನ್ನು ಬಯಸುತ್ತೀಯೋ ಅಷ್ಟು ವರಗಳನ್ನು ಕೇಳು!”

ಅವನು ತಾಯಿಯು ಎದ್ದೇಳಲೆಂದೂ, ವಧೆಯನ್ನು ಮರೆಯುವಂತೆಯೂ, ಪಾಪವು ತನಗೆ ತಾಗದಿರಲೆಂದೂ, ಮತ್ತು ತನ್ನ ಸಹೋದರರು ತಮ್ಮ ಹಿಂದಿನ ಸ್ವಭಾವಕ್ಕೆ ಹಿಂದಿರುಗಲೆಂದೂ ಕೇಳಿಕೊಂಡನು. ಮಹಾತಪಸ್ವಿ ಜಮದಗ್ನಿಯು ದ್ವಂದ್ವಯುದ್ಧದಲ್ಲಿ ಅಜೇಯತ್ವವನ್ನೂ, ದೀರ್ಘಾಯುಸ್ಸನ್ನೂ ಮತ್ತು ಅವನು ಬಯಸಿದುದೆಲ್ಲವನ್ನೂ ನೀಡಿದನು.

ಅನಂತರ ಒಂದು ದಿನ ಅವನ ಮಕ್ಕಳೆಲ್ಲರೂ ಹೊರಗೆ ಹೋಗಿದ್ದಾಗ ಕರಾವಳಿಯ ರಾಜ ಕಾರ್ತವೀರ್ಯನು ಅಲ್ಲಿಗೆ ಆಗಮಿಸಿದನು. ಅವನು ಆಶ್ರಮಕ್ಕೆ ಬಂದಾಗ ಋಷಿಪತ್ನಿಯು ಅವನನ್ನು ಅರ್ಚಿಸಿದಳು. ಆದರೆ ಆ ಯುದ್ಧಮದಸಮ್ಮತ್ತನು ಅವಳ ಆತಿಥ್ಯವನ್ನು ಸ್ವೀಕರಿಸಲಿಲ್ಲ. ಅವನು ಆಶ್ರಮವನ್ನು ಧ್ವಂಸಮಾಡಿ, ಕೂಗುತ್ತಿರುವ ಹೋಮಧೇನುವಿನ ಕರುವನ್ನು ಭಲಾತ್ಕಾರವಾಗಿ ತೆಗೆದುಕೊಂಡು ಹೋಗುತ್ತಾ ಮಹಾವೃಕ್ಷಗಳನ್ನು ಕಡಿದುರುಳಿಸಿದನು. ರಾಮನು ಮರಳಿ ಬಂದಾಗ ಸ್ವಯಂ ತಂದೆಯು ಎಲ್ಲವನ್ನೂ ಹೇಳಿದನು ಮತ್ತು ಕೂಗುತ್ತಿರುವ ಗೋವನ್ನು ನೋಡಿ ರಾಮನು ಕೋಪದಿಂದ ಆವೇಶಗೊಂಡನು. ಕೋಪಾವಿಷ್ಟನಾದ ಪರವೀರಹ ಭಾರ್ಗವನು ಕಾರ್ತವೀರ್ಯನನ್ನು ಆಕ್ರಮಣಮಾಡಿ ಅವನೊಂದಿಗೆ ಯುದ್ಧದಲ್ಲಿ ತೊಡಗಿದನು. ತನ್ನ ಉತ್ತಮ ಧನುಸ್ಸನ್ನು ಹಿಡಿದು ಹರಿತವಾದ ಬಾಣಗಳಿಂದ ಪರಿಘಗಳಂತಿದ್ದ ಅವನ ಸಹಸ್ರ ಬಾಹುಗಳನ್ನು ಕತ್ತರಿಸಿದನು.

ರಾಮನ ಮೇಲೆ ಕುಪಿತರಾಗಿ ಅರ್ಜುನನ ದಾಯಾದಿಗಳು



ರಾಮನಿಲ್ಲದಿದ್ದಾಗ ಆಶ್ರಮದಲ್ಲಿದ್ದ ಜಮದಗ್ನಿಯ ಮೇಲೆ ದಾಳಿಮಾಡಿದರು. ಅವರು ಯುದ್ಧಮಾಡಲು ನಿರಾಕರಿಸಿದ ಆ ತಪಸ್ವಿಯನ್ನು,

"ರಾಮಾ ರಾಮಾ"


ಎಂದು ಕೂಗುತ್ತಿರುವಾಗಲೇ, ಯಾರ ರಕ್ಷಣೆಯಲ್ಲಿಯೂ ಇಲ್ಲದಿರುವಾಗ ಸಂಹರಿಸಿದರು. ಕಾರ್ತವೀರ್ಯನ ಆ ಅರಿಂದಮ ಪುತ್ರರು ಜಮದಗ್ನಿಯನ್ನು ಬಾಣಗಳಿಂದ ಕೊಂದು ಅವರು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು. ಜಮದಗ್ನಿಯನ್ನು ಹಾಗೆಯೇ ಬಿಟ್ಟು ಅವರು ಹೊರಟುಹೋದನಂತರ ಸಮಿತ್ತುಗಳನ್ನು ಹಿಡಿದು ಭೃಗುನಂದನನು ಆಶ್ರಮಕ್ಕೆ ಮರಳಿದನು. ಮೃತ್ಯುವಶನಾಗಿದ್ದ ತನ್ನ ತಂದೆಯನ್ನು ನೋಡಿ ಆ ವೀರನು ಅನರ್ಹನಾದವನಿಗೆ ಹೀಗಾಗಿದ್ದುದನ್ನು ಕಂಡು ಬಹಳ ದುಃಖಿತನಾಗಿ ವಿಲಪಿಸಿದನು:

"ಅಪ್ಪಾ! ನನ್ನ ಅಪರಾಧದಿಂದಲೇ ಈ ಕ್ಷುದ್ರ ಬಾಲಿಶ ಕಾರ್ತವೀರ್ಯನ ದಾಯದಿಗಳು ವನದಲ್ಲಿ ಮೃಗವನ್ನು ಬಾಣಗಳಿಂದ ಕೊಲ್ಲುವಂತೆ ನಿನ್ನನ್ನು ಕೊಂದಿದ್ದಾರೆ. ಸತ್ಯಪಥದಲ್ಲಿ ನಡೆದುಕೊಂಡು ಹೋಗುತ್ತಿರುವ, ಎಲ್ಲ ಭೂತಗಳಿಗೂ ಅನಾಗಸನಾಗಿರುವ ಧರ್ಮಜ್ಞನಾದ ನಿನಗೆ ಈ ರೀತಿಯ ಮೃತ್ಯುವು ಹೇಗೆ ಸರಿಯಾಗುತ್ತದೆ? ತಪಸ್ಥನಾಗಿದ್ದ ಯುದ್ಧಮಾಡದೇ ಇರುವ ವೃದ್ಧನಾದ ನಿನ್ನನ್ನು ನೂರಾರು




> ಹರಿತ ಬಾಣಗಳಿಂದ ಕೊಂದು ಅವರು ಎಷ್ಟು ಪಾಪಗಳನ್ನು ಸಂಗ್ರಹಿಸಿರಲಿಕ್ಕಿಲ್ಲ? ಹೋರಾಡದೇ ಇದ್ದ ಏಕಾಂಗಿಯಾಗಿದ್ದ ಧರ್ಮಜ್ಞನನ್ನು ನಾಚಿಕೆಯಿಲ್ಲದೇ ಕೊಂದ ಅವರು ತಮ್ಮ ಸಚಿವರಿಗೆ ಮತ್ತು ಸ್ನೇಹಿತರಿಗೆ ಏನೆಂದು ಹೇಳುವುದಿಲ್ಲ?”

ಈ ರೀತಿ ಆ ಕರುಣಿಯು ನಾನಾವಿಧವಾಗಿ ವಿಲಪಿಸಿದನು ಮತ್ತು ಆ ಮಹಾತಪಸ್ವಿಯು ತಂದೆಯ ಪ್ರೇತಕರ್ಮಗಳೆಲ್ಲವನ್ನೂ ನಡೆಸಿದನು. ಪರಪುರಂಜಯ ರಾಮನು ತಂದೆಯನ್ನು ಅಗ್ನಿಯಲ್ಲಿ ದಹಿಸಿದನು ಮತ್ತು ಕ್ಷತ್ರಿಯರೆಲ್ಲರನ್ನೂ ವಧಿಸುವ ಪ್ರತಿಜ್ಞೆ ಮಾಡಿದನು. ಅಂತಕನಂತಿದ್ದ ಆ



ಅತಿಬಲ ಶೂರ ವೀರ್ಯವಂತನು ಕೋಪದಿಂದ ಶಸ್ತ್ರವನ್ನು ಹಿಡಿದು ಒಬ್ಬನೇ ಕಾರ್ತವೀರ್ಯನ ಮಕ್ಕಳನ್ನು ಸಂಹರಿಸಿದನು. ಪ್ರಹರಿಗಳಲ್ಲಿ ಶ್ರೇಷ್ಠ ರಾಮನು ಅವರ ಅನುಯಾಯಿ ಕ್ಷತ್ರಿಯರೆಲ್ಲರನ್ನೂ ಸದೆಬಡಿದನು. ಇಪ್ಪತ್ತೊಂದು ಬಾರಿ ಭೂಮಿಯಮೇಲೆ ಕ್ಷತ್ರಿಯರಿಲ್ಲದಂತೆ ಮಾಡಿ ಪ್ರಭುವು ಸಮಂತಪಂಚಕದಲ್ಲಿ ರಕ್ತದ ಐದು ಸರೋವರಗಳನ್ನು ನಿರ್ಮಿಸಿದನು. ಆ ಭೃಗುಕುಲೋದ್ಧಹನು ಅವುಗಳಿಂದ ಪಿತೃಗಳಿಗೆ ತರ್ಪಣೆಯನ್ನಿತ್ತನು. ಆಗ ಸಾಕ್ಷಾತ್ ಋಚೀಕನು ಅಲ್ಲಿಗೆ ಬಂದು ರಾಮನನ್ನು ತಡೆದನು. ಅನಂತರ ಮಹಾತ್ಮ ಪ್ರತಾಪಿ ಜಾಮದಗ್ನಿಯು ಮಹಾ ಯಜ್ಞದಿಂದ ದೇವೇಂದ್ರನನ್ನು ತೃಪ್ತಿಪಡಿಸಿ ಭೂಮಿಯನ್ನು ಬ್ರಾಹ್ಮಣರಿಗೆ ದಾನವಾಗಿತ್ತನು. ಹತ್ತು ಅಳತೆ ಉದ್ದದ ಮತ್ತು ಒಂಭತ್ತು ಅಳತೆ ಎತ್ತರದ ಬಂಗಾರದ ವೇದಿಯನ್ನು ನಿರ್ಮಿಸಿ ಮಹಾತ್ಮ ಕಶ್ಯಪನಿಗೆ ದಾನವಾಗಿತ್ತನು. ಕಶ್ಯಪನ ಅನುಮತಿಯನ್ನು ಪಡೆದು ಬ್ರಾಹ್ಮಣರು ಅದನ್ನು ತುಂಡುತುಂಡುಗಳನ್ನಾಗಿ ಮಾಡಿ ಹಂಚಿಕೊಂಡರು ಮತ್ತು ಆದುದರಿಂದ ಅವರು ಖಾಂಡವಾಯನರೆಂದು ಪ್ರಖ್ಯಾತರಾದರು. ಭೂಮಿಯನ್ನು ಮಹಾತ್ಮ ಕಶ್ಯಪನಿಗಿತ್ತು ಆ ಅಮಿತವಿಕ್ರಮನು ಮಹೇಂದ್ರ ಗಿರಿಯಲ್ಲಿ ವಾಸಮಾಡಿದನು. ಈ ಪ್ರಕಾರವಾಗಿ ಲೋಕದಲ್ಲಿ ವಾಸಿಸುತ್ತಿದ್ದ ಕ್ಷತ್ರಿಯರೊಂದಿಗೆ ಅವನ ವೈರವಿತ್ತು ಮತ್ತು ಹೀಗೆ ಅಮಿತತೇಜಸ್ವಿ ರಾಮನು ಈ ಭೂಮಿಯನ್ನು ಗೆದ್ದನು.

# ಚ್ಯವನ

[ಚ್ಯವನ-ಸುಕನ್ಯೆಯರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೨೨-೧೨೫) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಭೃಗು ಮಹರ್ಷಿಗೆ ಚ್ಯವನ ಭಾರ್ಗವನೆಂಬ ಹೆಸರಿನ ಮಗನಿದ್ದನು ಮತ್ತು ಆ ಮಹಾದ್ಯುತಿಯು ನರ್ಮದಾ ತೀರದಲ್ಲಿ ತಪಸ್ಸನ್ನಾಚರಿಸುತ್ತಿದ್ದನು. ಆ ಮಹಾತೇಜಸ್ವಿಯು ವೀರಾಸನದಲ್ಲಿ ಅಚಲವಾಗಿದ್ದು ಒಂದೇ ಸ್ಥಳದಲ್ಲಿ ಬಹಳಷ್ಟು ಕಾಲ ನಿಂತು ತಪಸ್ಸನ್ನಾಚರಿಸುತ್ತಿದ್ದನು. ಬಹು ಸಮಯದ ನಂತರ ಅವನ ಮೇಲೆ ಬಳ್ಳಿಗಳು ಬೆಳೆದು, ಇರುವೆಗಳ ತಂಡವು ವಾಸಮಾಡುವ ಹುತ್ತವಾದನು. ಹೀಗೆ ಆ ಧೀಮಂತನು ಎಲ್ಲೆಡೆಯಿಂದಲೂ ಹುತ್ತದಿಂದ ಮುಚ್ಚಿಕೊಂಡು ಮಣ್ಣಿನ ರಾಶಿಯಂತೆ ಆದನು. ಹುತ್ತದಿಂದ ಆವರಿಸಲ್ಪಟ್ಟ ಅವನು ತಪಸ್ಸನ್ನು ತಪಿಸುತ್ತಲೇ ಇದ್ದನು. ದೀರ್ಘಕಾಲದವರೆಗೆ ಹೀಗಿರಲು, ಶರ್ಯಾತಿ ಎಂಬ ಹೆಸರಿನ ರಾಜನು ಈ ಉತ್ತಮ ರಮ್ಯ ಸರೋವರಕ್ಕೆ ವಿಹರಿಸಲು ಬಂದನು. ಅವನೊಂದಿಗೆ ನಾಲ್ಕು ಸಾವಿರ ಸ್ತ್ರೀಯರಿದ್ದರು. ಅವರಲ್ಲಿ ಒಬ್ಬಳು

ಸುಕನ್ಯಾ ಎಂಬ ಹೆಸರಿನ ಅವನ ಶುಭ್ರೆ ಮಗಳು. ಸಖಿಯರಿಂದ ಸುತ್ತುವರೆದು ಸರ್ವಾಭರಣ ಭೂಷಿತಳಾಗಿ ಅಲ್ಲಿಯೇ ತಿರುಗಾಡುತ್ತಿದ್ದ ಅವಳು ಅಲ್ಲಿಯೇ ಇದ್ದ ಭಾರ್ಗವನ ಹುತ್ತವನ್ನು ನೋಡಿದಳು. ಅಲ್ಲಿ ಆ ಸುಂದರ ಹಲ್ಲಿನವಳು ಮನೋರಮ ಗಿಡಮರಗಳನ್ನು ಗಮನವಿಟ್ಟು ನೋಡುತ್ತಾ ತನ್ನ ಸಖಿಗಳೊಂದಗೂಡಿ ತಿರುಗಾಡಿದಳು. ರೂಪದಲ್ಲಿ ಮತ್ತು ವಯಸ್ಸಿನಲ್ಲಿ ಮದನನ ಮತ್ತೇರಿದ ಅವಳು ತುಂಬಾ ಹೂಬಿಟ್ಟು ಭಾರವಾಗಿ ಬಗ್ಗಿದ್ದ ಕಾಡು ಮರಗಳ ರೆಂಬೆಗಳನ್ನು ಮುರಿಯ ತೊಡಗಿದಳು. ಒಂದೇ ವಸ್ತ್ರವನ್ನುಟ್ಟು ಅಲಂಕೃತಳಾಗಿ ಮಿಂಚಿನಂತೆ ಓಡಾಡುತ್ತಿರುವ, ಸಖಿಯರಿಲ್ಲದೇ ಒಬ್ಬಳೇ ಇರುವ ಅವಳನ್ನು ಧೀಮಂತ ಭಾರ್ಗವನು ನೋಡಿದನು. ಆ ನಿರ್ಜನಪ್ರದೇಶದಲ್ಲಿ ಅವಳನ್ನು ಕಂಡ ಪರಮದ್ಯುತಿ, ಬಾಯೊಣಗಿದ, ಬ್ರಹ್ಮರ್ಷಿ ತಪೋಬಲಸಮನ್ವಿತ ಚ್ಯವನನು ನೋಡಿ ಸಂತೋಷಗೊಂಡನು. ಆ ಕಲ್ಯಾಣಿಯನ್ನು ಉದ್ದೇಶಿಸಿ ಮಾತನಾಡಿಸಿದರೆ ಅವಳಿಗೆ ಅದು ಕೇಳದಾಯಿತು. ಆಗ ಸುಕನ್ಯೆಯು ಹುತ್ತದಲ್ಲಿ ಭಾರ್ಗವನ ಕಣ್ಣುಗಳನ್ನು ಕಂಡು ಕುತೂಹಲದಿಂದ ಮೋಹವು ಬುದ್ಧಿಯನ್ನು ಆವರಿಸಲು ಇದು ಏನಿರಬಹುದು ಎಂದು ಹೇಳುತ್ತಾ ಮುಳ್ಳಿನಿಂದ ಆ ಕಣ್ಣುಗಳನ್ನು ಚುಚ್ಚಿದಳು. ಅವಳು ಕಣ್ಣುಗಳನ್ನು ಹೀಗೆ ಚುಚ್ಚಲು ಮೊದಲೇ ಕೋಪಿಷ್ಟನಾಗಿದ್ದ ಅವನು ಅತ್ಯಂತ ಕುಪಿತನಾಗಿ ಶರ್ಯಾತಿಯ ಸೈನಿಕರ ಮಲಮೂತ್ರಗಳನ್ನು ನಿಲ್ಲಿಸಿದನು.

ಅನಂತರ ತನ್ನ ಸೇನೆಯು ಮಲಬದ್ಧತೆ ಮತ್ತು ಮೂತ್ರ ಬದ್ಧತೆಗಳಿಂದ

ಬಳಲುತ್ತಿರುವುದನ್ನು ನೋಡಿ ರಾಜನು ಅದು ಏಕೆ ಹಾಗಾಯಿತೆಂದು ಪ್ರಶ್ನಿಸತೊಡಗಿದನು:

> "ತಪೋನಿರತನಾಗಿರುವ ವೃದ್ಧನಾದ ಮತ್ತು ವಿಶೇಷವಾಗಿ ಕೋಪಿಷ್ಟನಾದ ಮಹಾತ್ಮ ಭಾರ್ಗವನಿಗೆ ಇಂದು ಮಾಡಬಾರದ್ದನ್ನು ಮಾಡಿದವರು ಯಾರು? ತಿಳಿದು ಅಥವಾ ತಿಳಿಯದೇ ಮಾಡಿದುದೆಲ್ಲವನ್ನೂ ನನಗೆ ವರದಿಮಾಡಿ."

ಆಗ ಸೈನಿಕರೆಲ್ಲರೂ ಹೇಳಿದರು:

> "ನಾವು ಯಾರೂ ಅಪಕೃತಿಯನ್ನು ಮಾಡಿದ್ದುದು ಗೊತ್ತಿಲ್ಲ. ನಿಮಗಿಷ್ಟವಿದ್ದರೆ ನೀವೇ ಕಂಡುಕೊಳ್ಳಬೇಕು."

ಅನಂತರ ರಾಜನು ಸ್ವತಃ ಸಾಮ ಮತ್ತು ಉಗ್ರ ವಿಧಾನಗಳನ್ನು ಬಳಸಿ ತನ್ನ ಗುಂಪಿನಲ್ಲಿದ್ದ ಎಲ್ಲರನ್ನೂ, ಮಿತ್ರಗಣಗಳನ್ನೂ, ಪ್ರಶ್ನಿಸಿದನು. ಆ ಸೇನೆಯು ಮಲಬದ್ಧತೆಯಿಂದ ಪೀಡೆಗೊಳಪಟ್ಟು ದುಃಖಿಸುತ್ತಿರುವುದನ್ನು ಮತ್ತು ತನ್ನ ತಂದೆಯೂ ದುಃಖಿತನಾಗಿರುವುದನ್ನು ಗಮನಿಸಿ ಸುಕನ್ಯೆಯು ಹೀಗೆ ಹೇಳಿದಳು:

> "ನಾನು ತಿರುಗಾಡುತ್ತಿರುವಾಗ ಹುತ್ತದ ಒಳಗಿಂದ ಹೊರಸೂಸುವ ಬೆಂಕಿಯತೆ ಹೊಳೆಯುತ್ತಿರುವುದನ್ನು ನೋಡಿದೆನು. ಅದೊಂದು ಬೆಂಕಿಯ ಹುಳುವಾಗಿರಬಹುದು ಎಂದು ತಿಳಿದು ಅದನ್ನು ಚುಚ್ಚಿದೆನು."

ಇದನ್ನು ಕೇಳಿದ ಶರ್ಯಾತಿಯು ಕೂಡಲೇ ಹುತ್ತದೆಡೆಗೆ ಧಾವಿಸಿದನು ಮತ್ತು ಅಲ್ಲಿ ತಪೋವೃದ್ಧನೂ ವಯೋವೃದ್ಧನೂ ಆಗಿದ್ದ ಭಾರ್ಗವನನ್ನು ಕಂಡನು. ರಾಜನು ಕೈಮುಗಿದು

> “ಅಜ್ಞಾನದಿಂದ ಬಾಲಕಿಯು ಮಾಡಿದುದನ್ನು,
> ಸೇನೆಗೋಸ್ಕರವಾಗಿ ಕ್ಷಮಿಸಬೇಕು”

ಎಂದು ಯಾಚಿಸಿದನು. ಆಗ ಭಾರ್ಗವ ಚ್ಯವನನು ರಾಜನಿಗೆ ಹೇಳಿದನು:

> “ರಾಜನ್! ರೂಪ ಮತ್ತು ಔದಾರ್ಯಗಳಿಂದ ಕೂಡಿದ ಆದರೆ ಲೋಭ ಮೋಹಗಳಿಗೆ ಸಿಲುಕಿದ ನಿನ್ನ ಈ ಮಗಳನ್ನು ನೀನಾಗಿಯೇ ನನಗೆ ಕೊಟ್ಟರೆ ನಿನ್ನನ್ನು ಕ್ಷಮಿಸುತ್ತೇನೆ. ಸತ್ಯವನ್ನೇ ಹೇಳುತ್ತಿದ್ದೇನೆ.”

ಋಷಿಯ ಮಾತನ್ನು ಆಜ್ಞೆಯೆಂದು ತಿಳಿದು ಶರ್ಯಾತಿಯು ಏನೂ ವಿಚಾರಮಾಡದೇ ಆ ಮಹಾತ್ಮ ಚ್ಯವನನಿಗೆ ತನ್ನ ಮಗಳನ್ನು ಕೊಟ್ಟನು. ಆ ಕನ್ಯೆಯನ್ನು ಸ್ವೀಕರಿಸಿ ಚ್ಯವನನು ಶಾಂತನಾದನು. ಕ್ಷಮೆಯನ್ನು ಪಡೆದ ರಾಜನು ಸೈನ್ಯದೊಂದಿಗೆ ಮರಳಿದನು. ಅನಿಂದಿತೆ ಸುಕನ್ಯೆಯೂ ಕೂಡ ತಪಸ್ವಿಯನ್ನು ಪತಿಯನ್ನಾಗಿ ಪಡೆದು ಪ್ರೀತಿ, ತಪಸ್ಸು, ನಿಯಮಗಳಿಂದ ನಿತ್ಯವೂ ಅವನ ಸೇವೆ ಮಾಡಿದಳು. ಬೇಗನೆ ಏನೂ ತಕರಾರಿಲ್ಲದೇ ಅಗ್ನಿ ಮತ್ತು ಅತಿಥಿಗಳ ಶುಶ್ರೂಷೆಯನ್ನು ಮಾಡುತ್ತಾ ಆ ಶುಭಾನನೆಯು ಚ್ಯವನನೊಂದಿಗೆ ಸಂತೋಷಪಟ್ಟಳು.

ಕೆಲವು ಕಾಲದ ನಂತರ ಸುರರ ಅಶ್ವಿನೀ ಕುಮಾರರು ಬೆತ್ತಲೆಯಾಗಿ ಸ್ನಾನಮಾಡುತ್ತಿದ್ದ ಸುಕನ್ಯೆಯನ್ನು ನೋಡಿದರು. ಇಂದ್ರನ ಮಗಳಂತಿರುವ ಆ ಸುಂದರಾಂಗಿಯನ್ನು ನೋಡಿ ನಾಸತ್ಯ ಅಶ್ವಿನೀ ಕುಮಾರರು ಅವಸರದಲ್ಲಿ ಅವಳ ಬಳಿ ಹೋಗಿ ಹೇಳಿದರು:

> "ಭದ್ರೇ! ನೀನು ಯಾರವಳು ಮತ್ತು ಈ ವನದಲ್ಲಿ ಏನು ಮಾಡುತಿದ್ದೀಯೆ? ನಿನ್ನ ಕುರಿತು ತಿಳಿಯಬಯಸಿದ್ದೇವೆ. ಹೇಳು."

ಆಗ ಸುಕನ್ಯೆಯು ಮೈಮುಚ್ಚಿಕೊಂಡು ಆ ಸುರೋತ್ತಮರಿಗೆ ಹೇಳಿದಳು:

> "ನಾನು ಶರ್ಯಾತಿಯ ಮಗಳು ಮತ್ತು ಚ್ಯವನನ ಪತ್ನಿಯೆಂದು ತಿಳಿಯಿರಿ."

ಅಶ್ವಿನೀ ಕುಮಾರರು ಜೋರಾಗಿ ನಕ್ಕು ಪುನಃ ಅವಳಿಗೆ ಹೇಳಿದರು:

> "ನಿನ್ನ ತಂದೆಯು ನಿನ್ನಂಥಹ ಕಲ್ಯಾಣಿಯನ್ನು ಮುದುಕನಿಗೆ ಹೇಗೆ ಕೊಟ್ಟ? ಕಾಡಿನ ಮಧ್ಯದಲ್ಲಿ ನೀನು ಮಿಂಚಿನ ಮಾಲೆಯಂತೆ ಬೆಳಗುತ್ತಿದ್ದೀಯೆ. ಭಾಮಿನಿ! ದೇವತೆಗಳಲ್ಲಿಯೂ ಕೂಡ ನಿನ್ನ ಸರಿಸಮಳಾದವಳನ್ನು ನಾವು ಕಂಡಿಲ್ಲ. ಸರ್ವಾಭರಣ ಭೂಷಿತೆಯಾಗಿ ಉತ್ತಮ ಉಡುಪುಗಳನ್ನು ಧರಿಸಿದರೆ ಅನವದ್ಯಾಂಗಿ ನೀನು ಶೋಭಿಸುತ್ತೀಯೆ. ಹೀಗೆ ಕೊಳಕು ತುಂಬಿ ಇದ್ದರೆ ಇಲ್ಲ. ಕಲ್ಯಾಣಿ! ಈ ರೀತಿ ಇರುವ

ನೀನು ಯಾವ ಕಾರಣಕ್ಕಾಗಿ ಕಾಮಭೋಗಗಳಿಲ್ಲದೇ ಮುದಿತನದಿಂದ ಹಾಳುಬಿದ್ದ, ಪೋಷಣೆ ಮತ್ತು ರಕ್ಷಣೆಗಳಿಗೆ ಅಸಮರ್ಥನಾದ ಗಂಡನ ಸೇವೆಯನ್ನು ಮಾಡುತ್ತಿದ್ದೀಯೆ? ಚ್ಯವನನನ್ನು ಬಿಟ್ಟು ನಮ್ಮಲ್ಲಿ ಯಾರಾದರೊಬ್ಬನನ್ನು ನಿನ್ನ ಪತಿಯನ್ನಾಗಿ ಸ್ವೀಕರಿಸಿದರೆ ಒಳ್ಳೆಯದು. ವೃಥಾ ನಿನ್ನ ಯೌವನವನ್ನು ಕಳೆಯಬೇಡ!"

ಈ ಮಾತುಗಳಿಗೆ ಸುಕನ್ಯೆಯು ಆ ಸುರರಿಗೆ ಹೇಳಿದಳು:

"ನಾನು ಪತಿ ಚ್ಯವನನಲ್ಲಿ ಅನುರತಳಾಗಿದ್ದೇನೆ. ನನ್ನನು ಶಂಕಿಸಬೇಡಿ! "

ಪುನಃ ಅವರು ಹೇಳಿದರು:

"ನಾವು ದೇವತೆಗಳ ವೈದ್ಯರು. ನಿನ್ನ ಪತಿಯನ್ನು ಯುವಕನನ್ನಾಗಿಯೂ ರೂಪ ಸಂಪನ್ನನನ್ನಾಗಿಯೂ ಮಾಡುತ್ತೇವೆ. ಅನಂತರ ನಾವು ಮೂರರಲ್ಲಿ ಒಬ್ಬನನ್ನು ಪತಿಯನ್ನಾಗಿ ವರಿಸು. ವರಾನನೆ! ಈ ಒಪ್ಪಂದವನ್ನು ಅವನಿಗೆ ಹೇಳು."

ಅವರ ಮಾತಿನಂತೆ ಅವಳು ಭಾರ್ಗವನ ಬಳಿ ಹೋಗಿ ಅವರು ಹೇಳಿದ ಮಾತನ್ನು ಭೃಗುಸುತನಿಗೆ ಪುನಃ ಹೇಳಿದಳು. ಅದನ್ನು ಕೇಳಿದ ಚ್ಯವನನು ಪತ್ನಿಗೆ "ಹಾಗೆಯೇ ಮಾಡೋಣ" ಎಂದನು. ಗಂಡನ

ಒಪ್ಪಿಗೆಯನ್ನು ಪಡೆದು ಅವಳು “ಹಾಗೆಯೇ ಮಾಡೋಣ” ಎಂದಳು. “ಹಾಗೆಯೇ ಮಾಡೋಣ” ಎಂದು ಅವಳ ಮಾತನ್ನು ಕೇಳಿ ಅಶ್ವಿನೀ ದೇವತೆಗಳು ರಾಜಕುಮಾರಿಗೆ

“ನಿನ್ನ ಪತಿಯು ನೀರಿಗಿಳಿಯಬೇಕು”

ಎಂದರು. ಆಗ ರೂಪವನ್ನು ಬಯಸಿದ ಚ್ಯವನನು ಬೇಗನೆ ಸರೋವರವನ್ನು ಪ್ರವೇಶಿಸಿದನು. ಅಶ್ವಿನೀ ಕುಮಾರರೂ ಅದೇ ಸರೋವರಕ್ಕೆ ಇಳಿದರು.

ಅನಂತರ ಕ್ಷಣದಲ್ಲಿಯೇ ಅವರೆಲ್ಲರೂ ಸರೋವರದಿಂದ ಮೇಲೆದ್ದರು. ಎಲ್ಲರೂ ದಿವ್ಯರೂಪಗಳನ್ನು ಧರಿಸಿದ್ದರು, ಯುವಕರಾಗಿದ್ದರು, ಹೊಳೆಯುವ ಕರ್ಣಕುಂಡಲಗಳನ್ನು ಧರಿಸಿದ್ದರು. ಒಂದೇಸಮನಾದ ರೂಪ ಧರಿಸಿದ್ದ ಅವರು ಅವಳ ಮನಸ್ಸಿನಲ್ಲಿ ಪ್ರೀತಿಯನ್ನು ಹೆಚ್ಚಿಸಿದರು. ಅವರೆಲ್ಲರೂ ಒಂದೇ ಧ್ವನಿಯಲ್ಲಿ ಅವಳಿಗೆ ಹೇಳಿದರು:

“ಶುಭೇ! ನಮ್ಮಲ್ಲಿ ನಿನಗಿಷ್ಟವಾದ ಒಬ್ಬನನ್ನು ನಿನ್ನ ಪತಿಯನ್ನಾಗಿ ಆರಿಸಿಕೋ!”

ಒಂದೇ ರೂಪಧರಿಸಿ ನಿಂತಿದ್ದ ಅವರೆಲ್ಲರನ್ನೂ ಮನಸ್ಸು ಮತ್ತು ಬುದ್ಧಿಗಳೆರಡರಿಂದಲೂ ವೀಕ್ಷಿಸಿ, ಆ ದೇವಿಯು ತನ್ನ ಗಂಡನನ್ನೇ ವರಿಸಿದಳು. ತಾನು ಬಯಸಿದ್ದ ವಯಸ್ಸನ್ನೂ ರೂಪವನ್ನೂ ಮತ್ತು ಪತ್ನಿಯನ್ನೂ ಪಡೆದು ಸಂತೋಷಗೊಂಡ ಚ್ಯವನನು ಆ ಮಹಾತೇಜಸ್ವಿ



ನಾಸತ್ಯ ಅಶ್ವಿನೀ ದೇವತೆಗಳಿಗೆ ವಚನವನ್ನಿತ್ತನು:

> "ವೃದ್ಧನಾಗಿದ್ದ ನನ್ನನ್ನು ಈಗ ರೂಪಸಂಪನ್ನನನ್ನೂ ವಯಸ್ಸಿನಲ್ಲಿ ಸರಿಯಾದವನನ್ನೂ ನೀವು ಮಾಡಿ ನನಗೆ ಇವಳನ್ನು ಪತ್ನಿಯನ್ನಾಗಿ ಒದಗಿಸಿದ್ದೀರಿ. ಆದುದರಿಂದ ಸಂತೋಷಗೊಂಡ ನಾನು ದೇವರಾಜನ ಕಣ್ಣೆದುರಿಗೇ ನೀವು ಸೋಮವನ್ನು ಕುಡಿಯುವ ಹಾಗೆ ಮಾಡುತ್ತೇನೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ."

ಅದನ್ನು ಕೇಳಿ ಸಂತೋಷಗೊಂಡ ಅಶ್ವಿನೀ ಕುಮಾರರೀರ್ವರು ದಿವಿಗೆ ತೆರಳಿದರು. ಚ್ಯವನ-ಸುಕನ್ಯೆಯರಾದರೋ ಸುರರಂತೆ ಒಂದಾಗಿ ವಿಹರಿಸಿದರು.

ಚ್ಯವನನು ಯೌವನಾವಸ್ಥೆಯನ್ನು ಪಡೆದಿದ್ದಾನೆ ಎಂದು ಕೇಳಿದ ಶರ್ಯಾತಿಯು ಸಂತೋಷಗೊಂಡು ಸೇನೆಯೊಂದಿಗೆ ಭಾರ್ಗವಾಶ್ರಮಕ್ಕೆ ಬಂದನು. ದೇವಸುತರಂತಿದ್ದ ಚ್ಯವನ-ಸುಕನ್ಯೆಯರನ್ನು ನೋಡಿ ಮಹೀಪ ಶರ್ಯಾತಿಯು ಇಡೀ ಭೂಮಿಯನ್ನೇ ಗೆದ್ದೆನೋ ಎನ್ನುವಷ್ಟು ಸಂತೋಷದಿಂದ ನಲಿದಾಡಿದನು. ಋಷಿಯು ಪತ್ನೀಸಮೇತ ರಾಜನನ್ನು ಸತ್ಕರಿಸಿ ಸ್ವಾಗತಿಸಿದನು. ಆ ಮಹಾತ್ಮರೆಲ್ಲರೂ ಕುಳಿತು ಶುಭ ಸಮಾಚಾರಗಳ ಕುರಿತು ಮಾತನಾಡಿದರು. ಆಗ ಭಾರ್ಗವನು ರಾಜನಿಗೆ ಪರಿಸಂತವಿಸುತ್ತಾ ಹೇಳಿದನು:

> "ರಾಜನ್! ನಿನ್ನಿಂದ ಒಂದು ಯಾಗವನ್ನು ಮಾಡಿಸುತ್ತೇನೆ.

ಸಾಮಗ್ರಿಗಳ ವ್ಯವಸ್ಥೆ ಮಾಡು.”

ಆಗ ಪರಮ ಹರ್ಷದಿಂದ ರಾಜ ಶರ್ಯಾತಿಯು ಚ್ಯವನನ ಆ ಮಾತನ್ನು ಗೌರವಿಸಿ, ಪ್ರಶಸ್ತ ದಿನದಲ್ಲಿ ಯಜ್ಞಭೂಮಿಯನ್ನು ರಚಿಸಿ ಸರ್ವಕಾಮಗಳನ್ನೂ ಪೂರೈಸುವ ಅನುತ್ತಮ ಯಜ್ಞವನ್ನು ನೆರವೇರಿಸಿದನು. ಚ್ಯವನ ಭಾರ್ಗವನು ಮಾಡಿಸಿಕೊಟ್ಟ ಅದೇ ಯಜ್ಞದಲ್ಲಿ ಅದ್ಭುತಗಳು ನಡೆದವು. ಆ ಯಜ್ಞದಲ್ಲಿಯೇ ಚ್ಯವನನು ಅಶ್ವಿನೀ ದೇವತೆಗಳಿಗೆ ಸೋಮವನ್ನು ನೀಡಿದನು. ಕೊಡುತ್ತಿದ್ದ ಬಟ್ಟಲನ್ನು ಇಂದ್ರನು ತಡೆದನು. ಇಂದ್ರನು ಹೇಳಿದನು:

“ಈ ಇಬ್ಬರೂ ನಾಸತ್ಯರು ಸೋಮಕ್ಕೆ ಅರ್ಹರಲ್ಲ ಎಂದು ನನ್ನ ಅಭಿಪ್ರಾಯ. ಅವರು ದೇವಪುತ್ರರ ವೈದ್ಯರಾದುದರಿಂದ, ವೃತ್ತಿಯಿಂದ ಅವರು ಇದಕ್ಕೆ ಅರ್ಹರಲ್ಲ!”

ಚ್ಯವನನು ಹೇಳಿದನು:

“ರೂಪ ಮತ್ತು ಆರ್ಥಿಕ ಸಂಪತ್ತುಗಳನ್ನು ಹೊಂದಿದ ಈ ಮಹಾತ್ಮರನ್ನು ಅಪಮಾನಗೊಳಿಸಬೇಡ! ಮಘವನ್! ಅವರು ನನ್ನನ್ನು ವೃದ್ಧಾಪ್ಯವೇ ಇಲ್ಲದ ದೇವತೆಗಳಂತೆ ಮಾಡಿದ್ದಾರೆ. ಏಕೆ ಅವರು ನಿನ್ನ ಮತ್ತು ಇತರ ದೇವತೆಗಳ ಸಾಲಿನಲ್ಲಿ ಅರ್ಹರಲ್ಲ? ಅಶ್ವಿನಿಯರೂ ಕೂಡ ದೇವತೆಗಳೆನ್ನುವುದನ್ನು ತಿಳಿ!”

ಇಂದ್ರನು ಹೇಳಿದನು:

> “ಅವರು ಚಿಕಿತ್ಸಕರು. ಕರ್ಮವನ್ನೆಸಗುವವರು. ಕಾಮರೂಪದಿಂದಿರುವವರು. ಮತ್ತು ಮರ್ತ್ಯರ ಲೋಕಗಳಿಗೆ ತಿರುಗುತ್ತಿರುತ್ತಾರೆ. ಅವರು ಹೇಗೆ ಸೋಮಕ್ಕೆ ಅರ್ಹರಾಗುತ್ತಾರೆ?”

ವಾಸವನು ಅದನ್ನೇ ಪುನಃ ಪುನಃ ಹೇಳುತ್ತಿದ್ದರೂ, ಶಕ್ರನನ್ನು ಅನಾದರಿಸಿ ಭಾರ್ಗವನು ಸೋಮದ ಪಾತ್ರೆಯನ್ನು ನೀಡಿದನು. ಆದರೆ ಅವನು ಪಾತ್ರೆಯಲ್ಲಿ ಸೋಮವನ್ನು ಸುರುಗಲು ಹೊರಡುತ್ತಿದ್ದುದನ್ನು ನೋಡಿದ ಬಲದೇವ ಇಂದ್ರನು ಈ ಮಾತನ್ನಾಡಿದನು:

> “ಸ್ವಯಂ ನೀನಾಗಿಯೇ ಅವರಿಗೆ ಸೋಮವನ್ನು ಸುರಿಯುತ್ತಿದ್ದೀಯೆ ಎಂದಾದರೆ ನನ್ನ ಈ ಘೋರರೂಪೀ, ಅನುತ್ತಮ ವಜ್ರವನ್ನು ನಿನ್ನ ಮೇಲೆ ಪ್ರಹರಿಸುತ್ತೇನೆ.”

ಹೀಗೆ ಹೇಳಲು ಭಾರ್ಗವನು ಮುಗುಳ್ನಕ್ಕು ಇಂದ್ರನನ್ನೇ ನೋಡುತ್ತಾ ಉತ್ತಮ ಸೋಮವನ್ನು ಅಶ್ವಿನೀ ದೇವತೆಗಳ ಪಾತ್ರೆಗೆ ವಿಧಿವತ್ತಾಗಿ ಸುರಿದನು. ಅಷ್ಟರಲ್ಲಿಯೇ ಶಚೀಪತಿ ಇಂದ್ರನು ಘೋರರೂಪೀ ವಜ್ರವನ್ನು ಅವನೆಡೆಗೆ ಎಸೆದನು ಮತ್ತು ಅವನು ಪ್ರಹರಿಸುವಾಗ ಭಾರ್ಗವನು ಅವನನ್ನು ಹಾಗೆಯೇ ನಿಲ್ಲಿಸಿಬಿಟ್ಟನು. ಅವನನ್ನು ಸ್ತಂಭನನ್ನಾಗಿ ಮಾಡಿ ಆ ಸುಮಹಾತೇಜಸ್ವಿ ಚ್ಯವನನು ಮಂತ್ರಪೂರ್ವಕ ಆಹುತಿಯನ್ನು ಅಗ್ನಿಯಲ್ಲಿ ಹಾಕಿ ದೇವ ಇಂದ್ರನನ್ನು

ಹಿಂಸಿಸಲು ಎದುರಾದನು.

ಅನಂತರ ಅವನ ತಪೋಬಲದಿಂದ ಹುಟ್ಟಿದ ಕಲ್ಪನೆಯೋ ಎಂಬಂತೆ ಮದ ಎಂಬ ಹೆಸರಿನ ಮಹಾವೀರ, ಮಹಾಕಾಯ, ಮಹಾಸುರನು ಹುಟ್ಟಿದನು. ಅವನ ಶರೀರವನ್ನು ನಿಯಂತ್ರಿಸಲು ಸುರರೂ ಅಸುರರೂ ಅಶಕ್ತರಾಗಿದ್ದರು. ಅವನ ಬಾಯಿಯು ಘೋರವಾಗಿತ್ತು. ತೀಕ್ಷ್ಣವಾಗಿ ಉಗ್ರವಾಗಿ ಕಾಣುತ್ತಿರುವ ಎರಡು ಕೋರೆದಾಡೆಗಳಿದ್ದವು - ಒಂದು ಭೂಮಿಯ ಮೇಲಿದ್ದರೆ ಇನ್ನೊಂದು ಆಕಾಶವನ್ನು ಮುಟ್ಟುತ್ತಿತ್ತು. ಅವನ ನಾಲ್ಕು ನಾಲಿಗೆಗಳು ನೂರು ನೂರು ಯೋಜನೆಗಳಿದ್ದವು, ಅವನ ಇತರ ಹಲ್ಲುಗಳು ಹತ್ತು ಯೋಜನೆಗಳಿದ್ದು ಕೋಟೆಯ ಗೋಪುರಗಳಂತೆ ಮತ್ತು ಈಟಿಯ ಮೊನಚಾದ ತುದಿಯಂತೆ ಕಾಣುತ್ತಿದ್ದವು. ಅವನ ಬಾಹುಗಳು ಪರ್ವತಸಮಾನವಾಗಿದ್ದವು, ಒಂದೊಂದೂ ಅನಂತ ಯೋಜನೆಗಳಷ್ಟು ಉದ್ದವಾಗಿದ್ದವು. ಅವನ ಕಣ್ಣುಗಳು ಸೂರ್ಯ-ಚಂದ್ರಗಳಂತೆ ಮತ್ತು ಮುಖವು ಸಾವಿನ ಹಾಗೆ ತೋರುತ್ತಿದ್ದವು. ಮಿಂಚಿನಂತೆ ಹರಿದಾಡುತ್ತಿರುವ ನಾಲಿಗೆಗಳಿಂದ ಮುಖವನ್ನು ಸವರುತ್ತಾ, ಬಲಾತ್ಕಾರವಾಗಿ ಇಡೀ ಜಗತ್ತನ್ನೇ ನುಂಗಿಬಿಡುತ್ತಾನೋ ಎಂದು ದೊಡ್ಡಕ್ಕೆ ಬಾಯಿ ಕಳೆದು, ತನ್ನ ಘೋರರೂಪದ ಮಹಾ ಗರ್ಜನೆಯು ಲೋಕಗಳಲ್ಲಿ ಮೊಳಗುತ್ತಿರಲು, ಕೋಪದಿಂದ ಶತಕ್ರತು ಇಂದ್ರನನ್ನು ತಿನ್ನಲು ಓಡಿ ಬಂದನು.

ಮಿಂಚಿನಂತೆ ಹರಿದಾಡುತ್ತಿರುವ ನಾಲಿಗೆಗಳಿಂದ ಮುಖವನ್ನು

ಸವರುತ್ತಾ, ಬಲಾತ್ಕಾರವಾಗಿ ಇಡೀ ಜಗತ್ತನ್ನೇ ನುಂಗಿಬಿಡುತ್ತಾನೋ ಎಂದು ದೊಡ್ಡಕ್ಕೆ ಬಾಯಿ ಕಳೆದು, ತನ್ನ ಘೋರರೂಪದ ಮಹಾ ಗರ್ಜನೆಯು ಲೋಕಗಳಲ್ಲಿ ಮೊಳಗುತ್ತಿರಲು, ಅವನು ಕೋಪದಿಂದ ಶತಕ್ರತು ಇಂದ್ರನನ್ನು ತಿನ್ನಲು ಓಡಿ ಬಂದನು.

> "ಭಾರ್ಗವ! ಇಂದಿನಿಂದ ಅಶ್ವಿನಿಯರು ಸೋಮಕ್ಕೆ ಅರ್ಹರು. ನಾನು ಮುಂದಾಗುವ ಸತ್ಯವನ್ನೇ ಹೇಳುತ್ತಿದ್ದೇನೆ. ನಿನ್ನ ಈ ಸಮಾರಂಭವು ಪರಮ ವಿಧಿವತ್ತಾಗಿ ಮಾಡಿರುವಂಥದ್ದು ಮಿಥ್ಯವಾಗಿಲ್ಲ! ನೀನು ಯಾವ ಕೆಲಸವನ್ನೂ ಸುಳ್ಳಾಗಿಸದ ಹಾಗೆ ಮಾಡುತ್ತೀಯೆ ಎಂದು ತಿಳಿದಿದ್ದೇನೆ. ಇಂದು ನೀನು ಹೇಗೆ ಅಶ್ವಿನಿಯರನ್ನು ಸೋಮಕ್ಕೆ ಅರ್ಹರನ್ನಾಗಿ ಮಾಡಿಸಿದೆಯೋ ಹಾಗೆಯೆ ಆಗಬೇಕಿತ್ತು ಎಂದು ನಾನು ನಿರ್ಧರಿಸಿದ್ದೆ. ಇದರಿಂದ ನಿನ್ನ ವೀರ್ಯದ ಪ್ರದರ್ಶನವಾಯಿತು ಮತ್ತು ಸುಕನ್ಯೆಯ ತಂದೆ ಶರ್ಯಾತಿಯ ಕೀರ್ತಿಯು ಲೋಕಗಳಲ್ಲಿ ಹರಡಿದಂತಾಯಿತು. ಆದುದರಿಂದ ನನ್ನ ಮೇಲೆ ಪ್ರಸನ್ನನಾಗು. ನೀನು ಬಯಸಿದ ಹಾಗೆಯೇ ಆಗಲಿ."

ಶಕ್ರನ ಈ ಮಾತಿಗೆ ಮಹಾತ್ಮ ಚ್ಯವನನ ಸಿಟ್ಟು ಹೊರಟುಹೋಗಿ, ಶೀಘ್ರದಲ್ಲಿಯೇ ಪುರಂದರ ಇಂದ್ರನನ್ನು ಬಿಡುಗಡೆ ಮಾಡಿದನು. ಮದನನ್ನು ವಿಂಗಡಿಸಿ ಒಂದೊಂದರಂತೆ ಮೊದಲೇ ಸೃಷ್ಟಿಯಾಗಿದ್ದ

ಮಾದಕ ಪದಾರ್ಥಗಳಲ್ಲಿ, ಸ್ತ್ರೀಯರಲ್ಲಿ, ಜೂಜಿನಲ್ಲಿ ಮತ್ತು ಬೇಟೆಯಲ್ಲಿ ಹಂಚಿದನು. ಈ ರೀತಿ ಮದನನ್ನು ನಿಯಂತ್ರಿಸಿ ಒಂದು ಬಿಂದುವಿನಿಂದ ಶಕ್ರನನ್ನು, ಅಶ್ವಿನಿಯರನ್ನೂ ಸೇರಿ ದೇವತೆಗಳನ್ನು ತೃಪ್ತಿಪಡಿಸಿ, ರಾಜನ ಯಜ್ಞವನ್ನು ಸಂಪೂರ್ಣಗೊಳಿಸಿ, ತನ್ನ ವೀರ್ಯವನ್ನು ಸರ್ವಲೋಕಗಳಿಗೆ ತಿಳಿಸಿ ಆ ಮಾತುಗಾರರಲ್ಲಿ ಶ್ರೇಷ್ಠ ಚ್ಯವನನು ಸುಕನ್ಯೆಯೊಡನೆ ಅನುರಕ್ತನಾಗಿ ಒಟ್ಟಿಗೇ ಅರಣ್ಯದಲ್ಲಿ ವಿಹರಿಸಿದನು.

# ಮಾಂಧಾತಾ

[ರಾಜಾ ಮಾಂಧಾತನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೨೬) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಇಕ್ಷ್ವಾಕು ವಂಶದಲ್ಲಿ ಯುವನಾಶ್ವ (ಸೌದ್ಯುಮ್ನಿ) ಎನ್ನುವ ಮಹೀಪತಿಯು ಹುಟ್ಟಿದ್ದನು. ಆ ಪೃಥ್ವೀಪಾಲನು ಭೂರಿದಕ್ಷಿಣೆಗಳನ್ನೊಡಗೂಡಿದ ಕ್ರತುವಿಗೆ ಯಜಮಾನನಾಗಿದ್ದನು. ಧರ್ಮಭೃತರಲ್ಲಿ ಶ್ರೇಷ್ಠನಾದ ಅವನು ಸಾವಿರ ಅಶ್ವಮೇಧಗಳನ್ನು ಪೂರೈಸಿ, ಇನ್ನೂ ಇತರ ಪ್ರಮುಖ ಕ್ರತುಗಳನ್ನು ಆಪ್ತರು ಮತ್ತು

ದಕ್ಷಿಣೆಗಳೊಂದಿಗೆ ಕೈಗೊಂಡನು. ಆದರೆ ಆ ದೃಢವ್ರತ ಮಹಾತ್ಮ ರಾಜರ್ಷಿಗೆ ಮಕ್ಕಳಿರಲಿಲ್ಲ. ಆ ರಾಜ್ಯವನ್ನು ಮಂತ್ರಿಗಳಿಗೊಪ್ಪಿಸಿ ಅವನು ವನದಲ್ಲಿಯೇ ನಿತ್ಯ ವಾಸಿಸತೊಡಗಿದನು. ತನ್ನನ್ನು ಶಾಸ್ತ್ರಗಳಲ್ಲಿ ಹೇಳಿದ ವಿಧಿಗಳಿಗೆ ತೊಡಗಿಸಿಕೊಂಡು, ಬಾಯಾರಿಕೆಯಿಂದ ಒಣಗಿದ ಹೃದಯದವನಾಗಿ ಅವನು ಭೃಗುವಿನ ಆಶ್ರಮವನ್ನು ಪ್ರವೇಶಿಸಿದನು. ಅದೇ ರಾತ್ರಿ ಮಹಾತ್ಮ ಮಹರ್ಷಿ ಭೃಗುನಂದನನು ಸೌದ್ಯುಮ್ನಿಗೆ ಮಕ್ಕಳಾಗಲೆಂಬ ಕಾರಣದಿಂದ ಯಾಗವನ್ನು ನಡೆಸಿದ್ದನು. ಒಂದು ದೊಡ್ಡ ಕಲಶದಲ್ಲಿ ನೀರನ್ನು ತುಂಬಿ ಮಂತ್ರಗಳಿಂದ ಶುದ್ಧೀಕರಿಸಲಾಗಿತ್ತು. ಅದನ್ನು ಕುಡಿದು ಅವನ ಪತ್ನಿಯು ಶಕ್ರನ ಸಮನಾದ ಮಗನನ್ನು ಪಡೆಯಲೆಂದು ಮೊದಲೇ ಮಂತ್ರಗಳಿಂದ ಶುದ್ಧೀಕರಿಸಿದ ನೀರನ್ನು ದೊಡ್ಡ ಕಲಶದಲ್ಲಿ ತುಂಬಿಸಿಡಲಾಗಿತ್ತು. ಅದನ್ನು ವೇದಿಕೆಯ ಮೇಲಿಟ್ಟು ರಾತ್ರಿಯಿಡೀ ಜಾಗರಣೆ ಮಾಡಿ ಆಯಾಸಗೊಂಡಿದ್ದ ಮಹರ್ಷಿಗಳು ಮಲಗಿದ್ದಾಗ ಅಲ್ಲಿಗೆ ಸೌದ್ಯುಮ್ನಿಯು ಬಂದನು. ಅ ರಾಜನು ಕಂಠವೊಣಗಿ, ಅತಿ ಬಾಯಾರಿಕೆಯಿಂದ ನೀರನ್ನು ಅರಸುತ್ತಾ ಆ ಆಶ್ರಮವನ್ನು ಆಯಾಸದಿಂದ ಪ್ರವೇಶಿಸಿ ನೀರನ್ನು ಕೇಳಿದನು. ಆದರೆ ಒಣಗಿದ ಕಂಠದಿಂದ ನೀರನ್ನು ಯಾಚಿಸಿದ ಆಯಾಸಗೊಂಡ ರಾಜನ ಕೂಗು ಯಾರಿಗೂ ಕೇಳಲಿಲ್ಲ. ಅದು ಹಕ್ಕಿಯ ಕೂಗಿನಂತೆ ಕ್ಷೀಣವಾಗಿತ್ತು. ಆಗ ನೀರಿನಿಂದ ತುಂಬಿದ್ದ ಕಲಶವನ್ನು ನೋಡಿ ಆ ರಾಜನು ಬೇಗನೆ ಅಲ್ಲಿಗೆ ಓಡಿ ಹೋಗಿ ನೀರನ್ನು ಕುಡಿದು ಉಳಿದುದನ್ನು ಚೆಲ್ಲಿದನು. ಆ ತಣ್ಣಗಿನ

ನೀರನ್ನು ಕುಡಿದು ಬಾಯಾರಿಸಿಕೊಂಡ ಧೀಮಂತ ರಾಜನು ಸಂತೋಷದಿಂದ ಅಲ್ಲಿಯೇ ಗಾಢ ನಿದ್ರೆ ಮಾಡಿದನು.

ರಾಜನೊಂದಿಗೆ ಎಚ್ಚರಗೊಂಡ ಋಷಿಗಳು ಎಲ್ಲರೂ ಕಲಶದಿಂದ ನೀರು ಬರಿದಾಗಿದ್ದುದನ್ನು ಕಂಡರು. ಅವರೆಲ್ಲರೂ ಒಟ್ಟಿಗೆ

"ಇದು ಯಾರ ಕಾರ್ಯ?"

ಎಂದು ಕೇಳಲು ಯುವನಾಶ್ವನು

"ನಾನೇ ಅದನ್ನು ಮಾಡಿದ್ದುದು"

ಎಂದು ಸತ್ಯವನ್ನು ಹೇಳಿದನು. ಆಗ ಭಗವಾನ್ ಭಾರ್ಗವನು

"ಅದು ಸರಿಯಲ್ಲ! ಈ ನೀರನ್ನು ತಪಸ್ಸಿನಿಂದ ಸಂಗ್ರಹಿಸಿ ನಿನ್ನ ಮಗನಿಗೋಸ್ಕರವಾಗಿ ಇಡಲಾಗಿತ್ತು"

ಎಂದನು.

"ರಾಜರ್ಷೇ! ನಿನಗೆ ಮಹಾಬಲ ಪರಾಕ್ರಮಿಯಾದ ಮಗನಾಗಲೆಂದು ದಾರುಣವಾದ ತಪಸ್ಸಿನ ನಂತರ ಒಬ್ಬ ಬ್ರಾಹ್ಮಣನನ್ನು ಅದಕ್ಕೆ ನಿಯೋಗಿಸಿದ್ದೆ. ತನ್ನ ವೀರ್ಯದಿಂದ ಶಕ್ರನನ್ನೂ ಯಮಸದನಕ್ಕೆ ಕಳುಹಿಸಬಲ್ಲ ತಪೋಬಲಸಮನ್ವಿತನಾದ, ಮಹಾಬಲಶಾಲಿ, ಮಹಾವೀರ ಮಗನಿಗಾಗಿ. ಈ ವಿಧಿಯಿಂದ ಅದನ್ನು ತಯಾರಿಸಿದ್ದೆ. ಇಂದು

ನೀನು ಅದನ್ನು ಕುಡಿದಿದ್ದುದು ಸರಿಯಲ್ಲ! ಆದರೆ ಇಂದು ನೀನು ಮಾಡಿದ್ದುದನ್ನು ಬೇರೆಯಾಗಿಸುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ನೀನು ಏನು ಮಾಡಿದೆಯೋ ಅದು ದೈವವೇ ನಡೆಸಿದ್ದುದು. ವಿಧಿವತ್ತಾಗಿ ಮಂತ್ರ ಪುರಸ್ಕೃತಗೊಂಡ ನನ್ನ ತಪೋವೀರ್ಯದಿಂದ ತುಂಬಿದ ಆ ನೀರನ್ನು ಬಾಯಾರಿಕೆಯಿಂದ ನೀನು ಕುಡಿದಿದ್ದುದರಿಂದ ಅಂಥಹ ಮಹಾವೀರ ಪುತ್ರನು ನಿನ್ನಲ್ಲಿಯೇ ಹುಟ್ಟುತ್ತಾನೆ. ಈ ಪರಮಾದ್ಭುತ ಇಷ್ಟಿಯನ್ನು ನಿನಗೋಸ್ಕರ ನಾವೇ ಮಾಡುತ್ತೇವೆ. ಇದರಿಂದ ವೀರ್ಯವಂತ ನೀನು ಇಂದ್ರಸಮ ಮಗನಿಗೆ ಜನ್ಮನೀಡುತ್ತೀಯೆ."

ಒಂದು ನೂರು ವರ್ಷಗಳು ತುಂಬಿದ ನಂತರ ಆ ಮಹಾತ್ಮ ರಾಜನ ಎಡಭಾಗವು ಸೀಳಿ ಇನ್ನೊಬ್ಬ ಸೂರ್ಯನಂತೆ ಪ್ರಕಾಶಿಸುವ ಮಹಾತೇಜಸ್ವಿ ಮಗನು ಹೊರಬಂದನು. ಆದರೆ ನರಪತಿ ಯುವನಾಶ್ವನು ಸಾಯಲಿಲ್ಲ ಎನ್ನುವುದೇ ಅದಕ್ಕಿಂತಲೂ ಅದ್ಭುತವಾಗಿದ್ದಿತು. ಆಗ ಮಹಾತೇಜಸ್ವಿ ಇಂದ್ರನು ಅವನನ್ನು ನೋಡಲು ಬಂದನು. ಇಂದ್ರನು ತನ್ನ ತೋರುಬೆರಳನ್ನು ಆ ಶಿಶುವಿನ ಬಾಯಲ್ಲಿಟ್ಟು ಹೇಳಿದನು:

"ಇವನು ನನ್ನಿಂದ ಪೋಷಣೆಯನ್ನು ಪಡೆಯಲಿ!"

ಆದುದರಿಂದ ಇಂದ್ರನೊಂದಿಗೆ ಇತರ ದೇವತೆಗಳು ಅವನಿಗೆ

ಮಾಂಧಾತ ಎಂಬ ಹೆಸರನ್ನಿತ್ತರು. ಇಂದ್ರನು ನೀಡಿದ ತೋರುಬೆರಳನ್ನು ಚೀಪಿದ ಆ ಶಿಶುವು ಹದಿಮೂರು ಕಿಷ್ಕೂಣದಷ್ಟು ಬೆಳೆಯಿತು. ಧನುರ್ವೇದದೊಂದಿಗೆ ವೇದಗಳು, ದಿವ್ಯಾಸ್ತ್ರಗಳು ಎಲ್ಲವೂ ಆ ರಾಜನಿಗೆ, ಕೇವಲ ನೆನೆಸಿಕೊಂಡಿದ್ದಕ್ಕೇ, ಕಾಣಿಸಿಕೊಂಡವು. ಅಜಗವ ಎಂಬ ಹೆಸರಿನ ಧನುಸ್ಸು, ಶೃಂಗದಿಂದ ಮಾಡಲ್ಪಟ್ಟ ಬಾಣ, ಮತ್ತು ಅಭೇದ್ಯ ಕವಚಗಳು ತಕ್ಷಣವೇ ಅವನ ವಶವಾದವು. ಮಘವತ ಇಂದ್ರನೇ ಅವನನ್ನು ಅಭಿಷೇಕಿಸಿದನು ಮತ್ತು ವಿಕ್ರಮದಿಂದ ವಿಷ್ಣುವು ಹೇಗೋ ಹಾಗೆ ಧರ್ಮದಿಂದ ಮೂರು ಲೋಕಗಳನ್ನೂ ಗೆದ್ದನು. ಆ ಮಹಾತ್ಮನ ಚಕ್ರವು ಅಪ್ರತಿಹತವಾಗಿ ಉರುಳಿತು ಮತ್ತು ತಮ್ಮ ಇಚ್ಛೆಯಿಂದಲೇ ರತ್ನಗಳು ರಾಜರ್ಷಿಗೆ ಬಂದು ಸೇರಿದವು. ಸಂಪತ್ತಿನಿಂದ ತುಂಬಿದ ಈ ಭೂಮಿಯು ಸಂಪೂರ್ಣವಾಗಿ ಅವನದ್ದಾಗಿತ್ತು. ಬಹಳಷ್ಟು ದಕ್ಷಿಣೆಗಳಿಂದ ಕೂಡಿದ ಅನೇಕ ವಿವಿಧ ಯಜ್ಞಗಳನ್ನು ಅವನು ನೆರವೇರಿಸಿದನು. ಸಾಕಷ್ಟು ಯಾಗಚೈತ್ಯಗಳನ್ನು ಮತ್ತು ಧರ್ಮವನ್ನು ಸಂಪಾದಿಸಿದ ಆ ಮಹಾತೇಜಸ್ವಿ ಅಮಿತದ್ಯುತಿಯು ಇಂದ್ರನ ಅರ್ಧ ಸಿಂಹಾಸನವನ್ನು ಪಡೆದನು. ಆ ಧರ್ಮನಿತ್ಯ ಧೀಮಂತನು ಒಂದೇ ಒಂದು ದಿನದಲ್ಲಿ ರತ್ನಗಳ ಗಣಿ ಮತ್ತು ಪಟ್ಟಣಗಳೊಡನೆ ಇಡೀ ಭೂಮಿಯನ್ನೇ ತನ್ನ ಶಾಸನದಡಿಯಲ್ಲಿ ತಂದನು. ನಾಲ್ಕು ಮೂಲೆಗಳನ್ನು ಹೊಂದಿದ್ದ ಭೂಮಿಯು ಭೂರಿದಕ್ಷಿಣೆಗಳಿಂದ ಅವನು ನೆರವೇರಿಸಿದ್ದ ಕ್ರತುಗಳ ಯಾಗವೇದಿಕೆಗಳಿಂದ ತುಂಬಿಹೋಗಿತ್ತು. ಒಂದು ಸ್ಥಳವೂ ಬಿಟ್ಟಿರಲಿಲ್ಲ.

ಆ ಮಹಾತ್ಮನು ಸಹಸ್ರಾರು ಪದ್ಮಗಳಷ್ಟು ಹಸುಗಳನ್ನು ಬ್ರಾಹ್ಮಣರಿಗೆ ದಾನವನ್ನಾಗಿತ್ತ ಎಂದು ಹೇಳುತ್ತಾರೆ. ಹನ್ನೆರಡು ವರ್ಷಗಳ ಅನಾವೃಷ್ಟಿಯಾದಾಗ ಆ ಮಹಾತ್ಮನು ಸಸ್ಯಗಳು ಬೆಳೆಯಲೋಸುಗ ಇಂದ್ರನು ನೋಡುತ್ತಿದ್ದಂತೆಯೇ ಮಳೆಯನ್ನು ಸುರಿಸಿದನು. ಆ ಸೋಮಕುಲೋತ್ಪನ್ನನು ಮಹಾಮೇಘಗಳಂತಿರುವ ಬಾಣಗಳಿಂದ ಮಹಾ ಗಾಂಧಾರಾಧಿಪತಿಯನ್ನು ವಶಪಡಿಸಿಕೊಂಡನು. ಆ ಮಹಾತ್ಮನು ಚತುರ್ವಿಧ ಪ್ರಜೆಗಳನ್ನು ಗೆದ್ದು ಆತ್ಮತಪಸ್ಸಿನ ತೇಜಸ್ಸಿನಿಂದ ಲೋಕಗಳಲ್ಲಿ ತನ್ನ ಶಾಸನವನ್ನು ಸ್ಥಾಪಿಸಿದನು.

# ಸೋಮಕ-ಜಂತು

[ರಾಜಾ ಸೋಮಕ ಮತ್ತು ಅವನ ಮಗ ಜಂತುವಿನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೨೭-೧೨೮) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಸೋಮಕ ಎಂಬ ಹೆಸರಿನ ಧಾರ್ಮಿಕ ರಾಜನಿದ್ದನು. ಅವನಿಗೆ ಸದೃಶರಾದ ನೂರು ಪತ್ನಿಯರಿದ್ದರು. ಆದರೆ ಆ ಮಹೀಪತಿಯು ಎಷ್ಟು ಪ್ರಯತ್ನಿಸಿದರೂ ಬಹಳ ಕಾಲದವರೆಗೆ ಅವರಲ್ಲಿ ಮಗನನ್ನು

ಪಡೆಯಲಾಗಲಿಲ್ಲ. ಹೀಗೆ ಅವನು ಪ್ರಯತ್ನಿಸುತ್ತಿರಲು, ವೃದ್ಧಾಪ್ಯದಲ್ಲಿ ಜಂತು ಎನ್ನುವ ಓರ್ವ ಮಗನು ಆ ನೂರು ಸ್ತ್ರೀಯರಲ್ಲಿ ಹುಟ್ಟಿದನು. ಅವನು ಹುಟ್ಟಿದಾಗ ಎಲ್ಲ ತಾಯಂದಿರೂ ಅವನನ್ನು ಸುತ್ತುವರೆದು ಸದಾಕಾಲವೂ ಅವನನ್ನು ಎತ್ತಿ ಹಿಡಿದು ಅವನ ಕಾಮಭೋಗಗಳನ್ನೆಲ್ಲಾ ಪೂರೈಸುತ್ತಿದ್ದರು. ಒಂದು ದಿನ ಜಂತುವಿನ ಕುಂಡೆಯನ್ನು ಒಂದು ಇರುವೆಯು ಕಚ್ಚಿತು ಮತ್ತು ಅದರಿಂದ ದುಃಖಿತನಾದ ಬಾಲಕನು ನೋವಿನಿಂದ ಕಿರುಚಿದನು. ಆಗ ಅವನ ಎಲ್ಲ ತಾಯಂದಿರೂ ಬಹು ದುಃಖಿತರಾಗಿ ಜಂತುವನ್ನು ಸುತ್ತುವರಿದು ಅವನೊಂದಿಗೆ ರೋದಿಸಿದರು, ಮತ್ತು ಅವರ ರೋದನೆಯು ಜೋರಾಗಿ ಕೇಳಿಸುತ್ತಿತ್ತು. ಅಮಾತ್ಯರು ಮತ್ತು ಪುರೋಹಿತರ ಮಧ್ಯೆ ಸಮಾಲೋಚನೆಯಲ್ಲಿ ಕುಳಿತಿದ್ದ ರಾಜನು ಒಮ್ಮೆಗೇ ಬಂದ ಆ ಅರ್ತನಾದವನ್ನು ಕೇಳಿದನು. ತಕ್ಷಣವೇ ರಾಜನು ಅದೇನೆಂದು ಕಂಡುಕೊಂಡುಬರಲು ಸೇವಕನನ್ನು ಕಳುಹಿಸಲು, ಆ ಸೇವಕನು ಹಿಂದಿರುಗಿ ಬಂದು ಅವನ ಮಗನಿಗಾದುದರ ಕುರಿತು ವರದಿಮಾಡಿದನು. ಆ ಅರಿಂದಮ ಸೋಮಕನು ಮಂತ್ರಿಗಳೊಡನೆ ಅವಸರದಿಂದ ಮೇಲೆದ್ದು ಅಂತಃಪುರವನ್ನು ಹೊಕ್ಕು ಮಗನನ್ನು ಸಂತೈಸಿದನು. ಮಗನನ್ನು ಸಂತವಿಸಿ ರಾಜನು ಅಂತಃಪುರದಿಂದ ಹೊರಬಂದನು ಮತ್ತು ತನ್ನ ಋತ್ವಿಜ ಮತ್ತು ಅಮಾತ್ಯರೊಂದಿಗೆ ಕುಳಿತುಕೊಂಡನು. ಸೋಮಕನು ಹೇಳಿದನು:

“ಒಬ್ಬನೇ ಮಗನಿದ್ದುದಕ್ಕೆ ಧಿಕ್ಕಾರ! ಇದಕ್ಕಿಂತಲೂ ಮಕ್ಕಳೇ

ಇಲ್ಲದಿದ್ದರೆ ಒಳ್ಳೆಯದಾಗಿರುತ್ತಿತ್ತು. ಎಲ್ಲ ಜೀವಿಗಳಿಗೂ ನಿತ್ಯವೂ ಒಂದಿಲ್ಲೊಂದು ತೊಂದರೆಯಿರುವುದರಿಂದ ಒಬ್ಬನೇ ಮಗನಿದ್ದರೆ ಶೋಕವು ತಪ್ಪಿದ್ದಲ್ಲ. ಬ್ರಾಹ್ಮಣ! ಮಕ್ಕಳಾಗಲೆಂದು ಸರಿಯಾಗಿ ಪರೀಕ್ಷೆಮಾಡಿಯೇ ಈ ನೂರು ಪತ್ನಿಯರನ್ನು ನಾನು ವರಿಸಿದರೂ ಯಾರೂ ಮಕ್ಕಳನ್ನು ಪಡೆಯಲಿಲ್ಲ! ಅವರೆಲ್ಲರ ಮೇಲೆ ಪ್ರಯತ್ನಿಸಿದರೂ ಹೇಗೋ ಈ ಜಂತುವು ನನ್ನ ಮಗನಾಗಿ ಹುಟ್ಟಿದನು. ಇದಕ್ಕಿಂತ ಪರಮ ದುಃಖವು ಇನ್ನ್ಯಾವುದಿರಬಹುದು? ನನ್ನ ಮತ್ತು ನನ್ನ ಪತ್ನಿಯರ ವಯಸ್ಸು ಮೀರಿಯಾಗಿದೆ. ಅವರಂತೆ ನನ್ನ ಪ್ರಾಣವೂ ಕೂಡ ಈ ಓರ್ವ ಮಗನ ಮೇಲೆ ನಿಂತಿದೆ. ನೂರು ಮಕ್ಕಳಾಗುವ ಬೇರೆ ಯಾವುದಾದರೂ, ಎಷ್ಟೇ ದೊಡ್ಡದಾಗಲೀ, ಸಣ್ಣದಾಗಲೀ ಅಥವಾ ದುಷ್ಕರವಾಗಿರಲೀ, ಕರ್ಮವಿಲ್ಲವೇ?”

ಋತ್ವಿಜನು ಹೇಳಿದನು:

“ನೀನು ಬಯಸಿದಂತೆ ನೂರು ಪುತ್ರರನ್ನು ಪಡೆಯುವ ಒಂದು ಕರ್ಮವಿದ್ದೇ ಇದೆ. ಸೋಮಕ! ನೀನು ಮಾಡುವೆಯಂತಾದರೆ ನಾನು ಆ ಕರ್ಮದ ಕುರಿತು ಹೇಳುತ್ತೇನೆ.”

ಸೋಮಕನು ಹೇಳಿದನು:

“ಕಾರ್ಯವನ್ನು ಮಾಡಬಹುದೋ ಅಥವಾ ಮಾಡಬಾರದೋ

- ನೂರು ಮಕ್ಕಳನ್ನು ಪಡೆಯುವ ಕಾರ್ಯವಿದ್ದರೆ ಹೇಳು.
ಭಗವಾನ್! ಆ ವಿಧಿಯ ಕುರಿತು ನನಗೆ ವಿವರಿಸಿ ಹೇಳು."

ಋತ್ವಿಜನು ಹೇಳಿದನು:

"ರಾಜನ್! ನಾನು ಆ ಕ್ರತುವನ್ನು ನಡೆಸಿಕೊಡುತ್ತೇನೆ. ಅದರಲ್ಲಿ ಜಂತುವನ್ನು ಆಹುತಿಯನ್ನಾಗಿ ನೀಡು. ತಕ್ಷಣವೇ ನೀನು ನೂರು ಶ್ರೀಮಂತ ಮಕ್ಕಳನ್ನು ಪಡೆಯುತ್ತೀಯೆ. ಅವನ ಕೊಬ್ಬನ್ನು ಆಹುತಿಯನ್ನಾಗಿ ನೀಡುವಾಗ ತಾಯಂದಿರು ಹೊಗೆಯನ್ನು ಸೇವಿಸಬೇಕು. ಆಗ ಅವರಲ್ಲಿ ನಿನಗೆ ಮಹಾವೀರರಾದ ಮಕ್ಕಳು ಜನಿಸುತ್ತಾರೆ. ಜಂತುವು ನಿನ್ನ ಮಗನಾಗಿ ಅವಳಲ್ಲಿಯೇ ಪುನಃ ಹುಟ್ಟುತ್ತಾನೆ. ಅವನ ಎಡಬದಿಯಲ್ಲಿ ಬಂಗಾರದ ಚಿಹ್ನೆಯು ಇರುವುದು."

ಸೋಮಕನು ಹೇಳಿದನು:

"ಬ್ರಹ್ಮನ್! ಯಾವ್ಯಾವಾಗ ಏನೇನನ್ನು ಮಾಡಬೇಕೋ ಹಾಗೆಯೇ ಮಾಡು. ಮಕ್ಕಳನ್ನು ಪಡೆಯುವ ಆಸೆಯಿಂದ ನೀನು ಹೇಳಿದುದೆಲ್ಲವನ್ನೂ ಮಾಡುತ್ತೇನೆ."

ಅನಂತರ ಅವನು ಸೋಮಕನಿಗಾಗಿ ಜಂತುವನ್ನು ಆಹುತಿಯನ್ನಾಗಿತ್ತನು. ಆದರೆ ಕೃಪಾನ್ವಿತ ತಾಯಂದಿರು ಆ ಬಾಲಕನನ್ನು ಬಲಾತ್ಕಾರವಾಗಿ ಎಳೆದಿಟ್ಟುಕೊಂಡರು.

"ಅಯ್ಯೋ ನಾವು ನಾಶಗೊಂಡೆವು !"

ಎಂದು ತೀವ್ರ ಶೋಕಸಮಾನ್ವಿತರಾಗಿ ಆ ತಾಯಂದಿರು ಅವನ ಬಲಗೈಯನ್ನು ಹಿಡಿದು ಎಳೆದರು. ಆದರೆ ಯಾಜಕನು ಅವನ ಎಡಗೈಯನ್ನು ಹಿಡಿದು ಹಿಂದಕ್ಕೆ ಎಳೆದುಕೊಂಡನು. ಚೀರಾಡುತ್ತಿರುವ ಆರ್ತರಿಂದ ಆ ಮಗನನನ್ನು ಎಳೆದು ವಿಧಿವತ್ತಾಗಿ ಅವನನ್ನು ಅಗ್ನಿಯಲ್ಲಿ ಆಹುತಿಯನ್ನಾಗಿತ್ತನು. ಅವನ ದೇಹವನ್ನು ಆಹುತಿಯನ್ನಾಗಿ ಕೊಡುತ್ತಿರುವಾಗ ಆರ್ತ ತಾಯಂದಿರು ಆ ಹೊಗೆಯನ್ನು ಸೇವಿಸಿ ತಕ್ಷಣವೇ ಭುಮಿಯ ಮೇಲೆ ಉರುಳಿ ಬಿದ್ದರು. ಅನಂತರ ರಾಜನ ಪತ್ನಿಯರೆಲ್ಲರೂ ಗರ್ಭವತಿಯರಾದರು. ಹತ್ತು ತಿಂಗಳಿನ ನಂತರ ಸೋಮಕನಿಗೆ ಅವರೆಲ್ಲರಲ್ಲಿ ಸಂಪೂರ್ಣವಾಗಿ ಒಂದು ನೂರು ಮಕ್ಕಳು ಜನಿಸಿದರು. ಅದೇ ತಾಯಿಯಲ್ಲಿ ಜಂತುವು ಹಿರಿಯವನಾಗಿ ಜನಿಸಿದನು. ಮತ್ತು ಅವರೆಲ್ಲರೂ ತಮ್ಮದೇ ಮಕ್ಕಳಿಗಿಂತ ಅಧಿಕವಾಗಿ ಅವನನ್ನು ಪ್ರೀತಿಸಿದರು. ಅವನ ಎಡಭಾಗದಲ್ಲಿ ಬಂಗಾರದ ಚಿಹ್ನೆಯಿತ್ತು. ಗುಣಗಳಿಂದ ಸಮಾಯುಕ್ತನಾಗಿ ಅವನು ನೂರು ಮಕ್ಕಳಲ್ಲಿ ಅಗ್ರನೆನಿಸಿಕೊಂಡನು.

ಅನಂತರ ಸೋಮಕನ ಗುರುವು ಪರಮ ಲೋಕವನ್ನು ಸೇರಿದನು. ಕಾಲಕಳೆದಂತೆ ಸೋಮಕನೂ ಕೂಡ ಪರಮ ಗತಿಯನ್ನು ಹೊಂದಿದನು. ಅಲ್ಲಿ ಗುರುವು ಘೋರ ನರಕದಲ್ಲಿ ಸುಡುತ್ತಿರುವುದನ್ನು ಕಂಡನು. ಆಗ ನೀನು ಏಕೆ ನರಕದಲ್ಲಿ ಸುಡುತ್ತಿದ್ದೀಯೆ ಎಂದು ರಾಜನು ಆ ದ್ವಿಜನನ್ನು

ಕೇಳಿದನು. ಅಗ್ನಿಯಲ್ಲಿ ಚೆನ್ನಾಗಿ ಸುಡುತ್ತಿರುವ ಅವನ ಗುರುವು ಹೇಳಿದನು:

> “ರಾಜನ್! ನಿನಗೋಸ್ಕರ ನಾನು ಆ ಯಜ್ಞವನ್ನು ನಡೆಸಿದೆ. ಆ ಕರ್ಮದ ಫಲವೇ ಇದು!”

ಇದನ್ನು ಕೇಳಿದ ಆ ರಾಜರ್ಷಿಯು ಧರ್ಮರಾಜನಿಗೆ ಹೇಳಿದನು:

> “ನನ್ನ ಯಾಜಕನನ್ನು ಬಿಡುಗಡೆಮಾಡು. ನಾನು ಅವನ ಜಾಗಕ್ಕೆ ಹೋಗುತ್ತೇನೆ. ನನಗಾಗಿ ಮಾಡಿದ ಕಾರ್ಯದಿಂದಲೇ ಆ ಮಹಾಭಾಗನು ನರಕಾಗ್ನಿಯಲ್ಲಿ ಸುಡುತ್ತಿದ್ದಾನೆ.”

ಧರ್ಮನು ಹೇಳಿದನು:

> “ರಾಜನ್! ಒಬ್ಬನು ಮಾಡಿದುದರ ಫಲವನ್ನು ಇನ್ನೊಬ್ಬನು ಎಂದೂ ಅನುಭವಿಸುವುದಿಲ್ಲ. ನೀನು ನೋಡುತ್ತಿರುವುದು ನಿನ್ನ ಫಲಗಳು.”

ಸೋಮಕನು ಹೇಳಿದನು:

> “ಈ ಬ್ರಹ್ಮವಾದಿನಿಯಿಲ್ಲದೇ ನಾನು ಲೋಕದ ಪುಣ್ಯಗಳನ್ನು ಬಯಸುವುದಿಲ್ಲ. ಧರ್ಮರಾಜ! ಇವನೊಟ್ಟಿಗೆ ವಾಸಿಸಲು - ಸುರಾಲಯವಿರಲಿ ಅಥವಾ ನರಕದಲ್ಲಿರಲಿ – ಬಯಸುತ್ತೇನೆ. ಇವನ ಕರ್ಮವೂ ನನ್ನ ಕರ್ಮವೂ ಒಂದೇ. ಪುಣ್ಯವಾಗಿರಲಿ ಅಪುಣ್ಯವಾಗಿರಲಿ ನಾವಿಬ್ಬರು ಒಂದೇ ಫಲವನ್ನು

ಹಂಚಿಕೊಳ್ಳಬೇಕು.”

ಧರ್ಮನು ಹೇಳಿದನು:

“ರಾಜನ್! ಅದನ್ನೇ ನೀನು ಬಯಸುವೆಯಾದರೆ ಅವನೊಂದಿಗೆ ಅವನ ಫಲವನ್ನು ಅಷ್ಟೇ ಕಾಲ ಅನುಭವಿಸು. ಅನಂತರ ಸದ್ಗತಿಯನ್ನು ಹೊಂದುತ್ತೀಯೆ.”

ಆ ರಾಜೀವಲೋಚನ ರಾಜನು ಹಾಗೆಯೇ ಎಲ್ಲವನ್ನೂ ಮಾಡಿದನು ಮತ್ತು ಗುರುಪ್ರಿಯನಾದ ಅವನು ಆ ವಿಪ್ರ ಗುರುವಿನೊಂದಿಗೆ ಪುನಃ ತನ್ನ ಕರ್ಮಗಳಿಂದ ಗೆದ್ದಿದ್ದ ಶುಭ ಲೋಕಗಳನ್ನು ಪಡೆದನು.

# ಗಿಡುಗ-ಪಾರಿವಾಳ

[ಇಂದ್ರ ಮತ್ತು ಅಗ್ನಿಯರು ಗಿಡುಗ-ಪಾರಿವಾಳಗಳಾಗಿ ರಾಜಾ ಉಶೀನರನನ್ನು ಪರೀಕ್ಷಿಸಿದ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೩೦-೧೩೧) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಉಶೀನರನು ದೇವತೆಗಳಿಗೆ ಸಮಾನನೋ ಎಂದು ಪರೀಕ್ಷಿಸಲು ಒಮ್ಮೆ ಇಂದ್ರ ಮತ್ತು ಅಗ್ನಿಯರು ಆ ರಾಜನಲ್ಲಿಗೆ ಬಂದರು. ಮಹಾತ್ಮ ಉಶೀನರನನ್ನು ಪರೀಕ್ಷಿಸಲು ಮತ್ತು ವರಗಳನ್ನು ನೀಡಲು ಇಂದ್ರನು ಒಂದು ಗಿಡುಗವಾಗಿ ಮತ್ತು ಅಗ್ನಿಯು ಒಂದು ಪಾರಿವಾಳವಾಗಿ ಅವನ

ಯಜ್ಞಶಾಲೆಗೆ ಆಗಮಿಸಿದರು. ಗಿಡುಗದ ಭಯದಿಂದ ಪಾರಿವಾಳವು ರಾಜನ ತೊಡೆಯಮೇಲೆ ಕುಳಿತುಕೊಂಡು ಭಯಪೀಡಿತನಾಗಿ ರಕ್ಷಣೆಯನ್ನು ಕೇಳಿತು. ಗಿಡುಗವು ಹೇಳಿತು:

> "ರಾಜನ್! ಮಹೀಕ್ಷಿತರೆಲ್ಲರೂ ನೀನೊಬ್ಬ ಧರ್ಮಾತ್ಮನೆಂದು ಕರೆಯುತ್ತಾರೆ. ಹಾಗಿರುವಾಗ ಯಾಕೆ ಈ ಧರ್ಮವಿರುದ್ಧವಾದ ಕಾರ್ಯವನ್ನು ಮಾಡಲು ಬಯಸುತ್ತಿದ್ದೀಯೆ? ಹಸಿವೆಯಿಂದ ತಳಮಳಿಸುತ್ತಿರುವ ನನಗೆ ಆಹಾರವನ್ನು ತಡೆಯಬೇಡ. ಧರ್ಮದಿಂದ ನನಗಾಗಿರುವ ಆಹಾರವನ್ನು ಕೊಡದೇ ನೀನು ಧರ್ಮವನ್ನೇ ಬಿಸಾಡುತ್ತಿದ್ದೀಯೆ."

ರಾಜನು ಹೇಳಿದನು:

> "ಮಹಾಪಕ್ಷಿಯೇ! ನಿನ್ನ ಭಯದಿಂದ ನಡುಗುತ್ತಾ ರಕ್ಷಣೆಯನ್ನರಸಿಕೊಂಡು ನನ್ನ ಬಳಿ ಸೇರಿ ಈ ಪಕ್ಷಿಯು ಪ್ರಾಣವನ್ನು ಬೇಡಿಕೊಂಡಿದೆ. ಈ ರೀತಿ ಇಲ್ಲಿಗೆ ಬಂದು ಅಭಯವನ್ನು ಯಾಚಿಸುವ ಪಾರಿವಾಳಕ್ಕೆ ಅಭಯವನ್ನು ಕೊಡದೇ ಇದ್ದರೆ ಅದು ಪರಮ ಅಧರ್ಮವಾಗುತ್ತದೆ ಎಂದು ನಿನಗೆ ಕಾಣುತ್ತಿಲ್ಲವೇ? ಈ ಪಾರಿವಾಳವು ಭ್ರಾಂತಗೊಂಡು ನಡುಗುತ್ತಿರುವಂತೆ ಕಾಣುತ್ತದೆ. ಜೀವವನ್ನು ಬೇಡಿಕೊಂಡು ನನ್ನ ಬಳಿಬಂದಿರುವ ಇದನ್ನು ತ್ಯಜಿಸುವುದು ನಿಂದನೀಯ."

ಗಿಡುಗವು ಹೇಳಿತು:

"ಮಹೀಪತೇ! ಸರ್ವಭೂತಗಳೂ (ಇರುವ ಎಲ್ಲವೂ) ಆಹಾರದಿಂದಲೇ ಜೀವಿಸುತ್ತವೆ. ಆಹಾರದಿಂದಲೇ ಬೆಳೆಯುತ್ತವೆ ಮತ್ತು ಅದರಿಂದಲೇ ಜಂತುಗಳು ಜೀವಿಸುತ್ತವೆ. ತ್ಯಜಿಸಲು ಕಷ್ಟವಾದ ವಸ್ತುಗಳಿಲ್ಲದೆಯೂ ಮನುಷ್ಯನು ಬಹಳಷ್ಟು ಕಾಲ ಜೀವಿಸಬಹುದು. ಆದರೆ ಆಹಾರವಿಲ್ಲದೇ ಅವನು ಬಹಳಷ್ಟು ಕಾಲ ಜೀವಿಸಿರಲು ಸಾಧ್ಯವಿಲ್ಲ. ಇಂದು ನನ್ನ ಆಹಾರದಿಂದ ವಂಚಿತನಾದರೆ ನನ್ನ ಪ್ರಾಣವು ದೇಹವನ್ನು ತೊರೆದು ಹಿಂದಿರುಗಿ ಬರಲಿಕ್ಕಾಗದೇ ಇರುವ ದಾರಿಯನ್ನು ಹಿಡಿಯುತ್ತದೆ. ನಾನು ಮೊದಲೇ ತೀರಿಕೊಂಡರೆ ನನ್ನ ಹೆಂಡತಿ ಮತ್ತು ಮಗು ನಾಶಹೊಂದುತ್ತಾರೆ. ಈ ಪಾರಿವಾಳವನ್ನು ನೀನು ರಕ್ಷಿಸಿದರೆ ಬಹಳಷ್ಟು ಪ್ರಾಣಗಳು ನಾಶಹೊಂದುತ್ತವೆ. ಧರ್ಮವನ್ನು ಬಾಧಿಸುವ ಧರ್ಮವು ಧರ್ಮವಲ್ಲ. ಅದು ಕುಧರ್ಮ. ಧರ್ಮಕ್ಕೆ ಅವಿರೋಧಿಯಾಗಿರುವುದೇ ಧರ್ಮ. ಎರಡು ವಿಷಯಗಳು ಒಂದಕ್ಕೊಂದು ವಿರೋಧವಾಗಿರುವಾಗ ಯಾವುದು ಹೆಚ್ಚು ಮತ್ತು ಯಾವುದು ಕೀಳು ಎನ್ನುವುದನ್ನು ನಿಶ್ಚಯಿಸು. ಏನನ್ನೂ ಬಾಧಿಸದೇ ಇರುವಂಥ ಧರ್ಮವನ್ನು ಎಲ್ಲರೂ ಆಚರಿಸಬೇಕು. ಯಾವುದು ಹೆಚ್ಚಿನದು ಮತ್ತು ಯಾವುದು ಕೀಳಾಗಿದ್ದುದು ಎಂದು ತಿಳಿದು ಧರ್ಮಾಧರ್ಮಗಳನ್ನು ನಿಶ್ಚಯಿಸಿ ಯಾವುದು ಹೆಚ್ಚು ಒಳ್ಳೆಯದನ್ನು ಮಾಡುತ್ತದೆಯೋ

ಅದನ್ನೇ ಧರ್ಮವೆಂದು ನಿಶ್ಚಯಿಸಿ ಮಾಡು.”

ರಾಜನು ಹೇಳಿದನು:

“ವಿಹಗೋತ್ತಮ! ನೀನು ತುಂಬಾ ಚೆನ್ನಾಗಿ ಮಾತನಾಡುತ್ತೀಯೆ. ಸುಂದರ ರೆಕ್ಕೆಗಳನ್ನುಳ್ಳ ನೀನು ಧರ್ಮವನ್ನು ತಿಳಿದಿದ್ದೀಯೆ ಎನ್ನುವುದರಲ್ಲಿ ಸಂಶಯವಾದರೂ ಏಕೆ? ಧರ್ಮಸಂಯುಕ್ತವಾದ ದೀರ್ಘವಾದ ವಿಚಿತ್ರ ಮಾತುಗಳನ್ನಾಡಿದ್ದೀಯೆ. ನೀನು ಹೇಳಿದುದರಲ್ಲಿ ಅಸತ್ಯವೇನೂ ನನಗೆ ಕಾಣುವುದಿಲ್ಲ. ಶರಣಾರ್ಥಿಯನ್ನು ತ್ಯಜಿಸುವುದು ಒಳ್ಳೆಯದು ಎಂದು ಹೇಗೆ ಹೇಳುತ್ತೀಯೆ? ಇದೆಲ್ಲವೂ ನೀನು ಆಹಾರವನ್ನು ಹುಡುಕುವುದರಿಂದ ಪ್ರಾರಂಭವಾಯಿತು. ಆದರೆ ನೀನು ಬೇರೆ ರೀತಿಯಲ್ಲಿ ಇನ್ನೂ ಒಳ್ಳೆಯ ಆಹಾರವನ್ನು ಪಡೆಯಲು ಶಕ್ಯನಾಗಿದ್ದೀಯೆ. ಹಸು, ಹೋರಿ, ಅಥವಾ ಹಂದಿ, ಅಥವಾ ಜಿಂಕೆ ಅಥವಾ ಎಮ್ಮೆಯನ್ನಾದರೂ ಅಥವಾ ನೀನು ಏನನ್ನು ಬಯಸುತ್ತೀಯೋ ಅದನ್ನು ನಿನಗೋಸ್ಕರ ಬಡಿಸುತ್ತೇನೆ.”

ಗಿಡುಗವು ಹೇಳಿತು:

“ಮಹಾರಾಜ! ನಾನು ಹಂದಿಯಾಗಲೀ, ಎತ್ತುಗಳನ್ನಾಗಲೀ ಅಥವಾ ವಿವಿಧ ರೀತಿಯ ಜಿಂಕೆಗಳನ್ನಾಗಲೀ ತಿನ್ನುವುದಿಲ್ಲ. ಅವುಗಳ ಮಾಂಸವು ನನಗೇತಕ್ಕೆ? ದೈವವಿಹಿತವಾದ


ಆಹಾರವೇ ನನಗಿರಲಿ. ಈ ಪಾರಿವಾಳವನ್ನೇ ನನಗಾಗಿ ಬಿಟ್ಟುಕೊಡು. ಗಿಡುಗಗಳು ಪಾರಿವಾಳಗಳನ್ನು ತಿನ್ನುತ್ತವೆ ಎನ್ನುವುದು ಸನಾತನ ಸ್ಥಿತಿ. ದಾರಿಯನ್ನು ತಿಳಿಯದೇ ಬಾಳೆಯ ಮರವನ್ನು ಹತ್ತಬೇಡ!"

ರಾಜನು ಹೇಳಿದನು:

"ಪಕ್ಷಿಗಣಗಳಿಂದ ಗೌರವಿಸಲ್ಪಟ್ಟ ನೀನು ಈ ಸಮೃದ್ಧವಾದ ಶಿಬಿರಾಜ್ಯವನ್ನು ಆಳು. ಅಥವಾ ಶರಣಾರ್ಥಿಯಾಗಿ ಬಂದಿರುವ ಈ ಪಕ್ಷಿಯನ್ನು ಬಿಟ್ಟು ನೀನು ಬಯಸುವ ಎಲ್ಲವನ್ನೂ ನಾನು ನಿನಗೆ ಕೊಡುತ್ತೇನೆ. ನಾನು ಏನು ಮಾಡಿದರೆ ನೀನು ಇದನ್ನು ಬಿಟ್ಟುಬಿಡುತ್ತೀಯೆ ಎನ್ನುವುದನ್ನು ಹೇಳು. ನೀನು ಹೇಳಿದಂತೆ ನಾನು ಮಾಡುತ್ತೇನೆ. ಆದರೆ ಈ ಪಾರಿವಾಳವನ್ನು ಮಾತ್ರ ನಾನು ನಿನಗೆ ಕೊಡುವುದಿಲ್ಲ."

ಗಿಡುಗವು ಹೇಳಿತು:

"ಉಶೀನರ! ನೀನು ಈ ಪಾರಿವಾಳವನ್ನು ಪ್ರೀತಿಸುತ್ತೀಯಾದರೆ ನಿನ್ನದೇ ಮಾಂಸವನ್ನು ಕಿತ್ತು ಈ ಪಾರಿವಾಳದ ಸರಿಸಮನಾಗಿ ತೂಕಮಾಡು. ನಿನ್ನ ಮಾಂಸವು ಈ ಪಾರಿವಾಳದ ತೂಕಕ್ಕೆ ಸರಿಸಮವಾದಾಗ ಅದನ್ನು ನೀನು ನನಗೆ ಕೊಡು. ಅದರಿಂದ ನಾನು ಸಂತೃಪ್ತನಾಗುತ್ತೇನೆ."



ರಾಜನು ಹೇಳಿದನು:

> “ಗಿಡುಗವೇ! ನೀನು ಕೇಳುತ್ತಿರುವುದು ನನ್ನ ಅನುಗ್ರಹವೆಂದು ತಿಳಿಯುತ್ತೇನೆ. ಇಂದು ನಾನು ನಿನಗೆ ಇದರ ಸರಿಸಮನಾದ ತೂಕದ ನನ್ನ ಮಾಂಸವನ್ನು ಕೊಡುತ್ತೇನೆ.”

ಆ ಪರಮಧರ್ಮವಿದು ರಾಜನು ತನ್ನ ಮಾಂಸವನ್ನು ಕಿತ್ತು ಪಾರಿವಾಳದ ವಿರುದ್ಧ ತುಲನೆ ಮಾಡಿದನು. ಆದರೆ ತಕ್ಕಡಿಯಲ್ಲಿ ಪಾರಿವಾಳವು ಭಾರವಾಗಿತ್ತು. ಆಗ ರಾಜಾ ಉಶೀನರನು ಪುನಃ ತನ್ನ ಮಾಂಸವನ್ನು ಕಿತ್ತು ಕೊಟ್ಟನು. ಆದರೂ ಅವನ ಮಾಂಸವು ಪಾರಿವಾಳದ ತೂಕಕ್ಕೆ ಸಮನಾಗಲಿಲ್ಲ. ಇನ್ನೂ ತುಂಡುಮಾಡಲು ಮಾಂಸವೇ ಇಲ್ಲದಾಗಲು, ಸ್ವಯಂ ತಾನೇ ತಕ್ಕಡಿಯನ್ನೇರಿದನು.

ಗಿಡುಗವು ಹೇಳಿತು:

> “ಧರ್ಮಜ್ಞ! ನಾನು ಇಂದ್ರ ಮತ್ತು ಪಾರಿವಾಳವು ಅಗ್ನಿಯು. ಧರ್ಮದಲ್ಲಿ ನಿನ್ನನ್ನು ಪರೀಕ್ಷಿಸಲು ನಾವೀರ್ವರು ನಿನ್ನ ಯಜ್ಞವಾಟಿಗೆಗೆ ಬಂದಿದ್ದೇವೆ. ನಿನ್ನ ದೇಹದಿಂದಲೇ ಮಾಂಸವನ್ನು ಕಿತ್ತು ಕೊಟ್ಟಿರುವುದು ನಿನ್ನನ್ನು ಲೋಕದಲ್ಲಿ ಬೆಳಗಿಸಿ ಕೀರ್ತಿವಂತನಾಗಿಸುತ್ತದೆ. ಎಂದಿನವರೆಗೆ ಲೋಕದಲ್ಲಿ ಮನುಷ್ಯರು ನಿನ್ನ ಕುರಿತು ಹೇಳುತ್ತಿರುತ್ತಾರೋ ಅಲ್ಲಿಯ ವರೆಗೆ ನಿನ್ನ ಕೀರ್ತಿಯು ಲೋಕದಲ್ಲಿ ಶಾಶ್ವತವಾಗಿ ನೆಲೆಗೊಳ್ಳುತ್ತದೆ.”

# ಅಷ್ಟಾವಕ್ರ

[ಅಷ್ಟಾವಕ್ರನ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೩೨-೧೩೪) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಉದ್ದಾಲಕನಿಗೆ ಕಹೋಡ ಎನ್ನುವ ಓರ್ವ ನಿಯತನಾದ ಶಿಷ್ಯನಿದ್ದನು. ವಶಾನುವರ್ತಿಯಾದ ಅವನು ದೀರ್ಘಕಾಲದವರೆಗೆ ಆಚಾರ್ಯನ ಶುಶ್ರೂಷೆಯನ್ನು ಮಾಡಿ ಅಧ್ಯಯನ ನಿರತನಾಗಿದ್ದನು. ಅವನ ಸುತ್ತಲೂ ಇನ್ನೂ ಅನೇಕ ವಿಪ್ರರಿದ್ದರೂ ಗುರುವು ಇವನಲ್ಲಿ ವಿಪ್ರನ ಚಿಹ್ನೆಯನ್ನು ಗುರುತಿಸಿ, ಅವನಿಗೆ ಆಗಲೇ ತಾನು ತಿಳಿದುದೆಲ್ಲವನ್ನೂ ಮತ್ತು ತನ್ನ ಮಗಳು ಸುಜಾತಳನ್ನು ಪತ್ನಿಯನ್ನಾಗಿಯೂ ನೀಡಿದನು. ಅವಳಿಗೆ ಅಗ್ನಿಸಮಾನವಾದ ಗರ್ಭವಾಯಿತು. ಅದು ಅಧ್ಯಯನ ಮಾಡುತ್ತಿರುವ ತನ್ನ ತಂದೆಗೆ ಹೇಳಿತು:

> “ತಂದೇ! ರಾತ್ರಿಯಿಡೀ ಅಧ್ಯಯನವನ್ನು ಮಾಡುತ್ತಿರುತ್ತೀಯೆ. ಆದರೂ ನಿನಗೆ ಸರಿಯಾಗಿ ಬರುತ್ತಿಲ್ಲ!”

ಶಿಷ್ಯರ ಮಧ್ಯದಲ್ಲಿ ಅಪಮಾನಿತಗೊಂಡ ಆ ಮಹರ್ಷಿಯು

ಕೋಪದಿಂದ ಹೊಟ್ಟೆಯಲ್ಲಿದ್ದವನಿಗೆ ಶಾಪವನ್ನಿತ್ತನು –

> "ಹೊಟ್ಟೆಯಲ್ಲಿರುವಾಗಲೇ ಮಾತನಾಡಲು ತೊಡಗಿದ ನೀನು ಎಂಟು ಕಡೆಗಳಲ್ಲಿ ವಕ್ರನಾಗುತ್ತೀಯೆ !"

ಅವನು ಹಾಗೆಯೇ ವಕ್ರನಾಗಿ ಹುಟ್ಟಿದನು. ಆ ಮಹರ್ಷಿಯು ಅಷ್ಟಾವಕ್ರನೆಂದು ಪ್ರಥಿತನಾದನು. ಅವನ ಸೋದರ ಮಾವನು ಶ್ವೇತಕೇತು. ಅವರಿಬ್ಬರೂ ಒಂದೇ ವಯಸ್ಸಿನವರಾಗಿದ್ದರು. ಹೊಟ್ಟೆಯಲ್ಲಿ ಮಗನು ಬೆಳೆಯುತ್ತಿರುವಾಗ ಸುಜಾತಳು ತುಂಬಾ ದುಃಖಿತಳಾಗಿದ್ದಳು. ಸಂಪತ್ತನ್ನು ಬಯಸಿದ ಅವಳು ಬಡವನಾದ ತನ್ನ ಪತಿಗೆ ನೋವಾಗದಂತೆ ಹೇಳಿದಳು:

> "ಮಹರ್ಷೇ ! ನಾವು ಸಂಪತ್ತಿಲ್ಲದೇ ಹೇಗೆ ಬದುಕೋಣ? ಇದು ನನ್ನ ಗರ್ಭದ ಹತ್ತನೆಯ ತಿಂಗಳು. ಮಗುವು ಹುಟ್ಟಿದ ನಂತರ ಬರುವ ಆಪತ್ತನ್ನು ನಿವಾರಿಸಿಕೊಳ್ಳಲು ನಿನ್ನಲ್ಲಿ ಏನೂ ಹಣವಿಲ್ಲವಲ್ಲ !"

ಹೆಂಡತಿಯು ಹೀಗೆ ಹೇಳಲು ಕಹೋಡನು ವಿತ್ತವನ್ನರಸಿ ಜನಕನಲ್ಲಿಗೆ ಹೋದನು. ಆದರೆ ಅಲ್ಲಿ ವಾದವಿದು ಬಂದಿಯು ಆ ವಿಪ್ರನನ್ನು ಸೋಲಿಸಿ ಸಮುದ್ರದಲ್ಲಿ ಮುಳುಗಿಸಿದನು. ಕಹೋಡನು ಸೂತನಿಂದ ಸೋಲಿಸಲ್ಪಟ್ಟು ಸಮುದ್ರದಲ್ಲಿ ಮುಳುಗಿಸಲ್ಪಟ್ಟ ಎಂಬ ವಾರ್ತೆಯನ್ನು ಉದ್ದಾಲಕನು ಪಡೆದನು. ಆಗ ಅವನು ಅಲ್ಲಿಯೇ ಸುಜಾತಳಿಗೆ ಹೇಳಿದನು:

“ಈ ಸಂಗತಿಯನ್ನು ಅಷ್ಟಾವಕ್ರನಿಂದ ಮುಚ್ಚಿಡಬೇಕು.”

ಅವಳಾದರೂ ಈ ವಿಷಯವನ್ನು ಗೌಪ್ಯವಾಗಿಯೇ ರಕ್ಷಿಸಿದಳು. ಹುಟ್ಟಿದ ನಂತರವೂ ಆ ವಿಪ್ರನು ಏನನ್ನೂ ಕೇಳಲಿಲ್ಲ. ಅಷ್ಟಾವಕ್ರನು ಉದ್ದಾಲಕನನ್ನೇ ತಂದೆಯೆಂದು ಮತ್ತು ಶ್ವೇತಕೇತುವನ್ನು ಸಹೋದರನೆಂದು ತಿಳಿದನು.

ಹನ್ನೆರಡು ವರ್ಷಗಳಾದಾಗ ಅಷ್ಟಾವಕ್ರನು ತಂದೆಯ ತೊಡೆಯಮೇಲೆ ಕುಳಿತುಕೊಂಡಿದ್ದಾಗ ಶ್ವೇತಕೇತುವು ಅವನ ಕೈಗಳನ್ನು ಹಿಡಿದೆಳೆದು ಅಳುತ್ತಿರುವವನಿಗೆ

“ಇದು ನಿನ್ನ ತಂದೆಯ ತೊಡೆಯಲ್ಲ!”

ಎಂದನು. ಕೆಟ್ಟದಾಗಿ ಹೇಳಲ್ಪಟ್ಟ ಆ ಮಾತುಗಳು ಅವನ ಹೃದಯದಲ್ಲಿ ನೆಲೆಮಾಡಿತು ಮತ್ತು ಅವನು ಬಹಳ ದುಃಖಿತನಾದನು. ಮನೆಗೆ ಹೋಗಿ ಅಳುತ್ತಾ ತಾಯಿಯಲ್ಲಿ ಕೇಳಿದನು:

“ನನ್ನ ತಂದೆ ಯಾರು?”

ಆಗ ಸುಜಾತಳು ಪರಮ ದುಃಖಿತಳಾಗಿ ಅವನ ಶಾಪಕ್ಕೆ ಹೆದರಿ ಎಲ್ಲವನ್ನೂ ಅವನಿಗೆ ಹೇಳಿದಳು. ಅವನ ತಾಯಿಯಿಂದ ಸತ್ಯವೆಲ್ಲವನ್ನೂ ತಿಳಿದನಂತರ ಆ ಬ್ರಾಹ್ಮಣನು ಶ್ವೇತಕೇತುವಿಗೆ ಹೇಳಿದನು:

“ನಾವಿಬ್ಬರೂ ರಾಜ ಜನಕನ ಯಜ್ಞಕ್ಕೆ ಹೋಗೋಣ. ಅವನ

ಯಜ್ಞವು ಬಹುದಾಶ್ಚರ್ಯವೆಂದು ಕೇಳಿದ್ದೇವೆ. ಅಲ್ಲಿ ಬ್ರಾಹ್ಮಣರ ವಿವಾದವನ್ನು ಕೇಳೋಣ. ಅಲ್ಲಿ ಉತ್ತಮ ಊಟವನ್ನು ಮಾಡೋಣ. ಬ್ರಹ್ಮಘೋಷವು ಮಂಗಳಕರ ಮತ್ತು ಸೌಮ್ಯ. ಇದರಿಂದ ನಮ್ಮ ತಿಳುವಳಿಕೆಯೂ ವೃದ್ಧಿಯಾಗುತ್ತದೆ."

ಆ ಇಬ್ಬರು ಮಾವ-ಅಳಿಯಂದಿರು ರಾಜ ಜನಕನ ಸಮೃದ್ಧ ಯಜ್ಞಕ್ಕೆ ಹೋದರು. ದಾರಿಯಲ್ಲಿ ಅವರನ್ನು ತಡೆಗಟ್ಟಲು, ರಾಜನನ್ನು ಭೇಟಿಮಾಡಿ ಅಷ್ಟಾವಕ್ರನು ಈ ಮಾತುಗಳನ್ನಾಡಿದನು:

"ಕುರುಡನ ಮಾರ್ಗ, ಕಿವುಡನ ಮಾರ್ಗ, ಸ್ತ್ರೀಯ ಮಾರ್ಗ, ಕೂಲಿಯ ಮಾರ್ಗ, ಬ್ರಾಹ್ಮಣನನ್ನು ಭೇಟಿಯಾಗದೇ ಇದ್ದರೆ ರಾಜನ ಮಾರ್ಗ. ಭೇಟಿಯಾದರೆ ಅದು ಬ್ರಾಹ್ಮಣನದೇ ಮಾರ್ಗವಾಗುತ್ತದೆ."

ದ್ವಾರಪತಿಯು ಹೇಳಿದನು:

"ಹಾಗಾದರೆ ಇಂದು ನಾನು ಈ ದಾರಿಯನ್ನು ನಿನಗಾಗಿ ಬಿಟ್ಟುಕೊಡುತ್ತೇನೆ. ಎಲ್ಲಿ ಬೇಕಾದಲ್ಲಿ ಪ್ರಯಾಣಮಾಡು. ಎಷ್ಟೇ ಸಣ್ಣದಾದರೂ ಬೆಂಕಿಯನ್ನು ತಿಳಿಯಲಿಕ್ಕಾಗುವುದಿಲ್ಲ. ಇಂದ್ರನೂ ಕೂಡ ನಿತ್ಯವೂ ಬ್ರಾಹ್ಮಣರನ್ನು ನಮಸ್ಕರಿಸುತ್ತಾನೆ."



ಅಷ್ಟಾವಕ್ರನು ಹೇಳಿದನು:

“ಮಗೂ! ನಾವು ಯಜ್ಞವನ್ನು ನೋಡಲು ಬಂದಿದ್ದೇವೆ. ನಮ್ಮ ಕುತೂಹಲವು ಹೆಚ್ಚಾಗುತ್ತಿದೆ. ನಾವು ಅತಿಥಿಗಳಾಗಿ ಪ್ರವೇಶಿಸುತ್ತಿದ್ದೇವೆ. ನಿನ್ನ ಆಜ್ಞೆಯನ್ನು ಬಯಸುತ್ತೇವೆ. ಐಂದ್ರದ್ಯುಮ್ನಿಯ ಯಜ್ಞವನ್ನು ನೋಡಿ ನಾವು ಜನಕೇಂದ್ರನನ್ನೂ ನೋಡಬಯಸುತ್ತೇವೆ. ನಮ್ಮ ಕೋಪದಿಂದ ಇದೇ ಕ್ಷಣದಲ್ಲಿ ಗುಣವಾಗದ ವ್ಯಾಧಿಯಿಂದ ಬಳಲಬೇಡ!”

ದ್ವಾರಪಾಲಕನು ಹೇಳಿದನು:

“ನಾವು ಬಂದಿಯ ಆದೇಶದಂತೆ ನಡೆಯುತ್ತೇವೆ. ನಾನು ಹೇಳಿದಂತೆ ನಡೆದುಕೊಳ್ಳಿ. ಯಾವ ವಿಪ್ರ ಬಾಲಕರೂ ಇಲ್ಲಿಗೆ ಪ್ರವೇಶಿಸದಿರಲಿ. ಆದರೆ ವೃದ್ಧ ಮತ್ತು ವಿಧ್ವಾಂಸ ದ್ವಿಜಾಗ್ರರು ಪ್ರವೇಶಿಸಲಿ.”

ಅಷ್ಟಾವಕ್ರನು ಹೇಳಿದನು:

“ವೃದ್ಧರಿಗೆ ಇಲ್ಲಿ ಪ್ರವೇಶವಿದೆಯೆಂದಾದರೆ ದ್ವಾರಪಾಲ! ನಾನು ಪ್ರವೇಶಿಸಲು ಅರ್ಹನಾಗಿದ್ದೇನೆ. ಯಾಕೆಂದರೆ ನಾವು ವೃದ್ಧರು ಮತ್ತು ವ್ರತಗಳನ್ನು ಪಾಲಿಸುತ್ತಿದ್ದೇವೆ. ವೇದಪ್ರಭಾವದಿಂದ ನಾವು ಪ್ರವೇಶಿಸಲು ಅರ್ಹರಾಗಿದ್ದೇವೆ. ಶುಶ್ರೂಷೆ ಮಾಡುವವರು ಮತ್ತು ಜಿತೇಂದ್ರಿಯರಾದ ನಾವು

ನಿಷ್ಠೆಯಿಂದ ಜ್ಞಾನದ ಕೊನೆಯವರೆಗೆ ತಲುಪಿದ್ದೇವೆ. ಬಾಲಕರೆಂದು ನಮ್ಮನ್ನು ಅಪಮಾನಿಸಬೇಡ. ಸಣ್ಣದಾಗಿದ್ದರೂ ಬೆಂಕಿಯನ್ನು ಮುಟ್ಟಿದರೆ ಸುಡುತ್ತದೆ."

ದ್ವಾರಪಾಲಕನು ಹೇಳಿದನು:

"ಹಾಗಾದರೆ ವೇದಜುಷ್ಟವಾದ ಒಂದೇ ಒಂದು ಅಕ್ಷರವಾದರೂ ಬಹುರೂಪದಲ್ಲಿ ವಿರಾಜಿಸುವ ಸರಸ್ವತಿಯನ್ನು ಹೇಳು. ಬಾಲಕ! ನಿನ್ನ ದೇಹವನ್ನು ನೋಡಿಕೋ! ವಾದಸಿದ್ಧಿಯನ್ನು ಪಡೆಯದೇ ಇದ್ದರೂ ಯಾಕೆ ಹೊಗಳಿಕೊಳ್ಳುತ್ತಿದ್ದೀಯೆ?"

ಅಷ್ಟಾವಕ್ರನು ಹೇಳಿದನು:

"ಶಾಲ್ಮೀಲ ವೃಕ್ಷದಲ್ಲಿ ಬೆಳೆಯುವ ಕಳೆಯಂತೆ ವೃದ್ಧರೆಂದರೆ ದೇಹದ ವಯಸ್ಸು ಹೆಚ್ಚಿನದು ಎಂದು ತಿಳಿಯಬಾರದು. ಸಣ್ಣದಾದರೂ, ಗಿಡ್ಡದಾದರೂ ಫಲವನ್ನು ಪಡೆದರೆ ವೃದ್ಧವೆನಿಸಿಕೊಳ್ಳುತ್ತದೆ. ಫಲವನ್ನೇ ಪಡೆಯದ ವೃಕ್ಷವು ವೃದ್ಧವೆಂದೆನಿಸಿಕೊಳ್ಳುವುದಿಲ್ಲ."

ದ್ವಾರಪಾಲಕನು ಹೇಳಿದನು:

"ಬಾಲಕರು ವೃದ್ಧರಾಗುವವರೆಗೆ ವೃದ್ಧರಿಂದಲೇ ತಮ್ಮ ಬುದ್ಧಿಯನ್ನು ಪಡೆಯುತ್ತಾರೆ. ಸ್ವಲ್ಪವೇ ಸಮಯದಲ್ಲಿ

ಜ್ಞಾನವನ್ನು ಪಡೆಯುವುದು ಶಕ್ಯವಿಲ್ಲ. ಹಾಗಿದ್ದಾಗ ಬಾಲಕರಾದ ನೀವು ನಿಮ್ಮನ್ನು ವೃದ್ಧರೆಂದು ಏಕೆ ಕರೆದುಕೊಳ್ಳುತ್ತಿದ್ದೀರಿ?"

ಅಷ್ಟಾವಕ್ರನು ಹೇಳಿದನು:

"ಬೆಳೆದ ಬಿಳಿಕೂದಲಿದ್ದರೆ ಮಾತ್ರ ವೃದ್ಧನೆಂದಾಗುವುದಿಲ್ಲ. ತಿಳಿದಿರುವವನನ್ನು ಬಾಲಕನಾಗಿದ್ದರೂ ದೇವತೆಗಳು ವೃದ್ಧನೆಂದು ತಿಳಿಯುತ್ತಾರೆ. ವಯಸ್ಸಿನಿಂದಾಗಲೀ, ಬಿಳಿಕೂದಲಿನಿಂದಾಗಲೀ, ಸಂಪತ್ತಿನಿಂದಾಗಲೀ, ಬಂಧುಗಳಿಂದಾಗಲೀ ಋಷಿಗಳು ಧರ್ಮವನ್ನು ಮಾಡಿಲ್ಲ. ಯಾರು ಕಲಿತಿದ್ದಾನೋ ಅವನೇ ದೊಡ್ಡವನು. ರಾಜಸಭೆಯಲ್ಲಿ ಬಂದಿಯನ್ನು ನೋಡಲು ಬಂದಿದ್ದೇವೆ. ದ್ವಾರಪಾಲಕ! ಪುಷ್ಕರ ಮಾಲಿನಿ ರಾಜನಿಗೆ ನಾವು ಬಂದಿರುವುದನ್ನು ಹೇಳು. ಇಂದು ನಾನು ತಿಳಿದವರೊಡನೆ ವಾದಮಾಡುವುದನ್ನು ನೋಡು. ಎಲ್ಲರೂ ಸುಮ್ಮನಿರುವಾಗ ನಾನು ಮೇಲಾಗುವುದನ್ನು ಅಥವಾ ಕೆಳಗಾಗುವುದನ್ನು ನೋಡು."

ದ್ವಾರಪಾಲಕನು ಹೇಳಿದನು:

"ವಿನೀತರಿಗೆ ಮತ್ತು ವಿದುಷರಿಗೆ ಮಾತ್ರ ಪ್ರವೇಶವುಳ್ಳ ಯಜ್ಞಶಾಲೆಗೆ ಹತ್ತುವರ್ಷದ ನೀವು ಹೇಗೆ ಪ್ರವೇಶಿಸುವಿರಿ? ನಿಮ್ಮನ್ನು ಒಳಗೆ ಬಿಡಲು ನಾನು ಉಪಾಯವನ್ನು

ಹುಡುಕುತ್ತೇನೆ. ನೀವೂ ಕೂಡ ಪ್ರಯತ್ನಮಾಡಬೇಕು.”

ಅಷ್ಟಾವಕ್ರನು ಹೇಳಿದನು:

“ಭೋ ಭೋ ರಾಜನ್! ಜನಕರಲ್ಲಿ ವರಿಷ್ಠ! ನಿನ್ನ ಸಭೆಗೆ ಜಯವಾಗಲಿ, ನಿನ್ನ ಸರ್ವ ಸಮೃದ್ಧಿಗೆ ಜಯವಾಗಲಿ! ನೀನು ನಡೆಸುತ್ತಿರುವ ಈ ಯಜ್ಞದಂಥಹ ಕರ್ತನು ಹಿಂದೆ ಯಯಾತಿ ಮಾತ್ರ ಇದ್ದನು! ವಿದ್ವಾನ್ ವೇದವಿದು ಬಂದಿಯು ವಾದದಲ್ಲಿ ಅನುಮಾನಿತರನ್ನು ಸೋಲಿಸಿ ನೀನು ಕಳುಹಿಸಿದ ಆಪ್ತ ಜನರಿಂದ ಎಲ್ಲರನ್ನೂ ಸಮುದ್ರದಲ್ಲಿ ಹಾಕಿ ಮುಳುಗಿಸಿದನೆಂದು ಕೇಳಲಿಲ್ಲವೇ? ಬ್ರಾಹ್ಮಣರಿಂದ ಇದನ್ನು ಕೇಳಿದ ನಾನು ಇಂದು ಬ್ರಹ್ಮನನ್ನು ಹೇಳಲು ಬಂದಿದ್ದೇನೆ. ಬಂದಿಯು ಎಲ್ಲಿದ್ದಾನೆ? ಸೂರ್ಯನು ನಕ್ಷತ್ರಗಳನ್ನು ಹೇಗೋ ಹಾಗೆ ನಾನು ಅವನನ್ನು ವಾದದಲ್ಲಿ ಎದುರಿಸಿ ನಾಶಗೊಳಿಸುತ್ತೇನೆ.”

ರಾಜನು ಹೇಳಿದನು:

“ಎದುರಾಳಿಯ ವಾಕ್ಯಬಲವನ್ನು ತಿಳಿಯದೇ ಬಂದಿಯನ್ನು ನೀನು ಸೋಲಿಸುತ್ತೀಯೆ ಎಂದು ಹೇಳುತ್ತಿರುವೆಯಲ್ಲ! ಹೀಗೆ ಹೇಳಲು ಕೇವಲ ವಿಜ್ಞಾತವೀರರಿಗೆ ಶಕ್ಯ. ವಾದಶೀಲ ಬ್ರಾಹ್ಮಣರು ಇದನ್ನು ಕಂಡುಕೊಂಡಿದ್ದಾರೆ.”

ಅಷ್ಟಾವಕ್ರನು ಹೇಳಿದನು:

"ಅವನೊಂದಿಗೆ ವಾದಮಾಡಿದವರು ನನ್ನ ಹಾಗಿಲ್ಲ. ವಾದದಲ್ಲಿ ಭೀತರಾದ ಅವರು ಅವನನ್ನು ಸಿಂಹನನ್ನಾಗಿ ಮಾಡಿದ್ದಾರೆ. ನನ್ನನ್ನು ಭೇಟಿಯಾದ ನಂತರ ಇಂದು ಗಾಲಿ ಕಳಚಿದ ಬಂಡಿಯಂತೆ ಮಾರ್ಗಮದ್ಯದಲ್ಲಿ ಉಳಿಯುತ್ತಾನೆ."

ರಾಜನು ಹೇಳಿದನು:

"ಆರು ಭೇದಗಳನ್ನು, ಹನ್ನೆರಡು ಅಕ್ಷಗಳನ್ನು, ಇಪ್ಪತ್ನಾಲ್ಕು ಪರ್ವಗಳನ್ನು ಮತ್ತು ಮುನ್ನೂರಾ ಅರವತ್ತು ಚಕ್ರದ ಕಾಲುಗಳನ್ನು ತಿಳಿದವನೇ ಪರಮ ಕವಿಯು."

ಅಷ್ಟಾವಕ್ರನು ಹೇಳಿದನು:

"ಸದಾ ತಿರುಗುತ್ತಿರುವ ಇಪ್ಪತ್ನಾಲ್ಕು ಪರ್ವಗಳು, ಆರು ಭೇದಗಳುಳ್ಳ ಹನ್ನೆರಡು ಪ್ರಧಿಗಳನ್ನು ಹೊಂದಿದ ಮತ್ತು ಮುನ್ನೂರಾ ಅರವತ್ತು ಕಾಲುಗಳುಳ್ಳ ಚಕ್ರವು ನಿನ್ನನ್ನು ರಕ್ಷಿಸಲಿ!"

ರಾಜನು ಹೇಳಿದನು:

"ಎರಡು ಕುದುರೆಗಳನ್ನು ಕಟ್ಟಿದಂತಿದೆ, ಆಕಾಶದಿಂದ ಗಿಡುಗವು ಬಂದೆರಗುವಂತಿದೆ. ಅದು ಯಾವ ದೇವತೆಯ ಗರ್ಭದಿಂದ ಬಂದಿದೆ ಮತ್ತು ಯಾರು ಆ ಗರ್ಭದಿಂದ

ಹುಟ್ಟಿದ್ದಾರೆ?”

ಅಷ್ಟಾವಕ್ರನು ಹೇಳಿದನು:

“ರಾಜನ್! ಅವುಗಳನ್ನು ನಿನ್ನ ಮನೆಯಿಂದ ಮತ್ತು ನಿನ್ನ ಶತ್ರುವಿನ ಮನೆಯಿಂದಲೂ ದೂರವಿಡು! ವಾಯುಸಾರಥಿಯು ಅವನ್ನು ಪಡೆಯುತ್ತಾನೆ ಮತ್ತು ಅವು ಅವನ ಗರ್ಭದಲ್ಲಿ ಬೆಳೆಯುತ್ತವೆ.”

ರಾಜನು ಹೇಳಿದನು:

“ನಿದ್ರಿಸಿರುವಾಗ ಏನು ಕಣ್ಣನ್ನು ಮುಚ್ಚುವುದಿಲ್ಲ? ಹುಟ್ಟುವಾಗ ಯಾವುದು ಚಲಿಸುವುದಿಲ್ಲ? ಯಾವುದಕ್ಕೆ ಹೃದಯವೇ ಇಲ್ಲ? ಮತ್ತು ಯಾವುದು ವೇಗದಿಂದ ವೃದ್ಧಿಯಾಗುತ್ತದೆ?”

ಅಷ್ಟಾವಕ್ರನು ಹೇಳಿದನು:

“ಮೀನು ನಿದ್ದೆಮಾಡುತ್ತಿರುವಾಗ ಕಣ್ಣು ಮುಚ್ಚುವುದಿಲ್ಲ ಮತ್ತು ಮೊಟ್ಟೆಯು ಹುಟ್ಟಿದಾಗ ಚಲಿಸುವುದಿಲ್ಲ. ಕಲ್ಲಿಗೆ ಹೃದಯವಿಲ್ಲ ಮತ್ತು ನದಿಯು ವೇಗದಲ್ಲಿ ಬೆಳೆಯುತ್ತದೆ.”

ರಾಜನು ಹೇಳಿದನು:

“ನೀನು ಮನುಷ್ಯನಲ್ಲ ದೇವಸತ್ವವೆಂದು ತಿಳಿಯುತ್ತೇನೆ. ನೀನು

ಬಾಲಕನಲ್ಲ ಆದರೆ ಸ್ಥಾವಿರನೆಂದು ನನ್ನ ಅಭಿಪ್ರಾಯ. ಮಾತಿನ ಪ್ರವಾಹದಲ್ಲಿ ನಿನ್ನ ಸಮಾನನು ಇಲ್ಲವೆಂದೇ ತಿಳಿಯಬಹುದು. ಆದುದರಿಂದ ನಿನಗೆ ದ್ವಾರವು ತೆರೆಯಲ್ಪಡುತ್ತದೆ. ಇದೋ ಬಂದಿಯು!"

ಅಷ್ಟಾವಕ್ರನು ಹೇಳಿದನು:

"ರಾಜನ್! ಈ ಉಗ್ರಸೇನೆಯ ಸಮಿತಿಯಲ್ಲಿ ಅಪ್ರತಿಮ ರಾಜರುಗಳ ಸಮಾವೇಶದಲ್ಲಿ ಮಹಾಸರೋವರದಲ್ಲಿ ಹಂಸಗಳ ನಿನಾದದಂತೆ ವಾದಿಗಳಿಗೆ ತಪ್ಪಿಸಿಕೊಂಡು ಹೋಗಲು ಅವಕಾಶವಿರಲಿಕ್ಕಿಲ್ಲ. ಅತಿವಾದಿಯೆಂದು ತಿಳಿದವನು ಇಂದು ವೇಗವಾಗಿ ಹರಿಯುತ್ತಿರುವ ನದಿಯಂತೆ ನನ್ನನ್ನು ಕೊಚ್ಚಿಕೊಂಡು ಹೋಗದಿರಲಿ! ಸಮಿತ್ತನ್ನು ಸುಡುತ್ತಿರುವ ಅಗ್ನಿಯ ತೇಜಸ್ಸುಳ್ಳ ನನ್ನ ಮುಂದೆ ಬಂದು ನಿಲ್ಲು ಬಂದಿನ್!"

ಬಂದಿನ್ ಹೇಳಿದನು:

"ನಿದ್ದೆಯಲ್ಲಿದ್ದ ಹುಲಿಯನ್ನು ಅಥವಾ ತನ್ನ ಬಾಯಿಯನ್ನು ಸವರುತ್ತಿರುವ ವಿಷಭರಿತ ಹಾವನ್ನು ಕರೆದು ಎಬ್ಬಿಸಬೇಡ! ನಿನ್ನ ಪಾದದಿಂದ ಅವನ ತಲೆಯು ಒದ್ದೆಯಾದರೆ ಅದು ಕಚ್ಚದೇ ಇರುವುದಿಲ್ಲ ಎನ್ನುವುದನ್ನು ಚೆನ್ನಾಗಿ ತಿಳಿದುಕೋ! ಗಟ್ಟಿಯಾದ ದೇಹವಿದ್ದರೂ ದುರ್ಬಲನಾಗಿ ದರ್ಪದಿಂದ

ಪರ್ವತವನ್ನು ಹೊಡೆದರೆ ಅವನದೇ ಕೈ ಮತ್ತು ಉಗುರುಗಳು ಗಾಯಗೊಳ್ಳುತ್ತವೆ. ಆ ಪರ್ವತದ ಮೇಲೆ ಯಾವುದೇ ರೀತಿಯ ಗಾಯವು ಕಾಣುವುದಿಲ್ಲ. ಮಿಥಿಲದ ರಾಜನಿಗೆ ಎಲ್ಲ ರಾಜರುಗಳು ಮೈನಾಕಪರ್ವತದಡಿಯಲ್ಲಿರುವ ಪರ್ವತಗಳಂತೆ. ಎತ್ತಿನ ಎದುರಿಗೆ ಕರುಗಳು ಹೇಗೋ ಹಾಗೆ ಈ ರಾಜರುಗಳು ಅವನಿಗಿಂತ ಚಿಕ್ಕವರು."

ಆ ಸಮಿತಿಯಲ್ಲಿ ಕ್ರೋಧಿಷ್ಠನಾಗಿ ಅಷ್ಟಾವಕ್ರನು ಗರ್ಜಿಸುತ್ತಾ ಬಂದಿಗೆ ಹೇಳಿದನು:

"ನಾನು ಹೇಳುವ ವಾಕ್ಯಕ್ಕೆ ಉತ್ತರವನ್ನು ಕೊಡು. ಮತ್ತು ನೀನು ಹೇಳಿದುದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ."

ಬಂದಿನ್ ಹೇಳಿದನು:

"ಒಂದೇ ಒಂದು ಅಗ್ನಿಯು ಬಹಳ ರೂಪಗಳಲ್ಲಿ ಉರಿಯುತ್ತದೆ. ಒಬ್ಬನೇ ಸೂರ್ಯನು ಇವೆಲ್ಲವನ್ನೂ ಬೆಳಗಿಸುತ್ತಾನೆ. ಒಬ್ಬನೇ ವೀರ ಸಂಹರಿಸುವ ದೇವರಾಜ. ಮತ್ತು ಪಿತೃಗಳ ಈಶ್ವರನೂ ಒಬ್ಬನೇ ಯಮ."

ಅಷ್ಟಾವಕ್ರನು ಹೇಳಿದನು:

"ಇಂದ್ರ ಮತ್ತು ಅಗ್ನಿಗಳೀರ್ವರು ಸಖರಂತೆ ನಡೆಯುತ್ತಾರೆ. ನಾರದ ಪರ್ವತರೆಂಬ ಇಬ್ಬರು ದೇವರ್ಷಿಗಳಿದ್ದಾರೆ.

ಅಶ್ವಿನಿಯರಿಬ್ಬರು, ರಥಕ್ಕೆ ಚಕ್ರಗಳೆರಡು, ಮತ್ತು ವಿಧಾತ್ರನು ಪತಿ ಪತ್ನಿಯರೆಂದು ಇಬ್ಬರನ್ನು ಮಾಡಿದನು."

ಬಂದಿನ್ ಹೇಳಿದನು:

"ಈ ಪ್ರಜೆಗಳು ಮೂರು ಕರ್ಮಗಳಿಂದ ಹುಟ್ಟುತ್ತಾರೆ. ಮೂರು ವೇದಗಳು ಸೇರಿ ವಾಜಪೇಯವೆನಿಸುತ್ತದೆ. ಅಧ್ವರ್ಯರು ಮೂರು ಬಾರಿ ಒತ್ತುತ್ತಾರೆ. ಮೂರು ಲೋಕಗಳು ಮತ್ತು ಮೂರು ಜ್ಯೋತಿಗಳಿವೆ ಎಂದು ಹೇಳುತ್ತಾರೆ."

ಅಷ್ಟಾವಕ್ರನು ಹೇಳಿದನು:

"ಬ್ರಾಹ್ಮಣರಿಗೆ ನಾಲ್ಕು ಘಟ್ಟಗಳಿವೆ, ನಾಲ್ವರು ಸೇರಿ ಈ ಯಜ್ಞವನ್ನು ನಡೆಸುತ್ತಾರೆ. ದಿಕ್ಕುಗಳು ನಾಲ್ಕು. ನಾಲ್ಕು ವರ್ಣಗಳು ಮತ್ತು ಗೋವಿಗೆ ನಾಲ್ಕು ಕಾಲುಗಳಿವೆ ಎಂದು ಸದಾ ಹೇಳುತ್ತಾರೆ."

ಬಂದಿನ್ ಹೇಳಿದನು:

"ಅಗ್ನಿಗಳು ಐದು ಮತ್ತು ಪಂಕ್ತಿಗೆ ಐದು ಪಾದಗಳು. ಯಜ್ಞಗಳು ಐದು ವಿಧದವು ಮತ್ತು ಇಂದ್ರಿಯಗಳು ಐದು. ವೇದಗಳಲ್ಲಿ ಕಾಣುವವು ಐದು ಮತ್ತು ಚೂಡಗಳೂ ಐದು. ಲೋಕದಲ್ಲಿ ಪುಣ್ಯವೆಂದು ಐದು ನದಿಗಳು ಪ್ರಖ್ಯಾತವಾಗಿವೆ."

ಅಷ್ಟಾವಕ್ರನು ಹೇಳಿದನು:

“ಅಗ್ನಿಯನ್ನು ಇಡುವುದಕ್ಕೆ ಆರು ಆಕಳುಗಳನ್ನು ದಾನವನ್ನಾಗಿ ನೀಡಬೇಕು. ಕಾಲಚಕ್ರದಲ್ಲಿ ಆರೇ ಋತುಗಳಿವೆ. ಇಂದ್ರಿಯಗಳು ಆರು. ಕೃತ್ತಿಕಗಳು ಆರು. ಸರ್ವ ವೇದಗಳಲ್ಲಿ ಕಂಡುಬಂದಂತೆ ಸಾಧ್ಯಕರು ಆರು ಮಂದಿ.”

ಬಂದಿನ್ ಹೇಳಿದನು:

“ಏಳು ಬಗೆಯ ಪಳಗಿಸಿದ ಮತ್ತು ಏಳು ಬಗೆಯ ವನ್ಯ ಪಶುಗಳಿವೆ. ಏಳು ಚಂದಸ್ಸುಗಳು ಒಂದು ಕ್ರತುವನ್ನು ಮಾಡುತ್ತವೆ. ಋಷಿಗಳು ಏಳು. ಏಳು ಗೌರವಗಳು. ವೀಣೆಯಲ್ಲಿ ಸಪ್ತ ತಂತ್ರಿಗಳಿವೆ ಎಂದು ಪ್ರಥಿತವಾಗಿದೆ.”

ಅಷ್ಟಾವಕ್ರನು ಹೇಳಿದನು:

“ಎಂಟು ಶಾಣಗಳು ಸೇರಿ ಒಂದು ನೂರಾಗುತ್ತದೆ. ಸಿಂಹವನ್ನು ಕೊಲ್ಲುವ ಶರಭಕ್ಕೆ ಎಂಟು ಕಾಲುಗಳಿವೆ. ದೇವತೆಗಳಲ್ಲಿ ವಸುಗಳು ಎಂಟು ಎಂದು ಕೇಳಿದ್ದೇವೆ. ಸರ್ವಯಜ್ಞವು ಎಂಟು ಯೂಪಗಳನ್ನು ಹೊಂದಿದೆ.”

ಬಂದಿನ್ ಹೇಳಿದನು:

“ಪಿತೃಗಳಿಗೆ ಒಂಭತ್ತು ಸಾಮಿಧಗಳನ್ನು ಹೇಳುತ್ತಾರೆ. ಸೃಷ್ಟಿಯು ಒಂಭತ್ತು ಹಂತಗಳಲ್ಲಿ ನಡೆಯುತ್ತದೆ ಎಂದು ಹೇಳುತ್ತಾರೆ. ಬೃಹತಿ ಸಂಪ್ರದಿಷ್ಟದಲ್ಲಿ ಒಂಭತ್ತು ಅಕ್ಷರಗಳಿವೆ.

ಲೆಕ್ಕದಲ್ಲಿ ಶಾಶ್ವತವಾಗಿ ಒಂಭತ್ತೇ ಇರುವುದು.”

ಅಷ್ಟಾವಕ್ರನು ಹೇಳಿದನು:

“ಲೋಕದಲ್ಲಿ ಪುರುಷನಿಗೆ ಹತ್ತು ದಶೆಗಳಿವೆ ಎಂದು ಹೇಳುತ್ತಾರೆ. ಒಂದು ಸಾವಿರದಲ್ಲಿ ಸಂಪೂರ್ಣವಾಗಿ ಹತ್ತು ನೂರುಗಳಿವೆ ಎಂದು ಹೇಳುತ್ತಾರೆ. ಗರ್ಭವತಿಯು ಹತ್ತು ತಿಂಗಳುಗಳು ಗರ್ಭವನ್ನು ಧರಿಸುತ್ತಾಳೆ. ಇರಕಗಳು ಹತ್ತು. ದಾಶರು ಹತ್ತು ಮತ್ತು ಆರ್ಣರು ಹತ್ತು.”

ಬಂದಿನ್ ಹೇಳಿದನು:

“ಏಕಾದಶಿಗೆ ಹನ್ನೊಂದು ಪಶುಗಳು, ಅದರಲ್ಲಿ ಹನ್ನೊಂದು ಯೂಪಗಳೂ ಇರುತ್ತವೆ. ಪ್ರಾಣವಿರುವಕ್ಕೆ ವಿಕಾರಗಳು ಹನ್ನೊಂದು. ದಿವಿಯ ದೇವರಲ್ಲಿ ಹನ್ನೊಂದು ರುದ್ರರನ್ನು ಎಣಿಸುತ್ತಾರೆ.”

ಅಷ್ಟಾವಕ್ರನು ಹೇಳಿದನು:

“ಒಂದು ಸಂವತ್ಸರದಲ್ಲಿ ಹನ್ನೆರಡು ತಿಂಗಳುಗಳಿವೆ ಎಂದು ಹೇಳುತ್ತಾರೆ. ಜಗತಿಯ ಪಾದದಲ್ಲಿ ಅಕ್ಷರಗಳು ಹನ್ನೆರಡು. ಪ್ರಾಕೃತ ಯಜ್ಞವು ಹನ್ನೆರಡು ದಿನಗಳು ನಡೆಯುತ್ತವೆ ಎಂದು ಹೇಳುತ್ತಾರೆ. ವಿಪ್ರರು ಹನ್ನೆರಡು ಆದಿತ್ಯರಿದ್ದಾರೆಂದು ಹೇಳುತ್ತಾರೆ.”

ಬಂದಿನ್ ಹೇಳಿದನು:

> “ತ್ರಯೋದಶೀ ತಿಥಿಯು ಮಹಾ ಉಗ್ರವೆಂದು ಹೇಳುತ್ತಾರೆ. ಈ ಭೂಮಿಯು ಹದಿಮೂರು ದ್ವೀಪಗಳನ್ನು ಹೊಂದಿದೆ.”

ಇದನ್ನು ಹೇಳಿ ಬಂದಿಯು ನಿಲ್ಲಿಸಿದನು. ಆ ಶ್ಲೋಕದ ಇನ್ನೊಂದು ಅರ್ಧವನ್ನು ಅಷ್ಟಾವಕ್ರನು ಸಂಪೂರ್ಣ ಮಾಡಿದನು:

> “ಕೇಶಿಯು ಹದಿಮೂರು ದಿನಗಳು ಹೋರಾಡಿದನು. ಅದಿಚ್ಛಂದಸಿಯು ಹದಿಮೂರರಿಂದ ಪ್ರಾರಂಭವಾಗುತ್ತದೆ ಎಂದು ಹೇಳುತ್ತಾರೆ.”

ಸೂತಪುತ್ರನು ಸುಮ್ಮನಾಗಿದ್ದುದನ್ನು, ಅವನು ತಲೆತಗ್ಗಿಸಿ ನಿಂತಿದುದನ್ನು, ಮತ್ತು ಅಷ್ಟಾವಕ್ರನು ಮುಂದುವರೆದುದನ್ನು ನೋಡಿ ಅತಿ ದೊಡ್ಡ ನಿನಾದವು ಹುಟ್ಟಿಬಂದಿತು. ರಾಜ ಜನಕನ ಆ ಸಮೃದ್ಧ ಯಜ್ಞದಲ್ಲಿ ಈ ರೀತಿಯ ತುಮುಲವು ನಡೆಯುತ್ತಿರುವಾಗ, ಎಲ್ಲ ವಿಪ್ರರೂ ಕೈಮುಗಿದು ಅಷ್ಟಾವಕ್ರನನ್ನು ಗೌರವಿಸಲು ಮುಂದಾದರು. ಅಷ್ಟಾವಕ್ರನು ಹೇಳಿದನು:

> “ವಾದದಲ್ಲಿ ಸೋತ ಅನೇಕ ಬ್ರಾಹ್ಮಣರನ್ನು ಇವನು ನೀರಿನಲ್ಲಿ ಮುಳುಗಿಸಿದ್ದಾನೆ ಎಂದು ಕೇಳಿದ್ದೇನೆ. ಇಂದು ಬಂದಿಯು ಅದೇ ಧರ್ಮವನ್ನು ಅನುಸರಿಸಲಿ. ಅವನನ್ನೂ ಹಿಡಿದು ಮುಳುಗಿಸಿ.”

ಬಂದಿನ್ ಹೇಳಿದನು:

“ನಾನು ರಾಜಾ ವರುಣನ ಮಗ. ಅಲ್ಲಿ ಅವನ ಹನ್ನೆರಡು ವರ್ಷಗಳ ಸತ್ರವು ನಡೆಯುತ್ತಿದೆ. ಜನಕ! ನಿನ್ನ ಸತ್ರಕ್ಕೆ ಸರಿಸಮನಾಗಿ ನಡೆಯುತ್ತಿರುವ ಅದಕ್ಕಾಗಿ ನಾನು ದ್ವಿಜಾಗ್ರರನ್ನು ಅಲ್ಲಿಗೆ ಕಳುಹಿಸುತ್ತಿದ್ದೆ. ವರುಣನ ಯಜ್ಞವನ್ನು ನೋಡಲು ಹೋಗಿರುವ ಅವರೆಲ್ಲರೂ ಪುನಃ ಹಿಂದಿರುಗಿ ಬರುತ್ತಾರೆ. ಪೂಜನೀಯನಾದ ಅಷ್ಟಾವಕ್ರನನ್ನು ಪೂಜಿಸುತ್ತೇನೆ. ಯಾಕೆಂದರೆ ಅವನ ಕಾರಣದಿಂದ ನಾನು ನನ್ನ ತಂದೆಯನ್ನು ಸೇರುತ್ತೇನೆ.”

ಅಷ್ಟಾವಕ್ರನು ಹೇಳಿದನು:

“ನಿನ್ನಿಂದ ಸಮುದ್ರದಲ್ಲಿ ಮುಳುಗಿಸಲ್ಪಟ್ಟ ವಿಪ್ರರು ಕಲಿತವರಾಗಿದ್ದರೂ ಬುದ್ಧಿ ಮತ್ತು ಮಾತುಗಳಲ್ಲಿ ಸೋತರು. ಸಂತರು ಯೋಚನೆಮಾಡಿ ಮಾತನಾಡುವಂತೆ ನಾನು ಅವರನ್ನು ಮಾತಿನ ಮೂಲಕ ನೀರಿನಿಂದ ಮೇಲೆ ಎತ್ತಿದ್ದೇನೆ. ಜಾತವೇದಾಗ್ನಿಯು ಸತ್ಯವಂತರ ಮನೆಗಳನ್ನು ಹೇಗೆ ಸುಡುವುದಿಲ್ಲವೋ ಹಾಗೆ ಬಾಲಕ ಪುತ್ರರು ಕೃಪಣ ಮಾತುಗಳನ್ನಾಡಿದರೆ ಸಂತರು ಆ ಮಾತುಗಳ ಕುರಿತು ಯೋಚಿಸಬೇಕು. ಶ್ಲೇಷ್ಮಾತಕಿಯಿಂದ ನಿನ್ನ ವರ್ಚಸ್ಸು ಕ್ಷೀಣವಾಗಿದೆಯೋ ಅಥವಾ ನೀನು ಕೇಳಿದ ಹೊಗಳಿಕೆಗಳಿಂದ

ಮತ್ತೇರಿದೆಯೋ? ಜನಕ! ನೀನು ಮಾವುತನಿಂದ ಸೂಚಿತಗೊಂಡ ಆನೆಯಂತಿದ್ದೀಯೆ. ನನ್ನ ಈ ಮಾತುಗಳನ್ನು ಕೇಳಬೇಡ."

ಜನಕನು ಹೇಳಿದನು:

"ನಿನ್ನ ದಿವ್ಯರೂಪೀ ಮಾತನ್ನು ಕೇಳುತ್ತಿದ್ದೇನೆ. ನೀನು ಅಮಾನುಷಿಯಾಗಿದ್ದು ಸಾಕ್ಷಾತ್ ದಿವ್ಯರೂಪಿಯಾಗಿದ್ದೀಯೆ. ಬಂದಿಯನ್ನು ನೀನು ವಿವಾದದಲ್ಲಿ ಸೋಲಿಸಿದ್ದೀಯೆ. ಈಗ ನೀನು ಬಂದಿಯನ್ನು ನಿನಗಿಷ್ಟವಾದಹಾಗೆ ಬಿಡು."

ಅಷ್ಟಾವಕ್ರನು ಹೇಳಿದನು:

"ರಾಜನ್! ಈ ಬಂದಿನಿಯು ಜೀವಿತವಿರುವುದರಿಂದ ನನಗೇನೂ ಪ್ರಯೋಜನವಿಲ್ಲ. ವರುಣನು ಅವನ ತಂದೆಯಾದರೆ ಅವನನ್ನು ಜಲಾಶಯದಲ್ಲಿ ಮುಳುಗಿಸು."

ಬಂದಿನ್ ಹೇಳಿದನು:

"ರಾಜನ್! ನಾನು ವರುಣನ ಮಗ. ನೀರಿನಲ್ಲಿ ಮುಳುಗುವುದಕ್ಕೆ ನನಗೆ ಭಯವಿಲ್ಲ. ಸ್ವಲ್ಪವೇ ಸಮಯದಲ್ಲಿ ಅಷ್ಟಾವಕ್ರನು ಬಹುಕಾಲದ ಹಿಂದೆ ಕಳೆದುಕೊಂಡಿದ್ದ ತನ್ನ ತಂದೆ ಕಹೋಡನನ್ನು ಕಾಣುತ್ತಾನೆ."

ಅನಂತರ ಮಹಾತ್ಮ ವರುಣನಿಂದ ಪೂಜಿತರಾದ ವಿಪ್ರರೆಲ್ಲರೂ

ಜನಕನ ಮುಂದೆ ಎದ್ದುನಿಂತರು. ಕಹೋಡನು ಹೇಳಿದನು:

> "ಜನಕ! ಇದಕ್ಕಾಗಿಯೇ ಜನರು ತಮ್ಮ ಕರ್ಮಗಳಿಂದ ಮಕ್ಕಳನ್ನು ಬಯಸುತ್ತಾರೆ. ನಾನು ಮಾಡಲಿಕ್ಕೆ ಅಸಾಧ್ಯವಾದುದನ್ನು ನನ್ನ ಮಗನು ಮಾಡಿದ್ದಾನೆ. ಅಬಲನಿಗೆ ಬಲವಂತನು ಜನಿಸಿದ್ದಾನೆ, ದಡ್ಡನಿಗೆ ಪಂಡಿತನು ಜನಿಸಿದ್ದಾನೆ ಮತ್ತು ತಿಳಿಯದೇ ಇದ್ದವನಿಗೆ ತಿಳಿದ ಮಗನು ಜನಿಸಿದ್ದಾನೆ."

ಬಂದಿನ್ ಹೇಳಿದನು:

> "ಹರಿತ ಪರಶುವಿನಿಂದ ಸ್ವಯಂ ಅಂತಕನು ನಿನ್ನ ಶತ್ರುಗಳ ಶಿರವನ್ನು ಕತ್ತರಿಸುತ್ತಾನೆ. ರಾಜ! ನಿನಗೆ ರಕ್ಷಣೆಯಿರಲಿ!""

ಮಹಾ ಉಕ್ಥವನ್ನು ಹಾಗೂ ಮಹಾ ಸಾಮವನ್ನು ಹಾಡಲಾಯಿತು. ಆ ಸತ್ರದಲ್ಲಿ ಚೆನ್ನಾಗಿ ಸೋಮವನ್ನು ಕುಡಿಯಲಾಯಿತು. ಜನಕನ ಯಜ್ಞದಲ್ಲಿ ಸಂತೋಷಗೊಂಡ ಸಾಕ್ಷಾತ್ ದೇವತೆಗಳು ಶುಚಿಯಾದ ತಮ್ಮ ತಮ್ಮ ಭಾಗಗಳನ್ನು ಸ್ವೀಕರಿಸಿದರು. ಎಲ್ಲ ವಿಪ್ರರೂ ಮೊದಲಿಗಿಂತ ಪ್ರಕಾಶಮಾನರಾಗಿ ಮೇಲೆದ್ದ ನಂತರ ರಾಜಾ ಜನಕನ ಅನುಜ್ಞೆಯನ್ನು ಪಡೆದು ಬಂದಿಯು ಸಾಗರದ ನೀರನ್ನು ಪ್ರವೇಶಿಸಿದನು. ಅಷ್ಟಾವಕ್ರನು ತಂದೆಯನ್ನು ಪೂಜಿಸಿ, ಯಥಾವತ್ತಾಗಿ ಬ್ರಾಹ್ಮಣರಿಂದ ಪೂಜಿಸಿಕೊಂಡು, ತನ್ನ ಮಾವನೊಡನೆ ಬಂದಿಯನ್ನು ಸೋಲಿಸಿ ತನ್ನ ಉತ್ತಮ ಆಶ್ರಮಕ್ಕೆ ಹಿಂದಿರುಗಿದನು.

# ರೈಭ್ಯ-ಯವಕ್ರೀತ

[ರೈಭ್ಯ-ಯವಕ್ರೀತರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ತೀರ್ಥಯಾತ್ರಾ ಪರ್ವ (ಅಧ್ಯಾಯ ೧೩೫-೧೩೯) ದಲ್ಲಿ ಬರುತ್ತದೆ. ಯುಧಿಷ್ಠಿರನ ತೀರ್ಥಯಾತ್ರಾ ಸಮಯದಲ್ಲಿ ಈ ಕಥೆಯನ್ನು ಋಷಿ ಲೋಮಶನು ಯುಧಿಷ್ಠಿರನಿಗೆ ಹೇಳಿದನು.]

ಭರದ್ವಾಜ ಮತ್ತು ರೈಭ್ಯರಿಬ್ಬರೂ ಸ್ನೇಹಿತರಾಗಿದ್ದರು. ಪರಸ್ಪರರನ್ನು ಪ್ರೀತಿಸಿ ಅವರು ವನಾಂತರದಲ್ಲಿ ಒಟ್ಟಿಗೇ ವಾಸಿಸುತ್ತಿದ್ದರು. ರೈಭ್ಯನಿಗೆ ಅರಾವಸು ಮತ್ತು ಪರಾವಸು ಎಂಬ ಇಬ್ಬರು ಮಕ್ಕಳಿದ್ದರು. ಭರದ್ವಾಜನಿಗೆ ಯವಕ್ರೀ ಎನ್ನುವ ಮಗನಿದ್ದನು. ರೈಭ್ಯ ಮತ್ತು ಅವನ ಮಕ್ಕಳು ವಿದ್ವಾಂಸರಾಗಿದ್ದರು ಮತ್ತು ಇನ್ನೊಬ್ಬನು ತಪಸ್ವಿಯಾಗಿದ್ದನು. ಆದರೂ ಬಾಲ್ಯದಿಂದಲೂ ಬೆಳೆದಿದ್ದ ಅವರ ಪ್ರೀತಿಯು ಅತುಲ್ಯವಾಗಿತ್ತು. ತಪಸ್ವಿಯಾದ ತನ್ನ ತಂದೆಯನ್ನು ವಿಪ್ರರು ಪುರಸ್ಕರಿಸಲಿಲ್ಲ ಮತ್ತು ರೈಭ್ಯ ಮತ್ತು ಅವನ ಮಕ್ಕಳನ್ನು ಸತ್ಕರಿಸುತ್ತಿದ್ದರು ಎನ್ನುವುದನ್ನು ಯವಕ್ರಿಯು ನೋಡಿದನು. ಆ ತೇಜಸ್ವಿಯು ಪರಿತಪಿಸಿದನು ಮತ್ತು ಕೋಪಕ್ಕೆ ಸಿಲುಕಿ ವೇದವನ್ನು ತಿಳಿದುಕೊಳ್ಳಲು ಘೋರವಾದ ತಪಸ್ಸನ್ನು ತಪಿಸಿದನು. ಚೆನ್ನಾಗಿ ಸಮಿತ್ತುಗಳಿರುವ ಮಹಾ ಅಗ್ನಿಯಲ್ಲಿ ತನ್ನ ಶರೀರವನ್ನು ಸುಡುತ್ತಿದ್ದನು.

ಇಂದ್ರನು ಆ ಮಹಾತಪಸ್ಸಿನ ಕುರಿತು ತಿಳಿದು ಸಂತಾಪಗೊಂಡನು. ಆಗ ಇಂದ್ರನು ಯವಕ್ರೀತನ ಬಳಿಬಂದು

"ಯಾವ ಕಾರಣಕ್ಕಾಗಿ ನೀನು ಈ ಉತ್ತಮ ತಪಸ್ಸನ್ನು ತಪಿಸುತ್ತಿದ್ದೀಯೆ?"

ಎಂದು ಕೇಳಿದನು. ಯವಕ್ರಿಯು ಹೇಳಿದನು:

"ಸುರಗಣಾರ್ಚಿತ! ದ್ವಿಜರು ಕಲಿತು ಪಡೆಯುವ ವೇದಗಳು ನನಗೆ ಕಾಣಿಸಿಕೊಳ್ಳಲಿ ಎಂದು ನಾನು ಈ ಪರಮ ತಪಸ್ಸನ್ನು ತಪಿಸುತ್ತಿದ್ದೇನೆ. ಸ್ವಾಧ್ಯಾಯಕ್ಕಾಗಿ ನಾನು ಇದನ್ನು ಕೈಗೊಂಡಿದ್ದೇನೆ. ಈ ತಪಸ್ಸಿನಿಂದ ಸರ್ವ ಜ್ಞಾನಗಳನ್ನು ತಿಳಿಯ ಬಯಸುತ್ತೇನೆ. ಗುರುಮುಖದಿಂದ ವೇದವನ್ನು ಪಡೆಯಲು ಬಹಳಷ್ಟು ಸಮಯ ಬೇಕಾಗುತ್ತದೆ. ಆದುದರಿಂದ ಅದನ್ನು ಈಗಲೇ ಪಡೆಯಲು ಈ ಪರಮ ಯತ್ನದಲ್ಲಿ ತೊಡಗಿದ್ದೇನೆ."

ಇಂದ್ರನು ಹೇಳಿದನು:

"ವಿಪ್ರರ್ಷೇ! ನೀನು ಹೋಗಲು ಇಚ್ಛಿಸುವ ಮಾರ್ಗವು ಸರಿಯಾದ ಮಾರ್ಗವಲ್ಲ! ಈ ವಿಧಾನವು ನಿನ್ನ ಕಾರ್ಯಕ್ಕೆ ಬರುವುದಿಲ್ಲ. ಹೋಗು! ವೇದವನ್ನು ಗುರುಮುಖದಿಂದ ತಿಳಿದುಕೊ!"

ಹೀಗೆ ಹೇಳಿ ಇಂದ್ರನು ಹೊರಟುಹೋದನು. ಅಮಿತವಿಕ್ರಮಿ ಯವಕ್ರಿಯಾದರೋ ತನ್ನ ತಪಸ್ಸಿನ ಪ್ರಯತ್ನವನ್ನು ಮುಂದುವರೆಸಿದನು. ಆ ಮಹಾತಪಸ್ವಿಯ ಘೋರ ತಪಸ್ಸಿನ ಉರಿಯಿಂದ ದೇವೇಂದ್ರನು ತುಂಬಾ ಕಷ್ಟಕ್ಕೊಳಗಾದನು. ಪುನಃ ಮತ್ತೊಮ್ಮೆ ಇಂದ್ರನು ತೀವ್ರವಾದ ತಪಸ್ಸಿನಿಂದ ಸುಡುತ್ತಿರುವ ಆ ಮಹಾಮುನಿಯ ಬಳಿಬಂದು ಅವನನ್ನು ತಡೆದನು:

> "ನೀನು ಗುರಿಯನ್ನು ತಲುಪಲು ಅಶಕ್ಯ. ನಿನ್ನ ಮತ್ತು ನಿನ್ನ ತಂದೆಗೆ ವೇದಗಳು ತಾವಾಗಿಯೇ ಪ್ರಕಟವಾಗಬೇಕು ಎನ್ನುವ ನಿನ್ನ ಯೋಚನೆಯೂ ಸರಿಯಲ್ಲ."

ಯವಕ್ರಿಯು ಹೇಳಿದನು:

> "ದೇವರಾಜ! ಈ ರೀತಿಯಲ್ಲಿ ನನ್ನ ಆಸೆಯನ್ನು ಪೂರೈಸಿಕೊಳ್ಳಲಾಗದಿದ್ದರೆ ಮಹಾ ನಿಯಮಗಳೊಂದಿಗೆ ಇನ್ನೂ ಘೋರತರ ತಪಸ್ಸನ್ನು ತಪಿಸುತ್ತೇನೆ. ಕೇಳು! ಇಂದು ನಾನು ಬಯಸಿದುದೆಲ್ಲವನ್ನೂ ಮಾಡಲು ನಿನಗೆ ಇಷ್ಟವಿಲ್ಲದಿದ್ದರೆ ಉರಿಯುತ್ತಿರುವ ಅಗ್ನಿಯಲ್ಲಿ ನನ್ನ ದೇಹದ ಒಂದೊಂದು ಅಂಗವನ್ನೂ ಆಹುತಿಯನ್ನಾಗಿ ನೀಡುತ್ತೇನೆ."

ಆ ಮಹಾತ್ಮ ಮುನಿಯ ನಿರ್ಧಾರವು ಅದೆಂದು ತಿಳಿದ ಆ ಬುದ್ಧಿವಂತ ಇಂದ್ರನು ಅವನನ್ನು ತಡೆಯುವ ಉಪಾಯದ ಕುರಿತು ಮನಸ್ಸಿನಲ್ಲಿಯೇ ಚಿಂತಿಸಿದನು. ಆಗ ಇಂದ್ರನು ಅನೇಕ ನೂರುವರ್ಷಗಳ ದುರ್ಬಲನೂ

ಕೃಶನಾಗಿಯೂ ಆದ ತಪಸ್ವಿ ಬ್ರಾಹ್ಮಣನ ರೂಪವನ್ನು ತಳೆದನು. ಯವಕ್ರೀತನು ತನ್ನ ಶೌಚಕರ್ಮಗಳಿಗೆ ಹೋಗುತ್ತಿದ್ದ ಭಾಗೀರಥಿಯ ತೀರ್ಥಕ್ಕೆ ಹೋಗಿ ಅಲ್ಲಿ ಮರಳಿನ ರಾಶಿಯಿಂದ ಸೇತುವನ್ನು ಕಟ್ಟ ತೊಡಗಿದನು. ಆ ದ್ವಿಜೋತ್ತಮನು ತಾನು ಹೇಳಿದ ಮಾತಿನಂತೆ ನಡೆದುಕೊಳ್ಳದೇ ಇದ್ದಾಗ ಯವಕ್ರಿಗೆ ಪಾಠಕಲಿಸಲು ಇಂದ್ರನು ಒಂದೊಂದೇ ಮುಷ್ಟಿ ಮರಳನ್ನು ಭಾಗೀರಥಿಯಲ್ಲಿ ಹಾಕುತ್ತಾ ಗಂಗೆಯನ್ನು ಮರಳಿನಿಂದ ತುಂಬಿ ಸೇತುವೆ ಕಟ್ಟಲು ಪ್ರಾರಂಭಿಸಿದನು. ಸೇತುವೆ ಕಟ್ಟಲು ಪ್ರಯತ್ನಿಸುತ್ತಿದ್ದ ಅವನನ್ನು ನೋಡಿದ ಆ ಮುನಿಪುಂಗವ ಯವಕ್ರಿಯು ದೊಡ್ಡದಾಗಿ ನಕ್ಕು ಈ ಮಾತುಗಳನ್ನಾಡಿದನು:

> "ಬ್ರಾಹ್ಮಣ! ಇದೇನು ನಡೆಯುತ್ತಿದೆ? ಏನು ಮಾಡಲು ಪ್ರಯತ್ನಿಸುತ್ತಿದ್ದೀಯೆ? ನೀನು ಮಾಡುತ್ತಿರುವ ಈ ಮಹಾ ಪ್ರಯತ್ನವು ನಿರರ್ಥಕ!"

ಇಂದ್ರನು ಹೇಳಿದನು:

> "ಗಂಗೆಗೆ ಸೇತುವೆಯನ್ನು ಕಟ್ಟಿದರೆ ದಾಟಲು ಸುಲಭವಾಗುತ್ತದೆ. ಪುನಃ ಪುನಃ ಹೋಗಿ ಬಂದು ಮಾಡುವ ಜನರಿಗೆ ಕಷ್ಟವಾಗುತ್ತಿದೆ."

ಯವಕ್ರಿಯು ಹೇಳಿದನು:

“ಅತಿಪ್ರವಾಹದಿಂದ ಹರಿಯುತ್ತಿರುವ ಇದಕ್ಕೆ ಸೇತುವೆಯನ್ನು ಕಟ್ಟಲು ಸಾಧ್ಯವಿಲ್ಲ. ಅಶಕ್ಯವಾಗಿರುವುದನ್ನು ಮಾಡುವುದನ್ನು ಬಿಟ್ಟು ಶಕ್ಯವಾದುದನ್ನು ಪ್ರಯತ್ನಿಸು.”

ಇಂದ್ರನು ಹೇಳಿದನು:

“ನೀನು ಹೇಗೆ ವೇದಗಳಿಗಾಗಿ ಅಶಕ್ಯವಾದ ತಪಸ್ಸಿನಲ್ಲಿ ತೊಡಗಿದ್ದೀಯೋ ಹಾಗೆ ನಾನೂ ಕೂಡ ಈ ಅಶಕ್ಯವಾದುದನ್ನು ಮಾಡುವ ಭಾರವನ್ನು ಹೊತ್ತಿದ್ದೇನೆ.”

ಯವಕ್ರಿಯು ಹೇಳಿದನು:

“ತ್ರಿದಶೇಶ್ವರ! ನನ್ನ ಪ್ರಯತ್ನವು ನಿನ್ನ ಈ ಪ್ರಯತ್ನದಂತೆ ನಿರರ್ಥಕವೆಂದು ನೀನು ಯೋಚಿಸುವೆಯಾದರೆ, ಶಕ್ಯವಾದ ಏನನ್ನು ನಾನು ಮಾಡಬೇಕು?”

ಇಂದ್ರನು ಆ ಮಹಾತಪಸ್ವಿಗೆ ಕೇಳಿದ ವರಗಳನ್ನು ಕೊಟ್ಟನು –

“ನಿನಗೂ ಮತ್ತು ನಿನ್ನ ತಂದೆಗೂ ನೀನು ಬಯಸಿದಂತೆ ವೇದಗಳು ಪ್ರಕಟಿತವಾಗುತ್ತವೆ. ಮತ್ತು ನೀನು ಏನನ್ನೆಲ್ಲಾ ಬಯಸಿದ್ದೀಯೋ ಅವುಗಳನ್ನೂ ಪಡೆಯುತ್ತೀಯೆ. ಯವಕ್ರಿ! ಈಗ ಹೋಗು!”

ಬಯಸಿದ್ದುದನ್ನು ಪಡೆದ ಅವನು ತನ್ನ ತಂದೆಗೆ ಹೋಗಿ ಹೇಳಿದನು. ಯವಕ್ರಿಯು ಹೇಳಿದನು:

“ತಂದೇ! ನಮಗಿಬ್ಬರಿಗೂ ವೇದಗಳು ಪ್ರಕಟಗೊಳ್ಳುತ್ತವೆ, ಮತ್ತು ಇತರರಿಗಿಂತ ಮೇಲಾಗಬಹುದು. ಈ ರೀತಿಯ ವರವನ್ನು ನಾನು ಪಡೆದಿದ್ದೇನೆ.”

ಭರದ್ವಾಜನು ಹೇಳಿದನು:

“ಮಗೂ! ನೀನು ಬಯಸಿದ ವರಗಳನ್ನು ಪಡೆದು ನಿನಗೆ ಹೆಮ್ಮೆಯಿನಿಸಿರಬಹುದು. ಆ ಸೊಕ್ಕು ತುಂಬಿ ನೀನು ಬೇಗನೇ ಅತಿ ಕೆಟ್ಟದಾಗಿ ವಿನಾಶವನ್ನು ಹೊಂದುತ್ತೀಯೆ. ಇದರ ಮೇಲೆ ಹಿಂದೆ ದೇವತೆಗಳು ಹೇಳಿದ ಗಾಥೆಯನ್ನು ಹೇಳುತ್ತಾರೆ: “ಹಿಂದೆ ಬಾಲಧಿ ಎಂಬ ಹೆಸರಿನ ವೀರ್ಯವಂತ ಋಷಿಯಿದ್ದನು. ಅವನು ಪುತ್ರಶೋಕದಿಂದ ಉದ್ವಿಗ್ನನಾಗಿ ನನಗೆ ಅಮರನಾದ ಮಗನಾಗಲಿ ಎಂದು ದುಷ್ಕರ ತಪಸ್ಸನ್ನು ತಪಿಸಿದನು ಮತ್ತು ಅಂಥವನು ಅವನಿಗೆ ದೊರಕಿದ ಕೂಡ. ದೇವತೆಗಳು ಅವನಿಗೆ ವರವನ್ನಿತ್ತರೂ ಅವನನ್ನು ಅಮರರಿಗೆ ಸಮನಾಗಿ ಮಾಡಲಿಲ್ಲ. ಮನುಷ್ಯರು ಅಮರರಾಗಿರುವುದಿಲ್ಲ. ಅವನ ಆಯಸ್ಸು ನಿಮಿತ್ತವಾಗುತ್ತದೆ. ಬಾಲಧಿಯು ಹೇಳಿದನು: “ಸುರಸತ್ತಮರೇ! ಎಲ್ಲಿಯವರೆಗೆ ಈ ಪರ್ವತಗಳು ಶಾಶ್ವತವಾಗಿ ನಿಂತಿರುತ್ತವೆಯೋ ಅಲ್ಲಿಯವರೆಗೆ ನನ್ನ ಮಗನ ಆಯಸ್ಸು ಅಕ್ಷಯವಾಗಿ ಇರಲಿ ಎಂದು ನಿಮಿತ್ತವಾಗಿಸಿ.” ಅನಂತರ ಅವನಿಗೆ ಸದಾ ಕೋಪಿಷ್ಟನಾಗಿದ್ದ ಮೇಧಾವೀ

ಮಗನು ಹುಟ್ಟಿದನು. ಅವನು ತನಗಿದ್ದ ವರದ ಕುರಿತು ಕೇಳಿ ಸೊಕ್ಕಿನಿಂದ ಋಷಿಗಳನ್ನು ಅಪಮಾನಿಸತೊಡಗಿದನು. ಮುನಿಗಳನ್ನು ಬೈಯುತ್ತಾ ಅವನು ಭೂಮಿಯ ಮೇಲೆ ತಿರುಗಾಡಿದನು. ಆಗ ಅವನು ಮಹಾವೀರ ಮನೀಷಿಣೀ ಧನುಷಾಕ್ಷನನ್ನು ಭೇಟಿಯಾದನು. ಮೇಧಾವಿಯು ಅವನನ್ನು ಅಪಮಾನಿಸಲು ಆ ವೀರ್ಯವಂತನು ಭಸ್ಮವಾಗು ಎಂದು ಅವನಿಗೆ ಶಪಿಸಿದನು. ಆದರೂ ಅವನು ಭಸ್ಮವಾಗಲಿಲ್ಲ. ಶಾಪಕ್ಕೊಳಗಾಗದೇ ಇದ್ದ ಆ ಮೇಧಾವಿಯನ್ನು ಕಂಡು ಧನುಷಾಕ್ಷನು ಅವನ ನಿಮಿತ್ತ ಮಹಿಷವನ್ನು ಒಡೆದನು. ತನ್ನ ನಿಮಿತ್ತವು ನಾಶಗೊಳ್ಳಲು ಆ ಬಾಲಕನು ತಕ್ಷಣವೇ ಸತ್ತು ಬಿದ್ದನು. ಆಗ ಆ ಮೃತ ಮಗನನ್ನು ಹಿಡಿದು ತಂದೆಯು ವಿಲಪಿಸಿದನು. ಜೋರಾಗಿ ವಿಲಪಿಸುತ್ತಿದ್ದ ಅವನನ್ನು ನೋಡಿ ಮುನಿಗಳು ಪುನರಾವರ್ತಿಸಿದರು. ಅದನ್ನೇ ಹಿಂದೆ ವೇದಗಳಲ್ಲಿ ಹೇಳಿದೆ. ಅದನ್ನು ನಾನು ನಿನಗೆ ಹೇಳುತ್ತೇನೆ. ಮನುಷ್ಯನು ಎಂದೂ ವಿಧಿಯನ್ನು ಬದಲಿಸುವಷ್ಟು ಒಡೆಯನಾಗಲಾರ! ಮಹರ್ಷಿ ಧನುಷಾಕ್ಷನು ಪರ್ವತಗಳನ್ನೇ ತುಂಡರಿಸಿದನು. ಹೀಗೆ ಬಾಲಕರು ವರಗಳನ್ನು ಪಡೆದು ಸೊಕ್ಕಿನಿಂದ ತುಂಬಿ ಸಾಹಸಿಗಳಾಗುತ್ತಾರೆ ಮತ್ತು ಬೇಗನೇ ವಿನಾಶಹೊಂದುತ್ತಾರೆ. ಹೀಗೆ ನಿನಗೂ ಆಗಬಾರದು. ಈ ರೈಭ್ಯನೂ ಮತ್ತು ಹಾಗೆ ಅವನ ಮಕ್ಕಳಿಬ್ಬರೂ

ವೀರ್ಯವಂತರು. ಮಗನೇ! ಅವನನ್ನು ಮೀರಿಸಲು ಪ್ರಯತ್ನಪಡದೇ ಇರು. ಯಾಕೆಂದರೆ ಆ ಮಹಾನೃಷಿಯು ಕೃದ್ಧನೂ, ರೋಷದಿಂದ ಪೀಡಿಸಲು ಸಮರ್ಥನೂ, ತಿಳಿದವನೂ, ತಪಸ್ವಿಯೂ ಮತ್ತು ಕ್ರೋಧನನೂ ಅಗಿದ್ದಾನೆ."

ಯವಕ್ರಿಯು ಹೇಳಿದನು:

"ತಂದೇ! ಹಾಗೆಯೇ ಮಾಡುತ್ತೇನೆ. ನನ್ನ ಮೇಲೆ ಎಂದೂ ಭಿರುಸಾಗಬೇಡ. ನಿನ್ನನ್ನು ಹೇಗೆ ನಾನು ಮನ್ನಿಸುತ್ತೇನೋ ಹಾಗೆ ರೈಭ್ಯನನ್ನೂ ಕೂಡ ನನ್ನ ತಂದೆಯಂತೆ ಗೌರವಿಸುತ್ತೇನೆ."

ಈ ರೀತಿ ಯಾವುದಕ್ಕೂ ಭಯಪಡದ ಯವಕ್ರಿಯು ತನ್ನ ತಂದೆಗೆ ಮೆಚ್ಚುಗೆಯಾಗುವ ಈ ಮಾತುಗಳನ್ನಾಡಿ, ಇತರ ಋಷಿಗಳನ್ನು ಅವಹೇಳನೆ ಮಾಡುವುದರಲ್ಲಿ ಪರಮ ಸಂತೋಷವನ್ನು ಪಡೆದನು. ಹೀಗೆಯೇ ಅಲೆದಾಡುತ್ತಿರುವಾಗ ಯಾವುದಕ್ಕೂ ಹೆದರದ ಯವಕ್ರಿಯು ಮಾಧವ ಮಾಸದಲ್ಲಿ ರೈಭ್ಯನ ಆಶ್ರಮದ ಕಡೆ ನಡೆದನು. ಹೂತುಂಬಿದ ಮರಗಳಿಂದ ಅಲಂಕರಿಸಲ್ಪಟ್ಟ ಆ ಪುಣ್ಯ ಆಶ್ರಮದಲ್ಲಿ ಅವನು ಕಿನ್ನರಿಯಂತೆ ಓಡಾಡುತ್ತಿದ್ದ ಅವನ ಸೊಸೆಯನ್ನು ಕಂಡನು. ಆಗ ಕಾಮದಿಂದ ತನ್ನ ಮನಸ್ಸನ್ನೇ ಕಳೆದುಕೊಂಡ ಯವಕ್ರಿಯು ನಿರ್ಲಜ್ಜನಾಗಿ ಲಜ್ಜೆಗೊಂಡ ಅವಳಿಗೆ ನನ್ನೊಟ್ಟಿಗೆ ಮಲಗು ಎಂದು ಕೇಳಿದನು. ಅವನ ಗುಣವನ್ನು ಅರಿತ ಮತ್ತು ಅವನ ಶಾಪಕ್ಕೆ ಹೆದರಿದ

ಮತ್ತು ರೈಭ್ಯನ ತೇಜಸ್ಸನ್ನು ತಿಳಿದಿದ್ದ ಅವಳು ಹಾಗೆಯೇ ಆಗಲಿ ಎಂದು ಹೋದಳು. ಆಗ ಅವನು ಏಕಾಂತಕ್ಕೆ ಕರೆದೊಯ್ದು ಬಲಾತ್ಕಾರದಿಂದ ಸಂಭೋಗಿಸಿದನು. ಅನಂತರ ಅರಿಂದಮ ರೈಭ್ಯನು ತನ್ನ ಆಶ್ರಮಕ್ಕೆ ಹಿಂದಿರುಗಿದನು. ಆರ್ತಳಾಗಿ ಅಳುತ್ತಿರುವ ಪರಾವಸುವಿನ ಹೆಂಡತಿ ಮತ್ತು ತನ್ನ ಸೊಸೆಯನ್ನು ನೋಡಿ ಅವನು ಮೃದುವಾದ ಮಾತುಗಳಿಂದ ಅವಳನ್ನು ಸಂತವಿಸಿ ಕೇಳಿದನು. ಆ ಶುಭೆಯು ಅವನಿಗೆ - ಯವಕ್ರಿಯು ಮಾತನಾಡಿದುದನ್ನು ಮತ್ತು ಸಾಕಷ್ಟು ವಿಚಾರಮಾಡಿ ತಾನು ಯವಕ್ರಿಗೆ ಕೊಟ್ಟ ಉತ್ತರ - ಎಲ್ಲವನ್ನೂ ವರದಿಮಾಡಿದಳು. ಯವಕ್ರಿಯ ವಿಚೇಷ್ಟೆಯನ್ನು ಕೇಳಿದ ರೈಭ್ಯನು ತನ್ನ ಚೇತಸ್ಸೇ ಸುಡುತ್ತಿರುವಂತಹ ಮಹಾ ಕೋಪಿಷ್ಟನಾದನು. ಆ ಭೃಷಕೋಪನ ತಪಸ್ವಿಯು ಕೋಪಾವಿಷ್ಟನಾಗಿ ತನ್ನ ತಲೆಯ ಒಂದು ಕೂದಲನ್ನು ಕಿತ್ತು ಸುಸಂಸ್ಕೃತವಾದ ಅಗ್ನಿಯಲ್ಲಿ ಆಹುತಿಯನ್ನಾಗಿತ್ತನು. ಆಗ ಅಲ್ಲಿಂದ ರೂಪದಲ್ಲಿ ತನ್ನ ಸೊಸೆಯಂತದೇ ರೂಪವನ್ನುಳ್ಳ ನಾರಿಯು ಮೇಲೆದ್ದಳು. ಆಗ ಅವನು ತನ್ನ ತಲೆಯಿಂದ ಪುನಃ ಇನ್ನೊಂದು ಕೂದಲನ್ನು ಕಿತ್ತು ಅಗ್ನಿಯಲ್ಲಿ ಹಾಕಲು ಅಲ್ಲಿಂದ ಭಯಂಕರನಾಗಿ ಕಾಣುತ್ತಿದ್ದ ಘೋರ ಕಣ್ಣುಗಳುಳ್ಳ ರಾಕ್ಷಸನು ಮೇಲೆ ಬಂದನು. ಅವರಿಬ್ಬರೂ ರೈಭ್ಯನಲ್ಲಿ ನಾವು ಯಾವ ಕಾರ್ಯವನ್ನು ಮಾಡಬೇಕು ಎಂದು ಕೇಳಿದರು.  ಅವರಿಗೆ ಕೃದ್ಧನಾದ ಋಷಿಯು

“ಯವಕ್ರಿಯನ್ನು ಕೊಲ್ಲಿ!”

ಎಂದು ಹೇಳಿದನು. “ಹಾಗೆಯೇ ಆಗಲಿ!” ಎಂದು ಅವರೀರ್ವರು ಯವಕ್ರಿಯನ್ನು ಕೊಲ್ಲಲು ಹೋದರು.

ಆ ಮಹಾತ್ಮನಿಂದ ಸೃಷ್ಟಿಗೊಂಡ ಅವಳು ಅವನನ್ನು ಸಮೀಪಿಸಿ, ಮೋಹಿಸಿ, ಅವನ ಕಮಂಡಲನ್ನು ಅಪಹರಿಸಿದಳು. ತನ್ನ ಕಮಂಡಲುವನ್ನು ಕಳೆದುಕೊಂಡ ಯವಕ್ರಿಯು ಮಲಿನನಾದಾಗ ಆ ರಾಕ್ಷಸನು ಮೇಲಿತ್ತಿದ ಶೂಲದಿಂದ ಅವನ ಮೇಲೆ ಧಾಳಿಮಾಡಿದನು. ಕೊಲ್ಲುವ ಆಸೆಯಿಂದ ಶೂಲವನ್ನು ಹಿಡಿದು ತನ್ನ ಮೇಲೆಗಿರುದುದನ್ನು ನೋಡಿದ ಯವಕ್ರಿಯು ತಕ್ಷಣವೇ ಎದ್ದು ಸರೋವರದ ಕಡೆಗೆ ಓಡಿದನು. ಸರೋವರದಲ್ಲಿ ನೀರಿಲ್ಲದಿರುವುದನ್ನು ಕಂಡು ಯವಕ್ರಿಯು ಪುನಃ ಅವಸರದಲ್ಲಿ ನದಿಯಕಡೆ ಹೋದನು. ಆದರೆ ಎಲ್ಲ ನದಿಗಳೂ ಬತ್ತಿಹೋಗಿದ್ದವು. ಶೂಲವನ್ನು ಹಿಡಿದ ಆ ಘೋರ ರಾಕ್ಷಸನು ಬೆನ್ನೆತ್ತಿ ಬರುತ್ತಿರಲು ಭಯಭೀತನಾಗಿ ಅವನು ತನ್ನ ತಂದೆಯ ಅಗ್ನಿಹೋತ್ರದ ಬಳಿ ಓಡಿ ಬಂದನು. ಆದರೆ ಅವನು ಪ್ರವೇಶಿಸುತ್ತಿರುವಾಗ ಕಾವಲುಗಾರನಾಗಿದ್ದ ಕುರುಡ ಶೂದ್ರನು ಅವನನ್ನು ಬಲವಂತವಾಗಿ ಬಾಗಿಲಲ್ಲಿಯೇ ತಡೆದನು. ಶೂದ್ರನು ಅವನನ್ನು ತಡೆಹಿಡಿದಿರಲು ಆ ರಾಕ್ಷಸನು ಯವಕ್ರಿಯನ್ನು ಶೂಲದಿಂದ ಹೊಡೆದನು ಮತ್ತು ಅವನು ಹೃದಯ ಸೀಳಿ ಕೆಳಗೆ ಬಿದ್ದನು. ಯವಕ್ರಿಯನ್ನು ಕೊಂದು ಆ ರಾಕ್ಷಸನಾದರೋ ರೈಭ್ಯನಲ್ಲಿಗೆ ಮರಳಿದನು. ರೈಭ್ಯನು ಅವನಿಗೆ ಹೋಗಲು ಅನುಮತಿಯನ್ನಿತ್ತನು. ಆದರೆ ಆ ನಾರಿಯೊಡನೆ ಇರತೊಡಗಿದನು.

ಭರದ್ವಾಜನಾದರೋ ಸ್ವಾಧ್ಯಾಯ ಆಹ್ನೀಕಗಳನ್ನು ಪೂರೈಸಿ ಸಮಿತ್ತಿನ ಕಟ್ಟನ್ನು ಹೊತ್ತು ತನ್ನ ಆಶ್ರಮವನ್ನು ಪ್ರವೇಶಿಸಿದನು. ಇದಕ್ಕೂ ಹಿಂದೆ ಅವನನ್ನು ನೋಡಿದ ಕೂಡಲೇ ಎದ್ದು ನಿಲ್ಲುವ ಅಗ್ನಿಗಳೆಲ್ಲವೂ ಇಂದು ಅವನ ಮಗನು ಹತನಾದುದರಿಂದ ಅವನನ್ನು ಸ್ವಾಗತಿಸಲು ಎದ್ದು ನಿಲ್ಲಲಿಲ್ಲ. ಅಗ್ನಿಹೋತ್ರದಲ್ಲಿ ಈ ರೀತಿಯ ವ್ಯತ್ಯಾಸವನ್ನು ಗಮನಿಸಿದ ಆ ಮಹಾತಪಸ್ವಿಯು ಆ ಕುರುಡು ಶೂದ್ರ ಮನೆಕಾವಲಿನವನನ್ನು ಕೇಳಿದನು:

> "ಶೂದ್ರ! ನನ್ನನ್ನು ನೋಡಿ ಈ ಅಗ್ನಿಗಳು ಏಕೆ ಸ್ವಾಗತಿಸುತ್ತಿಲ್ಲ? ನೀನೂ ಕೂಡ ಹಿಂದಿನಂತಿಲ್ಲ. ಆಶ್ರಮದಲ್ಲಿ ಎಲ್ಲವೂ ಕ್ಷೇಮ ತಾನೇ? ಅಲ್ಪಬುದ್ಧಿಯ ನನ್ನ ಆ ಮಗನು ರೈಭ್ಯನಲ್ಲಿಗೆ ಹೋಗಲಿಲ್ಲ ತಾನೇ? ನನಗೆ ಬೇಗನೆ ಹೇಳು. ನನ್ನ ಮನಸ್ಸು ಸುಖದಿಂದಿಲ್ಲ!"

ಶೂದ್ರನು ಹೇಳಿದನು:

> "ನಿನ್ನ ಮಂದಚೇತಸ ಮಗನು ರೈಭ್ಯನಲ್ಲಿಗೆ ಹೋದ. ಆದುದರಿಂದಲೇ ಅವನು ಬಲವಂತನಾದ ರಾಕ್ಷಸನಿಂದ ಕೊಲ್ಲಲ್ಪಟ್ಟು ಬಿದ್ದಿದ್ದಾನೆ. ಶೂಲವನ್ನು ಹಿಡಿದ ರಾಕ್ಷಸನು ಅವನನ್ನು ಅಗ್ನ್ಯಾಗಾರದ ವರೆಗೆ ಬೆನ್ನಟ್ಟಿ ಬಂದ ಮತ್ತು ನಾನು ನಿನ್ನ ಮಗನನ್ನು ನನ್ನ ತೋಳುಗಳಿಂದ ಬಾಗಿಲಲ್ಲಿಯೇ ತಡೆದೆ. ತುಂಬಾ ಅಶುಚಿಯಾಗಿದ್ದು ನೀರನ್ನು ಹುಡುಕುತ್ತಿದ್ದ ಅವನನ್ನು

ಆಗ ಜೋರಾಗಿ ಓಡಿಬಂದ ಆ ರಾಕ್ಷಸನು ಹಿಡಿದಿದ್ದ ಶೂಲದಿಂದ ಅವನನ್ನು ಮುಗಿಸಿದನು.”

ಶೂದ್ರನ ಆ ವಿಪ್ರಿಯ ಮಾತುಗಳನ್ನು ಕೇಳಿದ ಭರದ್ವಾಜನು ತೀರಿಹೋಗಿದ್ದ ಮಗನನ್ನು ಹಿಡಿದೆತ್ತಿ ಬಹಳ ದುಃಖಿತನಾಗಿ ರೋದಿಸಿದನು:

“ದ್ವಿಜರಿಗೆ ಅಧ್ಯಯನ ಮಾಡದೇ ವೇದಗಳು ಪ್ರಕಟವಾಗಲಿ ಎಂದು ಬ್ರಾಹ್ಮಣರಿಗೋಸ್ಕರವಾಗಿ ನೀನು ತಪಸ್ಸನ್ನು ತಪಿಸಲಿಲ್ಲವೇ? ಹಾಗೆ ನೀನು ಮಹಾತ್ಮ ಬ್ರಾಹ್ಮಣರ ಕಲ್ಯಾಣಕ್ಕಾಗಿಯೇ ನಡೆದುಕೊಂಡೆ. ಸರ್ವ ಭೂತಗಳಿಗೂ ನೀನು ತಪ್ಪಿತಸ್ಥನೆಂದಿರಲಿಲ್ಲ. ಹಾಗಿದ್ದರೂ ಕರ್ಕಶತ್ವವನ್ನು ನಿನ್ನದಾಗಿಸಿಕೊಂಡೆ. ಮಗನೇ! ರೈಭ್ಯನ ಮನೆಯ ಬಳಿ ಸುಳಿಯಬೇಡೆಂದು ನಾನು ನಿಷಿದ್ಧ ಮಾಡಿದ್ದೆ. ಆದರೂ ನೀನು ಕಾಲಾಂತಕ ಯಮನಂತಿರುವ ಆ ಕ್ಷುದ್ರನಲ್ಲಿಗೆ ಹೋದೆ. ಆ ಮಹಾತೇಜಸ್ವಿ ಪರಮದುರ್ಮತಿಯು ವೃದ್ಧನಾದ ನನಗೆ ನೀನೊಬ್ಬನೇ ಮಗನೆಂದು ತಿಳಿದಿದ್ದರೂ ಕೋಪಕ್ಕೆ ವಶನಾದನು. ರೈಭ್ಯನ ಕೆಲಸದಿಂದಾಗಿ ಈ ಪುತ್ರಶೋಕವು ನನಗೆ ಪ್ರಾಪ್ತವಾಯಿತು. ಪುತ್ರನು ಮೃತನಾದನೆಂದು ನಾನು ಈ ಭೂಮಿಯಲ್ಲಿಯೇ ಬಹಳ ಇಷ್ಟವಾದ ಈ ಪ್ರಾಣವನ್ನೇ ತೊರೆಯುತ್ತೇನೆ. ಹೇಗೆ ನಾನು ಪುತ್ರಶೋಕದಿಂದ

ದುಃಖಿತನಾಗಿ ಈ ದೇಹವನ್ನು ತೊರೆಯುತ್ತೇನೋ ಹಾಗೆ ರೈಭ್ಯನು ತನ್ನ ಹಿರಿಯ ಮಗನ ಹಿಂಸೆಯಿಂದಾಗಿ ಶೀಘ್ರದಲ್ಲಿಯೇ ಸಾವನ್ನು ಹೊಂದುತ್ತಾನೆ. ಮಕ್ಕಳೇ ಹುಟ್ಟಿಲ್ಲದ ಜನರು ಸುಖಿಗಳು. ಅಂಥವರು ಪುತ್ರಶೋಕವನ್ನು ಹೊಂದದೇ ಯಥಾಸುಖವಾಗಿ ಹೋಗುತ್ತಿರುತ್ತಾರೆ. ಈ ರೀತಿ ಪುತ್ರನ ಸಾವಿನ ಶೋಕದಿಂದ ತುಂಬಾ ವ್ಯಾಕುಲ ಮನಸ್ಕನಾಗಿ ಯಾರು ತಾನೆ ಪಾಪತರನಾಗಿರುವ ತನ್ನ ಮಿತ್ರಗೆ ಶಪಿಸುತ್ತಾನೆ? ಸತ್ತಿರುವ ಮಗನನ್ನು ಕಂಡೆನು ಮತ್ತು ನನ್ನ ಶ್ರೇಷ್ಠ ಸಖನನ್ನು ಶಪಿಸಿದೆನು. ಈ ರೀತಿಯ ಆಪತ್ತು ಇನ್ನು ಯಾರಿಗೆ ತಾನೇ ಬರುತ್ತದೆ?”

ಹೀಗೆ ಬಹುವಿಧದಲ್ಲಿ ವಿಲಪಿಸಿ ಭರದ್ವಾಜನು ತನ್ನ ಮಗನನ್ನು ಸುಟ್ಟನು ಮತ್ತು ನಂತರ ಚೆನ್ನಾಗಿ ಉರಿಯುತ್ತಿರುವ ಬೆಂಕಿಯನ್ನು ಪ್ರವೇಶಿಸಿದನು.

ಇದೇ ಸಮಯದಲ್ಲಿ ಮಹಾಭಾಗ ರೈಭ್ಯನ ಯಜಮಾನ ಪ್ರತಾಪವಾನ್ ರಾಜಾ ಬೃಹದ್ದ್ಯುಮ್ನನು ಸತ್ರವನ್ನು ಕೈಗೊಂಡನು. ಧೀಮಂತ ಬೃಹದ್ದ್ಯುಮ್ನನು ರೈಭ್ಯನ ಮಕ್ಕಳಾದ ಅರಾವಸು ಮತ್ತು ಪರಾವಸುಗಳಿಬ್ಬರನ್ನೂ ಒಟ್ಟಿಗೇ ಸತ್ರದಲ್ಲಿ ವೃತ್ತರನ್ನಾಗಿ ತೆಗೆದುಕೊಂಡಿದ್ದನು. ತಂದೆಯ ಅನುಮತಿಯನ್ನು ಪಡೆದು ಅವರಿಬ್ಬರೂ ಅಲ್ಲಿಗೆ ಹೋದರು. ಆಶ್ರಮದಲ್ಲಿ ರೈಭ್ಯನು ಪರಾವಸುವಿನ ಪತ್ನಿಯೊಡನಿದ್ದನು. ಅನಂತರ ಪರಾವಸುವು ಭೇಟಿಯಾಗಲು ಒಬ್ಬನೇ

ತನ್ನ ಮನೆಗೆ ಬರುವಾಗ ವನದಲ್ಲಿ ಕಪ್ಪು ಜಿನವನ್ನು ಮುಚ್ಚಿಕೊಂಡಿದ್ದ ತನ್ನ ತಂದೆಯನ್ನು ಕಂಡನು. ಆಗ ಬಹಳ ರಾತ್ರಿಯಾಗಿತ್ತು. ರಾತ್ರಿ ಸ್ವಲ್ಪವೇ ಉಳಿದಿತ್ತು. ನಿದ್ದೆಗೆಟ್ಟು ಪ್ರಯಾಣಿಸುತ್ತಿದ್ದ ಅವನು ಗಹನವಾದ ಅರಣ್ಯದಲ್ಲಿ ತನ್ನ ತಂದೆಯನ್ನು ಜಿಂಕೆಯೆಂದು ಅಂದುಕೊಂಡನು. ಜಿಂಕೆಯೆಂದು ತಿಳಿದು ಅವನು ತನ್ನ ತಂದೆಯನ್ನು, ಹಾಗೆ ಮಾಡಬೇಕೆಂದು ಬಯಸಿರಲಿಲ್ಲದಿದ್ದರೂ ತನ್ನ ದೇಹವನ್ನು ಉಳಿಸಿಕೊಳ್ಳಲು, ಕೊಂದನು. ಅವನು ಅವನ ಪ್ರೇತಕಾರ್ಯಗಳೆಲ್ಲವನ್ನೂ ಮಾಡಿ ಪುನಃ ಸತ್ರಕ್ಕೆ ಹಿಂದಿರುಗಿ ತನ್ನ ತಮ್ಮನಿಗೆ ಹೇಳಿದನು:

> “ಈ ಕರ್ಮವನ್ನು ನೀನೊಬ್ಬನೇ ಪೂರೈಸಲು ಎಂದೂ ಶಕ್ತನಲ್ಲ. ನಾನಾದರೋ ಜಿಂಕೆಯೆಂದು ತಿಳಿದು ತಂದೆಯನ್ನು ಕೊಂದೆ. ಆದುದರಿಂದ ಬ್ರಹ್ಮಹತ್ಯಾದೋಷದ ವ್ರತವನ್ನು ನೀನು ನಡೆಸಿದರೆ ಒಳ್ಳೆಯದು. ನಾನೊಬ್ಬನೇ ಈ ಕಾರ್ಯವನ್ನು ಮುಗಿಸಲು ಸಮರ್ಥನಾಗಿದ್ದೇನೆ.”

ಅರಾವಸುವು ಹೇಳಿದನು:

> “ಹಾಗಾದರೆ ನೀನೇ ಈ ಧೀಮಂತ ಬೃದದ್ಯುಮ್ನನ ಸತ್ರವನ್ನು ಪೂರೈಸು. ನಾನು ನಿನ್ನ ಪರವಾಗಿ ನಿಯತೇಂದ್ರಿಯನಾಗಿದ್ದು ಬ್ರಹ್ಮಹತ್ಯೆಯ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ.”

ಅವನ ಬ್ರಹ್ಮಹತ್ಯೆಯ ವ್ರತವನ್ನು ಪೂರೈಸಿ ಮುನಿ ಅರಾವಸುವು

ಪುನಃ ಸತ್ರಕ್ಕೆ ಹೋದನು. ತನ್ನ ತಮ್ಮನನ್ನು ನೋಡಿದ ಪರಾವಸುವು ಅಲ್ಲಿಯೇ ಪರಿಷತ್ತಿನಲ್ಲಿ ಕುಳಿತಿದ್ದ ಬೃಹದ್ಯುಮ್ನನಿಗೆ ಈ ಮಾತುಗಳನ್ನಾಡಿದನು:

> "ಈ ಬ್ರಹ್ಮ ಹಂತಕನಿಗೆ ನಿನ್ನ ಯಜ್ಞವನ್ನು ನೋಡಲು ಒಳಗೆ ಬಿಡಬೇಡ! ಬ್ರಹ್ಮಹತ್ಯಾದೋಷಿಯು ಒಂದು ಕಡೆಗಣ್ಣಿನ ನೋಟದಿಂದಲೇ ನಿನ್ನನ್ನು ಪೀಡಿಸಬಲ್ಲ ಎನ್ನುವುದರಲ್ಲಿ ಸಂಶಯವಿಲ್ಲ."

ಆಗ ಅರಾವಸುವು ಈ ಬ್ರಹ್ಮಹತ್ಯೆಯನ್ನು ಮಾಡಿದ್ದುದು ನಾನಲ್ಲ ಎಂದು ಪುನಃ ಪುನಃ ಕೂಗಿ ಹೇಳುತ್ತಿದ್ದರೂ ಅವನನ್ನು ರಾಜನ ಸೇವಕರು ಎಳೆದು ಹೊರಹಾಕಿದರು. ಅವನು ಬ್ರಹ್ಮಹತ್ಯಾಪ್ರಾಯಶ್ಚಿತ್ತವನ್ನು ತನಗಾಗಿ ಮಾಡಿಲ್ಲವೆಂದೂ ಬ್ರಹ್ಮಹತ್ಯೆಯನ್ನು ಸ್ವಯಂ ಅವನು ಮಾಡಿಲ್ಲವೆಂದು ಹೇಳಿದರೂ ಯಾರೂ ಅದನ್ನು ಸ್ವೀಕರಿಸಲಿಲ್ಲ. ಅರಾವಸುವು ಮಾಡಿದುದರಿಂದ ದೇವತೆಗಳು ಸಂಪ್ರೀತರಾದರು. ಅವರು ಅರಾವಸುವನ್ನು ಮುಖ್ಯ ಪುರೋಹಿತನನ್ನಾಗಿ ನಿಯೋಜಿಸಿ ಪರಾವಸುವನ್ನು ಹೊರಹಾಕಿದರು. ಆಗ ಅಗ್ನಿಯ ಮುಖಂಡತ್ವದಲ್ಲಿ ದೇವತೆಗಳು ಅವನಿಗೆ ವರಗಳನ್ನಿತ್ತರು. ಅವನಾದರೂ ತನ್ನ ತಂದೆಯು ಮೇಲೇಳುವಂತೆ ವರವನ್ನು ಕೇಳಿಕೊಂಡನು. ಹಾಗೆಯೇ ತನ್ನ ಅಣ್ಣನು ತಂದೆಯನ್ನು ವಧಿಸಿದುದನ್ನು ಮರೆತು ತಪ್ಪಿಲ್ಲದಂತಾಗುವಂತೆ ಮತ್ತು ಭರದ್ವಾಜ ಯವಕ್ರಿ ಇಬ್ಬರೂ

ಮೇಲೇಳುವಂತೆ ಕೇಳಿಕೊಂಡನು. ಆಗ ಎಲ್ಲರೂ ಎದ್ದು ಕಾಣಿಸಿಕೊಂಡರು. ಯವಕ್ರಿಯು ಅಗ್ನಿಯನ್ನು ಮುಂದಿಟ್ಟುಕೊಂಡಿದ್ದ ದೇವತೆಗಳಿಗೆ ಹೇಳಿದನು:

> "ಅಮರೋತ್ತಮರೇ! ನಾನು ಬ್ರಹ್ಮನನ್ನು ಕಲಿತಿದ್ದೆ ಮತ್ತು ವ್ರತಗಳನ್ನು ಆಚರಿಸಿದ್ದೆ. ಹಾಗಿದ್ದರೂ ಕಲಿತಿದ್ದ ತಪಸ್ವಿ ರೈಭ್ಯನು ತನ್ನ ಆ ವಿಧಿಯಿಂದ ನನ್ನನ್ನು ಕೆಳಗುರುಳಿಸಲು ಹೇಗೆ ಶಕ್ತನಾದ?"

ದೇವತೆಗಳು ಹೇಳಿದರು:

> "ಮುನಿ ಯವಕ್ರಿ! ನೀನು ಹೇಗೆ ಮಾತನ್ನಾಡುತ್ತೀಯೋ ಹಾಗೆ ಮಾಡಬೇಡ. ನೀನು ಹಿಂದೆ ಗುರುವಿಲ್ಲದೇ ವೇದಗಳನ್ನು ಸುಲಭ ಮಾರ್ಗದಲ್ಲಿ ಕಲಿತೆ. ಆದರೆ ರೈಭ್ಯನು ಗುರುವನ್ನು ತನ್ನ ಕೆಲಸಗಳಿಂದ ತೃಪ್ತಿಪಡಿಸಿ ಕಷ್ಟದಲ್ಲಿ ಬಹಳ ದೀರ್ಘ ಕಾಲದಲ್ಲಿ ಅನುತ್ತಮ ಬ್ರಹ್ಮನನ್ನು ಕಲಿತುಕೊಂಡನು."

ಹೀಗೆ ಅಗ್ನಿಯನ್ನು ಮುಂದಿಟ್ಟುಕೊಂಡು ಬಂದಿದ್ದ ದೇವತೆಗಳು ಯವಕ್ರಿಗೆ ಹೇಳಿ ಅವರೆಲ್ಲರನ್ನೂ ಜೀವಂತಗೊಳಿಸಿ ಪುನಃ ದೇವಲೋಕಕ್ಕೆ ತೆರಳಿದರು.

## ತಾರ್ಕ್ಷ್ಯ ಅರಿಷ್ಟನೇಮಿ

[ತಾರ್ಕ್ಷ್ಯ ಅರಿಷ್ಟನೇಮಿಯ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೮೨) ದಲ್ಲಿ ಬರುತ್ತದೆ. ಬ್ರಾಹ್ಮಣರ ಮಹತ್ವವೇನೆಂದು ಯುಧಿಷ್ಠಿರನು ಕೇಳಿದಾಗ ಋಷಿ ಮಾರ್ಕಂಡೇಯನು ಈ ಕಥೆಯನ್ನು ಅವನಿಗೆ ಕಾಮ್ಯಕ ವನದಲ್ಲಿ ಹೇಳಿದನು.]

ಹೈಹಯರ ಕುಲಕರ ಪರಪುರಂಜಯ ಕುಮಾರ ರೂಪಸಂಪನ್ನ ರಾಜನೊಬ್ಬನಿದ್ದನು. ಒಮ್ಮೆ ಅವನು ಬೇಟೆಗೆ ಹೋದನು. ಎತ್ತರಕ್ಕೆ ಬೆಳೆದಿದ್ದ ಹುಲ್ಲು ಮತ್ತು ಪೊದೆಗಳಿಂದ ಕೂಡಿದ್ದ ಆ ಅರಣ್ಯದಲ್ಲಿ ತಿರುಗುತ್ತಿರುವಾಗ ಹತ್ತಿರದಲ್ಲಿ ಕೃಷ್ಣಾಜಿನವನ್ನು ಮೇಲುಹೊದಿಗೆಯಾಗಿ ಹೊದೆದಿದ್ದ ಮುನಿಯೋರ್ವನನ್ನು ನೋಡಿ, ಅವನು ಜಿಂಕೆಯೆಂದು ತಿಳಿದು ಆ ಅರಣ್ಯದಲ್ಲಿಯೇ ಅವನನ್ನು ಕೊಂದನು. ಆ ಕೆಲಸವನ್ನು ಮಾಡಿ ವ್ಯಥಿತನಾಗಿ ಶೋಕದಿಂದ ಚೇತನವನ್ನು ಕಳೆದುಕೊಂಡ ಅವನು ಪ್ರಥಿತಾತ್ಮ ಹೈಹಯರ ಬಳಿ ಹೋದನು. ಆ ರಾಜನು ಅವರಿಗೆ ನಡೆದ ಹಾಗೆ ಎಲ್ಲವನ್ನೂ ವರದಿಮಾಡಿದನು. ಫಲಮೂಲಗಳನ್ನು ಸೇವಿಸುತ್ತಿದ್ದ ಆ ಮುನಿಯು ಹಿಂಸೆಗೊಳಗಾಗಿದ್ದುದನ್ನು ಕೇಳಿ ಮತ್ತು ಅಲ್ಲಿ ನೋಡಿ ದುಃಖಪರರಾದರು. ಇವನು ಯಾರ ಮಗನೆಂದು ದಾರಿಯಲ್ಲಿ ಎಲ್ಲರೊಡನೆ ವಿಚಾರಿಸುತ್ತಾ ಅವರು ತಾರ್ಕ್ಷ್ಯ ಅರಿಷ್ಟನೇಮಿಯ ಆಶ್ರಮಕ್ಕೆ ಬಂದರು. ಅವರು ಆ ಸಂಶಿತವ್ರತ ಮುನಿಗೆ

ನಮಸ್ಕರಿಸಿದರು. ಆ ಮುನಿಯು ಅವರಿಗೆ ಪೂಜೆಯನ್ನು ತಿರುಗಿ ನೀಡುತ್ತಿರಲು ಅವರೆಲ್ಲರೂ ಅಲ್ಲಿಯೇ ನಿಂತುಕೊಂಡರು. ಅನಂತರ ಅವರು ಆ ಮಹಾತ್ಮ ಮುನಿಗೆ ಹೇಳಿದರು:

> "ಮುನೇ! ನಿನ್ನ ಈ ಸತ್ಕ್ರಿಯೆಗೆ ನಾವು ಅರ್ಹರಲ್ಲ.
> ಕರ್ಮದೋಷದಿಂದ ನಾವು ಬ್ರಾಹ್ಮಣನನ್ನು
> ಹಿಂಸಿಸಲಿಲ್ಲವೇ?"

ಆಗ ವಿಪ್ರರ್ಷಿಯು ಅವರಿಗೆ ಹೇಳಿದನು:

> "ನೀವು ಹೇಗೆ ಬ್ರಾಹ್ಮಣನನ್ನು ಕೊಂದಿರಿ? ನೀವೆಲ್ಲರೂ ಹೇಳಿರಿ
> ಅವನೆಲ್ಲಿ? ನನ್ನ ತಪೋಬಲವನ್ನು ನೋಡಿರಿ."

ಅವರು ಅವನಿಗೆ ನಡೆದುದೆಲ್ಲವನ್ನೂ ಹೇಳಿದರು. ಆದರೆ ಅವರೆಲ್ಲರೂ ಒಟ್ಟಿಗೆ ಅಲ್ಲಿಗೆ ಹೋದಾಗ ತೀರಿಕೊಂಡಿದ್ದ ಋಷಿಯು, ಎಷ್ಟೇ ಹುಡುಕಿದರೂ ಅವರಿಗೆ ಕಾಣಲಿಲ್ಲ. ಇದರಿಂದ ಅವರೆಲ್ಲರೂ ತಾವು ಸ್ವಪ್ನವನ್ನು ಕಾಣುತ್ತಿದ್ದೇವೋ ಎಂದು ನಾಚಿಕೊಂಡರು. ಆಗ ಪರಪುರಂಜಯ ಮುನಿ ತಾರ್ಕ್ಷ್ಯನು ಅವರಿಗೆ ಹೇಳಿದನು:

> "ಇವನೇ ನೀವು ಕೊಂದಿರುವ ಬ್ರಾಹ್ಮಣನಿರಬಹುದೇ?
> ನೃಪರೇ! ಇವನು ನನ್ನ ಮಗ. ತಪೋಬಲಸಮನ್ವಿತ."

ಅವರು ಆ ಋಷಿಯನ್ನು ನೋಡಿ ಪರಮ ವಿಸ್ಮಿತರಾದರು.

> "ಮಹಾ ಆಶ್ಚರ್ಯವಿದು"

ಎಂದು ಹೇಳಿದರು.

"ಅವನು ತೀರಿಕೊಂಡಿದ್ದುದನ್ನು ನಾವು ನೋಡಿದ್ದೇವೆ. ಅವನು ಹೇಗೆ ಪುನಃ ಜೀವಂತನಾಗಿ ಬಂದಿದ್ದಾನೆ? ಅವನು ಪುನಃ ಜೀವಿತನಾಗಲು ತಪಸ್ಸಿನ ವೀರ್ಯವು ಕಾರಣವೇ? ವಿಪ್ರರ್ಷೇ ! ನಿನಗೆ ಇದನ್ನು ತಿಳಿಸಬೇಕೆಂದಿದ್ದರೆ ನಾವು ಕೇಳಬಯಸುತ್ತೇವೆ."

ಆಗ ಅವನು ಹೇಳಿದನು:

"ನೃಪರೇ! ಮೃತ್ಯುವು ನಮ್ಮ ಮೇಲೆ ಪ್ರಭಾವಬೀರುವುದಿಲ್ಲ. ಇದರ ಕುರಿತು ಸಂಕ್ಷಿಪ್ತವಾಗಿ ಕಾರಣವನ್ನು ಹೇಳುತ್ತೇನೆ. ನಾವು ಸತ್ಯವನ್ನು ಮಾತ್ರ ಗುರುತಿಸುತ್ತೇವೆ. ನಾವು ಸುಳ್ಳನ್ನು ಮನಸ್ಸಿನಲ್ಲಿಯೂ ಯೋಚಿಸುವುದಿಲ್ಲ. ನಾವು ಸ್ವಧರ್ಮದಲ್ಲಿಯೇ ನಿರತರಾಗಿದ್ದೇವೆ. ಆದುದರಿಂದ ನಮಗೆ ಮೃತ್ಯುಭಯವಿಲ್ಲ. ಯಾವುದು ಬ್ರಾಹ್ಮಣರಿಗೆ ಕುಶಲವೋ ಅದನ್ನೇ ನಾವು ಮಾತನಾಡುತ್ತೇವೆ. ಅವರ ದುಶ್ಚರಿತಗಳ ಕುರಿತು ಮಾತನಾಡುವುದಿಲ್ಲ. ಆದುದರಿಂದ ನಮಗೆ ಮೃತ್ಯುಭಯವಿಲ್ಲ. ಅನ್ನಪಾನೀಯಗಳಿಂದ ಅತಿಥಿಗಳನ್ನು ಸತ್ಕರಿಸುತ್ತೇವೆ. ಭೃತ್ಯರಿಗೆ ಅತಿಯಾಗಿ ಉಣಿಸುತ್ತೇವೆ. ತೇಜಸ್ವಿಗಳ ದೇಶದಲ್ಲಿ ವಾಸಿಸುತ್ತೇವೆ. ಆದುದರಿಂದ ನಮಗೆ ಮೃತ್ಯುಭಯವಿಲ್ಲ. ಇದನ್ನು ಸ್ವಲ್ಪವಾಗಿಯೇ ನಿಮಗೆ

ಹೇಳಿದ್ದೇನೆ. ಈಗ ಮತ್ಸರವಿಲ್ಲದೇ ಎಲ್ಲರೂ ಒಟ್ಟಿಗೇ ಹಿಂದಿರುಗಿ. ಪಾಪದ ಭಯವಿಲ್ಲದಿರಲಿ."

"ಹಾಗೆಯೇ ಆಗಲಿ" ಎಂದು ಹೇಳಿ ಅವರು ಎಲ್ಲ ರಾಜರೂ ಆ ಮಹಾಮುನಿಯನ್ನು ಪೂಜಿಸಿ ಸಂತೋಷದಿಂದ ಸ್ವರಾಜ್ಯಕ್ಕೆ ಮರಳಿದರು.

## ಅತ್ರಿ

[ಅತ್ರಿಯ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೮೫) ದಲ್ಲಿ ಬರುತ್ತದೆ. ಬ್ರಾಹ್ಮಣರ ಮಹತ್ವವೇನೆಂದು ಯುಧಿಷ್ಠಿರನು ಕೇಳಿದಾಗ ಋಷಿ ಮಾರ್ಕಂಡೇಯನು ಈ ಕಥೆಯನ್ನು ಅವನಿಗೆ ಕಾಮ್ಯಕ ವನದಲ್ಲಿ ಹೇಳಿದನು.]

ವೈನ್ಯ ಎಂಬ ಹೆಸರಿನ ರಾಜರ್ಷಿಯು ಅಶ್ವಮೇಧಯಾಗದ ದೀಕ್ಷೆಯಲ್ಲಿದ್ದನು. ಅಲ್ಲಿಗೆ ಅತ್ರಿಯು ವಿತ್ತವನ್ನು ಅರಸಿ ಹೋಗಲು ಬಯಸಿದನು. ಆದರೆ ಅವನು ವ್ಯಕ್ತಿಧರ್ಮದ ನಿದರ್ಶನದಂತೆ ಅಲ್ಲಿ ಹೋಗಲು ತನ್ನೊಂದಿಗೆ ತಾನೇ ಒಪ್ಪಿಕೊಳ್ಳಲಿಲ್ಲ. ಅದರ ಕುರಿತು ಯೋಚಿಸಿದ ಆ ಮಹಾತೇಜಸ್ವಿಯು ವನಕ್ಕೆ ಹೋಗಲು ನಿರ್ಧರಿಸಿದನು. ಅವನು ತನ್ನ ಧರ್ಮಪತ್ನಿಯನ್ನೂ ಮಕ್ಕಳನ್ನೂ ಕರೆದು ಅವರಿಗೆ

ಹೇಳಿದನು:

> “ಅತ್ಯಂತ ಫಲವನ್ನೂ ಬಹಳ ನಿರುಪದ್ರವವನ್ನೂ ಹೊಂದಬೇಕೆಂದರೆ ಬೇಗನೆ ಅರಣ್ಯಕ್ಕೆ ಹೋಗುವುದೇ ಅಧಿಕ ಉತ್ತಮವಾದುದು ಎಂದು ನನಗನ್ನಿಸುತ್ತದೆ.”

ಧರ್ಮವನ್ನೇ ಅನುಸರಿಸುತ್ತಿದ್ದ ಅವನ ಪತ್ನಿಯು ಉತ್ತರಿಸಿದಳು:

> “ಮಹಾತ್ಮ ವೈನ್ಯನಲ್ಲಿಗೆ ಹೋಗಿ ಅವನಿಂದ ಬಹಳ ಧನವನ್ನು ಕೇಳು. ಯಜಮಾನನಾಗಿರುವ ಆ ರಾಜರ್ಷಿಯು ಕೇಳಿದವರಿಗೆ ಧನವನ್ನು ಕೊಡುತ್ತಾನೆ. ವಿಪ್ರರ್ಷೇ ! ಅದನ್ನು ತೆಗೆದುಕೋ. ಬಹುಧನವನ್ನು ಸ್ವೀಕರಿಸಿ, ಭೃತ್ಯರು ಮತ್ತು ಮಕ್ಕಳಲ್ಲಿ ಸರಿಯಾಗಿ ವಿಭಜನೆ ಮಾಡಿ ನಿನಗಿಷ್ಟವಿದ್ದಲ್ಲಿಗೆ ಹೋಗು. ಇದೇ ಧರ್ಮವಿದರು ಹೇಳುವ ಪರಮ ಧರ್ಮ.”

ಅತ್ರಿಯು ಹೇಳಿದನು:

> “ಮಹಾಭಾಗೇ ! ವೈನ್ಯನು ಧರ್ಮಸಂಯುಕ್ತ ಮತ್ತು ಸತ್ಯವ್ರತಸಮನ್ವಿತನೆಂದು ಮಹಾತ್ಮ ಗೌತಮನು ನನಗೆ ಹೇಳಿದ್ದನು. ಆದರೆ ಅಲ್ಲಿ ನನ್ನ ದ್ವೇಷವನ್ನಿಟ್ಟಿರುವ ದ್ವಿಜರಿದ್ದಾರೆ ಎಂದೂ ಗೌತಮನು ಹೇಳಿದ್ದನು. ಆದುದರಿಂದ ನಾನು ಅಲ್ಲಿಗೆ ಹೋಗಬಾರದೆಂದು ನಿರ್ಧರಿಸಿದ್ದೇನೆ. ಅಲ್ಲಿ ನಾನು ಎಷ್ಟೇ ಮಂಗಳಕರ, ಧರ್ಮಕಾಮಾರ್ಥಸಂಹಿತ

ಮಾತುಗಳನ್ನಾಡಿದರೂ ಅವರು ಅದನ್ನು ಅನ್ಯಥಾ ನಿರರ್ಥಕವೆಂದು ಹೇಳುತ್ತಾರೆ. ಆದರೆ ನಿನ್ನ ಮಾತುಗಳು ನನಗೆ ಹಿಡಿಸುತ್ತವೆ. ಹೋಗುತ್ತೇನೆ. ವೈನ್ಯನು ನನಗೆ ಗೋವುಗಳನ್ನೂ ಅತಿದೊಡ್ಡ ಅರ್ಥಸಂಚಯವನ್ನೂ ಕೊಡುತ್ತಾನೆ.”

ಹೀಗೆ ಹೇಳಿ ಆ ಮಹಾತಪಸ್ವಿಯು ವೈನ್ಯನ ಯಜ್ಞಕ್ಕೆ ಹೋದನು. ಯಜ್ಞಾಯತನವನ್ನು ತಲುಪಿ ಅತ್ರಿಯು ಆ ನೃಪನನ್ನು ಪ್ರಶಂಸಿಸಿದನು:

“ರಾಜನ್! ವೈನ್ಯ! ನೀನು ಭೂಮಿಯ ಈಶ. ನೀನು ನೃಪರಲ್ಲಿ ಪ್ರಥಮ. ನಿನ್ನನ್ನು ಮುನಿಗಣವು ಸ್ತುತಿಸುತ್ತದೆ. ಯಕೆಂದರೆ ನಿನ್ನ ಹೊರತಾದ ಧರ್ಮವಿದುವು ಇಲ್ಲ.”

ಆಗ ಅಲ್ಲಿದ್ದ ಓರ್ವ ಮಹಾತಪಸ್ವಿ ಗೌತಮ ಋಷಿಯು ಸಿಟ್ಟಿನಿಂದ ಅವನಿಗೆ ಹೇಳಿದನು:

“ಅತ್ರೇ! ಹಾಗೆ ಪುನಃ ಮಾತನಾಡಬೇಡ! ನಿನಗೆ ಸರಿಯಾದ ಪ್ರಜ್ಞೆಯಿಲ್ಲ! ನಮಗೆ ಪ್ರಜಾಪತಿ ಮಹೇಂದ್ರನೇ ಪ್ರಥಮ ಸ್ಥಾನದಲ್ಲಿದ್ದಾನೆ.”

ಆಗ ಅತ್ರಿಯೂ ಕೂಡ ಗೌತಮನಿಗೆ ಉತ್ತರಿಸಿದನು:

“ಪ್ರಜಾಪತಿ ಇಂದ್ರನು ಹೇಗೋ ಹಾಗೆ ಇವನೂ ನಮಗೆ ಕೊಡುವವನು. ನೀನೇ ಮೋಹದಿಂದ ಮೋಹಿತನಾಗಿರುವೆ. ನಿನ್ನಲ್ಲಿ ಪ್ರಜ್ಞೆಯೇ ಇಲ್ಲ.”

ಗೌತಮನು ಹೇಳಿದನು:

> “ನನಗೆ ತಿಳಿದಿದೆ. ನಾನು ಮೋಹಿತನಾಗಿಲ್ಲ. ಮಾತನಾಡಲು ಮುನ್ನುಗ್ಗುವ ನೀನು ಮೋಹಿತನಾಗಿದ್ದೀಯೆ. ಅವನನ್ನು ಭೇಟಿಮಾಡಿ ಅವನಿಂದ ಅಭ್ಯುದಯವನ್ನು ಪಡೆಯಬೇಕೆಂಬ ಒಂದೇ ಕಾರಣದಿಂದ ನೀನು ಅವನನ್ನು ಸ್ತುತಿಸುತ್ತಿದ್ದೀಯೆ. ನಿನಗೆ ಪರಮಧರ್ಮವು ತಿಳಿದಿಲ್ಲ ಮತ್ತು ಅದರ ಪ್ರಯೋಜನವೂ ನಿನಗೆ ಗೊತ್ತಿಲ್ಲ. ನೀನೊಬ್ಬ ಮೂಢ ಬಾಲಕ. ನೀನು ಹೇಗೆ ವೃದ್ಧನಾದೆಯೋ!”

ಮುನಿಗಳು ನೋಡುತ್ತಿದ್ದಂತೆಯೇ ಅವರೀರ್ವರು ಅಲ್ಲಿ ನಿಂತು ವಾದಿಸುತ್ತಿರುವಾಗ ಆ ಯಜ್ಞಕ್ಕೆ ಬಂದು ಸೇರಿದ್ದವರು ಕೇಳತೊಡಗಿದರು:

> “ಇವರಿಬ್ಬರು ಹೇಗೆ ಇಲ್ಲಿ ಪ್ರವೇಶಿಸಿದರು? ವೈನ್ಯನ ಈ ಸಂಸದಿಗೆ ಯಾರು ಇವರಿಗೆ ಪ್ರವೇಶವನ್ನು ಕೊಟ್ಟರು? ಯಾವ ಕಾರಣದಿಂದ ಈ ಈರ್ವರು ಜೋರಾಗಿ ಕೂಗುತ್ತಾ ವಾದಿಸುತ್ತಿದ್ದಾರೆ?”

ಆಗ ಪರಮಧರ್ಮಾತ್ಮ ಸರ್ವಧರ್ಮವಿದು ಕಾಶ್ಯಪನು ವಾದಿಸುತ್ತಿರುವ ಅವರಿಬ್ಬರಿಗೂ ಬೆರಳು ತೋರಿಸಿ ಹೇಳಿದನು. ಗೌತಮನು ಆ ಮುನಿಸತ್ತಮ ಸದಸ್ಯರಿಗೆ ಹೇಳಿದನು:

> “ದ್ವಿಜಪುಂಗವರೇ! ಈಗ ನಮ್ಮಿಬ್ಬರ ನಡುವೆ ಹುಟ್ಟಿರುವ ಪ್ರಶ್ನೆಯ ಕುರಿತು ಕೇಳಿ. ವೈನ್ಯನು ವಿಧಾತನೆಂದು ಅತ್ರಿಯು ಹೇಳುತ್ತಿದ್ದಾನೆ. ಆದರೆ ನನಗೆ ಅದರಲ್ಲಿ ಮಹಾ ಸಂಶಯವಿದೆ.”

ಇದನ್ನು ಕೇಳಿದ ತಕ್ಷಣವೇ ಆ ಮಹಾತ್ಮ ಮುನಿಗಳು ಆ ಸಂಶಯವನ್ನು ಬಿಡಿಸಲು ಧರ್ಮಜ್ಞ ಸತತ್ಕುಮಾರನಲ್ಲಿಗೆ ಧಾವಿಸಿದರು. ಯಥಾವತ್ತಾಗಿ ಹೇಳಿದ ಅವರ ಮಾತನ್ನು ಕೇಳಿ ಆ ಮಹಾತಪಸ್ವಿಯು ಧರ್ಮಾರ್ಥಸಂಹಿತವಾದ ಈ ಮಾತಿನಿಂದ ಉತ್ತರಿಸಿದನು:

> “ಬ್ರಾಹ್ಮಣತ್ವವು ಕ್ಷತ್ರಿಯ ಸಹಿತವಾಗಿದೆ ಮತ್ತು ಕ್ಷತ್ರಿಯವು ಬ್ರಾಹ್ಮಣತ್ವದ ಜೊತೆಯಿದೆ. ರಾಜನೇ ಪರಮ ಧರ್ಮ ಮತ್ತು ಪ್ರಜೆಗಳ ಒಡೆಯನೂ ಹೌದು. ಅವನೇ ಶಕ್ರ, ಅವನೇ ಶುಕ್ರ, ಅವನೇ ಧಾತ ಮತ್ತು ಅವನೇ ಬೃಹಸ್ಪತಿ. ಕ್ಷತ್ರಿಯ ಭೂಪತಿ ನೃಪನು ಪ್ರಜಾಪತಿ, ವಿರಾಟ ಮತ್ತು ಸಾಮ್ರಾಟ. ಈ ಶಬ್ಧಗಳಿಂದ ಕರೆಯಲ್ಪಡುವವನು ಸ್ತುತಿಗೆ ಏಕೆ ಅರ್ಹನಲ್ಲ? ರಾಜನನ್ನು ಪುರಾತನ ಯೋನಿಯೆಂದೂ, ಯುದ್ಧದಲ್ಲಿ ಜಯಶೀಲನೆಂದೂ, ಆಕ್ರಮಣಮಾಡುವವನೆಂದೂ, ಸಂತೋಷವನ್ನು ನೀಡುವವನೆಂದೂ, ಅಭಿವೃದ್ಧಿಕಾರನೆಂದೂ, ಸ್ವರ್ಗದ ಮಾರ್ಗದರ್ಶಕನೆಂದೂ, ಜಯವುಳ್ಳವನೆಂದೂ, ವಿಶಾಲ ಪ್ರಶಾಸಕನೆಂದೂ, ಸಿಟ್ಟಿನಲ್ಲಿ ಸತ್ಯನೂ, ಯುದ್ಧದಲ್ಲಿ

ಉಳಿಯುವವನೂ, ಮತ್ತು ಸತ್ಯಧರ್ಮಪ್ರವರ್ತಕನೆಂದೂ ಕರೆಯುತ್ತಾರೆ. ಅಧರ್ಮದ ಭೀತಿಯಿಂದ ಋಷಿಗಳು ಕ್ಷತ್ರಿಯರಲ್ಲಿ ಬಲವನ್ನು ಅಡವಿಟ್ಟಿದ್ದಾರೆ. ಆದಿತ್ಯನು ದಿವಿಯಲ್ಲಿ ದೇವತೆಗಳ ಕತ್ತಲೆಯನ್ನು ತನ್ನ ತೇಜಸ್ಸಿನಿಂದ ಕಳೆಯುತ್ತಾನೆ. ಹಾಗೆಯೇ ನೃಪತಿಯು ಈ ಭೂಮಿಯಲ್ಲಿ ಅಧರ್ಮವನ್ನು ಕ್ರೂರನಾಗಿ ಕಳೆಯುತ್ತಾನೆ. ಆದುದರಿಂದ ಶಾಸ್ತ್ರಪ್ರಮಾಣದ ದರ್ಶನಗಳಿಂದ ರಾಜನ ಪ್ರಧಾನತ್ವವನ್ನು ತೋರಿಸಲಾಗಿದೆ. ಮತ್ತು ಯಾವಪಕ್ಷವು ರಾಜನ ಪರವಾಗಿ ಮಾತನಾಡಿದೆಯೋ ಅದೇ ಸಾಧಿಸಿದೆ.”

ಅನಂತರ ಮಹಾಮನ ರಾಜನು ತನ್ನ ಪಕ್ಷವೇ ಗೆದ್ದಿದೆಯೆಂದು ಸಂತೋಷದಿಂದ ತನ್ನನ್ನು ಸ್ತುತಿಸಿದ ಅತ್ರಿಗೆ ಹೇಳಿದನು:

“ವಿಪ್ರರ್ಷೇ ! ಇದಕ್ಕೆ ಮೊದಲು ನಾನು ಸರ್ವಮನುಷ್ಯರಲ್ಲಿಯೂ ಹಿರಿಯವನೆಂದೂ, ಸರ್ವದೇವರ ಸಮನೆಂದೂ ಶ್ರೇಷ್ಠನೆಂದೂ ನೀನು ಹೇಳಿದೆ. ಆದುದರಿಂದ ನಾನು ನಿನಗೆ ಅಧಿಕವಾದ ವಿವಿಧ ಸಂಪತ್ತನ್ನೂ, ಸಹಸ್ರ ಸುವರ್ಣಗಳಿಂದ ಅಲಂಕೃತರಾದ ಯುವದಾಸಿಯರನ್ನೂ, ಹತ್ತು ಕೋಟಿ ಬಂಗಾರದ ನಾಣ್ಯಗಳನ್ನೂ ಹತ್ತು ಭಾರದಷ್ಟು ಆಭರಣಗಳನ್ನೂ ಕೊಡುತ್ತೇನೆ. ಯಾಕೆಂದರೆ ನೀನು ಸರ್ವಜ್ಞನೆಂದು ನನ್ನ ಅಭಿಪ್ರಾಯ.”

ಆಗ ಮಹಾತ್ಮ ಅತ್ರಿಯು ಅವೆಲ್ಲವನ್ನೂ ಯಥಾವಿಧಿಯಾಗಿ ಸ್ವೀಕರಿಸಿದನು ಮತ್ತು ಆ ತೇಜಸ್ವಿ ಮಹಾತಪಸ್ವಿಯು ತನ್ನ ಮನೆಗೆ ಹಿಂದಿರುಗಿದನು. ಸಂತೋಷದಿಂದ ಆ ಪ್ರಯತಾತ್ಮನು ತನ್ನ ಪುತ್ರರಿಗೆ ಅದನ್ನು ಸಮವಾಗಿ ವಿಂಗಡಿಸಿ ಕೊಟ್ಟು, ವನಕ್ಕೆ ತೆರಳಿ ತಪಸ್ಸಿನಲ್ಲಿ ನಿರತನಾದನು.

# ವೈವಸ್ವತ ಮನು

[ಮತ್ಸ್ಯಾವತಾರದ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೮೫) ದಲ್ಲಿ ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ವಿವಸ್ವತನಿಗೆ ಪ್ರತಾಪಿ, ಪರಮ ಋಷಿ, ನರಶಾರ್ದೂಲ, ಪ್ರಜಾಪತಿಯ ಸಮದ್ಯುತಿ ಮಗನಿದ್ದನು. ಓಜಸ್ಸಿನಲ್ಲಿ, ತೇಜಸ್ಸಿನಲಿ, ಸಂಪತ್ತಿನಲ್ಲಿ, ಮತ್ತು ವಿಶೇಷವಾಗಿ ತಪಸ್ಸಿನಲ್ಲಿ ಆ ಮನುವು ತನ್ನ ತಂದೆಯನ್ನೂ ಪಿತಾಮಹನನ್ನೂ ಮೀರಿಸಿದ್ದನು. ಆ ನರಾಧಿಪನು ವಿಶಾಲ ಬದರಿಯಲ್ಲಿ ಬಾಹುಗಳನ್ನು ಮೇಲಕ್ಕೆತ್ತಿ, ಒಂದೇ ಕಾಲಿನ ಮೇಲೆ ನಿಂತು ತೀವ್ರವಾದ ಮಹಾತಪಸ್ಸನ್ನು ಮಾಡಿದನು. ತಲೆಯನ್ನು ಕೆಳಮಾಡಿ ಕಣ್ಣುರೆಪ್ಪೆಗಳನ್ನು

ಬಿಡಿಯದೇ ಅವನು ಹತ್ತುಸಾವಿರ ವರ್ಷಗಳ ಪರ್ಯಂತ ಘೋರ ತಪಸ್ಸನ್ನು ಕೈಗೊಂಡನು. ಒಮ್ಮೆ ಅವನು ಹೀಗೆ ಒದ್ದೆಯಾಗಿದ್ದ ಚೀರವನ್ನುಟ್ಟು ಜಟಾಧರಿಯಾಗಿ ತಪಸ್ಸಿನಲ್ಲಿ ನಿರತನಾಗಿರಲು ಒಂದು ಮೀನು ವಿರಿಣೀತೀರಕ್ಕೆ ಬಂದು ಈ ಮಾತುಗಳನ್ನಾಡಿತು:

> “ಭಗವನ್! ನಾನೊಂದು ಚಿಕ್ಕ ಮೀನು. ನಾನು ದೊಡ್ಡ ಮೀನುಗಳಿಂದ ಭಯಪಟ್ಟಿದ್ದೇನೆ. ಆದುದರಿಂದ ನೀನು ನನ್ನನ್ನು ರಕ್ಷಿಸಬೇಕು. ಸನಾತನವಾಗಿ ವಿಹಿತವಾಗಿರುವ ನಡತೆಯಂತೆ ವಿಶೇಷವಾಗಿ ಬಲವಂತ ಮೀನುಗಳು ದುರ್ಬಲ ಮೀನುಗಳನ್ನು ತಿನ್ನುತ್ತವೆ. ಈ ವಿಶೇಷವಾಗಿ ಅಲೆಯಂತೆ ಹೊಡೆಯುತ್ತಿರುವ ಈ ಮಹಾ ಭಯದಿಂದ ನನ್ನನ್ನು ಉದ್ಧರಿಸಬೇಕು. ಹಾಗೆ ಮಾಡಿದರೆ ನಾನು ನಿನಗೆ ಪ್ರತೀಕಾರವನ್ನು ಮಾಡುತ್ತೇನೆ.”

ಮೀನಿನ ಮಾತುಗಳನ್ನು ಕೇಳಿದ ವೈವಸ್ವತ ಮನುವು ಕೃಪೆಯಿಂದ ತುಂಬಿ, ಆ ಮೀನನ್ನು ತನ್ನ ಅಂಗೈಗಳಲ್ಲಿ ಎತ್ತಿಕೊಂಡನು. ವೈವಸ್ವತ ಮನುವು ಚಂದ್ರನ ಕಿರಣಗಳಂತೆ ಹೊಳೆಯುತ್ತಿದ್ದ ಆ ಮೀನನ್ನು ನೀರಿನಿಂದ ಎತ್ತಿ ನೀರಿನ ಭರಣಿಯಲ್ಲಿ ಇರಿಸಿದನು. ಅಲ್ಲಿ ಪರಮ ಸತ್ಕೃತವಾದ ಆ ಮೀನು ಬೆಳೆಯಿತು. ಮನುವು ಅದನ್ನು ಪುತ್ರನೆಂದೇ ತಿಳಿದು ವಿಶೇಷವಾಗಿ ಆರೈಕೆಮಾಡಿದನು. ಬಹಳ ಸಮಯದ ನಂತರ ಆ ಮೀನು ತುಂಬಾ ದೊಡ್ಡದಾಗಿ ಆ ನೀರಿನ ಭರಣಿಯು ಅದಕ್ಕೆ

ಸಾಕಾಗಲಿಲ್ಲ. ಆಗ ಮನುವನ್ನು ನೋಡಿ ಮತ್ಸ್ಯವು ಪುನಃ ಹೀಗೆ ಮಾತನಾಡಿತು:

> "ಭಗವನ್! ದಯವಿಟ್ಟು ನನ್ನನ್ನು ಬೇರೆ ಕಡೆ ಕೊಂಡೊಯ್ದಿಡು!" ಮುನಿ ಮನುವು ಆಗ ಆ ಮೀನನ್ನು ಭರಣಿಯಿಂದ ತೆಗೆದು ದೊಡ್ಡ ಸರೋವರವೊಂದಕ್ಕೆ ತಂದು ಅಲ್ಲಿ ಅದನ್ನು ಎಸೆದನು.

ಆ ಮೀನು ಬಹಳ ವರ್ಷಗಳವರೆಗೆ ಬೆಳೆಯತೊಡಗಿತು. ಆ ಸರೋವರವು ಎರಡು ಯೋಜನ ಅಗಲವೂ ಒಂದು ಯೋಜನ ವಿಸ್ತೀರ್ಣವಾಗಿಯೂ ಇದ್ದಿತು. ಅದರಲ್ಲಿಯೂ ಕೂಡ ಮತ್ಸ್ಯವು ಹಿಡಿಯದಿದ್ದಾಗ ಮತ್ತು ಚಲಿಸಲಿಕ್ಕಾಗದಿದ್ದಾಗ ಅದು ಮನುವಿಗೆ ಹೇಳಿತು:

> "ಭಗವನ್! ದಯವಿಟ್ಟು ನನ್ನನ್ನು ಸಮುದ್ರಮಹಿಷೀ ಗಂಗೆಗೆ ತೆಗೆದುಕೊಂಡು ಹೋಗು. ನೀನು ಒಪ್ಪಿಕೊಂಡರೆ ನಾನು ಅಲ್ಲಿ ವಾಸಿಸುತ್ತೇನೆ."

ಅದರ ಮಾತಿನಂತೆ ಭಗವಾನ್ ಮನುವು ಆ ಮೀನನ್ನು ಗಂಗಾನದಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ತಾನೇ ಎಸೆದನು. ಅಲ್ಲಿ ಮತ್ಸ್ಯವು ಕೆಲವು ಕಾಲ ಬೆಳೆಯಿತು. ಆಗ ಪುನಃ ಮನುವನ್ನು ನೋಡಿ ಮತ್ಸ್ಯವು ಮಾತನಾಡಿತು:


"ಭಗವನ್! ದೊಡ್ಡದಾಗಿ ಬೆಳೆದಿರುವ ನಾನು ಗಂಗೆಯಲ್ಲಿಯೂ ಚಲಿಸಲು ಅಶಕ್ತನಾಗಿದ್ದೇನೆ. ತಕ್ಷಣವೇ ಸಮುದ್ರಕ್ಕೆ ಕರೆದೊಯ್ದು ನನಗೆ ಕೃಪೆ ತೋರು."

ಮನುವು ಮತ್ಸ್ಯವನ್ನು ಗಂಗೆಯ ನೀರಿನಿಂದ ಮೇಲೆತ್ತಿ ಸಮುದ್ರಕ್ಕೆ ತಂದು ಅಲ್ಲಿ ತಾನೇ ಅದನ್ನು ವಿಸರ್ಜಿಸಿದನು. ತುಂಬಾ ದೊಡ್ಡದಾಗಿದ್ದರೂ ಆ ಮತ್ಸ್ಯವು ಮನುವಿನ ಮನಸ್ಸಿಗೆ ಎತ್ತಿಕೊಳ್ಳಲು ತುಂಬಾ ಸುಲಭವಾಗಿತ್ತು ಮತ್ತು ಮುಟ್ಟಲು- ಮೂಸಲು ಸುಖಕರವಾಗಿತ್ತು. ಸಮುದ್ರದಲ್ಲಿ ಬಿಡಲ್ಪಟ್ಟ ಆ ಮತ್ಸ್ಯವು ಮನುವಿಗೆ ಮುಗುಳ್ನಗುತ್ತಾ ಈ ಮಾತುಗಳನ್ನಾಡಿತು:

"ಭಗವನ್! ನೀನು ನನಗೆ ಎಲ್ಲರೀತಿಯ ರಕ್ಷಣೆಯನ್ನೂ ನೀಡಿದ್ದೀಯೆ. ಈಗ ಕಾಲಪ್ರಾಪ್ತವಾದಾಗ ನೀನು ಏನು ಮಾಡಬೇಕೆಂದು ನನ್ನಿಂದ ಕೇಳು. ಸ್ವಲ್ಪವೇ ಸಮಯದಲ್ಲಿ ಈ ಭೂಮಿಯಲ್ಲಿರುವ ಸ್ಥಾವರ ಜಂಗಮಗಳೆಲ್ಲವೂ ಪ್ರಲಯದಲ್ಲಿ ಹೋಗುತ್ತವೆ. ಲೋಕಗಳನ್ನು ತೊಳೆಯುವ ಕಾಲವು ಬಂದೊದಗಿದೆ. ಆದುದರಿಂದ ನಿನಗೆ ಹಿತವಾದುದನ್ನು ಇಂದು ತಿಳಿಸಿಕೊಡುತ್ತಿದ್ದೇನೆ. ಚಲಿಸುವ ಮತ್ತು ಚಲಿಸದಿರುವ, ಹಂದಾಡುವ ಮತ್ತು ಹಂದಾಡದಿರುವ ಎಲ್ಲರಿಗೂ ಪರಮದಾರುಣ ಕಾಲವು ಬಂದೊದಗಿದೆ. ನೀನು ಒಂದು ದೃಢ ನೌಕೆಯನ್ನು ಮಾಡಬೇಕು. ಅದಕ್ಕೊಂದು ಹಗ್ಗವನ್ನು

ಕಟ್ಟಿರಬೇಕು. ಸಪ್ತಋಷಿಗಳೊಡನೆ ಅದನ್ನು ಏರಬೇಕು. ನಾನು ಹಿಂದೆ ಹೇಳಿದ ಎಲ್ಲವುಗಳ ಬೀಜಗಳನ್ನು ಆ ನಾವೆಯಲ್ಲಿಟ್ಟು ನನಗೆ ಕಾಯಬೇಕು. ನಾನು ಬಂದಿದುದನ್ನು ನನ್ನ ಕೋಡುಗಳಿಂದ ಗುರುತಿಸಬಹುದು. ಹೀಗೆ ನೀನು ಕಾರ್ಯನಿರ್ವಹಿಸಬೇಕು. ನಾನು ಹೋಗುತ್ತೇನೆ. ನನ್ನ ಈ ಮಾತುಗಳನ್ನು ಅತಿಯಾಗಿ ಶಂಕಿಸಬೇಡ!"

"ನಾನು ಹಾಗೆಯೇ ಮಾಡುತ್ತೇನೆ" ಎಂದು ಮನುವು ಮತ್ಸ್ಯಕ್ಕೆ ಉತ್ತರಿಸಿದನು. ಪರಸ್ಪರರಿಂದ ಬೀಳ್ಕೊಂಡು ತಮಗೆನಿಸಿದ್ದಲ್ಲಿಗೆ ಹೋದರು. ಅನಂತರ ಮಹಾರಾಜ ಮನುವು ಮತ್ಸ್ಯವು ಹೇಳಿದಂತೆ ಎಲ್ಲ ಬೀಜಗಳನ್ನೂ ಒಟ್ಟುಗೂಡಿಸಿ, ಸುಂದರ ನಾವೆಯಲ್ಲಿ ಇಟ್ಟು ಉಕ್ಕುತ್ತಿದ್ದ ಸಾಗರದಲ್ಲಿ ತೇಲಿದನು. ಮನುವು ಮತ್ಸ್ಯದ ಕುರಿತು ಚಿಂತಿಸಿದನು. ಅವನು ಚಿಂತಿಸುತ್ತಿದ್ದಾನೆ ಎಂದು ತಿಳಿದು ಕೋಡನ್ನುಳ್ಳ ಮತ್ಸ್ಯವು ಅಲ್ಲಿಗೆ ಬಂದಿತು. ಹೇಳಿದಂತೆ ಕೋಡನ್ನು ಹೊಂದಿ ರೂಪದಲ್ಲಿ ಪರ್ವತದಂತಿರುವ ಅದನ್ನು ಇಂದ್ರ ಮನುವು ಸಮುದ್ರದಲ್ಲಿ ನೋಡಿದನು. ಅವನು ಹಗ್ಗಕ್ಕೆ ಗಂಟು ಮಾಡಿ ಅದನ್ನು ಮತ್ಸ್ಯದ ತಲೆಯ ಮೇಲಿದ್ದ ಕೋಡಿಗೆ ಸಿಲುಕಿಸಿದನು. ಗಂಟಿಗೆ ಸಿಲುಕಿದ ಆ ಮತ್ಸ್ಯವು ಆ ನಾವೆಯನ್ನು ಬಹುವೇಗದಿಂದ ಸಮುದ್ರದಲ್ಲಿ ಎಳೆದುಕೊಂಡು ಹೋಯಿತು. ಅದು ಅಲೆಗಳೊಂದಿಗೆ ನರ್ತಿಸುತ್ತಿದ್ದ, ನೀರಿನಿಂದ ಭೋರ್ಗರೆಯುತ್ತಿದ್ದ ಸಮುದ್ರವನ್ನು ನಾವೆಯೊಂದಿಗೆ ದಾಟಿತು. ಮಹಾಗಾಳಿಯ ಹೊಡೆತಕ್ಕೆ ಸಿಲುಕಿದ ಆ ನಾವೆಯು



ಅಮಲಿನಲ್ಲಿದ್ದ ಚಪಲ ಸ್ತ್ರೀಯಂತೆ ಓಲಾಡುತ್ತಿತ್ತು. ನೋಡಲು ಒಂದು ಚೂರು ಭೂಮಿಯೂ ಇರಲಿಲ್ಲ, ಆಕಾಶದ ಬಿಂದುವೂ ಇರಲಿಲ್ಲ. ಆಕಾಶ ಮತ್ತು ದಿಗಂತ ಎಲ್ಲವೂ ನೀರಿನಿಂದ ತುಂಬಿತ್ತು. ಈ ರೀತಿ ಲೋಕವು ಸಂಕುಲಕ್ಕೆ ಸಿಲುಕಿದಾಗ ಕೇವಲ ಸಪ್ತರ್ಷಿಗಳು, ಮನು ಮತ್ತು ಮತ್ಸ್ಯರನ್ನು ಕಾಣಬಹುದಾಗಿತ್ತು. ಈ ರೀತಿ ಬಹಳ ವರ್ಷಗಳ ಪರ್ಯಂತ ಆ ಮತ್ಸ್ಯವು ನಾವೆಯನ್ನು ನಿರಾಯಾಸವಾಗಿ ಆ ನೀರಿನ ಮೇಲೆ ಎಳೆಯಿತು. ಅನಂತರ ಮತ್ಸ್ಯವು ನಾವೆಯನ್ನು ಹಿಮಾಲಯದ ಪರಮ ಶಿಖರಕ್ಕೆ ಎಳೆದೊಯ್ಯಿತು. ಆಗ ತೆಳುವಾಗಿ ಮುಗುಳ್ನಗುತ್ತಾ ಮತ್ಸ್ಯವು ಋಷಿಗಳಿಗೆ ಹೇಳಿತು:

> "ತಡಮಾಡದೇ ನೌಕೆಯನ್ನು ಈ ಹಿಮಾಲಯದ ಶಿಖರಕ್ಕೆ ಕಟ್ಟಿ."

ಮತ್ಸ್ಯನ ಮಾತುಗಳನ್ನು ಕೇಳಿ ಅವರು ಬೇಗನೆ ನೌಕೆಯನ್ನು ಹಿಮಾಲಯದ ಶಿಖರಕ್ಕೆ ಕಟ್ಟಿದರು. ಈಗಲೂ ಕೂಡ ಹಿಮಾಲಯದ ಆ ಪರಮ ಶೃಂಗವು ನೌಬಂಧನ ಎಂಬ ಹೆಸರಿನಿಂದ ಖ್ಯಾತಿಯಾಗಿದೆ. ರೆಪ್ಪೆಬಡಿಯದ ಆ ಮತ್ಸ್ಯವು ಸೇರಿದ್ದ ಋಷಿಗಳಿಗೆ ಹೇಳಿತು:

> "ನಾನು ಪ್ರಜಾಪತಿ ಬ್ರಹ್ಮ. ನನಗಿಂತ ಅಧಿಕವಾದುದು ಇನ್ನೊಂದಿಲ್ಲ. ಮತ್ಸ್ಯರೂಪದಿಂದ ನಿಮ್ಮನ್ನು ಈ ಭಯದಿಂದ ಮೋಕ್ಷಗೊಳಿಸಿದ್ದೇನೆ. ಈಗ ಮನುವು ಎಲ್ಲ ಪ್ರಜೆಗಳನ್ನೂ – ದೇವಾಸುರಮಾನವರನ್ನು, ಎಲ್ಲ ಲೋಕಗಳನ್ನೂ, ಚಲಿಸುವ



ಮತ್ತು ಜಲಿಸದಿರುವವುಗಳನ್ನು – ಸೃಷ್ಟಿಸುವವನಿದ್ದಾನೆ. ಅತಿ ತೀವ್ರ ತಪಸ್ಸಿನಿಂದ ಅವನಿಗೆ ಮುಂದಾಗುವುದೆಲ್ಲವೂ ತೋರಿಸಿಕೊಳ್ಳುತ್ತದೆ. ನನ್ನ ಪ್ರಸಾದದಿಂದ ಪ್ರಜೆಗಳ ಸೃಷ್ಟಿಯಲ್ಲಿ ಯಾವುದೇ ತಪ್ಪೂ ನಡೆಯುವುದಿಲ್ಲ."

ಈ ಮಾತುಗಳನ್ನಾಡಿ ಕ್ಷಣಾರ್ಧದಲ್ಲಿ ಮತ್ಸ್ಯವು ಕಾಣಿಸದೇ ಹೋಯಿತು. ಮನು ವೈವಸ್ವತನು ಸ್ವಯಂ ಪ್ರಜೆಗಳನ್ನು ಸೃಷ್ಟಿಸಲು ಬಯಸಿದನು. ಪ್ರಜೆಗಳನ್ನು ಸೃಷ್ಟಿಸುವುದು ಹೇಗೆಂದು ತಿಳಿಯದೇ ಮಹತ್ತರ ತಪಸ್ಸನ್ನು ತಪಿಸಿದನು. ಆ ಮಹಾತಪಸ್ಸಿನಿಂದ ಯುಕ್ತನಾದ ಮನುವು ತಾನೇ ಸರ್ವ ಪ್ರಜೆಗಳನ್ನು ಸೃಷ್ಟಿಸಲು ತೊಡಗಿದನು.

ಮನುವಿನ ಈ ಚರಿತ್ರೆಯನ್ನು ಪ್ರಾರಂಭದಿಂದ ಯಾರು ನಿತ್ಯವೂ

ಕೇಳುತ್ತಾರೋ ಆ ನರರು ಸುಖಿಗಳೂ, ಸರ್ವಾರ್ಥ ಸಿದ್ಧರೂ ಆಗಿ ಸ್ವರ್ಗಲೋಕವನ್ನು ಪಡೆಯುತ್ತಾರೆ.

# ಮಂಡೂಕ-ವಾಮದೇವ

[ಮಂಡೂಕ-ವಾಮದೇವರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೯೦) ದಲ್ಲಿ ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ಅಯೋಧ್ಯೆಯ ಇಕ್ಷ್ವಾಕುಕುಲೋತ್ಪನ್ನನಾದ ಪರಿಕ್ಷಿತ ಎಂಬ ಹೆಸರಿನ ರಾಜನು ಬೇಟೆಗೆ ಹೋದನು. ಅವನು ಒಂದು ಕುದುರೆಯ ಮೇಲೆ ಕುಳಿತು ಜಿಂಕೆಯೊಂದನ್ನು ಅರಸಲು ಜಿಂಕೆಯು ಅವನನ್ನು ಬಹುದೂರ ಕೊಂಡೊಯ್ಯಿತು. ದಾರಿಯಲ್ಲಿ ಅವನು ತುಂಬಾ ಆಯಾಸಗೊಂಡು ಹಸಿವು ಬಾಯಾರಿಕೆಗಳಿಂದ ಬಳಲಿ ಯಾವುದೋ ಒಂದು ದಟ್ಟವಾದ ಮರಗಳಿದ್ದ ಪ್ರದೇಶವನ್ನು ಕಂಡನು. ಅದನ್ನು ಪ್ರವೇಶಿಸಿದನು. ಆ ವನಕೂಟದ ಮಧ್ಯೆ ಅತೀವ ರಮಣೀಯವಾದ ಸರೋವರವನ್ನು ನೋಡಿ ಅವನು ಮತ್ತು ಕುದುರೆಗಳು ಅದರಲ್ಲಿ ಮುಳುಗಿದರು. ಆಯಾಸ ಕಳೆದು ರಾಜನು ಕಮಲದ ದಂಟುಗಳನ್ನು ಕುದುರೆಯ ಮುಂದಿರಿಸಿ ಆ

ಪುಷ್ಕರಿಣೀ ತೀರದಲ್ಲಿ ಸುತ್ತಾಡತೊಡಗಿದನು. ಅಲ್ಲಿ ಅವನು ಮಲಗಿಕೊಂಡನು ಮತ್ತು ಗೀತಶಬ್ಧವನ್ನು ಕೇಳಿದನು. ಅದನ್ನು ಕೇಳಿ

> "ಇಲ್ಲಿ ಮನುಷ್ಯರ ಕುರುಹನ್ನು ಕಾಣುತ್ತಿಲ್ಲ. ಆದರೆ ಈ ಗೀತಶಬ್ಧವು ಎಲ್ಲಿಂದ?"

ಎಂದು ಯೋಚಿಸಿದನು. ಆಗ ಅವನು ನೋಡಲು ಪರಮ ರೂಪವತಿಯಾದ, ಪುಷ್ಪಗಳನ್ನು ಕೀಳುತ್ತಾ ಹಾಡುತ್ತಿರುವವಳನ್ನು ಕಂಡನು. ಆಗ ಅವಳು ರಾಜನ ಸಮೀಪಕ್ಕೆ ಮುಂದುವರೆದು ಬಂದಳು. ರಾಜನು ಅವಳಿಗೆ

> "ಸುಭಗೇ! ನೀನು ಯಾರವಳು?"

ಎಂದು ಕೇಳಿದನು. "ನಾನು ಕನ್ಯೆ" ಎಂದು ಅವಳು ಉತ್ತರಿಸಿದಳು. ಅವಳಿಗೆ ರಾಜನು "ನಿನ್ನನ್ನು ಬಯಸುತ್ತೇನೆ" ಎಂದು ಹೇಳಿದನು. ಆಗ ಕನ್ಯೆಯು

> "ಒಂದು ಶರತ್ತಿನಂತೆ ಮಾತ್ರ ನೀನು ನನ್ನನ್ನು ಪಡೆಯಬಲ್ಲೆ. ಅನ್ಯಥಾ ಅಲ್ಲ"

ಎಂದು ಹೇಳಿದಳು. ಶರತ್ತೇನೆಂದು ರಾಜನು ಕೇಳಲು ಕನ್ಯೆಯು

> "ನನಗೆ ಎಂದೂ ನೀರನ್ನು ತೋರಿಸಬಾರದು!"

ಎಂದು ಹೇಳಿದಳು. "ಎಂದೂ ಇಲ್ಲ" ಎಂದು ಹೇಳಿ ರಾಜನು ಅವಳನ್ನು

ಸೇರಿ ಬಳಿಯಲ್ಲಿ ಕುಳಿತುಕೊಂಡನು. ರಾಜನು ಕುಳಿತಲ್ಲಿಗೆ, ಅವನ ಹೆಜ್ಜೆಯ ಗುರುತುಗಳನ್ನೇ ನೋಡಿಕೊಳ್ಳುತ್ತಾ ಅವನ ಸೇನೆಯು ಅಲ್ಲಿಗೆ ಬಂದು ಅವನನ್ನು ಸುತ್ತುವರೆದು ನಿಂತಿತು. ಸ್ವಲ್ಪ ವಿಶ್ರಮಿಸಿ ರಾಜನು ಅವಳನ್ನು ಒಂದು ಶಿಬಿಕೆಯಲ್ಲಿರಿಸಿಕೊಂಡು ಹೊರಟನು. ತನ್ನ ನಗರವನ್ನು ತಲುಪಿ ಅವಳೊಂದಿಗೆ ರಹಸ್ಯದಲ್ಲಿ, ಬೇರೆ ಏನನ್ನೂ ನೋಡದೇ ರಮಿಸುತ್ತಿದ್ದನು.

ಪ್ರಧಾನ ಮಂತ್ರಿಯು ರಾಜನ ಪರಿಚಾರಕ ಸ್ತ್ರೀಯರೊಡನೆ ಇದರ ಪ್ರಯೋಜನವೇನು? ಎಂದು ಪ್ರಶ್ನಿಸಿದನು. ಸ್ತ್ರೀಯರು ಹೇಳಿದರು:

> "ನಾವು ಒಂದು ವಿಶೇಷವನ್ನು ನೋಡಿದೆವು. ಇಲ್ಲಿಗೆ ನೀರನ್ನು ಮಾತ್ರ ತರುವಂತಿಲ್ಲ!"

ಎಂದು. ಅದರಂತೆ ಅಮಾತ್ಯನು ನೀರಿಲ್ಲದ, ಬೇಕಾದಷ್ಟು ಮರಗಳುಳ್ಳ, ಬಹಳಷ್ಟು ಗೆಡ್ಡೆ, ಪುಷ್ಪ, ಫಲಗಳನ್ನುಳ್ಳ ಒಂದು ವನವನ್ನು ಮಾಡಿಸಿ, ರಹಸ್ಯದಲ್ಲಿ ರಾಜನಲ್ಲಿಗೆ ಬಂದು ಹೇಳಿದನು:

> "ಈ ಉದಾರ ವನವು ನೀರಿಲ್ಲದುದು. ಇಲ್ಲಿ ನೀನು ಚೆನ್ನಾಗಿ ರಮಿಸಬಹುದು."

ಅವನ ವಚನದಂತೆ ಅವನು ದೇವಿಯ ಸಹಿತ ಆ ವನವನ್ನು ಪ್ರವೇಶಿಸಿದನು. ಒಂದು ದಿನ ಅವನು ಅವಳೊಡನೆ ಆ ವನದಲ್ಲಿ ವಿಹರಿಸುತ್ತಿದ್ದನು. ಆಗ ಅವನು ಹಸಿವು ಬಾಯಾರಿಕೆಗಳಿಂದ

ಬಳಲಿರಲು ಒಂದು ಅತಿಮುಕ್ತಗಳ ವನವನ್ನು ಕಂಡನು. ರಾಜನು ಪ್ರಿಯೆಯೊಂದಿಗೆ ಅದನ್ನು ಪ್ರವೇಶಿಸಿ, ಶುದ್ಧವಾದ ನೀರಿನಿಂದ ತುಂಬಿದ ಆದರೆ ಸುಧಾತಲದಿಂದ ಮುಚ್ಚಲ್ಪಟ್ಟ ಹೊಂಡವೊಂದನ್ನು ನೋಡಿದನು. ಅದನ್ನು ನೋಡಿದೊಡನೆಯೇ ತನ್ನ ದೇವಿಯೊಡನೇ ಆ ಹೊಂಡವನ್ನು ಪ್ರವೇಶಿಸಿದನು. ರಾಜನು ದೇವಿಗೆ

> "ಬಾ! ನೀರಿರುವ ಈ ಹೊಂಡದಲ್ಲಿ ಇಳಿ"

ಎಂದು ಕರೆದನು. ಅವಳು ಆ ಮಾತನ್ನು ಕೇಳಿ ನೀರಿಗಿಳಿದಳು. ಆದರೆ ಪುನಃ ಮೇಲೆ ಬರಲಿಲ್ಲ. ರಾಜನು ಹುಡುಕಾಡಿದನು; ಆದರೆ ಅವಳನ್ನು ಕಾಣಲಿಲ್ಲ. ಅವನು ಆ ಹೊಂಡವನ್ನು ಬರಿದುಮಾಡಿಸಿದನು ಮತ್ತು ನೀರಿನ ಚಿಲುಮೆಯ ಬಾಯಿಯಲ್ಲಿ ಒಂದು ಕಪ್ಪೆಯನ್ನು ಕಂಡನು. ಅವನು ಕ್ರುದ್ಧನಾಗಿ ಆಜ್ಞಾಪಿಸಿದನು:

> "ಎಲ್ಲ ಕಪ್ಪೆಗಳನ್ನೂ ಕೊಲ್ಲಿ! ನನ್ನಿಂದ ಏನನ್ನಾದರೂ ಬಯಸುವವರು ಸತ್ತ ಕಪ್ಪೆಗಳನ್ನು ನನಗೆ ಕಾಣಿಕೆಯಾಗಿ ತರಬೇಕು."

ಘೋರವಾದ ಮಂಡೂಕವಧ ಕ್ರಿಯೆಯು ದಿಕ್ಕುಗಳಲ್ಲಿ ನಡೆಯಲು ಎಲ್ಲ ಮಂಡೂಕಗಳಿಗೂ ಭಯವು ಆವರಿಸಿತು. ಆಗ ಮಂಡೂಕಗಳ ರಾಜನು ತಾಪಸನ ವೇಷವನ್ನು ಧರಿಸಿ ರಾಜನಲ್ಲಿಗೆ ಆಗಮಿಸಿ ಹೇಳಿದನು:

> "ರಾಜನ್! ಕ್ರೋಧವಶನಾಗಬೇಡ. ಕರುಣೆ ನೀಡು.

ಅನಪರಾಧಿಗಳಾದ ಮಂಡೂಕಗಳನ್ನು ಕೊಲ್ಲುವ ಕೆಲಸವು ಸಲ್ಲದು. ಅಚ್ಯುತ! ಮಂಡೂಕಗಳನ್ನು ಕೊಲ್ಲಬೇಡ! ಕೋಪವನ್ನು ಸಹಿಸಿಕೋ! ಅಜ್ಞಾನಿಗಳಾಗಿಯೇ ಇರುವ ಜನರ ಧನವು ಕ್ಷೀಣವಾಗುತ್ತದೆ. ಅವರನ್ನು ನೋಡಿದಾಗಲೆಲ್ಲ ನೀನು ಅವರಮೇಲಿನ ನಿನ್ನ ಕ್ರೋಧವನ್ನು ತೊರೆಯುತ್ತೀಯೆ ಎಂದು ಭರವಸೆಯನ್ನು ನೀಡು. ಶುರುಮಾಡಿದ ಅಧರ್ಮವನ್ನು ನಿಲ್ಲಿಸು! ಸತ್ತ ಮಂಡೂಕಗಳಿಂದ ನಿನಗೇನು ಪ್ರಯೋಜನ?”

ತನ್ನ ಪ್ರಿಯೆಯ ಕುರಿತು ಶೋಕಪರೀತಾತ್ಮನಾಗಿದ್ದ ರಾಜನು ಅವನಿಗೆ ಹೇಳಿದನು:

“ನಾನು ಇದನ್ನು ಕ್ಷಮಿಸಲಾರೆ! ಅವರನ್ನು ಕೊಲ್ಲುತ್ತೇನೆ. ಈ ದುರಾತ್ಮರೇ ನನ್ನ ಪ್ರಿಯೆಯನ್ನು ತಿಂದಿದ್ದಾರೆ. ಮಂಡೂಕಗಳು ಸರ್ವಥಾ ನನ್ನಿಂದ ವಧಿಸಲ್ಪಡುತ್ತವೆ. ಇದರ ಕುರಿತು ನನ್ನನ್ನು ತಡೆಯುವುದು ಸರಿಯಲ್ಲ.”

ಆ ವಾಕ್ಯಗಳನ್ನು ಕೇಳಿದ ಅವನು ವ್ಯಥಿತೇಂದ್ರಿಯನಾಗಿ ಉತ್ತರಿಸಿದನು:

“ಕರುಣೆ ತೋರು ರಾಜನ್! ನಾನು ಆಯು ಎಂಬ ಹೆಸರಿನ ಮಂಡೂಕರಾಜ. ನನ್ನ ಮಗಳು ಸುಶೋಭನ ಎಂಬ ಹೆಸರಿನವಳೇ ಅವಳು. ಅವಳಿಗೆ ಈ ದುಷ್ಟ ನಡವಳಿಕೆಯಿದೆ. ಈ ಹಿಂದೆಯೂ ಕೂಡ ಬಹಳ ರಾಜರನ್ನು ಈ ರೀತಿ ಮೋಸಮಾಡಿದ್ದಾಳೆ.”

ಆಗ ರಾಜನು ಹೇಳಿದನು:

"ನನಗೆ ಅವಳು ಬೇಕು. ಅವಳನ್ನು ನನಗೆ ಕೊಡು !"

ಆಗ ತಂದೆಯು ಅವಳನ್ನು ರಾಜನಿಗೆ ಕೊಟ್ಟು

"ಈ ರಾಜನ ಶುಶ್ರೂಷೆಮಾಡು"

ಎಂದು ಹೇಳಿದನು. ಅವನು ತನ್ನ ಮಗಳಿಗೆ ಹೇಳಿದನು:

"ನೀನು ರಾಜರನ್ನು ಮೋಸಗೊಳಿಸಿರುವುದರಿಂದ, ನಿನ್ನ ಈ ದುಷ್ಕೃತದಿಂದ ನಿನ್ನಲ್ಲಿ ಹುಟ್ಟುವ ಮಕ್ಕಳು ಅಬ್ರಾಹ್ಮಣರಾಗುತ್ತಾರೆ."

ಆ ರಾಜನು ಅವಳನ್ನು ಪಡೆದು ಅವಳೊಡನೆ ಸುರತಗುಣನಿಬದ್ಧ ಹೃದಯನಾಗಿ, ಲೋಕತ್ರಯಗಳ ಐಶ್ವರ್ಯವನ್ನೇ ಪಡೆದಷ್ಟು ಹರ್ಷಿತನಾಗಿ, ಗದ್ಗದ ಕಂಠನಾಗಿ, ಕೈಮುಗಿದು, ಪೂಜಿಸಿ, ಮಂಡೂಕರಾಜನಿಗೆ "ಅನುಗೃಹೀತನಾಗಿದ್ದೇನೆ" ಎಂದು ಹೇಳಿದನು. ಮಂಡೂಕರಾಜನು ತನ್ನ ಅಳಿಯನನ್ನು ಬೀಳ್ಕೊಂಡು ಎಲ್ಲಿಂದ ಬಂದಿದ್ದನೋ ಅಲ್ಲಿಗೆ ತೆರಳಿದನು.

ಕೆಲವು ಕಾಲದಲ್ಲಿ ಅವಳಲ್ಲಿ ರಾಜನಿಗೆ ಮೂವರು ಕುಮಾರರು ಜನಿಸಿದರು - ಶಲ, ದಲ ಮತ್ತು ಬಲರೆಂದು. ಅವರಲ್ಲಿ ಹಿರಿಯವನಾದ ಶಲನಿಗೆ ಸಮಯದಲ್ಲಿ ರಾಜ್ಯಾಬಿಷೇಕವನ್ನು ಮಾಡಿ ತಂದೆಯು ಧೃತಾತ್ಮನಾಗಿ ವನಕ್ಕೆ ತೆರಳಿದನು. ಈ ಶಾಲನು ಒಮ್ಮೆ ಬೇಟೆಗೆಂದು

ಹೋದನು. ಜಿಂಕೆಯೊಂದನ್ನು ಕಂಡು ಅದನ್ನು ರಥದ ಮೇಲೆ ಕುಳಿತು ಬೆನ್ನತ್ತಿದನು. ಅವನು ಸೂತನಿಗೆ ಶೀಘ್ರವಾಗಿ ನನ್ನನ್ನು ತೆಗೆದುಕೊಂಡು ಹೋಗು ಎಂದು ಹೇಳಿದನು. ಹೀಗೆ ಹೇಳಲು ಸೂತನು ರಾಜನಿಗೆ ಹೇಳಿದನು:

> "ಒತ್ತಾಯವನ್ನು ಮಾಡಬೇಡ! ನಿನ್ನ ರಥಕ್ಕೆ ವಾಮ್ಯ ಕುದುರೆಗಳನ್ನು ಕಟ್ಟಿದ್ದರೂ ಈ ಜಿಂಕೆಯನ್ನು ಹಿಡಿಯಲು ನಿನ್ನಿಂದ ಆಗುವುದಿಲ್ಲ."

ರಾಜನು ಸೂತನಿಗೆ ಹೇಳಿದನು:

> "ನನಗೆ ವಾಮ್ಯಗಳ ಕುರಿತು ಹೇಳು. ಇಲ್ಲವಾದರೆ ನಾನು ನಿನ್ನನ್ನು ಕೊಲ್ಲುತ್ತೇನೆ!"

ಹೀಗೆ ಹೇಳಲು ರಾಜಭಯದಿಂದ ಮತ್ತು ವಾಮದೇವನ ಶಾಪದ ಭಯದಿಂದಲೂ ಅವನು ರಾಜನಿಗೆ

> "ವಾಮದೇವನ ಕುದುರೆಗಳು ಮನೋವೇಗದ ವಾಮ್ಯಗಳು"

ಎಂದು ಹೇಳಿದನು. ರಾಜನು ಅವನಿಗೆ ಹೇಳಿದನು:

> "ವಾಮದೇವನ ಆಶ್ರಮಕ್ಕೆ ಕರೆದೊಯ್ಯಿ!"

ವಾಮದೇವನ ಆಶ್ರಮಕ್ಕೆ ಹೋಗಿ ಅವನು ಋಷಿಗೆ ಹೇಳಿದನು:

> "ಭಗವನ್! ನಾನು ಹೊಡೆದ ಜಿಂಕೆಯೊಂದು

ಓಡಿಹೋಯಿತು. ನಾನು ಅದನ್ನು ಪಡೆಯಬೇಕು. ದಯವಿಟ್ಟು ನನಗೆ ವಾಮ್ಯಗಳನ್ನು ಕೊಡಬೇಕು."

ಅವನಿಗೆ ಋಷಿಯು ಹೇಳಿದನು:

"ನಿನಗೆ ವಾಮ್ಯಗಳನ್ನು ಕೊಡುತ್ತೇನೆ. ನಿನ್ನ ಕಾರ್ಯವಾದ ತಕ್ಷಣವೇ ನನಗೆ ಅವುಗಳನ್ನು ಹಿಂದಿರುಗಿಸು."

ಅವನು ಎರಡೂ ಕುದುರೆಗಳನ್ನೂ ತೆಗೆದುಕೊಂಡು, ಋಷಿಯನ್ನು ಬೀಳ್ಕೊಂಡು, ವ್ಯಾಮ್ಯಗಳನ್ನು ಕಟ್ಟಿದ ತನ್ನ ರಥದ ಮೇಲೆ ಮೃಗವನ್ನು ಹಿಂಬಾಲಿಸಿ ಹೋದನು. ಹೋಗುತ್ತಿರುವಾಗ ತನ್ನ ಸಾರಥಿಗೆ ಹೇಳಿದನು:

"ಈ ಕುದುರೆಗಳು ರತ್ನಗಳು! ಇವು ಬ್ರಾಹ್ಮಣನಿಗೆ ಅಯೋಗ್ಯವು. ನಾನು ಇವುಗಳನ್ನು ವಾಮದೇವನಿಗೆ ಹಿಂದಿರುಗಿಸುವುದಿಲ್ಲ."

ಹೀಗೆ ಹೇಳಿ, ಜಿಂಕೆಯನ್ನು ಹಿಡಿದು, ಸ್ವನಗರಕ್ಕೆ ತೆರಳಿ ಅಶ್ವಗಳನ್ನು ಅಂತಃಪುರದಲ್ಲಿ ಇರಿಸಿದನು.

ಈಗ ಆ ಮಹರ್ಷಿಯು ಚಿಂತಿಸಿದನು:

"ಈ ತರುಣ ರಾಜಪುತ್ರನು ಈ ಸುಂದರ ಕುದುರೆಗಳನ್ನು ಪಡೆದು ಖುಷಿಪಡುತ್ತಿದ್ದಾನೆ. ನನಗೆ ಅವನು ಅವುಗಳನ್ನು ಹಿಂದಿರುಗಿಸುವುದಿಲ್ಲ. ಇದೊಂದು ಕಷ್ಟವಾಯಿತಲ್ಲ!"

ಮನಸ್ಸಿನಲ್ಲಿ ನಿಶ್ಚಯಿಸಿ ತಿಂಗಳು ಪೂರ್ಣವಾದಾಗ ಶಿಷ್ಯನಿಗೆ ಹೇಳಿದನು:

> "ಅತ್ರೇಯ! ಹೋಗು! ರಾಜನಿಗೆ ಹೇಳು. ಕಾರ್ಯ ಮುಗಿದಿದೆಯಾದರೆ ವಾಮ್ಯಗಳನ್ನು ಉಪಾಧ್ಯಾಯನಿಗೆ ಹಿಂದಿರುಗಿಸು."

ರಾಜನು ಅವನಿಗೆ ಉತ್ತರಿಸಿದನು:

> "ಇದು ರಾಜನ ವಾಹನ. ಈ ರತ್ನವನ್ನು ಇಟ್ಟುಕೊಳ್ಳಲು ಬ್ರಾಹ್ಮಣರು ಅನರ್ಹರು. ನೀನು ಹಿಂದಿರುಗಿದರೆ ಒಳ್ಳೆಯದು."

ಅವನು ಹೋಗಿ ಉಪಾಧ್ಯಾಯನಿಗೆ ಎಲ್ಲವನ್ನೂ ಹೇಳಿದನು. ಆ ಅಪ್ರಿಯ ಮಾತನ್ನು ಕೇಳಿ ವಾಮದೇವನು ಕ್ರೋಧಿತನಾಗಿ ಅಶ್ವಗಳಿಗೋಸ್ಕರ ಸ್ವಯಂ ತಾನೇ ರಾಜನಲ್ಲಿಗೆ ಹೋಗಿ ಕೇಳಿದನು. ರಾಜನು ನಿರಾಕರಿಸಿದನು. ಆಗ ವಾಮದೇವನು ಹೇಳಿದನು:

> "ಪಾರ್ಥಿವ! ನನಗೆ ವಾಮ್ಯಗಳನ್ನು ಕೊಡು. ಅನ್ಯರು ಮಾಡದಂಥಹುದನ್ನು ನೀನು ಮಾಡಿದ್ದೀಯೆ. ವರುಣನು ಘೋರ ಪಾಶಗಳಿಂದ ನಿನ್ನನ್ನು ವಧಿಸದಿರಲಿ. ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಒಡೆಯುತ್ತಿದ್ದೀಯೆ."

ರಾಜನು ಹೇಳಿದನು:

“ವಾಮದೇವ! ವಿಪ್ರರಿಗೆ ವಾಹನವಾಗಿ ಈ ಎರಡು ತರಬೇತಿಹೊಂದಿದ ಸಾಧು ಎತ್ತುಗಳೇ ಲೇಸು. ಇವೆರಡರಿಂದ ನಿನಗೆಲ್ಲಿಬೇಕೋ ಅಲ್ಲಿ ಹೋಗು. ನನ್ನಂತವರಾದ ಬೇರೆ ಯಾರಲ್ಲಿ ಬೇಕಾದರೂ ಇವು ಕೊಂಡೊಯ್ಯುತ್ತವೆ.”

ವಾಮದೇವನು ಹೇಳಿದನು:

“ನನ್ನಂಥವರನ್ನು ವೇದಗಳು ಕೊಂಡೊಯ್ಯುತ್ತವೆ. ಆದರೆ ಅವು ಈ ಲೋಕದಿಂದ ಕೊಂಡೊಯ್ಯುತ್ತವೆ. ಈ ಲೋಕದಲ್ಲಿ ಇವೇ ನನ್ನ ವಾಹನಗಳು. ನನ್ನಂಥ ಅನ್ಯರದ್ದು ಕೂಡ ಇವೇ ವಾಹನಗಳು.”

ರಾಜನು ಹೇಳಿದನು:

“ನಿನ್ನನ್ನು ನಾಲ್ಕು ಕತ್ತೆಗಳು, ಅಥವಾ ಶ್ರೇಷ್ಠ ಕುದುರೆಗಳು ಅಥವಾ ಹರಿ ತುರಂಗಗಳು ಕೊಂಡೊಯ್ಯಲಿ. ಅವುಗಳನ್ನು ಹೊಡೆದುಕೊಂಡು ಹೋಗು. ಆದರೆ ಈ ವಾಮ್ಯಗಳು ಕ್ಷತ್ರಿಯನವು. ನೋಡು. ನನ್ನಂತೆ ಅವುಗಳು ನಿನ್ನದಾಗಲಾರವು.”

ವಾಮದೇವನು ಹೇಳಿದನು:

“ಬ್ರಾಹ್ಮಣನ ವ್ರತವು ಘೋರವೆಂದು ಹೇಳುತ್ತಾರೆ. ರಾಜನ್! ನಾನು ಇಲ್ಲಿ ಈ ವ್ರತದಲ್ಲಿ ಜೀವಿಸಿರುವೆನಾದರೆ, ಈಗಲೇ

ಘೋರರೂಪರೂ ಮಹಾಕಾಯರೂ ಆದವರು ನಿನ್ನ ಮೇಲೆ ನಾಲ್ಕೂ ಕಡೆಗಳಿಂದ ಹರಿತ ಶೂಲಗಳನ್ನು ಪ್ರಹಾರಮಾಡುತ್ತಾರೆ.”

ರಾಜನು ಹೇಳಿದನು:

“ಬ್ರಾಹ್ಮಣ ವಾಮದೇವ! ನೀನು ಮಾತಿನಿಂದ, ಮನಸ್ಸಿನಿಂದ, ಅಥವಾ ಕಾರ್ಯದಿಂದ ಕೊಲ್ಲುವೆಯೆಂದಾದರೆ, ನನ್ನ ಆಜ್ಞೆಯಂತೆ ಅವರು ನಿನ್ನನ್ನೂ ನಿನ್ನ ಶಿಷ್ಯರನ್ನೂ ಹರಿತ ಶೂಲಗಳಿಂದ ಇರಿಯಲಿ.”

ವಾಮದೇವನು ಹೇಳಿದನು:

“ರಾಜನ್! ಮಾತಿನಿಂದ, ಮನಸ್ಸಿನಿಂದ ಅಥವಾ ಕಾರ್ಯದಿಂದ ಬ್ರಾಹ್ಮಣರನ್ನು ಪ್ರಶ್ನಿಸಬಾರದು. ತಪಸ್ಸಿನಿಂದ ಬ್ರಹ್ಮನನ್ನು ತಲುಪಿದ ಬ್ರಾಹ್ಮಣನು ಎಷ್ಟೇ ಶ್ರೇಷ್ಠನಾಗಿರಲಿ ಅವನ ಸೊಕ್ಕನ್ನು ಮುರಿಯಬಲ್ಲ.”

ವಾಮದೇವನು ಹೀಗೆ ಹೇಳಲು ಘೋರರೂಪಿ ರಾಕ್ಷಸರು ಉದ್ಭವಿಸಿದರು. ಅವರು ಶೂಲದಿಂದ ರಾಜನನ್ನು ಹೊಡೆಯಲು ಅವನು ಉಚ್ಛಸ್ವರದಲ್ಲಿ ಇದನ್ನು ಕೂಗಿ ಹೇಳಿದನು.

“ಬ್ರಹ್ಮನ್! ಇಕ್ಷ್ವಾಕುಗಳು ಅಥವಾ ದಲ ಅಥವಾ ಅನ್ಯ ಜನರು ನನಗೆ ವಿಧೇಯರಾಗಿದ್ದಾರೆಂದರೆ, ನಾನು

ವಾಮದೇವನ ವಾಮ್ಯಗಳನ್ನು ಬಿಟ್ಟು ಕೊಡುವುದಿಲ್ಲ. ಅವರು ಹೀಗೆ ಧರ್ಮಶೀಲರಾಗುವುದಿಲ್ಲ."

ಹೀಗೆ ಹೇಳುತ್ತಿರುವಾಗಲೇ ಕ್ಷಿತೀಶನನ್ನು ಆ ರಾಕ್ಷಸರು ಹೊಡೆದು ಭೂಮಿಯ ಮೇಲೆ ಬೀಳಿಸಿದರು. ರಾಜನು ಕೆಳಗುರುಳಿದ್ದುದನ್ನು ತಿಳಿದು ಇಕ್ಷ್ವಾಕುಗಳು ದಲನನ್ನು ಅಭಿಷೇಕಿಸಿದರು. ಆಗ ರಾಜ್ಯಕ್ಕೆ ಹೋಗಿ ಆ ವಿಪ್ರ ವಾಮದೇವನು ರಾಜ ದಲನಿಗೆ ಈ ಮಾತುಗಳನ್ನಾಡಿದನು:

"ರಾಜನ್! ಬ್ರಾಹ್ಮಣರಿಗೆ ಕೊಡಬೇಕೆಂದು ಸರ್ವ ಧರ್ಮಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಅಧರ್ಮಕ್ಕೆ ನೀನು ಹೆದರುವವನಾದರೆ ಶೀಘ್ರವಾಗಿ ಇಂದೇ ನನಗೆ ವಾಮ್ಯಗಳನ್ನು ಕೊಡು!"

ವಾಮದೇವನ ಈ ಮಾತನ್ನು ಕೇಳಿ ಆ ಪಾರ್ಥಿವನು ರೋಷದಿಂದ ಸೂತನಿಗೆ ಹೇಳಿದನು:

"ಹೋಗಿ ಇಟ್ಟಿರುವ ನನ್ನ ಚಿತ್ರರೂಪದ ಬಾಣಗಳಲ್ಲಿ ಒಂದನ್ನು ವಿಷದಲ್ಲಿ ಮುಳುಗಿಸಿ ತೆಗೆದುಕೊಂಡು ಬಾ! ಅದರಿಂದ ಚುಚ್ಚಲ್ಪಟ್ಟು ವಾಮದೇವನು ಮಲಗಿ ಆರ್ತರೂಪನಾಗಿ ನಾಯಿಗಳಿಂದ ಹರಿಯಲ್ಪಡಲಿ!"

ವಾಮದೇವನು ಹೇಳಿದನು:

"ನರೇಂದ್ರ! ನಿನಗೆ ರಾಣಿಯಲ್ಲಿ ಜನಿಸಿದ ಹತ್ತುವರ್ಷ

ವಯಸ್ಸಿನ ಶ್ಯೇನಜಿತುವೆಂಬ ಮಗನಿದ್ದಾನೆಂದು ತಿಳಿದಿದ್ದೇನೆ. ನನ್ನ ಮಾತಿನ ಪ್ರಭಾವದಿಂದ ನೀನು ನಿನ್ನ ಪ್ರಿಯ ಮಗನನ್ನು ಈಗ ಘೋರರೂಪದ ಬಾಣದಿಂದ ಕೊಲ್ಲುತ್ತೀಯೆ!"

ವಾಮದೇವನು ಹೀಗೆ ಹೇಳಲು ಬಿಟ್ಟ ಅತಿವೇಗದ ಆ ಬಾಣವು ಅಂತಃಪುರದಲ್ಲಿ ರಾಜಪುತ್ರನನ್ನು ಸಂಹರಿಸಿತು. ಇದನ್ನು ಕೇಳಿ ದಲನು ಈ ಮಾತುಗಳನ್ನಾಡಿದನು:

"ಇಕ್ಷ್ವಾಕುಗಳೇ! ಈ ಬ್ರಾಹ್ಮಣನನ್ನು ಕೊಂದು ನಾಶಪಡಿಸಿ. ನಿಮಗೆ ಪ್ರಿಯವಾದುದನ್ನು ಮಾಡುತ್ತೇನೆ. ಹೋಗಿ ಇನ್ನೊಂದು ವೇಗವಾಗಿ ಹೋಗಬಲ್ಲ ಬಾಣವನ್ನು ತೆಗೆದುಕೊಂಡು ಬನ್ನಿ ಮತ್ತು ನನ್ನ ವೀರ್ಯವನ್ನು ಇಂದು ನೋಡಿ!"

ವಾಮದೇವನು ಹೇಳಿದನು:

"ಮಾನವೇಂದ್ರ! ವಿಷದಲ್ಲಿ ಅದ್ದಿದ ಈ ಘೋರರೂಪಿ ಬಾಣವನ್ನು ಧನುಸ್ಸಿಗೆ ಹೂಡಿ ನನ್ನ ಮೇಲೆ ಗುರಿಯಿಟ್ಟಿದ್ದೀಯಲ್ಲಾ, ಈ ಶ್ರೇಷ್ಠ ಶರವನ್ನು ಪ್ರಯೋಗಿಸುವುದಕ್ಕಾಗಲೀ ನನಗೆ ಗುರಿಯಿಡುವುದಕ್ಕಾಗಲೀ ನೀನು ಸಮರ್ಥನಾಗುವುದಿಲ್ಲ!"

ರಾಜನು ಹೇಳಿದನು:

"ಇಕ್ಷ್ವಾಕುಗಳೇ! ನಾನು ಗರಬಡೆದಿರುವುದನ್ನು ನೋಡಿ! ಈ

ಶರವನ್ನು ಪ್ರಯೋಗಿಸಲು ಅಶಕ್ಯನಾಗಿದ್ದೇನೆ! ಅವನನ್ನು ಕೊಲ್ಲಲು ನನಗೆ ಸಾಧ್ಯವಾಗುತ್ತಿಲ್ಲ. ಆಯುಷ್ಮಂತನಾಗಿರುವ ವಾಮದೇವನು ಜೀವಿಸಲಿ!"

ವಾಮದೇವನು ಹೇಳಿದನು:

"ಈ ಬಾಣದಿಂದ ನಿನ್ನ ರಾಣಿಯನ್ನು ಮುಟ್ಟು. ಅದರಿಂದ ನೀನು ನಿನ್ನ ಪಾಪದಿಂದ ಮುಕ್ತನಾಗುತ್ತೀಯೆ!"

ರಾಜನು ಅವನಿಗೆ ಹೇಳಿದಂತೆ ಮಾಡಿದನು. ಆಗ ರಾಜಪುತ್ರಿಯು ಮುನಿಗೆ ಹೇಳಿದಳು:

"ವಾಮದೇವ! ನಾನು ನನ್ನ ಪತಿಯೊಡನೆ ಸರಿಯಾಗಿ ಮಾತನಾಡಿದ್ದರೆ, ಪ್ರತಿದಿನವು ಅವನೊಂದಿಗೇ ಮಲಗಿದ್ದರೆ, ಬ್ರಾಹ್ಮಣರಿಂದ ಆಶೀರ್ವಾದಗಳನ್ನು ಬೇಡಿದ್ದರೆ, ನಾನು ಪುಣ್ಯಲೋಕವನ್ನು ಪಡೆಯುವಂತಾಗಲಿ."

ವಾಮದೇವನು ಹೇಳಿದನು:

"ಶುಭೇಕ್ಷಣೇ! ನೀನು ರಾಜಕುಲವನ್ನು ಉದ್ಧರಿಸಿದ್ದೀಯೆ. ಅಪ್ರತಿಮ ವರವನ್ನು ಕೇಳು. ನಿನಗೆ ಕೊಡುತ್ತೇನೆ. ನಿನ್ನ ಜನರನ್ನು ಮತ್ತು ಇಕ್ಷ್ವಾಕುಗಳ ಈ ಮಹಾ ರಾಜ್ಯವನ್ನು ಆಳು."

ರಾಜಪುತ್ರಿಯು ಹೇಳಿದಳು:

“ಭಗವನ್! ಒಂದೇ ಒಂದು ವರವನ್ನು ಕೇಳುತ್ತೇನೆ. ನನ್ನ ಪತಿಯು ಇಂದು ಕಿಲ್ಬಿಷದಿಂದ ಮುಕ್ತನಾಗಲಿ ಮತ್ತು ಪುತ್ರ-ಬಾಂಧವರೊಡನೆ ಅವನಿಗೆ ಮಂಗಳವಾಗಲಿ. ಇದೇ ನಾನು ಕೇಳುವ ವರ!”

ರಾಜಪುತ್ರಿಯ ಮಾತುಗಳನ್ನು ಕೇಳಿದ ಮುನಿಯು ಹಾಗೇ ಆಗಲೆಂದು ಹೇಳಿದನು. ಆಗ ರಾಜನು ಸಂತೋಷಗೊಂಡನು ಮತ್ತು ಅವನಿಗೆ ನಮಸ್ಕರಿಸಿ ವಾಮ್ಯಗಳನ್ನಿತ್ತನು.

# ಮಧು-ಕೈಟಭ ವಧೆ

[ಮಧು-ಕೈಟಭರ ವಧೆಯ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೯೪) ದಲ್ಲಿ ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ಘೋರವಾದ ಸಾಗರವೊಂದೇ ಇದ್ದಾಗ, ಸ್ಥಾವರಜಂಗಮಗಳು ಸರ್ವ ಭೂತಗಳು ನಷ್ಟವಾಗಿದ್ದಾಗ, ಸರ್ವಭೂತಗಳ ಪ್ರಭವ, ಶಾಶ್ವತ, ಪುರುಷ, ಅವ್ಯಯ, ಭಗವಾನ್ ವಿಷ್ಣುವು ಈ ನೀರಿನ ಹಾಸಿಗೆಯ ಮೇಲೆ ಏಕಾಂಗಿಯಾಗಿ, ಅಮಿತ ತೇಜಸ್ವಿ ನಾಗ ಶೇಷನ ಸುರಳಿಯಲ್ಲಿ

ಮಲಗಿದ್ದನು. ಲೋಕಕರ್ತ, ಮಹಾಭಾಗ, ಭಗವಾನ, ಅಚ್ಯುತ ಹರಿಯು ನಾಗನ ಮಹಾಸುರುಳಿಯಲ್ಲಿ ಈ ಮಹಿಯನ್ನು ಸುತ್ತುವರೆದು ಮಲಗಿದ್ದನು. ದೇವನು ಮಲಗಿರಲು ಅವನ ಹೊಕ್ಕಳಿನಿಂದ ಸೂರ್ಯಸಮಪ್ರಭೆಯ ಪದ್ಮವು ಅರಳಿತು. ಸೂರ್ಯ-ಚಂದ್ರರ ಪ್ರಭೆಯುಳ್ಳ ಆ ಪದ್ಮದಲ್ಲಿ ಸಾಕ್ಷಾತ್ ಲೋಕಗುರು ಪಿತಾಮಹ ಬ್ರಹ್ಮನು - ಚತುರ್ವೇದ, ಚತುರ್ಮೂರ್ತಿ, ಚತುರ್ಮುಖ, ಸ್ವಪ್ರಭಾವದಿಂದ ದುರಾಧರ್ಷ ಮಹಾಬಲಪರಾಕ್ರಮಿಯು - ಉತ್ಪನ್ನನಾದನು. ಇದೇ ಕಾಲದಲ್ಲಿ ವೀರ್ಯವಂತರಾದ ಮಧು-ಕೈಟಭರು ಜನಿಸಿದರು. ಮಧುಕೈಟಭರು ಬಹುಯೋಜನ ವಿಸ್ತೀರ್ಣದ ಬಹು ಯೋಜನ ಅಗಲದ ದಿವ್ಯವಾದ ನಾಗಭೋಗದ ಶಯನದಲ್ಲಿ ಮಲಗಿದ್ದ ಮಹಾದ್ಯುತಿ, ಕಿರೀಟ-ಕೌಸ್ತುಭಗಳನ್ನು ಧರಿಸಿದ್ದ, ಪೀತಕೌಶೇಯವನ್ನು ಉಟ್ಟಿದ್ದ, ಸಹಸ್ರಸೂರ್ಯಪ್ರತಿಮನಾದ, ಅದ್ಭುತವಾಗಿ ತೋರುತ್ತಿದ್ದ ಹರಿ ಪ್ರಭುವನ್ನು ನೋಡಿದರು. ಪದ್ಮದಲ್ಲಿ ಪದ್ಮನಿಭೇಕ್ಷಣ ಪಿತಾಮಹನನ್ನು ನೋಡಿ ಮಧುಕೈಟಭರಿಗೆ ಮಹಾ ವಿಸ್ಮಯವುಂಟಾಯಿತು. ಅವರಿಬ್ಬರೂ ಆಗ ಅಮಿತೌಜಸ ಬ್ರಹ್ಮನನ್ನು ಪೀಡಿಸತೊಡಗಿದರು. ಆ ಮಹಾಯಶರಿಂದ ಬಹಳಷ್ಟು ಪೀಡಿತನಾದ ಬ್ರಹ್ಮನು ಪದ್ಮದ ತೊಟ್ಟನ್ನು ಅಲುಗಾಡಿಸಲು, ಅದರಿಂದ ಕೇಶವನು ಎಚ್ಚೆತ್ತನು. ಆಗ ಗೋವಿಂದನು ವೀರ್ಯವತ್ತರರಾದ ಈರ್ವರು ದಾನವರನ್ನು ನೋಡಿದನು. ನೋಡಿ ಅವರಿಗೆ ದೇವನು ಹೇಳಿದನು:

“ನೀವಿಬ್ಬರು ಮಹಾಬಲರಿಗೆ ಸ್ವಾಗತ! ಶ್ರೇಷ್ಠವಾದ ವರವನ್ನು

ನೀಡುತ್ತೇನೆ. ನಿಮ್ಮ ಮೇಲೆ ನನಗೆ ಪ್ರೀತಿಯುಂಟಾಗಿದೆ.”

ಆ ಮಹಾವೀರ್ಯ ಮಹಾಸುರರು ಹೃಷೀಕೇಶನ ಮೇಲೇ ನಗತೊಡಗಿದರು. ಒಟ್ಟಿಗೇ ಮಧುಸೂದನನಿಗೆ ಉತ್ತರಿಸಿದರು:

“ದೇವ! ನೀನೇ ನಮ್ಮಲ್ಲಿ ವರವನ್ನು ಕೇಳು! ನಾವೇ ನಿನಗೆ ನಿಜಯಾಗಿಯೂ ವರವನ್ನು ನೀಡುತ್ತೇವೆ. ವಿಚಾರಿಸದೇ ಕೇಳು.”

ಭಗವಂತನು ಹೇಳಿದನು:

“ವೀರರೇ! ನಿಮ್ಮ ವರವನ್ನು ಸ್ವೀಕರಿಸುತ್ತೇನೆ. ನಾನು ಬಯಸುವ ವರವೊಂದಿದೆ. ನೀವಿಬ್ಬರೂ ವೀರ್ಯ ಸಂಪನ್ನರು. ನಿಮ್ಮ ಸಮನಾದ ಪುರುಷನು ಇಲ್ಲವೇ ಇಲ್ಲ. ಸತ್ಯಪರಾಕ್ರಮಿಗಳಾದ ನೀವಿಬ್ಬರೂ ನನ್ನ ಕೈಗಳಿಂದ ವಧಿಸಲ್ಪಡಿರಿ. ಲೋಕಕ್ಕೆ ಹಿತವನ್ನುಂಟುಮಾಡಲು ಬಯಸಿ ನಾನು ಇದನ್ನು ಇಚ್ಛಿಸುತ್ತೇನೆ.”

ಮಧುಕೈಟಭರು ಹೇಳಿದರು:

“ವಿನೋದಕ್ಕಾಗಿಯಾದರೂ ನಾವು ಇದೂವರೆಗೆ ಸುಳ್ಳನ್ನು ಹೇಳಲಿಲ್ಲ. ಅನ್ಯಥಾ ಏನು? ನಾವಿಬ್ಬರೂ ಸತ್ಯ ಮತ್ತು ಧರ್ಮಗಳಲ್ಲಿ ನಿರತರಾಗಿದ್ದೇವೆಂದು ತಿಳಿ. ಬಲದಲ್ಲಿ, ರೂಪದಲ್ಲಿ, ವೀರ್ಯದಲ್ಲಿ, ಶಮದಲ್ಲಿ, ಧರ್ಮದಲ್ಲಿ, ತಪಸ್ಸಿನಲ್ಲಿ, ಶೀಲ, ಸತ್ವ, ದಮಗಳಲ್ಲಿ ನಮ್ಮಿರ್ವರ ಸಮರಿಲ್ಲ.


2012/03/18

ಕೇಶವ! ಒಂದು ಮಹಾ ಉಪಪ್ಲವವು ನಮಗೆ ಬಂದೊದಗಿದೆ. ಆದರೆ ನೀನು ಹೇಳಿದಂತೆ ಮಾಡು. ಕಾಲವನ್ನು ಅತಿಕ್ರಮಿಸಲು ಸಾಧ್ಯವಿಲ್ಲ. ಆದರೆ ನಿನ್ನಿಂದ ಒಂದು ಆಗಬೇಕೆಂದು ಬಯಸುತ್ತೇವೆ. ಆಕಾಶವು ಅನಾವೃತವಾದಲ್ಲಿ ನಮ್ಮನ್ನು ವಧಿಸು. ನಿನ್ನ ಪುತ್ರರಾಗಲು ಬಯಸುತ್ತೇವೆ. ಇದೇ ನಮ್ಮ ವರವೆಂದು ತಿಳಿ."

ಭಗವಂತನು ಹೇಳಿದನು:

"ಅವಶ್ಯವಾಗಿ ನಾನು ಅದನ್ನು ಮಾಡುತ್ತೇನೆ. ಎಲ್ಲವೂ ಹಾಗೆಯೇ ಆಗುತ್ತದೆ."

ಆಗ ಮಧುಸೂದನ ಗೋವಿಂದನು ಅನಾವೃತವಾದ ಅವಕಾಶವನ್ನು ಭೂಮಿಯಲ್ಲಾಗಲೀ  ದಿವಿಯಲ್ಲಾಗಲೇ ಕಾಣದೇ ಚಿಂತಿಸಿದನು. ಆಗ ಅನಾವೃತವಾಗಿದ್ದ ತನ್ನ ತೊಡೆಗಳನ್ನೇ ನೋಡಿ, ದೇವವರ ಮಧುಸೂದನನು ಮಹಾಯಶ ಮಧುಕೈಟಭರ ಶಿರಗಳನ್ನು ಹರಿತವಾದ ಚಕ್ರದಿಂದ ಕತ್ತರಿಸಿದನು.

# ಧುಂಧುಮಾರ

[ರಾಜ ಕುವಲಾಶ್ವನು ದುಂಧುಮಾರನೆಂದು ಹೇಗಾದನು ಎನ್ನುವ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೧೯೨-೧೯೫) ದಲ್ಲಿ

ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ಮಹರ್ಷಿಯೆಂದು ವಿಶ್ರುತನಾದ ಉತ್ತಂಕನು ರಮ್ಯವಾದ ಮರುಭೂಮಿಯಲ್ಲಿ ತನ್ನ ಆಶ್ರಮದಲ್ಲಿದ್ದನು. ಈ ಉತ್ತಂಕನು ವಿಷ್ಣುವನ್ನು ಮೆಚ್ಚಿಸಲು ಬಹಳ ವರ್ಷಗಳ ದುಶ್ಚರ ತಪಸ್ಸನ್ನು ನಡೆಸಿದನು. ಅವನಿಂದ ಪ್ರೀತನಾದ ಭಗವಂತನು ಸಾಕ್ಷಾತ್ ದರ್ಶನವನ್ನಿತ್ತನು. ನೋಡಿದಾಕ್ಷಣವೇ ಋಷಿಯು ನಮಸ್ಕರಿಸಿ, ವಿವಿಧ ಸ್ತವಗಳಿಂದ ತುಷ್ಟಿಗೊಳಿಸಿದನು:

> “ದೇವ! ನಿನ್ನಿಂದಲೇ ಈ ಸರ್ವ ಪ್ರಜೆಗಳೂ, ದೇವ-ಅಸುರ-ಮಾನವರೂ ಸೇರಿ, ಇರುವ ಸ್ಥಾವರ ಜಂಗಮಗಳೂ ನಿನ್ನಿಂದ. ಮಹಾದ್ಯುತೇ! ಬ್ರಹ್ಮ, ವೇದಗಳೂ, ವೇದ್ಯಗಳೂ ಕೂಡ ನಿನ್ನಿಂದ ಸೃಷ್ಟಿಸಲ್ಪಟ್ಟಿವೆ. ದೇವ! ನಿನ್ನ ಶಿರವು ಗಗನ, ನೇತ್ರಗಳು ಶಶಿ-ದಿವಾಕರರು. ಅಚ್ಯುತ! ನಿನ್ನ ಉಸಿರು ವಾಯು ಮತ್ತು ತೇಜಸ್ಸು ಅಗ್ನಿ. ಎಲ್ಲ ದಿಕ್ಕುಗಳೂ ನಿನ್ನ ಬಾಹುಗಳು ಮತ್ತು ಮಹಾಸಾಗರವೇ ನಿನ್ನ ಒಡಲು. ದೇವ! ಮಧುಸೂದನ! ಪರ್ವತಗಳೇ ನಿನ್ನ ತೊಡೆಗಳು. ಆಕಾಶವೇ ನಾಭಿ. ಪೃಥಿವೀ ದೇವಿಯು ನಿನ್ನ ಪಾದಗಳು ಮತ್ತು ಅರಣ್ಯೌಷಧಿಗಳು ನಿನ್ನ ರೋಮಗಳು. ಇಂದ್ರ, ಸೋಮ, ಅಗ್ನಿ, ವರುಣರು, ದೇವಾಸುರಮಹೋರಗರು ನಿನ್ನನ್ನು ವಿವಿಧ



ಸ್ತವಗಳಿಂದ ಸ್ತುತಿಸಿ ತಲೆಬಾಗಿ ನಮಸ್ಕರಿಸಿ ನಿಂತಿರುವರು. ಸರ್ವ ಭೂತಗಳಲ್ಲಿ ನೀನು ವ್ಯಾಪಿಸಿರುವೆ. ಯೋಗಿಗಳು, ಮಹಾವೀರರು, ಮುಹರ್ಷಿಗಳು ನಿನ್ನನ್ನು ಸ್ತುತಿಸುತ್ತಾರೆ. ನೀನು ತುಷ್ಟನಾಗಿದ್ದರೆ ಜಗತ್ತು ಸ್ವಸ್ಥವಾಗಿರುತ್ತದೆ. ನೀನು ಕ್ರುದ್ಧನಾದರೆ ಮಹಾ ಭಯವುಂಟಾಗುತ್ತದೆ. ನೀನು ಭಯಗಳನ್ನು ಹೋಗಲಾಡಿಸುವವನು. ದೇವತೆಗಳು, ಮನುಷ್ಯರ ಮತ್ತು ಸರ್ವಭೂತಗಳ ಹಿತಕಾರಕ ನೀನು. ದೇವ! ತ್ರಿವಿಕ್ರಮನಾಗಿ ಮೂರೂ ಲೋಕಗಳನ್ನು ವ್ಯಾಪಿಸಿ ಸಮೃದ್ಧರಾಗಿದ್ದ ಅಸುರರನ್ನು ನೀನು ನಾಶಗೊಳಿಸಿದೆ. ನಿನ್ನ ವಿಕ್ರಮದಿಂದ ದೇವತೆಗಳು ಪರಮ ನಿರ್ವಾಣವನ್ನು ಹೊಂದಿದರು. ನಿನ್ನ ಕ್ರೋಧದಿಂದ ದೈತ್ಯೇಂದ್ರರು ಪರಾಭವ ಹೊಂದಿದರು. ಇಲ್ಲಿರುವ ಎಲ್ಲವುಗಳ ಕರ್ತನೂ ನೀನೇ. ವಿಕರ್ತನೂ ನೀನೇ. ನಿನ್ನನ್ನು ಆರಾಧಿಸಿ ದೇವತೆಗಳೆಲ್ಲರೂ ಸುಖವನ್ನು ಪಡೆಯುತ್ತಾರೆ.”

ಮಹಾತ್ಮ ಉತ್ತಂಕನು ಹೀಗೆ ಸ್ತುತಿಸಲು ಹೃಷೀಕೇಶ ವಿಷ್ಣುವು

“ಉತ್ತಂಕ! ನಿನ್ನಿಂದ ಪ್ರೀತನಾಗಿದ್ದೇನೆ. ವರವನ್ನು ಕೇಳು”

ಎಂದನು. ಉತ್ತಂಕನು ಹೇಳಿದನು:

“ನಾನು ಪುರುಷ, ಶಾಶ್ವತ, ದಿವ್ಯ, ಸೃಷ್ಟಾರ, ಜಗತ್ತಿನ ಪ್ರಭು, ಹರಿಯನ್ನು ನೋಡಿದೆ ಎನ್ನುವ ವರದಿಂದಲೇ

ತುಂಬಿಹೋಗಿದ್ದೇನೆ.”

ವಿಷ್ಣುವು ಹೇಳಿದನು:

“ದ್ವಿಜಸತ್ತಮ! ನಾನು ನಿನ್ನ ನಿಷ್ಟೆ ಮತ್ತು ಭಕ್ತಿಗಳಿಗೆ ಒಲಿದಿದ್ದೇನೆ. ಅವಶ್ಯವಾಗಿ ನೀನು ನನ್ನಿಂದ ವರವನ್ನು ಪಡೆಯಬೇಕು.”

ಈ ರೀತಿ ಹರಿಯು ಒತ್ತಾಯಿಸಿ ವರವನ್ನು ನೀಡಲು ಉಂತ್ತಂಕನು ಕೈಮುಗಿದು ವರವನ್ನು ಕೇಳಿದನು:

“ಭಗವನ್! ಪುಂಡರೀಕಾಕ್ಷ! ನನ್ನ ಮೇಲೆ ಪ್ರೀತನಾದರೆ ನನ್ನ ಬುದ್ಧಿಯು ಸದಾ ಧರ್ಮ, ಸತ್ಯ, ದಮಗಳಲ್ಲಿರಲಿ. ಮಹೇಶ್ವರ! ನಿತ್ಯವೂ ನಿನ್ನ ಭಕ್ತಿಯ ಅಭ್ಯಾಸದಲ್ಲಿರುವಂತಾಗಲಿ.”

ವಿಷ್ಣುವು ಹೇಳಿದನು:

“ದ್ವಿಜ! ಇವೆಲ್ಲವೂ ನನ್ನ ಪ್ರಸಾದದಿಂದ ಆಗುತ್ತವೆ. ಯೋಗವು ನಿನಗೆ ತೋರಿಸಿಕೊಳ್ಳುತ್ತದೆ. ಅದರಿಂದ ಯುಕ್ತನಾಗಿ ದೇವತೆಗಳಿಗೆ ಮತ್ತು ಮೂರು ಲೋಕಗಳಿಗೆ ಮಹಾ ಕಾರ್ಯವನ್ನು ಮಾಡುತ್ತೀಯೆ. ಲೋಕಗಳನ್ನು ಉರುಳಿಸುವ ಸಲುವಾಗಿ ಧುಂಧು ಎಂಬ ಮಹಾಸುರನು ಘೋರವಾದ ತಪಸ್ಸನ್ನು ತಪಿಸುತ್ತಿದ್ದಾನೆ. ಅವನನ್ನು ನೀನು ಸಂಹರಿಸುತ್ತೀಯೆ. ಕೇಳು. ಬೃಹದಶ್ವ ಎಂದು ಖ್ಯಾತನಾದ

ರಾಜನಾಗುತ್ತಾನೆ. ಅವನ ಮಗನು ಶುಚಿಯು, ದಾಂತನೂ ಆದ ಕುವಲಾಶ್ವನೆಂದು. ಆ ಪಾರ್ಥಿವೋತ್ತಮನು ನನ್ನ ಯೋಗಬಲವನ್ನು ಆಶ್ರಯಿಸಿ ನಿನ್ನ ಶಾಸನದಂತೆ ಧುಂಧುಮಾರನಾಗುತ್ತಾನೆ."

ಉತ್ತಂಕನಿಗೆ ಹೀಗೆ ಹೇಳಿ ವಿಷ್ಣುವು ಅಂತರ್ಧಾನನಾದನು.

ಇಕ್ಷ್ವಾಕುವಿನ ಮರಣದ ನಂತರ ಶಶಾದನು ಈ ಪೃಥ್ವಿಯನ್ನು ಪಡೆದನು ಮತ್ತು ಪರಮಧರ್ಮಾತ್ಮನಾಗಿ ಅಯೋಧ್ಯೆಯ ನೃಪನಾದನು. ವೀರ್ಯವಾನ್ ಕಕುಸ್ಥ ಎಂಬ ಹೆಸರಿನವನು ಶಶಾದನ ಮಗನು. ಅನೇನನು ಕಕುಸ್ಥನ ಮಗ ಮತ್ತು ಪೃಥುವು ಅನೇನನ ಮಗ. ವಿಶ್ವಗಶ್ವನು ಪೃಥುವಿನ ಮಗ. ಅವನಲ್ಲಿ ಆದ್ರನು ಜನಿಸಿದನು. ಆದ್ರನ ಮಗ ಯುವನಾಶ್ವ. ಅವನ ಮಗ ಶ್ರಾವಸ್ತ. ರಾಜ ಶ್ರಾವಸ್ತನು ಶ್ರಾವಸ್ತಿಯನ್ನು ನಿರ್ಮಿಸಿದನು. ಶ್ರಾವಸ್ತನ ಮಗ ಮಹಾಬಲಿ ಬೃಹದಶ್ವ. ಬೃಹದಶ್ವನ ಮಗ ಕುವಲನೆಂದು ಖ್ಯಾತನಾದನು. ಕುವಲಾಶ್ವನಿಗೆ ಇಪ್ಪತ್ತೊಂದು ಸಾವಿರ ಪುತ್ರರು. ಎಲ್ಲರೂ ವಿದ್ಯಾಪ್ರವೀಣರು, ಬಲಬಂತರು, ಮತ್ತು ದುರಾಸದರು. ಕುವಲಾಶ್ವನು ಗುಣಗಳಲ್ಲಿ ತಂದೆಗಿಂತ ಅಧಿಕನಾಗಿದ್ದನು. ಸಮಯವು ಬಂದಾಗ ಬೃಹದಶ್ವನು ಶೂರನೂ ಉತ್ತಮ ಧಾರ್ಮಿಕನೂ ಆದ ಕುವಲಾಶ್ವನನ್ನು ರಾಜನನ್ನಾಗಿ ಅಭಿಷೇಕಿಸಿದನು. ಆ ಅಮಿತ್ರಹ ಮಹೀಪತಿ ಧೀಮಂತ ಬೃಹದಾಶ್ವನು ಪುತ್ರನಿಗೆ ಸಂಪತ್ತನ್ನು ಕೊಟ್ಟು ತಪೋವನಕ್ಕೆ ತಪಸ್ಸಿಗೆ ಹೊರಟನು.

ದ್ವಿಜೋತ್ತಮ ಉತ್ತಂಕನು ರಾಜರ್ಷಿ ಬೃಹದಶ್ವನು ವನಕ್ಕೆ ಹೋಗುತ್ತಿದ್ದಾನೆಂದು ಕೇಳಿದನು. ಆಗ ಮಹಾತೇಜ ಅಮೇಯಾತ್ಮ ಉತ್ತಂಕನು ಸರ್ವ ಅಸ್ತ್ರವಿದುಷರಲ್ಲಿ ಶ್ರೇಷ್ಠನಾದ ನರೋತ್ತಮನ ಬಳಿಸಾರಿ ತಡೆದು ಹೇಳಿದನು:

“ರಾಜನ್! ರಕ್ಷಣೆಯು ನಿನ್ನ ಕಾರ್ಯ. ಆದುದರಿಂದ ನೀನು ಅದನ್ನು ಮಾಡಬೇಕು. ನಿನ್ನ ಪ್ರಸಾದದಿಂದ ನಾವು ನಿರುದ್ವಿಗ್ನರಾಗಿರುತ್ತೇವೆ. ಮಹಾತ್ಮನಾದ ನಿನ್ನಿಂದ ರಕ್ಷಿಸಲ್ಪಟ್ಟ ಈ ಭೂಮಿಯು ನಿರುದ್ವಿಗ್ನವಾಗಿರುತ್ತದೆ. ನೀನು ಅರಣ್ಯಕ್ಕೆ ಹೋಗಬಾರದು. ಇಲ್ಲಿ ಪ್ರಜೆಗಳ ಪಾಲನೆಯೇ ಮಹಾ ಧರ್ಮವೆಂದು ತೋರುತ್ತದೆ. ಅರಣ್ಯದಲ್ಲಿ ಇದು ಹೀಗೆಯೇ ಇರುವುದಿಲ್ಲ. ಆದುದರಿಂದ ನಿನ್ನ ಈ ನಿಶ್ಚಯವನ್ನು ಬಿಟ್ಟುಬಿಡು. ರಾಜರ್ಷಿಗಳು ಹಿಂದಿನಿಂದ ಮಾಡಿಕೊಂಡು ಬಂದಿರುವ ಪ್ರಜಾಪಾಲನೆಗಿಂತ ಹೆಚ್ಚಿನದಾದ ಧರ್ಮವು ಬೇರೆ ಎಲ್ಲಿಯೂ ಇಲ್ಲ. ರಾಜನಿಂದ ರಕ್ಷಿಸಲ್ಪಡಬೇಕಾದ ಪ್ರಜೆಗಳ ರಕ್ಷಣೆಯನ್ನು ನೀನು ಮಾಡಬೇಕು. ನಾನು ನಿರುದ್ವಿಗ್ನನಾಗಿ ತಪಸ್ಸನ್ನು ಮಾಡಲು ಸಾಧ್ಯವಾಗುತ್ತಿಲ್ಲ. ನನ್ನ ಆಶ್ರಮದ ಸಮೀಪದಲ್ಲಿ ಮರುಭೂಮಿಯ ಸಮಭೂಮಿಯಲ್ಲಿ ಉಜ್ಜಾನಕ ಎಂದು ಹೇಳಿಕೊಂಡು ಬಂದಿರುವ, ಬಹುಯೋಜನ ವಿಸ್ತೀರ್ಣದ ಬಹುಯೋಜನ ವಿಶಾಲವಾದ ಮರಳಿನ ರಾಶಿಯಿದೆ. ಅಲ್ಲಿ ಮಧುಕೈಟಭರ ಪುತ್ರ ಧುಂಧು ಎಂಬ

ಹೆಸರಿನ ಸುದಾರುಣ, ರೌದ್ರ, ಮಹಾವೀರ್ಯಪರಾಕ್ರಮಿ ದಾನವೇಂದ್ರನಿದ್ದಾನೆ. ಆ ಅಮಿತವಿಕ್ರಮನು ಭೂಮಿಯು ಆಳದಲ್ಲಿ ವಾಸಿಸುತ್ತಾನೆ. ಅವನನ್ನು ಕೊಂದು ನೀನು ವನಕ್ಕೆ ಹೋಗಬೇಕು. ತ್ರಿದಶರ ಮತ್ತು ಲೋಕಗಳ ವಿನಾಶಕ್ಕಾಗಿ ದಾರುಣವಾದ ತಪಸ್ಸನ್ನಾಚರಿಸುತ್ತಿದ್ದಾನೆ. ಅವನು ದೇವತೆಗಳಿಗಾಗಲೀ, ದೈತ್ಯರಾಕ್ಷಸರಿಗಾಗಲೀ, ನಾಗಗಳಿಗಾಗಲೀ, ಯಕ್ಷರಿಗಾಗಲೀ, ಗಂಧರ್ವರಿಗಾಗಲೀ, ಎಲ್ಲರಿಗೂ ಅವಧ್ಯ. ಆ ವರವನ್ನು ಅವನು ಸರ್ವಲೋಕ ಪಿತಾಮಹನಿಂದ ಪಡೆದಿದ್ದಾನೆ. ನಿನಗೆ ಮಂಗಳವಾಗಲಿ! ಅವನನ್ನು ನಾಶಪಡಿಸು. ಬೇರೆ ಯಾವ ನಿಶ್ಚಯವನ್ನೂ ತೆಗೆದುಕೊಳ್ಳಬೇಡ! ಮಹತ್ತರವಾದ, ಶಾಶ್ವತವಾದ, ಅವ್ಯಯವಾದ, ನಿಶ್ಚಯವಾದ ಕೀರ್ತಿಯನ್ನು ಹೊಂದುತ್ತೀಯೆ. ಒಂದುವರ್ಷದ ನಂತರ ಮರಳಿನ ಅಡಿಯಲ್ಲಿ ವಾಸಿಸುವ ಆ ಕ್ರೂರನು ನಿಟ್ಟುಸಿರು ಬಿಟ್ಟಾಗ ಇಡೀ ಭೂಮಿಯು, ಗಿರಿ, ವನ ಕಾನನಗಳೊಂದಿಗೆ ನಡುಗುತ್ತದೆ. ಅವನ ನಿಶ್ವಾಸದೊಂದಿಗೆ ಧೂಳಿನ ಮಹಾ ಭಿರುಗಾಳಿಯೇ ಎದ್ದು ಸೂರ್ಯನ ದಾರಿಯನ್ನು ಮುಸುಕುಹಾಕುತ್ತದೆ. ಕಿಡಿಗಳಿಂದ ಜ್ವಾಲೆಗಳಿಂದ ಮತ್ತು ಹೊಗೆಯಿಂದ ಕೂಡಿದ ಆ ಅತಿದಾರುಣ ಭೂಕಂಪನವು ಏಳುದಿನವಿರುತ್ತದೆ. ಇದೇ ಕಾರಣದಿಂದ ನನ್ನ ಆ ಆಶ್ರಮದಲ್ಲಿ ನಾನೇ ನಿಲ್ಲಲು ಸಾಧ್ಯವಾಗುತ್ತಿಲ್ಲ. ಲೋಕಗಳ

> ಹಿತವನ್ನು ಬಯಸಿ ಅವನನ್ನು ನಾಶಪಡಿಸು. ಆ ಅಸುರನನ್ನು ನೀನು ಇಂದು ಸಂಹರಿಸಿ ಲೋಕಗಳು ಸ್ವಾಸ್ಥ್ಯದಿಂದಿರಲಿ. ಅವನ ವಿನಾಶಕ್ಕೆ ನೀನೇ ಪರ್ಯಾಪ್ತನೆಂದು ನನ್ನ ಮತ. ವಿಷ್ಣುವೂ ಕೂಡ ತನ್ನ ತೇಜಸ್ಸಿನಿಂದ ನಿನ್ನ ತೇಜಸ್ಸನ್ನು ವೃದ್ಧಿಸುತ್ತಾನೆ. ಹಿಂದೆ ವಿಷ್ಣುವು ನನಗೆ ವರವನ್ನಿತ್ತಿದ್ದನು: "ಯಾವ ರಾಜನು ಆ ರೌದ್ರ ಮಹಾ ಅಸುರನನ್ನು ವಧಿಸುತ್ತಾನೋ ಅವನನ್ನು ವಿಷ್ಣುವಿನ ದುರಾಸದ ತೇಜಸ್ಸು ಪ್ರವೇಶಿಸುತ್ತದೆ." ಭೂಮಿಯಲ್ಲಿ ದುಃಸ್ಸಹವಾದ ಆ ತೇಜಸ್ಸನ್ನು ನೀನು ಪಡೆ. ರೌದ್ರ ಪರಾಕ್ರಮಿ ಆ ದುಷ್ಟ ದೈತ್ಯನನ್ನು ಸಂಹರಿಸು. ಧುಂಧುವಿನ ಮಹಾತೇಜಸ್ಸನ್ನು ಅಲ್ಪತೇಜಸ್ಸಿನಿಂದ ಸುಟ್ಟುಹಾಕಲು ನೂರುವರ್ಷಗಳವರೆಗಾದರೂ ಸಾಧ್ಯವಿಲ್ಲ."

ಉತ್ತಂಕನು ಹೀಗೆ ಹೇಳಲು ಆ ಅಪರಾಜಿತ ರಾಜರ್ಷಿಯು ಅಂಜಲೀಬದ್ಧನಾಗಿ ಉತ್ತಂಕನಿಗೆ ಹೇಳಿದನು:

> "ಬ್ರಹ್ಮನ್! ನಿನ್ನ ಆಗಮನವು ವ್ಯರ್ಥವಾಗುವುದಿಲ್ಲ. ನನ್ನ ಪುತ್ರ ಕುವಲಾಶ್ವನೆಂದು ಪ್ರಸಿದ್ಧ. ಅವನು ಧೃತಿವಂತ, ಕ್ಷಿಪ್ರಕಾರಿ ಮತ್ತು ವೀರ್ಯದಲ್ಲಿ ಭೂಮಿಯಲ್ಲಿಯೇ ಅಪ್ರತಿಮ. ಇವನು ನಿನ್ನ ಸರ್ವ ಪ್ರಿಯ ಕಾರ್ಯಗಳನ್ನು ಮಾಡುತ್ತಾನೆ. ಸಂಶಯವಿಲ್ಲ. ಅವನು ಎಲ್ಲ ಶೂರರಾದ ಪರಿಘಬಾಹುಗಳಾದ

ಮಕ್ಕಳಿಂದ ಸುತ್ತುವರೆದಿದ್ದಾನೆ. ನನ್ನನ್ನು ಬಿಟ್ಟುಬಿಡು! ನಾನು ನನ್ನ ಶಸ್ತ್ರಗಳನ್ನು ವಿಸರ್ಜಿಸಿದ್ದೇನೆ."

ಹಾಗೆಯೆ ಆಗಲೆಂದು ಅಮಿತತೇಜಸ್ವಿ ಮುನಿಯು ಹೇಳಿದನು. ಆಗ ತನ್ನ ತನಯನನ್ನು ಮಹಾತ್ಮ ಉತ್ತಂಕನಿಗೆ ಒಪ್ಪಿಸಿ ಕಾರ್ಯವನ್ನು ನಡೆಸಿಕೊಡು ಎಂದು ಆದೇಶವನ್ನಿತ್ತು ರಾಜರ್ಷಿಯು ಉತ್ತಮ ವನಕ್ಕೆ ತೆರಳಿದನು.

ಮಹಾದ್ಯುತಿ ಧುಂಧು ಎಂಬ ಹೆಸರಿನವನು ಮಹಾತೇಜಸ್ವಿ ಮಧು-ಕೈಟಭರ ಮಗ. ಆ ಮಹಾವೀರ್ಯಪರಾಕ್ರಮಿಯು ಮಹಾ ತಪಸ್ಸನ್ನು ತಪಿಸಿದನು. ಧಮನಿಗಳು ಮಾತ್ರ ಇದ್ದ ಕೃಶನಾದ ಅವನು ಒಂದೇ ಕಾಲಿನ ಮೇಲೆ ನಿಂತುಕೊಂಡಿದ್ದನು. ಪ್ರೀತನಾಗಿ ಬ್ರಹ್ಮನು ಅವನಿಗೆ ವರವನ್ನು ಕೊಟ್ಟನು. ಆ ಪ್ರಭುವು ಈ ವರವನ್ನು ಬೇಡಿದನು:

"ದೇವ, ದಾನವ, ಯಕ್ಷ, ಸರ್ಪ, ಗಂಧರ್ವ, ರಾಕ್ಷಸರಿಗೆ ನಾನು ಅವಧ್ಯನಾಗಲಿ. ಇದೇ ನಾನು ಕೇಳುವ ವರ."

"ಹಾಗೆಯೇ ಆಗುತ್ತದೆ! ಹೋಗು!"

ಎಂದು ಪಿತಾಮಹನು ಅವನಿಗೆ ಹೇಳಿದನು. ಇದನ್ನು ಕೇಳಿದ ಅವನು ಅವನ ಪಾದಗಳಿಗೆ ತಲೆಯನ್ನಿರಿಸಿ ಹೋದನು. ಆ ವರವನ್ನು ಪಡೆದು ಮಹಾವೀರ್ಯಪರಾಕ್ರಮಿ ಧುಂಧುವು ಪಿತೃಗಳ ವಧೆಯನ್ನು ನೆನಪಿಸಿಕೊಂಡು ವಿಷ್ಣುವಿಗೆ ಉಪದ್ರವ ಮಾಡಿದನು. ಆ ಅಮರ್ಷಣ

ಧುಂಧುವು ದೇವ-ಗಂಧರ್ವರನ್ನು ಜಯಿಸಿ ಎಲ್ಲ ದೇವತೆಗಳನ್ನೂ ವಿಷ್ಣುವನ್ನೂ ಚೆನ್ನಾಗಿ ಬಾಧಿಸಿದನು. ಉಜ್ಜಾನಕವೆಂದು ಪ್ರಸಿದ್ಧವಾದ ಮರಳಿನ ಸಮುದ್ರಕ್ಕೆ ಹೋಗಿ, ಆ ಪ್ರದೇಶದಲ್ಲಿರುವ ಉತ್ತಂಕನ ಆ ಆಶ್ರಮವನ್ನು ಪರಮ ಶಕ್ತಿಯಿಂದ ಬಾಧಿಸತೊಡಗಿದನು. ಅಲ್ಲಿ ಭೂಮಿಯ ಒಳಗೆ ಹೋಗಿ, ಮರಳಿನಲ್ಲಿ ಭೀಮಪರಾಕ್ರಮಿ, ಮಧುಕೈಟಭರ ಪುತ್ರ ಧುಂಧುವು, ತಪೋಬಲವನ್ನಾಶ್ರಯಿಸಿ ಲೋಕವಿನಾಶಕ್ಕಾಗಿ ಉತ್ತಂಕನ ಆಶ್ರಮದ ಬಳಿ ಬೆಂಕಿಯನ್ನು ಉಸಿರಾಡುತ್ತಾ ಮಲಗಿಕೊಂಡಿದ್ದನು.

ಇದೇ ಸಮಯದಲ್ಲಿ ನರಪತಿ ಅರಿಮರ್ದನ ಕುವಲಾಶ್ವನು ಸೇವಕ, ಬಲ ವಾಹನಗಳಿಂದ ಕೂಡಿದವನಾಗಿ ಇಪ್ಪತ್ತೊಂದು ಸಾವಿರ ಬಲಶಾಲಿ ಪುತ್ರರೊಂದಿಗೆ ಧುಂಧುವಿನ ವಾಸಸ್ಥಳಕ್ಕೆ ಹೊರಟನು. ಆಗ ಪ್ರಭು ಭಗವಾನ್ ವಿಷ್ಣುವು ಉತ್ತಂಕನ ನಿಯೋಗದಂತೆ ಲೋಕಗಳ ಹಿತವನ್ನು ಬಯಸಿ ತೇಜಸ್ಸಿನಿಂದ ಅವರಲ್ಲಿ ಆವೇಶಗೊಂಡನು. ಆ ದುರ್ಧರ್ಷರು ಹೊರಡುವಾಗ ದಿವಿಯಲ್ಲಿ ಈ ಶ್ರೀಮಾನ್ ನೃಪಸುತನು ಧುಂಧುಮಾರನಾಗುತ್ತಾನೆ ಎಂದು ಮಹಾ ಶಬ್ಧವುಂಟಾಯಿತು. ದೇವತೆಗಳು ದಿವ್ಯ ಪುಷ್ಪಗಳನ್ನು ಎಲ್ಲೆಡೆಯೂ ಚೆಲ್ಲಿದರು. ದೇವದುಂದುಭಿಗಳನ್ನೇ ಅವರು ಮೊಳಗಿಸಿದರು. ಆ ಧೀಮಂತನ ಪ್ರಯಾಣದಲ್ಲಿ ಶೀತಲ ಗಾಳಿಯು ಬೀಸಿತು. ಸುರೇಶ್ವರನು ಮಳೆಸುರಿಸಿ ನೆಲವನ್ನು ಧೂಳಿಲ್ಲದಂತೆ ಮಾಡಿದನು. ಮಹಾಸುರ ಧುಂಧುವಿರುವಲ್ಲಿ ಅಂತರಿಕ್ಷದಲ್ಲಿ ದೇವತೆಗಳ ವಿಮಾನಗಳು ಕಂಡುಬಂದವು. ಕುವಲಾಶ್ವ

ಮತ್ತು ಧುಂಧುವಿನ ಯುದ್ಧವನ್ನು ನೋಡಲು ಕುತೂಹಲಗೊಂಡ ಮಹರ್ಷಿಗಳು ದೇವಗಂಧರ್ವರೊಡನೆ ಸೇರಿದರು. ನಾರಾಯಣನ ತೇಜಸ್ಸಿನಿಂದ ಬಲಗೊಂಡ ನೃಪತಿಯು ತನ್ನ ಪುತ್ರರೊಂದಿಗೆ ಎಲ್ಲ ದಿಕ್ಕುಗಳಿಂದಲೂ ಕ್ಷಿಪ್ರವಾಗಿ ಮುಂದುವರೆದನು. ಕುವಲಾಶ್ವನು ಮರಳಿನ ರಾಶಿಯನ್ನು ಅಗೆಯಿಸಿದನು. ಆ ಮರಳಿನ ರಾಶಿಯನ್ನು ಏಳು ದಿವಸಗಳು ಅಗೆದ ನಂತರ ಕುವಲಾಶ್ವನ ಪುತ್ರರು ಮಹಾಬಲಿ ಧುಂಧುವನ್ನು ಕಂಡರು. ಮರಳಿನೊಳಗಿದ್ದ ಅವನ ಮಹಾಕಾಯವು ಘೋರವಾಗಿತ್ತು. ಸೂರ್ಯನ ತೇಜಸ್ಸಿನಂತೆ ಬೆಳಗುತ್ತಿತ್ತು. ಅಲ್ಲಿ ಧುಂಧುವು ಪಶ್ಚಿಮ ದಿಕ್ಕನ್ನು ಮುಚ್ಚಿ ಕಾಲಾನಲನಂತೆ ಬೆಳಗಿ ಮಲಗಿದ್ದನು. ಕುವಲಾಶ್ವನ ಪುತ್ರರು ಎಲ್ಲಕಡೆಯಿಂದ ಸುತ್ತುವರೆದು, ತೀಕ್ಷ್ಣ ಶರಗಳಿಂದ, ಗದೆಗಳಿಂದ ಮತ್ತು ಮುಸಲ, ಪಟ್ಟಿಶ, ಪರಿಘ, ಪ್ರಾಸ, ಹರಿತ ವಿಮಲ ಖಡ್ಗಗಳಿಂದ ಅವನನ್ನು ತಿವಿದರು. ಹೀಗೆ ಪೆಟ್ಟು ತಿಂದ ಆ ಮಹಾಬಲನು ಸಂಕ್ರುದ್ಧನಾಗಿ ಮೇಲೆದ್ದು ಕೋಪದಿಂದ ವಿವಿಧ ಶಸ್ತ್ರಗಳನ್ನೂ ಭಕ್ಷಿಸಿದನು. ಬಾಯಿಯಿಂದ ಸಂವರ್ತಕನ ಸಮನಾದ ಬೆಂಕಿಯನ್ನು ಕಾರುತ್ತಾ, ಆ ತೇಜಸ್ಸಿನಿಂದ ನೃಪತಿಯ ಆ ಎಲ್ಲ ಮಕ್ಕಳನ್ನೂ ಸುಟ್ಟುಹಾಕಿದನು. ಮುಖದಿಂದ ಹುಟ್ಟಿದ ಅಗ್ನಿಯಿಂದ ಲೋಕಗಳನ್ನು ಕೊನೆಗೊಳಿಸುವನೋ ಎಂಬತೆ ಕೃದ್ಧನಾಗಿ, ಹಿಂದೆ ಪ್ರಭು ಕಪಿಲನು ಕೃದ್ಧನಾಗಿ ಸಗರನ ಮಕ್ಕಳನ್ನು ಸುಟ್ಟಂತೆ ಕ್ಷಣಾರ್ಧದಲ್ಲಿ ಅವರನ್ನು ಸುಟ್ಟು ಅದ್ಭುತವನ್ನೆಸಗಿದನು. ಅವರು ಕ್ರೋಧಾಗ್ನಿಯಲ್ಲಿ ಸುಟ್ಟುಹೋಗಲು, ಮಹಾತೇಜಸ್ವಿ ಮಹೀಪತಿ

ಕುವಲಾಶ್ವನು ಕುಂಭಕರ್ಣನಂತೆ ಬೆಳೆದಿದ್ದ ಆ ಮಹಾತ್ಮನನ್ನು ಎದುರಿಸಿದನು. ಅವನ ದೇಹದಿಂದ ಬಹಳಷ್ಟು ನೀರು ಹರಿಯಿತು. ರಾಜ ನೃಪನಿಂದ ಹರಿದ ಆ ನೀರಿನ ರಾಶಿಯು ಆ ತೇಜಸ್ಸನ್ನು ಕುಡಿಯಿತು. ಆ ಯೋಗಿಯು ಯೋಗದ ನೀರಿನಿಂದ ಆ ಬೆಂಕಿಯನ್ನು ಆರಿಸಿದನು.

ಆಗ ರಾಜನು ಸರ್ವಲೋಕಭಯವನ್ನು ನಿವಾರಿಸಲು ಬ್ರಹ್ಮಾಸ್ತ್ರದಿಂದ ಆ ಕ್ರೂರಪರಾಕ್ರಮಿ ದೈತ್ಯನನ್ನು ಸುಟ್ಟುಹಾಕಿದನು. ಆ ಸುರಶತ್ರು, ಅಮಿತ್ರಘ್ನ, ಇನ್ನೊಬ್ಬ ತ್ರಿಲೋಕೇಶನಂತಿರುವ ಮಹಾಸುರನನ್ನು ಅಸ್ತ್ರದಿಂದ ಸುಟ್ಟಿದುದರಿಂದ ರಾಜರ್ಷಿ ಕುವಲಾಶ್ವನು ಧುಂಧುಮಾರ ಎಂಬ ಹೆಸರಿನಿಂದ ಖ್ಯಾತನಾದನು. ಮುದಿತರಾಗಿ ಸರ್ವ ಮಹರ್ಷಿಗಳ ಸಹಿತ ತ್ರಿದಶರು ಅವನಿಗೆ ವರವನ್ನು ಕೇಳಿಕೋ ಎಂದು ಹೇಳಿದರು. ಆಗ ಅತೀವ ಮುದಿತನಾದ ರಾಜನು ಅಂಜಲೀಬದ್ಧನಾಗಿ ಹೇಳಿದನು:

> “ನಾನು ದ್ವಿಜಾಗ್ರರಿಗೆ ವಿತ್ತವನ್ನು ಕೊಡುವಂಥವನಾಗಲಿ, ಶತ್ರುಗಳಿಗೆ ದುರ್ಜಯನಾಗಲಿ, ವಿಷ್ಣುವಿನೊಂದಿಗೆ ನನ್ನ ಸಖ್ಯವು ಇರಲಿ, ಭೂತಗಳಿಗೆ ಏನೂ ದ್ರೋಹವನ್ನೆಸಗದೇ ಇರಲಿ. ಸತತವೂ ಧರ್ಮದಲ್ಲಿ ಸಂತೋಷಹೊಂದುವವನಾಗಲಿ, ಮತ್ತು ಸ್ವರ್ಗವಾಸವು ಅಕ್ಷಯವಾಗಲಿ.”

“ಹಾಗೆಯೇ ಆಗಲಿ” ಎಂದು ದೇವತೆಗಳು, ಋಷಿಗಳು, ಗಂಧರ್ವರು ಮತ್ತು ಧೀಮತ ಉತ್ತಂಕನೂ ಸೇರಿ, ಪ್ರೀತಿಯಿಂದ ರಾಜನಿಗೆ ಉತ್ತರಿಸಿದರು. ರಾಜನಿಗೆ ವಿವಿಧ ಆಶೀರ್ವಾದಗಳನ್ನಿತ್ತು ದೇವತೆಗಳೂ ಮಹರ್ಷಿಗಳೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಅವನಿಗೆ ಮೂವರು ಶಿಷ್ಟರಾದ ಪುತ್ರರಾದರು - ದೃಢಾಶ್ವ, ಕಪಿಲಾಶ್ವ ಮತ್ತು ಚಂದ್ರಾಶ್ವ. ಅವರಿಂದ ಮಹಾತ್ಮ ಇಕ್ಷ್ವಾಕುಗಳ ಪರಂಪರೆಯು ಮುಂದುವರೆಯಿತು. ಹೀಗೆ ಆ ಮಧುಕೈಟಭರ ಮಗ ಮಹಾವೀರ್ಯ ದೈತ್ಯ ಧುಂಧುವು ಸತ್ತಮ ಕುವಲಾಶ್ವನಿಂದ ಹತನಾದನು. ಅಂದಿನಿಂದ ಗುಣಸಂಯುಕ್ತ ನೃಪತಿ ಕುವಲಾಶ್ವನಾದರೋ ಧುಂಧುಮಾರನೆಂಬ ಹೆಸರಿನಿಂದ ಪ್ರಸಿದ್ಧನಾದನು.

ಯಾರು, ವಿಷ್ಣುವಿನ ಕೀರ್ತನೆಯಿರುವ, ಈ ಪುಣ್ಯಕಥೆಯನ್ನು ಕೇಳುತ್ತಾರೋ ಆ ನರನು ಧರ್ಮಾತ್ಮನೂ ಪುತ್ರವಂತನೂ ಆಗುತ್ತಾನೆ. ಪರ್ವಗಳಲ್ಲಿ ಕೇಳುವವನು ಧೃತಿವಂತನೂ ಆಯುಷ್ಮಂತನೂ ಆಗುತ್ತಾನೆ. ವ್ಯಾಧಿಭಯ ಯಾವುದನ್ನೂ ಹೊಂದದೇ ವಿಗತಜ್ವರನಾಗುತ್ತಾನೆ.

# ಅಂಗಿರಸ

[ಅಂಗಿರಸ ಮತ್ತು ಅಗ್ನಿಗಳ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ

ಪರ್ವ (ಅಧ್ಯಾಯ ೨೦೭-೨೧೨) ದಲ್ಲಿ ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ಅಗ್ನಿಯು ತಪಸ್ಸನ್ನು ಆಚರಿಸಿದನು. ಅನ್ಯ ತಪಸ್ವಿಯ (ಅಂಗಿರಸನ) ತೇಜಸ್ಸಿನಿಂದ ತುಂಬಾ ಸಂತಪ್ತನಾಗಿ ಆ ತೇಜಸ್ವಿಯು ಏನು ಯೋಚಿಸಬೇಕೆಂದು ತಿಳಿಯದಾದನು. ಆಗ ಭಗವಾನ್ ಹವ್ಯವಾಹನನು ಚಿಂತಿಸತೊಡಗಿದನು:

> "ಈ ಲೋಕಗಳಿಗೆ ಬ್ರಹ್ಮನು ಅನ್ಯ ಅಗ್ನಿಯನ್ನು (ಅಂಗಿರಸನ ರೂಪದಲ್ಲಿ) ಕೊಟ್ಟಿದ್ದಾನೆ. ನಾನು ತಪಸ್ಸನ್ನು ತಪಿಸುತ್ತಿರುವಾಗ ನನ್ನ ಅಗ್ನಿತ್ವವು ನಷ್ಟವಾಯಿತು. ನಾನು ಹೇಗೆ ಪುನಃ ಅಗ್ನಿಯಾಗಬಹುದು"

ಎಂದು ಚಿಂತಿಸಿದನು. ಈ ರೀತಿ ಚಿಂತೆಯಲ್ಲಿದ್ದ ಅಗ್ನಿಯು ಲೋಕಗಳನ್ನು ಸುಡುತ್ತಿದ್ದ ಮಹಾಮುನಿಯನ್ನು ನಿಧಾನವಾಗಿ ಭಯದಿಂದ ಕಾಣಲು, ಅಂಗಿರಸನು ಅವನಿಗೆ ಈ ಮಾತುಗಳನ್ನಾಡಿದನು:

> "ಅಗ್ನಿ! ಲೋಕಭಾವನ! ಶೀಘ್ರವಾಗಿ ನೀನು ನಿನ್ನ ಹಿಂದಿನ ಅಗ್ನಿತ್ವವನ್ನು ಪಡೆದುಕೋ! ಮೂರು ಲೋಕಗಳಲ್ಲಿರುವ ಸ್ಥಾವರ ಜಂಗಮಗಳಿಗೆ ನೀನು ತಿಳಿದವನಾಗಿದ್ದೀಯೆ. ಕತ್ತಲೆಯನ್ನು ಹೋಗಲಾಡಿಸಲು ಅಗ್ನಿ! ಬ್ರಹ್ಮನು ಮೊದಲು

ನಿನ್ನನ್ನು ಸೃಷ್ಟಿಸಿದನು. ರಾತ್ರಿಯನ್ನು ಕಳೆಯುವವನೇ! ಶೀಘ್ರವಾಗಿ ನಿನ್ನ ಸ್ಥಾನವನ್ನು ಹಿಂದೆ ಪಡೆದುಕೋ."

ಅಗ್ನಿಯು ಹೇಳಿದನು:

"ಲೋಕದಲ್ಲಿ ನನ್ನ ಕೀರ್ತಿಯು ನಷ್ಟವಾಗಿ ನೀನು ಹುತಾಶನನಾಗಿದ್ದೀಯೆ. ಜನರು ನಿನ್ನನ್ನೇ ಪಾವಕನೆಂದು ತಿಳಿದಿದ್ದಾರೆ. ನನ್ನನ್ನಲ್ಲ. ನಾನು ಅಗ್ನಿತ್ವವನ್ನು ತೊರೆಯುತ್ತೇನೆ. ನೀನು ಪ್ರಥಮ ಅಗ್ನಿಯಾಗು. ನಾನು ಪ್ರಾಜಾಪತ್ಯಕನೆಂಬ ಎರಡನೆಯ ಅಗ್ನಿಯಾಗುತ್ತೇನೆ."

ಅಂಗಿರಸನು ಹೇಳಿದನು:

"ಪ್ರಜೆಗಳನ್ನು ಸ್ವರ್ಗಕ್ಕೆ ತೆಗೆದುಕೊಂಡು ಹೋಗುವ ಪುಣ್ಯವನ್ನು ನೀನೇ ಮಾಡು. ಕತ್ತಲೆಯನ್ನು ಹರಿಸುವ ಅಗ್ನಿಯೂ ನೀನೇ ಆಗು. ಅಗ್ನಿ ದೇವ! ನನ್ನನ್ನು ನಿನ್ನ ಪ್ರಥಮ ಪುತ್ರನನ್ನಾಗಿಸಿಕೋ!"

ಅಂಗಿರಸನ ಈ ಮಾತನ್ನು ಕೇಳಿ ಜಾತವೇದನು ಹಾಗೆಯೇ ಮಾಡಿದನು. ಮತ್ತು ಅಂಗಿರಸನು ಬೃಹಸ್ಪತಿ ಎಂಬ ಹೆಸರಿನ ಮಗನನ್ನು ಪಡೆದನು. ಅಗ್ನಿಯಿಂದ ಅಂಗಿರಸನ ಪ್ರಥಮ ಮಗನು ಹುಟ್ಟಿದನೆಂದು ತಿಳಿದ ದೇವತೆಗಳು ಅದರ ಕಾರಣವನ್ನು ತಿಳಿಯಲು ಬಂದು ಸೇರಿದರು. ದೇವತೆಗಳು ಕೇಳಲು ಅವನು ಕಾರಣವನ್ನು ಹೇಳಿದನು. ಅಂಗಿರಸನು



ಕೊಟ್ಟ ಉತ್ತರವನ್ನು ದೇವತೆಗಳು ಸ್ವೀಕರಿಸಿದರು. ಬಹುಸಂಖ್ಯೆಯ ಕರ್ಮಗಳಿಗೆ ಬ್ರಾಹ್ಮಣಗಳಲ್ಲಿ ಗೊತ್ತುಪಡಿಸಿದ ಮಹಾಪ್ರಭೆಗಳುಳ್ಳ ನಾನಾ ವಿಧದ ಅಗ್ನಿಗಳಿವೆ.

## ಅಗ್ನಿವಂಶ ಕೀರ್ತನೆ

ಬ್ರಹ್ಮನ ಈ ಮೂರನೆಯ ಮಗನು ಆಪವನ ಮಗಳನ್ನು ಮದುವೆಯಾದನು. ಅವನ ಮಕ್ಕಳು: ಬೃಹಜ್ಯೋತಿ, ಬೃಹತ್ಕೀರ್ತಿ, ಬೃಹದ್ಬ್ರಹ್ಮ, ಬೃಹನ್ಮನ, ಬೃಹನ್ಮಂತ್ರ, ಬೃಹದ್ಭಾಸ ಮತ್ತು ಬೃಹಸ್ಪತಿ. ದೇವೀ ಭಾನುಮತಿ ಎಂಬ ಹೆಸರಿನ ಅಂಗಿರಸನ ಮೊದಲನೆಯ ಮಗಳು ಅವನ ಮಕ್ಕಳೆಲ್ಲರಲ್ಲಿ ಅಪ್ರತಿಮ ರೂಪವತಿಯಾಗಿದ್ದಳು. ಹುಟ್ಟಿದಾಗ ಇರುವ ಎಲ್ಲವುಗಳಲ್ಲಿಯೂ ಅವಳ ಮೇಲೆ ಅನುರಾಗವುಂಟಾಗಿದುದರಿಂದ, ಅಂಗಿರಸನ ಎರಡನೆಯ ಮಗಳಿಗೆ ರಾಗದಿಂದ ರಾಗವೆನ್ನುವುದೇ ಹೆಸರಾಯಿತು. ಅಂಗಿರಸನ ಮೂರನೆಯ ಮಗಳು ಸಿನೀವಾಲಿಯ ದೇಹವು ಎಷ್ಟೊಂದು ಸಣ್ಣದಾಗಿತ್ತೆಂದರೆ ಅವಳು ಕಾಣಿಸಿಕೊಳ್ಳುತ್ತಿರಲಿಲ್ಲ. ಆದುದರಿಂದ ಅವಳನ್ನು ಕಪರ್ದಿಯ ಮಗಳೆಂದು ಹೇಳುತ್ತಾರೆ. ಅರ್ಚಿಷ್ಮತಿಯು ಕಾಂತಿಯೊಂದಿಗೆ ಕಂಡುಬಂದಳು, ಹವಿಷ್ಮತಿಯು ಹವಿಸ್ಸಿನೊಂದಿಗೆ, ಮತ್ತು ಅಂಗಿರಸನ ಆರನೆಯ ಮಗಳು ಪುಣ್ಯೆಯನ್ನು ಮಹಿಷ್ಮತೀ ಎಂದು ಕರೆದರು. ಅಂಗಿರಸನ ಏಳನೆಯವಳು ಮಹಾಮಖಗಳಲ್ಲಿ ಸತ್ಕೃತಳಾಗುವವಳು ಮಹಾಮತಿಯೆಂದು ವಿಖ್ಯಾತಳಾದವಳು.

ಯಾರನ್ನು ನೋಡಿ ಜನರು ಆಶ್ಚರ್ಯಚಕಿತರಾಗುವರೋ ಅವಳು ಭಗವತಿ, ಅಂಗಿರಸನ ಎಂಟನೆಯ ಮಗಳು. ಕುಹೂ ಎನ್ನುವವಳು.

ಬೃಹಸ್ಪತಿಯ ಭಾರ್ಯೆ ಯಶಸ್ವಿನೀ ಚಂದ್ರಮಸೀ. ಅವಳು ಆರು ಪುಣ್ಯ ಅಗ್ನಿಗಳಿಗೂ ಮತ್ತು ಓರ್ವ ಪುತ್ರಿಗೂ ಜನ್ಮವಿತ್ತಳು. ತುಪ್ಪದ ಹವಿಸ್ಸಿನ ಮೊದಲ ಆಹುತಿಯನ್ನಾಗಿ ಯಾವ ಅಗ್ನಿಯಲ್ಲಿ ಹಾಕುತ್ತಾರೋ ಆ ಅಗ್ನಿಯು ಬೃಹಸ್ಪತಿಯ ಮಹಾಪ್ರಭೆಯುಳ್ಳ ಶಂಯು ಎಂಬ ಹೆಸರಿನ ಪುತ್ರ. ಚಾತುರ್ಮಾಸದ ಇಷ್ಟಿಯಲ್ಲಿ ಮತ್ತು ಅಶ್ವಮೇಧದಲ್ಲಿ ಮೊದಲ ಪಶುವನ್ನು ಅನೇಕ ಜ್ವಾಲೆಗಳಾಗಿ ಉರಿಯುವ ಈ ಮಹಾವೀರ್ಯನಲ್ಲಿ ಮಾತ್ರ ಆಹುತಿಯನ್ನಾಗಿ ಹಾಕುತ್ತಾರೆ. ಶಮ್ಯುನ ಅಪ್ರತಿಮ ಭಾರ್ಯೆಯು ಸತ್ಯ. ಸತ್ಯೆಯು ಧರ್ಮನ ಮಗಳು. ಆ ಅಗ್ನಿಗೆ ಉರಿಯುತ್ತಿರುವ ಓರ್ವ ಮಗ ಮತ್ತು ಮೂರು ಸುವ್ರತ ಕನ್ಯೆಯರು. ಅಧ್ವರದಲ್ಲಿ ಪ್ರಥಮ ಆಜ್ಯಭಾಗದಲ್ಲಿ ಪೂಜಿತನಾಗುವ ಅಗ್ನಿ ಭರದ್ವಾಜನನ್ನು ಅವನ ಪ್ರಥಮ ಪುತ್ರನೆಂದು ಹೇಳುತ್ತಾರೆ. ಎಲ್ಲ ಪೂರ್ಣಿಮೆಗಳಲ್ಲಿ ಸ್ರುವದ ಮೂಲಕ ತುಪ್ಪದ ಹವಿಸ್ಸನ್ನು ಹಾಕುವ ಭರತ ಎಂಬ ಹೆಸರಿನ ಅಗ್ನಿಯು ಶಂಯುವಿನ ಎರಡನೆಯ ಮಗ. ಭರತನಿಗೆ ಮೂರುಕನ್ಯೆಯರಿದ್ದರು, ಅವರನ್ನು ಮದುವೆಮಾಡಿಕೊಟ್ಟನು. ಅವನಿಗೆ ಭರತನೆಂಬ ಮಗನೂ ಭರತೀ ಎನ್ನುವ ಮಗಳೂ ಇದ್ದರು. ಪಾವಕ ಭರತನು ಅಗ್ನಿ ಪ್ರಜಾಪತಿಯ ಮಗನು. ಜೋರಾಗಿ ಉರಿಯುತ್ತಿರುವಾಗ ಅವನು ತುಂಬಾ ಅಹಿತನಾಗಿರುತ್ತಾನೆ.

ಭರದ್ವಾಜನ ಪತ್ನಿಯು ವೀರಾ ಮತ್ತು ಮಗನು ವೀರ. ಇವನಿಗೆ ಆಜ್ಯದಲ್ಲಿ ಸೋಮನಷ್ಟೇ ಪೂಜೆಯಾಗುತ್ತದೆ ಎಂದು ಬ್ರಾಹ್ಮಣರು ಹೇಳುತ್ತಾರೆ, ಆದರೆ ಮೆಲ್ಲಗೆ. ಸೋಮದೊಂದಿಗೆ ಯಜಿಸುವ ಈ ಎರಡನೆಯ ಹವಿಸ್ಸನ್ನು ರಥಪ್ರಭು, ರಥಧ್ವಾನ ಮತ್ತು ಕುಂಭರೇತಾ ಎಂದೂ ಕರೆಯುತ್ತಾರೆ. ಅವನು ಸರಯೂವಿನಲ್ಲಿ ಸಿದ್ಧಿಯನ್ನು ಹುಟ್ಟಿಸಿದನು ಮತ್ತು ತನ್ನ ಪ್ರಭೆಯಿಂದ ಸೂರ್ಯನ ಪ್ರಭೆಯನ್ನು ಕುಂದಿಸಿದನು. ಅವನೇ ಅಗ್ನಿಯನ್ನು ತಂದ ಎಂದು ನಿತ್ಯವೂ ಆವಾಹನಗಳಲ್ಲಿ ಹೇಳುತ್ತಾರೆ. ಯಶಸ್ಸು, ವರ್ಚಸ್ಸು ಮತ್ತು ಶ್ರಿಯಲ್ಲಿ ನಿತ್ಯವೂ ಕಡಿಮೆಯಾಗದ ನಿಶ್ಚ್ಯವನ ಎಂಬ ಹೆಸರಿನ ಅಗ್ನಿಯು ಸದಾ ಪೃಥ್ವಿಯನ್ನು ಸ್ತುತಿಸುತ್ತಿರುತ್ತಾನೆ. ಪಾಪವಿಲ್ಲದ, ಕಲ್ಮಷಗಳಿಂದ ಮುಕ್ತನಾದ, ವಿಶುದ್ಧನಾದ, ಜ್ವಾಲೆಗಳಲ್ಲಿ ಉರಿಯುತ್ತಿರುವ ವಿಪಾಪ ಅಗ್ನಿಯು ಅವನ ಮಗ. ಸಮಯಕರ್ಮಗಳಲ್ಲಿ ಸತ್ಯನು. ಆಕ್ರೋಶಪಡುತ್ತಿರುವ ಭೂತಗಳನ್ನು ಯಾರು ನಿಷ್ಕೃತಿಗೊಳಿಸುತ್ತಾನೋ ಅವನೇ ನಿಷ್ಕೃತಿ ಎಂಬ ಹೆಸರಿನ ಅಗ್ನಿ. ಅವನನ್ನು ಸೇವಿಸಿದರೆ ಶೋಭಿಸುತ್ತಾನೆ. ವೇದನೆಯಿಂದ ಆರ್ತರಾದ ಜನರು ಯಾವುದರಿಂದ ಸ್ವಯಂ ಪರಿತಪಿಸುತ್ತಾರೋ ಅದೇ ಸ್ವನ ಎಂಬ ಹೆಸರಿನ ಅವನ ಪುತ್ರ. ಅವನು ನೋವನ್ನುಂಟುಮಾಡುವವನು. ಯಾವುದು ವಿಶ್ವದ ಜಗತ್ತಿನ ಬುದ್ಧಿಯನ್ನು ಆಕ್ರಮಿಸಿ ನಿಂತಿದೆಯೋ ಆ ಪಾವಕನನ್ನು ಆಧ್ಯಾತ್ಮವನ್ನು ತಿಳಿದವರು ವಿಶ್ವಜಿತ ಎಂಬ ಹೆಸರಿನಿಂದ ಕರೆಯುತ್ತಾರೆ. ದೇಹದ ಕರುಳುಗಳಲ್ಲಿದ್ದುಕೊಂಡು ತಿನ್ನುವ ಆಹಾರವನ್ನು ಪಚನಮಾಡುವ,

ಸರ್ವಲೋಕದ ಯಜ್ಞಗಳಲ್ಲಿರುವ ಅಂತರಾಗ್ನಿಯ ಹೆಸರು ವಿಶ್ವಭುಕ್. ಪಾಕಯಜ್ಞಗಳಲ್ಲಿ ಬ್ರಾಹ್ಮಣರು ಪೂಜಿಸುವ ಈ ಬ್ರಹ್ಮಚಾರೀ, ನಿಯತಾತ್ಮ, ಸತತವೂ ವಿಪುಲವ್ರತನಾಗಿರುವ ಪಾವಕನು ಗೋಪತಿ ಎಂಬ ಹೆಸರಿನಿಂದ ಪ್ರಖ್ಯಾತನಾಗಿದ್ದಾನೆ. ಇವನಿಗೆ ನದಿಯೊಂದಿಗೆ ಪ್ರೀತಿಯಾಯಿತು. ಅವನಿಂದ ಕರ್ಮ ಕರ್ತೃಗಳ ಎಲ್ಲ ಕರ್ಮಗಳೂ ನಡೆಯುತ್ತವೆ. ಪರಮದಾರುಣವಾದ, ವಡವಾಮುಖನಾದ, ನೀರನ್ನು ಕುಡಿಯುವ, ಮೇಲ್ಮುಖವಾಗಿರುವವನ ಹೆಸರು ಊರ್ಧ್ವಭಾಮ. ಈ ಋಷಿಯು ಪ್ರಾಣದಲ್ಲಿರುತ್ತಾನೆ. ಮನೆಯ ಉತ್ತರ ದ್ವಾರದಲ್ಲಿ ನಿತ್ಯವೂ ಉರಿಯುತ್ತಿರುವ, ಯಾವುದರಿಂದ ಬೆಣ್ಣೆಯು ತುಪ್ಪವಾಗುತ್ತದೆಯೋ ಅದನ್ನು ಸ್ವಿಷ್ಟಕೃತ್ ಎಂದು ಕರೆಯುತ್ತಾರೆ. ಪ್ರಶಾಂತರಾಗಿರುವವರಲ್ಲಿ ಸಿಟ್ಟಿನ ಅಗ್ನಿಯಾಗುವವಳು, ಕ್ರೋಧದ ರಸವನ್ನು ಹುಟ್ಟಿಸುವವಳು ಇವನ ಮಗಳು ಸ್ವಾಹಾ ಎನ್ನುವವಳು. ದಾರುಣಳೂ, ಕ್ರೂರಳೂ ಆದ ಇವಳು ಸರ್ವಭೂತಗಳಲ್ಲಿ ನೆಲೆಮಾಡಿರುತ್ತಾಳೆ.

ಮೂರು ಲೋಕಗಳಲ್ಲಿಯೂ ರೂಪದಲ್ಲಿ ಯಾರ ಸದೃಶನಾದವನು ಯಾರೂ ಇಲ್ಲವೋ, ಅತುಲ್ಯನಾದುದರಿಂದ ಅವನಿಗೆ ಕಾಮಾಗ್ನಿ ಎಂದು ದೇವತೆಗಳು ಹೆಸರನ್ನಿಟ್ಟರು. ಸಂಹರ್ಷದಿಂದ ಕ್ರೋಧವನ್ನು ಧರಿಸಿ, ಧನುಸ್ಸನ್ನು ಹಿಡಿದು, ಮಾಲೆಯನ್ನು ಧರಿಸಿ ರಥದಲ್ಲಿ ನಿಂತು ಸಮರದಲ್ಲಿ ಶತ್ರುಗಳನ್ನು ನಾಶಪಡಿಸುವ ಅಗ್ನಿಯ ಹೆಸರು ಅಮೋಘ. ಮೂರು ಉಕ್ತಗಳನ್ನು ಬಳಸಿ ಹೇಳುವ ಉಕ್ಥ ಎಂಬ ಹೆಸರಿನ ಮಹಾವಾಕ್ಯವನ್ನು ಸಕಾಮಾಶ್ವ ಎಂದು ತಿಳಿದವರು ಹೇಳುತ್ತಾರೆ.

ಕಾಶ್ಯಪ ವಸಿಷ್ಠ, ಪ್ರಾಣ, ಪ್ರಾಣನ ಪುತ್ರ, ಅಗ್ನಿ ಆಂಗಿರಸ ಮತ್ತು ಚ್ಯವನ ತ್ರಿಷುವರ್ಚಕರು ಪುತ್ರನಿಗೋಸ್ಕರ ನಮಗೆ ಧರ್ಮಿಷ್ಠನೂ ಯಶಸ್ಸಿನಲ್ಲಿ ಬ್ರಹ್ಮನ ಸಮನೂ ಆದ ಮಗನು ದೊರಕಲಿ ಎಂದು ಬಹಳ ವರ್ಷಗಳ ತೀವ್ರ ತಪಸ್ಸನ್ನು ಆಚರಿಸಿದರು. ಹೀಗೆ ಧ್ಯಾನಿಸಿ ಆ ಐವರು ಮಹಾ ಆಹುತಿಗಳನ್ನು ನೀಡಲು ಅಲ್ಲಿ ಹೊಳೆಯುತ್ತಿರುವ, ಐದು ಬಣ್ಣಗಳಿಂದ ವಿಜೃಂಭಿಸುವ ತೇಜೋರಾಶಿಯು ಹೊರಹೊಮ್ಮಿತು. ಚೆನ್ನಾಗಿ ಉರಿಯುತ್ತಿರುವ ಬೆಂಕಿಯು ಅವನ ಶಿರವಾಗಿತ್ತು; ಬಾಹುಗಳು ಸೂರ್ಯನಂತಿದ್ದವು, ಕಣ್ಣುಗಳು ಬಂಗಾರದ ಬಣ್ಣಗಳದ್ದಾಗಿದ್ದವು ಮತ್ತು ಜಂಘವು ಕಪ್ಪಾಗಿತ್ತು. ಐದು ಬಣ್ಣಗಳ, ಆ ಐದು ಜನರ ತಪಸ್ಸಿನಿಂದ ಮಾಡಲ್ಪಟ್ಟ ಅವನು ವೇದಗಳಲ್ಲಿ ಪಾಂಚಜನ್ಯನೆಂದು ಕರೆಯಲ್ಪಟ್ಟಿದ್ದಾನೆ ಮತ್ತು ಅವನು ಐದು ವಂಶಗಳನ್ನು ಹುಟ್ಟಿಸಿದನು. ಆ ಮಹಾತಪಸ್ವಿಯು ಹತ್ತು ಸಾವಿರ ವರ್ಷಗಳ ತಪಸ್ಸನ್ನು ತಪಿಸಿ ಪಿತೃಗಳ ಘೋರ ಬೆಂಕಿಯನ್ನು ಹುಟ್ಟಿಸಿದನು ಮತ್ತು ಪ್ರಜೆಗಳನ್ನು ಸೃಷ್ಟಿಸಿದನು. ನೆತ್ತಿ ಮತ್ತು ಮುಖದಿಂದ ಬೃಹದ್ ಮತ್ತು ರಥಂತರಗಳೆಂಬ ಶೀಘ್ರಹಾರಿಗಳನ್ನು, ಹೊಕ್ಕಳಿನಿಂದ ಶಿವನನ್ನು, ಬಲದಿಂದ ಇಂದ್ರನನ್ನು, ಮತ್ತು ಪ್ರಾಣದಿಂದ ವಾಯು ಅಗ್ನಿಗಳನ್ನು ಸೃಷ್ಟಿಸಿದನು. ಎರಡು ಬಾಹುಗಳಿಂದ ವಿಶ್ವೇಭೂತಗಳು ಹುಟ್ಟಿದವು. ಇವುಗಳನ್ನು ಸೃಷ್ಟಿಸಿ ಪಿತೃಗಳ ಐವರು ಮಕ್ಕಳನ್ನು ಹುಟ್ಟಿಸಿದನು. ಬೃಹದೂರ್ಜನಲ್ಲಿ ಪ್ರಣಿಧಿ, ಕಾಶ್ಯಪನಲ್ಲಿ ಬೃಹತ್ತರ, ಅಂಗಿರಸನ ವೀರ ಪುತ್ರ ಭಾನು, ವರ್ಚನ ಸೌಭರ, ಪ್ರಾಣನ ಅನುದತ್ತ – ಈ ಐದು

ವಂಶಗಳು ಹೇಳಲ್ಪಟ್ಟಿವೆ. ತಪನು ಯಜ್ಞಗಳನ್ನು ತಡೆಗಟ್ಟುವಂತಹ ಹದಿನೈದು ದೇವತೆಗಳನ್ನು ಸೃಷ್ಟಿಸಿದನು. ಅಭೀಮ, ಅತಿಭೀಮ, ಭೀಮ, ಭೀಮಬಲ ಮತ್ತು ಅಬಲ - ಈ ಐವರು ಯಜ್ಞಗಳನ್ನು ನಿಲ್ಲಿಸುವ ದೇವತೆಗಳು. ಸುಮಿತ್ರ, ಮಿತ್ರವಂತ, ಮಿತ್ರಜ್ಞ, ಮಿತ್ರವರ್ಧನ ಮತ್ತು ಮಿತ್ರಧರ್ಮಾಣ – ಇವರು ತಪನು ಸೃಷ್ಟಿಸಿದ ದೇವತೆಗಳು. ಸುರಪ್ರವೀರ, ವೀರ, ಸುಕೇಶ, ಸುವರ್ಚಸ ಮತ್ತು ಸುರಹಂತ್ರಿ – ಈ ಐವರು ತಪನಿಂದ ಸೃಷ್ಟಿಸಲ್ಪಟ್ಟವರು. ಇವರು ಪ್ರತ್ಯೇಕ ಪ್ರತ್ಯೇಕವಾಗಿ ಐದೈದರಂತೆ ಮೂರು ವಿಧಗಳಲ್ಲಿ ಇದ್ದಾರೆ. ಅವರು ಇಲ್ಲಿ ಇದ್ದುಕೊಂಡು ಸ್ವರ್ಗದ ಯಜ್ಞಯಾಜಿಗಳನ್ನು ನಾಶಮಾಡುತ್ತಾರೆ. ಅವರು ಭೂಮಿಯಲ್ಲಿ ಇಷ್ಟವನ್ನು ಹರಣಗೊಳಿಸಿ ಮಹಾ ವಿಘ್ನಗಳನ್ನು ತರುತ್ತಾರೆ. ಹವಿಸ್ಸುಗಳನ್ನು ಕೊಂಡೊಯ್ಯುವವರೊಂದಿಗೆ ಸ್ಪರ್ಧಿಸಿ ನಿಲ್ಲಿಸುತ್ತಾರೆ. ಎಲ್ಲಿ ಅಗ್ನಿಯನ್ನು ಸ್ಥಾಪಿಸಿರುತ್ತಾರೋ ಅಲ್ಲಿಗೆ ಅವರು ಹೋಗದಂತೆ ವೇದಗಳಲ್ಲಿ ಕುಶಲರಾದವರು ಅವರಿಗೆ ಹವಿಸ್ಸನ್ನು ಯಜ್ಞವೇದಿಕೆಯ ಹೊರಗೆ ನೀಡುತ್ತಾರೆ.  ಅವರು ಯಜದ ಅಗ್ನಿಯನ್ನು ತಮ್ಮ ರೆಕ್ಕೆಗಳ ಮೇಲೆ ಒಯ್ಯುತ್ತಾರೆ. ಮಂತ್ರಗಳಿಂದ ಶಾಂತಗೊಂಡರೆ ಅವರು ಯಜ್ಞವನ್ನು ನಿಲ್ಲಿಸುವುದಿಲ್ಲ. ತಪನ ಇನ್ನೊಬ್ಬ ಮಗ ಬೃಹದುಕ್ತನು ಭೂಮಿಯಲ್ಲಿ ವಾಸಿಸುತ್ತಾನೆ. ಅವನು ಭೂಮಿಯಲ್ಲಿ ಅಗ್ನಿಹೋತ್ರವನ್ನು ಮಾಡುವ ಒಳ್ಳೆಯವರಿಂದ ಪೂಜಿಸಲ್ಪಡುತ್ತಾನೆ. ರಥಂತರನೆಂದು ಕರೆಯಲ್ಪಡುವ ತಪನ ಪುತ್ರ ಅಗ್ನಿಯು ಮಿತ್ರವಿಂದನಿಗೆ ಹವಿಸ್ಸನ್ನು ಕೊಂಡೊಯ್ಯುತ್ತಾನೆ ಎಂದು ತಿಳಿಯುತ್ತಾರೆ.

ತಪನು ತನ್ನ ಮಹಾಯಶಸ್ವಿ ಪುತ್ರರೊಂದಿಗೆ ಪರಮ ಪ್ರೀತನಾಗಿ ಮೋದಿಸಿದನು.

ಭರತ ಎಂಬ ಹೆಸರಿನ ಪಾವಕನು ಭಾರದ ನಿಯಮಗಳಿಗೆ ಬದ್ಧನಾಗಿದ್ದನು. ತುಷ್ಟನಾದಾಗ ಪುಷ್ಟಿಯನ್ನು ತರುವುದರಿಂದ ಪುಷ್ಟಿಮತಿ ಎಂಬುದು ಈ ಅಗ್ನಿಯ ಇನ್ನೊಂದು ಹೆಸರು. ಪ್ರಜೆಗಳೆಲ್ಲರನ್ನೂ ಪೊರೆಯುವುದರಿಂದ ಇದಕ್ಕೆ ಭರತ ಎಂದು ಹೇಳುತ್ತಾರೆ. ಇನ್ನೊಂದು ಅಗ್ನಿಯ ಹೆಸರು ಶಿವ. ಶಕ್ತಿಪೂಜೆಯಲ್ಲಿ ನಿರತನಾದವನು. ದುಃಖಾರ್ತರೆಲ್ಲರಿಗೆ ಮಂಗಳವನ್ನುಂಟುಮಾಡುವುದರಿಂದ ಇವನು ಶಿವ. ಮಹಾತಪಸ್ಸಿನ ಫಲವು ಪ್ರವೃದ್ಧವಾದುದನ್ನು ನೋಡಿ ತಪನು ಕಾಮೋದ್ಯುಕ್ತನಾದಾಗ ಅವನಿಗೆ ಪುರಂದರನೆಂಬ ಮತಿವಂತ ಪುತ್ರನು ಜನಿಸಿದನು. ಉಷ್ಮ ಎನ್ನುವ ಇನ್ನೊಬ್ಬ ಮಗನೂ ಹುಟ್ಟಿದನು. ಭೂತಗಳು ಆವಿಯಾದಾಗ ಈ ಅಗ್ನಿಯು ಕಾಣಿಸಿಕೊಳ್ಳುತ್ತದೆ. ಮನು ಎಂಬ ಹೆಸರಿನ ಅಗ್ನಿಯು ಪ್ರಜಾಪತಿಯಾದನು. ವೇದಪಾರಂಗತರಾದ ಬ್ರಾಹ್ಮಣರು ಶಂಭು ಎನ್ನುವ ಅಗ್ನಿಯ ಕುರಿತು ಹೇಳುತ್ತಾರೆ. ಅನಂತರ ದ್ವಿಜರು ಮಹಾಪ್ರಭೆಯ ಅವಸಥ್ಯ ಎನ್ನುವ ಅಗ್ನಿಯ ಕುರಿತು ಹೇಳುತ್ತಾರೆ. ಹೀಗೆ ತಪನು ಐದು ಹವ್ಯವಾಹನ ಸುವರ್ಣಸದೃಶ ಪ್ರಭೆಯುಳ್ಳ ಅಗ್ನಿಗಳನ್ನು ಹುಟ್ಟಿಸಿದನು.

ಪರಿಶ್ರಾಂತನಾದ ಮಹಾಭಾಗ ಗವಾಂಪತಿ (ಸೂರ್ಯ) ಯನ್ನು

ಪ್ರಾಶಾಂತ ಅಗ್ನಿಯೆಂದು ಹೇಳುತ್ತಾರೆ. ಅವನು ಭೂಮಿಯಮೇಲೆ ಘೋರ ಅಸುರರನ್ನೂ ಮತ್ತು ಇತರ ಮರ್ತ್ಯರನ್ನು ಹುಟ್ಟಿಸಿದನು. ಅಂಗಿರಸನು ತಪನ ಮಗ ಮನು ಭಾನುವನ್ನು ಸೃಷ್ಟಿಸಿದನು. ಅವನನ್ನು ವೇದಪಾರಂಗತ ಬ್ರಾಹ್ಮಣರು ಬೃದದ್ಭಾನುವೆಂದು ಕರೆಯುತ್ತಾರೆ. ಭಾನುವಿನ ಪತ್ನಿಯರು ಸುಪ್ರಜಾ ಮತ್ತು ಸೋಮನ ಮಗಳು ಬೃಹದ್ಭಾಸಾ. ಅವರಿಗೆ ಆರು ಪುತ್ರರು ಹುಟ್ಟಿದರು. ಅವರ ಹುಟ್ಟುವಿಕೆಯನ್ನು ಕೇಳು. ದುರ್ಬಲ ಜೀವಿಗಳಿಗೆ ಬಲವನ್ನು ನೀಡುವವನಿಗೆ ಬಲದನೆಂದು ಕರೆಯುತ್ತಾರೆ. ಇವನು ಭಾನುವಿನ ಮೊದಲನೆಯ ಮಗ. ಭೂತಗಳು ಪ್ರಶಾಂತರಾಗಿರುವಾಗ ದಾರುಣ ಕೋಪನಾಗಿರುವ ಅಗ್ನಿಯು ಮನ್ಯು ಎಂಬ ಹೆಸರಿನ ಭಾನುವಿನ ಎರಡನೆಯ ಮಗ. ಇಲ್ಲಿ ದರ್ಶ ಮತ್ತು ಪೌರ್ಣಿಮೆಗಳಲ್ಲಿ ಯಾರಿಗೆ ಹವಿಸ್ಸನ್ನು ಹಾಕುತ್ತೇವೋ ಅವನೇ ವಿಷ್ಣುವೆಂಬ ಅಗ್ನಿ – ಧೃತಿ ಎಂಬ ಹೆಸರಿದೆ. ಅಂಗಿರಸ ಎಂದೂ ಇದೆ.

ಇಂದ್ರನ ಸಹಿತ ಅಗ್ರಯನ ಹವಿಸ್ಸನ್ನು ಸೇರಿಸಲಾಗುವ ಆ ಅಗ್ನಿಯು ಅಗ್ರಯಣ ಎಂಬ ಹೆಸರಿನ ಭಾನುವಿನ ಇನ್ನೊಬ್ಬ ಪುತ್ರ. ಚಾತುರ್ಮಾಸ್ಯಗಳಲ್ಲಿ ನಿತ್ಯವೂ ಹವಿಸ್ಸನ್ನು ಹಾಕುವ ನಿರಗ್ರಹನು ಭಾನುವಿನ ಐದನೆಯ ಮಗ. ನಿಶಾ ಎನ್ನುವವಳು ಮನುವಿನ ಇನ್ನೊಬ್ಬ ಪತ್ನಿ. ಅವಳು ಓರ್ವ ಕನ್ಯೆಯನ್ನೂ, ಇಬ್ಬರು ಅಗ್ನಿಷ್ಟೋಮರನ್ನೂ ಮತ್ತು ಐದು ಪಾವಕರನ್ನೂ ಜನಿಸಿದಳು. ಚಾತುರ್ಮಾಸ್ಯದಲ್ಲಿ ಹವಿಸ್ಸಿನ ಮೊದಲು ಪರ್ಜ್ಯನ್ಯನ ಸಹಿತ ಪೂಜಿಸುವ ಪಾವಕನನ್ನು ಶ್ರೀಮಾನ್

ವೈಶ್ವಾನರನೆಂದು ಕರೆಯುತ್ತಾರೆ. ಈ ಲೋಕಗಳೆಲ್ಲವುಗಳ ಪತಿಯಾರಿದ್ದಾನೋ ಆ ಮನುವಿನ ಎರಡನೆಯ ಮಗ ಅಗ್ನಿಯನ್ನು ವಿಶ್ವಪತಿ ಎಂಬ ಹೆಸರಿನಿಂದ ಕರೆಯುತ್ತಾರೆ. ಮನುವಿನ ಮಗಳನ್ನು ಸ್ವಿಷ್ಟಕೃತ್ ಎಂದು ಕರೆಯುತ್ತಾರೆ. ಏಕೆಂದರೆ ಅವಳಿಗೆ ಆಜ್ಯವನ್ನು ನೀಡುವುದರಿಂದ ಪರಮ ಪುಣ್ಯವು ದೊರೆಯುತ್ತದೆ. ರೋಹಿಣೀ ಎಂಬ ಹೆಸರಿನ ಹಿರಣ್ಯಕಶಿಪುವಿನ ಮಗಳು ಕನ್ಯೆಯು ತನ್ನ ಕರ್ಮಗಳಿಂದ ಅವನ ಭಾರ್ಯೆಯಾದಳು. ಅವಳೂ ಕೂಡ ಪ್ರಜಾಪತಿ ಅಗ್ನಿ. ದೇಹದ ಪ್ರಾಣದಲ್ಲಿ ನೆಲೆಸಿಕೊಂಡು ದೇಹಿಗಳನ್ನು ನಡೆಸುವವನ ಹೆಸರು ಸಂನಿಹಿತ - ಅವನು ಶಬ್ಧ ರೂಪಗಳ ಸಾಧನ. ಶುಕ್ಲ ಮತ್ತು ಕೃಷ್ಣ ಗತಿಯಲ್ಲಿ ಹೋಗುವ, ಹುತಾಶನನನ್ನು ಕಾಪಾಡುವ ಅಕಲ್ಮಷ, ಕಲ್ಮಷರ ಕ್ರೋಧಾಶ್ರಿತರ ಕರ್ತ ದೇವನನ್ನು ಕಪಿಲ ಮಹರ್ಷಿಯೆಂದು ಯತಿಗಳು ಸದಾ ಹೇಳುತ್ತಾರೆ. ಅವನೇ ಸಾಂಖ್ಯಯೋಗ ಪ್ರವರ್ತಕ ಕಪಿಲ ಎಂಬ ಹೆಸರಿನ ಅಗ್ನಿ. ಯಾವ ಅಗ್ನಿಯಲ್ಲಿ ಭೂತಗಳು ಭೂತಗಳಿಗೆ ನಿತ್ಯವೂ ಆಹುತಿಗಳನ್ನು ವಿಚಿತ್ರ ಕರ್ಮದಲ್ಲಿ ನೀಡುತ್ತವೆಯೋ ಅದನ್ನು ಅಗ್ರಣೀ ವಹ್ನಿಯೆಂದು ಹೇಳುತ್ತಾರೆ. ಅಗ್ನಿಹೋತ್ರದ ದೋಷಗಳನ್ನು ಉಲ್ಬಣವಾಗದೇ ಪ್ರಾಯಶ್ಚಿತ್ತಕ್ಕಾಗಿ ಇವು ಮತ್ತು ಅನ್ಯ ಪಾವಕಗಳನ್ನು ಭೂಮಿಯಲ್ಲಿ ಸೃಷ್ಟಿಸಲಾಯಿತು ಎಂದು ಪ್ರಥಿತವಾಗಿದೆ.

ವಾಯುವಿನಿಂದಾಗಿ ಅಗ್ನಿಗಳು ಅನ್ಯೋನ್ಯರನ್ನು ಮುಟ್ಟಿದರೆ ಅಷ್ಟಾಕಪಾಲ ಅಗ್ನಿಯಿಂದ ಇಷ್ಟಿಯ ಮೂಲಕ ಶುಚಿಯನ್ನು

ಪೂಜಿಸಬೇಕು. ದಕ್ಷಿಣಾಗ್ನಿಯು ಇತರ ಎರಡು ಅಗ್ನಿಗಳನ್ನು ಮುಟ್ಟಿದರೆ ಅಷ್ಟಾಕಪಾಲ ಇಷ್ಟಿಯಿಂದ ವೀತ ಅಗ್ನಿಯನ್ನು ಪೂಜಿಸಬೇಕು. ನಿವೇಶ ಎಂಬ ಅಗ್ನಿಯು ದವಾ ಎಂಬ ಅಗ್ನಿಯೊಂದಿಗೆ ಸೇರಿದರೆ ಅಷ್ಟಾಕಪಾಲ ಇಷ್ಟಿಯಿಂದ ಶುಚೀ ಅಗ್ನಿಯನ್ನು ಪೂಜಿಸಬೇಕು. ಅಗ್ನಿಹೋತ್ರಕನ ಅಗ್ನಿಯನ್ನು ರಜಸ್ವಲೆಯು ಸ್ಪರ್ಶಿಸಿದರೆ ಅಷ್ಟಾಕಪಾಲ ಇಷ್ಟಿಯಿಂದ ದಸ್ಯುಮತಿ ಅಗ್ನಿಯನ್ನು ಪೂಜಿಸಬೇಕು. ಅಗ್ನಿಹೋತ್ರವನ್ನು ನಡೆಸುವಾಗ ಯಾರಾದರೂ ಸತ್ತ ವಿಷಯವನ್ನು ಕೇಳಿದರೆ ಅಥವಾ ಪ್ರಾಣಿಯು ಸತ್ತರೆ ಅಷ್ಟಾಕಪಾಲ ಇಷ್ಟಿಯನ್ನು ಮಾಡಿ ಅಭಿಮತ ಅಗ್ನಿಯನ್ನು ಪೂಜಿಸಬೇಕು. ಒಂದುವೇಳೆ ಖಾಯಿಲೆಯಲ್ಲಿದ್ದುಕೊಂಡು ಬ್ರಾಹ್ಮಣನು ಮೂರು ರಾತ್ರಿಗಳು ಅಗ್ನಿಕಾರ್ಯವನ್ನು ಮಾಡಲಿಕ್ಕಾಗಲಿಲ್ಲವಾದರೆ ಅಷ್ಟಾಕಪಾಲ ಇಷ್ಟಿಯನ್ನು ಮಾಡಿ ಉತ್ತರಾಗ್ನಿಯನ್ನು ಪೂಜಿಸಬೇಕು. ದರ್ಶ ಮತ್ತು ಪೌರ್ಣಮಾಸಗಳಲ್ಲಿ ಯಜ್ಞವನ್ನು ನಡೆಸುವವನು ಅಷ್ಟಾಕಪಾಲ ಇಷ್ಟಿಯಿಂದ ಪಥಿಕೃತ ಅಗ್ನಿಯನ್ನು ಪೂಜಿಸಬೇಕು. ಸೂತಿಕಾಗೃಹದಲ್ಲಿರುವ ಅಗ್ನಿಯು ಅಗ್ನಿಹೋತ್ರದೊಂದಿಗೆ ಸೇರಿದರೆ ಅಷ್ಟಾಕಪಾಲ ಇಷ್ಟಿಯಿಂದ ಅಗ್ನಿಮತ ಅಗ್ನಿಯನ್ನು ಪೂಜಿಸಬೇಕು.

ಆಪನ ಪರಮ ಪ್ರಿಯೆ ಭಾರ್ಯೆ ಮುದಿತಾಳು ಭೂಪತಿಯೂ ಭುವಭರ್ತನೂ ಪರಮನೂ ಆದ ಪಾವಕನಿಗೆ ಜನ್ಮವಿತ್ತಳು. ಈ ಅಗ್ನಿಯು ಎಲ್ಲ ಭೂತಗಳ ಒಡೆಯನೆಂದೂ ಆತ್ಮವೆಂದೂ, ಭುವನವನ್ನು ಪಾಲಿಸುವವನೆಂದೂ ದ್ವಿಜರು ಹೇಳುತ್ತಾರೆ. ಆ ಭಗವಾನ್ ಪಾವಕನು ಮಹಾತೇಜಸ್ವಿ, ಇಲ್ಲಿರುವ ಎಲ್ಲ ಭೂತಗಳ ಪತಿ, ಮತ್ತು ನಿತ್ಯವೂ

ಸಂಚರಿಸುವವನು. ಆ ಅಗ್ನಿಯು ಗೃಹಪತಿ ಎಂಬ ಹೆಸರಿನಲ್ಲಿ ನಿತ್ಯವೂ ಯಜ್ಞಗಳಲ್ಲಿ ಪೂಜಿಸಲ್ಪಡುತ್ತಾನೆ. ಮತ್ತು ಆ ಪಾವಕನು ಈ ಲೋಕದ ಎಲ್ಲ ಆಹುತಿಗೊಂಡ ಹವ್ಯಗಳನ್ನೂ ಕೊಂಡೊಯ್ಯುತ್ತಾನೆ. ಅಪಾವಿನ ಗರ್ಭದಲ್ಲಿ ಹುಟ್ಟಿದ ಆ ಮಹಾದ್ಭುತ ಮಹಾಭಾಗ ಪುತ್ರನು ಭೂಪತಿಯೆಂದು ಭುವನಪಾಲಕನೆಂದೂ ಮಹತ್ತನೆಂದೂ ಪುನಃ ಕರೆಯುತ್ತಾರೆ. ಅವನ ಮಗ ಅಗ್ನಿ ಭರತನು ಮೃತ ಭೂತಗಳನ್ನು ದಹಿಸುತ್ತಾನೆ. ಅಗ್ನಿಷ್ಟೋಮದಲ್ಲಿ ಅವನ ಶ್ರೇಷ್ಠವಾದ ಕ್ರತುವು ನಡೆಯುತ್ತದೆ. ನಿಯತನು ಬರುತ್ತಿರುವುದನ್ನು ನೋಡಿ ಭಯದಿಂದ ಅವನು ಸಮುದ್ರವನ್ನು ಪ್ರವೇಶಿಸಿದನು. ಮಾರ್ಗದಲ್ಲಿ ಎಲ್ಲ ದಿಕ್ಕುಗಳಲ್ಲಿ ಹುಡುಕಿದರೂ ದೇವತೆಗಳಿಗೆ ಅವನು ದೊರಕಲಿಲ್ಲ. ಆಗ ಅಥರ್ವಣ ಅಗ್ನಿಯನ್ನು ನೋಡಿ ಅವನನ್ನು ಕೇಳಿದರು: “ವೀರ! ನೀನು ದೇವತೆಗಳ ಹವ್ಯವನ್ನು ಕೊಂಡೊಯ್ಯುತ್ತೀಯಾ? ನಾನು ದುರ್ಬಲನಾಗಿದ್ದೇನೆ! ಅಥರ್ವನ್! ಕೆಂಪುಕಣ್ಣಿನವನ ಬಳಿ ಹೋಗು! ನನಗೆ ಪ್ರಿಯವಾದುದನ್ನು ಮಾಡು!” ಅಥರ್ವಣನಿಗೆ ಹೀಗೆ ಹೇಳಿ ಅಗ್ನಿಯು ಬೇರೆ ಕಡೆ ಹೊರಟು ಹೋದನು. ಆದರೆ ಅವನ ಇರುವಿಕೆಯನ್ನು ಮೀನುಗಳು ಹೇಳಿದವು. ಆಗ ಅಗ್ನಿಯು ಕೃದ್ಧನಾಗಿ ಹೇಳಿದನು: “ವಿವಿಧ ರೀತಿಗಳಲ್ಲಿ ಶರೀರಿಗಳ ಆಹಾರವಾಗಿರಿ!” ಅಥರ್ವಣನಿಗೂ ಕೂಡ ಹವ್ಯವಾಹನನು ಈ ಮಾತುಗಳನ್ನಾಡಿದನು. ದೇವತೆಗಳ ಮಾತುಗಳಿಂದ ತುಂಬಾ ಒತ್ತಾಯಿಸಲ್ಪಟ್ಟರೂ ಕೂಡ ಅವನು ಹವಿಸ್ಸನ್ನು ಕೊಂಡೊಯ್ಯಲಿಲ್ಲ. ಆಗ ಅವನು ಎಲ್ಲ ಶರೀರವನ್ನೂ

ತೊರೆದನು. ಅವನು ಶರೀರವನ್ನು ತೊರೆದು ಭೂಮಿಯನ್ನು ಪ್ರವೇಶಿಸಿದನು. ಭೂಮಿಯ ಸ್ಪರ್ಷದಲ್ಲಿ ಬಂದು ಅವನು ವಿವಿಧ ರೀತಿಯ ಅತೀವ ಖನಿಜಗಳನ್ನು ಸೃಷ್ಟಿಸಿದನು. ಅವನ ತೇಜಸ್ಸಿನಿಂದ ಸುಗಂಧವೂ, ಅಸ್ತಿಗಳಿಂದ ದೇವದಾರುವೂ, ಕಫದಿಂದ ಸ್ಪಟಿಕವೂ ಮತ್ತು ಪಿತ್ತದಿಂದ ಮರಕತವೂ ಆದವು. ಅವನ ಯಕೃತ್ತಿನಿಂದ ಕಪ್ಪು ಕಬ್ಬಿಣವೂ ಬಂದಿತು. ಎಲ್ಲ ಜಗತ್ತೂ ಈ ಮೂರರಿಂದ ವ್ಯಾಪಿತವಾಗಿದೆ. ಅವನ ಉಗುರಿನಿಂದ ಮೋಡಗಳಾದವು, ರಕ್ತನಾಳಗಳಿಂದ ಶಿಲಾಜಾಲಗಳಾದವು. ನೃಪ! ಅವನ ಶರೀರದಿಂದ ಬಹುವಿಧದ ಖನಿಜಗಳಾದವು. ಹೀಗೆ ತನ್ನ ಶರೀರವನ್ನು ತೊರೆದು ಅವನು ಪರಮ ತಪಸ್ಸಿನಲ್ಲಿ ನಿಂತನು. ಭೃಗು ಅಂಗಿರಸ ಮೊದಲಾದವರು ಅವನನ್ನು ತಪಸ್ಸಿನಿಂದ ಎಬ್ಬಿಸಿದರು. ತಪಸ್ಸಿನಲ್ಲಿ ತೊಡಗಿದ್ದ ಆ ಅಗ್ನಿಯು ತುಂಬಾ ತೇಜಸ್ಸಿನಿಂದ ಉರಿಯ ತೊಡಗಿದನು. ಋಷಿಯನ್ನು ನೋಡಿ ಭಯದಿಂದ ಮಹಾಸಾಗರವನ್ನು ಪ್ರವೇಶಿಸಿದನು. ಅವನು ನಷ್ಟವಾಗಲು ಜಗತ್ತು ಭೀತವಾಗಿ ಅಥರ್ವಣವನ್ನು ಮೊರೆಹೊಕ್ಕಿತು. ಸುರರೂ ಸುರರ್ಷಿಗಳೂ ಅಥರ್ವಣನನ್ನು ಅರ್ಚಿಸಿದರು. ಸರ್ವಭೂತಗಳು ನೋಡುತ್ತಿದ್ದಂತೆ ಅಥರ್ವನು ಮಹಾರ್ಣವವನ್ನು ಮೇಲೆ ಕೆಳಮಾಡಿ ಹುಡುಕಿದನು. ಆಗ ತಾನೇ ಲೋಕಗಳನ್ನು ಸೃಷ್ಟಿಸಿದನು. ಹೀಗೆ ಹಿಂದೆ ಅತರ್ವಣನು ಭಗವಾನ್ ಅಗ್ನಿಯು ನಷ್ಟವಾಗಲು ಸರ್ವದಾ ಸರ್ವಭೂತಗಳು ಆಹುತಿಯಿತ್ತ ಹವಿಸ್ಸನ್ನು ಕೊಂಡೊಯ್ಯುತ್ತಿದ್ದನು. ಹೀಗೆ ವಿವಿಧ

ದೇಶಗಳಲ್ಲಿ ಸಂಚರಿಸುತ್ತಾ ತಿರುಗಾಡುತ್ತಾ ವೇದಗಳಲ್ಲಿ ವಿಬುಧರು ಹೇಳಿದ ವಿವಿಧ ಅಗ್ನಿಗಳನ್ನು ಸೃಷ್ಟಿದನು. ಸಿಂಧು, ಐದು ನದಿಗಳು, ದೇವಿಕಾ, ಸರಸ್ವತೀ, ಗಂಗಾ, ಶತಕುಂಭಾ, ಶರಯೂ, ಗಂಡಸಾಹ್ವಯ, ಚರ್ಮಣ್ವತೀ, ಮಹೀ, ಮೇಧಾ, ಮೇಧಾತಿಥಿ, ತಾಮ್ರವತೀ, ವೇತ್ರವತೀ, ನದೀ ಅಸ್ತಿಸ್ರೋತ್ರ, ಕೌಶಿಕೀ, ತಮಸಾ, ನರ್ಮದಾ, ನದೀ ಗೋದಾವರೀ, ವೇಣೀ, ಪ್ರವೇಣೀ, ಭೀಮಾ, ಮೇದ್ರಥಾ, ಭಾರತೀ, ಸುಪ್ರಯಾಗಾ, ಕಾವೇರೀ, ಮುರ್ಮುರಾ, ಕೃಷ್ಣಾ, ಕೃಷ್ಣವೇಣೀ, ಕಪಿಲಾ, ಶೋಣಾ, ಈ ಎಲ್ಲ ನದಿಗಳನ್ನೂ ಅಗ್ನಿಗಳ ತಾಯಂದಿರೆಂದು ಹೇಳುತ್ತಾರೆ. ಅದ್ಭುತನ ಪತ್ನಿ ಪ್ರಿಯಾ, ಅವಳ ಪುತ್ರ ವಿಡೂರಥ. ಮೊದಲು ಹೇಳಿದ ಅಗ್ನಿಗಳಷ್ಟೇ ಸೋಮ ಯಾಗಗಳಿವೆ.

ಬ್ರಹ್ಮನ ಮಾನಸಪುತ್ರರಿಂದ ಹುಟ್ಟಿದ ಮಕ್ಕಳು ಅತ್ರಿಯ ಕುಲದವರೂ ಇದ್ದಾರೆ. ಸೃಷ್ಟಿಯನ್ನು ಮುಂದುವರೆಸಲು ಅತ್ರಿಯು ತನ್ನಿಂದಲೇ ಈ ಪುತ್ರರನ್ನು ಸೃಷ್ಟಿಸಿದನು. ಅವನ ದೇಹದಿಂದಲೇ ಈ ಅಗ್ನಿಗಳು ಹೊರಬಂದವು. ಮೊದಲನೆಯ ಅಂಗಿರಸನಾದ ಈ ಭಗವಾನನೇ ಜ್ಯೋತಿಷ್ಟೋಮ ಯಾಗದಂತೆ ಅವನ ದೇಹದಿಂದ ಬಹುವಿಧದಿಂದ ಹೊರಬಂದನು.

# ಕಾರ್ತಿಕೇಯನ ಜನ್ಮ

[ಕಾರ್ತಿಕೇಯನ ಜನ್ಮದ ಈ ಕಥೆಯು ವ್ಯಾಸ

ಮಹಾಭಾರತದ ವನಪರ್ವದ ಮಾರ್ಕಂಡೇಯಸಮಸ್ಯಾ ಪರ್ವ (ಅಧ್ಯಾಯ ೨೧೩-೨೨೧) ದಲ್ಲಿ ಬರುತ್ತದೆ. ಕಾಮ್ಯಕ ವನದಲ್ಲಿ ಋಷಿ ಮಾರ್ಕಂಡೇಯನು ಈ ಕಥೆಯನ್ನು ಯುಧಿಷ್ಠಿರನಿಗೆ ಹೇಳಿದನು.]

ಹಿಂದೆ ದೇವತೆಗಳು ಮತ್ತು ಅಸುರರು ಪರಸ್ಪರರನ್ನು ಕೊಲ್ಲುವುದರಲ್ಲಿ ನಿರತರಾಗಿದ್ದರು. ಮತ್ತು ಘೋರರೂಪೀ ದಾನವರು ಯಾವಾಗಲೂ ದೇವತೆಗಳನ್ನು ಜಯಿಸುತ್ತಿದ್ದರು. ಬಹುಶಸ್ತ್ರಗಳಿಂದ ವಧಿಸಲ್ಪಡುತ್ತಿದ್ದ ತನ್ನ ಸೇನೆಯನ್ನು ನೋಡಿ ಪುರಂದರನು ತನ್ನ ಸೇನೆಯ ನಾಯಕನಿಗಾಗಿ ಬಹಳಷ್ಟು ಚಿಂತಿಸಿದನು:

> "ದಾನವರಿಂದ ಭಗ್ನವಾಗುತ್ತಿರುವ ದೇವಸೇನೆಯನ್ನು ನೋಡಿ ವೀರತನದಿಂದ ಅದನ್ನು ಪಾಲಿಸುವ ಮಹಾಬಲಿ ಪುರುಷನನ್ನು ನಾನು ಹುಡುಕಬೇಕು."

ಆಗ ಅವನು ಮಾನಸ ಪರ್ವತಕ್ಕೆ ಹೋಗಿ ತುಂಬಾ ಆಳವಾದ ಧ್ಯಾನದಲ್ಲಿರಲು ಅಲ್ಲಿ ಘೋರವೂ ಆರ್ತವೂ ಆದ ಸ್ವರದಲ್ಲಿ ಸ್ತ್ರೀಯೋರ್ವಳ ಕೂಗನ್ನು ಕೇಳಿದನು:

> "ಯಾರಾದರೂ ಬೇಗ ಬಂದು ನನ್ನನ್ನು ರಕ್ಷಿಸಿ. ಅವನು ನನ್ನ ಪತಿಯಾಗಲಿ ಅಥವಾ ನನಗೆ ಓರ್ವ ಪತಿಯನ್ನು ಹುಡುಕಿಕೊಡಲಿ!"

"ಹೆದರಬೇಡ! ನಿನಗೇನೂ ಭಯವಿಲ್ಲ!"

ಎಂದು ಅವಳಿಗೆ ಪುರಂದರನು ಹೇಳಿದನು. ಹೀಗೆ ಹೇಳುತ್ತಿದ್ದಂತೆಯೇ ಮುಂದೆ ನಿಂತಿರುವ ಕೇಶಿನಿಯನ್ನು ನೋಡಿದನು. ಕಿರೀಟವನ್ನು ಧರಿಸಿ, ಗದೆಯನ್ನು ಹಿಡಿದು, ಕೈಯಲ್ಲಿ ಆ ಕನ್ಯೆಯನ್ನು ಹಿಡಿದು, ಖನಿಜಗಳ ಪರ್ವತದಂತೆ ನಿಂತಿದ್ದ ಅವನಿಗೆ ವಾಸವನು ಹೇಳಿದನು:

"ಈ ಕನ್ಯೆಯಮೇಲೆ ಅನಾರ್ಯಕರ್ಮವನ್ನು ಎಸೆಗಲು ಏಕೆ ತೊಡಗಿದ್ದೀಯೆ. ನನ್ನನ್ನು ವಜ್ರಿಯೆಂದು ತಿಳಿ. ಇವಳಿಗೆ ಏನೂ ಅಪಾಯಮಾಡದಂತೆ ನಿನ್ನನ್ನು ತಡೆಯುತ್ತೇನೆ."

ಕೇಶಿಯು ಹೇಳಿದನು:

"ಶಕ್ರ! ಇವಳನ್ನು ನೀನು ಬಿಟ್ಟುಬಿಡು. ಇವಳನ್ನು ನಾನು ಬಯಸಿದ್ದೇನೆ. ಜೀವಂತವಾಗಿ ನೀನು ನಿನ್ನ ಪುರಕ್ಕೆ ಹೋಗಬಲ್ಲೆ."

ಹೀಗೆ ಹೇಳಿ ಕೇಶಿಯು ಇಂದ್ರನನ್ನು ವಧಿಸಲು ಗದೆಯನ್ನು ಎಸೆದನು. ಮೇಲೆ ಬೀಳುತ್ತಿರುವ ಅದನ್ನು ಮಧ್ಯದಲ್ಲಿಯೇ ವಾಸವನು ವಜ್ರದಿಂದ ತುಂಡರಿಸಿದನು. ಆಗ ಕೃದ್ಧನಾದ ಕೇಶಿಯು ಕಲ್ಲುಗಳ ಶಿಖರವನ್ನು ಅವನ ಮೇಲೆ ಎಸೆದನು. ಬೀಳುತ್ತಿದ್ದ ಆ ಶೈಲಶೃಂಗವನ್ನು ನೋಡಿ ಶತಕ್ರತುವು ವಜ್ರದಿಂದ ತುಂಡರಿಸಲು ಅದು ಭೂಮಿಯ ಮೇಲೆ ಬಿದ್ದಿತು. ಬೀಳುತ್ತಿರುವ ಆ ಶೃಂಗದಿಂದ ಪೆಟ್ಟುತಿಂದು ತುಂಬಾ

ಪೀಡಿತನಾದ ಕೇಶಿಯು ಆ ಮಹಾಭಾಗೆ ಕನ್ಯೆಯನ್ನು ಅಲ್ಲಿಯೇ ಬಿಟ್ಟು ಓಡಿಹೋದನು. ಆ ಅಸುರನು ಹೊರಟುಹೋಗಲು ವಾಸವನು ಕನ್ಯೆಯನ್ನು ಕೇಳಿದನು:

> "ಶುಭಾನನೇ! ನೀನು ಯಾರು ಮತ್ತು ಯಾರವಳು? ಮತ್ತು ಇಲ್ಲಿ ನೀನು ಏನು ಮಾಡುತ್ತಿರುವೆ?"

ಕನ್ಯೆಯು ಹೇಳಿದಳು:

> "ನಾನು ದೇವಸೇನಾ ಎಂದು ವಿಶ್ರುತಳಾದ ಪ್ರಜಾಪತಿಯ ಮಗಳು. ನನ್ನ ತಂಗಿ ದೈತ್ಯಸೇನಳನ್ನು ಮೊದಲೇ ಕೇಶಿಯು ಅಪಹರಿಸಿಕೊಂಡು ಹೋಗಿದ್ದಾನೆ. ಪ್ರಜಾಪತಿಯ ಅಪ್ಪಣೆಯನ್ನು ಪಡೆದು ನಾವಿಬ್ಬರು ಸಹೋದರಿಯರೂ ಸಖಿಗಳ ಸಹಿತ ಈ ಮಾನಸ ಪರ್ವತಕ್ಕೆ ಸಂತೋಷಪಡಲು ಬರುತ್ತಿದ್ದೆವು. ಪಾಕಶಾಸನ! ನಿತ್ಯವೂ ಮಹಾಸುರ ಕೇಶಿಯು ನಮ್ಮನ್ನು ಬಯಸಿ ಕಾಡುತ್ತಿದ್ದನು. ದೈತ್ಯಸೇನೆಯು ಅವನನ್ನು ಕೇಳಿದಳು. ಆದರೆ ನಾನು ಕೇಳಲಿಲ್ಲ. ಅವಳನ್ನು ಅವನು ಅಪಹರಿಸಿಕೊಂಡು ಹೋದನು. ಆದರೆ ನಿನ್ನ ಬಲದಿಂದ ನಾನು ಬಿಡುಗಡೆಹೊಂದಿದೆನು. ಈಗ ನೀನು ನನಗೆ ದುರ್ಜಯನಾದ ಪತಿಯನ್ನು ನಿರ್ಧರಿಸಿಕೊಡಬೇಕೆಂದು ಬಯಸುತ್ತೇನೆ."

ಇಂದ್ರನು ಹೇಳಿದನು:

“ನೀನು ನನ್ನ ಮಾತೆ ದಾಕ್ಷಾಯಣಿಯ ತಂಗಿಯ ಮಗಳು. ಈಗ ನಿನ್ನ ಬಲದ ಕುರಿತು ನೀನೇ ಹೇಳಬೇಕೆಂದು ನಾನು ಬಯಸುತ್ತೇನೆ.”

ಕನ್ಯೆಯು ಹೇಳಿದಳು:

“ಮಹಾಬಾಹೋ! ನಾನು ಅಬಲೆ; ಆದರೆ ನನ್ನ ಪತಿಯು ಬಲವಂತ. ತಂದೆಯ ವರದಾನದಂತೆ ಅವನನ್ನು ಸುರಾಸರರಿಂದಲೂ ನಮಸ್ಕರಿಸಲ್ಪಡುವವನಾಗುತ್ತಾನೆ.”

ಇಂದ್ರನು ಹೇಳಿದನು:

“ದೇವಿ! ನಿನ್ನ ಪತಿಯು ಯಾವರೀತಿಯ ಬಲವನ್ನು ಹೊಂದಿರುತ್ತಾನೆ? ಇದರ ಕುರಿತಾದ ನಿನ್ನ ಮಾತನ್ನು ಕೇಳಲು ಬಯಸುತ್ತೇನೆ.”

ಕನ್ಯೆಯು ಹೇಳಿದಳು:

“ದೇವ-ದಾನವ-ಯಕ್ಷ-ಕಿನ್ನರ-ಉರಗ- ರಾಕ್ಷಸರನ್ನು ಗೆಲ್ಲುವ, ನಿನ್ನೊಡನೆ ಎಲ್ಲ ಭೂತಗಳನ್ನೂ ಜಯಿಸಬಲ್ಲ, ದುಷ್ಟರನ್ನು ನಿಯಂತ್ರಿಸುವ, ಮಹಾವೀರ್ಯ, ಮಹಾಬಲ, ಕೀರ್ತಿವರ್ಧನ, ಬ್ರಹ್ಮಣ್ಯನೇ ನನ್ನ ಪತಿಯಾಗುತ್ತಾನೆ.”

ಅವಳ ಮಾತುಗಳನ್ನು ಕೇಳಿ ಇಂದ್ರನು ತುಂಬಾ ದುಃಖಿತನಾಗಿ ಆಲೋಚಿಸಿದನು:

"ಈ ದೇವಿಯು ಹೇಳುವಂತಹ ಪತಿಯು ಇವಳಿಗೆ ಇಲ್ಲವಲ್ಲ!"

ಆಗ ಆ ಭಾಸ್ಕರದ್ಯುತಿಯು ಉದಯಿಸುತ್ತಿರುವ ಭಾಸ್ಕರನನ್ನೂ ಮತ್ತು ದಿವಾಕರನನ್ನು ಪ್ರವೇಶಿಸುತ್ತಿರುವ ಮಹಾಭಾಗ ಸೋಮನನ್ನು ನೋಡಿದನು. ಆ ಅಮವಾಸ್ಯೆಯ ರೌದ್ರ ಮುಹೂರ್ತದಲ್ಲಿ ಅವನು ಉದಯಗಿರಿಯಲ್ಲಿ ದೇವಾಸುರರ ಸಂಗ್ರಾಮವನ್ನು ನೋಡಿದನು. ಶತಕ್ರತುವು ಆ ಪೂರ್ವ ಸಂಧ್ಯೆಯು ಕೆಂಪು ಮೋಡಗಳಿಂದ ಕವಿದಿರುವುದನ್ನೂ, ಭಗವಾನ್ ಸಮುದ್ರವು ಕೆಂಪಾಗಿರುವುದನ್ನು ನೋಡಿದನು. ಅಗ್ನಿಯು ಭೃಗು ಮತ್ತು ಅಂಗಿರಸರು ಮಂತ್ರಗಳಿಂದ ಹಾಕಿದ ವಿವಿಧ ಹವಿಸ್ಸುಗಳನ್ನು ಎತ್ತಿಕೊಂಡು ದಿವಾಕರನನ್ನು ಪ್ರವೇಶಿಸುತ್ತಿರುವುದನ್ನೂ ನೋಡಿದನು. ಆಗ ಹದಿನಾಲ್ಕು ಪರ್ವಗಳೂ ಸೂರ್ಯನ ಉಪಸ್ಥಿತಿಯಲ್ಲಿರುವುದನ್ನು ಮತ್ತು ಹಾಗೆಯೇ ರೌದ್ರನಾದ ಸೋಮನು ಸೂರ್ಯನಲ್ಲಿಗೆ ಹೋಗುವುದನ್ನು ನೋಡಿದನು. ಈ ರೀತಿಯ ಶಶಿ ಮತ್ತು ಭಾಸ್ಕರರು ಒಂದಾಗುವ ಆ ರೌದ್ರಸಮಯವನ್ನು ನೋಡಿ ಶಕ್ರನು ಯೋಚಿಸಿದನು:

"ಈ ಸೋಮ ಮತ್ತು ಸೂರ್ಯರ ಅದ್ಭುತ ಸಮಾಗಮದ ವಹ್ನಿಯು ರೌದ್ರ ಮತ್ತು ತೇಜಸ್ವಿಯಾಗಿದ್ದು ಮಹಾ ಯುದ್ಧವನ್ನು ಸೂಚಿಸುತ್ತದೆ. ಇಂದು ಸೋಮನಲ್ಲಿ ಜನಿಸುವ ಮಗನು ಈ ದೇವಿಯ ಪತಿಯಾಗುತ್ತಾನೆ. ಅಗ್ನಿಯೂ ಕೂಡ ಈ ಗುಣಗಳಿಂದ ಕೂಡಿದ್ದು ಅಗ್ನಿಯೂ ಎಲ್ಲರ

ದೇವತೆಯಾಗಿದ್ದಾನೆ. ಇವನ ಗರ್ಭದಿಂದಲೂ ಜನಿಸುವವನು ಈ ದೇವಿಯ ಪತಿಯಾಗುತ್ತಾನೆ."

ಹೀಗೆ ಯೋಚಿಸಿ ಆ ಭಗವಾನನು ದೇವಸೇನೆಯನ್ನು ಕರೆದುಕೊಂಡು ಬ್ರಹ್ಮಲೋಕಕ್ಕೆ ಹೋದನು. ಪಿತಾಮಹನಿಗೆ ವಂದಿಸಿ

"ಈ ದೇವಿಗೆ ನೀನು ಓರ್ವ ಸಾಧು ಶೂರನನ್ನು ಪತಿಯನ್ನಾಗಿ ನಿರ್ಧರಿಸು"

ಎಂದನು. ಬ್ರಹ್ಮನು ಹೇಳಿದನು:

"ದಾನವಸೂದನ! ನೀನು ಏನನ್ನು ಯೋಚಿಸಿದ್ದೀಯೋ ಹಾಗೆಯೇ ಆಗುತ್ತದೆ. ಆ ಗರ್ಭವು ಬಲವಾನನೂ ವಿಕ್ರಮಿಯೂ ಆಗುತ್ತಾನೆ. ನಿನ್ನೊಡನೆ ಅವನು ಸೇನಾನಿಯಾಗುತ್ತಾನೆ. ಆ ವೀರ್ಯವಾನನು ಈ ದೇವಿಯ ಪತಿಯೂ ಆಗುತ್ತಾನೆ."

ಇದನ್ನು ಕೇಳಿ ಅವನಿಗೆ ನಮಸ್ಕರಿಸಿ ದೇವೇಂದ್ರನು ಆ ಕನ್ಯೆಯೊಡನೆ ವಸಿಷ್ಠ ಪ್ರಮುಖರಾದ ಮುಖ್ಯ ಸುಮಹಾವ್ರತ ವಿಪ್ರೇಂದ್ರ ದೇವರ್ಷಿಗಳಿರುವಲ್ಲಿಗೆ ಹೋದನು. ಸೋಮದ ಭಾಗಾರ್ಥಿಗಳಾಗಿ ಆ ತಪಸ್ವಿಗಳ ಅಧ್ವರಕ್ಕೆ  ಶತಕ್ರತುವನ್ನು ಮುಂದಿರಿಸಿಕೊಂಡು ದೇವತೆಗಳು ಹೋದರು. ಯಥಾನ್ಯಾಯವಾಗಿ ಚೆನ್ನಾಗಿ ಉರಿಯುತ್ತಿದ್ದ ಅಗ್ನಿಯಲ್ಲಿ ಇಷ್ಟಿಯನ್ನು ಮಾಡಿ ಆ ಮಹಾತ್ಮರು ಎಲ್ಲ ದಿವೌಕಸರಿಗೆ ಹವಿಸ್ಸನ್ನು

ನೀಡಿದರು. ಸೂರ್ಯಮಂಡಲದಿಂದ ಅಗ್ನಿ ಅದ್ಭುತನನ್ನು ಮಂತ್ರಗಳ ಮೂಲಕ ಕರೆಯಲಾಯಿತು. ಆ ಪ್ರಭು ಅಗ್ನಿಯು ವಿಧಿವತ್ತಾಗಿ ಅಲ್ಲಿಂದ ಹೊರಟು ದ್ವಿಜರು ಮಂತ್ರಪೂರ್ವಕವಾಗಿ ನೀಡುತ್ತಿದ್ದ ಆಹುತಿಯನ್ನು ಕೊಂಡೊಯ್ಯಲು ಆಗಮಿಸಿದನು. ಅಲ್ಲಿ ಋಷಿಗಳು ನೀಡಿದ ವಿವಿಧ ಹವ್ಯಗಳನ್ನು ತೆಡೆದುಕೊಂಡು ಆ ಅಗ್ನಿಯು ದಿವೌಕಸರಿಗೆ ನೀಡಿದನು.

ಹಿಂದಿರುಗಿ ಬರುವಾಗ ಅವನು ಮಹಾತ್ಮ ಋಷಿಗಳ ಪತ್ನಿಯರು ಯಥಾಸುಖವಾಗಿ ಹಾಸಿಗೆಗಳ ಮೇಲೆ ಮಲಗಿಕೊಂಡಿರುವುದನ್ನು ನೋಡಿದನು. ಅವರೆಲ್ಲರೂ ಬಂಗಾರದ ವೇದಿಗಳಂತೆ ಹೊಳೆಯುತ್ತಿದ್ದರು; ಚಂದ್ರಲೇಖದಂತೆ ಶುಭ್ರರಾಗಿದ್ದರು; ಉರಿಯುತ್ತಿರುವ ಅಗ್ನಿಯಂತಿದ್ದರು ಮತ್ತು ನಕ್ಷತ್ರಗಳಂತೆ ಅದ್ಭುತರಾಗಿದ್ದರು. ಆ ದ್ವಿಜೇಂದ್ರರ ಪತ್ನಿಯರನ್ನು ನೋಡಿ ಅಗ್ನಿಯ ಮನಸ್ಸು ಕ್ಷೋಭೆಗೊಂಡಿತು, ಮತ್ತು ಇಂದ್ರಿಯವು ಕಾಮವಶವಾಯಿತು. ಅವನು ಮತ್ತೆ ಮತ್ತೆ ಯೋಚಿಸಿದನು:

> “ನಾನು ಹೀಗೆ ಕ್ಷೋಭೆಗೊಳಗಾಗುವುದು ಸರಿಯಲ್ಲ. ದ್ವಿಜೇಂದ್ರರ ಈ ಪತ್ನಿಯರು ಸಾಧ್ವಿಯರು. ಬಯಸಬಾರದವರನ್ನು ನಾನು ಬಯಸುತ್ತಿದ್ದೇನೆ. ನಾನು ಇವರ ಮೇಲೆ ನನ್ನ ದೃಷ್ಟಿಯನ್ನು ಹಾಯಿಸಲೂ ಶಕ್ಯವಿಲ್ಲ. ಅವರಾಗಿ ಬಯಸದೇ ನಾನು ಅವರನ್ನು ಸ್ಪರ್ಶಿಸಲೂ ಸಾಧ್ಯವಿಲ್ಲ. ಆದುದರಿಂದ ನಾನು ಗಾರ್ಹಪತ್ಯನಾಗಿದ್ದುಕೊಂಡು ಅವರನ್ನು

ನಿತ್ಯವೂ ನೋಡುತ್ತಾ ತೃಪ್ತಿಪಡೆಯುತ್ತೇನೆ.”

ಅವನು ಗಾರ್ಹಪತ್ಯನಾಗಿ ಆ ಎಲ್ಲ ಕಾಂಚನಪ್ರಭೆಗಳುಳ್ಳವರನ್ನೂ ತನ್ನ ಜ್ವಾಲೆಗಳಿಂದ ಸ್ಪರ್ಷಿಸುತ್ತಾ ನೋಡುತ್ತಾ ಮುದದಿಂದಿದ್ದನು. ಆ ವರಾಂಗನೆಯರನ್ನು ಕಾಮಿಸುತ್ತಾ ಮನಸ್ಸನ್ನು ಅವರ ವಶದಲ್ಲಿಟ್ಟು ಅಗ್ನಿಯು ಅಲ್ಲಿ ಬಹಳ ಕಾಲ ವಾಸಿಸಿದನು. ಬ್ರಾಹ್ಮಣಸ್ತ್ರೀಯರು ದೊರಕದೇ ಇದ್ದಾಗ ಕಾಮಸಂತಪ್ತಹೃದಯನಾಗಿ ಅಗ್ನಿಯು ದೇಹತ್ಯಾಗಮಾಡಲು ನಿರ್ಧರಿಸಿ ವನಕ್ಕೆ ಬಂದನು.

ಇದಕ್ಕೆ ಮೊದಲೇ ದಕ್ಷನ ಮಗಳು ಸ್ವಾಹಾಳು ಅವನನ್ನು ಬಯಸಿದ್ದಳು. ಅವಳು ತುಂಬಾ ಸಮಯದಿಂದ ಅವನಲ್ಲಿಯ ದುರ್ಬಲತೆಯನ್ನು ಕಾಣಲು ಕಾದುಕೊಂಡಿದ್ದಳು. ಆದರೆ ಆ ಭಾಮಿನಿ ಅನಿಂದಿತೆಯು ಅಲ್ಲಿಯವರೆಗೆ ಆ ದೇವನಲ್ಲಿ ಅಪ್ರಮತ್ತತೆಯನ್ನು ಕಂಡಿರಲಿಲ್ಲ. ಕಾಮಸಂತಪ್ತನಾಗಿ ಅಗ್ನಿಯು ವನಕ್ಕೆ ಬಂದಿರುವುದನ್ನು ತಿಳಿದ ಆ ಭಾಮಿನಿಯು ಆಲೋಚಿಸಿದಳು:

> “ನಾನು ಸಪ್ತರ್ಷಿಗಳ ಪತ್ನಿಯರ ರೂಪವನ್ನು ತಾಳಿ ಅವರ ರೂಪಗಳಿಂದ ಮೋಹಿತನಾಗಿ ಕಾಮಾರ್ತನಾಗಿರುವ ಪಾವಕನನ್ನು ಕಾಮಿಸುತ್ತೇನೆ. ಹೀಗೆ ಮಾಡುವುದರಿಂದ ಅವನೂ ಸಂತೋಷಗೊಳ್ಳುತ್ತಾನೆ ಮತ್ತು ನನ್ನ ಆಸೆಯೂ ಪೂರೈಸುತ್ತದೆ.”

ಆ ವರಾಂಗನೆ ದೇವಿಯು ಪ್ರಥಮವಾಗಿ ಅಂಗಿರಸನ ಭಾರ್ಯೆ

ಶೀಲರೂಪಗುಣಾನ್ವಿತೆ ಶಿವೆಯ ರೂಪವನ್ನು ಧರಿಸಿ ಪಾವಕನ ಬಳಿ ಹೋಗಿ ಹೇಳಿದಳು:

“ಅಗ್ನಿ! ಕಾಮಸಂತಪ್ತಳಾಗಿರುವ ನನ್ನನ್ನು ನೀನು ಕಾಮಿಸಬೇಕು. ಇದನ್ನು ನೀನು ಮಾಡದೇ ಇದ್ದರೆ ನಾನು ಸಾಯುತ್ತೇನೆ. ನಾನು ಶಿವಾ ಎಂಬ ಹೆಸರಿನ ಅಂಗಿರಸನ ಪತ್ನಿ. ಸಖಿಗಳ ಸಹಿತ ಮಂತ್ರಾಲೋಚನೆ ಮಾಡಿ ನಿರ್ಧರಿಸಿ ಬಂದಿದ್ದೇನೆ.”

ಅಗ್ನಿಯು ಹೇಳಿದನು:

“ನಾನು ಕಾಮಾರ್ತನಾಗಿದ್ದೇನೆಂದು ನಿನಗೆ ಹೇಗೆ ತಿಳಿಯಿತು? ಮತ್ತು ಇದರ ಕುರಿತು ನೀನು ಹೇಳಿದ ಎಲ್ಲ ಸಪ್ತರ್ಷಿಗಳ ಪ್ರಿಯ ಸ್ತ್ರೀಯರಿಗೆ ಹೇಗೆ ತಿಳಿಯಿತು?”

ಶಿವೆಯು ಹೇಳಿದಳು:

“ನಿತ್ಯವೂ ನೀನು ನಮಗೆ ಪ್ರಿಯನಾದವನು. ಆದರೆ ನಾವು ನಿನಗೆ ಹೆದರುತ್ತಿದ್ದೆವು. ಈಗ ನಿನ್ನ ಚಿತ್ತದ ಇಂಗಿತವನ್ನು ತಿಳಿದು ಅವರು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾರೆ. ನನ್ನೊಡನೆ ಬೇಗನೇ ಮೈಥುನಗೈದು ಕಾಮವನ್ನು ಹೋಗಲಾಡಿಸಿಕೋ. ನನ್ನ ಅತ್ತಿಗೆಯಂದಿರು ಕಾಯುತ್ತಿದ್ದಾರೆ. ನನಗೆ ಹೋಗಬೇಕು.”

ಆಗ ಅಗ್ನಿಯು ಪ್ರೀತಿ ಸಂತೋಷಗಳಿಂದ ಆ ಶಿವೆಯನ್ನು ಕೂಡಿದನು. ದೇವಿಯು ಪ್ರೀತಿಯಿಂದ ಅವನ ವೀರ್ಯವನ್ನು ತನ್ನ ಕರಗಳಲ್ಲಿ ಹಿಡಿದುಕೊಂಡಳು.


> "ಕಾನನದಲ್ಲಿ ನನ್ನನ್ನು ಈ ರೂಪದಲ್ಲಿ ನೋಡಿದರೆ ಆ ಬ್ರಾಹ್ಮಣಿಯರಿಗೆ ಅಗ್ನಿಯ ಸಂಬಂಧವಾಗಿ ಸುಳ್ಳು ದೋಷಬರುತ್ತದೆ. ಆದುದರಿಂದ ಇದನ್ನು ತಪ್ಪಿಸಲು ನಾನು ಗರುಡಳಾಗುತ್ತೇನೆ. ಹೀಗೆ ನಾನು ಸುಖವಾಗಿ ವನದಿಂದ ಹೊರಹೋಗಬಲ್ಲೆ"

ಎಂದು ಅವಳು ಯೋಚಿಸಿದಳು. ಆಗ ಅವಳು ಸುಪರ್ಣಿಯಾಗಿ ಆ ಮಹಾವನದಿಂದ ನಿರ್ಗಮಿಸಿದಳು. ಅವಳು ಶರಸ್ತಂಭಗಳಿಂದ ಸುಸಂವೃತವಾಗಿದ್ದ, ದೃಷ್ಟಿಯಿಂದಲೇ ವಿಷವನ್ನು ಕಾರುವ ಅದ್ಭುತ ಏಳು ಹೆಡೆಯ ಸರ್ಪಗಳಿಂದ ರಕ್ಷಿತವಾದ, ರಾಕ್ಷಸರು, ಪಿಶಾಚಿಗಳು, ರೌದ್ರ ಭೂತಗಣಗಳಿಂದ, ರಾಕ್ಷಸಿಯರಿಂದ, ಮತ್ತು ಅನೇಕ ಮೃಗಪಕ್ಷಿಗಳಿಂದ ತುಂಬಿದ್ದ ಶ್ವೇತ ಪರ್ವತವನ್ನು ನೋಡಿದಳು. ಅಲ್ಲಿ ಆ ಸತಿಯು ಬೇಗನೇ ಸುದುರ್ಗಮವಾದ ಶೈಲಶಿಖರದ ಮೇಲಿರುವ ಕಾಂಚನ ಸರೋವರದಲ್ಲಿ ಆ ವೀರ್ಯವನ್ನು ಹಾಕಿದಳು. ಹೀಗೆ ಕ್ರಮವಾಗಿ ಮಹಾತ್ಮ ಸಪ್ತರ್ಷಿಗಳ ಪತ್ನಿಯರ ರೂಪಗಳನ್ನು ಧರಿಸಿಕೊಂಡು ಆ ದೇವಿಯು ಪಾವಕನನ್ನು ಕಾಮಿಸಿದಳು. ಆದರೆ ಅರುಂಧತಿಯ ತಪಸ್ಸಿನ ಮತ್ತು ಪತಿಸೇವೆಯ ಪ್ರಭಾವದಿಂದ ಅವಳ

ದಿವ್ಯರೂಪವನ್ನು ಧರಿಸಲು ಅವಳಿಗೆ ಶಕ್ಯವಾಗಲಿಲ್ಲ. ಪ್ರತಿಪದಿಯ ದಿನದಂದು ಕಾಮಿನೀ ಸ್ವಾಹಳು ಆ ಕುಂಡದಲ್ಲಿ ಅಗ್ನಿಯ ರೇತಸ್ಸನ್ನು ಆರುಬಾರು ಹಾಕಿದಳು.

ಅಲ್ಲಿ ಎಸೆಯಲ್ಪಟ್ಟ ತೇಜಸ್ಸಿನಿಂದ ಮಗನೊಬ್ಬನು ಜನಿಸಿದನು. ಋಷಿಗಳು ಪೂಜಿಸದೇ ಬಿಟ್ಟಿದುದರಿಂದ ಅವನಿಗೆ ಸ್ಕಂದ ಎಂಬ ಹೆಸರಿನಿಂದ ಕರೆದರು. ಆ ಕುಮಾರನಿಗೆ ಆರು ಶಿರಗಳಿದ್ದವು, ಎರಡು ಪಟ್ಟು ಕಿವಿಗಳಿದ್ದವು, ಹನ್ನೆರಡು ಕಣ್ಣುಗಳು, ಕೈಗಳು ಮತ್ತು ಕಾಲುಗಳಿದ್ದವು. ಒಂದೇ ಕುತ್ತಿಗೆಯಿತ್ತು ಮತ್ತು ಒಂದೇ ದೇಹವಿತ್ತು. ಬಿದಿಗೆಯಂದು ಅವನು ಆವಿರ್ಭವಿಸಿದನು, ತದಿಗೆಯಂದು ಶಿಶುವಾದನು, ಮತ್ತು ಆ ಗುಹನ ಅಂಗಪ್ರತ್ಯಾಂಗಗಳು ಚತುರ್ಥಿಯಂದು ಬೆಳೆದವು. ಮಿಂಚಿನಿಂದ ಕೂಡಿದ ಕೆಂಪು ಮೋಡಗಳಿಂದ ಸುತ್ತುವರೆಯಲ್ಪಟ್ಟ ಅವನು ಕೆಂಪುಮೋಡಗಳ ಮಧ್ಯದಿಂದ ಉದಯಿಸುತ್ತಿರುವ ಸೂರ್ಯನಂತೆ ಕಂಡನು. ಸುರಾರಿ ತ್ರಿಪುರನನ್ನು ಸಂಹರಿಸಿದ ಮೈನವಿರೇಳಿಸುವ ಮಹಾ ಧನುಸ್ಸನ್ನು ಹಿಡಿದು ಮೇಲೆದ್ದನು. ಆ ಶ್ರೇಷ್ಠ ಧನುಸ್ಸನ್ನು ಹಿಡಿದು ಸಚರಾಚರಗಳ ಮೂರು ಲೋಕಗಳನ್ನೂ ತಲ್ಲಣಿಸುವಂತೆ ಜೋರಾಗಿ ನಿನಾದಿಸಿದನು. ಅವನ ಆ ಮಹಾಮೇಘನಿಸ್ವನದ ನಿನಾದವನ್ನು ಕೇಳಿ ವಿಚಿತ್ರವಾದ ಆ ಮಹಾನಾಗಗಳೆರಡೂ ಐರಾವತವೂ ಭಯದಿಂದ ನಡುಗಿದವು. ಅವುಗಳು ನಡುಗುತ್ತಿದ್ದುದನ್ನು ನೋಡಿ ಆ ಬಾಲಾರ್ಕಸಮದ್ಯುತಿಯು ಅವುಗಳೆರಡನ್ನೂ ತನ್ನ ಕೈಗಳಿಂದ ಹಿಡಿದನು. ಇತರ ಕೈಯಲ್ಲಿ





ಶಕ್ತಿಯನ್ನೂ, ಇನ್ನೊಂದರಲ್ಲಿ ಮಹಾಕಾಯದ ಕೆಂಪುಬಣ್ಣದ ಕುಕ್ಕುಟವನ್ನೂ ಹಿಡಿದು ಆ ಅಗ್ನಿಯ ಮಗ ತಾಮ್ರಚೂಡ ಮಹಾ ಭುಜ, ಬಲಿಗಳಲ್ಲಿ ಶ್ರೇಷ್ಠ ಮಹಾಬಲನು ಜೋರಾಗಿ ಕೂಗಿ ಆಡಿದನು. ಎರಡೂ ಭುಜಗಳಲ್ಲಿ ಉತ್ತಮ ಶಂಖವನ್ನು ಹಿಡಿದು ಆ ಬಲಿಯು ಜೋರಾಗಿ ಊದಿ ಭೂತಗಳನ್ನು ನಡುಗಿಸಿದನು. ಎರಡೂ ಭುಜಗಳನ್ನೂ ಭೂಮಿ ಮತ್ತು ಆಕಾಶಗಳಿಗೆ ಬಹಳಷ್ಟು ಬಾರಿ ಹೊಡೆದು ಆಡುತ್ತಿದ್ದ ಆ ಮಹಾಸೇನನು ತನ್ನ ಬಾಯಿಗಳಿಂದ ಲೋಕಗಳನ್ನು ನುಂಗಿಬಿಡುವಂತೆ, ಮತ್ತು ಆ ಪರ್ವತಾಗ್ರದಲ್ಲಿ ಅಪ್ರಮೇಯ ಸೂರ್ಯನು ಉದಯಿಸುತ್ತಿದ್ದಂತೆ ತೋರುತ್ತಿದ್ದನು. ಆ ಪರ್ವತಾಗ್ರದಲಿದ್ದ ಆ ಅದ್ಭುತ ವಿಕ್ರಮಿ, ಅಮೇಯಾತ್ಮನು ತನ್ನ ಅನೇಕ ಮುಖಗಳಿಂದ ನಾನಾವಿಧದ ದಿಕ್ಕುಗಳನ್ನು ನೋಡಿ ವಿವಿಧ ಭಾವಗಳಲ್ಲಿ ಪುನಃ ಜೋರಾಗಿ ನಿನಾದಿಸಿದನು.

ಅವನ ಆ ನಿನಾದವನ್ನು ಕೇಳಿ ಬಹಳ ಜನರು ಉರುಳಿ ಬಿದ್ದರು ಮತ್ತು ಭೀತಿ ಮತ್ತು ಉದ್ವಿಗ್ನಮನಸ್ಕರಾಗಿ ಅವನನ್ನೇ ಶರಣು ಹೊಕ್ಕರು. ಆಗ ಆ ದೇವನ ಶರಣುಹೋದ ನಾನಾ ವರ್ಣದ ಜನರನ್ನು ಸುಮಹಾಬಲಶಾಲಿಗಳಾದ ಪಾರಿಷದ ಬ್ರಾಹ್ಮಣರೆಂದು ಕರೆಯುತ್ತಾರೆ. ಆಗ ಆ ಮಹಾಬಾಹುವು ಮೇಲೆದ್ದು ಜನರನ್ನು ಸಂತವಿಸಿ, ಧನುವನ್ನು ಎಳೆದು ಬಾಣಗಳನ್ನು ಶ್ವೇತಮಹಾಗಿರಿಯ ಮೇಲಿಂದ ಪ್ರಯೋಗಿಸಿದನು. ಆ ಶರಗಳಿಂದ ಅವನು ಹಿಮವತನ ಮಗ ಕ್ರೌಂಚ ಶೈಲವನ್ನು ತುಂಡರಿಸಿದನು. ಇದರಿಂದಾಗಿ ಹಂಸ ಮತ್ತು ಹದ್ದುಗಳು

ಮೇರು ಪರ್ವತಕ್ಕೆ ಹೋಗುತ್ತವೆ. ಚೆನ್ನಾಗಿ ಪೆಟ್ಟುತಿಂದ ಆ ಶೈಲವು ಆರ್ತಸ್ವರದಲ್ಲಿ ರೋದಿಸುತ್ತಾ ಅಲ್ಲಿಯೇ ಬಿದ್ದನು. ಅವನು ಬಿದ್ದಿದನ್ನು ನೋಡಿ ಅನ್ಯ ಪರ್ವತಗಳು ಕೂಡ ಭಯದಿಂದ ಕೂಗಿದವು. ಅವರ ಭಯದ ಕೂಗುಗಳನ್ನು ಕೇಳಿಯೂ ಕೂಡ ಆ ಬಲಿಗಳಲ್ಲಿ ಶ್ರೇಷ್ಠನು ಅವರಮೇಲೆ ಕರಗಲಿಲ್ಲ. ಆ ಅಮೇಯಾತ್ಮನು ಶಕ್ತಿಯನ್ನು ಮೇಲೆತ್ತಿ ಕೂಗಿದನು. ಆಗ ಆ ಮಹಾತ್ಮನು ವಿಪುಲ ಘೋರ ಶಕ್ತಿಯನ್ನು ಎಸೆದು ತಕ್ಷಣವೇ ಶ್ವೇತಗಿರಿಯ ಶಿಖರವನ್ನು ಕತ್ತರಿಸಿದನು. ಅವನಿಂದ ಪೆಟ್ಟುತಿಂದು ದೀನನಾದ ಶ್ವೇತಗಿರಿಯು ಇತರ ಪರ್ವತಗಳೊಂದಿಗೆ, ಆ ಮಹಾತ್ಮನಿಗೆ ಹೆದರಿ, ಭೂಮಿಯಿಂದ ಬೇರ್ಪಟ್ಟು, ಮೇಲೆ ಹಾರಿದವು. ಆಗ ತನ್ನ ಸುತ್ತಲಿದ್ದ ಆಭರಣಗಳನ್ನು ಕಳೆದುಕೊಂಡು ವ್ಯಥಿತಳಾದ ಭೂಮಿಯು ಆರ್ತಳಾಗಿ ಸ್ಕಂದನನ್ನು ಮೊರೆಹೊಕ್ಕು ಪುನಃ ಬಲವತಿಯಾದಳು. ಪರ್ವತಗಳು ಕೂಡ ಅವನನ್ನು ನಮಸ್ಕರಿಸಿ ಪೃಥ್ವಿಗೆ ಅಂಟಿಕೊಂಡವು. ಶುಕ್ಲಪಕ್ಷದ ಪಂಚಮಿಯಂದು ಲೋಕವು ಸ್ಕಂದನನ್ನು ಭಜಿಸಿತು.

ಮಹಾಘೋರವಾದ ಉತ್ಪಾತಗಳನ್ನು ನೋಡಿದ ಲೋಕಭಾವನ ಋಷಿಗಳು ಉದ್ವಿಗ್ನ ಲೋಕಗಳ ಶಾಂತಿಗಾಗಿ ಕಾರ್ಯಕೈಗೊಂಡರು. ಚೈತ್ರರಥ ವನದಲ್ಲಿ ವಾಸಿಸುತ್ತಿದ್ದ ಜನರು ಹೇಳಿಕೊಂಡರು:

> “ಈ ಮಹಾನ್ ಅನರ್ಥವು ಪಾವಕನು ಸಪ್ತರ್ಷಿಗಳ ಆರು ಪತ್ನಿಯರೊಂದಿಗೆ ಗುಟ್ಟಾಗಿ ಕೂಡಿದ್ದುದರಿಂದ ಆಗಿದೆ.”

ಆ ದೇವಿಯು ಗರುಡಿಯ ರೂಪವನ್ನು ಧರಿಸಿ ಹೋಗುತ್ತಿದ್ದುದನ್ನು ನೋಡಿದ ಇತರರು ಇದು ಸ್ವಾಹಾಳ ಕೆಲಸ ಎಂದು ತಿಳಿಯದೇ

"ಈ ಅನರ್ಥವನ್ನು ಪಕ್ಷಿಯೊಂದು ತಂದೊಡ್ಡಿದೆ"

ಎಂದೂ ಹೇಳಿದರು. ಈ ಮಾತುಗಳನ್ನು ಕೇಳಿದ ಸುಪರ್ಣೆಯು ಇವನು ನನ್ನ ಮಗನೆಂದು ನಿಧಾನವಾಗಿ ಸ್ಕಂದನ ಬಳಿಬಂದು

"ನಾನು ನಿನ್ನ ತಾಯಿ"

ಎಂದು ಹೇಳಿದಳು. ಆಗ ಮಹೌಜಸ ಪುತ್ರನು ಹುಟ್ಟಿದ್ದಾನೆಂದು ಕೇಳಿ ಸಪ್ತರ್ಷಿಗಳು ದೇವೀ ಅರುಂಧತಿಯನ್ನು ಬಿಟ್ಟು ಉಳಿದ ಆರು ಪತ್ನಿಯರನ್ನು ತ್ಯಜಿಸಿದರು. ಏಕೆಂದರೆ ವನವಾಸಿಗಳು

"ಈ ಆರರಿಂದಲೇ ಅವನು ಹುಟ್ಟಿದ್ದಾನೆ"

ಎಂದು ಹೇಳಿದರು. ಸ್ವಾಹಳೂ ಕೂಡ ಇವನು ನನ್ನ ಮಗನೆಂದೂ, ನಿಮ್ಮ ಪತ್ನಿಯರು ಇವನ ತಾಯಿಯರಲ್ಲವೆಂದೂ ಪುನಃ ಪುನಃ ಸಪ್ತರ್ಷಿಗಳಿಗೆ ಹೇಳಿದಳು.

ಮಹಾಮುನಿ ವಿಶ್ವಾಮಿತ್ರನು ಸಪ್ತರ್ಷಿಗಳ ಆ ಇಷ್ಟಿಯನ್ನು ಪೂರೈಸಿ ಕಾಮಸಂತಪ್ತನಾದ ಪಾವಕನನ್ನು ಹಿಂಬಾಲಿಸಿ ಹೋಗಿ ನೋಡಿದ್ದನು. ಆದುದರಿಂದ ಅವನಿಗೆ ನಡೆದುದೆಲ್ಲವೂ ಸರಿಯಾಗಿ ತಿಳಿದಿತ್ತು. ಪ್ರಥಮವಾಗಿ ವಿಶ್ವಾಮಿತ್ರನು ಕುಮಾರನಿಗೆ ಶರಣು ಹೋದನು. ಮಹಾಸೇನನನ್ನು ದಿವ್ಯ ಸ್ತವದಿಂದ ಸ್ತುತಿಸಿದನು ಕೂಡ.

ಜಾತಕರ್ಮಾದಿ ಎಲ್ಲ ಹದಿಮೂರು ಮಂಗಲ ಕಾರ್ಯಗಳನ್ನು ಆ ಮಹಾಮುನಿಯು ಕುಮಾರನಿಗೆ ನೆರವೇರಿಸಿದನು.

ಲೋಕಹಿತಾರ್ಥವಾಗಿ ವಿಶ್ವಾಮಿತ್ರನು ಆ ಷಡ್ವಕ್ತ್ರನ ಮಹಾತ್ಮೆಯನ್ನೂ, ಕುಕ್ಕುಟದ ಸಾಧನೆಯನ್ನೂ, ದೇವಿ ಶಕ್ತಿಯ ಸಾಧನೆಯನ್ನೂ ಮತ್ತು ಅವನಿಗೆ ಸೇವೆಸಲ್ಲಿಸಿದ ಜನರನ್ನೂ ಸ್ತುತಿಸಿದನು. ಆದುದರಿಂದ ಋಷಿ ವಿಶ್ವಾಮಿತ್ರನು ಕುಮಾರನ ಪ್ರಿಯಕರನಾದನು. ಆಗ ಆ ಮಹಾಮುನಿಯು ಸ್ವಾಹಾಳು ಯಾರಿಗೂ ತಿಳಿಯದೇ ರೂಪವನ್ನು ಬದಲಾಯಿಸಿಕೊಂಡಿದ್ದುದನ್ನು ಮುನಿಗಳಿಗೆ ಹೇಳಿ ಅವರ ಸ್ತ್ರೀಯರದ್ದು ಏನೂ ಅಪರಾಧವಿಲ್ಲವೆಂದೂ ಹೇಳಿದನು. ಅದನ್ನು ಕೇಳಿಯೂ ಅವರು ಅವರ ಪತ್ನಿಯರನ್ನು ಸರ್ವಥಾ ತ್ಯಜಿಸಿದರು. ಸ್ಕಂದನ ಕುರಿತು ಕೇಳಿದ ದೇವತೆಗಳು ಒಟ್ಟಿಗೇ ವಾಸವನಿಗೆ ಹೇಳಿದರು:

> “ಶಕ್ರ! ಈ ಬಲಶಾಲಿಯಾದ ಸ್ಕಂದನನ್ನು ಬೇಗನೇ ಸಂಹರಿಸು! ಒಂದುವೇಳೆ ನೀನು ಇವನನ್ನು ಕೊಲ್ಲದಿದ್ದರೆ ಈ ಮಹಾಬಲನು ನಮ್ಮೊಂದಿಗೆ ಮೂರು ಲೋಕಗಳನ್ನೂ ಗೆದ್ದು ಇವನೇ ಇಂದ್ರನಾಗುತ್ತಾನೆ!”

ಅವನು ಅವರಿಗೆ ವ್ಯಥಿತನಾಗಿ ಹೇಳಿದನು:

> “ಈ ಬಾಲಕನು ತುಂಬಾ ಬಲಶಾಲಿಯು. ಲೋಕಗಳ ಸೃಷ್ಟಾರನನ್ನು ಕೂಡ ಯುದ್ಧದಲ್ಲಿ ವಿಕ್ರಮದಿಂದ ನಾಶಪಡಿಸಬಲ್ಲನು. ಲೋಕಮಾತೆಯರು ಎಲ್ಲರೂ

> ಸ್ಕಂದನಲ್ಲಿಗೆ ಇಂದು ಹೋಗಿ ಅವನ ವೀರ್ಯವನ್ನು ಗೆಲ್ಲಲಿ."

ಹಾಗೆಯೇ ಆಗಲೆಂದು ಅವರು ಹೋದರು. ಆ ಅಪ್ರತಿಮಬಲಶಾಲಿಯನ್ನು ಕಂಡು ವಿಷಣ್ಣವದನರಾಗಿ ಅವರು ಇವನನ್ನು ಗೆಲ್ಲಲು ನಾವು ಅಶಕ್ಯರು ಎಂದು ಚಿಂತಿಸಿ ಅವನಿಗೇ ಶರಣು ಹೊಕ್ಕರು. ಅವನಿಗೆ ಹೇಳಿದರು:

> "ನೀನು ನಮ್ಮ ಮಗ. ನಾವು ಜಗತ್ತನ್ನೇ ಪಾಲಿಸುವವರು.
> ಸ್ನೇಹದಿಂದ ಚಿಮ್ಮುತ್ತಿರುವ ನಮ್ಮ ಮೊಲೆಹಾಲನ್ನು ಉಣ್ಣು."

ಅವರನ್ನು ಪೂಜಿಸಿ ಮಹಾಸೇನನು ಅವರ ಆಸೆಯನ್ನು ಈಡೇರಿಸಿದನು. ಇದನ್ನು ನೋಡಿ ಬಲಿಗಳಲ್ಲಿ ಬಲಿಯಾದ ತಂದೆ ಅಗ್ನಿಯು ಅಲ್ಲಿಗೆ ಆಗಮಿಸಿದನು. ಮಾತೃಗಣಗಳೊಂದಿಗೆ ಅವನಿಂದಲೂ ಗೌರವಿಸಲ್ಪಟ್ಟ ಅವನು ಮಹಾಸೇನನನ್ನು ಸುತ್ತುವರೆದು ಅವನನ್ನು ರಕ್ಷಿಸಲು ಸ್ಥಿರವಾಗಿ ನಿಂತನು. ಆ ಎಲ್ಲ ಮಾತೆಯರಲ್ಲಿ ಕ್ರೋಧದಿಂದ ಹುಟ್ಟಿದ ನಾರಿಯು ಕೈಯಲ್ಲಿ ಶೂಲವನ್ನು ಹಿಡಿದು ತನ್ನದೇ ಮಗನನ್ನು ಕಾಯುವಂತೆ ಅವನನ್ನು ರಕ್ಷಿಸಿ ಕಾದಳು. ಕೆಂಪುಬಣ್ಣದ ಸಮುದ್ರದ ಮಗಳು, ರಕ್ತವನ್ನು ಕುಡಿಯುವ ಕ್ರೂರಳು ಮಹಾಸೇನನನ್ನು ಪುತ್ರನಂತೆ ಬಿಗಿದಪ್ಪಿ ರಕ್ಷಿಸಿದಳು. ಅಗ್ನಿಯು ಆಡಿನ ಮುಖವನ್ನು ಧರಿಸಿ, ಬಹಳ ಮಕ್ಕಳೊಂದಿಗೆ ಆ ಗಿರಿಯ ಮೇಲಿದ್ದ ಬಾಲಕನೊಂದಿಗೆ ಆಟವಾಡುತ್ತಾ ರಂಜಿಸಿದನು.

ಗ್ರಹಗಳು, ಉಪಗ್ರಹಗಳು, ಋಷಿಗಳು, ಮಾತೃಗಳು, ಹುತಾಶನನೇ



ಮೊದಲಾದ ಉರಿಯುವವು, ಪಾರಿಷದ ಗಣಗಳು ಮತ್ತು ಇನ್ನೂ ಅನ್ಯ ಬಹುಸಂಖ್ಯೆಯ ಘೋರ ತ್ರಿದಿವವಾಸಿಗಳು ಮಾತೃಗಣಗಳೊಂದಿಗೆ ಮಹಾಸೇನನನ್ನು ಸುತ್ತುವರೆದು ನಿಂತರು. ವಿಜಯವು ಸಂದಿಗ್ಧವೆಂದು ನೋಡಿ ವಿಜಯವನ್ನು ಬಯಸಿದ ಸುರೇಶ್ವರನು ಐರಾವತವನ್ನೇರಿ ದೇವತೆಗಳ ಸಹಿತ ಸ್ಕಂಧನಲ್ಲಿಗೆ ಮುಂದುವರೆದನು. ಮಹಾಸೇನನನ್ನು ಕೊಲ್ಲಲು ಇಂದ್ರನ ಉತ್ತಮ ಸೇನೆಯು ಉಗ್ರವಾಗಿ ಕೂಗುತ್ತಾ ಮಹಾವೇಗದಿಂದ ಮಹಾಪ್ರಭೆಯುಳ್ಳ, ವಿಚಿತ್ರ ಧ್ವಜಗಳಿಂದ ಸನ್ನಿದ್ಧವಾದ, ನಾನಾ ವಾಹನ-ಕಾರ್ಮುಕಗಳಿಂದ ಕೂಡಿದ ದೇವತೆಗಳ ಸೇನೆಯು ಹೊರಟಿತು. ಶ್ರೇಷ್ಠವಾದ ಬಟ್ಟೆಗಳನ್ನು ಧರಿಸಿದ್ದ,

ಆಭರಣಗಳಿಂದ ಸುಂದರವಾಗಿ ಅಲಂಕೃತನಾಗಿ ಕೊಲ್ಲಲು ಅಲ್ಲಿಗೆ ಬರುತ್ತಿದ್ದ ಶಕ್ರನನ್ನು ಕುಮಾರನು ಎದುರಿಸಿದನು. ದಾರಿಯಲ್ಲಿ ಶಕ್ರನು ಮಹಾಬಲವನ್ನುಪಯೋಗಿಸಿ ಜೋರಾಗಿ ಕೂಗಲು ಪಾವಕಾತ್ಮಜನನ್ನು ಕೊಲ್ಲಲು ಬರುತ್ತಿದ್ದ ದೇವಸೇನೆಯು ಹರ್ಷಗೊಂಡಿತು. ತ್ರಿದಶಸ್ತರಿಂದ ಮತ್ತು ಪರಮಋಷಿಗಳಿಂದ ಸಂಪೂಜ್ಯನಾಗಿ ವಾಸವನು ಕಾರ್ತಿಕೇಯನ ಸಮೀಪಕ್ಕೆ ಬಂದನು. ಆಗ ಸುರರೊಂದಿಗೆ ದೇವೇಶನು ಸಿಂಹನಾದವನ್ನು ಗೈದನು. ಅದನ್ನು ಕೇಳಿ ಗುಹನೂ ಕೂಡ ಸಾಗರದಂತೆ ಜೋರಾಗಿ ಕೂಗಿದನು. ಅವನ ಆ ಮಹಾ ಶಬ್ಧದಿಂದ ದೇವಸೇನೆಯು ಸಮುದ್ರದಂತೆ ಕ್ಷೋಭೆಗೊಂಡಿತ್ತು ಮತ್ತು ಎಲ್ಲಿದ್ದರೂ ಅಲ್ಲಲ್ಲಿಯೇ ಅಚೇತನರಾಗಿ ನಿಂತರು. ತನ್ನನ್ನು ಕೊಲ್ಲಲು ಬಂದ ದೇವತೆಗಳನ್ನು ನೋಡಿ ಆ ಪಾವಕಿಯು ಕೃದ್ಧನಾಗಿ ಬಾಯಿಯಿಂದ ಜೋರಾಗಿ ಉರಿಯುತ್ತಿರುವ ಅಗ್ನಿಯ ಜ್ವಾಲೆಗಳನ್ನು ಹೊರಹಾಕಿದನು. ಅದು ದೇವಸೇನೆಯನ್ನು ಸುಟ್ಟು ನೆಲದಮೇಲೆ ಬೀಳಿಸಿತು. ಅವರ ಶಿರಗಳು, ದೇಹಗಳು, ಆಯುಧ, ವಾಹನಗಳು ಆ ಬೆಂಕಿಯಲ್ಲಿ ಹತ್ತಿ ಉರಿಯತೊಡಗಿದವು. ಕ್ಷಣದಲ್ಲಿಯೇ ಅವರು ಮಂಡಲಗಳಿಂದ ಕಿತ್ತುಬಿದ್ದ ನಕ್ಷತ್ರಗಳ ಗುಂಪುಗಳಂತೆ ತೋರಿದರು. ಉರಿಯುತ್ತಿದ್ದ ದೇವತೆಗಳು ವಜ್ರಧರನನ್ನು ತ್ಯಜಿಸಿ ಪಾವಕಾತ್ಮನನ್ನು ಶರಣು ಹೊಕ್ಕನು. ಹಾಗೆ ಅಲ್ಲಿ ಶಾಂತಿಯುಂಟಾಯಿತು.

ದೇವತೆಗಳಿಂದ ತ್ಯಜಿಸಲ್ಪಟ್ಟ ಶಕ್ರನು ವಜ್ರವನ್ನು ಸ್ಕಂದನ ಮೇಲೆ ಎಸೆದನು. ಅದು ಸ್ಕಂದನ ಬಲಪಾರ್ಶ್ವವನ್ನು ಹೊಕ್ಕು ಆ ಮಹಾತ್ಮನ

ಪಾರ್ಶ್ವವನ್ನು ಕತ್ತರಿಸಿತು. ವಜ್ರಪ್ರಹಾರದಿಂದ ಸ್ಕಂದನಲ್ಲಿ ಇನ್ನೊಬ್ಬ ಪುರುಷನು ಹುಟ್ಟಿದನು. ಆ ಯುವಕನು ಕಾಂಚನದ ಪ್ರಭೆಯನ್ನು ಹೊಂದಿದ್ದು, ಶಕ್ತಿಯನ್ನು ಹಿಡಿದಿದ್ದನು ಮತ್ತು ದಿವ್ಯಕುಂಡಲಗಳನ್ನು ಧರಿಸಿದ್ದನು. ವಜ್ರದ ಹೊಡೆತಕ್ಕೆ ಸಿಕ್ಕು ಹುಟ್ಟಿದುದರಿಂದ ಅವನು ವಿಶಾಖ ಎಂದಾದನು. ಕಾಲಾನಲಸಮದ್ಯುತಿಯಾಗಿದ್ದ ಇನ್ನೊಬ್ಬನು ಹುಟ್ಟಿದ್ದುದನ್ನು ನೋಡಿ ಇಂದ್ರನು ಭಯದಿಂದ ಕೈಮುಗಿದು ಸ್ತುತಿಸಿ ಸ್ಕಂದನ ಶರಣು ಹೋದನು. ಆಗ ಸತ್ತಮ ಸ್ಕಂದನು ಸೈನ್ಯದೊಂದಿಗೆ ಅವನಿಗೆ ಅಭಯವನ್ನಿತ್ತನು. ತ್ರಿದಶರು ಪ್ರಹೃಷ್ಠರಾಗಿ ಕೈಗಳನ್ನು ಮೇಲೆತ್ತಿ ನಮಸ್ಕರಿಸಿದರು.

ಸ್ಕಂದನ ವಜ್ರಪ್ರಹಾರದಿಂದಾಗಿ ಹುಟ್ಟಿದ ಮತ್ತು ಗರ್ಭದಲ್ಲಿಯೂ ಇರುವ ಶಿಶುಗಳನ್ನು ಅಪಹರಿಸುವ ದಾರುಣ ಕುಮಾರಕರು ಹುಟ್ಟಿದರು. ವಜ್ರಪ್ರಹಾರದಿಂದ ಮಹಾಬಲಶಾಲಿಗಳಾದ ಕನ್ಯೆಯರೂ ಹುಟ್ಟಿದರು. ಕುಮಾರರು ವಿಶಾಖನನ್ನು ತಮ್ಮ ತಂದೆಯೆಂದು ತಿಳಿದರು. ಆ ಭಗವಾನನು ರಣದಲ್ಲಿ ಆಡಿನ ಮುಖವನ್ನು ಧರಿಸಿ, ತಾನೇ ಹೊರತಂದ ಪುತ್ರರು ಮತ್ತು ಕನ್ಯಾಗಣಗಳೆಲ್ಲರಿಂದ ಆವೃತನಾಗಿ ಮಾತೃಗಳ ಸಮಕ್ಷಮದಲ್ಲಿ ಕೌಶಲದಿಂದ ಭದ್ರಶಾಖನಾಗಿ ನಿಂತನು. ಆದುದರಿಂದ ಸ್ಕಂದನನ್ನು ಭುವಿಯಲ್ಲಿ ಕುಮಾರಪಿತನೆಂದು ಜನರು ಕರೆಯುತ್ತಾರೆ. ಪುತ್ರರನ್ನು ಮತ್ತು ಪುತ್ರಿಯರನ್ನು ಬಯಸುವ ಜನರು ಸದಾ ಅವರ ಪ್ರದೇಶದಲ್ಲಿ ರುದ್ರನನ್ನು ಮಹಾಬಲ ಅಗ್ನಿಯನ್ನಾಗಿಯೂ ಉಮೆಯನ್ನು ಸ್ವಾಹಾ ಎಂದೂ ಯಾಜಿಸುತ್ತಾರೆ. ತಪ ಎಂಬ ಹೆಸರಿನ

ಅಗ್ನಿಯಿಂದ ಜನಿಸಿದ ಕನ್ಯೆಯರು ಸ್ಕಂದನ ಬಳಿಸಾರಲು ಅವರಿಗೆ ಏನು ಮಾಡಲಿ ಎಂದು ಸ್ಕಂದನು ಕೇಳಿದನು. ಮಾತರರು ಹೇಳಿದರು:

> "ನಿನ್ನ ಪ್ರಸಾದದಂತೆ ನಾವು ಸರ್ವಲೋಕದ ಪೂಜ್ಯ ಉತ್ತಮ ಮಾತರರೆಂದಾಗಲಿ. ನಮಗೆ ಈ ಪ್ರಿಯವಾದುದನ್ನು ಮಾಡು!"
>
> "ಹಾಗೆಯೇ ಆಗಲಿ! ನೀವು ಅಶಿವ ಶಿವರೆಂದು ಎರಡು ಭಾಗಗಳಾಗುತ್ತೀರಿ!"

ಎಂದು ಆ ಉದಾರಧಿಯು ಪುನಃ ಪುನಃ ಹೇಳಿದನು. ಸ್ಕಂದನ ಪುತ್ರತ್ವವನ್ನು ಪಡೆದು ಮಾತೃಗಣವು ಹೊರಟಿತು. ಕಾಕೀ, ಹಲಿಮಾ, ರುದ್ರಾ, ಬೃಹಲೀ, ಆರ್ಯಾ, ಪಲಾಲಾ, ಮತ್ತು ಮಿತ್ರಾ ಇವರು ಆ ಏಳು ಶಿಶುಮಾತರರು. ಅವರು ವೀರ್ಯಸಂಪನ್ನ ಅತಿದಾರುಣ ಲೋಹಿತಾಕ್ಷ ಭಯಂಕರ ಸ್ಕಂದನ ಪ್ರಸಾದದಿಂದ ಹುಟ್ಟಿದ ಶಿಶು ಎಂಬ ಹೆಸರಿನ ಮಗನನ್ನು ಪಡೆದರು. ಈ ವೀರನು ಸ್ಕಂದ-ಮಾತೃಗಣಕ್ಕೆ ಜನಿಸಿದ ಎಂಟನೆಯ ಪುತ್ರನೆಂದು ಹೇಳುತ್ತಾರೆ. ಆದರೆ ಆ ಆಡಿನ ಮುಖದವನನ್ನು ಸೇರಿಸಿ, ಇವನನ್ನು ಒಂಭತ್ತನೆಯವನೆಂದು ಹೇಳುತ್ತಾರೆ. ಸ್ಕಂದನ ಆರನೆಯ ಮುಖವು ಆಡಿನದು. ಮಧ್ಯದಲ್ಲಿರುವ ಈ ಆರನೆಯ ಮುಖವನ್ನು ಮಾತೃಗಣವು ಸದಾ ಪೂಜಿಸುತ್ತದೆ. ಆರನೆಯ ಆ ಶೀರ್ಷವು ಅತ್ಯಂತ ಪ್ರಮುಖವಾದುದೆಂದು ಕೇಳಿಬರುತ್ತದೆ. ಏಕೆಂದರೆ ಇದರಿಂದಲೇ ಭದ್ರಶಾಖನು ಶಕ್ತಿಯನ್ನು

ಸೃಷ್ಟಿಸಿದನೆಂದು ಹೇಳುತ್ತಾರೆ. ಈ ವಿವಿಧ ಘಟನೆಗಳು ಶುಕ್ಲಪಕ್ಷದ ಪಂಚಮಿಯೆಂದು ನಡೆದವು. ಷಷ್ಠಿಯಂದು ಅಲ್ಲಿ ಮಹಾಘೋರ ಯುದ್ಧವು ನಡೆಯಿತು.

ಆಗ ಹಿರಣ್ಯಾಕ್ಷ, ಮಹಾಪ್ರಭ, ಕೆಂಪುವಸ್ತ್ರವನ್ನುಟ್ಟಿದ್ದ, ತೀಕ್ಷ್ಣದಂಷ್ಟ್ರ, ಮನೋರಮ, ಸರ್ವಲಕ್ಷಣಸಂಪನ್ನ, ತ್ರೈಲೋಕ್ಯಗಳಿಗೂ ಪ್ರಿಯನಾದ ಸ್ಕಂದನು ಬಂಗಾರದ ಕವಚವನ್ನು ಧರಿಸಿ, ಬಂಗಾರದ ಮುಕುಟವನ್ನು ಧರಿಸಿ ಕುಳಿತುಕೊಂಡನು. ಆಗ ಆ ವರದ, ಶೂರ, ಯುವಕ, ಮೃಷ್ಟಕುಂಡಲನನ್ನು ಪದ್ಮರೂಪಿ ಶ್ರೀಯು ಸ್ವಯಂ ಶರೀರವನ್ನು ತಳೆದು ಪ್ರೀತಿಸಿದಳು. ಶ್ರೀಯಿಂದ ಆರಿಸಲ್ಪಟ್ಟ ಆ ಯಶಸ್ವಿ ಕೋಮಲ ಕುಮಾರವರನು ಪೂರ್ಣಿಮೆಯ ಶಶಿಯಂತೆ ಭೂತಗಳಿಗೆ ಕಾಣಿಸಿದನು. ಮಹಾತ್ಮ ಬ್ರಾಹ್ಮಣರು ಆ ಮಹಾಬಲನನ್ನು ಪೂಜಿಸಿದರು. ಅಲ್ಲಿದ್ದ ಮಹರ್ಷಿಗಳೂ ಕೂಡ ಸ್ಕಂದನನ್ನು ಈ ರೀತಿಯಲ್ಲಿ ಕರೆದರು:

> “ಹಿರಣ್ಯವರ್ಣ! ನಿನಗೆ ಮಂಗಳವಾಗಲಿ! ಲೋಕಗಳ ಶಂಕರನಾಗು. ಆರೇ ರಾತ್ರಿಗಳ ಹಿಂದೆ ಹುಟ್ಟಿದ್ದರೂ ಸರ್ವ ಲೋಕಗಳೂ ನಿನ್ನ ವಶವಾಗಿವೆ. ಆದುದರಿಂದ ನೀನು ಇಂದ್ರನಾಗಿ ಮೂರುಲೋಕಗಳಿಗೂ ಅಭಯವನ್ನು ನೀಡು. ಸುರೋತ್ತಮ! ಪುನಃ ಅಭಯವನ್ನಿತ್ತು ನಮ್ಮನ್ನು ಉಳಿಸು.”

ಸ್ಕಂದನು ಹೇಳಿದನು:

> “ತಪೋಧನರೇ! ಇಂದ್ರನು ಸರ್ವಲೋಕಗಳಿಂದ ಏನು

ಮಾಡುತ್ತಾನೆ? ಸುರೇಶ್ವರನು ದೇವಗಣಗಳನ್ನು ಹೇಗೆ ನಿತ್ಯವೂ ಪಾಲಿಸುತ್ತಾನೆ?”

ಋಷಿಗಳು ಹೇಳಿದರು:

“ಇಂದ್ರನು ಭೂತಗಳಿಗೆ ಬಲ, ತೇಜಸ್ಸು, ಮಕ್ಕಳು ಮತ್ತು ಸುಖವನ್ನು ನೀಡುತ್ತಾನೆ. ತೃಪ್ತಿಪಡಿಸಿದರೆ ಸುರೇಶ್ವರನು ಎಲ್ಲ ವರಗಳನ್ನೂ ನೀಡುತ್ತಾನೆ. ಕೆಟ್ಟಾಗಿ ನಡೆದುಕೊಳ್ಳುವವರನ್ನು ಸಂಹರಿಸುತ್ತಾನೆ; ಉತ್ತಮ ನಡತೆಯುಳ್ಳವರನ್ನು ಪಾಲಿಸುತ್ತಾನೆ. ಬಲಸೂದನನು ಇರುವವುಗಳಿಗೆ ಕಾರ್ಯವೇನೆಂದು ಅನುಶಾಸನ ಮಾಡುತ್ತಾನೆ. ಸೂರ್ಯನಿಲ್ಲದಿರುವಾಗ ಸೂರ್ಯನಾಗುತ್ತಾನೆ; ಹಾಗೆಯೇ ಚಂದ್ರನಿಲ್ಲದಿರುವಾಗ ಚಂದ್ರನಾಗುತ್ತಾನೆ. ಅವನು ಅಗ್ನಿ, ವಾಯು, ಪೃಥ್ವಿ ಮತ್ತು ನೀರಿನ ಕಾರಣ. ಇವು ಇಂದ್ರನ ಕರ್ತವ್ಯಗಳು. ಇಂದ್ರನು ವಿಪುಲ ಬಲಶಾಲಿ. ನೀನೂ ಕೂಡ ವೀರ, ಬಲಶ್ರೇಷ್ಠನಾಗಿದ್ದೀಯೆ. ಆದುದರಿಂದ ನೀನೇ ಇಂದ್ರನಾಗು.”

ಶಕ್ರನು ಹೇಳಿದನು:

“ಮಹಾಬಾಹೋ! ಇಂದ್ರನಾಗಿ ಎಲ್ಲರಿಗೂ ಸುಖವನ್ನು ನೀಡು. ಪ್ರಾಪ್ತರೂಪನಾಗಿದ್ದೀಯೆ! ಇಂದೇ ನಿನ್ನನ್ನು ಅಭಿಷೇಕಿಸುತ್ತೇವೆ.”

ಸ್ಕಂದನು ಹೇಳಿದನು:

"ಅವ್ಯಗ್ರನಾಗಿ ವಿಜಯರತನಾಗಿ ನೀನೇ ತ್ರೈಲೋಕ್ಯವನ್ನು ಶಾಸನಮಾಡು. ಶಕ್ರ! ನಾನು ನಿನ್ನ ಕಿಂಕರ. ನಿನ್ನ ಇಂದ್ರತ್ವವನ್ನು ನಾನು ಬಯಸುವುದಿಲ್ಲ."

ಶಕ್ರನು ಹೇಳಿದನು:

"ವೀರ! ನಿನ್ನ ಬಲವು ಅದ್ಭುತವಾದುದು. ನೀನು ದೇವತೆಗಳ ಶತ್ರುಗಳನ್ನು ಗೆಲ್ಲು. ನಿನ್ನ ವೀರ್ಯದಿಂದ ವಿಸ್ಮಿತರಾಗಿ ಲೋಕಗಳು ತಿಳಿಯದಂತಾಗಿವೆ. ನಾನು ಇಂದ್ರತ್ವವನ್ನು ಉಳಿಸಿಕೊಂಡಿದ್ದರೂ ಬಲಹೀನನಾಗಿ ಸೋತಿದ್ದೇನೆ. ನನ್ನನ್ನು ಕೀಳಾಗಿ ಕಾಣುತ್ತಾರೆ ಮತ್ತು ನಮ್ಮೀರ್ವರಲ್ಲಿ ಭೇದಗಳನ್ನು ತರುತ್ತಾರೆ. ನಮ್ಮನ್ನು ಬೇರ್ಪಡಿಸಿ ಲೋಕವು ಎರಡು ಪಂಗಡಗಳಾಗುತ್ತವೆ. ಲೋಕಗಳು ಎರಡಾದಾಗ ಸ್ವಾಭಾವಿಕವಾಗಿಯೇ ಅವುಗಳ ಮಧ್ಯೆ ಮೊದಲಿನಂತೆ ಯುದ್ಧವು ನಿಶ್ಚಯವಾಗಿಯೂ ನಡೆಯುತ್ತದೆ. ಆಗ ಅಲ್ಲಿ ರಣದಲ್ಲಿ ನೀನು ನನ್ನನ್ನು ಯಥಾಶ್ರದ್ಧೆಯಿಂದ ಗೆಲ್ಲುತ್ತೀಯೆ ಮತ್ತು ನೀನೇ ಇಂದ್ರನಾಗುತ್ತೀಯೇ. ಆದುದರಿಂದ ವಿಚಾರಮಾಡದೇ ಇಂದೇ ನೀನು ಇಂದ್ರನಾಗು."

ಸ್ಕಂದನು ಹೇಳಿದನು:

“ನೀನೇ ರಾಜ – ನನ್ನ ಮತ್ತು ತ್ರೈಲೋಕ್ಯದ! ನಿನಗೆ ಮಂಗಳವಾಗಲಿ! ಶಕ್ರ! ನಿನ್ನ ಶಾಸನದಂತೆ ನಾನೇನು ಮಾಡಬೇಕೆಂದು ನನಗೆ ಹೇಳು.”

ಶಕ್ರನು ಹೇಳಿದನು:


“ಒಂದುವೇಳೆ ನೀನು ನಿಶ್ಚಯದಿಂದ ಹೇಳಿದ ಈ ಮಾತುಗಳು ಸತ್ಯವಾದುದೇ ಆದರೆ ಮತ್ತು ನನ್ನ ಆಜ್ಞೆಯಂತೆ ಮಾಡಬಯಸಿದರೆ ನನ್ನನ್ನು ಕೇಳು. ದೇವತೆಗಳ ಸೇನಾಪತಿಯಾಗಿ ಅಭಿಷಿಕ್ತನಾಗು! ನಿನ್ನ ಮಾತಿನಂತೆ ನಾನೇ ಇಂದ್ರನಾಗಿರುತ್ತೇನೆ.”

ಸ್ಕಂದನು ಹೇಳಿದನು:

“ದಾನವರ ವಿನಾಶಕ್ಕಾಗಿ, ದೇವತೆಗಳ ಕಾರ್ಯಸಿದ್ಧಿಗಾಗಿ, ಮತ್ತು ಗೋ-ಬ್ರಾಹ್ಮಣರ ರಕ್ಷಣೆಗಾಗಿ ನನ್ನನ್ನು ಸೇನಾಪತಿಯಾಗಿ ಅಭಿಷೇಕಿಸು.”

ಅವನು ಸರ್ವದೇವಗಣಗಳೊಂದಿಗೆ ಮಘವತ ಮತ್ತು ಮಹರ್ಷಿಗಳಿಂದ ಪೂಜಿತನಾಗಿ ಅಭಿಷಿಕ್ತನಾಗಿ ಶೋಭಿಸಿದನು. ಅವನಿಗೆ ಹಿಡಿದಿದ್ದ ಕಾಂಚನ ಛತ್ರವು ಚೆನ್ನಾಗಿ ಉರಿಯುತ್ತಿರುವ ಅಗ್ನಿಯ ಆತ್ಮ ಮಂಡಲದಂತೆ ಪ್ರಜ್ವಲಿಸುತ್ತಿತ್ತು. ಸ್ವಯಂ ಯಶಸ್ವೀ ತ್ರಿಪುರಘ್ನನು ವಿಶ್ವಕರ್ಮನು ರಚಿಸಿದ್ದ ಹಿರಣ್ಮಯ ದಿವ್ಯ ಮಾಲೆಯನ್ನು

ಅವನಿಗೆ ಕಟ್ಟಿದನು. ದೇವಿಯೊಂದಿಗೆ ಆ ಪರಂತಪ ಭಗವಾನ್ ಗೋವೃಷಧ್ವಜನು ಅಲ್ಲಿಗೆ ಬಂದು ಅವನನ್ನು ಸಂತೋಷದಿಂದ ಪೂಜಿಸಿದನು. ಅಗ್ನಿಯನ್ನು ರುದ್ರನೆಂದು ಮತ್ತು ಅದರಂತೆ ಸ್ಕಂದನನ್ನು ರುದ್ರಸೂನುವೆಂದು ದ್ವಿಜರು ಕರೆಯುತ್ತಾರೆ. ರುದ್ರನ ಶುಕ್ರವು ಬಿದ್ದು ಆ ಶ್ವೇತಪರ್ವತವಾಯಿತು. ಅದೇ ಶ್ವೇತಪರ್ವತದಲ್ಲಿ ಪಾವಕನ ಇಂದ್ರಿಯವು ಕೃತ್ತಿಕೆಯರೊಂದಿಗೆ ಸೇರಿತು. ರುದ್ರನಿಂದ ಪೂಜಿಸಲ್ಪಟ್ಟಿದ್ದುದನ್ನು ನೋಡಿ ಎಲ್ಲ ದಿವೌಕಸರೂ ಆ ಗುಣವಂತರಲ್ಲಿ ಶ್ರೇಷ್ಠ ಗುಹನನ್ನು ರುದ್ರಸೂನುವೆಂದು ಕರೆದರು. ರುದ್ರನು ವಹ್ನಿಯನ್ನು ಅನುಪ್ರವೇಶಿಸಿ ಈ ಶಿಶುವು ಹುಟ್ಟಿದ್ದುದರಿಂದ ಅಲ್ಲಿ ಹುಟ್ಟಿದ ಸ್ಕಂದನು ರುದ್ರಸೂನುವಾದನು. ರುದ್ರನ ವಹ್ನಿಯಲ್ಲಿ ಸ್ವಾಹಾಳಿಂದ ಆರು ಸ್ತ್ರೀಯರ ತೇಜಸ್ಸಿನಿಂದ ಹುಟ್ಟಿದ ಸ್ಕಂದ ಸುರಶ್ರೇಷ್ಠನು ರುದ್ರಸೂನುವಾದನು. ಕೆಂಪುಬಣ್ಣದ ಶುಭ್ರವಸ್ತ್ರಗಳಲ್ಲಿದ್ದ ಪಾವಕಾತ್ಮಜನು ಕೆಂಪು ಮೋಡಗಳ ಮಧ್ಯದಿಂದ ಇಣುಕುತ್ತಿರುವ ಶ್ರೀಮಾನ್ ಸೂರ್ಯನು ಬೆಳಗುತ್ತಿರುವಂತೆ ಕಂಡನು. ಅಗ್ನಿಯು ಕೊಟ್ಟಿದ್ದ ಕುಕ್ಕುಟವು ಧ್ವಜವನ್ನು ಅಲಂಕರಿಸಿ ರಥದ ಮೇಲೆ ಹಾರಿ ಕುಳಿತುಕೊಂಡು ಕಾಲಾಗ್ನಿಯಂತೆ ಕೆಂಪಾಗಿ ಹೊಳೆಯುತ್ತಿತ್ತು. ಅವನ ಶರೀರದೊಂದಿಗೇ ಹುಟ್ಟಿದ್ದ ಕವಚವನ್ನು ದೇವನಿಗೆ ಯುದ್ಧದಲ್ಲಿ ಸದಾ ಜಯವನ್ನು ತರುವ ಶಕ್ತಿಯು ಪ್ರವೇಶಿಸಿತು. ಶಕ್ತಿ, ವರ್ಮ, ಬಲ, ತೇಜಸ್ಸು, ಕಾಂತತ್ವ, ಸತ್ಯ, ಅಕ್ಷತಿ, ಬ್ರಹ್ಮಣ್ಯತ್ಯ, ಅಸಮ್ಮೋಹ, ಭಕ್ತರ ಪರಿರಕ್ಷಣೆ, ಶತ್ರುಗಳ ನಾಶ ಮತ್ತು ಲೋಕಗಳ ರಕ್ಷಣೆ ಇವು ಎಲ್ಲವೂ



ಸ್ಕಂದನ ಜೊತೆಗೇ ಹುಟ್ಟಿದವು. ಹೀಗೆ ಎಲ್ಲ ದೇವಗಣಗಳಿಂದ ಅವನು ಅಭಿಷಿಕ್ತನಾಗಿ, ಸ್ವಲಂಕೃತನಾಗಿ, ಸುಮನಸ್ಕನೂ ಪ್ರತೀತನೂ ಆಗಿ ಪರಿಪೂರ್ಣ ಚಂದ್ರನಂತೆ ತೋರಿದನು. ಇಷ್ಟಿಗಳಿಂದ, ಸ್ವಾಧ್ಯಾಯಘೋಷಗಳಿಂದ, ದೇವತೂರ್ಯರವಗಳಿಂದ, ದೇವಗಂಧರ್ವಗೀತಗಳಿಂದ, ಎಲ್ಲ ಅಪ್ಸರ ಗಣಗಳಿಂದ, ಇವರು ಮತ್ತು ಇನ್ನೂ ಇತರ ವಿವಿಧ ಹೃಷ್ಟ-ತುಷ್ಟರಾದ, ಅಲಂಕೃತರಾದ, ಆಡುತ್ತಿದ್ದಾರೋ ಎಂದು ತೋರುತ್ತಿದ್ದ ದೇವತೆಗಳಿಂದ ಪಾವಕಿಯು ಅಭಿಷಿಕ್ತನಾದನು.

ಅಭಿಷಿಕ್ತನಾದ ಮಹಾಸೇನನು ದಿವೌಕಸರಿಗೆ ಕತ್ತಲೆಯನ್ನು ಕೊಂದು ಉದಯಿಸುವ ಸೂರ್ಯನಂತೆ ತೋರಿದನು. ಆಗ ಸರ್ವ ದೇವಸೇನೆಯೂ ನೀನು ನಮ್ಮ ಒಡೆಯನೆಂದು ಹೇಳುತ್ತಾ ಸಹಸ್ರಾರು ಸಂಖ್ಯೆಗಳಲ್ಲಿ ಅವನನ್ನು ಸುತ್ತುವರೆದು ನಿಂತರು. ಭಗವಾನನು ಸುತ್ತುವರೆದು ಅರ್ಚಿಸುತ್ತಿದ್ದ, ಸ್ತುತಿಸುತ್ತಿದ್ದ ಸರ್ವಭೂತಗಣಗಳ ಬಳಿಸಾರಿ ಅವರನ್ನು ಸಂತವಿಸತೊಡಗಿದನು. ಸ್ಕಂದನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿದ ಶತಕ್ರತುವು ತನ್ನಿದ ಬಿಡುಗಡೆಗೊಳಿಸಲ್ಪಟ್ಟಿದ್ದ ದೇವಸೇನೆಯನ್ನು ನೆನಪಿಸಿಕೊಂಡನು. ಇವನೇ ಸ್ವಯಂ ಬ್ರಹ್ಮನು ಅವಳಿಗೆ ವಿಹಿಸಿದ ಪತಿಯೆಂದು ಆಲೋಚಿಸಿ ಸ್ವಲಂಕೃತಳಾದ ದೇವಸೇನೆಯನ್ನು ಕರೆಯಿಸಿದನು. ಆಗ ಬಲಭಿದಿಯು ಸ್ಕಂದನಿಗೆ ಹೇಳಿದನು:


2012/03/

“ಸುರೋತ್ತಮ! ಈ ಕನ್ಯೆಯನ್ನು ನೀನು ಹುಟ್ಟುವ ಮೊದಲೇ ನಿನ್ನ ಪತ್ನಿಯೆಂದು ಸ್ವಯಂಭುವು ನಿರ್ದಿಷ್ಟಗೊಳಿಸಿದ್ದನು. ಆದುದರಿಂದ ಪದ್ಮವರ್ಚಸಳಾದ ಈ ದೇವಿಯ ಕೈಯನ್ನು ಮಂತ್ರಪುರಸ್ಕೃತವಾಗಿ ವಿಧಿವತ್ತಾಗಿ ನಿನ್ನ ಬಲಕೈಯಿಂದ ಹಿಡಿ.”

ಹೀಗೆ ಹೇಳಲು ಅವನು ಯಥಾವಿಧಿಯಾಗಿ ಅವಳ ಪಾಣಿಗ್ರಹಣಮಾಡಿಕೊಂಡನು. ಮಂತ್ರಗಳನ್ನು ತಿಳಿದಿದ್ದ ಬೃಹಸ್ಪತಿಯು ಮಂತ್ರಗಳನ್ನು ಉಚ್ಚರಿಸಿ ಯಾಜಿಸಿದನು. ಹೀಗೆ ದೇವಸೇನೆಯೆಂದು ಬುಧರಿಗೆ ತಿಳಿದವಳು, ಷಷ್ಠಿಯೆಂದು ಬ್ರಾಹ್ಮಣರು ಕರೆಯುವ, ಲಕ್ಷ್ಮೀ, ಆಶಾ, ಸುಖಪ್ರದಾ, ಸಿನೀವಾಲೀ, ಕುಹೂ, ಸದ್ವೃತ್ತಿ, ಅಪರಾಜಿತಳು ಸ್ಕಂದನ ರಾಣಿಯಾದಳು. ಸ್ಕಂದನನ್ನು ಶಾಶ್ವತ ಪತಿಯನ್ನಾಗಿ ಪಡೆದ ದೇವಸೇನೆ, ದೇವೀ ಲಕ್ಷ್ಮಿಯು ಸ್ವಯಂ ಶರೀರಿಣಿಯಾಗಿ ಅವನನ್ನು ಆಶ್ರಯಿಸಿದಳು. ಪಂಚಮಿಯಂದು ಸ್ಕಂದನು ಶ್ರೀಮಂತನಾದುದರಿಂದ ಅದು ಶ್ರೀಪಂಚಮಿಯೆಂದು ನೆನಪಿನಲ್ಲಿದೆ. ಮತ್ತು ಷಷ್ಠಿಯಂದು ಅವನು ಕೃತಾರ್ಥನಾದುದರಿಂದ ಷಷ್ಠಿಯನ್ನು ಮಹಾತಿಥಿಯೆಂದು ಪರಿಗಣಿಸುತ್ತಾರೆ.

ಮಹಾಸೇನನನ್ನು ಶ್ರೀಯು ಆರಿಸಿದ ಮತ್ತು ಅವನು ದೇವಸೇನಾಪತಿಯಾದ ನಂತರ ಸಪ್ತರ್ಷಿಗಳ ಆರು ದೇವಿ ಪತ್ನಿಯರು ಅವನ ಬಳಿ ಆಗಮಿಸಿದರು. ಆ ಧರ್ಮಯುಕ್ತ ಮಹಾವ್ರತರು

ಋಷಿಗಳಿಂದ ಪರಿತ್ಯಕ್ತರಾಗಿದ್ದರು. ಅವರು ಬೇಗನೇ ಪ್ರಭು ದೇವಸೇನಾಪತಿಯ ಬಳಿಬಂದು ಅವನಿಗೆ ಹೇಳಿದರು:

"ಪುತ್ರ! ಅಕಾರಣವಾಗಿ ನಾವು ದೇವಸಮ್ಮತರಾದ ನಮ್ಮ ಪತಿಗಳಿಂದ ಪರಿತ್ಯಕ್ತರಾಗಿದ್ದೇವೆ. ರೋಷಗೊಂಡು ನಮ್ಮನ್ನು ಪುಣ್ಯಸ್ಥಾನದಿಂದ ತಳ್ಳಿದ್ದಾರೆ. ಕೆಲವರು ನಾವೇ ನಿನ್ನನ್ನು ಹುಟ್ಟಿಸಿದೆವು ಎಂದು ಅಪವಾದವನ್ನು ಹಬ್ಬಿಸಿದರು. ಅವರು ಆ ಅಸತ್ಯವನ್ನು ಕೇಳಿ ನಡೆದುಕೊಂಡರು. ಆದುದರಿಂದ ನೀನು ನಮ್ಮನ್ನು ಪಾರುಮಾಡಬೇಕು. ಪ್ರಭೋ! ನಾವು ನಿನ್ನನ್ನು ಪುತ್ರನನ್ನಾಗಿ ಮಾಡಿಕೊಳ್ಳಲು ಬಯಸುತ್ತೇವೆ. ನಿನ್ನ ಈ ಪ್ರಸಾದದಿಂದ ನಮಗೆ ಅಕ್ಷಯ ಸ್ವರ್ಗಸ್ತ್ವವು ದೊರೆಯುತ್ತದೆ. ಇದನ್ನು ಮಾಡಿ ನೀನು ಅನೃಣನಾಗು."

ಸ್ಕಂದನು ಹೇಳಿದನು:

"ತಾಯಂದಿರೇ! ನಾನು ನಿಮ್ಮ ಮಗನಾಗುತ್ತೇನೆ. ನೀವು ಬಯಸಿದುದೆಲ್ಲವೂ ಹಾಗೆಯೇ ಆಗುತ್ತದೆ."

ಹೀಗೆ ಹೇಳಿದ ನಂತರ ಅವನು ಶಕ್ರನಿಗೆ ಈಗ ಏನು ಮಾಡೋಣವೆಂದು ಕೇಳಿದನು. ಸ್ಕಂದನ ಮಾತಿಗೆ ಅವನು ವಿಶ್ವಾಸದಿಂದ ಹೇಳಿದನು:

"ದೇವಿ ಕನ್ಯೆ ಅಭಿಜಿತಳು ಅಕ್ಕ ರೋಹಿಣಿಯೊಡನೆ

ಸ್ಪರ್ಧಿಸುತ್ತಾ ಹಿರಿಯತನವನ್ನು ಬಯಸಿ ತಪಸ್ಸನ್ನು ಮಾಡಲು ವನಕ್ಕೆ ತೆರಳಿದ್ದಾಳೆ. ಗಗನದಿಂದ ಕೆಳಗುರುಳಿದ ಈ ನಕ್ಷತ್ರದ ಕುರಿತಾಗಿ ನನಗೇನೂ ತೋಚದಾಗಿದೆ. ನಿನಗೆ ಮಂಗಳವಾಗಲಿ. ಸ್ಕಂದ! ಬ್ರಹ್ಮನೊಂದಿಗೆ ಸಮಾಲೋಚಿಸಲು ಇದು ಉತ್ತಮ ಕಾಲವಾಗಿದೆ. ಧನಿಷ್ಠಾದಿ ನಕ್ಷತ್ರಗಳನ್ನು ಕಾಲಾಂತರದಲ್ಲಿ ಬ್ರಹ್ಮನು ನಿರ್ಮಿಸಿದ್ದನು. ಹಿಂದೆಯೇ ರೋಹಿಣಿಯು ಈ ಗುಂಪಿನಲ್ಲಿ ಸೇರಿಕೊಂಡಿದ್ದಳು."

ಶಕ್ರನು ಹೀಗೆ ಹೇಳಲು ಕೃತ್ತಿಕೆಯರು ತ್ರಿದಿವಕ್ಕೆ ಹೋಗಿ ಶಕಟಾಕಾರದ ನಕ್ಷತ್ರವಾಗಿ ಮಿಂಚಿದರು. ಅಗ್ನಿಯು ಅವರ ದೇವತೆಯಾದನು. ವಿನತೆಯೂ ಕೂಡ ಸ್ಕಂದನಿಗೆ ಹೇಳಿದಳು:

"ನೀನು ನನಗೆ ಪಿಂಡವನ್ನು ನೀಡುವ ಮಗನಾಗು. ಪುತ್ರ! ನಾನು ಸದಾ ನಿನ್ನ ಜೊತೆ ವಾಸಿಸಲು ಬಯಸುತ್ತೇನೆ."

ಸ್ಕಂದನು ಹೇಳಿದನು:

"ನಿನಗೆ ನಮಸ್ಕಾರ! ಹಾಗೆಯೇ ಆಗಲಿ! ಪುತ್ರಸ್ನೇಹದಿಂದ ನನಗೆ ಮಾರ್ಗದರ್ಶನ ನೀಡು. ದೇವೀ! ಸೊಸೆಯಿಂದ ಪೂಜಿಸಿಕೊಂಡು ಸದಾ ನೀನು ನನ್ನೊಂದಿಗೆ ವಾಸಿಸುತ್ತೀಯೆ."

ಆಗ ಮಾತೃಗಣಗಳೆಲ್ಲವೂ ಸ್ಕಂದನಿಗೆ ಹೇಳಿದರು:

"ನಾವು ಸರ್ವಲೋಕಗಳ ಮಾತರರೆಂದು ಕವಿಗಳು

ಸ್ತುತಿಸುತ್ತಾರೆ. ನಾವು ನಿನ್ನ ಮಾತರರೆಂದೂ ಪೂಜಿಸಿಕೊಳ್ಳಲು ಬಯಸುತ್ತೇವೆ."

ಸ್ಕಂದನು ಹೇಳಿದನು:

"ನೀವು ನನ್ನ ಮಾತರರಾಗುವಿರಿ. ನಾನು ನಿಮ್ಮ ಮಗನಾಗುತ್ತೇನೆ. ನಿಮಗಿಷ್ಟವಾದ ಏನನ್ನು ನಾನು ಮಾಡಲಿ ಹೇಳಿ!"

ಮಾತರರು ಹೇಳಿದರು:

"ಹಿಂದೆ ಯಾರನ್ನು ಈ ಲೋಕಗಳ ಮಾತರರೆಂದು ಪರಿಕಲ್ಪಿಸಲಾಗಿತ್ತೋ ಅವರ ಆ ಸ್ಥಾನವು ನಮಗೆ ದೊರಕುವಂತಾಗಲಿ. ಅವರಿಗೆ ಅದು ಇಲ್ಲದಂತಾಗಲಿ. ಅವರಿಂದ ನಾವು ಲೋಕಗಳಲ್ಲಿ ಪೂಜಿತರಾಗಲಿ. ನಿನ್ನಿಂದಾಗಿ ತೀರಿಕೊಂಡ ನಮ್ಮ ಮಕ್ಕಳನ್ನು ಹಿಂದಿರುಗಿಸು."

ಸ್ಕಂದನು ಹೇಳಿದನು:

"ನೀವು ಹಿಂದೆ ಕಳೆದುಕೊಂಡ ಮಕ್ಕಳನ್ನು ಹಿಂದೆ ಪಡೆಯಲು ಶಕ್ಯವಿಲ್ಲ. ನೀವು ಬಯಸುವ ಅನ್ಯಮಕ್ಕಳನ್ನು ನೀಡುತ್ತೇನೆ."

ಮಾತರರು ಹೇಳಿದರು:

"ನಿನ್ನ ಜೊತೆಯಿದ್ದು ಬೇಕಾದ ರೂಪಗಳನ್ನು ತಳೆದು ಆ

ಮಾತರರ ಮಕ್ಕಳನ್ನು ತಿನ್ನಲು ಬಯಸುತ್ತೇವೆ. ಅದನ್ನು ನೀಡು.”

ಸ್ಕಂದನು ಹೇಳಿದನು:

“ಮಕ್ಕಳನ್ನು ಕೊಡುತ್ತೇನೆ. ಆದರೆ ನೀವು ಹೇಳಿದುದನ್ನು ಕೊಡುವುದು ಕಷ್ಟ. ನಿಮಗೆ ಮಂಗಳವಾಗಲಿ. ಮಕ್ಕಳಿಗೆ ನೀವು ನಮಸ್ಕೃತರಾಗಿ ಚೆನ್ನಾಗಿ ಪರಿರಕ್ಷಸಿ.”

ಮಾತರರು ಹೇಳಿದರು:

“ಸ್ಕಂದ! ನಿನಗೆ ಮಂಗಳವಾಗಲಿ! ನೀನು ಬಯಸಿದಂತೆ ಮಕ್ಕಳನ್ನು ರಕ್ಷಿಸುತ್ತೇವೆ. ನಾವು ಸದಾ ನಿನ್ನೊಡನೆ ವಾಸಿಸಲು ಬಯಸುತ್ತೇವೆ.”

ಸ್ಕಂದನು ಹೇಳಿದನು:

“ಮಕ್ಕಳು ಹದಿನಾರು ವರ್ಷದ ತರುಣರಾಗುವವರೆಗೆ ವಿವಿಧ ರೂಪಗಳಿಂದ ನೀವು ಮನುಷ್ಯರನ್ನು ಪ್ರಬಾಧಿಸಿ. ನಾನು ಕೂಡ ನಿಮಗೆ ಅವ್ಯಯವಾದ ರೌದ್ರ ಆತ್ಮವನ್ನು ದಯಪಾಲಿಸುತ್ತೇನೆ. ಮಕ್ಕಳ ಸಹಿತ ಪೂಜಿತರಾಗಿ ಪರಮ ಸುಖವನ್ನು ಪಡೆಯುತ್ತೀರಿ.”

ಆಗ ಸ್ಕಂದನ ಶರೀರದಿಂದ ಮನುಷ್ಯರ ಮಕ್ಕಳನ್ನು ತಿನ್ನುವ ಕಾಂಚನಪ್ರಭೆಯ ಮಹಾಬಲಶಾಲಿ ಪುರುಷನು ಹೊರಬಿದ್ದನು. ಅವನು

ಹಸಿವೆಯಿಂದ ಮೂರ್ಛಿತನಾಗಿ ನೆಲದಮೇಲೆ ಬಿದ್ದನು. ಸ್ಕಂದನ ಆಜ್ಞೆಯಂತೆ ಅವನು ರೌದ್ರರೂಪದ ಗ್ರಹವಾದನು. ದ್ವಿಜಸತ್ತಮರು ಈ ಗ್ರಹವನ್ನು ಸ್ಕಂದಾಪಸ್ಮಾರವೆಂದು ಕರೆಯುತ್ತಾರೆ. ವಿನತೆಯನ್ನು ಮಹಾರೌದ್ರ ಶಕುನಿಗ್ರಹವೆಂದು ಹೇಳುತ್ತಾರೆ. ತಿಳಿದವರು ಪೂತನಿ ರಾಕ್ಷಸಿಯನ್ನು ಪೂತನಾಗ್ರಹವೆಂದು ಹೇಳುತ್ತಾರೆ. ದಾರುಣರೂಪೀ, ಘೋರರೂಪೀ, ನಿಶಾಚರೀ, ಪಿಶಾಚೀ, ದಾರಣಾಕಾರಿಣೀ ಶೀತಪೂತನಾ ಘೋರದರ್ಶನಳು ಮನುಷ್ಯರ ಗರ್ಭಗಳನ್ನು ಅಪಹರಿಸುತ್ತಾಳೆ. ರೇವತಿಯೆಂದೂ ಕರೆಯಲ್ಪಡುವ ಅದಿತಿಯ ಗ್ರಹವನ್ನು ರೈವತವೆಂದು ಕರೆಯುತ್ತಾರೆ. ಈ ಘೋರ ಮಹಾಗ್ರಹವೂ ಕೂಡ ಬಾಲ ಶಿಶುಗಳನ್ನು ಬಾಧಿಸುತ್ತದೆ. ದೈತ್ಯರ ಮಾತೆ ದಿತಿಯನ್ನು ಮುಖಮಂಡಿಕಾ ಎಂದು ಕರೆಯುತ್ತಾರೆ. ಈ ದುರಾಸದಳು ಶಿಶುಮಾಂಸದಿಂದ ಸಂತುಷ್ಟಳಾಗುತ್ತಾಳೆ. ಸ್ಕಂದನಿಂದ ಹುಟ್ಟಿದ ಕುಮಾರ ಕುಮಾರಿಯರು ಎಲ್ಲರೂ ಮಹಾಗ್ರಹಗಳಾಗಿ ಗರ್ಭವನ್ನು ತಿನ್ನುವವು ಎಂದು ಹೇಳುತ್ತಾರೆ. ಅವರೇ ಆ ಕುಮಾರಿಯರ ಪತಿಗಳೆಂದು ಹೇಳುತ್ತಾರೆ. ಆ ರೌದ್ರಕರ್ಮಿಗಳು ತಿಳಿಯದಂತೆ ಬಾಲಕರನ್ನು ಹಿಡಿಯುತ್ತಾರೆ. ಗೋವುಗಳ ಮಾತೆಯೆಂದು ಪ್ರಾಜ್ಞರಿಂದ ಕರೆಯಲ್ಪಡುವ ಸುರಭಿಯು ಶಕುನಿಯನ್ನೇರಿ ಅವಳೊಡನೆ ಭೂಮಿಯಲ್ಲಿ ಶಿಶುಗಳನ್ನು ಭಕ್ಷಿಸುತ್ತಾಳೆ. ನಾಯಿಗಳ ಮಾತೆ ಸರಮಾ ಎಂಬ ಹೆಸರಿನ ದೇವಿಯೂ ಕೂಡ ಸದಾ ಮನುಷ್ಯರ ಗರ್ಭಗಳನ್ನು ಕೊಲ್ಲುತ್ತಾಳೆ. ವೃಕ್ಷಗಳ ಮಾತಾ ಕರಂಜನಿಲಯಾ. ಆ ಕರಂಜೆಗೆ ಪುತ್ರಾರ್ಥಿಗಳಾದ

ನರರು ನಮಸ್ಕರಿಸುತ್ತಾರೆ. ಮಾಂಸ ಮತ್ತು ಮದಿರಗಳ ಪ್ರಿಯರಾದ ಈ ಹದಿನೆಂಟು ಗ್ರಹಗಳು ಮತ್ತು ಇತರರು ಸೂತಿಕಾಗೃಹದಲ್ಲಿ ಸತತವಾಗಿ ಹತ್ತುರಾತ್ರಿಗಳು ನಿಂತಿರುತ್ತಾರೆ. ಕದ್ರುವು ಸೂಕ್ಷರೂಪವನ್ನು ತಳೆದು ಗರ್ಭಿಣಿಯನ್ನು ಪ್ರವೇಶಿಸಿ ಅಲ್ಲಿ ಅವಳು ಗರ್ಭವನ್ನು ನಾಶಪಡಿಸಿ ನಾಗವನ್ನು ಹುಟ್ಟಿಸುತ್ತಾಳೆ. ಗಂಧರ್ವರ ಮಾತೆಯು ಗರ್ಭವನ್ನು ಅಪಹರಿಸಿಕೊಂಡು ಹೋಗುತ್ತಾಳೆ. ಆಗ ಅದು ಭೂಮಿಯಲ್ಲಿ ಮನುಷ್ಯರ ಗರ್ಭಪಾತವಾಗಿ ಕಾಣುತ್ತದೆ. ಅಪ್ಸರರ ತಾಯಿಯು ಗರ್ಭವನ್ನು ತೆಗೆಯುತ್ತಾಳೆ. ತಿಳಿದವರು ಅದನ್ನು ಕುಳಿತ ಗರ್ಭವೆಂದು ಕರೆಯುತ್ತಾರೆ. ಕೆಂಪುಸಮುದ್ರನ ಮಗಳು ಸ್ಕಂದನ ಧಾತ್ರಿಯೆಂದು ಹೇಳುತ್ತಾರೆ. ಅವಳನ್ನು ಲೋಹಿತಾಯನಿಯೆಂದು ಕದಂಬದಲ್ಲಿ ಪೂಜಿಸುತ್ತಾರೆ. ಪುರುಷರಲ್ಲಿ ರುದ್ರನು ಹೇಗೋ ಹಾಗೆ ಆರ್ಯೆಯು ಸ್ತ್ರೀಯರಲ್ಲಿ ಕಾರ್ಯನಡೆಸುತ್ತಾಳೆ. ಆರ್ಯಳು ಎಲ್ಲಾ ಕುಮಾರರ ಮಾತೆ ಮತ್ತು ಅವರ ರಕ್ಷಣೆಗಾಗಿ ಪೂಜಿತಳಾಗಿದ್ದಾಳೆ. ನಾನು ಹೇಳಿದ ಈ ಮಹಾಗ್ರಹಗಳು ಕುಮಾರರನ್ನು ಹದಿನಾರು ವರ್ಷಗಳವರೆಗೆ ಕಾಡುತ್ತವೆ ಮತ್ತು ಅದರ ನಂತರ ಅವರ ಮಂಗಳಕ್ಕಾಗಿ ಕೆಲಸಮಾಡುತ್ತಾರೆ. ನಾನು ಹೇಳಿದ ಮಾತೃಗಣಗಳಲ್ಲಿ ಪುರುಷರೂ ಸೇರಿದ್ದಾರೆ. ಈ ಎಲ್ಲ ಗ್ರಹಗಳೂ ಸ್ಕಂದಗ್ರಹಗಳೆಂದು ಕರೆಯಲ್ಪಟ್ಟು ನಿತ್ಯವೂ ಶರೀರಗಳಲ್ಲಿರುತ್ತಾರೆ. ಅವರ ಪ್ರಶಮನಕಾರ್ಯವನ್ನು ಸ್ನಾನ, ಧೂಪ, ದೀಪ, ಬಲಿಕರ್ಮೋಪಹಾರಗಳಿಂದ ಮತ್ತು ವಿಶೇಷವಾಗಿ ಸ್ಕಂದನ ಪೂಜೆಯಿಂದ ಮಾಡಬಹುದು. ಈ ರೀತಿ ಅವರನ್ನು

ಪೂಜಿಸುವುದರಿಂದ ಎಲ್ಲರೂ ನರರಿಗೆ ಶುಭ, ಆಯಸ್ಸು, ವೀರ್ಯ, ಉತ್ತಮ ಗೌರವ ಪದವಿಗಳನ್ನು ನೀಡುತ್ತಾರೆ.

ಯಾವ ನರನು ಜಾಗ್ರತನಾಗಿರುವಾಗ ಮತ್ತು ಮಲಗಿರುವಾಗ ಕೂಡ ದೇವನನ್ನು ಕಾಣುತ್ತಾನೋ ಅವನು ಉನ್ಮಾದದಲ್ಲಿರುತ್ತಾನೆ. ಆಗ ಅದು ದೇವಗ್ರಹವೆಂದು ತಿಳಿಯಬೇಕು. ಕುಳಿತಿರುವಾಗ ಮತ್ತು ಮಲಗಿರುವಾಗ ಯಾವ ನರನು ಪಿತೃಗಳನ್ನು ಕಾಣುತ್ತಾನೋ ಅವನ ಪಿತೃಗ್ರಹದ ಉನ್ಮಾದದಲ್ಲಿದ್ದಾನೆ ಎಂದು ಬೇಗನೆ ತಿಳಿಯಬೇಕು. ಯಾರು ಸಿದ್ಧರನ್ನು ಅವಮಾನಿಸಿ ಅವರ ಸಿಟ್ಟಿನಿಂದ ಶಾಪವನ್ನು ಪಡೆದು ಉನ್ಮಾದಹೊಂದುತ್ತಾರೋ ಅವರನ್ನು ಸಿದ್ಧಗ್ರಹವು ಪೀಡಿಸುತ್ತಿದ್ದೆ ಎಂದು ತಿಳಿಯಬೇಕು. ಯಾರು ವಿವಿಧರೀತಿಯ ವಾಸನೆಗಳನ್ನು ಮತ್ತು ರುಚಿಗಳನ್ನು ಪದೇ ಪದೇ ಅನುಭವಿಸಿ ಉನ್ಮಾದದಲ್ಲಿತ್ತಾರೋ ಅದು ರಾಕ್ಷಸಗ್ರಹವೆಂದು ತಿಳಿಯಬೇಕು. ದಿವ್ಯ ಗಂಧರ್ವರೂ ಕೂಡ ಭೂಮಿಯಲ್ಲಿರುವ ನರರನ್ನು ಮುಟ್ಟಿ ಉನ್ಮಾದಗೊಳಿದರೆ ಅದು ಗಾಂಧರ್ವಗ್ರಹವೇ ಸರಿ. ಕಾಲಪರ್ಯಯದಲ್ಲಿ ಯಕ್ಷರು ಯಾವ ಪುರುಷರನ್ನು ಆವೇಶಗೊಂಡು ಉನ್ಮಾದಿಸುತ್ತಾರೋ ಅದನ್ನು ಯಕ್ಷಗ್ರಹವೆಂದು ತಿಳಿದುಕೊಳ್ಳಬೇಕು. ಪಿಶಾಚಿಗಳು ನಿತ್ಯವೂ ಯಾರಾದರೂ ಪುರುಷರನ್ನು ಏರಿ ಉನ್ಮಾದಗೊಳಿಸುತ್ತಾರೆ. ಆಗ ಅದನ್ನು ಪೈಶಾಚ ಗ್ರಹವೆಂದು ತಿಳಿಯಬೇಕು. ದೋಷಗಳ ಪ್ರಕೋಪದಿಂದ ಚಿತ್ತವನ್ನು ಕಳೆದುಕೊಂಡು ಉನ್ಮಾದದಲ್ಲಿರುವವನಿಗೆ ಕ್ಷಿಪ್ರವಾಗಿ ಶಾಸ್ತ್ರಗಳಲ್ಲಿರುವಂತೆ ಸಾಧನಗಳನ್ನು ಮಾಡಬೇಕು.

ಘೋರರೂಪಿಗಳನ್ನು ನೋಡಿ ಭಯದಿಂದ ಹುಚ್ಚಾಗಿ ಓಡಿಕೊಂಡು ಉನ್ಮಾದದಲ್ಲಿರುವವರನ್ನು ಬೇಗನೇ ಸತ್ವವನ್ನು ನೀಡುವ ಸಾಧನವನ್ನು ಮಾಡಬೇಕು. ಕೆಲವು ಆಟವಾಡುವ ಆಸೆಯನ್ನಿಟ್ಟುಕೊಂಡಿರುತ್ತವೆ, ಇನ್ನು ಕೆಲವು ಭೋಗಿಸಲು ಬಯಸುತ್ತವೆ ಮತ್ತು ಅನ್ಯರು ಅಭಿಕಾಮಿಸುತ್ತವೆ. ಈ ರೀತಿ ಮೂರು ವಿಧದ ಗ್ರಹಗಳಿವೆ. ಮನುಷ್ಯನಿಗೆ ಎಪ್ಪತ್ತುವರ್ಷಗಳಾಗುವವರೆಗೆ ಈ ಗ್ರಹಗಳು ಇರುತ್ತವೆ. ಅದರ ನಂತರ ದೇಹಿಗಳಿಗೆ ಜ್ವರವೇ ಗ್ರಹಗಳ ಸಮಾನವಾಗಿರುತ್ತದೆ. ಇಂದ್ರಿಯಗಳನ್ನು ಹರಡದೇ ಇಟ್ಟುಕೊಳ್ಳುವುದರಿಂದ, ತಾಳ್ಮೆಯಿಂದಿರುವುದರಿಂದ, ಶುಚಿಯಾಗಿರುವುದರಿಂದ, ನಿತ್ಯವೂ ಆಸ್ತಿಕರನ್ನು, ಶದ್ಧೆ, ದಾನಗಳನ್ನು ಮಾಡುವವರನ್ನು ಸದಾ ಗ್ರಹಗಳು ತೊರೆಯುತ್ತವೆ. ಮನುಷ್ಯರ ಬಳಿಬರುವ ಈ ಗ್ರಹಗಳ ಕುರಿತು ನಾನು ಹೇಳಿದ್ದೇನೆ. ದೇವ ಮಹೇಶ್ವರನ ಭಕ್ತ ನರರನ್ನು ಗ್ರಹಗಳು ಮುಟ್ಟುವುದಿಲ್ಲ. ಸ್ಕಂದನು ಈ ರೀತಿ ಮಾತೃಗಳಿಗೆ ಪ್ರಿಯವಾದುದನ್ನು ಮಾಡಲು ಸ್ವಾಹಾಳು ಅವನಿಗೆ ಹೇಳಿದಳು:

> “ನೀನು ನನ್ನ ಔರಸ ಪುತ್ರ. ನೀನು ನನ್ನ ಪ್ರೀತಿಯ ಪರಮ ದುರ್ಲಭವಾದುದನ್ನು ಕೊಡಬೇಕೆಂದು ಬಯಸುತ್ತೇನೆ.”

ಅದಕ್ಕೆ ಸ್ಕಂದನು ಅವಳಿಗೆ ಕೇಳಿದನು:

> “ನಿನಗೆ ಪ್ರೀತಿಯಾದ ಏನನ್ನು ಬಯಸುತ್ತೀಯೆ?”

ಸ್ವಾಹಾಳು ಹೇಳಿದಳು:

“ಮಹಾಭುಜ! ನಾನು ದಕ್ಷನ ಪ್ರಿಯ ಕನ್ಯೆ. ಹೆಸರು ಸ್ವಾಹಾ. ಬಾಲ್ಯದಿಂದಲೂ ನಾನು ಸದಾ ಹುತಾಶನನನ್ನು ಕಾಮಿಸಿದ್ದೆ. ಆದರೆ ಪಾವಕನು ಈ ಕಾಮಿನಿಯನ್ನು ಅರ್ಥಮಾಡಿಕೊಂಡಿಲ್ಲ. ನಾನು ಅಗ್ನಿಯೊಂದಿಗೆ ಶಾಶ್ವತವಾಗಿ ವಾಸಿಸಲು ಇಚ್ಛಿಸುತ್ತೇನೆ.”

ಸ್ಕಂದನು ಹೇಳಿದನು:

“ದೇವಿ! ಇಂದಿನಿಂದ ಒಳ್ಳೆಯ ನಡತೆಯ ಸತ್ಯದ ಮಾರ್ಗದಲ್ಲಿ ನೆಲೆಸಿರುವ ದ್ವಿಜರು ಮಂತ್ರಪುರಸ್ಕೃತವಾದ ಏನು ಹವ್ಯಕವ್ಯಗಳನ್ನು ಮಾಡಿ ಅಗ್ನಿಯಲ್ಲಿ ಹವಿಸ್ಸನ್ನು ಹೋಮಿಸುತ್ತಾರೋ ಆಗ ಸದಾ ಸ್ವಾಹಾ ಎಂದು ಹೇಳಿಯೇ ಹಾಕಲಿ. ಹೀಗೆ ನೀನು ಸದಾ ಅಗ್ನಿಯ ಜೊತೆಯಲ್ಲಿ ವಾಸಿಸಿರುವೆ.”

ಹೀಗೆ ಸ್ಕಂದನಿಂದ ಪೂಜಿತಳಾಗಿ ತೃಪ್ತಳಾದ ಸ್ವಾಹಾಳು ಪತಿ ಪಾವಕನನ್ನು ಸೇರಿ ಸ್ಕಂದನನ್ನು ಗೌರವಿಸಿದಳು. ಆಗ ಪ್ರಜಾಪತಿ ಬ್ರಹ್ಮನು ಮಹಾಸೇನನಿಗೆ ಹೇಳಿದನು:

“ನಿನ್ನ ತಂದೆ ತ್ರಿಪುರಾರ್ದನ ಮಹಾದೇವನಲ್ಲಿಗೆ ಹೋಗು! ರುದ್ರನು ಅಗ್ನಿಯನ್ನು ಸಮಾವೇಶಗೊಂಡು ಮತ್ತು ಉಮೆಯು ಸ್ವಾಹಾಗಳನ್ನು ಆವೇಶಗೊಂಡು ಸರ್ವಲೋಕಗಳ ಹಿತಕ್ಕಾಗಿ ಅಪರಾಜಿತನಾದ ನಿನ್ನನ್ನು ಹುಟ್ಟಿಸಿದ್ದಾರೆ. ಮಹಾತ್ಮ ರುದ್ರನ

ಶುಕ್ರವು ಉಮೆಯ ಯೋನಿಯನ್ನು ಸೇರಿದಾಗ ಅದು ಇಲ್ಲಿ ಬಿದ್ದು ಮಿಂಜಿಕ ಮತ್ತು ಅಮಿಂಜಿಕಗಳೆಂಬ ಎರಡು ಗಿರಿಗಳಾದವು. ಆ ಶುಕ್ರದ ಒಂದು ಭಾಗವು ಕೆಂಪುಸಮುದ್ರದಲ್ಲಿ ಬಿದ್ದಿತು, ಇನ್ನೊಂದು ಭಾಗವು ಸೂರ್ಯನ ರಶ್ಮಿಗಳಲ್ಲಿ ಮತ್ತು ಇನ್ನೂ ಒಂದು ಭಾಗವು ಭೂಮಿಯ ಮೇಲೆ ಹೀಗೆ ಅದು ಐದು ಭಾಗಗಳಾಡಿ ಹರಡಿ ಚೆಲ್ಲಲ್ಪಟ್ಟಿತು. ಮಾಂಸಗಳನ್ನು ತಿನ್ನುವ ವಿವಿಧಾಕಾರಗಳ ಘೋರ ಪಾರಿಷಾದಾ ಎನ್ನುವ ನಿನ್ನ ಗಣವು ಇವುಗಳಿಂದಲೇ ಹುಟ್ಟಿದವೆಂದು ವಿದ್ವಾಂಸರು ತಿಳಿದಿರುತ್ತಾರೆ.”

ಹಾಗೆಯೇ ಆಗಲೆಂದು ಮಹಾಸೇನನು ಮಹೇಶ್ವರ, ಅಮೇಯಾತ್ಮ, ತಂದೆ, ಪಿತೃವತ್ಸಲನನ್ನು ಪೂಜಿಸಿದನು. ಧನಾರ್ಥಿಗಳು ಈ ಐದು ಗಣಗಳನ್ನು ಅರ್ಕಪುಷ್ಪಗಳಿಂದ ಪೂಜಿಸಬೇಕು. ವ್ಯಾಧಿಪ್ರಶಮನಕ್ಕಾಗಿಯೂ ಇವರ ಪೂಜೆಯನ್ನು ಆಚರಿಸಬೇಕು. ಚಿಕ್ಕ ಬಾಲಕರ ಹಿತವನ್ನು ಬಯಸುವವರು ರುದ್ರಸಂಭವರಾದ ಮಿಂಜಿಕ-ಅಮಿಂಜಿಕರನ್ನು ಸದಾ ನಮಸ್ಕರಿಸಬೇಕು. ಮಕ್ಕಳನ್ನು ಬಯಸುವವರು ಮನುಷ್ಯರ ಮಾಂಸವನ್ನು ತಿನ್ನುವ ವೃಕ್ಷಗಳಲ್ಲಿ ಹುಟ್ಟುವ ವೃದ್ಧಿಕಾ ಎಂಬ ಹೆಸರಿನ ಹೆಣ್ಣು ದೇವತೆಯನ್ನು ಸಮಸ್ಕರಿಸಬೇಕು. ಹೀಗೆ ಪಿಶಾಚಿಗಳು ಅಸಂಖ್ಯ ಗುಂಪುಗಳಲ್ಲಿ ವಿಂಗಡಣೆಗೊಂದಿದ್ದಾರೆಂದು ಕೇಳುತ್ತೇವೆ.

ಐರಾವತಕ್ಕೆ ವೈಜಂತ ಎನ್ನುವ ಎರಡು ಘಂಟೆಗಳಿವೆಯೆಂದು ಕೇಳಿದ್ದೇವೆ. ಸ್ವಯಂ ಧೀಮಂತ ಶಕ್ರನೇ ಅವುಗಳನ್ನು ತಂದು  ಗುಹನಿಗೆ ಕೊಟ್ಟನು. ಅದರಲ್ಲಿ ಒಂದು ವಿಶಾಖನಿಗೆ ಮತ್ತು ಇನ್ನೊಂದು ಸ್ಕಂದನಿಗಾಯಿತು. ಕಾರ್ತಿಕೇಯ ಮತ್ತು ವಿಶಾಖನ ಪತಾಕೆಗಳು ಕೆಂಪು ಬಣ್ಣದವು. ದೇವತೆಗಳು ಕೊಟ್ಟ ಆಟದ ಸಾಮಾನುಗಳಿಂದ ಮಹಾಬಲ ಮಹಾಸೇನ ದೇವನು ಸಂತೋಷಪಟ್ಟನು. ಪಿಶಾಚಿಗಳ ಗಣ ಮತ್ತು ದೇವಗಣಗಳಿಂದ ಸುತ್ತುವರೆಯಲ್ಪಟ್ಟ ಮತ್ತು ಶ್ರೀಯಿಂದ ಆವೃತನಾದ ಅವನು ಆ ಕಾಂಚನಗಿರಿಯಲ್ಲಿ ಬೆಳಗುತ್ತಾ ಶೋಭಾಯಮಾನನಾಗಿ ಕಂಡನು. ಕಂದರಗಳಿಂದ ಕೂಡಿದ, ಶುಭಕಾನನಗಳ ಆ ಮಂದರ ಶೈಲವು ಅಂಶುಮತ ಆದಿತ್ಯನಿಂದ ಹೇಗೋ ಹಾಗೆ ವೀರನಿಂದ ಶೋಭಿಸಿತು. ಹೂಬಿಟ್ಟ ಸಂತಾನಕ ವನಗಳಿಂದ, ಕರವೀರ ವನಗಳಿಂದ, ಪಾರಿಜಾತ ವನಗಳಿಂದ, ಜಪ ಮತ್ತು ಅಶೋಕವನಗಳಿಂದ, ಕದಂಬ ಮರಗಿಡಗಳಿಂದ, ದಿವ್ಯ ಮೃಗಗಣಗಳಿಂದ, ದಿವ್ಯ ಪಕ್ಷಿಗಣಗಳಿಂದ ಶ್ವೇತಪರ್ವತವು ಶೋಭಿಸುತ್ತಿತ್ತು. ಅಲ್ಲಿ ಎಲ್ಲ ದೇವಗಣಗಳೂ ಎಲ್ಲ ಮಹರ್ಷಿಗಳೂ ಇದ್ದರು. ಕ್ಷೋಭೆಗೆ ಸಿಲುಕಿದ ಸಮುದ್ರದ ಭೋರ್ಗರೆಯಂತೆ ಮೋಡಗಳ ಶಬ್ದವು ಕೇಳಿಬರುತ್ತಿತ್ತು. ಅಲ್ಲಿ ದಿವ್ಯ ಗಂಧರ್ವರು ಅಪ್ಸರೆಯರು ನೃತ್ಯಮಾಡುತ್ತಿದ್ದರು. ಅಲ್ಲಿದ್ದ ಭೂತಗಳ ಸಂತೋಷದಿಂದ ಮಹಾ ನಿನಾದವು ಕೇಳಿಬರುತ್ತಿತ್ತು. ಹೀಗೆ ಇಂದ್ರನೊಂದಿಗೆ ಸರ್ವ ಜಗತ್ತೂ ಶ್ವೇತಪರ್ವದ ಮೇಲಿತ್ತು. ಸ್ಕಂದನನ್ನು ನೋಡುತ್ತಾ ಸಂತೋಷಪಟ್ಟರು ಮತ್ತು ಅವನನ್ನು ನೋಡಿ

ಆಯಾಸಪಡಲಿಲ್ಲ.

## ಸ್ಕಂದನಿಂದ ಮಹಿಷಾಸುರನ ವಧೆ

ಭಗವಾನ್ ಪಾವಕಿಯು ಸೇನಾಧಿಪತಿಯಾಗಿ ಅಭಿಷಿಕ್ತನಾಗಲು ಸಂತೋಷಗೊಂಡ ಶ್ರೀಮಾನ್ ಪ್ರಭು ಹರನು ಪಾರ್ವತಿಯ ಸಹಿತ ಆದಿತ್ಯವರ್ಣದ ರಥದಲ್ಲಿ ಭದ್ರವಟದ ಕಡೆ ಪ್ರಯಾಣಿಸಿದನು. ಅವನ ಆ ಉತ್ತಮ ರಥಕ್ಕೆ ಸಾವಿರ ಸಿಂಹಗಳನ್ನು ಕಟ್ಟಲಾಗಿತ್ತು. ಕಾಲದಿಂದ ಪ್ರಚೋದಿತವಾಗಿ ಶುಭ್ರದಿವದಲ್ಲಿ ಉತ್ಪಪಾತಗಳು ಕಾಣಿಸಿದವು. ನಭದಲ್ಲಿ ಹೋಗುತ್ತಿದ್ದ, ಸುಂದರ ಕೇಸರಗಳನ್ನು ಹೊಂದಿದ್ದ ಸಿಂಹಗಳು ಗರ್ಜಿಸುತ್ತಿರಲು ಅವು ಆಕಾಶವನ್ನು ಕುಡಿಯುತ್ತಿರುವವೋ ಎನ್ನುವಂತೆ ಚರಾಚರಗಳನ್ನು ಹೆದರಿಸುತ್ತಾ ಹೋಗುತ್ತಿದ್ದವು. ಆ ರಥದಲ್ಲಿ ಉಮೆಯ ಸಹಿತ ನಿಂತಿದ್ದ ಪಶುಪತಿಯು ಕಾಮನ ಬಿಲ್ಲಿನ ಮೋಡಗಳ ಮಧ್ಯೆ ವಿದ್ಯುತ್ತಿನ ಸಹಿತ ಕುಳಿತಿದ್ದ ಸೂರ್ಯನಂತೆ ತೋರಿದನು. ಅವನ ಮುಂದೆ ಭಗವಾನ್ ನರವಾಹನ ಧನೇಶನು ಗುಹ್ಯಕರೊಂದಿಗೆ ಸುಂದರ ಪುಷ್ಪಕದಲ್ಲಿ ಕುಳಿತು ಹೊರಟನು. ಐರಾವತವನ್ನೇರಿ ಶಕ್ರನೂ ಕೂಡ ಸುರರೊಂದಿಗೆ ವರದ ವೃಷಭಧ್ವಜನ ಹಿಂದೆ ಅನುಸರಿಸಿ ಹೊರಟನು. ಮಹಾಯಕ್ಷ ಅಮೋಘನು ಮಾಲೆಗಳಿಂದ ಸಮಲಂಕೃತರಾದ ಜಂಭಕ, ಯಕ್ಷ ಮತ್ತು ರಾಕ್ಷಸರೊಡಗೂಡಿ ಬಲಬದಿಯಲ್ಲಿ ನಿಂತನು. ಅವನ ಬಲಗಡೆಯಲ್ಲಿ ಚಿತ್ರಯೋಧರಾದ ದೇವತೆಗಳು, ಮರುತರು, ವಸುಗಳು ಮತ್ತು ರುದ್ರರು ಒಂದುಗೂಡಿ ಸಾಗುತ್ತಿದ್ದರು. ಮೃತ್ಯುವಿನ ಸಹಿತ,

ಘೋರರೂಪೀ, ಘೋರಮುಖದ ನೂರಾರು ಘೋರವ್ಯಾಧಿಗಳಿಂದ ಎಲ್ಲ ಕಡೆಯಿಂದಲೂ ಸುತ್ತುವರೆಯಲ್ಪಟ್ಟು ಯಮನು ಹೊರಟನು. ಯಮನ ಹಿಂದೆಯೇ ಘೋರವಾಗಿದ್ದ ಮೂರು ಮೊನಚಾದ ತುದಿಗಳನ್ನುಳ್ಳ ವಿಜಯ ಎಂಬ ಹೆಸರಿನ ರುದ್ರನ ಶೂಲವನ್ನು ಅಲಂಕರಿಸಿ ಕೊಂಡೊಯ್ದರು. ಆಗ ಉಗ್ರಪಾಶವನ್ನು ಹಿಡಿದು ಸಲಿಲೇಶ್ವರ ಭಗವಾನ್ ವರುಣನು ವಿವಿಧ ನೀರಿನ ಪ್ರಾಣಿಗಳಿಂದ ಸುತ್ತುವರೆಯಲ್ಪಟ್ಟು ಮೆಲ್ಲನೆ ಮುಂದುವರೆದನು. ವಿಜಯದ ಹಿಂದೆ ರುದ್ರನ ಪಟ್ಟಿಷವು, ಗದೆ, ಮುಸಲ, ಶಕ್ತಿ ಮೊದಲಾದ ಉತ್ತಮ ಆಯುಧಗಳಿಂದ ಸುತ್ತವರೆಯಲ್ಪಟ್ಟು ಹಿಂಬಾಲಿತು. ಆ ಪಟ್ಟಿಶದ ಮೇಲೆ ರುದ್ರನ ಮಹಾಪ್ರಭೆಯ ಬಿಳಿ ಕೊಡೆಯನ್ನು ಹಿಡಿಯಲಾಗಿತ್ತು. ಮಹರ್ಷಿಗಣಗಳಿಂದ ಸುತ್ತುವರೆಯಲ್ಪಟ್ಟು ಕಮಂಡಲುವೂ ಅದನ್ನು ಹಿಂಬಾಲಿಸಿತು. ಅದರ ಬಲಗಡೆಯಲ್ಲಿ ಶ್ರೀಯಿಂದ ಆವೃತಗೊಂಡು ಹೊಳೆಯುತ್ತಿರುವ ದಂಡವು, ದೇವತೆಗಳಿಂದ ಪೂಜಿಸಲ್ಪಟ್ಟು ಭೃಗು ಅಂಗಿರಸರೊಡನೆ ಹೋಗುತ್ತಿತ್ತು. ಇವೆಲ್ಲವುಗಳ ಹಿಂದೆ ರುದ್ರನು ಬಿಳಿಯ ರಥದಲ್ಲಿ ನಿಂತು ತನ್ನ ತೇಜಸ್ಸಿನಿಂದ ಎಲ್ಲ ತ್ರಿದಿವೌಕಸರನ್ನೂ ಹರ್ಷಗೊಳಿಸತ್ತಾ ಮುಂದುವರೆದನು. ರುದ್ರನ ಹಿಂದೆ ಋಷಿಗಳೂ, ದೇವತೆಗಳೂ, ಗಂಧರ್ವರೂ, ಭುಜಗರೂ, ನದಿಗಳೂ, ಸರೋವರಗಳೂ, ವೃಕ್ಷಗಳೂ, ಅಪ್ಸರ ಗಣಗಳೂ, ನಕ್ಷತ್ರಗಳೂ, ಗ್ರಹಗಳೂ, ದೇವತೆಗಳ ಮಕ್ಕಳೂ, ಮತ್ತು ವಿವಿಧಾಕಾರದ ಸ್ತ್ರೀಯರೂ ಹೊರಟರು. ಈ ಸುಂದರರೂಪಿನ ವರಾಂಗನೆಯರು ಹೂಗಳನ್ನು

ದಾರಿಯಲ್ಲಿ ಬೀರುತ್ತಾ ಮತ್ತು ಮೋಡಗಳು ಪಿನಾಕಿನಿಯನ್ನು ನಮಸ್ಕರಿಸಿ ಹೂವಿನ ಮಳೆಯನ್ನು ಸುರಿಸುತ್ತಾ ಹೊರಟವು. ಸೋಮನು ಅವನ ನೆತ್ತಿಯಮೇಲೆ ಬಿಳಿಗೊಡೆಯನ್ನು ಹಿಡಿದನು. ವಾಯು ಮತ್ತು ಅಗ್ನಿಯರು ಅವನಿಗೆ ಚಾಮರಗಳನ್ನು ಬೀಸಿದರು. ಅವನ ಹಿಂದೆ ಶ್ರೀಯಿಂದ ಆವೃತನಾಗಿ ಶಕ್ರನು ಎಲ್ಲ ರಾಜರ್ಷಿಗಳೊಂದಿಗೆ ವೃಷಕೇತನನ್ನು ಸ್ತುತಿಸುತ್ತಾ ಹೊರಟನು. ಪಾರ್ವತಿಯನ್ನು ಅನುಸರಿಸಿ ಗೌರಿ, ವಿದ್ಯಾ, ಗಾಂಧಾರೀ, ಕೇಶಿನೀ, ಮಿತ್ರಸಾಹ್ವ ಎಲ್ಲರೂ, ಕವಿಗಳು ಯಾರೆಲ್ಲ ವಿದ್ಯಾಗಣಗಳನ್ನು ಮಾಡಿದ್ದರೋ ಅವರೆಲ್ಲರೂ ಸಾವಿತ್ರಿಯೊಡನೆ ಹೋದರು. ಇಂದ್ರನ ವಚನದಂತೆ ಮಾಡುವ ರಾಕ್ಷಸರು ಪತಾಕೆಗಳನ್ನು ಹಿಡಿದು ದೇವತೆಗಳ ಸೇನೆಯ ಮುಂದೆ ಹೊರಟರು. ಶ್ಮಶಾನದಲ್ಲಿ ನಿತ್ಯವೂ ತಿರುಗಾಡುವ ರುದ್ರನ ಸಖನಾದ ಪಿಂಗಲ ಎಂಬ ಹೆಸರಿನ ಲೋಕಗಳ ಆನಂದ ದಾಯಕ ಯಕ್ಷೇಂದ್ರನು ಕೂಡ ದೇವತೆಗಳ ಸಹಿತ ಅಲ್ಲಿ ಯಥಾಸುಖನಾಗಿ ಹೊರಟನು. ಒಮ್ಮೆ ಮುಂದೆ ಹೋಗುತ್ತಿದ್ದರೆ ಇನ್ನೊಮ್ಮೆ ಹಿಂದೆ ಬೀಳುತ್ತಿದ್ದ ಅವನ ಗತಿಯು ನಿರ್ದಿಷ್ಟವಾಗಿರಲಿಲ್ಲ. ಮನುಷ್ಯರು ಸತ್ಕರ್ಮಗಳಿಂದ ಪೂಜಿಸುವ ದೈವತನು ರುದ್ರ. ಅವನನ್ನು ಶಿವನೆಂದೂ, ಈಶನೆಂದೂ, ರುದ್ರನೆಂದೂ, ಪಿನಾಕಿಯೆಂದು ಕರೆಯುತ್ತಾರೆ. ವಿವಿಧಾಕಾರದ ಭಾವಗಳಿಂದ ಮಹೇಶ್ವರನನ್ನು ಪೂಜಿಸುತ್ತಾರೆ. ಆಗ ದೇವಸೇನಾಪತಿ, ಬ್ರಹ್ಮಣ್ಯ, ಕೃತ್ತಿಕಾಸುತನೂ ಕೂಡ ದೇವಸೇನೆಯಿಂದ ಸುತ್ತುವರೆಯಲ್ಪಟ್ಟು ದೇವೇಶನನ್ನು ಅನುಸರಿಸಿ ಹೋದನು. ಆಗ ಮಹಾದೇವನು ಮಹಾಸೇನನಿಗೆ ಈ

ಮಹತ್ತರ ಮಾತನ್ನಾಡಿದನು:

"ಜಾಗರೂಕತೆಯಿಂದ ನಿತ್ಯವೂ ಏಳನೆಯ ಮಾರುತಗಣವನ್ನು ರಕ್ಷಿಸು."

ಸ್ಕಂದನು ಹೇಳಿದನು:

"ಪ್ರಭೋ! ಏಳನೆಯ ಮಾರುತಗಣವನ್ನು ನಾನು ಪಾಲಿಸುತ್ತಿದ್ದೇನೆ. ಇನ್ನೂ ಏನನ್ನಾದರೂ ಮಾಡಬೇಕಾಗಿದ್ದರೆ ಅದನ್ನೂ ಬೇಗನೆ ಹೇಳು."

ರುದ್ರನು ಹೇಳಿದನು:

"ಪುತ್ರ! ಸದಾ ನನ್ನನ್ನು ಕಾರ್ಯಗಳಲ್ಲಿ ತೊಡಗಿರುವುದನ್ನು ನೋಡುವೆ. ನನ್ನ ಮೇಲಿನ ಭಕ್ತಿ ಮತ್ತು ದರ್ಶನಗಳಿಂದ ಪರಮ ಶ್ರೇಯಸ್ಸನ್ನು ಹೊಂದುತ್ತೀಯೆ."

ಹೀಗೆ ಹೇಳಿ ಮಹೇಶ್ವರನು ಅವನನ್ನು ಬಿಗಿದಪ್ಪಿ ಬಿಟ್ಟನು. ಸ್ಕಂದನು ಹೀಗೆ ಬಿಡಲ್ಪಟ್ಟ ನಂತರ ಒಮ್ಮಿಂದೊಮ್ಮೆಲೇ ಅಲ್ಲಿ ಸರ್ವ ದೇವತೆಗಳನ್ನೂ ತಲ್ಲಣಿಸುವ ಮಹಾ ಉತ್ಪಾತಗಳು ನಡೆದವು. ನಕ್ಷತ್ರಗಳೊಂದಿಗಿನ ಆಕಾಶವು ಭುಗಿಲೆದ್ದು ಉರಿಯತೊಡಗಿತು; ಇಡೀ ಭುವನವೇ ತುಂಬಾ ಗೊಂದಲಕ್ಕೊಳಗಾಯಿತು. ಭೂಮಿಯು ಗುಡುಗಿ ನಡುಗಿತು ಮತ್ತು ಪ್ರಭೋ! ಜಗತ್ತು ಕತ್ತಲೆಯಿಂದ ತುಂಬಿತು. ಆಗ ಆ ದಾರುಣವನ್ನು ನೋಡಿ ಶಂಕರ, ಮಹಾಭಾಗೆ ಉಮೆ ಮತ್ತು

ಮಹರ್ಷಿಗಳೊಂದಿಗೆ ದೇವತೆಗಳು ಕೂಡ ಗೊಂದಲಕ್ಕೀಡಾದರು. ಹೀಗೆ ಅವರು ಪ್ರಮೂಢರಾಗಲು ಅಲ್ಲಿ ಮೋಡಗಳ ಪರ್ವತದಂತೆ ತೋರುವ, ಘೋರರಾದ, ನಾನಾ ಪ್ರಹರಣಗಳನ್ನು ಮಾಡುತ್ತಿರುವ ಮಹಾ ಸೇನೆಯು ಕಾಣಿಸಿಕೊಂಡಿತು. ಆ ಘೋರ ಅಸಂಖ್ಯ ಸೇನೆಯು ವಿವಿಧ ಭಾಷೆಗಳಲ್ಲಿ ಗರ್ಜಿಸುತ್ತಾ ದೇವತೆಗಳು ಮತ್ತು ಭಗವಾನ್ ಶಂಕರನ ರಣದೆಡೆಗೆ ಓಡಿ ಬಂದಿತು. ಅವರು ದೇವಸೇನೆಯ ಮೇಲೆ ಎಲ್ಲ ದಿಕ್ಕುಗಳಿಂದಲೂ ಅನೇಕ ಬಾಣಜಾಲಗಳನ್ನು, ಪರ್ವತಗಳನ್ನು, ಶತಘ್ನಗಳನ್ನೂ, ಪ್ರಾಸಗಳನ್ನೂ, ಪರಿಘಗಳನ್ನೂ ಗದೆಗಳನ್ನೂ ಎಸೆದರು. ಆ ಘೋರ ಮಹಾಯುಧಗಳು ಬೀಳಲು ದೇವಸೇನೆಯು ಕ್ಷಣದಲ್ಲಿ ತಲ್ಲಣಿಸಿ ಎಲ್ಲರೂ ವಿಮುಖರಾಗುತ್ತಿರುವುದು ಕಂಡುಬಂದಿತು. ದಾನವರು ದೇವತೆಗಳ ಸೇನೆಯ ಯೋಧರನ್ನು, ಆನೆಗಳನ್ನು, ಅಶ್ವಗಳನ್ನು ಮತ್ತು ಮಹಾರಥಗಳನ್ನು ಆಯುಧಗಳಿಂದ ತುಂಡರಿಸಿ ಪೀಡೆಗೊಳಗಾಗಲು ಅವರು ವಿಮುಖರಾದರು. ಕಾಡ್ಗಿಚ್ಚಿಗೆ ಸಿಲುಕಿ ಸುಟ್ಟು ಉರುಳುವ ಮರಗಳಂತೆ ದಿವೌಕಸರು ಶಿರ ದೇಹಗಳು ವಿಭಿನ್ನವಾಗಿ, ಮಹಾರಣದಲ್ಲಿ ನಾಥರಿಲ್ಲದಂತೆ ವಧಿಸಲ್ಪಟ್ಟು ಬಿದ್ದರು. ಆಗ ತಲ್ಲಣಿಸಿದ ಸೇನೆಯನ್ನು ನೋಡಿ ದೇವ ಪುರಂದರ ಬಲವತನು ದಾನವರಿಂದ ಆರ್ದಿತರಾದವರಿಗೆ ಆಶ್ವಾಸನೆಯನ್ನು ನೀಡುತ್ತಾ ಈ ಮಾತನ್ನಾಡಿದನು:

> “ಶೂರರೇ! ಭಯವನ್ನು ತೊರೆಯಿರಿ! ನಿಮಗೆ
> ಮಂಗಳವಾಗಲಿ! ನೀವೆಲ್ಲರೂ ಶಸ್ತ್ರಗಳನ್ನು ಹಿಡಿದು

ವಿಕ್ರಮದಿಂದ ಹೋರಾಡಬೇಕು. ಇದರಿಂದ ಎಂದೂ ದುಃಖಿಗಳಾಗುವುದಿಲ್ಲ. ಈ ಕೆಟ್ಟ ನಡತೆಯ, ಘೋರದರ್ಶನ ಮಹಾಸುರ ದಾನವರನ್ನು ನನ್ನೊಡಗೂಡಿ ಸೋಲಿಸಿ. ನಿಮಗೆ ಮಂಗಳವಾಗಲಿ!”

ಶಕ್ರನ ಮಾತುಗಳನ್ನು ಕೇಳಿ ದಿವೌಕಸರು ಆಶ್ವಾಸನೆ ಪಡೆದು ಶಕ್ರನ ನೇತೃತ್ವದಲ್ಲಿ ದಾನವರ ವಿರುದ್ಧ ಹೋರಾಡಿದರು. ಆಗ ತ್ರಿದಶರೆಲ್ಲರೂ ಮಹಾಬಲ ಮರುತರೂ ಮಹಾವೇಗ ಸಾಧ್ಯರೂ ವಸುಗಳೊಂದಿಗೆ ಪ್ರತಿಯುದ್ಧವನ್ನು ಮಾಡಿದರು. ಕ್ರುದ್ಧರಾಗಿ ಅವರು ಪ್ರಯೋಗಿಸಿದ ಶಸ್ತ್ರಗಳು ಮತ್ತು ಬಿಲ್ಲುಗಳಿಂದ ಬಿಡಲ್ಪಟ್ಟ ಬಾಣಗಳು ದೈತ್ಯರ ದೇಹಗಳನ್ನು ಹೊಕ್ಕು ಅವರ ರಕ್ತವನ್ನು ಕುಡಿದವು. ಅವರ ದೇಹಗಳನ್ನು ಭೇದಿಸಿ ಹೊರಬೀಳುವ ಹರಿತ ಶರಗಳು ಪರ್ವತದಿಂದ ಬೀಳುತ್ತಿರುವ ಸರ್ಪಗಳಂತೆ ತೋರಿದವು. ಬಾಣಗಳಿಂದ ತುಂಡರಿಸಿ ದೈತ್ಯರ ಶರೀರಗಳು ಚದುರಿದ ಮೋಡಗಳ ತುಂಡುಗಳಂತೆ ಎಲ್ಲೆಡೆಯಲ್ಲಿಯೂ ಭೂಮಿಯಮೇಲೆ ಬಿದ್ದವು. ಆಗ ಯುದ್ಧದಲ್ಲಿ ಆ ದಾನವ ಸೇನೆಯನ್ನು ಎಲ್ಲ ದೇವಗಣಗಳೂ ವಿವಿಧ ಬಾಣಗಳಿಂದ ಪೀಡಿಸಿ ಅವರನ್ನೂ ಪರಾಙ್ಮುಖರಾಗುವಂತೆ ಮಾಡಿದರು. ಆಗ ಎಲ್ಲ ದೇವತೆಗಳೂ ಹರ್ಷದಿಂದ ಜೋರಾಗಿ ಕೂಗಿ ಹೊಡೆಯಲು ಸಿದ್ಧವಾಗಿದ್ದ ಆಯುಧಗಳನ್ನು ಹಿಡಿದು, ಎಲ್ಲರೂ ಅನೇಕ ತೂರ್ಯಗಳಿಂದ ಸಂಹರಿಸತೊಡಗಿದರು.

ಹೀಗೆ ಅನ್ಯೋನ್ಯರನ್ನು ಹೊಡೆದು, ದೇವತೆಗಳ ಮತ್ತು ದಾನವರ ಮಾಂಸ ರಕ್ತ ದೇಹಗಳು ಅಲ್ಲಲ್ಲಿ ಚದುರಿ ಬಿದ್ದಿದ್ದ ಅತಿ ದಾರುಣ ಯುದ್ಧವು ನಡೆಯಿತು. ಆದರೆ ಒಮ್ಮಿಂದೊಮ್ಮೆಗೇ ದೇವಲೋಕದವರು ಸೋಲನ್ನು ಕಂಡರು. ಓರ್ವ ಘೋರ ದಾನವನು ದಿವೌಕಸರನ್ನು ಸಂಹರಿಸುತ್ತಿದ್ದನು. ಆಗ ತೂರ್ಯ ಪ್ರಣಾದ ಭೇರಿಗಳ ಮಹಾಸ್ವನವು ಮತ್ತು ದಾನವೇಂದ್ರರ ದಾರುಣ ಸಿಂಹನಾದವು ಕೇಳಿಬಂದಿತು. ಆಗ ದೈತ್ಯ ಸೇನೆಯಿಂದ ಘೋರನಾದ ಮಹಬಲಿ ಮಹಿಷ ಎಂಬ ಹೆಸರಿನ ದಾನವನು ದೊಡ್ಡದಾದ ಗಿರಿಯನ್ನು ಕೈಯಲ್ಲಿ ಹಿಡಿದು ಹೊರಬಿದ್ದನು. ಅವನು ಘನ ಮೋಡಗಳ ಹಿಂದಿನಿಂದ ಇಣುಕುವ ಆದಿತ್ಯನಂತೆ ಕಂಡನು. ಅವನು ಗಿರಿಯನ್ನು ಎತ್ತಿಹಿಡಿದು ದಿವೌಕಸರೆಡೆಗೆ ಓಡಿಬಂದು ಎಸೆದನು. ಮಹಿಷನು ಆ ಗಿರಿಯನ್ನು ತಮ್ಮ ಮೇಲೆ ಎಸೆಯುವವನಿದ್ದಾನೆ ಎಂದು ತಿಳಿದ ದೇವರು ಎಲ್ಲೆಡೆ ಚದುರಿ ಓಡಿದರು. ಆ ಭೀಮರೂಪದ ಗಿರಿಯು ಬೀಳುವುದರಿಂದ ದೇವಸೇನೆಯ ಹತ್ತು ಸಾವಿರ ಜನರು ಭೂಮಿಯ ಮೇಲೆ ಉರುಳಿಬಿದ್ದರು. ಆ ದಾನವ ಮಹಿಷನು ಸುರರನ್ನು ಈ ರೀತಿ ಸದೆಬಡಿದು ಒಂದು ಜಿಂಕೆಗಳ ಹಿಂಡಿನ ಮೇಲೆ ಎರಗುವ ಸಿಂಹದಂತೆ ರಣದ ಮೇಲೆ ಎರಗಿದನು. ತಮ್ಮ ಮೇಲೆ ಬೀಳುತ್ತಿದ್ದ ಮಹಿಷನನ್ನು ನೋಡಿ ಇಂದ್ರನೊಡನೆ ದಿವೌಕಸರು ತಮ್ಮ ಆಯುಧ ಧ್ವಜಗಳನ್ನು ರಣದಲ್ಲಿಯೇ ಬಿಟ್ಟು ಭೀತರಾಗಿ ಓಡಿಹೋದರು. ಆಗ ಆ ಮಹಿಷನು ಕೃದ್ಧನಾಗಿ ರುದ್ರನ ರಥದ ಬಳಿಗೆ ಓಡಿ ಬಂದು ರುದ್ರನ

ರಥಕಂಬವನ್ನು ಹಿಡಿದನು. ಕೃದ್ಧನಾದ ಮಹಿಷನು ರುದ್ರನ ರಥದ ಮೇಲೆ ಒಮ್ಮಿಂದೊಮ್ಮಲೇ ಬೀಳಲು ಭೂಮಿಯು ನರಳಿತು ಮತ್ತು ಮಹರ್ಷಿಗಳು ಗಾಢ ಮೂರ್ಛಿತರಾದರು. ಮೋಡದಂತೆ ಮಹಾಕಾಯನಾಗಿದ್ದ ಆ ದೈತ್ಯನು ಅವರಿಗೆ ಜಯವು ನಿಶ್ಚಿತವಾದುದೆಂದು ಆನಂದಿಸಿದನು. ಆಗ ತಾನೇ ಮಹಿಷನನ್ನು ರಣದಲ್ಲಿ ಕೊಲ್ಲಬಹುದಾಗಿದ್ದರೂ ಆ ದುರಾತ್ಮನ ಮೃತ್ಯುವು ಸ್ಕಂದನಿಂದ ಆಗಬೇಕೆಂದು ಭಗವಾನನು ನೆನಪಿಸಿಕೊಂಡನು. ಮಹಿಷನೂ ಕೂಡ ರುದ್ರನ ರಥವನ್ನು ನೋಡಿ ರೌದ್ರವಾಗಿ ಕೂಗಿ, ದೇವತೆಗಳಲ್ಲಿ ಭಯವನ್ನೂ ದೈತ್ಯರಲ್ಲಿ ಸಂತೋಷವನ್ನೂ ಉಂಟುಮಾಡಿದನು. ದೇವತೆಗಳು ಆ ಘೋರವಾದ ಭಯದಲ್ಲಿರಲು ಮಹಾಸೇನನು ಕ್ರೋಧದಿಂದ ಉರಿಯುವ ಜ್ವಾಲೆಗಳ ರಾಶಿಯೋ ಎಂಬಂತೆ ಆಗಮಿಸಿದನು. ಕೆಂಪುಬಟ್ಟೆಯನ್ನು ಧರಿಸಿದ್ದ, ಕೆಂಪುಹಾರಗಳಿಂದ ಅಲಂಕೃತನಾಗಿದ್ದ, ಲೋಹಿತಾಸ್ಕನಾಗಿದ್ದ ಆ ಪ್ರಭು ಮಹಾಬಾಹುವು ಹಿರಣ್ಯಕವಚವನ್ನು ಧರಿಸಿ ಕನಕಪ್ರಭೆಯ ಆದಿತ್ಯಸಂಕಾಶ ರಥದಲ್ಲಿ ಕುಳಿತಿದ್ದುದನ್ನು ನೋಡಿ ತಕ್ಷಣವೇ ದೈತ್ಯಸೇನೆಯು ರಣದಲ್ಲಿ ಉತ್ಸಾಹವನ್ನು ಕಳೆದುಕೊಂಡಿತು. ಮಹಾಬಲ ಮಹಾಸೇನನು ಮಹಿಷನನ್ನು ಕೊಲ್ಲಲು ಪ್ರಜ್ವಲಿಸುತ್ತಿರುವ ಶಕ್ತಿಯನ್ನು ಪ್ರಯೋಗಿಸಿದನು. ಅವನಿಂದ ಬಿಡಲ್ಪಟ್ಟ ಶಕ್ತಿಯು ಮಹಿಷನ ಮಹಾಶಿರವನ್ನು ಕತ್ತರಿಸಿತು ಮತ್ತು ಶಿರದಿಂದ ಭಿನ್ನನಾಗಿ ಜೀವಕಳೆದುಕೊಂಡ ಮಹಿಷನು ಕೆಳಗೆ ಬಿದ್ದನು. ಸ್ಕಂದನು ಆ



ಶಕ್ತಿಯನ್ನು ಮತ್ತೆ ಮತ್ತೆ ಎಸೆದಾಗಲೆಲ್ಲಾ ಅದು ಸಹಸ್ರಾರು ಶತ್ರುಗಳನ್ನು ಕೊಂದು ಅವನ ಕೈಸೇರುತ್ತಿದ್ದುದ್ದನ್ನು ದೇವದಾನವರಿಬ್ಬರೂ ನೋಡಿದರು. ಧೀಮತ ಮಹಾಸೇನನ ಬಾಣಗಳಿಂದ ಪೆಟ್ಟುತಿಂದು ಉಳಿದ ದುರಾಸದ ದೈತ್ಯಗಣಗಳು ಘೋರವಾದ ಭೀತಿಗೊಳಗಾಗಿ ಪೀಡಿತರಾಗಿರಲು ಸ್ಕಂದನ ಪಾರ್ಷದರು ನೂರಾರು ಹಿಂಡುಗಳಲ್ಲಿ ಅವರನ್ನು ಕೊಂದು ಭಕ್ಷಿಸಿದರು. ದಾನವರನ್ನು ಭಕ್ಷಿಸಿ ಮತ್ತು ಅವರ ರಕ್ತವನ್ನು ಕುಡಿದು ಕ್ಷಣಾರ್ಧದಲ್ಲಿ ದಾನವರಿಲ್ಲದಂತೆ ಮಾಡಿ ಎಲ್ಲರೂ ಹರ್ಷಿತರಾದರು. ಸೂರ್ಯನು ಕತ್ತಲೆಯನ್ನು ಹೇಗೋ ಹಾಗೆ, ಅಗ್ನಿಯು ಮರಗಳನ್ನು ಹೇಗೋ ಹಾಗೆ ಮತ್ತು ವಾಯುವು ಮೋಡಗಳನ್ನು ಹೇಗೋ ಹಾಗೆ ಕೀರ್ತಿಮಾನ್ ಸ್ಕಂದನು ತನ್ನ ವೀರ್ಯದಿಂದ ಶತ್ರುಗಳನ್ನು ಜಯಿಸಿದನು. ತ್ರಿದಶರಿಂದ ಸತ್ಕೃತನಾದ ಅವನು ಮಹೇಶ್ವರನನ್ನು ಅಭಿವಂದಿಸಿದನು. ಕೃತ್ತಿಕಾಪುತ್ರನು ಸೂರ್ಯನಂತೆ ಕಿರಣಗಳನ್ನು ಪ್ರಸರಿಸುತ್ತಾ ಶೋಭಾಯಮಾನನಾಗಿ ಕಂಡನು. ಶತ್ರುಗಳ ನಷ್ಟವಾದ ನಂತರ ಮತ್ತು ಮಹೇಶ್ವರನು ಹೊರಟುಹೋದ ನಂತರ ಪುರಂದರನು ಮಹಾಸೇನ ಸ್ಕಂದನನ್ನು ಆಲಂಗಿಸಿ ಹೀಗೆ ಹೇಳಿದನು:

> “ಸ್ಕಂದ! ಬ್ರಹ್ಮನಿಂದ ವರವನ್ನು ಪಡೆದಿದ್ದ ಈ ಮಹಿಷನು ನಿನ್ನಿಂದ ಹತನಾದನು. ದೇವತೆಗಳು ಅವನಿಗೆ ತೃಣಸಮಾನರಾಗಿದ್ದರು. ಆ ದೇವಕಂಟಕನನ್ನು ನೀನು ಇಂದು ನಾಶಗೊಳಿಸಿದ್ದೀಯೆ. ಈ ಮೊದಲು ನಮ್ಮನ್ನು ಕಾಡಿಸುತ್ತಿದ್ದ ಮಹಿಷನ ಸರಿಸಮರಾದ ನೂರಾರು ದೇವಶತ್ರು ದಾನವರನ್ನು

ನೀನು ರಣದಲ್ಲಿ ಸಂಹರಿಸಿದ್ದೀಯೆ. ಮತ್ತು ನಿನ್ನ ಕಿಂಕರರು ಇನ್ನೂ ನೂರಾರು ದಾನವರನ್ನು ಭಕ್ಷಿಸಿದ್ದಾರೆ. ಪ್ರಭು ಉಮಾಪತಿಯಂತೆ ನೀನು ರಣದಲ್ಲಿ ಅರಿಗಳಿಗೆ ಅಜೇಯನಾಗಿದ್ದೀಯೆ. ದೇವ! ಇದು ನಿನ್ನ ಮೊದಲನೆಯ ಖ್ಯಾತ ಕರ್ಮವೆಂದಾಗುತ್ತದೆ. ಮೂರು ಲೋಕಗಳಲ್ಲಿ ನಿನ್ನ ಕೀರ್ತಿಯು ಅಕ್ಷಯವಾಗುತ್ತದೆ. ಸುರರು ನಿನ್ನ ವಶಗರಾಗಿರುತ್ತಾರೆ.”

ಮಹಾಸೇನನಿಗೆ ಹೀಗೆ ಹೇಳಿ ಶಚೀಪತಿಯು ಭಗವಾನ್ ತ್ರ್ಯಂಬಕನಿಂದ ಅನುಜ್ಞೆಯನ್ನು ಪಡೆದು ದೇವತೆಗಳೊಂದಿಗೆ ಹಿಂದಿರುಗಿದನು. ರುದ್ರನು ಭದ್ರವಟಕ್ಕೆ ಹೋದನು. ರುದ್ರನು ದೇವತೆಗಳಿಗೆ ಸ್ಕಂದನನ್ನು ನನ್ನಂತೆಯೇ ನೋಡಿಕೊಳ್ಳಿ ಎಂದು ಹೇಳಲು, ದಿವೌಕಸರು ಹಿಂದಿರುಗಿದರು. ಹೀಗೆ ಆ ವಹ್ನಿನಂದನನು ಒಂದೇ ದಿನದಲ್ಲಿ ದಾನವಗಣಗಳನ್ನು ಕೊಂದು ತ್ರೈಲೋಕ್ಯವೆಲ್ಲವನ್ನೂ ಗೆದ್ದು ಮಹರ್ಷಿಗಳಿಂದ ಪೂಜಿತನಾದನು.

ಸ್ಕಂದನ ಈ ಜನ್ಮವನ್ನು ಸುಸಮಾಹಿತನಾಗಿ ಯಾರು ಓದುತ್ತಾರೋ ಅವರಿಗೆ ಇಲ್ಲಿ ಸಮೃದ್ಧಿಯೂ ಮತ್ತು ಇಲ್ಲಿಯ ನಂತರ ಸ್ಕಂದಲೋಕವೂ ದೊರೆಯುತ್ತದೆ.

# ಮುದ್ಗಲ

## ದಾನದ ಮಹಿಮೆಯನ್ನು ಸೂಚಿಸುವ ಮುದ್ಗಲನ ಈ ಕಥೆಯು ಆರಣ್ಯಕ ಪರ್ವದ ವ್ರಿಹಿದ್ರೌಣಿಕಪರ್ವದಲ್ಲಿ ಅಧ್ಯಾಯ 245-247 ರಲ್ಲಿ ಬರುತ್ತದೆ. ಈ ಕಥೆಯನ್ನು ವ್ಯಾಸನು ಯುಧಿಷ್ಠಿರನಿಗೆ ಹೇಳುತ್ತಾನೆ.

ಕುರುಕ್ಷೇತ್ರದಲ್ಲಿ ಅಕ್ಕಿಕುಟ್ಟುವ ವೃತ್ತಿಯಲ್ಲಿ ನಿರತನಾದ ಮುದ್ಗಲನೆನ್ನುವ ಧರ್ಮಾತ್ಮ, ಸಂಶಿತವ್ರತನಿದ್ದನು. ಪಾರಿವಾಳದಂತೆ ಜೀವಿಸುತ್ತಿದ್ದ ಅವನು ಅತಿಥಿಗಳನ್ನು ಸತ್ಕರಿಸುತ್ತಿದ್ದನು. ಆ ಮಹಾತಪಸ್ವಿಯು ಇಷ್ಟೀಕೃತ ಎಂಬ ಹೆಸರಿನ ಸತ್ರವನ್ನು ಕೈಗೊಂಡನು. ಅವನು ಪತ್ನಿ ಪುತ್ರರೊಂದಿಗೆ ಒಂದು ಪಕ್ಷ ತಿನ್ನುತ್ತಿದ್ದನು. ಮತ್ತು ಇನ್ನೊಂದು ಪಕ್ಷದಲ್ಲಿ ಪಾರಿವಾಳದಂತೆ ಒಂದು ಅಳತೆ ಭತ್ತವನ್ನು ಸುಲಿದು ತಿನ್ನುತ್ತಿದ್ದನು. ದರ್ಶ ಮತ್ತು ಪೌರ್ಣಮಾಸಗಳನ್ನು ಆಚರಿಸುವ ಆ ವಿಗತಮತ್ಸರನು ದೇವತೆಗಳು ಮತ್ತು ಅತಿಥಿಗಳು ತಿಂದು ಉಳಿದುದರಿಂದ ದೇಹಧರ್ಮವನ್ನು ಪಾಲಿಸುತ್ತಿದ್ದನು. ಸಾಕ್ಷಾತ್ ತ್ರಿಭುವನೇಶ್ವರ ಇಂದ್ರನು ದೇವತೆಗಳ ಸಹಿತ ಪರ್ವ ಪರ್ವಗಳಲ್ಲಿ ಯಜ್ಞದ ಭಾಗವನ್ನು ಸ್ವೀಕರಿಸುತ್ತಿದ್ದನು. ಪರ್ವಕಾಲದಲ್ಲಿ ಅವನು ಮುನಿವೃತ್ತಿಯನ್ನು ಅನುಸರಿಸಿ ಅಂತರಾತ್ಮದಲ್ಲಿ ಪ್ರಹೃಷ್ಟನಾಗಿ ಅತಿಥಿಗಳಿಗೆ ಅನ್ನವನ್ನು ನೀಡುತ್ತಿದ್ದನು. ಆ ಮಹಾತ್ಮನು ಅನ್ನವನ್ನು ನೀಡುತ್ತಿದ್ದಂತಲೆಲ್ಲ ಆ

ಮಾತ್ಸರ್ಯಹೀನನ ಪಾತ್ರೆಯಲ್ಲಿನ ಉಳಿದ ಅನ್ನವು ಅತಿಥಿಗಳ ದರ್ಶನದಿಂದ ಹಿಗ್ಗಿ ಹೆಚ್ಚಾಗುತ್ತಿತ್ತು. ವಿಶುದ್ಧನಾಗಿ ತ್ಯಾಗಭಾವದಿಂದ ಆ ಅನ್ನವನ್ನು ನೀಡಿದಾಗಲೆಲ್ಲ ಅದು ನೂರಾರು ಪಟ್ಟು ವೃದ್ಧಿಯಾಗಿ ನೂರಾರು ಪಾರಂಗತ ಬ್ರಾಹ್ಮಣರು ಊಟಮಾಡುತ್ತಿದ್ದರು. ಧರ್ಮಿಷ್ಟ ಸಂಶಿತವ್ರತ ಮುದ್ಗಲನ ಕುರಿತು ದಿಕ್ಕನ್ನೇ ಬಟ್ಟೆಯನ್ನಾಗಿ ಧರಿಸಿದ ದುರ್ವಾಸನು ಕೇಳಿದನು. ಆಗ ಉನ್ಮತ್ತನಂತೆ ಧರಿಸಿದ, ತಲೆಬೋಳಿಸಿಕೊಂಡ ಆ ಮುನಿಯು ವಿವಿಧ ಬೈಗಳಗಳನ್ನು ಉಚ್ಛರಿಸುತ್ತಾ ಅಲ್ಲಿಗೆ ಬಂದನು. ಆಗಮಿಸಿದ ಆ ಮುನಿಸತ್ತಮನು ವಿಪ್ರನಿಗೆ ಹೇಳಿದನು:

> "ಮುನಿಸತ್ತಮ! ನಾನು ಅನ್ನಾರ್ಥಿಯಾಗಿ ಬಂದಿದ್ದೇನೆ ಎಂದು ತಿಳಿ." "ನಿನಗೆ ಇದೋ ಸ್ವಾಗತ!"

ಎಂದು ಮುದ್ಗಲನು ಮುನಿಗೆ ಉತ್ತರಿಸಿದನು. ಪಾದ್ಯ ಆಚಮನೀಯಗಳೊಂದಿಗೆ ಉತ್ತಮ ಅನ್ನವನ್ನು ಬಡಿಸಿದನು. ಆ ಧೃತವ್ರತ ಅತಿಥಿವ್ರತಿಯು ಹಸಿವೆಯಿಂದ ಬಳಲಿದ್ದ ಹುಚ್ಚನಂತಿದ್ದ ಆ ತಪಸ್ವಿಗೆ ಪರಮ ಶ್ರದ್ಧೆಯಿಂದ ಕುಳ್ಳಿರಿಸಿ ನೀಡಿದನು. ತುಂಬಾ ಹಸಿದಿದ್ದ ಆ ಹುಚ್ಚನು ರಸವತ್ತಾಗಿದ್ದ ಆ ಅನ್ನವೆಲ್ಲವನ್ನೂ ತಿನ್ನಲು ಮುದ್ಗಲನು ಇನ್ನೂ ಹೆಚ್ಚು ನೀಡಿದನು. ಆ ಅನ್ನವನ್ನೂ ತಿಂದು ಎಂಜಲೆಲ್ಲವನ್ನೂ ತನ್ನ ದೇಹಕ್ಕೆ ಬಳಿದುಕೊಂಡು ಎಲ್ಲಿಂದ ಬಂದಿದ್ದನೋ ಅಲ್ಲಿಗೆ ತೆರಳಿದನು.

ಹೀಗೆ ಎರಡನೇ ಪರ್ವಕಾಲವು ಬಂದಾಗಲೂ ದುರ್ವಾಸನು ಭತ್ತವನ್ನು ಕುಟ್ಟಿ ಜೀವಿಸುತ್ತಿದ್ದ ಆ ಮನೀಷಣನ ಬಳಿ ಬಂದು ಅನ್ನವೆಲ್ಲವನ್ನೂ ತಿಂದನು. ಆಗ ನಿರಾಹಾರನಾಗಿ ಆ ಮುನಿಯು ಪುನಃ ಭತ್ತವನ್ನು ಕುಟ್ಟಿದನು. ಹಸಿವೆಯು ಮುದ್ಗಲನ ಸಮಭಾವನೆಯನ್ನು ಕೆಡಿಸಲಿಲ್ಲ. ಮಕ್ಕಳು ಪತ್ನಿಯೊಂದಿಗೆ ಭತ್ತ ಕುಟ್ಟುತ್ತಿದ್ದ ಆ ದ್ವಿಜೋತ್ತಮನನ್ನು ಕ್ರೋಧವಾಗಲೀ, ಮಾತ್ಸರ್ಯವಾಗಲೀ, ಅಪಮಾನವಾಗಲೀ, ಸಂಭ್ರಮವಾಗಲೀ, ಹೊಗಲಿಲ್ಲ. ದುರ್ವಾಸನು ನಿಶ್ಚಯಿಸಿ ಕಾಲಕ್ಕೆ ತಕ್ಕಂತೆ ಆರು ಋತುಗಳಲ್ಲಿ ಭತ್ತಕುಟ್ಟುವ ಧರ್ಮದಲ್ಲಿ ನಿರತನಾದ ಮುನಿಸತ್ತಮನಲ್ಲಿಗೆ ಬಂದನು. ಆದರೆ ಮುನಿಯು ಅವನ ಮನಸ್ಸಿನಲ್ಲಿ ಸ್ವಲ್ಪವೂ ವಿಕಾರಗಳನ್ನು ಕಾಣಲಿಲ್ಲ. ಆ ಶುದ್ಧಸತ್ವನ ನಿರ್ಮಲ ಮನಸ್ಸು ಶುದ್ಧವಾಗಿರುವುದನ್ನೇ ನೋಡಿದನು. ಆಗ ಆ ಮುನಿಯು ಸಂತೋಷಗೊಂಡು ಮುದ್ಗಲನಿಗೆ ಹೇಳಿದನು:


> “ನಿನ್ನ ಸಮನಾದ ಮಾತ್ಸರ್ಯವರ್ಜಿತ ದಾನಿಯು ಈ ಲೋಕದಲ್ಲಿ ಇಲ್ಲ. ಹಸಿವೆಯು ಧರ್ಮಸಂಜ್ಞೆಯನ್ನು ಮತ್ತು ಧೈರ್ಯವನ್ನು ಬಹುದೂರ ಬಿಸಾಡುತ್ತದೆ. ವಿಷಯಾನುಸರಿಣೀ ನಾಲಿಗೆಯು ರುಚಿಯಿಂದ ಆಕರ್ಶಿತಗೊಳ್ಳುತ್ತದೆ. ಪ್ರಾಣವು ಆಹಾರವನ್ನು ಅವಲಂಬಿಸಿದೆ. ಮನಸ್ಸು ಚಂಚಲ ಮತ್ತು ಅದನ್ನು ನಿಗ್ರಹಿಸುವುದು ಕಷ್ಟ. ಮನಸ್ಸು ಮತ್ತು ಇಂದ್ರಿಯಗಳನ್ನು ಏಕಾಗ್ರವಾಗಿ ಇಟ್ಟುಕೊಳ್ಳುವುದೇ ತಪಸ್ಸೆಂದು ನಿರ್ಧರಿಸಲ್ಪಟ್ಟಿದೆ. ಶ್ರಮದಿಂದ

> ಸಂಪಾದಿಸಿದುದನ್ನು ಶುದ್ಧಮನಸ್ಸಿನಿಂದ ತ್ಯಜಿಸುವುದು ಕಷ್ಟ. ಆದರೂ ಸಾಧೋ! ಇವೆಲ್ಲವನ್ನೂ ನೀನು ಸಾಧಿಸಿದ್ದೀಯೆ. ನಿನ್ನ ಜೊತೆಯಲ್ಲಿರುವಾಗ ನಾವು ಸಂತೋಷಪಡುತ್ತೇವೆ ಮತ್ತು ಅನುಗೃಹೀತರಾಗಿದ್ದೇವೆ ಎಂದೆನಿಸುತ್ತದೆ. ಇಂದ್ರಿಯಗಳ ಮೇಲಿನ ಜಯ, ಧೈರ್ಯ, ಹಂಚಿಕೊಳ್ಳುವಿಕೆ, ದಮ, ಶಮ, ದಯೆ, ಸತ್ಯ, ಮತ್ತು ಧರ್ಮ ಎಲ್ಲವೂ ನಿನ್ನಲ್ಲಿ ನೆಲಸಿವೆ. ನೀನು ಕರ್ಮಗಳಿಂದ ಲೋಕಗಳನ್ನು ಗೆದ್ದಿದ್ದೀಯೆ ಮತ್ತು ಪರಮ ಗತಿಯನ್ನು ಪಡೆದಿದ್ದೀಯೆ. ಸ್ವರ್ಗವಾಸಿಗಳೂ ಕೂಡ ನಿನ್ನ ದಾನವನ್ನು ತುಂಬಾ ಹೊಗಳುತ್ತಿದ್ದಾರೆ. ಸುಚರಿತವ್ರತ! ಸಶರೀರನಾಗಿಯೇ ನೀನು ಸ್ವರ್ಗಕ್ಕೆ ಹೋಗುತ್ತೀಯೆ.”

ಮುನಿ ದುರ್ವಾಸನು ಹೀಗೆ ಹೇಳುತ್ತಿದ್ದಂತೆಯೇ ಹಂಸ ಸಾರಸಗಳಿಂದ ಕೂಡಿದ, ಕಿಂಕಿಣೀಜಾಲಮಾಲೆಗಳಿಂದ ಕೂಡಿದ, ಬಣ್ಣಬಣ್ಣದ, ದಿವ್ಯ ಸುಗಂಧವನ್ನು ಸೂಸುವ, ಬೇಕಾದಲ್ಲಿ ಹೋಗಬಲ್ಲ ವಿಮಾನದಲ್ಲಿ ಕುಳಿತಿದ್ದ ದೇವದೂತನು ಮುದ್ಗಲನ ಬಳಿ ಬಂದನು. ಅವನು ಆ ವಿಪ್ರರ್ಷಿಗೆ ಹೇಳಿದನು:

> “ನಿನ್ನ ಕರ್ಮಗಳಿಂದ ಗಳಿಸಿರುವ ಈ ವಿಮಾನವನ್ನೇರು. ಮುನೇ! ಪರಮ ಸಂಸಿದ್ಧಿಯನ್ನು ಪಡೆದಿದ್ದೀಯೆ.”

ಹೀಗೆ ಹೇಳಿದ ದೇವದೂತನಿಗೆ ಋಷಿಯು ಕೇಳಿದನು:



“ನಿನ್ನಿಂದ ಸ್ವರ್ಗನಿವಾಸಿಗಳ ಗುಣಗಳನ್ನು ಕೇಳಲು ಬಯಸುತ್ತೇನೆ. ದೇವದೂತಕ! ಅಲ್ಲಿ ವಾಸಿಸುವವರ ಗುಣಗಳೇನು? ಅವರ ತಪಸ್ಸೇನು? ಅವರ ಗುರಿಗಳೇನು? ಸ್ವರ್ಗದಲ್ಲಿ ಸ್ವರ್ಗಸುಖವೆಂದರೇನು? ದೋಷಗಳೇನು? ಒಳ್ಳೆಯವರೊಂದಿಗೆ ಏಳೇ ಹೆಜ್ಜೆಗಳನ್ನು ಜೊತೆಯಲ್ಲಿ ನಡೆಯುವುದರಿಂದ ಮಿತ್ರರಾಗುತ್ತಾರೆ ಎಂದು ಕುಲೋಚಿತ ಸಂತರು ಹೇಳುತ್ತಾರೆ. ಮಿತ್ರತ್ವವನ್ನು ಗೌರವಿಸಿ ನಾನು ನಿನ್ನಲ್ಲಿ ಕೇಳುತ್ತಿದ್ದೇನೆ. ಏನೂ ವಿಚಾರಮಾಡದೇ ಅಲ್ಲಿ ಇದ್ದುದನ್ನು ಇದ್ದಹಾಗೆ ನನಗೆ ಯಾವುದು ಒಳ್ಳೆಯದು ಎನ್ನುವುದನ್ನು

ಹೇಳು. ನಿನ್ನ ಮಾತನ್ನು ಕೇಳಿದ ನಂತರ ಏನುಮಾಡಬೇಕೋ ಅದನ್ನು ಮಾಡುತ್ತೇನೆ.”

ದೇವದೂತನು ಹೇಳಿದನು:

“ಮಹರ್ಷೇ ! ನಿನ್ನ ಬುದ್ಧಿಯು ಕೆಲಸಕ್ಕೆ ಬಾರದೇ ಇರುವಂಥಹುದು ! ಉತ್ತಮವಾದ, ಗೌರವಾನ್ವಿತವಾದ ಸ್ವರ್ಗಸುಖವನ್ನು ಪಡೆದು ತಿಳಿಯದೇ ಇರುವವನಂತೆ ವಿಮರ್ಶಿಸುತ್ತಿದ್ದೀಯೆ. ಸ್ವರ್ಗವೆಂದು ಕರೆಯಲ್ಪಟ್ಟಿರುವ ಲೋಕವು ನಮ್ಮ ಮೇಲೆ ಇದೆ. ಮೇಲೆ ಹೋಗಲು ದೇವಯಾನಗಳು ಓಡಾಡುವ ಉತ್ತಮ ಮಾರ್ಗವಿದೆ. ತಪಸ್ಸನು ತಪಿಸದ ತಪಸ್ವಿ, ಮಹಾಯಜ್ಞಗಳನ್ನು ಯಾಜಿಸದ ಪುರುಷ, ಸುಳ್ಳುಹೇಳುವವ, ಮತ್ತು ನಾಸ್ತಿಕ ಇವರುಗಳು ಅಲ್ಲಿಗೆ ಹೋಗಲಾರರು. ಧರ್ಮಾತ್ಮರು, ಜಿತಾತ್ಮರು, ಶಾಂತರು, ದಾಂತರು, ಮಾತ್ಸರ್ಯವಿಲ್ಲದವರು, ದಾನ-ಧರ್ಮಗಳಲ್ಲಿ ನಿರತರಾದವರು, ಶೂರರು, ಯುದ್ಧದಲ್ಲಿ ಗಾಯದ ಗುರುತನ್ನು ಪಡೆದ ಪುರುಷರು, ಶಮದಮಗಳಿಂದ ಆತ್ಮವನ್ನು ನಿಯಂತ್ರಣದಲ್ಲಿಟ್ಟುಕೊಂಡವರು, ಒಳ್ಳೆಯವರು ಪುಣ್ಯಕೃತರು ವಾಸಿಸುವ ಆ ಲೋಕಗಳಿಗೆ ಹೋಗುತ್ತಾರೆ. ಅಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ದೇವತೆಗಳು, ಸಾಧ್ಯರು, ವಿಶ್ವೇದೇವರು, ಮರುತರು, ಮಹರ್ಷಿಗಳು, ಯಮ, ಧರ್ಮ, ಗಂಧರ್ವರು,

ಹಾಗೆಯೇ ಅಪ್ಸರೆಯರು ವಾಸಿಸುವ, ಬೇಕಾದುದನ್ನು ನೀಡಬಲ್ಲ, ಪ್ರಕಾಶ-ತೇಜೋಮಯ ಶುಭ ಲೋಕಗಳು ಅನೇಕವಿವೆ. ಅಲ್ಲಿ ಮೂವತ್ಮೂರು ಸಾವಿರ ಯೋಜನೆಯ ವಿಸ್ತೀರ್ಣದಲ್ಲಿ ಹಿರಣ್ಮಯ ಪರ್ವತರಾಜ ಮೇರುವಿದೆ. ಅಲ್ಲಿ ಪುಣ್ಯಕರ್ಮಿಗಳು ವಿಹರಿಸುವ ನಂದನ ಮೊದಲಾದ ದೇವ ಉದ್ಯಾನಗಳಿವೆ. ಅಲ್ಲಿ ಹಸಿವು, ಬಾಯಾರಿಕೆ, ದುಃಖ, ಶೀತ, ಉಷ್ಣಗಳ ಭಯ, ಬೀಭತ್ಸ, ಅಶುಭ ಅಥವಾ ರೋಗವಾಗಲೀ ಏನೂ ಇಲ್ಲ. ಅಲ್ಲಿ ಎಲ್ಲಡೆಯಲ್ಲಿಯೂ ಮನೋಜ್ಞವಾದ ಸುಗಂಧ, ಎಲ್ಲೆಡೆಯಲ್ಲಿಯೂ ಸುಖಸ್ಪರ್ಶ, ಮತ್ತು ಎಲ್ಲೆಡೆಯಿಂದಲೂ ಮನಸ್ಸಿಗೆ ಹಿಡಿಯುವ ಶಬ್ಧಗಳು ಕೇಳಿಬರುತ್ತವೆ. ಅಲ್ಲಿ ಶೋಕವಿಲ್ಲ, ವೃದ್ಧಾಪ್ಯವಿಲ್ಲ, ಆಯಾಸ ಪರಿದೇವನೆಗಳಿಲ್ಲ. ಸ್ವಕರ್ಮಫಲಕಾರಣವಾದ ಆ ಲೋಕವು ಈ ರೀತಿಯಿದೆ. ಪುರುಷರು ತಮ್ಮ ಸುಕೃತಗಳಿಂದ ಅಲ್ಲಿರುತ್ತಾರೆ. ಅಲ್ಲಿರುವವರ ಶರೀರಗಳು ಹೊಳೆಯುತ್ತಿರುತ್ತವೆ. ಇದು ಅವರ ಸ್ವಂತ ಕರ್ಮಗಳಿಂದ ಹುಟ್ಟಿರುವುದು. ತಂದೆತಾಯಿಯರ ಕರ್ಮಗಳಿಂದಲ್ಲ. ಅಲ್ಲಿ ಬೆವರಿಲ್ಲ, ದುರ್ಗಂಧವಿಲ್ಲ, ಮಲವಿಲ್ಲ, ಮೂತ್ರವಿಲ್ಲ. ಅಲ್ಲಿ ಧೂಳು ಅವರ ವಸ್ತ್ರವನ್ನು ಹೊಲಸುಮಾಡುವುದಿಲ್ಲ. ಅವರ ದಿವ್ಯಸುಗಂಧದ ಮನೋರಮ ಮಾಲೆಗಳು ಮಾಸುವುದಿಲ್ಲ. ಈ ತರಹದ ವಿಮಾನಗಳಲ್ಲಿ ಸಂಚರಿಸುತ್ತಾರೆ. ಈರ್ಷ್ಯೆ, ಶೋಕ, ಆಯಾಸ,

ಮೋಹ, ಮಾತ್ಸ್ಯರ್ಯಗಳನ್ನು ತೊರೆದು ಸ್ವರ್ಗವನ್ನು ಗೆದ್ದವರು ಅಲ್ಲಿ ಸುಖವಾಗಿರುತ್ತಾರೆ. ಇವುಗಳ ಮೇಲೆ ಇನ್ನೂ ಅನೇಕ ದಿವ್ಯ ಗುಣಾನ್ವಿತವಾದ ಲೋಕಗಳಿವೆ. ಮೇಲೆ ಶಕ್ರನ ಲೋಕವಿದೆ. ಅದರ ಮೇಲೆ ತೇಜೋಮಯವಾದ ಶುಭ ಬ್ರಹ್ಮಲೋಕವಿದೆ. ಅಲ್ಲಿ ತಮ್ಮ ಶುಭಕರ್ಮಗಳಿಂದ ಪೂತರಾದ ಋಷಿಗಳು ಹೋಗುತ್ತಾರೆ. ಅಲ್ಲಿ ದೇವತೆಗಳಿಗೂ ದೇವತೆಗಳಾದ ಋಭವ ಎನ್ನುವವರು ವಾಸಿಸುತ್ತಾರೆ. ಅವರ ಲೋಕಗಳು ಪರತರವಾಗಿವೆ ಮತ್ತು ದೇವತೆಗಳೂ ಅಲ್ಲಿ ಯಾಜಿಸುತ್ತಾರೆ. ಅವರು ತಮ್ಮದೇ ಪ್ರಭೆಯಿಂದ ಬೆಳಗುತ್ತಾರೆ ಮತ್ತು ಜನರು ಬಯಸಿದುದನ್ನು ಕೊಡುತ್ತಾರೆ. ಅವರಿಗೆ ಸ್ತ್ರೀಯರಿಂದುಂಟಾಗುವ ತಾಪವಿರುವುದಿಲ್ಲ. ಐಶ್ವರ್ಯವನ್ನು ಹೊಂದಿರುವುದಿಲ್ಲ; ಮಾತ್ಸರ್ಯವಿರುವುದಿಲ್ಲ. ಅವರು ಆಹುತಿಗಳನ್ನು ಸ್ವೀಕರಿಸಿ ವೃದ್ಧಿಯಾಗುವುದಿಲ್ಲ. ಅಮೃತಭೋಜನವನ್ನೂ ಮಾಡಿದವರಲ್ಲ. ಅವರು ದಿವ್ಯಶರೀರವನ್ನು ಹೊಂದಿರುತ್ತಾರೆ. ವಿಗ್ರಹ ಮೂರ್ತಿಗಳಲ್ಲ. ಈ ಸನಾತನ ದೇವರ ದೇವತೆಗಳು ಸುಖವನ್ನು ಬಯಸಿ ಸುಖದಿಂದಿರುವುದಿಲ್ಲ. ಅವರು ಕಲ್ಪಗಳು ಬದಲಾಗುವಾಗ ಬದಲಾಗುವುದಿಲ್ಲ. ಅವರಿಗೆ ವೃದ್ಧಾಪ್ಯ, ಮೃತ್ಯುವು ಎಲ್ಲಿದೆ? ಪ್ರೀತಿ ಸುಖಗಳೂ ಇಲ್ಲ. ದುಃಖ ಸುಖಗಳಿಲ್ಲದ ಅವರಿಗೆ ರಾಗದ್ವೇಷಗಳು ಎಲ್ಲಿಂದ? ಅವರ ಪರಮ ಗತಿಯನ್ನು

ದೇವತೆಗಳು ಕೂಡ ಬಯಸುತ್ತಾರೆ. ಆ ಪರಮಸಿದ್ಧಿಯನ್ನು ಪಡೆಯುವುದು ಕಷ್ಟ ಮತ್ತು ಕಾಮಗೋಚರರಿಗೆ ಅಗಮ್ಯ. ಅಂಥಹವರ ಸಂಖ್ಯೆ ಮೂವತ್ತುಮೂರು. ಅವರ ಲೋಕಕ್ಕೆ ವಿಧಿಪೂರ್ವಕವಾಗಿ ನಿಯಮಗಳಿಂದ ಶ್ರೇಷ್ಠ ದಾನಮಾಡಿದವರು ಹೋಗುತ್ತಾರೆ. ನೀನು ಮಾಡಿದ ದಾನಗಳ ಮೂಲಕ ನೀನೂ ಕೂಡ ಪ್ರಭೆಯಿಂದ ದ್ಯೋತಿಸಲ್ಪಟ್ಟ ಈ ಸುಖವನ್ನು ಪಡೆದಿದ್ದೀಯೆ. ತಪಸ್ಸಿನಿಂದ ಸುಕೃತಗಳಿಂದ ಪಡೆದ ಅದನ್ನು ಅನುಭೋಗಿಸು. ಇದು ಸ್ವರ್ಗಲೋಕದ ನಾನಾವಿಧದ ಸುಖದ ಗುಣಗಳು. ಈಗ ನಿನಗೆ ಹೇಳುವ ದೋಷಗಳ ಕುರಿತೂ ಕೇಳು. ದಿವಿಯಲ್ಲಿ ಮೊದಲೇ ಮಾಡಿದ ಕರ್ಮಗಳ ಫಲವನ್ನು ಅನುಭವಿಸಬಹುದೇ ಹೊರತು ಇತರ ಕರ್ಮಗಳನ್ನು ಮಾಡಲಿಕ್ಕಾಗುವುದಿಲ್ಲ. ಹಿಂದಿನ ಕರ್ಮಗಳ ಫಲಗಳನ್ನು ಸಂಪೂರ್ಣವಾಗಿ ಅನುಭವಿಸಬೇಕು ಮತ್ತು ಅದು ಮುಗಿದ ನಂತರ ಅಲ್ಲಿಂದ ಪತನವನ್ನು ಹೊಂದುತ್ತಾನೆ ಎನ್ನುವುದು ನನ್ನ ಪ್ರಕಾರ ಅಲ್ಲಿಯ ದೋಷ. ಆ ಶ್ರೇಷ್ಠ ಸ್ಥಾನದಲ್ಲಿದ್ದುಕೊಂಡು, ದೀಪ್ತ ಶ್ರೀಯನ್ನು ಹೊಂದಿದ್ದು ನಂತರ ಪರಿತಪಿಸುವುದು ಮತ್ತು ದುಃಖಪಡುವುದನ್ನು ನೋಡುವುದು ದುಷ್ಕರ. ಕೆಳಗೆ ಬೀಳುವವರ ಸಂಜ್ಞೆಗಳು ಮೋಹದಿಂದ ಕೂಡಿದ್ದು ರಜಸ್ಸಿನಿಂದ ತುಂಬಿರುತ್ತವೆ. ಬಾಡಿಹೋಗುತ್ತಿರುವ ಮಾಲೆಗಳಂತೆ ಬೀಳುತ್ತಿರುವವರನ್ನು ಭಯವು ಕವಿಯುತ್ತದೆ.

ಈ ದಾರುಣ ದೋಷಗಳು ಬ್ರಹ್ಮಭವನದವರೆಗೂ ಇದೆ. ಸುಕೃತ ಮಾನವರು ನಾಕಲೋಕದಲ್ಲಿ ಅಗಣಿತ ಗುಣಗಳನ್ನು ಅನುಭವಿಸುತ್ತಾರೆ. ಸ್ವರ್ಗದಿಂದ ಚ್ಯುತರಾದ ಶ್ರೇಷ್ಠರು ಶುಭಾನುಶಯ ಯೋಗದಿಂದ ಮನುಷ್ಯರಲ್ಲಿ ಹುಟ್ಟುತ್ತಾರೆ. ಇದು ಇದರ ಇನ್ನೊಂದು ಗುಣ. ಅಲ್ಲಿಯೂ ಕೂಡ ಆ ಸುಮಹಾಭಾಗರು ತಿಳಿದವರಾಗಿದ್ದರೆ ಸುಖಗಳಿಗೆ ಭಾಗಿಯಾಗುತ್ತಾರೆ. ಇಲ್ಲದಿದ್ದರೆ ಕೆಳಗೆ ಹೋಗುತ್ತಾರೆ. ಇಲ್ಲಿ ಮಾಡಿದ ಕರ್ಮಗಳನ್ನು ಮುಂದಿನದರಲ್ಲಿ ಅನುಭವಿಸುತ್ತಾನೆ. ಇದು ಕರ್ಮಭೂಮಿಯಾಗಿದ್ದರೆ ಅದನ್ನು ಫಲಭೂಮಿಯೆಂದು ತಿಳಿಯುತ್ತಾರೆ. ಮುದ್ಗಲ! ನನಗೆ ಕೇಳಿದ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ನಿನಗೆ ಒಳ್ಳೆಯ ಅನುಕಂಪವಿದ್ದರೆ ತಡಮಾಡದೇ ಹೋಗೋಣ."

ಇದನ್ನು ಕೇಳಿದ ಮೌದ್ಗಲ್ಯನು ಮನಸ್ಸಿನಲ್ಲಿಯೇ ವಿಮರ್ಶಿಸಿದನು. ವಿಮರ್ಶಿಸಿ ಆ ಮುನಿಶ್ರೇಷ್ಠನು ದೇವದೂತನಿಗೆ ಹೇಳಿದನು.

"ಗೆಳೆಯ! ದೇವದೂತ! ನಿನಗೆ ನಮಸ್ಕಾರಗಳು. ಯಥಾಸುಖವಾಗಿ ಹೋಗು. ಮಹಾದೋಷ ಅಥವಾ ಗುಣಗಳಿಂದ ಕೂಡಿದ ಸ್ವರ್ಗದಿಂದ ನನಗೇನೂ ಕೆಲಸವಿಲ್ಲ. ಸ್ವರ್ಗವನ್ನು ಭೋಗಿಸಿದ ನಂತರ ಆ ಮಹಾದುಃಖ ಮತ್ತು ಸುದಾರುಣ ಪರಿತಾಪದ ಪತನವಿದೆ. ಆದುದರಿಂದ ನನಗೆ

ಸ್ವರ್ಗವು ಬೇಕಾಗಿಲ್ಲ. ಎಲ್ಲಿ ಶೋಕವಿಲ್ಲವೋ, ವ್ಯಥೆಯಿಲ್ಲವೋ, ಚಲನೆಯಿಲ್ಲವೋ ಕೇವಲ ಆ ಅತ್ಯಂತವಾದ ಸ್ಥಾನದ ಮಾರ್ಗವಾಗಿ ಹೋಗಲು ಬಯಸುತ್ತೇನೆ."

ಈ ಮಾತುಗಳನ್ನಾಡಿ ಆ ಮುನಿಯು ದೇವದೂತನನ್ನು ಕಳುಹಿಸಿದನು. ಭತ್ತಕುಟ್ಟುವ ವೃತ್ತಿಯನ್ನು ಬಿಟ್ಟು ಉತ್ತಮ ಶಾಂತಿಯನ್ನು ಹೊಂದಿದನು. ನಿಂದನೆ ಸ್ತುತಿಗಳನ್ನು ಸಮನಾಗಿ ಕಾಣುತ್ತಾ, ಕಲ್ಲು ಕಾಂಚನಗಳನ್ನು ಸಮನಾಗಿ ಕಾಣುತ್ತಾ ಜ್ಞಾನಯೋಗದಿಂದ ಶುದ್ಧನಾಗಿ ಧ್ಯಾನನಿತ್ಯನಾದನು. ಧ್ಯಾನಯೋಗದಿಂದ ಬಲವನ್ನು ಪಡೆದು ಅನುತ್ತಮ ಬುದ್ಧಿಯನ್ನು ಪಡೆದು ನಿರ್ವಾಣಲಕ್ಷಣದ ಶಾಶ್ವತವಾದ ಪರಮ ಸಿದ್ಧಿಯನ್ನು ಪಡೆದನು.

# ರಾಮೋಪಾಽಖ್ಯಾನ: ರಾಮಕಥೆ

[ರಾಮಾಯಣದ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ದ್ರೌಪದೀಹರಣ ಪರ್ವ (ಅಧ್ಯಾಯ ೨೫೭-೨೭೫) ದಲ್ಲಿ ಬರುತ್ತದೆ. ಈ ಕಥೆಯನ್ನು ಋಷಿ ಮಾರ್ಕಂಡೇಯನು ಯುಧಿಷ್ಠಿರನಿಗೆ ಹೇಳಿದನು.]

ಜಯದ್ರಥನನ್ನು ಸೋಲಿಸಿ ಕೃಷ್ಣೆಯನ್ನು ಬಿಡುಗಡೆಗೊಳಿಸಿದ ಧರ್ಮರಾಜ ಯುಧಿಷ್ಠಿರನು ಮುನಿಗಳ ಮಧ್ಯದಲ್ಲಿ ಕುಳಿತುಕೊಂಡಿದ್ದನು. ಅದರ ಕುರಿತು ಕೇಳಿ ದುಃಖಿತರಾದ ಆ ಮಹರ್ಷಿಗಳ ಮಧ್ಯದಲ್ಲಿದ್ದ ಮಾರ್ಕಂಡೇಯನಿಗೆ ಪಾಂಡುನಂದನನು ಈ ಮಾತುಗಳನ್ನಾಡಿದನು:

> "ಬಲವಾನ್ ಕಾಲ ಮತ್ತು ಆಗಬೇಕಾಗಿದ್ದ ವಿಧಿನಿರ್ಮಿತ ದೈವವನ್ನು ಇರುವ ಯಾರೂ ಅತಿಕ್ರಮಿಸಲು ಸಾಧ್ಯವಿಲ್ಲ ಎನ್ನುವುದನ್ನು ಮನ್ನಿಸೋಣ. ಆದರೂ ಧರ್ಮಜ್ಞೆ ಮತ್ತು ಧರ್ಮಚಾರಿಣಿ ನಮ್ಮ ಪತ್ನಿಗೆ ಹೀಗೇಕಾಯಿತು? ಶುಚಿಯಾದವನಿಗೆ ಸುಳ್ಳಿನ ಅಪವಾದವು ಏಕೆ ಬರುತ್ತದೆ? ದ್ರೌಪದಿಯು ಯಾವುದೇ ಪಾಪಕರ್ಮವನ್ನು ಮಾಡಿಲ್ಲ ಮತ್ತು ಯಾರನ್ನೂ ನಿಂದಿಸಿಲ್ಲ. ಬ್ರಾಹ್ಮಣರೊಡನೆ ಅವಳು ಮಹಾಧರ್ಮವನ್ನೇ ಆಚರಿಸುತ್ತಿದ್ದಾಳೆ. ಮೂಢಬುದ್ಧಿಯ ರಾಜಾ ಜಯದ್ರಥನು ಬಲಾತ್ಕಾರದಿಂದ ಅವಳನ್ನು

ಅಪಹರಿಸಿದ. ಅವನ ಅನುಯಾಯಿಗಳೊಂದಿಗೆ ಸಂಗ್ರಾಮದಲ್ಲಿ ಪರಾಜಯವನ್ನು ಹೊಂದಿ ತಲೆಯ ಕೂದಲನ್ನು ಬೋಳಿಸಿಕೊಂಡ. ಮೃಗಗಳನ್ನು ಅವಲಂಬಿಸಿ ಜೀವಿಸುವ ಈ ವನವಾಸವು ದುಃಖತರವಾದುದು. ವನದಲ್ಲಿ ವಾಸಿಸುವವರು ವನದಲ್ಲಿರುವ ಮೃಗಜಾತಿಗಳನ್ನು ಬೇಟೆಯಾಡಿ ಹಿಂಸಿಸಬೇಕಾಗುತ್ತದೆ. ಮೋಸಗಾರರಾದ ನಮ್ಮ ಬಾಂಧವರೇ ನಮಗೆ ಈ ವನವಾಸವನ್ನಿತ್ತಿದ್ದಾರೆ. ನನಗಿಂತಲೂ ದುರಾದೃಷ್ಟರು ಇನ್ನು ಯಾರಾದರೂ ಇದ್ದಾರೆಯೇ ಅಥವಾ ಹಿಂದೆ ಯಾರಾದರೂ ಇದ್ದರೇ? ಅಂಥವರನ್ನು ನೀನು ಇದಕ್ಕೂ ಹಿಂದೆ ನೋಡಿದ್ದೆಯಾ ಅಥವಾ ಕೇಳಿದ್ದೆಯಾ?”

ಮಾರ್ಕಂಡೇಯನು ಹೇಳಿದನು:

“ಭರತರ್ಷಭ! ತನ್ನ ಪತ್ನಿ ಜಾನಕಿಯನ್ನು ರಾಕ್ಷಸನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋದಾಗ ರಾಮನು ಅಪ್ರತಿಮ ದುಃಖವನ್ನು ಅನುಭವಿಸಿದನು. ರಾಕ್ಷಸೇಂದ್ರ ರಾವಣನು ಮಾಯೆಯಿಂದ ಅವಳನ್ನು ಆಶ್ರಮದಿಂದ ಕದ್ದು ಜಟಾಯುವನ್ನು ಸಂಹರಿಸಿ ಕ್ಷಣಮಾತ್ರದಲ್ಲಿ ಆಕಾಶಮಾರ್ಗದಲ್ಲಿ ಹೋದನು. ರಾಮನು ಸುಗ್ರೀವನ ಸೇನೆಯ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ

ತೀಕ್ಷ್ಣ ಶರಗಳಿಂದ ಲಂಕೆಯನ್ನು ಸುಟ್ಟು ಅವಳನ್ನು ಪುನಃ ಪಡೆದನು.”

ಯುಧಿಷ್ಠಿರನು ಹೇಳಿದನು:

“ರಾಮನು ಯಾವ ಕುಲದಲ್ಲಿ ಜನಿಸಿದನು ಮತ್ತು ಅವನು ಎಷ್ಟು ವೀರನೂ ಪರಾಕ್ರಮಿಯೂ ಆಗಿದ್ದನು? ರಾವಣನು ಯಾರ ಮಗ ಮತ್ತು ರಾಮನೊಂದಿಗೆ ಅವನ ದ್ವೇಷವಾದರೂ ಏನಿತ್ತು? ಭಗವನ್! ಇವೆಲ್ಲವನ್ನೂ ನೀನು ನನಗೆ ಹೇಳಬೇಕು. ಅಕ್ಲಿಷ್ಟಕರ್ಮಿ ರಾಮನ ಕಥೆಯನ್ನು ಕೇಳ ಬಯಸುತ್ತೇನೆ.”

ಆಗ ಮುನಿ ಮಾರ್ಕಂಡೇಯನು ಯುಧಿಷ್ಠಿರನಿಗೆ ರಾಮೋಪಾಖ್ಯಾನವನ್ನು ಹೇಳಿದನು.

***

## ರಾಮ-ರಾವಣಾದಿಗಳ ಜನನ

ಮಹಾನ್ ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ಅಜ ಎಂಬ ಹೆಸರಿನ ರಾಜನಿದ್ದನು. ಅವನ ಪುತ್ರ ದಶರಥನು ಯಾವಾಗಲೂ ಸ್ವಾಧ್ಯಾಯದಲ್ಲಿ ತೊಡಗಿದ್ದು ಶುಚಿಯಾಗಿದ್ದನು. ಅವನಿಗೆ ಧರ್ಮಾರ್ಥಕೋವಿದರಾದ ಮಹಾಬಲಶಾಲಿಗಳಾದ ರಾಮ, ಲಕ್ಷ್ಮಣ, ಶತ್ರುಘ್ನ ಮತ್ತು ಭರತರೆಂಬ ನಾಲ್ವರು ಪುತ್ರರಾದರು, ರಾಮನ ತಾಯಿ

ಕೌಸಲ್ಯೆ. ಭರತನ ತಾಯಿ ಕೈಕೇಯೀ ಮತ್ತು ಲಕ್ಷ್ಮಣ-ಶತ್ರುಘ್ನರು ಸುಮಿತ್ರೆಯ ಮಕ್ಕಳು. ವಿದೇಹರಾಜ ಜನಕ ಮತ್ತು ಅವನ ಮಗಳು ಸೀತೆ. ಸ್ವಯಂ ಬ್ರಹ್ಮನೇ ಅವಳನ್ನು ರಾಮನ ಪ್ರಿಯ ಮಹಿಷಿಯನ್ನಾಗಿ ಮಾಡಿದ್ದನು. ಇದು ರಾಮ ಮತ್ತು ಸೀತೆಯರ ಜನ್ಮಕಥೆ.

ಸಾಕ್ಷಾತ್ ಪ್ರಜಾಪತಿ ಸೃಷ್ಟಿಕರ್ತ ಬ್ರಹ್ಮನೇ ರಾವಣನ ಪಿತಾಮಹ. ಬ್ರಹ್ಮನಿಗೆ ಪುಲಸ್ತ್ಯ ಎಂಬ ಹೆಸರಿನ ಮಾನಸಪುತ್ರನಿದ್ದನು. ಪುಲಸ್ತ್ಯನಿಗೆ ಗೋವಿನಲ್ಲಿ ವೈಶ್ರವಣ ಎಂಬ ಹೆಸರಿನ ಪುತ್ರನಾದನು. ಅವನು ತಂದೆಯನ್ನು ತೊರೆದು ಪಿತಾಮಹನಲ್ಲಿ ವಾಸಿಸಿದನು. ಇದರಿಂದ ಕೋಪಗೊಂಡ ಪುಲಸ್ತ್ಯನು ತನ್ನ ಅರ್ಧದಿಂದ ವಿಶ್ರವಾ ಎಂಬ ಹೆಸರಿನವನನ್ನು ಹುಟ್ಟಿಸಿದನು. ಪಿತಾಮಹ ಬ್ರಹ್ಮನಾದರೋ ಆ ವೈಶ್ರವ ಕುಬೇರನ ಮೇಲೆ ಸಂತೋಷಗೊಂಡು ಅವನಿಗೆ ಅಮರತ್ವವನ್ನೂ, ಧನೇಶತ್ವವನ್ನೂ, ಲೋಕಪಾಲತ್ವವನ್ನೂ, ಈಶಾನನ ಸಖ್ಯವನ್ನೂ, ನಲಕೂಬರನೆನ್ನುವ ಪುತ್ರನನ್ನೂ, ರಾಕ್ಷಸಗಣಗಳಿಂದೊಡಗೂಡಿದ ಲಂಕೆಯನ್ನು ರಾಜಧಾನಿಯನ್ನಾಗಿಯೂ ನಿವಾಸಸ್ಥಾನವನ್ನಾಗಿಯೂ ನೀಡಿದನು.

ರಾಕ್ಷಸೇಶ್ವರ ಕುಬೇರನಾದರೋ ತನ್ನ ತಂದೆಯು ಕುಪಿತನಾಗಿದ್ದಾನೆಂದು ತಿಳಿದಿದ್ದನು ಮತ್ತು ಅವನನ್ನು ಪ್ರಸೀದಗೊಳಿಸಲು ಸದಾ ಪ್ರಯತ್ನಿಸುತ್ತಿದ್ದನು. ಆ ರಾಜರಾಜ ನರವಾಹನನು ಲಂಕೆಯಲ್ಲಿ ವಾಸಿಸುವಾಗ ತನ್ನ ತಂದೆಗೆ ಮೂರು ರಾಕ್ಷಸಿಯರನ್ನು ದಾಸಿಯರನ್ನಾಗಿ

ಕೊಟ್ಟನು. ಆ ನೃತ್ಯಗೀತವಿಶಾರದರು ಮಹಾತ್ಮ ಋಷಿಯನ್ನು ಸಂತೋಷಪಡಿಸಲು ಉತ್ಸುಕರಾಗಿದ್ದರು. ಪುಷ್ಪೋತ್ಕಟಾ, ರಾಕಾ ಮತ್ತು ಮಾಲಿನೀ ಎಂಬ ಆ ಮೂವರು ಸುಮಧ್ಯಮೆಯರು ಶ್ರೇಯಸ್ಸನ್ನು ಬಯಸಿ ಅನ್ಯೋನ್ಯರೊಡನೆ ಸ್ಪರ್ಧಿಸುತ್ತಿದ್ದರು. ಸಂತುಷ್ಟನಾದ ವಿಶ್ರವನು ಅವರಲ್ಲಿ ಪ್ರತಿಯೊಬ್ಬರಿಗೂ ಅವರು ಬಯಸಿದ ಲೋಕಪಾಲಸಮ ಪುತ್ರರನ್ನು ವರವಾಗಿ ನೀಡಿದನು. ಪುಷ್ಪೋತ್ಕಟೆಯಲ್ಲಿ ಬಲದಲ್ಲಿ ಅಪ್ರತಿಮರಾದ ಕುಂಭಕರ್ಣ-ದಶಗ್ರೀವರೆಂಬ ಇಬ್ಬರು ರಾಕ್ಷಸೇಶ್ವರರು ಹುಟ್ಟಿದರು. ಮಾಲಿನಿಯಲ್ಲಿ ವಿಭೀಷಣನೆಂಬ ಓರ್ವ ಪುತ್ರನು ಜನಿಸಿದನು. ರಾಕಾಳಲ್ಲಿ ಇಬ್ಬರು ಅವಳಿಗಳು – ಖರ ಮತ್ತು ಶೂರ್ಪಣಖಿ – ಹುಟ್ಟಿದರು. ವಿಭೀಷಣನಾದರೋ ರೂಪದಲ್ಲಿ ಅವರೆಲ್ಲರ ಅಧಿಕನಾಗಿದ್ದನು ಮತ್ತು ಆ ಮಹಾಭಾಗನು ಧರ್ಮಗೋಪ್ತನೂ ಕ್ರಿಯಾರತಿಯೂ ಆಗಿದ್ದನು. ಅವರೆಲ್ಲರ ಜ್ಯೇಷ್ಠ ರಾಕ್ಷಸಪುಂಗವ ದಶಗ್ರೀವನು ಮಹೋತ್ಸಾಹನೂ, ಮಹಾವೀರ್ಯವಂತನೂ, ಮಹಾ ಸತ್ತ್ವಪರಾಕ್ರಮಿಯೂ ಆಗಿದ್ದನು. ಕುಂಭಕರ್ಣನು ಬಲದಲ್ಲಿ ಎಲ್ಲರಿಗಿಂತಲೂ ಅಧಿಕನಾಗಿದ್ದನು. ಆ ರಜನೀಚರನು ಮಾಯಾವಿಯೂ ರಣಶೌಂಡನೂ ರೌದ್ರನೂ ಆಗಿದ್ದನು. ಖರನು ಧನುಸ್ಸಿನಲ್ಲಿ ವಿಕ್ರಾಂತನಾಗಿದ್ದನು ಮತ್ತು ಬ್ರಾಹ್ಮಣರ ಮಾಂಸವನ್ನು ಭಕ್ಷಿಸುತ್ತಿದ್ದನು. ಶೂರ್ಪಣಖಿಯು ರೌದ್ರಳಾಗಿದ್ದು ಸಿದ್ಧರಿಗೆ ವಿಘ್ನಗಳನ್ನುಂಟುಮಾಡುತ್ತಿದ್ದಳು. ಅವರೆಲ್ಲರೂ ವೇದವಿದರೂ ಶೂರರೂ ಸುಚರಿತವ್ರತರೂ ಆಗಿದ್ದು ತಂದೆಯೊಂದಿಗೆ ಗಂಧಮಾದನ

ಪರ್ವತದಲ್ಲಿ ಸಂತೋಷದಿಂದಿದ್ದರು.

## ರಾವಣಾದಿಗಳಿಗೆ ವರದಾನ

ಒಮ್ಮೆ ಅಲ್ಲಿ ತಂದೆಯ ಬಳಿಗೆ ನರವಾಹನ ವೈಶ್ರವಣ ಕುಬೇರನು ಪರಮ ವೈಭವದಿಂದ ಕುಳಿತಿರುದುದನ್ನು ಅವರು ನೋಡಿದರು. ಆಗ ಅವರಲ್ಲಿ ಸ್ಪರ್ಧಾಭಾವನೆಯು ಹುಟ್ಟಲು ಆ ಧೃತನಿಶ್ಚಯಿಗಳು ಘೋರ ತಪಸ್ಸಿನಿಂದ ಬ್ರಹ್ಮನನ್ನು ತೃಪ್ತಿಪಡೆಸಿದರು. ದಶಗ್ರೀವನು ಸುಸಮಾಹಿತನಾಗಿ ಪಂಚಾಗ್ನಿಗಳ ಮಧ್ಯೆ ಒಂದೇ ಕಾಲಿನ ಮೇಲೆ ನಿಂತು ಸಹಸ್ರ ವರ್ಷಗಳ ಪರ್ಯಂತ ವಾಯುಭಕ್ಷಕನಾಗಿ ತಪಿಸಿದನು. ಕುಂಭಕರ್ಣನು ಯತಾಹಾರನೂ ಯತವ್ರತನೂ ಆಗಿ ನೆಲದ ಮೇಲೆ ಮಲಗಿಕೊಂಡನು ಮತ್ತು ಧೀಮಾನ್ ವಿಭೀಷಣನು ಒಂದೇ ಒಂದು ಒಣಗಿದ ಎಲೆಯನ್ನು ಆಹಾರವನ್ನಾಗಿಸಿಕೊಂಡು ಬಹುಕಾಲದವರೆಗೆ ಅತೀವ ತೀವ್ರ ತಪಸ್ಸನ್ನಾಚರಿಸಿದನು. ಖರ ಮತ್ತು ಶೂರ್ಪಣಖಿಯರು ಸಂತೋಷದಿಂದ ತಪಸ್ಸನ್ನು ತಪಿಸುತ್ತಿದ್ದವರ ಪರಿಚಾರಕರಾಗಿ ಅವರನ್ನು ರಕ್ಷಣೆಮಾಡುತ್ತಿದ್ದರು. ಸಹಸ್ರವರ್ಷಗಳು ಸಂಪೂರ್ಣವಾದ ನಂತರ ದಶಾನನನು ಶಿರವನ್ನು ಕತ್ತರಿಸಿ ಅಗ್ನಿಯಲ್ಲಿ ಆಹುತಿಯನ್ನಾಗಿತ್ತನು. ಅವನ ಈ ದುರಾಧರ್ಷಕೃತ್ಯದಿಂದ ಜಗತ್ಪ್ರಭುವು ಸಂತುಷ್ಟನಾದನು. ಆಗ ಸ್ವಯಂ ಬ್ರಹ್ಮನು ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ವರದಾನದ ಲೋಭವನ್ನಿತ್ತು ಅವರ ತಪಸ್ಸನ್ನು ತಡೆದನು. ಬ್ರಹ್ಮನು ಹೇಳಿದನು:

"ಮಕ್ಕಳೇ! ಪ್ರೀತನಾಗಿದ್ದೇನೆ. ನಿಮ್ಮ ಈ ತಪಸ್ಸನ್ನು ನಿಲ್ಲಿಸಿ ವರವನ್ನು ಕೇಳಿ. ಅಮರತ್ವವನ್ನು ಬಿಟ್ಟು ಬಯಸಿದುದು ಬೇರೆ ಏನೇ ಇರಲಿ, ಹಾಗೆಯೇ ಆಗುತ್ತದೆ. ಮಹಾ ಆಸೆಗಳನ್ನಿಟ್ಟುಕೊಂಡು ಅಗ್ನಿಯಲ್ಲಿ ಆಹುತಿಯನ್ನಾಗಿತ್ತ ನಿನ್ನ ಶಿರಗಳೆಲ್ಲವೂ ಮೊದಲಿನ ಹಾಗೆಯೇ ನಿನ್ನ ದೇಹವನ್ನು ಸೇರುತ್ತವೆ. ನಿನ್ನ ದೇಹಕ್ಕೆ ವೈರೂಪವೆನ್ನುವುದೇ ಇಲ್ಲದಿರಲಿ ಮತ್ತು ನೀನು ಬೇಕಾದ ರೂಪವನ್ನು ಧರಿಸಬಲ್ಲವನಾಗುವೆ. ರಣದಲ್ಲಿ ಅರಿಗಳಿಂದ ವಿಜಯಿಯಾಗುವೆ ಎನ್ನುವುದರಲ್ಲಿ ಸಂಶಯವೇ ಇಲ್ಲ."

ರಾವಣನು ಹೇಳಿದನು:

"ಗಂಧರ್ವ, ದೇವತೆ, ಅಸುರ, ಯಕ್ಷ, ರಾಕ್ಷಸ, ಸರ್ಪ, ಕಿನ್ನರ ಭೂತಗಳಿಂದ ನನಗೆ ಪರಾಭವವಾಗದಿರಲಿ."

ಬ್ರಹ್ಮನು ಹೇಳಿದನು:

"ಮನುಷ್ಯನನ್ನು ಬಿಟ್ಟು ನೀನು ಕೇಳಿಕೊಂಡ ಈ ಎಲ್ಲರಿಂದ ನಿನಗೆ ಭಯವಿರುವುದಿಲ್ಲ. ಇದು ನನ್ನ ಆದೇಶ. ನಿನಗೆ ಮಂಗಳವಾಗಲಿ."

ಈ ಮಾತುಗಳಿಂದ ದಶಗ್ರೀವನು ಸಂತುಷ್ಟನಾದನು. ಏಕೆಂದರೆ ಆ ಪುರುಷಾದಕ ದುರ್ಬುದ್ಧಿಯು ಮನುಷ್ಯರನ್ನು ಕೀಳುಭಾವದಿಂದ

ನೋಡುತ್ತಿದ್ದನು. ಹಾಗೆಯೇ ಪಿತಾಮಹನು ಕುಂಭಕರ್ಣನನ್ನು ಕೇಳಲು ಅವನ ಚೇತನವು ತಾಮಸದ ಹಿಡಿತದಲ್ಲಿದ್ದು, ಅವನು ಮಹತ್ತರ ನಿದ್ದೆಯನ್ನು ವರವನ್ನಾಗಿ ಕೇಳಿದನು. ಹಾಗೆಯೇ ಆಗುತ್ತದೆಯೆಂದು ಹೇಳಿ ಅವನು ವಿಭೀಷಣನಿಗೆ

> "ಪುತ್ರ! ಪ್ರೀತನಾಗಿದ್ದೇನೆ. ವರವನ್ನು ಕೇಳಿಕೋ!"

ಎಂದು ಪುನಃ ಪುನಃ ಹೇಳಿದನು. ವಿಭೀಷಣನು ಹೇಳಿದನು:

> "ಪರಮ ಆಪತ್ತನ್ನು ಪಡೆದರೂ ನನ್ನ ಬುದ್ಧಿಯು ಅಧರ್ಮದಲ್ಲಿ ನಿಲ್ಲದಿರಲಿ. ಕಲಿಯದೇ ಇದ್ದರೂ ನನಗೆ ಬ್ರಹ್ಮಾಸ್ತ್ರವು ಹೊಳೆಯಲಿ."

ಬ್ರಹ್ಮನು ಹೇಳಿದನು:

> "ರಾಕ್ಷಸ ಯೋನಿಯಲ್ಲಿ ಜನಿಸಿದ್ದರೂ ಕೂಡ ಎಲ್ಲಿಯವರೆಗೆ ನಿನ್ನ ಬುದ್ಧಿಯು ಅಧರ್ಮದಲ್ಲಿ ಆನಂದಿಸುವುದಿಲ್ಲವೋ ಅಲ್ಲಿಯವರೆಗೆ ನಿನಗೆ ಅಮರತ್ವವನ್ನು ನೀಡುತ್ತೇನೆ."

ವರವನ್ನು ಪಡೆದು ರಾಕ್ಷಸ ದಶಗ್ರೀವನಾದರೋ ಯುದ್ಧದಲ್ಲಿ ಧನೇಶ್ವರ ಕುಬೇರನನ್ನು ಜಯಿಸಿ ಅವನನ್ನು ಲಂಕೆಯಿಂದ ಹೊರಗೋಡಿಸಿದನು. ಆ ಭಗವಾನನು ಲಂಕೆಯನ್ನು ತೊರೆದು ಹಿಂಬಾಲಿಸಿದ ಗಂಧರ್ವ, ಯಕ್ಷ, ರಾಕ್ಷಸ ಕಿಂಕರರೊಡನೆ ಗಂಧಮಾದನವನ್ನು ಪ್ರವೇಶಿಸಿದನು.



ಅಕ್ರಮವಾಗಿ ರಾವಣನು ಅವನ ಪುಷ್ಪಕ ವಿಮಾನವನ್ನು ಅಪಹರಿಸಿದನು ಮತ್ತು ಅದಕ್ಕೆ ವೈಶ್ರವಣ ಕುಬೇರನು ಅವನಿಗೆ ಶಪಿಸಿದನು:

> "ಇದನ್ನು ನೀನು ಏರಲಾರೆ! ಸಮರದಲ್ಲಿ ಯಾರು ನಿನ್ನನ್ನು ಕೊಲ್ಲುತ್ತಾನೋ ಅವನು ಮಾತ್ರ ಇದನ್ನು ಏರಬಲ್ಲನು. ಹಿರಿಯವನಾಗಿದ್ದ ನನ್ನನ್ನು ಅಪಮಾನಿಸಿದಂತೆ ಕ್ಷಿಪ್ರವಾಗಿ ನಿನಗೂ ಹಾಗೆಯೇ ಆಗುತ್ತದೆ."

ಧರ್ಮಾತ್ಮ ವಿಭೀಷಣನಾದರೋ ಪರಮ ತೇಜಸ್ಸಿನಿಂದೊಡಗೂಡಿ ಸತ್ಯವಂತರ ಧರ್ಮವನ್ನು ಮನಸ್ಸಿನಲ್ಲಿಟ್ಟುಕೊಂಡು ಅನುಸರಿಸಿದನು. ಅಣ್ಣ ಭಗವಾನ್ ಧನೇಶ್ವರನು ಆ ಧೀಮಂತ ತಮ್ಮನಿಂದ ತುಷ್ಟನಾಗಿ ಅವನಿಗೆ ಯಕ್ಷ-ರಾಕ್ಷಸ ಸೇನೆಗಳ ಸೇನಾಪತ್ಯವನ್ನು ಕೊಟ್ಟನು. ನರಭಕ್ಷಕ ರಾಕ್ಷಸರು ಮತ್ತು ಮಹಾಬಲಶಾಲಿ ಪಿಶಾಚಿಗಳು ಎಲ್ಲರೂ ಸೇರಿ ದಶಾನನನನ್ನು ರಾಜನನ್ನಾಗಿ ಅಭಿಷೇಕಿಸಿದರು. ಬಲೋತ್ಕಟನದ ಆ ಕಾಮರೂಪೀ ವಿಹಂಗಮ ದಶಗ್ರೀವನು ದೈತ್ಯ ಮತ್ತು ದೇವರಿಂದ ಅಕ್ರಮವಾಗಿ ರತ್ನಗಳನ್ನು ಅಪಹರಿಸಿದನು. ಲೋಕಗಳನ್ನು ರೋದಿಸುವಂತೆ ಮಾಡಿದುದರಿಂದ ಅವನನ್ನು ರಾವಣನೆಂದು ಕರೆಯುತ್ತಾರೆ. ಕಾಮಬಲ ದಶಗ್ರೀವನು ದೇವತೆಗಳಿಗೆ ಭಯವನ್ನುಂಟುಮಾಡಿದನು.

## ರಾವಣನ ಸಂಹಾರಕ್ಕೆ ವಿಷ್ಣು ಮತ್ತು ಅನ್ಯ ದೇವತೆಗಳ ಅವತಾರ

ಆಗ ಬ್ರಹ್ಮರ್ಷಿಗಳು, ಸಿದ್ಧರು, ಮತ್ತು ದೇವ-ರಾಜರ್ಷಿಗಳು ಹವ್ಯವಾಹನನ್ನು ಮುಂದಿಟ್ಟುಕೊಂಡು ಬ್ರಹ್ಮನ ಶರಣು ಹೋದರು. ಅಗ್ನಿಯು ಹೇಳಿದನು:

"ವಿಶ್ರವಸನ ಮಗ ಮಹಾಬಲಶಾಲೀ ದಶಗ್ರೀವನನ್ನು ನೀನು ಹಿಂದೆ ವರದಾನದಿಂದ ಅವಧ್ಯನನ್ನಾಗಿ ಮಾಡಿದ್ದೀಯೆ. ಈಗ ಆ ಮಹಾಬಲನು ಸರ್ವ ಪ್ರಜೆಗಳನ್ನೂ ದ್ವೇಷಕಾರ್ಯಗಳಿಂದ ಬಾಧಿಸುತ್ತಿದ್ದಾನೆ. ಭಗವನ್! ಅವನಿಂದ ನಮ್ಮನ್ನು ರಕ್ಷಿಸು! ಬೇರೆ ಯಾವ ರಕ್ಷಕನನ್ನೂ ನಾವು ತಿಳಿಯೆವು!"

ಬ್ರಹ್ಮನು ಹೇಳಿದನು:

"ವಿಭಾವಸೋ! ಯುದ್ಧದಲ್ಲಿ ಅವನನ್ನು ಗೆಲ್ಲಲು ದೇವಾಸುರರಿಗೂ ಸಾಧ್ಯವಿಲ್ಲ. ಆದರೂ ಇವನ ನಿಗ್ರಹಕ್ಕೆಂದು ಕಾರ್ಯವು ವಿಹಿತವಾಗಿದೆ. ಅದಕ್ಕಾಗಿಯೇ ನನ್ನ ನಿಯೋಗದಂತೆ ಅವತರಿಸಿರುವ ಪ್ರಹರಿಗಳಲ್ಲಿ ಶ್ರೇಷ್ಠ ಚತುರ್ಭುಜ ವಿಷ್ಣುವು ಇದೇ ಕಾರ್ಯವನ್ನು ಮಾಡುತ್ತಾನೆ. ಸರ್ವ ದೇವಗಣಗಳೊಂದಿಗೆ ಮಹೀತಲದಲ್ಲಿ ಅವತರಿಸಿ. ವಿಷ್ಣುವಿನ ಸಹಾಯಕ್ಕಾಗಿ ಕರಡಿಗಳಲ್ಲಿ ಮತ್ತು ವಾನರರಲ್ಲಿ ಎಲ್ಲರೂ ವೀರರೂ ಕಾಮರೂಪಿಗಳೂ ಮತ್ತು ಬಲಾನ್ವಿತರೂ ಆದ ಮಕ್ಕಳನ್ನು ಹುಟ್ಟಿಸಿರಿ!"



ಆಗ ದೇವ-ಗಂಧರ್ವ-ದಾನವರು ಎಲ್ಲರೂ ಸಂತೋಷದಿಂದ ಅಂಶಗಳಿಂದ ಭೂಮಿಯಲ್ಲಿ ಅವತರಿಸಿದರು. ಅವರ ಸಮಕ್ಷಮದಲ್ಲಿಯೇ ಬ್ರಹ್ಮನು ದೇವಕಾರ್ಯಸಿದ್ಧಿಗಾಗಿ ದುಂದುಭೀ ಎಂಬ ಹೆಸರಿನ ಗಂಧರ್ವಿಗೆ ಆದೇಶವನ್ನಿತ್ತನು. ಪಿತಾಮಹನ ವಚನವನ್ನು ಕೇಳಿ ಆ ಗಂಧರ್ವಿಯು ಮನುಷ್ಯಲೋಕದಲ್ಲಿ ಮಂಥರಾ ಎಂಬ ಹೆಸರಿನ ಕುಬ್ಜೆಯಾಗಿ ಜನಿಸಿದಳು. ಶಕ್ರನೇ ಮೊದಲಾದ ಎಲ್ಲ ಸುರಸತ್ತಮರೂ ವಾನರ ಮತ್ತು ಕರಡಿಗಳ ಶ್ರೇಷ್ಠ ಸ್ತ್ರೀಯರಲ್ಲಿ ತಮ್ಮಿಂದಲೇ ಮಕ್ಕಳನ್ನು ಹುಟ್ಟಿಸಿದರು. ಅವರೆಲ್ಲರೂ ಯಶಸ್ಸು ಮತ್ತು ಬಲದಲ್ಲಿ ತಮ್ಮ ತಂದೆಯರನ್ನು ಅನುಸರಿಸಿದರು ಮತ್ತು ಗಿರಿಶೃಂಗಗಳಲ್ಲಿ ಶಾಲ, ತಾಲ ಮತ್ತು ಶಿಲಾಯುಧಗಳನ್ನು ಹಿಡಿದು ವಾಸಿಸಿದರು. ವಜ್ರದಂತೆ ಕಠಿಣರಾಗಿದ್ದ ಅವರೆಲ್ಲರೂ ಪ್ರವಾಹದಲ್ಲಿದ್ದ ನದಿಯಂತೆ ಬಲಶಾಲಿಗಳಾಗಿದ್ದರು. ಎಲ್ಲರೂ ಬಯಸಿದಷ್ಟು ವೀರ್ಯವಂತರಾಗಿದ್ದರು ಮತ್ತು ಎಲ್ಲರೂ ಯುದ್ಧ ವಿಶಾರದರಾಗಿದ್ದರು. ಶಕ್ತಿಯಲ್ಲಿ ಆನೆಗಳ ಹಿಂಡಿಗೆ ಸಮನಾಗಿದ್ದರು ಮತ್ತು ವೇಗದಲ್ಲಿ ವಾಯುವಿಗೆ ಸಮನಾಗಿದ್ದರು. ಕೆಲವರು ತಮಗೆ ಇಷ್ಟವಾದಲ್ಲಿ ವಾಸಿಸಿದರು ಮತ್ತು ಕೆಲವರು ವನಗಳಲ್ಲಿ ವಾಸಿಸಿದರು. ಈ ರೀತಿ ಎಲ್ಲವೂ ನಡೆಯುವಂತೆ ಮಾಡಿ ಭಗವಾನ್ ಬ್ರಹ್ಮನು ಯಾವ ಕಾರ್ಯವನ್ನು ಹೇಗೆ ಮಾಡಬೇಕೆಂದು ಮಂಥರೆಗೆ ಬೋಧಿಸಿದನು. ಅವಳು ಆ ಮಾತನ್ನು ಅರ್ಥಮಾಡಿಕೊಂಡು ಮನೋವೇಗದಲ್ಲಿ ವೈರತ್ವವನ್ನು ಹುಟ್ಟಿಸಲು ತೊಡಗಿದಳು.

## ರಾಮ-ಸೀತಾ-ಲಕ್ಷ್ಮಣರ ವನವಾಸ

ಕ್ರಿಯಾರತಿ, ಧರ್ಮಪರ ಮತ್ತು ಸತತವೂ ವೃದ್ಧರ ಸೇವೆಯಲ್ಲಿ ನಿರತನಾಗಿದ್ದ ನೃಪ ದಶರಥನು ಪುತ್ರರು ಹುಟ್ಟಿದರೆಂದು ಸಂತೋಷಗೊಂಡನು. ಆ ಮಹೌಜಸ ಪುತ್ರರು ಕ್ರಮೇಣವಾಗಿ ಬೆಳೆದರು ಮತ್ತು ರಹಸ್ಯಗಳೊಂದಿಗೆ ವೇದ-ಧನುರ್ವೇದಗಳಲ್ಲಿ ಅವರು ಪಾರಂಗತರಾದರು. ಬ್ರಹ್ಮಚರ್ಯೆಯನ್ನು ಆಚರಿಸಿದ ಅವರು ವಿವಾಹಿತರಾದರು. ಇದರಿಂದ ದಶರಥನು ಪ್ರೀತಿವಂತನೂ ಸುಖಿಯೂ ಆದನು.

ಹಿರಿಯವನು ರಾಮ; ಪ್ರಜೆಗಳನ್ನು ರಂಜಿಸುವವನಾದುದರಿಂದ ರಾಮನೆಂದಾದನು. ಆ ಧೀಮಂತನು ತನ್ನ ಮನೋಹರತ್ವದಿಂದ ತಂದೆಯ ಹೃದಯವನ್ನು ತೃಪ್ತಿಪಡಿಸಿದನು. ಆ ಲೋಹಿತಾಕ್ಷ, ಮಹಾಬಾಹು ರಾಮನಾದರೋ ಮತ್ತಿನಲ್ಲಿದ್ದ ಆನೆಯ ನಡುಗೆಯನ್ನು ನಡೆಯುತ್ತಿದ್ದನು. ಆ ವಿಶಾಲ ಎದೆಯ ದೀರ್ಘಬಾಹುವು ಕಪ್ಪು ಗುಂಗುರುಕೂದಲಿನಲ್ಲಿ ಶ್ರೀಯಿಂದ ಬೆಳಗುತ್ತಿದ್ದನು. ಆ ವೀರನು ಬಲದಲ್ಲಿ ಶಕ್ರನ ಸಮನಾಗಿದ್ದನು, ಮತಿಯಲ್ಲಿ ಬೃಹಸ್ಪತಿಯ ಸಮನಾಗಿದ್ದನು ಮತ್ತು ಸರ್ವಧರ್ಮಗಳ ಪಾರಂಗತನಾಗಿದ್ದನು. ಎಲ್ಲ ಪ್ರಜೆಗಳೂ ಸರ್ವ ವಿದ್ಯಾವಿಶಾರದ ರಾಮನಲ್ಲಿ ಅನುರಕ್ತರಾಗಿದ್ದರು. ಜಿತೇಂದ್ರಿಯನಾದ ಅವನು ಶತ್ರುಗಳಿಗೂ ನೋಡಲು ಮನೋಹರನಾಗಿದ್ದನು. ಕೆಟ್ಟವರನ್ನು ನಿಯಂತ್ರಿಸುತ್ತಿದ್ದನು ಮತ್ತು

ಧರ್ಮಚಾರಿಗಳನ್ನು ರಕ್ಷಿಸುತ್ತಿದ್ದನು. ಧೃತಿವಂತನೂ ಅನಾದೃಷನೂ ಆಗಿದ್ದನು. ಎಂದೂ ಸೋಲಿಲ್ಲದ ವಿಜಯಿಯಾಗಿದ್ದನು. ಕೌಸಲ್ಯೆಯ ಆನಂದವನ್ನು ಹೆಚ್ಚಿಸುತ್ತಿದ್ದ ಅಂಥಹ ಆ ಪುತ್ರನನ್ನು ನೋಡಿ ರಾಜಾ ದಶರಥನು ಅತ್ಯಂತ ಸಂತೋಷಪಡುತ್ತಿದ್ದನು. ತನಗೆ ವಯಸ್ಸಾಗಿದೆಯೆಂದು ತಿಳಿದ ಮತಿವಂತ ದಶರಥನು ಸಚಿವರು, ಧರ್ಮಜ್ಞರು ಮತ್ತು ಪುರೋಹಿತರೊಡನೆ ಮಂತ್ರಾಲೋಚನೆ ಮಾಡಿದನು. ಆ ಎಲ್ಲ ಮಂತ್ರಿಸತ್ತಮರೂ ರಾಮನ ಅಭಿಷೇಕದ ಕಾಲವು ಪ್ರಾಪ್ತವಾಗಿದೆಯೆಂದು ಅಭಿಪ್ರಾಯಪಟ್ಟರು. ರಾಮನ ಗುಣಗಳ ಕುರಿತು ಯೋಚಿಸಿ ಆನಂದಿಸುತ್ತಾ ಅವನು ಪುರೋಹಿತರಿಗೆ ಹೇಳಿದನು:

> “ನಿಮಗೆ ಮಂಗಳವಾಗಲಿ! ಈ ರಾತ್ರಿ ಪುಷ್ಯವು ಪುಣ್ಯಯೋಗದಲ್ಲಿದೆ. ಸಂಗ್ರಹಗಳನ್ನು ಒಂದುಗೂಡಿಸಿ ಮತ್ತು ರಾಮನನ್ನು ಆಮಂತ್ರಿಸಿ!”

ರಾಜನ ಈ ಮಾತನ್ನು ಕೇಳಿದ ಮಂಥರೆಯು ಅದೇ ಸಮಯದಲ್ಲಿ ಕೈಕೇಯಿಯ ಬಳಿಸಾರಿ ಹೀಗೆಂದಳು:

> “ಕೈಕೇಯೀ! ಇಂದು ರಾಜನು ನಿನಗೊಂದು ಮಹಾ ದೌರ್ಭಾಗ್ಯವನ್ನು ಘೋಷಿಸಿದ್ದಾನೆ. ದುರ್ಭಗೇ! ಅತೀ ಘೋರ ವಿಷಸರ್ಪವೊಂದು ಸಿಟ್ಟಿನಿಂದ ನಿನ್ನನ್ನು ಕಚ್ಚುತ್ತಿದೆ. ಯಾರ ಮಗನ ಪಟ್ಟಾಭಿಷೇಕವಾಗಲಿದೆಯೋ ಆ ಕೌಸಲ್ಯೆಯೇ ಸುಭಗೆ! ಯಾರ ಮಗನಿಗೆ ರಾಜ್ಯದಲ್ಲಿ ಯಾವ ಭಾಗವೂ

ಇಲ್ಲವೋ ಅಂತಹ ನೀನು ಹೇಗೆ ತಾನೆ
ಸೌಭಾಗ್ಯೆಯಾಗಿರುವೆ?"

ಆ ಮಾತುಗಳನ್ನು ಅರ್ಥಮಾಡಿಕೊಂಡ ಕೈಕೇಯಿಯು ಸರ್ವಾಭರಣಭೂಷಿತೆಯಾಗಿ ಉತ್ತಮ ರೂಪದಿಂದ ಬೆಳಗುತ್ತಾ ಏಕಾಂತದಲ್ಲಿ ಪತಿಯ ಬಳಿಸಾರಿ ನಗೆಯಿಂದ ಪ್ರಣಯವನ್ನು ನಟಿಸುತ್ತಾ ಈ ಮಧುರವಾಕ್ಯಗಳನ್ನಾಡಿದಳು:

"ಸತ್ಯಪ್ರತಿಜ್ಞನಾದ ನೀನು ಒಮ್ಮೆ ನಾನು ಬಯಸಿದುದನ್ನು ಕೊಡುತ್ತೇನೆಂದು ಮಾತುಕೊಟ್ಟಿದ್ದೆ. ರಾಜನ್! ಈಗ ಅದನ್ನು ಮಾಡಿಕೊಟ್ಟು ಆ ಸಂಕಟದಿಂದ ಮುಕ್ತನಾಗು!"

ದಶರಥನು ಹೇಳಿದನು:

"ಹೇಳು! ನಿನಗೆ ವರವನ್ನು ನೀಡುತ್ತೇನೆ. ನೀನು ಬಯಸಿದುದನ್ನು ಪಡೆಯುತ್ತೀಯೆ. ಯಾವ ಅವಧ್ಯನನ್ನು ವಧಿಸಬೇಕು? ಇಂದು ಯಾವ ವಧಿಸಲರ್ಹನಾದವನನ್ನು ಬಿಡುಗಡೆ ಮಾಡಬೇಕು? ಇಂದು ಯಾರಿಗೆ ಧನವನ್ನು ಕೊಡಬೇಕು? ಅಥವಾ ಯಾರಿಂದ ಧನವನ್ನು ಕಸಿದುಕೊಳ್ಳಬೇಕು? ಬ್ರಾಹ್ಮಣರದ್ದನ್ನು ಬಿಟ್ಟು ಭೂಮಿಯಲ್ಲಿರುವ ಎಲ್ಲವೂ ನನ್ನದೇ ಸಂಪತ್ತು!"

ಅವನ ಮಾತುಗಳನ್ನು ಕೇಳಿ ಕೈಕೇಯಿಯು ನರಾಧಿಪನನ್ನು



ಅಪ್ಪಿಕೊಂಡು ತನ್ನ ಬಲವನ್ನು ಅರ್ಥಮಾಡಿಕೊಂಡು ಅವನಿಗೆ ಹೇಳಿದಳು:

> “ರಾಮನಿಗೆಂದು ಕಲ್ಪಿಸಿರುವ ಪಟ್ಟಾಭಿಷೇಕವು ಭರತನಿಗೆ ದೊರೆಯುವಂತಾಗಲಿ. ರಾಘವನು ವನಕ್ಕೆ ಹೋಗಲಿ!”

ಆ ವಿಪ್ರಿಯ ದಾರುಣ ಮಾತನ್ನು ಕೇಳಿ ರಾಜನು ದುಃಖಾರ್ತನಾಗಿ ಏನನ್ನೂ ಉತ್ತರಿಸಲಿಲ್ಲ. ತನ್ನ ತಂದೆಯು ಮಾತುಕೊಟ್ಟಿದುದನ್ನು ತಿಳಿದ ವೀರ್ಯವಾನ್ ರಾಮನು ರಾಜನು ಸತ್ಯವಂತನಾಗಿರಬೇಕೆಂದು ವನಕ್ಕೆ ತೆರಳಿದನು. ಧನುಷ್ಮಾನ್ ಲಕ್ಷ್ಮಣ ಮತ್ತು ಹಾಗೆಯೇ ಪತ್ನಿ ವೈದೇಹಿ ಸೀತೆಯೂ ಕೂಡ ಅವನನ್ನು ಅನುಸರಿಸಿದರು.

ರಾಮನು ವನಕ್ಕೆ ಹೋದನಂತರ ರಾಜಾ ದಶರಥನು ದೇಹದ ಕಾಲಪರ್ಯಾಯ ಧರ್ಮವನ್ನು ಅನುಸರಿಸಿದನು. ರಾಮನು ಹೋದುದನ್ನು ಮತ್ತು ರಾಜನೂ ಕೂಡ ತೀರಿಕೊಂಡಿದುದನ್ನು ತಿಳಿಸಿ ಭರತನನ್ನು ಕರೆಯಿಸಿ ಕೈಕೇಯಿಯು:


> “ದಶರಥನು ಸ್ವರ್ಗಸ್ಥನಾಗಿದ್ದಾನೆ ಮತ್ತು ರಾಮ-ಲಕ್ಷ್ಮಣರು ವನದಲ್ಲಿದ್ದಾರೆ. ಸ್ಪರ್ಧಿಗಳಿಲ್ಲದೇ ಕ್ಷೇಮವಾಗಿರುವ ಈ ವಿಪುಲ ರಾಜ್ಯವನ್ನು ಸ್ವೀಕರಿಸು!”

ಎಂದು ಹೇಳಿದಳು. ಆ ಧರ್ಮಾತ್ಮ ಭರತನು ಅವಳಿಗೆ

> “ನಿನಗೆ ಧಿಕ್ಕಾರ ! ಧನದ ಆಸೆಯಿಂದ ನೀನು ಪತಿಯನ್ನು ಕೊಂದು ಕುಲವನ್ನೇ ಕಿತ್ತೊಗೆದು ಕ್ರೂರ ಕಾರ್ಯವನ್ನು ಮಾಡಿದ್ದೀಯೆ. ಕುಲಪಾಂಸನೀ ! ನನ್ನ ತಲೆಯಮೇಲೆ ಅಪಕೀರ್ತಿಯನ್ನು ತಂದು ನಿನ್ನ ಆಸೆಯನ್ನು ತೀರಿಸಿಕೊಂಡೆ !”

ಎಂದು ಹೇಳಿ ಬಹಳವಾಗಿ ರೋದಿಸಿದನು. ಎಲ್ಲ ಪುರಜನರ ಸಾನ್ನಿಧ್ಯದಲ್ಲಿ ತನ್ನ ಚಾರಿತ್ರ್ಯವು ಶುದ್ಧವಾದುದೆಂದು ಪ್ರಕಟಿಸಿ ರಾಮನನ್ನು ಹಿಂದೆ ತರುವ ಆಸೆಯಿಂದ ಅಣ್ಣನಿದ್ದಲ್ಲಿಗೆ ಹೊರಟನು. ಕೌಸಲ್ಯೆ, ಸುಮಿತ್ರಾ ಮತ್ತು ಕೈಕೇಯಿಯರನ್ನು ಯಾನಗಳಲ್ಲಿರಿಸಿಕೊಂಡು ಶತ್ರುಘ್ನನ ಸಹಿತ ವಸಿಷ್ಠ-ವಾಮದೇವರು ಮತ್ತು ಸಹಸ್ರಾರು ವಿಪ್ರ-ಪೌರಜನರೊಂದಿಗೆ ಭರತನು ಸುದುಃಖಿತನಾಗಿ ಹೊರಟನು. ಚಿತ್ರಕೂಟದಲ್ಲಿ ಲಕ್ಷ್ಮಣನೊಡನೆ ತಾಪಸರ ಅಲಂಕಾರವನ್ನು ಧರಿಸಿದ್ದ ಧನುರ್ಧರ ರಾಮನನ್ನು ಭರತನು ಕಂಡನು. ತಂದೆಯ ಮಾತನ್ನು ಕಾರಣವಾಗಿಟ್ಟುಕೊಂಡ ರಾಮನಿಂದ ವಿಸರ್ಜಿಸಲ್ಪಟ್ಟ ಭರತನು ರಾಮನ ಪಾದುಕೆಗಳನ್ನು ಮುಂದಿಟ್ಟುಕೊಂಡು ನಂದಿಗ್ರಾಮದಲ್ಲಿ ರಾಜ್ಯಭಾರವನ್ನು ಮಾಡಿದನು.

ಪೌರ-ಜಾನಪದರು ಪುನಃ ಬರಬಹುದೆಂದು ಶಂಕಿಸಿ ರಾಮನು ಶರಭಂಗಾಶ್ರಮದ ಬಳಿಯಿರುವ ಮಹಾರಣ್ಯವನ್ನು ಪ್ರವೇಶಿಸಿದನು. ಶರಭಂಗನನ್ನು ಸತ್ಕರಿಸಿ ಅವನು ದಂಡಕಾರಣ್ಯವನ್ನು ಸೇರಿ ಅಲ್ಲಿ ರಮ್ಯ ಗೋದಾವರೀ ತೀರದಲ್ಲಿ ನೆಲೆಮಾಡಿದನು. ರಾಮನು ಅಲ್ಲಿ



ವಾಸಿಸುತ್ತಿರುವಾಗ ಶೂರ್ಪಣಖಿಯ ಮೂಲಕ ಜನಸ್ಥಾನದಲ್ಲಿ ವಾಸಿಸುತ್ತಿದ್ದ ಖರನೊಂದಿಗೆ ಮಹಾ ವೈರವುಂಟಾಯಿತು. ತಾಪಸರನ್ನು ರಕ್ಷಿಸಲು ಧರ್ಮವತ್ಸರ ರಾಘವನು ದಂಡಕಾರಣ್ಯದಲ್ಲಿದ್ದ ಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿದನು. ಮಹಾಬಲಶಾಲಿಗಳಾಗಿದ್ದ ದೂಷಣ ಮತ್ತು ಖರರನ್ನು ಸಂಹರಿಸಿ ಅವನು ಆ ಧರ್ಮಾರಣ್ಯಕ್ಕೆ ಕ್ಷೇಮವನ್ನು ಮರಳಿ ತಂದಿತ್ತನು.

ಆ ರಾಕ್ಷಸರು ಹತರಾಗಲು, ತುಂಡರಿಸಿದ ಮೂಗು-ತುಟಿಗಳ ಶೂರ್ಪಣಖಿಯು ತನ್ನ ಅಣ್ಣ ರಾವಣನ ನಿವಾಸಸ್ಥಾನ ಲಂಕೆಗೆ ಹೋದಳು. ಮುಖದ ಮೇಲೆಲ್ಲಾ ಒಣಗಿದ ರಕ್ತವಿದ್ದ ಆ ರಾಕ್ಷಸಿಯು ದುಃಖಮೂರ್ಛಿತಳಾಗಿ ರಾವಣನ ಬಳಿಸಾರಿ ಅಣ್ಣನ ಪಾದಗಳ ಮೇಲೆ ಬಿದ್ದಳು. ಅವಳು ಹಾಗೆ ವಿಕೃತಳಾಗಿದ್ದುದನ್ನು ನೋಡಿದ ರಾವಣನು ಕ್ರೋಧಮೂರ್ಛಿತನಾಗಿ ಹಲ್ಲುಗಳನ್ನು ಕಡೆಯುತ್ತಾ ಆಸನದಿಂದ ಮೇಲೆ ಹಾರಿ ಎದ್ದನು. ಆಸ್ಥಾನದಿಂದ ಅಮಾತ್ಯರನ್ನು ವಿಸರ್ಜಿಸಿ ಏಕಾಂತದಲ್ಲಿ ಅವಳಿಗೆ ಹೇಳಿದನುಃ

> “ಭದ್ರೇ! ನನ್ನ ಕುರಿತು ಯೋಚಿಸದೇ ಇದ್ದ ನನ್ನನ್ನು ಅವಮಾನಿಸುವ ಯಾರಿಂದ ನಿನಗೆ ಹೀಗಾಯಿತು? ಯಾರು ತಾನೇ ತೀಕ್ಷ್ಣ ಶೂಲವನ್ನು ಹಿಡಿದು ದೇಹದ ಎಲ್ಲ ಭಾಗಗಳಲ್ಲಿ ಚುಚ್ಚಿಕೊಂಡಿದ್ದಾನೆ? ಯಾರು ತಾನೇ ತನ್ನ ತಲೆಯ ಹತ್ತಿರ ಬೆಂಕಿಯನ್ನು ಹೊತ್ತಿಸಿ ವಿಶ್ವಾಸದಿಂದ ಸುಖನಿದ್ರೆಯನ್ನು



> ಮಾಡುತ್ತಿದ್ದಾನೆ? ಯಾರುತಾನೇ ಅತೀವ ಘೋರ ವಿಷದ ಹಾವನ್ನು ಕಾಲಿನಿಂದ ಮುಟ್ಟಿದ್ದಾನೆ? ಯಾರುತಾನೇ ಕೇಸರಿ ಸಿಂಹದ ಕೋರೆದಾಡೆಗಳನ್ನು ಹಿಡಿದು ನಿಂತಿದ್ದಾನೆ?"

ಅವನು ಹೀಗೆ ಹೇಳುತ್ತಿರುವಾಗ ರಾತ್ರಿಯಲ್ಲಿ ಸುಡುತ್ತಿರುವ ಪೊಳ್ಳುಮರದ ಒಳಗಿನಿಂದ ಬರುವಂತೆ ಅವನ ದೇಹದ ಎಲ್ಲ ರಂಧ್ರಗಳಿಂದ ಬೆಂಕಿಯ ಜ್ವಾಲೆಗಳು ಹೊರಹೊಮ್ಮಿದವು. ಆಗ ಶೂರ್ಪಣಖಿಯು ಅವನಿಗೆ – ರಾಮನ ಪರಾಕ್ರಮ, ಖರ-ದೂಷಣರ

ಪರಾಭವ – ಎಲ್ಲವನ್ನೂ ಹೇಳಿದಳು. ಏನು ಮಾಡಬೇಕೆಂದು ನಿರ್ಧರಿಸಿ ರಾವಣನು ತಂಗಿಯನ್ನು ಸಮಾಧಾನಪಡಿಸಿದನು. ನಗರದಲ್ಲಿ ವ್ಯವಸ್ಥೆಯನ್ನು ಮಾಡಿ ರಾಜನು ಆಕಾಶದಲ್ಲಿ ನಡೆದನು. ತ್ರಿಕೂಟವನ್ನೂ ಕಾಲಪರ್ವತವನ್ನೂ ದಾಟಿ ಅವನು ಮಕರಗಳು ವಾಸಿಸುತ್ತಿದ್ದ ಗಂಭೀರ ಮಹಾಸಾಗರವನ್ನು ನೋಡಿದನು. ದಶಾನನನು ಅದನ್ನು ದಾಟಿ ಮಹಾತ್ಮ ಶೂಲಪಾಣಿಗೆ ಪ್ರಿಯವಾದ ಗೋಕರ್ಣಸ್ಥಾನಕ್ಕೆ ಬಂದನು. ಹಿಂದೆ ತನ್ನ ಅಮಾತ್ಯನಾಗಿದ್ದ, ರಾಮನ ಭಯದಿಂದಲೇ ತಾಪಸಿಯಾಗಿ ಅಲ್ಲಿ ವಾಸಿಸುತ್ತಿದ್ದ ಮಾರೀಚನ ಬಳಿ ರಾವಣನು ಬಂದನು.

## ಸೀತಾಪಹರಣ

ರಾವಣನ ಆಗಮನವನ್ನು ಕಂಡು ಮಾರೀಚನು ಅವನನ್ನು ಫಲ-ಮೂಲಗಳಿಂದ ಸತ್ಕರಿಸಿ ಪೂಜಿಸಿದನು. ಕುಳಿತು ವಿಶ್ರಾಂತಿ ಪಡೆದ ಅತಿಥಿಯ ಬಳಿಯೇ ಕುಳಿತಿದ್ದ ರಾಕ್ಷಸ ಮಾರೀಚನು ಮಾತುಗಳನ್ನರಿತವನು ಇನ್ನೊಬ್ಬ ವಾಕ್ಯಕೋವಿದನಿಗೆ ಹೇಗೋ ಹಾಗೆ ಸಂಸಾರಯುಕ್ತವಾದ ಈ ಮಾತುಗಳನ್ನಾಡಿದನು:

> “ನಿನ್ನ ಸ್ವಾಭಾವಿಕ ಬಣ್ಣವು ಕಾಣುತ್ತಿಲ್ಲ. ನಿನ್ನ ಪುರದಲ್ಲಿ ಎಲ್ಲವೂ ಕ್ಷೇಮ ತಾನೇ? ನಿನ್ನ ಪ್ರಜೆಗಳೆಲ್ಲರೂ ಮೊದಲಿನಂತಯೇ ನಿನ್ನನ್ನು ಪ್ರೀತಿಸುತ್ತಿದ್ದಾರೆಯೇ? ಯಾವ ಕೆಲಸವು ನಿನ್ನನ್ನು ಇಲ್ಲಿಗೆ ಕರೆತಂದಿದೆ? ಎಷ್ಟೇ ದುಷ್ಕರವಾಗಿದ್ದರೂ ಆ ಕಾರ್ಯವು ಪೂರ್ಣವಾದಂತೆ

ಎಂದು ತಿಳಿ."

ಆಗ ರಾವಣನು ಅವನಿಗೆ ರಾಮನು ಮಾಡಿದ ಎಲ್ಲವನ್ನೂ ವಿವರಿಸಿದನು. ಅದನ್ನು ಕೇಳಿ ಮಾರೀಚನು ಸಂಕ್ಷಿಪ್ತವಾಗಿ ರಾವಣನಿಗೆ ಹೇಳಿದನು:

"ರಾಮನನ್ನು ಕಾಡುವುದನ್ನು ಬಿಟ್ಟುಬಿಡು! ಯಾಕೆಂದರೆ ಅವನ ವೀರ್ಯವೇನೆಂದು ನನಗೆ ಗೊತ್ತು. ಆ ಮಹಾತ್ಮನ ಬಾಣಗಳ ವೇಗವನ್ನು ಯಾರುತಾನೇ ಸಹಿಸಲು ಸಾಧ್ಯ? ನಾನು ಈ ರೀತಿ ತಾಪಸಿಯಾಗಿರಲು ಆ ಪುರುಷರ್ಷಭನೇ ಕಾರಣ. ಯಾವ ದುರಾತ್ಮನು ತಾನೇ ನಿನಗೆ ಈ ವಿನಾಶದ ಮಾರ್ಗವನ್ನು ಹೇಳಿಕೊಟ್ಟರು?"

ಅದನ್ನು ಕೇಳಿದ ರಾವಣನು ಸಂಕ್ರುದ್ಧನಾಗಿ ಕೂಗಿದನು:

"ನನ್ನ ಮಾತುಗಳನ್ನು ನಡೆಸಿಕೊಡದಿದ್ದರೆ ನೀನು ಸಾಯುವುದು ಖಂಡಿತ!"

ಆಗ ಮಾರೀಚನು

"ಮರಣವು ಅವಶ್ಯವಾಗಿರುವಾಗ ಶ್ರೇಷ್ಠವಾದವನಿಂದ ಮರಣಹೊಂದುವುದೇ ಲೇಸು. ಇವನು ಹೇಳಿದಂತೆಯೇ ಮಾಡುತ್ತೇನೆ"


ಎಂದು ಯೋಚಿಸಿ, ರಾಕ್ಷಸೇಶ್ವರನಿಗೆ

> “ನಾನು ನಿನಗೆ ಯಾವ ರೀತಿಯ ಸಹಾಯವನ್ನು ಮಾಡಲಿ? ನಾನು ಅದನ್ನು ಅವಶ್ಯವಾಗಿ ಮಾಡುತ್ತೇನೆ.”

ಎಂದು ಉತ್ತರಿಸಿದನು. ದಶಗ್ರೀವನು ಅವನಿಗೆ ಹೇಳಿದನು:

> “ಹೋಗು! ರತ್ನಚಿತ್ರಗಳ ದೇಹವುಳ್ಳ ರತ್ನದ ಕೋಡುಗಳುಳ್ಳ ಜಿಂಕೆಯಾಗಿ ಸೀತೆಯನ್ನು ಪ್ರಲೋಭಿಸು. ನಿನ್ನನ್ನು ನೋಡಿದ ಸೀತೆಯು ಖಂಡಿತವಾಗಿಯೂ ರಾಮನನ್ನು ಕಳುಹಿಸುತ್ತಾಳೆ. ಕಾಕುತ್ಸ್ಥನು ಹೋದನಂತರ ಸೀತೆಯು ನನ್ನ ವಶಳಾಗುತ್ತಾಳೆ. ಅವಳನ್ನು ಎತ್ತಿಕೊಂಡು ಹೋಗುತ್ತೇನೆ. ಆಗ ಆ ದುರ್ಬುದ್ಧಿಯು ಭಾರ್ಯಾವಿಯೋಗದಿಂದ ಇಲ್ಲವಾಗುತ್ತಾನೆ. ನನಗೆ ಈ ಸಹಾಯವನ್ನು ಮಾಡು!”

ಇದನ್ನು ಕೇಳಿದ ಮಾರೀಚನು ತನ್ನ ಉದಕ ಕ್ರಿಯೆಗಳನ್ನು ಮಾಡಿಕೊಂಡು ಸುದುಃಖಿತನಾಗಿ ಮುಂದೆ ಸಾಗುತ್ತಿದ್ದ ರಾವಣನನ್ನು ಅನುಸರಿಸಿದನು. ಅವರೀರ್ವರೂ ರಾಮನ ಆಶ್ರಮಕ್ಕೆ ಹೋಗಿ ಎಲ್ಲವನ್ನೂ ಮೊದಲೇ ಹಾಕಿಕೊಂಡ ಉಪಾಯದಂತೆ ಮಾಡಿದರು. ರಾವಣನು ತಲೆಬೋಳಿಸಿಕೊಂಡ ಭಿಕ್ಷಾಪಾತ್ರೆ ಮತ್ತು ತ್ರಿಶೂಲಗಳನ್ನು ಹಿಡಿದ ಯತಿಯಾದನು. ಮಾರೀಚನು ಜಿಂಕೆಯಾಗಿ ಆ ಪ್ರದೇಶಕ್ಕೆ ಬಂದನು. ಜಿಂಕೆಯ ರೂಪವನ್ನು ಧರಿಸಿ ಕಾಣಿಸಿಕೊಂಡ ಮಾರೀಚನನ್ನು





ನೋಡಿದ ವೈದೇಹಿಯು ವಿಧಿಯಿಂದ ಪ್ರಚೋದಿತಳಾಗಿ ರಾಮನನ್ನು ಅದರ ಹಿಂದೆ ಕಳುಹಿಸಿದಳು. ಅವಳಿಗೆ ಪ್ರಿಯವಾದುದನ್ನು ಮಾಡಲು ರಾಮನು ತಕ್ಷಣವೇ ಧನುಸ್ಸನ್ನು ಹಿಡಿದು, ರಕ್ಷಣೆಗೆ ಲಕ್ಷ್ಮಣನನ್ನಿರಿಸಿ ಆ ಜಿಂಕೆಯನ್ನು ಹಿಡಿದು ತರಲು ಹೊರಟನು. ಆ ಧನ್ವಿ ರಾಮನು ತೂಣೀರ, ಖಡ್ಗ-ಗೋಧಾಂಗುಲಿಗಳನ್ನು ಕಟ್ಟಿಕೊಂಡು ರುದ್ರನು ತಾರಾಮೃಗವನ್ನು ಅರಸಿದಂತೆ ಮೃಗವನ್ನು ಅಟ್ಟಿಕೊಂಡು ಹೋದನು. ಆ ರಾಕ್ಷಸನು ಒಮ್ಮೆ ಕಾಣಿಸಿಕೊಳ್ಳುತ್ತಿದ್ದನು. ಪುನಃ ಅದೃಶ್ಯನಾಗುತ್ತಿದ್ದನು. ಹೀಗೆ ಅವನು ರಾಮನನ್ನು ಬಹಳ ದೂರದವರೆಗೆ ಕೊಂಡೊಯ್ದನು. ಪ್ರತಿಭಾನ್ವಿತ ರಾಮನು ಅವನು ನಿಶಾಚರನೆಂದು ತಿಳಿದು ಅಮೋಘ ಶರವನ್ನು ಪ್ರಯೋಗಿಸಿ ಆ ಮೃಗರೂಪಿಯನ್ನು ಕೊಂದನು. ರಾಮನ ಬಾಣದ ಹೊಡೆತವನ್ನು ತಿಂದ ಮಾರೀಚನು ರಾಮನ ಸ್ವರವನ್ನೇ ಮಾಡಿಕೊಂದು

> “ಹಾ ಸೀತೇ! ಹಾ ಲಕ್ಷ್ಮಣಾ!”

ಎಂದು ಆರ್ತಸ್ವರದಲ್ಲಿ ಕೂಗಿದನು. ಅವನ ಆ ಕರುಣಾಜನಕ ಸ್ವರವನ್ನು ಕೇಳಿದ ವೈದೇಹಿಯು ಶಬ್ಧವು ಬರುತ್ತಿರುವಲ್ಲಿಗೆ ಓಡಲು ಪ್ರಯತ್ನಿಸಿದಳು. ಆಗ ಲಕ್ಷ್ಮಣನು ಅವಳನ್ನು ತಡೆದು

> “ಈ ಭಯವನ್ನು ತೊರೆ! ಯಾರು ತಾನೇ ರಾಮನನ್ನು ಎದುರಿಸಿಯಾರು? ಸ್ವಲ್ಪ ಕಾಲ ಸ್ಥೈರಿಸಿಕೋ! ರಾಮನು ಹಿಂದಿರುಗುವುದನ್ನು ಈಗಲೇ ನೋಡುತ್ತೀಯೆ!”

ಎಂದನು. ಅವನು ಆ ಮಾತುಗಳಿಗೆ ಸೀತೆಯು ಸ್ತ್ರೀಸ್ವಭಾವದಿಂದ ಹತಳಾಗಿ ಶುದ್ಧ ಚಾರಿತ್ರ ಭೂಷಣನಾಗಿದ್ದ ತನ್ನ ಮೈದುನನನ್ನು ಶಂಕಿಸಿದಳು. ಆ ಸಾಧ್ವೀ ಪತಿವ್ರತೆಯು ಈ ಕ್ರೂರ ಮಾತುಗಳನ್ನಾಡಲು ಪ್ರಾರಂಭಿಸಿದಳು:

> "ಮೂಢ ! ನಿನ್ನ ಹೃದಯದಲ್ಲಿ ಯಾವಾಗಲೂ ಬಯಸುತ್ತಿರುವ ಕಾಲವು ಇದಲ್ಲ ! ಇಂದು ನಾನು ಶಸ್ತ್ರವನ್ನು ತೆಗೆದುಕೊಂಡು ನನ್ನನ್ನು ನಾನೇ ಸಾಯಿಸಿಕೊಂಡೇನು ಅಥವಾ ಈ ಗಿರಿಶೃಂಗದ ಕೆಳಗೆ ಧುಮುಕಿಯೇನು ಅಥವಾ ಬೆಂಕಿಯನ್ನು ಪ್ರವೇಶಿಸಿಯೇನು. ಆದರೆ ಪತಿ ರಾಮನನ್ನು ಬಿಟ್ಟು ಶಾರ್ದೂಲಿಯು ನರಿಯನ್ನು ಹೇಗೋ ಹಾಗೆ ನಿನ್ನನ್ನು ಸೇರುವುದಿಲ್ಲ !"

ಈ ಘೋರ ಮಾತುಗಳನ್ನು ಕೇಳಿ, ರಾಘವನನ್ನು ಪ್ರೀತಿಸುತ್ತಿದ್ದ ಸುವ್ರತ ಲಕ್ಷ್ಮಣನು ಕಿವಿಗಳನ್ನು ಮುಚ್ಚಿಕೊಂಡು ಧನುಸ್ಸನ್ನು ಹಿಡಿದು ರಾಮನ ಮಾರ್ಗವನ್ನೇ ಹಿಡಿದು ರಾಘವನಿದ್ದಲ್ಲಿಗೆ ಹೊರಟನು.

ಈ ಮಧ್ಯೆ ರಾಕ್ಷಸ ರಾವಣನು ಭಸ್ಮದಿಂದ ಮುಚ್ಚಲ್ಪಟ್ಟ ಅಗ್ನಿಯಂತೆ ಸೌಮ್ಯರೂಪದಲ್ಲಿದ್ದರೂ ಸೌಮ್ಯನಾಗಿರದೇ, ಯತಿವೇಷದಲ್ಲಿ ಮರೆಮಾಡಿಕೊಂಡು, ಆ ಅನಿಂದಿತೆಯನ್ನು ಅಪಹರಿಸುವ ಇಚ್ಛೆಯಿಂದ ಅಲ್ಲಿ ಕಾಣಿಸಿಕೊಂಡನು. ಅವನ ಆಗಮನವನ್ನು ಕಂಡ ಧರ್ಮಜ್ಞೆ ಜನಕಾತ್ಮಜೆಯು ಫಲಮೂಲಾಹಾರಗಳಿಂದ ಅವನನ್ನು ಸ್ವಾಗತಿಸಿದಳು.

ಅವೆಲ್ಲವನ್ನೂ ಕಡೆಗಾಣಿಸಿ ತನ್ನ ಸ್ವರೂಪವನ್ನು ತಳೆದು ಆ ರಾಕ್ಷಸಪುಂಗವನು ವೈದೇಹಿಯನ್ನು ಮರುಳುಗೊಳಿಸುತ್ತಾ ಹೇಳಿದನು:

> "ಸೀತೆ! ನಾವು ರಾವಣನೆಂದು ವಿಶ್ರುತನಾಗಿರುವ ರಾಕ್ಷಸರಾಜ. ಸಾಗರದ ಆ ಕಡೆಯಲ್ಲಿ ಲಂಕಾ ಎಂಬ ಹೆಸರಿನ ನನ್ನ ನಗರವಿದೆ. ಅಲ್ಲಿ ನನ್ನ ವರನಾರಿಯರೊಂದಿಗೆ ನೀನು ನನ್ನೊಡನೆ ಶೋಭಿಸುತ್ತೀಯೆ. ಸುಶ್ರೋಣಿ! ನನ್ನ ಭಾರ್ಯೆಯಾಗು. ತಾಪಸ ರಾಘವನನ್ನು ತೊರೆ!"

ಇವೇ ಮೊದಲಾದ ಮಾತುಗಳನ್ನು ಕೇಳಿ ಜಾನಕಿಯು ಕಿವಿಗಳನ್ನು ಮುಚ್ಚಿಕೊಂಡು ಹೇಳಿದಳು:

> "ಸುಮ್ಮನಾಗು! ನಾನು ರಾಘವನನ್ನು ತೊರೆಯುವುದರೊಳಗೆ ನಕ್ಷತ್ರಗಳೊಂದಿಗೆ ಆಕಾಶವೇ ಕಳಚಿ ಬಿದ್ದೀತು! ಭೂಮಿಯು ಚೂರಾದೀತು! ಅಗ್ನಿಯು ತಣ್ಣಗಾದೀತು! ಹೇಗೆ ತಾನೇ ಹೆಣ್ಣಾನೆಯೊಂದು ಕಪೋಲಗಳೊಡೆದು ಮದ ಸುರಿಸುತ್ತಾ ವನದಲ್ಲಿ ಸಂಚರಿಸುವ ಪದ್ಮಿ ಮಹಾಗಜವನ್ನು ಬಿಟ್ಟು ಹಂದಿಯನ್ನು ಮುಟ್ಟಿಯಾಳು? ಮಧುಮಾಧವೀ ಮದ್ಯವನ್ನು ಕುಡಿದ ನಾರಿಯು ಹೇಗೆ ತಾನೇ ಸೌವೀರಕ್ಕೆ ಆಸೆಪಟ್ಟಾಳು?"

ಹೀಗೆ ಹೇಳಿ ಅವಳು ಪುನಃ ಆಶ್ರಮವನ್ನು ಪ್ರವೇಶಿಸಿದಳು. ರಾವಣನು ಅವಳನ್ನು ಹಿಂಬಾಲಿಸಿ ತಡೆದನು. ಕಠಿಣ ಸ್ವರದಲ್ಲಿ ಗರ್ಜಿಸುತ್ತಾ



ಚೇತನವನ್ನೇ ಕಳೆದುಕೊಂಡ ಅವಳ ಕೂದಲನ್ನು ಹಿಡಿದು ಎಳೆದು ಆಕಾಶವನ್ನೇರಿದನು. ಆಗ ಗಿರಿಗೋಚರದಲ್ಲಿದ್ದ ಹದ್ದು ಜಟಾಯುವು

"ರಾಮ ! ರಾಮ !"

ಎಂದು ಕೂಗುತ್ತಾ ರೋದಿಸುತ್ತಿದ್ದ ಆ ತಪಸ್ವಿನಿಯನ್ನು ನೋಡಿದನು.

## ಜಟಾಯು ಮರಣ, ಕಬಂಧ ವಧೆ

ಆ ಅರುಣನ ಮಗ, ಸಂಪಾತಿಯ ಸೋದರ, ಹದ್ದುಗಳ ರಾಜ, ಮಹಾವೀರ್ಯ ಜಟಾಯುವು ದಶರಥನ ಸಖನಾಗಿದ್ದನು. ರಾವಣನ ಹೆಗಲಿನ ಹಿಡಿತದಲ್ಲಿದ್ದ ದಶರಥನ ಸೊಸೆ ಸೀತೆಯನ್ನು ನೋಡಿದ ಆ ಪಕ್ಷಿರಾಜನು ರಾಕ್ಷಸೇಶ್ವರ ರಾವಣನ ಮೇಲೆ ಸಿಟ್ಟಾಗಿ ಹೇಳಿದನು:

"ಮೈಥಿಲಿಯನ್ನು ಬಿಟ್ಟುಬಿಡು ! ನಾನು ಬದುಕಿರುವಾಗ ನೀನು ಅವಳನ್ನು ಹೇಗೆ ಅಪಹರಿಸಿಕೊಂಡು ಹೋಗುತ್ತಿದ್ದೀಯೆ? ಈ ವಧುವನ್ನು ಬಿಟ್ಟುಬಿಡದಿದ್ದರೆ ನನ್ನಿಂದ ನೀನು ಬಿಡುಗಡೆ ಹೊಂದುವುದಿಲ್ಲ !"

ಹೀಗೆ ಹೇಳಿ ಜಟಾಯುವು ರಾವಣನನ್ನು ತನ್ನ ಉಗುರುಗಳಿಂದ ಪರಚಿದನು ಮತ್ತು ತನ್ನ ಕೊಕ್ಕೆ-ರೆಕ್ಕೆಗಳಿಂದ ಚೆನ್ನಾಗಿ ಹೊಡೆದು ಗಾಯಗೊಳಿಸಿ, ಗಿರಿಯ ಮೇಲೆ ಧಾತುವಿನ ಕೆಂಪು ನದಿಯು ಹೇಗೋ ಹಾಗೆ ಅವನ ದೇಹದಿಂದ ರಕ್ತವು ಹರಿಯುವಂತೆ ಮಾಡಿದನು.


Enchantingkerala.org

ರಾಮನ ಪ್ರಿಯಹಿತೈಷಿ ಹದ್ದಿನಿಂದ ಹೀಗೆ ಹೊಡೆತತಿಂದ ರಾವಣನು ಖಡ್ಗದಿಂದ ಅವನ ರೆಕ್ಕೆಗಳನ್ನು ಕತ್ತರಿಸಿದನು. ಆ ಗೃಧ್ರರಾಜನನ್ನು ಹೊಡೆದುರಿಳಿಸಿ ರಾಕ್ಷಸನು ಸೀತೆಯನ್ನು ತೋಳಿನಿಂದ ಹಿಡಿದು ಮೇಲಕ್ಕೇರಿದನು. ಎಲ್ಲೆಲ್ಲಿ ಆಶ್ರಮ ಮಂಡಲಗಳು, ಸರೋವರಗಳು ಮತ್ತು ನದಿಗಳನ್ನು ನೋಡಿದಳೋ ಅಲ್ಲಲ್ಲಿ ವೈದೇಹಿಯು ತನ್ನ ಆಭರಣಗಳನ್ನು ಬಿಚ್ಚಿ ಎಸೆದಳು. ಗಿರಿಪ್ರಸ್ಥದಲ್ಲಿ ಐದು ವಾನರಪುಂಗವರನ್ನು ನೋಡಿ ಅಲ್ಲಿ ಆ ಮನಸ್ವಿನಿಯು ತನ್ನ ಮಹಾದಿವ್ಯ ವಸ್ತ್ರವನ್ನು ಎಸೆದಳು. ಆಗ ಆ ವಾನರೇಂದ್ರರು ಮೇಘಗಳ ಮಧ್ಯೆ ಕಾಣುವ ಮಿಂಚಿನಂತೆ ಗಾಳಿಯಲ್ಲಿ ಬಂದು ಮಧ್ಯೆ ಬಿದ್ದ ಆ ಅರಿಶಿಣ ಬಣ್ಣದ ಬಟ್ಟೆಯನ್ನು ನೋಡಿದರು.

ಹೀಗೆ ವೈದೇಹಿಯು ಅಪಹೃತಳಾಗಲು ರಾಮನು ಮಹಾಮೃಗವನ್ನು ಕೊಂದು ಹಿಂದಿರುಗುತ್ತಿದ್ದಾಗ ತಮ್ಮ ಲಕ್ಷ್ಮಣನನ್ನು ನೋಡಿದನು.

> “ರಾಕ್ಷಸರಿರುವ ಈ ವನದಲ್ಲಿ ವೈದೇಹಿಯನ್ನು ಬಿಟ್ಟು ಏಕೆ ಇಲ್ಲಿಗೆ ಬಂದೆ?”

ಎಂದು ತಮ್ಮನನ್ನು ನಿಂದಿಸಿದನು. ತನ್ನನ್ನು ಎಳೆದುಕೊಂಡು ಹೋದ ಮೃಗರೂಪದ ರಾಕ್ಷಸ ಮತ್ತು ತಮ್ಮನು ಆಶ್ರಮವನ್ನು ಬಿಟ್ಟು ಬಂದಿದುದರ ಕುರಿತು ಚಿಂತಿಸಿ ಪರಿತಪಿಸುತ್ತಾ ರಾಮನು ಬೇಗನೇ ಲಕ್ಷ್ಮಣನ ಬಳಿಬಂದು

“ಲಕ್ಷ್ಮಣ! ಸೀತೆಯು ಬದುಕಿರುವಳೇ? ಅವಳನ್ನು ಇಲ್ಲಿ ನಾನು ಕಾಣುತ್ತಿಲ್ಲ!”


ಎಂದು ಕೇಳಿದನು. ಆಗ ಲಕ್ಷ್ಮಣನು ಅವನಿಗೆ ಸೀತೆಯು ಹೇಳಿದ ಎಲ್ಲ ಅಪಚಾರದ ಮಾತುಗಳನ್ನೂ ಪುನರಾವರ್ತಿಸಿ ಹೇಳಿದನು. ಹೃದಯವು ಸುಡುತ್ತಿರಲು ರಾಮನು ಆಶ್ರಮದ ಕಡೆ ಓಡಿದನು. ಮಾರ್ಗದಲ್ಲಿ ಅವನು ಹೊಡೆತತಿಂದು ಉರುಳಿ ಬಿದ್ದಿದ್ದ ಪರ್ವತದಂಥಹ ಹದ್ದನ್ನು ನೋಡಿದನು. ರಾಕ್ಷಸನೆಂದು ಶಂಕಿಸಿ ರಾಮನು ಧನುಸ್ಸನ್ನು ಎಳೆದು ಅವನ ಬಳಿ ಓಡಿ ಬಂದನು. ಆ ತೇಜಸ್ವೀ ಜಟಾಯುವು ರಾಮ-ಲಕ್ಷ್ಮಣರಿಬ್ಬರಿಗೂ

“ನಾನು ಹದ್ದುಗಳ ರಾಜ ಮತ್ತು ದಶರಥನ ಸಖ. ನಿಮಗೆ ಮಂಗಳವಾಗಲಿ”

ಎಂದನು. ಅವನ ಆ ಮಾತುಗಳನ್ನು ಕೇಳಿದ ಅವರಿಬ್ಬರೂ ಧನುಸ್ಸುಗಳನ್ನು ಸಡಿಲಗೊಳಿಸಿ

“ನಮ್ಮ ತಂದೆಯ ಹೆಸರನ್ನು ಹೇಳುವ ನೀನು ಯಾರು?”

ಎಂದು ಕೇಳಿದರು. ಆಗ ಜಟಾಯುವು ಕತ್ತರಿಸಲ್ಪಟ್ಟ ತನ್ನ ರೆಕ್ಕೆಗಳೆರಡನ್ನೂ ತೋರಿಸಿ ಸೀತೆಗಾಗಿ ರಾವಣನಿಂದ ತಾನು ಹೊಡೆತತಿಂದುದರ ಕುರಿತು ವರದಿಮಾಡಿದನು. ರಾವಣನು ಯಾವ ದಿಕ್ಕಿನಲ್ಲಿ ಹೋದ ಎಂದು ತನ್ನ ತಲೆಯನ್ನು ತಿರುಗಿಸಿ ತೋರಿಸಿಕೊಟ್ಟು



ಜಟಾಯುವು ಮೃತನಾದನು. ಅವನ ಇಂಗಿತವು ದಕ್ಷಿಣ ಎಂದು ತಿಳಿದ ಕಾಕುತ್ಸ್ಥನು ತನ್ನ ತಂದೆಯ ಸಖನಿಗೆ ಪೂಜಿಸಿ ಸಂಸ್ಕಾರವನ್ನು ನೆರವೇರಿಸಿದನು.

ಆಶ್ರಮವನ್ನು ತಲುಪಿ ಅದು ಶೂನ್ಯವಾಗಿರುವುದನ್ನು ನೋಡಿದನು. ತಲೆದಿಂಬು-ಪಾತ್ರೆಗಳು ಅಸ್ತವ್ಯಸ್ತವಾಗಿದ್ದವು. ಕಲಶಗಳು ಉರುಳಿ ಬಿದ್ದಿದ್ದವು ಮತ್ತು ನರಿಗಳ ಗುಂಪುಗಳು ಬಂದು ಸೇರಿದ್ದವು. ವೈದೇಹೀ ಹರಣದಿಂದ ಆರ್ದಿತರಾಗಿ ದುಃಖಶೋಕಾಸಮಾವಿಷ್ಟರಾದ ಆ ಪರಂತಪರೀರ್ವರೂ ದಕ್ಷಿಣದಲ್ಲಿದ್ದ ದಂಡಕಾರಣ್ಯಕ್ಕೆ ಹೋದರು. ಆ ಮಹಾವನದಲ್ಲಿ ರಾಮ-ಸೌಮಿತ್ರಿಯರು ಎಲ್ಲಕಡೆ ಓಡುತ್ತಿದ್ದ ಜಿಂಕೆಯ ಹಿಂಡುಗಳನ್ನು ನೋಡಿದರು ಮತ್ತು ಪ್ರಾಣಿಗಳ ದಾವಾಗ್ನಿಯಂತಿರುವ ಕೂಗುಗಳನ್ನು ಕೇಳಿದರು. ಅಷ್ಟರಲ್ಲಿಯೇ ಅವರು ಮೋಡದ ಪರ್ವತದಂತೆ ತೋರುತ್ತಿದ್ದ, ಶಾಲವೃಕ್ಷದಂಥಹ ತೋಳುಗಳಿದ್ದ, ಮಹಾಭುಜ, ಎದೆಯಲ್ಲಿ ವಿಶಾಲವಾದ ಒಂದೇ ಕಣ್ಣಿದ್ದ, ದೊಡ್ಡ ಹೊಟ್ಟೆಯ, ಮಹಾಮುಖಿ, ಘೋರ ಕಬಂಧನನ್ನು ನೋಡಿದರು. ಆ ರಾಕ್ಷಸನು ಲಕ್ಷ್ಮಣನನ್ನು ಕೈಗಳಿಂದ ಹಿಡಿದು ತನ್ನ ಬಾಯಿಯಡೆಗೆ ಒಯ್ದನು. ಆಗ ಶೋಕಕ್ಕೊಳಗಾದ ಸೌಮಿತ್ರಿಯು ವಿಷಣ್ಣನಾಗಿ

> “ರಾಮ! ನನ್ನ ಈ ಅವಸ್ಥೆಯನ್ನು ನೋಡು! ವೈದೇಹಿಯ ಅಪಹರಣ, ನೀನು ರಾಜ್ಯಭ್ರಷ್ಟನಾದುದು, ತಂದೆಯ ಮರಣ ಮೊದಲಾದ ನನ್ನ ಈ ಕಷ್ಟಗಳನ್ನು ನೋಡು! ನೀನು



ವೈದೇಹಿಯೊಡನೆ ಕೋಸಲಕ್ಕೆ ಹೋಗುವುದನ್ನು ಮತ್ತು ಪಿತೃ-ಪಿತಾಮಹರ ನೆಲದಲ್ಲಿ ರಾಜನಾಗಿರುವುದನ್ನು ನಾನು ನೋಡಲಾರೆ! ಮೋಡಕವಿದ ಚಂದ್ರನಂತೆ ಕುಶ-ಲಾಜ-ಶಮಿಗಳಿಂದ ಅಭಿಷೇಕಿಸಿದ ನಿನ್ನ ವದನವನ್ನು ನೋಡುವ ಆ ಆರ್ಯರೇ ಅದೃಷ್ಟವಂತರು!”

ಹೀಗೆ ಲಕ್ಷ್ಮಣನು ಬಹುವಿಧದಲ್ಲಿ ವಿಲಪಿಸುತ್ತಿರಲು ಗೊಂದಲದಲ್ಲಿಯೂ ಗೊಂದಲಗೊಳ್ಳದೇ, ಕಾಕುತ್ಸ್ಥನು ಅವನಿಗೆ

"ನಾನಿರುವಾಗ ಇವನು ಏನೂ ಅಲ್ಲ. ಅವನ ಬಲಬಾಹುವನ್ನು ಕತ್ತರಿಸು. ನಾನು ಎಡಭುಜವನ್ನು ತುಂಡರಿಸುತ್ತೇನೆ"


ಎಂದು ಹೇಳಿ ಕಬಂಧನ ಭುಜವನ್ನು ತೀಕ್ಷ್ಣ ಖಡ್ಗದಿಂದ ಎಳ್ಳನ್ನು ಕಾಂಡದಿಂದ ಕೀಳುವಂತೆ ಕತ್ತರಿಸಿ ಕೆಳಗುರುಳಿಸಿದನು. ಅಣ್ಣ ರಾಘವನು ಗಟ್ಟಿಯಾಗಿ ನಿಂತಿರುವುದನ್ನು ನೋಡಿ ಬಲಶಾಲಿ ಸೌಮಿತ್ರಿಯೂ ಕೂಡ ತನ್ನ ಖಡ್ಗದಿಂದ ಕಬಂಧನ ಬಲಬಾಹುವಿಗೆ ಹೊಡೆಯಲು ಆ ಮಹಾ ರಾಕ್ಷಸನು ಜೀವವನ್ನು ಕಳೆದುಕೊಂಡು ನೆಲದ ಮೇಲೆ ಬಿದ್ದನು.

ಅವನ ದೇಹದಿಂದ ದಿವ್ಯದರ್ಶನ ಪುರುಷನು ಬಿಡುಗಡೆ ಹೊಂದಿ ದಿವವನ್ನೇರಿ ಅಲ್ಲಿ ಸೂರ್ಯನಂತೆ ಪ್ರಜ್ವಲಿಸುತ್ತಾ ಕಾಣಿಸಿಕೊಂಡನು. ರಾಮನು ಅವನಿಗೆ

" ನೀನು ಯಾರು? ನಿನಗಿಷ್ಟವಿದ್ದರೆ ನನ್ನ ಈ ಪ್ರಶ್ನೆಗೆ ಉತ್ತರಿಸು. ನಾವು ಕಾಣುವ ಈ ವಿಚಿತ್ರ ಆಶ್ಚರ್ಯವೇನು?"

ಎಂದು ಕೇಳಿದನು. ಆಗ ಆ ಮಹಾಪ್ರಭೆಯ ದಿವ್ಯ ಪುರುಷನು

"ನಾನು ಗಂಧರ್ವ ವಿಶ್ವಾವಸು. ಬ್ರಹ್ಮನ ಶಾಪದಿಂದ ರಾಕ್ಷಸಯೋನಿಯಲ್ಲಿ ಜನ್ಮಪಡೆದನು. ಲಂಕಾನಿವಾಸಿಗಳ ರಾಜ



ರಾವಣನು ಸೀತೆಯನ್ನು ಅಪಹರಿಸಿದ್ದಾನೆ. ಸುಗ್ರೀವನಲ್ಲಿಗೆ ಹೋಗು. ಅವನು ನಿನಗೆ ಸಹಾಯಮಾಡುತ್ತಾನೆ. ಋಷ್ಯಮೂಕ ಪರ್ವತದ ಹತ್ತಿರವೇ ಹಂಸ-ಕಾರಂಡಗಳಿಂದ ಕೂಡಿರುವ ಶುದ್ಧನೀರಿನ ಪಂಪಾ ಸರೋವರವಿದೆ. ಅಲ್ಲಿ ವಾನರರಾಜ ಹೇಮಮಾಲಿನಿ ವಾಲಿಯ ತಮ್ಮ ಸುಗ್ರೀವನು ತನ್ನ ನಾಲ್ವರು ಸಚಿವರೊಂದಿಗೆ ನೆಲೆಸಿದ್ದಾನೆ. ಇಷ್ಟುಮಾತ್ರ ನಾನು ಹೇಳಬಲ್ಲೆ. ನೀನು ಜಾನಕಿಯನ್ನು ಕಾಣುತ್ತೀಯೆ. ವಾನರರಾಜನಿಗೆ ರಾವಣಾಲಯವು ನಿಶ್ಚಯವಾಗಿಯೂ ತಿಳಿದಿದೆ."

ಎಂದು ಹೇಳಿ, ಆ ವೀರ ರಾಮ-ಲಕ್ಷ್ಮಣರನ್ನು ವಿಸ್ಮಯಗೊಳಿಸಿ ಅಂತರ್ಧಾನನಾದನು.

## ಸುಗ್ರೀವ ಸಖ್ಯ, ವಾಲಿವಧೆ

ಸೀತಾಪಹರಣದಿಂದ ದುಃಖಾರ್ತನಾದ ರಾಮನು ರಾತ್ರಿ-ಪ್ರಭಾತಕಾಲಗಳಲ್ಲಿ ಅರಳುತ್ತಿದ್ದ ಕಮಲಗಳಿಂದ ತುಂಬಿದ್ದ ಪಂಪಾಸರೋವರವನ್ನು ಸೇರಿದನು. ಮನಸ್ಸನ್ನು ತನ್ನ ಪ್ರಿಯೆಯ ಮೇಲೆಯೇ ಇರಿಸಿದ್ದ ರಾಮನು ಸುಖ ಶೀತಲ ಮಾರುತವು ಅಮೃತ ಪರಿಮಳವನ್ನು ಹೊತ್ತು ಬೀಸುತ್ತಿದ್ದ ಆ ವನಕ್ಕೆ ಹೋದನು. ಅಲ್ಲಿ ತನ್ನ ಕಾಂತೆಯನ್ನು ನೆನಪಿಸಿಕೊಂಡು ಕಾಮಬಾಣದಿಂದ ಸಂತಪ್ತನಾಗಿ ವಿಲಪಿಸಿದನು. ಅವನನ್ನು ನೋಡಿದ ಸೌಮಿತ್ರಿಯು ಹೇಳಿದನು:

> “ಮಾನದ! ಈ ವಿಧದ ಬಾವನೆಯು ಆತ್ಮವಂತ ವೃದ್ಧಶೀಲ ಪುರುಷನನ್ನು ವ್ಯಾಧಿಯು ಹೇಗೋ ಹಾಗೆ ನಿನ್ನನ್ನು ಮುಟ್ಟಬಾರದು. ನಿನಗೆ ಈಗ ವೈದೇಹಿ ಮತ್ತು ರಾವಣರ ಕುರುಹು ತಿಳಿದಿದೆ. ನಿನ್ನ ಪುರುಷತ್ವ ಮತ್ತು ಬುದ್ಧಿಗಳಿಂದ ಅವಳನ್ನು ಮರಳಿ ಪಡೆದುಕೋ! ಪರ್ವತದಲ್ಲಿ ವಾಸಿಸುತ್ತಿರುವ ಹರಿಪುಂಗವ ಸುಗ್ರೀವನಲ್ಲಿಗೆ ಹೋಗೋಣ. ನಾನು ನಿನ್ನ ಶಿಷ್ಯ, ಸೇವಕ ಮತ್ತು ಸಹಾಯಕನಾಗಿರುವವರೆಗೆ ಧೈರ್ಯದಿಂದಿರು.”

ಲಕ್ಷ್ಮಣನ ಈ ಬಹುವಿಧದ ಮಾತುಗಳಿಂದ ರಾಘವನು ಸ್ವಭಾವವನ್ನು ಮರಳಿ ಪಡೆದು ಮಾಡಬೇಕಾದ ಕಾರ್ಯದಲ್ಲಿ ಮನಸ್ಸನ್ನು ತೊಡಗಿಸಿದನು. ಪಂಪಾಸರೋವರದ ನೀರನ್ನು ಬಳಸಿ ಪಿತೃಗಳಿಗೆ ತರ್ಪಣಗಳನ್ನಿತ್ತು ಆ ಇಬ್ಬರು ವೀರ ಸಹೋದರರು ಮುಂದುವರೆದರು.

ಅನೇಕ ಫಲಮೂಲಗಳಿದ್ದ ಋಶ್ಯಮೂಕ ಗಿರಿಯನ್ನು ಸೇರಿ ಆ ವೀರರಿಬ್ಬರೂ ಗಿರಿಯಾಗ್ರದಲ್ಲಿ ಐವರು ವಾನರರನ್ನು ಕಂಡರು. ಸುಗ್ರೀವನು ತನ್ನ ಸಚಿವ ಬುದ್ಧಿವಂತ, ಹಿಮವತ್ಪರ್ವತದಂತಿದ್ದ ಹನೂಮಂತನನ್ನು ಅವರ ಬಳಿ ಕಳುಹಿಸಿದನು. ಮೊದಲು ಹನುಮಂತನೊಂದಿಗೆ ಮಾತನಾಡಿ ನಂತರ ರಾಮ-ಲಕ್ಷ್ಮಣರಿಬ್ಬರೂ ಸುಗ್ರೀವನಲ್ಲಿಗೆ ಹೋದರು. ಅಲ್ಲಿ ರಾಮನು ವಾನರರಾಜನೊಡನೆ ಸಖ್ಯವನ್ನು ಮಾಡಿಕೊಂಡನು. ರಾಮನು ತನ್ನ ಕಾರ್ಯವೇನೆಂದು



ಹೇಳಿಕೊಳ್ಳಲು ಆ ವಾನರರು ಅಪಹರಿಸಿಕೊಂಡು ಹೋಗುತ್ತಿರುವಾಗ ಸೀತೆಯು ತಮ್ಮ ಮಧ್ಯೆ ಎಸೆದಿದ್ದ ವಸ್ತ್ರವನ್ನು ಅವನಿಗೆ ತೋರಿಸಿದರು. ವಾನರರಾಜ ಸುಗ್ರೀವನು ತನ್ನ ವಿಶ್ವಾಸಕ್ಕೆ ಅರ್ಹನಾದವನೆಂದು ತಿಳಿದು ರಾಮನು ಅವನನ್ನು ಪೃಥ್ವಿಯ ವಾನರೇಶ್ವರನೆಂದು ಅಭಿಷೇಕಿಸಿದನು, ರಾಮನು ಸಮರದಲ್ಲಿ ವಾಲಿಯನ್ನು ವಧಿಸುವೆನೆಂದೂ ಸುಗ್ರೀವನು ವೈದೇಹಿಯನ್ನು ಪುನಃ ತರುವೆನೆಂದೂ ಪ್ರತಿಜ್ಞೆಗಳನ್ನು ಮಾಡಿ ಪರಸ್ಪರ ವಿಶ್ವಾಸದಿಂದ ಒಪ್ಪಂದವನ್ನು ಮಾಡಿಕೊಂಡು ಅವರೆಲ್ಲರೂ ಯುದ್ಧಾಕಾಂಕ್ಷಿಗಳಾಗಿ ಕಿಷ್ಕಿಂಧೆಗೆ ಬಂದರು.

ಕಿಷ್ಕಿಂಧೆಗೆ ಬಂದು ಸುಗ್ರೀವನು ಕೂಗಿ ಕರೆಯಲು ವಾಲಿಗೆ ಅದನ್ನು ಸಹಿಸಲಾಗಲಿಲ್ಲ. ಆಗ ತಾರೆಯು

> "ಸುಗ್ರೀವನು ಕೂಗುವ ರೀತಿಯನ್ನು ನೋಡಿದರೆ ಅವನಿಗೆ ಆಶ್ರಯವನ್ನು ನೀಡುವವನು ದೊರಕಿದ್ದಾನೆ ಎಂದೆನಿಸುತ್ತದೆ. ನೀನು ಹೊರಹೋಗಬಾರದು"

ಎಂದು ಅವನನ್ನು ತಡೆದಳು. ಆಗ ವಾನರಪತಿ ವಾಲಿಯು

> "ನೀನು ಎಲ್ಲ ಭೂತಗಳ ಕೂಗುಗಳನ್ನೂ ಗುರುತಿಸಬಲ್ಲೆ! ನಿನಗೆ ಬುದ್ಧಿಯಿಂದ ನೋಡುವ ಶಕ್ತಿಯೂ ಇದೆ. ನನ್ನ ಈ ಸುಳ್ಳು ತಮ್ಮನು ಯಾರ ಆಶ್ರಯವನ್ನು ಪಡೆದಿದ್ದಾನೆ ಹೇಳು"

ಎಂದು ತಾರೆಯನ್ನು ಕೇಳಿದನು. ಸ್ವಲ್ಪಹೊತ್ತು ಆಲೋಚಿಸಿ ತಾರೆಯು ಪತಿಗೆ ಉತ್ತರಿಸಿದಳು:

> “ಕಪೀಶ್ವರ! ಎಲ್ಲವನ್ನೂ ಕೇಳು. ಪತ್ನಿಯನ್ನು ಕಳೆದುಕೊಂಡ ಮಹಾಸತ್ತ್ವಯುತ ಧನುರ್ಧಾರಿ ದಶರಥಾತ್ಮಜ ರಾಮನು ತನ್ನ ಸರಿಸಮ ಹಗೆಯನ್ನು ಇಟ್ಟುಕೊಂಡಿರುವ ಸುಗ್ರೀವನನ್ನು ಸೇರಿದ್ದಾನೆ. ಅವನ ತಮ್ಮ ಮಹಾಬಾಹು ಸೌಮಿತ್ರಿ ಅಪರಾಜಿತ ಲಕ್ಷ್ಮಣನೆಂಬ ಮೇಧಾವಿಯೂ ಅವನ ಕಾರ್ಯಾರ್ಥಸಿದ್ಧಿಗೆ ನಿಂತಿದ್ದಾನೆ. ಮೈಂದ, ದ್ವಿವಿದ, ಅನಿಲಾತ್ಮಜ ಹನೂಮಂತ ಮತ್ತು ಕರಡಿಗಳ ರಾಜ ಜಾಂಬವಾನ ಇವರು ಸುಗ್ರೀವನ ಸಚಿವರಾಗಿ ನಿಂತಿದ್ದಾರೆ. ಈ ಎಲ್ಲ ಮಹಾತ್ಮರೂ ಬುದ್ಧಿವಂತರು, ಮಹಾಬಲರು ಮತ್ತು ನಿನ್ನ ವಿನಾಶಕ್ಕಾಗಿಯೇ ರಾಮನ ವೀರ್ಯವನ್ನು ಆಶ್ರಯಿಸಿದ್ದಾರೆ.”

ಅವಳು ಗುಟ್ಟಾಗಿ ಸುಗ್ರೀವನನ್ನು ಪ್ರೀತಿಸುತ್ತಿದ್ದಾಳೆಂದು ಅಸೂಯೆಪಟ್ಟು ತನ್ನ ಹಿತಕ್ಕಾಗಿಯೇ ಹೇಳಿದ ತಾರೆಯ ಆ ಮಾತುಗಳನ್ನು ವಾಲಿಯು ಕಡೆಗಣಿಸಿದನು. ತಾರೆಗೆ ಖಾರವಾಗಿ ಮಾತನಾಡಿ ಅವನು ಗುಹೆಯ ಹೊರಗೆ ಬಂದು ಮಾಲ್ಯವತದ ಬಳಿನಿಂತಿದ್ದ ಸುಗ್ರೀವನಿಗೆ


> “ಮೂಢ! ನನಗೆ ಜೀವದಷ್ಟೇ ಪ್ರಿಯನಾಗಿದ್ದ ನಿನ್ನನ್ನು ನಾನು ಬಹಳಷ್ಟು ಬಾರಿ ಸೋಲಿಸಿದ್ದೇನೆ. ಅಣ್ಣನು ಬಿಡುಗಡೆ

> ಮಾಡುತ್ತಾನೆಂದು ತಿಳಿದು ಪುನಃ ಮರಣದ ಮಾರ್ಗದಲ್ಲಿ ಏಕೆ ತ್ವರೆಮಾಡುತ್ತಿರುವೆ?”

ಎಂದನು. ಇದನ್ನು ಕೇಳಿದ ಸುಗ್ರೀವನು ಕಾಲವು ಪ್ರಾಪ್ತವಾಗಿದೆಯೆಂದು ತಿಳಿದು ರಾಮನಿಗೆ ಹೇಳುತ್ತಿರುವನೋ ಎಂಬಂತೆ, ಅಣ್ಣನಿಗೆ ಈ ಬುದ್ಧಿಮಾತನ್ನಾಡಿದನು:


> “ರಾಜನ್! ನಿನ್ನಿಂದ ನನ್ನ ಪತ್ನಿಯನ್ನೂ ರಾಜ್ಯವನ್ನೂ ಕಳೆದುಕೊಂಡು ಜೀವಿತದ ಸಾಮರ್ಥ್ಯವೇನು ಎಂದು ತಿಳಿದು ಇಂದು ಬಂದಿದ್ದೇನೆ.”

ಈ ರೀತಿ ಬಹುವಿಧಗಳಲ್ಲಿ ಮಾತನಾಡಿ ವಾಲಿ-ಸುಗ್ರೀವರು ಶಾಲವೃಕ್ಷ-ತಾಳೆಯ ಮರ ಮತ್ತು ಕಲ್ಲುಗಳನ್ನೇ ಆಯುಧಗಳನ್ನಾಗಿಸಿ ಸೆಣಸಾಡಿದರು. ಉಗುರು-ಹಲ್ಲುಗಳಿಂದ ಗಾಯಗೊಂಡು ರಕ್ತದಲ್ಲಿ ತೋಯ್ದ ಆ ವೀರರಿಬ್ಬರೂ ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಶೋಭಿಸುತ್ತಿದ್ದರು. ಯುದ್ಧದಲ್ಲಿ ಅವರಿಬ್ಬರಲ್ಲಿ ಯಾವ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಆಗ ಹನುಮಂತನು ಸುಗ್ರೀವನ ಕಂಠಕ್ಕೆ ಮಾಲೆಯನ್ನು ಹಾಕಿದನು. ಆ ಮಾಲೆಯಿಂದ ಸುಗ್ರೀವನು ಮೇಘಮುಸುಕಿದ ಮಹಾಶೈಲ ಮಲಯದಂತೆ ಶೋಭಿಸಿದನು. ಸುಗ್ರೀವನು ಸೂಚನೆಯಿತ್ತಿದುದನ್ನು ನೋಡಿ ರಾಮನು ಮಹಾಧನುಸ್ಸನ್ನು ಸೆಳೆದು ವಾಲಿಗೆ ಗುರಿಯಿಟ್ಟನು. ಆ ಧನುಸ್ಸಿನ ಶಬ್ಧವು ಯಂತ್ರದಿಂದ ಹೊರಟಿತೋ ಎನ್ನುವಂತೆ ಕೇಳಿಬಂದಿತು. ಹೃದಯಕ್ಕೆ ಬಾಣವು



ತಾಗಲು ವಾಲಿಯು ಕೆಳಗುರುಳಿದನು.

ಮರ್ಮಸ್ಥಾನಕ್ಕೆ ಪೆಟ್ಟಾಗಿ ತುಂಡಾಗಲು ಬಾಯಿಯಿಂದ ರಕ್ತವನ್ನು ಕಾರುತ್ತಾ ಅವನು ಮರೆಯಲ್ಲಿ ಜೊತೆಯಲ್ಲಿ ನಿಂತಿದ್ದ ರಾಮ-



ಸೌಮಿತ್ರಿಯರನ್ನು ನೋಡಿದನು. ರಾಮನನ್ನು ನಿಂದಿಸುತ್ತಾ ಮೂರ್ಛಿತನಾಗಿ ಬಿದ್ದ ಅವನು ಭೂಮಿಗೆ ಬಿದ್ದ ತರಾಪತಿಯಂತೆ ಕಂಡನು. ವಾಲಿಯು ಹತನಾಗಲು ಸುಗ್ರೀವನು ಕಿಷ್ಕಿಂಧೆ-ತಾರೆಯರನ್ನು ಮರಳಿ ಪಡೆದನು. ರಾಮನಾದರೋ ಸುಗ್ರೀವನ ಸೇವೆಯನ್ನು ಸ್ವೀಕರಿಸಿ ಚಾತುರ್ಮಾಸವನ್ನು ಶುಭ ಮಾಲ್ಯವತದ ಹಿಂದೆ ಕಳೆದನು.

## ಅಶೋಕವನದಲ್ಲಿ ಸೀತಾ

ರಾವಣನು ಕಾಮಬಲದಿಂದ ಸೀತೆಯನ್ನು ಎಳೆದುಕೊಂಡು ಲಂಕಾಪುರಿಗೆ ಹೋಗಿ ಅಲ್ಲಿ ತಾಪಸರ ಆಶ್ರಮ ಮತ್ತು ನಂದನವನದಂತಿದ್ದ ಅಶೋಕವನದಲ್ಲಿ ಇರಿಸಿದನು. ಪತಿಯ ಕುರಿತು ಚಿಂತಿಸುತ್ತಾ ದೇಹದಲ್ಲಿ ಸೊರಗಿದ್ದ ತಾಪಸಿಯ ವೇಷಧರಿಸಿದ್ದ ಆ ವಿಶಾಲಾಕ್ಷಿಯು ಉಪವಾಸ ಮತ್ತು ತಪಸ್ಸಿನಲ್ಲಿಯೇ ತನ್ನನ್ನು ತೊಡಗಿಸಿಕೊಂಡಳು. ಫಲಮೂಲಗಳನ್ನು ತಿನ್ನುತ್ತಾ ಅವಳು ದುಃಖದಲ್ಲಿ ರಾತ್ರಿಗಳನ್ನು ಕಳೆದಳು. ರಾಕ್ಷಸಾಧಿಪನು ಅಲ್ಲಿ ಅವಳ ಕಾವಲಿಗೆ ಪ್ರಾಸ-ಖಡ್ಗ-ಶೂಲ-ಪರಶು-ಮುದ್ಗರ-ದೀವಟಿಗೆಗಳನ್ನು ಹಿಡಿದ ಎರಡು-ಮೂರು ಕಣ್ಣುಗಳಿದ್ದ, ಹಣೆಯಲ್ಲಿ ಕಣ್ಣಿದ್ದ, ಉದ್ದ ನಾಲಗೆಯ, ನಾಲಗೆಯೇ ಇಲ್ಲದಿದ್ದ, ಮೂರು ಮೊಲೆಗಳ, ಒಂದೇ ಕಾಲಿನ, ಮೂರು ಜಟೆಗಳ ಮತ್ತು ಒಂದೇ ಕಣ್ಣುಳ್ಳ ರಾಕ್ಷಸಿಯರನ್ನು ಇರಿಸಿದನು. ಬೆಂಕಿಕಾರುವ ಕಣ್ಣುಗಳ ಮತ್ತು ಆನೆಯ ಕೂದಲಿನಂತೆ ಹೊಳೆಯುತ್ತಿದ್ದ ಅನೇಕ ರಾಕ್ಷಸಿಯರು ಹಗಲು-ರಾತ್ರಿ ಸೀತೆಯನ್ನು ಸುತ್ತುವರೆದು



ಎಡೆಬಿಡದೇ ಅವಳನ್ನು ಕಾಡುತ್ತಿದ್ದರು. ದಾರುಣಸ್ವರದ ಪಿಶಾಚಿಯರು ಅವಳನ್ನು ರೌದ್ರ ಕಠೋರ ಮಾತುಗಳಿಂದ

> "ನಮ್ಮ ಒಡೆಯನನ್ನು ಅಪಮಾನಿಸಿ ಜೀವಿಸುತ್ತಿರುವ ಇವಳನ್ನು ತಿನ್ನೋಣ! ಕತ್ತರಿಸಿ ಎಳ್ಳಿನಹಾಗೆ ಸಣ್ಣ ಸಣ್ಣ ತುಂಡುಮಾಡೋಣ!"

ಎಂದು ಹೆದರಿಸುತ್ತಿದ್ದರು. ಅವರು ಹೀಗೆ ಅವಳನ್ನು ಪುನಃ ಪುನಃ ಬೆದರಿಸಿ ಕಾಡುತ್ತಿರಲು ಪತಿಯ ಶೋಕದಿಂದ ಆವಿಷ್ಟಳಾದ ಸೀತೆಯು ಅವರಿಗೆ ಹೆದರಿ ಹೇಳಿದಳು:

> "ಬಹುಬೇಗ ನನ್ನನ್ನು ತಿನ್ನಿರಿ! ಆ ಕಪ್ಪುಗೂದಲಿನ

ಪುಂಡರೀಕಾಕ್ಷನ ವಿನಾ ನನಗೆ ಜೀವದ ಮೇಲೆ ಆಸೆಯಿಲ್ಲ. ಪ್ರಿಯನಿಂದ ವರ್ಜಿತಳಾದ ನಾನು ನೀರು-ಆಹಾರಗಳನ್ನು ತೊರೆದು ತಾಳೆಯ ಮರದ ಮೇಲಿರುವ ಹಾವಿನಂತೆ ನನ್ನ ದೇಹವನ್ನು ಶೋಷಿಸುತ್ತೇನೆ. ಆದರೆ ನಾನು ರಾಘವನ ಹೊರತು ಬೇರೆ ಯಾವುದೇ ಪುರುಷನ ಬಳಿಸಾರುವುದಿಲ್ಲ. ಇದು ಸತ್ಯವೆಂದು ತಿಳಿಯಿರಿ."

ಅವಳ ಈ ಮಾತನ್ನು ಕೇಳಿ ಆ ಖರಸ್ವನ ರಾಕ್ಷಸಿಯರು ರಾಕ್ಷಸೇಂದ್ರನಲ್ಲಿಗೆ ಹೋಗಿ ನಡೆದುದೆಲ್ಲವನ್ನೂ ವರದಿ ಮಾಡಿದರು.

ಅವರೆಲ್ಲರೂ ಹೊರಟುಹೋದ ನಂತರ ತ್ರಿಜಟಾ ಎಂಬ ಹೆಸರಿನ ಧರ್ಮಜ್ಞೆ ಪ್ರಿಯವಾದಿನಿ ರಾಕ್ಷಸಿಯು ವೈದೇಹಿಯನ್ನು ಸಂತವಿಸಿದಳು:

"ಸೀತೇ ! ಸಖಿ ! ನಿನಗೆ ಏನೋ ಸ್ವಲ್ಪ ಹೇಳುತ್ತೇನೆ. ನನ್ನ ಮೇಲೆ ವಿಶ್ವಾಸವಿಟ್ಟು, ನಿನ್ನ ಭಯವನ್ನು ನಾಶಗೊಳಿಸುವ ನನ್ನ ಈ ಮಾತನ್ನು ಕೇಳು. ರಾಮನ ಹಿತಾನ್ವೇಷಿಯಾಗಿರುವ ಅವಿಂಧ್ಯ ಎಂಬ ಮೇಧಾವೀ ವೃದ್ಧ ರಾಕ್ಷಸಪುಂಗವನು ನಿನ್ನ ಕುರಿತು ನನ್ನಲ್ಲಿ ಈ ಮಾತುಗಳನ್ನಾಡಿದ್ದನು: 'ಸೀತೆಯನ್ನು ಸಮಾಧಾನ ಪಡೆಸಿ ವಿಶ್ವಾಸಮೂಡಿಸಿದ ನಂತರ ನನ್ನ ಈ ಮಾತುಗಳನ್ನು ಅವಳಿಗೆ ತಿಳಿಸು. ನಿನ್ನ ಪತಿ ರಾಮ ಮತ್ತು ಅವನ ಬಲಶಾಲಿ ತಮ್ಮ ಲಕ್ಷ್ಮಣರು ಕುಶಲರಾಗಿದ್ದಾರೆ. ನಿನ್ನ ಸಲುವಾಗಿ ರಾಘವನು ವಾನರರಾಜನೊಂದಿಗೆ ಸಖ್ಯಮಾಡಿಕೊಂಡು

ಸಿದ್ಧನಾಗಿದ್ದಾನೆ. ಲೋಕಗಳೇ ನಿಂದಿಸುತ್ತಿರುವ ರಾವಣನ ಕುರಿತು ನಿನಗೆ ಭಯವಿಲ್ಲದಿರಲಿ. ನಲಕೂಬರನು ರಾವಣನಿಗಿತ್ತಿದ್ದ ಶಾಪವು ನಿನ್ನನ್ನು ರಕ್ಷಿಸುತ್ತಿದೆ. ರಾವಣನು ಹಿಂದೆ ರಂಭೆಯನ್ನು ತನ್ನ ಪತ್ನಿಯನ್ನಾಗಿ ಪಡೆಯಲು ಪ್ರಯತ್ನಿಸಿದುದಕ್ಕೆ ವಿವಶ ನಾರಿಯನ್ನು ಹೊಂದಲು ಅವನು ಅಶಕ್ತನಾಗುತ್ತಾನೆಂಬ ಶಾಪಕ್ಕೊಳಗಾಗಿದ್ದನು. ಸುಗ್ರೀವನಿಂದ ರಕ್ಷಿತನಾಗಿ ನಿನ್ನ ಪತಿಯು ಸೌಮಿತ್ರಿಯ ಸಹಿತ ಕ್ಷಿಪ್ರವಾಗಿ ಬರುತ್ತಾನೆ ಮತ್ತು ನಿನ್ನನ್ನು ಇಲ್ಲಿಂದ ಬಿಡುಗಡೆ ಮಾಡುತ್ತಾನೆ. ರಾವಣನ ವಿನಾಶವನ್ನು ತೋರಿಸುವ ಮಹಾಘೋರ ಅನಿಷ್ಟ ಸ್ವಪ್ನವನ್ನೂ ನಾನು ಕಂಡಿದ್ದೇನೆ. ಆ ದಾರುಣ ದುಷ್ಟಾತ್ಮ ನಿಶಾಚರನು ತನಗೆ ಸ್ವಾಭಾವಿಕವಾಗಿರುವ ಶೀಲದೋಷದಿಂದ ಎಲ್ಲರ ಭಯವನ್ನೂ ಹೆಚ್ಚಿಸುತ್ತಾನೆ. ಸರ್ವದೇವತೆಗಳೊಂದಿಗೆ ಸ್ಪರ್ಧಿಸುವ ಆ ಕಾಲೋಪಹತಚೇತನನ ವಿನಾಶದ ಸೂಚನೆಗಳನ್ನು ನಾನು ಸ್ವಪ್ನದಲ್ಲಿ ಕಂಡಿದ್ದೇನೆ. ದಶಾನನನು ತೈಲದಲ್ಲಿ ಸ್ನಾನಮಾಡಿ ಹೊಳೆಯುತ್ತಾ ಕೆಸರಿನಲ್ಲಿ ಮುಳುಗುತ್ತಿರುವುದನ್ನು ಮತ್ತು ಕತ್ತೆಗಳು ಎಳೆದುಕೊಂಡು ಹೋಗುತ್ತಿದ್ದ ರಥದ ಮೇಲೆ ನಿಂತು ಕುಣಿಯುತ್ತಿರುವುದನ್ನು ನಾನು ಕಂಡೆನು. ಕುಂಭಕರ್ಣ ಮತ್ತು ಇತರರು ನಗ್ನರಾಗಿ ತಲೆಕೂದಲನ್ನು ಕೆದರಿಕೊಂಡು ಕೆಂಪು ಬಣ್ಣವನ್ನು ಬಳಿದುಕೊಂಡು ಕೆಂಪುಮಾಲೆಯನ್ನು ಧರಿಸಿ ದಕ್ಷಿಣದ ಕಡೆ

ಎಳೆದೊಯ್ಯಲ್ಪಡುತ್ತಿದ್ದುದನ್ನು ಕನಸಿನಲ್ಲೆ ಕಂಡೆ. ಉಳಿದ ವಿಭೀಷಣನೊಬ್ಬನೇ ಬಿಳಿಗೊಡೆಯಡಿಯಲ್ಲಿ ಬಿಳಿಯ ಮಾಲೆ-ವಸ್ತ್ರಗಳನ್ನು ಧರಿಸಿ ಶ್ವೇತಪರ್ವತವನ್ನೇರಿದುದನ್ನು ನೋಡಿದೆ. ಅವನ ನಾಲ್ವರು ಸಚಿವರು ಬಿಳಿಯ ಮಾಲೆ ಅನುಲೇಪನಗಳನ್ನು ಧರಿಸಿ ಶ್ವೇತಪರ್ವತವನ್ನೇರಿ ನಮ್ಮನ್ನು ಮಹಾಭಯದಿಂದ ಬಿಡುಗಡೆಮಾಡಿದುದನ್ನು ನೋಡಿದೆ. ನಿನ್ನ ಪತಿ ರಾಮನು ಸಾಗರದಿಂದ ಸುತ್ತುವರೆಯಲ್ಪಟ್ಟಿರುವ ಇಡೀ ಪೃಥ್ವಿಯನ್ನೇ ಶರಗಳಿಂದ ಮುಚ್ಚಿ ಯಶಸ್ಸಿನಿಂದ ತುಂಬಿಸುತ್ತಾನೆ. ಲಕ್ಷ್ಮಣನಾದರೋ ಎಲುಬುಗಳ ರಾಶಿಯ ಮೇಲೇರಿ ಮಧುಪಾಯಸವನ್ನು ಸೇವಿಸುತ್ತಾ ಸುತ್ತಲೂ ನಿರೀಕ್ಷಿಸುತ್ತಿರುವುದನ್ನು ನಾನು ಕಂಡೆ. ರಕ್ತದಿಂದ ತೋಯ್ದು ಅಳುತ್ತಿದ್ದ ನೀನು ಹುಲಿಯಿಂದ ರಕ್ಷಿತಳಾಗಿ ಉತ್ತರ ದಿಕ್ಕಿನಲ್ಲಿ ಹೋಗುತ್ತಿರುವುದನ್ನೂ ಕಂಡೆ. ಪತಿಯನ್ನು ಸೇರಿ ನೀನು ಶೀಘ್ರದಲ್ಲಿಯೇ ಹರ್ಷವನ್ನು ಹೊಂದುತ್ತೀಯೆ. ಸ್ವಲ್ಪವೇ ಸಮಯದಲ್ಲಿ ನೀನು ರಾಘವ ಮತ್ತು ಜೊತೆಗೆ ಅವನ ತಮ್ಮನನ್ನು ಸೇರುವೆ!'"

ಈ ರೀತಿ ತ್ರಿಜಟೆಯ ಮಾತುಗಳನ್ನು ಕೇಳಿ ಸೀತೆಯು ಪತಿಯ ಪುನರ್ಮಿಲನದ ಕುರಿತಾದ ಆಸೆಯನ್ನು ಪುನಃ ಪಡೆದುಕೊಂಡಳು.

ಆಗ ಕಾಮಬಾಣಾರ್ತನಾದ ರಾವಣನು ಪತಿವ್ರತೆ ಸೀತೆಯನ್ನು



ನೋಡಲು ಹೊರಟನು. ದೇವ-ದಾನವ-ಯಕ್ಷ-ಕಿಂಪುರುಷರಿಂದ ಯುದ್ಧದಲ್ಲಿ ಅಜೇಯನಾಗಿದ್ದ ಆ ಕಂದರ್ಪಮೋಹಿತನು ಅಶೋಕವನಕ್ಕೆ ಬಂದನು. ದಿವ್ಯಾಂಬರಗಳನ್ನೂ, ಹೊಳೆಯುತ್ತಿರುವ ಮಣಿಕುಂಡಲಗಳನ್ನೂ, ಬಣ್ಣಬಣ್ಣದ ಮಾಲೆ-ಮುಕುಟಗಳನ್ನೂ ಧರಿಸಿದ್ದ ರಾವಣನು ವಸಂತನೇ ಮೂರ್ತಿಮತ್ತಾಗಿ ಬಂದಂತೆ ತೋರುತ್ತಿದ್ದನು, ಜಾಗೃತೆಯಿಂದ ಅಲಂಕರಿಸಿಕೊಂಡಿದ್ದ ಅವನು ಕಲ್ಪವೃಕ್ಷದಂತೆ ಸುಂದರನಾಗಿ ಶೋಭಿಸುತ್ತಿದ್ದರೂ ಸ್ಮಶಾನದಲ್ಲಿರುವ ಅಶ್ವತ್ಥವೃಕ್ಷದಂತೆ ಭಯಂಕರನಾಗಿ ಕಾಣುತ್ತಿದ್ದನು. ತನುಮಧ್ಯಮೆ ಸೀತೆಯ ಸಮೀಪದಲ್ಲಿದ್ದ ಆ ರಜನೀಚರನು ರೋಹಿಣಿಯ ಸಮೀಪದಲ್ಲಿದ್ದ ಶನೈಶ್ಚರ ಗ್ರಹದಂತೆ ಕಂಡನು. ಪುಷ್ಪಕೇತು ಮನ್ಮಥನ ಶರಗಳಿಂದ ಘಾತಿಗೊಂಡಿದ್ದ ಅವನು ಹೆದರಿದ ಪಾರಿವಾಳದಂತೆ

ನಡುಗುತ್ತಿದ್ದ ಬಾಲೆ ಸೀತೆಯನ್ನು ಕರೆದು ಹೇಳಿದನು:

“ಸೀತೆ! ನೀನು ನಿನ್ನ ಪತಿಯ ಮೇಲೆ ಸಾಕಷ್ಟು ಅನುಗ್ರಹವನ್ನು ಮಾಡಿಯಾಯಿತು. ಈಗ ನನ್ನ ಮೇಲೆ ಕರುಣೆತೋರು! ನಿನ್ನನ್ನು ಸಿಂಗರಿಸುತ್ತೇನೆ. ಮಹಾರ್ಹ ಆಭರಣ-ವಸ್ತ್ರಗಳನ್ನು ಧರಿಸಿ ನನ್ನನ್ನು ಪ್ರೀತಿಸು. ನನ್ನ ಎಲ್ಲ ನಾರಿಗಳಲ್ಲಿ ಉತ್ತಮಳಾಗು. ನನ್ನಲ್ಲಿ ದೇವಕನ್ಯೆಯರಿದ್ದಾರೆ ಮತ್ತು ರಾಜರ್ಷಿಗಳ ಅಂಗನೆಯರಿದ್ದಾರೆ. ದಾನವ ಕನ್ಯೆಯರೂ ದೈತ್ಯಸುತೆಯರೂ ಇದ್ದಾರೆ. ಹದಿನಾಲ್ಕು ಕೋಟಿ ಪಿಶಾಚಿಗಳು ಮತ್ತು ಅದಕ್ಕೂ ಎರಡು ಪಟ್ಟು ಮನುಷ್ಯರನ್ನು ತಿನ್ನುವ ಭೀಮಕರ್ಮಿ ರಾಕ್ಷಸರು ನನ್ನ ಆಜ್ಞೆಗಾಗಿ ಕಾಯುತ್ತಾ ನಿಂತಿದ್ದಾರೆ. ಅದಕ್ಕೂ ಮೂರು ಪಟ್ಟು ಯಕ್ಷರು ನನ್ನ ಮಾತಿನಂತೆ ಮಾಡುವವರಿದ್ದಾರೆ. ಅವರಲ್ಲಿ ಕೆಲವರು ನನ್ನ ಅಣ್ಣ ಕುಬೇರನೊಡನಿದ್ದಾರೆ. ನಾನು ಪಾನೀಯಕ್ಕೆಂದು ಹೋದಾಗ ಗಂಧರ್ವರೂ ಅಪ್ಸರೆಯರೂ, ನನ್ನ ಅಣ್ಣ ಕುಬೇರನಿಗೆ ಹೇಗೋ ಹಾಗೆ, ನನ್ನ ಸೇವೆಗೈಯುತ್ತಾರೆ. ವಿಪ್ರರ್ಷಿ ವಿಶ್ರವಸುವಿನ ಮಗನಾದ ನಾನು ಐದನೆಯ ಲೋಕಪಾಲನೆಂದು ಪ್ರತಿಥನಾಗಿ ಯಶಸ್ವಿಯಾಗಿದ್ದೇನೆ. ಭಾಮಿನಿ! ತ್ರಿದಶೇಶನಲ್ಲಿ ಇದ್ದಂತೆ ನನ್ನಲ್ಲಿಯೂ ಬಗೆಬಗೆಯ ದಿವ್ಯ ಭಕ್ಷ್ಯ-ಭೋಜ್ಯ-ಪಾನೀಯಗಳಿವೆ. ವನವಾಸದಲ್ಲಿನ ನಿನ್ನ ಈ ದುಷ್ಕೃತ ಕರ್ಮಗಳು ಕೊನೆಗೊಳ್ಳಲಿ. ಸುಶ್ರೋಣಿ! ಮಂಡೋದರಿಯಂತೆ

ನನ್ನ ಭಾರ್ಯೆಯಾಗು!"

ರಾವಣನು ಹೀಗೆ ಹೇಳಲು ಪತಿಯೇ ದೇವತೆಯೆಂದು ತಿಳಿದಿದ್ದ ಆ ಶುಭಾನನೆ ಸೀತೆಯು ಒಂದು ಹುಲ್ಲುಕಡ್ಡಿಯನ್ನು ಮಧ್ಯಮಾಡಿಕೊಂಡು ಆ ಕ್ಷುದ್ರ ನಿಶಾಚರನಿಗೆ ಹೇಳಿದಳು:

"ರಾಕ್ಷಸೇಶ್ವರ! ಅಭಾಗ್ಯೆಯಾದ ನಾನು ಈ ತರಹದ ವಿಶಾದ ಮತ್ತು ನಿರಾಶಾಯುಕ್ತವಾದ ಮಾತುಗಳನ್ನು ಕೇಳುತ್ತಿದ್ದೇನೆ. ಇಷ್ಟೊಂದು ಸುಖದಲ್ಲಿರುವ ನಿನಗೆ ಮಂಗಳವಾಗಲಿ! ಈ ಆಸೆಯನ್ನು ನಿನ್ನ ಮನಸ್ಸಿನಿಂದ ತೆಗೆದು ಹಾಕು. ಪತಿವ್ರತೆಯಾದ ನಾನು ಇನ್ನೊಬ್ಬನ ಪತ್ನಿ. ನಿನಗೆ ದೊರೆಯದವಳು. ಕೃಪಣ ಮನುಷ್ಯಳಾದ ನಾನು ನಿನ್ನ ಪತ್ನಿಯಾಗಲು ಅರ್ಹಳಿಲ್ಲ. ವಿವಶಳಾಗಿರುವವಳನ್ನು ಬಲಾತ್ಕರಿಸಿ ನೀನು ಯಾವ ಪ್ರೀತಿಯನ್ನು ಪಡೆಯಬಲ್ಲೆ? ನಿನ್ನ ತಂದೆಯು ಬ್ರಹ್ಮಯೋನಿಯಲ್ಲಿ ಜನಿಸಿ ಪ್ರಜಾಪತಿ ಸಮ ವಿಪ್ರನು. ಲೋಕಪಾಲನಂತಿರುವ ನೀನೇ ಏಕೆ ಧರ್ಮವನ್ನು ಪಾಲಿಸುತ್ತಿಲ್ಲ? ನಿನ್ನ ಅಣ್ಣ ಧನೇಶ್ವರನ ಹೆಸರು ತೆಗೆದುಕೊಳ್ಳಲು ನಿನಗೆ ನಾಚಿಕೆಯಾಗುವುದಿಲ್ಲವೇ?"

ಹೀಗೆ ಅವಳು ತಲೆತಗ್ಗಿಸಿ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಅಳತೊಡಗಿದಳು.




ಸೀತೆಯು ಈ ಅತಿ ನಿಷ್ಠುರ ಮಾತುಗಳಿಂದ ತಿರಸ್ಕರಿಸಿದರೂ ದುರ್ಬುದ್ಧಿ ರಾವಣನು ಪುನಃ ಹೇಳಿದನುಃ

> "ಸೀತೆ! ಮಕರಧ್ವಜನು ಕಾಮದಿಂದ ನನ್ನ ಅಂಗಾಂಗಗಳನ್ನು ಸುಡುತ್ತಿದ್ದರೂ ಬಯಸದಿರುವ ನಿನ್ನನ್ನು ನಾನು ಕೂಡುವುದಿಲ್ಲ, ಇನ್ನೂ ನೀನು ನಮಗೆ ಆಹಾರವಾದ ಮನುಷ್ಯ ರಾಮನನ್ನೇ ಬಯಸುತ್ತೀಯಾದರೆ ನಾನು ಏನು ತಾನೇ ಮಾಡಬಲ್ಲೆ?"

ಹೀಗೆ ಹೇಳಿ ಆ ರಾಕ್ಷಸಗಣೇಶ್ವರನು ಅಲ್ಲಿಯೇ ಅಂತರ್ಧಾನನಾಗಿ

ಹೊರಟು ಹೋದನು. ಶೋಕಕರ್ಶಿತಳಾದ ವೈದೇಹಿಯು ರಾಕ್ಷಸಿಯರಿಂದ ಪರಿವೃತಳಾಗಿ, ತ್ರಿಜಟೆಯಿಂದ ಸೇವಿಸಲ್ಪಟ್ಟು ಅಲ್ಲಿಯೇ ಇದ್ದಳು.

## ಸೀತಾನ್ವೇಷಣೆ

ಸುಗ್ರೀವನ ರಕ್ಷಣೆಯಲ್ಲಿ ಸೌಮಿತ್ರಿಯೊಡನೆ ಮಾಲ್ಯವತ ಶಿಖರದಲ್ಲಿ ಚಾತುರ್ಮಾಸಗಳನ್ನು ಕಳೆದ ರಾಘವನು ಮೋಡವಿಲ್ಲದ ಆಗಸವನ್ನು ನೋಡಿದನು. ಆ ಅಮಿತ್ರಹನು ವಿಮಲ ವ್ಯೋಮಿಯಲ್ಲಿ ಗ್ರಹ-ನಕ್ಷತ್ರ-ತಾರೆಗಳು ಹಿಂಬಾಲಿಸಿಕೊಂಡು ಹೋಗುತ್ತಿದ್ದ ನಿರ್ಮಲ ಶಶಿಯನ್ನು ಕಂಡನು. ಆ ಪರ್ವತದ ಮೇಲೆ ಗಾಳಿಯು ಹೊತ್ತುತಂದ ವಿಕಸಿತ ಕುಮುದ-ಕಮಲಗಳ ಸುವಾಸನೆಯನ್ನು ಆಘ್ರಾಣಿಸಿದ ಅವನು ತಕ್ಷಣವೇ ಎಚ್ಚರಗೊಂಡವನಂತಾದನು. ರಾಕ್ಷಸನ ಮನೆಯಲ್ಲಿ ಬಂಧಿಯಾಗಿರುವ ಸೀತೆಯನ್ನು ನೆನಪಿಸಿಕೊಂಡು ಮನಸ್ಸು ಕೆಟ್ಟವನಂತಾಗಿ ಅವನು ಬೆಳಗಾಗುತ್ತಲೇ ವೀರ ಲಕ್ಷ್ಮಣನಿಗೆ ಈ ಮಾತುಗಳನ್ನಾಡಿದನು:

> “ಲಕ್ಷ್ಮಣ! ಕಿಷ್ಕಿಂಧೆಗೆ ಹೋಗಿ ಸ್ವಾರ್ಥದ ಕುರಿತೇ ಯೋಚಿಸುತ್ತಾ ಗ್ರಾಮ್ಯಧರ್ಮದಲ್ಲಿ ಪ್ರಮತ್ತನಾಗಿರುವ ಆ ಕೃತಘ್ನ ಕಪೀಶ್ವರನ ಮತವೇನೆಂದು ತಿಳಿದು ಬಾ! ಯಾರನ್ನು ನಾನು ಸರ್ವವಾನರ-ಕರಡಿಗಳ ರಾಜನನ್ನಾಗಿ ಅಭಿಷೇಕಿಸಿದೆನೋ ಮತ್ತು ಯಾರಿಗೋಸ್ಕರ ಅಂದು ನಾನು

ನಿನ್ನೊಡನೆ ಕಿಷ್ಕಿಂಧೆಯ ಉಪವನದಲ್ಲಿ ವಾಲಿಯನ್ನು ಸಂಹರಿಸಿದೆನೋ ಆ ಸುಗ್ರೀವನು ಕುಲಾಧಮ ಮತ್ತು ಮೂಢ! ನನ್ನ ಪರಿಸ್ಥಿತಿಯ ಕುರಿತು ಸ್ವಲ್ಪವೂ ಯೋಚಿಸುತ್ತಿರದ ಆ ಮೂಢ ಕೃತಘ್ನನು ಭುವಿಯಲ್ಲಿಯೇ ಅತಿ ಕೆಟ್ಟ ವಾನರನೆಂದು ತಿಳಿಯುತ್ತೇನೆ. ಅವನಿಗೆ ಒಪ್ಪಂದವನ್ನು ಮನ್ನಿಸಿ ಅದರಂತೆ ನಡೆದುಕೊಳ್ಳಲು ಗೊತ್ತಿಲ್ಲವೆಂದು ನನಗನ್ನಿಸುತ್ತಿದೆ. ಅವನ ಅಲ್ಪ ಬುದ್ಧಿಯು ಉಪಕಾರಮಾಡಿದ ನನ್ನನ್ನು ಕೀಳಾಗಿ ಪರಿಗಣಿಸುತ್ತಿದೆ. ಅವನು ಅಲ್ಲಿ ಕಾಮಸುಖದಲ್ಲಿ ಮುಳುಗಿ ಸೋಮಾರಿಯಾಗಿ ಮಲಗಿದ್ದರೆ ಅವನನ್ನು ನೀನು ಎಲ್ಲರೂ ಹೋಗುವ ವಾಲಿಯ ಮಾರ್ಗಕ್ಕೆ ಕಳುಹಿಸು! ಈಗಲಾದರೂ ಆ ವಾನರಪುಂಗವನು ನಮ್ಮ ಕಾರ್ಯದಲ್ಲಿ ನಿರತನಾಗಿದ್ದರೆ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ! ತ್ವರೆಮಾಡು! ತಡಮಾಡಬೇಡ!"

ಅಣ್ಣನು ಹೀಗೆ ಹೇಳಲು ಹಿರಿಯರ ವಾಕ್ಯಹಿತರತ ಲಕ್ಷ್ಮಣನು ಸುಂದರ ಗುಣಯುಕ್ತ ಮಾರ್ಗಣಗಳಿಂದ ಕೂಡಿದ ಧನುಸ್ಸನ್ನು ಹಿಡಿದು ದ್ವಾರದಲ್ಲಿ ಯಾರಿಂದಲೂ ತಡೆಯಲ್ಪಡದೇ ಕಿಷ್ಕಿಂಧೆಯನ್ನು ಪ್ರವೇಶಿಸಿದನು. ಲಕ್ಷ್ಮಣನು ಕುಪಿತನಾಗಿದ್ದಾನೆಂದು ಪರಿಗಣಿಸಿದ ಕಪಿರಾಜ ಸುಗ್ರೀವನು ತನ್ನ ಸತಿಯೊಡನೆ ಹೊರಬಂದು ಅವನನ್ನು ಸಂಧಿಸಿ, ವಿನೀತನಾಗಿ ಪೂಜಿಸಿ, ಪ್ರೀತಿಯಿಂದ ಬರಮಾಡಿಕೊಂಡನು. ಸೌಮಿತ್ರಿಯು ನಿರ್ಭಯನಾಗಿ ಅವನಿಗೆ ರಾಮನ ಮಾತುಗಳನ್ನು

ಹೇಳಿದನು. ಸತಿ-ಸೇವಕರೊಂದಿಗೆ ಅದನ್ನು ಸಂಪೂರ್ಣವಾಗಿ ಕೇಳಿದ ವಾನರಾಧಿಪ ಸುಗ್ರೀವನು ನರಕುಂಜರ ಲಕ್ಷ್ಮಣನಿಗೆ ಕೈಮುಗಿದು ಪ್ರೀತಿಯ ಈ ಮಾತುಗಳನ್ನಾಡಿದನು:

> “ಲಕ್ಷ್ಮಣ! ನಾನು ದುರ್ಬುದ್ಧಿಯೂ, ಕೃತಘ್ನನೂ, ಅಥವಾ ನಿಷ್ಕರುಣಿಯೂ ಅಲ್ಲ. ನಾನು ಸೀತೆಯನ್ನು ಹುಡುಕಲು ಏನೇನು ಪ್ರಯತ್ನಗಳನ್ನು ಮಾಡಿದ್ದೇನೆ ಎನ್ನುವುದನ್ನು ಕೇಳು. ಪರಿಣಿತ ಕಪಿಗಳನ್ನು ಎಲ್ಲ ದಿಕ್ಕುಗಳಿಗೂ ಕಳುಹಿಸಿದ್ದೇನೆ. ಒಂದು ತಿಂಗಳಿನಲ್ಲಿ, ಮೊದಲೇ ನಿಗದಿ ಮಾಡಿದ ದಿನದಂದು, ಅವರೆಲ್ಲರೂ ಮರಳಿ ಬರುತ್ತಾರೆ. ಅವರೆಲ್ಲರೂ ಕಾಡು-ಪರ್ವತ-ನಗರ-ಗ್ರಾಮ-ಪಟ್ಟಣ-ಗಣಿಗಳನ್ನು ಸೇರಿಸಿ ಈ ಸಾಗರಾಂಬರೆ ಭೂಮಿಯಲ್ಲಿ ಎಲ್ಲಕಡೆ ಹುಡುಕುತ್ತಿದ್ದಾರೆ. ಇನ್ನು ಐದು ರಾತ್ರಿಗಳಿಗೆ ಒಂದು ತಿಂಗಳು ತುಂಬುತ್ತದೆ. ನಾನು ಮಾಡಿದ ಈ ಪ್ರಿಯ ಕಾರ್ಯದ ಕುರಿತು ನೀನು ರಾಮನಿಗೆ ಹೇಳಬೇಕು.”


ಧೀಮತ ವಾನರೇಂದ್ರನು ಹೀಗೆ ಹೇಳಲು ಲಕ್ಷ್ಮಣನು ರೋಷವನ್ನು ತ್ಯಜಿಸಿ ಸುಗ್ರೀವನನ್ನು ಪ್ರತಿಪೂಜಿಸಿದನು. ಅವನು ಸುಗ್ರೀವನನ್ನು ಜೊತೆಯಲ್ಲಿ ಕರೆದುಕೊಂಡು ಮಾಲ್ಯಪರ್ವತದ ಮೇಲಿದ್ದ ರಾಮನಲ್ಲಿಗೆ ಹೋಗಿ ಸುಗ್ರೀವನು ನಡೆಸಿದ್ದ ಕಾರ್ಯದ ಕುರಿತು ವರದಿಮಾಡಿದನು. ಮಾತುಕೊಟ್ಟಿದ್ದಂತೆ ಮೂರು ದಿಕ್ಕುಗಳಿಂದ ಸಹಸ್ರಾರು ವಾನರೇಂದ್ರರು

ಬಂದು ಸೇರಿದರು. ಆದರೆ ದಕ್ಷಿಣಕ್ಕೆ ಹೋದವರು ಬರಲಿಲ್ಲ. ಬಂದವರು ಇಡೀ ಭೂಮಿಯನ್ನು ಹುಡುಕಿದರೂ ವೈದೇಹಿಯ ಅಥವಾ ರಾವಣನ ದರ್ಶನವಾಗಲಿಲ್ಲವೆಂದು ಹೇಳಿದರು. ದಕ್ಷಿಣಕ್ಕೆ ಹೋಗಿದ್ದ ವಾನರಪುಂಗವರ ಮೇಲೆ ಆಸೆಯನ್ನಿಟ್ಟು ಕಾಕುತ್ಸ್ಥನು ತನ್ನ ಆರ್ತ ಪ್ರಾಣವನ್ನು ಸಹಿಸಿಕೊಂಡಿದ್ದನು. ಎರಡು ತಿಂಗಳ ನಂತರ ಕೆಲವು ಕಪಿಗಳು ತ್ವರೆಯಿಂದ ಸುಗ್ರೀವನ ಬಳಿಬಂದು

> “ರಾಜನ್! ಹಿಂದೆ ವಾಲಿ ಮತ್ತು ಈಗ ನೀನು ಪ್ರಯತ್ನದಿಂದ ರಕ್ಷಿಸುತ್ತಿರುವ ಮಧುವನದಲ್ಲಿ ನೀನು ದಕ್ಷಿಣದಿಕ್ಕಿಗೆ ಕಳುಹಿಸಿದ ಪವನಾತ್ಮಜ ಹನೂಮಂತ, ವಾಲಿಪುತ್ರ ಅಂಗದ ಮತ್ತು ಇತರ ಕಪಿವೀರರು ಆನಂದಿಸುತ್ತಿದ್ದಾರೆ“

ಎಂದು ವರದಿ ಮಾಡಿದರು. ಅವರ ಈ ಆಟ-ಚೇಷ್ಟೆಗಳ ಕುರಿತು ಕೇಳಿದ ಸುಗ್ರೀವನು ಕೃತಾರ್ಥ ಸೇವಕರೇ ಈ ರೀತಿ ಮಾಡುತ್ತಾರೆಂದು ತಿಳಿದು ಹನೂಮಂತ-ಅಂಗದಾದಿಗಳು ಯಶಸ್ವಿಗಳಾಗಿದ್ದಾರೆಂದು ಅರ್ಥಮಾಡಿಕೊಂಡನು. ಅದನ್ನು ಕೇಳಿದ ರಾಮನೂ ಕೂಡ ಅವರು ಮೈಥಿಲಿಯನ್ನು ಕಂಡಿದ್ದಾರೆಂದು ಅನುಮಾನಿಸಿದನು.

ಹನೂಮಂತ ಮತ್ತು ಇತರ ಕಪಿಪ್ರಮುಖರು ವಿಶ್ರಾಂತಿಪಡೆದಾದ ನಂತರ ರಾಮ-ಲಕ್ಷ್ಮಣರ ಸನ್ನಿಧಿಯಲ್ಲಿ ಸುಗ್ರೀವನ ಬಳಿಬಂದರು. ಹನೂಮಂತನ ನಡಿಗೆ ಮತ್ತು ಮುಖವರ್ಣವನ್ನು ನೋಡಿ ರಾಮನು ಇವನು ಸೀತೆಯನ್ನು ನೋಡಿಯೇ ಬರುತ್ತಿದ್ದಾನೆ ಎಂದು


चलत मोहि चूड़ामनि दीन्ही

ತಿಳಿದುಕೊಂಡನು. ಹನೂಮಂತನ ನಾಯಕತ್ವದಲ್ಲಿ ಆ ವಾನರರು ಮನತುಂಬಿದವರಾಗಿ ರಾಮ, ಸುಗ್ರೀವ ಮತ್ತು ಲಕ್ಷ್ಮಣರಿಗೆ ವಿಧಿವತ್ತಾಗಿ ನಮಸ್ಕರಿಸಿದರು. ಶರಗಳೊಂದಿಗೆ ಧನುಸ್ಸನ್ನು ಎತ್ತಿಹಿಡಿದು ರಾಮನು ಬಂದಿದ್ದ ಅವರನ್ನು ಕೇಳಿದನು:

> "ನನ್ನ ಜೀವವನ್ನು ಮರಳಿ ತಂದಿದ್ದೀರಾ? ನೀವು ಕೃತಕೃತ್ಯರಾಗಿದ್ದೀರಾ? ಈಗ ನಾನು ಸಮರದಲ್ಲಿ ಶತ್ರುಗಳನ್ನು ಸಂಹರಿಸಿ ಜನಕಾತ್ಮಜೆಯನ್ನು ಪುನಃ ಪಡೆದುಕೊಂಡು ಅಯೋಧ್ಯಾರಾಜ್ಯವನ್ನು ಆಳಬಲ್ಲೆನೇ? ರಾಜ್ಯದಿಂದ ಹೊರಗಟ್ಟಲ್ಪಟ್ಟ ಮತ್ತು ಪತ್ನಿಯನ್ನು ಕಳೆದುಕೊಂಡ ನಾನು ರಣದಲ್ಲಿ ರಿಪುಗಳನ್ನು ಸಂಹರಿಸಿ ವೈದೇಹಿಯನ್ನು ಬಿಡಿಸಿಕೊಳ್ಳದೇ ಜೀವಿಸಿರಲಾರೆ!"

ರಾಮನ ಈ ಮಾತುಗಳಿಗೆ ಉತ್ತರವಾಗಿ ಅನಿಲಾತ್ಮಜನು ಹೇಳಿದನು:

> "ರಾಮ! ನಿನಗೆ ಪ್ರಿಯವಾದುದನ್ನೇ ಹೇಳುತ್ತೇನೆ. ನಾನು ಜಾನಕಿಯನ್ನು ನೋಡಿಬಂದೆ! ಪರ್ವತ-ಕಾನನ-ಗಣಿಗಳ ಸಹಿತ ದಕ್ಷಿಣದಲ್ಲೆಲ್ಲಾ ಹುಡುಕಾಡಿ ಆಯಾಸಗೊಂಡಿದ್ದ ನಾವು ಮಹಾಗುಹೆಯೊಂದನ್ನು ಕಂಡೆವು. ಕತ್ತಲೆ ಕವಿದಿದ್ದ, ಕೀಟಗಳಿಂದ ತುಂಬಿದ್ದ, ದಟ್ಟವೂ-ಗಹನವೂ ಆಗಿದ್ದ ಬಹುಯೋಜನ ವಿಸ್ತೀರ್ಣದ ಆ ಗುಹೆಯನ್ನು ನಾವು ಪ್ರವೇಶಿಸಿ ತುಂಬಾ ದೂರದ ವರೆಗೆ ಹೋದ ನಂತರ ಸೂರ್ಯನ

ಬೆಳಕನ್ನೂ ಮತ್ತು ದಿವ್ಯ ಭವನವೊಂದನ್ನೂ ನಾವು ಕಂಡೆವು. ಅದು ದೈತ್ಯ ಮಯನ ಮನೆಯಾಗಿತ್ತು. ಅಲ್ಲಿ ಪ್ರಭಾವತೀ ಎಂಬ ತಾಪಸಿಯು ತಪಸ್ಸನ್ನು ತಪಿಸುತ್ತಿದ್ದಳು. ಅವಳು ನೀಡಿದ ವಿವಿಧ ಭೋಜನ-ಪಾನೀಯಗಳನ್ನು ಸೇವಿಸಿ ಶಕ್ತಿಯನ್ನು ಪಡೆದುಕೊಂಡು, ಅವಳು ಸೂಚಿಸಿದ ದಾರಿಯಲ್ಲಿಯೇ ಹೊರಟು ಮಲಯ ಮಹಾಗಿರಿಗಳ ಸಮೀಪದಲ್ಲಿದ್ದ ದುರ್ಧರ ಲವಣಾಂಭಸವನ್ನು ಕಂಡೆವು. ಮಲಯವನ್ನೇರಿ ವರುಣಾಲಯವನ್ನು ನೋಡಿ ಚಿಂತಿಸುತ್ತಾ ಜೀವನಲ್ಲಿ ತುಂಬಾ ನಿರಾಶೆಯುಳ್ಳವರಾದೆವು. ಅಲ್ಲಿ ನಾವು ಮರಣಪರ್ಯಂತ ಉಪವಾಸವನ್ನು ನಡೆಸಲು ಸಂಕಲ್ಪಿಸಿ ಹಾಗೆಯೇ ಮಾತನಾಡಿಕೊಳ್ಳುತ್ತಿರುವಾಗ ಹದ್ದು ಜಟಾಯುವಿನ ವಿಷಯವು ಬಂದಿತು. ಆಗ ಇನ್ನೊಬ್ಬ ವೈನತೇಯನೋ ಎಂಬಂತೆ ಪರ್ವತಶಿಖರದಷ್ಟು ದೊಡ್ಡದಾಗಿದ್ದ, ಘೋರರೂಪೀ ಪಕ್ಷಿಯೊಂದನ್ನು ಕಂಡೆವು. ನಮ್ಮನ್ನು ಭಕ್ಷಿಸಲು ಯೋಚಿಸುತ್ತಿದ್ದ ಅವನು ನಮ್ಮ ಹತ್ತಿರ ಬಂದು 'ನನ್ನ ಸಹೋದರ ಜಟಾಯುವಿನ ಕುರಿತು ಮಾತನಾಡುತ್ತಿರುವ ನೀವು ಯಾರು? ನಾನು ಅವನ ಹಿರಿಯಣ್ಣ, ಸಂಪಾತಿಯೆಂಬ ಹೆಸರಿದ ಖಗಾಧಿಪ. ಅನ್ಯೋನ್ಯರೊಡನೆಯ ಸ್ಪರ್ಧೆಯಲ್ಲಿ ನಾವು ಆದಿತ್ಯನ ಸಂಸತ್ತಿನವರೆಗೆ ಹೋಗಿದ್ದೆವು. ಆಗ ನನ್ನ ಈ ರೆಕ್ಕೆಗಳು



ಸುಟ್ಟುಹೋಗಿ, ಈ ಮಹಾಗಿರಿಯ ಮೇಲೆ ನಾನು ಬಿದ್ದೆ.
ರೆಕ್ಕೆಗಳು ಸುಡದಿದ್ದ ಜಟಾಯುವು ಹದ್ದುಗಳ ರಾಜನಾದ. ಆ
ನನ್ನ ಪ್ರಿಯತಮ್ಮನನ್ನು ಬಹಳ ಸಮಯದಿಂದ ನಾನು

ಕಾಣಲಿಲ್ಲ.' ಆಗ ಅವನಿಗೆ ಜಟಾಯುವು ಹತನಾದುದನ್ನೂ ವರ್ತಮಾನದ ನಮ್ಮ ವ್ಯಸನವನ್ನೂ ತಿಳಿಸಿದೆವು. ತುಂಬಾ ಅಪ್ರಿಯವಾದುದನ್ನು ಕೇಳಿ ಸಂಪಾತಿಯು ವಿಷಣ್ಣಚೇತಸನಾಗಿ ಪುನಃ ಕೇಳಿದನು: 'ಈ ರಾಮನಾರು? ಸೀತೆಯು ಹೇಗೆ ಅಪಹರಿಸಲ್ಪಟ್ಟಳು? ಜಟಾಯುವು ಹೇಗೆ ಹತನಾದನು? ಕಪಿಸತ್ತಮರೇ! ಇವೆಲ್ಲವನ್ನೂ ಕೇಳಲು ಬಯಸುತ್ತೇನೆ.' ಅವನಿಗೆ ನಾನು ನಿನಗೆ ಬಂದೊದಗಿದ ವ್ಯಸನಗಳೆಲ್ಲವನ್ನೂ, ಮತ್ತು ನಾವು ಪ್ರಾಯೋಪವೇಶ ಕೈಗೊಂಡಿರುವುದಕ್ಕೆ ಕಾರಣಗಳನ್ನು ವಿಸ್ತಾರವಾಗಿ ಹೇಳಿದೆನು. ಆಗ ಆ ಪಕ್ಷಿರಾಜನು ಈ ಮಾತುಗಳಿಂದ ನಾವು ಮೇಲಕ್ಕೇಳುವಂತೆ ಮಾಡಿದನು: 'ನನಗೆ ರಾವಣ ಮತ್ತು ಅವನ ಮಹಾಪುರಿ ಲಂಕೆಯೂ ಗೊತ್ತು. ಸಮುದ್ರದ ಆಚೆಯ ದಡದಲ್ಲಿ ತ್ರಿಕೂಟಗಿರಿಯ ಕಂದರದಲ್ಲಿ ನೋಡಿದ್ದೇನೆ. ಅಲ್ಲಿ ವೈದೇಹಿಯು ಇರುತ್ತಾಳೆ ಎನ್ನುವುದರಲ್ಲಿ ನನಗೆ ವಿಚಾರಮಾಡುವುದೇನೂ ಇಲ್ಲ.' ಅವನ ಈ ಮಾತನ್ನು ಕೇಳಿ ನಾವು ಶೀಘ್ರವೇ ಮೇಲೆದ್ದು ಸಾಗರವನ್ನು ಹಾರುವುದರ ಉಪಾಯದ ಕುರಿತು ಮಂತ್ರಾಲೋಚಿಸಿದೆವು. ಸಾಗರವನ್ನು ಲಂಘಿಸಲು ಯಾರೂ ಸಿದ್ಧರಾಗಲಿಲ್ಲ. ಆಗ ನಾನೇ ನನ್ನ ತಂದೆಯನ್ನು ಪ್ರವೇಶಿಸಿ, ಜಲರಾಕ್ಷಸಿಯನ್ನು ಸಂಹರಿಸಿ, ಶತಯೋಜನ ವಿಸ್ತೀರ್ಣದ ಆ ಮಹಾಸಾಗರವನ್ನು ಹಾರಿ ದಾಟಿದೆನು. ಅಲ್ಲಿ ರಾವಣನ




ಅಂತಃಪುರದಲ್ಲಿ ಪತಿಯ ದರ್ಶನಕ್ಕೆ ಕಾತರಿಸಿದ್ದ, ಉಪವಾಸ ಮತ್ತು ತಪಸ್ಸುಗಳನ್ನು ಮಾಡುತ್ತಿದ್ದ, ಕೂದಲನ್ನು ಗಂಟು ಹಾಕಿ, ಕೃಶಳಾಗಿದ್ದ, ಮಲಿನಳಾಗಿದ್ದ, ದೀನಳಾಗಿದ್ದ, ತಪಸ್ವಿನೀ ಸತೀ ಸೀತೆಯನ್ನು ನಾನು ಕಂಡೆ. ಈ ಬೇರೆ ಬೇರೆ ಲಕ್ಷಣಗಳಿಂದ ಸೀತೆಯನ್ನು ಗುರುತಿಸಿದ ನಾನು, ಅವಳ ಬಳಿ ಗುಪ್ತವಾಗಿ ಹೋಗಿ ಈ ಮಾತುಗಳನ್ನಾಡಿದೆನು: 'ಸೀತೇ! ರಾಮನ ದೂತನು ನಾನು. ಮಾರುತಾತ್ಮಜ ವಾನರ. ನಿನ್ನ ದರ್ಶನವನ್ನು ಬಯಸಿ ಆಕಾಶದಿಂದ ಹಾರಿ ಇಲ್ಲಿಗೆ ಬಂದಿದ್ದೇನೆ. ಕಪಿಗಳ ರಾಜ ಸುಗ್ರೀವನಿಂದ ಪರಿಪಾಲಿತರಾಗಿ




ಇಬ್ಬರು ರಾಜಪುತ್ರ ಸಹೋದರರು ರಾಮ ಲಕ್ಷ್ಮಣರು ಕುಶಲರಾಗಿದ್ದಾರೆ. ರಾಮ ಮತ್ತು ಜೊತೆಗೆ ಸೌಮಿತ್ರಿಯು ನಿನ್ನ ಕುಶಲದ ಕುರಿತು ಕೇಳಿದ್ದಾರೆ. ಸ್ನೇಹಭಾವದಿಂದ ಸುಗ್ರೀವನೂ ಕೂಡ ನಿನ್ನ ಕುಶಲವನ್ನು ಕೇಳಿದ್ದಾನೆ. ಎಲ್ಲ ಕಪಿಗಳೊಂದಿಗೆ ನಿನ್ನ ಪತಿಯು ಶೀಘ್ರದಲ್ಲಿಯೇ ಬರುತ್ತಾನೆ. ದೇವಿ ! ನನ್ನ ಮೇಲೆ ನಂಬಿಕೆಯನ್ನಿಡು. ನಾನು ವಾನರ. ರಾಕ್ಷಸನಲ್ಲ.'

ಮುಹೂರ್ತಕಾಲ ಯೋಚಿಸಿ ಸೀತೆಯು ನನಗೆ ಉತ್ತರಿಸಿದಳು: 'ಅವಿಂಧ್ಯನ ವಚನದಿಂದ ನೀನು ಹನೂಮಂತನನ್ನು ನಾನು

ತಿಳಿದಿದ್ದೇನೆ. ಮಹಾಬಾಹು ವೃದ್ಧಸಮ್ಮತ ರಾಕ್ಷಸ ಅವಿಂಧ್ಯನೇ ಸುಗ್ರೀವನು ನಿನ್ನಂಥಹ ಸಚಿವರಿಂದ ಸುತ್ತುವರೆಯಲ್ಪಟ್ಟಿದ್ದಾನೆ ಎಂದು ಹೇಳಿದನು. ಈಗ ಹೋಗು' ಎಂದು ಹೇಳಿ ಸೀತೆಯು ನನಗೆ ಈ ಮಣಿಯನ್ನು ಕೊಟ್ಟಳು. ಇದನ್ನು ಆ ಅನಿಂದಿತೆ ವೈದೇಹಿಯು ಇಲ್ಲಿಯವರೆಗೂ ಧರಿಸಿಕೊಂಡಿದ್ದಳು. ಇವೆಲ್ಲವುಗಳನ್ನು ನೀನು ನಂಬಬೇಕೆಂದು ಜಾನಕಿಯು ಮಹಾಗಿರಿ ಚಿತ್ರಕೂಟದಲ್ಲಿ ಹುಲ್ಲನ್ನು ಕಾಗೆಯ ಮೇಲೆ ನೀನು ಪ್ರಯೋಗಿಸಿದುದರ ಕಥೆಯನ್ನು ಹೇಳಿದಳು. ಪುರುಷವ್ಯಾಘ್ರ! ಇದರಿಂದ ನೀನು ಗುರುತಿಸಬಹುದು. ಅದನ್ನು ಕೇಳಿ, ನಂತರ ಆ ಪುರಿಯನ್ನು ಸುಟ್ಟು ಇಲ್ಲಿಗೆ ಬಂದೆ."

ಪ್ರಿಯವಾರ್ತೆಯನ್ನು ತಂದ ಅವನಿಗೆ ರಾಮನು ಸತ್ಕರಿಸಿದನು.

## ಕಪಿಸೇನೆ, ಸೇತುಬಂಧ, ವಿಭೀಷಣ ಸಖ್ಯ

ಆಗ ಅಲ್ಲಿ ರಾಮನು ಅವರೊಂದಿಗೆ ಕುಳಿತುಕೊಂಡಿರಲು, ಸುಗ್ರೀವನ ವಚನದಂತೆ ಕಪಿಶ್ರೇಷ್ಠರು ಬಂದು ಸೇರಿದರು. ವಾಲಿಯ ಮಾವ ಶ್ರೀಮಾನ್ ಸುಷೇಣನು ಕೋಟಿಸಹಸ್ರ ತರಸ್ವಿ ವಾನರರನ್ನೊಡಗೂಡಿ ರಾಮನಲ್ಲಿಗೆ ಬಂದನು. ಮಹಾವೀರರಾದ ವಾನರೇಂದ್ರರಿಬ್ಬರು ಗಜ ಮತ್ತು ಗವಯ ಪ್ರತಿಯೊಬ್ಬರೂ ನೂರು ಕೋಟಿ ಕಪಿಗಳೊಂದಿಗೆ ಬಂದರು. ಭೀಮದರ್ಶನ ಗೋಲಾಂಗುಲ ಗವಾಕ್ಷನು ಆರು ಕೋಟಿ ಸಾವಿರ ಕಪಿಗಳನ್ನು ಕರೆದುಕೊಂಡು ಕಾಣಿಸಿಕೊಂಡನು.

ಗಂಧಮಾದನದಲ್ಲಿ ವಾಸಿಸುವ ಪ್ರಸಿದ್ಧ ಗಂಧಮಾದನನು ಕೋಟಿಸಹಸ್ರ ಉಗ್ರ ಕಪಿಗಳನ್ನು ಕರೆತಂದನು. ಪನಸ ಎಂಬ ಹೆಸರಿನ ಮೇಧಾವೀ ಸುಮಹಾಬಲ ವಾನರನು ಹತ್ತು, ಹನ್ನೆರಡು ಮತ್ತು ಮೂವತ್ತೈದು ಕೋಟಿ ವಾನರರನ್ನು ಕರೆತಂದನು. ದಧಿಮುಖ ಎಂಬ ಹೆಸರಿನ ಶ್ರೀಮಾನ್, ವೀರ್ಯವಾನ್ ಕಪಿವೃದ್ಧನೂ ಕೂಡ ಭೀಮ ತೇಜಸ್ಸಿನ ಕಪಿಗಳ ಮಹಾಸೇನೆಯನ್ನು ತಂದನು. ಜಾಂಬವಂತನು ನೂರುಕೋಟಿಸಾವಿರ ಭೀಮಕರ್ಮಿಗಳಾದ ಕಪ್ಪು ಮತ್ತು ಬಿಳೀ ಮುಖಗಳ ಕರಡಿಗಳೊಂದಿಗೆ ಕಾಣಿಸಿಕೊಂಡನು. ಇವು ಮತ್ತು ಇನ್ನೂ ಇತರ ಬಹಳ ಕಪಿನಾಯಕರು ಅಸಂಖ್ಯ ಸೇನೆಗಳೊಂದಿಗೆ ರಾಮನ ಕಾರಣಕ್ಕೆ ಸೇರಿದರು. ಶಿರೀಷಕುಸುಮದಂತಿದ್ದ ಅವರು ಸಿಂಹನಾದ ಮಾಡುತ್ತಾ ಅಲ್ಲಿಂದಲ್ಲಿಗೆ ಓಡುತ್ತಿದ್ದಾಗ ತುಮುಲ ಶಬ್ಧವು ಕೇಳಿಬಂದಿತು. ಕೆಲವರು ಗಿರಿಶಿಖರಗಳಂತಿದ್ದರೆ ಕೆಲವರು ಗಾತ್ರದಲ್ಲಿ ಎಮ್ಮೆಗಳಂತಿದ್ದರು, ಮಳೆಗಾಲದ ಮೋಡಗಳಿಂತಿದ್ದರು, ಮತ್ತು ತೇಯ್ದ ಕುಂಕುಮದ ಬಣ್ಣದ ಮುಖವುಳ್ಳವರಾಗಿದ್ದರು. ಕುಪ್ಪಳಿಸುತ್ತಿದ್ದ, ಕೆಳಗೆ ಬೀಳುತ್ತಿದ್ದ, ಹಾರುತ್ತಿದ್ದ ವಾನರರು ಧೂಳೆಬ್ಬಿಸಿ ಎಲ್ಲ ಕಡೆಗಳಿಂದಲೂ ಬಂದು ಸೇರಿದರು. ನೆರೆಬಂದ ಸಾಗರದಂತಿದ್ದ ಆ ವಾನರ ಮಹಾಲೋಕವು ಸುಗ್ರೀವನ ಅನುಮತಿಯಂತೆ ಅಲ್ಲಿಯೇ ಬೀಡುಬಿಟ್ಟರು. ಆಗ ಪ್ರಶಸ್ತ ದಿನ ನಕ್ಷತ್ರದ ಮಂಗಳ ಮುಹೂರ್ತದಲ್ಲಿ ಶ್ರೀಮಾನ್ ರಾಘವನು ಸುಗ್ರೀವನೊಂದಿಗೆ, ಲೋಕಗಳನ್ನೇ ಚಿಂದಿಮಾಡುವಂತೆ ವ್ಯೂಹಗಳಲ್ಲಿ ರಚಿತಗೊಂಡಿರುವ ಅಲ್ಲಿ ಸೇರಿರುವ

ಎಲ್ಲ ಕಪೀಂದ್ರರ ಸೇನೆಗಳೊಂದಿಗೆ ಹೊರಟನು. ಆ ಸೇನೆಯ ಮುಂದೆ ಮಾರುತಾತ್ಮಜ ಹನೂಮಂತನಿದ್ದನು; ಸ್ವಲ್ಪವೂ ಭಯವಿಲ್ಲದ ಸೌಮಿತ್ರಿಯು ಅದರ ಹಿಂಬಾಗವನ್ನು ರಕ್ಷಿಸುತ್ತಿದ್ದನು. ಗೋಧಾಂಗುಲಿಗಳನ್ನು ಕಟ್ಟಿದ ಆ ರಾಘವರಿಬ್ಬರೂ ಮಹಾಮಾತ್ರರಾದ ಕಪಿಗಳ ಮಧ್ಯದಲ್ಲಿ ಗ್ರಹಗಳ ಮಧ್ಯೆ ಚಂದ್ರಸೂರ್ಯರಂತೆ ಶೋಭಿಸಿದರು. ಶಾಲ, ತಾಲ, ಶಿಲಾಯುಧಗಳನ್ನು ಹಿಡಿದು ಹೋಗುತ್ತಿರುವ ಆ ಕಪಿಸೇನೆಯು ಸೂರ್ಯೋದಯದಲ್ಲಿ ವಿಸ್ತಾರವಾದ ಭತ್ತದ ಗದ್ದೆಯಂತೆ ತೋರುತ್ತಿತ್ತು. ಅನಲ, ನೀಲ, ಅಂಗದ, ಕ್ರಾಥ, ಮೈಂದ, ದ್ವಿವಿದರಿಂದ ಪಾಲಿತ ಆ ಅತಿದೊಡ್ಡ ಸೇನೆಯು ರಾಘವನ ಕಾರ್ಯಸಿದ್ಧಿಗಾಗಿ ಹೊರಟಿತು. ಬಹುಮೂಲಫಲಗಳನ್ನುಳ್ಳ, ಮಧುಮಾಂಸಗಳು ಹೇರಳವಾಗಿದ್ದ, ಶುದ್ಧ ನೀರಿದ್ದ ಸುಂದರ ಪ್ರದೇಶಗಳನ್ನು ದಾಟಿ, ಅಲ್ಲಲ್ಲಿ ಗಿರಿಕಂದರಗಳಲ್ಲಿ ನಿರಾಬಾಧರಾಗಿ ಬೀಡುಬಿಡುತ್ತಾ, ಆ ಕಪಿಸೇನೆಯು ಉಪಾಯದಂತೆ ಉಪ್ಪಿನನೀರಿನ ಸಾಗರದಂಚಿಗೆ ಬಂದಿತು. ಎರಡನೆಯ ಸಾಗರವೋ ಎಂಬಂತಿದ್ದ ಆ ಬಹುಧ್ವಜಗಳ ಬಲವು ತೀರದಲ್ಲಿದ್ದ ವನದಲ್ಲಿ ಬೀಡುಬಿಟ್ಟಿತು.

ಅನಂತರ ಶ್ರೀಮಾನ್ ದಾಶರಥಿಯು ಮಾನರಮುಖ್ಯರ ಮಧ್ಯದಲ್ಲಿ ಸುಗ್ರೀವನಿಗೆ ಕಾಲಕ್ಕೆ ತಕ್ಕಂತಹ ಈ ಮಾತುಗಳನ್ನಾಡಿದನುಃ

"ಈ ಸಾಗರವನ್ನು ಲಂಘಿಸುವ ಏನಾದರೂ ಉಪಾಯವು

ನಿಮ್ಮಲ್ಲಿ ಇದೆಯೇ? ಈ ಸೇನೆಯಾದರೋ ಅತೀ ದೊಡ್ಡದು. ಸಾಗರವೂ ಕೂಡ ದುಸ್ತರವಾಗಿದೆ."

ಅಲ್ಲಿ ತೀವ್ರಬುದ್ಧಿಯ ಕೆಲವು ವಾನರರು ಹೇಳಿದರು:

"ವಾನರರು ಈ ಸಾಗರದ ವಿಸ್ತೀರ್ಣವನ್ನು ಲಂಘಿಸಲು ಅಸಮರ್ಥರು."

ಕೆಲವರು ದೋಣಿಗಳ ಕುರಿತು ಯೋಚಿಸಿದರೆ ಕೆಲವರು ವಿವಿಧ ರೀತಿಯ ಹಾರುವಿಕೆಯ ಬಗ್ಗೆ ಸೂಚಿಸಿದರು. ರಾಮನು ಆ ಎಲ್ಲರನ್ನೂ ಸಂತವಿಸಿ "ಅಲ್ಲ" ಎಂದು ಉತ್ತರಿಸಿದನು.

"ವೀರರೇ! ಎಲ್ಲ ವಾನರರೂ ನೂರುಯೋಜನ ವಿಸ್ತೀರ್ಣವನ್ನು ದಾಟಲು ಶಕ್ತರಿಲ್ಲ. ಇದು ನಿಮ್ಮ ಅಂತಿಮ ನಿರ್ಧಾರವಲ್ಲ. ಈ ಮಹಾಸೇನೆಯನ್ನು ದಾಟಿಸಲು ಬೇಕಾಗುವಷ್ಟು ದೋಣಿಗಳಿಲ್ಲ. ಅಲ್ಲದೇ ನಮ್ಮಂಥವರು ಏಕೆ ವಣಿಜರಿಗೆ ಉಪಘಾತವೆಸಗಬೇಕು? ವಿಸ್ತೀರ್ಣವಾದ ಈ ಸೇನೆಯು ಭಾಗವಾದರೆ ಶತ್ರುವು ಆಕ್ರಮಣ ಮಾಡಬಲ್ಲನು. ಹಾರಿಹೋಗುವುದರಿಂದಾಗಲೀ ಅಥವಾ ತೆಪ್ಪಗಳ ಮೇಲೆ ಹೋಗಿ ಇದನ್ನು ದಾಟಲಾರೆವು ಎಂದು ನನಗನ್ನಿಸುತ್ತದೆ. ನಾನು ಈ ಜಲನಿಧಿಯನ್ನು ಬಾಣಗಳಿಂದ ಹೊಡೆದು ನೀರನ್ನು ಹಿಂದೆಸರಿಸುತ್ತೇನೆ. ಆಗ ಕೆಳಗೆ ವಾಸಿಸುವವನು ನನಗೆ ಕಾಣಿಸಿಕೊಳ್ಳುತ್ತಾನೆ. ಒಂದುವೇಳೆ ಅವನು ನನಗೆ

ಮಾರ್ಗವನ್ನು ತೋರಿಸದೇ ಇದ್ದರೆ, ಅಗ್ನಿ-ವಾಯುಗಳನ್ನು ಕಾರುವ ಮಹಾಸ್ತ್ರಗಳಿಂದ ಇದನ್ನು ಸುಡುತ್ತೇನೆ."

ಹೀಗೆ ಹೇಳಿ ರಾಘವನು ಸೌಮಿತ್ರಿಯೊಡನೆ ವಿಧಿವತ್ತಾಗಿ ನೀರನ್ನು ಮುಟ್ಟಿ, ಕುಶವನ್ನು ಹರಡಿ, ಜಲನಿಧಿಯನ್ನು ಹಿಂದೆ ಸರಿಸಿದನು. ಆಗ ನದನದಿಗಳ ಪತಿ, ದೇವ, ಶ್ರೀಮಾನ್ ಸಗರನಾದರೋ ನೀರಿನ ಗಣಗಳಿಂದ ಆವೃತನಾಗಿ ರಾಘವನ ಸ್ವಪ್ನದಲ್ಲಿ ಕಾಣಿಸಿಕೊಂಡನು. "ಕೌಸಲ್ಯೆಯ ಮಗನೇ" ಎಂದು ಕರೆದು ಮಧುರ ಮಾತಿನಲ್ಲಿ ನೂರಾರು ರತ್ನಾಕರರೊಂದಿಗೆ ಆವೃತನಾದ ಅವನು ಹೀಗೆ ಹೇಳಿದನು:

"ಪುರುಷರ್ಷಭ! ನಿನಗೆ ನಾನು ಹೇಗೆ ಸಹಾಯ ಮಾಡಲಿ ಹೇಳು."

ರಾಮನು ಉತ್ತರಿಸಿದನು:

"ನಾನು ಇಕ್ಷ್ವಾಕು, ನಿನ್ನ ಕುಲದವನು. ನದನದೀಪತೇ! ನನ್ನ ಸೈನ್ಯಕ್ಕೆ ಮಾರ್ಗವನ್ನು ಮಾಡಿಕೊಡಬೇಕೆಂದು ಬಯಸುತ್ತೇನೆ. ಹೀಗೆ ಹೋಗಿ ನಾನು ಪೌಲಸ್ತ್ಯರ ಪಾಪಿ ದಶಗ್ರೀವನನ್ನು ಸಂಹರಿಸಬಲ್ಲೆ. ಒಂದುವೇಳೆ ಯಾಚಿಸಿದ ಮಾರ್ಗವನ್ನು ನೀನು ನನಗೆ ನೀಡದಿದ್ದರೆ, ಪ್ರತಿಮಂತ್ರಿಸಿದ ದ್ವಿವ್ಯಾಸ್ತ್ರ ಬಾಣಗಳಿಂದ ನಿನ್ನನ್ನು ಒಣಗಿಸುತ್ತೇನೆ."

ಹೀಗೆ ಹೇಳುತ್ತಿರುವ ರಾಮನನ್ನು ಕೇಳಿದ ವರುಣಾಲಯನು





ವ್ಯಥಿತನಾಗಿ, ಕೈಮುಗಿದು ನಿಂತು ಈ ಮಾತುಗಳನ್ನಾಡಿದನು:

> "ನಾನು ನಿನ್ನನ್ನು ತಡೆಯಲು ಬಯಸುವುದಿಲ್ಲ. ನಿನಗೆ ವಿಘ್ನವನ್ನುಂಟುಮಾಡುವುದಿಲ್ಲ. ರಾಮ ! ನಾನು ಹೇಳುವ ಈ ಮಾತುಗಳನ್ನು ಕೇಳಿ ಮಾಡಬೇಕಾದುದನ್ನು ಮಾಡು. ಒಂದುವೇಳೆ ಮುಂದೆ ಸಾಗಲು ಕಾದಿರುವ ನಿನ್ನ ಸೇನೆಗೆ ನಿನ್ನ ಆಜ್ಞೆಯಂತೆ ದಾರಿಯನ್ನು ಕೊಟ್ಟರೆ ಅನ್ಯರೂ ಕೂಡ ಧನುಸ್ಸಿನ ಬಲದಿಂದ ನನಗೆ ಆಜ್ಞಾಪಿಸುತ್ತಾರೆ. ನಿನ್ನಲ್ಲಿ ಶಿಲ್ಪಿಗಳಿಂದ ಗೌರವಿಸಲ್ಪಟ್ಟ, ದೇವಶಿಲ್ಪಿ ಬಲವಾನ್ ವಿಶ್ವಕರ್ಮನ ಮಗ ನಲ ಎಂಬ ಹೆಸರಿನ ವಾನರನಿದ್ದಾನೆ. ಅವನು ಕಡ್ಡಿಯನ್ನಾಗಲೀ, ಹುಲ್ಲನ್ನಾಗಲೀ ಅಥವಾ ಕಲ್ಲನ್ನಾಗಲೀ ನನ್ನಲ್ಲಿ ಎಸೆದರೆ ಅವೆಲ್ಲವನ್ನೂ ನಾನು ತೇಲಿಸುತ್ತೇನೆ. ಅದು ನಿನಗೆ ಸೇತುವೆಯಾಗುತ್ತದೆ."

ಹೀಗೆ ಹೇಳಿ ಅವನು ಅಂತರ್ಧಾನನಾಗಲು ರಾಮನು ನಲನಿಗೆ ಹೇಳಿದನು:

> "ಸಮುದ್ರದಲ್ಲಿ ಸೇತುವೆಯನ್ನು ಕಟ್ಟು. ನೀನು ಇದರಲ್ಲಿ ಶಕ್ತ ಎಂದು ನನ್ನ ಮತ."

ಈ ಉಪಾಯದಿಂದ ಕಾಕುತ್ಸ್ಥನು ಹತ್ತು ಯೋಜನೆ ಅಗಲದ ನೂರು ಯೋಜನೆ ಉದ್ದದ ಸೇತುವೆಯನ್ನು ಕಟ್ಟಿಸಿದನು. ನಲಸೇತುವೆಂದು





ಕರೆಯಲ್ಪಡುವ ಅದು ರಾಮನ ಆಜ್ಞೆಯಂತೆ ಗಿರಿಯಂತೆ ಈಗಲೂ ನಿಂತಿದ್ದು, ಭುವಿಯಲ್ಲಿ ಪ್ರಸಿದ್ಧವಾಗಿದೆ.

ಅಲ್ಲಿಯೇ ರಾಕ್ಷಸೇಂದ್ರನ ತಮ್ಮ ಧರ್ಮಾತ್ಮ ವಿಭೀಷಣನು ತನ್ನ ನಾಲ್ವರು ಸಚಿವರೊಂದಿಗೆ ಬಂದು ಸೇರಿದನು. ಮಹಾಮನಸ್ವಿ ರಾಮನು ಅವನನ್ನು ಸ್ವಾಗತಿಸಿ ಸ್ವೀಕರಿಸಿದನು. ಅವನು ಗೂಢಚರನಿರಬಹುದೆಂದು ಸುಗ್ರೀವನು ಶಂಕಿಸಿದನು. ರಾಘವನಾದರೋ ಅವನ ಚೇಷ್ಟೆ, ಚರಿತ ಮತ್ತು ಇಂಗಿತಗಳನ್ನು ಚೆನ್ನಾಗಿ ಪರೀಕ್ಷಿಸಿ ತೃಪ್ತನಾಗಿ ಅವನನ್ನು ಸತ್ಕರಿಸಿದನು. ವಿಭೀಷಣನನ್ನು ಸರ್ವ ರಾಕ್ಷಸರ ರಾಜನನ್ನಾಗಿ ಅಭಿಷೇಕಿಸಿ ಅವನನ್ನು ಲಕ್ಷ್ಮಣನ



ಮಂತ್ರಿ, ಅನುಚರ ಮತ್ತು ಸ್ನೇಹಿತನನ್ನಾಗಿ ಮಾಡಿದನು. ವಿಭೀಷಣನ ಸಲಹೆಯಂತಲೂ ಅವನು ಸೇತುವೆಯ ಮೂಲಕ ಒಂದು ತಿಂಗಳ ಅವಧಿಯಲ್ಲಿ ಸೈನ್ಯದೊಂದಿಗೆ ಆ ಮಹಾರ್ಣವವನ್ನು ದಾಟಿದನು.

ಅಲ್ಲಿ ಹೋಗಿ ಒಂದಾಗಿ ಬಹುಸಂಖ್ಯೆಗಳಲ್ಲಿದ್ದ, ವಿಸ್ತಾರವಾಗಿದ್ದ ಲಂಕೆಯ ಅನೇಕ  ಉದ್ಯಾನಗಳನ್ನು ಕಪಿಗಳ ಮೂಲಕ ಧ್ವಂಸಮಾಡಿಸಿದನು. ಅಲ್ಲಿ ವಾನರರೂಪದಲ್ಲಿದ್ದ ರಾವಣನ ಇಬ್ಬರು ಚಾರ ರಾಕ್ಷಸ ಶುಕ ಮತ್ತು ಸಾರಣರನ್ನು ವಿಭೀಷಣನು ಹಿಡಿದನು. ಆ ನಿಶಾಚರರು ತಮ್ಮ ರಾಕ್ಷಸರೂಪವನ್ನು ತಳೆದಾಗ ರಾಮನು ಅವರನ್ನು



ತನ್ನ ಸೇನೆಗೆ ತೋರಿಸಿ, ನಂತರ ಬಿಡುಗಡೆಮಾಡಿದನು. ಉಪವನದಲ್ಲಿ ಸೇನೆಯನ್ನು ಬೀಡುಬಿಟ್ಟು ಆ ಶೂರನು ಪ್ರಾಜ್ಞ ವಾನರ ಅಂಗದನನ್ನು ತನ್ನ ದೂತನಾಗಿ ರಾವಣನಲ್ಲಿಗೆ ಕಳುಹಿಸಿದನು.

ಸಾಕಷ್ಟು ಆಹಾರ, ನೀರು, ಮತ್ತು ಬಹಳಷ್ಟು ಫಲಮೂಲಗಳಿರುವ ಆ ವನದಲ್ಲಿ ಸೇನೆಯನ್ನಿರಿಸಿ ಕಾಕುತ್ಸ್ಥನು ಅದನ್ನು ವಿಧಿವತ್ತಾಗಿ ಪರಿರಕ್ಷಿಸಿದನು. ರಾವಣನೂ ಕೂಡ ಶಾಸ್ತ್ರನಿರ್ಮಿತವಾದ ಲಂಕೆಯನ್ನು ವಿಧಿವತ್ತಾಗಿ ಸುರಕ್ಷಿತವಾಗಿಸಿದನು. ಸ್ವಾಭಾವಿಕವಾಗಿಯೇ ಅದು ದೃಢ

ಕೋಟೆ ಕೊತ್ತಳಗಳಿಂದ ದುರಾಧರ್ಷವಾಗಿತ್ತು. ಮೀನು ಮೊಸಳೆಗಳಿಂದ ಕೂಡಿದ್ದ ತುಂಬಾ ಆಳವಾಗಿರುವ ನೀರಿನಿಂದ ತುಂಬಿದ್ದ ಕಾಲುವೆಗಳಿದ್ದವು. ಹಾಗೆ ಏಳು ದುರ್ಧರ್ಷ ಕಾಲುವೆಗಳು ಖದಿರಗಳಿಂದ ಮಾಡಿದ ಶೂಲಗಳಿಂದ ರಕ್ಷಿಸಲ್ಪಟ್ಟಿದ್ದವು. ಎಸೆಯುವ ಯಂತ್ರಗಳಿಂದ, ಯೋಧರ ಮೇಲ್ಗಚ್ಚುಗಳಿಂದ, ಕಲ್ಲುಬಂಡೆಗಳಿಂದ, ಮತ್ತು ವಿಷಭರಿತ ಸರ್ಪಗಳು ತುಂಬಿದ ಕೊಡಗಳನ್ನು ಹೊತ್ತು ನಿಂತಿದ್ದ ಸೈನಿಕರಿಂದ, ಮುಸಲ, ಪಂಜು, ಉಕ್ಕಿನ ಈಟಿಗಳು, ತೋಮರಗಳು, ಖಡ್ಗಗಳು, ಕೊಡಲಿಗಳನ್ನು ಹಿಡಿದ ನೂರಾರು ಯೋಧರಿಂದ, ಮತ್ತು ಜೇನಿನ ಅಂಟಿನಲ್ಲಿ ಅದ್ದಿದ್ದ ಮುದ್ಗರಗಳಿಂದ ರಕ್ಷಿಸಲ್ಪಟ್ಟ ಆ ಕಾಲುವೆಗಳನ್ನು ದಾಟಲು ಅಸಾಧ್ಯವಾಗಿದ್ದವು. ಪುರದ್ವಾರದಲ್ಲಿ ಎಲ್ಲೆಡೆಯಲ್ಲಿ ನಿಂತಿರುವ ಮತ್ತು ಚಲಿಸುತ್ತಿರುವ ಸೇನೆಗಳು, ಮತ್ತು ಹಲವಾರು ಪದಾತಿಗಳು, ಹೇರಳ ಗಜ ತುರಗಗಳಿದ್ದವು.

## ಅಂಗದ ರಾಯಭಾರ, ಯುದ್ಧಾರಂಭ

ಆಗ ಅಂಗದನು ಲಂಕೆಯ ದ್ವಾರ ಪ್ರದೇಶಕ್ಕೆ ಬರಲು ರಾಕ್ಷಸೇಂದ್ರನಿಗೆ ತಿಳಿಸಿ ಏನೂ ಚಿಂತೆಯಿಲ್ಲದೇ ಪ್ರವೇಶಿಸಿದನು. ಆ ರಾಕ್ಷಸ ಕೋಟಿಯ ಮಧ್ಯೆ ಆ ಸುಮಹಾಬಲನು ಮೇಘಮಾಲೆಗಳಿಂದ ಸುತ್ತುವರೆದ ಆದಿತ್ಯನಂತೆ ಶೋಭಿಸಿದನು. ಅಮಾತ್ಯರಿಂದ ಸುತ್ತುವರೆಯಲ್ಪಟ್ಟಿದ್ದ ಪೌಲಸ್ತ್ಯನ ಬಳಿಹೋಗಿ ಆ ವಾಗ್ಮಿಯು ರಾಮನ ಸಂದೇಶವನ್ನು ಹೇಳಲು ಪ್ರಾರಂಭಿಸಿದನು:


अंगद् शिष्टाई

“ರಾಜನ್! ಕೋಸಲೇಂದ್ರ ಮಹಾಯಶ ರಾಘವನು ಕಾಲಕ್ಕೆ ತಕ್ಕುದ್ದಾದ ಈ ಮಾತುಗಳನ್ನು ನಿನಗೆ ಕಳುಹಿಸಿದ್ದಾನೆ. ಅದನ್ನು ಆದರಿಸಿ ಅದರಂತೆ ಮಾಡು! ಅಕೃತಾತ್ಮನಾದ, ಅನ್ಯಾಯದಲ್ಲಿ ನಿರತನಾದ ರಾಜನನ್ನು ಪಡೆದು ದೇಶಗಳು ಮತ್ತು ನಗರಗಳು ಅವುಗಳಿಗೆ ಬಲಿಯಾಗಿ ನಾಶಹೊಂದುತ್ತವೆ. ಸೀತೆಯನ್ನು ಬಲಾತ್ಕಾರವಾಗಿ ಅಪಹರಿಸಿದ ಅಪರಾಧವನ್ನು ನೀನೊಬ್ಬನೇ ಮಾಡಿದ್ದೀಯೆ. ಆದರೆ ಇದು ಅನಾಪರಾಧಿಗಳಾಗಿರುವ ಇತರರ ವಧೆಯಲ್ಲಿ ಕೊನೆಗೊಳ್ಳುತ್ತದೆ. ಇದಕ್ಕೂ ಮೊದಲು ಬಲದರ್ಪಿತನಾದ ನೀನು ವನದಲ್ಲಿ ವಾಸಿಸುತ್ತಿರುವ ಋಷಿಗಳನ್ನು ಹಿಂಸಿಸಿದ್ದೀಯೆ ಮತ್ತು ದೇವತೆಗಳನ್ನೂ ಅಪಮಾನಿಸಿದ್ದೀಯೆ. ರಾಜರ್ಷಿಗಳನ್ನು ಕೊಂದು ರೋದಿಸುತ್ತಿರುವ ಸ್ತ್ರೀಯರನ್ನು ಅಪಹರಿಸಿದ್ದೀಯೆ. ಈಗ ನಿನ್ನ ಆ ಅನ್ಯಾಯಗಳ ಫಲವು ಪ್ರಾಪ್ತವಾಗುವ ಸಮಯವು ಬಂದಿದೆ. ಅಮಾತ್ಯರೊಂದಿಗೆ ನಿನ್ನನ್ನು ಕೊಲ್ಲುತ್ತೇನೆ. ಯುದ್ಧಮಾಡಿ ಪುರುಷನಾಗು. ನಿಶಾಚರ! ಮನುಷ್ಯನಾದ ನನ್ನ ಧನುಸ್ಸಿನ ವೀರ್ಯವನ್ನು ನೋಡು. ಜಾನಕಿ ಸೀತೆಯನ್ನು ಬಿಡುಗಡೆ ಮಾಡು. ಒಂದುವೇಳೆ ಬಿಡುಗಡೆ ಮಾಡದಿದ್ದರೆ ನಿಶಿತ ಬಾಣಗಳಿಂದ ನಾನು ಲೋಕದಲ್ಲಿಯೇ ರಾಕ್ಷಸರಿಲ್ಲದಿರುವಂತೆ ಮಾಡುತ್ತೇನೆ.”

ದೂತನು ಹೇಳಿದ ಈ ಪೌರುಷ ಮಾತುಗಳನ್ನು ಕೇಳಿ ರಾಜ ರಾವಣನು

ತಡೆಯಲಾರದೇ ಕ್ರೋಧಮೂರ್ಛಿತನಾದನು. ಆಗ ಅವನ ಇಂಗಿತವನ್ನು ತಿಳಿದ ನಾಲ್ವರು ರಾಕ್ಷಸ ಸೇವಕರು ಅಂಗದನ ನಾಲ್ಕು ಅಂಗಗಳನ್ನು ಪಕ್ಷಿಗಳು ಹುಲಿಯನ್ನು ಹಿಡಿಯುವಂತೆ ಹಿಡಿದರು. ಆಗ ಅಂಗದನು ಆ ರಾಕ್ಷಸರು ಅವನ ಅಂಗಗಳಿಗೆ ನೇತಾಡಿಕೊಂಡಿರುವಾಗಲೇ ಪ್ರಾಸಾದದ ಮೇಲೆ ಹಾರಿದನು. ಅವನು ಹಾರಿದ ರಭಸಕ್ಕೆ ರಾಕ್ಷಸರು ನೆಲದ ಮೇಲೆ, ಪೆಟ್ಟನ್ನು ಸಹಿಸಲಾರದೇ ಹೃದಯಗಳು ಒಡೆದು, ಬಿದ್ದರು. ಅರಮನೆಯ ಮೇಲಿಂದ ಪುನಃ ಕೆಳಕ್ಕೆ ಹಾರಿ, ಲಂಕೆಯನ್ನು ದಾಟಿ ತನ್ನ ಸೇನೆಯ ಸಮೀಪಕ್ಕೆ ಬಂದನು. ಕೋಸಲೇಂದ್ರನಲ್ಲಿಗೆ ಹೋಗಿ ಅಂಗದನು ನಡೆದುದೆಲ್ಲವನ್ನೂ ನಿವೇದಿಸಿದನು. ರಾಘವನಿಂದ ಅಭಿನಂದಿತನಾದ ಆ ತೇಜಸ್ವಿಯು ವಿಶ್ರಾಂತಿಯನ್ನು ಪಡೆದನು.

ಆಗ ರಘುನಂದನನು ಎಲ್ಲ ವಾಯುವೇಗದ ಕಪಿಗಳ ಆಕ್ರಮಣದೊಂದಿಗೆ ಲಂಕೆಯ ಪ್ರಾಕಾರಗಳನ್ನು ಒಡೆಸಿದನು. ಲಕ್ಷ್ಮಣನು ವಿಭೀಷಣ ಮತ್ತು ಕರಡಿಗಳ ರಾಜನನ್ನು ಮುಂದಿಟ್ಟುಕೊಂಡು ದುರಾಸದವಾಗಿದ್ದ ದಕ್ಷಿಣನಗರದ್ವಾರವನ್ನು ಕಿತ್ತುರುಳಿಸಿದನು. ಅವನು ನೂರುಸಾವಿರ ಕೋಟಿ ಯುದ್ಧಶಾಲಿಗಳಾಗಿದ್ದ, ಕುಂಕುಮದಷ್ಟು ಕೆಂಪಾಗಿದ್ದ ಕಪಿಗಳೊಡನೆ ಲಂಕೆಯ ಮೇಲೆ ಬಿದ್ದನು. ಮೇಲೆ ಹಾರುತ್ತಿದ್ದ, ಕುಪ್ಪಳಿಸುತ್ತಿದ್ದ, ಕೆಳಗೆ ಬೀಳುತ್ತಿದ್ದ ವಾನರರಿಂದ ಸೂರ್ಯನೇ ಕಾಣುತ್ತಿರಲಿಲ್ಲ ಮತ್ತು ಮೇಲೆದ್ದ ಧೂಳಿನಿಂದಾಗಿ ಬೆಳಕೇ ಇಲ್ಲದಂತಾಯಿತು. ಕೋಟೆಯ ಗೋಡೆಗಳು ಎಲ್ಲಕಡೆಯಿಂದಲೂ

ಕಪಿಗಳಿಂದ - ಭತ್ತದ ಎಸಳುಗಳಂತಿದ್ದ, ಶಿರೀಷಕುಸುಮಗಳಂತಿದ್ದ, ಉದಯಕಾಲದ ಆದಿತ್ಯನಂತಿದ್ದ, ಬಿಳಿಯಹುಲ್ಲಿನಂತಿದ್ದ ಕಪಿಗಳಿಂದ ಎಲ್ಲಕಡೆಯಿಂದಲೂ ತುಂಬಿದ್ದ ಕೋಟೆಯು ಹಳದೀಬಣ್ಣವನ್ನು ತಳೆದಿದ್ದುದನ್ನು ನೋಡಿ ಎಲ್ಲೆಡೆಯೂ ಇದ್ದ ರಾಕ್ಷಸರು, ಸ್ತ್ರೀಯರು ಮತ್ತು ವೃದ್ಧರೂ ಸೇರಿ, ವಿಸ್ಮಿತರಾದರು. ಅವರು ಮಣಿಸ್ಥಂಭಗಳನ್ನು, ಕರ್ಣಾಟ್ಟಶಿಖರಗಳನ್ನು ಮುರಿದರು. ಯಂತ್ರಗಳನ್ನು ಮುರಿದು ಅವುಗಳ ವೇಗವನ್ನು ತೆಗೆದು ಧ್ವಂಸಮಾಡಿದರು. ಆ ಮಹಾಬಲರು ನೂರಾರು ಕಟುಕರನ್ನು, ಚಕ್ರಗಳನ್ನು, ಕಾಯುವ ಗೋಪುರಗಳನ್ನು, ಮತ್ತು ಬಂಡೆಗಳನ್ನು ತೆಗೆದು ಲಂಕೆಯ ಮಧ್ಯಕ್ಕೆ ಎಸೆದರು. ಪ್ರಾಕಾರವನ್ನು ಕಾಯುತ್ತಿದ್ದ ನೂರಾರು ನಿಶಾಚರರು ಕಪಿಗಳ ಆಕ್ರಮಣಕ್ಕೊಳಗಾಗಿ ಓಡಿ ಹೋದರು.

ಆಗ ರಾಜನ ವಚನದಂತೆ ಕಾಮರೂಪಿಗಳಾದ, ವಿಕೃತಾಕಾರರಾದ ರಾಕ್ಷಸರು ನೂರುಸಾವಿರದ ಗುಂಪಿನಲ್ಲಿ ಹೊರಟು ಶಸ್ತ್ರಗಳ ಮಳೆಗರೆದು ಆ ಕಪಿಗಳನ್ನು ಓಡಿಸಿ, ಕೋಟೆಯನ್ನು ಬರಿದುಮಾಡುವಲ್ಲಿ ಪರಮ ವಿಕ್ರಮವನ್ನು ತೋರಿಸಿದರು. ಕ್ಷಣಮಾತ್ರದಲ್ಲಿ ಅವರೆಕಾಳುಗಳ ರಾಶಿಯಂತೆ ತೋರುತ್ತಿದ್ದ, ನೋಡಲು ಭಯಂಕರರಾಗಿದ್ದ ಆ ರಾಕ್ಷಸರು ಪ್ರಾಕಾರವನ್ನು ನಿರ್ವಾನರವನ್ನಾಗಿ ಮಾಡಿದರು. ಶೂಲಗಳಿಂದ ಅಂಗಗಳನ್ನು ಕಡಿದುಕೊಂಡು ಹಲವಾರು ವಾನರರ್ಷಭರು ಉರುಳಿದರು. ಹಾಗೆಯೇ ತೋರಣದ ಸ್ಥಂಭಗಳಿಂದ ತುಂಡಾಗಿ ರಾಕ್ಷಸರೂ ಕೆಳಗುರುಳಿದರು. ಆ ರಾಕ್ಷಸ-ವಾನರರೊಡನೆ ಕೇಶಾಕೇಶ

ಯುದ್ಧವು ನಡೆಯಿತು. ವೀರರು ಪರಸ್ಪರರನ್ನು ಉಗುರು ಹಲ್ಲುಗಳಿಂದ ಕಿತ್ತು ತಿನ್ನುತ್ತಿದ್ದರು. ಎರಡೂ ಕಡೆಯವರು ಕೊನೆಯವರೆಗೂ ಹೊಡೆದಾಡುತ್ತಿದ್ದರು; ವಾನರ-ರಾಕ್ಷಸರು ನೆಲಕ್ಕೆ ಬಿದ್ದು ಹತರಾದರೂ ಪರಸ್ಪರರ ಹಿಡಿತವನ್ನು ಬಿಟ್ಟಿರಲಿಲ್ಲ. ರಾಮನಾದರೋ ಲಂಕೆಯ ಮೇಲೆ ಮೋಡಗಳಂತೆ ಶರಜಾಲಗಳಿಂದ ಮಳೆಗರೆದನು. ಅದಕ್ಕೆ ಸಿಲುಕಿದ ರಾಕ್ಷಸರು ಮರಣಹೊಂದಿದರು. ಜಿತಕ್ಲಮ ಸೌಮಿತ್ರಿಯೂ ಕೂಡ ತನ್ನ ದೃಢ ಧನುಸ್ಸಿನಿಂದ ಉಕ್ಕಿನ ಬಾಣಗಳನ್ನು ಕೋಟೆಯ ಮೇಲಿದ್ದ ರಾಕ್ಷಸರನ್ನು ಹೊಡೆದು ಕೆಳಗುರುಳಿಸಿದನು. ಆಗ ಗುರಿಯಿಟ್ಟು ಲಂಕೆಯನ್ನು ಮುರಿದು ವಿಜಯವನ್ನು ಗಳಿಸಿದ ನಂತರ ರಾಮನ ಆಜ್ಞೆಯಂತೆ ಸೇನೆಯು ಹಿಂದೆ ಸರಿಯಿತು.

ಆಗ, ಸೈನಿಕರು ಅಲ್ಲಿ ಬೀಡುಬಿಟ್ಟಿರಲು, ಅವರನ್ನು ರಾವಣನ ಕೆಲವು ಪಿಶಾಚ ಮತ್ತು ರಾಕ್ಷಸ ಅನುಚರರು - ಪರ್ವಣ, ಪೂತನ, ಜಂಭ, ಖರ, ಕ್ರೋಧವಶ, ಹರಿ, ಪ್ರರುಜ, ಅರುಜ, ಪ್ರಘಾಸ ಮತ್ತಿತರರು - ಆಕ್ರಮಣಮಾಡಿದರು. ಆ ದುರಾತ್ಮರು ಅದೃಶ್ಯರಾಗಿ ಆಕ್ರಮಣ ಮಾಡಿದರು. ಆದರೆ ವಿಭೀಷಣನು ಅವರ ಅಂತರ್ಧಾನತ್ವವನ್ನು ಕೊನೆಗಾಳಿಸಿದನು. ಅವರು ಕಾಣುವಂತಾದಾಗ ಬಲಶಾಲಿಗಳು ದೂರಹಾರಬಲ್ಲರೂ ಆದ ಕಪಿಗಳು ಅವರೆಲ್ಲರನ್ನೂ ಕೊಂದರು ಮತ್ತು ಅವರು ಸತ್ತು ನೆಲದಮೇಲೆ ಬಿದ್ದರು. ಇದನ್ನು ಸಹಿಸಲಾರದೇ ರಾವಣನು, ಎಲ್ಲಕಪಿಗಳನ್ನೂ ಸಂಹರಿಸುವ ಉದ್ದೇಶದಿಂದ ಉಶಾನಸನ ವ್ಯೂಹವನ್ನು ರಚಿಸಿ ತನ್ನ ಬಲದೊಂದಿಗೆ ಹೊರಬಂದನು.

ರಾಘವನಾದರೂ ಬೃಹಸ್ಪತಿಯ ವ್ಯೂಹರಚನೆಯನ್ನು ಮಾಡಿ ನಿಶಾಚರ ದಶಾನನನ ಸೇನೆಯನ್ನು ಎದುರಿಸಿ ಮುಂದೆಬಂದನು. ಅಲ್ಲಿ ರಾಮ-ರಾವಣರು ಯುದ್ಧದಲ್ಲಿ ಸೆಣಸಾಡಿದರು. ಹಾಗೆಯೇ ಲಕ್ಷ್ಮಣನು ಇಂದ್ರಜಿತುವಿನೊಂದಿಗೆ, ಸುಗ್ರೀವನು ವಿರೂಪಾಕ್ಷನೊಂದಿಗೆ, ನಿಖರವ್ರತನು ತಾರನೊಂದಿಗೆ, ನಲನು ತುಂಡನೊಂದಿಗೆ, ಮತ್ತು ಪಟುಷನು ಪನಸನೊಂದಿಗೆ ಯುದ್ಧ ಮಾಡಿದರು. ಯಾರನ್ನು ಯುದ್ಧದಲ್ಲಿ ಸರಿಸಾಟಿಯೆಂದು ಪರಿಗಣಿಸಿದರೋ ಅವರೊಂದಿಗೆ ಯುದ್ಧದ ವೇಳೆಗಳಲ್ಲಿ ಸ್ವಬಾಹುಬಲವನ್ನು ಆಶ್ರಯಿಸಿ ಯುದ್ಧಮಾಡಿದರು. ಆ ಹೊಡೆದಾಟವು ಹೇಡಿಗಳ ಭಯವನ್ನು ಹೆಚ್ಚುಮಾಡಿತು. ಮೈನವಿರೇಳಿಸುವ ಆ ಘೋರ ಯುದ್ಧವು ಹಿಂದೆ ನಡೆದ ದೇವಾಸುರರ ಯುದ್ಧದಂತಿತ್ತು. ರಾವಣನು ರಾಮನ ಮೇಲೆ ಶಕ್ತಿ, ಶೂಲ ಮತ್ತು ಖಡ್ಗಗಳ ಮಳೆಯನ್ನು ಸುರಿಸಲು, ರಾಘವನೂ ಕೂಡ ರಾವಣನನ್ನು ಹರಿತ ತೀಕ್ಷ್ಣ ಉಕ್ಕಿನ ಶರಗಳಿಂದ ಆಕ್ರಮಣಮಾಡಿದನು. ಹಾಗೆಯೇ ಲಕ್ಷ್ಮಣನು ಜಾಗರೂಕನಾಗಿದ್ದ ಇಂದ್ರಜಿತುವನ್ನು ಮರ್ಮಭೇದಿ ಶರಗಳಿಂದ ಘಾತಿಗೊಳಿಸಲು ಇಂದ್ರಜಿತುವೂ ಕೂಡ ಸೌಮಿತ್ರಿಯನ್ನು ಬಹುಶರಗಳಿಂದ ಭೇದಿಸಿದನು. ವಿಭೀಷಣನು ಪ್ರಹಸ್ತನ ಮೇಲೆ ಮತ್ತು ಪ್ರಹಸ್ತನು ವಿಭೀಷಣನ ಮೇಲೆ ಏನೂ ಚಿಂತಿಸದೇ ಪಕ್ಷಿಗಳ ರೆಕ್ಕೆಗಳುಳ್ಳ, ತೀಕ್ಷ್ಣಬಾಣಗಳನ್ನು ಹೊಡೆದರು. ಅಲ್ಲಿ ಬಲವತ್ತಾದ ಮಹಾಸ್ತ್ರಗಳ ಸಮಾಗಮವಾಗುತ್ತಿತ್ತು. ಇದರಿಂದ ಮೂರು ಲೋಕಗಳ ಸಕಲ ಚರಾಚರರೂ ವ್ಯಾಕುಲರಾದರು.

ಆಗ ಪ್ರಹಸ್ತನು ಬೇಗನೆ ವಿಭೀಷಣನನ್ನು ಎದುರಿಸಿ ಕರ್ಕಶವಾದ ರಣನಾದವನ್ನು ಕೂಗಿ ಗದೆಯಿಂದ ಹೊಡೆದನು. ಆದರೆ ಧೀಮಂತ ಮಹಾಬಾಹುವು ಭೀಮವೇಗದಿಂದ ಬಂದ ಗದೆಯ ಹೊಡೆತಕ್ಕೂ ಕಂಪಿಸದೇ ಹಿಮವತ್ಪರ್ವತದಂತೆ ಸ್ಥಿರವಾಗಿದ್ದನು. ವಿಭೀಷಣನು ಶತಘಂಟಾ ಎಂಬ ವಿಪುಲ ಮಹಾಶಕ್ತಿಯನ್ನು ಹಿಡಿದು ಅಭಿಮಂತ್ರಿಸಿ ಅವನ ಶಿರದ ಕಡೆಗೆ ಎಸೆದನು. ಆ ವೇಗವಾಗಿ ಬರುತ್ತಿರುವ ಮಿಂಚಿನಂತಿರುವ ಆಯುಧವು ರಾಕ್ಷಸನ ಶಿರವನ್ನು ಕತ್ತರಿಸಲು, ಭಿರುಗಾಳಿಗೆ ಸಿಲುಕಿದ ಮರವು ಬೀಳುವಂತೆ ಕೆಳಗುರುಳಿದುದು ಕಂಡಿತು. ಯುದ್ಧದಲ್ಲಿ ಪ್ರಹಸ್ತನು ಹತನಾದುದನ್ನು ನೋಡಿದ ಧೂಮ್ರಾಕ್ಷನು ಮಹಾವೇಗದಿಂದ ಬಂದು ಕಪಿಗಳನ್ನು ಆಕ್ರಮಣ ಮಾಡಿದನು. ನೋಡಲು ಭಯಂಕರವಾಗಿದ್ದ ಅವನ ಸೇನೆಯು ಮೋಡಗಳಂತೆ ಸೇನೆಯ ಮೇಲೆ ಬೀಳಲು, ಅದನ್ನು ಕಂಡ ವಾನರಪುಂಗವರು ತಕ್ಷಣವೇ ಚದುರಿಹೋದರು. ಆ ವಾನರಪುಂಗವರು  ಹಾಗೆ ಶೀಘ್ರವಾಗಿ ಚದುರಿಹೋದುದನ್ನು ನೋಡಿ ಕಪಿಶಾರ್ದೂಲ ಹನೂಮಂತನು ಸ್ಥಿರವಾಗಿ ನಿಂತು ಹೋರಾಡಿದನು. ರಣದಲ್ಲಿ ಸ್ಥಿತನಾಗಿದ್ದ ಪವನಾತ್ಮಜನನ್ನು ನೋಡಿ ಕಪಿಗಳು ಎಲ್ಲೆಡೆಯಿಂದ ಮಹಾವೇಗದಲ್ಲಿ ಬಂದು ಒಂದುಗೂಡಿದರು. ಆಗ ಅನ್ಯೋನ್ಯರೊಂದಿಗೆ ಹೋರಾಡುತ್ತಿರುವ ರಾಮ ಮತ್ತು ರಾವಣರ ಸೇನೆಗಳಲ್ಲಿ ಮೈ ನವಿರೇಳಿಸುವ ಮಹಾ ಶಬ್ಧದ ತುಮುಲವುಂಟಾಯಿತು. ರಕ್ತವನ್ನು ಸುರಿಸುವ ಆ ಘೋರ ಸಂಗ್ರಾಮವು

ನಡೆಯುತ್ತಿರಲು, ಧೂಮ್ರಾಕ್ಷನು ಬಾಣಗಳಿಂದ ಕಪಿಸೇನೆಯನ್ನು ಪಲಾಯನವಾಗುವಂತೆ ಮಾಡಿದನು. ಶತ್ರುಗಳನ್ನು ಜಯಿಸುವ, ಪವನಾತ್ಮಜ ಹನೂಮಂತನು ಮುಂದುವರೆಯುತ್ತಿದ್ದ ಮಹಾಮಾತ್ರ ರಾಕ್ಷಸನನ್ನು ಬೇಗನೇ ಎದುರಿಸಿ ತಡೆದನು. ಆ ವಾನರ-ರಾಕ್ಷಸರ ನಡುವೆ ಅನ್ಯೋನ್ಯರನ್ನು ಗೆಲ್ಲುವ ಇಂದ್ರ-ಪ್ರಹ್ಲಾದರ ನಡುವಿನಂತಿರುವ ಘೋರವಾದ ಯುದ್ಧವು ನಡೆಯಿತು. ರಾಕ್ಷಸನು ಕಪಿಯನ್ನು ಗದೆ ಮತ್ತು ಪರಿಘಗಳಿಂದ ಹೊಡೆಯಲು ಕಪಿಯು ರಾಕ್ಷಸನನ್ನು ಮರಗಳು, ಕೊಂಬೆಗಳು ಮತ್ತು ಇತರ ಎಲ್ಲವುಗಳಿಂದ ಹೊಡೆದನು. ಆಗ ಅತಿಕಾಯನಾದ ಮಾರುತಾತ್ಮಜ ಧೀಮಾನ್ ಹನೂಮಂತನು ಕುದುರೆಗಳು ಮತ್ತು ರಥಗಳ ಸಹಿತ ಧೂಮ್ರಾಕ್ಷನನ್ನು ವಧಿಸಿದನು. ರಾಕ್ಷಸೋತ್ತಮ ಧೂಮ್ರಾಕ್ಷನು ಹತನಾದುದನ್ನು ನೋಡಿ ವಾನರರ ಉತ್ಸಾಹವು ಮರಳಿ ಅವರು ಸೈನಿಕರನ್ನು ಸಂಹರಿಸಿದರು. ಜಯವನ್ನು ಪಡೆಯುತ್ತಿದ್ದ ಬಲಶಾಲಿ ಕಪಿಗಳಿಂದ ಹತರಾಗುತ್ತಿದ್ದ ಆ ರಾಕ್ಷಸರು ತಮ್ಮ ಸಂಕಲ್ಪಗಳನ್ನು ಕಡಿದುಕೊಂಡು ಭಯದಿಂದ ಲಂಕೆಗೆ ಮರಳಿದರು. ಭಗ್ನರಾದ, ಸಾಯದೇ ಉಳಿದ ನಿಶಾಚರರು ಪುರವನ್ನು ಸೇರಿ ಎಲ್ಲವನ್ನೂ ನಡೆದಹಾಗೆ ರಾಜ ರಾವಣನಿಗೆ ನಿವೇದಿಸಿದರು. ಯುದ್ಧದಲ್ಲಿ ಪ್ರಹಸ್ತ ಮತ್ತು ಮಹೇಷ್ವಾಸ ಧೂಮ್ರಾಕ್ಷರು ಸೇನೆಯೊಂದಿಗೆ ವಾನರರಿಂದ ಹತರಾಗಿದ್ದುದನ್ನು ಕೇಳಿ ರಾವಣನು ಸುದೀರ್ಘ ನಿಟ್ಟುಸಿರನ್ನು ಬಿಟ್ಟು ವರಾಸನದಿಂದ ಎದ್ದು ಹೇಳಿದನು:

“ಕುಂಭಕರ್ಣನು ಕಾರ್ಯವೆಸಗುವ ಕಾಲವು ಬಂದಿದೆ.”



ಹೀಗೆ ಹೇಳಿ ಜೋರಾಗಿ ಶಬ್ಧಮಾಡುವ ವಿವಿಧ ಸಂಗೀತ ಸಲಕರಣೆಗಳಿಂದ ಮಲಗಿದ್ದ ನಿದ್ರಾಲು ಕುಂಭಕರ್ಣನನ್ನು ಎಬ್ಬಿಸಿದನು. ಮಹಾಯತ್ನದಿಂದ ಅವನನ್ನು ಎಚ್ಚರಿಸಲು, ನಿದ್ರೆಯನ್ನು ಕಳೆದ ಆಯಾಸವನ್ನು ಕಳೆದುಕೊಂಡ ರಾಕ್ಷಸಾಧಿಪನು ಆರಾಮವಾಗಿ ಕುಳಿತುಕೊಳ್ಳಲು ದಶಗ್ರೀವನು ಮಹಾಬಲಿ ಕುಂಭಕರ್ಣನಿಗೆ ಹೇಳಿದನು:

> "ಕುಂಭಕರ್ಣ ! ಈ ರೀತಿ ನಿದ್ರೆಮಾಡಬಲ್ಲ ನೀನು ಧನ್ಯ ! ಈ ದಾರುಣ ಕಾಲದ ಮಹಾಭಯವು ನಿನಗೆ ತಿಳಿದಿಲ್ಲ. ಈ ರಾಮನು ಕಪಿಗಳೊಂದಿಗೆ ಸೇತುವೆಯ ಮೂಲಕ ಸಾಗರವನ್ನು ದಾಟಿ ಬಂದು ನಮ್ಮೆಲ್ಲರನ್ನೂ ಅವಹೇಳಿಸಿ ಮಹಾ

ಕದನವನ್ನು ಮಾಡುತ್ತಿದ್ದಾನೆ. ನಾನು ಸೀತಾ ಎಂಬ ಹೆಸರಿನ ಅವನ ಭಾರ್ಯೆ ಮತ್ತು ಜನಕನ ಮಗಳನ್ನು ಅಪಹರಿಸಲು, ಅವಳನ್ನು ಬಿಡಿಸಲು ಅವನು ಸಾಗರಕ್ಕೆ ಸೇತುವೆಯನ್ನು ಕಟ್ಟಿದನು. ಅವನಿಂದ ಪ್ರಹಸ್ಥನೇ ಮೊದಲಾದ ಮಹಾ ಸ್ವಜನರು ಹತರಾಗಿದ್ದಾರೆ. ನೀನಲ್ಲದೇ ಬೇರೆ ಯಾರೂ ಅವನನ್ನು ಕೊಲ್ಲಲಾರರು! ಅವನು ಕವಚವನು ಧರಿಸಿದ್ದಾನೆ. ಇಂದೇ ಹೊರಡು! ರಾಮನೇ ಮೊದಲಾದ ಶತ್ರುಗಳೆಲ್ಲರನ್ನೂ ಸಮರದಲ್ಲಿ ಜಯಿಸು! ಈ ಇಬ್ಬರು ದೂಷಣನ ತಮ್ಮಂದಿರು - ವಜ್ರವೇಗ ಮತ್ತು ಪ್ರಮಥಿ – ತಮ್ಮ ಮಹಾಸೇನೆಗಳೊಂದಿಗೆ ನಿನ್ನನ್ನು ಅನುಸರಿಸುತ್ತಾರೆ."

ತರಸ್ವಿ ಕುಂಭಕರ್ಣನಿಗೆ ಹೀಗೆ ಹೇಳಿ ರಾಕ್ಷಸಪತಿಯು ವಜ್ರವೇಗ ಮತ್ತು ಪ್ರಮಥಿಗಳಿಗೆ ಮಾಡಬೇಕಾದುದರ ಕುರಿತು ಆಜ್ಞೆಯನ್ನಿತ್ತನು. ಆ ವೀರ ದೂಷಣಾನುಜರಿಬ್ಬರೂ ಹಾಗೇ ಆಗಲೆಂದು ರಾವಣನಿಗೆ ಹೇಳಿ ಕುಂಭಕರ್ಣನನ್ನು ಮುಂದಿಟ್ಟು ಸೇನೆಯೊಂದಿಗೆ ಪುರದಿಂದ ಹೊರಟರು.

## ಕುಂಭಕರ್ಣನ ವಧೆ

ಆಗ ಅನುಯಾಯಿಗಳೊಂದಿಗೆ ಪುರದಿಂದ ಹೊರಟ ಕುಂಭಕರ್ಣನು ವಿಜಯದಿಂದ ಸೊಕ್ಕಿ ನಿಂತಿದ್ದ ಕಪಿಸೇನೆಯನ್ನು ಕಂಡನು. ಕಪಿಗಳು ಅವನೆಡೆಗೆ ಓಡಿ ಬಂದು, ಎಲ್ಲಕಡೆಯಿಂದಲೂ ಸುತ್ತುವರೆದು, ಆ




ಮಹಾಕಾಯನನ್ನು ಹಲವಾರು ದೊಡ್ಡ ಮರಗಳಿಂದ ಹೊಡೆದರು ಮತ್ತು ಉತ್ತಮ ಭಯವನ್ನು ತೊರೆದು ಕೈಬೆರಳಿನ ಉಗುರುಗಳಿಂದ ಕೆರೆದು ಗಾಯಗೊಳಿಸಿದರು. ಯುದ್ಧಮಾರ್ಗದಲ್ಲಿ ಬಹುರೀತಿಯಲ್ಲಿ ಯುದ್ಧಮಾಡುತ್ತಿದ್ದ ವಾನರರು ಆ ಭಯಂಕರ ರಾಕ್ಷಸನನ್ನು ನಾನಾ ಆಯುಧಗಳಿಂದ ಹೊಡೆದರು. ಹೀಗೆ ಹೊಡೆಯುತ್ತಿರಲು ಅವನು ಜೋರಾಗಿ ನಗುತ್ತಾ ಪನಸ, ಗವಾಕ್ಷ, ವಜ್ರಬಾಹುವೇ ಮೊದಲಾದ ವಾನರರನ್ನು ಭಕ್ಷಿಸತೊಡಗಿದನು. ರಾಕ್ಷಸ ಕುಂಭಕರ್ಣನ ಆ ದುಃಖಕರ ಕೃತ್ಯವನ್ನು ನೋಡಿ ತಾರನೇ ಮೊದಲಾದವರು ಕಷ್ಟದಲ್ಲಿ ಕಿರುಚಿಕೊಂಡರು. ಜೋರಾಗಿ ಕಿರುಚಿಕೊಳ್ಳುತ್ತಿರುವ ತಾರ ಮತ್ತು ಇತರ

ಕಪಿಗುಂಪುಗಳ ಬಳಿಗೆ ಸುಗ್ರೀವನು ಕುಂಭಕರ್ಣನನ್ನು ಎದುರಿಸುವ ಭಯವಿಲ್ಲದೇ ಓಡಿ ಬಂದನು. ಆ ಮಹಾಮನಸ್ವಿ ಕಪಿಕುಂಜರನು ವೇಗದಿಂದ ಶಾಲವೃಕ್ಷವನ್ನು ಕುಂಭಕರ್ಣನ ತಲೆಗೆ ಬಲವತ್ತಾಗಿ ಬಡಿದನು. ಆ ಮಹಾತ್ಮ ಮಹಾವೇಗ ಸುಗ್ರೀವನು ಕುಂಭಕರ್ಣನ ನೆತ್ತಿಯಮೇಲೆ ಹೊಡೆದ ಶಾಲವೃಕ್ಷವು ಪುಡಿಪುಡಿಯಾಯಿತೇ ವಿನಃ ಅವನನ್ನು ಹಂದಾಡಿಸಲೂ ಆಗಲಿಲ್ಲ. ಆಗ ಶಾಲವು ತಾಗಿದುದರಿಂದ ಸಂಪೂರ್ಣವಾಗಿ ಎಚ್ಚೆತ್ತ ಕುಂಭಕರ್ಣನು ಸುಗ್ರೀವನ ತೋಳುಗಳನ್ನು ಬಿಡಿದು ಬಲವಾಗಿ ಎಳೆದನು. ರಾಕ್ಷಸ ಕುಂಭಕರ್ಣನಿಂದ ಎತ್ತಿಕೊಂಡು ಹೋಗಲ್ಪಟ್ಟ ಸುಗ್ರೀವನನ್ನು ನೋಡಿ ಮಿತ್ರನಂದನ, ವೀರ ಸೌಮಿತ್ರಿಯು ಅವನಲ್ಲಿಗೆ ಧಾವಿಸಿ ಬಂದನು. ಪರವೀರಹ ಲಕ್ಷ್ಮಣನು ಉದ್ದವಾದ ಮಹಾವೇಗದ ಬಂಗಾರದ ರೆಕ್ಕೆಗಳನ್ನುಳ್ಳ ಮಹಾಶರವನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಅದು ಅವನ ದೇಹಾವರಣವನ್ನು ಬಿರಿದು, ದೇಹವನ್ನು ಹೊಕ್ಕು, ರಕ್ತದಿಂದ ತೋಯ್ದು ಹಿಂದಿನಿಂದ ಬಂದು ನೆಲವನ್ನು ಹೊಕ್ಕಿತು. ಅವನ ಹೃದಯವು ಸೀಳಿಹೋಗಲು ಮಹೇಷ್ವಾಸ ಕುಂಭಕರ್ಣನು ಕಪೀಶ್ವರನನ್ನು ಬಿಸುಟು, ಶಿಲಾಯುಧವನ್ನು ಹಿಡಿದು ಆ ಮಹಾಶಿಲವನ್ನು ಎತ್ತಿ ಸೌಮಿತ್ರಿಯ ಮೇಲೆ ಎರಗಿದನು. ತನ್ನ ಕಡೆ ಧಾವಿಸಿ ಬರುತ್ತಿದ್ದ ಅವನ ಎತ್ತಿದ ತೋಳುಗಳನ್ನು ಎರಡು ಕೋಡುಗಳಿರುವ ಹರಿತ ಬಾಣಗಳಿಂದ ಕತ್ತರಿಸಿದನು. ಆಗ ಅವನು ಚತುರ್ಭುಜನಾದನು. ಶಿಲಾಯುಧಗಳನ್ನು ಹಿಡಿದಿರುವ ಎಲ್ಲ ಭುಜಗಳನ್ನೂ ಹರಿತ ಬಾಣಗಳಿಂದ ಕತ್ತರಿಸಿ

ಸೌಮಿತ್ರಿಯು ತನ್ನ ಅಸ್ತ್ರ ಲಘುತ್ವವನ್ನು ಪ್ರದರ್ಶಿಸಿದನು. ಆಗ ಅವನು ಬಹುಪಾದಶಿರೋಭುಜಗಳ ಅತಿಕಾಯನಾಗಿ ಬೆಳೆಯಲು, ಪರ್ವತಗಳ ರಾಶಿಯಂತಿದ್ದ ಅವನನ್ನು ಸೌಮಿತ್ರಿಯು ಬ್ರಹ್ಮಾಸ್ತ್ರದಿಂದ ಸುಟ್ಟುಹಾಕಿದನು. ದಿವ್ಯಾಸ್ತ್ರದಿಂದ ಹೊಡೆಯಲ್ಪಟ್ಟ ಆ ಮಹಾವೀರನು ರಣದಲ್ಲಿ ಚಿಗುರಿದ ಮರವು ಮಹಾಮಿಂಚಿನ ಹೊಡೆತಕ್ಕೆ ಸಿಕ್ಕಿ ಸುಟ್ಟು ಬೀಳುವಂತೆ ಬಿದ್ದನು. ಆ ವೃತ್ರಸಂಕಾಶ ತರಸ್ವಿ ಕುಂಭಕರ್ಣನು ನೆಲದ ಮೇಲೆ ಬಿದ್ದು ಅಸುನೀಗಿದುದನ್ನು ಕಂಡು ರಾಕ್ಷಸರು ಹೆದರಿ ಓಡಿ ಹೋದರು. ಹಾಗೆ ಓಡಿ ಹೋಗುತ್ತಿರುವ ಯೋಧರನ್ನು ನೋಡಿ ದೂಷಣನ ತಮ್ಮಂದಿರೀರ್ವರು ಸಂಕ್ರುದ್ಧರಾಗಿ ಓಡಿಬಂದು ಸೌಮಿತ್ರಿಯನ್ನು ಎದುರಿಸಿದರು. ಸೌಮಿತ್ರಿಯು ಸಂಕೃದ್ಧರಾಗಿದ್ದ ವಜ್ರವೇಗ ಮತ್ತು ಪ್ರಮಥಿಯರೀರ್ವರನ್ನೂ ರೆಕ್ಕೆಗಳುಳ್ಳ ಬಾಣಗಳಿಂದ ಬರಮಾಡಿಕೊಂಡನು. ಆಗ ದೂಷಣನ ತಮ್ಮಂದಿರ ಮತ್ತು ದೀಮತ ಲಕ್ಷ್ಮಣನ ನಡುವೆ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ಅವನು ರಾಕ್ಷಸರ ಮೇಲೆ ಮಹಾಶರಗಳ ಮಳೆಯನ್ನು ಸುರಿಸಿದನು. ಸಂಕೃದ್ಧರಾದ ಆ ವೀರರಿಬ್ಬರೂ ಕೂಡ ಅವನ ಮೇಲೆ ಶರಗಳ ಮಳೆಯನ್ನು ಸುರಿಸಿದರು. ವಜ್ರವೇಗ ಪ್ರಮಥಿಯರ ಮತ್ತು ಸಂಪ್ರಹಾರ ಮಹಾಬಾಹು ಸೌಮಿತ್ರಿಯ ನಡುವಿನ ಈ ದಾರುಣ ಯುದ್ಧವು ಸ್ವಲ್ಪ ಕಾಲ ನಡೆಯಿತು.

ಆಗ ಮಾರುತಾತ್ಮಜ ಹನೂಮಂತನು ಗಿರಿಯ ಶಿಖರವನ್ನು ಹಿಡಿದು, ಅಕ್ರಮಣ ಮಾಡಿ ರಾಕ್ಷಸ ವಜ್ರವೇಗನ ಪ್ರಾಣವನ್ನು ತೆಗೆದುಕೊಂಡನು.

ಮಹಾಬಲಿ ಕಪಿ ನೀಲನು ದೊಡ್ಡ ಬಂಡೆಯೊಂದಿಗೆ ದೂಷಣನ ತಮ್ಮ ಪ್ರಮಥಿಯನ್ನು ಆಕ್ರಮಣ ಮಾಡಿ ಜಜ್ಜಿದನು. ಆಗ ರಾಮ-ರಾವಣರ ಸೇನೆಗಳ ನಡುವೆ ಅನ್ಯೋನ್ಯರನ್ನು ಕೊಲ್ಲುವ ಕಟುಕ ಸಂಗ್ರಾಮವು ಪುನಃ ಪ್ರಾರಂಭವಾಯಿತು. ಆ ವನವಾಸಿಗಳು ನೂರಾರು ಸಂಖ್ಯೆಗಳಲ್ಲಿ ರಾಕ್ಷಸರನ್ನು ಕೊಂದರು, ರಾಕ್ಷಸರೂ ವನವಾಸಿಗಳನ್ನು ಕೊಂದರು. ಆದರೆ ಅಲ್ಲಿ ಸತ್ತ ರಾಕ್ಷಸರ ಸಂಖ್ಯೆ ವಾನರರಕ್ಕಿಂತಲೂ ಪ್ರಾಯಶಃ ಅಧಿಕವಾಗಿತ್ತು.

## ಇಂದ್ರಜಿತು ಕಾಳಗ

ಆಗ ಅನುಯಾಯಿಗಳಾದ ಮಹೇಷ್ವಾಸ ಪ್ರಹಸ್ತ ಮತ್ತು ಅತಿತೇಜಸ ಧೂಮ್ರಾಕ್ಷರೊಂದಿಗೆ ಕುಂಭಕರ್ಣನು ರಣದಲ್ಲಿ ಹತನಾದುದನ್ನು ಕೇಳಿ ರಾವಣನು ಶೂರ, ಪುತ್ರ ಇಂದ್ರಜಿತುವಿಗೆ ಹೇಳಿದನು:

> "ಅಮಿತ್ರಘ್ನ! ಸುಗ್ರೀವ-ಸೌಮಿತ್ರಿಯರೊಂದಿಗೆ ರಾಮನನ್ನು ಕೊಲ್ಲು! ಶಚೀಪತಿ ಸಹಸ್ರಾಕ್ಷ ವಜ್ರಧರನನ್ನು ರಣದಲ್ಲಿ ಗೆದ್ದು ಬೆಳಗುವ ಯಶಸ್ಸನ್ನು ಗಳಿಸಿರುವ ನೀನೇ ನನ್ನ ಸತ್ಪುತ್ರ! ಅದೃಶ್ಯನಾಗಿ ಅಥವಾ ದೃಶ್ಯನಾಗಿ ಪಡೆದಿರುವ ದಿವ್ಯವಾದ ಶ್ರೇಷ್ಠ ಶರಗಳಿಂದ ನನ್ನ ಶತ್ರುಗಳನ್ನು ಕೊಲ್ಲು. ರಾಮ, ಲಕ್ಷ್ಮಣ, ಸುಗ್ರೀವರು ನಿನ್ನ ಬಾಣಗಳ ಸ್ಪರ್ಷವನ್ನು ಸಹಿಸಲು ಅಸಮರ್ಥರು. ಇನ್ನು ಅವರ ಅನುಯಾಯಿಗಳನ್ನು ಬಿಡು! ಪ್ರಹಸ್ತ-ಕುಂಭಕರ್ಣರು ಮಾಡಲಿಕ್ಕಾಗದೇ ಇದ್ದ ಖರನ

ಪ್ರತೀಕಾರವನ್ನು ರಣದಲ್ಲಿ ನೀನೇ ಪೂರೈಸಬೇಕು. ಹೋಗು! ಹಿಂದೆ ವಾಸವನನ್ನು ಸೆರೆಹಿಡಿದಂತೆ ಇಂದು ನೀನು ಹರಿತ ಬಾಣಗಳಿಂದ ಸೈನಿಕರೊಂದಿಗೆ ಶತ್ರುಗಳನ್ನು ಕೊಂದು ನನ್ನನ್ನು ಸಂತೋಷಗೊಳಿಸು.”

ಈ ಮಾತುಗಳಿಗೆ ಹಾಗೆಯೇ ಆಗಲೆಂದು ಹೇಳಿ ಇಂದ್ರಜಿತುವು ಸಂಪೂರ್ಣಕವಚಗಳನ್ನು ಧರಿಸಿ, ರಥವನ್ನೇರಿ, ರಣರಂಗದೆಡೆಗೆ ಹೊರಟನು. ಅಲ್ಲಿ ಆ ರಾಕ್ಷಸ ಪುಂಗವನು ತನ್ನ ಹೆಸರನ್ನು ಜೋರಾಗಿ ಗರ್ಜಿಸಿ ಸಮರದಲ್ಲಿ ಶುಭಲಕ್ಷಣ ಲಕ್ಷ್ಮಣನನ್ನು ಆಹ್ವಾನಿಸಿದನು. ಲಕ್ಷ್ಮಣನು ಶರದೊಂದಿಗೆ ಧನುವನ್ನು ಹಿಡಿದು ಚಪ್ಪಾಳೆಯ ಘೋಷದೊಂದಿಗೆ ಕ್ಷುದ್ರಮೃಗವನ್ನು ಸಿಂಹವು ಬೆದರಿಸುವಂತೆ ಓಡಿಬಂದನು. ವಿಜಯಾಕಾಂಕ್ಷಿಗಳಾಗಿದ್ದ, ದಿವ್ಯಾಸ್ತ್ರಕೋವಿದರಾಗಿದ್ದ, ಅನ್ಯೋನ್ಯರೊಂದಿಗೆ ಸ್ಪರ್ಧಿಸುತ್ತಿದ್ದ ಅವರಿಬ್ಬರ ನಡುವೆ ಮಹಾ ಯುದ್ಧವು ನಡೆಯಿತು. ತನ್ನ ಬಾಣಗಳ ಯುದ್ಧವು ಏನೂ ವಿಶೇಷವಾಗಿಲ್ಲವೆಂದಾಗ ಬಲಿಗಳಲ್ಲಿ ಶ್ರೇಷ್ಠ ರಾವಣಿಯು ಇನ್ನೂ ಗುರುತರ ಪ್ರಯತ್ನವನ್ನು ಮಾಡಿದನು. ಅವನು ಮಹಾವೇಗದ ತೋಮರಗಳಿಂದ ಅವನನ್ನು ಹೊಡೆದನು. ಆದರೆ ಸೌಮಿತ್ರಿಯು ಬರತ್ತಿರುವವುಗಳನ್ನು ನಿಶಿತ ಶರಗಳಿಂದ ಕತ್ತರಿಸಿದನು. ಹರಿತ ಶರಗಳಿಂದ ತುಂಡರಿಸಲ್ಪಟ್ಟು ಅವು ಭೂಮಿಯ ಮೇಲೆ ಬಿದ್ದವು. ಆಗ ವಾಲಿಸುತ ಶ್ರೀಮಾನ್ ಅಂಗದನು ವೃಕ್ಷವನ್ನು ಕಿತ್ತು ಹಿಡಿದು ಓಡಿ ಬಂದು ಮಹಾವೇಗದಲ್ಲಿ ಅವನ ನೆತ್ತಿಯಮೇಲೆ ಹೊಡೆದನು.

ಸಂಭ್ರಾಂತನಾಗದೇ ವೀರ್ಯವಂತ ಇಂದ್ರಜಿತುವು ಪ್ರಾಸವೊಂದನ್ನು ಅವನ ಎದೆಗೆ ಎಸೆಯಲು, ಲಕ್ಷ್ಮಣನು ಆ ಪ್ರಾಸವನ್ನೂ ಕೂಡ ತುಂಡರಿಸಿದನು. ಸಮೀಪಕ್ಕೆ ಬಂದಿದ್ದ ವೀರ ವಾನರಪುಂಗವ ಅಂಗದನ ಎಡಕ್ಕೆ ರಾವಣಾತ್ಮಜನು ಗದೆಯಿಂದ ಹೊಡೆದನು. ಆದರೆ ಬಲವಾನ್ ವಾಲಿಸುತನು ಆ ಪ್ರಹಾರಕ್ಕೆ ಮನಗೊಡಲಿಲ್ಲ. ಆ ಅಮಿತ್ರಜಿತುವು ಕ್ರೋಧದಿಂದ ಶಾಲವೃಕ್ಷದ ಕಾಂಡವನ್ನು ಇಂದ್ರಜಿತುವಿನೆಡೆಗೆ ಎಸೆದನು. ಇಂದ್ರಜಿತುವನ್ನು ಕೊಲ್ಲಲು ಕ್ರೋಧದಿಂದ ಅಂಗದನು ಬಿಸುಟ ಆ ವೃಕ್ಷವು ಕುದುರೆಗಳು ಮತ್ತು ಸಾರಥಿಗಳೊಂದಿಗೆ ಇಂದ್ರಜಿತುವಿನ ರಥವನ್ನು ಧ್ವಂಸಮಾಡಿತು. ಅಶ್ವ-ಸಾರಥಿಗಳು ಹತರಾಗಲು ರಾವಣಾತ್ಮಜನು ಮಾಯೆಯಿಂದ ಆ ರಥದಿಂದ ಅಲ್ಲಿಯೇ ಅಂತರ್ಧಾನನಾದನು. ಆ ಬಹುಮಾಯಿ ರಾಕ್ಷಸನು ಅಂತರ್ಧಾನನಾದುದನ್ನು ತಿಳಿದ ರಾಮನು ಅಲ್ಲಿಗೆ ಬಂದು ಆ ಸೇನೆಯನ್ನು ರಕ್ಷಿಸಿದನು. ಆಗ ವರದಿಂದ ಪಡೆದ ಶರಗಳಿಂದ ಅವನು ರಾಮ ಮತ್ತು ಮಹಾರಥಿ ಲಕ್ಷ್ಮಣರ ಅಂಗಾಂಗಗಳಿಗೆ ಗುರಿಯಿಟ್ಟು ಹೊಡೆದನು. ಅದೃಶ್ಯನಾಗಿರುವ ಮಾಯೆಯಿಂದ ಅಂತರ್ಧಾನನಾಗಿ ಹೋರಾಡುತ್ತಿರುವ ಆ ರಾವಣಿಯನ್ನು ಶೂರ ರಾಮ-ಲಕ್ಷ್ಮಣರು ಶರಗಳಿಂದ ಹೋರಾಡಿದರು. ಅವನು ರೋಷದಿಂದ ಆ ಪುರುಷಸಿಂಹರ ಎಲ್ಲ ಅಂಗಾಂಗಗಳ ಮೇಲೂ ನೂರಾರು ಸಹಸ್ರಾರು ಬಾಣಗಳಿಂದ ಹೊಡೆದನು. ಬಿಡುವಿಲ್ಲದೇ ಬಾಣಗಳನ್ನು ಬಿಡುತ್ತಿದ್ದ ಅದೃಶ್ಯನಾದ ಅವನನ್ನು ಹುಡುಕುತ್ತಾ ಕಪಿಗಳು

ಮಹಾಶಿಲೆಗಳನ್ನು ಹಿಡಿದು ಆಕಾಶವನ್ನೇರಿದರು. ಆದರೆ ಅದೃಶ್ಯನಾಗಿದ್ದ ಆ ವೀರ ರಾವಣಿ ರಾಕ್ಷಸನು ಮಾಯೆಯಿಂದ ಅವರನ್ನು ಆವರಿಸಿ ಬಾಣಗಳಿಂದ ಹೊಡೆದುರುಳಿಸಿದನು. ಆ ಶರಗಳಿಂದ ಮುಚ್ಚಲ್ಪಟ್ಟ ವೀರ ಸಹೋದರ ರಾಮ-ಲಕ್ಷ್ಮಣರು ಸೂರ್ಯ ಚಂದ್ರರಂತೆ ಗಗನದಿಂದ ಭೂಮಿಯ ಮೇಲೆ ಬಿದ್ದರು.

## ಇಂದ್ರಜಿತು ಸಂಹಾರ

ಆ ಅಮಿತತೇಜಸ್ವಿ ಸಹೋದರರಿಬ್ಬರೂ ಕೆಳಗೆ ಬಿದ್ದುದನ್ನು ನೋಡಿ ರಾವಣಿಯು ವರಗಳಿಂದ ಪಡೆದ ಶರಗಳಿಂದ ಅವರನ್ನು ಬಂಧಿಸಿದನು. ರಣದಲ್ಲಿ ಇಂದ್ರಜಿತುವಿನಿಂದ ಶರಜಾಲದಲ್ಲಿ ಬದ್ಧರಾಗಿದ್ದ ಆ ಪುರುಷವ್ಯಾಘ್ರರು ಪಂಜರದಲ್ಲಿದ್ದ ಎರಡು ಪಕ್ಷಿಗಳಂತೆ ಕಂಡುಬಂದರು. ಅವರಿಬ್ಬರೂ ನೂರಾರು ಬಾಣಗಳಿಂದ ಚುಚ್ಚಲ್ಪಟ್ಟು ನೆಲದ ಮೇಲೆ ಬಿದ್ದಿರುವುದನ್ನು ನೋಡಿ ಸುಗ್ರೀವನು ಸುಷೇಣ, ಮೈಂದ, ದ್ವಿವಿದ, ಕುಮುದ, ಅಂಗದ, ಹನೂಮಾನ್, ನೀಲ, ತಾರ ಮತ್ತು ಕಪೀಶ್ವರ ನಲ ಮೊದಲಾದ ಕಪಿಗಳೊಂದಿಗೆ ಅವರನ್ನು ಸುತ್ತುವರೆದು ನಿಂತುಕೊಂಡನು. ಆಗ ಕೃತಕರ್ಮಿ ವಿಭೀಷಣನು ಆ ಪ್ರದೇಶಕ್ಕೆ ಬಂದನು ಮತ್ತು ಆ ವೀರರಿಬ್ಬರನ್ನೂ ಪ್ರಜ್ಞಾಸ್ತ್ರವನ್ನು ಪ್ರಯೋಗಿಸಿ ಎಬ್ಬಿಸಿದನು. ಸುಗ್ರೀವನು ಕ್ಷಣದಲ್ಲಿಯೇ ಅವರಿಂದ ಬಾಣಗಳನ್ನು ಕಿತ್ತೊಗೆದು ಮುಳ್ಳುಗಳಿಂದ ಮುಕ್ತಿನೀಡುವ ದಿವ್ಯಮಂತ್ರದ ಮಹಾ ಔಷಧಿಯನ್ನು ಲೇಪಿಸಿದನು. ಎಚ್ಚೆತ್ತ ಆ

ನರವರರು ಬಾಣಗಳ ರಹಿತರಾಗಿ ಮೇಲೆದ್ದರು. ಆ ಮಹಾರಥಿಗಳು ಕ್ಷಣದಲ್ಲಿಯೇ ಯುದ್ಧದ ಆಯಾಸವನ್ನು ಕಳೆದುಕೊಂಡರು. ಆಗ ವಿಭೀಷಣನು ಇಕ್ಷ್ವಾಕುನಂದನ ರಾಮನು ವಿಜ್ವರನಾದುದನ್ನು ನೋಡಿ ಕೈಮುಗಿದು ಈ ಮಾತುಗಳನ್ನಾಡಿದನು:

> "ಅರಿಂದಮ! ಈ ಗುಹ್ಯಕನು ರಾಜರಾಜನ ಶಾಸನದಂತೆ ಶ್ವೇತಾದ್ರಿಯಿಂದ ಈ ನೀರನ್ನು ಹಿಡಿದು ಬಂದಿದ್ದಾನೆ. ಪರಂತಪ! ಮಹಾರಾಜ ಕುಬೇರನು ಈ ನೀರನ್ನು ಅಂತರ್ಧಾನರಾದವರ ದರ್ಶನಕ್ಕಾಗಿ ಕಳುಹಿಸಿಕೊಟ್ಟಿದ್ದಾನೆ. ಇದನ್ನು ಕಣ್ಣಿಗೆ ಮುಟ್ಟಿಸಿಕೊಂಡರೆ ಅಂತರ್ಹಿತಭೂತಗಳು ನಿನಗೆ ಮತ್ತು ಇದನ್ನು ನೀನು ಕೊಟ್ಟವರಿಗೆ ಕಾಣಿಸಿಕೊಳ್ಳುತ್ತವೆ."

ಹಾಗೆಯೇ ಆಗಲೆಂದು ರಾಮನು ಆ ಸತ್ಕೃತ ನೀರನ್ನು ಸ್ವೀಕರಿಸಿ ಕಣ್ಣುಗಳನ್ನು ತೊಳೆದುಕೊಳ್ಳಲು ಹಾಗೆಯೇ ಮಹಾಮನಸ್ವಿ ಲಕ್ಷ್ಮಣನೂ, ಸುಗ್ರೀವ-ಜಾಂಬವಂತರೂ, ಹನೂಮಂತ-ಅಂಗದರೂ, ಮೈಂದ, ದ್ವಿವಿದ, ನೀಲರೂ ಮತ್ತು ಹೆಚ್ಚಾಗಿ ಎಲ್ಲ ವಾನರಸತ್ತಮರೂ ಮಾಡಿದರು. ಆಗ ವಿಭೀಷಣನು ಹೇಳಿದಂತೆಯೇ ನಡೆಯಿತು. ಕ್ಷಣದಲ್ಲಿಯೇ ಅವರ ಕಣ್ಣುಗಳು ಅತೀಂದ್ರಿಯಗಳಾದವು. ಕೃತಕರ್ಮಿ ಇಂದ್ರಜಿತುವು ಮಾಡಿಮುಗಿಸಿದ ತನ್ನ ಕೆಲಸವನ್ನು ತಂದೆಗೆ ತಿಳಿಸಿ ತ್ವರೆಯಿಂದ ರಣರಂಗದ ಕಡೆ ಪುನಃ ಧಾವಿಸಿದನು. ಯುದ್ಧಮಾಡಲು

ಪುನಃ ಬಂದಿದ್ದ ಸಂಕೃದ್ಧನಾಗಿದ್ದ ಆ ಶತ್ರುವನ್ನು ವಿಭೀಷಣನ ಸಲಹೆಯಂತೆ ಸೌಮಿತ್ರಿಯು ಎದುರಿಸಿದನು. ಈಗ ಎಚ್ಚರಗೊಂಡ ಲಕ್ಷ್ಮಣನು ಜಯದಿಂದ ಸೊಕ್ಕಿದ್ದ ಶತ್ರುವನ್ನು ಅವನು ಆಹ್ನೀಕವನ್ನು ಮಾಡುವುದರೊಳಗೇ ಕೊಲ್ಲಲು ಬಯಸಿ ಕುಪಿತನಾಗಿ ಶರಗಳಿಂದ ಹೊಡೆದನು. ಆಗ ಅನ್ಯೋನ್ಯರನ್ನು ಜಯಿಸಲು ಬಯಸಿದ ಅವರೀರ್ವರ ನಡುವೆ, ಶಕ್ರ-ಪ್ರಹ್ಲಾದರ ನಡುವೆ ನಡೆದಂತಹ ಅತೀವವಾದ, ವಿಚಿತ್ರವೂ ಆಶ್ಚರ್ಯವೂ ಆದ ಯುದ್ಧವು ನಡೆಯಿತು. ಇಂದ್ರಜಿತುವು ಸೌಮಿತ್ರಿಯನ್ನು ತೀಕ್ಷ್ಣವಾದ ಮರ್ಮಭೇದಿ ಶರಗಳಿಂದ ಚುಚ್ಚಲು ಸೌಮಿತ್ರಿಯು ಮುಟ್ಟಲು ಬೆಂಕಿಯಂತಿರುವ ಶರಗಳಿಂದ ರಾವಣಿಯನ್ನು ಹೊಡೆದನು. ಸೌಮಿತ್ರಿಯ ಬಾಣಗಳು ತಾಗಿ ಕ್ರೋಧಮೂರ್ಛಿತನಾದ ರಾವಣಿಯು ಲಕ್ಷ್ಮಣನ ಮೇಲೆ ವಿಷಪೂರಿತ ಸರ್ಪಗಳಂತಿರುವ ಬಾಣಗಳನ್ನು ಪ್ರಯೋಗಿಸಿದನು. ಲಕ್ಷ್ಮಣನು ಒಂದರಿಂದ ಧನುಸ್ಸನ್ನು ಹಿಡಿದಿದ್ದ ಇಂದ್ರಜಿತುವಿನ ಬಾಹುವನ್ನು ದೇಹದಿಂದ ಬೀಳಿಸಿದನು. ಎರಡನೆಯದರಿಂದ ಉಕ್ಕಿನ ಬಾಣಗಳನ್ನು ಹಿಡಿದಿದ್ದ ಭುಜವನ್ನು ಧರೆಗೆ ಬೀಳಿಸಿದನು. ಹೊಳೆಯುತ್ತಿರುವ, ಅಗಲ ಮೊನೆಯಿರುವ ಮೂರನೆಯ ಬಾಣದಿಂದ ಅವನ ಸುಂದರಮೂಗಿನ, ಸುಂದರವಾಗಿದ್ದ ಕುಂಡಲಗಳಿಂದ ಹೊಳೆಯುತ್ತಿದ್ದ ಶಿರವನ್ನು ಕತ್ತರಿಸಿದನು. ಭುಜ ಮತ್ತು ತೋಳುಗಳನ್ನು ಕತ್ತರಿಸಲ್ಪಟ್ಟ ಅವನ ದೇಹವು ಭೀಕರವಾಗಿ ಕಂಡಿತು. ಅವನನ್ನು ಕೊಂದನಂತರ ಆ ಬಲಿಗಳಲ್ಲಿ ಶ್ರೇಷ್ಠನು ಅವನ ಸಾರಥಿಯನ್ನೂ ಕೊಂದನು.



ಕುದುರೆಗಳು ರಥವನ್ನು ಲಂಕೆಗೆ ಕೊಂಡೊಯ್ಯಲು ರಾವಣನು ಪುತ್ರನಿಂದ ಬರಿದಾಗಿದ್ದ ಆ ರಥವನ್ನು ನೋಡಿದನು. ಆ ಪುತ್ರನು ಹತನಾದುದನ್ನು ನೋಡಿದಾಗ ಅವನ ಕಣ್ಣುಗಳು ಭಯದಿಂದ ಓಲಾಡಿದವು. ಶೋಕಮೋಹಾರ್ತನಾದ ರಾವಣನು ವೈದೇಹಿಯನ್ನು ಕೊಲ್ಲಲು ಮುಂದುವರೆದನು. ಅಶೋಕವನದಲ್ಲಿ ರಾಮನ ದರ್ಶನಕ್ಕಾಗಿ ಕಾತರಿಸಿ ನಿಂತಿದ್ದ ಅವಳ ಬಳಿಗೆ ದುಷ್ಟಾತ್ಮನು ಖಡ್ಗವನ್ನು ಹಿಡಿದು ಓಡಿಬಂದನು. ಆ ದುರ್ಬುದ್ಧಿಯ ಪಾಪನಿಶ್ಚಯವನ್ನು ಕಂಡ ಅವಿಂಧ್ಯನು ಆ ಸಂಕೃದ್ಧನನ್ನು ಕಾರಣವನ್ನು ಹೇಳಿ ತಣ್ಣಗಾಗಿಸಿದನು:

> "ಮಹಾರಾಜನಾಗಿ ಬೆಳಗುವ ಸ್ಥಿತಿಯಲ್ಲಿರುವವನು ಸ್ತ್ರೀಯನ್ನು ಕೊಲ್ಲಬಾರದು. ನಿನ್ನ ಗೃಹದಲ್ಲಿ ಬಂಧಳಾಗಿರುವ ಸ್ತ್ರೀಯು ಹತಳಾದಂತೆ. ದೇಹದಿಂದ ಬೇರೆಯಾಗಿರದಿದ್ದರೂ ಹತಳಾದಂತೆ ಎಂದು ನನ್ನ ಮತ. ಇವಳ ಗಂಡನನ್ನು ಕೊಲ್ಲು. ಅದರಿಂದ ಇವಳು ಹತಳಾಗುತ್ತಾಳೆ. ಸಾಕ್ಷಾತ್ ಶತಕ್ರತುವೂ ಕೂಡ ವಿಕ್ರಮದಲ್ಲಿ ನಿನ್ನ ಸಮನಲ್ಲ. ನೀನು ಯುದ್ಧದಲ್ಲಿ ಅನೇಕ ಬಾರಿ ಇಂದ್ರನನ್ನೂ ತ್ರಿದಶರನ್ನೂ ಭಯಪಡಿಸಿದ್ದೀಯೆ."

ಈ ರೀತಿ ಬಹುವಿಧದ ವಾಕ್ಯಗಳಿಂದ ಅವಿಂಧ್ಯನು ಕೃದ್ಧನಾದ ರಾವಣನನ್ನು ಸಂತಯಿಸಲು ಅವನ ವಚನವನ್ನು ಸ್ವೀಕರಿಸಿದನು. ಆ

ನಿಶಾಚರನು ತಾನೇ ಹೊರಡಲು ನಿಶ್ಚಯಿಸಿದನು. ಖಡ್ಗವನ್ನು ಹಿಡಿದು ನನ್ನ ರಥವನ್ನು ಸಿದ್ಧಪಡಿಸಿ ಎಂದು ಅಜ್ಞಾಪಿಸಿದನು.

## ರಾವಣ ವಧೆ

ಪ್ರಿಯ ಪುತ್ರನು ಸಂಹರಿಸಲ್ಪಟ್ಟಾಗ ಕೃದ್ಧನಾದ ದಶಗ್ರೀವನು ಹೇಮರತ್ನ ವಿಭೂಷಿತ ರಥದಲ್ಲಿ ನಿಂತು ಹೊರಟನು. ವಿವಿಧ ಆಯುಧಗಳನ್ನು ಹಿಡಿದ ಘೋರ ರಾಕ್ಷಸರಿಂದ ಸಂವೃತನಾಗಿ ಕಪಿಸೇನೆಯ ಮುಖಂಡರನ್ನು ಪುಡಿಮಾಡುತ್ತಾ ರಾಮನ ಮೇಲೆ ಎರಗಿದನು. ಸಂಕೃದ್ಧನಾಗಿ ವೇಗವಾಗಿ ಮುಂದುವರೆಯುತ್ತಿದ್ದ ಅವನನ್ನು ಮೈಂದ, ನೀಲ, ಅಂಗದ, ಹನೂಮಾನ್, ಮತ್ತು ಜಾಂಬವನು ತಮ್ಮ ಸೇನೆಗಳೊಂದಿಗೆ ತಡೆದರು. ಕರಡಿ-ವಾನರರ ಸೇನೆಗಳ ಮುಖಂಡರು ಆ ದಶಗ್ರೀವನ ಸೈನ್ಯವನ್ನು ದಶಗ್ರೀವನು ನೋಡುತ್ತಿದ್ದಂತೆಯೇ ವೃಕ್ಷಗಳಿಂದ ಧ್ವಂಸಮಾಡಿದರು. ತನ್ನ ಸೇನೆಯನ್ನು ಶತ್ರುಗಳು ವಧಿಸುತ್ತಿರುವುದನ್ನು ನೋಡಿ ಮಾಯಾವೀ ರಾಕ್ಷಸೇಶ್ವರ ರಾವಣನು ಮಾಯಾ ಯುದ್ಧವನ್ನು ಪ್ರದರ್ಶಿಸಿದನು. ಅವನ ದೇಹದಿಂದ ನೂರಾರು ಸಹಸ್ರಾರು ರಾಕ್ಷಸರು ಶರ, ಶಕ್ತಿ ಮತ್ತು ಈಟಿಗಳನ್ನು ಹಿಡಿದು ಹೊರಬರುವುದು ಕಂಡುಬಂದಿತು. ಆ ರಾಕ್ಷಸರೆಲ್ಲರನ್ನೂ ರಾಮನು ದಿವ್ಯಾಸ್ತ್ರಗಳಿಂದ ಸಾಯಿಸಿದನು. ರಾಕ್ಷಸನು ಮತ್ತೊಮ್ಮೆ ಮಾಯಾಯುದ್ಧವನ್ನು ಮಾಡಿದನು. ರಾಮನ ಮತ್ತು ಲಕ್ಷ್ಮಣನ ರೂಪಗಳನ್ನು ರಚಿಸಿ ದಶಾನನನು ರಾಮ-ಲಕ್ಷ್ಮಣರ ಮೇಲೆ

ಎರಗಿದನು. ಆಗ ರಾಮ-ಲಕ್ಷ್ಮಣರ ಬಳಿಸಾರಿ ನಿಶಾಚರರು ಎತ್ತರವಾಗಿದ್ದ ಧನುಸ್ಸುಗಳನ್ನು ಹಿಡಿದು ಆಕ್ರಮಣ ಮಾಡಿದರು. ರಾಕ್ಷಸೇಂದ್ರನ ಆ ಮಾಯೆಯನ್ನು ನೋಡಿ ಇಕ್ಷ್ವಾಕುನಂದನ ಸೌಮಿತ್ರಿಯು ಸಂಭ್ರಾಂತನಾಗದೇ ರಾಮನಿಗೆ ಈ ಮಹಾಮಾತನ್ನಾಡಿದನು:

> "ನಿನ್ನ ಪ್ರತಿರೂಪರಾದ ಪಾಪಿ ರಾಕ್ಷಸರನ್ನು ಕೊಲ್ಲು!"

ಆಗ ರಾಮನು ತನ್ನ ಪ್ರತಿರೂಪರಾದ ರಾಕ್ಷಸರನ್ನು ಕೊಂದನು. ಆಗ ಹರ್ಯಶ್ವಗಳನ್ನು ಕಟ್ಟಿದ ಆದಿತ್ಯವರ್ಚಸ ರಥದೊಂದಿಗೆ ಶಕ್ರಸಾರಥಿ ಮಾತಲಿಯು ರಣದಲ್ಲಿರುವ ರಾಮನಲ್ಲಿಗೆ ಆಗಮಿಸಿದನು. ಮಾತಲಿಯು ಹೇಳಿದನು:

> "ಕಾಕುತ್ಸ್ಥ! ಇದು ಹರ್ಯಶ್ವಗಳನ್ನು ಕಟ್ಟಿದ ಜೈತ್ರ ಎನ್ನುವ ಮಘೋನನ ಉತ್ತಮ ರಥ. ಈ ರಥದಲ್ಲಿ ಶಕ್ರನು ಸಮರದಲ್ಲಿ ನೂರಾರು ದೈತ್ಯ ದಾನವರನ್ನು ಸಂಹರಿಸಿದ್ದಾನೆ. ಕ್ಷಿಪ್ರವಾಗಿ ನಾನು ಸಹಾಯಕನಾಗಿರುವ ಈ ರಥವನ್ನೇರಿ ರಾವಣನನ್ನು ಕೊಲ್ಲು. ತಡಮಾಡಬೇಡ!"

ಇದನ್ನು ಕೇಳಿದ ರಾಘವನು ಮಾತಲಿಯ ಮಾತುಗಳನ್ನು ಸುಳ್ಳೆಂದು ಇದು ರಾಕ್ಷಸನ ಮಾಯೆಯೆಂದು ತಿಳಿಯಲು ವಿಭೀಷಣನು ಅವನಿಗೆ ಹೇಳಿದನು:



"ನರವ್ಯಾಘ್ರ! ಇದು ದುರಾತ್ಮ ರಾವಣನ ಮಾಯೆಯಲ್ಲ.
ಶೀಘ್ರವಾಗಿ ಇಂದ್ರನ ಈ ರಥವನ್ನು ಏರು."

ಆಗ ಕಾಕುತ್ಸ್ಥನು ಸಂತೋಷದಿಂದ ಹಾಗೆಯೇ ಮಾಡುತ್ತೇನೆ ಎಂದು ವಿಭೀಷಣನಿಗೆ ಹೇಳಿ ರೋಷದಿಂದ ರಥದಲ್ಲಿ ದಶಗ್ರೀವನ ಕಡೆ ಬೇಗನೇ ಮುಂದುವರೆದನು. ರಾವಣನಿಂದ ಸದೆಬಡಿಯಲ್ಪಟ್ಟ ಭೂತಗಳು ಹಾಹಾಕಾರ ಮಾಡುತ್ತಿರಲು ದಿವಿಯಲ್ಲಿ ನಗಾರಿಯ ಹೊಡೆತದೊಂದಿಗೆ ಸಿಂಹನಾದಗಳು ಕೇಳಿಬಂದವು. ಆ ನಿಶಾಚರನು ರಾಮನ ಮೇಲೆ ಮಹಾಘೋರವಾದ, ಮೇಲೆತ್ತಿ ಹಿಡಿದ ಬ್ರಹ್ಮದಂಡದಂತಿರುವ, ಮೊನೆಗಳುಳ್ಳ ಇಂದ್ರನ ವಜ್ರವನ್ನು ಬಿಟ್ಟನು. ಆ ಶೂಲವನ್ನು ಮಧ್ಯದಲ್ಲಿಯೇ ರಾಮನು ಹರಿತ ಬಾಣಗಳಿಂದ ತುಂಡರಿಸಿದನು. ಆ ದುಷ್ಕರ ಕರ್ಮವನ್ನು ನೋಡಿದ ರಾವಣನಲ್ಲಿ ಭಯವು ಆವೇಶಗೊಂಡಿತು. ಆಗ ಕೃದ್ಧನಾದ ದಶಗ್ರೀವನು ರಾಮನ ಮೇಲೆ ಹರಿತ ಬಾಣಗಳನ್ನು ಸಹಸ್ರಾರು ಸಂಖ್ಯೆಗಳಲ್ಲಿ ಮತ್ತು ವಿವಿಧ ಶಸ್ತ್ರಗಳನ್ನು – ಭುಶುಂಡಿ, ಶೂಲ, ಮುಸಲ, ಪರಶು, ವಿವಿಧಾಕರದ ಶಕ್ತಿಗಳನ್ನು, ಮತ್ತು ನೂರಾರು ಹರಿತ ಖಡ್ಗಗಳನ್ನು - ಬಿಸುಟನು. ರಾಕ್ಷಸ ದಶಗ್ರೀವನ ಆ ವಿಕೃತ ಮಾಯೆಯನ್ನು ನೋಡಿ ಭಯದಿಂದ ಸರ್ವ ವಾನರರೂ ಎಲ್ಲದಿಕ್ಕುಗಳಿಗೂ ಓಡಿಹೋದರು. ಆಗ ಕಾಕುತ್ಸ್ಥನು ಉತ್ತಮ ಪಂಖಗಳನ್ನುಳ್ಳ, ಉತ್ತಮ ಮುಖವುಳ್ಳ, ಬಂಗಾರದ ರೆಕ್ಕೆಗಳನ್ನುಳ್ಳ ಉತ್ತಮ ಶರವನ್ನು ಬತ್ತಳಿಕೆಯಿಂದ ತೆಗೆದು ಅದನ್ನು ಬ್ರಹ್ಮಾಸ್ತ್ರದಿಂದ ಮಂತ್ರಿಸಿದನು. ಆ ಶ್ರೇಷ್ಠ ಬಾಣವನ್ನು ರಾಮನು



ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸಿದುದನ್ನು ನೋಡಿ, ಶಕ್ರನ ನೇತೃತ್ವದಲ್ಲಿ ದೇವ-ಗಂಧರ್ವರು ಹರ್ಷಿತರಾದರು. ಬ್ರಹ್ಮಾಸ್ತ್ರವನ್ನು ಬಳಸಿದುದರಿಂದ ಆ ರಾಕ್ಷಸ ಶತ್ರುವಿನ ಆಯುಸ್ಸು ಸ್ವಲ್ಪಮಾತ್ರವೇ ಇದೆ ಎಂದು ದೇವ-ಗಂಧರ್ವ-ಕಿನ್ನರರು ಅಂದುಕೊಂಡರು. ಎತ್ತಿಹಿಡಿದ ಬ್ರಹದಂಡದಂತಿರುವ ಆ ಅಪ್ರತಿಮ ಓಜಸ್ಸಿನ ಘೋರವಾದ ರಾವಣನನ್ನು ಮುಗಿಸುವ ಶರವನ್ನು ರಾಮನು ಬಿಟ್ಟನು. ಅಗ್ನಿಯ ಮಹಾಜ್ವಾಲೆಯಂತೆ ಉರಿಯುತ್ತಿದ್ದ ಅದು ರಾಕ್ಷಸಶ್ರೇಷ್ಠನನ್ನು, ರಥ ಮತ್ತು ಸಾರಥಿಗಳೊಂದಿಗೆ ಸುಟ್ಟುಹಾಕಿತು. ಅಕ್ಲಿಷ್ಟಕರ್ಮಿ ರಾಮನಿಂದ ರಾವಣನು ಹತನಾದುದನ್ನು ನೋಡಿ ಗಂಧರ್ವರು ಮತ್ತು

ಚಾರಣರೊಂದಿಗೆ ತ್ರಿದಶರು ಹರ್ಷಿತರಾದರು. ಬ್ರಹ್ಮಾಸ್ತ್ರದ ತೇಜಸ್ಸಿನಿಂದ ಸರ್ವಲೋಕಗಳಿಂದಲೂ ಭ್ರಂಶಿತನಾದ ಆ ಮಹಾಭಾಗ ರಾವಣನಿಂದ ಪಂಚಭೂತಗಳು ಹೊರಬಿದ್ದವು. ಅವನ ಶರೀರದ ಧಾತುಗಳು, ಮಾಂಸ, ರುಧಿರಗಳು ಬ್ರಹ್ಮಾಸ್ತ್ರದಿಂದ ಸುಟ್ಟು, ಭಸ್ಮವೂ ಉಳಿಯದಂತೆ ಮಾಯವಾದವು.

ಆ ಸುರದ್ವಿಷ, ರಾಕ್ಷಸೇಂದ್ರ ಕ್ಷುದ್ರ ರಾವಣನನ್ನು ಕೊಂದು ಸೌಮಿತ್ರಿಯ ಸಹಿತ ರಾಮನು ತುಂಬಾ ಸಂತೋಷಗೊಂಡನು. ದಶಗ್ರೀವನು ಹತನಾಗಲು, ಋಷಿಗಳನ್ನು ಮುಂದಿಟ್ಟುಕೊಂಡು ದೇವತೆಗಳು ಆ ಮಹಾಭುಜನಿಗೆ ಆಶೀರ್ವಚನಗಳಿಂದ, ಜಯಯುಕ್ತಿಗಳಿಂದ ಅರ್ಚಿಸಿದರು. ಕಮಲಪತ್ರಾಕ್ಷ ರಾಮನನ್ನು ಎಲ್ಲ ದೇವತೆಗಳೂ ಹೊಗಳಿದರು. ಹಾಗೆಯೇ ಗಂಧರ್ವರು ಮತ್ತು ತ್ರಿದಶಾಲಯದವರು ಪುಷ್ಪವೃಷ್ಟಿಗಳಿಂದ ಮತ್ತು ವಾಚನಗಳಿಂದ ಹೊಗಳಿದರು. ಹೀಗೆ ರಾಮನನ್ನು ಪೂಜಿಸಿ ಅವರು ಬಂದಂತೆ ಹೊರಟುಹೋದರು. ಆ ಆಕಾಶವು ಒಂದು ಮಹಾ ಉತ್ಸವದಂತೆ ತೋರುತ್ತಿತ್ತು. ದಶಗ್ರೀವನನ್ನು ಕೊಂದು ಮಹಾಯಶ ಪ್ರಭು ರಾಮನು ಲಂಕೆಯನ್ನು ವಿಭೀಷಣನಿಗಿತ್ತನು. ಆಗ ಸೀತೆಯನ್ನು ಮುಂದಿರಿಸಿಕೊಂಡು, ವಿಭೀಷಣನನ್ನೂ ಮುಂದಿರಿಸಿಕೊಂಡು, ಅವಿಂಧ್ಯ ಎಂಬ ಹೆಸರಿನ ಸುಪ್ರಜ್ಞ, ವೃದ್ಧ ಅಮಾತ್ಯನು ಆಗಮಿಸಿ ದೀನನಾಗಿ ನಿಂತಿದ್ದ ಮಹಾತ್ಮ ಕಾಕುತ್ಸ್ಥನಿಗೆ

"ಮಹಾತ್ಮ ! ಸದಾಚಾರಿಯಾದ ಈ ದೇವಿ ಜಾನಕಿಯನ್ನು ಸ್ವೀಕರಿಸು"

ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ಇಕ್ಷ್ವಾಕುನಂದನನು ಉತ್ತಮ ರಥದಿಂದಿಳಿದು, ಕಣ್ಣೀರಿನಲ್ಲಿ ಅಡಗಿದ್ದ ಸೀತೆಯನ್ನು ನೋಡಿದನು. ಆ ಚಾರುಸರ್ವಾಂಗೀ, ಶೋಕಕರ್ಶಿತಳಾಗಿ ನಿಂತಿದ್ದ, ಸರ್ವಾಂಗಗಳಲ್ಲಿಯೂ ಕೊಳೆಯಿಂದ ಕೂಡಿದ್ದ, ಜಡೆ ಗಂಟುಕಟ್ಟಿ, ಕಪ್ಪುಬಣ್ಣದ ವಸ್ತ್ರವನ್ನುಟ್ಟಿದ್ದ ಅವಳನ್ನು ನೋಡಿ ರಾಮನು ವೈದೇಹಿಯು ಪರರಿಂದ ಸ್ಪರ್ಶಿತಳಾಗಿದ್ದಾಳೆಂದು ಶಂಕಿಸಿ ಹೇಳಿದನು:

"ವೈದೇಹೀ ! ಹೋಗು ! ನೀನು ಮುಕ್ತಳಾಗಿದ್ದೀಯೆ ! ನಾನು ಏನು ಮಾಡಬೇಕಾಗಿತ್ತೋ ಅದನ್ನು ಮಾಡಿದ್ದೇನೆ. ನನ್ನನ್ನು ಪತಿಯನ್ನಾಗಿ ಪಡೆದ ನೀನು ರಾಕ್ಷಸನ ಮನೆಯಲ್ಲಿ ಮುದುಕಿಯಾಗಬಾರದು ಎಂದು ನಾನು ಆ ನಿಶಾಚರನನ್ನು ಕೊಂದೆ. ಧರ್ಮವಿನಿಶ್ಚಯವನ್ನು ತಿಳಿದಿರುವ ನನ್ನಂಥವನು ಹೇಗೆ ತಾನೇ, ಇನ್ನೊಬ್ಬನ ಕೈಗೆ ಹೋದ ನಾರಿಯನ್ನು ಮುಹೂರ್ತ ಸಮಯಕ್ಕಾದರೂ ಸ್ವೀಕರಿಸಿಯಾನು ? ನೀನು ಸುವೃತ್ತಳಾಗಿದ್ದೀಯೋ ಅಸುವೃತ್ತಳಾಗಿದ್ದೀಯೋ ನಾನು ಇಂದು ನಾಯಿನೆಕ್ಕಿದ ಹವಿಸ್ಸಿನಂತಿರುವ ನಿನ್ನನ್ನು ಭೋಗಿಸಲಾರೆ."

ಆಗ ಆ ದಾರುಣ ಮಾತನ್ನು ಕೇಳಿ ಆ ದೇವಿ ಬಾಲೆಯು ವ್ಯಥಿತಳಾಗಿ ತಕ್ಷಣವೇ ಕತ್ತರಿಸಿದ ಬಾಳೆಯಮರದಂತೆ ಕೆಳಗುರುಳಿ ಬಿದ್ದಳು. ಹರ್ಷದಿಂದ ಹುಟ್ಟಿದ್ದ ಮುಖದಲ್ಲಿನ ಕೆಂಪು ಒಂದೇ ಕ್ಷಣದಲ್ಲಿ ಕನ್ನಡಿಯ ಮೇಲೆ ಊದಿದಾಗ ಆಗುವಂತೆ ಮುಸುಕಿ ನಷ್ಟವಾಯಿತು. ರಾಮನಾಡಿದುದನ್ನು ಕೇಳಿದ ಎಲ್ಲ ಕಪಿಗಳೂ, ಲಕ್ಷ್ಮಣನೂ ಸೇರಿ ಸ್ಥಬ್ಧರಾಗಿ ನಿಂತುಬಿಟ್ಟರು. ಸತ್ತವರಂತಾದರು. ಆಗ ದೇವ, ವಿಶುದ್ಧಾತ್ಮ, ಚತುರ್ಮುಖ, ಜಗತ್ಸ್ರಷ್ಟಾ ಬ್ರಹ್ಮನು, ಹಾಗೆಯೇ, ಶಕ್ರ, ಅಗ್ನಿ, ವಾಯು, ಯಮ, ವರುಣ, ಭಗವಾನ್ ಯಕ್ಷಾಧಿಪತಿ, ಮತ್ತು ಅಮಲ ಸಪ್ತರ್ಷಿಗಳೂ ವಿಮಾನದಲ್ಲಿ ರಾಘವನಿಗೆ ಕಾಣಿಸಿಕೊಂಡರು. ದಿವ್ಯವಾದ ಮೂರ್ತಿಯಂತೆ ಹೊಳೆಯುತ್ತಿದ್ದ ರಾಜಾ ಧಶರಥನೂ ಕೂಡ ಹಂಸಗಳನ್ನು ಕಟ್ಟಿದ್ದ, ಮಹಾಬೆಲೆಯ, ಹೊಳೆಯುತ್ತಿದ್ದ, ವಿಮಾನದಲ್ಲಿ ಕಾಣಿಸಿಕೊಂಡನು. ಆಗ ಅಂತರಿಕ್ಷವು ಆ ಎಲ್ಲ ದೇವ-ಗಂಧರ್ವಸಂಕುಲಗಳಿಂದ ಕೂಡಿ ಶರದೃತುವಿನಲ್ಲಿ ತಾರೆಗಳಿಂದ ಕೂಡಿದ ನಭಸ್ಥಲದಂತೆ ಶೋಭಿಸಿತು. ಆಗ ಅವರ ಮಧ್ಯೆ ಯಶಸ್ವಿನೀ ಕಲ್ಯಾಣೀ ವೈದೇಹಿಯು ಎದ್ದು ವಿಶಾಲ ವಕ್ಷಸ ರಾಮನಿಗೆ ಈ ಮಾತುಗಳನ್ನಾಡಿದಳು:

> “ರಾಜಪುತ್ರ! ನಾನು ನಿನ್ನ ಮೇಲೆ ಕೋಪಮಾಡುತ್ತಿಲ್ಲ! ಸ್ತ್ರೀ ಮತ್ತು ಪುರುಷರ ಗತಿಯು ನನಗೆ ತಿಳಿದೇಇದೆ. ನನ್ನ ಈ ಮಾತುಗಳನ್ನು ಕೇಳು. ನಾನೇದರೂ ಪಾಪವನ್ನು ಮಾಡಿದ್ದರೆ ಇರುವವುಗಳ ಒಳಗೆ ಚರಿಸುತ್ತಿರುವ, ಸದಾ ಚಂಚಲವಾಗಿ

ಚಲಿಸುತ್ತಲೇ ಇರುವ ಪ್ರಾಣವು ನನ್ನನ್ನು ಈಗಲೇ ತೊರೆಯಲಿ! ನಾನೇದರೂ ಪಾಪವನ್ನು ಮಾಡಿದ್ದರೆ, ಅಗ್ನಿ, ಆಪ, ಆಕಾಶ, ಪೃಥ್ವಿ ಮತ್ತು ವಾಯುವೂ ಕೂಡ ನನ್ನ ಪ್ರಾಣವನ್ನು ತೊರೆಯಲಿ!"

ಆಗ ಅಂತರಿಕ್ಷದಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಮೊಳಗುತ್ತಾ, ಪುಣ್ಯವೂ ಆ ಮಹಾತ್ಮ ವಾನರರಿಗೆ ಸಂಹರ್ಷವನ್ನುತರುವ ಒಂದು ವಾಣಿಯಾಯಿತು. ವಾಯುವು ಹೇಳಿದನು:

"ಭೋ ಭೋ ರಾಘವ! ಇದು ಸತ್ಯ! ನಾನು ಸದಾಗತಿಯಲ್ಲಿರುವ ವಾಯು! ಮೈಥಿಲಿಯು ಅಪಾಪೀ! ಭಾರ್ಯೆಯೊಂದಿಗೆ ಕೂಡು." ಅಗ್ನಿಯು ಹೇಳಿದನು: "ರಘುನಂದನ! ಇರುವವುಗಳ ಶರೀರದೊಳಗಿರುವವನು ನಾನು! ಮೈಥಿಲಿಯು ಅತಿ ಸೂಕ್ಷವಾದ ಅಪರಾಧವನ್ನೂ ಎಸಗಿಲ್ಲ!" ವರುಣನು ಹೇಳಿದನು: "ರಾಘವ! ಇರುವವುಗಳ ದೇಹಗಳಲ್ಲಿರುವ ರಸವು ನನ್ನಿಂದಲೇ ಬಂದಿರುವುದು. ನಾನು ನಿನಗೆ ಹೇಳುತ್ತಿದ್ದೇನೆ. ಮೈಥಿಲಿಯನ್ನು ಹಿಂದೆ ತೆಗೆದುಕೋ!" ಬ್ರಹ್ಮನು ಹೇಳಿದನು: "ಪುತ್ರ! ರಾಜರ್ಷಿಯೂ ಧರ್ಮಿಣಿಯೂ, ಒಳ್ಳೆಯ ಮಾರ್ಗದಲ್ಲಿ ನಡೆಯುವವನೂ ಆದ ನಿನ್ನಿಂದ ಇದು ಆಶ್ಚರ್ಯವೇನಲ್ಲ! ಆದರೂ ನನ್ನ ಈ ಮಾತುಗಳನ್ನು ಕೇಳು. ನೀನು ದೇವ, ಗಂಧರ್ವ, ನಾಗ, ಯಕ್ಷ,

ದಾನವ ಮತ್ತು ಮಹರ್ಷಿಗಳ ಶತ್ರುವನ್ನು ಕೆಳಗುರುಳಿಸಿದ್ದೀಯೆ. ಹಿಂದೆ ನನ್ನ ಪ್ರಸಾದದಿಂದ ಸರ್ವಭೂತಗಳಿಗೂ ಅವಧ್ಯನಾಗಿರುವ ಈ ಪಾಪಕರ್ಮಿಯನ್ನು ಯಾವುದೋ ಕಾರಣದಿಂದ ಕೆಲ ಕಾಲ ಉಪೇಕ್ಷಿಸಿಯಾಗಿತ್ತು. ಅನಂತರ ಆ ದುರಾತ್ಮನು ತನ್ನದೇ ವಧೆಗೆ ಕಾರಣಳಾದ ಸೀತೆಯನ್ನು ಅಪಹರಿಸಿದನು. ಅವಳನ್ನು ನಾನು ನಲಕೂಬರನ ಶಾಪದಿಂದ ರಕ್ಷಿಸಿದೆನು. ಹಿಂದೆ ಅವನಿಗೆ ಹೇಳಲಾಗಿತ್ತು – ತನ್ನನ್ನು ಬಯಸದೇ ಇದ್ದ ಯಾವ ಸ್ತ್ರೀಯನ್ನು ಕಾಮಿಸಿದರೂ ಅವನ ದೇಹವು ನೂರು ತುಂಡಾಗುತ್ತದೆ. ಇದರಲ್ಲಿ ಶಂಕೆಪಡಬೇಡ! ಇವಳನ್ನು ಸ್ವೀಕರಿಸುವ ಕಾರ್ಯಮಾಡು. ಅಮರಪ್ರಭನಾದ ನೀನು ದೇವತೆಗಳ ಮಹಾಕಾರ್ಯವನ್ನು ಎಸಗಿದ್ದೀಯೆ."

ದಶರಥನು ಹೇಳಿದನು:

"ಸಂತೋಷಗೊಂಡಿದ್ದೇನೆ. ವತ್ಸ! ನಿನಗೆ ಮಂಗಳವಾಗಲಿ! ನಾನು ನಿನ್ನ ತಂದೆ ದಶರಥ! ಅನುಮತಿಯನ್ನು ನೀಡುತ್ತಿದ್ದೇನೆ. ರಾಜ್ಯವನ್ನಾಳು!"

ರಾಮನು ಹೇಳಿದನು:

"ರಾಜೇಂದ್ರ! ನನ್ನ ಜನಕನಾಗಿದ್ದರೆ ನಿನಗೆ ಅಭಿವಾದನೆಗಳು. ನಿನ್ನ ಶಾಸನದಂತೆ ನಾನು ರಮ್ಯವಾದ ಅಯೋಧ್ಯಾಪುರಿಗೆ

ಹೋಗುತ್ತೇನೆ."

ಸಂತೋಷಗೊಂಡ ತಂದೆಯು ಅವನಿಗೆ ಹೇಳಿದನು:

"ರಕ್ತಾಂತಲೋಚನ ರಾಮ! ಹೋಗಿ ಅಯೋಧ್ಯೆಯನ್ನು ಆಳು!"

ಆಗ ದೇವತೆಗಳಿಗೆ ನಮಸ್ಕರಿಸಿ, ಸುಹೃದಯರಿಂದ ಅಭಿನಂದಿತನಾಗಿ ರಾಮನು ಪೌಲೋಮಿಯೊಂದಿಗೆ ಇಂದ್ರನಂತೆ ಭಾರ್ಯೆಯನ್ನು ಕೂಡಿದನು. ಅನಂತರ ಪರಂತಪನು ಅವಿಂಧ್ಯನಿಗೆ ವರವನ್ನಿತ್ತನು ಮತ್ತು ರಾಕ್ಷಸೀ ತ್ರಿಜಟೆಗೆ ಸಂಪತ್ತು ಗೌರವಗಳನ್ನಿತ್ತನು. ಶಕ್ರಪ್ರಮುಖ ದೇವತೆಗಳಿಂದ ಆವೃತನಾದ ಬ್ರಹ್ಮನು ಹೇಳಿದನು:

"ಕೌಸಲ್ಯೆಯ ಮಗನೇ! ನೀನು ಬಯಸುವ ಯಾವ ವರವನ್ನು ಇಂದು ನಾನು ನಿನಗೆ ಕೊಡಲಿ?"

ರಾಮನು ಧರ್ಮದಲ್ಲಿ ನೆಲೆಯಾಗಿರುವಂತೆ, ಶತ್ರುಗಳ ಮೇಲೆ ಜಯ, ಮತ್ತು ರಾಕ್ಷಸರಿಂದ ಹತರಾದ ವಾನರರ ಪುನರ್ಜೀವವನ್ನು ವರಗಳಾಗಿ ವರಿಸಿದನು. ಹಾಗೆಯೇ ಆಗಲೆಂದು ಬ್ರಹ್ಮನು ಹೇಳಲು, ವಾನರರು ಚೇತನವನ್ನು ಪಡೆದು ಮೇಲೆದ್ದರು. ಮಹಾಭಾಗೆ ಸೀತೆಯೂ ಕೂಡ ಹನುಮತನಿಗೆ ವರವನ್ನಿತ್ತಳು:

"ಮಗನೇ! ರಾಮನ ಕೀರ್ತಿಯಿರುವವರೆಗೆ ನೀನು ಜೀವಿಸಿರುತ್ತೀಯೆ! ನನ್ನ ಪ್ರಸಾದದಿಂದ ಸದಾ ದಿವ್ಯ

ಉಪಭೋಗಗಳು ನಿನಗೆ ಕಾಯುತ್ತಿರುತ್ತವೆ!”

ಆಗ ಅವರು ಆ ಅಕ್ಲಿಷ್ಟಕರ್ಮಿಗಳನ್ನು ನೋಡುತ್ತಿರಲು ಶಕ್ರನನ್ನು ಮುಂದಿಟ್ಟುಕೊಂಡು ಎಲ್ಲ ದೇವತೆಗಳೂ ಅಂತರ್ಧಾನರಾದರು. ಸುಹೃದಯರ ಮಧ್ಯೆ ಜಾನಕಿಯ ಜೊತೆಗಿದ್ದ ರಾಮನನ್ನು ನೋಡಿ ಪರಮಪ್ರೀತನಾದ ಶಕ್ರಸಾರಥಿಯು ಹೀಗೆ ಹೇಳಿದನು:

“ಸತ್ಯಪರಾಕ್ರಮಿ! ದೇವತೆಗಳ, ಗಂಧರ್ವರ, ಯಕ್ಷರ, ಮನುಷ್ಯರ, ಅಸುರರ ಮತ್ತು ನಾಗಗಳ ದುಃಖವನ್ನು ಇಂದು ನೀನು ಕಳೆದಿದ್ದೀಯೆ! ದೇವ, ಅಸುರ, ಗಂಧರ್ವ, ಯಕ್ಷ, ರಾಕ್ಷಸ, ಪನ್ನಗಳೊಂದಿಗೆ ಲೋಕಗಳು ಭೂಮಿಯಿರುವವರೆಗೆ ನಿನ್ನ ಕಥೆಯನ್ನು ಹೇಳುತ್ತಿರುತ್ತಾರೆ.”

ಹೀಗೆ ಹೇಳಿ ಶಸ್ತ್ರಭೃತರಲ್ಲಿ ಶ್ರೇಷ್ಠ ರಾಮನಿಂದ ಆಜ್ಞೆಪಡೆದು ಸಂಪೂಜಿಸಿ ಆದಿತ್ಯವರ್ಚಸ ರಥದಲ್ಲಿ ಹೊರಟುಹೋದನು.

ಆಗ ರಾಮನು ಸೀತೆಯನ್ನು ಮುಂದಿರಿಸಿಕೊಂಡು ಸೌಮಿತ್ರಿಯೊಡನೆ ಸುಗ್ರೀವಪ್ರಮುಖರಿಂದೊಡಗೂಡಿದ ಸರ್ವ ವಾನರರೊಂದಿಗೆ ಲಂಕೆಯ ರಕ್ಷಣೆಯನ್ನು ಏರ್ಪಡಿಸಿ, ವಿಭೀಷಣನನ್ನು ಮುಂದಿಟ್ಟುಕೊಂಡು, ಸೇತುವಿನ ಮೂಲಕ, ಆಕಾಶದಲ್ಲಿ ಹೋಗುವ, ಬೇಕಾದರಲ್ಲಿ ಹೋಗಬಲ್ಲ ವಿರಾಜಮಾನ ಪುಷ್ಪಕ ವಿಮಾನದಲ್ಲಿ, ಅಮಾತ್ಯರಿಂದ ಸಂವೃತನಾದ ಮುಖ್ಯನಂತೆ, ಪುನಃ ಆ ಮಕರಾಲಯವನ್ನು ದಾಟಿದನು. ಎಲ್ಲಿ ಪಾರ್ಥಿವನು ಉಳಿದಿದ್ದನೋ ಅದೇ



ಸಮುದ್ರತೀರದಲ್ಲಿ ಧರ್ಮಾತ್ಮನು ಸರ್ವ ವಾನರರ ಸಹಿತ ಉಳಿದುಕೊಂಡನು. ಸರಿಯಾದ ಸಮಯದಲ್ಲಿ ರಾಘವನು ಅವರನ್ನು ಒಟ್ಟುಗೂಡಿಸಿ, ಗೌರವಿಸಿ ರತ್ನಗಳಿಂದ ಎಲ್ಲರನ್ನೂ ಸಂತೋಷಗೊಳಿಸಿ ಕಳುಹಿಸಿಕೊಟ್ಟನು. ಆ ವಾನರೇಂದ್ರರು, ಗೋಪುಚ್ಛರು ಮತ್ತು ಕರಡಿಗಳು ಹೋದನಂತರ, ರಾಮನು ಸುಗ್ರೀವನ ಸಹಿತ ಕಿಷ್ಕಿಂಧೆಗೆ ಮರಳಿ ಆಗಮಿಸಿದನು. ಸುಗ್ರೀವನ ಸಹಿತ ವಿಭೀಷಣನು ಅನುಸರಿಸಿ ಬರುತ್ತಿರಲು ಪುಷ್ಪಕ  ವಿಮಾನದಿಂದ ವೈದೇಹಿಗೆ ವನವನ್ನು ತೋರಿಸಿದನು. ಪ್ರಹರಿಗಳಲ್ಲಿ ಶ್ರೇಷ್ಠ ರಾಮನು ಕಿಷ್ಕಿಂಧೆಯನ್ನು ತಲುಪಿ ಕೃತಕರ್ಮಿಣಿ ಅಂಗದನನ್ನು ಯುವರಾಜನನ್ನಾಗಿ ಅಭಿಷೇಕಿಸಿದನು. ಅವರ ಸಹಿತ ಮತ್ತು ಸೌಮಿತ್ರಿಯನ್ನು ಕೂಡಿಕೊಂಡು ರಾಮನು ಹೋದಮಾರ್ಗದಿಂದಲೇ ತನ್ನ ಪುರದ ಕಡೆ ಪ್ರಯಾಣಿಸಿದನು.

ಅಯೋಧ್ಯಾಪುರಿಯನ್ನು ತಲುಪಿ ರಾಷ್ಟ್ರಪತಿಯು ಭರತನಿಗೆ ದೂತನಾಗಿ ಹನೂಮಂತನನ್ನು ಕಳುಹಿಸಿದನು. ಎಲ್ಲ ಇಂಗಿತಗಳನ್ನೂ ಲಕ್ಷಿಸಿ ಅವನಿಗೆ ಪ್ರಿಯವಿಷಯವನ್ನು ತಿಳಿಸಿ ವಾಯುಪುತ್ರನು ಪುನಃ ಬರಲು ನಂದೀಗ್ರಾಮಕ್ಕೆ ಬಂದನು. ಅವನು ಅಲ್ಲಿ ಮಲಿನಾಂಗನಾದ ಚೀರವಸ್ತ್ರಗಳನ್ನು ಧರಿಸಿ ಅಗ್ರಜನ ಪಾದುಕೆಗಳ ಎದುರು ಆಸನದಲ್ಲಿ ಕುಳಿತಿದ್ದ ಭರತನನ್ನು ಕಂಡನು. ಆಗ ಭರತ ಮತ್ತು ವೀರ್ಯವಾನ್ ಶತ್ರುಘ್ನನನ್ನು ಸೇರಿ ಸೌಮಿತ್ರಿಯೊಡನೆ ರಾಘವನು ಸಂತೋಷಗೊಂಡನು. ಹಾಗೆಯೇ ಭರತ-ಶತ್ರುಘ್ನರೂ ಅವರಿಬ್ಬರನ್ನೂ ಗುರುಗಳ ಸಹಿತ ವೈದೇಹಿಯನ್ನೂ ಕಂಡು ಹರ್ಷಿತರಾದರು. ಆಗ



ಭರತನು ಸತ್ಕೃತವಾದ ನ್ಯಾಸವಾಗಿಟ್ಟುಕೊಂಡಿದ್ದ ರಾಜ್ಯವನ್ನು ಪರಮ ಮುದದಿಂದ ಅವನಿಗೆ ಹಿಂದಿರುಗಿಸಿದನು. ಅನಂತರ ವೈಷ್ಣವ ನಕ್ಷತ್ರದ ಮಂಗಳ ಮುಹೂರ್ತದಲ್ಲಿ ವಸಿಷ್ಠ-ವಾಮದೇವರು ಜೊತೆಗೂಡಿ ಆ ಶೂರನನ್ನು ಅಭಿಷೇಕಿಸಿದರು. ಅಭಿಷಿಕ್ತನಾದ ಅವನು ಸುಹೃಜ್ಜನರೊಂದಿಗೆ ಕಪಿಶ್ರೇಷ್ಠ ಸುಗ್ರೀವನನ್ನೂ ಪೌಲಸ್ತ್ಯ ವಿಭೀಷಣನನ್ನೂ ಅನ್ಯರನ್ನೂ ಮನೆಗಳ ಕಡೆ, ವಿವಿಧರತ್ನಗಳಿಂದ ಅಭ್ಯರ್ಚಿಸಿ, ಸಂತೋಷಗೊಳಿಸಿ, ತನ್ನ ಕರ್ತವ್ಯದ  ಕುರಿತು ಯೋಚಿಸಿ ದುಃಖದಿಂದ ಕಳುಹಿಸಿಕೊಟ್ಟನು. ಪುಷ್ಪಕ ವಿಮಾನವನ್ನೂ ಕೂಡ ಪೂಜಿಸಿ ಪ್ರೀತಿಯಿಂದ ರಾಘವ ರಘುನಂದನನು ವೈಶ್ರವಣನಿಗೆ ನೀಡಿದನು. ಅನಂತರ ದೇವರ್ಷಿಗಳ ಸಹಿತ ಗೋಮತೀ ನದಿಯ ತೀರದಲ್ಲಿ ನಿರರ್ಗಲ ಮೂರುರೀತಿಯ ದಕ್ಷಿಣೆಗಳನ್ನಿತ್ತು ಹತ್ತು ಅಶ್ವಮೇಧಯಾಗಗಳನ್ನು ನಡೆಸಿದನು.

***

ಮಾರ್ಕಂಡೇಯನು ಯುಧಿಷ್ಠಿರನಿಗೆ ಹೇಳಿದನು:

> “ಹೀಗೆ ಹಿಂದೆ ಅಮಿತತೇಜಸ ರಾಮನು ಅತ್ಯುಗ್ರವಾದ ವ್ಯಸನವನ್ನು ಹೊಂದಿ ವನವಾಸವನ್ನು ಮಾಡಿದನು. ಶೋಕಿಸಬೇಡ! ಕ್ಷತ್ರಿಯನಾಗಿದ್ದೀಯೆ! ಬಾಹುವೀರ್ಯವನ್ನು ಆಶ್ರಯಿಸಿ ಉರಿಯುತ್ತಿರುವ ನಿರ್ಣಾಯಕ ಮಾರ್ಗದಲ್ಲಿ ನಡೆಯುತ್ತಿರುವೆ. ನಿನ್ನಲ್ಲಿ ಏನೂ, ಪರಮಾಣುವಿನ

ಮಾತ್ರದಷ್ಟೂ, ದೋಷವಿಲ್ಲ. ಸುರಾಸುರರೊಂದಿಗೆ ಇಂದ್ರನೂ ಕೂಡ ಈ ಮಾರ್ಗದಲ್ಲಿ ಹಿಂಜರಿಯುತ್ತಾನೆ. ವಜ್ರಪಾಣಿಯು ಮರುತ್ತರೊಂದೊಡಗೂಡಿ ವೃತ್ರನನ್ನು, ದುರ್ಧರ್ಷ ನಮುಚಿಯನ್ನೂ, ರಾಕ್ಷಸಿ ದೀರ್ಘಜಿಹ್ವೆಯನ್ನೂ ಸಂಹರಿಸಿದನು. ಸಹಾಯವಿದ್ದವನಿಗೆ ಒಳ್ಳೆಯದೆಲ್ಲವೂ ಆಗುತ್ತದೆ. ಧನಂಜಯನನ್ನು ಸಹೋದರನನ್ನಾಗಿ ಪಡೆದಿರುವವನಿಗೆ ಯುದ್ಧದಲ್ಲಿ ಜಯಿಸದೇ ಇರುವುದಾದರೂ ಏನಿದೆ? ಪರಂತಪ! ಈ ಭೀಮಪರಾಕ್ರಮಿ ಭೀಮನು ಬಲಿಗಳಲ್ಲಿಯೇ ಶ್ರೇಷ್ಠನು. ಮಾದ್ರವತೀ ಸುತರೀರ್ವ ಯಮಳರು ಯುವಕರು ಮತ್ತು ಮಹೇಷ್ವಾಸರು. ಇವರ ಸಹಾಯವಿರುವಾಗ ನೀನು ಏಕೆ ವಿಷಾದಿಸುತ್ತಿರುವೆ? ಮರುದ್ಗಣಗಳೊಂದಿಗೆ ಇಂದ್ರನ ಸೇನೆಯನ್ನೂ ಜಯಿಸಬಲ್ಲ ಈ ಮಹೇಷ್ವಾಸ ದೇವರೂಪಿಗಳನ್ನು ಸಹಾಯಕರನ್ನಾಗಿ ಪಡೆದ ನೀನು ರಣದಲ್ಲಿ ಅಮಿತ್ರರೆಲ್ಲರನ್ನೂ ಜಯಿಸುತ್ತೀಯೆ. ಬಲಶಾಲಿಯಾದ, ವೀರ್ಯದಿಂದ ಮತ್ತನಾಗಿದ್ದ ದುರಾತ್ಮ ಸೈಂಧವನಿಂದ ಅಪಹೃತಳಾಗಿದ್ದ ಈ ದ್ರುಪದಿ ಕೃಷ್ಣೆಯನ್ನಾದರೂ ನೀನು ನೋಡು. ಆದರೆ ಮಹಾತ್ಮರು ಸುದುಷ್ಕರ ಕಾರ್ಯವನ್ನೆಸಗಿ ರಾಜ ಜಯದ್ರಥನನ್ನು ಸೋಲಿಸಿ ವಶಪಡಿಸಿಕೊಂಡರು. ಅಸಹಾಯಕನಾದ ರಾಮನು ಭೀಮವಿಕ್ರಮ ರಾಕ್ಷಸ ದಶಗ್ರೀವನನ್ನು ಯುದ್ಧದಲ್ಲಿ ಕೊಂದೇ

ವೈದೇಹಿಯನ್ನು ಪುನಃ ಪಡೆದನು. ಅವನಿಗೆ ಬೇರೆಯೇ ಜಾತಿಯ ಕಪಿಗಳು, ಕಪ್ಪು ಮುಖದ ಕರಡಿಗಳು ಮಿತ್ರರಾಗಿದ್ದರು. ಇದರ ಕುರಿತಾದರೂ ಬುದ್ಧಿಯಿಂದ ಚಿಂತಿಸು. ಆದುದರಿಂದ ನೀನು ಶೋಕಿಸಬಾರದು. ನಿನ್ನಂಥಹ ಮಹಾತ್ಮರು ಶೋಕಿಸುವುದಿಲ್ಲ.”

ಧೀಮತ ಮಾರ್ಕಂಡೇಯನಿಂದ ಹೀಗೆ ಆಶ್ವಾಸನೆಯನ್ನು ಪಡೆದ ರಾಜನು ದುಃಖವನ್ನು ತೊರೆದನು.

# ಪತಿವ್ರತಾಮಹಾತ್ಮೆ: ಸಾವಿತ್ರಿ-ಸತ್ಯವಾನರ ಕಥೆ

[ಸತ್ಯವಾನ-ಸಾವಿತ್ರಿಯರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ದ್ರೌಪದೀಹರಣ ಪರ್ವ (ಅಧ್ಯಾಯ ೨೭೭-೨೮೩) ದಲ್ಲಿ ಬರುತ್ತದೆ. ಈ ಕಥೆಯನ್ನು ಋಷಿ ಮಾರ್ಕಂಡೇಯನು ಯುಧಿಷ್ಠಿರನಿಗೆ ಹೇಳಿದನು.]

ಜಯದ್ರಥನನ್ನು ಸೋಲಿಸಿ, ದ್ರೌಪದಿಯನ್ನು ಹಿಂದೆ ಪಡೆದ ಯುಧಿಷ್ಠಿರನು ದ್ರೌಪದೀಹರಣದ ಪ್ರಕರಣದಿಂದ ಅತ್ಯಂತ ದುಃಖಿತನಾಗಿ ಮಾರ್ಕಂಡೇಯನನ್ನು ಪ್ರಶ್ನಿಸಿದನು:

“ಮಹಾಮುನೇ! ದ್ರುಪದಾತ್ಮಜೆಯ ಕುರಿತು ನಾನು ಎಷ್ಟು ಶೋಕಿಸುತ್ತಿದ್ದೇನೋ ಅಷ್ಟು ನನ್ನ ಕುರಿತಾಗಲೀ, ನನ್ನ ಈ ಭ್ರಾತೃಗಳ ಕುರಿತಾಗಲೀ ಅಥವಾ ಕಳೆದು ಹೋದ ರಾಜ್ಯದ ಕುರಿತಾಗಲೀ ಶೋಕಿಸುತ್ತಿಲ್ಲ. ದ್ಯೂತದಲ್ಲಿ ದುರಾತ್ಮರಿಂದ ಕಷ್ಟಕ್ಕೊಳಗಾಗಿದ್ದ ನಮ್ಮನ್ನು ಪಾರುಮಾಡಿದ ಕೃಷ್ಣೆಯನ್ನು ಪುನಃ ಜಯದ್ರಥನು ಬಲಾತ್ಕಾರವಾಗಿ ಅಪಹರಿಸಿದನು. ಪತಿವ್ರತೆ ದ್ರುಪದಾತ್ಮಜೆಯ ಹಾಗಿದ್ದ ಇದಕ್ಕೂ ಮೊದಲು ನೀನು ನೋಡಿದ ಅಥವಾ ಕೇಳಿದ ಸೀಮಂತಿನಿ ಯಾರಾದರೂ ಇದ್ದಾರೆಯೇ?”

ಈ ಪ್ರಶ್ನೆಗೆ ಉತ್ತರವಾಗಿ ಮಾರ್ಕಂಡೇಯನು ಯುಧಿಷ್ಠಿರನಿಗೆ ಕುಲಸ್ತ್ರೀಯರ ಮಹಾಭಾಗ್ಯವೆಲ್ಲವನ್ನೂ ಹೊಂದಿದ್ದ ರಾಜಕನ್ಯೆ ಸಾವಿತ್ರಿಯ ಕುರಿತು ಹೇಳಿದನು.

## ರಾಜಾ ಅಶ್ವಪತಿಯು ಸಾವಿತ್ರಿಯ ವರದಿಂದ ಮಗಳನ್ನು ಪಡೆದುದು, ಮಗಳು ಸಾವಿತ್ರಿಯು ವರಾನ್ವೇಷಣೆಗೆ ಹೋದುದು

ಮದ್ರದಲ್ಲಿ ಬ್ರಾಹ್ಮಣರ ಮತ್ತು ಶರಣರ ಸಾನ್ನಿಧ್ಯದಲ್ಲಿ ಧರ್ಮಾತ್ಮ ಸತ್ಯಸಂಧ ಜಿತೇಂದ್ರಿಯ ಅಶ್ವಪತಿ ಎನ್ನುವ ರಾಜನೋರ್ವನಿದ್ದನು. ಅವನು ಯಜ್ಞಗಳನ್ನು ಮಾಡುತ್ತಿದ್ದನು; ಮುಂದೆನಿಂತು ದಾನಗಳನ್ನು ನೀಡುತ್ತಿದ್ದನು; ಪೌರ-ಜಾನಪದರ ಪ್ರಿಯನಾಗಿದ್ದನು; ಮತ್ತು ಸರ್ವಭೂತಗಳ ಹಿತದಲ್ಲಿ ನಿರತನಾಗಿದ್ದನು. ಕ್ಷಮಾವಂತನೂ,

ಸತ್ಯವನ್ನೇ ಮಾತನಾಡುವವನೂ, ಇಂದ್ರಿಯಗಳನ್ನು ಗೆದ್ದವನೂ ಆದ ಅವನಿಗೆ ಮಕ್ಕಳಿರಲಿಲ್ಲ. ವಯಸ್ಸನ್ನು ದಾಟಿದ್ದ ಅವನಿಗೆ ಇದೊಂದು ಸಂತಾಪದ ವಿಷಯವೇ ಆಗಿತ್ತು. ತನಗೆ ಮಕ್ಕಳಾಗಬೇಕೆಂದು ಅವನು ನಿರ್ಧಿಷ್ಟ ವೇಳೆಗಳಲ್ಲಿ ಅಲ್ಪವೇ ಆಹಾರವನ್ನು ಸೇವಿಸುತ್ತಾ ಬ್ರಹ್ಮಚರ್ಯದಲ್ಲಿ ಜಿತೇಂದ್ರಿಯನಾಗಿದ್ದು ತೀವ್ರ ನಿಯಮಗಳಲ್ಲಿ ತೊಡಗಿದನು. ಅವನು ಪ್ರತಿದಿನವೂ ಸಾವಿತ್ರಿಗೆ ನೂರುಸಾವಿರ ಆಹುತಿಗಳನ್ನು ನೀಡುತ್ತಿದ್ದನು ಮತ್ತು ದಿನದ ಆರನೆಯ ಒಂದು ಭಾಗದಲ್ಲಿ ಮಾತ್ರ ಅಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದನು. ಈ ರೀತಿ ನಿಯಮದಲ್ಲಿದ್ದುಕೊಂಡು ಹದಿನೆಂಟು ವರ್ಷಗಳು ಕಳೆದ ನಂತರ ಸಾವಿತ್ರಿಯು ಅವನ ಮೇಲೆ ಸಂತುಷ್ಟಳಾಗಿ ಕಾಣಿಸಿಕೊಂಡಳು. ಅಗ್ನಿಹೋತ್ರದಿಂದ ಎದ್ದುಬಂದ ಆ ಮಹತಾನ್ವಿತೆ ವರದೆಯು ಹರ್ಷದಿಂದ ರಾಜನಿಗೆ ಹೇಳಿದಳು:

> “ರಾಜನ್! ನಿನ್ನ ಬ್ರಹ್ಮಚರ್ಯ, ಪರಿಶುದ್ಧತೆ, ದಮ, ನಿಯಮ, ಮತ್ತು ನನ್ನ ಮೇಲಿರಿಸಿರುವ ಸರ್ವಾತ್ಮ ಭಕ್ತಿಗೆ ಸಂತುಷ್ಟಳಾಗಿದ್ದೇನೆ. ವರವನ್ನು ಕೇಳು!”

ಅಶ್ವಪತಿಯು ಹೇಳಿದನು:

> “ದೇವೀ! ಮಕ್ಕಳು ಬೇಕೆಂಬ ಆಸೆಯಿಂದ ನಾನು ಈ ಧರ್ಮಸಮಾರಂಭದಲ್ಲಿ ತೊಡಗಿದ್ದೇನೆ. ನನ್ನಿಂದ ಸಂತೃಪ್ತಳಾಗಿದ್ದರೆ ನನ್ನ ಕುಲವನ್ನು ವೃದ್ಧಿಸುವ ಹಲವು



ಪುತ್ರರನ್ನು ನನಗೆ ನೀಡು! ದ್ವಿಜರಿಗೆ ಸಂತಾನವೇ ಪರಮ ಧರ್ಮವೆಂದು ಹೇಳುತ್ತಾರೆ."

ಸಾವಿತ್ರಿಯು ಹೇಳಿದಳು:

> “ರಾಜನ್! ನಿನ್ನ ಈ ಅಭಿಪ್ರಾಯವನ್ನು ತಿಳಿದು ಹಿಂದೆಯೇ ನಿನಗೆ ಪುತ್ರರನ್ನು ನೀಡುವುದರ ಕುರಿತು ಪಿತಾಮಹನಲ್ಲಿ ಕೇಳಿಕೊಂಡಿದ್ದೆ. ಸ್ವಯಂಭುವು ವಿಹಿಸಿದಂತೆ ಅವನ ಪ್ರಸಾದದಿಂದ ನಿನಗೆ ಶೀಘ್ರದಲ್ಲಿಯೇ ಸೌಮ್ಯ ತೇಜಸ್ವಿನೀ ಕನ್ಯೆಯು ಜನಿಸುವಳು. ಇದರ ಕುರಿತು ಮರುಪ್ರಶ್ನೆಯನ್ನು ಕೇಳಬೇಡ ಅಥವಾ ವಾದಿಸಬೇಡ. ನಿನ್ನ ಮೇಲೆ ಸಂತುಷ್ಟಳಾಗಿ ಪಿತಾಮಹನು ವಿಧಿಸಿದುದನ್ನು ನಿನಗೆ ಹೇಳುತ್ತಿದ್ದೇನೆ.”

ಸಾವಿತ್ರಿಯ ವಚನಕ್ಕೆ ಹಾಗೆಯೇ ಆಗಲೆಂದು ಅವನು ಒಪ್ಪಿಕೊಳ್ಳಲು “ಇದು ಶ್ರೀಘ್ರದಲ್ಲಿಯೇ ಆಗುತ್ತದೆ” ಎಂದು ಅನುಗ್ರಹಿಸಿ ಸಾವಿತ್ರಿಯು ಅಂತರ್ಧಾನಳಾದಳು. ರಾಜನು ತನ್ನ ಅರಮನೆಗೆ ಹಿಂದಿರುಗಿ, ಸ್ವರಾಜ್ಯದಲ್ಲಿ ಪ್ರಜೆಗಳನ್ನು ಪ್ರೀತಿ-ಧರ್ಮಗಳಿಂದ ಪಾಲಿಸಿದನು.

ಕೆಲವು ಸಮಯ ಕಳೆಯಲು, ನಿಯತವ್ರತ ರಾಜನು ಧರ್ಮಚಾರಿಣಿ ಹಿರಿಯ ರಾಣಿಗೆ ಗರ್ಭವನ್ನಿತ್ತನು. ರಾಜಪುತ್ರಿ ಮಾಲವಿಯಲ್ಲಿ ಗರ್ಭವು ಅಂಬರದಲ್ಲಿ ಶುಕ್ಲಪಕ್ಷದ ತಾರಾಪತಿ ಚಂದ್ರನಂತೆ ವರ್ಧಿಸಿತು. ಕಾಲ ಪ್ರಾಪ್ತವಾಗಲು ಅವಳು ರಾಜೀವಲೋಚನೆ ಕನ್ಯೆಗೆ ಜನ್ಮವಿತ್ತಳು. ನೃಪತಿಯು ಸಂತೋಷದಿಂದ ಅವಳ ಎಲ್ಲ ಕ್ರಿಯೆಗಳನ್ನೂ ನೆರವೇರಿಸಿದನು. ಆಹುತಿಗಳಿಂದ ತೃಪ್ತಳಾದ ಸಾವಿತ್ರಿಯಿಂದ ಪಡೆದ ಅವಳಿಗೆ ತಂದೆ ಮತ್ತು ವಿಪ್ರರು “ಸಾವಿತ್ರಿ” ಎಂದೇ ನಾಮಕರಣ

ಮಾಡಿದರು. ಆ ನೃಪತಾತ್ಮಜೆಯು ಸಾಕ್ಷಾತ್ ಶ್ರೀಯೇ ಅವತರಿಸಿರುವಳೋ ಎನ್ನುವಂತೆ ಅತೀವ ಸುಂದರಿಯಾಗಿ ಬೆಳೆದಳು. ಸಮಯವು ಕಳೆದಂತೆ ಆ ಕನ್ಯೆಯು ಯೌವನಾವಸ್ಥೆಗೆ ಬಂದಳು. ಆ ಸುಮಧ್ಯಮೆ, ಪೃಥುಶ್ರೋಣೀ, ಚಿನ್ನದ ಪುತ್ಥಳಿಯಂತಿದ್ದ ಅವಳನ್ನು ನೋಡಿ ಜನರು ದೇವಕನ್ಯೆಯೇ ತಮ್ಮ ನಡುವೆ ಬಂದಿದ್ದಾಳೋ ಎಂದು ಅಚ್ಚರಿ ಪಡುತ್ತಿದ್ದರು. ಆ ಪದ್ಮಪಲಾಶಾಕ್ಷಿಯಾದರೋ ತೇಜಸ್ಸಿನಿಂದ ಪ್ರಜ್ವಲಿಸುತ್ತಿರಲು ಅವಳ ತೇಜಸ್ಸಿನಿಂದ ಹಿಂಜರಿದ ಯಾವ ಪುರುಷನೂ ಅವಳನ್ನು ವರಿಸಲಿಲ್ಲ.

ಒಮ್ಮೆ ಉತ್ತಮ ದಿನದಂದು ಉಪವಾಸದಿಂದಿದ್ದು, ತಲೆಗೆ ಸ್ನಾನಮಾಡಿ ದೇವತೆಗಳನ್ನು ಪೂಜಿಸಿ ಸಾವಿತ್ರಿಯು ವಿಧಿವತ್ತಾಗಿ ಬ್ರಾಹ್ಮಣರು ವಾಚಿಸುತ್ತಿರಲು ಅಗ್ನಿಯಲ್ಲಿ ಆಹುತಿಗಳನ್ನಿತ್ತಳು. ಅನಂತರ ಸುಮನಸ್ಕಳಾಗಿ ಉಳಿದ ಪ್ರಸಾದವನ್ನು ಹಿಡಿದು ಶ್ರೀಯಂತೆ ರೂಪವತಿಯಾಗಿದ್ದ ಆ ದೇವಿಯು ತಂದೆಯ ಬಳಿ ಹೋದಳು. ಮೊದಲು ಪ್ರಸಾದವನ್ನು ಅವನಿಗಿತ್ತು ತಂದೆಯ ಪಾದಗಳಿಗೆರಗಿ, ಅಂಜಲೀಬದ್ಧಲಾಗಿ ಆ ವರಾರೋಹೆಯು ರಾಜನ ಬಳಿಯಲ್ಲಿ ನಿಂತುಕೊಂಡಳು. ಯೌವನಾವಸ್ಥೆಯಲ್ಲಿರುವ ತನ್ನ ದೇವರೂಪಿಣೀ ಮಗಳನ್ನು ನೋಡಿ ನೃಪತಿಯು ಅವಳನ್ನು ಕೇಳಿಕೊಂಡು ಇದೂವರೆಗೆ ಯಾವ ವರರೂ ಬರಲಿಲ್ಲವಲ್ಲಾ ಎಂದು ದುಃಖಿಸಿ ಹೇಳಿದನು:

"ಪುತ್ರಿ! ನಿನ್ನನ್ನು ಕೊಡುವ ಕಾಲವು ಬಂದಿದೆ. ಆದರೆ

ಇದೂವರೆಗೆ ಯಾರೂ ನಿನ್ನನ್ನು ಕೇಳಿಕೊಂಡು ಬಂದಿಲ್ಲ. ಗುಣದಲ್ಲಿ ನಿನ್ನಂತೆಯೇ ಇರುವ ಪತಿಯನ್ನು ನೀನೇ ಇಷ್ಟಪಟ್ಟು ಆರಿಸಿಕೋ! ನೀನು ಬಯಸಿದ ಪುರುಷನ ಕುರಿತು ಹೇಳು. ವಿಮರ್ಶಿಸಿ ನಾನು ನಿನಗಿಷ್ಟನಾದ ವರನಿಗೇ ನಿನ್ನನ್ನು ಕೊಡುತ್ತೇನೆ. ಧರ್ಮಶಾಸ್ತ್ರಗಳನ್ನು ಓದಿ ತಿಳಿದ ದ್ವಿಜರಿಂದ ಕೇಳಿದುದನ್ನೇ ನಾನು ನಿನಗೆ ಹೇಳುತ್ತಿದ್ದೇನೆ. ನೀನೂ ಕೂಡ ನಾನು ಹೇಳುತ್ತಿರುವ ಈ ಮಾತನ್ನು ಕೇಳು. ವಯಸ್ಸಿಗೆ ಬಂದ ಮಗಳನ್ನು ಕೊಡದೇ ಇರುವ ತಂದೆಯನ್ನು ನಿಂದಿಸಬೇಕು, ಮಕ್ಕಳನ್ನು ಪಡೆಯದ ಪತಿಯನ್ನು ನಿಂದಿಸಬೇಕು, ವಿಧವೆ ತಾಯಿಯನ್ನು ನೋಡಿಕೊಳ್ಳದ ಪುತ್ರನನ್ನು ನಿಂದಿಸಬೇಕು. ನನ್ನ ಈ ಮಾತನ್ನು ಕೇಳಿ ಬೇಗನೇ ಪತಿಯನ್ನು ಹುಡುಕಿಕೋ. ನಾನು ದೇವತೆಗಳ ನಿಂದನೆಗೊಳಾಗಾಗದಂತೆ ಮಾಡು!"

ಮಗಳಿಗೆ ಈ ರೀತಿ ಹೇಳಿ ಅವನು ಪ್ರಯಾಣಕ್ಕೆ ಸಿದ್ಧತೆಯನ್ನು ಮಾಡಿಕೊಂಡು ಅವಳೊಂದಿಗೆ ಹೊರಡಲು ವೃದ್ಧಮಂತ್ರಿಗಳಿಗೆ ಆಜ್ಞಾಪಿಸಿದನು. ನಾಚಿಕೊಂಡ ಆ ಮನಸ್ವಿನಿಯು ತಂದೆಯ ಪಾದಗಳಿಗೆ ವಂದಿಸಿ ಪಿತೃವಚನವನ್ನು ಆಜ್ಞೆಯೆಂದು ಸ್ವೀಕರಿಸಿ ತಕ್ಷಣವೇ ಹೊರಟಳು. ಬಂಗಾರದ ರಥದಲ್ಲಿ ಕುಳಿತು ಸಚಿವರಿಂದ ಸುತ್ತುವರೆದು ರಮ್ಯ ವನಗಳಲ್ಲಿ ರಾಜರ್ಷಿ ತಪೋವನಗಳಲ್ಲಿ ಸುತ್ತಿದಳು. ಅಲ್ಲಿ ವೃದ್ಧರನ್ನು ಗೌರವಿಸಿ ಅವರ ಪಾದಗಳಿಗೆರಗಿ ಕ್ರಮವಾಗಿ ಎಲ್ಲ ವನಗಳಿಗೂ ಹೋದಳು. ಹೀಗೆ ಸರ್ವತೀರ್ಥಗಳಲ್ಲಿ ಧನವನ್ನು

ದಾನಮಾಡುತ್ತಾ ಆ ನೃಪತಾತ್ಮಜೆಯು ದ್ವಿಜಮುಖ್ಯರಿರುವ ಬೇರೆ ಬೇರೆ ದೇಶಗಳಿಗೆ ಪ್ರಯಾಣಮಾಡಿದಳು.

## ಸಾವಿತ್ರಿಯು ಸತ್ಯವಾನನನ್ನು ವಿವಾಹವಾಗಲು ನಿಶ್ಚಯಿಸಿದುದು

ಆಗ ಒಮ್ಮೆ ಮದ್ರಾಧಿಪನು ನಾರದನೊಡನೆ ಸಭಾಮಧ್ಯದಲ್ಲಿ ಕುಳಿತು ಮಾತಿನಲ್ಲಿ ತೊಡಗಿರಲು ಮಂತ್ರಿಗಳ ಸಹಿತ ಸಾವಿತ್ರಿಯು ಸರ್ವ ತೀರ್ಥ-ಆಶ್ರಮಗಳಿಗೆ ತಿರುಗಾಡಿ ತಂದೆಯ ಮನೆಗೆ ಹಿಂದಿರುಗಿದಳು. ನಾರದನೊಂದಿಗೆ ಕುಳಿತಿದ್ದ ತಂದೆಯನ್ನು ನೋಡಿ ಆ ಶುಭೆಯು ಇಬ್ಬರ ಪಾದಗಳಿಗೂ ಶಿರಬಾಗಿ ನಮಸ್ಕರಿಸಿದಳು. ಆಗ ನಾರದನು ಕೇಳಿದನು:

> "ನೃಪ! ನಿನ್ನ ಮಗಳು ಎಲ್ಲಿಗೆ ಹೋಗಿದ್ದಳು ಮತ್ತು ಎಲ್ಲಿಂದ ಬರುತ್ತಿದ್ದಾಳೆ? ನೀನು ಏಕೆ ಈ ಯುವತಿಯನ್ನು ಇದೂವರೆಗೂ ಯೋಗ್ಯ ವರನಿಗೆ ಕೊಟ್ಟಿಲ್ಲ?"

ಅಶ್ವಪತಿಯು ಹೇಳಿದನು:

> "ದೇವರ್ಷೇ! ಇದೇ ಕಾರ್ಯದ ಸಲುವಾಗಿ ನಾನು ಅವಳನ್ನು ಕಳುಹಿಸಿದ್ದೆ ಮತ್ತು ಅಲ್ಲಿಂದಲೇ ಅವಳು ಬರುತ್ತಿದ್ದಾಳೆ. ಅವಳು ಯಾರನ್ನು ಪತಿಯನ್ನಾಗಿ ವರಿಸಿದ್ದಾಳೆ ಎನ್ನುವುದನ್ನು ಅವಳಿಂದಲೇ ಕೇಳೋಣ."

ವಿಸ್ತಾರವಾಗಿ ಹೇಳು ಎಂದು ತಂದೆಯು ಆಜ್ಞಾಪಿಸಲು ಸಾವಿತ್ರಿಯು

ಅವನ ಮಾತನ್ನು ದೇವನದೆಂದೇ ಸ್ವೀಕರಿಸಿ ಹೇಳಿದಳು:

“ಶಾಲ್ವದಲ್ಲಿ ಧರ್ಮಾತ್ಮ ದ್ಯುಮತ್ಸೇನ ಎಂಬ ರಾಜನಿದ್ದನು. ಆದರೆ ಅವನು ಅಂಧನಾದನು. ಕಣ್ಣುಗಳನ್ನು ಕಳೆದುಕೊಂಡ ಮತ್ತು ಮಗನು ಇನ್ನೂ ಬಾಲಕನಾಗಿದ್ದ ಆ ಧೀಮಂತನ ಮೇಲೆ ಹಿಂದಿನಿಂದ ವೈರತ್ವವನ್ನು ಹೊಂದಿದ್ದ ನೆರೆಯ ರಾಜನು ಆಕ್ರಮಣ ಮಾಡಿ ರಾಜ್ಯವನ್ನು ಅಪಹರಿಸಿದನು. ಅವನು ತನ್ನ ಬಾಲಕ ಮಗ ಮತ್ತು ಪತ್ನಿಯೊಡನೆ ವನವನ್ನು ಸೇರಿದನು. ಮಹಾರಣ್ಯಕ್ಕೆ ಹೋಗಿ ಆ ಮಹಾವ್ರತನು ತಪಸ್ಸನ್ನು ತಪಿಸಿದನು. ರಾಜಧಾನಿಯಲ್ಲಿ ಹುಟ್ಟಿದ್ದ ಅವನ ಮಗನು ತಪೋವನದಲ್ಲಿ ಬೆಳೆದನು. ಆ ಸತ್ಯವಾನನು ನನಗೆ ಅನುರೂಪ ಪತಿಯೆಂದು ಮನಸಾ ಆರಿಸಿಕೊಂಡಿದ್ದೇನೆ.”

ಅದನ್ನು ಕೇಳಿದ ನಾರದನು ಹೇಳಿದನು:

“ಅಹೋ! ನೃಪತೇ! ಸಾವಿತ್ರಿಯಿಂದ ಮಹಾ ಪಾಪವೇ ನಡೆದುಹೋಯಿತು! ತಿಳಿಯದೇ ಗುಣವಂತನೆಂದು ಇವಳು ಸತ್ಯವಾನನನ್ನು ವರಿಸಿದ್ದಾಳೆ. ಅವನ ತಂದೆಯು ಸದಾ ಸತ್ಯವನ್ನೇ ನುಡಿಯುತ್ತಾನೆ. ತಾಯಿಯೂ ಸತ್ಯವನ್ನೇ ನುಡಿಯುತ್ತಾಳೆ. ಆದುದರಿಂದಲೇ ಅವನಿಗೆ ಸತ್ಯವಾನನೆಂದು ಬ್ರಾಹ್ಮಣರು ಹೆಸರಿಟ್ಟಿದ್ದಾರೆ. ಬಾಲ್ಯದಲ್ಲಿ ಅವನಿಗೆ ಕುದುರೆಗಳು ಅತಿ ಪ್ರಿಯವಾಗಿದ್ದವು ಮತ್ತು ಅವನು

ಕುದುರೆಗಳ ಚಿತ್ರವನ್ನೂ ಬರೆಯುತ್ತಿದ್ದನು. ಅಶ್ವಗಳ ಚಿತ್ರವನ್ನು ಬರೆಯುತ್ತಿದ್ದುದರಿಂದ ಅವನನ್ನು ಚಿತ್ರಾಶ್ವ ಎಂದೂ ಕರೆಯುತ್ತಾರೆ."

ಆಗ ರಾಜನು ಕೇಳಿದನು:

"ಆ ನೃಪಾತ್ಮನು ತೇಜಸ್ವಿಯೂ ಬುದ್ಧಿವಂತನೂ ಆಗಿದ್ದಾನೆಯೇ? ಸತ್ಯವಾನನು ಕ್ಷಮಾವಂತನೂ ಶೂರನೂ ಆಗಿದ್ದಾನೆಯೇ?"

ನಾರದನು ಹೇಳಿದನು:

"ಸತ್ಯವಾನನು ವಿವಸ್ವತನಂತೆ ತೇಜಸ್ವಿಯೂ ಮತಿಯಲ್ಲಿ ಬೃಹಸ್ಪತಿಯ ಸಮನೂ ಆಗಿದ್ದಾನೆ. ಮಹೇಂದ್ರನಂತೆ ಶೂರನೂ ವಸುಧೆಯಂತೆ ಕ್ಷಮಾನ್ವಿತನೂ ಹೌದು."

ಅಶ್ವಪತಿಯು ಹೇಳಿದನು:

"ಆ ರಾಜಾತ್ಮಜ ಸತ್ಯವಾನನು ದಾನಿಯೂ ಬ್ರಾಹ್ಮಣರನ್ನು ಗೌರವಿಸುವವನೂ ಆಗಿದ್ದಾನೆಯೇ? ಉದಾರನೂ, ರೂಪವಂತನೂ, ನೋಡಲು ಸುಂದರನೂ ಆಗಿದ್ದಾನೆಯೇ?"

ನಾರದನು ಹೇಳಿದನು:

“ಸಾಂಕೃತಿ ರಂತಿದೇವನಂತೆ ಅವನು ತನ್ನ ಶಕ್ತಿಗೆ ತಕ್ಕಂತೆ ದಾನಗಳನ್ನು ನೀಡುತ್ತಾನೆ. ಶಿಬಿ ಔಶೀನರನಂತೆ ಬ್ರಾಹ್ಮಣರನ್ನು ಪೂಜಿಸುತ್ತಾನೆ ಮತ್ತು ಸತ್ಯವಾದಿಯಾಗಿದ್ದಾನೆ. ಯಯಾತಿಯಂತೆ ಉದಾರನೂ ಚಂದ್ರನಂತೆ ಸುಂದರನೂ ಆಗಿದ್ದಾನೆ. ದ್ಯುಮತ್ಸೇನನ ಬಲಶಾಲೀ ಮಗನು ರೂಪದಲ್ಲಿ ಇಬ್ಬರು ಅಶ್ವಿನಿಯರಂತಿದ್ದಾನೆ. ಅವನು ತನ್ನ ಆಸೆಗಳನ್ನು ಹಿಡಿತಲ್ಲಿಟ್ಟುಕೊಂಡವನು. ಮೃದು. ಶೂರ. ಸತ್ಯವಂತ ಮತ್ತು ಜಿತೇಂದ್ರಿಯ. ಅವನು ಸ್ನೇಹಸ್ವಭಾವದವನು, ಅಸೂಯೆಯಿಲ್ಲದವನು. ಸ್ವಲ್ಪ ನಾಚಿಕೆ ಸ್ವಭಾವದವನು ಮತ್ತು ಧೃತಿವಂತನು. ಅವನು ನಿತ್ಯವೂ ನೇರವಾಗಿಯೇ ನಡೆದುಕೊಳ್ಳುತ್ತಾನೆ ಮತ್ತು ಧ್ರುವನಂತೆ ಸ್ಥಿರನಾಗಿದ್ದಾನೆ ಎಂದು ತಪೋವೃದ್ಧರೂ ಶೀಲವೃದ್ಧರೂ ಹೇಳುತ್ತಾರೆ.”

ಅಶ್ವಪತಿಯು ಹೇಳಿದನು:

“ಭಗವನ್! ಅವನಲ್ಲಿರುವ ಎಲ್ಲ ಒಳ್ಳೆಯ ಗುಣಗಳ ಕುರಿತೇ ನೀವು ಹೇಳುತ್ತಿದ್ದೀರಿ. ಅವನಲ್ಲಿ ಏನಾದರೂ ದೋಷವಿದ್ದರೆ ಅದರ ಕುರಿತೂ ಹೇಳಿ.”

ನಾರದನು ಹೇಳಿದನು:

“ಅವನಲ್ಲಿ ಒಂದೇ ಒಂದು ದೋಷವಿದೆ. ಬೇರೆ ಏನೂ ಇಲ್ಲ.

ಕ್ಷೀಣಾಯು ಸತ್ಯವಾನನು ಇಂದಿನಿಂದ ಒಂದು ವರ್ಷದಲ್ಲಿ ದೇಹತ್ಯಾಗಮಾಡುತ್ತಾನೆ."

ಆಗ ರಾಜನು ಸಾವಿತ್ರಿಗೆ ಹೇಳಿದನು:

"ಮಗೂ ಸಾವಿತ್ರಿ! ಇಲ್ಲಿ ಬಾ! ಹೋಗಿ ಬೇರೆ ಯಾರನ್ನಾದರೂ ವರಿಸು! ಅವನಲ್ಲಿರುವ ಈ ಮಹಾ ದೋಷವೊಂದೇ ಅವನ ಎಲ್ಲ ಗುಣಗಳನ್ನೂ ಮೀರಿ ನಿಂತಿದೆ. ಭಗವಾನ್ ನಾರದರು ಹೇಳಿದಂತೆ ಒಂದು ವರ್ಷದಲ್ಲಿ ಆ ಅಲ್ಪಾಯುವು ದೇಹತ್ಯಾಗ ಮಾಡುತ್ತಾನೆ!"

ಸಾವಿತ್ರಿಯು ಹೇಳಿದಳು:

"ಆಸ್ತಿಯನ್ನು ಒಂದೇ ಬಾರಿ ವಿಂಗಡಿಸುತ್ತಾರೆ. ಕನ್ಯೆಯನ್ನು ಒಂದೇ ಬಾರಿ ಕೊಡುತ್ತಾರೆ. ದಾನವನ್ನು ಒಂದೇ ಬಾರಿ ನೀಡಲಾಗುತ್ತದೆ. ಈ ಮೂರನ್ನೂ ಒಂದೊಂದು ಬಾರಿಯೇ ಮಾಡಲಾಗುತ್ತದೆ. ದೀರ್ಘಾಯುವಾಗಿರಲಿ ಅಥವಾ ಅಲ್ಪಾಯುವಾಗಿರಲಿ, ಸುಗುಣನಾಗಿರಲಿ ಅಥವಾ ನಿರ್ಗುಣನಾಗಿರಲಿ, ನಾನು ಅವನನ್ನು ನನ್ನ ಪತಿಯನ್ನಾಗಿ ವರಿಸಿದ್ದೇನೆ. ಎರಡನೇ ಬಾರಿ ನಾನು ವರಿಸುವುದಿಲ್ಲ! ಮನಸ್ಸಿನಲ್ಲಿ ನಿರ್ಧಾರಮಾಡಿ ನಂತರ ಅದು ಮಾತಿನಲ್ಲಿ ಹೊರಬರುತ್ತದೆ ಮತ್ತು ನಂತರವೇ ಅದನ್ನು ಕ್ರಿಯಾರೂಪದಲ್ಲಿ

ಮಾಡಲಾಗುತ್ತದೆ. ಆ ಮನಸ್ಸಿಗೆ ನಾನೇ ಪ್ರಮಾಣ!”

ನಾರದನು ಹೇಳಿದನು:

“ನರಶ್ರೇಷ್ಠ! ನಿನ್ನ ಮಗಳ ಬುದ್ಧಿಯು ಸ್ಥಿರವಾಗಿದೆ. ಧರ್ಮದಲ್ಲಿ ನೆಲೆಗೊಂಡಿರುವ ಇವಳನ್ನು ಯಾರು ಏನು ಮಾಡಿದರೂ ಬದಲಾಯಿಸಲಾಗುವುದಿಲ್ಲ. ಸತ್ಯವಾನನ ಗುಣಗಳನ್ನು ಪಡೆದ ಅನ್ಯ ಪುರುಷರು ಯಾರೂ ಇಲ್ಲ. ಅದುದರಿಂದ ನಿನ್ನ ಮಗಳನ್ನು ಅವನಿಗೇ ಕೊಡುವುದು ಸರಿಯೆಂದು ನನಗನ್ನಿಸುತ್ತದೆ.”

ರಾಜನು ಹೇಳಿದನು:

“ಭಗವನ್! ನೀವು ಹೇಳುತ್ತಿರುವುದು ಸತ್ಯ ಮತ್ತು ಮಾಡಲೇಬೇಕಾದುದು. ಆದುದರಿಂದ ನೀವು ಹೇಳಿದಂತೆಯೇ ಮಾಡುತ್ತೇನೆ. ನೀವೇ ನನ್ನ ಗುರು!”

ನಾರದನು ಹೇಳಿದನು:

“ನಿನ್ನ ಮಗಳು ಸಾವಿತ್ರಿಯ ವಿವಾಹವು ನಿರ್ವಿಘ್ನವಾಗಿ ನಡೆಯಲಿ. ನಾನು ಈಗ ಹೊರಡುತ್ತೇನೆ. ಸರ್ವರಿಗೂ ಮಂಗಳವಾಗಲಿ!”

ಹೀಗೆ ಹೇಳಿ ನಾರದನು ಗಗನವನ್ನೇರಿ ತ್ರಿದಿವಕ್ಕೆ ತೆರಳಿದನು.

ರಾಜನಾದರೋ ಮಗಳ ವೈವಾಹಿಕ ಕಾರ್ಯಗಳೆಲ್ಲವನ್ನೂ ನಡೆಸಿದನು.

## ಸತ್ಯವಾನ್-ಸಾವಿತ್ರಿಯರ ವಿವಾಹ

ಅನಂತರ ರಾಜನು ಕನ್ಯಾದಾನದ ಕುರಿತು ಯೋಚಿಸಿ ವಿವಾಹಕ್ಕೆ ಬೇಕಾಗುವ ಎಲ್ಲ ಸಲಕರಣೆಗಳನ್ನೂ ಒಟ್ಟುಗೂಡಿಸಿದನು. ವೃದ್ಧರನ್ನೂ, ದ್ವಿಜರನ್ನೂ, ಪುರೋಹಿತರೊಂದಿಗೆ ಸರ್ವ ಋತ್ವಿಜರನ್ನೂ ಕರೆಯಿಸಿ ಕನ್ಯೆಯೊಡಗೂಡಿ ಪುಣ್ಯತಿಥಿಯಲ್ಲಿ ಹೊರಟನು. ದಟ್ಟ ಅರಣ್ಯಕ್ಕೆ ಹೋಗಿ ನೃಪನು ಕಾಲ್ನಡುಗೆಯಲ್ಲಿಯೇ ದ್ವಿಜರೊಡಗೂಡಿ ರಾಜರ್ಷಿ ದ್ಯುಮತ್ಸೇನನ ಆಶ್ರಮಕ್ಕೆ ಬಂದನು. ಅಲ್ಲಿ ಶಾಲವೃಕ್ಷದಡಿಯಲ್ಲಿ ಕುಶದ ಚಾಪೆಯ ಮೇಲೆ ಕುಳಿತಿದ್ದ ಕುರುಡ ನೃಪನನ್ನು ನೋಡಿದನು. ರಾಜನು ಆ ರಾಜರ್ಷಿಯನ್ನು ಯಥಾರ್ಹವಾಗಿ ಪೂಜಿಸಿ ಸುನಿಯತ ಮಾತುಗಳಿಂದ ತನ್ನ ಪರಿಚಯವನ್ನು ಹೇಳಿಕೊಂಡನು. ದ್ಯುಮತ್ಸೇನನು ರಾಜನಿಗೆ ಅರ್ಘ್ಯ, ಆಸನ ಮತ್ತು ಗೋವುಗಳನ್ನು ಧರ್ಮದಂತೆ ನೀಡಿ ಬಂದಿರುವ ಕಾರಣವನ್ನು ಕೇಳಿದನು. ಆಗ ಅಶ್ವಪತಿಯು ತನ್ನ ಮತ್ತು ಎಲ್ಲರ ಅಭಿಪ್ರಾಯವನ್ನೂ, ಯಾವಕಾರ್ಯಕ್ಕಾಗಿ ತಾನು ಬಂದಿದ್ದೇನೆನ್ನುವುದನ್ನೂ, ಸತ್ಯವಾನನ ಕುರಿತು ಎಲ್ಲವನ್ನೂ ಅವನಿಗೆ ನಿವೇದಿಸಿದನು. ಅಶ್ವಪತಿಯು ಹೇಳಿದನು:

> “ರಾಜರ್ಷೇ ! ಸಾವಿತ್ರಿ ಎಂಬ ಹೆಸರಿನ ನನ್ನ ಈ ಶೋಭನೆ ಕನ್ಯೆಯನ್ನು ಧರ್ಮಜ್ಞನಾದ ನೀನು ಸ್ವಧರ್ಮದಂತೆ ಸೊಸೆಯನ್ನಾಗಿ ಸ್ವೀಕರಿಸಿಸಬೇಕು.”

ಅದಕ್ಕೆ ದ್ಯುಮತ್ಸೇನನು ಹೇಳಿದನು:

"ರಾಜ್ಯವನ್ನು ಕಳೆದುಕೊಂಡು ನಾವು ವನವಾಸದಲ್ಲಿದ್ದೇವೆ. ಧರ್ಮದಲ್ಲಿದ್ದುಕೊಂಡು ತಪಸ್ವಿಗಳಂತೆ ಇದ್ದೇವೆ. ನಿನ್ನ ಮಗಳಾದರೋ ಹೇಗೆ ತಾನೇ ಈ ವನವಾಸ ಮತ್ತು ಆಶ್ರಮದ ಕಷ್ಟಗಳನ್ನು ಸಹಿಸಿಕೊಂಡಾಳು ಮತ್ತು ಅರ್ಹಳಾಗಿದ್ದಾಳೆ?"

ಅಶ್ವಪತಿಯು ಹೇಳಿದನು:

"ಸುಖ-ದುಃಖಗಳು ಬರುತ್ತವೆ ಮತ್ತು ಹೋಗುತ್ತವೆ. ಇವೆರಡನ್ನೂ ನಾನು ಮತ್ತು ನನ್ನ ಮಗಳೂ ತಿಳಿದಿದ್ದೇವೆ. ಆದುದರಿಂದ ಅಂಥಹ ಮಾತುಗಳನ್ನು ನನ್ನಂಥವನಲ್ಲಿ ಹೇಳಬೇಡ. ನೃಪ! ಎಲ್ಲವನ್ನೂ ತಿಳಿದು ನಿಶ್ಚಯಿಸಿಯೇ ನಾವು ಇಲ್ಲಿಗೆ ಬಂದಿದ್ದೇವೆ. ಸೌಹಾರ್ದತೆ-ಗೆಳೆತನದಿಂದ ಇದರ ಕುರಿತು ಆಸೆಯನ್ನಿಟ್ಟುಕೊಂಡು ಕೇಳಿಕೊಳ್ಳುತ್ತಿದ್ದೇನೆ. ನನ್ನನ್ನು ನಿರಾಶೆಗೊಳಿಸದಿರು. ಪ್ರೇಮದಿಂದ ನಿನ್ನ ಬಳಿ ಬಂದಿರುವ ನಮ್ಮನ್ನು ಹಿಂದೆ ಕಳುಹಿಸದಿರು! ಎಲ್ಲ ವಿಷಯಗಳಲ್ಲಿಯೂ ನೀನು ನನ್ನ ಹಾಗೆಯೇ ಇದ್ದೀಯೆ ಮತ್ತು ನಾನೂ ನಿನ್ನ ಹಾಗೆಯೇ ಇದ್ದೇನೆ. ಆದುದರಿಂದ ನನ್ನ ಮಗಳನ್ನು ನಿನ್ನ ಸೊಸೆಯಾಗಿ ಮತ್ತು ಸತ್ಯವಾನನಿಗೆ ಭಾರ್ಯೆಯಾಗಿ ಸ್ವೀಕರಿಸು."

ದ್ಯುಮತ್ಸೇನನು ಹೇಳಿದನು:

> “ಹಿಂದೆಯೇ ನಾನು ನಿನ್ನೊಂದಿಗೆ ಸಂಬಂಧವನ್ನು ಮಾಡಿಕೊಳ್ಳಲು ಬಯಸಿದ್ದೆ. ರಾಜ್ಯವನ್ನು ಕಳೆದುಕೊಂಡ ನಂತರ ಅದರ ಭರವಸೆಯನ್ನೇ ಕಳೆದುಕೊಂಡಿದ್ದೆ. ನನ್ನ ಆ ಹಳೆಯ ಬಯಕೆಯು ನಿನ್ನ ಈ ಅಭಿಪ್ರಾಯದಿಂದ ಪೂರೈಸಿದೆಯೆಂದರೆ ಅದನ್ನು ನಾನು ನಿಲ್ಲಿಸುವುದಿಲ್ಲ. ನಿನಗೆ ಆದರದ ಸ್ವಾಗತ ಮತ್ತು ನನ್ನ ಗೌರವಾನ್ವಿತ ಅತಿಥಿಯಾಗಿರು!”

ಅನಂತರ ಆಶ್ರಮವಾಸಿ ಎಲ್ಲ ದ್ವಿಜರನ್ನೂ ಕರೆಯಿಸಿ ಯಥಾವಿಧಿಯಾಗಿ ಆ ನೃಪರೀರ್ವರೂ ವಿವಾಹಕಾರ್ಯವನ್ನು ನೆರವೇರಿಸಿದರು. ಅಶ್ವಪತಿಯು ಅರ್ಹ ಉಡುಗೆಗಳೊಂದಿಗೆ ಕನ್ಯೆಯನ್ನು ಕೊಟ್ಟು ಪರಮ ಸಂತೋಷಗೊಂಡು ಅರಮನೆಗೆ ತೆರಳಿದನು. ಸತ್ಯವಾನನಾದರೋ ಸರ್ವಗುಣಾನ್ವಿತೆ ಪತ್ನಿಯನ್ನು ಪಡೆದು ಸಂತೋಷಪಟ್ಟನು ಮತ್ತು ಅವಳೂ ಕೂಡ ತನಗಿಷ್ಟನಾದ ಪತಿಯನ್ನು ಪಡೆದು ಸಂತೋಷಗೊಂಡಳು.

ತಂದೆಯು ಹೊರಟುಹೋದ ನಂತರ ಸಾವಿತ್ರಿಯು ತನ್ನ ಎಲ್ಲ ಆಭರಣಗಳನ್ನೂ ಎತ್ತಿಟ್ಟು, ವಲ್ಕಲ-ಕಾಷಾಯ ವಸ್ತ್ರಗಳನ್ನು ಧರಿಸಿದಳು. ಸದ್ಗುಣ, ಪರಿಶ್ರಮ ಮತ್ತು ತಾಳ್ಮೆಗಳಿಂದ ಎಲ್ಲರ ಇಷ್ಟಗಳನ್ನು ನೆರವೇರಿಸುತ್ತಾ ಸರ್ವರನ್ನೂ ಸಂತೃಪ್ತಗೊಳಿಸಿದಳು.

ಅತ್ತೆಯ ದೇಹಸತ್ಕಾರಗಳನ್ನು ಮಾಡಿದಳು ಮತ್ತು ಎಲ್ಲರ ಬಟ್ಟೆಗಳನ್ನು ನೋಡಿಕೊಳ್ಳುತ್ತಿದ್ದಳು. ಮಾವನ ದೇವಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದಳು ಮತ್ತು ಸಂಯಮದಿಂದ ಮಾತನಾಡಿಕೊಂಡಿದ್ದಳು. ಪ್ರಿಯಯುಕ್ತ ಮಾತುಗಳು, ನೈಪುಣ್ಯತೆ, ಶಮ ಮತ್ತು ಏಕಾಂತದ ಉಪಚಾರಗಳಿಂದ ಪತಿಯನ್ನೂ ಸಂತೋಷಪಡಿಸಿದಳು. ಹೀಗೆ ಆಶ್ರಮದಲ್ಲಿ ಅವಳು ಸತ್ಯ ಮತ್ತು ತಪಸ್ಸಿನಿಂದ ವಾಸಿಸಿದಳು. ಹೀಗೆಯೇ ಬಹಳ ಸಮಯವು ಕಳೆದುಹೋಯಿತು. ಸಾವಿತ್ರಿಯಾದರೋ ಮಲಗಿರುವಾಗ ಮತ್ತು ಎದ್ದಿರುವಾಗ, ಹಗಲು ಮತ್ತು ರಾತ್ರಿ ಪ್ರತಿಕ್ಷಣದಲ್ಲಿಯೂ ನಾರದನು ಹೇಳಿದ ಮಾತನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿದ್ದಳು.

## ಸಾವಿತ್ರಿಯ ವ್ರತ

ಹಾಗೆಯೇ ಬಹಳ ದಿನಗಳು ಕಳೆದಂತೆ ಸತ್ಯವಾನನು ಸಾಯುವ ಕಾಲವು ಪ್ರಾಪ್ತವಾಯಿತು. ಸಾವಿತ್ರಿಯು ನಾರದನು ಹೇಳಿದ ಆ ವಾಕ್ಯವನ್ನು ನಿತ್ಯವೂ ಹೃದಯದಲ್ಲಿಟ್ಟುಕೊಂಡು ಕಳೆದುಹೋದ ಪ್ರತಿದಿನವನ್ನೂ ಲೆಕ್ಕಮಾಡಿಕೊಂಡಿದ್ದಳು. ನಾಲ್ಕನೆಯ ದಿನದಲ್ಲಿ ಸಾಯುತ್ತಾನೆಂದು ಯೋಚಿಸಿದ ಸಾವಿತ್ರಿಯು ಮೂರುರಾತ್ರಿಗಳ ವ್ರತವನ್ನು ಆಚರಿಸಲು ಹಗಲು ರಾತ್ರಿ ಒಂದೇ ಸ್ಥಳದಲ್ಲಿ ನಿಶ್ಚಲವಾಗಿ ನಿಂತಳು. ತನ್ನ ಸೊಸೆಯು ಈ ರೀತಿಯ ಕಠಿಣ ವ್ರತವನ್ನು ಕೈಗೊಂಡಿದ್ದಾಳೆಂದು ಕೇಳಿದ ನೃಪ ದ್ಯುಮತ್ಸೇನನು ದುಃಖಾನ್ವಿತನಾಗಿ

ಮೇಲೆದ್ದು ಸಾವಿತ್ರಿಯನ್ನು ಸಂತವಿಸುತ್ತಾ ಹೀಗೆಂದನು:

> "ರಾಜಕುಮಾರಿ! ನೀನು ಕೈಗೊಂಡಿರುವ ಈ ವ್ರತವು ಅತಿ ತೀವ್ರರೂ ಕಠಿಣವೂ ಆದದ್ದು. ಈ ರೀತಿ ಒಂದೇ ಸ್ಥಾನದಲ್ಲಿ ನಿಂತುಕೊಂಡಿರುವುದು ಪರಮ ದುಷ್ಕರ!"

ಅದಕ್ಕೆ ಸಾವಿತ್ರಿಯು ಹೇಳಿದಳು:

> "ತಂದೇ! ಈ ಕಾರ್ಯದಿಂದಾಗಿ ಸಂತಾಪಹೊಂದದಿರಿ. ನಾನು ಈ ವ್ರತವನ್ನು ನೆರವೇರಿಸಬಲ್ಲೆ. ಗಟ್ಟಿಮನಸ್ಸೇ ಇದನ್ನು ಯಶಸ್ವಿಗೊಳಿಸಬಲ್ಲದು ಮತ್ತು ನಾನು ಆ ಗಟ್ಟಿಮನಸ್ಸಿನಿಂದಲೇ ಇದನ್ನು ಪ್ರಾರಂಭಿಸಿದ್ದೇನೆ."

ಆಗ ದ್ಯುಮತ್ಸೇನನು ಪುನಃ ಹೇಳಿದನು:

> "ವ್ರತವನ್ನು ಮುರಿ ಎಂದು ನಾನು ನಿನಗೆ ಹೇಳುವುದು ಹೇಗೆ ತಾನೇ ಸರಿಯಾಗುತ್ತದೆ? ನನ್ನ ಪರಿಸ್ಥಿತಿಯಲ್ಲಿರುವವನು ನೀನು ಇದನ್ನು ಪೂರೈಸಬಲ್ಲೆ ಎಂದು ಮಾತ್ರ ಬಯಸಬಲ್ಲ!"

ಹೀಗೆ ಹೇಳಿ ದ್ಯುಮತ್ಸೇನನು ನಿವೃತ್ತನಾದನು. ನಿಂತಿದ್ದ ಸಾವಿತ್ರಿಯಾದರೋ ಮರದ ಕೋಲಿನಂತೆ ಕಾಣುತ್ತಿದ್ದಳು. ನಾಳೆ ಗಂಡನು ಸಾಯುತ್ತಾನೆ ಎಂದು ದುಃಖಿಸುತ್ತಾ ಸಾವಿತ್ರಿಯು ರಾತ್ರಿಗಳು ಕಳೆದಂತೆ ಕೊನೆಯ ರಾತ್ರಿಯೂ ಮುಗಿವುವವರೆಗೆ ನಿಂತುಕೊಂಡೇ

ಇದ್ದಳು. ಆ ದಿವಸವಾದ ಇಂದೂ ಸೂರ್ಯೋದಯದೊಂದಿಗೆ ಪೂರ್ವಾಹ್ಣಿಕ ಕ್ರಿಯೆಗಳನ್ನು ಪೂರೈಸಿ ಅಗ್ನಿಯನ್ನು ಉರಿಸಿ ಆಹುತಿಗಳನ್ನಿತ್ತಳು. ಅನಂತರ ಎಲ್ಲ ದ್ವಿಜರಿಗೂ, ವೃದ್ಧ ಅತ್ತೆ-ಮಾವಂದಿರಿಗೂ ನಮಸ್ಕರಿಸಿ ಅಂಜಲೀಬದ್ಧಳಾಗಿ, ಅವರ ಎದಿರು ನಿಯತಳಾಗಿ ನಿಂತುಕೊಂಡಳು. ತಪೋವನದಲ್ಲಿ ವಾಸಿಸುತ್ತಿದ್ದ ಎಲ್ಲ ತಪಸ್ವಿಗಳೂ ಶುಭೆ ಸಾವಿತ್ರಿಗೆ ಅವೈಧವ್ಯತ್ವವನ್ನು ಆಶೀರ್ವಾದವಾಗಿ ಹೇಳಿದರು. ಧ್ಯಾನಯೋಗಪರಾಯಣಳಾಗಿ ಸಾವಿತ್ರಿಯು ಹಾಗೆಯೇ ಆಗಲೆಂದು ಹೇಳಿ ಆ ತಪಸ್ವಿಗಳೆಲ್ಲರ ಮಾತುಗಳನ್ನೂ ಮನಸ್ಸಿನಲ್ಲಿಯೇ ಪುನರುಚ್ಛರಿಸಿದಳು. ನಾರದನ ವಚನಗಳ ಕುರಿತು ಚಿಂತಿಸುತ್ತಾ ಅವಳು ಅವನು ಹೇಳಿದ್ದ ಕಾಲ-ಮುಹೂರ್ತಗಳಿಗೆ ಕಾಯುತ್ತಿದ್ದಳು. ಹೀಗೆ ಏಕಾಂತದಲ್ಲಿ ಕುಳಿತಿದ್ದ ಸಾವಿತ್ರಿಗೆ ಅತ್ತೆ-ಮಾವಂದಿರು ಪ್ರೀತಿಯಿಂದ ಹೇಳಿದರು:

> "ವ್ರತದ ಕಠಿಣ ನಿಯಮಗಳನ್ನು ಯಥಾವತ್ತಾಗಿ ಪಾಲಿಸಿ ಅದನ್ನು ಸಮಾಪ್ತಿಗೊಳಿಸಿದ್ದೀಯೆ. ಈಗ ನೀನು ಆಹಾರವನ್ನು ಸೇವಿಸುವ ಸಮಯವು ಬಂದಿದೆ. ಊಟಮಾಡು!"

ಅದಕ್ಕೆ ಸಾವಿತ್ರಿಯು ಉತ್ತರಿಸಿದಳು:

> "ಸೂರ್ಯಾಸ್ತ ಮತ್ತು ನನ್ನ ಆಸೆಯು ಪೂರೈಸಿದ ನಂತರವೇ ನಾನು ಆಹಾರಸೇವಿಸುತ್ತೇನೆ ಎಂದು ನನ್ನ ಹೃದಯದಲ್ಲಿ ಸಂಕಲ್ಪಿಸಿಕೊಂಡಿದ್ದೇನೆ. ಅದರಂತೆಯೇ ನಡೆದುಕೊಳ್ಳುತ್ತೇನೆ."

ಭೋಜನದ ಕುರಿತು ಸಾವಿತ್ರಿಯು ಹೀಗೆ ಹೇಳುತ್ತಿರಲು ಸತ್ಯವಾನನು ಹೆಗಲಮೇಲೆ ಕೊಡಲಿಯನ್ನಿಟ್ಟು ಕಾಡಿಗೆ ಹೊರಟನು. ಸಾವಿತ್ರಿಯು ಗಂಡನನ್ನು ತಡೆದು

> "ನೀನೊಬ್ಬನೇ ಹೋಗಕೂಡದು. ನಾನೂ ನಿನ್ನೊಡನೆ ಬರುತ್ತೇನೆ. ನೀನೊಬ್ಬನನ್ನೇ ಬಿಡಬಾರದು!"

ಎಂದಳು. ಆಗ ಸತ್ಯವಾನನು ಹೇಳಿದನು:

> "ಭಾಮಿನೀ! ಈ ಮೊದಲು ನೀನು ಕಾಡಿಗೆ ಹೋಗಿಲ್ಲ ಮತ್ತು ಅಲ್ಲಿಯ ದಾರಿಯು ದುಃಖತರವಾದುದು. ಮೇಲಾಗಿ ವ್ರತೋಪವಾಸಗಳಿಂದ ನೀನು ಬಳಲಿದ್ದೀಯೆ. ಕಾಲ್ನಡುಗೆಯಲ್ಲಿಯೇ ಹೇಗೆ ಹೋಗಬಲ್ಲೆ?"

ಸಾವಿತ್ರಿಯು ಹೇಳಿದಳು:

> "ಈ ಉಪವಾಸದಿಂದ ಬಳಲಿಲ್ಲ ಮತ್ತು ಬಲಹೀನಳೂ ಆಗಿಲ್ಲ. ನಿನ್ನೊಡನೆ ಬರುತ್ತಿದ್ದೇನಲ್ಲಾ ಎಂದು ಉತ್ಸಾಹವಿದೆ. ನನ್ನ ಈ ಬಯಕೆಯನ್ನು ನಿರಾಕರಿಸದಿರು."

ಸತ್ಯವಾನನು ಹೇಳಿದನು:

> "ಬರಲು ಅಷ್ಟೊಂದು ಉತ್ಸಾಹವಿದ್ದರೆ ನಿನಗಿಷ್ಟವಾದಂತೆ ಮಾಡುತ್ತೇನೆ. ನಾನು ನಿನ್ನನ್ನು ಬರಲು ಹೇಳಿಲ್ಲ. ಆದುದರಿಂದ

ಹಿರಿಯರ ಅಪ್ಪಣೆಯನ್ನು ಪಡೆದು ಬಾ.”


ಆಗ ಆ ಮಹಾವ್ರತೆಯು ತನ್ನ ಅತ್ತೆ-ಮಾವಂದಿರ ಬಳಿ ಹೋಗಿ

“ನನ್ನ ಪತಿಯು ಹಣ್ಣುಗಳನ್ನು ಮತ್ತು ಅಗ್ನಿಹೋತ್ರಕ್ಕಾಗಿ ಸಮಿತ್ತುಗಳನ್ನು ತರಲು ಕಾಡಿಗೆ ಹೋಗುತ್ತಿದ್ದಾನೆ. ನೀವು ನನಗೆ ಅನುಜ್ಞೆಯನ್ನಿತ್ತರೆ ನಾನೂ ಕೂಡ ಅವನೊಂದಿಗೆ ಹೋಗಲು ಬಯಸುತ್ತೇನೆ. ಒಂದು ಕ್ಷಣವೂ ಅವನ ವಿರಹವನ್ನು ಸಹಿಸಲಾರೆ. ಅಲ್ಲದೇ ಸುಮಾರು ಒಂದು ವರ್ಷಗಳಾಗುತ್ತಾ ಬಂದಿದೆ ನಾನು ಈ ಆಶ್ರಮದ ಹೊರಗೇ ಹೋಗಿಲ್ಲ. ವನಗಳಲ್ಲಿನ ಹೂಗಳನ್ನು ನೋಡುವ ಪರಮ ಕುತೂಹಲವು ನನಗುಂಟಾಗಿದೆ.”

ದ್ಯುಮತ್ಸೇನನು ಹೇಳಿದನು:

“ಸಾವಿತ್ರೀ! ನಿನ್ನ ತಂದೆಯು ನಿನ್ನನ್ನು ನನಗೆ ಸೊಸೆಯಾಗಿ ಕೊಟ್ಟಾಗಿನಿಂದ ಇದೂವರೆಗೆ ನೀನು ನನ್ನಲ್ಲಿ ಏನನ್ನಾದರೂ ಕೇಳಿದ್ದುದಿಲ್ಲ. ಆದುದರಿಂದ ನೀನು ಬಯಸಿದುದನ್ನು ಪಡೆ. ಪುತ್ರಿ! ಸತ್ಯವಾನನೊಂದಿಗೆ ದಾರಿಯಲ್ಲಿ ಎಚ್ಚರಿಕೆಯಿಂದ ಹೋಗು!”

ಅವರಿಬ್ಬರಿಂದಲೂ ಅಪ್ಪಣೆಪಡೆದು ಸಾವಿತ್ರಿಯು ಗಂಡನೊಂದಿಗೆ ಹೊರಟಳು. ನೋಡಲು ಸಂತೋಷದಿಂದ ನಗುತ್ತಿರುವಂತೆ



ಕಂಡುಬಂದರೂ ಹೃದಯದಲ್ಲಿ ಅವಳು ಬಹುದುಃಖಿತಳಾಗಿದ್ದಳು. ಆ ವಿಪುಲೇಕ್ಷಣೆಯು ಸಂತೋಷದಿಂದ ನಲಿಯುತ್ತಿದ್ದ ನವಿಲುಗಳಿಂದ ತುಂಬಿದ್ದ ಆ ವಿಚಿತ್ರ ರಮಣೀಯ ವನವನ್ನು ನೋಡಿದಳು. ಹರಿಯುತ್ತಿದ್ದ ಪುಣ್ಯನದಿಗಳನ್ನೂ ಎತ್ತರ ಗಿರಿಗಳನ್ನೂ ನೋಡು ನೋಡು ಎಂದು ಸತ್ಯವಾನನು ಸಾವಿತ್ರಿಗೆ ಮಧುರಾಕ್ಷರಗಳಿಂದ ಹೇಳುತ್ತಿದ್ದನು. ಆ ಅನಿಂದಿತೆಯು ಮುನಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ಮೃತ್ಯುವು ಬಂದಾಗ ತನಗೆ ತಿಳಿಯಬೇಕೆಂದು ಗಂಡನ ಸರ್ವಾವಸ್ಥೆಗಳನ್ನೂ ನಿರೀಕ್ಷಿಸುತ್ತಿದ್ದಳು. ಹೃದಯವನ್ನು ಎರಡು ಮಾಡಿಕೊಂಡು – ಒಂದನ್ನು ಅವನ ಮೇಲಿರಿಸಿ ಇನ್ನೊಂದರಿಂದ ಕಾಲವನ್ನು ಕಾಯುತ್ತಾ – ಮೆಲ್ಲನೆ ಗಂಡನನ್ನು ಅನುಸರಿಸಿ ನಡೆದಳು.

## ಯಮ-ಸಾವಿತ್ರೀ ಸಂವಾದ

ನಂತರ ಸತ್ಯವಾನನು ಪತ್ನಿಯ ಸಹಾಯದಿಂದ ಹಣ್ಣುಗಳನ್ನು ಕಿತ್ತು ಬುಟ್ಟಿಯಲ್ಲಿ ತುಂಬಿಸಿ ಕಟ್ಟಿಗೆ ಕಡಿಯಲು ಪ್ರಾರಂಭಿಸಿದನು. ಅವನು ಕಟ್ಟಿಗೆ ಕಡಿಯುತ್ತಿರಲು ಶ್ರಮದಿಂದ ಬೆವರಿಳಿದು ಅವನಿಗೆ ತಲೆ ನೋಯತೊಡಗಿತು. ಆಯಾಸಗೊಂಡ ಅವನು ಪ್ರಿಯ ಪತ್ನಿಯ ಬಳಿಬಂದು

> “ಈ ಶ್ರಮದಿಂದ ನನ್ನ ತಲೆನೋಯುತ್ತಿದೆ. ಅಂಗಾಂಗಗಳೂ ಹೃದಯವೂ ನೋಯುತ್ತಿವೆ. ನಾನು ಅಸ್ವಸ್ಥನಾಗಿದ್ದೇನೆಂದು ತೋರುತ್ತಿದೆ. ಶೂಲಗಳು ನನ್ನ ತಲೆಯನ್ನು ತಿವಿಯುತ್ತಿರುವಂತೆ

ಅನಿಸುತ್ತಿದೆ. ಮಲಗಲು ಬಯಸುತ್ತೇನೆ. ನಿಂತುಕೊಂಡಿರಲು ನನ್ನಲ್ಲಿ ಶಕ್ತಿಯಿಲ್ಲ”

ಎಂದನು. ತಕ್ಷಣವೇ ಸಾವಿತ್ರಿಯು ನೆಲದ ಮೇಲೆ ಕುಳಿತುಕೊಂಡು ಅವನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡಳು. ನಾರದನ ಮಾತುಗಳನ್ನು ನೆನಪಿಸಿಕೊಂಡ ಆ ತಪಸ್ವಿನಿಯು ಆ ಮುಹೂರ್ತ, ಕ್ಷಣ, ಕಾಲ, ದಿವಸವು ಕೂಡಿಬಂದಿದೆಯೆಂದು ಅರ್ಥಮಾಡಿಕೊಂಡಳು. ಮುಹೂರ್ತದಲ್ಲಿಯೇ ಅವಳು ಹಳದಿಬಣ್ಣದ ವಸ್ತ್ರವನ್ನುಟ್ಟು ತೇಜಸ್ಸಿನಲ್ಲಿ ಆದಿತ್ಯನಂತೆ ಹೊಳೆಯುತ್ತಿದ್ದ ಕಿರೀಟಧಾರೀ ಪುರುಷನೋರ್ವನನ್ನು ಕಂಡಳು. ಅವನ ಕಪ್ಪು ದೇಹವು ಹೊಳೆಯುತ್ತಿತ್ತು, ಕಣ್ಣುಗಳು ರಕ್ತದಂತೆ ಕೆಂಪಾಗಿದ್ದವು. ಕೈಯಲ್ಲಿ ಪಾಶವನ್ನು ಹಿಡಿದಿದ್ದ ಅವನ ಮುಖವು ಭಯವನ್ನುಂಟುಮಾಡುವಂತಿತ್ತು. ಪಕ್ಕದಲ್ಲಿ ನಿಂತು ಅವನು ಸತ್ಯವಾನನನ್ನೇ ನೋಡುತ್ತಿದ್ದನು. ಆ ಪುರುಷನನ್ನು ನೋಡಿದಾಕ್ಷಣವೇ ಸಾವಿತ್ರಿಯು ಪತಿಯ ತಲೆಯನ್ನು ನಿಧಾನವಾಗಿ ನೆಲದ ಮೇಲಿರಿಸಿ ಎದ್ದು ಅಂಜಲೀಬದ್ಧಳಾಗಿ ಹೃದಯದಲ್ಲಿ ಕಂಪಿಸುತ್ತಾ ಆರ್ತಳಾಗಿ ನುಡಿದಳು:

“ಅಮಾನುಷ ದೇಹಧಾರಿಯಾದ ನೀನು ದೇವತೆಯೆಂದು ತಿಳಿಯುತ್ತೇನೆ. ದೇವ! ನಿನಗೆ ಇಷ್ಟವಾದರೆ ಹೇಳು. ನೀನು ಯಾರು ಮತ್ತು ಏನು ಮಾಡಲು ಬಯಸುತ್ತಿರುವೆ?”



ಯಮನು ಹೇಳಿದನು:

> “ಸಾವಿತ್ರಿ! ನೀನು ಪತಿವ್ರತೆ ಮತ್ತು ತಪೋನ್ವಿತೆಯಾಗಿರುವುದರಿಂದಲೇ ನಾನು ನಿನ್ನೊಡನೆ ಮಾತನಾಡಬಲ್ಲೆ. ಶುಭೇ! ನಾನು ಯಮನೆಂದು ತಿಳಿ. ಈ ನಿನ್ನ ಪತಿ ರಾಜಕುಮಾರ ಸತ್ಯವಾನನು ಕ್ಷೀಣಾಯುವು. ಇವನನ್ನು ಬಂಧಿಸಿ ನನ್ನೊಡನೆ ಕರೆದುಕೊಂಡು ಹೋಗಲು ಬಯಸಿ ಬಂದಿದ್ದೇನೆ.”

ಹೀಗೆ ಹೇಳಿ ಭಗವಾನ್ ಪಿತೃರಾಜನು ಅವಳನ್ನು ಸಂತೋಷಗೊಳಿಸಲು ತನ್ನ ಮಾತನ್ನು ಮುಂದುವರೆಸಿ



“ಇವನು ಧರ್ಮಸಂಯುಕ್ತನೂ, ರೂಪವಂತನೂ, ಗುಣಸಾಗರನು ಆಗಿದ್ದಾನಾದುದರಿಂದ ನನ್ನ ಪುರುಷರು ಇವನನ್ನು ಎಳೆದುಕೊಂಡು ಹೋಗಲು ಅರ್ಹರಲ್ಲವೆಂದು ನಾನೇ ಇಲ್ಲಿಗೆ ಬಂದಿದ್ದೇನೆ.”

ಎಂದನು. ಹೀಗೆ ಹೇಳಿ ಯಮನು ಬಲವನ್ನುಪಯೋಗಿಸಿ ಸತ್ಯವಾನನ ದೇಹದಿಂದ ಅಂಗುಷ್ಠಗಾತ್ರದ ಪುರುಷನನ್ನು ಪಾಶಕ್ಕೆ ಕಟ್ಟಿ ಎಳೆದು ಹೊರತೆಗೆದನು. ಪ್ರಾಣವು ಹೊರಟುಹೋಗಲು ಸತ್ಯವಾನನ ಶ್ವಾಸವು ನಿಂತಿತು, ಕಳೆಯು ಕುಂದಿತು ಮತ್ತು ನಿರ್ವಿಚೇಷ್ಟವಾದ ಆ ಶರೀರವು ನೋಡಲು ಅಪ್ರಿಯವಾಗಿ ತೋರಿತು. ಅವನನ್ನು ಬಂಧಿಸಿ ಯಮನು

ದಕ್ಷಿಣಾಭಿಮುಖವಾಗಿ ಹೊರಟನು. ನಿಯಮ-ವ್ರತಗಳಿಂದ ಸಂಸಿದ್ಧಳಾಗಿದ್ದ ಆ ಪತಿವ್ರತೆ ಸಾವಿತ್ರಿಯೂ ಕೂಡ ದುಃಖಾರ್ತಳಾಗಿ ಯಮನನ್ನು ಹಿಂಬಾಲಿಸಿದಳು. ಆಗ ಯಮನು ಹೇಳಿದನು:

> "ಸಾವಿತ್ರಿ! ಹಿಂದಿರುಗಿ ಹೋಗು ಮತ್ತು ಅವನ ಔರ್ಧ್ವದೇಹಿಕ ಕ್ರಿಯೆಗಳನ್ನು ನಡೆಸು. ನೀನು ನಿನ್ನ ಪತಿಯ ಋಣವನ್ನು ತೀರಿಸಿದ್ದೀಯೆ. ಎಲ್ಲಿಯವರೆಗೆ ಅವನೊಂದಿಗೆ ಹೋಗಬಹುದಾಗಿತ್ತೋ ಅಲ್ಲಿಯವರೆಗೆ ನೀನು ಬಂದಿದ್ದೀಯೆ."

ಸಾವಿತ್ರಿಯು ಹೇಳಿದಳು:

> "ನನ್ನ ಪತಿಯನ್ನು ಎಲ್ಲಿಗೆ ಕರೆದೊಯ್ಯಲಾಗುತ್ತದೆಯೋ ಅಥವಾ ಸ್ವಯಂ ಅವನೇ ಎಲ್ಲಿಗೆ ಹೋಗುತ್ತಾನೋ ಅಲ್ಲಿಗೆ ನಾನೂ ಹೋಗಬೇಕೆನ್ನುವುದು ಸನಾತನ ಧರ್ಮ. ತಪಸ್ಸು, ಗುರುಭಕ್ತಿ, ಪತಿಯ ಮೇಲಿನ ಪ್ರೀತಿ ಮತ್ತು ನಿನ್ನ ಪ್ರಸಾದದಿಂದ ನನ್ನ ಈ ಪ್ರಯಾಣವನ್ನು ಯಾವುದೂ ತಡೆಯಲಾರದು. ಒಟ್ಟಿಗೇ ಏಳು ಹೆಜ್ಜೆ ನಡೆದರೆ ಮಿತ್ರರಾಗುತ್ತಾರೆ ಎಂದು ತಿಳಿದ ತತ್ತ್ವದರ್ಶಿಗಳು ಹೇಳುತ್ತಾರೆ. ಆ ಮಿತ್ರತ್ವವನ್ನು ಗೌರವಿಸಿ ನಿನ್ನಲ್ಲಿ ಏನೋ ಒಂದನ್ನು ಹೇಳಲು ಬಯಸುತ್ತೇನೆ. ಅದನ್ನು ಕೇಳು. ಆತ್ಮವಿಲ್ಲದವನು ವನದಲ್ಲಿ ಧರ್ಮಚಾರಿಯಾಗಿದ್ದು ಪರಿಶ್ರಮಪಟ್ಟು ವಾಸಿಸಲು ಸಾಧ್ಯವಿಲ್ಲ. ವಿಜ್ಞಾನಿಗಳು ಧರ್ಮದಲ್ಲಿಯೇ ಸುಖವಿದೆಯೆಂದು

ಹೇಳುತ್ತಾರೆ. ಆದುದರಿಂದ ಸಂತರು ಧರ್ಮವೇ ಪ್ರಧಾನವೆಂದು ಹೇಳುತ್ತಾರೆ. ಸಾತ್ವಿಕರ ಮತದಂತೆ ಎಲ್ಲಕ್ಕಿಂತಲೂ ಹೆಚ್ಚಾಗಿ ಪುರುಷನ ಧರ್ಮವೇ ಅವನನ್ನು ಸರಿಯಾದ ಮಾರ್ಗದಲ್ಲಿರುಸುತ್ತದೆ. ಎರಡನೆಯದನ್ನು ಅಥವಾ ಮೂರನೆಯದನ್ನು ಇಚ್ಛಿಸಬಾರದು. ಆದುದರಿಂದ ಸಂತರು ಧರ್ಮವೇ ಪ್ರಧಾನವೆಂದು ಹೇಳುತ್ತಾರೆ."

ಯಮನು ಹೇಳಿದನು:

"ಅನಿಂದಿತೇ! ಹಿಂದಿರುಗು! ಸ್ವರಾಕ್ಷರ ವ್ಯಂಜನಗಳನ್ನು ಸರಿಯಾಗಿ ಜೋಡಿಸಿ ಹೇಳಿದ ನಿನ್ನ ಈ ಮಾತಿನಿಂದ ನಾನು ತೃಪ್ತನಾಗಿದ್ದೇನೆ. ಇವನ ಜೀವವನ್ನು ಬಿಟ್ಟು ಬೇರೆ ಏನಾದರೂ ವರವನ್ನು ಕೇಳು. ನಿನ್ನ ವರವೆಲ್ಲವನ್ನೂ ಕೊಡುತ್ತೇನೆ."

ಸಾವಿತ್ರಿಯು ಹೇಳಿದಳು:

"ನನ್ನ ಮಾವನು ಕಣ್ಣು-ಸ್ವರಾಜ್ಯಗಳನ್ನು ಕಳೆದುಕೊಂಡು ವನವಾಸದ ಆಶ್ರಮದಲ್ಲಿದ್ದಾನೆ. ನಿನ್ನ ಪ್ರಸಾದದಿಂದ ಆ ನೃಪತಿಯು ಕಣ್ಣುಗಳನ್ನು ಪಡೆದು ಅಗ್ನಿ-ಸೂರ್ಯಸನ್ನಿಭನಾಗಿ ಬಲವಂತನಾಗಲಿ!"

ಯಮನು ಹೇಳಿದನು:

"ಅನಿಂದಿತೇ! ನಿನಗೆ ಈ ವರವೆಲ್ಲವನ್ನೂ ಕೊಟ್ಟಿದ್ದೇನೆ. ನೀನು ಹೇಳಿದಂತೆಯೇ ಆಗುತ್ತದೆ. ಬಹುದೂರ ನಡೆದು ಬಂದು ಬಳಲಿದ್ದೀಯೆಂದು ತೋರುತ್ತಿದೆ. ಹಿಂದಿರುಗಿ ಹೋಗು. ಇನ್ನೂ ಆಯಾಸಗೊಳ್ಳಬೇಡ!"

ಸಾವಿತ್ರಿಯು ಹೇಳಿದಳು:

"ಪತಿಯು ಸಮೀಪದಲ್ಲಿರುವಾಗ ನನಗೆ ಎಲ್ಲಿಯ ಆಯಾಸ? ನನ್ನ ಪತಿಯೆಲ್ಲಿದ್ದಾನೋ ಅದೇ ನನ್ನ ಗತಿ. ಎಲ್ಲಿಗೆ ನನ್ನ ಪತಿಯನ್ನು ಕರೆದುಕೊಂಡು ಹೋಗುತ್ತಿದ್ದೀಯೋ ಅಲ್ಲಿಗೆ ನಾನೂ ಕೂಡ ಹೋಗಬೇಕು. ಸುರೇಶ! ಇನ್ನೊಮ್ಮೆ ನನ್ನ ಈ ಮಾತುಗಳನ್ನು ಕೇಳು. ಸತ್ಯವಂತರ ಸಂಗವು ಅಲ್ಪಸಮಯದ್ದಾದರೂ ಪರಮ ಪ್ರಿಯಕರವಾದುದು. ಅದಕ್ಕಿಂತಲೂ ಶ್ರೇಷ್ಠವಾದುದು ಅವರನ್ನು ಮಿತ್ರರನ್ನಾಗಿಸಿಕೊಳ್ಳುವುದು ಎಂದು ಹೇಳುತ್ತಾರೆ. ಸತ್ಪುರುಷರ ಸಂಗವು ಎಂದೂ ಫಲನೀಡದೇ ಇರುವುದಿಲ್ಲ. ಆದುದರಿಂದ ಸತ್ಯವಂತರ ಸಮಾಗಮದಲ್ಲಿ ,ಅವರ ಹತ್ತಿರದಲ್ಲಿ ಇರಬೇಕು."

ಯಮನು ಹೇಳಿದನು:

"ಭಾಮಿನೀ! ಮನಸ್ಸಿಗೆ ಅನುಕೂಲವಾದ, ಬುದ್ಧಿವಂತರ ಬುದ್ಧಿಯನ್ನು ಹೆಚ್ಚಿಸುವ, ಹಿತಾಶ್ರಯ ಮಾತನ್ನು ಆಡಿದ್ದೀಯೆ.

ಪುನಃ ಸತ್ಯವಾನನ ಜೀವವನ್ನು ಬಿಟ್ಟು ಎರಡನೆಯ ವರವನ್ನು ಕೇಳಿಕೋ.”

ಸಾವಿತ್ರಿಯು ಹೇಳಿದಳು:

“ನನ್ನ ಮಾವ ಧೀಮಂತ ಪಾರ್ಥಿವನು ಹಿಂದೆ ಕಳೆದುಕೊಂಡಿದ್ದ ತನ್ನ ರಾಜ್ಯವನ್ನು ಪಡೆಯಲಿ. ಗುರುವಿನಂತಿರುವ ಅವನು ಸ್ವಧರ್ಮವನ್ನು ಎಂದೂ ತ್ಯಜಿಸದಿರಲಿ. ಇದನ್ನೇ ನಿನ್ನಿಂದ ಎರಡನೆಯ ವರವಾಗಿ ಕೇಳುತ್ತೇನೆ.”

ಯಮನು ಹೇಳಿದನು:

“ಬೇಗನೇ ಸುಲಭವಾಗಿ ನೃಪನು ತನ್ನ ರಾಜ್ಯವನ್ನು ಪಡೆಯುತ್ತಾನೆ ಮತ್ತು ಸ್ವಧರ್ಮದಿಂದ ಅವನು ಎಂದೂ ಚ್ಯುತನಾಗುವುದಿಲ್ಲ. ನೃಪತಾತ್ಮಜೇ! ನೀನು ಬಯಸಿದುದನ್ನು ನಾನು ಮಾಡಿದ್ದೇನೆ. ಹಿಂದಿರುಗಿ ಹೋಗು! ನಿನಗೆ ಶ್ರಮವಾಗದಿರಲಿ!”

ಸಾವಿತ್ರಿಯು ಹೇಳಿದಳು:

“ನೀನು ಈ ಪ್ರಜೆಗಳನ್ನು ನಿಯಮಮಾತ್ರದಿಂದ ನಿಯಂತ್ರಿಸುತ್ತೀಯೆ. ನಿಯಮದಿಂದಲೇ ಅವರನ್ನು ನೀನು

ಕೊಂಡೊಯ್ಯುತ್ತೀಯೆ. ನಿನಗೆ ಬೇಕೆಂದಲ್ಲ. ಆದುದರಿಂದಲೇ ನೀನು ಯಮನೆಂದು ವಿಶ್ರುತನಾಗಿದ್ದೀಯೆ. ದೇವ! ನಾನು ಹೇಳುವ ಈ ಮಾತುಗಳನ್ನು ಕೇಳು. ಸರ್ವಭೂತಗಳಿಗೂ ಕರ್ಮ-ಮನಸ್ಸು-ಮಾತುಗಳಿಂದ ದ್ರೋಹವೆಸಗದೇ ಇರುವುದು, ಅನುಗ್ರಹ ಮತ್ತು ದಾನ ಇವು ಸಾತ್ವಿಕರ ಸನಾತನ ಧರ್ಮ, ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಮಾತ್ರ ಕರುಣೆ ತೋರುವುದು ಮನುಷ್ಯಲೋಕದಲ್ಲಿ ಸಾಧಾರಣವಾಗಿ ನಡೆಯುತ್ತದೆ. ಆದರೆ ಸಾತ್ವಿಕರು ಅವರ ಶತ್ರುಗಳು ಬಂದರೂ ಅವರಿಗೆ ದಯೆಯನ್ನು ತೋರುತ್ತಾರೆ."

ಯಮನು ಹೇಳಿದನು:

"ನಿನ್ನ ಈ ಮಾತುಗಳು ಬಾಯಾರಿಕೆಯಿಂದ ಬಳಲಿದವನಿಗೆ ನೀರಿತ್ತಂತೆ ತೃಪ್ತಿಕರವಾಗಿವೆ. ಶುಭೇ! ಈ ಸತ್ಯವಾನನ ಜೀವವನ್ನು ಬಿಟ್ಟು ನಿನಗಿಷ್ಟವಾದ ವರವನ್ನು ಕೇಳು."

ಸಾವಿತ್ರಿಯು ಹೇಳಿದಳು:

"ನನ್ನ ತಂದೆ ರಾಜನಿಗೆ ಗಂಡು ಮಕ್ಕಳಿಲ್ಲ. ಅವನಿಗೆ ಕುಲವನ್ನು ಮುಂದುವರೆಸಿಕೊಂಡುಹೋಗುವ ನೂರು ಔರಸಪುತ್ರರಾಗಲಿ. ನಿನ್ನಿಂದ ಈ ಮೂರನೆಯ ವರವನ್ನು ಕೇಳುತ್ತೇನೆ."

ಯಮನು ಹೇಳಿದನು:

“ಶುಭೇ! ಕುಲವನ್ನು ಮುಂದುವರೆಸಿಕೊಂಡು ಹೋಗುವ ನೂರು ಸುವರ್ಚಸ ಮಕ್ಕಳು ನಿನ್ನ ತಂದೆಗಾಗುವರು. ನಿನ್ನ ಬಯಕೆಯು ನೆರವೇರಿತು. ಹಿಂದಿರುಗು. ಬಹಳ ದೂರ ಬಂದುಬಿಟ್ಟಿದ್ದೀಯೆ.”

ಸಾವಿತ್ರಿಯು ಹೇಳಿದಳು:

“ನನ್ನ ಪತಿಯ ಸನ್ನಿಧಿಯಲ್ಲಿರುವಾಗ ಇದೇನೂ ದೂರವಲ್ಲ. ಇದಕ್ಕಿಂತಲೂ ದೂರ ನನ್ನ ಮನಸ್ಸು ಓಡುತ್ತಿದೆ. ನಿನ್ನ ಜೊತೆಯಲ್ಲಿಯೇ ಹೋಗುತ್ತಿರುವಾಗ ನಾನು ನಿನಗೆ ಹೇಳುವ ಇನ್ನೊಂದು ಮಾತನ್ನು ಕೇಳು. ನೀನು ವಿವಸ್ವತನ ಪ್ರತಾಪವಂತ ಮಗ. ಆದುದರಿಂದಲೇ ತಿಳಿದವರು ನಿನ್ನನ್ನು ವೈವಸ್ವತನೆಂದು ಕರೆಯುತ್ತಾರೆ. ಶಮ-ಧರ್ಮಗಳಿಂದ ಪ್ರಜೆಗಳು ನಿನ್ನನ್ನು ರಂಜಿಸುತ್ತಾರೆ. ಆದುದರಿಂದಲೇ ನಿನ್ನನ್ನು ಧರ್ಮರಾಜನೆಂದು ಕರೆಯುತ್ತಾರೆ. ಸಾತ್ವಿಕನ ಮೇಲಿದ್ದ ವಿಶ್ವಾಸವು ಸ್ವಯಂ ಆತ್ಮನ ಮೇಲೂ ಇರುವುದಿಲ್ಲ. ಆದುದರಿಂದ ವಿಶೇಷವಾಗಿ ಎಲ್ಲರೂ ಸಾತ್ವಿಕರನ್ನು ಪ್ರೀತಿಸಲು ಬಯಸುತ್ತಾರೆ. ಸರ್ವಭೂತಗಳ ಮೇಲಿರುವ ಸೌಹಾರ್ದತೆಯಿಂದ ವಿಶ್ವಾಸವು ಹುಟ್ಟುತ್ತದೆ. ಆದುದರಿಂದ ಜನರು ವಿಶೇಷವಾಗಿ ಸಾತ್ವಿಕರನ್ನು ಪ್ರೀತಿಸುತ್ತಾರೆ.”

ಯಮನು ಹೇಳಿದನು:

“ಸುಂದರಿ! ನೀನು ಈಗ ಹೇಳಿದ ಶುಭ ಮಾತನ್ನು ಬೇರೆ ಯಾರಿಂದಲೂ ನಾನು ಕೇಳಲಿಲ್ಲ. ಇದರಿಂದ ನಾನು ತುಷ್ಟನಾಗಿದ್ದೇನೆ.ಇವನ ಜೀವವನ್ನು ಬಿಟ್ಟು ನಾಲ್ಕನೆಯ ವರವನ್ನು ಕೇಳಿ ಹೊರಟು ಹೋಗು.”

ಸಾವಿತ್ರಿಯು ಹೇಳಿದಳು:

“ಸತ್ಯವಾನ್ ಮತ್ತು ನನ್ನಲ್ಲಿ ನಮ್ಮಿಬ್ಬರ ಕುಲವನ್ನು ಮುಂದುವರೆಸಿಕೊಂಡು ಹೋಗುವ ನೂರು ಬಲಶಾಲೀ ವೀರ್ಯಶಾಲೀ ಔರಸ ಮಕ್ಕಳಾಗಲಿ. ಇದು ನಾನು ನಿನ್ನಲ್ಲಿ ಕೇಳುವ ನಾಲ್ಕನೆಯ ವರ.”

ಯಮನು ಹೇಳಿದನು:

“ಅಬಲೇ! ಬಲವೀರ್ಯಶಾಲಿಗಳಾದ ಪ್ರೀತಿಕರ ನೂರು ಪುತ್ರರು ನಿನಗಾಗುತ್ತಾರೆ. ಪರಿಶ್ರಮಪಡಬೇಡ. ಹಿಂದಿರುಗು. ಈ ಮಾರ್ಗದಲ್ಲಿ ಬಹಳಷ್ಟು ದೂರ ಬಂದಿದ್ದೀಯೆ.”

ಸಾವಿತ್ರಿಯು ಹೇಳಿದಳು:

“ಸಾತ್ವಿಕರು ಸದಾ ಶಾಶ್ವತೀ ಧರ್ಮದಲ್ಲಿ ನಡೆದುಕೊಳ್ಳುತ್ತಾರೆ. ಸಾತ್ವಿಕರು ಭಯದಿಂದ ನಡುಗುವುದಿಲ್ಲ ಮತ್ತು

ವ್ಯಥಿಸುವುದಿಲ್ಲ. ಸಾತ್ವಿಕರೊಂದಿಗೆ ಸಾತ್ವಿಕರ ಸಂಗವು ಫಲವಿಲ್ಲದೇ ಇರುವುದಿಲ್ಲ. ಸಾತ್ವಿಕರಿಗೆ ಸಾತ್ವಿಕರಿಂದ ಯಾವುದೇ ರೀತಿಯ ಭಯವೂ ಇರುವುದಿಲ್ಲ. ಸಂತರು ಸತ್ಯದಿಂದಲೇ ಸೂರ್ಯನನ್ನು ನಡೆಸುತ್ತಾರೆ. ಸಂತರು ತಪಸ್ಸಿನಿಂದ ಭೂಮಿಯನ್ನು ಎತ್ತಿ ಹಿಡಿಯುತ್ತಾರೆ. ಸಂತರು ಭೂತ ಮತ್ತು ಭವಿಷ್ಯಗಳ ಗತಿ. ಸಂತರು ಸಂತರ ಮಧ್ಯೆ ಅಳಿಸಿಹೋಗುವುದಿಲ್ಲ. ಪ್ರತಿಕ್ರಿಯೆಗಳನ್ನೇನನ್ನೂ ಬಯಸದೇ ಆರ್ಯ ಸಂತರು ಇದೇ ತಮ್ಮ ಶಾಶ್ವತ ನಡತೆ ಎಂದು ತಿಳಿದು ಪರರಿಗಾಗಿ ಮಾಡುತ್ತಾರೆ. ಸತ್ಪುರುಷರ ಯಾವ ಪ್ರಸಾದವೂ ಬಂಜಾಗುವುದಿಲ್ಲ. ಅವರಿಂದಾದ ಲಾಭವಾಗಲೀ ಮಾನವಾಗಲೀ ಎಂದೂ ನಶಿಸಿಹೋಗುವುದಿಲ್ಲ. ಸಾತ್ವಿಕರು ನಿತ್ಯವೂ ಅಳವಡಿಸಿಕೊಂಡ ನಿಯಮವಾದುದರಿಂದ ಇದರ ರಕ್ಷಣೆಯನ್ನೂ ಅವರೇ ಮಾಡುತ್ತಾರೆ.”

ಯಮನು ಹೇಳಿದನು:


“ನೀನು ಮಾತನಾಡಿದಾಗಲೆಲ್ಲ ನನ್ನ ಮನಸ್ಸಿಗೆ ಅನುಕೂಲವಾಗುತ್ತದೆ. ಮಹಾ ಅರ್ಥವುಳ್ಳ ಉತ್ತಮ ಪದಗಳನ್ನು ಬಳಸಿ ಧರ್ಮಸಂಹಿತವಾದುದನ್ನೇ ಹೇಳುತ್ತಿದ್ದೀಯೆ. ಯತವ್ರತೇ! ಅಪ್ರತಿಮ ವರವನ್ನು ಕೇಳು.”

ಸಾವಿತ್ರಿಯು ಹೇಳಿದಳು:

“ಇತರ ವರಗಳಂತೆ ಈ ವರವೂ ಕೂಡ ಫಲವನ್ನೀಯಬೇಕು. ಸತ್ಯವಾನನ ಜೀವವನ್ನು ವರವಾಗಿ ಕೇಳುತ್ತೇನೆ. ಪತಿಯಿಲ್ಲದೇ ನಾನು ಮೃತಳಾದ ಹಾಗೆಯೇ. ಪತಿಯಿಲ್ಲದೇ ನಾನು ಸುಖವನ್ನು ಬಯಸುವುದಿಲ್ಲ. ಪತಿಯಿಲ್ಲದೇ ನಾನು ಸ್ವರ್ಗವನ್ನು ಬಯಸುವುದಿಲ್ಲ. ಪತಿಯಿಲ್ಲದೇ ನಾನು ಸಂಪತ್ತನ್ನು ಬಯಸುವುದಿಲ್ಲ. ಪತಿಯಿಲ್ಲದೇ ನಾನು ಜೀವಂತವಾಗಿರುವುದನ್ನೂ ಬಯಸುವುದಿಲ್ಲ. ನನಗೆ ನೂರು ಪುತ್ರರಾಗುತ್ತಾರೆಂದು ನೀನೇ ವರವನ್ನು ಕೊಟ್ಟಿದ್ದೀಯೆ. ಆದರೂ ನನ್ನ ಪತಿಯನ್ನು ಕೊಂಡೊಯ್ಯುತ್ತಿದ್ದೀಯೆ. ಸತ್ಯವಾನನು ಬದುಕಲಿ ಎಂದು ವರವನ್ನು ಕೇಳುತ್ತೇನೆ. ನಿನ್ನ ಮಾತು ಸತ್ಯವೇ ಆಗುತ್ತದೆ.”

“ಹಾಗೆಯೇ ಆಗಲಿ” ಎಂದು ಹೇಳಿ ವೈವಸ್ವತ ಯಮನು ಆ ಪಾಶಗಳನ್ನು ಬಿಡಿಸಿದನು. ಸಂತೋಷಗೊಂಡ ಧರ್ಮರಾಜನು ಸಾವಿತ್ರಿಗೆ ಹೇಳಿದನು:

“ಭದ್ರೇ! ಕುಲನಂದಿನೀ! ಇಗೋ ನಿನ್ನ ಪತಿಯನ್ನು ನಾನು ಬಿಡಿಸಿದ್ದೇನೆ. ನಿನ್ನೊಂದಿಗೆ ಕರೆದುಕೊಂಡು ಹೋಗು. ಇವನು ಅರೋಗಿಯಾಗಿ, ಬಯಸಿದುದನ್ನು ಸಾಧಿಸುತ್ತಾ ನಿನ್ನೊಡನೆ ನಾಲ್ನೂರು ವರ್ಷಗಳವರೆಗೆ  ಜೀವಿಸುತ್ತಾನೆ. ಧರ್ಮದಿಂದ ಇಷ್ಟಿ-ಯಾಗಗಳನ್ನು ಮಾಡಿ ಲೋಕದಲ್ಲಿ ಖ್ಯಾತಿಯನ್ನು



Copyright
Reserved by

सत्यवान सावित्री

Sharma Picture Publication
175, Princes Street, Bombay-2.

> ಪಡೆಯುತ್ತಾನೆ. ಸತ್ಯವಾನನು ನಿನ್ನಲ್ಲಿ ನೂರು ಪುತ್ರರನ್ನು ಪಡೆಯುತ್ತಾನೆ. ಅವರೆಲ್ಲರೂ ರಾಜರಾಗಿ ಕ್ಷತ್ರಿಯ ಮಕ್ಕಳು-ಮೊಮ್ಮಕ್ಕಳನ್ನು ಪಡೆಯುತ್ತಾರೆ. ನಿಮ್ಮ ಹೆಸರುಗಳು ಕೂಡ ಖ್ಯಾತವಾಗಿ ಇಲ್ಲಿ ಶಾಶ್ವತವಾಗಿರುತ್ತವೆ. ನಿನ್ನ ತಂದೆಯೂ ಕೂಡ ನಿನ್ನ ತಾಯಿ ಮಾಲವಿಯಲ್ಲಿ ನೂರು ಪುತ್ರರನ್ನು ಪಡೆಯುತ್ತಾನೆ ಮತ್ತು ಮಾಲವದ ಹೆಸರನ್ನು ಅವನ ಮಕ್ಕಳು-ಮೊಮ್ಮಕ್ಕಳು ಶಾಶ್ವತವಾಗಿರಿಸುತ್ತಾರೆ. ನಿನ್ನ ಕ್ಷತ್ರಿಯ ಸಹೋದರರು ದೇವತೆಗಳಂತಿರುತ್ತಾರೆ.”

ಹೀಗೆ ಅವಳಿಗೆ ವರಗಳನ್ನಿತ್ತು ಪ್ರತಾಪಿ ಧರ್ಮರಾಜನು ಸಾವಿತ್ರಿಯನ್ನು ಹಿಂದಿರುಗಿಸಿ ತನ್ನ ಭವನಕ್ಕೆ ತೆರಳಿದನು.

## ಸಾವಿತ್ರಿ-ಸತ್ಯವಾನರು ಆಶ್ರಮಕ್ಕೆ ಹಿಂದಿರಿಗಿದುದು

ಯಮನು ಹೋದನಂತರ ಪತಿಯನ್ನು ಹಿಂದೆ ಪಡೆದ ಸಾವಿತ್ರಿಯು ಅವನ ಶವವು ಮಲಗಿದ್ದಲ್ಲಿಗೆ ಬಂದಳು. ಅಲ್ಲಿ ನೆಲದ ಮೇಲೆ ಮಲಗಿದ್ದ ಪತಿಯನ್ನು ನೋಡಿ ಬಳಿಸಾರಿ ಆಲಂಗಿಸಿ ಅವನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕುಳಿತುಕೊಂಡಳು. ಸತ್ಯವಾನನು ಎಚ್ಚೆತ್ತು ಪ್ರಯಾಣದಿಂದ ಹಿಂದಿರುಗಿದವನಂತೆ ಪುನಃ ಪುನಃ ಅವಳನ್ನು ಪ್ರೀತಿಯಿಂದ ನೋಡುತ್ತಾ ಹೇಳಿದನು:

> “ನಾನು ಬಹಳ ಸಮಯ ಮಲಗಿಬಿಟ್ಟಿದ್ದೆ. ಏಕೆ ನನ್ನನ್ನು

ಎಬ್ಬಿಸಲಿಲ್ಲ? ಇಲ್ಲಿಂದ ನನ್ನನ್ನು ಎಳೆದುಕೊಂಡು ಹೋಗುತ್ತಿದ್ದ ಆ ಕಪ್ಪು ಪುರುಷನು ಎಲ್ಲಿದ್ದಾನೆ?”

ಸಾವಿತ್ರಿಯು ಹೇಳಿದಳು:

“ಪುರುಷರ್ಷಭ! ನನ್ನ ತೊಡೆಯ ಮೇಲೆ ನೀನು ಬಹಳ ಹೊತ್ತು ಮಲಗಿಕೊಂಡಿದ್ದೆ. ಪ್ರಜೆಗಳನ್ನು ಸಂಯಮದಲ್ಲಿರಿಸುವ ಆ ಭಗವಾನ್ ಯಮದೇವನು ಹೊರಟು ಹೋದ! ನೀನು ವಿಶ್ರಾಂತಿಯನ್ನು ಪಡೆದಾಯಿತು. ನಿದ್ದೆಯೂ ಮುಗಿಯಿತು. ಸಾಧ್ಯವಾದರೆ ಎದ್ದೇಳು. ನೋಡು. ರಾತ್ರಿಯಾಗಿದೆ!”

ಸಂಜ್ಞೆಯನ್ನು ಮರಳಿ ಪಡೆದ ಸತ್ಯವಾನನು ಸುಖವಾದ ನಿದ್ರೆಯಿಂದಲೋ ಎಂಬಂತೆ ಮೇಲೆದ್ದು ವನದ ಸುತ್ತಲೂ ಎಲ್ಲ ದಿಕ್ಕುಗಳಿಗೂ ತಿರುಗಿ ನೋಡಿ ಹೇಳಿದನು:

“ಸಾವಿತ್ರಿ! ಫಲಗಳನ್ನು ತರಲೆಂದು ನಿನ್ನೊಡನೆ ಹೊರಟಿದ್ದೆ. ಆಗ ಕಟ್ಟಿಗೆಯನ್ನು ಕಡಿಯುತ್ತಿದ್ದಾಗ ನನ್ನ ತಲೆಯಲ್ಲಿ ನೋವುಂಟಾಯಿತು. ತಲೆನೋವಿನಿಂದ ಬಳಲುತ್ತಿದ್ದ ನಾನು ನಿಲ್ಲಲು ಅಶಕ್ತನಾಗಿ ನಿನ್ನ ತೊಡೆಯ ಮೇಲೆ ಮಲಗಿದೆ. ಅವೆಲ್ಲವು ನನಗೆ ನೆನಪಿದೆ. ನಿನ್ನ ಆಲಿಂಗನದಲ್ಲಿ ಮಲಗಿದ್ದ ನನ್ನನ್ನು ಗಾಢ ನಿದ್ರೆಯು ಆವರಿಸಿತು. ಆಗ ಘೋರ ಕತ್ತಲೆಯಲ್ಲಿ ಆ ಮಹೌಜಸ ಪುರುಷನನ್ನು ನೋಡಿದೆ. ಅವನು

ಯಾರೆಂದು ನಿನಗೆ ತಿಳಿದಿದ್ದರೆ ಹೇಳು. ನಾನು ನೋಡಿದ್ದುದು ಕೇವಲ ಸ್ವಪ್ನವೋ ಅಥವಾ ಸತ್ಯವೋ ಹೇಳು.”

ಸಾವಿತ್ರಿಯು ಅವನಿಗೆ ಹೇಳಿದಳು:

“ರಾತ್ರಿಯು ಕವಿಯುತ್ತಿದೆ. ರಾಜಕುಮಾರ! ನಡೆದುದೆಲ್ಲವನ್ನೂ ನಿನಗೆ ನಾಳೆ ಹೇಳುತ್ತೇನೆ. ನಿನ್ನ ತಂದೆ-ತಾಯಿಯರ ಕುರಿತು ಯೋಚಿಸು. ಸೂರ್ಯನು ಮುಳುಗಿದ್ದಾನೆ ಮತ್ತು ಕತ್ತಲೆಯು ಪಸರಿಸುತ್ತಿದೆ. ರಾತ್ರಿಯಲ್ಲಿ ತಿರುಗಾಡುವ ಪ್ರಾಣಿಗಳು ಕ್ರೂರವಾಗಿ ಕೂಗುತ್ತಾ ಸ್ವಚ್ಛಂದವಾಗಿ ತಿರುಗಾಡುತ್ತಿವೆ. ವನದಲ್ಲಿ ತಿರುಗಾಡುತ್ತಿರುವ ಮೃಗಗಳಿಂದ ಅಲ್ಲಾಡುವ ಎಲೆಗಳ ಶಬ್ಧವು ಕೇಳಿಬರುತ್ತಿದೆ. ನರಿಗಳ ಘೋರನಾದವು ದಕ್ಷಿಣ-ಪಶ್ಚಿಮ ದಿಕ್ಕಿನಿಂದ ಕೇಳಿ ಬರುತ್ತಿದೆ. ಅವುಗಳ ಉಗ್ರಕೂಗನ್ನು ಕೇಳಿ ನನ್ನ ಮನಸ್ಸು ನಡುಗುತ್ತಿದೆ.”

ಸತ್ಯವಾನನು ಹೇಳಿದನು:

“ದಟ್ಟ ಕತ್ತಲೆಯಿಂದ ಆವೃತವಾದ ಈ ವನವು ಭಯವನ್ನುಂಟುಮಾಡುತ್ತಿದೆ. ನಿನಗೆ ದಾರಿಯು ಗೊತ್ತಾಗುವುದಿಲ್ಲ ಮತ್ತು ನಿನಗೆ ನಡೆಯಲೂ ಸಾಧ್ಯವಾಗುವುದಿಲ್ಲ.”

ಸಾವಿತ್ರಿಯು ಹೇಳಿದಳು:

“ಈ ವನದ ಸುಟ್ಟ ಒಣ ಮರದಲ್ಲಿ ಉರಿಯುತ್ತಿರುವ ಬೆಂಕಿಯು ಇನ್ನೂ ಇದೆ. ಗಾಳಿಯಿಂದ ಉರಿಯುತ್ತಿರುವ ಈ ಬೆಂಕಿಯ ಜ್ವಾಲೆಯು ಅತ್ತಿತ್ತ ಓಲಾಡುತ್ತಿದೆ. ಇಲ್ಲಿರುವ ಕಟ್ಟಿಗೆಗಳಿಂದ ಆ ಅಗ್ನಿಯನ್ನು ಬೆಳಗಿಸುತ್ತೇನೆ. ಸಂತಾಪಪಡಬೇಡ. ಒಂದು ವೇಳೆ ನಿನಗೆ ನಡೆಯಲು ಸಾಧ್ಯವಾಗದಿದ್ದರೆ, ನಿನ್ನ ತಲೆ ನೋವು ಇನ್ನೂ ಇದ್ದರೆ, ಕತ್ತಲೆ ಕವಿದ ಈ ವನದಲ್ಲಿ ದಾರಿಯು ತಿಳಿಯದೇ ಇದ್ದರೆ, ಮತ್ತು ನಿನ್ನ ಅನುಮತಿಯಿದ್ದರೆ ನಾಳೆ ಬೆಳಿಗ್ಗೆ ವನವು ಸರಿಯಾಗಿ ಕಾಣುವಾಗ ಹೋಗೋಣ. ನಿನಗೆ ಇಷ್ಟವಾದರೆ ಈ ರಾತ್ರಿಯನ್ನು ವನದಲ್ಲಿಯೇ ಕಳೆಯೋಣ.”

ಸತ್ಯವಾನನು ಹೇಳಿದನು:

“ನನ್ನ ತಲೆನೋವು ನಿಂತಿದೆ ಮತ್ತು ನನ್ನ ಅಂಗಾಂಗಗಳು ಸ್ವಸ್ಥವಾಗಿವೆ. ನಿನಗೆ ಸರಿಯೆನಿಸಿದರೆ ನನ್ನ ತಂದೆತಾಯಿಗಳನ್ನು ಕಾಣಲು ಬಯಸುತ್ತೇನೆ. ಈ ಮೊದಲು ಎಂದೂ ನಾನು ಆಶ್ರಮಕ್ಕೆ ತಡವಾಗಿ ಹೋಗಿರಲಿಲ್ಲ. ಸಂಜೆಯ ನಂತರ ನನ್ನ ಬರವನ್ನು ತಾಯಿಯು ಒಪ್ಪಿಕೊಳ್ಳುವುದಿಲ್ಲ. ಬೆಳಕಿರುವಾಗ ನಾನು ಹೊರಗೆ ಹೋದರೂ ನನ್ನ ಹಿರಿಯರು ಸಂತಪಿಸುತ್ತಾರೆ ಮತ್ತು ನನ್ನ ತಂದೆಯು ಆಶ್ರಮವಾಸಿಗಳೊಂದಿಗೆ ನನ್ನನ್ನು ಹುಡುಕಲು ಹೊರಡುತ್ತಾನೆ. ಹಿಂದೆಯೂ ಕೂಡ ನನ್ನ ತಂದೆ-

ತಾಯಿಯರು ಬಹುಬಾರಿ ನಾನು ತಡವಾಗಿ ಬರುತ್ತೇನೆಂದು ದುಃಖಿತರಾಗಿದ್ದರು. ನನಗಾಗಿ ಕಾಯುತ್ತಿರುವ ಅವರು ಇಂದು ಯಾವ ಅವಸ್ಥೆಯಲ್ಲಿರಬಹುದು? ನನ್ನನ್ನು ಕಾಣದೇ ಅವರಿಗೆ ಮಹಾದುಃಖವಾಗಿರಬಹುದು. ಈ ವೃದ್ಧರು ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಒಂದು ರಾತ್ರಿ ನನ್ನ ಬಗ್ಗೆ ತುಂಬಾ ಚಿಂತೆಗೊಳಗಾಗಿದ್ದ ಅವರು ಕಣ್ಣೀರಿಡುತ್ತಾ "ಪುತ್ರಕ! ನೀನಿಲ್ಲದೇ ಒಂದು ಮುಹೂರ್ತವೂ ನಾವು ಜೀವಿತರಾಗಿರುವುದಿಲ್ಲ. ನೀನು ಇರುವವರೆಗೆ ನಾವು ಬದುಕಿರುವೆವು. ನೀನೇ ಈ ಕುರುಡು ಮುದುಕರ ಊರುಗೋಲು. ನಮ್ಮ ವಂಶವು ನಿನ್ನ ಮೇಲೆಯೇ ನಿಂತಿದೆ. ನಮ್ಮ ಪಿಂಡ, ಕೀರ್ತಿ ಮತ್ತು ಸಂತಾನಗಳು ನಿನ್ನ ಮೇಲೆಯೇ ನಿಂತಿವೆ!" ಎಂದು ಹೇಳಿದ್ದರು. ಇಂದು ರಾತ್ರಿ ನನ್ನನ್ನು ನೋಡದೇ ಇದ್ದರೆ ನಾನೇ ಅವರ ಊರುಗೋಲು ಎಂದು ಹೇಳುವ ಆ ನನ್ನ ವೃದ್ಧ ಮಾತಾಪಿತರು ಯಾವ ಅವಸ್ಥೆಯಲ್ಲಿರಬಹುದು? ನನ್ನ ತಂದೆ-ತಾಯಿಯರಲ್ಲಿ ನನ್ನ ಕುರಿತು ಚಿಂತೆಯನ್ನುಂಟುಮಾಡಿದ ಈ ನಿದ್ರೆಯನ್ನು ನಾನು ನಿಂದಿಸುತ್ತೇನೆ. ಇಂದು ನನ್ನ ಕಾರಣದಿಂದ ಅವರು ಪರಮ ಸಂತಾಪವನ್ನು ಹೊಂದಿದ್ದಾರೆ. ಅವರು ಬದುಕಿದ್ದರೆ ನಾನೂ ಬದುಕಿರುತ್ತೇನೆ. ನಾನೇ ಅವರನ್ನು ನೋಡಿಕೊಳ್ಳಬೇಕು. ಅವರಿಗೆ ಪ್ರಿಯವಾದುದನ್ನು ಮಾಡಬೇಕು. ಅದಕ್ಕಾಗಿಯೇ

ನಾನು ಜೀವಿಸಿದ್ದೇನೆ.”

ಹೀಗೆ ಹೇಳಿ ಆ ಹಿರಿಯರನ್ನೇ ಅನುಸರಿಸಿ ಪ್ರೀತಿಸುವ ಧರ್ಮಾತ್ಮನು ದುಃಖಾರ್ತನಾಗಿ ಜೋರಾಗಿ ಅಳತೊಡಗಿದನು. ಶೋಕಕರ್ಷಿತನಾದ ಪತಿಯನ್ನು ಕಂಡು ಧರ್ಮಚಾರಿಣೀ ಸಾವಿತ್ರಿಯು ಅವನ ಎರಡೂ ಕಣ್ಣುಗಳಿಂದ ಸುರಿಯುತ್ತಿದ್ದ ಕಣ್ಣೀರನ್ನು ಒರೆಸಿ ಹೇಳಿದಳು:

“ನಾನು ತಪಸ್ಸನ್ನು ತಪಿಸಿದ್ದರೆ, ದಾನವನ್ನಿತ್ತಿದ್ದಿದ್ದರೆ, ಮತ್ತು ಆಹುತಿಯನ್ನಿತ್ತಿದ್ದಿದ್ದರೆ ನನ್ನ ಅತ್ತೆ-ಮಾವಂದಿರಿಗೆ ಮತ್ತು ಪತಿಗೆ ಈ ರಾತ್ರಿಯು ಪುಣ್ಯಕರವಾಗಲಿ. ಈ ಹಿಂದೆ ನಾನು ಸುಳ್ಳನ್ನು ಹೇಳಿದ್ದುದು ನನಗೆ ನೆನಪಿಲ್ಲ. ಇದು ಸತ್ಯವೇ ಆಗಿದ್ದರೆ ನನ್ನ ಅತ್ತೆ-ಮಾವಂದಿರು ಇಂದು ಬದುಕಿ ಉಳಿಯಲಿ!”

ಸತ್ಯವಾನನು ಹೇಳಿದನು:

“ಅವರನ್ನು ನೋಡಲು ಬಯಸುತ್ತೇನೆ. ತಡಮಾಡುವುದು ಬೇಡ. ಅವರಿಗೆ ಅಪ್ರಿಯವಾದುದು ಏನಾದರೂ ಆಗುವ ಮೊದಲೇ ಅವರ ಬಳಿ ಹೋಗೋಣ. ತಕ್ಷಣವೇ ಆಶ್ರಮಕ್ಕೆ ಹೋಗೋಣ.”

ಆಗ ಸಾವಿತ್ರಿಯು ಮೇಲೆದ್ದು ಕೂದಲನ್ನು ಕಟ್ಟಿಕೊಂಡು ಪತಿಯ ಬಾಹುಗಳನ್ನು ಹಿಡಿದು ಮೇಲಕ್ಕೆತ್ತಿದಳು. ಸತ್ಯವಾನನನು ಮೇಲೆದ್ದು ಕೈಗಳಿಂದ ತನ್ನ ದೇಹವನ್ನು ಉಜ್ಜಿಕೊಂಡು, ಸುತ್ತಲೂ ಕಣ್ಣುಹಾಯಿಸಿ

ಬುಟ್ಟಿಯಿಂದ ನೋಡಿದನು. ಆಗ ಸಾವಿತ್ರಿಯು

> “ನಾಳೆ ಬಂದು ಫಲವನ್ನು ಒಯ್ಯಿ. ಆದರೆ ನಮ್ಮ ರಕ್ಷಣೆಗಾಗಿ ನಿನ್ನ ಈ ಕೊಡಲಿಯನ್ನು ತೆಗೆದುಕೊಳ್ಳುತ್ತೇನೆ.”

ಎಂದು ತುಂಬಿದ ಬುಟ್ಟಿಯನ್ನು ಮರದ ರೆಂಬೆಗೆ ಕಟ್ಟಿ, ಕೊಡಲಿಯನ್ನು ಹಿಡಿದು ಪತಿಯ ಬಳಿ ಬಂದಳು. ಪತಿಯ ತೋಳನ್ನು ತನ್ನ ಎಡ ಭುಜದ ಮೇಲಿರಿಸಿ ತನ್ನ ಬಲಗೈಯಿಂದ ಅವನ ಸೊಂಟವನ್ನು ಬಳಸಿ ಸಾವಿತ್ರಿಯು ಮೆಲ್ಲನೆ ನಡೆದಳು. ಸತ್ಯವಾನನು ಹೇಳಿದನು:

> “ನನಗೆ ಇಲ್ಲಿಗೆ ಬರುವುದು ಅಭ್ಯಾಸವಾಗಿದುದರಿಂದ ನನಗೆ ದಾರಿಯು ಗೊತ್ತು. ಮರಗಳ ಮಧ್ಯದಿಂದ ಬರುವ ಬೆಳದಿಂಗಳ ಬೆಳಕಿನಲ್ಲಿ ನನಗೆ ದಾರಿಯು ಕಾಣುತ್ತಿದೆ. ಈ ಪಲಾಶವೃಕ್ಷದ ಬಳಿ ದಾರಿಯು ಕವಲೊಡೆಯುತ್ತದೆ. ಅದರ ಬಲದಾರಿಯಲ್ಲಿ ಹೋಗೋಣ. ನಾನು ಈಗ ಸರಿಯಾಗಿದ್ದೇನೆ. ಶಕ್ತಿಯು ಬಂದಿದೆ.”

ಹೀಗೆ ಮಾತನಾಡುತ್ತಾ ಅವರು ಆಶ್ರಮದ ಕಡೆ ತ್ವರೆಮಾಡಿ ನಡೆದರು.

ಇದೇ ಸಮಯದಲ್ಲಿ ದ್ಯುಮತ್ಸೇನನು ತನ್ನ ಕಣ್ಣುಗಳನ್ನು ಪಡೆದು ಹರ್ಷಿತನಾಗಿ ಎಲ್ಲವನ್ನೂ ನೋಡತೊಡಗಿದನು. ಮಗನ ಕಾರಣದಿಂದ ಪರಮ ಆರ್ತನಾಗಿದ್ದ ಅವನು ತನ್ನ ಪತ್ನಿ ಶೈಬ್ಯೆಯೊಡನೆ ನೆರೆಹೊರೆಯ ಎಲ್ಲರ ಆಶ್ರಮಗಳಿಗೂ ಹೋದನು. ಆ ದಂಪತಿಗಳು ಆಶ್ರಮ, ನದಿ,

ವನ ಮತ್ತು ಸರೋವರಗಳಲ್ಲಿ ತಿರುಗಾಡಿ ಸತ್ಯವಾನನನ್ನು ಹುಡುಕಿದರು. ಯಾವ ಶಬ್ಧವನ್ನು ಕೇಳಿದರೂ ಸಾವಿತ್ರಿಯೊಡನೆ ಸತ್ಯವಾನನು ಬರುತ್ತಿದ್ದಾನೆಂದು ತಿಳಿದು ಅಲ್ಲಿಗೆ ಓಡುತ್ತಿದ್ದರು. ಹುಚ್ಚರಂತೆ ಸುತ್ತಾಡುತ್ತಿದ್ದ ಅವರ ಶರೀರಗಳಲ್ಲಿ ದರ್ಬೆಹುಲ್ಲು ಮತ್ತು ಮುಳ್ಳುಗಳು ತಾಗಿ ಗೀರುಬಿದ್ದಿದ್ದವು. ಕಾಲುಗಳು ಒಡೆದು ಒರಟಾಗಿ ಗಾಯಗೊಂಡು ರಕ್ತಸುರಿಸುತ್ತಿದ್ದವು. ಆಶ್ರಮಗಳಲ್ಲಿ ವಾಸಿಸುತ್ತಿದ್ದ ಎಲ್ಲ ವಿಪ್ರರೂ ಅಲ್ಲಿಗೆ ಬಂದು ಅವರೊಡನೆ ಕುಳಿತು ಸಮಾಧಾನಪಡೆಸಿದರು. ಆಗ ಸುವರ್ಚಸನು

> “ತಪಸ್ಸು, ದಮ, ಆಚರಗಳಲ್ಲಿ ಸಂಯುಕ್ತಳಾಗಿರುವ
> ಸಾವಿತ್ರಿಯು ಯಾರ ಪತ್ನಿಯೋ ಆ ಸತ್ಯವಾನನು
> ಜೀವಂತನಾಗಿದ್ದಾನೆ”

ಎಂದನು. ಗೌತಮನು

> “ನನ್ನ ಕಠೋರ ತಪಸ್ಸಿನಿಂದ ಏನಾಗಬೇಕೆಂದಿದೆಯೋ
> ಎಲ್ಲವನ್ನೂ ನಾನು ತಿಳಿದುಕೊಂಡಿದ್ದೇನೆ. ನನ್ನ ಮಾತನ್ನು ಕೇಳಿ:
> ಸತ್ಯವಾನನು ಬದುಕಿದ್ದಾನೆ ಎನ್ನುವುದು ಸತ್ಯ!”

ಎಂದು ಹೇಳಿದನು. ಗೌತಮನ ಶಿಷ್ಯನೂ ಕೂಡ

> “ನನ್ನ ಉಪಾಧ್ಯಾಯನ ಬಾಯಿಯಿಂದ ಹೊರಟ ಮಾತು
> ಎಂದೂ ಸುಳ್ಳಾಗಿಲ್ಲ. ಆದುದರಿಂದ ಸತ್ಯವಾನನು

ಜೀವಿತನಾಗಿರಲೇ ಬೇಕು.”

ಎಂದು ತನ್ನ ಉಪಾಧ್ಯಾಯನ ಮಾತನ್ನು ಅನುಮೋದಿಸಿದನು. ಅಲ್ಲಿದ್ದ ಇತರ ಋಷಿಗಳೂ ಕೂಡ

“ಸತ್ಯವಾನನ ಪತ್ನಿ ಸಾವಿತ್ರಿಯು ಅವೈಧವ್ಯವನ್ನು ಸೂಚಿಸುವ ಎಲ್ಲ ಲಕ್ಷಣಗಳನ್ನು ಹೊಂದಿರುವುದರಿಂದ ಅವನು ಬದುಕಿದ್ದಾನೆ”

ಎಂದು ಹೇಳಿದರು. ಆಗ ದಾಲ್ಭ್ಯನು ಹೇಳಿದನು:

“ನಿನ್ನ ದೃಷ್ಟಿಯು ಹೇಗೆ ಹಿಂದಿರುಗಿತೋ ಮತ್ತು ಹೇಗೆ ಸಾವಿತ್ರಿಯು ಉಪವಾಸವಿದ್ದುಕೊಂಡು ಆ ವ್ರತವನ್ನು ಸಂಪೂರ್ಣಗೊಳಿಸಿದಳೋ ಹಾಗೆ ಸತ್ಯವಾನನೂ ಜೀವಿತನಾಗಿದ್ದಾನೆ.”

ಈ ರೀತಿ ಸತ್ಯವಾದೀ ತಪಸ್ವಿಗಳು ದ್ಯುಮತ್ಸೇನನಿಗೆ ಆಶ್ವಾಸನೆ ನೀಡಲು ಅವನು ಅವರ ಮಾತಿನ ಅರ್ಥಗಳನ್ನು ಗಣನೆಗೆ ತೆಗೆದುಕೊಂಡು ಸುಮ್ಮನಾದನು. ಆಗ ಸ್ವಲ್ಪ ಕ್ಷಣದಲ್ಲಿಯೇ ಸಾವಿತ್ರಿಯು ಪತಿ ಸತ್ಯವಾನನೊಂದಿಗೆ ಬಂದು ಸಂತೋಷದಿಂದ ಆಶ್ರಮವನ್ನು ಪ್ರವೇಶಿಸಿದಳು.

ಅವರನ್ನು ನೋಡಿ ಅಲ್ಲಿದ್ದ ಬ್ರಾಹ್ಮಣರು ದ್ಯುಮತ್ಸೇನನನ್ನು ಉದ್ದೇಶಿಸಿ

ಹೇಳಿದರು:

> “ಪೃಥ್ವೀಪತೇ! ಇಂದು ನೀನು ದೃಷ್ಟಿಯನ್ನು ಪಡೆದು ಪುತ್ರನನ್ನೂ ಸೇರಿದುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಪುತ್ರನ ಮಿಲನ, ಸಾವಿತ್ರಿಯ ದರ್ಶನ ಮತ್ತು ನಿನ್ನ ದೃಷ್ಟಿಯು ಹಿಂದಿರುಗಿದುದು ಈ ರೀತಿಯ ಮೂರು ವಿಧಗಳಲ್ಲಿ ಅದೃಷ್ಟವಂತನಾಗಿ ನೀನು ಲಾಭದಿಂದ ವರ್ಧಿಸುತ್ತಿರುವೆ. ನಾವೆಲ್ಲ ಹೇಳಿದ ಹಾಗೆಯೇ ನಡೆಯಿತು ಎನ್ನುವುದರಲ್ಲಿ ಸಂಶಯವಿಲ್ಲ. ನಿನ್ನ ಬೆಳವಣಿಗೆಯು ಹೀಗೆಯೇ ಇನ್ನೂ ಆಗುತ್ತಿರಲಿ ಎಂದು ನಾವು ಪುನಃ ಪುನಃ ನಿನ್ನನ್ನು ಹರಸುತ್ತೇವೆ.”

ಅನಂತರ ಅಲ್ಲಿ ಅಗ್ನಿಯನ್ನು ಉರಿಸಿ ಆ ಎಲ್ಲ ದ್ವಿಜರೂ ಮಹೀಪತಿ ದ್ಯುಮತ್ಸೇನನನ್ನು ಸುತ್ತುವರೆದು ಕುಳಿತುಕೊಂಡರು. ಅಲ್ಲಿಯೇ ನಿಂತುಕೊಂಡಿದ್ದ ಶೈಬ್ಯೆ, ಸತ್ಯವಾನ ಮತ್ತು ಸಾವಿತ್ರಿಯರಿಗೆ ಎಲ್ಲರೂ ಕುಳಿತುಕೊಳ್ಳಲು ಅನುಮತಿಯನ್ನು ನೀಡಲು ಸಂತೋಷದಿಂದ ಅವರು ಕುಳಿತುಕೊಂಡರು. ರಾಜನ ಜೊತೆಗೆ ಕುಳಿತಿದ್ದ ಆ ಎಲ್ಲ ವನವಾಸಿಗರೂ ಕುತೂಹಲದಿಂದ ರಾಜಕುಮಾರ ಸತ್ಯವಾನನನ್ನು ಕೇಳಿದರು:

> “ಪತ್ನಿಯೊಂದಿಗೆ ನೀನು ಇದಕ್ಕೂ ಮೊದಲು ಏಕೆ ಬರಲಿಲ್ಲ? ಈ ವಿರಾತ್ರಿಯಲ್ಲಿ ಏಕೆ ಬಂದಿರಿ? ನಿಮಗೆ ಏಕೆ ತಡವಾಯಿತು? ರಾಜಕುಮಾರ! ನಿನ್ನ ತಂದೆ-ತಾಯಂದಿರು ಮತ್ತು ನಾವು

ಚಿಂತಿತರಾಗಿದ್ದೆವು. ಇದು ಅಕಸ್ಮಾತ್ತಾಗಿ ಆಗಿರುವುದು ಎಂದು ನಮ್ಮ ಯೋಚನೆ. ಎಲ್ಲವನ್ನೂ ಹೇಳಬೇಕು.”

ಸತ್ಯವಾನನು ಹೇಳಿದನು:

“ನಾನು ತಂದೆ-ತಾಯಿಯರ ಅನುಮತಿಯನ್ನು ಪಡೆದು ಸಾವಿತ್ರಿಯೊಡನೆ ಹೋಗಿದ್ದೆ. ಅಲ್ಲಿ ಕಟ್ಟಿಗೆಯನ್ನು ಕಡಿಯುತ್ತಿದ್ದಾಗ ತಲೆನೋವುಂಟಾಯಿತು. ವೇದನೆಯಿಂದ ತುಂಬಾ ಹೊತ್ತು ನಾನು ಮಲಗಿದ್ದೆ ಎಂದಿಷ್ಟೇ ನನಗೆ ತಿಳಿದಿದೆ. ಆಗ ಎಷ್ಟುಸಮಯದ ವರೆಗೆ ಮಲಗಿದ್ದೆನೋ ಅಷ್ಟು ಸಮಯ ನಾನು ಹಿಂದೆ ಎಂದೂ ಮಲಗಿರಲಿಲ್ಲ. ನೀವೆಲ್ಲರೂ ಇಲ್ಲಿ ಸಂತಾಪಪಡಬಾರದು ಎಂದು ವಿರಾತ್ರಿಯಾದರೂ ಬಂದಿದ್ದೇನೆ. ಇದಕ್ಕೆ ಬೇರೆ ಯಾವ ಕಾರಣವೂ ಇಲ್ಲ.”

ಗೌತಮನು ಹೇಳಿದನು:

“ಅಕಸ್ಮಾತ್ತಾಗಿ ನಿನ್ನ ತಂದೆಯ ದೃಷ್ಟಿಯು ಮರಳಿ ಬಂದಿತು. ಇದರ ಕಾರಣವು ನಿನಗೆ ತಿಳಿಯದಿದ್ದರೆ ಸಾವಿತ್ರಿಯು ಹೇಳಬೇಕು. ಸಾವಿತ್ರಿ! ನೀನು ಸಾವಿತ್ರಿಯ ತೇಜಸ್ಸುಳ್ಳವಳು. ಇವುಗಳ ಕಾರಣಗಳನ್ನು ನೀನು ತಿಳಿದಿರುವೆ. ಇದರಲ್ಲಿ ರಹಸ್ಯವೇನೂ ಇಲ್ಲದಿದ್ದರೆ ಹೇಳು.”

ಸಾವಿತ್ರಿಯು ಹೇಳಿದನು:

“ನಡೆದ ಎಲ್ಲವನ್ನೂ ನೀವು ಈಗ ತಿಳಿದಿದ್ದೀರಿ. ಇದರಲ್ಲಿ ಯಾವ ರಹಸ್ಯವೂ ಇಲ್ಲ. ನಡೆದುದನ್ನು ಕೇಳಿ. ಮಹಾತ್ಮ ನಾರದನು ನನ್ನ ಪತಿಯು ಇಂದೇ ಸಾಯುತ್ತಾನೆಂದು ಹೇಳಿದ್ದನು. ಆದುದರಿಂದ ಇಂದು ನಾನು ಅವನನ್ನು ಬಿಟ್ಟಿರಲಿಲ್ಲ. ವನದಲ್ಲಿ ಆಯಾಸದಿಂದ ಅವನು ಮಲಗಿಕೊಂಡಾಗ ಸಾಕ್ಷಾತ್ ಯಮನೇ ಅಲ್ಲಿಗೆ ಬಂದು ಇವನನ್ನು ಬಂಧಿಸಿ ಪಿತೃಗಳು ವಾಸಿಸುವ ದಿಕ್ಕಿಗೆ ಕರೆದೊಯ್ದನು. ಆಗ ನಾನು ಆ ದೇವನಿಗೆ ಸತ್ಯವಚನಗಳಿಂದ ತೃಪ್ತಿಗೊಳಿಸಿದೆ ಮತ್ತು ಅವನು ನನಗೆ ಐದು ವರಗಳನ್ನು ಕೊಟ್ಟನು. ನನಗಿತ್ತ ವರಗಳನ್ನು ಕೇಳಿ. ಕಣ್ಣುಗಳು ಮತ್ತು ಸ್ವರಾಜ್ಯ ಈ ಎರಡು ವರಗಳು ನನ್ನ ಮಾವನಿಗೆ. ನೂರು ಮಕ್ಕಳಾಗಬೇಕೆಂದು ನನ್ನ ತಂದೆಗೆ ಮತ್ತು ನೂರು ಮಕ್ಕಳಾಗಬೇಕೆಂದು ನನಗೆ ವರ. ನನ್ನ ಪತಿ ಸತ್ಯವಾನನಿಗೆ ನಾಲ್ನೂರು ವರ್ಷಗಳ ಆಯಸ್ಸು ಕೊನೆಯ ವರ. ಪತಿಯ ಜೀವಕ್ಕಾಗಿಯೇ ನಾನು ಆ ಚೀರ್ಣಸ್ಥಿರ ವ್ರತವನ್ನು ಕೈಗೊಂಡಿದ್ದೆನು. ನಾನು ಅನುಭವಿಸುತ್ತಿದ್ದ ಆ ಮಹಾದುಃಖವು ಇಂದು ಸಂತೋಷವಾಗಿ ಪರಿಣಮಿಸಿತು.”

ಋಷಿಗಳು ಹೇಳಿದರು:

“ಈ ನರೇಂದ್ರನ ಕುಲವು ವ್ಯಸನಗಳಿಂದ ಘಾತಿಗೊಂಡು

ಹೆಚ್ಚು ಹೆಚ್ಚು ಕತ್ತಲಿನಲ್ಲಿ ಮುಳುಗುತ್ತಿತ್ತು. ಸುಶೀಲೆಯೂ, ಧರ್ಮಪುಣ್ಯಧೃತಳೂ ಆಗಿರುವ ಸಾಧ್ವಿ, ಕುಲೀನೆ ನಿನ್ನಿಂದ ಅದು ಮೇಲಕ್ಕೆತ್ತಲ್ಪಟ್ಟಿತು!"

ಈ ರೀತಿ ಆ ವರಸ್ತ್ರೀಯನ್ನು ಪ್ರಶಂಸಿಸಿ, ಗೌರವಿಸಿ ಅಲ್ಲಿ ಸೇರಿದ್ದ ಋಷಿಗಳು ದ್ಯುಮತ್ಸೇನ ಮತ್ತು ಸತ್ಯವಾನರ ಅನುಮತಿಯನ್ನು ಪಡೆದು ತಮ್ಮ ತಮ್ಮ ಆಶ್ರಮಗಳಿಗೆ ಸಂತೋಷದಿಂದ ಹೊರಟು ಹೋದರು.

ರಾತ್ರಿಯು ಕಳೆದು ಸೂರ್ಯನು ಮಂಡಲದಲ್ಲಿ ಉದಯಿಸಲು ಎಲ್ಲ ತಪೋಧನರೂ ಪೂರ್ವಾಹ್ನಿಕಗಳನ್ನು ಪೂರೈಸಿ ಪುನಃ ಸೇರಿದರು. ಸಾವಿತ್ರಿಯ ಮಹಾಭಾಗ್ಯದ ಕುರಿತು ಎಷ್ಟು ಹೇಳಿದರೂ ಆ ಮಹರ್ಷಿಗಳಿಗೆ ತೃಪ್ತಿಯೆನಿಸಲಿಲ್ಲ. ಆಗ ಶಾಲ್ವದ ಪ್ರಜೆಗಳೆಲ್ಲರೂ ದ್ಯುಮತ್ಸೇನನ ಬಳಿ ಬಂದು ಅಲ್ಲಿದ್ದ ರಾಜನು ದ್ಯುಮತ್ಸೇನನ ಅಮಾತ್ಯನಿಂದ ಹತನಾದನೆಂದೂ, ಸೇನೆಯೂ ಪಲಾಯನಮಾಡಿದೆಯೆಂದೂ ತಿಳಿಸಿದರು.

"ಜನರೆಲ್ಲರೂ ಒಂದೇ ಮತದಿಂದ ಹಿಂದಿನ ರಾಜನನ್ನೇ ಬಯಸಿದ್ದಾರೆ. ಕಣ್ಣಿರಲಿ ಅಥವಾ ಕುರುಡನಾಗಿರಲಿ, ಅವನೇ ನಮ್ಮ ರಾಜನಾಗಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದೇ ನಿಶ್ಚಯ ಮಾಡಿಕೊಂಡು ನಿನ್ನ ಚತುರಂಗ ಬಲವನ್ನು ರಥಗಳನ್ನು ತೆಗೆದುಕೊಂಡು ನಿನ್ನನ್ನು ಕರೆದೊಯ್ಯಲು ಇಲ್ಲಿಗೆ ಬಂದಿದ್ದೇವೆ. ರಾಜನ್! ಹೊರಡುವವನಾಗು. ನಿನಗೆ

ಮಂಗಳವಾಗಲಿ, ನಿನ್ನ ನಗರದಲ್ಲಿ ಜಯಘೋಷವಾಗುತ್ತಿದೆ. ಇಂದಿನಿಂದ ನೀನು ನಿನ್ನ ಪಿತೃ-ಪಿತಾಮಹರ ಪದವನ್ನು ಚಿರವಾಗಿ ಆಳು”

ಎಂದು ಪೌರಜನರು ಬಿನ್ನವಿಸಿದರು. ಅವನಿಗೆ ದೃಷ್ಟಿಬಂದಿರುವುದನ್ನು ಮತ್ತು ಅವನು ಆರೋಗ್ಯದಿಂದಿರುವುದನ್ನು ನೋಡಿ ವಿಸ್ಮಿತರಾಗಿ ಎಲ್ಲರೂ ರಾಜನಿಗೆ ಬಿದ್ದು ನಮಸ್ಕರಿಸಿದರು. ಆಗ ರಾಜನು ವೃದ್ಧರನ್ನೂ ವನಾಶ್ರಮವಾಸೀ ದ್ವಿಜರನ್ನೂ ಅಭಿವಂದಿಸಿ ಪೂಜಿಸಿ ತನ್ನ ನಗರದ ಕಡೆ ಹೊರಟನು. ಶೈಬ್ಯೆಯೂ ಕೂಡ ಸಾವಿತ್ರಿಯನ್ನೊಡಗೂಡಿ ಸುಂದರವಾಗಿ ಅಲಂಕೃತವಾಗಿದ್ದ ಹಲವಾರು ಜನರು ಎತ್ತಿಕೊಂಡು ಹೋಗುತ್ತಿದ್ದ ಪಲ್ಲಕ್ಕಿಯಲ್ಲಿ ಕುಳಿತು ಸೇನೆಯಿಂದ ಸುತ್ತುವರೆದು ಹೊರಟಳು. ನಗರದಲ್ಲಿ ಪುರೋಹಿತರು ಸಂತೋಷದಿಂದ ದ್ಯುಮತ್ಸೇನನನ್ನು ರಾಜನನ್ನಾಗಿಯೂ ಅವನ ಪುತ್ರ ಸತ್ಯವಾನನನ್ನು ಯುವರಾಜನನ್ನಾಗಿ ಅಭಿಷೇಕಿಸಿದರು. ಬಹಳ ಸಮಯದ ನಂತರ ಸಾವಿತ್ರಿಯು ನೂರು ಕೀರ್ತಿವರ್ಧಕ, ರಣದಲ್ಲಿ ಹಿಂಜರಿಯದ, ಶೂರ ಮಕ್ಕಳಿಗೆ ಜನ್ಮವನ್ನಿತ್ತಳು. ಹಾಗೆಯೇ ಮದ್ರಾಧಿಪ ಅಶ್ವಪತಿಯೂ ಮಾಲವಿಯಲ್ಲಿ ಅವಳ ತಕ್ಕಂತೆಯೇ ಇದ್ದ ಮಹಾಬಲಶಾಲೀ ಮಕ್ಕಳನ್ನು ಪಡೆದನು. ಹೀಗೆ ಸಾವಿತ್ರಿಯು ತನ್ನ ತಂದೆ-ತಾಯಿಯರನ್ನೂ, ಅತ್ತೆ-ಮಾವರನ್ನೂ, ಪತಿಯ ಕುಲ ಎಲ್ಲರನ್ನೂ ಕಷ್ಟಗಳಿಂದ ಉದ್ಧರಿಸಿದಳು.

# ಇಂದ್ರವಿಜಯೋಪಖ್ಯಾನ

[ಇಂದ್ರವಿಜಯದ ಈ ಕಥೆಯು ವ್ಯಾಸ ಮಹಾಭಾರತದ ಉದ್ಯೋಗಪರ್ವದ ಸೇನೋದ್ಯೋಗಪರ್ವ (ಅಧ್ಯಾಯ ೯-೧೮) ದಲ್ಲಿ ಬರುತ್ತದೆ. ಈ ಕಥೆಯನ್ನು ಮೋಸಗೊಂಡು ದುರ್ಯೋಧನನ ಪಕ್ಷವನ್ನು ಸೇರಿದ ಶಲ್ಯನು ಯುಧಿಷ್ಠಿರನಿಗೆ ಹೇಳಿದನು.]

ದೇವಶ್ರೇಷ್ಠ ಮಹಾತಪಸ್ವಿ ತ್ವಷ್ಟನು ಪ್ರಜಾಪತಿಯಾಗಿದ್ದಾಗ ಅವನು ಇಂದ್ರದ್ರೋಹದಿಂದ ತ್ರಿಶಿರನೆನ್ನುವ ಪುತ್ರನನ್ನು ಸೃಷ್ಟಿಸಿದನು. ಆ ವಿಶ್ವರೂಪೀ ಮಹಾದ್ಯುತಿಯು ಇಂದ್ರನ ಸ್ಥಾನವನ್ನು ಬಯಸಿದನು. ಸೂರ್ಯ, ಚಂದ್ರ ಮತ್ತು ಅಗ್ನಿಗಳಂತಿದ್ದ ಆ ಮೂರು ಘೋರ ಮುಖಗಳವನು ಒಂದರಿಂದ ವೇದಗಳನ್ನು ಪಠಿಸುತ್ತಿದ್ದನು, ಒಂದರಿಂದ ಸುರೆಯನ್ನು ಕುಡಿಯುತ್ತಿದ್ದನು ಮತ್ತು ಇನ್ನೊಂದರಿಂದ ಎಲ್ಲ ದಿಕ್ಕುಗಳನ್ನೂ ಕುಡಿದುಬಿಡುತ್ತಾನೋ ಎಂದು ನೋಡುತ್ತಿದ್ದನು. ಆ ತಪಸ್ವಿಯು ಮೃದುವೂ ದಾಂತನೂ ಆಗಿದ್ದು ಧರ್ಮದ ತಪಸ್ಸಿನಲ್ಲಿ ತೊಡಗಿಕೊಂಡಿದ್ದನು. ಅವನು ಆಚರಿಸಲು ಅತಿಕಷ್ಟವಾದ ಮಹಾ ತೀವ್ರ ತಪಸ್ಸನ್ನು ತಪಿಸಿದನು. ಆ ತಪೋವೀರ್ಯ, ಸತ್ವಯುತ, ಅಮಿತತೇಜಸನನ್ನು ನೋಡಿ ಇಂದ್ರನು ಇವನು ಇಂದ್ರನಾಗಬಾರದು ಎಂದು ವಿಷಾದಿಸಿದನು.

> “ಇವನು ಭೋಗಗಳಲ್ಲಿ ತೊಡಗುವಂತೆ ಹೇಗೆಮಾಡಬೇಕು? ಇವನು ಮಹಾತಪಸ್ಸನ್ನು ತಪಿಸದಂತೆ ಏನು ಮಾಡಬೇಕು? ವರ್ಧಿಸುತ್ತಿರುವ ತ್ರಿಶಿರನು ತ್ರಿಭುವನವೆಲ್ಲವನ್ನೂ ಕಬಳಿಸಿಬಿಡುತ್ತಾನೆ.”

ಹೀಗೆ ಬಹಳಷ್ಟು ಯೋಚಿಸಿದ ಬುದ್ಧಿಮಾನನು ತ್ವಷ್ಟಪುತ್ರನ ಪ್ರಲೋಭನೆಗೆ ಅಪ್ಸರೆಯರಿಗೆ ಆಜ್ಞಾಪಿಸಿದನು:

> “ತ್ರಿಶಿರನನ್ನು ಕಾಮಭೋಗಗಳಲ್ಲಿ ತೊಡಗಿಸಿ. ಬೇಗನೇ ಹೋಗಿ ಕ್ಷಿಪ್ರದಲ್ಲಿಯೇ ಅವನನ್ನು ಪ್ರಲೋಭಗೊಳಿಸಿ. ಸುಶ್ರೋಣಿಯರೇ! ಶೃಂಗಾರವೇಷಗಳನ್ನು ಧರಿಸಿ ಮನೋಹರ ಭಾವಗಳಿಂದೊಡಗೂಡಿ ಅವನನ್ನು ಪ್ರಲೋಭಗೊಳಿಸಿ ಮತ್ತು ನನ್ನ ಭಯವನ್ನು ಶಮನಗೊಳಿಸಿ. ನಾನು ಅತ್ಮದಲ್ಲಿ ಅಸ್ವಸ್ಥ್ಯನಾಗಿರುವುದನ್ನು ಗಮನಿಸಿದ್ದೇನೆ. ಈ ಮಹಾಘೋರ ಭಯವನ್ನು ಕ್ಷಿಪ್ರದಲ್ಲಿ ನಾಶಗೊಳಿಸಿ.”

ಅಪ್ಸರೆಯರು ಹೇಳಿದರು:

> “ಶಕ್ರ! ಅವನನ್ನು ಪ್ರಲೋಭನಗೊಳಿಸಲು ಪ್ರಯತಿಸುತ್ತೇವೆ. ಬಲನಿಷೂದನ! ಅವನಿಂದ ನೀನು ಯಾವುದೇ ಭಯವನ್ನು ಹೊಂದಬೇಕಾಗಿಲ್ಲ. ಕಣ್ಣುಗಳಿಂದ ಎಲ್ಲವನ್ನೂ ಸುಟ್ಟುಬಿಡುವನೋ ಎಂದು ಕುಳಿತಿರುವ ಆ ತಪೋನಿಧಿಯನ್ನು ಪ್ರಲೋಭಗೊಳಿಸಲೂ ನಾವು ಒಟ್ಟಾಗಿ ಹೋಗುತ್ತೇವೆ.

> ಅವನನ್ನು ವಶೀಕರಿಸಲು ಮತ್ತು ನಿನ್ನ ಭಯವನ್ನು ಕೊನೆಗೊಳಿಸಲು ಪ್ರಯತ್ನಿಸುತ್ತೇವೆ.”

ಇಂದ್ರನಿಂದ ಅನುಜ್ಞಾತರಾದ ಅವರು ತ್ರಿಶಿರನ ಬಳಿ ಹೋದರು. ಅಲ್ಲಿ ಆ ವರಾಂಗನೆಯರು ವಿವಿಧಭಾವಗಳಿಂದ, ನೃತ್ಯವನ್ನು ಮತ್ತು ಹಾಗೆಯೇ ಅಂಗ ಸೌಷ್ಟವವನ್ನು ಪ್ರದರ್ಶಿಸುತ್ತಾ ಅವನನ್ನು ಲೋಭಗೊಳಿಸಲು ಪ್ರಯತ್ನಿಸಿದರು. ಆ ಮಹಾತಪಸ್ವಿಯು ಅವರನ್ನು ನೋಡಿದರೂ ಹರ್ಷಿತನಾಗಲಿಲ್ಲ. ಇಂದ್ರಿಯಗಳನ್ನು ವಶೀಕರಿಸಿ ತುಂಬಿದ ಸಾಗರದಂತೆ ತೋರುತ್ತಿದ್ದನು. ಪರಮ ಯತ್ನವನ್ನು ಮಾಡಿ ಅವರು ಪುನಃ ಶಕ್ರನ ಉಪಸ್ಥಿತಿಯಲ್ಲಿ ಬಂದು, ಎಲ್ಲರೂ ಕೈಮುಗಿದು ದೇವರಾಜನಿಗೆ ಹೀಗೆ ಹೇಳಿದರು:

> “ಪ್ರಭೋ! ಆ ದುರ್ಧರ್ಷನನ್ನು ಧೈರ್ಯದಿಂದ ಅಲುಗಾಡಿಸಲು ಶಕ್ಯವಿಲ್ಲ. ಇದರ ನಂತರ ಏನು ಮಾಡಬೇಕೋ ಅದನ್ನು ಮಾಡು.”

ಮಹಾಮತಿ ಶಕ್ರನು ಅಪ್ಸರೆಯರನ್ನು ಗೌರವಿಸಿ ಕಳುಹಿಸಿಕೊಟ್ಟು ಆ ಮಹಾತ್ಮನ ವಧೆಯ ಉಪಾಯವನ್ನು ಚಿಂತಿಸತೊಡಗಿದನು. ಆ ವೀರ ಪ್ರತಾಪವಾನ್ ಧೀಮಾನ್ ದೇವರಾಜನು ತುಂಬಾ ಚಿಂತಿಸಿ ತ್ರಿಶಿರನ ವಧೆಯ ಕುರಿತು ನಿಶ್ಚಯಿಸಿದನು:

> “ಇಂದು ಈ ವಜ್ರವನ್ನು ಅವನ ಮೇಲೆ ಎಸೆಯುತ್ತೇನೆ. ಇದರಿಂದ ಅವನು ಕ್ಷಿಪ್ರವಾಗಿ ಕೊಲ್ಲಲ್ಪಡುತ್ತಾನೆ. ಎಷ್ಟೇ

> ದುರ್ಬಲನಾಗಿದ್ದ ಶತ್ರುವು ಪ್ರವೃದ್ಧನಾಗುತ್ತಿದ್ದಾನೆಂದರೆ ಬಲಶಾಲಿಯೂ ನಿರ್ಲಕ್ಷಿಸಬಾರದು.”

ಶಾಸ್ತ್ರಬುದ್ಧಿಯನ್ನುಪಯೋಗಿಸಿ ನಿಶ್ಚಯಿಸಿ ವಧೆಗೆ ದೃಢ ಮನಸ್ಸುಮಾಡಿದನು. ಆಗ ಶಕ್ರನು ಸಂಕ್ರುದ್ಧನಾಗಿ ಅಗ್ನಿಯಂತೆ ಹೊಳೆಯುತ್ತಿರುವ, ಘೋರರೂಪೀ, ಭಯವನ್ನುಂಟುಮಾಡುವ ವಜ್ರವನ್ನು ತ್ರಿಶಿರನ ಮೇಲೆ ಎಸೆದನು. ವಜ್ರದಿಂದ ಜೋರಾಗಿ ಹೊಡೆಯಲ್ಪಟ್ಟು ಹತನಾಗಿ ಅವನು ಪರ್ವತಶಿಖರವು ಮಣ್ಣಾಗಿ ನೆಲಕ್ಕೆ ಬೀಳುವಂತೆ ಬಿದ್ದನು. ಅವನು ವಜ್ರದಿಂದ ಹತನಾಗಿ ಮಲಗಿದ ಪರ್ವತದಂತಿರುವುದನ್ನು ನೋಡಿ ದೇವೇಂದ್ರನು ಶಾಂತಿಯನ್ನು ಪಡೆಯಲಿಲ್ಲ. ಅವನು ತೇಜಸ್ಸಿನಿಂದ ಬೆಳಗುತ್ತಿದ್ದನು. ಹತನಾದರೂ ಆ ದೀಪ್ತ ತೇಜಸ್ವಿಯು ಜೀವಂತನಾದ್ದಾನೋ ಎಂದು ತೋರಿದನು. ಭಯಕ್ಕೆ ಸಿಲುಕಿದ ಶಚೀಪತಿಯು ಆಗ ಅಲ್ಲಿಗೆ ಬಂದ ಬಡಿಗನನ್ನು ನೋಡಿದನು. ತಕ್ಷಣವೇ ಪಾಕಶಾಸನನು ಅವನಿಗೆ ಹೇಳಿದನು:

> “ಬೇಗನ ಇವನ ಶಿರಗಳನ್ನು ಕತ್ತರಿಸು. ನನ್ನ ಮಾತಿನಂತೆ ಮಾಡು.”

ಬಡಿಗನು ಹೇಳಿದನು:

> “ಇವನ ಭುಜಗಳು ತುಂಬಾ ದೊಡ್ಡವು. ಈ ಗರಗಸೆಯಿಂದ ಅದು ತುಂಡಾಗುವುದಿಲ್ಲ. ಒಳ್ಳೆಯವರು ಅಲ್ಲಗಳೆಯುವ ಕೆಲಸವನ್ನು ಮಾಡಲೂ ನನಗೆ ಇಷ್ಟವಿಲ್ಲ.”

ಇಂದ್ರನು ಹೇಳಿದನು:

“ಹೆದರಬೇಡ! ಬೇಗನೆ ನಾನು ಹೇಳಿದಂತೆ ಮಾಡು. ನನ್ನ ಪ್ರಸಾದದಿಂದ ನಿನ್ನ ಗರಗಸವು ವಜ್ರಕಲ್ಪವಾಗುತ್ತದೆ.”

ಬಡಿಗನು ಹೇಳಿದನು:

“ಇಂದು ಈ ಘೋರಕರ್ಮವನ್ನು ಮಾಡಿರುವ ನೀನು ಯಾರೆಂದು ನಾನು ತಿಳಿಯಬೇಕು? ಇದನ್ನು ಕೇಳಲು ಬಯಸುತ್ತೇನೆ. ಸತ್ಯವನ್ನು ಹೇಳು.”

ಇಂದ್ರನು ಹೇಳಿದನು:

“ನಾನು ದೇವರಾಜ ಇಂದ್ರ. ಇದು ನಿನಗೆ ತಿಳಿದಿರಲಿ. ನಾನು ಹೇಳಿದಹಾಗೆ ನೀನು ಮಾಡುತ್ತೀಯೆ. ಬಡಿಗ! ವಿಚಾರಮಾಡಬೇಡ!”

ಬಡಿಗನು ಹೇಳಿದನು:

“ಶಕ್ರ! ಈ ಕ್ರೂರ ಕರ್ಮದಿಂದ ನೀನು ಹೇಗೆ ತಾನೇ ಪರಿತಪಿಸುತ್ತಿಲ್ಲ? ಈ ಋಷಿಪುತ್ರನನ್ನು ಕೊಂದು ನಿನಗೆ ಹೇಗೆ ಬ್ರಹ್ಮಹತ್ಯೆಯ ಭಯವಿಲ್ಲ?”

ಇಂದ್ರನು ಹೇಳಿದನು:

“ಈ ರೀತಿ ಕೆಟ್ಟದ್ದಾಗಿ ನಡೆದುಕೊಂಡಿದ್ದುದಕ್ಕೆ

ಪಾವನಗೊಳ್ಳಲು ನಾನು ಅನಂತರ ಧರ್ಮದಿಂದ ನಡೆದುಕೊಳ್ಳುತ್ತೇನೆ. ಈ ಮಹಾವೀರ್ಯವಂತನು ನನ್ನ ಶತ್ರುವಾಗಿದ್ದನು. ನನ್ನ ವಜ್ರದಿಂದ ಹತನಾದನು. ಬಡಿಗ! ಈಗಲೂ ಕೂಡ ನಾನು ಉದ್ವಿಗ್ನನಾಗಿದ್ದೇನೆ. ಇವನಿಂದ ಈಗಲೂ ಭಯಗೊಳ್ಳುತ್ತೇನೆ. ಬೇಗನೆ ಇವನ ಶಿರಗಳನ್ನು ಕತ್ತರಿಸು. ನಿನಗೆ ಅನುಗ್ರಹವನ್ನು ಮಾಡುತ್ತೇನೆ. ಯಜ್ಞಗಳಲ್ಲಿ ಮಾನವರು ಪಶುವಿನ ಶಿರೋಭಾಗವನ್ನು ನಿನಗೆ ನೀಡುತ್ತಾರೆ. ಈ ಅನುಗ್ರಹವನ್ನು ನಾನು ನಿನಗೆ ನೀಡುತ್ತಿದ್ದೇನೆ. ನನಗೆ ಪ್ರಿಯವಾದುದನ್ನು ಬೇಗ ಮಾಡು!"

ಆಗ ಮಹೇಂದ್ರನ ಈ ಮಾತನ್ನು ಕೇಳಿದ ಬಡಿಗನು ತಕ್ಷಣವೇ ತ್ರಿಶಿರನ ತಲೆಗಳನ್ನು ಕೊಡಲಿಯಿಂದ ತುಂಡರಿಸಿದನು. ತಲೆಗಳನ್ನು ತುಂಡರಿಸಲು ತ್ರಿಶಿರಗಳಿಂದ ಬಹಳಷ್ಟು ಗಿಳಿಗಳು, ಕೋಗಿಲೆಗಳು ಮತ್ತು ಗುಬ್ಬಿಗಳು ಹೊರಹಾರಿ ಬಂದವು. ಯಾವ ಬಾಯಿಯಿಂದ ವೇದಗಳನ್ನು ಪಠಿಸುತ್ತಿದ್ದನೋ ಮತ್ತು ಸೋಮವನ್ನು ಕುಡಿಯುತ್ತಿದ್ದನೋ ಆ ಬಾಯಿಯಿಂದ ಒಂದೇಸಮನೆ ಕಪಿಂಜಲಗಳು ಹಾರಿಬಂದವು. ಯಾವುದರಿಂದ ದಿಕ್ಕುಗಳೆಲ್ಲವನ್ನೂ ಕುಡಿದುಬಿಡುವವನಂತೆ ನೋಡುತ್ತಿದ್ದನೋ ಆ ಮುಖದಿಂದ ಬಹಳಷ್ಟು ಕೋಗಿಲೆಗಳು ಹೊರಬಂದವು. ಯಾವುದರಿಂದ ಸುರಾಪಾನ ಮಾಡುತ್ತಿದ್ದನೋ ತ್ರಿಶಿರನ ಆ ಮುಖದಿಂದ ಗುಬ್ಬಿ-ಗಿಡುಗಗಳು ಹೊರಬಂದವು. ತಲೆಗಳು ತುಂಡರಿಸಲ್ಪಡಲು ಮಘವತನು ವಿಜ್ವರನಾದನು. ಸಂತೋಷಗೊಂಡು

ತ್ರಿದಿವಕ್ಕೆ ಹೋಗಿ ಸ್ವಗೃಹವನ್ನು ಸೇರಿದನು.

ಪ್ರಜಾಪತಿ ತ್ವಷ್ಟನು ಶಕ್ರನಿಂದ ತನ್ನ ಮಗನು ಹತನಾದುದನ್ನು ಕೇಳಿ ಕ್ರೋಧದಿಂದ ಕಣ್ಣುಗಳು ಕೆಂಪಾಗಲು ಹೀಗೆ ಹೇಳಿದನು:

> "ತಪಸ್ಸನ್ನು ತಪಿಸುತ್ತಿರುವ, ನಿತ್ಯವೂ ಕ್ಷಾಂತ, ದಾಂತ ಮತ್ತು ಜಿತೇಂದ್ರಿಯನಾಗಿ ಅನಾಪರಾಧಿಯಾಗಿದ್ದ ನನ್ನ ಪುತ್ರನನ್ನು ಯಾರು ಹಿಂಸಿಸಿದ್ದಾನೋ ಆ ಶಕ್ರನ ವಧೆಗಾಗಿ ನಾನು ವೃತ್ರನನ್ನು ಉತ್ಪಾದಿಸುತ್ತಿದ್ದೇನೆ. ನನ್ನ ವೀರ್ಯವನ್ನು ಮತ್ತು ತಪಸ್ಸಿನ ಮಹಾಬಲವನ್ನು ಲೋಕಗಳು ನೋಡಲಿ! ದುರಾತ್ಮ ಪಾಪಚೇತನ ದೇವೇಂದ್ರನೂ ಇದನ್ನು ನೋಡಲಿ."

ಆಗ ಆ ಸುಮಹಾಯಶ ಕೃದ್ಧತಪಸ್ವಿಯು ನೀರನ್ನು ಮುಟ್ಟಿ, ಅಗ್ನಿಯಲ್ಲಿ ಆಹುತಿಯನ್ನು ಹಾಕಿ ಘೋರ ವೃತ್ರನನ್ನು ಉತ್ಪಾದಿಸಿ ಹೇಳಿದನು:

> "ಇಂದ್ರಶತ್ರುವೇ! ನನ್ನ ತಪಸ್ಸಿನ ಪ್ರಭಾವದಿಂದ ವಿವರ್ಧನಾಗು."

ಸೂರ್ಯ-ಅಗ್ನಿಯರ ಸರಿಸಮನಾದ ಅವನು ದಿವವನ್ನು ಸ್ತಬ್ಧಗೊಳಿಸಿ ಬೆಳೆದನು. ಕಾಲಸೂರ್ಯನಂತೆ ಮೇಲೆದ್ದು

> "ಏನು ಮಾಡಲಿ?"

ಎಂದು ಕೇಳಿದನು.

“ಇಂದ್ರನನ್ನು ಕೊಲ್ಲು!”

ಎಂದು ಹೇಳಿ ಅವನು ತ್ರಿದಿವಕ್ಕೆ ತೆರಳಿದನು. ಆಗ ವೃತ್ರ-ವಾಸವರ ನಡುವೆ ಯುದ್ಧವು ನಡೆಯಿತು. ವೃತ್ರನು ವೀರ ಶತಕ್ರತು ದೇವೇಂದ್ರನನ್ನು ಹಿಡಿದನು. ಅವನನ್ನು ಜೋರಾಗಿ ತಿರುಗಿಸಿ ಕ್ರೋಧಸಮನ್ವಿತನಾದ ವೃತ್ರನು ನುಂಗಿದನು. ವೃತ್ರನಿಂದ ಶಕ್ರನು ನುಂಗಲ್ಪಡಲು ಮಹಾಸತ್ವಶಾಲೀ ತ್ರಿದಶರು ಸಂಭ್ರಾಂತರಾಗಿ ವೃತ್ರನಾಶಿನೀ ಜೃಂಭಿಕೆ (ಆಕಳಿಕೆ) ಯನ್ನು ಸೃಷ್ಟಿಸಿದರು. ವೃತ್ರನು ಆಕಳಿಸಲು ಬಾಯಿ ತೆರೆದಾಗ ಬಲಸೂದನನು ತನ್ನ ಅಂಗಾಂಗಗಳನ್ನು ಸಂಕ್ಷಿಪ್ತಗೊಳಿಸಿ ಹೊರಬಂದನು. ಅಂದಿನಿಂದ ಲೋಕದಲ್ಲಿ ಜೃಂಭಿಕೆಯು ಪ್ರಾಣಿಗಳಲ್ಲಿ ಸಂಶ್ರಿತವಾದಳು.

ಶಕ್ರನು ಹೊರಬಂದುದನು ನೋಡಿದ ಎಲ್ಲ ಸುರರೂ ಸಂತುಷ್ಟರಾದರು. ಆಗ ಪುನಃ ವೃತ್ರ ವಾಸವರ ನಡುವೆ ಯುದ್ಧವು ಪ್ರಾರಂಭವಾಯಿತು. ಆ ಘೋರ ಮಹಾಯುದ್ಧವು ತುಂಬಾ ಸಮಯದವರೆಗೆ ನಡೆಯಿತು. ರಣದಲ್ಲಿ ತನ್ನ ಮತ್ತು ತ್ವಷ್ಟನ ತಪೋಬಲದಿಂದ ಬಲಸಮನ್ವಿತ ವೃತ್ರನು ವರ್ಧಿಸಿ ಅವನದೇ ಮೇಲ್ಗೈಯಾಗಲು ಶಕ್ರನು ಹಿಂದೆ ಸರಿದನು. ಅವನು ಹಿಂದೆ ಸರಿಯಲು ದೇವತೆಗಳು ಪರಮ ವಿಷಾದಗೊಂಡರು. ಶಕ್ರನ ಜೊತೆಗೆ ಅವರು ಕೂಡ ತ್ವಷ್ಟನ ತೇಜಸ್ಸಿನಿಂದ ವಿಮೋಹಿತರಾದರು. ಆಗ ಅವರೆಲ್ಲರೂ ಮುನಿಗಳನ್ನು ಕೂಡಿ ಮಂತ್ರಾಲೋಚನೆಗೈದರು. ಏನು ಮಾಡಬೇಕು ಎಂದು ಚಿಂತಿಸಿ

ಭಯಮೋಹಿತರಾಗಿ, ವೃತ್ರನ ವಧೆಯನ್ನು ಬಯಸಿದ ಎಲ್ಲರೂ ಮಹಾತ್ಮ, ಅವ್ಯಯ, ಮಂದರಾಗ್ರದಲ್ಲಿ ಕುಳಿತಿರುವ ವಿಷ್ಣುವನ್ನು ನೆನೆದರು. ಇಂದ್ರನು ಹೇಳಿದನು:

> "ದೇವತೆಗಳೇ! ಈ ಅವ್ಯಯ ಜಗತ್ತೆಲ್ಲವೂ ವೃತ್ರನಿಂದ ವ್ಯಾಪ್ತಗೊಂಡಿದೆ. ಅವನನ್ನು ಎದುರಿಸುವಂತಹುದು ಯಾವುದೂ ಇಲ್ಲವೆನಿಸುತ್ತಿದೆ. ಹಿಂದೆ ನಾನು ಸಮರ್ಥನಾಗಿದ್ದೆ. ಆದರೆ ಈಗ ಅಸಮರ್ಥನಾಗಿದ್ದೇನೆ. ನಿಮ್ಮೆಲ್ಲರ ಭದ್ರತೆಗೆ ಏನು ಮಾಡಲಿ? ಅವನು ದುಷ್ಪ್ರಧರ್ಷನೆಂದು ನನ್ನ ಅಭಿಪ್ರಾಯ. ಯುದ್ಧದಲ್ಲಿ ಅಮಿತವಿಕ್ರಮಿಯಾದ ಆ ತೇಜಸ್ವೀ ಮಹಾತ್ಮನು ದೇವಾಸುರಮಾನುಷರನ್ನೂ ಸೇರಿಸಿ ಮೂರು ಭುವನಗಳನ್ನು ನುಂಗಲು ಸಮರ್ಥನಾಗಿದ್ದಾನೆ. ಆದುದರಿಂದ ದಿವೌಕಸರೇ! ನನ್ನ ಈ ನಿಶ್ಚಯವನ್ನು ಕೇಳಿ. ಒಟ್ಟಿಗೇ ಮಹಾತ್ಮ ವಿಷ್ಣುವನಲ್ಲಿಗೆ ಹೋಗಿ ಅವನ ಸಲಹೆಯಂತೆ ಈ ದುರಾತ್ಮನ ವಧೆಯ ಉಪಾಯವನ್ನು ಮಾಡಬೇಕು."

ಮಘವತನು ಹೀಗೆ ಹೇಳಲು ದೇವತೆ ಋಶಿಗಣಗಳು ಮಹಾಬಲ, ಶರಣ್ಯ, ದೇವ ವಿಷ್ಣುವಿನ ಶರಣುಹೊಕ್ಕರು. ವೃತ್ರನಿಂದ ಭಯಾರ್ದಿತ ಅವರೆಲ್ಲರೂ ದೇವೇಶ ವಿಷ್ಣುವಿಗೆ ಹೇಳಿದರು:

> "ಪ್ರಭೋ! ಹಿಂದೆ ನೀನು ಮೂರು ಲೋಕಗಳನ್ನು ಮೂರು ಹೆಜ್ಜೆಗಳಲ್ಲಿ ಆವರಿಸಿದ್ದೆ. ಅಮೃತವನ್ನು ಅಪಹರಿಸಿ ನೀನು

ರಣದಲ್ಲಿ ದೈತ್ಯರನ್ನು ಸಂಹರಿಸಿದ್ದೆ. ಮಹಾದೈತ್ಯ ಬಲಿಯನ್ನು ಬಂಧಿಸಿ ಶಕ್ರನನ್ನು ದೇವಾಧಿಪನನ್ನಾಗಿ ಮಾಡಿದೆ. ಸರ್ವಲೋಕಗಳ ಪ್ರಭು ನೀನು. ಇವೆಲ್ಲವೂ ನಿನ್ನಿಂದ ತುಂಬಿದೆ. ನೀನೇ ದೇವ, ಮಹಾದೇವ ಮತ್ತು ಸರ್ವಲೋಕನಮಸ್ಕೃತ. ನೀನು ಇಂದ್ರನೊಂದಿಗೆ ದೇವತೆಗಳ ಗತಿಯಾಗು. ಈ ಜಗತ್ತೆಲ್ಲವೂ ವೃತ್ರನಿಂದ ವ್ಯಾಪಿತಗೊಂಡಿದೆ.”

ವಿಷ್ಣುವು ಹೇಳಿದನು:

“ನಿಮ್ಮ ಉತ್ತಮ ಹಿತಕ್ಕಾಗಿ ಅವಶ್ಯವಾದುದನ್ನು ನಾನು ಮಾಡಲೇಬೇಕು. ಆದುದರಿಂದ ಅವನು ಇಲ್ಲದಂತೆ ಮಾಡುವ ಉಪಾಯವನ್ನು ಹೇಳುತ್ತೇನೆ. ಋಷಿಗಂಧರ್ವರೊಡನೆ ವಿಶ್ವರೂಪವನ್ನು ತಾಳಿರುವ ವೃತ್ರನಿರುವಲ್ಲಿಗೆ ಹೋಗಿ. ಅವನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಪ್ರಯತ್ನಿಸಿ. ಇದರಿಂದ ನೀವು ಅವನನ್ನು ಗೆಲ್ಲಬಲ್ಲಿರಿ. ದೇವತೆಗಳೇ! ಶಕ್ರನಿಗೆ ನನ್ನ ತೇಜಸ್ಸೇ ಗತಿ. ಅದೃಶ್ಯನಾಗಿದ್ದುಕೊಂಡು ನಾನು ಆ ಉತ್ತಮ ವಜ್ರಾಯುಧವನ್ನು ಪ್ರವೇಶಿಸುತ್ತೇನೆ. ಹೊರಡಿ! ಆದಷ್ಟು ಬೇಗ ಋಷಿ-ಗಂಧರ್ವರೊಡಗೂಡಿ ವೃತ್ರನೊಂದಿಗೆ ಶಕ್ರನ ಸಂಧಿಯನ್ನು ಮಾಡಿಸಿ.”

ದೇವನು ಹೀಗೆ ಹೇಳಲು ಋಷಿಗಳು, ತ್ರಿದಶರು, ಒಂದಾಗಿ ಶಕ್ರನನ್ನು

ಮುಂದಿಟ್ಟುಕೊಂಡು ಹೋದರು. ಶಕ್ರನೊಂದಿಗೆ ದೇವತೆಗಳೆಲ್ಲರೂ ಸಮೀಪಕ್ಕೆ ಬಂದು ತೇಜಸ್ಸಿನಿಂದ ಪ್ರಜ್ವಲಿಸಿ ದಶದಿಶಗಳನ್ನೂ ಸುಡುತ್ತಿರುವ, ಸೂರ್ಯ-ಚಂದ್ರರಂತಿರುವ, ಮೂರು ಲೋಕಗಳನ್ನೂ ಕಬಳಿಸುವಂತಿರುವ ಆ ಮಹೌಜಸ ವೃತ್ರನನ್ನು ನೋಡಿದರು. ಋಷಿಗಳು ಬಂದು ವೃತ್ರನಿಗೆ ಈ ಪ್ರಿಯ ಮಾತುಗಳನ್ನಾಡಿದರು:

> “ದುರ್ಜಯ! ನಿನ್ನ ತೇಜಸ್ಸು ಈ ಜಗತ್ತೆಲ್ಲವನ್ನೂ ಆವರಿಸಿದೆ. ಭೂರಿವಿಕ್ರಮ ವಾಸವನನ್ನು ಸೋಲಿಸಲು ನಿನಗೆ ಶಕ್ಯವಿಲ್ಲ. ಈ ಮಹಾಯುದ್ಧವು ಪ್ರಾರಂಭಿಸಿ ಬಹುಕಾಲವು ಕಳೆದುಹೋಯಿತು. ದೇವಾಸುರ-ಮಾನವರೂ ಸೇರಿ ಎಲ್ಲ ಪ್ರಜೆಗಳೂ ಪೀಡೆಗೊಳಗಾಗಿದ್ದಾರೆ. ವೃತ್ರ! ಶಕ್ರನೊಂದಿಗೆ ನಿನ್ನ ನಿತ್ಯ ಸಖ್ಯವಾಗಲಿ. ಶಕ್ರಲೋಕದಲ್ಲಿ ನೀನು ಶಾಶ್ವತ ಸುಖವನ್ನು ಹೊಂದುವೆ.”

ಋಷಿಗಳ ಮಾತುಗಳನ್ನು ಸುಮಹಾಬಲ ವೃತ್ರಾಸುರನು ಕೇಳಿ, ಅವರೆಲ್ಲರಿಗೆ ತಲೆಬಾಗಿ ನಮಸ್ಕರಿಸಿ ಹೇಳಿದನು:

> “ಎಲ್ಲ ಗಂಧರ್ವರೂ ಮತ್ತು ಮಹಾಭಾಗ ನೀವೆಲ್ಲರೂ ಹೇಳಿದುದನ್ನು ನಾನು ಕೇಳಿದೆ. ಅನಘರೇ! ಈಗ ನಾನು ಹೇಳುವುದನ್ನೂ ಕೇಳಿ. ನನ್ನ ಮತ್ತು ಶಕ್ರನ ನಡುವೆ ಸಂಧಿಯು ಹೇಗಾದೀತು? ಇಬ್ಬರು ತೇಜಸ್ವಿ ದ್ರೋಹಿಗಳ ಮಧ್ಯೆ ಸಖ್ಯವು ಹೇಗಾಗಬಹುದು?”

ಋಷಿಗಳು ಹೇಳಿದರು:

> "ಸಕೃತರರಲ್ಲಿ ಗೆಳೆತನವು ಒಂದೇ ಭೇಟಿಯಲ್ಲಾಗುವುದು ಒಳ್ಳೆಯದೇ. ಅದರ ನಂತರ ನಡೆಯುವಂಥಹುದು ನಡೆಯಲೇ ಬೇಕಾಗಿರುವ ವಿಧಿವಿಹಿತವಾದುದು. ಆದುದರಿಂದ ಸತ್ಪುರುಷರೊಡನೆ ಸಖ್ಯದ ಅವಕಾಶವನ್ನು ಕಡೆಗಾಣಿಸಬಾರದು. ಆದುದರಿಂದ ಒಳ್ಳೆಯವರೊಂದಿಗೆ ಸಖ್ಯವನ್ನು ಬಯಸಬೇಕು.  ಸತ್ಯವಂತರೊಂದಿಗಿನ ಸಖ್ಯವು ಕಷ್ಟದಲ್ಲಿ ಬರುವ ಸಂಪತ್ತಿನಂತೆ ದೃಢವೂ ನಿತ್ಯವೂ ಆದುದು. ಸತ್ಪುರುಷರೊಂದಿಗಿನ ಸಖ್ಯವು ಮಹಾ ಐಶ್ವರ್ಯವಿದ್ದಂತೆ. ಆದುದರಿಂದ ಸತ್ಯವಂತರನ್ನು ಕೊಲ್ಲಬಾರದು. ಇಂದ್ರನು ಸತ್ಯವಂತರಿಂದ ಗೌರವಿಸಲ್ಪಟ್ಟವನು ಮತ್ತು ಮಹಾತ್ಮರ ನಿವಾಸ. ಸತ್ಯವಾದೀ, ಹೃದಯವಂತ ಮತ್ತು ಧರ್ಮನಿಶ್ಚಯಗಳನ್ನು ತಿಳಿದವನು. ಶಕ್ರನೊಂದಿಗೆ ನಿನ್ನ ಶಾಶ್ವತ ಸಂಧಿಯಾಗಲಿ. ಈ ರೀತಿ ನಿನಗೆ ಅವನ ಮೇಲೆ ವಿಶ್ವಾಸ ಬರಲಿ. ಅನ್ಯಥಾ ವಿಚಾರಮಾಡಬೇಡ."

ಮಹರ್ಷಿಗಳ ಮಾತನ್ನು ಕೇಳಿ ಆ ಮಹಾದ್ಯುತಿಯು ಹೇಳಿದನು:

> "ಭಗವಂತ ತಪಸ್ವಿಗಳನ್ನು ನಾನು ಅವಶ್ಯವಾಗಿಯೂ ಮನ್ನಿಸುತ್ತೇನೆ. ನಾನು ಏನನ್ನು ಹೇಳುತ್ತೇನೋ ಅವೆಲ್ಲವನ್ನೂ ದೇವತೆಗಳು ಮಾಡಲಿ. ಆಗ ದ್ವಿಜರ್ಷಭರು

> ಹೇಳಿದುದೆಲ್ಲವನ್ನೂ ನಾನು ಮಾಡುತ್ತೇನೆ. ವಿಪ್ರೇಂದ್ರರೇ! ಒಣಗಿದುದರಿಂದಾಲೀ ಒದ್ದೆಯಾಗಿದುದರಿಂದಾಗಲೀ, ಕಲ್ಲಿನಿಂದಾಗಲೀ ಮರದಿಂದಾಗಲೀ, ಶಸ್ತ್ರದಿಂದಾಗಲೀ ವಜ್ರದಿಂದಾಗಲೀ, ದಿನದಲ್ಲಿಯಾಗಲೀ ರಾತ್ರಿಯಲ್ಲಾಗಲೀ ಶಕ್ರನು ಅಥವಾ ದೇವತೆಗಳು ನನ್ನನ್ನು ಕೊಲ್ಲದಿರಲಿ. ಶಕ್ರನೊಂದಿಗೆ ಈ ರೀತಿಯ ನಿತ್ಯ ಸಂಧಿಯು ನನಗೆ ಇಷ್ಟವಾಗುತ್ತದೆ."

"ಒಳ್ಳೆಯದು" ಎಂದು ಋಷಿಗಳು ಹೇಳಿದರು. ಈ ರೀತಿ ಸಂಧಾನವನ್ನು ಮಾಡಿಕೊಂಡು ವೃತ್ರನು ಪರಮ ಮುದಿತನಾದನು. ಹಾಗೆಯೇ ಶಕ್ರನೂ ಕೂಡ ಸಂತುಷ್ಟನಾದರೂ ಅವನು ಸದಾ ವ್ಯಾಕುಲಗೊಂಡು ವೃತ್ರನ ವಧೆಯ ಕುರಿತ ಉಪಾಯವನ್ನು ಯೋಚಿಸುತ್ತಿದ್ದನು. ಬಲವೃತ್ರಹನು ಸದಾ ಅವಕಾಶದ ರಂಧ್ರವನ್ನು ಹುಡುಕುವುದರಲ್ಲಿ ನಿರತನಾಗಿದ್ದನು.

ಒಮ್ಮೆ ಅವನು ಸಂಧ್ಯಾಕಾಲದ ರಮ್ಯವೂ ದಾರುಣವೂ ಆದ ಮುಹೂರ್ತವು ಸನ್ನಿಹಿತವಾಗುವಾಗ ಆ ಮಹಾಸುರನನ್ನು ಸಮುದ್ರದ ಅಂಚಿನಲ್ಲಿ ಕಂಡನು. ಆಗ ಭಗವಾನನು ಆ ಮಹಾತ್ಮನಿಗೆ ನೀಡಿದ ವರದ ಕುರಿತು ಯೋಚಿಸಿದನು:

> "ಇದು ರೌದ್ರವಾದ ಸಂಧ್ಯಾಸಮಯ. ರಾತ್ರಿಯೂ ಅಲ್ಲ ದಿವಸವೂ ಅಲ್ಲ. ನನ್ನಿಂದ ಎಲ್ಲವನ್ನೂ ಅಪಹರಿಸಿದ ನನ್ನ ಈ ಶತ್ರು ವೃತ್ರನನ್ನು ನಾನು ಅವಶ್ಯವಾಗಿ ವಧಿಸುತ್ತೇನೆ. ಇಂದು

> ನಾನು ವಂಚಿಸಿ ಈ ಮಹಾಬಲ ಮಹಾಕಾಯ ಮಹಾಸುರನನ್ನು ಕೊಲ್ಲದೇ ಇದ್ದರೆ ನನಗೆ ಶ್ರೇಯಸ್ಸುಂಟಾಗುವುದಿಲ್ಲ."

ಈ ರೀತಿ ಆಲೋಚಿಸಿ ಶಕ್ರನು ವಿಷ್ಣುವನ್ನು ಸ್ಮರಿಸಿದನು. ಅಗ ಸಮುದ್ರದಲ್ಲಿ ಪರ್ವತೋಪಮ ನೊರೆಯು ಕಾಣಿಸಿಕೊಂಡಿತು.

> "ಇದು ಒಣಗಿಯೂ ಇಲ್ಲ ಒದ್ದೆಯಾಗಿಯೂ ಇಲ್ಲ. ಹಾಗೆಯೇ ಇದು ಶಸ್ತ್ರವೂ ಅಲ್ಲ. ಇದನ್ನು ಎಸೆಯುತ್ತೇನೆ. ಕ್ಷಣದಲ್ಲಿಯೇ ವೃತ್ರನು ನಾಶಗೊಳ್ಳುತ್ತಾನೆ."

ಅವನು ಆಗ ವಜ್ರವನ್ನು ನೊರೆಯಲ್ಲಿ ಅದ್ದಿ ವೃತ್ರನೆಡೆ ಎಸೆದನು. ಆಗ ವಿಷ್ಣುವು ನೊರೆಯನ್ನು ಪ್ರವೇಶಿಸಿ ವೃತ್ರನನ್ನು ನಾಶಗೊಳಿಸಿದನು. ವೃತ್ರನು ಹತನಾಗಲು ದಿಕ್ಕುಗಳು ಕತ್ತಲೆರಹಿತವಾದವು. ಸುಖಕರ ಗಾಳಿಯು ಬೀಸಿತು. ಪ್ರಜೆಗಳೆಲ್ಲರೂ ಹರ್ಷಿತರಾದರು.

ಆಗ ದೇವತೆಗಳು ಮತ್ತು ಋಷಿಗಳು ಗಂಧರ್ವ, ಯಕ್ಷ, ರಾಕ್ಷಸ, ಪನ್ನಗರೊಡನೆ ಮಹೇಂದ್ರನನ್ನು ವಿವಿಧ ಸ್ತವಗಳಿಂದ ಸ್ತುತಿಸಿದರು. ಸರ್ವಭೂತಗಳಿಂದ ನಮಸ್ಕರಿಸಲ್ಪಟ್ಟ ವಾಸವನು ಸರ್ವಭೂತಗಳನ್ನು ಸಂತವಿಸಿ ಶತ್ರುವು ಹತನಾದನೆಂದು ಪ್ರಹೃಷ್ಟಾತ್ಮನಾಗಿ ದೇವತೆಗಳೊಂದಿಗೆ ತ್ರಿಭುವನಶ್ರೇಷ್ಠ ವಿಷ್ಣುವನ್ನು ಧರ್ಮವತ್ತಾಗಿ ಪೂಜಿಸಿದನು. ದೇವಭಯಂಕರ ಮಹಾವೀರ್ಯ ವೃತ್ರನು ಹತನಾಗಲು ಶಕ್ರನು ಸುಳ್ಳಿನಿಂದ ಅಭಿಭೂತನಾಗಿ ಮತ್ತು ಹಿಂದೆ ಮಾಡಿದ ತ್ರಿಶಿರ

ಬ್ರಹ್ಮಹತ್ಯೆಯಿಂದ ಅಭಿಭೂತನಾಗಿ ಪರಮ ದುಃಖಿತನಾದನು. ಅವನು ಲೋಕಗಳ ಆಳವನ್ನು ಸೇರಿ ಸಂಜ್ಞೆಗಳನ್ನು ಕಳೆದುಕೊಂಡು ವಿಚೇತನನಾದನು. ತನ್ನದೇ ಪಾಪಗಳಿಂದ ಅಭಿಭೂತನಾಗಿ ದೇವೇಂದ್ರನು ಗುರುತಿಗೇ ಸಿಗದಂತಾದನು. ಒದ್ದಾಡುತ್ತಿರುವ ಹಾವಿನಂತೆ ನೀರಿನಲ್ಲಿ ಅಡಗಿಕೊಂಡು ವಾಸಿಸಿದನು.

ಬ್ರಹ್ಮಹತ್ಯೆಯ ಭಯದಿಂದ ಪೀಡಿತನಾದ ದೇವೇಂದ್ರನನ್ನು ಕಳೆದುಕೊಂಡ ಭೂಮಿಯಲ್ಲಿ ಮಹಾ ವಿಧ್ವಂಸವು ನಡೆಯಿತೋ ಎನ್ನುವ ಹಾಗೆ ಮರಗಳನ್ನು ಕಳೆದುಕೊಂಡು, ಕಾನನಗಳು ಒಣಗಿ, ನದಿಗಳ ಪ್ರವಾಹವು ತುಂಡಾಗಿ, ಸರೋವರಗಳು ನೀರಿಲ್ಲದಂತಾದವು. ಅನಾವೃಷ್ಟಿಯಿಂದ ಸತ್ವಗಳಲ್ಲಿ ಸಂಕ್ಷೋಭೆಗೊಂಡಿತು. ದೇವತೆಗಳೂ ಎಲ್ಲ ಮಹರ್ಷಿಗಳೂ ತುಂಬಾ ಪೀಡಿತರಾದರು. ಅರಾಜಕತೆಯಿಂದ ಜಗತ್ತೆಲ್ಲವೂ ಉಪದ್ರವಗಳಿಂದ ತುಂಬಿಕೊಂಡಿತು.

"ಯಾರು ನಮ್ಮ ರಾಜನಾಗುತ್ತಾನೆ?"

ಎಂದು ದೇವತೆಗಳು ಭಯಭೀತರಾದರು. ದಿವಿಯಲ್ಲಿ ದೇವರಾಜನಿಲ್ಲದೇ ಆದಾಗ ದೇವತೆಗಳು ಮತ್ತು ಋಷಿಗಳಲ್ಲಿ ಯಾರೂ ದೇವತೆಗಳ ರಾಜನಾಗಲು ಮನಸ್ಸುಮಾಡಲಿಲ್ಲ. ಆಗ ಎಲ್ಲ ಋಷಿಗಳೂ ತ್ರಿದಶೇಶ್ವರರೂ ದೇವತೆಗಳೂ

"ಶ್ರೀಮಾನ್ ನಹುಷನು ದೇವರಾಜನಾಗಿ ಅಭಿಷಿಕ್ತನಾಗಲಿ!"

ಎಂದು ಹೇಳಿದರು. ಅವರೆಲ್ಲರೂ ಅವನಲ್ಲಿಗೆ ಹೋಗಿ ಹೇಳಿದರು:

> "ಪಾರ್ಥಿವ! ನಮ್ಮ ರಾಜನಾಗು!"

ತನ್ನ ಹಿತವನ್ನು ಬಯಸಿ ಆ ನಹುಷನು ಪಿತೃಗಳ ಸಹಿತರಿಂದ ದೇವ ಋಷಿಗಣಗಳಿಗೆ ಹೇಳಿದನು:

> "ನಾನು ದುರ್ಬಲನಾಗಿದ್ದೇನೆ. ನಿಮ್ಮನ್ನು ಪರಿಪಾಲಿಸಲು ನನ್ನಲ್ಲಿ ಶಕ್ತಿಯಿಲ್ಲ. ಬಲಶಾಲಿಯು ರಾಜನಾಗುತ್ತಾನೆ. ಶಕ್ರನು ಯಾವಾಗಲೂ ಬಲಶಾಲಿಯಾಗಿದ್ದನು."

ಋಷಿಗಳನ್ನು ಮುಂದಿಟ್ಟುಕೊಂಡ ಎಲ್ಲ ದೇವತೆಗಳೂ ಅವನಿಗೆ ಪುನಃ ಹೇಳಿದರು:

> "ನಮ್ಮ ತಪಸ್ಸುಗಳಿಂದ ಯುಕ್ತನಾಗಿ ತ್ರಿವಿಷ್ಟಪದಲ್ಲಿ ರಾಜ್ಯವನ್ನು ಆಳು! ನಮ್ಮ ಪರಸ್ಪರರಲ್ಲಿ ಭಯವಿದೆ ಎನ್ನುವುದು ನಿಃಸಂಶಯ. ರಾಜೇಂದ್ರ! ಅಭಿಷೇಕಿಸಿಕೊಂಡು ತ್ರಿವಿಷ್ಟಪದಲ್ಲಿ ರಾಜನಾಗು. ನಿನ್ನ ಕಣ್ಣಮುಂದೆ ಯಾರೇ ಬರಲಿ – ದೇವ, ದಾನವ, ಯಕ್ಷ, ಋಷಿ, ರಾಕ್ಷಸ, ಪಿತೃ, ಗಂಧರ್ವರು - ಅವರನ್ನು ನೋಡಿಯೇ ಅವರ ತೇಜಸ್ಸನ್ನು ಎಳೆದುಕೊಂಡು ಬಲಶಾಲಿಯಾಗುತ್ತೀಯೆ. ಸದಾ ಧರ್ಮವನ್ನೇ ಮೊದಲಾಗಿರಿಸಿಕೊಂಡು ಸರ್ವ ಲೋಕಗಳ ಅಧಿಪತಿಯಾಗು. ತ್ರಿವಿಷ್ಟಪದಲ್ಲಿ ಬ್ರಹ್ಮರ್ಷಿಗಳನ್ನು ಮತ್ತು ದೇವತೆಗಳನ್ನು

ರಕ್ಷಿಸು."

ಸತತ ಧರ್ಮಾತ್ಮನಾಗಿದ್ದರೂ, ತ್ರಿವಿಷ್ಟಪದಲ್ಲಿ ರಾಜ್ಯವನ್ನು ಪಡೆದು, ಸುದುರ್ಲಭ ವರವನ್ನು ಪಡೆದು ಅವನು ಕಾಮಾತ್ಮನಾಗತೊಡಗಿದನು. ಆಗ ದೇವರಾಜ ನಹುಷನು ಎಲ್ಲ ದೇವೋದ್ಯಾನಗಳಲ್ಲಿ, ನಂದನ ಉಪವನದಲ್ಲಿ, ಕೈಲಾಸ ಹಿಮಾಲಯದ ತಪ್ಪಲಿನಲ್ಲಿ, ಮಂದರ ಶ್ವೇತ ಪರ್ವತಗಳಲ್ಲಿ, ಸಹ್ಯಾದ್ರಿ-ಮಹೇಂದ್ರ ಮಲಯಗಳಲ್ಲಿ, ಸಮುದ್ರ ಸರೋವರಗಳಲ್ಲಿ, ಅಪ್ಸರೆಯರು ಮತ್ತು ದೇವ ಕನ್ಯೆಯರಿಂದ ಸಮಾವೃತನಾಗಿ ಬಹುವಿಧದ ಕ್ರೀಡೆಗಳಲ್ಲಿ ತೊಡಗಿದನು. ಬಹುವಿಧದ ದಿವ್ಯ ಕಥೆಗಳನ್ನೂ, ಶ್ರುತಿಮನೋಹರ ವಾದ್ಯಗಳೆಲ್ಲವನ್ನೂ, ಮಧುರಸ್ವರ ಗೀತೆಗಳನ್ನೂ ಕೇಳಿದನು. ವಿಶ್ವಾವಸು, ನಾರದ, ಗಂಧರ್ವ ಅಪ್ಸರ ಗಣಗಳು, ಮತ್ತು ಆರು ಋತುಗಳು ಮೂರ್ತಿಮಂತರಾಗಿ ದೇವೇಂದ್ರನ ಉಪಸ್ಥಿತಿಯಲ್ಲಿದ್ದರು. ಸುಗಂಧಗಳನ್ನು ಹೊತ್ತು ಮಾರುತನು ಮನೋಜ್ಞ ಸುಖಶೀತಲವಾಗಿ ಬೀಸಿದನು. ಹೀಗೆ ಮಹಾತ್ಮ ನಹುಷನು ಕ್ರೀಡಿಸುತ್ತಿರಲು, ಅವನಿಗೆ ಶಕ್ರನ ಪ್ರಿಯ ಮಹಿಷಿ ದೇವಿಯ ದರ್ಶನವು ದೊರಕಿತು. ಅವಳನ್ನು ನೋಡಿದ ಆ ದುಷ್ಟಾತ್ಮನು ಸಭಾಸದರೆಲ್ಲರಲ್ಲಿ ಕೇಳಿದನು:

"ಇಂದ್ರನ ಮಹಿಷಿ ದೇವಿಯು ಏಕೆ ನನ್ನೊಂದಿಗೆ ಕುಳಿತುಕೊಳ್ಳುವುದಿಲ್ಲ? ನಾನು ದೇವತೆಗಳ ಇಂದ್ರ ಮತ್ತು ಹಾಗೆಯೇ ಲೋಕಗಳ ಈಶ್ವರ. ಬೇಗನೆ ಶಚಿಯು ಇಂದು ನನ್ನ

ಮನೆಗೆ ಬರಲಿ!”

ಅದನ್ನು ಕೇಳಿ ದುಃಖಿತಳಾದ ದೇವಿಯು ಬೃಹಸ್ಪತಿಗೆ ಹೇಳಿದಳು:

“ಬ್ರಹ್ಮನ್! ನನ್ನನ್ನು ನಹುಷನಿಂದ ರಕ್ಷಿಸು! ನಿನ್ನ ಶರಣು ಬಂದಿದ್ದೇನೆ! ನಾನು ಸರ್ವಲಕ್ಷಣಸಂಪನ್ನಳು. ದೇವರಾಜನ ಪ್ರಿಯಳು. ಅತ್ಯಂತ ಸುಖಭಾಗಿನಿ. ಅವೈಧವ್ಯದಿಂದ ಸಂಯುಕ್ತಳಾಗಿದ್ದೇನೆ. ಏಕಪತ್ನಿಯಾಗಿ ಪತಿವ್ರತೆಯಾಗಿದ್ದೇನೆ ಎಂದು ನನಗೆ ನೀನು ಯಾವಾಗಲೂ ಹೇಳುತ್ತೀಯೆ ಮತ್ತು ಹಿಂದೆ ಹೇಳಿದ್ದೀಯೆ. ನಿನ್ನ ಮಾತು ಸುಳ್ಳಾಗದಂತೆ ಮಾಡು! ಹಿಂದೆ ನೀನು ಸುಳ್ಳನ್ನು ಎಂದೂ ಹೇಳಿದ್ದಿಲ್ಲ. ಆದುದರಿಂದ ನೀನು ಹೇಳಿದ ಇದನ್ನೂ ಸತ್ಯವನ್ನಾಗಿಸಬೇಕು.”

ಆಗ ಭಯಮೋಹಿತ ಇಂದ್ರಾಣಿಗೆ ಬೃಹಸ್ಪತಿಯು ಹೇಳಿದನು:

“ದೇವಿ! ನಾನು ಏನನ್ನು ಹೇಳುತ್ತೇನೋ ಅದು ಸತ್ಯವಾಗುವುದು ಖಂಡಿತ. ದೇವರಾಜ ಇಂದ್ರನು ಶೀಘ್ರದಲ್ಲಿಯೇ ಇಲ್ಲಿಗೆ ಬರುವುದನ್ನು ನೋಡುತ್ತೀಯೆ. ನಹುಷನಿಂದ ನಿನಗೆ ಯಾವುದೂ ಭಯವಿಲ್ಲ. ಸತ್ಯವನ್ನು ಹೇಳುತ್ತಿದ್ದೇನೆ. ಸ್ವಲ್ಪವೇ ಸಮಯದಲ್ಲಿ ನಾನು ನಿನ್ನನ್ನು ಶಕ್ರನೊಂದಿಗೆ ಕೂಡಿಸುತ್ತೇನೆ.”

ಇಂದ್ರಾಣಿಯು ಆಂಗಿರಸ ಬೃಹಸ್ಪತಿಯ ಶರಣು ಹೋಗಿದ್ದಾಳೆ ಎಂದು

ಕೇಳಿದ ನೃಪ ನಹುಷನು ಕ್ರೋಧಿತನಾದನು. ನಹುಷನು ಸಿಟ್ಟಾಗಿದ್ದಾನೆಂದು ತಿಳಿದ ದೇವತೆಗಳು ಋಷಿಗಳನ್ನು ಮುಂದಿಟ್ಟುಕೊಂಡು ಘೋರವಾಗಿ ಕಾಣುತ್ತಿದ್ದ ದೇವರಾಜ ನಹುಷನಿಗೆ ಹೇಳಿದರು:

> "ದೇವರಾಜ! ಕ್ರೋಧವನ್ನು ತ್ಯಜಿಸು. ನಿನ್ನ ಸಿಟ್ಟಿನಿಂದ ಅಸುರ, ಗಂಧರ್ವ, ಮಹೋರಗಗಳೊಂದಿಗೆ ಜಗತ್ತೇ ಕಂಪಿಸುತ್ತಿದೆ. ಈ ಕ್ರೋಧವನ್ನು ಬಿಡು. ನಿನ್ನಂಥಹ ಸಾಧುಗಳು ಸಿಟ್ಟಾಗುವುದಿಲ್ಲ. ಆ ದೇವಿಯು ಪರನ ಪತ್ನಿ. ಪ್ರಸೀದನಾಗು. ಇನ್ನೊಬ್ಬನ ಪತ್ನಿಯನ್ನು ಆಸೆಪಡುವ ಈ ಪಾಪದಿಂದ ನಿನ್ನ ಮನಸ್ಸನ್ನು ಹಿಂದೆ ತೆಗೆದುಕೋ. ನಿನಗೆ ಮಂಗಳವಾಗಲಿ! ದೇವರಾಜನಾಗಿದ್ದೀಯೆ. ಪ್ರಜೆಗಳನ್ನು ಧರ್ಮದಿಂದ ಪಾಲಿಸು!"

ಹೇಳಿದ ಈ ಮಾತುಗಳು ಕಾಮಮೋಹಿತನಾದ ಅವನಿಗೆ ಹಿಡಿಸಲಿಲ್ಲ. ಆಗ ಸುರಾಧಿಪನು ಇಂದ್ರನ ಕುರಿತಾಗಿ ದೇವತೆಗಳಿಗೆ ಹೀಗೆ ಹೇಳಿದನು:

> "ಹಿಂದೆ ಋಷಿಪತ್ನೀ ಯಶಸ್ವಿನೀ ಅಹಲ್ಯೆಯನ್ನು ಅವಳ ಪತಿಯು ಜೀವಿಸಿರುವಾಗಲೇ ಅವನು ಬಲಾತ್ಕರಿಸಿದ್ದನು. ಆಗ ನೀವು ಅವನನ್ನು ಏಕೆ ತಡೆಯಲಿಲ್ಲ? ಹಿಂದೆ ಇಂದ್ರನು ಬಹಳಷ್ಟು ಧರ್ಮಕ್ಕೆ ವಿರುದ್ಧವಾದ ಮೋಸದ, ಒಳ್ಳೆಯದಲ್ಲದ ಕೃತ್ಯಗಳನ್ನು ಮಾಡಿದ್ದಾನೆ. ಆಗ ಅವನನ್ನು

ಏಕೆ ತಡೆಯಲಿಲ್ಲ? ದೇವಿಯು ನನ್ನ ಬಳಿ ಬರಲಿ. ಅವಳಿಗೆ ಇದೇ ಪರಮ ಹಿತವಾದುದು. ದೇವತೆಗಳೇ! ಇದು ನಿಮಗೂ ಕೂಡ ಮಂಗಳಕರವಾಗುತ್ತದೆ!"

ದೇವತೆಗಳು ಹೇಳಿದರು:

"ದಿವಸ್ಪತೇ! ನೀನು ಇಚ್ಛಿಸಿದಂತೆ ಇಂದ್ರಾಣಿಯನ್ನು ಕರೆತರುತ್ತೇವೆ. ಈ ಕ್ರೋಧವನ್ನು ಬಿಡು. ಪ್ರೀತನಾಗು!"

ಹೀಗೆ ಹೇಳಿ ದೇವತೆಗಳು ಋಷಿಗಳೊಂದಿಗೆ ಇಂದ್ರಾಣಿಗೆ ಅಶುಭವಾದ ಮಾತುಗಳನ್ನು ಹೇಳಲು ಬೃಹಸ್ಪತಿಯಲ್ಲಿಗೆ ಹೋದರು.

"ವಿಪ್ರೇಂದ್ರ! ಇಂದ್ರಾಣಿಯು ನಿನ್ನ ಮನೆಯಲ್ಲಿ ಶರಣು ಬಂದಿದ್ದಾಳೆಂದೂ ನೀನು ಅವಳಿಗೆ ಅಭಯವನ್ನಿತ್ತಿದ್ದೀಯೆ ಎಂದೂ ತಿಳಿದಿದ್ದೇವೆ. ಆದರೆ ಗಂಧರ್ವ ಋಷಿಗಳೊಂದಿಗೆ ನಾವು ದೇವತೆಗಳು ನಹುಷನಿಗಾಗಿ ಇಂದ್ರಾಣಿಯನ್ನು ಬಿಟ್ಟುಕೊಡಲು ನಿನ್ನನ್ನು ಪ್ರಾರ್ಥಿಸುತ್ತಿದ್ದೇವೆ. ಮಹಾದ್ಯುತಿ ದೇವರಾಜ ನಹುಷನು ಇಂದ್ರನಿಗಿಂತಲೂ ವಿಶಿಷ್ಟನು. ವರವರ್ಣಿನೀ ವರಾರೋಹೆಯು ಅವನನ್ನು ಪತಿಯನ್ನಾಗಿ ವರಿಸಲಿ."

ಇದನ್ನು ಕೇಳಿದ ಆ ದೇವಿಯು ಕಣ್ಣೀರು ಸುರಿಸಿ ಜೋರಾಗಿ ರೋದಿಸುತ್ತಾ ದೀನಳಾಗಿ ಬೃಹಸ್ಪತಿಗೆ ಹೇಳಿದಳು:

“ಬ್ರಹ್ಮನ್! ಪ್ರಭು ನಹುಷನನ್ನು ನನ್ನ ಪತಿಯನ್ನಾಗಿಸಿಕೊಳ್ಳಲು ನನಗೆ ಇಷ್ಟವಿಲ್ಲ. ನಿನ್ನ ಶರಣು ಬಂದಿದ್ದೇನೆ. ಈ ಮಹಾಭಯದಿಂದ ನನ್ನನ್ನು ಪಾರುಮಾಡು!”

ಬೃಹಸ್ಪತಿಯು ಹೇಳಿದನು:

“ಇಂದ್ರಾಣಿ! ಶರಣಾಗತರನ್ನು ತ್ಯಜಿಸುವುದಿಲ್ಲ. ಇದು ನನ್ನ ನಿಶ್ಚಯ. ಧರ್ಮಜ್ಞೆ ಧರ್ಮಶೀಲೆ ನಿನ್ನನ್ನು ನಾನು ತ್ಯಜಿಸುವುದಿಲ್ಲ. ಅದರಲ್ಲೂ ಬ್ರಾಹ್ಮಣನಾಗಿರುವ, ಧರ್ಮವನ್ನು ಕೇಳಿ ತಿಳಿದುಕೊಂಡಿರುವ, ಸತ್ಯಶೀಲನಾಗಿರುವ, ಧರ್ಮದ ಅನುಶಾಸನವನ್ನು ತಿಳಿದಿರುವ ನಾನು ಅಕಾರ್ಯವನ್ನು ಮಾಡಲು ಬಯಸುವುದಿಲ್ಲ. ಸುರೋತ್ತಮರೇ! ನಾನು ಇದನ್ನು ಮಾಡುವುದಿಲ್ಲ! ಹೊರಟು ಹೋಗಿ! ಇದರ ಕುರಿತು ಹಿಂದಿನ ಬ್ರಹ್ಮನ ಈ ಗೀತೆಯನ್ನು ಕೇಳಬೇಕು. ಭೀತರಾಗಿ ಶರಣು ಬಂದಿರುವವರನ್ನು ಶತ್ರುಗಳಿಗೆ ಕೊಡುವವನು ತನಗೇ ಬೇಕೆಂದಾಗ ರಕ್ಷಣೆಯನ್ನು ಪಡೆಯುವುದಿಲ್ಲ. ಅವನ ಬೀಜವು ಬೀಜಕಾಲದಲ್ಲಿ ಬೆಳೆಯುವುದಿಲ್ಲ. ಮತ್ತು ಅಂಥಹವನಲ್ಲಿ ಮಳೆಗಾಲದಲ್ಲಿಯೂ ಮಳೆಯು ಬೀಳುವುದಿಲ್ಲ. ಭೀತರಾಗಿ ಶರಣು ಬಂದಿರುವವರನ್ನು ಬಿಟ್ಟುಕೊಡುವವನ ಹವಿಸ್ಸನ್ನು ದೇವತೆಗಳು ಸ್ವೀಕರಿಸುವುದಿಲ್ಲ. ಅವನು ಹಿಡಿಯುವ

ಯಾವುದೂ ಯಶಸ್ವಿಯಾಗುವುದಿಲ್ಲ. ಚೇಷ್ಟೆಗಳನ್ನು ಕಳೆದುಕೊಂಡು ಅವನು ಸ್ವರ್ಗಲೋಕದಿಂದ ಬೀಳುತ್ತಾನೆ. ಭೀತರಾಗಿ ಶರಣು ಬಂದಿರುವವರನ್ನು ಶತ್ರುಗಳಿಗೆ ಕೊಡುವವನ ಮಕ್ಕಳು ಅಕಾಲದಲ್ಲಿ ಸಾಯುತ್ತಾರೆ. ಅವನ ಪಿತೃಗಳು ಸದಾ ಜಗಳವಾಡುತ್ತಾರೆ. ಇಂದ್ರನೊಂದಿಗೆ ದೇವತೆಗಳು ಅವನ ಮೇಲೆ ವಜ್ರಪ್ರಹಾರ ಮಾಡುತ್ತಾರೆ. ಇದನ್ನು ತಿಳಿದ ನಾನು ಇಂದ್ರಾಣೀ, ಶಕ್ರನ ಪ್ರಿಯ ಮಹಿಷಿಯೆಂದು ಲೋಕಗಳಲ್ಲಿ ವಿಶ್ರುತಳಾದ ಈ ಶಚಿಯನ್ನು ಕೊಡುವುದಿಲ್ಲ. ಇವಳಿಗೆ ಹಿತವಾಗುವ ನನಗೂ ಹಿತವಾಗುವ ಕಾರ್ಯವನ್ನು ಮಾಡಿ. ಶಚಿಯನ್ನು ನಾನು ಕೊಡುವುದೇ ಇಲ್ಲ!”

ಆಗ ದೇವತೆಗಳು ಅಂಗಿರಸರಲ್ಲಿ ಶ್ರೇಷ್ಠ ಗುರುವಿಗೆ ಹೇಳಿದರು:

“ಬೃಹಸ್ಪತೇ! ಹೇಗೆ ಒಳಿತನ್ನು ತರಬಹುದು ಎಂದು ನೀನೇ ಆಲೋಚಿಸು.”

ಬೃಹಸ್ಪತಿಯು ಹೇಳಿದನು:

“ಈ ಶುಭೆ ದೇವಿ ಇಂದ್ರಾಣಿಯು ನಹುಷನಲ್ಲಿ ಕೆಲವೇ ಸಮಯವನ್ನು ಯಾಚಿಸಲಿ. ಇದರಿಂದ ಇಂದ್ರಾಣಿಗೂ ನಮಗೂ ಹಿತವಾಗುತ್ತದೆ. ಕಾಲವು ಬಹಳಷ್ಟು ವಿಘ್ನಗಳನ್ನುಂಟುಮಾಡುತ್ತದೆ. ಕಾಲವು ಕಾಲವನ್ನು ತಳ್ಳುತ್ತದೆ.

ಬಲವಾನ್ ನಹುಷನು ವರವನ್ನಾಶ್ರಯಿಸಿ
ದರ್ಪಿತನಾಗಿದ್ದಾನೆ.”

ಅವನು ಹಾಗೆ ಹೇಳಲು ಪ್ರೀತರಾದ ದೇವತೆಗಳು ಅವನಿಗೆ ಹೇಳಿದರು:

“ಬ್ರಹ್ಮನ್! ಒಳ್ಳೆಯದನ್ನೇ ಹೇಳಿದ್ದೀಯೆ. ಇದು ಎಲ್ಲ ದಿವೌಕಸರಿಗೂ ಹಿತವಾದುದು. ಇದು ಹೀಗೆಯೇ ಆಗಲಿ. ಈ ದೇವಿಯನ್ನು ಸಂತವಿಸು.”

ಆಗ ಅಗ್ನಿಯನ್ನು ಮುಂದಿಟ್ಟುಕೊಂಡು ಸಮಸ್ತ ದೇವತೆಗಳೂ ಲೋಕಗಳ ಹಿತವನ್ನು ಬಯಸಿ ಇಂದ್ರಾಣಿಗೆ ಮೆಲ್ಲನೆ ಹೇಳಿದರು:

“ಸ್ಥಾವರ-ಜಂಗಮಗಳ ಈ ಜಗತ್ತನ್ನು ನೀನು ಪೊರೆಯುತ್ತಿರುವೆ. ನೀನು ಪತಿವ್ರತೆ ಮುತ್ತು ಸತ್ಯೆ. ನಹುಷನಲ್ಲಿಗೆ ಹೋಗು. ನಿನ್ನನ್ನು ಅಭಿಕಾಮಿಸುವ ಆ ಪಾರ್ಥಿವ ನಹುಷನು ಬೇಗನೇ ವಿನಾಶಗೊಳ್ಳುತ್ತಾನೆ. ದೇವೀ! ಶಕ್ರನು ಸುರೈಶ್ವರ್ಯವನ್ನು ಪುನಃ ಪಡೆಯುತ್ತಾನೆ.”

ಈ ರೀತಿಯ ನಿಶ್ಚಯ ಮಾಡಿಕೊಂಡು ಇಂದ್ರಾಣಿಯು ಕಾರ್ಯಸಿದ್ಧಿಗಾಗಿ ನಾಚಿಕೊಂಡವಳಂತೆ ಘೋರದರ್ಶನ ನಹುಷನಲ್ಲಿಗೆ ಹೋದಳು. ಕಾಮದಿಂದ ಚೇತನವನ್ನು ಕಳೆದುಕೊಂಡ ಆ ದುಷ್ಟಾತ್ಮ ನಹುಷನಾದರೋ ವಯೋರೂಪಸಮನ್ವಿತಳಾದ ಅವಳನ್ನು ಕಂಡು ಸಂತೋಷಭರಿತನಾದನು. ಅವಳನ್ನು ನೋಡಿ ದೇವರಾಜ ನಹುಷನು

ಹೇಳಿದನು:

> "ಶುಚಿಸ್ಮಿತೇ! ನಾನು ಮೂರೂ ಲೋಕಗಳ ಇಂದ್ರ. ನನ್ನನ್ನು ನಿನ್ನ ಪತಿಯಾಗಿ ಪ್ರೀತಿಸು!"

ನಹುಷನು ಹೀಗೆ ಹೇಳಲು ಆ ಪತಿವ್ರತೆ ದೇವಿಯು ಭಯೋದ್ವಿಗ್ನಳಾಗಿ ಭಿರುಗಾಳಿಗೆ ಸಿಲುಕಿದ ಬಾಳೆಯ ಮರದಂತೆ ತತ್ತರಿಸಿದಳು. ಅವಳಾದರೋ ಬ್ರಹ್ಮನಿಗೆ ಕೈಮುಗಿದು ತಲೆಬಾಗಿ ನಮಸ್ಕರಿಸಿ ಘೋರದರ್ಶನ ದೇವರಾಜ ನಹುಷನಿಗೆ ಹೇಳಿದಳು:

> "ಸುರೇಶ್ವರ! ಸ್ವಲ್ಪ ಸಮಯವನ್ನು ಬಯಸುತ್ತೇನೆ. ಶಕ್ರನಿಗೆ ಏನಾಯಿತೆಂದೂ ಎಲ್ಲಿ ಹೋಗಿದ್ದಾನೆಂದೂ ತಿಳಿಯದಾಗಿದೆ. ಸತ್ಯವೇನೆಂದು ತಿಳಿಯಲು ಪ್ರಯತ್ನಿಸುತ್ತೇನೆ. ಅವನ ಕುರಿತಾದ ವಿಷಯವು ತಿಳಿಯದೇ ಹೋದಲ್ಲಿ ನಾನು ನಿನ್ನ ಉಪಸ್ಥಿತಿಯಲ್ಲಿ ಬರುತ್ತೇನೆ. ಸತ್ಯವನ್ನು ನಿನಗೆ ಹೇಳುತ್ತೇನೆ."

ಇಂದ್ರಾಣಿಯು ಹೀಗೆ ಹೇಳಲು ನಹುಷನು ಸಂತೋಷಗೊಂಡು ಹೇಳಿದನು:

> "ಸುಶ್ರೋಣೀ! ನೀನು ನನಗೆ ಹೇಳಿದಂತೆಯೇ ಆಗಲಿ. ವಿಷಯವನ್ನು ತಿಳಿದುಕೊಂಡು ಬರುತ್ತೀಯೆ. ನೀನು ನುಡಿದ ಸತ್ಯವು ನಿನಗೆ ನೆನಪಿರಲಿ."

ನಹುಷನಿಂದ ಕಳುಹಿಸಲ್ಪಟ್ಟ ಆ ತಪಸ್ವಿನೀ ಶುಭೆಯು ಹೊರಬಂದು

ಬೃಹಸ್ಪತಿಯ ಮನೆಗೆ ಹೋದಳು. ಅವಳ ಮಾತನ್ನು ಕೇಳಿ, ಅಗ್ನಿಯ ನೇತೃತ್ವದಲ್ಲಿ ದೇವತೆಗಳು ಶಕ್ರನ ಒಳಿತನ್ನೇ ಉದ್ದೇಶವನ್ನಾಗಿಟ್ಟುಕೊಂಡು ಮಂತ್ರಾಲೋಚನೆಗೈದರು. ಪ್ರಭವಿಷ್ಣು ದೇವದೇವ ವಿಷ್ಣುವಿನ ಬಳಿಸಾರಿ, ಆ ವಾಕ್ಯವಿಶಾರದರು ಅವನಿಗೆ ಉದ್ವಿಗ್ನರಾಗಿ ಈ ಮಾತನ್ನಾಡಿದರು:

> "ಸುರಗಣೇಶ್ವರ ಶಕ್ರನು ಬ್ರಹ್ಮಹತ್ಯೆಯಿಂದ ಅಭಿಭೂತನಾಗಿದ್ದಾನೆ. ದೇವೇಶ! ನೀನೇ ನಮ್ಮ ಗತಿ. ಸರ್ವಭೂತರ ರಕ್ಷಣಾರ್ಥವಾಗಿಯೇ ನೀನು ವಿಷ್ಣುತ್ವವನ್ನು ಧರಿಸಿದ್ದೀಯೆ. ನಿನ್ನ ವೀರ್ಯದಿಂದ ವೃತ್ರನು ನಿಹತನಾಗಲು ವಾಸವನು ಬ್ರಹ್ಮಹತ್ಯೆಯಿಂದ ಆವೃತನಾಗಿದ್ದಾನೆ. ಅವನಿಗೆ ಮೋಕ್ಷವೇನೆಂದು ನಿರ್ದೇಶಿಸು."

ದೇವತೆಗಳ ಆ ಮಾತನ್ನು ಕೇಳಿ ವಿಷ್ಣುವು ಹೇಳಿದನು:

> "ಶಕ್ರನು ನನ್ನನ್ನೇ ಯಾಜಿಸಲಿ. ನಾನು ವಜ್ರಿಣಿಯನ್ನು ಪಾವನಗೊಳಿಸುತ್ತೇನೆ. ಪುಣ್ಯ ಹಯಮೇಧದಿಂದ ನನ್ನನ್ನು ಇಷ್ಟಗೊಳಿಸಿ, ಪಾಕಶಾಸನನು, ಭಯವನ್ನು ಕಳೆದುಕೊಂಡು, ಪುನಃ ದೇವತೆಗಳ ಇಂದ್ರತ್ವವನ್ನು ಪಡೆಯುತ್ತಾನೆ. ತನ್ನದೇ ಕರ್ಮದಿಂದ ದುರ್ಮತಿ ನಹುಷನು ನಾಶಹೊಂದುತ್ತಾನೆ. ದೇವತೆಗಳೇ! ಕೆಲವು ಕಾಲ ನೀವು ತಾಳ್ಮೆಯಿಂದಿರಬೇಕು. ಜಾಗರೂಕರಾಗಿಯೂ ಇರಬೇಕು."

ವಿಷ್ಣುವಿನ ಆ ಶುಭ ಸತ್ಯ ಅಮೃತೋಪಮ ಮಾತನ್ನು ಕೇಳಿ ಸುರಗಣಗಳೆಲ್ಲರೂ ಆಚಾರ್ಯ ಮತ್ತು ಋಷಿಗಳ ಜೊತೆಗೂಡಿ ಭಯೋದ್ವಿಗ್ನ ಶಕ್ರನಿದ್ದಲ್ಲಿಗೆ ಹೊರಟರು. ಅಲ್ಲಿ ಮಹಾತ್ಮ ಮಹೇಂದ್ರನ ಬ್ರಹ್ಮಹತ್ಯಾದೋಷವನ್ನು ಕಳೆದು ಪಾವನಗೊಳಿಸಲು ಸುಮಹಾ ಅಶ್ವಮೇಧವನ್ನು ನೆರವೇರಿದರು. ಬ್ರಹ್ಮಹತ್ಯಾದೋಷವನ್ನು ಮರಗಳಲ್ಲಿ, ನದಿಗಳಲ್ಲಿ, ಪರ್ವತಗಳಲ್ಲಿ, ಭೂಮಿ ಮತ್ತು ಸ್ತ್ರೀಯರಲ್ಲಿ ವಿಭಜಿಸಿದರು. ಆ ಭೂತಗಳಲ್ಲಿ ಅದನ್ನು ಭಾಗಮಾಡಿ ವಿಸರ್ಜಿಸಿದ ನಂತರ ಸುರೇಶ್ವರ ವಾಸವನು ಜ್ವರವನ್ನು ಹೋಗಲಾಡಿಸಿಕೊಂಡು ಪಾಪದಿಂದ ಪಾವನನಾಗಿ, ಆತ್ಮವಂತನಾದನು. ತನ್ನ ಸ್ಥಾನದಲ್ಲಿದ್ದು ಸರ್ವಭೂತಗಳಿಗೆ ವರದನಾಗಿದ್ದ ಆ ದುಃಸಹ ನಹುಷನನ್ನು ನೋಡಿ ಬಲಸೂದನನು ನಡುಗಿ ತೇಜಸ್ಸನ್ನು ಕಳೆದುಕೊಂಡನು. ಆಗ ವೀರ ಶಚೀಪತಿಯು ಪುನಃ ನಶಿಸಿಹೋಗಿ, ಸರ್ವಭೂತಗಳಿಗೂ ಅದೃಶ್ಯನಾಗಿ, ಸಮಯವನ್ನು ಕಾಯುತ್ತಾ ಸಂಚರಿಸತೊಡಗಿದನು.

ಶಕ್ರನು ನಷ್ಟನಾಗಲು ಶೋಕಸಮನ್ವಿತಳಾದ, ತುಂಬಾ ದುಃಖಿತಳಾದ ಶಚೀದೇವಿಯು ವಿಲಪಿಸಿದಳು.

> “ಹಾ ಶಕ್ರ! ನಾನು ದಾನವನ್ನು ಮಾಡಿದ್ದರೆ, ಆಹುತಿಯನ್ನು ನೀಡಿದ್ದರೆ, ಗುರುಗಳನ್ನು ಸ್ತುತಿಸಿದ್ದರೆ, ಮತ್ತು ಸತ್ಯವು ಇದ್ದರೆ ನನಗೆ ಒಬ್ಬನೇ ಪತಿಯೆಂದಾಗಲಿ! ನನ್ನ ಮನೋರಥವು ಸಿದ್ಧಿಯಾಗಲೆಂದು ನಾನು ಪುಣ್ಯೆ, ದಿವ್ಯೆ, ಉತ್ತರಾಯಣಕ್ಕೆ

ಹೋಗುತ್ತಿರುವ ದೇವಿ ರಾತ್ರಿಯನ್ನು ನಮಸ್ಕರಿಸುತ್ತೇನೆ."

ಹೀಗೆ ಹೇಳಿ ಅವಳು ಅಲ್ಲಿ ದೇವಿ ನಿಶೆಯ ಉಪಾಸನೆಯನ್ನು ಮಾಡಿದಳು. ಪಾತಿವ್ರತ್ಯ ಮತ್ತು ಸತ್ಯದಿಂದ ಅವಳು ಉಪಶ್ರುತಿಯನ್ನು ನಡೆಸಿದಳು.

"ದೇವರಾಜನು ಎಲ್ಲಿದ್ದಾನೋ ಆ ಪ್ರದೇಶವನ್ನು ನನಗೆ ತೋರಿಸು!"

ಎಂದು ಉಪಶ್ರುತಿಗೆ ಹೇಳಲು ಆ ದೇವಿಯು ಸತ್ಯವನ್ನು ಸತ್ಯವಾಗಿಯೇ ಕಾಣಿಸಿದಳು. ಆಗ ದೇವೀ ಉಪಶ್ರುತಿಯು ಸಾಧ್ವೀ ರೂಪಿಣಿ ವಯೋರೂಪಸಂಪನ್ನೆಯನ್ನು ನೋಡಿ ಅವಳ ಉಪಸ್ಥಿತಿಯಲ್ಲಿ ಬಂದಳು. ಸಂತೋಷಗೊಂಡ ಇಂದ್ರಾಣಿಯು ಅವಳನ್ನು ಪೂಜಿಸಿ ಹೇಳಿದಳು:

"ವರಾನನೇ! ನೀನು ಯಾರೆಂದು ತಿಳಿಯಲು ಇಚ್ಛಿಸುತ್ತೇನೆ. ಹೇಳು."

ಉಪಶ್ರುತಿಯು ಹೇಳಿದಳು:

"ದೇವಿ! ನಿನ್ನ ಬಳಿ ಬಂದಿರುವ ನಾನು ಉಪಶ್ರುತಿ. ಸತ್ಯನಿರತಳಾದ ನಿನಗೆ ದರ್ಶನವನ್ನಿತ್ತಿದ್ದೇನೆ. ಯಮ-ನಿಯಮಗಳಿಂದ ಯುಕ್ತಳಾಗಿ ಪತಿವ್ರತೆಯಾಗಿದ್ದೀಯೆ. ನಿನಗೆ ವೃತ್ರನಿಷೂದನ ದೇವ ಶಕ್ರನನ್ನು ತೋರಿಸುತ್ತೇನೆ. ನಿನಗೆ ಮಂಗಳವಾಗಲಿ! ಬೇಗನೆ ನನ್ನನ್ನು ಹಿಂಬಾಲಿಸಿ ಬಾ.

ಸುರಸತ್ತಮನನ್ನು ನೋಡುವಿಯಂತೆ.”

ಆಗ ಅವಳು ಹೊರಡಲು, ದೇವೀ ಇಂದ್ರಾಣಿಯು ಅವಳನ್ನು ಅನುಸರಿಸಿದಳು. ಅವಳು ದೇವಾರಣ್ಯವನ್ನೂ ಬಹಳಷ್ಟು ಪರ್ವತಗಳನ್ನೂ ದಾಟಿ ಹಿಮವಂತವನ್ನು ಅತಿಕ್ರಮಿಸಿ ಉತ್ತರದ ಕಡೆ ಬಂದಳು. ಸಮುದ್ರವನ್ನೂ ತಲುಪಿ ಅಲ್ಲಿ ಬಹುಯೋಜನ ವಿಸ್ತಾರವಾದ ನಾನಾ ದ್ರುಮಲತೆಗಳಿಂದ ತುಂಬಿದ್ದ ಮಹಾದ್ವೀಪವನ್ನು ತಲುಪಿದರು. ನಾನಾ ಪಕ್ಷಿಗಳಿಂದ ತುಂಬಿದ್ದ ಶತಯೋಜನ ವಿಸ್ತೀರ್ಣದ ಅಷ್ಟೇ ಅಗಲವಾಗಿದ್ದ ದಿವ್ಯ ಶುಭ ಸರೋವರವನ್ನು ಕಂಡರು. ಐದು ಬಣ್ಣಗಳ, ಅರಳಿದ, ಸಾವಿರಾರು ದಿವ್ಯ ಪದ್ಮಗಳು, ದುಂಬಿಗಳ ಗೀತೆಗಳೊಂದಿಗೆ ಇದ್ದವು. ಪದ್ಮದ ನಾಲವನ್ನು ಸೀಳಿ ಅವಳೊಂದಿಗೆ ಪ್ರವೇಶಿಸಿದಳು ಮತ್ತು ಅಲ್ಲಿ ತಂತುವಿನಲ್ಲಿ ಅಡಗಿದ್ದ ಶತಕ್ರತುವನ್ನು ನೋಡಿದಳು. ಅತಿ ಸೂಕ್ಷ್ಮ ರೂಪಾವಸ್ಥೆಯಲ್ಲಿದ್ದ ಪ್ರಭುವನ್ನು ನೋಡಿ ದೇವಿ ಮತ್ತು ಉಪಶ್ರುತಿಯರು ಸೂಕ್ಷ್ಮರೂಪಗಳನ್ನು ಧರಿಸಿದರು. ಆಗ ಇಂದ್ರಾಣಿಯು ಅವನ ವಿಶ್ರುತ ಪೂರ್ವಕರ್ಮಗಳಿಂದ ಅವನನ್ನು ಸ್ತುತಿಸಿದಳು. ಈ ರೀತಿ ಸ್ತುತಿಸಲ್ಪಡಲು ದೇವ ಪುರಂದರನು ಶಚಿಗೆ ಹೇಳಿದನು:

“ಇಲ್ಲಿಗೆ ಏಕೆ ಬಂದಿರುವೆ? ನನ್ನನ್ನು ಹೇಗೆ ಹುಡುಕಿದೆ?” ಆಗ ಅವಳು ನಹುಷನು ಮಾಡಿದುದರ ಕುರಿತು ಹೇಳಿದಳು: “ಶತಕ್ರತೋ! ಮೂರು ಲೋಕಗಳ ಇಂದ್ರತ್ವವನ್ನು ಪಡೆದು ವೀರ್ಯಮದಾನ್ವಿತನೂ ದರ್ಪಭರಿತನೂ ಆಗಿ ಆ

ದುಷ್ಟಾತ್ಮನು ನನ್ನನ್ನು ಕೂಡು ಎಂದು ಕ್ರೂರವಾಗಿ ಆಡಿದನು ಮತ್ತು ನನಗೆ ಸಮಯವನ್ನೂ ನಿರ್ದಿಷ್ಟಪಡಿಸಿದ್ದಾನೆ. ನನ್ನನ್ನು ರಕ್ಷಿಸದೇ ಇದ್ದರೆ ಅವನು ನನ್ನನ್ನು ವಶಪಡೆಸಿಕೊಳ್ಳುತ್ತಾನೆ. ಈ ಕಾರಣದಿಂದಲೇ ನಾನು ನಿನ್ನ ಬಳಿ ಬಂದಿದ್ದೇನೆ. ರೌದ್ರನಾದ ಪಾಪನಿಶ್ಚಯ ನಹುಷನನ್ನು ಗೆಲ್ಲು. ನಿನ್ನನ್ನು ತೋರಿಸಿಕೋ! ತೇಜಸ್ಸನ್ನು ತಳೆದು ದೇವರಾಜ್ಯವನ್ನಾಳು!"

ಶಚಿಯು ಹೀಗೆ ಹೇಳಲು ಭಗವಾನನು ಪುನಃ ಹೇಳಿದನು:

"ವಿಕ್ರಮದ ಕಾಲವಿದಲ್ಲ. ನಹುಷನು ನನಗಿಂತ ಬಲಶಾಲಿಯು. ಭಾಮಿನೀ! ಋಷಿಗಳ ಹವ್ಯ-ಕವ್ಯಗಳಿಂದ ಅವನು ವರ್ಧಿಸಿದ್ದಾನೆ. ನಾನೊಂದು ಉಪಾಯವನ್ನು ಹೇಳುತ್ತೇನೆ. ನೀನು ಅದನ್ನು ಮಾಡಬೇಕು. ಇದನ್ನು ನೀನು ಗುಪ್ತವಾಗಿ ನೆರವೇರಿಸಬೇಕು. ಇದನ್ನು ಯಾರಿಗೂ ಹೇಳಬಾರದು. ಏಕಾಂತದಲ್ಲಿ ನಹುಷನಲ್ಲಿಗೆ ಹೋಗಿ ಹೇಳು. "ಜಗತ್ಪತೇ! ದಿವ್ಯ ಋಷಿಯಾನದಲ್ಲಿ ನನ್ನಲ್ಲಿಗೆ ಬಾ. ಈ ರೀತಿಯಲ್ಲಿ ನಾನು ನಿನ್ನನ್ನು ಪ್ರೀತಿಸಿ ವಶದಲ್ಲಿ ಬರುತ್ತೇನೆ" ಎಂದು ಹೇಳು."

ದೇವರಾಜನು ಹೀಗೆ ಹೇಳಲು ಅವನ ಪತ್ನಿ ಕಮಲೇಕ್ಷಣೆಯು "ಹೀಗೆಯೇ ಆಗುತ್ತದೆ" ಎಂದು ಹೇಳಿ ನಹುಷನ ಬಳಿ ಹೋದಳು. ಆಗ ನಹುಷನು ಅವಳನ್ನು ಕಂಡು ವಿಸ್ಮಿತನಾಗಿ ಹೇಳಿದನು:

"ವರಾರೋಹೇ! ನಿನಗೆ ಸ್ವಾಗತ! ನಿನಗೆ ಏನು ಮಾಡಲಿ?

ಭಕ್ತನಾದ ನನ್ನನ್ನು ಭಜಿಸು. ಏನನ್ನು ಬಯಸುತ್ತೀಯೆ. ಮಾಡುವುದೇನೇ ಇದ್ದರೂ ಅದನ್ನು ಮಾಡುತ್ತೇನೆ. ನಾಚದಿರು! ನನ್ನ ಮೇಲೆ ವಿಶ್ವಾಸವಿಡು. ಸತ್ಯದಲ್ಲಿ ಶಪಥ ಮಾಡಿ ಮಾಡುತ್ತೇನೆ ಎಂದು ವಚನವನ್ನು ನೀಡುತ್ತೇನೆ."

ಇಂದ್ರಾಣಿಯು ಹೇಳಿದಳು:

"ಜಗತ್ಪತೇ! ಬಯಸಿದಂತೆ ನನಗೆ ಸಮಯವನ್ನು ಮಾಡಿಕೊಟ್ಟಿದ್ದೀಯೆ. ಇದರ ನಂತರ ನೀನೇ ನನ್ನ ಪತಿಯಾಗುತ್ತೀಯೆ. ನನ್ನ ಹೃದಯದಲ್ಲಿ ಒಂದು ಬಯಕೆಯಿದೆ. ಚಿತ್ತವಿಟ್ಟು ಕೇಳು. ನನ್ನ ಪ್ರೀತಿಯ ಅದನ್ನು ಮಾಡುವೆಯಾದರೆ ಹೇಳುತ್ತೇನೆ. ಈ ಮಾತನ್ನು ನಡೆಸಿಕೊಟ್ಟರೆ ನಾನು ನಿನ್ನ ವಶದಲ್ಲಿ ಬರುತ್ತೇನೆ. ಇಂದ್ರನು ವಾಹನವಾಗಿ ಕುದುರೆಗಳನ್ನು, ಆನೆಗಳನ್ನು ಮತ್ತು ರಥಗಳನ್ನು ಹೊಂದಿದ್ದನು. ಈ ಮೊದಲು ವಿಷ್ಣುವಿನಲ್ಲಿಯಾಗಲೀ, ರುದ್ರನಲ್ಲಿಯಾಗಲೀ, ಅಸುರರಲ್ಲಿಯಾಗಲೀ ರಾಕ್ಷಸರಲ್ಲಿಯಾಗಲೀ ಇಲ್ಲದೇ ಇರುವ ವಾಹನವು ನಿನ್ನದಾಗಬೇಕೆಂದು ನನಗೆ ಬಯಕೆಯಿದೆ. ಋಷಿಗಳು ಒಟ್ಟಾಗಿ ಎಲ್ಲರೂ ನಿನ್ನನ್ನು ಪಲ್ಲಕ್ಕಿಯಲ್ಲಿ ಹೊರಬೇಕು. ಇದು ನನಗೆ ಇಷ್ಟವಾಗುತ್ತದೆ. ಅಸುರರಲ್ಲಿ ಮತ್ತು ದೇವತೆಗಳಲ್ಲಿ ನಿನ್ನ ಸರಿಸಮನಾದವರು ಯಾರೂ ಇರಬಾರದು. ನಿನ್ನನ್ನು ನೋಡಿದವರೆಲ್ಲರ ತೇಜಸ್ಸನ್ನು ನಿನ್ನದೇ

ವೀರ್ಯದಿಂದ ಆಕರ್ಶಿಸಿಕೊಳ್ಳುತ್ತೀಯೆ. ನಿನ್ನನ್ನು ಎದುರಿಸಿ ನಿಲ್ಲುವವನು ಯಾರೂ ಇಲ್ಲ."

ಹೀಗೆ ಹೇಳಲು ನಹುಷನು ತುಂಬಾ ಹರ್ಷಿತನಾದನು. ಆಗ ಸುರೇಂದ್ರನು ಆ ಅನಿಂದಿತೆಗೆ ಹೇಳಿದನು:

"ವರವರ್ಣಿನೀ! ನೀನು ಹೇಳಿದ ಈ ವಾಹನವು ಅಪೂರ್ವವಾದುದು. ನಾನು ನಿನ್ನ ವಶದಲ್ಲಿದ್ದೇನೆ ಎಂದು ತುಂಬಾ ಸಂತೋಷವಾಗುತ್ತಿದೆ. ಮುನಿಗಳನ್ನು ವಾಹನವಾಗಿ ಮಾಡಿಕೊಳ್ಳುವವನು ಅಲ್ಪವೀರ್ಯನಾಗಿರುವುದಿಲ್ಲ. ನಾನು ತಪಸ್ವಿ, ಬಲವಂತ ಮತ್ತು ಆಗಿದುದರ, ಆಗುತ್ತಿರುವುದರ ಮತ್ತು ಆಗುವುದರ ಪ್ರಭು. ನಾನು ಸಿಟ್ಟಾದರೆ ಜಗತ್ತು ಇರುವುದಿಲ್ಲ. ಎಲ್ಲವೂ ನನ್ನನ್ನು ಆಧರಿಸಿವೆ.  ದೇವ, ದಾನವ, ಗಂಧರ್ವ, ಕಿನ್ನರ, ಉರಗ ರಾಕ್ಷಸರು - ಸರ್ವ ಲೋಕಗಳೂ ಕ್ರುದ್ಧನಾದ ನನ್ನನ್ನು ಎದುರಿಸಲಾರರು. ಯಾರ ಮೇಲೆ ನನ್ನ ಕಣ್ಣನ್ನು ಹಾಯಿಸುತ್ತೇನೋ ಅವರ ತೇಜಸ್ಸನ್ನು ಅಪಹರಿಸುತ್ತೇನೆ. ಆದುದರಿಂದ ನಿನ್ನ ಮಾತಿನಂತೆ ಮಾಡುತ್ತೇನೆ. ಸಂಶಯವಿಲ್ಲ. ಬ್ರಹ್ಮರ್ಷಿಗಳಾದ ಸಪ್ತ ಋಷಿಗಳು ನನ್ನನ್ನು ಹೊರುತ್ತಾರೆ. ನಮ್ಮ ಮಹಾತ್ಮೆ ಮತ್ತು ಅಭಿವೃದ್ಧಿಯನ್ನು ನೋಡು."

ಹೀಗೆ ಹೇಳಿ ಅವನು ಆ ವರಾನನೆ ದೇವಿಯನ್ನು ಕಳುಹಿಸಿ,

ನಿಯಮದಲ್ಲಿರುವ ಋಷಿಗಳನ್ನು ವಿಮಾನಕ್ಕೆ ಹೂಡಿದನು. ಆ ಅಬ್ರಾಹ್ಮಣ್ಯ, ಬಲೋಪೇತ, ವರಮದದಿಂದ ಮತ್ತನಾದ ಕಾಮವೃತ್ತನಾದ ಆ ದುಷ್ಟಾತ್ಮನು ಆ ಋಷಿಗಳನ್ನು ಏರಿದನು. ನಹುಷನಿಂದ ಕಳುಹಿಸಲ್ಪಟ್ಟ ಅವಳು ಬೃಹಸ್ಪತಿಗೆ ಹೇಳಿದಳು:

> "ನಹುಷನು ನನಗಿಟ್ಟಿದ್ದ ಸಮಯವು ಸ್ವಲ್ಪವೇ ಉಳಿದಿದೆ. ಶೀಘ್ರದಲ್ಲಿಯೇ ಶಕ್ರನನ್ನು ಹುಡುಕಿ ಭಕ್ತರಿಗೆ ದಯೆಯನ್ನು ಮಾಡು."

ಭಗವಾನ್ ಬೃಹಸ್ಪತಿಯು ಅವಳಿಗೆ ಹೇಳಿದನು:

> "ಒಳ್ಳೆಯದಾಯಿತು. ದೇವಿ! ದುಷ್ಟಚೇತಸ ನಹುಷನಿಗೆ ನೀನು ಹೆದರಬಾರದು. ಆ ನರಾಧಮನು ಬಹಳ ಕಾಲ ತನ್ನ ಸ್ಥಾನವನ್ನು ಉಳಿಸಿಕೊಳ್ಳುವುದಿಲ್ಲ. ಆ ಅಧರ್ಮಜ್ಞನು ಮಹರ್ಷಿಗಳನ್ನು ವಾಹನವನ್ನಾಗಿ ಬಳಸುತ್ತಿದ್ದಾನೆಂದರೆ ಹತನಾಗುತ್ತಾನೆ. ಈ ದುರ್ಮತಿಯ ವಿನಾಶಕ್ಕಾಗಿ ಇಷ್ಟಿಯನ್ನು ಮಾಡುತ್ತೇನೆ. ಶಕ್ರನನ್ನೂ ಹುಡುಕುತ್ತೇನೆ. ಹೆದರಬೇಡ! ನಿನಗೆ ಮಂಗಳವಾಗಲಿ!"

ಆಗ ಮಹಾತೇಜಸ್ವಿ ಬೃಹಸ್ಪತಿಯು ದೇವರಾಜನನ್ನು ಪಡೆಯಲು ವಿಧಿವತ್ತಾಗಿ ಅಗ್ನಿಯನ್ನು ಪ್ರಜ್ವಲಿಸಿ ಪರಮ ಹವಿಸ್ಸನ್ನು ಯಜಿಸಿದನು. ಸ್ವಯಂ ದೇವ ಭಗವಾನ್ ಹುತಾಶನನು ಅದ್ಭುತವಾದ ಸ್ತ್ರೀವೇಷವನ್ನು ಮಾಡಿಕೊಂಡು ತಕ್ಷಣ ಅಲ್ಲಿಯೇ ಅಂತರ್ಧಾನನಾದನು. ಅವನು

ದಿಕ್ಕುಗಳನ್ನು ಪರ್ವತಗಳನ್ನು ವನಗಳನ್ನು ಪೃಥ್ವಿ ಅಂತರಿಕ್ಷಗಳನ್ನು ಮನೋವೇಗಗತಿಯಲ್ಲಿ ಹೋಗಿ ಹುಡುಕಿದನು. ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ ಬೃಹಸ್ಪತಿಯಿದ್ದಲ್ಲಿಗೆ ಹಿಂದಿರುಗಿದನು. ಅಗ್ನಿಯು ಹೇಳಿದನು:

> “ಬೃಹಸ್ಪತೇ! ನಾನು ದೇವರಾಜನನ್ನು ಎಲ್ಲಿಯೂ ಕಾಣಲಿಲ್ಲ. ನೀರಿನಲ್ಲಿ ಹುಡುಕುವುದು ಮಾತ್ರ ಉಳಿದಿದೆ. ನೀರನ್ನು ಪ್ರವೇಶಿಸಲು ನನಗೆ ಉತ್ಸಾಹವಿಲ್ಲ. ಅಲ್ಲಿಗೆ ನನಗೆ ದಾರಿಯಿಲ್ಲ. ನಿನಗೆ ಇನ್ನೇನು ಮಾಡಬೇಕು?”

ಅವನಿಗೆ ದೇವಗುರುವು ಹೇಳಿದನು:

> “ಮಹಾದ್ಯುತೇ! ನೀರನ್ನು ಪ್ರವೇಶಿಸು!”

ಅಗ್ನಿಯು ಹೇಳಿದನು:

> “ನೀರನ್ನು ಪ್ರವೇಶಿಸಲು ನನಗೆ ಶಕ್ಯವಿಲ್ಲ. ಅಲ್ಲಿ ನಾನು ನಾಶವಾಗುತ್ತೇನೆ. ನಿನ್ನ ಶರಣು ಹೊಗುತ್ತೇನೆ. ನಿನಗೆ ಮಂಗಳವಾಗಲಿ! ನೀರಿನಿಂದ ಅಗ್ನಿಯು ಉದ್ಭವಿಸಿದೆ; ಕಲ್ಲಿನಿಂದ ಲೋಹವು ಹುಟ್ಟಿತು. ಎಲ್ಲೆಡೆಯೂ ಹೋಗಬಲ್ಲ ಅವರ ತೇಜಸ್ಸು ಅವು ಎಲ್ಲಿಂದ ಹುಟ್ಟಿಬಂದವೋ ಅಲ್ಲಿ ಶಮಿಸಿಹೋಗುತ್ತದೆ.”

ಬೃಹಸ್ಪತಿಯು ಹೇಳಿದನು:

“ಅಗ್ನೇ! ನೀನು ಎಲ್ಲ ದೇವತೆಗಳ ಬಾಯಿ! ಹವ್ಯಗಳನ್ನು ಕೊಂಡೊಯ್ಯುವವನು. ನೀನು ಸರ್ವಭೂತಗಳ ಅಂತ್ಯ. ಸಾಕ್ಷಿಯಾಗಿ ಗೂಢವಾಗಿ ಸಂಚರಿಸುತ್ತೀಯೆ. ಕವಿಗಳು ನೀನು ಒಬ್ಬನೇ ಎಂದು ಮತ್ತು ಮೂರು ವಿಧಗಳವನೆಂದೂ ಹೇಳುತ್ತಾರೆ. ನೀನು ಹೊರಟುಹೋದರೆ ಈ ಜಗತ್ತು ಸದ್ಯದಲ್ಲಿಯೇ ನಾಶವಾಗುತ್ತದೆ. ನಿನ್ನನ್ನು ನಮಸ್ಕರಿಸಿ ವಿಪ್ರರು ಸ್ವಕರ್ಮಗಳಿಂದ ಗೆದ್ದ ಶಾಶ್ವತ ಗತಿಗಳಿಗೆ ಪತ್ನಿ ಸುತರೊಂದಿಗೆ ಹೋಗುತ್ತಾರೆ. ನೀನೇ ಹವ್ಯವಾಹನ! ನೀನೇ ಪರಮ ಹವಿಸ್ಸು. ಸತ್ರಗಳಲ್ಲಿ ನಿನ್ನನ್ನೇ ಯಜಿಸುತ್ತಾರೆ. ನೀನೇ ಯಜ್ಞ ಮತ್ತು ಪರಮ ಅಧ್ವರ. ಈ ಮೂರು ಲೋಕಗಳನ್ನು ಸೃಷ್ಟಿಸಿ ಕಾಲವು ಪ್ರಾಪ್ತವಾದಾಗ ಪುನಃ ಇದನ್ನು ಸಮಿದ್ಧವನ್ನಾಗಿ ಜೀರ್ಣಿಸಿಕೊಳ್ಳುತ್ತೀಯೆ. ಈ ಸರ್ವ ಭುವನಗಳು ನಿನ್ನಿಂದ ಹುಟ್ಟಿವೆ. ನೀನೇ ಇವುಗಳ ಅಂತ್ಯ. ನಿನ್ನನ್ನು ಮೋಡವೆಂದೂ ಕರೆಯುತ್ತಾರೆ. ವಿದ್ಯುತ್ತೂ ನೀನೇ. ನಿನ್ನಿಂದ ಹೊರಡುವ ಜ್ವಾಲೆಗಳಿಂದ ಸರ್ವಭೂತಗಳನ್ನು ಸುಡುತ್ತೀಯೆ. ನೀರು ನಿನ್ನಲ್ಲಿಯೇ ತುಂಬಿಕೊಂಡಿದೆ. ಈ ಜಗತ್ತೆಲ್ಲವೂ ನಿನ್ನನ್ನೇ ಅವಲಂಬಿಸಿದೆ. ಮೂರು ಲೋಕಗಳಲ್ಲಿ ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ತನ್ನಲ್ಲಿ ಹುಟ್ಟಿದವುಗಳನ್ನು ಸರ್ವವೂ ಪ್ರೀತಿಸುತ್ತವೆ. ನೀರನ್ನು ಪ್ರವೇಶಿಸು. ಶಂಕಿಸಬೇಡ! ಸನಾತನ ಬ್ರಾಹ್ಮೀ ಮಂತ್ರಗಳಿಂದ ನಿನ್ನನ್ನು ವೃದ್ಧಿಸುತ್ತೇನೆ.”

ಭಗವಾನ್ ಉತ್ತಮ ಕವಿಯು ಹೀಗೆ ಹವ್ಯವಾಹನನ್ನು ಸ್ತುತಿಸಲು ಅವನು ಬೃಹಸ್ಪತಿಗೆ ಪ್ರೀತಿಯಿಂದ ಈ ಉತ್ತಮ ಮಾತುಗಳನ್ನಾಡಿದನು:

> "ನಿನಗೆ ಶಕ್ರನನ್ನು ತೋರಿಸುತ್ತೇನೆ. ಸತ್ಯವನ್ನೇ ನಿನಗೆ ಹೇಳುತ್ತಿದ್ದೇನೆ."

ಆಗ ವಹ್ನಿಯು ಸಮುದ್ರ ಮತ್ತು ಚಿಕ್ಕ ಹೊಂಡಗಳನ್ನೂ ಪ್ರವೇಶಿಸಿದನು. ಶತಕ್ರತುವು ಅಡಗಿದ್ದ ಸರೋವರಕ್ಕೂ ಹೋದನು. ಅಲ್ಲಿ ಪದ್ಮಗಳಲ್ಲಿ ಹುಡುಕುತ್ತಿರುವಾಗ ದಂಟಿನ ಮಧ್ಯದಲ್ಲಿದ್ದ ದೇವೇದ್ರನನ್ನು ಕಂಡನು. ತಕ್ಷಣವೇ ಹಿಂದಿರುಗಿ ಹೇಗೆ ಪ್ರಭುವು ಅಣುಮಾತ್ರದ ರೂಪದರಿಸಿ ಕಮಲದ ದಂಟಿನಲ್ಲಿ ನೆಲೆಸಿದ್ದಾನೆ ಎನ್ನುವುದನು ಬೃಹಸ್ಪತಿಗೆ ತಿಳಿಸಿದನು. ಆಗ ಬೃಹಸ್ಪತಿಯು ದೇವರ್ಷಿ-ಗಂಧರ್ವರೊಡನೆ ಅಲ್ಲಿಗೆ ಹೋಗಿ ಬಲಸೂದನನನ್ನು ಅವನ ಹಿಂದಿನ ಕರ್ಮಗಳನ್ನು ಹೇಳಿ ಸ್ತುತಿಸಿದನು:

> "ಶಕ್ರ! ದಾರುಣ ಮಹಾಸುರ ನಮುಚಿ, ಮತ್ತು ಹಾಗೆಯೇ ಘೋರವಿಕ್ರಮಿಗಳಾದ ಶಂಬರ ಮತ್ತು ಬಲರೀರ್ವರೂ ನಿನ್ನಿಂದ ಹತನಾದರು. ಶತಕ್ರತೋ! ವೃದ್ಧಿಹೊಂದು! ಎಲ್ಲಾ ಶತ್ರುಗಳನ್ನೂ ನಿಷೂದಿಸು. ವಜ್ರಿನ್! ಎದ್ದೇಳು! ಸೇರಿರುವ ದೇವ-ಋಷಿಗಳನ್ನು ನೋಡು. ಮಹೇಂದ್ರ! ವಿಭೋ! ದಾನವರನ್ನು ಸಂಹರಿಸಿ ನೀನು ಲೋಕಗಳನ್ನು

ಉದ್ಧರಿಸಿದ್ದೀಯೆ. ದೇವರಾಜ! ಜಗತ್ಪತೇ! ನೀರಿನ ನೊರೆಯನ್ನು ಸೇರಿಸಿ, ವಿಷ್ಣು ತೇಜಸ್ಸಿನಿಂದ ಬಲಿಷ್ಟನಾಗಿ ಹಿಂದೆ ವೃತ್ರನು ನಿನ್ನಿಂದ ಹತನಾದನು. ನೀನು ಸರ್ವಭೂತಗಳಲ್ಲಿ ಶ್ರೇಷ್ಠ, ಮತ್ತು ಮೆಚ್ಚಿನವನು. ನಿನ್ನ ಸಮನಾದ ಭೂತಗಳಿರುವುದೇ ಗೊತ್ತಿಲ್ಲ. ಶಕ್ರ! ಸರ್ವಭೂತಗಳೂ ನಿನ್ನನ್ನು ಆಧರಿಸಿವೆ. ನೀನು ದೇವತೆಗಳ ಮಹಿಮೆಯನ್ನು ಹೆಚ್ಚಿಸಿದ್ದೀಯೆ. ಮಹೇಂದ್ರ! ಬಲವನ್ನು ಪಡೆದು ದೇವತೆಗಳನ್ನೂ ಎಲ್ಲ ಲೋಕಗಳನ್ನೂ ರಕ್ಷಿಸು."

ಈ ರೀತಿ ಸ್ತುತಿಸಲ್ಪಟ್ಟ ಅವನು ನಿಧಾನವಾಗಿ ವರ್ಧಿಸಿದನು. ತನ್ನದೇ ರೂಪವನ್ನು ತಳೆದು ಬಲಾನ್ವಿತನಾಗಿ ಎದುರಿಗಿದ್ದ ದೇವ ಗುರು ಬೃಹಸ್ಪತಿಗೆ ಹೇಳಿದನು:

"ತ್ವಷ್ಟ್ರಿಯ ಮಗ ಮಹಾಸುರ ಮತ್ತು ಸುಮಹಾಕಾಯನಾಗಿ ಲೋಕಗಳನ್ನೇ ನುಂಗಲಿದ್ದ ವೃತ್ರನ ಸಂಹಾರವಾದ ನಂತರ ಇನ್ನೇನು ಕಾರ್ಯವು ಉಳಿದುಕೊಂಡಿದೆ?"

ಬೃಹಸ್ಪತಿಯು ಹೇಳಿದನು:

"ಮನುಷ್ಯರ ರಾಜ ನಹುಷನು ದೇವರ್ಷಿಗಣಗಳ ತೇಜಸ್ಸಿನಿಂದ ದೇವರಾಜ್ಯವನ್ನು ಪಡೆದು ಎಲ್ಲರನ್ನೂ ತುಂಬಾ ಬಾಧಿಸುತ್ತಿದ್ದಾನೆ."

ಇಂದ್ರನು ಹೇಳಿದನು:

“ದುರ್ಲಭವಾದ ದೇವತೆಗಳ ರಾಜ್ಯವನ್ನು ನಹುಷನು ಹೇಗೆ ಪಡೆದನು? ಬೃಹಸ್ಪತೇ! ಯಾವ ತಪಸ್ಸನ್ನು ಅವನು ಮಾಡಿದನು? ಅವನ ವೀರ್ಯವೆಷ್ಟು?”

ಬೃಹಸ್ಪತಿಯು ಹೇಳಿದನು:

“ನೀನು ಮಹೇಂದ್ರ ಪದವಿಯನ್ನು ತ್ಯಜಿಸಿದಾಗ ಭೀತರಾದ ದೇವತೆಗಳು ಶಕ್ರನನ್ನು ಬಯಸಿದರು. ಶಕ್ರ! ಆಗ ದೇವತೆಗಳು, ಪಿತೃಗಳು ಮತ್ತು ಋಷಿಗಳು ಗಂಧರ್ವಗಣಗಳನ್ನೂ ಕೂಡಿ ಎಲ್ಲರೂ ನಹುಷನಲ್ಲಿಗೆ ಹೋಗಿ “ನೀನು ಭುವನದ ರಾಜನೂ ಗೋಪ್ತನೂ ಆಗು” ಎಂದು ಹೇಳಿದರು. ಅವರಿಗೆ ನಹುಷನು “ನಾನು ಶಕ್ರನಾಗುವುದಿಲ್ಲ. ನಿಮ್ಮ ತಪಸ್ಸು ಮತ್ತು ತೇಜಸ್ಸನ್ನು ನನ್ನಲ್ಲಿ ತುಂಬಿ.” ಹೀಗೆ ಹೇಳಲು ಅವನನ್ನು ದೇವತೆಗಳು ವರ್ಧಿಸಿದರು. ಘೋರವೀರ್ಯದ ನಹುಷನು ರಾಜನಾದನು. ತ್ರೈಲೋಕ್ಯದ ರಾಜ್ಯವನ್ನು ಪಡೆದು ತಪಸ್ವಿಗಳನ್ನು ವಾಹನವನ್ನಾಗಿಟ್ಟುಕೊಂಡು ಆ ದುರಾತ್ಮನು ಲೋಕಗಳಲ್ಲಿ ಸಂಚರಿಸುತ್ತಿದ್ದಾನೆ. ತೇಜೋಹರನಾದ, ದೃಷ್ಟಿವಿಷನಾದ, ಸುಘೋರನಾದ ನಹುಷನನ್ನು ನೀನು ಎಂದೂ ನೋಡಬಾರದು. ದೇವತೆಗಳೆಲ್ಲರೂ ನಹುಷನಿಗೆ ಹೆದರಿ ವೇಷಮರೆಸಿಕೊಂಡು ನಡೆಯುತ್ತಾರೆ ಮತ್ತು ಅವನನ್ನು

ನೋಡುವುದೇ ಇಲ್ಲ.”

ಈ ರೀತಿಯಾಗಿ ಅಂಗಿರಸರಲ್ಲಿ ಹಿರಿಯವನಾದ ಬೃಹಸ್ಪತಿಯು ಮಾತನಾಡುತ್ತಿರಲು ಅಲ್ಲಿಗೆ ಲೋಕಪಾಲ ಕುಬೇರ, ವೈಚಸ್ವತ ಪುರಾಣ ಯಮ, ದೇವ ಸೋಮ ಮತ್ತು ವರುಣರು ಆಗಮಿಸಿದರು. ಅವರು ಅಲ್ಲಿ ಬಂದು ಸೇರಿ ಮಹೇಂದ್ರನಿಗೆ ಹೇಳಿದರು:

“ಒಳ್ಳೆಯದಾಯಿತು ತ್ವಷ್ಟನ ಮಗ ಮತ್ತು ವೃತ್ರರು ಹತರಾದರು. ಶಕ್ರ! ಒಳ್ಳೆಯದಾಯಿತು ಅರಿಗಳನ್ನು ಸಂಹರಿಸಿದ ನಿನ್ನನ್ನು ನಾವು ಕುಶಲನಾಗಿರುವುದನ್ನೂ ಕ್ಷಯಿಸದೆ ಇರುವುದನ್ನೂ ನೋಡುತ್ತಿದ್ದೇವೆ.”

ಶಕ್ರನು ಅವರಿಗೆ, ನಹುಷನ ವಿರುದ್ಧವಾಗಿ ಪ್ರತಿಚೋದಿಸಿ ಉತ್ತರಿಸಿದನು:

“ಘೋರರೂಪಿ ದೇವತೆಗಳ ರಾಜ ನಹುಷನ ಕುರಿತು ನನಗೆ ನಿಮ್ಮ ಸಹಾಯವನ್ನು ನೀಡಬೇಕು.”

ಅವರು ಹೇಳಿದರು:

“ಘೋರರೂಪೀ ನಹುಷನ ದೃಷ್ಟಿಯು ವಿಷ. ದೇವ! ನಾವು ಹೆದರಿದ್ದೇವೆ. ನಹುಷನನ್ನು ನೀನು ಪರಾಜಯಗೊಳಿಸಿದರೆ ನಾವು ಹವಿಸ್ಸಿನ ಭಾಗಗಳಿಗೆ ನಾವು ಅರ್ಹರಾಗುತ್ತೇವೆ.”

ಇಂದ್ರನು ಹೇಳಿದನು:

> “ಹಾಗೆಯೇ ಆಗಲಿ! ಇಂದು ನೀನು, ಅಪಾಂಪತಿ, ಯಮ, ಕುಬೇರರು ನನ್ನೊಂದಿಗೆ ಅಭಿಷಿಕ್ತರಾಗೋಣ. ಘೋರದೃಷ್ಟಿಯ ಶತ್ರು ನಹುಷನನ್ನು ಜಯಿಸೋಣ.”

ಆಗ ಅಗ್ನಿಯು ಶಕ್ರನಿಗೆ ಹೇಳಿದನು:

> “ಹವಿಸ್ಸಿನಲ್ಲಿ ನನಗೂ ಭಾಗವನ್ನು ನೀಡು. ನಾನೂ ಕೂಡ ನಿನಗೆ ಸಹಾಯ ಮಾಡುತ್ತೇನೆ.” ಶಕ್ರನು ಅವನಿಗೆ ಹೇಳಿದನು: “ಅಗ್ನೇ! ನೀನು ಕೂಡ ಮಹಾಕ್ರತುಗಳಲ್ಲಿ ಇಂದ್ರ ಮತ್ತು ಅಗ್ನಿಗಳೆಂಬ ಒಂದೇ ಭಾಗಕ್ಕೆ ಅರ್ಹನಾಗುತ್ತೀಯೆ.”

ಹೀಗೆ ಸಮಾಲೋಚಿಸಿ ಪಾಕಶಾಸನ ಭಗವಾನ್ ಮಹೇಂದ್ರನು ಕುಬೇರನಿಗೆ ಸರ್ವಯಕ್ಷರ ಮತ್ತು ಧನಗಳ ಪ್ರಭುತ್ವವನ್ನು, ವೈವಸ್ವತನಿಗೆ ಪಿತೃಗಳ, ವರುಣನಿಗೆ ನೀರುಗಳ ಅಧಿಪತ್ಯವನ್ನು ಕೊಟ್ಟನು. ಶಕ್ರನು ಅವರನ್ನು ಸತ್ಕರಿಸಿ ಹರಸಿದನು. ಧೀಮತ ದೇವರಾಜನು ನಹುಷನ ವಧೆಯ ಉಪಾಯವನ್ನು ಲೋಕಪಾಲಕರೊಡನೆ ಸಮಾಲೋಚಿಸುತ್ತಿರಲು ಅಲ್ಲಿ ತಪಸ್ವೀ ಭಗವಾನ್ ಅಗಸ್ತ್ಯನು ಕಾಣಿಸಿಕೊಂಡನು. ಅವನು ಇಂದ್ರನನ್ನು ಅರ್ಚಿಸಿ ಹೇಳಿದನು:

> “ಒಳ್ಳೆಯದಾಯಿತು! ನೀನು ವಿಶ್ವರೂಪನ ವಿನಾಶ ಮತ್ತು ವೃತ್ರಾಸುರನ ವಧೆಯ ನಂತರ ವೃದ್ಧಿಸಿದ್ದೀಯೆ. ಪುರಂದರ! ಒಳ್ಳೆಯದಾಯಿತು! ದೇವರಾಜ್ಯದಿಂದ ನಹುಷನು

ಭ್ರಷ್ಟನಾಗಿದ್ದಾನೆ. ಒಳ್ಳೆಯದಾಯಿತು! ನಿನ್ನ ಶತ್ರುಗಳು ನಾಶವಾಗಿ ನಿನ್ನನ್ನು ನಾನು ನೋಡುತ್ತಿದ್ದೇನೆ.”

ಇಂದ್ರನು ಹೇಳಿದನು:

“ಮಹರ್ಷೇ! ನಿನಗೆ ಸ್ವಾಗತ. ನಿನ್ನ ದರ್ಶನದಿಂದ ನಾನು ಪ್ರೀತನಾಗಿದ್ದೇನೆ. ನನ್ನಿಂದ ಈ ಪಾದ್ಯ, ಆಚಮನೀಯ ಮತ್ತು ಅರ್ಘ್ಯವನ್ನು ಸ್ವೀಕರಿಸು!”

ಆ ಮುನಿಸತ್ತಮನನ್ನು ಪೂಜಿಸಿ ಆಸನದಲ್ಲಿ ಕುಳ್ಳಿರಿಸಿ ಸಂತೋಷಗೊಂಡ ದೇವೇಶನು ಬ್ರಾಹ್ಮಣರ್ಷಭನನ್ನು ಕೇಳಿದನು:

“ಭಗವನ್! ಪಾಪನಿಶ್ಚಯ ನಹುಷನು ಸ್ವರ್ಗದಿಂದ ಹೇಗೆ ಪರಿಭ್ರಷ್ಟನಾದ ಎಂದು ಕೇಳಲು ಬಯಸುತ್ತೇನೆ.”

ಅಗಸ್ತ್ಯನು ಹೇಳಿದನು:

“ಶಕ್ರ! ದುರಾತ್ಮ, ರಾಜಾ, ದುರಾಚಾರಿ, ಬಲದರ್ಪಿತ ನಹುಷನು ಸ್ವರ್ಗದಿಂದ ಹೇಗೆ ಭ್ರಷ್ಟನಾದ ಎನ್ನುವ ಪ್ರಿಯ ವಾರ್ತೆಯನ್ನು ಕೇಳು. ಪಾಪಕಾರಿಣಿ ನಹುಷನನ್ನು ಹೊತ್ತು ಆಯಾಸಗೊಂಡ ಮಹಾಭಾಗ, ಅಮಲ ಬ್ರಹ್ಮರ್ಷಿ ದೇವರ್ಷಿಗಳು ನಹುಷನನ್ನು ಕೇಳಿದರು: “ಹಸುಗಳಿಗೆ ಪ್ರೋಕ್ಷಣೆ ಮಾಡುವಾಗ ಹೇಳುವ ಮಂತ್ರಗಳು ವೇದಗಳಲ್ಲಿ ಇವೆಯಷ್ಟೇ! ಅವುಗಳಿಗೆ ಪ್ರಮಾಣಗಳಿವೆಯೇ ಹೇಳು!”

ತಮಸ್ಸಿನಿಂದ ಮೂಢಚೇತನನಾಗಿದ್ದ ನಹುಷನು ಇಲ್ಲವೆಂದು ಹೇಳಿದನು. ಆಗ ಋಷಿಗಳು ಹೇಳಿದರು: "ನೀನು ಅಧರ್ಮದಲ್ಲಿ ನಡೆದುಕೊಳ್ಳುತ್ತಿದ್ದೀಯೆ. ಧರ್ಮದಲ್ಲಿ ನಡೆಯುತ್ತಿಲ್ಲ. ಹಿಂದೆ ಮಹರ್ಷಿಗಳು ಇವಕ್ಕೆ ಪ್ರಮಾಣಗಳಿವೆಯೆಂದು ಹೇಳಿದ್ದಾರೆ." ಹೀಗೆ ಮುನಿಗಳೊಂದಿಗೆ ವಾದಿಸುತ್ತಿರಲು ಅಧರ್ಮಪೀಡಿತನಾದ ಅವನು ಪಾದದಿಂದ ನನ್ನ ನೆತ್ತಿಯನ್ನು ಮುಟ್ಟಿದನು. ಆಗ ಅವನು ತೇಜಸ್ಸನ್ನು ಕಳೆದುಕೊಂಡು ಭಯಭೀತನಾದನು. ಆ ಭಯಪೀಡಿತ ಅವಿಗ್ನನಿಗೆ ನಾನು ಹೇಳಿದೆನು: "ಪೂರ್ವದಲ್ಲಿ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಬ್ರಹ್ಮರ್ಷಿಗಳು ಅನುಷ್ಠಾನ ಮಾಡುತ್ತಿರುವುದನ್ನು ಅದುಷ್ಟವೆಂದು ದೂಷಿಸುತ್ತಿದ್ದೀಯೆ ಮತ್ತು ಪಾದದಿಂದ ನನ್ನನ್ನು ಸ್ಪರ್ಶಿಸಿದ್ದೀಯೆ. ಮೂಢ! ಬ್ರಹ್ಮನ ಸಮಾನರಾದ ದುರಾಸದರಾದ ಈ ಋಷಿಗಳನ್ನು ವಾಹನಗಳನ್ನಾಗಿಸಿ ಪ್ರಯಾಣಿಸುತ್ತಿದ್ದೀಯಲ್ಲ! ನೀನು ಸ್ವರ್ಗದಿಂದ ಪ್ರಭೆಯನ್ನು ಕಳೆದುಕೊಂಡು ಬೀಳು. ಪುಣ್ಯವನ್ನು ಕಳೆದುಕೊಂಡು ಮಹೀತಲದಲ್ಲಿ ಪರಿಭ್ರಷ್ಟನಾಗಿ ಹತ್ತು ಸಾವಿರ ವರ್ಷಗಳು ಮಹಾ ಸರ್ಪದ ರೂಪವನ್ನು ಧರಿಸಿ ಸಂಚರಿಸುತ್ತೀಯೆ. ಪಾಪವು ಸಂಪೂರ್ಣವಾಗಿ ಧ್ವಂಸವಾದ ನಂತರ ಪುನಃ ಸ್ವರ್ಗವನ್ನು ಪಡೆಯುತ್ತೀಯೆ." ಈ ರೀತಿ ಆ ದುರಾತ್ಮನು ದೇವರಾಜ್ಯದಿಂದ ಭ್ರಷ್ಟನಾದನು. ಶಕ್ರ! ಆ

> ಬ್ರಾಹ್ಮಣಕಂಟಕನು ಹತನಾದುದು ಮತ್ತು ನೀನು ವೃದ್ಧಿಹೊಂದಿದುದು ಒಳ್ಳೆಯದೇ ಆಯಿತು. ತ್ರಿವಿಷ್ಟಪವನ್ನು ಸೇರಿ ಲೋಕಗಳನ್ನು ಪಾಲಿಸು. ಜಿತೇಂದ್ರಿಯರೂ ಶತ್ರುಗಳನ್ನು ಗೆದ್ದವರೂ ಆದ ಮಹರ್ಷಿಗಳಿಂದ ಸ್ತುತಿಸಿಕೊಳ್ಳು."

ಆಗ ದೇವತೆಗಳು ತುಂಬಾ ಸಂತೋಷಗೊಂಡು ಮಹರ್ಷಿಗಣಗಳಿಂದ, ಪಿತೃಗಳು, ಯಕ್ಷರು, ಭುಜಗರು, ರಾಕ್ಷಸರು, ಗಂಧರ್ವರು, ದೇವಕನ್ಯೆಯರು ಮತ್ತು ಅಪ್ಸರ ಗಣಗಳಿಂದ ಸುತ್ತುವರೆಯಲ್ಪಟ್ಟರು. ಸರೋವರಗಳು, ನದಿಗಳು, ಪರ್ವತಗಳು, ಸಾಗರಗಳು ಎಲ್ಲರೂ ಹತ್ತಿರಬಂದು ಹೇಳಿದರು:

> "ಶತ್ರುಹನ್! ನೀನು ವರ್ಧಿಸುತ್ತಿರುವುದು ಒಳ್ಳೆಯದಾಯಿತು! ಧೀಮಂತ ಅಗಸ್ತ್ಯನಿಂದ ಆ ಪಾಪಿ ನಹುಷನು ಹತನಾದುದೂ ಒಳ್ಳೆಯದೇ ಆಯಿತು. ಒಳ್ಳೆಯದಾಯಿತು ಆ ಪಾಪಿಯನ್ನು ಮಹೀತಲದಲ್ಲಿ ಸರ್ಪವಾಗಿ ಸಂಚರಿಸುವಂತೆ ಮಾಡಲಾಯಿತು."

ಗಂಧರ್ವಾಪ್ಸರ ಗಣಗಳಿಂದ ಸ್ತುತಿಸಲ್ಪಟ್ಟ ಇಂದ್ರ ಶಕ್ರನು ಲಕ್ಷಣಗಳಿಂದ ಕೂಡಿದ ಐರಾವತವನ್ನು ಏರಿದನು. ಮಹಾತೇಜಸ್ವಿ ಅಗ್ನಿ, ಮಹರ್ಷಿ ಬೃಹಸ್ಪತಿ ಮತ್ತು ಯಮ, ವರುಣ ಮತ್ತು ಧನೇಶ್ವರ ಕುಬೇರರು ಒಡಗೂಡಿದರು. ವೃತ್ರ ನಿಷೂದನ ಪ್ರಭು ಶಕ್ರನು ಸರ್ವ ದೇವತೆಗಳಿಂದ ಗಂಧರ್ವ, ಅಪ್ಸರೆಯರಿಂದ ಪರಿವೃತನಾಗಿ

ತ್ರಿಭುವನಕ್ಕೆ ಪ್ರಯಾಣಿಸಿದನು. ಆ ಶತಕ್ರತು ದೇವರಾಜನು ಮಹೇಂದ್ರಾಣಿಯನ್ನು ಸೇರಿ ಪರಮ ಸಂತೋಷದಿಂದ ದೇವರಾಜ್ಯವನ್ನು ಪಾಲಿಸಿದನು.

ಅಲ್ಲಿಗೆ ಭಗವಾನ್ ಅಂಗಿರಸನು ಕಾಣಿಸಿಕೊಂಡನು. ಅವನು ದೇವೇಂದ್ರನನ್ನು ಅಥರ್ವ ವೇದ ಮಂತ್ರಗಳಿಂದ ಪೂಜಿಸಿದನು. ಆಗ ಭಗವಾನ್ ಇಂದ್ರನು ಸಂತೋಷಗೊಂಡು ಅಥರ್ವಾಂಗಿರಸನಿಗೆ ವರವನ್ನು ನೀಡಿದನು.

> “ಈ ವೇದವು ಅಥರ್ವಾಂಗಿರಸ ಎಂಬ ಹೆಸರನ್ನು ಹೊಂದುತ್ತದೆ. ಉದಾಹರಣೆಗೆ ಇದಕ್ಕೆ ಯಜ್ಞದ ಭಾಗವೂ ದೊರೆಯುತ್ತದೆ.”

ಈ ರೀತಿ ಅಥರ್ವಾಂಗಿರಸನನ್ನು ಸಂಪೂಜಿಸಿ ಭಗವಾನ್ ಮಹಾರಾಜ ದೇವರಾಜ ಶತುಕ್ರತುವು ಕಳುಹಿಸಿಕೊಟ್ಟನು. ಸರ್ವ ತ್ರಿದಶರನ್ನೂ ತಪೋಧನ ಋಷಿಗಳನ್ನು ಸಂಪೂಜಿಸಿ ಇಂದ್ರನು ಸಂತೋಷಗೊಂಡು ಪ್ರಜೆಗಳನ್ನು ಧರ್ಮದಿಂದ ಪಾಲಿಸಿದನು. ಹೀಗೆ ಭಾರ್ಯೆಯೊಂದಿಗೆ ಇಂದ್ರನು ದುಃಖವನ್ನು ಹೊಂದಿ ಶತ್ರುಗಳ ವಧೆಯನ್ನು ಬಯಸಿ ಅಜ್ಞಾತವಾಸವನ್ನು ಮಾಡಿದನು.

# ದಂಭೋದ್ಭವ

[ದಂಭೋದ್ಭವನ ಈ ಕಥೆಯು ವ್ಯಾಸ ಮಹಾಭಾರತದ ಉದ್ಯೋಗಪರ್ವದ ಭಗವದ್ಯಾನ ಪರ್ವ (ಅಧ್ಯಾಯ ೯೪) ದಲ್ಲಿ ಬರುತ್ತದೆ. ಶ್ರೀಕೃಷ್ಣನು ಸಂಧಿಗೆಂದು ಕುರುಸಭೆಗೆ ಹೋದಾಗ ಅಲ್ಲಿ ಪರಶುರಾಮನು ದುರ್ಯೋಧನನಿಗೆ ನರ-ನಾರಾಯಣರ ಮಹಾತ್ಮೆಯನ್ನು ಸಾರುವ ಈ ಕಥೆಯನ್ನು ಹೇಳಿದನು.]

ಹಿಂದೆ ದಂಭೋದ್ಭವನೆಂಬ ಹೆಸರಿನ ಸಾರ್ವಭೌಮನಿದ್ದನು. ಅವನು ಅಖಿಲ ಪೃಥ್ವಿಯಲ್ಲಿಯ ಎಲ್ಲವನ್ನೂ ಭೋಗಿಸುತ್ತಿದ್ದನು. ಆ ಮಹಾರಥಿ ವೀರ್ಯವಂತನು ನಿತ್ಯವೂ ರಾತ್ರಿಕಳೆದು ಪ್ರಾತಃಕಾಲದಲ್ಲೆದ್ದು ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ಕೇಳುತ್ತಿದ್ದನು:

> “ಶೂದ್ರನಾಗಲೀ, ವೈಶ್ಯನಾಗಲೀ, ಕ್ಷತ್ರಿಯನಾಗಲೀ ಅಥವಾ ಬ್ರಾಹ್ಮಣನಾಗಲೀ ಯುದ್ಧದಲ್ಲಿ ನನಗಿಂಥಲೂ ವಿಶೇಷನಾದ ಅಥವಾ ಸರಿಸಮನಾದ ಯಾರಾದರೂ ಇದ್ದಾರೆಯೇ?”

ಹೀಗೆ ಹೇಳುತ್ತಾ ಆ ರಾಜನು ಈ ಭೂಮಿಯಿಡೀ ತಿರುಗುತ್ತಿದ್ದನು. ಮಹಾ ದರ್ಪದಿಂದ ಮತ್ತನಾದ ಅವನು ಬೇರೆ ಯಾರ ಕುರಿತೂ ಯೋಚಿಸುತ್ತಿರಲಿಲ್ಲ. ಆಗ ಏನಕ್ಕೂ ಹೆದರದಿದ್ದ, ಯಾರಕೃಪೆಯಡಿಯೂ ಇರದಿದ್ದ ವೇದವಿದ ಬ್ರಾಹ್ಮಣರು ಪುನಃ ಪುನಃ ಸೊಕ್ಕಿನಿಂದ ತನ್ನನ್ನೇ ಹೊಗಳಿಕೊಳ್ಳುತ್ತಿದ್ದ ರಾಜನನ್ನು ತಡೆಯಲು ಪ್ರಯತ್ನಿಸಿದರು.

ನಿಯಂತ್ರಿಸಿಕೊಳ್ಳಲು ಹೇಳಿದರೂ, ಅಭಿಮಾನಿಯಾದ, ಶ್ರೀಯಿಂದ ಮದಿಸಿದ ಅವನು ದ್ವಿಜರನ್ನು ಮತ್ತೆ ಮತ್ತೆ ಕೇಳಲು ಬ್ರಾಹ್ಮಣರು ಹೇಳಿದರು. ಆ ತಪಸ್ವಿ, ಮಹಾತ್ಮ, ವೇದವ್ರತಸಮನ್ವಿತ ದ್ವಿಜಗಣವು ಕ್ರೋಧದೀಪ್ತರಾಗಿ ಹಂಬಲಿಸುತ್ತಿದ್ದ ರಾಜನಿಗೆ ಹೇಳಿತು:

> "ರಾಜನ್! ನೀನು ಎಂದೂ ಅನೇಕಜನ್ಮಗಳಲ್ಲಿ ಸಖರಾಗಿದ್ದು ಯುದ್ಧಮಾಡಿದ ಆ ಇಬ್ಬರು ಪುರುಷಸಿಂಹರಿಗೆ ಸಮನಾಗಲಾರೆ!"

ಇದನ್ನು ಕೇಳಿದ ರಾಜನು ಆ ದ್ವಿಜರಿಗೆ ಪುನಃ ಕೇಳಿದನು:

> "ಆ ವೀರರಿಬ್ಬರು ಎಲ್ಲಿದ್ದಾರೆ? ಅವರು ಎಲ್ಲಿ ಜನಿಸಿದ್ದಾರೆ? ಅವರು ಏನು ಮಾಡುತ್ತಿದ್ದಾರೆ? ಅವರು ಯಾರು?"

ಬ್ರಾಹ್ಮಣರು ಹೇಳಿದರು:

> "ಪಾರ್ಥಿವ! ನರ-ನಾರಾಯಣರೆಂಬ ತಾಪಸರು ಮನುಷ್ಯಲೋಕಕ್ಕೆ ಬಂದಿದ್ದಾರೆಂದು ಕೇಳಿದ್ದೇವೆ. ಅವರಿಬ್ಬರೊಂದಿಗೆ ಯುದ್ಧಮಾಡು! ಆ ಮಹಾತ್ಮ ನರ-ನಾರಯಣರು ಗಂಧಮಾದನದಲ್ಲಿ ವಿವರಿಸಲಸಾಧ್ಯ ಘೋರ ತಪಸ್ಸನ್ನು ತಪಿಸುತ್ತಿದ್ದಾರೆ ಎಂದು ಕೇಳಿದ್ದೇವೆ."

ಆ ರಾಜನು ಅತಿದೊಡ್ಡ ಷಡಂಗ ಸೇನೆಯನ್ನು ಒಟ್ಟುಗೂಡಿಸಿಕೊಂಡು ಅವಸರದಲ್ಲಿ ಆ ಇಬ್ಬರು ಅಪರಾಜಿತರಿರುವಲ್ಲಿಗೆ ಪ್ರಯಾಣಿಸಿದನು.

ಅವನು ಆ ವಿಷಮ, ಘೋರ ಗಂಧಮಾದನ ಪರ್ವತಕ್ಕೆ ಹೋಗಿ, ಆ ಅಪರಾಜಿತ ತಾಪಸರನ್ನು ಬೇಟೆಯಾಡುತ್ತಾ ಮುಂದುವರೆದನು. ಹಸಿವು-ಬಾಯಾರಿಕೆಗಳಿಂದ ಬಳಲಿ ಕೃಶರಾಗಿದ್ದ, ಮೂಳೆ-ನರಗಳು ಕಾಣಿಸಿಕೊಳ್ಳುತ್ತಿದ್ದ, ಛಳಿ-ಗಾಳಿ-ಬಿಸಿಲುಗಳಿಗೆ ಸಿಕ್ಕಿ ಒರಟಾಗಿದ್ದ ಆ ಪುರುಷೋತ್ತಮರಿಬ್ಬರನ್ನು ನೋಡಿ, ಬಳಿಸಾರಿ, ಕಾಲುಗಳನ್ನು ಹಿಡಿದು, ಕುಶಲವನ್ನು ಕೇಳಿದನು. ಅವರು ರಾಜನಿಗೆ ಗೆಡ್ಡೆ, ಹಣ್ಣು, ಆಸನ, ನೀರನ್ನಿತ್ತು ಸ್ವಾಗತಿಸಿ


> “ಯಾವ ಕಾರ್ಯವನ್ನು ಮಾಡಬೇಕು?”

ಎಂದು ಕೇಳಿದರು. ದಂಭೋದ್ಭವನು ಹೇಳಿದನು:

> “ಈ ಬಾಹುಗಳೆರಡರಿಂದ ನಾನು ಭೂಮಿಯಲ್ಲಿರುವ ಸರ್ವ ಶತ್ರುಗಳನ್ನು ಗೆದ್ದಿದ್ದೇನೆ. ನಿಮ್ಮಿಬ್ಬರೊಡನೆ ಯುದ್ಧವನ್ನು ಅಪೇಕ್ಷಿಸಿ ಈ ಪರ್ವತಕ್ಕೆ ಬಂದಿದ್ದೇನೆ. ಬಹುಕಾಲದಿಂದ ಬಯಸುತ್ತಿರುವ ಇದನ್ನೇ ಆತಿಥ್ಯವಾಗಿ ನೀಡಬೇಕು.”

ನರ-ನಾರಾಯಣರು ಹೇಳಿದರು:

> “ರಾಜಸತ್ತಮ! ಕ್ರೋಧ-ಲೋಭಗಳು ಈ ಅಶ್ರಮದಲ್ಲಿ ಸರಿಯಲ್ಲ. ಈ ಆಶ್ರಮದಲ್ಲಿ ಎಲ್ಲಿಯ ಯುದ್ಧ? ಎಲ್ಲಿಯ ಶಸ್ತ್ರ? ಎಲ್ಲಿ ಸಿಟ್ಟು? ಬೇರೆ ಎಲ್ಲಿಯಾದರೂ ಹೋಗಿ ಯುದ್ಧವನ್ನು ಕೇಳು. ಭೂಮಿಯಲ್ಲಿ ಬಹಳಷ್ಟು ಕ್ಷತ್ರಿಯರಿದ್ದಾರೆ!”



ಅವರು ಹೇಳಿದರೂ ಅವನು ಒತ್ತಾಯಿಸಿದನು. ಅವನು ಪುನಃ ಪುನಃ ಕ್ಷಮೆಯನ್ನು ಕೇಳಿದರೂ, ಸಂತವಿಸಿದರೂ ಯುದ್ಧವನ್ನು ಬಯಸಿದ ದಂಭೋದ್ಭವನು ಆ ತಾಪಸರಿಬ್ಬರನ್ನೂ ಹೋರಾಟಕ್ಕೆ ಕರೆದನು. ಆಗ ನರನು ಒಂದು ಮುಷ್ಟಿ ಹುಲ್ಲನ್ನು ಹಿಡಿದು ಹೇಳಿದನು:

> "ಯುದ್ಧಕಾಮುಕ ಕ್ಷತ್ರಿಯ! ಇದೋ ಯುದ್ಧಮಾಡು! ಸರ್ವಶಸ್ತ್ರಗಳನ್ನೂ ಪ್ರಯೋಗಿಸು! ಸೇನೆಯನ್ನು ಒಂದುಗೂಡಿಸು! ಯುದ್ಧದಲ್ಲಿ ನಿನಗಿರುವ ಶ್ರದ್ಧೆಯನ್ನು ಶಾಶ್ವತವಾಗಿ ತೆಗೆದುಹಾಕುತ್ತೇನೆ!"

ದಂಭೋದ್ಭವನು ಹೇಳಿದನು:

> "ತಾಪಸ! ನಮಗೆ ಇದೇ ಸರಿಯಾದ ಅಸ್ತ್ರ ಎಂದು ತಿಳಿದರೆ ಅದನ್ನೇ ನೀನು ಬಳಸಿ ಯುದ್ಧಾರ್ಥಿಯಾಗಿ ಇಲ್ಲಿಗೆ ಬಂದಿರುವ ನಮ್ಮೊಂದಿಗೆ ಯುದ್ಧಮಾಡು!"

ಹೀಗೆ ಹೇಳಿ ದಂಭೋದ್ಭವನು ಸೈನಿಕರೊಡಗೂಡಿ ಆ ತಾಪಸನನ್ನು

ಕೊಲ್ಲಲು ಬಯಸಿ ಎಲ್ಲ ಕಡೆಗಳಿಂದ ಬಾಣಗಳ ಮಳೆಸುರಿಸಿ ಆಕ್ರಮಣಿಸಿದನು. ಶತ್ರುಗಳ ಶರೀರವನ್ನು ಕತ್ತರಿಸಬಲ್ಲ ಆ ಘೋರ ಬಾಣಗಳನ್ನು ಆ ಮುನಿಯು ತನ್ನ ಹುಲ್ಲುಕಡ್ಡಿಗಳಿಂದ ತಡೆದು ನಿಷ್ಪ್ರಯೋಜಕಗಳನ್ನಾಗಿ ಮಾಡಿದನು. ಆಗ ಆ ಅಪರಾಜಿತನು ಎದುರಿಸಲಸಾಧ್ಯವಾದ ಆ ಘೋರ ಹುಲ್ಲುಗಳನ್ನು ಅವನ ಮೇಲೆ ಪ್ರಯೋಗಿಸಲು ಅದ್ಭುತವು ನಡೆಯಿತು. ಆ ಮುನಿಯು ಮಾಯೆಯಿಂದ ಆ ಹುಲ್ಲುಕಡ್ಡಿಗಳು ಅವರ ಕಣ್ಣು, ಕಿವಿ, ಮೂಗುಗಳನ್ನು ಹೊಡೆಯುವಂತೆ ಮಾಡಿದನು. ಆ ಹುಲ್ಲುಕಡ್ಡಿಗಳು ತುಂಬಿ ಬಿಳಿಯಾದ ಆಕಾಶವನ್ನು ನೋಡಿದ ರಾಜನು ನರನ ಪಾದಗಳ ಮೇಲೆ ಬಿದ್ದು

> “ನನ್ನನ್ನು ಆಶೀರ್ವದಿಸಿ!”

ಎಂದು ಕೇಳಿದನು. ಶರಣರಿಗೆ ಶರಣ್ಯನಾದ ನರನು ರಾಜನಿಗೆ ಹೇಳಿದನು:

> “ಬ್ರಹ್ಮಣ್ಯ ಮತ್ತು ಧರ್ಮಾತ್ಮನಾಗಿರು! ಹೀಗೆ ಪುನಃ ಮಾಡಬೇಡ! ರಾಜನ್! ದರ್ಪಸಮಾವಿಷ್ಟನಾಗಿ ಇನ್ನು ಎಂದೂ, ಬೇರೆ ಯಾರನ್ನೂ – ನಿನಗಿಂಥ ಅಲ್ಪರಾಗಿರಲಿ ಅಥವಾ ವಿಶಿಷ್ಟರಾಗಿರಲಿ – ಕಾಡಿಸಬೇಡ! ಅದೇ ನಿನಗೆ ಪರಮ ಹಿತವಾಗಿರುವುದು. ಕೃತಪ್ರಜ್ಞನೂ, ಲೋಭವನ್ನು ತೊರೆದು, ನಿರಂಕಾರನಾಗಿ, ಆತ್ಮವಂತನಾಗಿ, ದಾಂತ, ಕ್ಷಾಂತ, ಮೃದುವಾಗಿದ್ದುಕೊಂಡು, ಪ್ರಜೆಗಳ ಕ್ಷೇಮವನ್ನು ಪಾಲಿಸು!

ಅಪ್ಪಣೆ ಕೊಟ್ಟಿದ್ದೇನೆ. ಹೋಗು! ಮಂಗಳವಾಗಲಿ! ಇನ್ನು ಸರಿಯಾಗಿ ನಡೆದುಕೋ. ಬ್ರಾಹ್ಮಣರ ಕುಶಲವನ್ನು ಕೇಳು. ಕ್ರೂರ ಮಾತಿನಿಂದ ಅವರನ್ನು ಅಪಮಾನಿಸಬೇಡ!"

ಆಗ ರಾಜನು ಆ ಮಹಾತ್ಮರ ಪಾದಗಳಿಗೆ ವಂದಿಸಿ, ತನ್ನ ಪುರಕ್ಕೆ ತೆರಳಿ, ತುಂಬಾ ಧರ್ಮವನ್ನು ಸಂಗ್ರಹಿಸಿದನು.

# ಮಾತಲಿ ವರಾನ್ವೇಷಣೆ

[ಮಾತಲಿಯು ತನ್ನ ಮಗಳಿಗೆ ವರನನ್ನು ಹುಡುಕಿದ ಈ ಕಥೆಯು ವ್ಯಾಸ ಮಹಾಭಾರತದ ಉದ್ಯೋಗಪರ್ವದ ಭಗವದ್ಯಾನ ಪರ್ವ (ಅಧ್ಯಾಯ ೯೫-೧೦೩) ದಲ್ಲಿ ಬರುತ್ತದೆ. ಶ್ರೀಕೃಷ್ಣನು ಸಂಧಿಗೆಂದು ಕುರುಸಭೆಗೆ ಹೋದಾಗ ಅಲ್ಲಿ ಋಷಿ ಕಣ್ವನು ವಿಷ್ಣುವಿನ ಘನತೆಯನ್ನು ಸಾರುವ ಈ ಕಥೆಯನ್ನು ದುರ್ಯೋಧನನಿಗೆ ಹೇಳಿದನು.]

ತ್ರೈಲೋಕ್ಯರಾಜ ಇಂದ್ರನ ಸಾರಥಿಯ ಹೆಸರು ಮಾತಲಿ. ಅವನ ಕುಲದಲ್ಲಿ ರೂಪದಲ್ಲಿ ಲೋಕವಿಶ್ರುತ ಒಬ್ಬಳೇ ಕನ್ಯೆಯಿದ್ದಳು. ಗುಣಕೇಶೀ ಎಂಬ ಹೆಸರಿನಿಂದ ವಿಖ್ಯಾತಳಾಗಿ ಆ ದೇವರೂಪಿಣಿಯು ಕಾಂತಿ-ಸೌಂದರ್ಯಗಳಲ್ಲಿ ಇತರ ಸ್ತ್ರೀಯರನ್ನು ಮೀರಿಸಿದ್ದಳು. ಅವಳನ್ನು ಕೊಡುವ ಸಮಯವು ಬಂದಿದೆಯೆಂದು ತಿಳಿದ ಮಾತಲಿಯು

ಭಾರ್ಯೆಯೊಂದಿಗೆ ಚಿಂತೆಗೊಳಗಾಗಿ ಮುಂದೆ ಏನು ಮಾಡಬೇಕೆಂದು ಯೋಚಿಸಿದನು.

> "ಉತ್ತಮ ಶೀಲವುಳ್ಳ, ಯಶಸ್ವಿಗಳ, ಸತ್ವಯುತವಾದ ಉಚ್ಛಕುಲದಲ್ಲಿ ಕನ್ಯೆಯು ಜನಿಸಿದರೇ ಸಮಸ್ಯೆಯಲ್ಲವೇ? ಗೌರಾವಾನ್ವಿತ ಕುಲದಲ್ಲಿ ಜನಿಸಿದ ಕನ್ಯೆಯು ಮೂರು ಕುಲಗಳ ಗೌರವಕ್ಕೆ ಧಕ್ಕೆ ತರಬಹುದು - ತಾಯಿಯ ಕುಲ, ತಂದೆಯ ಕುಲ ಮತ್ತು ಅವಳನ್ನು ತೆಗೆದುಕೊಂಡವರ ಕುಲ. ನನ್ನ ಮನಸ್ಸಿನ ಕಣ್ಣಿನಿಂದ ದೇವ-ಮಾನುಷ ಲೋಕಗಳೆರಡನ್ನೂ ನೋಡಿದರೆ ಅಲ್ಲಿ ನನಗೆ ಇಷ್ಟವಾದ ವರನು ಕಾಣಿಸುತ್ತಿಲ್ಲ."

ದೇವತೆಗಳಲ್ಲಿ, ದೈತ್ಯರಲ್ಲಿ, ಗಂಧರ್ವರಲ್ಲಿ, ಮನುಷ್ಯರಲ್ಲಿ ಮತ್ತು ಹಾಗೆಯೇ ಬಹುಸಂಖ್ಯೆಯ ಋಷಿಗಳಲ್ಲಿಯೂ ಅವನಿಗೆ ಅಳಿಯನನ್ನಾಗಿ ಮಾಡಿಕೊಳ್ಳಲು ಯಾರೂ ಇಷ್ಟವಾಗಲಿಲ್ಲ. ಅನಂತರ ಮಾತಲಿಯು ತನ್ನ ಪತ್ನಿ ಸುಧರ್ಮೆಯೊಡನೆ ರಾತ್ರಿ ಸಮಾಲೋಚನೆ ಮಾಡಿ, ನಾಕಲೋಕಕ್ಕೆ ಹೋಗಲು ಮನಸ್ಸುಮಾಡಿದನು.

> "ದೇವ-ಮನುಷ್ಯರಲ್ಲಿ ನನಗೆ ರೂಪದಲ್ಲಿ ಗುಣಕೇಶಿಯ ಸಮನಾದ ವರನು ಕಾಣುವುದಿಲ್ಲ. ಒಂದುವೇಳೆ ನಾಗರಲ್ಲಿ ಇದ್ದರೂ ಇರಬಹುದು!"

ಹೀಗೆ ಯೋಚಿಸಿ, ಸುಧರ್ಮೆಗೆ ಪ್ರದಕ್ಷಿಣೆ ಮಾಡಿ, ಕನ್ಯೆಯ ಶಿರವನ್ನು ಆಘ್ರಾಣಿಸಿ ಮಹೀತಲವನ್ನು ಪ್ರವೇಶಿಸಿದನು.

ಮಾರ್ಗದಲ್ಲಿ ಮುಂದುವರೆಯುತ್ತಿರುವಾಗ ಮಾತಲಿಯು ವರುಣನನ್ನು ಕಾಣಲು ಬಯಸಿ ಹೋಗುತ್ತಿರುವ ಮಹರ್ಷಿ ನಾರದನನ್ನು ಭೇಟಿ ಮಾಡಿದನು. ಆಗ ನಾರದನು ಅವನನ್ನು ಕೇಳಿದನು:

> "ಸೂತ! ನೀನು ಎಲ್ಲಿಗೆ ಹೋಗುತ್ತಿರುವೆ? ನಿನ್ನದೇ ಕಾರಣಕ್ಕೆ ಅಥವಾ ಶತಕ್ರತುವಿನ ಶಾಸನದಂತೆ ಹೋಗುತ್ತಿದ್ದೀಯೋ?"

ದಾರಿಯಲ್ಲಿ ಹೋಗುತ್ತಿರುವಾಗ ನಾರದನಿಂದ ಹೀಗೆ ಪ್ರಶ್ನಿಸಲ್ಪಟ್ಟ ಮಾತಲಿಯು ಅವನಿಗೆ ವರುಣನಲ್ಲಿ ತನಗಿರುವ ಕೆಲಸದ ಕುರಿತು ಎಲ್ಲವನ್ನೂ ಹೇಳಿದನು. ಆಗ ಆ ಮನಿಯು ಅವನಿಗೆ

> "ಇಬ್ಬರೂ ಒಟ್ಟಿಗೇ ಹೋಗೋಣ! ನಾನೂ ಕೂಡ ಸಲಿಲೇಶನನ್ನು ಕಾಣಲು ದಿವದಿಂದ ಇಳಿದು ಬಂದಿದ್ದೇನೆ. ವಸುಧಾತಲವನ್ನು ನೋಡುತ್ತಾ ನಾನು ನಿನಗೆ ಎಲ್ಲವನ್ನೂ ಹೇಳುತ್ತೇನೆ. ಮಾತಲಿ! ಅಲ್ಲಿ ನೋಡಿ ಯಾರಾದರೂ ವರನನ್ನು ಆರಿಸೋಣ!"

ಆಗ ಮಾತಲಿ-ನಾರದರಿಬ್ಬರೂ ಭೂಮಿಯನ್ನು ಹೊಕ್ಕು ಲೋಕಪಾಲಕ ಅಪಾಂಪತಿಯನ್ನು ಕಂಡರು. ಅಲ್ಲಿ ನಾರದನು ದೇವರ್ಷಿಗೆ ತಕ್ಕುದಾದ ಪೂಜೆಯನ್ನೂ, ಮಾತಲಿಯು ಮಹೇಂದ್ರನಿಗೆ ತಕ್ಕುದಾದ ಪೂಜೆಯನ್ನೂ ಪಡೆದರು. ಅವರಿಬ್ಬರೂ ಸಂತೋಷಗೊಂಡು ತಮ್ಮ ಕಾರ್ಯದ ಕುರಿತು ನಿವೇದಿಸಿದರು. ನಂತರ ವರುಣನ ಅಪ್ಪಣೆಯನ್ನು ಪಡೆದು ನಾಕಲೋಕದಲ್ಲಿ ಸಂಚರಿಸಿದರು. ಭೂಮಿಯ ಒಳಗೆ

ನಿವಾಸಿಸುತ್ತಿರುವ ಎಲ್ಲರನ್ನೂ ತಿಳಿದಿದ್ದ ನಾರದನು ಎಲ್ಲರ ಕುರಿತೂ ವಿವರಿಸುತ್ತಾ ಹೋದನು. ನಾರದನು ಹೇಳಿದನು:

"ಅಯ್ಯಾ! ನೀನು ಪುತ್ರಪೌತ್ರರಿಂದ ಆವೃತನಾಗಿರುವ ವರುಣನನ್ನು ನೋಡಿದೆ. ಸರ್ವತೋಭದ್ರವಾಗಿರುವ ಸಮೃದ್ಧವಾಗಿರುವ ಉದಕಪತಿಯ ಸ್ಥಾನವನ್ನು ನೋಡು! ಇವನು ಗೋಪತಿ ವರುಣನ ಮಹಾಪ್ರಾಜ್ಞ ಮಗ. ಅವನು ಶೀಲದಲ್ಲಿ, ಶೌಚದಲ್ಲಿ ವಿಶಿಷ್ಟನಾಗಿದ್ದಾನೆ. ಪುಷ್ಕರೇಕ್ಷಣ ಈ ಪುಷ್ಕರನು ಅವನ ಪ್ರೀತಿಪಾತ್ರ ಮಗ - ರೂಪವಂತ, ಸುಂದರ. ಇವನನ್ನು ಸೋಮನ ಪುತ್ರಿಯು ಪತಿಯನ್ನಾಗಿ ವರಿಸಿದ್ದಾಳೆ. ರೂಪದಲ್ಲಿ ಲಕ್ಷ್ಮಿಗೆ ಎರಡನೆಯವಳಾಗಿರುವ ಅವಳನ್ನು ಜ್ಯೋತ್ಸ್ನಾಕಾಲೀ ಎಂದು ಕರೆಯುತ್ತಾರೆ. ಹಿಂದೆ ಅವಳು ಅದಿತಿಯ ಶ್ರೇಷ್ಠ ಪುತ್ರನನ್ನು ಪತಿಯನ್ನಾಗಿ ವರಿಸಿದ್ದಳೆಂದು ಕೇಳಿದ್ದೇವೆ. ಎಲ್ಲೆಡೆಯೂ ಕಾಂಚನದಿಂದ ಕೂಡಿದ ವರುಣನ ಭವನವನ್ನು ನೋಡು! ಸುರಪತಿಯ ಸಖನಲ್ಲಿರುವ ಸುರೆಯನ್ನು ಕುಡಿದು ಸುರರು ಸುರತ್ವವನ್ನು ಪಡೆದರು. ನೀನು ನೋಡುತ್ತಿರುವ ಈ ದೀಪ್ಯಮಾನ ಆಯುಧಗಳೆಲ್ಲವೂ ರಾಜ್ಯವನ್ನು ಕಳೆದುಕೊಂಡ ದೈತ್ಯರಿಗೆ ಸೇರಿದವು. ಈ ಆಯುಧಗಳು ಅಕ್ಷಯವಾದವುಗಳು: ಶತ್ರುಗಳ ಮೇಲೆ ಪ್ರಯೋಗಿಸುವವನ ಕೈಗೇ ಹಿಂದಿರುಗಿ ಬಂದು ಸೇರುತ್ತವೆ. ಸುರರು ಗೆದ್ದಿರುವ ಈ ಆಯುಧವನ್ನು

ಪ್ರಯೋಗಿಸಲು ಅನುಭವವಿರಬೇಕಾಗುತ್ತದೆ. ಹಿಂದೆ ಇಲ್ಲಿ ದಿವ್ಯಪ್ರಹರಣ ಮಾಡುವ ಹಲವಾರು ರಾಕ್ಷಸ ಜಾತಿಯ ಮತ್ತು ಭೂತಜಾತಿಯವರು ವಾಸಿಸುತ್ತಿದ್ದರು. ಅವರು ದೇವತೆಗಳಿಂದ ಜಯಿಸಲ್ಪಟ್ಟರು.

ಅಲ್ಲಿ ವರುಣ ಸರೋವರದಲ್ಲಿ ಚೆನ್ನಾಗಿ ಉರಿಯುತ್ತಿರುವ ಅಗ್ನಿಯಿದೆ. ಹೊಗೆಯಿಲ್ಲದ ಬೆಂಕಿಯಿಂದ ಆವೃತವಾಗಿರುವ ಇದು ವಿಷ್ಣುವಿನ ಚಕ್ರ. ಈ ಚಾಪವು ಲೋಕಸಂಹಾರಸಂಭೃತ ಗಾಂಡೀವವು. ಈ ಗಾಂಡೀವ ಧನುಸ್ಸನ್ನು ದೇವತೆಗಳು ನಿತ್ಯವೂ ರಕ್ಷಿಸುತ್ತಾರೆ. ಕಾಲವು ಬಂದಾಗ ಇದು ಸಹಸ್ರಶತ ಸಂಖ್ಯೆಗಳಲ್ಲಿ ಪ್ರಾಣಗಳನ್ನು ಹುಟ್ಟಿಸುತ್ತದೆ ಮತ್ತು ಧರಿಸುತ್ತದೆ. ಇದು ರಾಕ್ಷಸರ ಪಕ್ಷವನ್ನು ಸೇರಿದ ಅಶಾಸನೀಯ ರಾಜರನ್ನು ನಿಯಂತ್ರಿಸಲು ಇರುವ, ಬ್ರಹ್ಮವಾದಿನಿ ಬ್ರಹ್ಮನು ಸೃಷ್ಟಿಸಿದ ಪ್ರಥಮ ದಂಡ. ಇದು ಶಕ್ರನಿಂದ ಭಾಷಿತವಾದ, ನರೇಂದ್ರರ ಮಹಾ ಶಸ್ತ್ರ. ಇದು ಮಹೋದಯ ಸಲಿಲರಾಜನ ಪುತ್ರರನ್ನು ಧರಿಸುತ್ತದೆ. ಸಲಿಲರಾಜನ ಛತ್ರಗೃಹದಲ್ಲಿರುವ ಈ ಛತ್ರವು ಮೋಡದಂತೆ ಎಲ್ಲ ಕಡೆಯಿಂದಲೂ ಶೀತಲ ಮಳೆಯನ್ನು ಸುರಿಸುತ್ತದೆ. ಈ ಛತ್ರದಿಂದ ಬೀಳುವ ನೀರು ಚಂದ್ರನಂತೆ ನಿರ್ಮಲವಾಗಿರುತ್ತದೆ. ಆದರೆ ಕತ್ತಲೆಯಿಂದ ತುಂಬಿದ ಇದು ಯಾರಿಗೂ ಕಾಣಿಸುವುದಿಲ್ಲ. ಇಲ್ಲಿ ಇನ್ನೂ ಇತರ ಅದ್ಭುತ ರೂಪಗಳನ್ನು ನೋಡಬಹುದು. ಆದರೆ ಅದು ನಿನ್ನ

ಕಾರ್ಯದಲ್ಲಿ ಅಡ್ಡಿಯನ್ನು ತರುತ್ತವೆ. ಆದುದರಿಂದ ಬೇಗನೇ ಮುಂದುವರೆಯೋಣ!

ಇಲ್ಲಿ, ನಾಗಲೋಕದ ನಾಭಿಸ್ಥಳದಲ್ಲಿ ಪಾತಾಲವೆಂದು ವಿಖ್ಯಾತ ದೈತ್ಯ-ದಾನವ ಸೇವಿತ ಪುರವಿದೆ. ನೀರಿನ ಪ್ರವಾಹದಿಂದ ಎಳೆದು ತರಲ್ಪಟ್ಟ ಭೂಮಿಯ ಜೀವಿಗಳು ಭಯಪೀಡಿತರಾಗಿ ಜೋರಾಗಿ ಚೀರುತ್ತಾ ಇದನ್ನು ಪ್ರವೇಶಿಸುತ್ತವೆ. ನೀರನ್ನೇ ಉಣ್ಣುವ ಅಸುರೋಗ್ನಿಯು ಸತತವೂ ಇಲ್ಲಿ ಉರಿಯುತ್ತಿರುತ್ತದೆ. ಧೃತಾತ್ಮರ ವ್ಯಾಪಾರದಿಂದ ನಿಬದ್ಧವಾಗಿ ಚಲಿಸದೇ ನಿಂತಿದೆ. ಇಲ್ಲಿಯೇ ಸುರರು ಶತ್ರುಗಳನ್ನು ಸಂಹರಿಸಿ ಅಮೃತವನ್ನು ಕುಡಿದು, ಉಳಿದುದನ್ನು ಇಟ್ಟರು. ಇಲ್ಲಿಯೇ ಚಂದ್ರನ ಹಾನಿ-ವೃದ್ಧಿಗಳು ತೋರುತ್ತವೆ. ಅಲ್ಲಿಯೇ ದಿವ್ಯ ಹಯಶಿರನು ಪರ್ವ ಪರ್ವಗಳ ಕಾಲಗಳಲ್ಲಿ ಮೇಲೆದ್ದು ಜಗತ್ತನ್ನು ಸುವರ್ಣ ಪ್ರಕಾಶದಿಂದ ಮತ್ತು ವೇದಘೋಷದಿಂದ ತುಂಬಿಸುತ್ತಾನೆ. ಎಲ್ಲ ಜಲಮೂರ್ತಯಗಳು ಇಲ್ಲಿ ನೀರನ್ನು ಸುರಿಸುವುದರಿಂದ ಈ ಉತ್ತಮ ಪುರವನ್ನು ಪಾತಾಲವೆಂದು ಕರೆಯುತ್ತಾರೆ. ಇಲ್ಲಿಂದಲೇ ಜಗತ್ತಿನ ಹಿತಕ್ಕಾಗಿ ಐರಾವತವು ನೀರನ್ನು ಹಿಡಿದು ಮೇಘಗಳ ಮೇಲೆ ಚೆಲ್ಲುತ್ತದೆ. ಅದನ್ನೇ ಮಹೇಂದ್ರನು ಶೀತಲ ಮಳೆಯಾಗಿ ಸುರಿಸುತ್ತಾನೆ. ಅಲ್ಲಿ ನಾನಾ ವಿಧದ, ಆಕಾರದ, ತಿಮಿ ಮೊದಲಾದ ಜಲಚಾರಿಣಿಗಳು

ಸೋಮಪ್ರಭೆಯನ್ನು ಕುಡಿದು ನೀರಿನಲ್ಲಿ ವಾಸಿಸುತ್ತವೆ. ಅಲ್ಲಿ ಪಾತಾಲತಲದಲ್ಲಿ ವಾಸಿಸುವವು ಸೂರ್ಯನ ಕಿರಣಗಳಿಂದ ಸೀಳಿ ಹಗಲಿನಲ್ಲಿ ಸಾಯುತ್ತವೆ ಮತ್ತು ಅವು ರಾತ್ರಿಯಲ್ಲಿ ಪುನಃ ಜೀವಿಸುತ್ತವೆ. ನಿತ್ಯವೂ ರಾತ್ರಿಯಲ್ಲಿ ಉದಯಿಸುವ ಚಂದ್ರನು ತನ್ನ ರಶ್ಮಿಗಳಿಂದ ಅಮೃತವನ್ನು ಮುಟ್ಟಿ ದೇಹಿಗಳನ್ನು ಮುಟ್ಟಿ ಅವುಗಳನ್ನು ಜೀವಂತಗೊಳಿಸುತ್ತಾನೆ. ಅಲ್ಲಿ ಅಧರ್ಮನಿರತ ದೈತ್ಯರು ಕಾಲನಿಂದ ಕಟ್ಟಲ್ಪಟ್ಟು ಪೀಡಿತರಾಗಿ, ವಾಸವನಿಂದ ಶ್ರೀಯನ್ನು ಕಳೆದುಕೊಂಡು ವಾಸಿಸುತ್ತಿದ್ದಾರೆ. ಅಲ್ಲಿ ಸರ್ವಭೂತಮಹೇಶ್ವರ ಭೂತಪತಿಯು ಸರ್ವಭೂತಗಳಿಗಾಗಿ ಉತ್ತಮ ತಪಸ್ಸನ್ನು ತಪಿಸಿದ್ದನು. ಅಲ್ಲಿ ಸ್ವಾಧ್ಯಾಯದಿಂದ ಬಡಕಲಾಗಿ ಪ್ರಾಣಗಳನ್ನು ತೊರೆದು ಸ್ವರ್ಗಗಳನ್ನು ಗೆದ್ದ ಗೋವ್ರತಿ ವಿಪ್ರ ಮಹರ್ಷಿಗಳು ವಾಸಿಸುತ್ತಾರೆ. ಎಲ್ಲಿರುವನೋ ಅಲ್ಲಿಯೇ ನಿತ್ಯವೂ ಮಲಗುವ, ಇತರರು ನೀಡಿದುದನ್ನು ತಿನ್ನುವ, ಇತರರು ನೀಡಿದುದನ್ನು ಉಟ್ಟುಕೊಳ್ಳುವವನನ್ನು ಗೋವ್ರತ ಎಂದು ಹೇಳುತ್ತಾರೆ.

ಸುಪ್ರತೀಕನ ವಂಶದಲ್ಲಿ ವಾರಣಸತ್ತಮರಾದ ನಾಗರಾಜ ಐರಾವತ, ವಾಮನ, ಕುಮುದ, ಮತ್ತು ಅಂಜನರು ಜನಿಸಿದರು. ಇಲ್ಲಿ ಯಾರಾದರೂ ನಿನಗಿಷ್ಟನಾದ ಗುಣವಂತ ವರನಿದ್ದಾನೆಯೋ ನೋಡು. ಅವನಲ್ಲಿಗೆ ಹೋಗಿ ನಿನ್ನ ಮಗಳನ್ನು ವರಿಸುವಂತೆ ಪ್ರಯತ್ನಿಸೋಣ. ಈ ನೀರಿನಲ್ಲಿ

ಶ್ರೀಯಿಂದ ಬೆಳಗುತ್ತಿರುವ ಅಂಡವನ್ನು ನೋಡು! ಸೃಷ್ಟಿಯ ಸಮಯದಿಂದ ಇದು ಇಲ್ಲಿದೆ. ಒಡೆಯುವುದೂ ಇಲ್ಲ, ಚಲಿಸುವುದೂ ಇಲ್ಲ. ಇದರ ಹುಟ್ಟಿನ ಅಥವಾ ಸ್ವಭಾವದ ಕುರಿತು ಮಾತನಾಡಿದ್ದುದನ್ನು ನಾನು ಕೇಳಲಿಲ್ಲ. ಇದರ ತಂದೆ-ತಾಯಿಯರನ್ನು ಕೂಡ ಯಾರೂ ಅರಿಯರು. ಅಂತಕಾಲವು ಬಂದಾಗ ಇದರಿಂದ ಮಹಾನ್ ಅಗ್ನಿಯು ಹೊರಹೊಮ್ಮಿ, ಮೂರು ಲೋಕಗಳಲ್ಲಿರುವ ಸರ್ವ ಸಚರಾಚರಗಳನ್ನೂ ಸುಡುತ್ತದೆ ಎಂದು ಕೇಳಿದ್ದೇವೆ."

ನಾರದನ ಮಾತುಗಳನ್ನು ಕೇಳಿದ ಮಾತಲಿಯು

"ಇಲ್ಲಿ ನನಗೆ ಯಾರೂ ಇಷ್ಟವಾಗಲಿಲ್ಲ. ಬೇರೆ ಎಲ್ಲಿಯಾದರೂ ಬೇಗನೇ ಹೋಗೋಣ!"

ಎಂದನು. ನಾರದನು ಹೇಳಿದನು:

"ಇದು ಪುರಗಳಲ್ಲಿಯೇ ಶ್ರೇಷ್ಠವೆನಿಸಿಕೊಂಡಿರುವ, ದೈತ್ಯ-ದಾನವರ, ನೂರಾರು ಮಾಯಾವಿಚಾರಗಳನ್ನುಳ್ಳ ಮಹಾ ಹಿರಣ್ಯಪುರ. ಪಾತಲತಲದಲ್ಲಿರುವ ಇದನ್ನು ಮಯನು ಮನಸ್ಸಿನಲ್ಲಿಯೇ ರಚಿಸಿದನು ಮತ್ತು ವಿಶ್ವಕರ್ಮನು ತುಂಬಾ ಪ್ರಯತ್ನಪಟ್ಟು ನಿರ್ಮಿಸಿದನು. ಹಿಂದೆ ವರಗಳನ್ನು ಪಡೆದ, ಸಹಸ್ರಾರು ಮಾಯೆಗಳನ್ನು ಮಾಡುವ, ಮಹೌಜಸ, ಶೂರ ದಾನವರು ಅಲ್ಲಿ ವಾಸಿಸುತ್ತಾರೆ. ಇದನ್ನು ಶಕ್ರನಿಂದಾಗಲೀ,

ಇತರರಿಂದಾಗಲೀ - ವರುಣ, ಯಮ, ಮತ್ತು ಧನದನಿಂದಾಗಲೀ - ವಶಪಡೆಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಿ ವಿಷ್ಣುಪದದಿಂದ ಉದ್ಭವಿಸಿದ ಕಾಲಖಂಜ ಅಸುರರೂ, ಬ್ರಹ್ಮವೇದದಿಂದ ಉದ್ಭವಿಸಿದ ನೃರ್ರೃತಾ ಯಾತುಧಾನರೂ ವಾಸಿಸುತ್ತಾರೆ. ಅವರು ಕೋರೆದಾಡೆಗಳುಳ್ಳವರು, ಭೀಮರೂಪರು, ಮಾಯಾವಿಗಳು, ವೀರ್ಯಸಂಪನ್ನರು ಮತ್ತು ತಮ್ಮನ್ನು ತಾವೇ ರಕ್ಷಿಸಿಕೊಂಡಿರುವವರು. ಇವರಲ್ಲದೇ ಯುದ್ಧದುರ್ಮದ ನಿವಾತಕವಚರೆಂಬ ದಾನವರೂ ನೆಲೆಸಿದ್ದಾರೆ. ಶಕ್ರನೂ ಕೂಡ ಹೇಗೆ ಇವರನ್ನು ಬಾಧಿಸಲು ಶಕ್ಯನಾಗಿಲ್ಲ ಎನ್ನುವುದು ನಿನಗೆ ತಿಳಿದೇ ಇದೆ. ಬಹಳಷ್ಟು ಬಾರಿ ನೀನು ನಿನ್ನ ಪುತ್ರ ಗೋಮುಖನೊಡನೆ ಮತ್ತು ಶಚೀಪತಿ ದೇವರಾಜನು ಅವನು ಪುತ್ರನೊಡನೆ ಅವರೊಂದಿಗೆ ನಿರ್ಭಗ್ನನಾಗಿ ಹಿಂದಿರುಗಬೇಕಾಗಿತ್ತು. ಚಿನ್ನ-ಬೆಳ್ಳಿಗಳಿಂದ ಮಾಡಲ್ಪಟ್ಟ, ವೈಡೂರ್ಯದ ಹಸಿರಿನಿಂದ, ಬಣ್ಣಬಣ್ಣದ ಪ್ರವಾಲಗಳಿಂದ, ಅರ್ಕಸ್ಫಟಿಕದ ಹೊಳಪಿನಿಂದ, ವಜ್ರಸಾರದಿಂದ ಬೆಳಗುತ್ತಿರುವ, ವಿಧಿಯುಕ್ತವಾಗಿ ಕಟ್ಟಲ್ಪಟ್ಟ ಅವರ ಮನೆಗಳನ್ನು ನೋಡು! ಪುನಃ ನಾಗಗಳಿಂದ ತುಂಬಿದ ಆ ರಾಜಗೃಹಗಳು ತಾರಕ ಶೈಲಗಳಂತೆ ತೋರುತ್ತಿವೆ. ಆ ಮನೆಗಳ ನಿಬಿಡಗಳು ಸೂರ್ಯನಂತೆ ಹೊಳೆಯುತ್ತಿವೆ, ವಿಚಿತ್ರ

ಮಣಿಜಾಲಗಳಿಂದ ಉರಿಯುತ್ತಿರುವ ಅಗ್ನಿಯಂತೆ ತೋರುತ್ತಿವೆ. ಇವುಗಳ ರೂಪವನ್ನು ಮತ್ತು ದ್ರವ್ಯಗಳನ್ನು ನಿರ್ದಿಷ್ಟಗೊಳಿಸಲು ಶಕ್ಯವಿಲ್ಲ. ಅವುಗಳನ್ನು ಅತೀವ ಗುಣಗಳಿಂದ ಸಿದ್ಧಪಡಿಸಿದ್ದಾರೆ. ದೈತ್ಯರ ಕ್ರೀಡಾಂಗಣಗಳನ್ನು ನೋಡು, ಹಾಗೆಯೇ ಅವರ ಉತ್ತಮ ಹಾಸಿಗೆಗಳನ್ನು, ರತ್ನಗಳಿಂದ ಮಾಡಿದ ಮಹಾಬೆಲೆಬಾಳುವ ಪಾತ್ರೆಗಳು, ಆಸನಗಳನ್ನೂ ನೋಡು! ಮೋಡಗಳಂತೆ ತೋರುವ ಅವರ ಗುಡ್ಡಬೆಟ್ಟಗಳನ್ನು ನೋಡು, ನೀರಿನ ಆ ಕಾರಂಜಿಗಳನ್ನು, ಬೇಕಾದ ಪುಷ್ಪ ಫಲಗಳನ್ನು ನೀಡುವ, ಬೇಕಾದಲ್ಲಿಗೆ ಚಲಿಸಬಲ್ಲ ಮರಗಳನ್ನು ನೋಡು! ಇಲ್ಲಿ ಯಾರದರೂ ವರನು ಇಷ್ಟವಾದರೆ ಪಡೆಯಬಹುದು. ಅಥವಾ ನಿನಗೆ ಇಷ್ಟವಾದರೆ ಬೇರೆ ಯಾವ ಕಡೆಯಾದರೂ ಹೋಗೋಣ!"

ಹೀಗೆ ಹೇಳಲು ಮಾತಲಿಯು ಉತ್ತರಿಸಿದನು:

"ದೇವರ್ಷೇ! ತ್ರಿದಿವೌಕಸರಿಗೆ ವಿಪ್ರಿಯ ಕಾರ್ಯವನ್ನೆಸುಗುವುದು ನನಗೆ ಬೇಡ. ಭ್ರಾತರಾಗಿದ್ದರೂ ದೇವ-ದಾನವರು ನಿತ್ಯವೂ ವೈರವನ್ನು ಸಾಧಿಸುವುದರಲ್ಲಿ ತೊಡಗಿದ್ದಾರೆ. ಹೀಗಿರುವಾಗ ನಾನು ಹೇಗೆ ತಾನೇ ಇವರೊಂದಿಗೆ ಸಂಬಂಧವನ್ನು ಬೆಳೆಸಲು ಇಚ್ಛಿಸಿಯೇನು? ಬೇರೆ ಕಡೆ ಹೋಗುವುದು ಒಳ್ಳೆಯದು. ದಾನವರಲ್ಲಿ

ಹುಡುಕಲು ನಾನು ಅರ್ಹನಲ್ಲ. ನಿನ್ನ ಮನಸ್ಸು ಕಲಹವನ್ನು ಹುಟ್ಟಿಸುವುದರಲ್ಲಿದೆ ಎಂದು ನನಗೆ ತಿಳಿದಿದೆ.”

ನಾರದನು ಹೇಳಿದನು:

“ಈ ಲೋಕವು ಪನ್ನಗಗಳನ್ನು ತಿನ್ನುವ ಸುಪರ್ಣ ಪಕ್ಷಿಗಳದ್ದು. ಅವರಿಗೆ ವಿಕ್ರಮವನ್ನು ತೋರಿಸುವಲ್ಲಿ, ಸಂಚಾರದಲ್ಲಿ ಮತ್ತು ಭಾರವನ್ನು ಹೊರುವುದರಲ್ಲಿ ಪರಿಶ್ರಮವಾಗುವುದೆಂದೇ ಇಲ್ಲ. ಈ ಕುಲವು ವೈನತೇಯನ ಆರು ಪುತ್ರರಿಂದ ನಡೆದಿದೆ: ಸುಮುಖ, ಸುನಾಮ, ಸುನೇತ್ರ, ಸುವರ್ಚಸ, ಸುರೂಪ ಮತ್ತು ಪಕ್ಷಿರಾಜ ಸುಬಲ. ವಿನತೆಯ ಕುಲಕತೃಗಳಾಗಿ ಹುಟ್ಟಿ ಈ ಪಕ್ಷಿರಾಜರು ತಮ್ಮ ಜಾತಿಯನ್ನು ಸಹಸ್ರಾರು ನೂರಾರು ಸಂಖ್ಯೆಗಳಾಗಿ ವರ್ಧಿಸಿದರು. ಹಾಗೆ ವಿವಿಧ ಜಾತಿಗಳ ಕಶ್ಯಪನ ವಂಶವನ್ನು ವೃದ್ಧಿಸಿದರು. ಇವರೆಲ್ಲರೂ ಶ್ರೀಯಿಂದ ಕೂಡಿದವರು, ಎಲ್ಲರೂ ಶ್ರೀವತ್ಸಲಕ್ಷಣರು, ಎಲ್ಲರೂ ಶ್ರೀಯನ್ನು ಬಯಸುವವರು ಮತ್ತು ಅತಿ ಉನ್ನತ ಭಾರವನ್ನು ಹೊರಬಲ್ಲವರು. ಕರ್ಮದಲ್ಲಿ ಅವರು ಕ್ಷತ್ರಿಯರೆನಿಸಿಕೊಂಡರೂ ಕರುಣೆಯಿಲ್ಲದೇ ನಾಗಗಳನ್ನು ಭೋಜಿಸುತ್ತಾರೆ. ತಮ್ಮ ದಾಯಾದಿಗಳ ನಾಶಕ್ಕೆ ಕತೃಗಳಾಗಿರುವುದರಿಂದ ಅವರಿಗೆ ಬ್ರಾಹ್ಮಣ್ಯವು ದೊರೆಯುವುದಿಲ್ಲ. ಇವರಲ್ಲಿ ಪ್ರಧಾನರಾದವರ ಹೆಸರುಗಳನ್ನು ಹೇಳುತ್ತೇನೆ. ಕೇಳು. ವಿಷ್ಣುವಿನ ಪರಿಗ್ರಹವನ್ನು

ಪಡೆದಿದೆಯೆಂದು ಈ ಕುಲವು ಶ್ಲಾಘನೀಯವಾಗಿದೆ. ವಿಷ್ಣುವೇ ಇವರ ದೇವತೆ. ವಿಷ್ಣುವೇ ಇವರ ಪರಾಯಣ. ಅವರ ಹೃದಯದಲ್ಲಿ ಸದಾ ವಿಷ್ಣುವಿರುತ್ತಾನೆ. ವಿಷ್ಣುವೇ ಇವರ ಸದಾ ಗತಿ. ಸುವರ್ಣಚೂಡ, ನಾಗಾಶೀ, ದಾರುಣ, ಚಂಡತುಂಡಕ, ಅನಲ, ಅನಿಲ, ವಿಶಾಲಾಕ್ಷ, ಕುಂಡಲೀ, ಕಾಶ್ಯಪಿ. ಧ್ವಜವಿಷ್ಕಂಭ, ವೈನತೇಯ, ವಾಮನ, ವಾತವೇಗ, ದಿಶಾಚಕ್ಷು, ನಿಮೇಷ, ನಿಮಿಷ, ತ್ರಿವಾರ, ಸಪ್ತವಾರ, ವಾಲ್ಮೀಕಿ, ದ್ವೀಪಕ, ದೈತ್ಯದ್ವೀಪ, ಸರಿದ್ವೀಪ, ಸರಸ, ಪದ್ಮಕೇಸರ, ಸುಮುಖ, ಸುಖಕೇತು, ಚಿತ್ರಬರ್ಹ, ಅನಘ, ಮೇಘಕೃತ್, ಕುಮುದ, ದಕ್ಷ, ಸರ್ಪಾಂತ, ಸೋಮಭೋಜನ, ಗುರುಭಾರ, ಕಪೋತ, ಸೂರ್ಯನೇತ್ರ, ಚಿರಾಂತಕ, ವಿಷ್ಣುಧನ್ವಾ, ಕುಮಾರ, ಪರಿಬರ್ಹ, ಹರಿ, ಸುಸ್ವರ, ಮಧುಪರ್ಕ, ಹೇಮವರ್ಣ, ಮಲಯ, ಮಾತರಿ, ನಿಶಾಕರ, ದಿವಾಕರ. ನಾನು ಹೇಳಿದ ಗರುಡನ ಈ ಮಕ್ಕಳು ಇದೇ ಪ್ರದೇಶದಲ್ಲಿ ವಾಸಿಸುತ್ತಾರೆ. ಯಸಸ್ಸು, ಕೀರ್ತಿ ಮತ್ತು ಶಕ್ತಿಯಲ್ಲಿ ಪ್ರಧಾನರಾಗಿರುವವರ ಹೆಸರುಗಳನ್ನು ಮಾತ್ರ ಹೇಳಿದ್ದೇನೆ. ಇಲ್ಲಿ ನಿನಗೆ ಯಾರೂ ಇಷ್ಟವಾಗದೇ ಇದ್ದರೆ ಬಾ ಹೋಗೋಣ. ನಿನ್ನನ್ನು ಇನ್ನೊಂದು ದೇಶಕ್ಕೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ನಿನ್ನ ಮಗಳಿಗೆ ಇಷ್ಟವಾಗುವ ವರನು ಸಿಗಬಹುದು.

ಇದು ಪೃಥಿವಿಯ ಕೆಳಗಿರುವ ರಸಾತಲವೆಂಬ ಹೆಸರಿನ

ಏಳನೆಯ ಲೋಕ. ಇಲ್ಲಿ ಅಮೃತಸಂಭವೆ ಗೋವುಗಳ ಮಾತೆ ಸುರಭಿಯು ವಾಸಿಸುತ್ತಾಳೆ. ಇವಳು ಸತತವೂ ಭೂಮಿಯಲ್ಲಿ ಸಾರಸಂಭವೆನಿಸಿದ, ಆರು ರಸಗಳಲ್ಲಿ ಒಂದೇ ಅನುತ್ತಮ ರಸಸಾರವಾದ ಹಾಲನ್ನು ಸುರಿಸುತ್ತಾಳೆ. ಈ ಅನಿಂದಿತೆಯು ಹಿಂದೆ ಅಮೃತದಿಂದ ಸಂತೃಪ್ತನಾಗಿ ಸಾರವನ್ನು ಕಕ್ಕಿದ ಪಿತಾಮಹನ ಬಾಯಿಯಿಂದ ಹೊರಬಿದ್ದಳು. ಅವಳ ಹಾಲಿನ ಧಾರೆಯು ಭೂಮಿಯ ಮೇಲೆ ಬೀಳಲು ಪವಿತ್ರವೂ, ಪರಮ ಉತ್ತಮವೂ ಆದ ಕ್ಷೀರನಿಧಿ ಸರೋವರವು ಮಾಡಲ್ಪಟ್ಟಿತು. ಅದರ ದಡವು ಸುತ್ತಲೂ ಹಾಲಿನ ನೊರೆಯಿಂದ ಕೂಡಿದೆ. ಅಲ್ಲಿ ವಾಸಿಸುವ ಮುನಿಸತ್ತಮರು ಆ ಹಾಲಿನ ನೊರೆಯನ್ನು ಕುಡಿಯುತ್ತಾರೆ. ಅವರನ್ನು ಫೇನಪಾ ಎಂಬ ಹೆಸರಿನಿಂದ ಕರೆಯುತ್ತಾರೆ. ಏಕೆಂದರೆ ಅವರು ಈ ಹಾಲಿನ ನೊರೆಯನ್ನು ಕುಡಿದು ಮಾತ್ರ ಜೀವಿಸುತ್ತಾರೆ. ಉಗ್ರ ತಪಸ್ಸಿನಲ್ಲಿ ತೊಡಗಿರುವ ಇವರಿಗೆ ದೇವತೆಗಳೂ ಭಯಪಡುತ್ತಾರೆ. ಅವಳಿಗೆ ಎಲ್ಲ ದಿಕ್ಕುಗಳಲ್ಲಿಯೂ ವಾಸಿಸುವ, ದಿಶಾಪಾಲರು ಇದ್ದಾರೆ. ಅವರು ದಿಕ್ಕುಗಳನ್ನು ಧರಿಸುತ್ತಾರೆ ಎಂದು ಕೇಳಿದ್ದೇವೆ. ಸುರೂಪ ಎಂಬ ಹೆಸರಿನ ಸೌರಭಿಯು ಪೂರ್ವದಿಕ್ಕನ್ನು ಬೆಂಬಲಿಸುತ್ತಾಳೆ, ಹಂಸಕ ಎಂಬ ಹೆಸರಿನವಳು ಇನ್ನೊಂದು ದಿಕ್ಕು ದಕ್ಷಿಣವನ್ನು ಬೆಂಬಲಿಸುತ್ತಾಳೆ. ಮಹಾನುಭಾವೆ ವಿಶ್ವರೂಪಿ ಸುಭದ್ರೆಯು

ವರುಣನ ಪಶ್ಚಿಮ ದಿಕ್ಕನ್ನು ಬೆಂಬಲಿಸುತ್ತಾಳೆ. ಸರ್ವಕಾಮದುಘಾ ಎಂಬ ಹೆಸರಿನ ಧೇನುವು ಧರ್ಮಯುಕ್ತವಾದ. ಸಂಪತ್ತಿನ ಒಡೆಯ ಕುಬೇರನದೆಂದು ಸೂಚಿತಗೊಂಡ ಉತ್ತರ ದಿಕ್ಕನ್ನು ಬೆಂಬಲಿಸುತ್ತಾಳೆ. ಇವರ ಹಾಲಿನಿಂದ ಮಿಶ್ರಿತವಾದ ಕ್ಷೀರಸಾಗರವನ್ನು ಅಸುರರೊಂದಿಗೆ ಕೂಡಿ ದೇವತೆಗಳು ಮಂದರವನ್ನು ಕಡಗೋಲನ್ನಾಗಿ ಮಾಡಿ ಕಡೆದರು. ಅದರಿಂದ ವಾರುಣೀ ಲಕ್ಷ್ಮೀ, ಅಮೃತ, ಉಚ್ಛೈಃಶ್ರವಸ್, ಅಶ್ವರಾಜ, ಮತ್ತು ಮಣಿರತ್ನ ಕೌಸ್ತುಭವು ಹುಟ್ಟಿದವು. ಸುರಭಿಯು ಸುರಿಸುವ ಹಾಲು ಸುಧೆಯನ್ನು ಕುಡಿಯುವವರಿಗೆ ಸುಧೆಯಾಗುತ್ತದೆ, ಸ್ವಧಾವನ್ನು ಕುಡಿಯುವವರಿಗೆ ಸ್ವಧಾ ಆಗುತ್ತದೆ, ಅಮೃತವನ್ನು ಕುಡಿಯುವವರಿಗೆ ಅಮೃತವಾಗುತ್ತದೆ. ರಸಾತಲವಾಸಿಗಳ ಕುರಿತಾದ ಒಂದು ಪುರಾತನ ಗೀತೆಯೊಂದಿದೆ. ಅದನ್ನು ಮನುಷ್ಯರ ಲೋಕದಲ್ಲಿಯೇ ಕೇಳಿಬರುತ್ತದೆ. ರಸಾತಲದಲ್ಲಿ ವಾಸಿಸುವವರಿಗೆ ಇರುವಷ್ಟು ಸುಖವು ನಾಗಲೋಕದಲ್ಲಿಲ್ಲ, ಸ್ವರ್ಗದಲ್ಲಿಲ್ಲ, ವಿಮಾನದಲ್ಲಿಲ್ಲ ಮತ್ತು ತ್ರಿವಿಷ್ಟಪದಲ್ಲಿಲ್ಲ.

ಇದು ವಾಸುಕಿಯಿಂದ ಪಾಲಿಸಲ್ಪಟ್ಟ ಭೋಗವತೀ ಎಂಬ ಹೆಸರಿನ ಪುರಿ. ಇದು ದೇವರಾಜನ ಅಮರಾವತಿಯಂತಿದೆ. ಮಹಾ ತಪಸ್ಸಿನ ಪ್ರಭಾವದಿಂದ ಸದಾ ಮಹಿಯನ್ನು ಎತ್ತಿಹಿಡಿದಿರುವ ಲೋಕಮುಖ್ಯ ಶೇಷನಾಗನು ಇಲ್ಲಿದ್ದಾನೆ.

ಶ್ವೇತಪರ್ವತದ ಆಕಾರದಲ್ಲಿರುವ, ನಾನಾವಿಧ ವಿಭೂಷಣನಾದ ಆ ಮಹಾಬಲನು ಸಹಸ್ರ ಮುಖಗಳನ್ನೂ ಜ್ವಲಿಸುವ ನಾಲಿಗೆಗಳನ್ನೂ ಧರಿಸಿದ್ದಾನೆ. ಇಲ್ಲಿ ನಾನಾವಿಧದ, ಆಕಾರಗಳ, ನಾನಾವಿಧ ವಿಭೂಷಿತರಾದ ನಾಗಿಣಿ ಸುರಸೆಯ ಮಕ್ಕಳು ನಿಶ್ಚಿಂತರಾಗಿ ವಾಸಿಸುತ್ತಿದ್ದಾರೆ. ಅವರೆಲ್ಲರೂ ಮಣಿ-ಸ್ವಸ್ತಿಕ-ಚಕ್ರದ ಚಿಹ್ನೆಗಳನ್ನುಳ್ಳವರು, ಕಮಂಡಲುಕ ಲಕ್ಷಣರು, ಸಹಸ್ರಸಂಖ್ಯೆಗಳಲ್ಲಿದ್ದಾರೆ, ಬಲಶಾಲಿಗಳು ಮತ್ತು ಸ್ವಭಾವತಃ ರೌದ್ರರು. ಕೆಲವರಿಗೆ ಸಾವಿರತಲೆಗಳಿವೆ, ಕೆಲವರಿಗೆ ಐದು ಮುಖಗಳಿವೆ, ಕೆಲವರಿಗೆ ನೂರು ಶೀರ್ಷಗಳಿವೆ, ಇನ್ನು ಕೆಲವರಿಗೆ ಮೂರು ಶಿರಗಳಿವೆ. ಕೆಲವರಿಗೆ ಹತ್ತು ತಲೆಗಳಿದ್ದರೆ ಕೆಲವರಿಗೆ ಏಳು ಮುಖಗಳಿವೆ. ಆ ಮಹಾಭೋಗರು ಭೂಮಿಯಲ್ಲಿ ಪಸರಿಸುವ ಪರ್ವತಂತೆ ಮಹಾಕಾಯದವರು. ಅವರು ಸಹಸ್ರ, ಪ್ರಯುತ, ಅರ್ಬುದ ಸಂಖ್ಯೆಯಲ್ಲಿದ್ದಾರೆ. ಒಂದೇ ವಂಶದ ನಾಗಗಳು ಅನೇಕ. ಅವರಲ್ಲಿ ಶ್ರೇಷ್ಠರಾದವರನ್ನು ನನ್ನಿಂದ ಕೇಳು. ವಾಸುಕಿ, ತಕ್ಷಕ, ಕರ್ಕೋಟಕ, ಧನಂಜಯ, ಕಾಲೀಯ, ನಹುಷ, ಕಂಬಲ, ಅಶ್ವತರ, ಬಾಹ್ಯಕುಂಡ, ಮಣಿನಾಗ, ಅಪೂರಣ, ಖಗ, ವಾಮನ, ಶೈಲಪತ್ರ, ಕುಕುರ, ಕುಕುಣ, ಆರ್ಯಕ, ನಂದಕ, ಕಲಶ, ಪೋತಕ, ಕೈಲಾಸಕ, ಪಿಂಜರಕ, ನಾಗ, ಐರಾವತ, ಸುಮನೋಮುಖ, ದಧಿಮುಖ, ಶಂಖ, ನಂದ, ಉಪನಂದಕ,

> ಆಪ್ತ, ಕೋಟಕನ, ಶಿಖೀ, ನಿಷ್ಠೂರಿಕ, ತಿತ್ತಿರಿ, ಹಸ್ತಿಭದ್ರ, ಕುಮುದ, ಮಾಲ್ಯಪಿಂಡಕ, ಇಬ್ಬರು ಪದ್ಮರು, ಪುಂಡರೀಕ, ಪುಷ್ಪ, ಮುದ್ಗರಪರ್ಣಕ, ಕರವೀರ, ಪೀಠರಕ, ಸಂವೃತ್ತ, ವೃತ್ತ, ಪಿಂಡಾರ, ಬಿಲ್ವಪತ್ರ, ಮೂಷಿಕಾದ, ಶಿರೀಷಕ, ದಿಲೀಪ, ಶಂಖಶೀರ್ಷ, ಜ್ಯೋತಿಷ್ಕ, ಅಪರಾಜಿತ, ಕೌರವ್ಯ, ಧೃತರಾಷ್ಟ್ರ, ಕುಮಾರ, ಕುಶಕ, ವಿರಜ, ಧಾರಣ, ಸುಬಾಹು, ಮುಖರ, ಜಯ, ಬಧಿರ, ಅಂಧ, ವಿಕುಂಡ, ವಿರಸ ಮತ್ತು ಸುರಸ. ಇವರು ಮತ್ತು ಇನ್ನೂ ಇತರ ಬಹಳಷ್ಟು ಕಶ್ಯಪನ ಮಕ್ಕಳ ಕುರಿತು ಕೇಳಿದ್ದೇವೆ. ಇಲ್ಲಿ ಯಾರಾದರೂ ವರನಾಗಿ ಇಷ್ಟವಾಗುತ್ತಾನೋ ನೋಡು!”

ಆಗ ಮಾತಲಿಯು ಅಲ್ಲಿದ್ದ ಓರ್ವನನ್ನು ಸತತವಾಗಿ ಏಕಾಗ್ರಚಿತ್ತನಾಗಿ ನೋಡುತ್ತಿದ್ದನು. ಅವನು ನಾರದನನ್ನು ಸಂತೋಷದಿಂದ ಕೇಳಿದನು:

> “ಕೌರವ್ಯ ಆರ್ಯಕನ ಎದುರು ನಿಂತಿರುವ ಈ ದ್ಯುತಿಮಾನ, ದರ್ಶನೀಯನು ಯಾರು? ಇವನು ಯಾವ ಕುಲನಂದನನು? ಇವನ ತಂದೆ ತಾಯಿಯರು ಯಾರು? ಇವನು ಯಾವ ನಾಗ ವಂಶದವನು? ಇವನು ಯಾವ ಮಹಾಕುಲದ ಬಾವುಟದಂತೆ ನಿಂತಿರುವನು? ಅವನ ಬುದ್ಧಿ, ಧೈರ್ಯ, ರೂಪ, ವಯಸ್ಸಿನಿಂದ ನನ್ನ ಮನಸ್ಸು ಹರ್ಷಿತವಾಗಿದೆ. ದೇವರ್ಷೇ! ಇವನೇ ಗುಣಕೇಶಿಗೆ ಪತಿ ಮತ್ತು ವರ.”

ಸುಮುಖನನ್ನು ನೋಡಿ ಮಾತಲಿಯು ಸಂತೋಷಗೊಂಡಿದುದನ್ನು ಕಂಡು ನಾರದನು ಅವನ ಮಹಾತ್ಮೆ, ಜನ್ಮ-ಕರ್ಮಗಳನ್ನು ನಿವೇದಿಸಿದನು:

> "ಐರಾವತ ಕುಲದಲ್ಲಿ ಜನಿಸಿದ ಈ ನಾಗರಾಜನ ಹೆಸರು ಸುಮುಖ. ಆರ್ಯಕನ ಮೊಮ್ಮಗ ಮತ್ತು ವಾಮನನ ಮಗಳ ಮಗ. ಮಾತಲೇ! ಇವನ ತಂದೆ ಚಿಕುರ ಎಂಬ ಹೆಸರಿನ ನಾಗ. ಸ್ವಲ್ಪವೇ ಸಮಯದ ಹಿಂದೆ ಅವನು ವೈನತೇಯನಿಂದ ಪಂಚತ್ವವನ್ನು ಪಡೆದನು."

ನಾರದನ ಮಾತನ್ನು ಕೇಳಿ ಮಾತಲಿಯು ಪ್ರೀತಮನಸ್ಕನಾಗಿ

> "ಈ ಭುಜಗೋತ್ತಮನು ನನ್ನ ಅಳಿಯನಾಗಬೇಕೆಂದು ಬಯಸುತ್ತೇನೆ. ಮುನೇ! ಅವನನ್ನೇ ಪಡೆಯಲು ಪ್ರಯತ್ನಿಸೋಣ. ಈ ನಾಗಪತಿಗೆ ನನ್ನ ಪ್ರಿಯ ಮಗಳನ್ನು ಕೊಡಲು ಬಯಸುತ್ತೇನೆ."

ಆಗ ನಾರದನು ಆರ್ಯಕನನ್ನುದ್ದೇಶಿಸಿ ಹೇಳಿದನು:

> "ಇವನು ಮಾತಲಿಯೆಂಬ ಹೆಸರಿನ ಶಕ್ರನ ಸೂತ ಮತ್ತು ಅವನ ಪ್ರೀತಿಯ ಸ್ನೇಹಿತ. ಇವನು ಶುಚಿ, ಶೀಲಗುಣೋಪೇತ, ತೇಜಸ್ವೀ, ವೀರ್ಯವಂತ ಮತ್ತು ಬಲಶಾಲಿಯೂ ಕೂಡ. ಇವನು ಶಕ್ರನ ಸಖ, ಮಂತ್ರಿ ಮತ್ತು ಸಾರಥಿಯೂ ಕೂಡ. ರಣ

ರಣಗಳಲ್ಲಿಯೂ ಪ್ರಭಾವದಲ್ಲಿ ಇವನ ಮತ್ತು ವಾಸವನ ನಡುವೆ ಸ್ವಲ್ಪವೇ ವ್ಯತ್ಯಾಸವಿರುವುದು ಕಾಣಿಸುತ್ತದೆ. ದೇವಾಸುರರ ಯುದ್ಧಗಳಲ್ಲಿ ಇವನೇ ಸಹಸ್ರ ಕುದುರೆಗಳನ್ನು ಕಟ್ಟಿದ ಉತ್ತಮ ಚೈತ್ರ ರಥವನ್ನು ಮನಸ್ಸಿನಲ್ಲಿಯೇ ನಡೆಸಿದ್ದಾನೆ. ಇವನು ಅಶ್ವಗಳ ಮೇಲೆ ವಿಜಯವನ್ನು ಸಾಧಿಸಿದುದರಿಂದ ವಾಸವನು ಅರಿಗಳನ್ನು ಜಯಿಸಿದನು. ಮೊದಲೇ ಇವನು ಹೊಡೆದವರ ಮೇಲೆ ಬಲಭಿತನು ಹೊಡೆದನು. ಇವನ ಕನ್ಯೆ, ವರಾರೋಹೆಯು ರೂಪದಲ್ಲಿ ಭುವಿಯಲ್ಲಿಯೇ ಅಸದೃಶಳಾಗಿದ್ದಾಳೆ. ಸತ್ವಶೀಲಗುಣೋಪೇತಳಾದ ಅವಳು ಗುಣಕೇಶೀ ಎಂದು ವಿಶ್ರುತಳಾಗಿದ್ದಾಳೆ. ಈ ಅಮರದ್ಯುತಿಯು ಅವಳಿಗೆ ವರನನ್ನು ಹುಡುಕಿಕೊಂಡು ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿದ್ದಾನೆ. ನಿನ್ನ ಮೊಮ್ಮಗ ಸುಮುಖನು ಇವನಿಗೆ ತನ್ನ ಮಗಳಿಗೆ ಪತಿಯಾಗಬೇಕೆಂದು ಬಯಸಿದ್ದಾನೆ. ಆರ್ಯಕ! ಒಂದುವೇಳೆ ನಿನಗೂ ಇದು ಇಷ್ಟವಾದರೆ, ಬೇಗನೇ ಕನ್ಯೆಯನ್ನು ಸ್ವೀಕರಿಸುವ ಮನಸ್ಸು ಮಾಡಬೇಕು. ವಿಷ್ಣುವಿನ ಕುಲದಲ್ಲಿ ಲಕ್ಷ್ಮಿಯು ಹೇಗೋ, ವಿಭಾವಸುವಿನಲ್ಲಿ ಸ್ವಾಹಾಳು ಹೇಗೋ ಹಾಗೆ ಸುಮಧ್ಯಮೆ ಗುಣಕೇಶಿಯು ನಿನ್ನ ಕುಲದಲ್ಲಿ ಇರುವಂತಾಗಲಿ. ಆದುದರಿಂದ ನೀನು ಮೊಮ್ಮಗನಿಗಾಗಿ ವಾಸವನಿಗೆ ಶಚಿಯಂತೆ ಸದೃಶಳೂ, ಪ್ರತಿರೂಪಳೂ ಆಗಿರುವ

ಗುಣಕೇಶಿಯನ್ನು ಸ್ವೀಕರಿಸಬೇಕು. ನಿನ್ನ ಮತ್ತು ಐರಾವತನ ಬಹಳ ಮಾನವನ್ನು ಅರಿತು, ತಂದೆಯನ್ನು ಕಳೆದುಕೊಂಡಿದ್ದರೂ, ಸುಮುಖನ ಗುಣ, ಶೀಲ, ಶೌಚಗಳನ್ನು ತಿಳಿದು ಗುಣವಂತನಾದ ಇವನನ್ನು ವರನನಾಗಿ ಆರಿಸಿಕೊಂಡಿದ್ದೇವೆ. ಇವನು ಸ್ವಯಂ ಬಂದು ಕನ್ಯೆಯನ್ನು ಕೊಡಲು ಸಿದ್ಧನಿದ್ದಾನೆ. ನೀನೂ ಕೂಡ ಈ ಮಾತಲಿಯ ಸಮ್ಮಾನವನ್ನು ಮಾಡಬೇಕು."

ನಾರದನು ಹೀಗೆ ಹೇಳಲು ಆರ್ಯಕನು ಮಗನ ಮರಣವನ್ನು ನೆನೆದು ದುಃಖಿತನೂ ಮತ್ತು ಮೊಮ್ಮಗನನ್ನು ಕೇಳುತ್ತಿದ್ದಾರೆಂದು ಹರ್ಷಿತನೂ ಆಗಿ ಹೇಳಿದನು:

"ದೇವರ್ಷೇ ! ನಿನ್ನ ಮಾತಿಗೆ ಬಹುಮತವಿಲ್ಲದೇ ಇಲ್ಲ. ಯಾರು ತಾನೇ ಶಕ್ರನ ಈ ಸಖನೊಂದಿಗೆ ಸಂಬಂಧವನ್ನು ಬೆಳೆಸಲು ಬಯಸುವುದಿಲ್ಲ? ಆದರೆ ನಮ್ಮ ದೌರ್ಬಲ್ಯದ ಕಾರಣದ ಕುರಿತು ಚಿಂತಿಸುತ್ತಿದ್ದೇನೆ. ಇವನ ತಂದೆ, ನನ್ನ ಮಗ ಮಹಾದ್ಯುತಿಯನ್ನು ವೈನತೇಯನು ಭಕ್ಷಿಸಿದನು. ಅದರಿಂದಲೇ ನಾವು ದುಃಖಾರ್ತರಾಗಿದ್ದೇವೆ. ಹೋಗುವಾಗ ವೈನತೇಯನು ಪುನಃ ಹೇಳಿದ್ದಾನೆ - ಇನ್ನೊಂದು ತಿಂಗಳಲ್ಲಿ ಸುಮುಖನನ್ನು ಭಕ್ಷಿಸುತ್ತೇನೆ - ಎಂದು. ಅದರಂತೆಯೇ ನಿಶ್ಚಯವಾಗಿಯೂ ಆಗುತ್ತದೆ ಎಂದು ನಮಗೆ ತಿಳಿದಿದೆ.

> ಸುಪರ್ಣನ ಈ ಮಾತಿನಿಂದ ನಮ್ಮ ಸಂತೋಷವೆಲ್ಲವೂ ನಷ್ಟವಾಗಿದೆ.”

ಆಗ ಮಾತಲಿಯು ಇದನ್ನು ಹೇಳಿದನು:

> “ನಾನೊಂದು ಯೋಚನೆಯನ್ನು ಮಾಡಿದ್ದೇನೆ. ನಿನ್ನ ಮೊಮ್ಮಗ ಸುಮುಖನನ್ನು ನನ್ನ ಅಳಿಯನೆಂದು ಆರಿಸಿಕೊಂಡಿದ್ದೇನೆ. ಈ ಪನ್ನಗನು ನನ್ನ ಮತ್ತು ನಾರದನೊಡನೆ ಬರಲಿ. ಹೋಗಿ ತ್ರಿಲೋಕೇಶ ಸುರಪತಿ ವಾಸವನನ್ನು ಕಾಣೋಣ. ಸತ್ತಮ! ಸುಪರ್ಣನ ಕಾರ್ಯದಲ್ಲಿ ವಿಘ್ನವನ್ನು ತರಲು ಪ್ರಯತ್ನಿಸುತ್ತೇನೆ. ಇವನಿಗೆ ಸಾಕಷ್ಟು ಆಯುಷ್ಯವು ಉಳಿಯುವಂತೆಯೂ ಮಾಡೋಣ. ಕಾರ್ಯ ಸಿದ್ಧಿಗಾಗಿ ನನ್ನೊಡನೆ ಸುಮುಖನೂ ಕೂಡ ದೇವೇಶನಲ್ಲಿಗೆ ಬರಬೇಕು. ನಿನಗೆ ಮಂಗಳವಾಗಲಿ!”

ಆಗ ಆ ಮಹೌಜಸ ಸುಮುಖನನ್ನು ಕರೆದುಕೊಂಡು ಎಲ್ಲರೂ ಆಸೀನನಾಗಿದ್ದ ದೇವರಾಜ, ಮಹಾದ್ಯುತಿ ಶಕ್ರನನ್ನು ಕಂಡರು. ಅಲ್ಲಿ ಅವನೊಡನೆ ಚತುರ್ಭುಜ ಭಗವಾನ್ ವಿಷ್ಣುವೂ ಇದ್ದನು. ಅವರಿಗೆ ಮಾತಲಿ ನಾರದರಿಬ್ಬರೂ ಎಲ್ಲವನ್ನೂ ಹೇಳಿದರು. ಆಗ ವಿಷ್ಣುವು ಭುವನೇಶ್ವರ ಪುರಂದರನಿಗೆ ಹೇಳಿದನು:

> “ಇವನಿಗೆ ಅಮೃತವನ್ನಿತ್ತು ಅಮರರ ಸಮನನ್ನಾಗಿ ಮಾಡು. ವಾಸವ! ಇದರಿಂದ ಮಾತಲಿ, ನಾರದ, ಸುಮುಖರಿಗೆ

ಬೇಕಾದುದನ್ನು ನಿನ್ನ ಕೃಪೆಯಿಂದ ಪಡೆಯುವಂತಾಗುತ್ತದೆ.”

ವೈನತೇಯನ ಪರಾಕ್ರಮದ ಕುರಿತು ಯೋಚಿಸಿ ಪುರಂದರನು ವಿಷ್ಣುವಿಗೆ

“ಅದನ್ನು ನೀನೇ ಕೊಡು!”

ಎಂದನು. ವಿಷ್ಣುವು ಹೇಳಿದನು:

“ವಿಭೋ! ಚರಾಚರರ ಲೋಕಗಳ ಈಶನು ನೀನು! ನೀನು ಕೊಡುವುದನ್ನು ಕೊಡಬಾರದಂತೆ ಮಾಡಲು ಯಾರು ತಾನೇ ಮುಂದೆಬಂದಾರು?”

ಬಲವೃತ್ರಹನು ಆ ಪನ್ನಗನಿಗೆ ಉತ್ತಮ ಆಯುಸ್ಸನ್ನು ಅನುಗ್ರಹಿಸಿದನು. ಅವನಿಗೆ ಅಮೃತಪ್ರಾಶನವನ್ನು ಮಾಡಲಿಲ್ಲ. ಸುಮುಖನಾದರೋ ಆ ವರವನ್ನು ಪಡೆದು ಸುಮುಖನಾದನು. ಮದುವೆಮಾಡಿಕೊಂಡು, ಸಂತೋಷದಿಂದ ಮನೆಗೆ ತೆರಳಿದನು. ನಾರದ ಆರ್ಯಕರೂ ಕೂಡ ಕಾರ್ಯಗಳನ್ನು ಪೂರೈಸಿ ಸಂತೋಷಗೊಂಡು ಮಹಾದ್ಯುತಿ ದೇವರಾಜನನ್ನು ಅರ್ಚಿಸಿ ಹಿಂದಿರುಗಿದರು.

ನಡೆದುದನ್ನು – ಶಕ್ರನು ನಾಗನಿಗೆ ಆಯುಸ್ಸನ್ನು ಕೊಟ್ಟಿದ್ದುದನ್ನು - ಮಹಾಬಲ ಗರುಡನು ಕೇಳಿದನು. ಪರಮಕೃದ್ಧನಾಗಿ ಖಗ ಸುಪರ್ಣನು ತನ್ನ ರೆಕ್ಕೆಗಳಿಂದ ಮಹಾ ಧೂಳನ್ನೆಬ್ಬಿಸಿ ತ್ರಿಭುವನದ ವಾಸವನ ಬಳಿ ಧಾವಿಸಿ ಹೇಳಿದನು:

“ಭಗವನ್! ನನ್ನನ್ನು ಅಲ್ಲಗಳೆದು ನೀನು ಏಕೆ ನನ್ನ ಹಸಿವೆಗೆ ಭಂಗ ತರುತ್ತಿದ್ದೀಯೆ. ನೀನೇ ಬಯಸಿ ಕೊಟ್ಟ ವರವನ್ನು ಪುನಃ ಹಿಂದೆ ತೆಗೆದುಕೊಳ್ಳುತ್ತಿದ್ದೀಯೆ! ನಿಸರ್ಗದ ಸರ್ವಭೂತಗಳ ಸರ್ವಭೂತೇಶ್ವರ ಧಾತ್ರನು ನನ್ನ ಆಹಾರವನ್ನು ನಿಶ್ಚಯಿಸಿದ್ದಾನೆ. ನೀನು ಏಕೆ ಅದನ್ನು ತಡೆಯುತ್ತಿದ್ದೀಯೆ? ನಾನು ಈ ಮಹಾನಾಗನನ್ನು ಮತ್ತು ಸಮಯವನ್ನು ನಿರ್ದಿಷ್ಟಗೊಳಿಸಿದ್ದೆ. ಇದರಿಂದ ನಾನು ನನ್ನ ಮಹಾ ಸಂಖ್ಯೆಯ ಸಂತತಿಗೆ ಉಣಿಸುವವನಿದ್ದೆ. ಇದರಿಂದ ನಾನು ಬೇರೆ ಯಾರನ್ನೂ ಅನ್ಯಥಾ ಹಿಂಸಿಸಲು ಬಯಸುವುದಿಲ್ಲ. ನಿನಗಿಷ್ಟಬಂದಂತೆ ಬೇಕಂತೆಲೇ ನಾನು ಮತ್ತು ಹಾಗೆಯೇ ನನ್ನ ಪರಿವಾರದವರು, ನನ್ನ ಮನೆಯಲ್ಲಿ ನೇಮಿಸಿರುವ ಸೇವಕರು ಪ್ರಾಣವನ್ನು ತೊರೆಯಬೇಕು ಎಂದು ನೀನು ಈ ಆಟವನ್ನು ಆಡುತ್ತಿದ್ದೀಯೆ! ಅದರಿಂದ ನೀನು ಸಂತೋಷಗೊಳ್ಳುತ್ತೀಯೆ! ಇದಕ್ಕೆ ಮತ್ತು ಇದಕ್ಕಿಂತಲೂ ಹೆಚ್ಚಿನದಕ್ಕೆ ನಾನು ಅರ್ಹ. ತ್ರೈಲೋಕ್ಯೇಶ್ವರನಾದರೂ ನಾನು ಇತರರ ಸೇವಕಮಾತ್ರ ಆಗಿಬಿಟ್ಟಿದ್ದೇನೆ. ನಾನು ನಿನ್ನ ಸಮನಾಗಿದ್ದರೂ ವಿಷ್ಣುವಿನ ಕಾರಣದಿಂದ ರಾಜ್ಯವು ನಿನ್ನಲ್ಲಿದೆ. ನನಗೆ ಕೂಡ ದಕ್ಷನ ಮಗಳು ಜನನಿ ಮತ್ತು ಕಶ್ಯಪನು ತಂದೆ. ನಿನ್ನಂತೆಯೇ ನಾನೂ ಕೂಡ ಸಮಸ್ತ ಲೋಕಗಳನ್ನು ಆಯಾಸಗೊಳ್ಳದೇ ಎತ್ತಿ ಹಿಡಿಯಬಲ್ಲೆ. ನನಗೆ ಕೂಡ ಸರ್ವಭೂತಗಳು ಸಹಿಸಲಾಗದ

ವಿಪುಲ ಬಲವಿದೆ. ದೈತ್ಯರೊಂದಿಗೆ ಯುದ್ಧದಲ್ಲಿ ನಾನೂ ಕೂಡ ಮಹಾ ಕರ್ಮಗಳನ್ನು ಮಾಡಿದ್ದೇನೆ. ನಾನೂ ಕೂಡ ದಿತಿಯ ಮಕ್ಕಳಾದ ಶ್ರುತಶ್ರೀ, ಶ್ರುತಸೇನ, ವಿವಸ್ವಾನ್, ರೋಚನಾಮುಖ, ಪ್ರಸಭ, ಕಾಲಕಾಕ್ಷರನ್ನು ಸಂಹರಿಸಿದ್ದೇನೆ. ಒಮ್ಮೊಮ್ಮೆ ನಿನ್ನ ತಮ್ಮನ ಧ್ವಜಸ್ಥಾನಕ್ಕೆ ಹೋಗಿ ನಾನು ಅವನನ್ನು ರಕ್ಷಿಸಲು ಪ್ರಯತ್ನಿಸುತ್ತೇನೆ ಮತ್ತು ಅವನನ್ನು ನಾನು ನನ್ನ ಬೆನ್ನ ಮೇಲೆ ಏರಿಸಿಕೊಂಡು ಕೊಂಡೊಯ್ಯುತ್ತೇನೆ. ಬಹುಷಃ ಈ ಕಾರಣದಿಂದಲೇ ನೀನು ನನ್ನನ್ನು ಕೀಳಾಗಿ ಕಾಣತ್ತಿದ್ದೀಯೆ. ಇಂಥಹ ಭಾರವನ್ನು ಹೊರಬಲ್ಲವರು ಬೇರೆ ಯಾರಿದ್ದಾರೆ? ನನಗಿಂತಲೂ ಬಲಶಾಲಿಗಳು ಬೇರೆ ಯಾರಿದ್ದಾರೆ? ನಾನು ಇಷ್ಟು ವಿಶಿಷ್ಟನಾಗಿದ್ದರೂ ಕೂಡ ಅವನನ್ನು ಬಾಂಧವರೊಂದಿಗೆ ಹೊರುತ್ತೇನೆ. ನನ್ನನ್ನು ಕಡೆಗಣಿಸಿ ನನ್ನ ಭೋಜನಕ್ಕೆ ಅಡ್ಡಿಯಾಗಿ ನೀನೂ ಕೂಡ ನಿನ್ನ ತಮ್ಮನಂತೆ ನನ್ನ ಗೌರವವನ್ನು ಕಳೆಯುತ್ತಿದ್ದೀಯೆ. ಅದಿತಿಯಲ್ಲಿ ಹುಟ್ಟಿದವರೆಲ್ಲ ಬಲವಿಕ್ರಮಶಾಲಿಗಳು. ಆದರೆ ಅವರಲ್ಲೆಲ್ಲಾ ನೀನೇ ವಿಶೇಷವಾಗಿರುವ ಬಲಶಾಲಿ. ಆದರೂ ನಾನು ನಿನ್ನನ್ನು ನನ್ನ ಒಂದೇ ಒಂದು ರೆಕ್ಕೆಯ ಮೇಲೆ ಏನೂ ಆಯಾಸವೆಲ್ಲದೇ ಹೊರುತ್ತೇನೆ. ಹೀಗಿರುವಾಗ ಇಲ್ಲಿ ಯಾರು ಬಲಶಾಲಿ ಎನ್ನುವುದನ್ನು ನೀನೇ ವಿಮರ್ಶಿಸಿ ಹೇಳು."

ಆ ಖಗದ ಜಂಬದ ಮಾತುಗಳನ್ನು ಕೇಳಿ ತೊಂದರೆಗಳನ್ನು

ಕೊಡಬಹುದೆಂದು ತಿಳಿದು ರಥಚಕ್ರಭೃತು ವಿಷ್ಣುವು ತಾರ್ಕ್ಷನಿಗೆ ಹೇಳಿದನು:

> "ಗುರುತ್ಮನ್! ತುಂಬಾ ದುರ್ಬಲನಾಗಿದ್ದರೂ ನಿನ್ನನ್ನು ನೀನೇ ಬಲವಂತನೆಂದು ಏಕೆ ಪರಿಗಣಿಸುತ್ತಿರುವೆ? ನಮ್ಮ ಎದಿರು ಈ ರೀತಿ ಆತ್ಮ ಸ್ತುತಿ ಮಾಡಿಕೊಳ್ಳುವುದು ನಿನಗೆ ಸರಿಯಲ್ಲ. ನನ್ನ ದೇಹವನ್ನು ಈ ಮೂರುಲೋಕಗಳು ಒಂದಾದರೂ ಹೊರಲು ಅಶಕ್ತ. ನಾನು ನನ್ನ ಮತ್ತು ನಿನ್ನ ಭಾರವನ್ನೂ ಸೇರಿ ಹೊತ್ತಿದ್ದೇನೆ. ಬಾ! ನನ್ನ ಈ ಒಂದು ಬಲ ತೋಳನ್ನು ನೀನು ಹೊರು. ನೀನು ಈ ಒಂದನ್ನು ಹೊತ್ತೆಯೆಂದಾದರೆ ನೀನು ಹೇಳಿದ್ದುದು ಸಫಲವಾದಂತೆ."

ಆಗ ಆ ಭಗವಾನನು ತನ್ನ ತೋಳನ್ನು ಅವನ ಭುಜದ ಮೇಲಿರಿಸಿದನು. ಅವನು ಭಾರದಿಂದ ಬಳಲಿ ವಿಹ್ವಲನಾಗಿ ಮೂರ್ಛಿತನಾಗಿ ಬಿದ್ದನು. ಪರ್ವತಗಳಿಂದ ಕೂಡಿದ ಇಡೀ ಭೂಮಿಯ ಭಾರವು ಅವನ ದೇಹದ ಒಂದು ಶಾಖೆಯಲ್ಲಿದೆ ಎಂದು ಗರುಡನು ಅರಿತನು. ಅಚ್ಯುತನು ಅವನನ್ನು ತನ್ನ ಬಲದಿಂದ ಇನ್ನೂ ಹೆಚ್ಚಾಗಿ ಪೀಡಿಸಲಿಲ್ಲ. ಅವನ ಜೀವವನ್ನೂ ತೆಗೆದುಕೊಳ್ಳಲಿಲ್ಲ. ಆ ಖಗನು ಅತಿಭಾರದಿಂದ ಪೀಡಿತನಾಗಿ ವಿಹ್ವಲನಾಗಿ ದೇಹವು ಆಯಾಸಗೊಂಡು, ವಿಚೇತನನಾಗಿ ತನ್ನ ರೆಕ್ಕೆಗಳನ್ನು ಉದುರಿಸತೊಡಗಿದನು. ಆ ಪಕ್ಷಿ ವಿನತಾಸುತನು ಚೇತನವನ್ನು

ಕಳೆದುಕೊಂಡು ವಿಹ್ವಲನಾಗಿ ದೀನನಾಗಿ ವಿಷ್ಣುವನ್ನು ಶಿರಸಾ ನಮಸ್ಕರಿಸಿ ಹೇಳಿದನು:

> "ಭಗವನ್! ಲೋಕಸಾರದ ಸದೃಶವಾಗಿರುವ, ಸುಂದರವಾದ ಈ ಭುಜದಿಂದ ಮುಕ್ತವಾಗಿ ಹೊರಚಾಚಿ ನೀನು ನನ್ನನ್ನು ಮಹೀತಲಕ್ಕೆ ಅಮುಕಿದ್ದೀಯೆ. ದೇವ! ವಿಹ್ವಲನಾಗಿರುವ, ಬಲದ ಅಗ್ನಿಯಲ್ಲಿ ಸುಟ್ಟುಹೋಗಿರುವ, ನಿನ್ನ ಧ್ವಜವಾಸಿಯಾದ ಈ ಅಲ್ಪಚೇತಸ ಪಕ್ಷಿ ನನ್ನನ್ನು ಕ್ಷಮಿಸಬೇಕು. ದೇವ! ಪರಮವಿಭೋ! ನಿನ್ನ ಬಲವನ್ನು ನಾನು ತಿಳಿಯಲಿಲ್ಲ. ಆದುದರಿಂದ ನನ್ನಷ್ಟು ಮತ್ತು ನನಗಿಂತಲೂ ಹೆಚ್ಚಿನ ವೀರನು ಬೇರೆ ಯಾರೂ ಇಲ್ಲ ಎಂದು ತಿಳಿದುಕೊಂಡಿದ್ದೆ."

ಆಗ ಆ ಭಗವಾನನು ಗುರುತ್ಮತನ ಮೇಲೆ ಕರುಣೆತೋರಿದನು. ಮತ್ತು ಸ್ನೇಹದಿಂದ "ಮತ್ತೆ ಈ ರೀತಿ ಮಾಡಬೇಡ!" ಎಂದನು.

# ಗಾಲವ ಚರಿತೆ

[ವಿಶ್ವಾಮಿತ್ರನ ಶಿಷ್ಯ ಗಾಲವನ ಈ ಕಥೆಯು ವ್ಯಾಸ ಮಹಾಭಾರತದ ಉದ್ಯೋಗಪರ್ವದ ಭಗವದ್ಯಾನ ಪರ್ವ (ಅಧ್ಯಾಯ ೧೦೪-೧೨೧) ದಲ್ಲಿ ಬರುತ್ತದೆ. ಶ್ರೀಕೃಷ್ಣನು ಸಂಧಿಗೆಂದು ಕುರುಸಭೆಗೆ ಹೋದಾಗ ಅಲ್ಲಿ ದೇವರ್ಷಿ

நாரதனு ಹಲವು ಒಳ್ಳೆಯದಲ್ಲ ಎಂದು ಸಾರುವ ಈ ಕಥೆಯನ್ನು ದುರ್ಯೋಧನನಿಗೆ ಹೇಳಿದನು.]

ಹಿಂದೆ ತಪಸ್ಸಿನಲ್ಲಿದ್ದ ವಿಶ್ವಾಮಿತ್ರನನ್ನು ಪರೀಕ್ಷಿಸಲೋಸುಗ ಸ್ವಯಂ ಧರ್ಮನು ಭಗವಾನ್ ಋಷಿ ವಸಿಷ್ಠನಾಗಿ ಬಂದನು. ಸಪ್ತರ್ಷಿಗಳಲ್ಲೊಬ್ಬನ ವೇಷವನ್ನು ತಾಳಿ ಹಸಿದು ಊಟಮಾಡಲು ಕೌಶಿಕನ ಆಶ್ರಮಕ್ಕೆ ಬಂದನು. ಆಗ ವಿಶ್ವಾಮಿತ್ರನು ಸಂಭ್ರಾಂತನಾಗಿ ಚರುವನ್ನು ತಯಾರಿಸಲು ಪ್ರಾರಂಭಿಸಿದನು. ಉತ್ತಮ ಅನ್ನವನ್ನು ತಯಾರಿಸುವ ಪ್ರಯತ್ನದಲ್ಲಿ ಅವನನ್ನು ನೋಡಿಕೊಳ್ಳಲಿಕ್ಕಾಗಲಿಲ್ಲ. ಅನ್ಯ ತಪಸ್ವಿಗಳು ನೀಡಿದ ಅನ್ನವನ್ನು ತಿಂದ ನಂತರವೇ ವಿಶ್ವಾಮಿತ್ರನು ಬಿಸಿ ಬಿಸಿಯಾದ ಅನ್ನವನ್ನು ಹಿಡಿದುಕೊಂಡು ಬಂದನು.

“ಊಟಮಾಡಿಯಾಯಿತು ! ನಿಲ್ಲು !”

ಎಂದು ಹೇಳಿ ಭಗವಾನನು ಹೊರಟುಹೋದನು. ಮಹಾದ್ಯುತಿ ವಿಶ್ವಾಮಿತ್ರನು ನಿಂತುಕೊಂಡೇ ಇದ್ದನು. ಪಾತ್ರೆಯನ್ನು ನೆತ್ತಿಯಮೇಲಿರಿಸಿ, ಎರಡೂ ಕೈಗಳಿಂದ ಹಿಡಿದುಕೊಂಡು ಅಲ್ಲಿಯೇ ಸ್ಥಾಣುವಿನಂತೆ ಅಲುಗಾಡದೇ ಗಾಳಿಯನ್ನು ಸೇವಿಸುತ್ತಾ ನಿಂತುಕೊಂಡನು. ಮುನಿ ಗಾಲವನು ಗೌರವದಿಂದ, ಪ್ರಿಯವಾದುದನ್ನು ಮಾಡಲೋಸುಗ, ಸೌಹಾರ್ದದಿಂದ, ಮಾನವನ್ನಿತ್ತು ಅವನ ಶುಶ್ರೂಷಣೆಯ ಪ್ರಯತ್ನದಲ್ಲಿ ತೊಡಗಿದನು. ನೂರು ವರ್ಷಗಳು ಪೂರ್ಣವಾದ ನಂತರ ಧರ್ಮನು ವಸಿಷ್ಠನ ವೇಶವನ್ನು ತಳೆದು

ಊಟವನ್ನು ಬಯಸಿ ಕೌಶಿಕನಲ್ಲಿಗೆ ಪುನಃ ಬಂದನು. ತಲೆಯ ಮೇಲೆ ಪಾತ್ರೆಯನ್ನು ಹೊತ್ತು ವಾಯುವನ್ನೇ ಸೇವಿಸುತ್ತಾ ನಿಂತಿರುವ ಧೀಮತ ಮಹರ್ಷಿ ವಿಶ್ವಾಮಿತ್ರನನ್ನು ಅವನು ನೋಡಿದನು. ಆಗ ಆ ಮುನಿ ಧರ್ಮನು ಆಗತಾನೇ ತಯಾರಿಸಿದ ಹಾಗೆ ಬಿಸಿಬಿಸಿಯಾಗಿರುವ ಆ ಅನ್ನವನ್ನು ಸ್ವೀಕರಿಸಿ, ಉಂಡು,

> "ವಿಪ್ರರ್ಷೇ ! ನಿನ್ನಿಂದ ಪ್ರೀತನಾಗಿದ್ದೇನೆ !"

ಎಂದು ಹೇಳಿ ಹೊರಟುಹೋದನು. ಧರ್ಮನ ವಚನದಂತೆ ಆಗ ವಿಶ್ವಾಮಿತ್ರನು ಕ್ಷತ್ರಭಾವವನ್ನು ಕಳೆದುಕೊಂಡು ಬ್ರಾಹ್ಮಣತ್ವವನ್ನು ಪಡೆದು ಸಂತೋಷಗೊಂಡನು.

ತಪಸ್ವಿ ವಿಶ್ವಾಮಿತ್ರನಾದರೋ ಶಿಷ್ಯ ಗಾಲವನ ಶುಶ್ರೂಷೆ, ಭಕ್ತಿ, ಪ್ರೀತಿಯನ್ನು ಮನ್ನಿಸಿ ಅವನಿಗೆ ಹೇಳಿದನು:

> "ವತ್ಸ ! ಗಾಲವ ! ನನ್ನಿಂದ ಅಪ್ಪಣೆಯಿದೆ. ನಿನಗಿಷ್ಟಬಂದಂತೆ ಹೋಗು !"

ಹೀಗೆ ಹೇಳಲು ಪ್ರೀತನಾಗಿ ಗಾಲವನು ಮಹಾದ್ಯುತಿ, ಮುನಿಸತ್ತಮ, ವಿಶ್ವಾಮಿತ್ರನಿಗೆ ಈ ಮಧುರ ಮಾತನ್ನಾಡಿದನು.

> "ಗುರುವಿನ ಕಾರ್ಯಮಾಡಿದ ನಿಮಗೆ ದಕ್ಷಿಣೆಯನ್ನಾಗಿ ಏನನ್ನು ಕೊಡಲಿ? ದಕ್ಷಿಣೆಯನ್ನಿತ್ತರೇ ಮಾನವನ ಕರ್ಮವು ಸಿದ್ಧಿಯಾಗುತ್ತದೆ. ದಕ್ಷಿಣೆಗಳಿಂದಲೇ ಸೃಷ್ಟಿಯಾದವರು

ಅಪವರ್ಗದಲ್ಲಿ ಭೋಗಿಸುತ್ತಾರೆ. ಸ್ವರ್ಗದಲ್ಲಿ ಕ್ರತುಗಳ ಫಲ, ಸದ್ಭಾವಿಗಳ ಶಾಂತಿ ದಕ್ಷಿಣೆಯೆಂದು ಹೇಳುತ್ತಾರೆ. ಗುರು ದಕ್ಷಿಣೆಯಾಗಿ ನಿಮಗೆ ಏನನ್ನು ತರಲೆನ್ನುವುದನ್ನು ನೀವು ಹೇಳಬೇಕು."

ಭಗವಾನ್ ವಿಶ್ವಾಮಿತ್ರನು ತನ್ನ ಶುಶ್ರೂಷಣೆಯಿಂದಲೇ ಎಲ್ಲವನ್ನು ಗಳಿಸಿದ್ದಾನೆ ಎಂದು ತಿಳಿದು ಪುನಃ ಪುನಃ "ಹೋಗು! ಹೋಗು!" ಎಂದು ಪ್ರಚೋದಿಸಿದನು.

"ಈಗಾಗಲೇ ಮಾಡಿದ್ದೀಯೆ. ಹೋಗು ಹೋಗು!"

ಎಂದು ವಿಶ್ವಾಮಿತ್ರನು ಹೇಳಲು ಗಾಲವನು

"ಏನನ್ನು ಕೊಡಲಿ?"

ಎಂದು ಬಹಳ ಬಾರಿ ಕೇಳಿದನು. ತಪಸ್ವಿ ಗಾಲವನು ಹೀಗೆ ಬಹುಬಾರಿ ಹಠವನ್ನು ಮಾಡಲು ಯಾವುದೋ ಯೋಚನೆಯಲ್ಲಿ ಮಗ್ನನಾಗಿದ್ದ ವಿಶ್ವಾಮಿತ್ರನು ಇದನ್ನು ಹೇಳಿದನು:

"ಗಾಲವ! ಹೋಗು! ಒಂದೇ ಕಿವಿಯು ಕಪ್ಪಾಗಿರುವ ಎಂಟುನೂರು ಚಂದ್ರನಂತೆ ಬಿಳಿಯಾಗಿರುವ ಕುದುರೆಗಳನ್ನು ನನಗೆ ತಂದು ಕೊಡು! ತಡಮಾಡಬೇಡ!"

ಧೀಮತ ವಿಶ್ವಾಮಿತ್ರನು ಹೀಗೆ ಹೇಳಲು ಗಾಲವನಿಗೆ ನಿಲ್ಲಲೂ, ಮಲಗಲೂ, ಊಟಮಾಡಲೂ ಆಗಲಿಲ್ಲ. ಅವನು ಸ್ವಲ್ಪವೇ

ಸಮಯದಲ್ಲಿ ಚಿಂತಾಶೋಕಪರಾಯಣನಾಗಿ ಹಳದಿಯಾಗಿ, ಶೋಕಿಸುತ್ತ ಸಿಟ್ಟಿನಿಂದ ಉರಿಯುತ್ತಾ ಅಸ್ತಿಯಂತಾದನು.

"ಶ್ರೀಮಂತ ಮಿತ್ರರನ್ನು ಎಲ್ಲಿ ಹುಡುಕಲಿ? ಹಣವನ್ನು ಎಲ್ಲಿಂದ ತರಲಿ? ಉಳಿತಾಯವಾದರೂ ಎಲ್ಲಿದೆ? ಚಂದ್ರನಂತೆ ಬಿಳುಪಾದ ಎಂಟುನೂರು ಕುದುರೆಗಳನ್ನು ನಾನು ಎಲ್ಲಿಂದ ತರಲಿ? ನನಗೆ ಊಟದಲ್ಲಿ ಆಸಕ್ತಿ ಎಲ್ಲಿದೆ? ನನಗೆ ಸುಖದಲ್ಲಿ ಆಸಕ್ತಿ ಎಲ್ಲಿದೆ? ಜೀವನದಲ್ಲಿಯೇ ನನಗೆ ಶ್ರದ್ಧೆ ಎಲ್ಲಿದೆ? ನಾನಿನ್ನು ಏಕೆ ಜೀವಿಸಿರಬೇಕು? ಸಮುದ್ರದ ಆಚೆ ಹೋಗಿ ಅಥವಾ ಭೂಮಿಯ ತುದಿಗೆ ಹೋಗಿ ನನ್ನನ್ನು ಮುಕ್ತಗೊಳಿಸುತ್ತೇನೆ. ನಾನು ಜೀವಿಸಿ ಏನು ಪ್ರಯೋಜನ? ಧನವಿಲ್ಲದವನಿಗೆ, ಹಣವನ್ನು ಸಂಪಾದಿಸದವನಿಗೆ, ವಿವಿಧ ಫಲಗಳಿಂದ ವಂಚಿತನಾದವನಿಗೆ, ಸಾಲವನ್ನು ಹೊತ್ತಿರುವವನಿಗೆ ಸುಖವು ಎಲ್ಲಿಂದ ಬರುತ್ತದೆ? ಸುಹೃದಯರು ಪ್ರೀತಿಯಿಂದ ನೀಡಿದ ಸಹಾಯಧನವನ್ನು ಬಳಸಿ ಅದನ್ನು ಹಿಂದಿರುಗಿಸಲು ಅಶಕ್ತನಾದವನಿಗೆ ಜೀವಿಸಿರುವುದಕ್ಕಿಂತ ಸಾಯುವುದೇ ಮೇಲು. ಮಾಡುತ್ತೇನೆ ಎಂದು ಹೇಳಿ ಕರ್ತವ್ಯವನ್ನು ಮಾಡದೇ ಇದ್ದವನು ಸುಳ್ಳುಹೇಳಿದುದಕ್ಕೆ ಉರಿದು ಸಂಪೂರ್ಣವಾಗಿ ನಾಶಹೊಂದುತ್ತಾನೆ. ಸುಳ್ಳುಹೇಳಿದವನಿಗೆ ರೂಪವಿರುವುದಿಲ್ಲ, ಸುಳ್ಳುಹೇಳಿದವನಿಗೆ ಸಂತತಿಯಿರುವುದಿಲ್ಲ,

ಸುಳ್ಳುಹೇಳಿದವನಿಗೆ ಅಧಿಕಾರವಿರುವುದಿಲ್ಲ. ಶುಭ ಗತಿಯಾದರೂ ಎಲ್ಲಿರುತ್ತದೆ? ಕೃತಘ್ನನಿಗೆ ಯಶಸ್ಸು ಎಲ್ಲಿ ಸಿಗುತ್ತದೆ? ಸ್ಥಾನವೆಲ್ಲಿ? ಸುಖವೆಲ್ಲಿ? ಅಶ್ರದ್ಧೆಯುಳ್ಳವನು ಕೃತಘ್ನನೇ ಸರಿ. ಕೃತಘ್ನನಿಗೆ ಮೋಕ್ಷವಿಲ್ಲ. ಧನವಿಲ್ಲದಿದ್ದರೆ ಜೀವವಿಲ್ಲದಂತೆ. ಆ ಪಾಪಿಗೆ ಪಾಪದ ತಂತ್ರಣವೆಲ್ಲಿ? ಆ ಪಾಪಿಯು ಮಾಡಿದುದೆಲ್ಲವನ್ನೂ ನಾಶಪಡಿಸಿ, ನಿಶ್ಚಿತವಾಗಿಯೂ ವಿನಾಶಹೊಂದುತ್ತಾನೆ. ನಾನೇ ಆ ಪಾಪಿ, ಕೃತಘ್ನ, ಕೃಪಣ, ಸುಳ್ಳುಬುರುಕನೆನಿಸಿಕೊಂಡು ಬಿಟ್ಟಿದ್ದೇನೆ. ಗುರುವಿನಿಂದ ನನ್ನ ಕೆಲಸಗಳನ್ನು ಮಾಡಿಸಿಕೊಂಡು ಅವನು ಹೇಳಿದಂತೆ ಮಾಡಲಿಕ್ಕಾಗುತ್ತಿಲ್ಲವಲ್ಲ! ಉತ್ತಮ ಪ್ರಯತ್ನವನ್ನು ಮಾಡಿ ನನ್ನ ಪ್ರಾಣಗಳನ್ನು ತೊರೆಯುತ್ತೇನೆ. ಇದಕ್ಕೂ ಮೊದಲು ದೇವತೆಗಳಿಂದ ಯಾವ ಸಂಪತ್ತನ್ನೂ ಕೇಳಿರಲಿಲ್ಲ. ಎಲ್ಲಾ ತ್ರಿದಶರೂ ಇದಕ್ಕಾಗಿಯೇ ನನ್ನನ್ನು ಯಜ್ಞಗಳಲ್ಲಿ ಗೌರವಿಸುತ್ತಾರೆ. ನಾನಾದರೋ ಈಗ ವಿಬುಧಶ್ರೇಷ್ಠ, ದೇವ, ತ್ರಿಭುವನೇಶ್ವರ, ಗತಿಮತರಲ್ಲಿ ಶ್ರೇಷ್ಠ, ವಿಷ್ಣು, ಕೃಷ್ಣನ ಮೊರೆಹೋಗುತ್ತೇನೆ. ಯಾರಿಂದ ಸರ್ವ ಭೋಗಗಳು ಹುಟ್ಟಿ ಸುರಾಸುರರಲ್ಲಿ ವ್ಯಾಪಿಸಿಕೊಂಡಿವೆಯೋ ಆ ಮಹಾಯೋಗಿ, ಅವ್ಯಯನನ್ನು ತಲೆಬಾಗಿ ನೋಡಲು ಇಚ್ಛಿಸುತ್ತೇನೆ.”

ಹೀಗೆ ಹೇಳಲು ಅವನ ಸಖ ವಿನತಾತ್ಮಜ ಗರುಡನು ತೋರಿಸಿಕೊಂಡನು ಮತ್ತು ಸಂತೋಷಗೊಂಡು ಅವನಿಗೆ

ಹಿತವಾದುದನ್ನು ಮಾಡುವ ಆಸೆಯಿಂದ ಹೇಳಿದನು:

> “ನೀನು ನನ್ನ ಪ್ರಿಯ ಸಖ! ತಾನು ಸುಖದಲ್ಲಿರುವಾಗ ಸ್ನೇಹಿತನ ಆಸೆ-ಅಭಿಲಾಶೆಗಳನ್ನು ಪೂರೈಸುವುದು ಸ್ನೇಹಿತನ ಕರ್ತವ್ಯ. ದ್ವಿಜ! ವಾಸವನ ತಮ್ಮನೇ ನನ್ನಲ್ಲಿರುವ ಸಂಪತ್ತು. ಇದಕ್ಕೂ ಮೊದಲು ನಿನಗೋಸ್ಕರ ನಾನು ಅವನಲ್ಲಿ ಮಾತನಾಡಿದ್ದೆ. ಅವನು ನನ್ನ ಬಯಕೆಯನ್ನು ಪೂರೈಸಲು ಒಪ್ಪಿಕೊಂಡಿದ್ದಾನೆ. ಬಾ! ನಾನು ಮತ್ತು ನೀನು ಒಟ್ಟಿಗೇ ಹೋಗೋಣ! ನಾನು ನಿನ್ನನ್ನು ಸುಖವಾಗಿ ಆಕಡೆ ಅಥವಾ ಭೂಮಿಯ ಅಂಚಿಗೆ ಕರೆದೊಯ್ಯುತ್ತೇನೆ. ಗಾಲವ! ತಡಮಾಡಬೇಡ!”

ಹೀಗೆ ಹೇಳಿ ಗರುಡನು ಪ್ರತಿಯೊಂದು ದಿಕ್ಕನ್ನೂ ತೋರಿಸುತ್ತಾ ಅವುಗಳನ್ನು ವರ್ಣಿಸತೊಡಗಿದನು:

> “ಅಜ್ಞಾತ ಯೋನಿ ದೇವನ ಅಪ್ಪಣೆಯಾಗಿದೆ. ಮೊದಲು ಯಾವದಿಕ್ಕನ್ನು ನೋಡಲು ಬಯಸುತ್ತೀಯೆ ಹೇಳು. ಅಲ್ಲಿಗೆ ಕರೆದೊಯ್ಯುತ್ತೇನೆ. ಪೂರ್ವ ಅಥವಾ ದಕ್ಷಿಣಕ್ಕೆ ಕೊಂಡೊಯ್ಯಲೋ ಅಥವಾ ಪಶ್ಚಿಮ ಅಥವಾ ಉತ್ತರ ದಿಕ್ಕಿಗೋ? ಯಾವ ದಿಕ್ಕಿನಲ್ಲಿ ಹೋಗಲಿ ಎಂದು ಹೇಳು! ಎಲ್ಲಿ ಸರ್ವಲೋಕಪ್ರಭಾವನ ಸೂರ್ಯನು ಮೊದಲು ಉದಯಿಸುತ್ತಾನೋ, ಎಲ್ಲಿ ಸಂಧ್ಯಾಸಮಯದಲ್ಲಿ ಸಾಧ್ಯರು

ತಪಸ್ಸಿನಲ್ಲಿ ತೊಡಗುತ್ತಾರೋ, ಎಲ್ಲಿ ಈ ಜಗತ್ತನ್ನೇ ವ್ಯಾಪಿಸಿದ ಬುದ್ಧಿಯು ಮೊದಲು ಹುಟ್ಟಿತೋ, ಎಲ್ಲಿ ಸ್ವಯಂ ಧರ್ಮ ಮತ್ತು ಅವನ ಎರಡು ಕಣ್ಣುಗಳು ಸ್ಥಾಪಿತವಾಗಿವೆಯೋ, ಎಲ್ಲಿ ಯಾಗಮುಖದಲ್ಲಿ ಸುರಿದ ತುಪ್ಪದ ಆಹುತಿಯು ಎಲ್ಲ ದಿಕ್ಕುಗಳಲ್ಲಿ ಹರಿದುಹೋಯಿತೋ ಇದೇ ದಿವಸದ ಮತ್ತು ಕಾಲದ ದ್ವಾರ. ಅಲ್ಲಿ ದಕ್ಷನ ಹೆಣ್ಣುಮಕ್ಕಳು ಹಿಂದೆ ಮಕ್ಕಳನ್ನು ಹಡೆದರು. ಆ ದಿಕ್ಕಿನಲ್ಲಿಯೇ ಕಶ್ಯಪನ ಆತ್ಮಸಂಭವರು ಪ್ರವೃದ್ಧರಾದರು. ಇದು ಸುರರ ಸಂಪತ್ತಿನ ಮೂಲ. ಏಕೆಂದರೆ ಇಲ್ಲಿಯೇ ಶಕ್ರನು ಸುರರಾಜ್ಯದಿಂದ ಅಭಿಷಿಕ್ತನಾಗಿದ್ದನು. ದೇವತೆಗಳು ಇಲ್ಲಿಯೇ ತಪಸ್ಸನ್ನಾಚರಿಸಿದರು. ಈ ಕಾರಣದಿಂದಲೇ ಇದಕ್ಕೆ ಪೂರ್ವದಿಕ್ಕೆಂದು ಕರೆಯುತ್ತಾರೆ. ಮೊದಲ ಕಾಲಗಳಲ್ಲಿ ಪೂರ್ವವು ಸುರರಿಂದ ತುಂಬಿಹೋಗಿತ್ತು. ಮೊದಲ ಪೂರ್ವಜರು ಇಲ್ಲಿಯೇ ಆಶಯದಿಂದ ನೋಡಿದುದು. ಸುಖವನ್ನು ಬಯಸಿದ ದೇವತೆಗಳೂ ಕೂಡ ಇಲ್ಲಿಯೇ ಮೊದಲ ಕರ್ಮಗಳನ್ನು ನೆರವೇರಿಸಿದರು. ಅಲ್ಲಿ ಹಿಂದೆ ಭಗವಾನ್ ಲೋಕಭಾವನನು ವೇದಗಳನ್ನು ಹಾಡಿದನು. ಅಲ್ಲಿಯೇ ಸೂರ್ಯನು ಸಾವಿತ್ರಿಗೆ ಆ ಬ್ರಹ್ಮವಾದಿ ಗಾಯತ್ರಿಯನ್ನು ಹೇಳಿಕೊಟ್ಟನು. ಅಲ್ಲಿಯೇ ಸೂರ್ಯನು ಯಜುರ್ವೇದವನ್ನು ಯಾಜ್ಞವಲ್ಕ್ಯನಿಗೆ ನೀಡಿದನು. ಅಲ್ಲಿಯೇ ಕ್ರತುಗಳಲ್ಲಿ ವರಗಳನ್ನು ಪಡೆದು ಸುರರು

ಸೋಮವನ್ನು ಕುಡಿದರು. ಅಲ್ಲಿ ಆಹುತಿಗಳಿಂದ ತೃಪ್ತವಾಗಿ ಯಜ್ಞಗಳು ಸ್ವ-ಯೋನಿಯಲ್ಲಿ ಹುಟ್ಟಿದವುಗಳನ್ನು ಭುಂಜಿಸಿದವು. ಅಲ್ಲಿ ಮೊದಲು ವರುಣನು ಪಾತಾಲವನ್ನು ಸೇರಿ ಸಂಪತ್ತನ್ನು ಪಡೆದನು. ಇಲ್ಲಿಯೇ ಪೌರಾಣಿಕ ವಸಿಷ್ಠನ ಮೊದಲ ಜನನ, ಪ್ರತಿಷ್ಠೆ ಮತ್ತು ನಿಧನಗಳು ಕಾಣಿಸಿಕೊಂಡವು. ಇಲ್ಲಿಯೇ ಓಂಕಾರದ ನೂರಾರು ಶಾಕೆಗಳು ಹುಟ್ಟಿಕೊಂಡವು. ಇಲ್ಲಿಯೇ ಮುನಿಗಳು ಧೂಮಗಳಾಗಿ ಹವಿಸ್ಸು ಮತ್ತು ಸೋಮಗಳನ್ನು ಕುಡಿಯುತ್ತಾರೆ. ಇಲ್ಲಿಯೇ ಶಕ್ರನು ವರಾಹಾದಿ ವನ್ಯ ಮೃಗಗಳನ್ನು ಬೇಟೆಯಾಡಿ ದೇವತೆಗಳಿಗೆ ಹಂಚಿದನು. ಇಲ್ಲಿಯೇ ವಿಭಾವಸು ಉದಯನು ಕೆಟ್ಟ ಮತ್ತು ಕೃತಘ್ನ ಮನುಷ್ಯ-ಅಸುರರೆಲ್ಲರನ್ನೂ ಕ್ರೋಧದಿಂದ ಸುಡುತ್ತಾನೆ. ಇದು ತ್ರಿಲೋಕದ, ಸ್ವರ್ಗದ ಮತ್ತು ಸುಖದ ದ್ವಾರ. ನಿನಗಿಷ್ಟವಾದರೆ ಈ ಪೂರ್ವದಿಕ್ಕಿನ ಭಾಗಕ್ಕೆ ಹೋಗೋಣ. ಗಾಲವ! ನಾನು ನನಗೆ ಪ್ರಿಯರಾದವರ ಕಾರ್ಯವನ್ನು ಮಾಡಲು ಸರ್ವದಾ ಸಿದ್ಧನಿದ್ದೇನೆ. ನಿನಗೆ ಬೇರೆಯೆಲ್ಲಿಯಾದರೂ ಹೋಗಬೇಕೆಂದಿದ್ದರೆ ಅದನ್ನೂ ಹೇಳು. ನಾನು ಈಗ ಅನ್ಯ ದಿಕ್ಕುಗಳ ಕುರಿತು ಹೇಳುತ್ತೇನೆ.

ಪೂರ್ವದಲ್ಲಿ ಶ್ರೌತಿ ವಿವಸ್ವತನು ಇದನ್ನು ಗುರುವಿಗೆ ದಕ್ಷಿಣೆಯನ್ನಾಗಿತ್ತನಲ್ಲವೇ? ಅದರಿಂದಲೇ ಈ ದಿಕ್ಕಿಗೆ ದಕ್ಷಿಣ

ಎಂಬ ಹೆಸರು ಬಂದಿತು. ಅಲ್ಲಿ ಮೂರೂ ಲೋಕಗಳ ಪಿತೃಗಳು ನೆಲೆಸಿರುತ್ತಾರೆ. ಧೂಮವನ್ನು ಕುಡಿಯುವ ದೇವತೆಗಳೂ ಅಲ್ಲಿ ನಿವಾಸಿಸುತ್ತಾರೆ ಎಂದು ಕೇಳಿದ್ದೇವೆ. ಅಲ್ಲಿ ವಿಶ್ವೇದೇವರೂ ಕೂಡ ಪಿತೃಗಳೊಂದಿಗೆ ವಾಸಿಸುತ್ತಾರೆ. ಲೋಕಗಳಲ್ಲಿಯ ಯಜ್ಞಗಳಲ್ಲಿ ಅವರೂ ಕೂಡ ಹವಿಸ್ಸುಗಳ ಸಮಭಾಗಿಗಳು. ಇದನ್ನು ಧರ್ಮನ ಎರಡನೆಯ ದ್ವಾರವೆಂದು ಕರೆಯುತ್ತಾರೆ. ಇಲ್ಲಿರುವವರ ಕಾಲವನ್ನು ತ್ರುಟಿಶ ಮತ್ತು ಲವಶಗಳಂತೆ ಲೆಖ್ಖಮಾಡಿ ನಿಶ್ಚಯಿಸುತ್ತಾರೆ. ಇಲ್ಲಿ ನಿತ್ಯವೂ ದೇವಋಷಿಗಳು, ಪಿತೃಲೋಕದ ಋಷಿಗಳು ಮತ್ತು ರಾಜರ್ಷಿಗಳು ಎಲ್ಲರೂ ಗತವ್ಯಥರಾಗಿ ವಾಸಿಸುತ್ತಾರೆ. ಅಲ್ಲಿ ದರ್ಮ ಮತ್ತು ಸತ್ಯಗಳಿವೆ. ಅಲ್ಲಿ ಕರ್ಮಗಳು ಫಲವನ್ನೀಯುತ್ತವೆ. ತೀರಿಕೊಂಡವರ ಕರ್ಮಗಳ ದಾರಿಯೇ ಇದು. ಎಲ್ಲರೂ ದುಸ್ತರರಾಗುವ (ವಿಶ್ರಾಂತಿ ಪಡೆದು ಪುನಃ ಚೇತನಗೊಳ್ಳುವ) ಸ್ಥಳವೆಂದರೆ ಈ ದಿಕ್ಕು. ಕತ್ತಲೆಯಿಂದ ಆವರಿಸಲ್ಪಡುವುದರಿಂದ ಅವರು ಸುಖವನ್ನು ಹೊಂದುವುದಿಲ್ಲ. ಅಲ್ಲಿ ಅಕೃತಾತ್ಮರು ನೋಡಲೆಂದು ಸೃಷ್ಟಿಸಲ್ಪಟ್ಟ ಬಹು ಸಹಸ್ರಾರು ನೈರೃತರು ವಾಸಿಸುತ್ತಾರೆ. ಅಲ್ಲಿ ಮಂದರದ ಕಣಿವೆಗಳಲ್ಲಿ ವಿಪ್ರರ್ಷಿಸದನಗಳಲ್ಲಿ ಗಂಧರ್ವರು ಚಿತ್ತ-ಬುದ್ಧಿಗಳನ್ನು ಅಪಹರಿಸುವ ಗೀತೆಗಳನ್ನು ಹಾಡುತ್ತಾರೆ. ಅಲ್ಲಿಯೇ ಸಾಮದ ಹಾಡು-ಗೀತೆಗಳನ್ನು ಕೇಳಿ

ರೈವತನು ಪತ್ನಿಯನ್ನು, ಅಮಾತ್ಯರನ್ನು, ಮತ್ತು ರಾಜ್ಯವನ್ನು ತೊರೆದು ವನಕ್ಕೆ ತೆರಳಿದನು. ಅಲ್ಲಿ ಸಾವರ್ಣಿ ಮತ್ತು ಯವಕ್ರೀತನ ಮಗನು ಸೂರ್ಯನಿಗೆ ಗಡಿಹಾಕಿ, ಅವನು ಅದನ್ನು ದಾಟದೇ ಹಿಂದಿರುಗುತ್ತಾನೆ. ಅಲ್ಲಿ ಮಹಾತ್ಮ, ರಾಕ್ಷಸರಾಜ, ಪೌಲಸ್ತ್ಯ, ರಾವಣನು ತಪಸ್ಸನ್ನು ತಪಿಸಿ ಸುರರಿಂದ ಅಮರತ್ವವನ್ನು ಕೇಳಿದನು. ಅಲ್ಲಿ ತನ್ನ ಪಾಪವರ್ತನೆಯಿಂದ ವೃತ್ರನು ಶಕ್ರನೊಂದಿಗೆ ಶತ್ರುತ್ವವನ್ನು ಬೆಳೆಸಿದನು. ಎಲ್ಲ ಜೀವಿಗಳು ಇಲ್ಲಿ ಬಂದು ಪುನಃ ಪಂಚಭೂತಗಳಲ್ಲಿ ಸೇರುತ್ತವೆ. ಇಲ್ಲಿ ದುಷ್ಕೃತಕರ್ಮಗಳನ್ನು ಮಾಡಿದ ನರರು ಪಚನವಾಗುತ್ತಾರೆ. ಇಲ್ಲಿಯೇ ವಿತರಣಗಳಿಂದ ಕೂಡಿದ ವೈತರಣೀ ಎಂಬ ನದಿಯು ಹರಿಯುತ್ತದೆ. ಇಲ್ಲಿಗೆ ಬಂದು ಜೀವಿಗಳು ಅತ್ಯಂತ ಸುಖವನ್ನೂ ಅತ್ಯಂತ ದುಃಖವನ್ನೂ ಅನುಭವಿಸುತ್ತಾರೆ. ಇಲ್ಲಿಗೆ ತಲುಪಿದ ದಿವಾಕರನು ಸುರಸ ನೀರನ್ನು ಸುರಿಸುತ್ತಾನೆ. ಧನಿಷ್ಠಾ ದಿಕ್ಕಿಗೆ ಹೋಗಿ ಪುನಃ ಹಿಮವನ್ನು ಸುರಿಸುತ್ತಾನೆ. ಹಿಂದೆ ನಾನು ಹಸಿದು ಚಿಂತೆಯಲ್ಲಿದ್ದಾಗ ಅಲ್ಲಿಯೇ ಯುದ್ಧಮಾಡುತ್ತಿರುವ ಬೃಹದಾಕಾರದ ಗಜ-ಕಚ್ಛಪರೀರ್ವರನ್ನು ಪಡೆದಿದ್ದೆನು. ಅಲ್ಲಿ ಸೂರ್ಯನಿಂದ ಶಕ್ರಧನುವೆಂಬ ಹೆಸರಿನ ಮಹಾನೃಷಿಯು ಹುಟ್ಟಿದನು. ಅವನು ನಂತರ ಕಪಿಲದೇವನೆಂದಾದನು. ಅವನಿಂದಲೇ

ಸಗರಾತ್ಮಜರು ನಾಶಗೊಂಡರು. ಅಲ್ಲಿಯೇ ಶಿವಾ ಎಂಬ ಹೆಸರಿನ ವೇದಪಾರಂಗತರು ಸಿದ್ಧಿಯನ್ನು ಪಡೆದರು. ಅಖಿಲ ವೇದಗಳನ್ನೂ ಗೆದ್ದು ಕೊನೆಯಲ್ಲಿ ಯಮಕ್ಷಯವನ್ನು ಹೊಂದಿದರು. ಅಲ್ಲಿ ವಾಸುಕಿ, ತಕ್ಷಕ, ನಾಗ ಐರಾವತನಿಂದ ಪಾಲಿತವಾದ ಭೋಗವತೀ ಎಂಬ ಹೆಸರಿನ ಪುರಿಯಿದೆ. ನಿರ್ಯಾಣಕಾಲದಲ್ಲಿ ಅಲ್ಲಿ ಸ್ವಯಂ ಭಾಸ್ಕರನಿಂದ ಅಥವಾ ಅಗ್ನಿಯಿಂದ ಭೇದಿಸಲಸಾಧ್ಯವಾದ ಮಹಾ ಕತ್ತಲೆಯು ಸಿಗುತ್ತದೆ. ತಪಸ್ಸನ್ನು ತಪಿಸಿರುವ ನೀನು ಕೂಡ ಈ ಮಾರ್ಗದಲ್ಲಿ ಪ್ರಯಾಣಿಸಬೇಕಾಗುತ್ತದೆ. ಈ ದಿಕ್ಕಿಗೆ ಹೋಗಬೇಕಾ ಹೇಳು. ಇಲ್ಲದಿದ್ದರೆ ಪಶ್ಚಿಮದ ಕುರಿತು ನನ್ನಿಂದ ಕೇಳು.

ಇದು ಗೋಪತಿ ವರುಣ ರಾಜನ ದಿಕ್ಕು. ಸಲಿಲರಾಜನು ಸದಾ ಇಲ್ಲಿಯೇ ಪ್ರತಿಷ್ಠನಾಗಿದ್ದಾನೆ. ದಿನದ ಪಶ್ಚಾತ್ ಸೂರ್ಯನು ಸ್ವಯಂ ಕಿರಣಗಳನ್ನು ಅಲ್ಲಿ ವಿಸರ್ಜಿಸುವುದರಿಂದ ಈ ದಿಕ್ಕು ಪಶ್ಚಿಮವೆಂದು ವಿಖ್ಯಾತವಾಗಿದೆ. ಜಲಚರರ ಮತ್ತು ಸಲಿಲಗಳ ರಕ್ಷಣೆಗಾಗಿ ಭಗವಾನ್ ಕಶ್ಯಪ ದೇವನು ವರುಣನನ್ನು ಇಲ್ಲಿ ಅಭಿಷೇಕಿಸಿದನು. ಅಲ್ಲಿ ವರುಣನ ಎಲ್ಲ ಆರು ರಸಗಳನ್ನು ಕುಡಿದು ತಮಸ್ಸನ್ನು ಕಳೆಯುವ ಸೋಮನು ಶುಕ್ಲಪಕ್ಷದ ಆದಿಯಲ್ಲಿ ತರುಣನಾಗಿ ಹುಟ್ಟುತ್ತಾನೆ. ಈ ದಿಕ್ಕಿನಲ್ಲಿ ದೈತ್ಯರು ವಾಯುವಿನಿಂದ ಕಟ್ಟಿ ಎಸೆಯಲ್ಪಟ್ಟಿದ್ದರು.

ಆ ಭಿರುಗಾಳಿಗೆ ಸಿಲುಕಿ ನಿಟ್ಟುಸಿರು ಬಿಡುತ್ತಾ ಅವರು ಇಲ್ಲಿಯೇ ನಿದ್ದೆ ಮಾಡಿದರು. ಅಲ್ಲಿ ಸಾಯಂಕಾಲದ ಸಂಧ್ಯಾ ಸಮಯವನ್ನು ಒದಗಿಸುವ ಅಸ್ತ ಎಂಬ ಹೆಸರಿನ ಪರ್ವತವು ಸೂರ್ಯನನ್ನು ಪ್ರಣಯಿಸಿ ಸ್ವೀಕರಿಸುತ್ತದೆ. ದಿವಸವು ಕಳೆದು ಹೋದಾಗ ಅಲ್ಲಿ ರಾತ್ರಿ ಮತ್ತು ನಿದ್ದೆಗಳು ಜೀವಲೋಕದ ಅರ್ಧ ಆಯುಸ್ಸನ್ನು ಕದಿಯಲು ಪಸರಿಸುತ್ತವೆ. ಅಲ್ಲಿ ಗರ್ಭವನ್ನು ಧರಿಸಿ ಮಲಗಿದ್ದ ದಿತಿ ದೇವಿಯ ಗರ್ಭವನ್ನು ಶಕ್ರನು ವಿಭಜನೆ ಮಾಡಿದನು ಮತ್ತು ಅವುಗಳಿಂದ ಮರುದ್ಗಣರು ಜನಿಸಿದರು. ಅಲ್ಲಿ ಹಿಮವತ್ ಪರ್ವತದ ಬೇರುಗಳು ಮಂದರ ಪರ್ವತದ ವರೆಗೂ ಶಾಶ್ವತವಾಗಿ ಪಸರಿಸಿವೆ. ಸಾವಿರ ವರ್ಷಗಳು ಪ್ರಯಾಣಿಸಿದರೂ ಈ ಬೇರುಗಳ ಕೊನೆಯನ್ನು ತಲುಪಲಾರೆವು. ಅಲ್ಲಿ ಕಾಂಚನಶೈಲದ ಕಾಂಚನ ಸರೋವರದ ತೀರವನ್ನು ಸೇರಿ ಸುರಭಿಯು ಹಾಲನ್ನು ಸುರಿಸಿದಳು. ಅಲ್ಲಿ ಸಮುದ್ರದ ಮಧ್ಯದಲ್ಲಿ ಸೋಮಸೂರ್ಯರನ್ನು ನುಂಗಲು ಕಾತರನಾಗಿರುವ ಸೂರ್ಯನಂತೆಯೇ ಇರುವ ಸ್ವರ್ಭಾನು (ರಾಹು) ವಿನ ಶಿರವಿಲ್ಲದ ದೇಹವು ಕಾಣುತ್ತದೆ. ಇಲ್ಲಿ ಅದೃಶ್ಯನೂ, ಅಪ್ರಮೇಯನೂ, ಹಸಿರುಬಣ್ಣದ ಕೂದಲಿರುವವನೂ ಆದ ಸುವರ್ಣಶಿರಸನು ದೊಡ್ಡ ಧ್ವನಿಯಲ್ಲಿ ವೇದಗಳನ್ನು ಹಾಡುವುದು ಕೇಳಿಬರುತ್ತದೆ. ಅಲ್ಲಿ

ಹರಿಮೇಧಸನ ಕುಮಾರಿ ಧ್ವಜವತೀ ಎಂಬ ಹೆಸರಿನವಳು 'ನಿಲ್ಲು! ನಿಲ್ಲು!' ಎಂಬ ಸೂರ್ಯನ ಶಾಸನದಂತೆ ಅಲ್ಲಿಯೇ ನಿಂತುಬಿಟ್ಟಿದ್ದಾಳೆ. ಅಲ್ಲಿ ವಾಯು, ಅಗ್ನಿ, ನೀರು, ಆಕಾಶ, ದಿನ, ರಾತ್ರಿಗಳು ದುಃಖಸ್ಪರ್ಷದಿಂದ ಮುಕ್ತವಾಗುತ್ತವೆ. ಅಲ್ಲಿಂದ ಮುಂದೆ ಸೂರ್ಯನ ಗತಿಯು ವಕ್ರವಾಗುತ್ತದೆ. ಅಲ್ಲಿ ಎಲ್ಲ ನಕ್ಷತ್ರಗಳೂ ಸೂರ್ಯಮಂಡಲವನ್ನು ಪ್ರವೇಶಿಸುತ್ತವೆ. ಭಾನುವಿನೊಂದಿಗೆ ಇಪ್ಪತ್ತೆಂಟು ರಾತ್ರಿಗಳನ್ನು ಕಳೆದು, ಸೂರ್ಯನ ಸಂಗವನ್ನು ತೊರೆದು ಪುನಃ ಸೋಮನ ಸಂಗದಲ್ಲಿ ಬರುತ್ತವೆ. ಅಲ್ಲಿ ನಿತ್ಯವೂ ಸಾಗರವನ್ನು ಹುಡುಕಿಕೊಂಡು ಹೋಗುವ ನದಿಗಳು ಹುಟ್ಟುತ್ತವೆ. ಇಲ್ಲಿ ಮೂರು ಲೋಕಗಳ ನೀರುಗಳೂ ವರುಣನ ಆಶ್ರಯದಲ್ಲಿವೆ. ಅಲ್ಲಿ ಪನ್ನಗರಾಜ ಅನಂತನ ಮನೆಯಿದೆ. ಅಲ್ಲಿ ಅನಾದಿನಿಧನ ವಿಷ್ಣುವಿನ ಅನುತ್ತಮ ಸ್ಥಾನವೂ ಇದೆ. ಅಲ್ಲಿ ಅನಲಸಖ ಪವನನ ಮನೆಯಿದೆ. ಅಲ್ಲಿ ಮಹರ್ಷಿ ಕಶ್ಯಪ ಮತ್ತು ಮಾರೀಚನ ನಿವೇಶನಗಳೂ ಇವೆ. ಇದು ಪಶ್ಚಿಮ ಮಾರ್ಗ. ಈ ದಿಕ್ಕನ್ನು ನಿನಗೆ ವರ್ಣಿಸಿದ್ದೇನೆ. ನಿನಗೆ ಎಲ್ಲಿಗೆ ಹೋಗುವ ಬುದ್ಧಿಯಿದೆ? ಹೇಳು!

ಪಾಪ ಮತ್ತು ನಿಃಶ್ರೇಯಸ್ಸಿನಿಂದ ಪಾರುಮಾಡುವಂಥಹ ಉತ್ತಾರಣ ಫಲವನ್ನು ಹೊಂದಿರುವುದರಿಂದ ತಿಳಿದವರು ಈ ದಿಕ್ಕನ್ನು ಉತ್ತರ ಎಂದು ಕರೆಯುತ್ತಾರೆ. ಹಿರಣ್ಯವನ್ನುಳ್ಳ

ಉತ್ತರದ ಮಾರ್ಗವು ಪಶ್ಚಿಮ-ಪೂರ್ವ ದಿಕ್ಕುಗಳ ವರೆಗೂ ಪಸರಿಸಿರುವುದರಿಂದ ಇದನ್ನು ಮಧ್ಯಮ ಎಂದೂ ಕರೆಯುತ್ತಾರೆ. ವರಿಷ್ಠವಾಗಿರುವ ಈ ಉತ್ತರ ದಿಕ್ಕಿನಲ್ಲಿ ಸೌಮ್ಯನಾಗಿಲ್ಲದಿರುವ, ವಿಧೇಯಾತ್ಮನಾಗಿಲ್ಲದ, ಅಧರ್ಮ ಜನರು ವಾಸಿಸುವುದಿಲ್ಲ. ಅಲ್ಲಿ ಕೃಷ್ಣ ನಾರಾಯಣ ಮತ್ತು ನರೋತ್ತಮ ಜಿಷ್ಣು, ಮತ್ತು ಬ್ರಹ್ಮರು ಬದರಿಕಾಶ್ರಮಪದದಲ್ಲಿ ಶಾಶ್ವತರಾಗಿ ನೆಲಸಿದ್ದಾರೆ. ಅಲ್ಲಿ ಹಿಮವತ್ಪರ್ವತದ ಮೇಲೆ ಮಹೇಶ್ವರನು ನಿತ್ಯವೂ ನೆಲಸಿದ್ದಾನೆ. ಅಲ್ಲಿ ಚಂದ್ರಮನನ್ನು ವಿಪ್ರರ ರಾಜ್ಯಕ್ಕೆ ಅಭಿಷೇಕಿಸಲಾಯಿತು. ಅಲ್ಲಿ ಗಗನದಿಂದ ಕಳಚಿ ಬೀಳುತ್ತಿದ್ದ ಗಂಗೆಯನ್ನು ಹಿಡಿದು ಮಾನುಷ ಲೋಕಕ್ಕೆ ಕೊಟ್ಟನು. ಅಲ್ಲಿ ಮಹೇಶ್ವರನನ್ನು ಬಯಸಿ ದೇವಿಯು ತಪಸ್ಸನ್ನು ತಪಿಸಿದಳು. ಅಲ್ಲಿ ಕಾಮ, ರೋಷ, ಶೈಲ ಮತ್ತು ಉಮ ಒಟ್ಟಿಗೇ ಬೆಳಗಿದರು. ಅಲ್ಲಿ ಕೈಲಾಸದಲ್ಲಿ ರಾಕ್ಷಸ, ಯಕ್ಷ, ಗಂಧರ್ವರ ಅಧಿಪತ್ಯದಿಂದ ಧನದನು ಅಭಿಷಿಕ್ತನಾದನು. ಅಲ್ಲಿ ರಮ್ಯ ಚೈತ್ರರಥವಿದೆ. ಅಲ್ಲಿ ವೈಖಾನಸಾಶ್ರಮವಿದೆ. ಅಲ್ಲಿ ಮಂದಾಕಿನಿಯೂ ಮಂದರವೂ ಇವೆ. ಅಲ್ಲಿ ನೈರೃತರಿಂದ ರಕ್ಷಿತವಾದ ಸೌಗಂಧಿಕ ವನವಿದೆ. ಅಲ್ಲಿ ಹುಲ್ಲುಗಾವಲಿದೆ, ಬಾಳೆಯ ವನವಿದೆ ಮತ್ತು ಸಂತಾನಕ ಪರ್ವತಗಳಿವೆ. ಅಲ್ಲಿ ಸಂಯಮಿಗಳಾದ, ಸ್ವಚ್ಛಂದರಾದ ಸಿದ್ಧರ ವಿಮಾನಗಳೂ, ಅನುರೂಪವಾದ ಕಾಮ ಭೋಗಗಳೂ

ಇವೆ. ಅಲ್ಲಿ ಸಪ್ತ ಋಷಿಗಳೂ ಮತ್ತು ದೇವೀ ಅರುಂಧತಿಯೂ ಕಾಣುತ್ತಾರೆ. ಅಲ್ಲಿ ಸ್ವಾತಿಯು ಉದಯಿಸಿ ಕಾಣಿಸಿಕೊಳ್ಳುತ್ತದೆ. ಅಲ್ಲಿ ಪಿತಾಮಹನು ಯಜ್ಞವನ್ನೇರಿರುತ್ತಾನೆ. ಅಲ್ಲಿ ಚಂದ್ರ, ಸೂರ್ಯ ಮತ್ತು ನಕ್ಷತ್ರಗಳು ನಿತ್ಯವೂ ತಿರುಗುತ್ತಿರುತ್ತವೆ. ಅಲ್ಲಿ ಧಾಮ ಎಂಬ ಹೆಸರಿನ ಮಹಾತ್ಮ, ಸತ್ಯವಾದಿ, ದ್ವಿಜಸತ್ತಮ ಮುನಿಗಳು ಗಂಗಾದ್ವಾರವನ್ನು ರಕ್ಷಿಸುತ್ತಾರೆ. ಅವರ ಹುಟ್ಟು, ಕರ್ಮಗಳು, ಮತ್ತು ತಪಶ್ಚರ್ಯಗಳು, ಅವರು ಬಳಸುವ ಸಹಸ್ರಾರು ಪಾತ್ರೆಗಳು ಮತ್ತು ಕಾಮಭೋಗಗಳು ಯಾರಿಗೂ ತಿಳಿದಿಲ್ಲ. ಅವರು ಹಾಕಿದ ಗಡಿಯನ್ನು ದಾಟಿ ಯಾವ ನರನು ಹೋಗುತ್ತಾನೋ ಅವನು ನಾಶಹೊಂದುವುದು ಸತ್ಯ. ಅವರು ಕಾಯುವ ಗಡಿಯನ್ನು ಇದೂವರೆಗೆ ಯಾರೂ - ದೇವ ನಾರಾಯಣ ಅಥವಾ ಅವ್ಯಯ ನರ ಜಿಷ್ಣುವನ್ನು ಬಿಟ್ಟು – ಹೋಗಿಲ್ಲ. ಅಲ್ಲಿ ಐಲವಿಲ (ಕುಬೇರ) ನ ಸ್ಥಾನವಾದ ಕೈಲಾಸವೆನ್ನುವುದಿದೆ. ಅಲ್ಲಿಯೇ ವಿದ್ಯುತ್ಪ್ರಭಾ ಎಂಬ ಹೆಸರಿನ ಹತ್ತು ಅಪ್ಸರೆಯರು ಜನಿಸಿದರು. ಅಲ್ಲಿ ತ್ರಿಲೋಕ ವಿಕ್ರಮದಲ್ಲಿ ವಿಷ್ಣುವು ಉತ್ತರ ದಿಕ್ಕನ್ನು ತುಳಿದ ವಿಷ್ಣುಪದ ಎಂಬ ಹೆಸರಿನ ಸ್ಥಳವಿದೆ. ಅಲ್ಲಿ ಕಾಂಚನ ಸರೋವರದ ಉಶೀರಬೀಜದಲ್ಲಿ ರಾಜಾ ಮರುತ್ತನು ಯಜ್ಞ-ಇಷ್ಟಿಯನ್ನು ನಡೆಸಿದನು. ಅಲ್ಲಿ ಮಹಾತ್ಮ ವಿಪ್ರರ್ಷಿ ಜೀಮೂತನಿಗೆ ಪುಣ್ಯ, ವಿಮಲ, ಕಮಲಾಕರ, ಪುಣ್ಯ ಹಿಮವತನು ಸಾಕ್ಷಾತ್ಕರಿಸಿದನು. ಆಗ

ಜೀಮೂತನು ಆ ಮಹಾ ಧನವನ್ನು ಸಂಪೂರ್ಣವಾಗಿ ಬ್ರಾಹ್ಮಣರಿಗಿತ್ತನು. ಅನಂತರ ಮಹರ್ಷಿಯು ಆ ವನವನ್ನು ಜೈಮೂತವನವೆಂದು ಕರೆಯುವಂತೆ ಕೇಳಿಕೊಂಡನು. ಅಲ್ಲಿ ನಿತ್ಯವೂ ಬೆಳಿಗ್ಗೆ ಮತ್ತು ಸಾಯಂಕಾಲ ದಿಕ್ಪಾಲಕರು 'ಯಾರ ಕೆಲಸವು ಏನು?' ಎಂದು ಚರ್ಚಿಸುತ್ತಾರೆ. ಉತ್ತರವು ಇವುಗಳಿಂದ ಮತ್ತು ಇನ್ನೂ ಇತರ ಗುಣಗಳಿಂದ ಕೂಡಿದೆ. ಎಲ್ಲ ದಿಕ್ಕುಗಳಲ್ಲಿ ಇದು ಶ್ರೇಷ್ಠವಾಗಿರುವುದರಿಂದ ಇದಕ್ಕೆ ಉತ್ತರವೆಂಬ ಹೆಸರಿದೆ. ಈ ರೀತಿ ನಾನು ನಿನಗೆ ನಾಲ್ಕೂ ದಿಕ್ಕುಗಳನ್ನು ಕ್ರಮಬದ್ಧವಾಗಿ ವಿಸ್ತಾರವಾಗಿ ವರ್ಣಿಸಿದ್ದೇನೆ. ಎಲ್ಲಿ ಹೋಗಲು ಬಯಸುತ್ತೀಯೇ? ದಿಕ್ಕುಗಳನ್ನು, ಅಖಿಲ ಪೃಥ್ವಿಯನ್ನೂ ನಿನಗೆ ತೋರಿಸಲು ನಾನು ಉತ್ಸುಕನಾಗಿದ್ದೇನೆ. ಬ್ರಹ್ಮನ್! ನನ್ನನ್ನು ಏರು."

ಗಾಲವನು ಹೇಳಿದನು:

"ಗುರುತ್ಮನ್! ಎಲ್ಲಿ ಧರ್ಮನ ಎರಡು ಕಣ್ಣುಗಳು ಮೊದಲು ತೆರೆದವೋ ಆ ಪೂರ್ವಕ್ಕೆ ನನ್ನನ್ನು ಕರೆದುಕೊಂಡು ಹೋಗು! ನೀನು ಮೊದಲು ವರ್ಣಿಸಿದ ಪೂರ್ವದಿಕ್ಕಿಗೆ ಹೋಗು. ಅಲ್ಲಿ ದೈವತರ ಸಾನ್ನಿಧ್ಯವಿದೆಯೆಂದು ನೀನು ಹೇಳಿದ್ದೀಯೆ. ಅಲ್ಲಿ ಸತ್ಯ-ಧರ್ಮಗಳು ನೆಲಸಿವೆಯೆಂದು ನೀನು ಹೇಳಿದ್ದೀಯೆ. ನಾನು ಸಮಸ್ತ ದೇವತೆಗಳನ್ನೂ ಭೇಟಿಯಾಗಲು ಬಯಸುತ್ತೇನೆ.

ಆ ಸುರರನ್ನೂ ನೋಡಲು ಬಯಸುತ್ತೇನೆ.”

ವಿನತಾಸೂನುವು “ಏರು” ಎಂದು ದ್ವಿಜನಿಗೆ ಹೇಳಿದನು. ಆಗ ಮುನಿ ಗಾಲವನು ಗರುಡನನ್ನೇರಿದನು. ಗಾಲವನು ಹೇಳಿದನು:

“ಪನ್ನಗಾಶನ! ಹೋಗುತ್ತಿರುವ ನಿನ್ನ ರೂಪವು ಪೂರ್ವಾಹ್ಣದ ಸಹಸ್ರಾಂಶ, ವಿವಸ್ವತ ಭಾಸ್ಕರನಂತೆ ಕಾಣುತ್ತದೆ. ನೀನು ಎಷ್ಟು ವೇಗದಿಂದ ಹೋಗುತ್ತಿದ್ದೀಯೆಂದರೆ ನಿನ್ನ ರೆಕ್ಕೆಗಳ ರಭಸಕ್ಕೆ ಸಿಕ್ಕಿ ಉರುಳಿದ ಮರಗಳು ನಿನ್ನನ್ನೇ ಅನುಸರಿಸಿಬರುತ್ತಿರುವುದನ್ನು ನೋಡುತ್ತಿದ್ದೇನೆ. ನಿನ್ನ ರೆಕ್ಕೆಗಳ ವೇಗದೊಂದಿಗೆ ಈ ಸಾಗರ, ವನ, ಶೈಲ, ಕಾನನಗಳೊಂದಿಗೆ ಇಡೀ ಭೂಮಿಯನ್ನೇ ಎಳೆದುಕೊಂಡು ಹೋಗುತ್ತಿರುವೆಯೋ ಎಂದು ಅನ್ನಿಸುತ್ತಿದೆ. ನಿನ್ನ ರೆಕ್ಕೆಗಳ ಹೊಡೆತದಿಂದ ಉಂಟಾದ ಬಿರುಗಾಳಿಯು ಮೀನು, ನಾಗ ಮತ್ತು ಮೊಸಳೆಗಳೊಂದಿಗೆ ಸಾಗರವು ಮೇಲುಬ್ಬುತ್ತಿದೆ. ಒಂದೇ ರೀತಿಯ ರೂಪವುಳ್ಳ, ಮತ್ಸ್ಯಗಳೂ, ತಿಮಿಂಗಿಲಗಳೂ, ಸರ್ಪಗಳೂ, ಮನುಷ್ಯರ ರೂಪವುಳ್ಳವುಗಳೂ ನಿನ್ನ ರಭಸಕ್ಕೆ ಸಿಲುಕಿ ನಾಶವಾಗುತ್ತಿರುವುದನ್ನು  ನೋಡುತ್ತಿದ್ದೇನೆ. ಕೇಳಿಬರುತ್ತಿರುವ ಸಾಗರದ ಘೋರ್ಗರೆತವು ನನ್ನನ್ನು ಕಿವುಡುಮಾಡುತ್ತಿದೆ. ಕೇಳಲಿಕ್ಕಾಗುತ್ತಿಲ್ಲ. ನೋಡಲಿಕ್ಕಾಗುತ್ತಿಲ್ಲ. ಕಾರಣವು ನನಗೆ ತಿಳಿಯುತ್ತಿಲ್ಲ. ಬ್ರಹ್ಮಹತ್ಯೆಯನ್ನು ಸ್ಮರಿಸಿಕೊಂಡು ನೀನು

ನಿಧಾನವಾಗಿ ಹೋಗುವುದು ಒಳ್ಳೆಯದು. ಸೂರ್ಯ, ದಿಕ್ಕು, ಆಕಾಶವು ಕಾಣುತ್ತಿಲ್ಲ. ಕತ್ತಲೆಯೇ ಕಾಣುತ್ತಿದೆ. ನಿನ್ನ ಶರೀರವೂ ಕಾಣುತ್ತಿಲ್ಲ. ಮಣಿಗಳಂತೆ ತೋರುವ ನಿನ್ನ ಎರಡು ಕಣ್ಣುಗಳು ಮಾತ್ರ ಕಾಣುತ್ತಿವೆ. ನನ್ನ ಅಥವಾ ನಿನ್ನ ಶರೀರಗಳನ್ನು ನಾನು ಕಾಣುತ್ತಿಲ್ಲ. ಪದೇ ಪದೇ ನಿನ್ನ ಸಲಿಲದಿಂದ ಎದ್ದು ಬರುವ ಬೆಂಕಿಯ ಕಿಡಿಗಳನ್ನು ಕಾಣುತ್ತಿದ್ದೇನೆ. ತಕ್ಷಣವೇ ನಿನ್ನ ಈ ಕಣ್ಣುಗಳ ಬೆಳಕನ್ನು ಕಡಿಮೆಮಾಡು. ನಿನ್ನ ಹೋಗುವ ಈ ವೇಗವನ್ನು ಕಡಿಮೆಮಾಡು! ನಿನ್ನೊಡನೆ ಹೋಗುವುದರ ಪ್ರಯೋಜನವಾದರೂ ಏನು? ನಿನ್ನ ಈ ಮಹಾವೇಗವನ್ನು ಕಡಿಮೆಮಾಡು. ನಿನ್ನ ವೇಗವನ್ನು ಸಹಿಸಲಾರೆ. ನನ್ನ ಗುರುವಿಗೆ ಚಂದ್ರನ ಮುಖದಂತೆ ಬಿಳಿಯಾಗಿರುವ ಆದರೆ ಒಂದೇ ಕಿವಿಯು ಕಪ್ಪಾಗಿರುವ ಎಂಟುನೂರು ಕುದುರೆಗಳನ್ನು ತಂದು ಕೊಡುತ್ತೇನೆಂದು ಭರವಸೆಯನ್ನಿತ್ತಿದ್ದೇನೆ. ಅವುಗಳನ್ನು ಒಂದುಗೂಡಿಸುವ ಮಾರ್ಗವನ್ನು ಕಾಣುತ್ತಿಲ್ಲ. ಆದುದರಿಂದಲೇ ನಾನು ಜೀವವನ್ನು ತ್ಯಜಿಸುವ ಮಾರ್ಗವನ್ನು ಕಂಡುಕೊಂಡಿದ್ದೇನೆ. ನನ್ನಲ್ಲಿ ಧನವಿಲ್ಲ. ಧನಿಕನಾದ ಸ್ನೇಹಿತನೂ ಇಲ್ಲ. ಎಷ್ಟೇ ಧನವಿದ್ದರೂ ನನಗೆ ಬೇಕಾದುದನ್ನು ಕೊಡಲಿಕ್ಕಾಗುವುದಿಲ್ಲ."

ಈ ರೀತಿ ದೀನನಾಗಿ ಬಹುವಿಧದಲ್ಲಿ ಹೇಳುತ್ತಿರುವ ಗಾಲವನಿಗೆ ವಿನತಾತ್ಮಜನು ತನ್ನ ವೇಗವನ್ನು ಕಡಿಮೆಗೊಳಿಸದೇ ನಗುತ್ತಾ

ಉತ್ತರಿಸಿದನು:

> “ವಿಪ್ರರ್ಷೇ ! ಜೀವವನ್ನು ತೊರೆಯಲು ಬಯಸುವ ನಿನಗೆ ತಿಳುವಳಿಕೆಯಿಲ್ಲ. ಮೃತ್ಯುವು ಕೃತ್ರಿಮವಾದಲ್ಲ. ಕಾಲನೇ ಪರಮೇಶ್ವರ. ಮೊದಲೇ ನನಗೆ ಏಕೆ ನಿನ್ನ ಉದ್ದೇಶವನ್ನು ಹೇಳಲಿಲ್ಲ? ಇವೆಲ್ಲವುಗಳನ್ನೂ ಪಡೆಯುವುದಕ್ಕೆ ಒಂದು ಮಹಾ ಉಪಾಯವಿದೆ. ಇಲ್ಲಿ ಸಾಗರದ ಬಳಿ ಋಷಭ ಎಂಬ ಹೆಸರಿನ ಪರ್ವತವಿದೆ. ಇಲ್ಲಿ ತಿಂದು ವಿಶ್ರಮಿಸಿ ನಂತರ ಹಿಂದಿರುಗುತ್ತೇನೆ.”

ದ್ವಿಜ-ಪಕ್ಷಿಗಳಿಬ್ಬರೂ ಋಷಭದ ಶಿಖರದ ಮೇಲೆ ಇಳಿದು ಅಲ್ಲಿ ತಪೋನ್ವಿತೆ ಬ್ರಾಹ್ಮಣೀ ಶಾಂಡಲಿಯನ್ನು ಕಂಡರು. ಸುಪರ್ಣನು ಅಭಿವಂದಿಸಿದನು. ಗಾಲವನೂ ಅವಳನ್ನು ಪೂಜಿಸಿದನು. ಅವಳೂ ಕೂಡ “ಸ್ವಾಗತ !” ಎನ್ನಲು ಅವರು ಹರಡಿದ್ದ ದರ್ಭೆಗಳ ಮೇಲೆ ಕುಳಿತುಕೊಂಡರು. ಬೇಗನೇ ಬಲಿ-ಮಂತ್ರಗಳಿಂದ ಕೂಡಿಸಿ ಸಿದ್ಧಪಡಿಸಲ್ಪಟ್ಟ ಅನ್ನವನ್ನು ಊಟಮಾಡಿ ಅವರಿಬ್ಬರೂ ಊಟದಿಂದ ಮೋಹಿತರಾಗಿ ಭೂಮಿಯ ಮೇಲೆ ಮಲಗಿಕೊಂಡರು. ಸ್ವಲ್ಪವೇ ಸಮಯದಲ್ಲಿ ಎಚ್ಚರಗೊಂಡ ಸುಪರ್ಣನು ಹೊರಡಲು ಬಯಸಿದನು. ಆಗ ಆ ಪಕ್ಷಿಯು ತನ್ನ ರೆಕ್ಕೆಗಳು ದೇಹದಿಂದ ಕಳಚಿ ಬಿದ್ದಿರುವುದನ್ನು ನೋಡಿದನು. ಆ ಖಗನು ತಲೆ ಕಾಲುಗಳನ್ನುಳ್ಳ ಕೇವಲ ಒಂದು ಮಾಂಸದ ಮುದ್ದೆಯಂತೆ ಕಂಡನು. ಅವನನ್ನು ನೋಡಿದ ಗಾಲವನು

ವಿಷಣ್ಣನಾಗಿ ಕೇಳಿದನು:

> "ನಿನಗೇನಾಯಿತು? ಇನ್ನು ಎಷ್ಟು ಕಾಲ ನಾವು ಇಲ್ಲಿ ಇರಬೇಕು? ನೀನು ಏನಾದರೂ ಅಶುಭವೂ ಧರ್ಮದೂಷಣವೂ ಆಗಿರುವುದನ್ನು ಮನಸ್ಸಿನಲ್ಲಿ ಯೋಚಿಸಿದೆಯೇನು? ನಾನು ನಿನಗೆ ಸ್ವಲ್ಪವೂ ವ್ಯಭಿಚಾರವಾಗಿರಲಿಕ್ಕಿಲ್ಲ ತಾನೇ?"

ಆಗ ಸುಪರ್ಣನು ವಿಪ್ರನಿಗೆ ಹೇಳಿದನು:

> "ದ್ವಿಜ! ಈ ಸಿದ್ಧಳನ್ನು ಇಲ್ಲಿಂದ ಎಲ್ಲಿ ಪ್ರಜಾಪತಿಯಿರುವನೋ, ಎಲ್ಲಿ ಮಹಾದೇವನಿರುವನೋ, ಎಲ್ಲಿ ಸನಾತನ ವಿಷ್ಣುವಿರುವನೋ, ಎಲ್ಲಿ ಧರ್ಮ ಮತ್ತು ಯಜ್ಞಗಳು ಇವೆಯೋ ಅಲ್ಲಿಗೆ ಕೊಂಡೊಯ್ಯಬೇಕೆಂಬ ಯೋಚನೆಯೊಂದು ನನಗೆ ಬಂದಿತ್ತು. ನಮಸ್ಕರಿಸಿ ಭಗವತಿಯಲ್ಲಿ ನಾನು ಬೇಡಿಕೊಳ್ಳುತ್ತೇನೆ. ಪ್ರಿಯವಾದುದನ್ನು ಮಾಡಬೇಕೆಂದು ನಾನು ನಿನ್ನನ್ನು ಕೊಂಡೊಯ್ಯಲು ಮನಸ್ಸಿನಲ್ಲಿ ಯೋಚಿಸಿದೆನಲ್ಲ! ಅದು ನಿನಗೆ ಬಹುಮಾನವನ್ನು ಕೊಡಬೇಕೆಂಬ ನನ್ನ ಬಯಕೆಯು ನಡೆಸಿತು. ಅದು ಸುಕೃತವಾಗಿರಲಿ ದುಷ್ಕೃತವಾಗಿರಲಿ ದೊಡ್ಡ ಮನಸ್ಸು ಮಾಡಿ ಕ್ಷಮಿಸಬೇಕು."

ಆಗ ಶಾಂಡಲಿಯು ಆ ಪತಗೇಂದ್ರ ದ್ವಿಜರ್ಷಭರಿಬ್ಬರಿಗೂ ಹೇಳಿದಳು:

"ಸುಪರ್ಣ ! ಹೆದರಬೇಡ. ಸುಪರ್ಣನೆಂಬ ಸಂಭ್ರಮವನ್ನು ತೊರೆ. ನಾನು ನಿನ್ನಿಂದ ನಿಂದಿತಳಾಗಿದ್ದೇನೆ. ನಿಂದೆಯನ್ನು ನಾನು ಕ್ಷಮಿಸುವುದಿಲ್ಲ. ನನ್ನನ್ನು ನಿಂದಿಸುವ ಪಾಪವನ್ನು ಮಾಡಿದವನು ಲೋಕಗಳಿಂದ ಪ್ರರಿಭ್ರಷ್ಟನಾಗುತ್ತಾನೆ. ಎಲ್ಲ ಅಲಕ್ಷಣಗಳನ್ನು ಕಳೆದುಕೊಂಡು ಅನಿಂದಿತೆಯಾಗಿರುವ ನಾನು ಆಚಾರವನ್ನು ನನ್ನದಾಗಿಸಿಕೊಂಡು ಅಂತ್ಯದಲ್ಲಿ ಉತ್ತಮ ಸಿದ್ಧಿಯನ್ನು ಪಡೆದಿರುತ್ತೇನೆ. ಆಚಾರದಿಂದ ಧರ್ಮವು ಲಭಿಸುತ್ತದೆ. ಧರ್ಮಾಚಾರಣೆಯಿಂದ ಧನವು ಲಭಿಸುತ್ತದೆ. ಆಚಾರದಿಂದ ಶ್ರೀಯು ದೊರೆಯುತ್ತದೆ. ಆಚಾರದಿಂದ ಅಲಕ್ಷಣವು ನಾಶವಾಗುತ್ತದೆ. ಇನ್ನು ನಿನಗಿಷ್ಟವಾದಲ್ಲಿಗೆ ಹೋಗಬಹುದು. ಕೀಳಾಗಿ ಕಾಣಲು ಅರ್ಹಳಾದಳೂ ಇನ್ನುಮುಂದೆ ಯಾವ ಸ್ತ್ರೀಯನ್ನೂ ಕೀಳಾಗಿ ಕಾಣಬೇಡ ! ಮೊದಲಿನಂತೆಯೇ ನೀನು ಬಲವೀರ್ಯಸಮನ್ವಿತನಾಗುತ್ತೀಯೆ."

ಆಗ ಅವನ ರೆಕ್ಕೆಗಳೆರಡೂ ಮೊದಲಿಗಿಂತಲೂ ದೊಡ್ಡದಾಗಿ ಬೆಳೆದವು.

ಶಾಂಡಿಲ್ಯಳ ಅನುಮತಿಯನ್ನು ಪಡೆದು ಅವನು ಬಂದದಾರಿಯಲ್ಲಿ ಹಿಂದಿರುಗಿದನು. ದಾರಿಯಲ್ಲಿ ವಿಶ್ವಾಮಿತ್ರನು ಗಾಲವನನ್ನು ಕಂಡು ನಿಲ್ಲಿಸಿದನು. ಆ ಮಾತನಾಡುವವರಲ್ಲಿ ಶ್ರೇಷ್ಠನು ವೈನತೇಯನ ಸನ್ನಿಧಿಯಲ್ಲಿ ಹೇಳಿದನು:

> “ದ್ವಿಜ! ನನಗಾಗಿ ನೀನೇ ತೆಗೆದುಕೊಂಡಿರುವ ಪ್ರತಿಜ್ಞೆಯನ್ನು ಹಿಂದೆ ತೆಗೆದುಕೊಳ್ಳುವ ಕಾಲವು ಬಂದಂತಿದೆ. ಅಥವಾ ನಿನಗೇನಾದರೂ ಬೇರೆ ಯೋಚನೆಯಿದೆಯೇ? ಅದನ್ನು ಪೂರೈಸಲು ಎಷ್ಟು ಸಮಯ ಬೇಕೋ ಅಷ್ಟು ಕಾಲ ನಾನು ಕಾಯುತ್ತೇನೆ. ವಿಪ್ರ! ಅದನ್ನು ಪೂರೈಸುವ ಮಾರ್ಗವನ್ನು ಸಿದ್ಧಪಡಿಸು!”

ತುಂಬಾ ದುಃಖಿತನಾಗಿ ದೀನನಾಗಿರುವ ಗಾಲವನಿಗೆ ಸುಪರ್ಣನು ಹೇಳಿದನು:

> “ವಿಶ್ವಾಮಿತ್ರನು ಏನು ಹೇಳಿದನೆನ್ನುವುದನ್ನು ನಾನು ಪ್ರತ್ಯಕ್ಷವಾಗಿ ಕೇಳಿದೆ. ಗಾಲವ! ಹೋಗಿ ಒಟ್ಟಿಗೇ ಯೋಚಿಸೋಣ. ನಿನ್ನ ಗುರುವಿಗೆ ಕೊಡಬೇಕಾದ್ದುದನ್ನು ಸಂಪೂರ್ಣವಾಗಿ ಕೊಡದೇ ನೀನು ಕುಳಿತುಕೊಳ್ಳಲಿಕ್ಕಾಗುವುದಿಲ್ಲ.”

ದೀನನಾಗಿದ್ದ ಗಾಲವನಿಗೆ ಆಗ ಪಕ್ಷಿಗಳಲ್ಲಿಯೇ ಶ್ರೇಷ್ಠ ಸುಪರ್ಣನು ಹೇಳಿದನು:

> “ಭೂಮಿಯ ಒಡಲು ಅಗ್ನಿಯಿಂದ ನಿರ್ಮಿತವಾಗಿದೆ, ವಾಯುವಿನಿಂದ ವೃದ್ಧಿಗೊಂಡಿದೆ ಮತ್ತು ಎಲ್ಲವೂ ಹಿರಣ್ಮಯವಾದುದರಿಂದ ಅದಕ್ಕೆ ಹಿರಣ್ಯ ಎಂದೂ ಕರೆಯುತ್ತಾರೆ. ಪೋಷಿಸುವುದರಿಂದ ಅದನ್ನು ಧನವೆಂದು

ಕರೆಯುತ್ತಾರೆ. ಧನಕ್ಕಾಗಿಯೇ ಈ ಮೂರೂ ಲೋಕಗಳು ಶಾಶ್ವತವಾಗಿವೆ. ಪೂರ್ವಾಭಾದ್ರ ಅಥವಾ ಉತ್ತರಾಭಾದ್ರ ನಕ್ಷತ್ರವು ಉದಯಿಸುತ್ತಿರುವ ಆ ಶುಕ್ರವಾರದಂದು ಅಗ್ನಿಯು ತನ್ನ ಚಿತ್ತದಿಂದ ಸೃಷ್ಟಿಸಿದ ಧನವನ್ನು ಧನಪತಿಗೆ ನೀಡಲು ಮನುಷ್ಯರಿಗೆ ಕೊಟ್ಟನು. ಭೂಮಿಯ ಒಡಲಲ್ಲಿರುವ ಧನವನ್ನು ಅಜೈಕಪಾದ, ಅಹಿರ್ಬುಧ್ನ ಮತ್ತು ಧನದರು ರಕ್ಷಿಸುತ್ತಾರೆ. ಪಡೆಯಲು ಅತಿ ಕಷ್ಟಕರವಾದ ಅದನ್ನು ಪಡೆಯಲಿಕ್ಕಾಗುವುದಿಲ್ಲ. ಧನವಿಲ್ಲದೇ ನಾವು ನಿನ್ನ ಕುದುರೆಗಳನ್ನು ಪಡೆಯುವ ವಿಧಾನವಿಲ್ಲ. ಆದುದರಿಂದ ನಾವು ಯಾರಾದರೂ ರಾಜರ್ಷಿಯ ವಂಶದಲ್ಲಿ ಹುಟ್ಟಿದ ರಾಜನಲ್ಲಿ ಯಾಚಿಸಬೇಕು. ಆ ರಾಜನು ತನ್ನ ಪೌರರನ್ನು ಪೀಡಿಸದೇ ಯಾಚಿಸುವ ನಮಗೆ ಏನಾದರೂ ಮಾಡಬಹುದು. ಚಂದ್ರವಂಶದಲ್ಲಿ ನನ್ನ ಸಖನಾದ ನೃಪನೊಬ್ಬನು ಇದ್ದಾನೆ. ಭುವಿಯಲ್ಲಿಯೇ ಅತ್ಯಂತ ಶ್ರೀಮಂತನಾಗಿರುವ ಅವನಲ್ಲಿಗೆ ಹೋಗೋಣ. ಅವನ ಹೆಸರು ಯಯಾತಿ; ರಾಜರ್ಷಿ ನಾಹುಷ ಮತ್ತು ಸತ್ಯವಿಕ್ರಮಿ. ಸ್ವಯಂ ನೀನು ಕೇಳಿದರೆ, ನಾನು ಅದನ್ನು ಅನುಮೋದಿಸಿದರೆ ಅದನ್ನು ಅವನು ಕೊಡದೇ ಇರಲಾರ. ಧನಪತಿಯಂತೆ ಅವನು ಅತಿದೊಡ್ಡ ಶ್ರೀಮಂತ. ಹೀಗೆ ಧನವನ್ನು ಪಡೆದು ನಿನ್ನ ಗುರುವಿಗೆ ಅದನ್ನು ಕೊಟ್ಟು ಋಣವನ್ನು ತೀರಿಸಿಕೋ.”

ಈ ರೀತಿಯಾಗಿ ಅವರಿಬ್ಬರೂ ಮಾತನಾಡಿಕೊಳ್ಳುತ್ತಾ, ಒಳ್ಳೆಯದನ್ನು ಮಾಡಲು ಯೋಚಿಸುತ್ತಾ ಪ್ರತಿಷ್ಠಾನದಲ್ಲಿ ನರಪತಿ ಯಯಾತಿಯ ಉಪಸ್ಥಿತಿಯಲ್ಲಿ ಬಂದರು. ಅರ್ಘ್ಯವೇ ಮೊದಲಾದ ಸತ್ಕಾರಗಳನ್ನೂ, ಶ್ರೇಷ್ಠ ಭೋಜನವನ್ನೂ ಸ್ವೀಕರಿಸಿ, ಬಂದ ಕಾರಣವನ್ನು ಕೇಳಲು, ವಿನತಾಸುತನು ಹೇಳಿದನು:

"ನಾಹುಷ! ಈ ತಪಸ್ಸಿನ ನಿಧಿ ಗಾಲವನು ನನ್ನ ಸಖ. ಇವನು ಸಹಸ್ರವರ್ಷಗಳು ವಿಶ್ವಾಮಿತ್ರನ ಶಿಷ್ಯನಾಗಿದ್ದನು. ಅವನಿಂದ ಹೋಗಲು ಅನುಜ್ಞಾತನಾದ ಈ ದ್ವಿಜನು ಉಪಕಾರ ಮಾಡಲು ಬಯಸಿ ಅವನಿಗೆ ಕೇಳಿದನು – "ಭಗವನ್! ನಿನಗೆ ಗುರುದಕ್ಷಿಣೆಯನ್ನಾಗಿ ಏನು ಕೊಡಲಿ?" ಇವನ ಸಂಪತ್ತು ಕಡಿಮೆಯಿದೆ ಎನ್ನುವುದನ್ನು ತಿಳಿದಿದ್ದ ಅವನು ಏನನ್ನೂ ಕೇಳಲಿಲ್ಲ. ಆದರೆ ಪುನಃ ಪುನಃ ಇವನಿಂದ ಕೇಳಲ್ಪಟ್ಟ ಅವನು ಸ್ವಲ್ಪ ಸಿಟ್ಟಿಗೆದ್ದು ಕೇಳಿದನು: "ಒಂದೇ ಕಿವಿಯು ಕಪ್ಪಾಗಿರುವ, ಚಂದ್ರವರ್ಚಸ, ಶುಭ್ರ ಬಣ್ಣದ, ಶುದ್ಧ ಜನ್ಮದ ಎಂಟುನೂರು ಕುದುರೆಗಳನ್ನು ನನಗೆ ಕೊಡು. ಗಾಲವ! ಗುರುವಿಗೆ ಕೊಡಬೇಕೆಂದು ಬಯಸಿದರೆ ಇದನ್ನು ಕೊಡಬೇಕು!" ಎಂದು ಕ್ರೋಧನಾದ ತಪೋಧನ ವಿಶ್ವಾಮಿತ್ರನು ಇವನಿಗೆ ಹೇಳಿದನು. ಅದನ್ನು ಮಾಡಲು ಅಶಕ್ತನಾಗಿ, ಮಹಾ ಶೋಕದಿಂದ ಪರಿತಪಿಸುತ್ತಿರುವ ಈ ದ್ವಿಜರ್ಷಭನು ನಿನ್ನ ಶರಣು ಬಂದಿದ್ದಾನೆ. ನಿನ್ನಿಂದ ಭಿಕ್ಷವನ್ನು ಪಡೆದು

> ಗತವ್ಯಥನಾಗಿ ಗುರುವಿನ ಋಣವನ್ನು ತೀರಿಸಿ ಇವನು ಮಹಾತಪಸ್ಸನ್ನು ಆಚರಿಸುತ್ತಾನೆ. ಆ ತಪಸ್ಸಿನ ಒಳ್ಳೆಯ ಭಾಗವನ್ನು ನಿನಗೆ ಕೂಡ ಕೊಡುತ್ತಾನೆ. ಅದರಿಂದ ನಿನ್ನ ಸ್ವಂತ ರಾಜರ್ಷಿ ತಪಸ್ಸೂ ಪೂರ್ಣಗೊಳ್ಳುತ್ತದೆ. ಕುದುರೆಯಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ಪುಣ್ಯಲೋಕಗಳು ಕುದುರೆಯನ್ನು ದಾನಮಾಡಿದವನಿಗೆ ದೊರೆಯುತ್ತದೆ. ನೀನು ದಾನವನ್ನು ನೀಡಲು ಎಷ್ಟು ಪಾತ್ರನೋ ದಾನವನ್ನು ಸ್ವೀಕರಿಸಲೂ ಕೂಡ ಇವನು ಪಾತ್ರನು. ಆದುದರಿಂದ ಶಂಖದಲ್ಲಿ ಹಾಲನ್ನು ಹಾಕಿದಂತೆ ಈ ದಾನವು ನಡೆಯಲಿ."

ಸುಪರ್ಣನು ಆ ತಥ್ಯವೂ ಉತ್ತಮವೂ ಆದ ಮಾತುಗಳನ್ನಾಡಲು ರಾಜನು ಪುನಃ ಪುನಃ ವಿಮರ್ಷೆ ಮಾಡಿ, ನಿಶ್ಚಯಿಸಿ ಹೇಳಿದನು. ನೂರಾರು ಕ್ರತುಗಳನ್ನು ಮಾಡಿದ, ದಾನಿ, ದಾನಪತಿ, ಪ್ರಭು, ವತ್ಸ-ಕಾಶಿಗಳ ಅಧಿಪತಿ, ಯಯಾತಿಯು ಈ ಮಾತುಗಳನ್ನಾಡಿದನು. ಪ್ರಿಯಸಖ ತಾರ್ಕ್ಷನನ್ನೂ ದ್ವಿಜರ್ಷಭ ಗಾಲವನ್ನನ್ನೂ ನೋಡಿ, ತಪಸ್ಸಿನ ನಿದರ್ಶನವನ್ನೂ ಭಿಕ್ಷೆಯು ತನಗೆ ಶ್ಲಾಘನೀಯವಾದುದು ಮತ್ತು ಕೀರ್ತಿಯನ್ನು ತರುವಂತಹುದು ಎಂದು ಯೋಚಿಸಿದನು.

> "ಇವರಿಬ್ಬರೂ ಅನ್ಯ ಆದಿತ್ಯಕುಲಸಂಭವರನ್ನು ಬಿಟ್ಟು ನನ್ನ ಬಳಿಗೆ ಬಂದಿದ್ದಾರೆ!"

ಎಂದು ಮನಸ್ಸಿನಲ್ಲಿಯೇ ಯೋಚಿಸಿದನು.

“ತಾರ್ಕ್ಷ್ಯ! ಇಂದು ನನ್ನ ಜನ್ಮವು ಸಫಲವಾಯಿತು. ಇಂದು ನನ್ನ ಕುಲವು ರಕ್ಷಿಸಲ್ಪಟ್ಟಿತು. ನಿನ್ನಿಂದ ನನ್ನ ಈ ದೇಶವು ಉಳಿದುಕೊಂಡಿತು. ಹಿಂದೆ ನೀನು ನನ್ನನ್ನು ಹೇಗೆ ಅರಿತುಕೊಂಡಿದ್ದೆಯೋ ಹಾಗೆ ನಾನು ಇಂದು ಇಲ್ಲ. ನನ್ನ ಸಂಪತ್ತು ಕ್ಷೀಣಿಸಿದೆ. ಆದರೂ ನಿಮ್ಮ ಆಗಮನವನ್ನು ನಿಷ್ಫಲವನ್ನಾಗಿ ಮಾಡಲು ಶಕ್ತನಿಲ್ಲ. ಈ ವಿಪ್ರರ್ಷಿಯ ಆಶಯವನ್ನೂ ಕುಂಠಿಸಲು ಉತ್ಸುಕನಾಗಿಲ್ಲ. ಆದರೂ ನಾನು ಈ ಕಾರ್ಯವನ್ನು ಸಂಪಾದಿಸಬಲ್ಲದುದನ್ನು ಕೊಡುತ್ತೇನೆ. ಏಕೆಂದರೆ ಬಂದೂ ಹತಾಶರಾಗಿ ಹಿಂದಿರುಗುವವರು ಕುಲವನ್ನು ಸುಡುತ್ತಾರೆ. ನನ್ನಲ್ಲಿ ಏನೂ ಇಲ್ಲ ಎಂದು ಹೇಳುವುದು ಮತ್ತು ದೇಹಿ ಎಂದವನಿಗೆ ನಾಸ್ತಿ ಎನ್ನುವುದು ಲೋಕದಲ್ಲಿ ಪರಮ ಪಾಪಿಷ್ಠವಾದುದು ಎಂದು ಹೇಳುತ್ತಾರೆ. ಹತಾಶೆಗೆ, ಅಯಶಸ್ಸಿಗೆ ಕಾರಣನಾದ, ಸಂಭವವನ್ನು ಕೊಂದ ನರನ ಪುತ್ರ ಪೌತ್ರರನ್ನು ಯಾಚಿಸಿಬಂದವನು ಸಂಹರಿಸುತ್ತಾನೆ. ಆದುದರಿಂದ ನಾಲ್ಕು ವಂಶಗಳನ್ನು ಸ್ಥಾಪಿಸುವ ಈ ನನ್ನ ಮಗಳನ್ನು, ಸುರಸುತೆಯಂತೆ ಪ್ರಖರಳಾಗಿರುವ, ಸರ್ವಧರ್ಮೋಪಚಾರಿಣಿ, ಸದಾ ದೇವ-ಮನುಷ್ಯ-ಅಸುರರು ಬಯಸುವ, ರೂಪವತಿ, ನನ್ನ ಈ ಬಾಲಕಿ ಮಗಳನ್ನು ಗಾಲವನು ಸ್ವೀಕರಿಸಬೇಕು. ಇವಳಿಗೆ ಶುಲ್ಕವಾಗಿ ನೃಪರು ರಾಜ್ಯವನ್ನೇ ನೀಡುವುದು ನಿಶ್ಚಿತ. ಇನ್ನು

ಎಂಟುನೂರು ಕಪ್ಪುಕಿವಿಗಳ ಕುದುರೆಗಳೇನು? ನನ್ನ ಸುತೆ ಮಾಧವಿಯನ್ನು ನೀವು ಸ್ವೀಕರಿಸಬೇಕು. ಇವಳಿಂದ ನನಗೆ ಮೊಮ್ಮಗನೋರ್ವನಾಗಲಿ ಎಂದು ಕೇಳಿಕೊಳ್ಳುತ್ತೇನೆ."

ಪಕ್ಷಿಯೊಡನೆ ಗಾಲವನು ಆ ಕನ್ಯೆಯನ್ನು ಸ್ವೀಕರಿಸಿ "ಮತ್ತೆ ಕಾಣುತ್ತೇವೆ" ಎಂದು ಹೇಳಿ ಕನ್ಯೆಯೊಡನೆ ಹೊರಟರು. "ಅಶ್ವಗಳಿಗೆ ದ್ವಾರವಾದ ಇವಳು ಸಿಕ್ಕಿದಳು!" ಎಂದು ಗಾಲವನಿಗೆ ಹೇಳಿ ಅಂಡಜನು ತನ್ನ ಮನೆಗೆ ತೆರಳಿದನು. ಪತಗರಾಜನು ಹೊರಟುಹೋಗಲು ಕನ್ಯೆಯೊಡನೆ ಗಾಲವನು ಇವಳಿಗೆ ಶುಲ್ಕವನ್ನು ಕೊಡಬಲ್ಲ ಯಾವ ರಾಜನಿಗೆ ಇವಳನ್ನು ಮಾರಲಿ ಎಂದು ಚಿಂತಿಸಿದನು. ಅವನ ಮನಸ್ಸು ಇಕ್ಷ್ವಾಕು ರಾಜಸತ್ತಮ ಹರ್ಯಶ್ವನ ಕಡೆ ಹರಿಯಿತು. ಆ ಅಯೋಧ್ಯೆಯ ಮಹಾವೀರ್ಯ, ಚತುರಂಗಬಲಾನ್ವಿತ, ಕೋಶಧಾನ್ಯಬಲೋಪೇತ, ಪುರರ ಪ್ರಿಯ, ದ್ವಿಜರ ಪ್ರಿಯನು ಮಕ್ಕಳನ್ನು ಬಯಸಿ ಶಾಂತಿಯಿಂದ ಉತ್ತಮ ತಪಸ್ಸನ್ನು ನಡೆಸುತ್ತಿದ್ದನು. ಆ ಹರ್ಯಶ್ವನ ಬಳಿಹೋಗಿ ವಿಪ್ರ ಗಾಲವನು ಹೇಳಿದನು:

"ರಾಜೇಂದ್ರ! ನನ್ನ ಈ ಕನ್ಯೆಯು ಪ್ರಸವಿಸಿ ಕುಲವನ್ನು ವೃದ್ಧಿಸುತ್ತಾಳೆ. ಶುಲ್ಕವನ್ನಿತ್ತು ಇವಳನ್ನು ಪತ್ನಿಯನ್ನಾಗಿ ಸ್ವೀಕರಿಸು. ನಿನಗೆ ಶುಲ್ಕವೇನೆಂದು ಹೇಳುತ್ತೇನೆ. ಅದನ್ನು ಕೇಳಿ ನಿನಗೆ ಏನು ಮಾಡಬೇಕೆಂದು ನಿರ್ಧರಿಸು."

ಬಹಳಷ್ಟು ಚಿಂತೆಮಾಡಿ, ದೀರ್ಘ, ಬಿಸಿಯಾದ, ನಿಟ್ಟುಸಿರನ್ನು ಬಿಡುತ್ತಾ,

ಮಕ್ಕಳನ್ನು ಪಡೆಯಲೋಸುಗ, ಆ ನೃಪೋತ್ತಮ ರಾಜಾ ಹರ್ಯಶ್ವನು ಹೇಳಿದನು:

“ಉನ್ನತವಾಗಿರಬೇಕಾದ ಆ ಆರೂ ಇವಳಲ್ಲಿ ಉನ್ನತವಾಗಿವೆ. ಸೂಕ್ಷ್ಮವಾಗಿರಬೇಕಾದ ಏಳೂ ಸೂಕ್ಷ್ಮವಾಗಿವೆ. ಗಂಭೀರವಾಗಿರಬೇಕಾದ ಮೂರೂ ಗಂಭೀರವಾಗಿವೆ ಮತ್ತು ಐದು ಕೆಂಪಾಗಿವೆ. ಇವಳು ದೇವಾಸುರಲೋಕದವರಿಗೂ ಗಂಧರ್ವರಿಗೂ ಸುಂದರಿಯಾಗಿ ಕಾಣುತ್ತಾಳೆ. ಬಹುಲಕ್ಷಣ ಸಂಪನ್ನಳಾಗಿದ್ದಾಳೆ. ಬಹಳ ಮಕ್ಕಳನ್ನೂ ಹಡೆಯುವಂತಿದ್ದಾಳೆ. ಇವಳು ನನ್ನಿಂದ ಹುಟ್ಟುವ ಚಕ್ರವರ್ತಿಗೆ ಜನ್ಮನೀಡಲು ಸಮರ್ಥಳಾಗಿದ್ದಾಳೆ. ದ್ವಿಜಶ್ರೇಷ್ಠ! ನನ್ನ ಸಂಪತ್ತನ್ನು ನೋಡಿಕೊಂಡು ಶುಲ್ಕವೇನೆಂದು ಹೇಳು.”

ಗಾಲವನು ಹೇಳಿದನು:

“ಒಂದೇ ಕಿವಿಯು ಕಪ್ಪಾಗಿರುವ, ಚಂದ್ರನಂತೆ ಬಿಳಿಯಾಗಿರುವ, ಉತ್ತಮ ಪ್ರದೇಶದಲ್ಲಿ ಹುಟ್ಟಿದ ಸುಂದರ ಎಂಟುನೂರು ಕುದುರೆಗಳನ್ನು ನನಗೆ ಕೊಡು. ಆಗ ಹುತಾಶನನ ಯೋನಿ ಅರಣಿಯಂತಿರುವ ಈ ಆಯತಲೋಚನೆ ಶುಭೆಯು ನಿನ್ನ ಪುತ್ರರ ಜನನಿಯಾಗುತ್ತಾಳೆ.”

ಈ ಮಾತುಗಳನ್ನು ಕೇಳಿದ ಕಾಮಮೋಹಿತ ರಾಜರ್ಷಿ ರಾಜಾ ಹರ್ಯಶ್ವನು ದೀನನಾಗಿ ಗಾಲವನಿಗೆ ಹೇಳಿದನು:

“ನೀನು ಬಯಸುವಂತಹ ಎರಡೇ ನೂರು ಕುದುರೆಗಳು ನನ್ನ ಹತ್ತಿರ ಇವೆ. ಇಷ್ಟಿಗಳಲ್ಲಿ ಬಳಸಬಹುದಾದ ಇತರ ಇನ್ನೂ ನೂರಾರು ಕುದುರೆಗಳು ನನ್ನ ಬಳಿ ಓಡಾಡುತ್ತಿವೆ. ಗಾಲವ! ನಾನು ಇವಳಲ್ಲಿ ಒಬ್ಬನೇ ಮಗನನ್ನು ಹುಟ್ಟಿಸುತ್ತೇನೆ. ನನಗೆ ಈ ವರವನ್ನು ನೀಡಲು ನೀನು ಮನಸ್ಸುಮಾಡಬೇಕು.”

ಇದನ್ನು ಕೇಳಿದ ಆ ಕನ್ಯೆಯು ಗಾಲವನಿಗೆ ಹೇಳಿದಳು:

“ಒಮ್ಮೆ ನನಗೆ ಯಾರೋ ಒಬ್ಬ ಬ್ರಹ್ಮವಾದಿಯು ವರವನ್ನು ನೀಡಿದ್ದನು. “ಪ್ರತಿ ಹೆರಿಗೆಯ ನಂತರ ನೀನು ಕನ್ಯೆಯಾಗಿಯೇ ಉಳಿಯುತ್ತೀಯೆ!” ಎಂದು. ಆದುದರಿಂದ ನನ್ನನ್ನು ಈ ರಾಜನಿಗೆ ಕೊಟ್ಟು ನೀನು ಆ ಉತ್ತಮ ಕುದುರೆಗಳನ್ನು ಪಡೆ. ಹೀಗೆ ನಾಲ್ವರು ನೃಪರಿಂದ ಸಂಪೂರ್ಣವಾಗಿ ಎಂಟುನೂರು ಕುದುರೆಗಳನ್ನು ಪಡೆಯಬಹುದು. ನನಗೂ ಕೂಡ ನಾಲ್ವರು ಮಕ್ಕಳಾದಂತೆ ಆಗುತ್ತದೆ. ದ್ವಿಜಸತ್ತಮ! ಹೀಗೆ ನನ್ನನ್ನು ಬಳಸಿ ನಿನ್ನ ಗುರುವಿಗೆ ಬೇಕಾದುದನ್ನು ಸಂಗ್ರಹಿಸಿದಂತಾಗುತ್ತದೆ. ಹೀಗೆ ಮಾಡಬಹುದೆಂದು ನನಗನ್ನಿಸುತ್ತದೆ. ಆದರೆ ನಿನಗೆ ಅನ್ನಿಸಿದ ಹಾಗೆ ಮಾಡು.”

ಕನ್ಯೆಯು ಈ ರೀತಿ ಹೇಳಲು ಮುನಿ ಗಾಲವನು ಪೃಥಿವೀಪಾಲ ಹರ್ಯಶ್ವನಿಗೆ ಈ ಮಾತನ್ನಾಡಿದನು:

“ನರಶ್ರೇಷ್ಠ! ಶುಲ್ಕದ ನಾಲ್ಕನೆಯ ಒಂದು ಭಾಗವನ್ನು ಕೊಟ್ಟು

ಇವಳನ್ನು ಸ್ವೀಕರಿಸು. ಇವಳಿಂದ ಒಬ್ಬನೇ ಮಗನನ್ನು ಹುಟ್ಟಿಸು.”

ಗಾಲವನನ್ನು ಪೂಜಿಸಿ, ಆ ಕನ್ಯೆಯನ್ನು ಸ್ವೀಕರಿಸಿ, ಅವನು ದೇಶಕಾಲದಲ್ಲಿ ಒಪ್ಪಂದದಂತೆ ತನಗಿಷ್ಟವಾದ ಮಗನನ್ನು ಪಡೆದನು. ಸಂಪತ್ತಿರುವವರಲ್ಲೆಲ್ಲ ಅಧಿಕ ಸಂಪತ್ತುಳ್ಳವನಾಗಿ, ವಸುವಿನಂತೆ ತೋರುವ ಅವನು ವಸುಮನಾ ಎಂಬ ಹೆಸರಿನ, ಸಂಪತ್ತನ್ನು ನೀಡುವ, ನರಪತಿಯಾದನು.

ಅನಂತರ ಕಾಲಾಂತರದಲ್ಲಿ ಧೀಮಾನ್ ಗಾಲವನು ಮರಳಿ ಬಂದನು. ಸಂತೋಷದಿಂದಿದ್ದ ಹರ್ಯಶ್ವನನ್ನು ಭೇಟಿಮಾಡಿ ಹೇಳಿದನು:

“ನೃಪ! ನಿನಗೆ ಈ ಭಾಸ್ಕರ ಸನ್ನಿಭನಾಗಿರುವ ಮಗನು ಜನಿಸಿದ್ದಾನೆ. ಬೇರೆ ನೃಪರಲ್ಲಿಗೆ ಭಿಕ್ಷೆಗೆ ಹೋಗುವ ಸಮಯವು ಬಂದಿದೆ.”

ಸತ್ಯವಚನದಲ್ಲಿ ಸ್ಥಿತನಾಗಿದ್ದ, ಪೌರುಷದಲ್ಲಿ ನಿಂತಿದ್ದ ಹರ್ಯಶ್ವನು ಸಂಪೂರ್ಣ ಶುಲ್ಕವು ತನ್ನಲ್ಲಿ ದುರ್ಲಭವೆಂದು ಮಾಧವಿಯನ್ನು ಮರಳಿ ಕೊಟ್ಟನು. ಮಾಧವಿಯಾದರೋ ಆ ನೃಪನ ಬೆಳಗುತ್ತಿದ್ದ ಶ್ರೀಯನ್ನು ಪರಿತ್ಯಜಿಸಿ ಪುನಃ ಕಾಮಿಸುವ ಕುಮಾರಿಯಾಗಿ ಗಾಲವನನ್ನು ಹಿಂಬಾಲಿಸಿದಳು. “ಈ ಕುದುರೆಗಳು ನಿನ್ನಲ್ಲಿಯೇ ಇರಲಿ!” ಎಂದು ಹೇಳಿ ದ್ವಿಜನು ಕನ್ಯೆಯೊಡನೆ ಪ್ರಜೇಶ್ವರ ದಿವೋದಾಸನಲ್ಲಿಗೆ ಪ್ರಯಾಣಿಸಿದನು. ಗಾಲವನು ಹೇಳಿದನು:

“ಇವನು ಮಹಾವೀರ, ಮಹೀಪಾಲ, ಕಾಶಿಯ ಒಡೆಯ, ಪ್ರಭು, ದಿವೋದಾಸ ಎಂದು ಪ್ರಖ್ಯಾತನಾಗಿರುವವನು. ನರಾಧಿಪ ಭೀಮಸೇನನ ಮಗ. ಭದ್ರೇ! ಅವನಲ್ಲಿಗೆ ಹೋಗುತ್ತಿದ್ದೇವೆ. ನಿಧಾನವಾಗಿ ಬಾ. ಶೋಕಿಸ ಬೇಡ! ಆ ಜನೇಶ್ವರನು ಧಾರ್ಮಿಕ, ಸಂಯಮಿ ಮತ್ತು ಸತ್ಯವಂತ.”

ಅವನಲ್ಲಿಗೆ ಹೋಗಿ ಮುನಿಯು ಅವನಿಂದ ಯಾಥಾನ್ಯಾಯವಾಗಿ ಸತ್ಕೃತನಾದನು. ಅನಂತರ ಗಾಲವನು ನೃಪನಿಗೆ ಮಕ್ಕಳನ್ನು ಪಡೆಯಲು ಪ್ರಚೋದಿಸಿದನು. ದಿವೋದಾಸನು ಹೇಳಿದನು:

“ದ್ವಿಜ! ಈ ಹಿಂದೆಯೇ ನಾನು ಇದರ ಕುರಿತು ಕೇಳಿದ್ದೇನೆ. ಏಕೆ ವಿಸ್ತಾರವಾಗಿ ಹೇಳುತ್ತಿರುವೆ? ಏಕೆಂದರೆ ಇದರ ಕುರಿತು ಕೇಳಿದಾಗಲಿಂದ ಇದನ್ನು ಮಾಡಬೇಕೆಂದು ನನಗೆ ಆಸೆಯಾಗಿದೆ. ಇತರ ನರಾಧಿಪರನ್ನು ಬಿಟ್ಟು ನೀನು ನನ್ನಲ್ಲಿಗೆ ಬಂದಿರುವೆ ಎನ್ನುವುದೂ ನನಗೆ ಹೆಚ್ಚಿನ ಗೌರವದ ವಿಷಯವಾಗಿದೆ. ನಿನ್ನ ಉದ್ದೇಶವನ್ನೂ ಪೂರೈಸುವಲ್ಲಿ ನಾನು ಉಪಯೋಗಕ್ಕೆ ಬರುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ಹರ್ಯಶ್ವನಲ್ಲಿರುವಷ್ಟೇ ಸಂಪತ್ತು ನನ್ನಲ್ಲಿದೆ. ನಾನೂ ಕೂಡ ಇವಳಲ್ಲಿ ಒಬ್ಬನೇ ರಾಜನನ್ನು ಹುಟ್ಟಿಸುತ್ತೇನೆ.”

ಹಾಗೆಯೇ ಆಗಲೆಂದು ದ್ವಿಜಶ್ರೇಷ್ಠನು ಮಹೀಪತಿಗೆ ಹೇಳಲು ರಾಜನು ಆ ಕನ್ಯೆಯನ್ನು ವಿಧಿಪೂರ್ವಕವಾಗಿ ಸ್ವೀಕರಿಸಿದನು. ಪ್ರಭಾವತಿಯಲ್ಲಿ

ರವಿಯಂತೆ, ಸ್ವಾಹಾಳಲ್ಲಿ ಅಗ್ನಿಯಂತೆ, ಶಚಿಯಲ್ಲಿ ವಾಸವನಂತೆ, ರೋಹಿಣಿಯಲ್ಲಿ ಚಂದ್ರನಂತೆ, ಧೂಮೋರ್ಣಳಲ್ಲಿ ಯಮನಂತೆ, ಗೌರಿಯಲ್ಲಿ ವರುಣನಂತೆ, ಚರ್ಧ್ಮಳಲ್ಲಿ ಧನೇಶ್ವರನಂತೆ, ಲಕ್ಷ್ಮಿಯಲ್ಲಿ ನಾರಾಯಣನಂತೆ, ಜಾಹ್ನವಿಯಲ್ಲಿ ಸಾಗರದಂತೆ, ರುದ್ರಾಣಿಯಲ್ಲಿ ರುದ್ರನಂತೆ, ವೇದಗಳಲ್ಲಿ ಪಿತಾಮಹನಂತೆ, ಅದೃಶ್ಯಂತಳಲ್ಲಿ ಶಕ್ತಿಯಂತೆ, ಅಕ್ಷಮಾಲೆಯಲ್ಲಿ ವಸಿಷ್ಠನಂತೆ, ಸುಕನ್ಯೆಯಲ್ಲಿ ಚ್ಯವನನಂತೆ, ಸಂಧ್ಯೆಯಲ್ಲಿ ಪುಲಸ್ತ್ಯನಂತೆ, ವೈದರ್ಭಿಯಲ್ಲಿ ಅಗಸ್ತ್ಯನಂತೆ, ಸಾವಿತ್ರಿಯಲ್ಲಿ ಸತ್ಯವಾನನಂತೆ, ಪುಲೋಮೆಯಲ್ಲಿ ಭೃಗುವಂತೆ, ಅದಿತಿಯಲ್ಲಿ ಕಶ್ಯಪನಂತೆ, ರೇಣುಕೆಯಲ್ಲಿ ಆರ್ಚೀಕನಂತೆ, ಹೇಮವತಿಯಲ್ಲಿ ಕೌಶಿಕನಂತೆ, ತಾರೆಯಲ್ಲಿ ಬೃಹಸ್ಪತಿಯಂತೆ, ಶತಪರ್ವೆಯಲ್ಲಿ ಶುಕ್ರನಂತೆ, ಭೂಮಿಯೊಂದಿಗೆ ಭೂಮಿಪತಿಯಂತೆ, ಊರ್ವಶಿಯಲ್ಲಿ ಪುರೂರವನಂತೆ, ಸತ್ಯವತಿಯಲ್ಲಿ ಋಚೀಕನಂತೆ, ಮತ್ತು ಸರಸ್ವತಿಯಲ್ಲಿ ಮನುವಿನಂತೆ ಆ ರಾಜರ್ಷಿಯು ಅವಳೊಂದಿಗೆ ರಮಿಸಿದನು. ಹೀಗೆ ರಮಿಸುತ್ತಿರುವ ಭೂಪತಿ ದಿವೋದಾಸನು ಮಾಧವಿಯಲ್ಲಿ ಪ್ರತರ್ದನನೆನ್ನುವ ಓರ್ವ ಪುತ್ರನನ್ನು ಹುಟ್ಟಿಸಿದನು.

ಆಗ ಸಮಯವು ಬಂದಾಗ ಭಗವಾನ್ ಗಾಲವನು ದಿವೋದಾಸನಲ್ಲಿಗೆ ಹೋಗಿ ಈ ಮಾತನ್ನಾಡಿದನು:

> “ಪೃಥಿವೀಪತೇ! ಕನ್ಯೆಯನ್ನು ನನಗೆ ಹಿಂದಿರುಗಿಸು. ಕುದುರೆಗಳು ನಿನ್ನಲ್ಲಿಯೇ ಇರಲಿ. ಶುಲ್ಕಾರ್ಥಕ್ಕೆ ಇತರರಲ್ಲಿ

ಹೋಗುತ್ತೇನೆ.”

ಆಗ ಧರ್ಮಾತ್ಮ ಮಹೀಪತಿ ದಿವೋದಾಸನು ಆ ಸಮಯದಲ್ಲಿ ಆ ಕನ್ಯೆಯನ್ನು ಗಾಲವನಿಗೆ ಹಿಂದಿರುಗಿಸಿ ಸತ್ಯಸ್ಥಿತನಾದನು.

ಆ ಶ್ರೀಯನ್ನೂ ತೊರೆದು ಪುನಃ ಕನ್ಯೆಯಾಗಿ ಆ ಯಶಸ್ವಿನೀ ಸತ್ಯಸಂಗರೆ ಮಾಧವಿಯು ವಿಪ್ರ ಗಾಲವನನ್ನು ಅನುಸರಿಸಿದಳು. ತನ್ನ ಕಾರ್ಯವಾಗಬೇಕೆಂದು ಬಯಸಿ ವಿಮರ್ಶೆಮಾಡಿ ಗಾಲವನು ನೃಪ ಔಶೀನರನನ್ನು ನೋಡಲು ಭೋಜನಗರಕ್ಕೆ ಹೋದನು. ಅಲ್ಲಿಗೆ ಹೋಗಿ ಅವನು ಸತ್ಯವಿಕ್ರಮಿ ನೃಪತಿಗೆ ಹೇಳಿದನು:

“ಈ ಕನ್ಯೆಯು ನಿನಗೆ ಇಬ್ಬರು ಪಾರ್ಥಿವ ಸುತರನ್ನು ಜನಿಸುತ್ತಾಳೆ. ಇವಳಲ್ಲಿ ಸೋಮಾರ್ಕಪ್ರತಿಸಂಕಾಶರಾದ ಇಬ್ಬರು ಮಕ್ಕಳನ್ನು ಪಡೆದು ನೀನು ಇಲ್ಲಿಯ ಮತ್ತು ನಂತರದ ಉದ್ದೇಶಗಳನ್ನು ಸಾಧಿಸಬಲ್ಲೆ. ಶುಲ್ಕವಾಗಿ ನೀನು ನನಗೆ ನಾಲ್ನೂರು ಚಂದ್ರವರ್ಚಸ, ಒಂದೇ ಕಿವಿಯು ಕಪ್ಪಾಗಿರುವ ಕುದುರೆಗಳನ್ನು ಕೊಡಬೇಕು. ಗುರುವಿಗಾಗಿ ನಾನು ಈ ಕುದುರೆಗಳನ್ನು ಒಟ್ಟುಹಾಕುತ್ತಿದ್ದೇನೆ. ಶಕ್ಯವಾದರೆ ಮಾಡು. ವಿಚಾರಮಾಡಬೇಡ! ಮಕ್ಕಳಿಲ್ಲದವನಾಗಿದ್ದೀಯೆ. ಇಬ್ಬರು ಪುತ್ರರನ್ನು ಹುಟ್ಟಿಸು! ಪುತ್ರನೆನ್ನುವ ದೋಣಿಯಿಂದ ನಿನ್ನನ್ನೂ ನಿನ್ನ ಪಿತೃಗಳನ್ನೂ ಉದ್ಧರಿಸು. ಏಕೆಂದರೆ ಪುತ್ರಫಲವನ್ನು ಪಡೆದವನು ದಿವದಿಂದ ಬೀಳುವುದಿಲ್ಲ ಮತ್ತು ಅನಾತ್ಮಜರು

> ಹೋಗುವ ಘೋರ ನರಕಕ್ಕೆ ಹೋಗುವುದಿಲ್ಲ.”

ಈ ರೀತಿ ಮತ್ತು ಇನ್ನೂ ಇತರ ವಿಧಗಳಲ್ಲಿ ಹೇಳಿದ ಗಾಲವನ ಮಾತನ್ನು ಕೇಳಿ ನರಾಧಿಪ ಉಶೀನರನು ಅವನಿಗೆ ಪ್ರತ್ಯುತ್ತರವನ್ನಿತ್ತನು:

> “ಗಾಲವ! ನೀನು ಮಾತನಾಡಿದ್ದುದನ್ನು ನಾನು ಕೇಳಿದ್ದೇನೆ. ಏಕೆಂದರೆ ಯಾವುದರಲ್ಲಿ ನನ್ನ ಮನಸ್ಸು ಬಯಸುತ್ತಿದೆಯೋ ಅಲ್ಲಿ ವಿಧಿಯು ಬಲವಾದುದು. ನನ್ನಲ್ಲಿ ಅಂಥಹ ಇನ್ನೂರು ಕುದುರೆಗಳು ಮಾತ್ರ ಇವೆ. ಇತರ ಬಹಳಷ್ಟು ಸಹಸ್ರ ಸಂಖ್ಯೆಯಲ್ಲಿ ನನ್ನಲ್ಲಿ ನಡೆದಾಡುತ್ತಿವೆ. ನಾನೂ ಕೂಡ ಇವಳಲ್ಲಿ ಓರ್ವನೇ ಮಗನನ್ನು ಪಡೆದು ಇತರರು ಹೋದ ದಾರಿಯಲ್ಲಿಯೇ ಹೋಗುತ್ತೇನೆ. ನಾನು ನಿನಗೆ ಅವರಿಗೆ ಸಮನಾದ ಮೂಲ್ಯವನ್ನೂ ಕೊಡುತ್ತೇನೆ. ನನ್ನ ಸಂಪತ್ತು ಪೌರಜನರಿಗಾಗಿ ಇದೆಯೇ ಹೊರತು ನನಗೆ ಭೋಗಿಸಲಿಕ್ಕಲ್ಲ. ಪರರ ಧನವನ್ನು ತನ್ನ ಕಾಮಕ್ಕಾಗಿ ಕಳೆಯುವ ರಾಜನು ಧರ್ಮವನ್ನೂ ಯಶಸ್ಸನ್ನೂ ಸಾಧಿಸುವುದಿಲ್ಲ. ಆದುದರಿಂದ ಅವಳನ್ನು ನೀನು ನನಗೆ ಕೊಡು. ಸ್ವೀಕರಿಸುತ್ತೇನೆ. ಈ ಕುಮಾರಿಯಲ್ಲಿ ನನಗೆ ದೇವಗರ್ಭಾಭನಾದ ಓರ್ವ ಪುತ್ರನು ಆಗಲಿ.”

ಬಹಳ ಕಲ್ಯಾಣಕರವಾದುದನ್ನು ಹೇಳಿದ ಆ ನರಾಧಿಪ ಉಶೀನರನನ್ನು ದ್ವಿಜಶ್ರೇಷ್ಠ ಗಾಲವನು ಗೌರವಿಸಿದನು. ಅವಳನ್ನು ಉಶೀನರನಿಗೆ

ಕೊಟ್ಟು ಗಾಲವನು ವನಕ್ಕೆ ನಡೆದನು. ಅವನು ಅವಳನ್ನು ಶ್ರೀಯನ್ನು ಕೃತಪುಣ್ಯನು ಭೋಗಿಸುವಂತೆ ಕಂದರಗಳಲ್ಲಿ, ಶೈಲಗಳಲ್ಲಿ, ನದಿಗಳಲ್ಲಿ, ನಿರ್ಝರಿಗಳಲ್ಲಿ, ಉದ್ಯಾನಗಗಳಲ್ಲಿ, ವಿಚಿತ್ರ ವನ-ಉಪವನಗಳಲ್ಲಿ, ಹರ್ಮಿಗಳಲ್ಲಿ, ರಮಣೀಯ ಪ್ರಾಸಾದಶಿಖರಗಳಲ್ಲಿ, ವಾತಾಯನ ವಿಮಾನಗಳಲ್ಲಿ, ಗರ್ಭಗೃಹಗಳಲ್ಲಿ ರಮಿಸಿದನು. ಆಗ ಕಾಲದಲ್ಲಿ ಅವನಿಗೆ ಬಾಲರವಿಯ ಪ್ರಭೆಯುಳ್ಳ ಪುತ್ರನು ಜನಿಸಿದನು. ಅವನೇ ಪಾರ್ಥಿವ ಸತ್ತಮ ಶಿಬಿಯೆಂಬ ಹೆಸರಿನಿಂದ ವಿಖ್ಯಾತನಾದನು. ಅನಂತರ ವಿಪ್ರ ಗಾಲವನು ಅವನಿಂದ ಕನ್ಯೆಯನ್ನು ಹಿಂದೆ ಪಡೆದು ವಿನತಾತ್ಮಜನನ್ನು ನೋಡಲು ಹೋದನು.

ಗಾಲವನಿಗೆ ವೈನತೇಯನು ಮುಗುಳ್ನಕ್ಕು ಹೇಳಿದನು:

> “ಒಳ್ಳೆಯದಾಯಿತು ದ್ವಿಜ! ನೀನು ಕೃತಾರ್ಥನಾದುದನ್ನು ಕಾಣುತ್ತಿದ್ದೇನೆ.”

ವೈನತೇಯನು ಹೇಳಿದುದನ್ನು ಕೇಳಿ ಗಾಲವನು ಕಾರ್ಯದ ನಾಲ್ಕನೆಯ ಒಂದು ಭಾಗವು ಇನ್ನೂ ಮಾಡುವುದಿದೆಯೆಂದು ಹೇಳಿದನು. ಆಗ ಪಕ್ಷಿಗಳಲ್ಲಿ ಶ್ರೇಷ್ಠ ಸುಪರ್ಣನು ಗಾಲವನಿಗೆ ಹೇಳಿದನು:

> “ಅದಕ್ಕೆ ಪ್ರಯತ್ನಿಸಬೇಡ! ಅದು ನಿನ್ನಿಂದ ಸಂಪೂರ್ಣವಾಗುವುದಿಲ್ಲ. ಏಕೆಂದರೆ ಹಿಂದೆ ಕನ್ಯಕುಬ್ಜದಲ್ಲಿ ಗಾಧಿಯು ಮಗಳು ಸತ್ಯವತಿಯನ್ನು ಪತ್ನಿಯನ್ನಾಗಿ ಋಚೀಕನು ವರಿಸುವಾಗ “ಒಂದೇ ಕಿವಿಯು ಕಪ್ಪಾಗಿರುವ ಚಂದ್ರವರ್ಚಸ

ಒಂದು ಸಾವಿರ ಕುದುರೆಗಳನ್ನು ನನಗೆ ಕೊಡು" ಎಂದು ಹೇಳಿದ್ದನು. ಹಾಗೆಯೇ ಆಗಲೆಂದು ಋಚೀಕನು ವರುಣಾಲಯಕ್ಕೆ ಹೋದನು. ಅಶ್ವತೀರ್ಥದಲ್ಲಿ ಕುದುರೆಗಳನ್ನು ಪಡೆದು ಪಾರ್ಥಿವನಿಗೆ ಕೊಟ್ಟಿದ್ದನು. ರಾಜನು ಪುಂಡರೀಕ ಇಷ್ಟಿಯನ್ನು ಮಾಡುವಾಗ ದ್ವಿಜರಲ್ಲಿ ಆ ಕುದುರೆಗಳನ್ನು ಬ್ರಾಹ್ಮಣರಿಗೆ ದಾನವನ್ನಾಗಿತ್ತಿದ್ದನು. ಅವರಿಂದ ನೀನು ಹೋಗಿದ್ದ ರಾಜರು ಎರಡೆರಡು ನೂರನ್ನು ಖರೀದಿಸಿ ಪಡೆದಿದ್ದರು. ಉಳಿದ ನಾಲ್ನೂರನ್ನು ತರುವಾಗ ಸೇತುವೆಯಿಂದ ವಿತಸ್ತನು ಅಪಹರಿಸಿದ್ದನು. ಹೀಗೆ ಅಪ್ರಾಪ್ಯವಾದುದನ್ನು ಪಡೆಯಲು ಎಂದೂ ಸಾಧ್ಯವಿಲ್ಲ. ನಿನ್ನಲ್ಲಿರುವ ಆರುನೂರು ಕುದುರೆಗಳೊಂದಿಗೆ, ಉಳಿದ ಇನ್ನೂರು ಕುದುರೆಗಳಿಗೆ ಬದಲಾಗಿ ಈ ಕನ್ಯೆಯನ್ನು ನೀನು ವಿಶ್ವಾಮಿತ್ರನಿಗಿತ್ತು ಕೃತಕೃತ್ಯನಾಗು. ಆಗ ನೀನು ಚಿಂತೆ ಕಳೆದುಕೊಂಡವನಾಗುತ್ತೀಯೆ."

ಹಾಗೆಯೇ ಆಗಲೆಂದು ಹೇಳಿ ಗಾಲವನು ಸುಪರ್ಣನ ಸಹಿತ ಆ ಕನ್ಯೆಯನ್ನೂ ಕರೆದುಕೊಂಡು ವಿಶ್ವಾಮಿತ್ರನಲ್ಲಿಗೆ ಹೋಗಿ ಹೇಳಿದನು:

"ನೀನು ಕೇಳಿದಂತಹ ಆರುನೂರು ಕುದುರೆಗಳು ಮಾತ್ರ ಇವೆ. ಉಳಿದ ಇನ್ನೂರಕ್ಕೆ ಬದಲಾಗಿ ಈ ಕನ್ಯೆಯನ್ನು ಸ್ವೀಕರಿಸಬೇಕು. ಇವಳಿಂದ ಮೂವರು ಧಾರ್ಮಿಕ ರಾಜರ್ಷಿಗಳು ಪುತ್ರರನ್ನು

ಪಡೆದಿದ್ದಾರೆ. ನಾಲ್ಕನೆಯ ಒಬ್ಬನು ನಿನ್ನಿಂದ ಇವಳಲ್ಲಿ ಹುಟ್ಟಲಿ. ಹೀಗೆ ಎಂಟು ನೂರು ಕುದುರೆಗಳು ಸಂಪೂರ್ಣವಾಗಿ ನಿನಗೆ ಸಲ್ಲಿದಂತಾದವು. ನಿನ್ನಿಂದ ಋಣಮುಕ್ತನಾಗಿ ಯಥಾಸುಖವಾಗಿ ತಪಸ್ಸನ್ನು ಮಾಡುತ್ತೇನೆ."

ವಿಶ್ವಾಮಿತ್ರನು ಪಕ್ಷಿಯೊಂದಿಗಿರುವ ಗಾಲವನನ್ನು ಮತ್ತು ಆ ವರಾರೋಹೆ ಕನ್ಯೆಯನ್ನು ನೋಡಿ ಈ ಮಾತನ್ನಾಡಿದನು.

"ಗಾಲವ! ಈ ಮೊದಲೇ ಇವಳನ್ನು ನನಗೆ ಏಕೆ ಕೊಡಲಿಲ್ಲ? ನನಗೇ ನಾಲ್ಕು ಕುಲಭಾವನ ಮಕ್ಕಳು ಆಗುತ್ತಿದ್ದರಲ್ಲ! ಒಬ್ಬನೇ ಮಗನಿಗಾದರೂ ನಿನ್ನ ಕನ್ಯೆಯನ್ನು ಸ್ವೀಕರಿಸುತ್ತೇನೆ. ಕುದುರೆಗಳು ಎಲ್ಲವೂ ನನ್ನ ಆಶ್ರಮದಲ್ಲಿಯೇ ನೆಲೆಸಲಿ."

ಆಗ ಮಹಾದ್ಯುತಿ ವಿಶ್ವಾಮಿತ್ರನು ಅವಳೊಂದಿಗೆ ರಮಿಸಿದನು. ಮಾಧವಿಯಲ್ಲಿ ಮಗ ಅಷ್ಟಕನನ್ನು ಜನಿಸಿದನು. ಹುಟ್ಟಿದ ಕೂಡಲೇ ಮಹಾದ್ಯುತಿ ವಿಶ್ವಾಮಿತ್ರನು ಮಗನಿಗೆ ಅರ್ಥ-ಧರ್ಮಗಳಿಂದ ಸಂಯೋಜಿಸಿದನು ಮತ್ತು ಆ ಅಶ್ವಗಳನ್ನೂ ಕೊಟ್ಟನು. ಅನಂತರ ಅಷ್ಟಕನು ಸೋಮಪುರಪ್ರಭೆಯುಳ್ಳ ಪುರವನ್ನು ಪಡೆದನು. ಕೌಶಿಕನಾದರೋ ಕನ್ಯೆಯನ್ನು ಶಿಷ್ಯನಿಗೆ ಹಿಂದಿರುಗಿಸಿ, ವನಕ್ಕೆ ತೆರಳಿದನು. ಗಾಲವನೂ ಕೂಡ ಸುಪರ್ಣನ ಜೊತೆಗೆ ಗುರು ದಕ್ಷಿಣೆಗಳನ್ನು ಪೂರೈಸಿ ಮನಸ್ಸಿನಲ್ಲಿ ತುಂಬಾ ಸಂತೋಷಗೊಂಡು ಕನ್ಯೆಗೆ ಹೀಗೆ ಹೇಳಿದನು:

> “ನೀನು ದಾನಪತಿಯಾಗಿರುವ ಮಗನಿಗೆ ಜನ್ಮವಿತ್ತಿದ್ದೀಯೆ. ಇನ್ನೊಬ್ಬನು ಶೂರ. ಅನ್ಯನು ಸತ್ಯಧರ್ಮ ರತ. ಇನ್ನೊಬ್ಬನು ಯಜ್ಞಗಳಲ್ಲಿ ಶ್ರೇಷ್ಠನು. ವರಾರೋಹೇ! ಈ ಮಕ್ಕಳ ಮೂಲಕ ನೀನು ನಿನ್ನ ತಂದೆಯಲ್ಲದೇ ಆ ನಾಲ್ವರು ರಾಜರನ್ನೂ, ಮತ್ತು ನನ್ನನ್ನೂ ಉದ್ಧರಿಸಿದ್ದೀಯೆ. ಹೋಗು!”

ಗಾಲವನು ಪನ್ನಗಾಶನ ಸುಪರ್ಣನಿಗೆ ಬೀಳ್ಕೊಟ್ಟು, ಆ ಕನ್ಯೆಯನ್ನು ತಾನೇ ಅವಳ ತಂದೆಗೆ ಹಿಂದಿರುಗಿಸಿ ವನಕ್ಕೆ ತೆರಳಿದನು.

ಅನಂತರ ರಾಜ ಯಯಾತಿಯು ಪುನಃ ಮಗಳು ಮಾಧವಿಯ ಸ್ವಯಂವರವನ್ನು ಮಾಡಲು ಬಯಸಿ ಮಾಧವಿಯನ್ನು ಮಾಲೆ-ಗೆಜ್ಜೆಗಳಿಂದ ಅಲಂಕರಿಸಿ, ರಥದಲ್ಲಿ ಕುಳ್ಳಿರಿಸಿಕೊಂಡು, ಗಂಗಾಯಮುನ ಸಂಗಮದಲ್ಲಿ ಒಂದು ಆಶ್ರಮಪದವನ್ನು ತಲುಪಿದನು. ಪುರು-ಯದುಗಳೀರ್ವರೂ ಆಶ್ರಮಕ್ಕೆ ತಂಗಿಯನ್ನು ಹಿಂಬಾಲಿಸಿದರು. ಅಲ್ಲಿ ನಾಗ, ಯಕ್ಷ, ಮನುಷ್ಯ, ಪಕ್ಷಿ, ಜಿಂಕೆಗಳು, ಸೈಲ, ದ್ರುಮ, ವನೌಕಸರ ಸಮಾಗಮವಾಗಿತ್ತು. ಆ ವನವು ನಾನಾ ಪುರುಷರ ಮತ್ತು ದೇಶಗಳ ರಾಜರುಗಳಿಂದ ತುಂಬಿಹೋಗಿತ್ತು. ಬ್ರಹ್ಮಕಲ್ಪ ಋಷಿಗಳೂ ಅಲ್ಲಿ ಸೇರಿದ್ದರು. ಆ ಎಲ್ಲ ವರರನ್ನೂ ಪರಿಚಯಿಸಿದ ನಂತರ ಆ ವರವರ್ಣಿನಿಯು ವರರೆಲ್ಲರನ್ನೂ ದಾಟಿ ವನವನ್ನು ವರನನ್ನಾಗಿ ವರಿಸಿದಳು. ಯಯಾತಿಯ ಮಗಳು ಕನ್ಯೆಯು ರಥದಿಂದಿಳಿದು, ಬಂಧುಗಳಿಗೆ ನಮಸ್ಕರಿಸಿ ಪುಣ್ಯ ವನಕ್ಕೆ ತೆರಳಿ ತಪಸ್ಸನ್ನು ತಪಿಸಿದಳು.

ಉಪವಾಸ, ವಿವಿಧ ದೀಕ್ಷಾನಿಯಮಗಳಿಂದ ತನ್ನನ್ನು ಹಗುರವಾಗಿಸಿಕೊಂಡು ಅವಳು ಮೃಗಚಾರಿಣಿಯಾದಳು. ವೈಡೂರ್ಯದಂತಿರುವ ಮೃದುವಾದ ಹಸಿರು, ಚಪ್ಪೆ-ಸಿಹಿಯಾಗಿರುವ ಚಿಗುರುಗಳನ್ನು ಮೇಯುತ್ತಾ; ಹರಿಯುತ್ತಿರುವ ಪುಣ್ಯ, ರುಚಿಕರ, ಶುದ್ಧ ಶೀತ ವಿಮಲ ನದಿಗಳ ನೀರನ್ನು ಕುಡಿಯುತ್ತಾ; ಜಿಂಕೆಯೇ ರಾಜನಾಗಿರುವ, ಸಿಂಹವು ಇಲ್ಲದಿರುವ, ದಾವಾಗ್ನಿಗಳಿಂದ ಮುಕ್ತವಾದ, ಶೂನ್ಯ ಗಹನ ವನಗಳಲ್ಲಿ ಹರಿಣಗಳೊಡನೆ ಜಿಂಕೆಯಂತೆಯೇ ವನದಲ್ಲಿ ಸಂಚರಿಸಿಕೊಂಡು, ವಿಪುಲ ಧರ್ಮ ಮತ್ತು ಬ್ರಹ್ಮಚರ್ಯದಿಂದ ಸಂವೃತಳಾಗಿ ನಡೆದುಕೊಂಡಳು.

ಯಯಾತಿಯೂ ಕೂಡ ಹಿಂದಿನ ರಾಜರಂತೆ ನಡೆದುಕೊಂಡು ಬಹಳ ಸಾವಿರ ವರ್ಷಗಳ ನಂತರ ಕಾಲಧರ್ಮಕ್ಕೊಳಗಾದನು. ನರೋತ್ತಮರಾದ ಪುರು ಮತ್ತು ಯದು ಇಬ್ಬರೂ ಎರಡು ವಂಶಗಳನ್ನು ಬೆಳೆಯಿಸಿ ಈ ಲೋಕ ಮತ್ತು ಪರಲೋಕ ಎರಡರಲ್ಲಿಯೂ ನಾಹುಷನ ಹೆಸರನ್ನು ಪ್ರತಿಷ್ಠಾಪಿಸಿದರು. ನರಪತಿ ಯಯಾತಿ ನೃಪತಿ ವಿಭುವು ಸ್ವರ್ಗವನ್ನು ಸೇರಿ ಮಹರ್ಷಿಗಳಂತೆ ಸ್ವರ್ಗದ ಅಗ್ರ ಫಲಗಳನ್ನು ಭೋಗಿಸಿ ಮೆರೆದನು. ಬಹುವರ್ಷಸಹಸ್ರಗಳು ಬಹುಗುಣಗಳಲ್ಲಿ ಕಳೆಯಲು, ರಾಜರ್ಷಿಗಳು ಮತ್ತು ಮಹರ್ಷಿಗಳೊಂದಿಗೆ ಕುಳಿತುಕೊಂಡಿರುವಾಗ, ಯಯಾತಿಯು ಬುದ್ಧಿಮೂಢನಾಗಿ, ವಿಸ್ಮಯದಿಂದ ಆವೇಶಗೊಂಡು, ಎಲ್ಲ ನರರನ್ನೂ, ದೇವತೆಗಳನ್ನೂ, ಋಷಿಗಣಗಳನ್ನೂ ಅಪಮಾನಿಸಿದನು. ಅವನನ್ನು ಬಲನಿಷೂದನ ದೇವ

ಶಕ್ರನು ಅರ್ಥಮಾಡಿಕೊಂಡನು. ಅವನೂ ರಾಜರ್ಷಿಗಳೆಲ್ಲರೂ

"ಧಿಕ್ಕಾರ! ಧಿಕ್ಕಾರ!"

ಎಂದು ಹೇಳಿದರು. ನಹುಷಾತ್ಮಜನನ್ನು ನೋಡಿ ಅವರಲ್ಲಿ ಸಂಶಯವುಂಟಾಯಿತು:

"ಇವನು ಯಾರು? ಯಾರ ರಾಜ? ಹೇಗೆ ಸ್ವರ್ಗಕ್ಕೆ ಆಗಮಿಸಿದನು? ಯಾವ ಕರ್ಮಗಳಿಂದ ಇವನು ಸಿದ್ಧನಾದನು? ಎಲ್ಲಿಂದ ತಪೋಬಲವನ್ನು ಪಡೆದನು? ಸ್ವರ್ಗದಲ್ಲಿ ಇವನು ಹೇಗೆ ಪರಿಚಿತನಾಗಿದ್ದಾನೆ? ಯಾರು ಇವನನ್ನು ಬಲ್ಲರು?"

ಹೀಗೆ ಸ್ವರ್ಗವಾಸಿ ರಾಜರು ನೃಪತಿ ಯಯಾತಿಯ ಕಡೆ ನೋಡಿ ಅನ್ಯೋನ್ಯರನ್ನು ಕೇಳಿ ವಿಚಾರಿಸಿದರು. ನೂರಾರು ವಿಮಾನಪಾಲಕರು, ಸ್ವರ್ಗದ್ವಾರ ರಕ್ಷಕರು, ಮತ್ತು ಆಸನಪಾಲಕರು

"ಇವನು ನಮಗೆ ಗೊತ್ತಿಲ್ಲ!"

ಎಂದು ಹೇಳಿದರು. ಅವರೆಲ್ಲರ ಜ್ಞಾನವು ಮಸುಕಾಗಿತ್ತು ಮತ್ತು ಯಾರೂ ಆ ನೃಪನನ್ನು ಗುರುತಿಸಲಿಲ್ಲ. ಮುಹೂರ್ತ ಮಾತ್ರದಲ್ಲಿ ಆ ನೃಪನು ಓಜಸ್ಸಿಲ್ಲದವನಾಗಿಬಿಟ್ಟಿದ್ದನು.

ಆಗ ಸ್ಥಾನದಿಂದ ಪ್ರಚಲಿತನಾಗಿ, ಆಸನದಿಂದ ಪರಿಚ್ಯುತನಾಗಿ, ಮನಸ್ಸು ಕಂಪಿಸುತ್ತಿರಲು, ಶೋಕವಹ್ನಿಯಲ್ಲಿ ಬೆಂದು, ಮಾಲೆಯು

ಮಸುಕಾಗಿ, ವಿಶೇಷ ಜ್ಞಾನವನ್ನು ಕಳೆದುಕೊಂಡು, ಕಿರೀಟ-ಅಂಗದಗಳನ್ನು ಕಳಚಿಕೊಂಡು, ತಲೆತಿರುಗಿದಂತಾಗಿ, ಕೈಕಾಲುಗಳು ಜೋತುಬಿದ್ದು, ಆಭರಣ-ವಸ್ತ್ರಗಳನ್ನು ಕಳೆದುಕೊಂಡು, ಅದೃಶ್ಯನಾಗಿ, ಇತರರನ್ನು ನೋಡಿಯೂ ನೋಡದಂತೆ, ಶೂನ್ಯಮನಸ್ಸಿನಿಂದ ಶೂನ್ಯನಾಗಿ ಮಹೀತಲಕ್ಕೆ ಬೀಳುತ್ತಿದ್ದನು.

> "ನನ್ನನ್ನು ಸ್ಥಾನದಿಂದ ಚಲಿಸಬಲ್ಲಂತಹ, ಅಶುಭವೂ ಧರ್ಮದೂಷಣವೂ ಆದ ಯಾವುದನ್ನು ನಾನು ಮನಸ್ಸಿನಲ್ಲಿ ಧ್ಯಾನಿಸಿದೆ?"

ಎಂದು ರಾಜನು ಚಿಂತಿಸಿದನು. ಆದರೆ ಅಲ್ಲಿದ್ದ ರಾಜರು, ಸಿದ್ಧರು ಮತ್ತು ಅಪ್ಸರೆಯರು ನಿರಾಲಂಬನಾಗಿ ಪರಿಚ್ಯುತನಾಗಿದ್ದ ಯಯಾತಿಯನ್ನು ನೋಡಲೇ ಇಲ್ಲ. ಅಷ್ಟರಲ್ಲಿಯೇ ಕ್ಷೀಣ ಪುಣ್ಯರನ್ನು ಕೆಳಗುರಿಳಿಸುವ ಯಾರೋ ಪುರುಷನೋರ್ವನು ದೇವರಾಜನ ಶಾಸನದಂತೆ ಯಯಾತಿಗೆ ಹೇಳಿದನು:

> "ಅತೀವ ಮದಮತ್ತನಾಗಿ ನೀನು ಬೇರೆ ಯಾರನ್ನೂ ಅವಮಾನಿಸುತ್ತಿರುವೆ. ಮಾನದಿಂದಾಗಿ ನೀನು ಸ್ವರ್ಗಭ್ರಷ್ಟನಾಗಿದ್ದೀಯೆ. ನೀನು ಅನರ್ಹನಾಗಿರುವೆ. ಈಗ ನೀನು ಅಪರಿಚಿತ. ಹೋಗು. ಬೀಳು!"

ಎಂದು ಅವನು ಹೇಳಿದನು.

“ಒಳ್ಳೆಯವರ ಮಧ್ಯೆ ಬೀಳುವಂತಾಗಲಿ!”

ಎಂದು ಹೇಳಿ ಗತಿವಂತರಲ್ಲಿ ಶ್ರೇಷ್ಠ ನಹುಷಾತ್ಮಜನು ಹೋಗುವ ದಾರಿಯ ಕುರಿತು ಚಿಂತಿಸಿದನು.

ಇದೇ ಕಾಲದಲ್ಲಿ ನೈಮಿಷದಲ್ಲಿದ್ದ ನಾಲ್ವರು ಪಾರ್ಥಿವರ್ಷಭರನ್ನು ನೋಡಿ ಅವನು ಆ ನೃಪರ ಮಧ್ಯದಲ್ಲಿಯೇ ಬಿದ್ದನು. ಪ್ರತರ್ದನ, ವಸುಮನ, ಔಶೀನರ ಶಿಬಿ ಮತ್ತು ಅಷ್ಟಕರು ವಾಜಪೇಯ ಯಜ್ಞದಿಂದ ಸುರೇಶ್ವರನನ್ನು ತೃಪ್ತಿಪಡಿಸುತ್ತಿದ್ದರು. ಅವರ ಅಧ್ವರದಲ್ಲಿ ಹುಟ್ಟಿದ ಧೂಮವು ಸ್ವರ್ಗದ್ವಾರವನ್ನು ತಲುಪಿತ್ತು. ಅದನ್ನು ಆಘ್ರಾಣಿಸಿ ಯಯಾತಿಯು ಭೂಮಿಯ ಮೇಲೆ ಬಿದ್ದನು. ಭೂಮಿಯನ್ನು ಸ್ವರ್ಗಕ್ಕೆ ಜೋಡಿಸುವ ಗಂಗಾನದಿಯಂತಿದ್ದ ಆ ಧೂಮದಲ್ಲಿಯೇ ತೇಲಿಕೊಂಡು ಜಗತೀಪತಿ ರಾಜನು ಲೋಕಪಾಲಕರಂತಿದ್ದ ಆ ನಾಲ್ವರು ಶ್ರೀಮಂತ, ಅವಭೃಥರಲ್ಲಿ ಅಗ್ರ ಬಂಧುಗಳ ಮಧ್ಯೆ ಬಿದ್ದನು. ಆ ಪುಣ್ಯ ಸಂಕ್ಷಯದಲ್ಲಿ ಮಹಾಗ್ನಿಗಳಲ್ಲಿ ಆಹುತಿಗಳಂತಿದ್ದ ರಾಜಸಿಂಹರ ಮಧ್ಯೆ ರಾಜರ್ಷಿ ಯಯಾತಿಯು ಬಿದ್ದನು.

ಶ್ರೀಯಂತೆ ಸುಂದರರಾಗಿದ್ದ ಆ ಪಾರ್ಥಿವರೆಲ್ಲರೂ ಅವನನ್ನು ಕೇಳಿದರು:

“ನೀನು ಯಾರು? ಯಾರ ಬಂಧು? ಯಾವ ದೇಶ ಅಥವಾ ನಗರದವನು? ಯಕ್ಷನೋ ಅಥವಾ ದೇವನೋ, ಗಂಧರ್ವನೋ ಅಥವಾ ರಾಕ್ಷಸನೋ? ಏಕೆಂದರೆ ನೀನು

ಮನುಷ್ಯರೂಪದವನಲ್ಲ! ನಿನ್ನ ಉದ್ದೇಶ ಬಯಕೆಗಳು ಏನು?”

ಯಯಾತಿಯು ಹೇಳಿದನು:

“ನಾನು ರಾಜರ್ಷಿ ಯಯಾತಿ. ಪುಣ್ಯವು ಕಡಿಮೆಯಾಗಿ ದಿವದಿಂದ ಚ್ಯುತನಾಗಿದ್ದೇನೆ. ಒಳ್ಳೆಯವರ ಮಧ್ಯೆ ಬೀಳಲಿ ಎಂದು ಆಲೋಚಿಸುತ್ತಾ ನಿಮ್ಮ ಮಧ್ಯೆ ಬಿದ್ದಿದ್ದೇನೆ!”

ರಾಜರು ಹೇಳಿದರು:

“ಪುರುಷರ್ಷಭ! ನಿನ್ನನ್ನು ಬಯಕೆಯು ಸತ್ಯವಾಗಲಿ. ನಮ್ಮೆಲ್ಲರ ಕ್ರತು ಮತ್ತು ಧರ್ಮಫಲಗಳನ್ನು ಸ್ವೀಕರಿಸು.”

ಯಯಾತಿಯು ಹೇಳಿದನು:

“ನಾನು ಧನವನ್ನು ದಾನವಾಗಿ ಸ್ವೀಕರಿಸಬಲ್ಲ ಬ್ರಾಹ್ಮಣನಲ್ಲ. ಏಕೆಂದರೆ ನಾನು ಕ್ಷತ್ರಿಯ. ಇತರರ ಪುಣ್ಯವನ್ನು ನಾಶಗೊಳಿಸುವಲ್ಲಿ ನನ್ನ ಬುದ್ಧಿಯು ಇಷ್ಟಪಡುವುದಿಲ್ಲ.”

ಅದೇ ಸಮಯದಲ್ಲಿ ಜಿಂಕೆಯ ನಡತೆ ಕ್ರಮಗಳನ್ನು ಅನುಸರಿಸುತ್ತಿರುವ ಮಾಧವಿಯನ್ನು ನೋಡಿ ರಾಜರು ಅವಳನ್ನು ಅಭಿವಂದಿಸಿ ಹೇಳಿದರು:

“ನೀನು ಇಲ್ಲಿಗೆ ಬರಲು ಕಾರಣವೇನು? ಏನು ಕೆಲಸವಿದೆ? ನಿನ್ನ ಶಾಸನದಂತೆ ಮಾಡುತ್ತೇವೆ. ಆಜ್ಞಾಪಿಸು. ತಪೋಧನೆ! ನಾವೆಲ್ಲರೂ ನಿನ್ನ ಪುತ್ರರು.”

ಅವರ ಆ ಮಾತನ್ನು ಕೇಳಿ ಪರಮ ಮುದಿತಳಾಗಿ ಮಾಧವಿಯು ತಂದೆ ಯಯಾತಿಯ ಬಳಿ ಸಾರಿ ಅವನಿಗೆ ವಂದಿಸಿದಳು. ತಲೆತಗ್ಗಿಸಿ ನಿಂತಿದ್ದ ಮಕ್ಕಳನ್ನು ನೋಡಿ ಆ ತಾಪಸಿಯು ಹೇಳಿದಳು:

> "ರಾಜೇಂದ್ರ! ನನ್ನ ಈ ಮಕ್ಕಳು ನಿನ್ನ ಮಗಳ ಮಕ್ಕಳು. ನಿನಗೆ ಪರರಲ್ಲ. ಇವರೇ ನಿನ್ನನ್ನು ಉದ್ಧರಿಸುತ್ತಾರೆ ಎಂಬುದು ಬಹಳ ಹಿಂದೆಯೇ ಕಾಣಲಾಗಿತ್ತು. ನಾನು ನಿನ್ನ ಮಗಳು ಮೃಗಚಾರಿಣೀ ಮಾಧವೀ. ನಾನೂ ಕೂಡ ಧರ್ಮವನ್ನು ಸಂಚಯಿಸಿದ್ದೇನೆ. ಅದರ ಅರ್ಧವನ್ನು ಸ್ವೀಕರಿಸಬೇಕು. ಹೇಗೆ ನರರು ಎಲ್ಲರೂ ಮಕ್ಕಳ ಫಲಗಳಿಗೆ ಭಾಗಿಗಳಾಗುತ್ತಾರೋ ಹಾಗೆ ನಿನ್ನಂತೆ ಮಗಳ ಮಕ್ಕಳನ್ನೂ ಬಯಸುತ್ತಾರೆ."

ಆಗ ಆ ಎಲ್ಲ ಪಾರ್ಥಿವರೂ ಶಿರಬಾಗಿ ಜನನಿಗೆ ಅಭಿವಂದಿಸಿದರು. ಮಾತಾಮಹನಿಗೆ ನಮಸ್ಕರಿಸಿ ಹೇಳಿದರು. ಅವರ ಉಚ್ಛವಾದ, ಅನುಪಮ, ಸ್ನಿಗ್ಧ ಸ್ವರಗಳಿಂದ ಮೇದಿನಿಯನ್ನು ತುಂಬಿಸಿ ಆ ನೃಪತಿಗಳು ದಿವದಿಂದ ಚ್ಯುತನಾಗಿದ್ದ ಮಾತಾಮಹನನ್ನು ಉದ್ಧರಿಸಿದರು. ಆಗ ಗಾಲವನೂ ಅಲ್ಲಿಗೆ ಬಂದು ಪಾರ್ಥಿವನಿಗೆ

> "ನನ್ನ ತಪಸ್ಸಿನ ಎಂಟನೇ ಒಂದು ಭಾಗದಿಂದ ನೀನು ಸ್ವರ್ಗವನ್ನೇರು!"

ಎಂದನು. ನರಪುಂಗವ ಯಯಾತಿಯು ಆ ದಿವ್ಯಸಂಸ್ಥಾನದಲ್ಲಿ ಗುರುತಿಸಲ್ಪಟ್ಟ ಕೂಡಲೇ ಅವನು ವಿಗತಜ್ವರನಾದನು.

ದಿವ್ಯಮಾಲಾಂಬರಧರನಾಗಿ ದಿವ್ಯಾಭರಣಭೂಷಿತನಾಗಿ ದಿವ್ಯಗಂಧಗುಣೋಪೇತನಾಗಿ ಅವನ ಕಾಲುಗಳು ಭೂಮಿಯನ್ನು ಮುಟ್ಟಲಿಲ್ಲ. ಆಗ ಮೊಟ್ಟಮೊದಲು ಲೋಕದಲ್ಲಿ ದಾನಪತಿಯೆಂದು ಖ್ಯಾತನಾದ ವಸುಮನನು ಉಚ್ಚವಾಗಿ ಉಚ್ಚರಿಸಿ ನೃಪನಿಗೆ ಹೇಳಿದನು:

> "ಸರ್ವವರ್ಣದವರೊಡನೆ ಅಗರ್ಹದಿಂದ ನಡೆದುಕೊಂಡಿದುದರಿಂದ ಈ ಲೋಕದಲ್ಲಿ ಏನನ್ನು ಸಂಪಾದಿಸಿದ್ದೇನೋ ಅದನ್ನೂ ನಿನಗೆ ಕೊಟ್ಟು ಸಂಯೋಜಿಸುತ್ತಿದ್ದೇನೆ.  ದಾನಶೀಲನಾದುದರಿಂದ ಮತ್ತು ಕ್ಷಮಾಶೀಲನಾದುದರಿಂದ ಏನು ಫಲಗಳನ್ನು ಪಡೆದಿದ್ದೇನೋ ಅವುಗಳನ್ನು ನಿನಗೆ ಕೊಟ್ಟು ಸಂಯೋಜಿಸುತಿದ್ದೇನೆ."

ಆಗ ಕ್ಷತ್ರಿಯ ಪುಂಗವ ಪ್ರತರ್ದನನು ಹೇಳಿದನು:

> "ನಿತ್ಯವೂ ಧರ್ಮರತನಾಗಿರುವುದರಿಂದ, ನಿತ್ಯವೂ ಯುದ್ಧಪರಾಯಣನಾಗಿರುವುದರಿಂದ ಈ ಲೋಕದಲ್ಲಿ ಪಡೆದ, ಕ್ಷತ್ರಧರ್ಮದಿಂದ ಪಡೆದ ಯಶಸ್ಸು, ವೀರಶಬ್ಧದ ಫಲವನ್ನು ಕೊಟ್ಟು ನಿನ್ನನ್ನು ಸಂಯೋಜಿಸುತ್ತಿದ್ದೇನೆ."

ಧೀಮಂತ ಶಿಬಿ ಔಶೀನರನು ಮಧುರ ಸ್ವರದಲ್ಲಿ ಹೇಳಿದನು:

> "ಈ ಹಿಂದೆ ಬಾಲಕರಲ್ಲಿಯಾಗಲೀ, ನಾರಿಯರಲ್ಲಿಯಾಗಲೀ,

ವ್ಯವಹಾರದಲ್ಲಿಯಾಗಲೀ, ಯುದ್ಧಗಳಲ್ಲಿಯಾಗಲೀ, ಉತ್ಪಾತಗಳಲ್ಲಿಯಾಗಲೀ, ತುರ್ತುಪರಿಸ್ಥಿತಿಗಳಲ್ಲಿಯಾಗಲೀ ಸುಳ್ಳನ್ನು ಹೇಳದೇ ಇದ್ದ ನನ್ನ ಆ ಸತ್ಯದಿಂದ ನೀನು ಆಕಾಶವನ್ನೇರು! ರಾಜನ್! ನಾನು ಪ್ರಾಣವನ್ನು, ರಾಜ್ಯವನ್ನು, ಕರ್ಮ ಸುಖಗಳನ್ನು ತ್ಯಜಿಸಿಯೇನು. ಆದರೆ ಸತ್ಯವನ್ನು ಬಿಡಲಾರೆ ಎನ್ನುವ ಸತ್ಯದಿಂದ ನೀನು ಆಕಾಶವನ್ನೇರು. ನಾನು ಸತ್ಯದಿಂದ ಧರ್ಮನನ್ನು, ಸತ್ಯದಿಂದ ಪಾವಕನನ್ನು, ಸತ್ಯದಿಂದ ಶಕ್ರನನ್ನು ಪ್ರೀತಿಸಿದ್ದರೆ ಆ ಸತ್ಯದಿಂದ ನೀನು ಆಕಾಶವನ್ನೇರು!"

ಆಗ ರಾಜರ್ಷಿ, ಕೌಶಿಕ, ಮಾಧವೀಸುತ, ಅನೇಕ ನೂರಾರು ಯಜ್ಞಗಳನ್ನು ನಡೆಸಿದ್ದ ಧರ್ಮವಿದು ಅಷ್ಟಕನು ಈ ಮಾತನ್ನು ಹೇಳಿದನು:

"ಪ್ರಭೋ! ನಾನು ನೂರಾರು ಪಂಡರೀಕ, ಗೋಸವ ಮತ್ತು ವಾಜಪೇಯ ಯಜ್ಞಗಳನ್ನು ಮಾಡಿದ್ದೇನೆ. ಅವುಗಳ ಫಲವನ್ನು ಹೊಂದು. ಕ್ರತುಗಳಲ್ಲಿ ಬಳಸದೇ ಇದ್ದ ರತ್ನಗಳಾಗಲೀ, ಧನವಾಗಲೀ, ಪರಿಚ್ಛದವಾಗಲೀ ನನ್ನಲ್ಲಿ ಇಲ್ಲ ಎನ್ನುವ ಈ ಸತ್ಯದಿಂದ ಆಕಾಶವನ್ನೇರು!"

ಹೇಗೆ ಮಗಳ ಮಕ್ಕಳು ಹೀಗೆ ಆ ನರಾಧಿಪನಿಗೆ ಮಾತನಾಡುತ್ತಿದ್ದರೋ ಹಾಗೆ ರಾಜನು ವಸುಮತಿಯನ್ನು ಬಿಟ್ಟು ದಿವಕ್ಕೆ ತೆರಳಿದನು. ಈ ರೀತಿ

ಸ್ವರ್ಗದಿಂದ ಭ್ರಷ್ಟನಾದ ಯಯಾತಿಯನ್ನು ಆ ಎಲ್ಲ ರಾಜರು ತಮ್ಮ ಸುಕೃತ ತೇಜಸ್ಸುಗಳಿಂದ ಉದ್ಧರಿಸಿದರು. ನಾಲ್ಕು ರಾಜವಂಶಗಳಲ್ಲಿ ಹುಟ್ಟಿದ ಕುಲವರ್ಧನ ಆ ಮಗಳ ಮಕ್ಕಳು ತಮ್ಮದೇ ಧರ್ಮದಿಂದ, ಯಜ್ಞ ದಾನಗಳನ್ನು ಮಾಡಿದುದರ ಮೂಲಕ ಮಹಾಪ್ರಾಜ್ಞ ಮಾತಾಮಹನನ್ನು ದಿವಕ್ಕೆ ಏರಿಸಿದರು. ರಾಜರು ಹೇಳಿದರು:

> “ರಾಜನ್! ರಾಜಧರ್ಮಗುಣೋಪೇತರಾದ, ಸರ್ವಧರ್ಮ ಗುಣಾನ್ವಿತರಾದ ನಿನ್ನ ಮಗಳ ಮಕ್ಕಳಾದ ನಮ್ಮಿಂದ ದಿವವವನ್ನೇರು!”

ಆ ಭೂರಿದಕ್ಷಿಣ ಒಳ್ಳೆಯ ಪಾರ್ಥಿವರಿಂದ ಸ್ವರ್ಗಕ್ಕೆ ಏರಿಸಲ್ಪಟ್ಟ ಯಯಾತಿಯು ಮಗಳ ಮಕ್ಕಳನ್ನು ಬೀಳ್ಕೊಂಡು ಸ್ವರ್ಗವನ್ನು ಸೇರಿದನು. ನಾನಾ ಸುಗಂಧಿತ ಪುಷ್ಪಗಳ ಮಳೆಯಲ್ಲಿ ಮಿಂದು, ಪುಣ್ಯಸುಗಂಧಯುಕ್ತ ಪುಣ್ಯಗಾಳಿಗೆ ಸಿಲುಕಿ, ಮಗಳ ಮಕ್ಕಳ ಫಲವನ್ನು ಪಡೆದು ಅಚಲ ಸ್ಥಾನವನ್ನೇರಿ, ತನ್ನದೇ ಉಪಚಿತ ಕರ್ಮಗಳಿಂದ ಪರಮ ಶ್ರೀಯನ್ನು ಪಡೆದು ಪ್ರಜ್ವಲಿಸಿದನು. ಗಂಧರ್ವಾಪ್ಸರ ಗಣಗಳ ಉಪಗೀತ ಉಪನೃತ್ಯಗಳಿಂದ, ದುಂದುಭಿ ನಿಸ್ವನಗಳಿಂದ ಅವನು ಸ್ವರ್ಗದಲ್ಲಿ ಪ್ರೀತಿಯಿಂದ ಸ್ವಾಗತಿಸಲ್ಪಟ್ಟನು. ವಿವಿಧ ದೇವ-ರಾಜರ್ಷಿ ಚಾರಣರ ಅರ್ಚನೆಗಳಿಂದ ಸಂತೋಷಗೊಂಡು, ದೇವತೆಗಳಿಂದ ಅಭಿನಂದಿತನಾಗಿ, ಅವನು ಸ್ವರ್ಗಫಲವನ್ನು ಹೊಂದಿದನು. ಆಗ ಪಿತಾಮಹನು ಶಾಂತಮನಸ್ಕನಾಗಿ ಹಿಂದಿರುಗಿದ ಅವನನ್ನು

ತೃಪ್ತಿಗೊಳಿಸಲೋ ಎನ್ನುವಂತೆ ಹೇಳಿದನು:

"ಲೋಕದಲ್ಲಿ ಕರ್ಮಗಳ ಮೂಲಕ ನಾಲ್ಕು ಭಾಗ ಧರ್ಮಗಳನ್ನು ಸಂಚಯಿಸಿದ್ದೀಯೆ. ಈ ಲೋಕವು ನಿನಗೆ ಅಕ್ಷಯವಾಗುತ್ತದೆ. ರಾಜರ್ಷೇ! ನಿನ್ನ ಸುಕೃತ ಕರ್ಮಗಳಿಂದ ಪುನಃ ದಿವಿಯಲ್ಲಿ ನಿನ್ನ ಕೀರ್ತಿಯೂ ಅಕ್ಷಯವಾಗುತ್ತದೆ. ಸ್ವರ್ಗವಾಸಿಗಳೆಲ್ಲರ ಚೇತನಗಳೂ ತಮಸ್ಸಿನಿಂದ ಆವೃತವಾಗಿದ್ದವು. ಆದುದರಿಂದ ಅವರು ನಿನ್ನನ್ನು ಗುರುತಿಸಲಾರದಾದರು. ಗುರುತಿಗೆ ಸಿಗದೇ ನೀನು ಕೆಳಗೆ ಬಿದ್ದೆ. ನಿನ್ನ ಮಗಳ ಮಕ್ಕಳು ಪ್ರೀತಿಯಿಂದ ನಿನ್ನನ್ನು ಉದ್ಧರಿಸಿದುದರಿಂದ ನೀನು ಇಲ್ಲಿಗೆ ಬಂದಿರುವೆ. ಮತ್ತು ನಿನ್ನ ಕರ್ಮಗಳಿಂದ ಗಳಿಸಿದ ಈ ಅಚಲವೂ, ಶಾಶ್ವತವೂ, ಪುಣ್ಯವೂ, ಉತ್ತಮವೂ, ನಿಶ್ಚಿತವೂ, ಅವ್ಯಯವೂ ಆಗಿರುವ ಸ್ಥಾನವನ್ನು ಗಳಿಸಿರುವೆ."

ಯಯಾತಿಯು ಹೇಳಿದನು:

"ಭಗವನ್! ನನಗೊಂದು ಸಂಶಯವಿದೆ. ಅದನ್ನು ಹೋಗಲಾಡಿಸಬೇಕು. ಏಕೆಂದರೆ ಬೇರೆ ಯಾರಲ್ಲಿಯೂ ಇದನ್ನು ಕೇಳಲಾರೆ. ಬಹಳ ಸಹಸ್ರಾರು ವರ್ಷಗಳ ಕಾಲ ಪ್ರಜಾಪಾಲನೆಯಿಂದ ಬೆಳೆದ, ಅನೇಕ ಕ್ರತು-ದಾನಾದಿಗಳಿಂದ ನಾನು ಮಹಾ ಫಲವನ್ನು ಗಳಿಸಿದೆನು. ಆದರೆ, ಅದು ಸ್ವಲ್ಪವೇ

ಸಮಯದಲ್ಲಿ ಕ್ಷೀಣವಾಗಿ ನಾನು ಹೇಗೆ ಬಿದ್ದೆ? ನಾನು ಗಳಿಸಿದ ಶಾಶ್ವತ ಲೋಕಗಳು ನಿನಗೆ ತಿಳಿದೇ ಇವೆ.”

ಪಿತಾಮಹನು ಹೇಳಿದನು:

“ಬಹಳ ಸಹಸ್ರಾರು ವರ್ಷಗಳ ಕಾಲ ಪ್ರಜಾಪಾಲನೆಯಿಂದ ಬೆಳೆದ, ಅನೇಕ ಕ್ರತು-ದಾನಾದಿಗಳಿಂದ ನೀನು ಮಹಾ ಫಲಗಳನ್ನು ಗಳಿಸಿದ್ದೆ. ಆದರೆ ಅವನ್ನು ಒಂದೇ ಒಂದು ದೋಷದಿಂದ ಕಳೆದುಕೊಂಡು ಇಲ್ಲಿಂದ ಕೆಳಗುರುಳಿದೆ. ರಾಜೇಂದ್ರ! ಅಭಿಮಾನದಿಂದ ನೀನು ಸ್ವರ್ಗವಾಸಿಗಳಿಂದ ಧಿಕ್ಕರಿಸಲ್ಪಟ್ಟೆ. ಈ ಲೋಕವು ಮಾನದಿಂದ, ಬಲದಿಂದ, ಹಿಂಸೆಯಿಂದ, ಮೋಸದಿಂದ ಮತ್ತು ಮಾಯೆಯಿಂದ ಶಾಶ್ವತವಾಗುವುದಿಲ್ಲ. ನೀನು ಮೇಲಿರುವವರನ್ನಾಗಲೀ, ಕೆಳಗಿರುವವರನ್ನಾಗಲೀ, ಮಧ್ಯಮರನ್ನಾಗಲೀ ಅವಮಾನಿಸಕೂಡದು. ಅಭಿಮಾನದ ಕಿಚ್ಚಿಗೆ ಸಿಲುಕಿದವರಿಗೆ ಎಂದೂ ಯಾರೂ ಸಮರೆನಿಸುವುದಿಲ್ಲ. ನಿನ್ನ ಈ ಪತನ ಮತ್ತು ಆರೋಹಣವನ್ನು ಯಾವ ನರರು ಹೇಳುತ್ತಾರೋ ಅವರು ಎಲ್ಲ ಕಷ್ಟಗಳನ್ನು ದಾಟುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ!”

ಈ ರೀತಿ ಅಭಿಮಾನದಿಂದ ಹಿಂದೆ ಯಯಾತಿ ಮತ್ತು ಗಾಲವರು ಅತಿ ನಿರ್ಬಂಧಕ್ಕಾಗಿ ದೋಷಗಳನ್ನು ಹೊಂದಿದರು. ತಮ್ಮ ಏಳಿಗೆಯನ್ನು

ಬಯಸುವವರು ಸುಹೃದಯರ ಹಿತಕಾಮನೆಗಳನ್ನು ಕೇಳಬೇಕು. ಹಠವನ್ನು ಮಾಡಬಾರದು. ಏಕೆಂದರೆ ಹಠವು ಕ್ಷಯವನ್ನು ತರುತ್ತದೆ.

# ವಿದುಲೋಪಾಽಖ್ಯಾನ

[ವಿದುಲೆ ಮತ್ತು ಅವಳ ಮಗನ ನಡುವೆ ನಡೆದ ಸಂವಾದದ ಈ ಕಥೆಯು ವ್ಯಾಸ ಮಹಾಭಾರತದ ಉದ್ಯೋಗಪರ್ವದ ಭಗವದ್ಯಾನ ಪರ್ವ (ಅಧ್ಯಾಯ ೧೩೧-೧೩೪) ದಲ್ಲಿ ಬರುತ್ತದೆ. ಸಂಧಿ ಮುರಿದು ಯುದ್ಧವೇ ನಿಶ್ಚಯವಾದಾಗ ಕುಂತಿಯು ಈ ಕಥೆಯನ್ನು ತನ್ನ ಮಕ್ಕಳಿಗೆ ಶ್ರೀಕೃಷ್ಣನ ಮೂಲಕ ಹೇಳಿ ಕಳುಹಿಸಿದಳು.]

ಯಶಸ್ವಿನೀ, ಕೋಪಿಷ್ಟ, ಸತ್ಕುಲದಲ್ಲಿ ಜನಿಸಿದ್ದ, ಮಾನಿಷ್ಟೆ, ಕ್ಷತ್ರಧರ್ಮನಿರತೆ, ಧನ್ಯೆ, ದೀರ್ಘದರ್ಶಿನಿ, ರಾಜಸಂಸದಿಗಳಲ್ಲಿ ವಿಶ್ರುತಳಾದ, ಉಪದೇಶಿತಳಾಗಿದ್ದ, ವಿಖ್ಯಾತಳಾಗಿದ್ದ ವಿದುರಾ ಎಂಬ ಹೆಸರಿನ ಸತಿಯು ಸಿಂಧುರಾಜನಿಂದ ಸೋತು ದೀನಚೇತಸನಾಗಿ ಮಲಗಿಕೊಂಡಿದ್ದ ಸಂತೋಷ ನೀಡದ, ಧರ್ಮವನ್ನು ತಿಳಿಯದಿದ್ದ, ವೈರಿಗಳ ಹರ್ಷವನ್ನು ವರ್ಧಿಸುವ ಹಿರಿಯ ಮಗನನ್ನು ನಿಂದಿಸಿದಳು:

“ನೀನು ನನ್ನಲ್ಲಿ ಮತ್ತು ನಿನ್ನ ತಂದೆಯಲ್ಲಿ ಹುಟ್ಟಿದವನಲ್ಲ! ಎಲ್ಲಿಂದಲೋ ಬಂದಿರುವೆ! ನಿನಗೆ ಕೋಪವೆಂಬುವುದೇ

ಇಲ್ಲವಾಗಿದೆ! ಹೆಸರಿಗೆ ಮಾತ್ರ ಪುರುಷನಾಗಿರುವೆ. ಸಾಧನೆಯಲ್ಲಿ ನಪುಂಸಕನಾಗಿರುವೆ. ಜೀವನದಲ್ಲಿ ನಿರಾಶೆಹೊಂದಿದವನಂತಿದ್ದೀಯೆ. ಕಲ್ಯಾಣಕಾಗಿ ಯುದ್ಧಕ್ಕೆ ಹೊರಡು! ನಿನ್ನಲ್ಲಿರುವ ಆತ್ಮನನ್ನು ಅಪಮಾನಿಸಬೇಡ! ನೀನು ಸಾಮಾನ್ಯನೆಂದು ಭಾವಿಸಬೇಡ! ಕಲ್ಯಾಣವನ್ನು ಮಾಡುವ ಮನಸ್ಸು ಮಾಡು. ಭಯಪಡಬೇಡ! ಭಯವನ್ನು ತೆಗೆದುಹಾಕು. ಹೇಡಿ! ಮೇಲೇಳು! ಸೋತುಬಂದು ಹೀಗೆ ಬಿದ್ದುಕೊಳ್ಳಬೇಡ! ಮಾನಗೆಟ್ಟು ಸರ್ವ ಶತ್ರುಗಳಿಗೆ ಆನಂದವನ್ನುಂಟುಮಾಡಿ ಬಂಧುಗಳಿಗೆ ಶೋಕವನ್ನು ತರಬೇಡ! ಸಣ್ಣ ನದಿಯು ಸ್ವಲ್ಪವೇ ಮಳೆಬಂದರೂ ತುಂಬಿ ಹರಿಯುತ್ತದೆ. ಇಲಿಯ ಬೊಗಸೆಯು ಸ್ವಲ್ಪವೇ ಅನ್ನದಿಂದ ತುಂಬಿಹೋಗುತ್ತದೆ. ಹೇಡಿಯಾದವನನ್ನು ಸಂತೋಷಗೊಳಿಸುವುದು ತುಂಬಾ ಸುಲಭ. ಸ್ವಲ್ಪದಿಂದಲೇ ತೃಪ್ತಿಗೊಳ್ಳುತ್ತಾನೆ. ಹಾವಿನ ಹಲ್ಲನ್ನಾದರೂ ಕೀಳಲು ಹೋಗಿ ಸಾವನ್ನಪ್ಪು, ಹಾಗೆಯೂ ಜೀವವುಳಿಯುತ್ತದೆಯೆಂದು ಸಂಶಯವಾದರೆ ಪರಾಕ್ರಮದಿಂದ ಹೋರಾಡು. ಗಿಡುಗವು ಮೇಲೆ ಹಾರಿ ತಿಳಿದುಕೊಳ್ಳುವಂತೆ ನೀನೂ ಕೂಡ ಶತ್ರುವಿಗೆ ಶಂಕೆಬಾರದಂತೆ ತಿಳಿದುಕೊಳ್ಳಬೇಕು. ಅನಂತರ ಗರ್ಜಿಸುತ್ತಾ ರಣರಂಗದಲ್ಲಿ ಯುದ್ಧಮಾಡಬೇಕು. ರಣಹೇಡಿ! ಸಿಡಿಲು ಬಡಿದು ಸತ್ತವನಂತೆ ಏಕೆ ಮಲಗಿರುವೆ? ಏಳು! ಸೋತು

ಹೀಗೆ ಮಲಗಿಕೊಳ್ಳಬೇಡ! ಅಸ್ತನಾಗಿ ಹೋಗಬೇಡ! ಕೃಪಣನಾಗಿ ಸ್ವಕರ್ಮದಿಂದ ಪ್ರಸಿದ್ಧನಾಗು! ಮಧ್ಯಮನೆಂದೂ, ಜಘನ್ಯನೆಂದೂ, ಅಧಮನೆಂದೂ ತಿಳಿದುಕೊಳ್ಳಬೇಡ! ಎದ್ದು ಗೆಲ್ಲು! ಒಣಗಿದ ತುಂಬೇಗಿಡದಂತೆ ಒಂದು ಕ್ಷಣವಾದರೂ ಪ್ರಜ್ವಲಿಸು. ಜೀವಿಸಿರಬೇಕೆಂಬ ಒಂದೇ ಒಂದು ಆಸೆಯಿಂದ ಹೊಟ್ಟಿನ ಬೆಂಕಿಯಂತೆ ಉರಿಯಿಲ್ಲದೇ ಹೊಗೆ ಕರಿಗಳಿಂದ ಆವೃತನಾಗಿರಬೇಡ. ಬಹಳ ಕಾಲದವರೆಗೆ ಹೊಗೆಯಾಡುತ್ತಾ ಇರುವುದಕ್ಕಿಂತ ಕ್ಷಣಮಾತ್ರ ಹತ್ತಿ ಉರಿಯುವುದು ಒಳ್ಳೆಯದು. ಯಾವೊಬ್ಬ ರಾಜನ ಮನೆಯಲ್ಲಿಯೂ ನಿನ್ನಂತೆ ಮೃದುಸ್ವಭಾವದ ಹೇಡಿ ಕತ್ತೆಯು ಹುಟ್ಟದಿರಲಿ. ಮನುಷ್ಯ ಕರ್ಮವನ್ನು ಮಾಡಿ ಪೌರುಷವಿದ್ದಷ್ಟೂ ಉತ್ತಮವಾಗಿ ಕಾದಾಡಿದರೆ ಕ್ಷತ್ರಿಯ ಧರ್ಮದ ಋಣದಿಂದ ಮುಕ್ತನಾಗುತ್ತಾನೆ. ಅವನು ಆತ್ಮನಿಂದನೆಯನ್ನು ಮಾಡಿಕೊಳ್ಳುವುದಿಲ್ಲ. ಸಿಕ್ಕಿದರೂ ಸಿಕ್ಕದೇ ಇದ್ದರೂ ಪಂಡಿತರು ಶೋಕಿಸುವುದಿಲ್ಲ. ಕೊನೆಯವರೆಗೂ ಕಾರ್ಯಮಾಡುತ್ತಲೇ ಇರುತ್ತಾರೆ. ಪ್ರಾಣವನ್ನು ಧನವೆಂದು ತಿಳಿದು ಹೆದರಿ ಸುಮ್ಮನಿರುವುದಿಲ್ಲ. ಮಗನೇ! ಧರ್ಮವನ್ನು ಮುಂದಿರಿಸಿಕೊಂಡು ವೀರ್ಯವನ್ನು ಪ್ರದರ್ಶಿಸು ಅಥವಾ ನಿಶ್ಚಯವಾದ ಮೃತ್ಯುಗತಿಯಲ್ಲಿ ಹೋಗು! ಯಾವ ಕಾರಣಕ್ಕೆ

ಜೀವಿಸಿರುವೆ? ನಪುಂಸಕ! ನಿನ್ನ ಧರ್ಮಕಾರ್ಯಗಳು ನಿಂತು ಹೋಗಿವೆ. ಕೀರ್ತಿಯೂ ಸಕಲವಾಗಿ ನಾಶವಾಗಿದೆ. ಭೋಗಮೂಲವಾದ ರಾಜ್ಯವೂ ಒಡೆದು ಹೋಗಿದೆ. ಇನ್ನು ಏಕೆ ಜೀವಿಸಿರುವೆ? ಶತ್ರುವಿನಿಂದ ಕೆಡವಲ್ಪಟ್ಟವನು ಅವನ ಮೊಣಕಾಲುಗಳನ್ನೂ ಎಳೆದು ಮೇಲೇಳಲು ಪ್ರಯತ್ನಿಸಬೇಕು. ಆಗ ಸಂಪೂರ್ಣವಾಗಿ ನಾಶಹೊಂದಿದರೂ ವಿಷಾದಿಸಬಾರದು. ಆಜಾನೇಯವೆಂಬ ಕುದುರೆಯನ್ನು ಸ್ಮರಿಸಿ ಧುರದಲ್ಲಿ ಮೇಲೇಳಲು ಸತತ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ನಿನ್ನಲ್ಲಿರುವ ಪರುಷವನ್ನು ತಿಳಿದುಕೊಂಡು ನಿನ್ನಲ್ಲಿ ವೀರ್ಯವನ್ನೂ ಅಭಿಮಾನವನ್ನೂ ಹಿಟ್ಟಿಸಿಕೋ! ನಿನ್ನಿಂದಾಗಿ ಮುಳುಗಿಹೋಗುತ್ತಿರುವ ವಂಶವನ್ನು ನೀನೇ ಮೇಲೆತ್ತು. ಯಾರ ಮಹಾ ಅದ್ಭುತ ಸಾಧನೆಗಳನ್ನು ಮನುಷ್ಯರು ಮಾತನಾಡಿಕೊಳ್ಳುವುದಿಲ್ಲವೋ ಅವನು ಜನಸಂಖ್ಯೆಯುನ್ನು ಹೆಚ್ಚಿಸಲು ಮಾತ್ರ ಅರ್ಹನಾಗಿರುತ್ತಾನೆ. ಅವನು ಸ್ತ್ರೀಯೂ ಆಗಿರುವುದಿಲ್ಲ. ಪುರುಷನೂ ಆಗಿರುವುದಿಲ್ಲ. ಯಾರು ದಾನದಲ್ಲಿ, ತಪಸ್ಸಿನಲ್ಲಿ, ಶೌರ್ಯದಲ್ಲಿ, ವಿದ್ಯೆಯಲ್ಲಿ ಅಥವಾ ಅರ್ಥಲಾಭದಲ್ಲಿ ಪ್ರಸಿದ್ಧನಾಗುವುದಿಲ್ಲವೋ ಅವನು ತಾಯಿಯ ವಲ-ಮೂತ್ರಗಳಿದ್ದಂತೆ. ಯಾರು ಪಾಂಡಿತ್ಯದಿಂದ ಅಥವಾ ತಪಸ್ಸಿನಿಂದ ಅಥವಾ ಸಂಪತ್ತಿನಿಂದ ಅಥವಾ ವಿಕ್ರಮದಿಂದ ಅಥವಾ ಬೇರೆ ಕರ್ಮಗಳಿಂದ ಅನ್ಯ ಜನರನ್ನು

ಮೀರುತ್ತಾನೋ ಅವನೇ ಪುರುಷ. ಕಾಪುರುಷರಿಗೆ ಉಚಿತವಾದ ಕ್ರೂರ, ಅಯಶಸ್ಕರವಾದ, ದುಃಖಕರವಾದ, ನೀಚರ ಮತ್ತು ಭಿಕ್ಷಾವೃತ್ತಿಯಿಂದ ಜೀವಿಸುವವರ ವೃತ್ತಿಯನ್ನು ಮಾತ್ರ ನೀನು ಆಚರಿಸಬೇಡ. ಯಾರನ್ನು ನೋಡಿ ಶತ್ರುಗಳು ಆನಂದಿಸುತ್ತಾರೋ, ಯಾರ ಇರುವಿಕೆಯೇ ಲೋಕಕ್ಕೆ ತಿಳಿದಿರುವುದಿಲ್ಲವೋ, ಯಾರನ್ನು ನೋಡಿ ಲೋಕವು ಹಳಿಯುವುದೋ, ಯಾರ ಆಸನ-ವಸನಗಳು ಹೀನವಾಗಿರುವವೋ, ಅಲ್ಪ ಲಾಭಕ್ಕೆ ಯಾರು ಸಂತುಷ್ಟನಾಗಿ ಅಚ್ಚರಿಯನ್ನು ಪ್ರಕಟಿಸುತ್ತಾನೋ ಆ ದೀನ, ಅಲ್ಪಜೀವಿಕ, ಅಲ್ಪಕ ಬಂಧುವನ್ನು ಸೇರಿ ಬಾಂಧವರು ಸುಖವನ್ನು ಪಡೆಯುವುದಿಲ್ಲ. ನಮ್ಮ ರಾಷ್ಟ್ರದಿಂದ ಹೊರಗಟ್ಟಲ್ಪಟ್ಟು ಶತ್ರುಗಳು ವಶಪಡೆಸಿಕೊಂಡಿದ್ದಾರೆ. ನಾವು ಸರ್ವಕಾಮರಸಹೀನರಾಗಿ ಸ್ಥಾನಭ್ರಷ್ಟರಾಗಿ ಏನೂ ಇಲ್ಲದವರಾಗಿದ್ದೇವೆ. ಪುತ್ರ! ಸಂಜಯ! ಸತ್ಪುರುಷರ ಕುಲದಲ್ಲಿ ಪುತ್ರನೆಂದು ಕರೆದುಕೊಳ್ಳುವ ಈ ಅಮಂಗಳಕಾರಿ, ವಂಶ ನಾಶಿನಿ, ಕಲಿಯಾದ ನಿನಗೆ ಜನ್ಮವಿತ್ತಿದ್ದೇನಲ್ಲ! ಕೋಪರಹಿತನಾದ, ನಿರುತ್ಸಾಹಿಯಾದ, ನಿರ್ವೀರ್ಯನಾದ, ಶತ್ರುಗಳನ್ನು ಸಂತೋಷಗೊಳಿಸುವ ಇಂತಹ ಪುತ್ರನನ್ನು ಯಾವ ಸೀಮಂತಿನಿಯೂ ಪ್ರಸವಿಸದಿರಲಿ. ಧೂಮಪ್ರಾಯನಾಗಬೇಡ! ಅಗ್ನಿಯಂತೆ ಪ್ರಜ್ವಲಿಸು!

ಶತ್ರುಗಳನ್ನು ಆಕ್ರಮಿಸಿ ನಾಶಪಡಿಸು. ಮುಹೂರ್ತವಾಗಲೀ ಕ್ಷಣವಾಗಲೀ ಅಮಿತ್ರರ ನೆತ್ತಿಯನ್ನು ಸುಡು. ಯಾರಲ್ಲಿ ಕೋಪವಿದೆಯೋ ಯಾರು ಅಕ್ಷಮಿಯೋ ಅವನೇ ಪುರುಷ. ಕ್ಷಮೆಯಿರುವವನು, ಸಿಟ್ಟಿಲ್ಲದಿರುವವನು ಸ್ತ್ರೀಯೂ ಅಲ್ಲ ಪುರುಷನೂ ಅಲ್ಲ. ಅಲ್ಪ ಸಂತುಷ್ಟಿ, ದಯೆ, ಉದ್ಯೋಗಶೂನ್ಯತೆ, ಮತ್ತು ಭಯ ಇವು ಸಂಪತ್ತನ್ನು ನಾಶಗೊಳಿಸುತ್ತವೆ. ನಿರಪೇಕ್ಷನು ಇಲ್ಲಿ ಮತ್ತು ನಂತರ ಎರಡರಲ್ಲೂ ಮಹಾ ಉಚ್ಛಸ್ಥಾನಗಳನ್ನು ಪಡೆಯಲಾರನು. ಈ ಪರಾಭವಗೊಳಿಸುವ ಪಾಪಗಳನ್ನು ನಿನ್ನಿಂದ ನೀನೇ ತೆಗೆದುಹಾಕು. ಹೃದಯವನ್ನು ಕಬ್ಬಿಣವನಾಗಿಸಿಕೊಂಡು ನಿನ್ನದನ್ನು ಪುನಃ ಸಂಪಾದಿಸು. ಪುರವನ್ನು ಎದುರಿಸಿ ನಿಲ್ಲುತ್ತಾನೆ ಎನ್ನುವುದರಿಂದಲೇ ಪುರುಷ ಎಂದು ಕರೆಯಲ್ಪಡುತ್ತಾನೆ. ಸ್ತ್ರೀಯಂತೆ ಜೀವಿಸುವವರಿಗೆ ಈ ಹೆಸರು ವ್ಯರ್ಥವೆಂದು ಹೇಳುತ್ತಾರೆ. ಸುಸ್ಥಿರ ವೀರಪರಾಕ್ರಮವುಳ್ಳ ಸಿಂಹವಿಗ್ರಂತಗಾಮಿ ಶೂರನು ಒಂದು ವೇಳೆ ಯುದ್ಧಮಾಡುತ್ತಾ ಪ್ರಾಣತೊರೆದರೂ ಅವನ ಪ್ರಜೆಗಳು ಸುಖವಾಗಿರುತ್ತಾರೆ. ಯಾರು ತನಗೆ ಪ್ರಿಯವಾದುದನ್ನು ಮತ್ತು ಸುಖವಾದುದನ್ನು ತೊರೆದು ಸಂಪತ್ತನ್ನು ಅರಸಿ ಪ್ರಯತ್ನಿಸುತ್ತಾನೋ ಅವನು ಶೀಘ್ರದಲ್ಲಿಯೇ ತನ್ನ ಅಮಾತ್ಯರಿಗೆ ಹರ್ಷವನ್ನುಂಟುಮಾಡುತ್ತಾನೆ.”

ಪುತ್ರನು ಹೇಳಿದನು:

"ನಾನು ಸತ್ತು ಹೋದರೆ ಈ ಪೃಥ್ವಿ, ಎಲ್ಲವೂ ಏನಕ್ಕೆ ಬೇಕು? ಆಭರಣ, ಭೋಗ, ಜೀವಿತ, ಕೃತ್ಯಗಳೇಕೆ?"

ಮಾತೆಯು ಹೇಳಿದಳು:

"ಇಂದೇ ಏಕೆ ಮಾಡುವುದು ಎನ್ನುವವರ ಲೋಕವನ್ನು ನಮ್ಮ ವೈರಿಗಳು ಪಡೆಯಲಿ. ಧೃತಾತ್ಮರ ಲೋಕಗಳನ್ನು ನಮ್ಮ ಸುಹೃದಯರು ಪಡೆಯಲಿ. ಸೇವಕರಿಲ್ಲದೇ ಜೀವಿಸುವವರ, ಪರಾನ್ನದಿಂದಲೇ ಉಪಜೀವಿಸುವವರ, ಕೃಪಣರ, ಅಸತ್ತ್ವರ ವೃತ್ತಿಯನ್ನು ಅನುಸರಿಸಬೇಡ. ಮಗೂ! ದೇವತೆಗಳು ಶತಕ್ರತುವನ್ನು ಮತ್ತು ಭೂತಗಳು ಮಳೆಯನ್ನು ಹೇಗೋ ಹಾಗೆ ಬ್ರಾಹ್ಮಣರು ಮತ್ತು ಸುಹೃದಯರು ನಿನ್ನನ್ನು ಅವಲಂಬಿಸಿ ಜೀವಿಸಲಿ. ಸಂಜಯ! ಪಕ್ವ ಹಣ್ಣುಗಳಿಂದ ಕೂಡಿದ ವೃಕ್ಷದಬಳಿ ಹೋಗುವಂತೆ ಯಾವ ಪುರುಷನ ಆಶ್ರಯದಲ್ಲಿ ಸರ್ವಭೂತಗಳೂ ಇರುವವೋ ಅಂತಹವನ ರಾಜ್ಯವು ಅರ್ಥವತ್ತಾಗಿರುತ್ತದೆ. ಶಕ್ರನ ವಿಕ್ರಾಂತವನ್ನು ಆಶ್ರಯಿಸಿ ತ್ರಿದಶರು ಹೇಗೋ ಹಾಗೆ ಯಾವ ಶೂರನ ವಿಕ್ರಾಂತವನ್ನಾಶ್ರಯಿಸಿ ಬಾಂಧವರು ಸುಖಿಗಳಾಗಿರುತ್ತಾರೋ ಅವನ ಜೀವನವೇ ಅರ್ಥವತ್ತಾಗಿರುತ್ತದೆ. ಸ್ವಬಲವನ್ನಾಶ್ರಯಿಸಿ ಯಾವ ಮಾನವನು ಇನ್ನೊಬ್ಬರಿಗೂ

ಆಶ್ರಯವನ್ನು ನೀಡುತ್ತಾನೋ ಅವನು ಲೋಕದಲ್ಲಿ ಕೀರ್ತಿಯನ್ನೂ ಪರದಲ್ಲಿ ಶುಭಗತಿಯನ್ನೂ ಪಡೆಯುತ್ತಾರೆ.

ಈಗ ಈ ಅವಸ್ಥೆಯಲ್ಲಿ ಪೌರುಷವನ್ನು ತ್ಯಜಿಸಲು ಇಚ್ಛಿಸಿದರೆ ಬೇಗನೇ ನೀನು ಹೀನಪುರುಷರ ಮಾರ್ಗದಲ್ಲಿ ಹೋಗುತ್ತೀಯೆ. ಯಾವ ಕ್ಷತ್ರಿಯನು ಜೀವಿಸಿರಬೇಕೆಂಬ ಒಂದೇ ಆಶಯದಿಂದ ಶಕ್ತಿ ಮೀರಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿ ಹೋರಾಡುವುದಿಲ್ಲವೋ ಅವನನ್ನು ಕಣ್ಣನೆಂದೇ ತಿಳಿಯುತ್ತಾರೆ. ಸಾಯಲು ಸಿದ್ಧನಾಗಿರುವವನಿಗೆ ಔಷಧಗಳು ಹೇಗೆ ಪರಿಣಾಮವನ್ನುಂಟುಮಾಡುವುದಿಲ್ಲವೋ ಹಗೆ ನಾನು ಹೇಳುತ್ತಿರುವ ಈ ಯತಾರ್ಥವಾದ ಗುಣವಂತ ಮಾತುಗಳು ನಿನಗೆ ತಾಗುತ್ತಿಲ್ಲ. ಸಿಂಧುರಾಜನಲ್ಲಿ ಸಂತುಷ್ಟರಾಗಿರದ ಬಹಳ ಜನರಿದ್ದಾರೆ. ಆದರೆ ನಿನ್ನ ದೌರ್ಬಲ್ಯದಿಂದಾಗಿ ಏನೂ ಮಾಡಲು ತಿಳಿಯದೇ ನಿರೀಕ್ಷಿಸುತ್ತಿದ್ದಾರೆ. ನಿನ್ನ ಪೌರುಷವನ್ನು ನೋಡಿ ನಂತರ ಹಲವು ಕಡೆಗಳಿಂದ ನಿನಗೆ ಸಹಾಯವನ್ನು ನೀಡಿ ಅವನೊಂದಿಗೆ ಶತ್ರುತ್ವವನ್ನು ಕಟ್ಟಿಕೊಳ್ಳಬಹುದು. ಅವರೊಡನೆ ನೀನು ಸಂಧಿಯನ್ನು ಮಾಡಿಕೊಂಡು ಅವನಿಗೆ ವಿಪತ್ತು ಒದಗುವ ಕಾಲವನ್ನು ಕಾಯುತ್ತಾ ರಹಸ್ಯವಾಗಿ ಗಿರಿದುರ್ಗಾಲಯಗಳಲ್ಲಿ ಸಂಚರಿಸುತ್ತಿರಬೇಕು. “ಸಂಜಯ” ಎಂಬ ಹೆಸರನ್ನು ನಿನಗಿಟ್ಟಿದ್ದೀವೆ. ಆದರೆ ಅದನ್ನೇ ನಾನು ನಿನ್ನಲ್ಲಿ ಕಾಣದವಳಾಗಿದ್ದೇನೆ. ಮಗೂ! ನಿನ್ನ

ಅನ್ವರ್ಥನಾಮನಾಗು. ವ್ಯರ್ಥನಾಮಕನಾಗಬೇಡ. ಹಿಂದೆ ನೀನಿನ್ನೂ ಬಾಲಕನಾಗಿದ್ದಾಗ ಶುಭಲೋಚನ ಮಹಾಪ್ರಾಜ್ಞ ಬ್ರಾಹ್ಮಣನೋರ್ವನು ನಿನ್ನನ್ನು ನೋಡಿ ಇವನು ಮುಂದೆ ಮಹಾ ಕಷ್ಟವನ್ನು ಅನುಭವಿಸಿ ನಂತರ ವೃದ್ಧಿಯನ್ನು ಪಡೆಯುತ್ತಾನೆ ಎಂದು ಹೇಳಿದ್ದನು. ಅವನ ಮಾತನ್ನು ಸ್ಮರಿಸಿಕೊಂಡು ನಿನ್ನ ವಿಜಯವನ್ನು ಆಶಿಸುತ್ತಿದ್ದೇನೆ. ಆದುದರಿಂದ ಮಗೂ! ನಿನಗೆ ಪುನಃ ಪುನಃ ಹೇಳುತ್ತಿದ್ದೇನೆ. ಯಾರ ಅರ್ಥಸಿದ್ಧಿಯಲ್ಲಿ ಇತರರೂ ಸಂತುಷ್ಟರಾಗುತ್ತಾರೆಯೋ ಮತ್ತೂ ತಾನೂ ಔನ್ನತ್ಯವನ್ನು ಹೊಂದುತ್ತಾನೋ ಅಂತಹ ನೀತಿಶಾಸ್ತ್ರಾನುಸಾರವಾದ ಅರ್ಥಸಿದ್ಧಿಗೆ ಪ್ರಯತ್ನಿಸುವವನ ಅಭೀಷ್ಟಗಳು ಸಿದ್ಧಿಯಾಗುತ್ತವೆ. ಸಂಜಯ! ನನಗೆ ಮತ್ತು ಪೂರ್ವಜರಿಗೆ ಸಮೃದ್ಧಿಯಾಗಲಿ ಅಥವಾ ಸಮೃದ್ಧಿಯಾಗಲೀ ಯುದ್ಧಮಾಡುವುದೇ ಧರ್ಮವೆಂದು ತಿಳಿದು ಯುದ್ಧಮಾಡು. ನಿಲ್ಲಿಸಬೇಡ! ಇಂದಿನ ಮತ್ತು ಬೆಳಗಿನ ಊಟವು ಕಾಣುವುದಿಲ್ಲವೆಂದರೆ ಅದಕ್ಕಿಂತಲೂ ಪಾಪಿ ಅವಸ್ಥೆಯು ಬೇರೊಂದಿಲ್ಲ ಎಂದು ಶಂಬರನು ಹೇಳಿದ್ದಾನೆ. ಪತಿ ಮತ್ತು ಪುತ್ರರ ವಧೆಗಿಂತಲೂ ಹೆಚ್ಚಿನ ದುಃಖವಿದೆಂದು ಹೇಳಲಾಗಿದೆ. ದಾರಿದ್ರ್ಯವೆಂದು ಯಾವುದಕ್ಕೆ ಹೇಳುತ್ತೇವೋ ಅದರ ಪರ್ಯಾಯವಾದುದೇ ಮರಣ. ನಾನು ಮಹಾಕುಲದಲ್ಲಿ ಹುಟ್ಟಿದವಳು - ಒಂದು ಸರೋವರದಿಂದ

ಇನ್ನೊಂದಕ್ಕೆ ಹೋಗುವ ಕಮಲದಂತೆ ಸರ್ವಕಲ್ಯಾಣಯುಕ್ತವಾದ ಪರಮ ಪೂಜಿತ ಪತಿಯಲ್ಲಿ ಬಂದಿರುವವಳು. ಹಿಂದೆ ಮಹಾರ್ಹವಾದ ಮಾಲ್ಯಾಂಬರ ಆಭರಣಗಳನ್ನೂ, ಸುಮೃಷ್ಟವಾದ ಸುಂದರ ವಸ್ತ್ರಗಳನ್ನೂ ನೋಡಿ ನಾನು ಸುಹೃದ್ವರ್ಗಗಳಲ್ಲಿ ಕಷ್ಟಗಳನ್ನೇ ನೋಡಿರಲಿಲ್ಲ. ಸಂಜಯ! ಯಾವಾಗ ತುಂಬಾ ದುರ್ಬಲರಾಗಿರುವ ನನ್ನನ್ನು ಮತ್ತು ನಿನ್ನ ಭಾರ್ಯೆಯನ್ನು ನೋಡುವೆಯೋ ಆಗ ನಿನಗೆ ನನ್ನ ಬದುಕಿಗೆ ಅರ್ಥವಿಲ್ಲ ಎಂದಾಗುತ್ತದೆ. ದಾಸರು, ಕೆಲಸಗಾರರು, ಸೇವಕರು, ಆಚಾರ್ಯರು, ಋತ್ವಿಕರು, ಪುರೋಹಿತರು ನಮ್ಮನ್ನು ಬಿಟ್ಟು ಹೋಗುತ್ತಾರೆ. ಅದನ್ನು ನೋಡಿಯೂ ನೀನು ಜೀವಿಸಿದ್ದೇನು ಫಲ? ಹಿಂದಿನಂತೆಯೇ ಇಂದು ನೀನು ಶ್ಲಾಘನೀಯ ಯಶಸ್ಕರವಾದುದನ್ನು ಮಾಡುವುದನ್ನು ನಾನು ನೋಡದಿದ್ದರೆ ನನ್ನ ಹೃದಯಕ್ಕೆ ಶಾಂತಿಯೆಲ್ಲಿಂದ? ಇಲ್ಲ ಎಂದು ಬ್ರಾಹ್ಮಣನಿಗೆ ಹೇಳಲು ನನ್ನ ಹೃದಯವು ಸೀಳಿಹೋಗುತ್ತದೆ. ಬ್ರಾಹ್ಮಣರಿಗೆ ಇಲ್ಲವೆಂದು ನನ್ನ ಪತಿಯು ಎಂದೂ ಹೇಳಿರಲಿಲ್ಲ. ಆಶ್ರಯವನ್ನಿತ್ತಿದ್ದ ನಾವು ಈಗ ಪರರ ಆಶ್ರಯದಲ್ಲಿ ಇರುವವರಲ್ಲ. ಇನ್ನೊಬ್ಬರನ್ನು ಆಶ್ರಯಿಸಿ ಜೀವಿಸಬೇಕಾಗಿ ಬಂದರೆ ಜೀವವನ್ನು ಬಿಡುತ್ತೇನೆ. ಪಾರವೇ ಇಲ್ಲದವಳಿಗೆ ಪಾರವಾಗು. ನಕೆಯೇ ಇಲ್ಲದವಳಿಗೆ

ನೌಕೆಯಾಗು. ಅಸ್ಥಾನಗೊಂಡಿರುವವರಿಗೆ ಸ್ಥಾನಮಾಡಿಕೊಡು. ಮೃತರಾಗುವವರಿಗೆ ಸಂಜೀವನಿಯಾಗು. ಜೀವಿಸಿರಲು ಇಚ್ಛಿಸದೇ ಹೋರಾಡಿದರೆ ನೀನು ಸರ್ವ ಶತ್ರುಗಳನ್ನೂ ಜಯಿಸಬಲ್ಲೆ. ಈ ರೀತಿಯಲ್ಲಿ ಹೇಡಿಯಂತೆ ನಡೆದುಕೊಳ್ಳುತ್ತೀಯಾದರೆ ಈಗಲೇ ಜೀವವನ್ನು ಬಿಟ್ಟುಬಿಡು. ನಿರ್ವಿಣ್ಣನಾಗಿ ಹತಮನಸ್ಕನಾಗಿದ್ದರೆ ಈ ಪಾಪಜೀವಕವನ್ನು ಬಿಟ್ಟುಬಿಡು. ಒಬ್ಬನೇ ಶತ್ರುವನ್ನು ಕೊಲ್ಲುವುದರಿಂದಲೂ ಶೂರನೆಂದು ಖ್ಯಾತಿ ಹೊಂದುತ್ತಾರೆ. ಇಂದ್ರನು ವೃತ್ರನೊಬ್ಬನ ವಧೆಯಿಂದಾಗಿ ಮಹೇಂದ್ರನೆಂದೆನಿಸಿಕೊಂಡನು. ಮಾಹೇಂದ್ರ ಗೃಹವನ್ನೂ ಪಡೆದನು ಮತ್ತು ಲೋಕಗಳ ಈಶ್ವರನೂ ಆದನು. ಶ್ರೇಷ್ಠ ಪುರುಷನು ಹೆಸರನ್ನು ಹೇಳಿ ಯುದ್ಧದಲ್ಲಿ ಶತ್ರುವನ್ನು ಕರೆದು ಕವಚ ಧರಿಸಿ ಸೇನಾಗ್ರದಲ್ಲಿರುವವರನ್ನು ಓಡಿಸಬೇಕು ಅಥವಾ ಕೊಲ್ಲಬೇಕು. ಉತ್ತಮ ಯುದ್ಧದಿಂದ ವೀರನು ಯಾವ ಮಹಾಯಶಸ್ಸನ್ನು ಪಡೆಯುತ್ತಾನೋ ಅದರಿಂದಲೇ ಶತ್ರುಗಳು ದುಃಖಿತರಾಗುತ್ತಾರೆ ಮತ್ತು ತಲೆತಗ್ಗಿಸುತ್ತಾರೆ. ಪ್ರಾಣದ ಹಂಗನ್ನು ತೊರೆದು ರಣದಲ್ಲಿ ದಕ್ಷನಾದ ಶೂರನನ್ನು ಕಾಪುರುಷ ಮುತ್ತು ಅವಶ ಜನರು ಸರ್ವಕಾಮ ಸಮೃದ್ಧಿಗಳಿಂದ ತೃಪ್ತಿಪಡಿಸುತ್ತಾರೆ. ರಾಜ್ಯವನ್ನು ಹಿಂದೆ ತೆಗೆದುಕೊಳ್ಳುವುದು ತುಂಬಾ ಕಷ್ಟವೆಂದೆನಿಸಬಹುದು. ಜೀವವುಳಿಯುವ ಸಂಶಯವೂ ಇರಬಹುದು. ಆದರೆ

ತಿಳಿದವರು ಸಿಕ್ಕಿದ ಶತ್ರುವನ್ನು ನಿಃಶೇಷ ಮಾಡುತ್ತಾರೆ. ಯುದ್ಧವು ಸ್ವರ್ಗದ ದ್ವಾರದಂತೆ. ರಾಜ್ಯವನ್ನೂ ಕೊಡುವಂಥಹುದು. ಇದನ್ನು ತಿಳಿದುಕೊಂಡು ಉರಿಯುವ ಕೊಳ್ಳಿಯಂತೆ ಶತ್ರುಗಳ ಮೇಲೆ ಬೀಳು. ರಾಜನ್! ರಣದಲ್ಲಿ ಶತ್ರುಗಳನ್ನು ಕೊಂದು ಸ್ವಧರ್ಮವನ್ನು ಪಾಲಿಸು. ನೀನು ಕೃಪಣನಾಗಿ ಮಲಗಿರುವುದನ್ನು ಮತ್ತು ಶತ್ರುಗಳು ಶ್ರೀಮಂತರಾಗಿರುವುದನ್ನು ನಾನು ಎಂದೂ ನೋಡಲಾರೆನು. ನಾವು ಇಲ್ಲಿ ಶೋಕಿಸುತ್ತಿದ್ದರೆ ಅಲ್ಲಿ ವೈರಿಗಳು ಆವೃತರಾಗಿ ಆನಂದಿಸುತ್ತಿದ್ದಾರೆ. ದೀನನಗಿ ದೀನಾವಸ್ಥೆಯಲ್ಲಿರುವ ನಿನ್ನನ್ನು ನಾವು ನೋಡಲಾರೆವು. ಹಿಂದಿನಂತೆ ಸೌವೀರಕನ್ಯೆಯರ ಶ್ಲಾಘನೆಗೆ ಏಳು. ಸೈಂಧವಕನ್ಯೆಯರ ವಶನಾಗಬೇಡ. ಯೌವನ, ರೂಪ, ವಿದ್ಯೆ, ಮಿತ್ರರಿಂದ ಸಂಪನ್ನನಾಗಿದ್ದೀಯೆ. ಯಶಸ್ವಿ ಮತ್ತು ಲೋಕವಿಶ್ರುತನಾಗಿರುವ ನೀನು ಭಾರವನ್ನು ಹೊರಬೇಕದ ಸಮಯದಲ್ಲಿ ಎತ್ತು ನೊಗದಿಂದ ನುಣಚಿಕೊಳ್ಳುವಂತೆ ಏನೂ ಮಾಡದೇ ಕುಳಿತಿರುವೆಯಲ್ಲ! ಇದು ನಿನ್ನ ಮರಣವೆಂದೇ ತಿಳಿದುಕೊಳ್ಳುತ್ತೇನೆ. ನೀನು ಶತ್ರುಗಳ ಹೊಗಳುಭಟ್ಟನಾಗಿ, ಅವರ ಶುಶ್ರೂಷೆ ಮಾಡುವುದನ್ನೂ, ಹಿಂದೆ ಹೋಗುವುದನ್ನೂ ನೋಡಿದರೆ ನನ್ನ ಹೃದಯಕ್ಕೆ ಶಾಂತಿ ಎಲ್ಲಿಂದ? ಮಗೂ! ಇನ್ನೊಬ್ಬರ ಅನುಚರನಾಗಿ ಅವರ ಸೇವೆ ಮಾಡಿಕೊಂಡಿರುವವನು ನಮ್ಮ

ಕುಲದಲ್ಲಿ ಎಂದೂ ಹುಟ್ಟಿಲ್ಲ. ಹೀಗಿರುವಾಗ ನೀನು ಪರರನ್ನು ಆಧರಿಸಿ ಜೀವಿಸಬಾರದು. ಪರಿಶಾಶ್ವತವಾಗಿರುವ, ಪೂರ್ವಜರು, ಅದಕ್ಕೂ ಪೂರ್ವಜರು, ಇತರರು, ಬೇರೆಯವರು ಹೇಳಿದ ಕ್ಷತ್ರಹೃದಯವನ್ನು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಕ್ಷತ್ರಿಯನಾಗಿ ಜನಿಸಿದ, ಕ್ಷತ್ರಧರ್ಮವನ್ನು ತಿಳಿದುಕೊಂಡಿರುವ ಯಾರೂ ಎಂದೂ ಭಯದಿಂದ ಅಥವಾ ಜೀವವುಳಿಸಿಕೊಳ್ಳಲು ಬೇರೊಬ್ಬನ ಮುಂದೆ ತಲೆತಗ್ಗಿಸಬಾರದು. ವಿಜಯಕ್ಕೆ ಪ್ರಯತ್ನಿಸುತ್ತಲೇ ಇರಬೇಕು. ಎಂದೂ ಶರಣಾಗತನಾಗಬಾರದು. ಉದ್ಯಮವೇ ಪೌರುಷ. ಮಧ್ಯದಲ್ಲಿ ತುಂಟಾದರೂ ಸರಿ. ಎಂದೂ ಬಗ್ಗಬಾರದು. ಸಂಜಯ! ಮದಿಸಿದ ಆನೆಯಂತೆ ಸರ್ವತ್ರ ಭಯರಹಿತನಾಗಿ ಸುತ್ತಾಡುತ್ತಿರಬೇಕು. ಬ್ರಾಹ್ಮಣರಿಗೆ ಮತ್ತು ಧರ್ಮಕ್ಕೆ ಮಾತ್ರ ಸದಾ ಸಮಸ್ಕರಿಸಬೇಕು. ಇನ್ನೊಬ್ಬರ ಸಹಾಯವಿರಲೀ ಅಥವಾ ಇಲ್ಲದಿರಲಿ, ಎಲ್ಲಿಯವರೆಗೆ ಜೀವವಿದೆಯೋ ಅಲ್ಲಿಯವರೆಗೆ ವರ್ಣಧರ್ಮದಲ್ಲಿ ನಿರತರಾಗಿರುವಂತೆ ಸರ್ವ ದುಷ್ಕೃತರನ್ನೂ ನಿಗ್ರಹಿಸುತ್ತಾ ಇರಬೇಕು."

ಮಗನು ಹೇಳಿದನು:

"ಮಾತಾ! ನನ್ನೊಡನೆ ಈ ರೀತಿ ಕರುಣೆಯಿಲ್ಲದೇ

ವೈರಬುದ್ಧಿಯಿಂದ ಕ್ರೂರವಾಗಿ ಮಾತನಾಡುತ್ತಿರುವೆ ಎಂದರೆ ನಿನ್ನ ಹೃದಯವು ಕಬ್ಬಿಣದ ಗುಂಡಿನಿಂದ ಮಾಡಿದ್ದಾಗಿರಬೇಕು. ಅಯ್ಯೋ! ನಾನೊಬ್ಬ ಬೇರೆಯವನೆಂಬಂತೆ ಈ ಕ್ಷತ್ರಸಮಾಚಾರಗಳನ್ನು, ಒಬ್ಬನೇ ಮಗನನ್ನು ಹೊಂದಿರುವ ನೀನು ಹೇಳುತ್ತಿದ್ದೀಯೆ! ನಾನೇ ಕಾಣದ ನಿನಗೆ ಈ ಸರ್ವ ಪೃಥ್ವಿಯಾದರೂ ಏಕೆ? ನಿನಗೆ ಆಭರಣಗಳು ಏಕೆ? ಭೋಗಜೀವನವಾದರೂ ಏಕೆ?"

ಮಾತೆಯು ಹೇಳಿದಳು:

"ಸಂಜಯ! ಮಗೂ! ವಿದುಷರ ಸರ್ವ ಕಾರ್ಯಗಳೂ ಧರ್ಮಾರ್ಥಕಾರಣಗಳಿಂದಾಗಿ. ಈ ಸಮಯದಲ್ಲಿ ಅದನ್ನೇ ಪರಿಶೀಲಿಸಿ ನಾನು ನಿನ್ನನ್ನು ಪ್ರಚೋದಿಸುತ್ತಿದ್ದೇನೆ. ಸಮಯವು ಪ್ರಾಪ್ತವಾಗಿರುವಾಗಲೂ ನೀನು ಮುಖ್ಯವಾದ ಕೆಲಸವನ್ನು ಮಾಡದಿದ್ದರೆ, ಅಸ್ವಾಭಾವಿಕ ಬುದ್ಧಿಯನ್ನು ಹೊಂದಿ ಕುಳಿತಿರುವ ನೀನು ಶತ್ರುವಿನ ವಿಷಯದಲ್ಲಿ ಕ್ರೌರ್ಯದಿಂದ ವರ್ತಿಸದೇ ಇದ್ದರೆ ನಿನಗೆ ಸರ್ವತಃ ಅಪಯಶಸ್ಸು ಉಂಟಾಗುತ್ತದೆ. ಸಂಜಯ! ಇಂತಹ ಪರಿಸ್ಥಿತಿಯಲ್ಲಿ ನಾನೇನಾದರೂ ನಿನಗೆ ಸರಿಯಾದ ತಿಳುವಳಿಕೆಯನ್ನು ಕೊಡದಿದ್ದರೆ ನನಗೆ ನಿನ್ನಮೇಲಿರುವ ವಾತ್ಸಲ್ಯವನ್ನು ಗಾರ್ದಭಿ (ಹೆಣ್ಣುಕತ್ತೆ) ಯ ವಾತ್ಸಲ್ಯದಂತೆ

ಸಾಮರ್ಥ್ಯರಹಿತವೂ ಅಕಾರಣವೂ ಎಂದು ಎನ್ನುತ್ತಾರೆ. ಮೂರ್ಖರಿಂದ ಸೇವಿಸಲ್ಪಡುವ ಮತ್ತು ಸತ್ಪುರುಷರಿಂದ ನಿಂದಿಸಲ್ಪಡುವ ಮಾರ್ಗವನ್ನು ಪರಿತ್ಯಜಿಸು. ಅವಿದ್ಯೆಯು ಮಹತ್ತರವಾದುದು. ಪ್ರಜೆಗಳು ಇದನ್ನೇ ಆಶ್ರಯಿಸಿರುತ್ತಾರೆ. ಸದ್ವಿದ್ಯವಿದೆಯೆಂದಾದರೆ, ಧರ್ಮಾರ್ಥಗುಣಗಳಿದ್ದರೆ, ದೈವ-ಮಾನುಷಯುಕ್ತನಾಗಿದ್ದರೆ, ಸತ್ಪುರುಷರ ಆಚರಣೆಯಲ್ಲಿದ್ದರೆ ಮಾತ್ರ ನೀನು ನನಗೆ ಪ್ರಿಯನಾಗುವೆ. ಅನ್ಯಥಾ ಇಲ್ಲ. ಯಾರು ಈ ರೀತಿ ಅವಿನೀತನಾಗಿರುವ ಮಗ ಅಥವ ಮೊಮ್ಮೊಗನೊಂದಿಗೆ ರಮಿಸುತ್ತಾನೋ ಅವನಿಗೆ ಪ್ರಜಾಫಲದ ಅನುತ್ಥ ಅವನತಗಳು ವ್ಯರ್ಥವಾಗುತ್ತವೆ. ಮಾಡಬೇಕಾದುದನ್ನು ಮಾಡದೇ ನಿಂದನೀಯವಾದವುಗಳನ್ನು ಮಾಡುವ ಪುರುಷಾಧಮರು ಇಲ್ಲಿಯೂ ಅಲ್ಲಿಯೂ ಸುಖವನ್ನು ಹೊಂದುವುದಿಲ್ಲ. ಸಂಜಯ! ಇಲ್ಲಿ ಕ್ಷತ್ರಿಯನು ಯುದ್ಧಕ್ಕಾಗಿ ಮತ್ತು ಜಯಕ್ಕಾಗಿ, ನಿತ್ಯವೂ ಕ್ರೂರ ಕರ್ಮಗಳನ್ನು ಮಾಡಿ ಪ್ರಜೆಗಳನ್ನು ಪರಿಪಾಲನೆ ಮಾಡಲೆಂದೇ ಸೃಷ್ಟಿಸಲ್ಪಟ್ಟಿದ್ದಾನೆ. ಜಯಗಳಿಸಿ ಅಥವಾ ವಧಿಸಲ್ಪಟ್ಟು ಅವನು ಇಂದ್ರಲೋಕವನ್ನು ಪಡೆಯುತ್ತಾನೆ. ಆದರೆ ಅಮಿತ್ರರನ್ನು ವಶಪಡಿಸಿಕೊಂಡು ಇಲ್ಲಿ ಕ್ಷತ್ರಿಯನು ಯಾವ ಸುಖವನ್ನು ಅನುಭವಿಸುತ್ತಾನೋ ಅದು ಪುಣ್ಯ ದಿವಿಯುಲ್ಲಿರುವ ಶಕ್ರಭವನದಲ್ಲಿಯೂ ದೊರೆಯುವುದಿಲ್ಲ.

ಸಿಟ್ಟಿನಿಂದ ಉರಿಯುತ್ತಿರುವ ಮನಸ್ವಿ ಪುರುಷನು, ಬಹಳ ಬಾರಿ ಸೋಲಿಸಲ್ಪಟ್ಟಾಗ, ಶತ್ರುವನ್ನು ಪ್ರತಿಯಾಗಿ ಸೋಲಿಸಲು ಸಮಯ ಕಾಯಬೇಕು. ತನ್ನನ್ನೇ ಪರಿತ್ಯಜಿಸಿ ಅಥವಾ ಶತ್ರುವನ್ನು ಬೀಳಿಸದೇ ಇನ್ನು ಬೇರೆ ಯಾವ ರೀತಿಯಿಂದ ಶಾಂತಿ ದೊರೆಯಬಹುದು? ಪ್ರಾಜ್ಞ ಪುರುಷನು ಅಲ್ಪವಾದ ಏನನ್ನೂ ಇಷ್ಟಪಡುವುದಿಲ್ಲ. ಯಾರಿಗೆ ಲೋಕದಲ್ಲಿ ಸ್ವಲ್ಪವೇ ಪ್ರಿಯವಾಗುತ್ತದೆಯೋ ಆ ಸ್ವಲ್ಪವೇ ನಿಶ್ಚಿತವಾಗಿ ಅಪ್ರಿಯವೆನಿಸಿಕೊಳ್ಳುತ್ತದೆ. ಪ್ರಿಯವಾದುದರ ಅಭಾವದಿಂದ ಪುರುಷನು ಶೋಭಿಸುವುದಿಲ್ಲ. ಅಭಾವವಾದವುಗಳು ಬೇಕೆಂದು ಅವನು ನಿಶ್ಚಿತವಾಗಿ ಸಾಗರವನ್ನು ಹೊಗುವ ಗಂಗೆಯಂತೆ ಕಳೆದುಹೋಗುತ್ತಾನೆ."

ಮಗನು ಹೇಳಿದನು:

"ಅಮ್ಮಾ! ವಿಶೇಷವಾಗಿ ನಿನ್ನ ಮಗನ ಎದಿರು ನಿನ್ನ ಮನಸ್ಸಿನಲ್ಲಿರುವ ಇದನ್ನು ಹೇಳಬಾರದು. ಜಡ ಮೂಕನಂತೆ ಇರುವವನನ್ನು ಕಾರುಣ್ಯದಿಂದ ನೋಡು."

ಮಾತೆಯು ಹೇಳಿದಳು:

"ಒಳ್ಳೆಯದು. ಇದನ್ನು ನೀನು ಹಾಗೆ ಕಾಣುತ್ತಿದ್ದೀಯೆ. ನನ್ನನ್ನು ಪ್ರಚೋದಿಸುತ್ತಿರುವ ನಿನ್ನನ್ನು ಇನ್ನೂ ಹೆಚ್ಚು ಪ್ರಚೋದಿಸುತ್ತೇನೆ. ಸರ್ವ ಸೈಂಧವರನ್ನು ಕೊಂದು

ವಿಜಯಿಯಾದುದನ್ನು ನೋಡಿದ ನಂತರವೇ ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆ.”

ಮಗನು ಹೇಳಿದನು:

“ಧನವಿಲ್ಲದೇ ಸಹಾಯವಿಲ್ಲದೇ ನನಗೆ ಜಯವು ಎಲ್ಲಿಂದ ಸಿಗಬೇಕು? ಕೆಟ್ಟ ಕೆಲಸವನ್ನು ಮಾಡಿದವನು ಸ್ವರ್ಗದಿಂದ ಹೇಗೆ ನಿವೃತ್ತನಾಗುತ್ತಾನೋ ಹಾಗೆ ನನ್ನ ಈ ದಾರುಣ ಅವಸ್ಥೆಯನ್ನು ನೋಡಿ ನಾನು ರಾಜ್ಯದ ಆಸೆಯಿಂದ ನಿವೃತ್ತನಾಗಿದ್ದೇನೆ. ಹೀಗಿರುವಾಗ ನೀನು ಯಾವ ಉಪಾಯವನ್ನು ಕಂಡಿರುವೆ? ಪ್ರರಿಣತಪ್ರಜ್ಞೇ! ಕೇಳುವ ನನಗೆ ಅದನ್ನು ಸಂಪೂರ್ಣವಾಗಿ ಹೇಳು. ನಿನ್ನ ಅನುಶಾಸನದಂತೆ ಅದೆಲ್ಲವನ್ನೂ ಮಾಡುತ್ತೇನೆ.”

ಮಾತೆಯು ಹೇಳಿದಳು:

“ಮಗೂ! ಸೋಲಿನ ಕುರಿತು ಮೊದಲೇ ಯೋಚಿಸಿ ನಿನ್ನನ್ನು ನೀನೇ ಅಪಮಾನಿಸಬೇಡ. ಇದರಿಂದ ಆಗಬಾರದು ಆಗುತ್ತದೆ. ಇದ್ದುದೂ ನಾಶವಾಗುತ್ತದೆ. ಉದ್ದೇಶಗಳನ್ನು ಕೋಪದಿಂದ ಅಥವಾ ಬಾಲಿಶರಾಗಿ ಪ್ರಯತ್ನಿಸಬಾರದು. ಮಗೂ! ಎಲ್ಲ ಕೆಲಸಗಳಲ್ಲಿ ಫಲಿತಾಂಶವು ಅನಿಶ್ಚಿತವಾದುದು. ಅನಿಶ್ಚಿತವೆಂದು ತಿಳಿದೂ ಜನರು ಕೆಲಸ ಮಾಡಿ ಕೆಲವೊಮ್ಮೆ ಯಶಸ್ವಿಯಾಗುತ್ತಾರೆ. ಕೆಲವೊಮ್ಮೆ ಯಶಸ್ವಿಯಾಗುವುದಿಲ್ಲ.

ಆದರೆ ಏನೂ ಮಾಡದಿರುವವನಿಗೆ ಏನೂ ದೊರೆಯುವುದಿಲ್ಲ. ಇದೇ ಅದರ ಏಕೈಕ ಪರಿಣಾಮ. ಆದರೆ ತಾನು ಮಾಡಬೇಕಾದುದನ್ನು ಉತ್ಸಾಹದಿಂದ ಮಾಡಿ ಮುಗಿಸುವವನಿಗೆ ಎರಡು ಪರಿಣಾಮಗಳಾಗಬಹುದು: ಫಲವು ದೊರೆಯಬಹುದು ಅಥವಾ ದೊರೆಯದೇ ಇರಬಹುದು. ನೃಪಾತ್ಮಜ! ಯಾರಿಗೆ ಮೊದಲೇ ಫಲವು ಸರ್ವಥಾ ದೊರೆಯಲಾರದೆಂದು ತಿಳಿದಿರುತ್ತದೆಯೋ ಪ್ರತಿಕೂಲನ ಅಸಮೃದ್ಧಿಯನ್ನುಂಟುಮಾಡಲು ಪ್ರಯತ್ನಿಸಬೇಕು. ನಾನು ಪ್ರಾರಂಭಿಸುವ ಕಾರ್ಯವು ಸಿದ್ಧಿಯಾಗೇ ಆಗುತ್ತದೆ ಎಂಬ ದೃಢತೆಯಿಂದ ಶಂಕೆಗಳಿಲ್ಲದೆಯೇ ಉತ್ಸಾಹದಿಂದ ಏಳಬೇಕು, ಸಜ್ಜಾಗಬೇಕು ಮತ್ತು ಕೊನೆಯವರೆಗೆ ಕಾರ್ಯನಿರತನಾಗಿರಬೇಕು. ಪುತ್ರ! ದೇವ-ಬ್ರಾಹ್ಮಣರನ್ನು ಪೂಜಿಸಿ ಮಂಗಲಕಾರ್ಯಗಳನ್ನು ಪ್ರಾರಂಭಿಸುವ ಪ್ರಾಜ್ಞ ನೃಪತಿಗೆ ಶೀಘ್ರದಲ್ಲಿ ಉನ್ನತಿಯಾಗುತ್ತದೆ. ಪೂರ್ವದಿಕ್ಕಿನಲ್ಲಿರುವ ದಿವಾಕರನಂತೆ ಅವನ ಲಕ್ಷ್ಮಿಯು ವೃದ್ಧಿಯಾಗುತ್ತಾಳೆ. ನಿದರ್ಶನಗಳನ್ನು ನೀಡಿದ್ದೇನೆ. ಬಹಳ ಉಪಾಯಗಳನ್ನೂ ತೋರಿಸಿದ್ದೇನೆ. ಅನುದರ್ಶಿತ ರೂಪನಾಗಿರುವೆ. ಪೌರುಷವನ್ನು ಮಾಡಿ ತೋರಿಸು. ಪುರುಷಾರ್ಥವನ್ನು ಸಾಧಿಸಲು ನೀನು ಅರ್ಹನಾಗಿದ್ದೀಯೆ. ಶತ್ರುವಿನ ಕುರಿತು ಸಿಟ್ಟಾಗಿರುವ,

ಅವರಿಂದಾಗಿ ಸರ್ವಸ್ವವನ್ನೂ ಕಳೆದುಕೊಂಡಿರುವ, ಗರ್ವಿತರಾಗಿರುವ, ಅವರಿಂದ ಅವಮಾನಿತರಾಗಿರುವ, ಅವರೊಂzದಿಗೆ ಸ್ಪರ್ಧಿಸುತ್ತಿರುವ ಯಾರೆಲ್ಲಾ ಇದ್ದಾರೋ ಅವರೆಲ್ಲರನ್ನೂ ಯುಕ್ತಿಯಿಂದ ಒಂದುಗೂಡಿಸು. ಈ ಪ್ರಕಾರದಲ್ಲಿ ನೀನು ಮಹಾ ಸೇನೆಯನ್ನು ಒಟ್ಟುಮಾಡಿದುದೇ ಆದರೆ ಮಹಾವೇಗದ ಭಿರುಗಾಳಿಯು ಮೋಡಗಳನ್ನು ಹೇಗೋ ಹಾಗೆ ಶತ್ರುಸೇನೆಗಳನ್ನು ಭೇದಿಸಬಲ್ಲೆ. ಮೊದ ಮೊದಲು ನೀನು ಅವರಿಗೆ ಅಗ್ರಸ್ಥಾನವನ್ನಿತ್ತು, ಎದ್ದೊಡನೆಯೇ ಅವರೊಂದಿಗೆ ಪ್ರಿಯ ಮಾತುಗಳನ್ನಾಡು. ಆಗ ಅವರು ನಿನಗೆ ಪ್ರಿಯವಾದುದನ್ನು ಮಾಡುವವರಲ್ಲದೇ ನಿನ್ನನ್ನು ನಾಯಕನನ್ನಾಗಿಯೂ ಸ್ವೀಕರಿಸುವುದು ನಿಶ್ಚಿತ. ಯಾವಾಗ ನಿನ್ನ ಶತ್ರುವು ಪ್ರಾಣವನ್ನೂ ತೊರೆಯಲು ಸಿದ್ಧನಾಗಿ ಇವನು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾನೆ ಎಂದು ತಿಳಿದುಕೊಳ್ಳುತ್ತಾನೆಯೋ ಆಗಲೇ ಅವನು ಮನೆಯಲ್ಲಿ ಸೇರಿಕೊಂಡಿರುವ ಸರ್ಪಕ್ಕೆ ಹೆದರುವಂತೆ ಉದ್ವಿಗ್ನನಾಗುತ್ತಾನೆ. ನಿನ್ನ ಪರಾಕ್ರಮವನ್ನು ತಿಳಿದು ಒಂದು ವೇಳೆ ನಿನ್ನನ್ನು ವಶಮಾಡಿಕೊಳ್ಳದೇ ಇದ್ದರೆ ನಿರ್ವಾದದಿಂದ ಅಥವಾ ನಿವೇದನೆಯಿಂದ ಕೊನೆಯಲ್ಲಿ ಅವನು ನಿನ್ನವನಾಗುತ್ತಾನೆ. ಸಂಧಿಯನ್ನು ಮಾಡಿಕೊಂಡರೆ ಧನವೃದ್ಧಿಯಾಗುತ್ತದೆ. ಧನವಂತನನ್ನು ಮಿತ್ರರು ಪ್ರೀತಿಸುತ್ತಾರೆ. ಆಶ್ರಯಿಸುತ್ತಾರೆ.

ಮಗೂ! ಅರ್ಥವಿಹೀನನನ್ನು ಬಾಂಧವರು ತ್ಯಜಿಸುತ್ತಾರೆ. ಅವನನ್ನು ಯಾರೂ ಆಶ್ರಯಿಸುವುದಿಲ್ಲ. ಮತ್ತು ಅಂಥವನನ್ನು ಜುಗುಪ್ಸೆಯಿಂದ ಕಾಣುತ್ತಾರೆ. ಶತ್ರುವಿನ ಶತ್ರುವಿನೊಂದಿಗೆ ಸ್ನೇಹಬೆಳಸಿ ಅವನ ಸಹಾಯದಿಂದ ಕಳೆದುಕೊಂಡ ರಾಜ್ಯವನ್ನು ಪುನಃ ಪಡೆದುಕೊಳ್ಳಲು ಸಾಧ್ಯವಿದೆ.

ರಾಜನಾದವನು ಎಂತಹುದೇ ಆಪತ್ತು ಬಂದರೂ ಎಂದೂ ಭಯಪಡಬಾರದು. ಒಂದುವೇಳೆ ಹೆದರಿದರೂ ಹೆದರಿದವನಂತೆ ನಡೆದುಕೊಳ್ಳಬಾರದು. ರಾಜನು ಹೆದರಿದುದನ್ನು ನೋಡಿ ಎಲ್ಲರೂ ಹೆದರುತ್ತಾರೆ. ರಾಷ್ಟ್ರ, ಸೇನೆ, ಮತ್ತು ಅಮಾತ್ಯರು ನಿನಗೆ ವಿರುದ್ಧವಾಗಿಯೇ ಮಾಡುತ್ತಾರೆ. ಕೆಲವರು ಶತ್ರುಗಳೊಡನೆ ಒಂದಾಗುತ್ತಾರೆ. ಇತರರು ರಾಜ್ಯವನ್ನು ತ್ಯಜಿಸುತ್ತಾರೆ. ಹಿಂದೆ ಅಪಮಾನಿತರಾದವರು ಅವನನ್ನು ಕೊಲ್ಲಲೂ ಪ್ರಯತ್ನಿಸುತ್ತಾರೆ. ಆದರೆ ಅತ್ಯಂತ ಆತ್ಮೀಯರಾದವರು ಮಾತ್ರ ಅವನ ಸೇವೆ ಮಾಡುತ್ತಿರುತ್ತಾರೆ. ಕಟ್ಟಿಹಾಕಿದ ಕರುವಿನೊಡನಿರುವ ಹಸುವಿನಂತೆ ಆ ಅಶಕ್ತರು ಒಳ್ಳೆಯದನ್ನೇ ಆಶಿಸುತ್ತಿರುತ್ತಾರೆ. ಶೋಕಿಸುವ ಬಾಂಧವರಂತೆ ಅವರೂ ಕೂಡ ಜೊತೆಗೆ ಶೋಕಿಸುತ್ತಾರೆ. ಅಂತಹ ಸುಹೃದಯರು, ಹಿಂದೆ ಗೌರವಿಸಲ್ಪಟ್ಟವರು, ನಿನಗೆ ಯಾರಾದರೂ ಇದ್ದಾರೆಯೇ? ಯಾರು ರಾಷ್ಟ್ರದ ಅಭಿಮಾನಿಗಳೋ, ಯಾರು ರಾಜನು ವ್ಯಸನದಲ್ಲಿರುವಾಗ

ಸಹಾಯಮಾಡಲು ಬಯಸುತ್ತಾರೋ ಅಂಥಹ ಸುಹೃದಯುರನ್ನು ದೂರಮಾಡಬೇಡ. ಅವರೂ ನಿನ್ನನ್ನು ಅಗಲದಿರಲಿ. ನಿನ್ನ ಪ್ರಭಾವ, ಪೌರುಷ ಮತ್ತು ಬುದ್ಧಿಯನ್ನು ತಿಳಿದುಕೊಂಡೇ ದುರ್ಬಲನಂತಿರುವ ನಿನ್ನನ್ನು ಬಲವಂತನಾಗಿ ಎಬ್ಬಿಸಿ ಆಶ್ವಾಸನೆ ನೀಡುವುದಕ್ಕಾಗಿಯೇ ನಾನು ನಿನಗೆ ಈ ರೀತಿ ಮಾತನಾಡಿದೆ. ಸಂಜಯು! ನಾನು ಹೇಳಿದುದೆಲ್ಲವನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿರುವೆಯಾದರೆ ನಿನ್ನ ಸೌಮ್ಯ ಸ್ವಭಾವವನ್ನು ಬದಲಾಯಿಸಿ ಜಯಕ್ಕಾಗಿ ಎದ್ದು ನಿಲ್ಲು! ನಮ್ಮಲ್ಲಿ ಇನ್ನೂ ಅಪಾರ ಧನವಿದೆ. ಅದು ನಿನಗೆ ತಿಳಿಯದು. ಬೇರೆಯಾರಿಗೂ ಅಲ್ಲದೇ ನನಗೊಬ್ಬಳಿಗೇ ತಿಳಿದಿರುವ ಅದನ್ನು ನಾನು ನಿನಗೆ ಕೊಡುತ್ತೇನೆ. ಸಂಜಯ! ವೀರ! ಒಬ್ಬರಲ್ಲ ನಿನ್ನ ನೂರಾರು ಸುಹೃದಯರು, ಸುಖ-ದುಃಖಗಳಲ್ಲಿ ಜೊತೆಗಿರುವ, ಯುದ್ಧದಿಂದ ಪಲಾಯನ ಮಾಡದಿರುವವರು ಇದ್ದಾರೆ. ಶತ್ರುಕರ್ಶನ! ನಿನ್ನ ಒಳಿತನ್ನೇ ಬಯಸುವ, ಯುದ್ಧಮಾಡಿಯಾದರೂ ನಿನ್ನ ಶತ್ರುವಿನಿಂದ ನಿನಗಿಷ್ಟವಾದುದನ್ನು ಕಿತ್ತು ತರಲು ಸಮುರ್ಥರಾದವರು ನಿನ್ನ ಸಚಿವರಾಗಬೇಕು.”

ಮಗನು ಹೇಳಿದನು:

“ಸುಚಿತ್ರಾರ್ಥ ಪದಾಕ್ಷರಗಳಿಂದ ಕೂಡಿದ, ಕತ್ತಲೆಯನ್ನು

ಕಳೆಯುವ ಈ ವಾಕ್ಯವನ್ನು ಕೇಳಿ ಯಾವ ಸ್ವಲ್ಪಚೇತಸನು ತಾನೇ ಮೇಲೇಳುವುದಿಲ್ಲ? ಶತ್ರುವೆಂಬ ನೀರಿನಲ್ಲಿ ಮುಳುಗಿ ಹೋಗಿರುವ ನನ್ನ ರಾಜ್ಯವನ್ನು ಉದ್ಧರಿಸಬೇಕು ಅಥವಾ ಯುದ್ಧರೂಪದ ಪ್ರಪಾತದಲ್ಲಿ ಬಿದ್ದು ಪ್ರಾಣವನ್ನು ನೀಗಬೇಕೆಂದು ಹೇಳಿ ನನಗೆ ಶಿಕ್ಷಕಿಯಾಗಿರುವೆ. ನಾನು ನಿನ್ನ ಮಾತನ್ನು ಅರ್ಥಮಾಡಿಕೊಂಡರೂ ಇನ್ನೂ ಹೆಚ್ಚು ಕೇಳುವ ಆಸೆಯಿಂದ ನೀನು ಹೇಳಿದುದಕ್ಕೆ ಮತ್ತೆ ಮತ್ತೆ ಏನಾದರೂ ವಿರೋಧವಾಗಿ ಮಾತನಾಡಿ ಸುಮ್ಮನಾಗುತ್ತಿದ್ದೆ. ಕಷ್ಟವನ್ನು ಅನುಭವಿಸಿದ್ದುದರಿಂದಲೇ ಅಮೃತೋಪಮವಾದ ಈ ಮಾತುಗಳನ್ನು ಕೇಳಲು ಅವಕಾಶವಾಯಿತು. ಕೇಳುತ್ತಿದ್ದರೂ ಇನ್ನಷ್ಟು ಕೇಳಬೇಕೆನ್ನಿಸುತ್ತದೆ. ಈಗ ನಾನು ಶತ್ರುಗಳ ದಮನಕ್ಕೂ ನಮ್ಮ ವಿಜಯಕ್ಕೂ ಬಾಂಧವರೊಡನೆ ಕಾರ್ಯಗತನಾಗುತ್ತೇನೆ.”

ಮಾತಿನ ಬಾಣಗಳಿಂದ ಚುಚ್ಚಲ್ಪಟ್ಟವನಾಗಿ ಚಾವಟಿಯಿಂದ ಹೊಡೆಯಲ್ಪಟ್ಟ ಉತ್ತಮ ಕುದುರೆಯಂತೆ ಅವನು ಅವಳು ಹೇಳಿದುದೆಲ್ಲವನ್ನೂ ಹಾಗೆಯೇ ಮಾಡಿದನು.

ಹೇಡಿಗಳಿಗೆ ಭಯಂಕರವೂ ಉತ್ತಮರಿಗೆ ತೇಜೋವರ್ಧನವೂ ಆದ ಇದನ್ನು ಶತ್ರುಪೀಡಿತನಾಗಿ ಹತಾಶನಾಗಿರುವ ರಾಜನಿಗೆ ಮಂತ್ರಿಗಳು ಇದನ್ನು ಹೇಳಬೇಕು. ಜಯ ಎಂಬ ಹೆಸರಿನ ಈ ಇತಿಹಾಸವನ್ನು

ಜಯವನ್ನು ಬಯಸುವವರು ಕೇಳಬೇಕು. ಇದನ್ನು ಕೇಳಿ ಮಹಿಯನ್ನು ಜಯಿಸುತ್ತಾನೆ ಮತ್ತು ಬೇಗನೇ ಕ್ಷತ್ರುಗಳನ್ನು ಮರ್ದಿಸುತ್ತಾನೆ. ಗರ್ಭಿಣಿಯರು ಇದನ್ನು ಕೇಳಿದರೆ ವೀರ ಗಂಡುಮಕ್ಕಳನ್ನು ಪಡೆಯುತ್ತಾರೆ. ಸಾಮಾನ್ಯರು ಕೇಳಿದರೂ ವೀರರಾಗುತ್ತಾರೆ ಎನ್ನುವುದು ನಿಶ್ಚಯ. ಗರ್ಭಿಣಿ ಕ್ಷತ್ರಿಣಿಯು ಇದನ್ನು ಕೇಳಿದರೆ ವಿದ್ಯಾಶೂರ, ತಪಃಶೂರ, ದಮಶೂರ, ತಪಸ್ವಿನಿ, ಬ್ರಾಹ್ಮ್ಯದಿಂದ ಶ್ರೀಯಿಂದ ಬೆಳಗುವ, ಸಾಧುವಾದದಿಂದ ಸಮ್ಮತನಾಗಿರುವ, ಪ್ರಕಾಶಮಾನನಾದ, ಬಲೋಪೇತನಾದ, ಮಹಾಭಾಗ, ಮಹಾರಥ, ಧೃಷ್ಟವಂತ, ಅನಾಧೃಷ್ಯ, ಜೇತಾರ, ಅಪರಾಜಿತ, ದುಷ್ಟರ ನಿಯಂತಾರ, ಧರ್ಮಚಾರಿಗಳ ಗೋಪ್ತಾರ, ವೀರ, ಸತ್ಯಪರಾಕ್ರಮಿಗೆ ಜನ್ಮ ನೀಡುತ್ತಾಳೆ.

# ತ್ರಿಪುರವಧೋಪಾಽಖ್ಯಾನ

[ತ್ರಿಪುರವಧೆಯ ಈ ಕಥೆಯು ವ್ಯಾಸ ಮಹಾಭಾರತದ ಕರ್ಣಪರ್ವ (ಅಧ್ಯಾಯ ೨೪) ದಲ್ಲಿ ಬರುತ್ತದೆ. ಬ್ರಹ್ಮನು ಶಿವನ ಸಾರಥಿಯಾದಂತೆ ಶಲ್ಯನೂ ಕರ್ಣನ ಸಾರಥಿಯಾಗಬೇಕೆಂದು ಕೇಳಿಕೊಳ್ಳುವಾಗ ಈ ಕಥೆಯನ್ನು ದುರ್ಯೋಧನನು ಶಲ್ಯನಿಗೆ ಹೇಳಿದನು.]

ದೇವತೆಗಳ ಅಸುರರ ಮಹಾ ಸಮಾಗಮವಾಗಿತ್ತು. ಪ್ರಥಮವಾಗಿ

ತಾರಕಾಮಯ ಸಂಗ್ರಾಮವು ನಡೆಯಿತು. ದೇವತೆಗಳಿಂದ ದೈತ್ಯರು ಸೋತರೆಂದು ನಾವು ಕೇಳಿದ್ದೇವೆ. ದೈತ್ಯರು ಸೋಲಲು ತಾರಕನ ಮೂವರು ಮಕ್ಕಳು – ತಾರಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲೀ- ಇವರು ಉಗ್ರವಾದ ತಪಸ್ಸನ್ನು ಕೈಗೊಂಡು ಪರಮ ನಿಯಮಗಳನ್ನು ಪಾಲಿಸುತ್ತಾ ತಮ್ಮ ದೇಹಗಳನ್ನು ತಪಸ್ಸಿನಿಂದ ಕೃಶಗೊಳಿಸತೊಡಗಿದರು. ಅವರ ದಮ, ತಪಸ್ಸು, ನಿಯಮಗಳಿಂದ ವರದ ಪಿತಾಮಹನು ಪ್ರೀತನಾಗಿ ಅವರಿಗೆ ವರಗಳನ್ನಿತ್ತನು. ಅವರು ಒಟ್ಟಿಗೇ ಸರ್ವಲೋಕಪಿತಾಮಹನಲ್ಲಿ ಸರ್ವಭೂತಗಳಿಂದ ಸರ್ವದಾ ಅವಧ್ಯತ್ವವನ್ನು ವರವನ್ನಾಗಿ ಕೇಳಿದರು. ಅವರಿಗೆ ದೇವ ಲೋಕಗಳ ಪ್ರಭು ಈಶ್ವರನು ಹೇಳಿದನು:

> “ಅಮರತ್ವವು ಎಲ್ಲರಿಗೂ ಇಲ್ಲ. ಆದುದರಿಂದ ಅಸುರರೇ. ಅದನ್ನು ಹಿಂದೆ ತೆಗೆದುಕೊಳ್ಳಿ. ನಿಮಗೆ ಇಷ್ಟವಾದ, ಇದಕ್ಕೆ ಸಮನಾದ ಬೇರೆ ವರವನ್ನು ಬೇಡಿಕೊಳ್ಳಿ.”

ಅನಂತರ ಅವರು ಒಟ್ಟಿಗೇ ಬಹಳ ಸಮಾಲೋಚನೆಮಾಡಿ ಸರ್ವಲೋಕೇಶ್ವರನಿಗೆ ಈ ಪ್ರೀತಿಯ ಮಾತುಗಳನ್ನಾಡಿದರು:

> “ದೇವ! ನಾವು ನಿನ್ನಿಂದ ಈ ವರವನ್ನು ಕೇಳಿಕೊಳ್ಳುತ್ತಿದ್ದೇವೆ. ನಾವು ಮೂರು ಪುರಗಳನ್ನು ನಿರ್ಮಿಸಿ ಅವುಗಳಲ್ಲಿದ್ದುಕೊಂಡು ಈ ಮಹಿಯನ್ನು ಈ ಲೋಕಗಳನ್ನು ನಿನ್ನ ಪ್ರಸಾದದಿಂದ ಸುತ್ತುವರೆಯುತ್ತೇವೆ. ಒಂದು ಸಾವಿರ ವರ್ಷಗಳು

ಕಳೆದನಂತರ ನಾವು ಪರಸ್ಪರರನ್ನು ಒಟ್ಟಾಗಿ ಸೇರುತ್ತೇವೆ. ನಮ್ಮ ತ್ರಿಪುರಗಳೂ ಏಕೀಭಾವವನ್ನು ಹೊಂದುತ್ತವೆ. ಅವುಗಳು ಒಂದಾದಾಗ ಒಂದೇ ಬಾಣದಿಂದ ದೇವವರನು ಹೊಡೆದರೆ ಅದೇ ನಮಗೆ ಮೃತ್ಯುವಾಗುತ್ತದೆ.”

ಅವರಿಗೆ ಹಾಗೆಯೇ ಆಗಲೆಂದು ಹೇಳಿ ದೇವನು ಸ್ವರ್ಗಕ್ಕೆ ಹೊರಟುಹೋದನು.

ವರಗಳನ್ನು ಪಡೆದು ಪ್ರೀತರಾದ ಅವರು ಪರಸ್ಪರರಲ್ಲಿ ಸಮಾಲೋಚಿಸಿ ಮೂರು ಪುರಗಳನ್ನು ಸೃಷ್ಟಿಸಲೋಸುಗ ಅಜರ, ದೈತ್ಯದಾನವ ಪೂಜಿತ ವಿಶ್ವಕರ್ಮ ಮಹಾಸುರ ಮಯನನ್ನು ಆಮಂತ್ರಿಸಿದರು. ಆಗ ಧೀಮಾನ್ ಮಯನು ತನ್ನದೇ ತಪಸ್ಸಿನಿಂದ ಮೂರು ಪುರಗಳನ್ನು – ಒಂದು ಕಾಂಚನ ಪುರ, ಇನ್ನೊಂದು ಬೆಳ್ಳಿಯ ಪುರ ಮತ್ತು ಇನ್ನೊಂದು ಕಬ್ಬಿಣದ ಪುರವನ್ನು ರಚಿಸಿದನು. ಕಾಂಚನ ಪುರವು ದಿವಿಯಲ್ಲಿ, ಬೆಳ್ಳಿಯದು ಅಂತರಿಕ್ಷದಲ್ಲಿ ಮತ್ತು ಕಬ್ಬಿಣದು ಸುತ್ತುತ್ತಿರುವ ಚಕ್ರದ ಮಧ್ಯದಲ್ಲಿ ಭೂಮಿಯಮೇಲಿದ್ದಿತು. ಒಂದೊಂದು ಪುರಗಳೂ ವಿಸ್ತಾರ ಆಯಾಮಗಳಲ್ಲಿ ನೂರು ನೂರು ಯೋಜನಗಳಷ್ಟಿದ್ದವು. ಹಲವಾರು ಉಪ್ಪರಿಗೆಗಳುಳ್ಳ ಮನೆಗಳಿಂದಲೂ, ಬೃಹದಾಕಾರದ ಪ್ರಾಕಾರಗಳಿಂದಲೂ ತೋರಣಗಳಿಂದವೂ ಕೂಡಿದ್ದವು. ವಿವಿದ ಕಟ್ಟಡಗಳಿಂದಲೂ ದ್ವಾರಗಳಿಂದಲೂ ಉಪಶೋಭಿತ ಆ ಪುರಗಳಲ್ಲಿ ವಿಶಾಲ ರಾಜಮಾರ್ಗಗಳಿಂದಾಗಿ ಇಕ್ಕಟ್ಟಾಗಿರಲಿಲ್ಲ. ಆ ಪುರಗಳಲ್ಲಿ

ಬೇರೆ ಬೇರೆ ರಾಜರಿದ್ದರು. ವಿಚಿತ್ರ ಕಾಂಚನಪುರಕ್ಕೆ ಮಹಾತ್ಮ ತಾರಕಾಕ್ಷನು ರಾಜನಾಗಿದ್ದನು, ಬೆಳ್ಳಿಯ ಪುರಕ್ಕೆ ಕಮಲಾಕ್ಷ ಮತ್ತು ಉಕ್ಕಿನ ಪುರಕ್ಕೆ ವಿದ್ಯುನ್ಮಾಲಿಯು ರಾಜರಾಗಿದ್ದರು. ಆ ಮೂವರು ದೈತ್ಯ ರಾಜರೂ ತಮ್ಮ ಅಸ್ತ್ರತೇಜಸ್ಸಿನಿಂದ ಮೂರು ಲೋಕಗಳನ್ನೂ ಆಕ್ರಮಣಿಸಿ ಅಧಿಕಾರವನ್ನು ಸ್ಥಾಪಿಸಿ ಪ್ರಜಾಪತಿಯೇ ತಾವೆನ್ನುವಂತೆ ಇದ್ದರು. ಮಹದ್ಐಶ್ವರ್ಯವನ್ನು ಮತ್ತು ಸುರಕ್ಷಿತ ಆಶ್ರಯವನ್ನು ಬಯಸಿದ ಕೋಟಿಗಟ್ಟಲೆ ದಾನವರು ಆ ದಾನವಮುಖ್ಯರ ಬಳಿ ಬಂದು ಸೇರಿಕೊಂಡರು. ಅವರೆಲ್ಲರಿಗೂ ಮಯನು ಸರ್ವವಸ್ತುಗಳನ್ನೂ ಒದಗಿಸಿಕೊಟ್ಟನು. ಅವರನ್ನು ಆಶ್ರಯಿಸಿ ಸರ್ವರೂ ನಿರ್ಭಯರಾಗಿದ್ದರು. ತ್ರಿಪುರಗಳಲ್ಲಿ ಆಶ್ರಯಪಡೆದಿದ್ದವರಲ್ಲಿ ಯಾರು ಏನನ್ನು ಮನಸ್ಸಿನಲ್ಲಿ ಬಯಸಿದರೂ ಅವೆಲ್ಲ ಕಾಮನೆಗಳನ್ನೂ ಮಯನು ತನ್ನ ಮಾಯೆಯಿಂದ ಕೊಡುತ್ತಿದ್ದನು.

ತಾರಕಾಕ್ಷನಿಗೆ ಹರಿ ಎಂಬ ಹೆಸರಿನ ಮಹಾಬಲ ಮಗನಿದ್ದನು. ಅವನು ಪರಮ ತಪಸ್ಸನ್ನು ತಪಿಸಿ ಪಿತಾಮಹನನ್ನು ತೃಪ್ತಿಗೊಳಿಸಿದನು. ಅವನು ತುಷ್ಟನಾದ ದೇವನಲ್ಲಿ ಈ ವರವನ್ನು ಕೇಳಿದನು:

> "ಶಸ್ತ್ರಗಳಿಂದ ಹತರಾದವನ್ನು ಎಲ್ಲಿ ಹಾಕಿದರೆ ಅವರು ಪುನಃ ಇನ್ನೂ ಹೆಚ್ಚಿನ ಬಲವುಳ್ಳವರಾಗಿ ಬದುಕುವರೋ ಅಂಥಹ ಒಂದು ಭಾವಿಯು ನಮ್ಮ ಪುರದಲ್ಲಿ ಇರಲಿ!"

ಆ ವರವನ್ನು ಪಡೆದ ತಾರಕಾಸುತ ವೀರ ಹರಿಯು ಮೃತರನ್ನು

ಜೀವಿತಗೊಳಿಸಬಲ್ಲ ಬಾವಿಯೊಂದನ್ನು ತನ್ನ ಪುರದಲ್ಲಿ ನಿರ್ಮಿಸಿದನು. ಯಾವ ರೂಪದಲ್ಲಿಯೇ ಅಥವಾ ಯಾವ ವೇಷದಲ್ಲಿಯೇ ಸತ್ತಿರಲಿ ಮೃತನಾದವನನ್ನು ಆ ಬಾವಿಯಲ್ಲಿ ಹಾಕಿದೊಡನೆಯೇ ಅವನು ಅದೇ ರೂಪದಲ್ಲಿ ಬದುಕಿ ಬರುತ್ತಿದ್ದನು.

ಆ ಬಾವಿಯನ್ನು ಪಡೆದ ತ್ರಿಪುರವಾಸಿಗಳು ಸರ್ವಲೋಕಗಳನ್ನೂ ಬಾಧಿಸಿದರು. ಮಹಾತಪಸ್ಸುಗಳಿಂದ ಸಿದ್ಧಿಗಳನ್ನು ಪಡೆದ ಅವರು ಸುರರ ಭಯವನ್ನು ಹೆಚ್ಚಿಸಿದರು. ಯುದ್ಧದಲ್ಲಿ ಎಂದೂ ಅವರ ವಿನಾಶವಾಗುತ್ತಿರಲಿಲ್ಲ. ಆಗ ಅವರು ಲೋಭ-ಮೋಹಗಳಿಗೊಳಗಾಗಿ ಬುದ್ಧಿಕಳೆದುಕೊಂಡರು. ನಿರ್ಲಜ್ಜರಾಗಿ ಎಲ್ಲೆಡೆಯೂ ಅನೇಕ ಪ್ರಕಾರದ ತೊಂದರೆಗಳನ್ನು ನೀಡತೊಡಗಿದರು. ವರದಾನದಿಂದ ದರ್ಪಿತರಾದ ಅವರು ಅಲ್ಲಲ್ಲಿದ್ದ ದೇವತೆಗಳನ್ನು, ಅವರ ಗಣಗಳೊಂದಿಗೆ ಓಡಿಸಿ ತಮ್ಮ ಮನಸ್ಸಿಗೆ ಬಂದಂತೆ ಸಂಚರಿಸುತ್ತಿದ್ದರು. ಮರ್ಯಾದೆಗಳನ್ನು ಕಳೆದುಕೊಂಡ ದುಷ್ಟಚಾರೀ ದಾನವರು ದಿವೌಕಸರಿಗೆ ಪ್ರಿಯವಾದ ದೇವಾರಣ್ಯಗಳೆಲ್ಲವನ್ನೂ, ಪುಣ್ಯ ಋಷ್ಯಾಶ್ರಮಗಳನ್ನೂ, ಸುಂದರ ಜನಪದಗಳನ್ನೂ ನಾಶಗೊಳಿಸಿದರು. ಆಗ ದೇವತೆಗಳೆಲ್ಲರೂ ಒಟ್ಟಾಗಿ ಸುರೇತರರು ಮಾಡಿದ ಅತ್ಯಾಚಾರಗಳ ಕುರಿತು ಹೇಳಲು ಪಿತಾಮಹನಲ್ಲಿಗೆ ಹೋದರು. ಭಗವಂತ ಪಿತಾಮಹನಿಗೆ ಶಿರಸಾ ವಂದಿಸಿ ಎಲ್ಲವನ್ನೂ ತಿಳಿಸಿ, ಅವರ ವಧೆಯ ಉಪಾಯವನ್ನು ಕೇಳಿದರು. ಅದನ್ನು ಕೇಳಿದ ಭಗವಾನ್ ದೇವನು ದೇವತೆಗಳಿಗೆ ಹೇಳಿದನು:

> “ಆ ದುರಾತ್ಮ ಅಸುರರು ಬ್ರಹ್ಮದ್ವೇಷಿಗಳು ಕೂಡ. ನಿಮ್ಮನ್ನು ಪೀಡಿಸುವ ಅವರು ಸತತವೂ ಅಪರಾಧಗಳನ್ನೆಸಗುತ್ತಿದ್ದಾರೆ. ನನಗೆ ಸರ್ವಭೂತಗಳೂ ಸಮ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಅಧರ್ಮಿಗಳನ್ನು ಸಂಹರಿಸಬೇಕು ಎಂದು ನಾನು ಹೇಳಿಕೊಳ್ಳುತ್ತಾ ಬಂದಿದ್ದೇನೆ. ಆದಿತ್ಯರೇ! ಸ್ಥಾಣು ಜಿಷ್ಣು ಅಕ್ಲಿಷ್ಟಕರ್ಮಿ ಈಶಾನನನ್ನು ನಿಮ್ಮ ಯೋಧನನ್ನಾಗಿ ಆರಿಸಿಕೊಳ್ಳಿ. ಅವನು ಆ ಸುರೇತರರರನ್ನು ಸಂಹರಿಸುತ್ತಾನೆ.”

ಅವನ ಈ ಮಾತನ್ನು ಕೇಳಿ ಶಕ್ರನ ನಾಯಕತ್ವದಲ್ಲಿದ್ದ ದೇವತೆಗಳು ಬ್ರಹ್ಮನನ್ನು ಮುಂದೆಮಾಡಿಕೊಂಡು ವೃಷಾಂಕನ ಶರಣು ಹೋದರು. ಆ ಧರ್ಮಜ್ಞರು ಋಷಿಗಳೊಂದಿಗೆ ಪರಮ ತಪಸ್ಸಾನಚರಿಸಿ ಆ ಬ್ರಹ್ಮ, ಶಾಶ್ವತ, ಸರ್ವಾತ್ಮ ಭವನಿಗೆ ಶರಣು ಹೋದರು. ಸ್ತುತಿ-ಪೂಜೆಗಳಿಗೆ ಸಂತುಷ್ಟನಾಗುವ, ಮಹಾ ಭಯದಲ್ಲಿಯೂ ಅಭಯಪ್ರದನಾಗಿರುವ, ಸರ್ವಾತ್ಮ, ಮಹಾತ್ಮ, ಸರ್ವದಲ್ಲಿಯೂ ತನ್ನನ್ನು ವ್ಯಾಪ್ತಗೊಳಿಸಿಕೊಂಡಿರುವ, ಅನೇಕ ವಿಶೇಷ ತಪಸ್ಸುಗಳಿಂದ ಯೋಗಯುಕ್ತನಾಗಿರುವ, ಅತ್ಮನನ್ನು ತಿಳಿದುಕೊಂಡಿರುವ, ಸಾಂಖ್ಯವನ್ನು ತಿಳಿದುಕೊಂಡಿರುವ, ತನ್ನ ಆತ್ಮವನ್ನು ವಶದಲ್ಲಿಟ್ಟುಕೊಂಡಿರುವ, ತೇಜೋರಾಶಿಯಾದ, ಲೋಕದಲ್ಲಿ ಅನನ್ಯಸದೃಶನಾದ, ವ್ರತವಂತನಾದ, ಅಕಲ್ಮಷನಾದ, ಆ ಈಶಾನ ಉಮಾಪತಿಯನ್ನು ಅವರು ನೋಡಿದರು. ಆ ಒಬ್ಬನೇ ಭಗವಂತನನ್ನು ಅವರು ನಾನಾರೂಪಗಳಲ್ಲಿ ಕಲ್ಪಿಸಿಕೊಂಡರು. ಆ ಮಹಾತ್ಮರು ತಮ್ಮ



ತಮ್ಮಲ್ಲಿಯೇ ಅವನ ಪ್ರತಿಬಿಂಬರೂಪಗಳನ್ನು ಕಂಡರು ಮತ್ತು ಪರಸ್ಪರರಲ್ಲಿಯೂ ಅವನನ್ನು ಕಂಡು ಎಲ್ಲರೂ ಪರಮ ವಿಸ್ಮಿತರಾದರು. ದೇವತೆಗಳು ಮತ್ತು ಬ್ರಹ್ಮರ್ಷಿಗಳು ಆ ಸರ್ವಭೂತಮಯ ಈಶ ಅಜ ಜತತ್ಪತಿಯನ್ನು ನೋಡಿ ಶಿರಗಳನ್ನು ಭೂಮಿಯಮೇಲಿಟ್ಟು ನಮಸ್ಕರಿಸಿದರು. ಸ್ವಸ್ತಿವಾಕ್ಯಗಳಿಂದ ಅವರನ್ನು ಮೇಲೆಬ್ಬಿಸಿ ಭಗವಾನ್ ಶಂಕರನು ನಸುನಗುತ್ತಾ "ಹೇಳಿ! ಹೇಳಿ!" ಎಂದು ನುಡಿದನು.

ತ್ರ್ಯಂಬಕನಿಂದ ಅಪ್ಪಣೆಪಡೆದ ಆ ಅಸ್ವಸ್ಥಚೇತಸರು "ನಮೋ ನಮಸ್ತೇಸ್ತು!" ಎಂದು ಭವನಿಗೆ ಹೇಳಿದರು.

> "ದೇವಾತಿದೇವನಿಗೆ, ಧನ್ವಿಗೆ, ಅತಿಮನ್ಯುವಿಗೆ, ಪ್ರಜಾಪತಿ ಯಜ್ಞನಾಶನಿಗೆ, ಪ್ರಜಾಪತಿಯಿಂದಲೂ ಸ್ತುತಿಸಲ್ಪಡುವವನಿಗೆ ನಮಸ್ಕಾರ! ಸ್ತುತನಿಗೆ, ಸ್ತುತ್ಯನಿಗೆ, ಸ್ತೂಯಮಾನನಿಗೆ, ಮೃತ್ಯುವಿಗೆ, ವಿಲೋಹಿತನಿಗೆ, ರುದ್ರನಿಗೆ, ನೀಲಗ್ರೀವನಿಗೆ, ಶೂಲಿಗೆ, ಅಮೋಘನಿಗೆ, ಮೃಗಾಕ್ಷನಿಗೆ, ಪ್ರವರಾಯುಧಯೋಧಿನಿಗೆ, ದುರ್ವಾರ್ಣನಿಗೆ, ಶುಕ್ರನಿಗೆ, ಬ್ರಹ್ಮನಿಗೆ,  ಬ್ರಹ್ಮಚಾರಿಣಿಗೆ, ಈಶಾನನಿಗೆ, ಅಪ್ರಮೇಯನಿಗೆ, ನಿಯಂತ್ರಿಗೆ, ಚರ್ಮವಾಸಸನಿಗೆ, ತಪೋನಿತ್ಯನಿಗೆ, ಪಿಂಗನಿಗೆ, ವ್ರತಿಗೆ, ಕೃತ್ತಿವಾಸಸನಿಗೆ, ಕುಮಾರಪಿತುವಿಗೆ, ತ್ರ್ಯಕ್ಷನಿಗೆ, ಪ್ರವರಾಯುಧಧಾರಿಣಿಗೆ, ಪ್ರಪನ್ನರ ದುಃಖವನ್ನು ವಿನಾಶಗೊಳಿಸುವವನಿಗೆ, ಬ್ರಹ್ಮದ್ವೇಷಿಗಳ ಸಮೂಹ

ವಿಧ್ವಂಸಕನಿಗೆ ನಮಸ್ಕಾರ. ವನಸ್ಪತಿಗಳ ಪತಿಗೆ, ನರರ ಪತಿಗೆ ನಮಸ್ಕಾರ. ಗೋಪತಿಗೆ, ನಿತ್ಯನಿಗೆ, ಯಜ್ಞಪತಿಗೆ ನಮಸ್ಕಾರ. ಸೇನಾಸಹಿತನಾದ ನಿನಗೆ ನಮಸ್ಕಾರ! ಉಗ್ರತೇಜಸ್ವಿ, ತ್ರ್ಯಂಬಕನಿಗೆ ನಮಸ್ಕಾರ! ಮನಸ್ಸು, ಮಾತು ಮತ್ತು ಕರ್ಮಗಳಿಂದ ನಿನ್ನನ್ನು ಭಜಿಸುವ ನಮ್ಮನ್ನು ಕಾಪಾಡು!"

ಆಗ ಪ್ರಸನ್ನನಾದ ಭಗವಾನನು ಅವರನ್ನು ಸ್ವಾಗತದೊಂದಿಗೆ ಅಭಿನಂದಿಸಿ

"ನಿಮ್ಮ ಭಯವನ್ನು ದೂರಮಾಡಲು ನಾನೇನು ಮಾಡಬೇಕೆಂದು ಹೇಳಿ!"

ಎಂದು ಕೇಳಿದನು. ಆ ಮಹಾತ್ಮನು ಪಿತೃ-ದೇವ ಸಂಘಗಳಿಗೆ ವರವನ್ನು ನೀಡಲು, ಬ್ರಹ್ಮನು ಶಂಕರನನ್ನು ಸತ್ಕರಿಸಿ ಲೋಕಹಿತವಾದ ಈ ಮಾತನ್ನಾಡಿದನು:

"ದೇವೇಶ! ನಿನ್ನ ಆದೇಶದಂತೆ ಈ ಪ್ರಜಾಪತಿ ಪದವನ್ನು ವಹಿಸಿಕೊಂಡಿರುವ ನಾನು ದಾನವರಿಗೆ ಮಹಾ ವರವನ್ನು ನೀಡಿದೆನು. ಮರ್ಯಾದೆಗಳನ್ನು ಅತಿಕ್ರಮಿಸಿರುವ ಅವರನ್ನು ಸಂಹರಿಸಬೇಕಾಗಿದೆ. ಭೂತಭವ್ಯೇಶ! ನಿನ್ನನ್ನು ಬಿಟ್ಟು ಬೇರೆ ಯಾರೂ ಅವರನ್ನು ಕೊಲ್ಲಲಾರರು. ಆದುದರಿಂದ ನೀನೇ ಅವರ ಶತ್ರುವಾಗಿ ಅವರನ್ನು ವಧಿಸು! ದೇವ! ಶರಣುಬಂದು

ಬೇಡುತ್ತಿರುವ ದಿವೌಕಸರಿಗೆ ನೀನು ಕೃಪೆತೋರಿಸು! ದೇವೇಶ! ಶೂಲಧಾರೀ! ದಾನವರನ್ನು ಸಂಹರಿಸು!"

ಶ್ರೀ ಭಗವಾನನು ಹೇಳಿದನು:

"ನಿಮ್ಮ ಶತ್ರುಗಳೆಲ್ಲರನ್ನೂ ಸಂಹರಿಸಬೇಕೆಂಬುದೇ ನನ್ನ ಅಭಿಪ್ರಾಯ. ಆದರೆ ಸುರಶತ್ರುಗಳಾದ ಅವರನ್ನು ನಾನೊಬ್ಬನೇ ವಧಿಸಲು ಸಮರ್ಥನಿಲ್ಲ. ನೀವೆಲ್ಲರೂ ಒಟ್ಟಾಗಿ ನನ್ನ ಅಸ್ತ್ರತೇಜಸ್ಸಿನಿಂದ ಯುದ್ಧದಲ್ಲಿ ಆ ಶತ್ರುಗಳನ್ನು ಜಯಿಸಿ. ಏಕೆಂದರೆ ಒಗ್ಗಟ್ಟಿನಲ್ಲಿಯೇ ಮಹಾಬಲವಿದೆ."

ದೇವತೆಗಳು ಹೇಳಿದರು:

"ನಮ್ಮ ತೇಜೋಬಲಕ್ಕಿಂತಲೂ ಎರಡು ಪಟ್ಟು ಅವರದ್ದು ಎಂದು ನಮಗೂ ಅನ್ನಿಸುತ್ತಿದೆ. ಏಕೆಂದರೆ ಅವರ ತೇಜೋಬಲವನ್ನು ನಾವು ನೋಡಿದ್ದೇವೆ."

ಭಗವಾನನು ಹೇಳಿದನು:

"ನಿಮ್ಮ ಮೇಲೆ ಅಪರಾಧಗಳನ್ನೆಸಗಿರುವ ಆ ಪಾಪಿಗಳು ಸರ್ವಥಾ ವಧ್ಯರು. ನನ್ನ ತೇಜೋಬಲದ ಅರ್ಧದಿಂದ ಆ ಎಲ್ಲ ಶತ್ರುಗಳನ್ನೂ ಸಂಹರಿಸಿರಿ!"

ದೇವತೆಗಳು ಹೇಳಿದರು:

“ಮಹೇಶ್ವರ! ನಿನ್ನ ಅರ್ಧತೇಜಸ್ಸನ್ನೂ ಧರಿಸಲು ನಾವು ಶಕ್ಯರಿಲ್ಲ. ಆದುದರಿಂದ ನೀನೇ ನಮ್ಮೆಲ್ಲರ ಬಲದಿಂದ ಶತ್ರುಗಳನ್ನು ಸಂಹರಿಸು!”

ಹಾಗೆಯೇ ಆಗಲೆಂದು ಹೇಳಿ ದೇವೇಶನು ಅವರೆಲ್ಲರ ತೇಜಸ್ಸಿನ ಅರ್ಧವನ್ನು ಪಡೆದು ತೇಜಸ್ಸಿನಲ್ಲಿ ಅಧಿಕನಾದನು. ಆಗ ಆ ದೇವನು ಬಲದಲ್ಲಿ ಎಲ್ಲರಿಗಿಂತ ಹೆಚ್ಚು ಬಲವಂತನಾದನು. ಅಂದಿನಿಂದ ಶಂಕರನು ಮಹಾದೇವ ಎಂದು ಖ್ಯಾತನಾದನು. ಆಗ ಮಹಾದೇವನು ಹೇಳಿದನು:

“ದಿವೌಕಸರೇ! ಧನುರ್ಬಾಣಗಳನ್ನು ಹಿಡಿದು ರಥವನ್ನೇರಿ ಆ ರಿಪುಗಳನ್ನು ಸಂಹರಿಸುತ್ತೇನೆ. ಯಾವುಗಳಿಂದ ನಾನು ಆ ದೈತ್ಯರನ್ನು ಮಹೀತಲಕ್ಕೆ ಬೀಳಿಸಬಲ್ಲೆನೋ ಅಂತಹ ರಥವನ್ನೂ, ಧನುರ್ಬಾಣಗಳನ್ನೂ ಹುಡುಕಿರಿ!”

ದೇವತೆಗಳು ಹೇಳಿದರು:

“ದೇವೇಶ್ವರ! ತ್ರೈಲೋಕ್ಯಗಳಲ್ಲಿ ಅಲ್ಲಲ್ಲಿರುವ ಮೂರ್ತಿಗಳೆಲ್ಲವನ್ನೂ ಒಂದುಗೂಡಿಸಿ ನಿನಗೋಸ್ಕರ ಈ ಮಹೌಜಸ ರಥವನ್ನು ನಿರ್ಮಿಸಿದ್ದೇವೆ. ಈ ಶುಭ ರಥವು ವಿಶ್ವಕರ್ಮನ ಬುದ್ಧಿಯಿಂದ ರಚಿಸಲ್ಪಟ್ಟಿದೆ.”

ಹೀಗೆ ವಿಬುಧಶಾರ್ದೂಲರು ಆ ರಥವನ್ನು ನಿರ್ಮಿಸಿದರು. ವಿಶಾಲ

ಪುರಮಾಲೆಗಳಿಂದ ಅಲಂಕೃತ, ಪರ್ವತ-ವನ-ದ್ವೀಪಸಂಪನ್ನಳಾದ ಸರ್ವಭೂತಗಳನ್ನು ಧರಿಸಿದ್ದ ಪೃಥ್ವೀ ದೇವಿಯನ್ನೇ ಅವರು ರಥವನ್ನಾಗಿ ಕಲ್ಪಿಸಿಕೊಟ್ಟರು. ಮಂದರ ಪರ್ವತವು ಅದರ ಅಚ್ಚುಮರವಾಗಿತ್ತು. ಮಹಾನದಿಯು ಅದರ ತಳಭಾಗವಾಗಿತ್ತು. ದಿಕ್ಕುಗಳು ಮತ್ತು ಉಪದಿಕ್ಕುಗಳು ಆ ರಥದ ಪರಿವಾರಗಳಾಗಿದ್ದವು. ಬೆಳಗುತ್ತಿದ್ದ ಗ್ರಹಗಳು ಅನುಕರ್ಷಗಳಾಗಿದ್ದವು. ನಕ್ಷತ್ರಗಳು ವರೂಥವಾಗಿದ್ದವು. ಧರ್ಮ-ಅರ್ಥ-ಕಾಮಗಳು ಒಂದಾಗಿ ತ್ರಿವೇಣಿಗಳಾಗಿ ಬಂಧಿಸಿದ್ದವು. ವಿವಿಧ ಔಷಧಿಗಳು ಮತ್ತು ನಾನಾ ಪುಷ್ಪ-ಫಲಗಳು ಉದ್ಗಮಗಳಾಗಿದ್ದವು. ಸೂರ್ಯ-ಚಂದ್ರರು ಆ ಉತ್ತಮ ರಥದ ಚಕ್ರಗಳಾಗಿದ್ದವು. ಶುಭ ರಾತ್ರಿ ಮತ್ತು ಹಗಲುಗಳು ಅದರ ಪೂರ್ವ ಮತ್ತು ಪಶ್ಚಿಮ ಪಕ್ಷಗಳಾಗಿದ್ದವು. ಧೃತರಾಷ್ಟ್ರನೇ ಮೊದಲಾದ ಹತ್ತು ನಾಗಪತಿಗಳು ಅದರ ದೃಢ ಈಷಾದಂಡಗಳಾಗಿದ್ದವು. ಎರಡು ಯುಗಗಳು ಮತ್ತು ಸಂವರ್ತಕ ಬಲಾಹಕಗಳು ರಥಚರ್ಮಗಳಾಗಿದ್ದವು. ಸಂಧ್ಯಾ, ಧೃತಿ, ಮೇಧಾ, ಸ್ಥಿತಿ, ಸನ್ನತಿ, ಗ್ರಹ-ನಕ್ಷತ್ರ-ತಾರೆಗಳಿಂದ ಚಿತ್ರಿತ ಆಕಾಶವನ್ನೇ ರಥಕ್ಕೆ ಚರ್ಮದ ಹೊದಿಕೆಯನ್ನಾಗಿ ಹೊದಿಸಿದ್ದರು. ಸುರರು, ನೀರು, ಪ್ರೇತ ಮತ್ತು ವಿತ್ತಗಳ ಒಡೆಯರಾದ ಇಂದ್ರ, ವರುಣ, ಯಮ ಮತ್ತು ಕುಬೇರ – ಈ ಲೋಕೇಶ್ವರರನ್ನು ಕುದುರೆಗಳನ್ನಾಗಿ ಕಟ್ಟಲಾಗಿತ್ತು. ಸಿನೀವಾಲೀ, ಅನುಮತಿ, ಕುಹೂ ಮತ್ತು ಸುವ್ರತ ರಾಕಾರನ್ನು ಕುದುರೆಗಳ ಕಡಿವಾಣಗಳನ್ನಾಗಿಯೂ ರೋಹಕರನ್ನು (ದೊಡ್ಡ ದೇವತೆಗಳನ್ನು)

ಕಡಿವಾಣಗಳಲ್ಲಿರುವ ಮುಳ್ಳುಗಳನ್ನಾಗಿ ಕಲ್ಪಿಸಿದರು. ಕರ್ಮ, ಸತ್ಯ, ತಪಸ್ಸು ಮತ್ತು ಅರ್ಥಗಳು ಕಡಿವಾಣಗಳಲ್ಲಿದ್ದವು. ಮನಸ್ಸು ಅದರ ಅಧಿಷ್ಠಾನವಾಗಿತ್ತು ಮತ್ತು ಸರಸ್ವತಿಯು ರಥದ ದಾರಿಯಾಗಿ ಪರಿಣಮಿಸಿತು. ನಾನಾವರ್ಣಗಳ ಚಿತ್ರ-ವಿಚಿತ್ರ ಪತಾಕೆಗಳು ಗಾಳಿಯಲ್ಲಿ ಪರಪರನೆ ಹಾರಾಡುತ್ತಿದ್ದವು. ಮಿಂಚು ಮತ್ತು ಕಾಮನಬಿಲ್ಲುಗಳು ರಥವನ್ನು ಬೆಳಗಿಸಿದವು.

ಹೀಗೆ ಶತ್ರುಗಳನ್ನು ಸಂಹರಿಸಲು ದೇವತೆಗಳು ಉತ್ತಮ ರಥವನ್ನು ತಯಾರಿಸಲು ಶಂಕರನು ಆ ರಥದಲ್ಲಿ ತನ್ನ ಮುಖ್ಯ ಆಯುಧಗಳನ್ನು ಇರಿಸಿದನು. ಆಕಾಶವನ್ನೇ ರಥಯಷ್ಟಿಯನ್ನಾಗಿಸಿ ಅದರಲ್ಲಿ ನಂದಿಯನ್ನು ಸ್ಥಾಪಿಸಿದನು. ಬ್ರಹ್ಮದಂಡ, ಕಾಲದಂಡ, ರುದ್ರದಂಡ ಮತ್ತು ಜ್ವರಗಳು ಆ ರಥದ ಪಾರ್ಶ್ವರಕ್ಷಕರಾಗಿ ಆಯುಧಗಳನ್ನು ಮೇಲೆತ್ತಿ ನಿಂತವು. ಆ ಮಹಾತ್ಮನ ಚಕ್ರರಕ್ಷಕರಾಗಿ ಅಥರ್ವ ಮತ್ತು ಆಂಗಿರಸರಿದ್ದರು. ಋಗ್ವೇದ, ಸಾಮವೇದ ಮತ್ತು ಪುರಾಣಗಳು ಮುಂದೆಹೋಗುವ ಯೋಧರಾಗಿದ್ದವು. ಇತಿಹಾಸ ಯಜುರ್ವೇದಗಳು ರಥದ ಹಿಂಬಾಗದ ರಕ್ಷಕರಾಗಿದ್ದರು. ದಿವ್ಯವಾಣಿ ಮತ್ತು ವಿದ್ಯೆಗಳು ರಥದ ಪರಿಪಾರ್ಶ್ವಚರರಾಗಿದ್ದರು. ಸ್ತೋತ್ರ, ಕವಚ, ವಷಟ್ಕಾರ, ಓಂಕಾರಗಳು ರಥದ ಮುಖಭಾಗದಲ್ಲಿದ್ದು ಶೋಭಾಯಮಾನಗೊಳಿಸಿದವು. ಆರು ಋತುಗಳ ಸಂವತ್ಸರದಿಂದ ವಿಚಿತ್ರ ಧನುಸ್ಸನ್ನು ಮಾಡಿಕೊಂಡು ಆ ಅಜರನು ಮನುಷ್ಯರ ಕಾಲರಾತ್ರಿಯನ್ನು ಧನುಸ್ಸಿನ ಶಿಂಜಿನಿಯನ್ನಾಗಿ ಮಾಡಿಕೊಂಡನು. ವಿಷ್ಣು, ಅಗ್ನಿ ಮತ್ತು ಸೋಮರು ಬಾಣಗಳಾದರು.

ಅಗ್ನಿ-ಸೋಮರಿಂದಲೇ ಇಡೀ ಜಗತ್ತಿದೆಯೆಂದೂ, ಜಗತ್ತು ವೈಷ್ಣವವೆಂದೂ ಹೇಳುತ್ತಾರೆ. ಅಮಿತತೇಜಸ್ವಿ ಭಗವಂತ ವಿಷ್ಣುವೇ ಭವನ ಆತ್ಮಸ್ವರೂಪನು. ಆದುದರಿಂದ ಅವರು ಹರನ ಧನುಸ್ಸು-ಮೌರ್ವಿಗಳ ಸ್ಪರ್ಷವನ್ನೂ ಸಹಿಸಿಕೊಳ್ಳಲಾರರಾಗಿದ್ದರು. ಆ ಶರದಲ್ಲಿ ಪ್ರಭುವು ತನ್ನ ಸುತೀಕ್ಷ್ಣ ಕೋಪವನ್ನು ಭೃಗು-ಅಂಗಿರಸರ ಕೋಪದಿಂದ ಹುಟ್ಟಿದ ಅತಿದುಃಸ್ಸಹವಾದ ಕ್ರೋಧಾಗ್ನಿಯನ್ನೂ ಸಂಸ್ಥಾಪಿಸಿದನು. ಆ ನೀಲಲೋಹಿತ, ಧೂಮ್ರ, ಕೃತ್ತಿವಾಸಾ, ಭಯಂಕರನು ಸಹಸ್ರ ಆದಿತ್ಯರ ತೇಜೋಜ್ವಲಗಳಿಂದ ಆವೃತನಾಗಿ ಪ್ರಜ್ವಲಿಸಿದನು. ಅಳ್ಳಾಡಿಸುವುದಕ್ಕೆ ಅಸಾಧ್ಯವಾಗಿರುವವರನ್ನೂ ಅಳ್ಳಾಡಿಸಿಬಿಡುವ, ಬ್ರಹ್ಮದ್ವೇಷಿಗಳನ್ನು ಜಯಿಸಿ ಸಂಹರಿಸುವ ಹರನು ಅಧರ್ಮಾಶ್ರಿತ ಜನರನ್ನು ಸಂಹರಿಸಿ ನಿತ್ಯವೂ ಧರ್ಮವನ್ನು ರಕ್ಷಿಸುತ್ತಾನೆ. ಘೋರರೂಪೀ ಭಯಂಕರ ಉಗ್ರ ಪ್ರಮಾಥಿಗಣಗಳಿಂದ ಆವೃತನಾಗಿ  ಅವರ ಆತ್ಮಗುಣಗಳಿಂದ ಆವೃತನಾಗಿ ಭಗವಾನ್ ಸ್ಥಾಣುವು ಪ್ರಕಾಶಿಸಿದನು. ಈ ವಿಶ್ವ-ಜಗತ್ತೆಲ್ಲವೂ, ಜಂಗಮಾಜಂಗಮಗಳೆಲ್ಲವೂ ಆ ಅದ್ಭುತದರ್ಶನನ ಅಂಗಗಳನ್ನು ಸಮಾಶ್ರಯಿಸಿ ಶೋಭಿಸಿದವು.

ಆ ದಿವ್ಯರಥವನ್ನು ನೋಡಿ ಕವಚ-ಧನುಸ್ಸುಗಳನ್ನು ಹಿಡಿದಿದ್ದ ಶಿವನು ಸೋಮ-ವಿಷ್ಣು-ಅಗ್ನಿಸಂಭವ ಬಾಣವನ್ನು ತೆಗೆದುಕೊಂಡನು. ಆಗ ವಿಭು ದೇವತೆಗಳು ವಾಯುವನ್ನು ಪುಣ್ಯಗಂಧಯುಕ್ತ ಗಾಳಿಯನ್ನು ಬೀಸಲು ನಿಯುಕ್ತಗೊಳಿಸಿದರು. ಮಹಾದೇವನು ದೇವತೆಗಳನ್ನೂ ಭಯಗೊಳಿಸುತ್ತಾ ಭೂಮಿಯನ್ನು ನಡುಗಿಸುತ್ತಾ ರಥವನ್ನೇರಿದನು.

ಖಡ್ಗ, ಬಾಣ, ಧನುಸ್ಸುಗಳನ್ನು ಧರಿಸಿ ಶೋಭಾಯಮಾನನಾಗಿದ್ದ ಆ ವರದನು ನಸುನಗುತ್ತಾ ಸಾರಥಿಯು ಯಾರಾಗುತ್ತಾನೆ ಎಂದು ದೇವತೆಗಳನ್ನು ಕೇಳಿದನು. ದೇವಗಣಗಳು ಅವನಿಗೆ ಹೇಳಿದರು:

> “ದೇವೇಶ! ಯಾರನ್ನು ನೀನು ನಿಯೋಜಿಸುತ್ತೀಯೋ ಅವನೇ ನಿನಗೆ ಸಾರಥಿಯಾಗುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ.”

ದೇವನು ಅವರಿಗೆ ಪುನಃ ಹೇಳಿದನು:

> “ನಿಮ್ಮಲ್ಲಿ ನನಗಿಂತಲೂ ಶ್ರೇಷ್ಠತರನಾದವನನ್ನು ನನ್ನ ಸಾರಥಿಯನ್ನಾಗಿ ಮಾಡಿ. ತಡಮಾಡಬೇಡಿ!”

ಮಹಾತ್ಮನಾದ ಅವನ ಆ ಮಾತನ್ನು ಕೇಳಿ ದೇವತೆಗಳು ಪಿತಾಮಹನಲ್ಲಿಗೆ ಹೋಗಿ ದೇವನನ್ನು ಸ್ತುತಿಸಿ ಅವನಿಗೆ ಹೇಳಿದರು:

> “ದೇವ! ತ್ರಿದಶರ ಶತ್ರುಗಳನ್ನು ನಾಶಗೊಳಿಸಲು ನೀನು ಹೇಳಿದಂತೆಯೇ ನಾವು ಮಾಡಿದ್ದೇವೆ. ವೃಷಭಧ್ವಜನು ನಮ್ಮ ಮೇಲೆ ಪ್ರಸನ್ನನಾಗಿದ್ದಾನೆ. ವಿಚಿತ್ರ ಆಯುಧಗಳಿಂದ ಕೂಡಿರುವ ರಥವನ್ನೂ ನಾವು ಸಜ್ಜುಗೊಳಿಸಿದ್ದೇವೆ. ಆದರೆ ಆ ಉತ್ತಮ ರಥದಲ್ಲಿ ಸಾರಥಿಯು ಯಾರಾಗಬಲ್ಲರೆಂದು ನಮಗೆ ತಿಳಿದಿಲ್ಲ. ಆದುದರಿಂದ ದೇವಸತ್ತಮ! ಯಾರಾದರೂ ಸಾರಥಿಯನ್ನು ನಿಯೋಜಿಸಬೇಕು. ದೇವ! ನಮಗೆ ನೀನು ನೀಡಿದ ವಚನವನ್ನು ಸಫಲಗೊಳಿಸಿಕೊಡಬೇಕು! “ನಿಮಗೆ

ಹಿತವಾದುದನ್ನು ಮಾಡುತ್ತೇನೆ!” ಎಂದು ನೀನು ನಮಗೆ ಹಿಂದೆ ಹೇಳಿದ್ದೆ. ಅದನ್ನು ನೀನು ಮಾಡಿಕೊಡಬೇಕು! ನಮ್ಮ ಶತ್ರುಗಳನ್ನು ಪಲಾಯನಗೊಳಿಸಬಲ್ಲ, ಶತ್ರುಗಳಿಗೆ ದುರ್ಗಮವಾದ ಆ ಉತ್ತಮ ರಥದಲ್ಲಿ ಕುಳಿತು ಯೋದ್ಧಾ ಪಿನಾಕಪಾಣಿಯು ದಾನವರನ್ನು ಭಯಗೊಳಿಸುತ್ತಾ ಉದ್ಧೋನ್ನತನಾಗಿದ್ದಾನೆ. ಸಶ್ಯೈಲ ಧರಣಿಯೇ ರಥವಾಗಿದೆ. ನಾಲ್ಕು ವೇದಗಳು ಕುದುರೆಗಳಾಗಿವೆ. ಸಾರಥಿಯಿಂದ ರಕ್ಷಿತನಾದ ಯೋಧನಿರುವ ಆ ರಥಕ್ಕೆ ನಕ್ಷತ್ರವಂಶಗಳೇ ವರೂಥಗಳಾಗಿ ಹಿಂಬಾಲಿಸುತ್ತವೆ. ಇತರರಿಗಿಂತಲೂ ಸರ್ವಶ್ರೇಷ್ಠನಾದ ಸಾರಥಿಯು ಆ ಪ್ರತಿಷ್ಠ ರಥಕ್ಕೆ, ಕುದುರೆಗಳಿಗೆ, ಯೋದ್ಧನಿಗೆ, ಕವಚ, ಶಸ್ತ್ರಗಳು ಮತ್ತು ಕಾರ್ಮುಕಗಳಿಗೆ ಬೇಕಾಗಿದೆ. ನಿನ್ನನ್ನು ಬಿಟ್ಟು ಬೇರೆ ಯಾವ ಸಾರಥಿಯೂ ನಮಗೆ ಕಾಣುವುದಿಲ್ಲ. ಸರ್ವಗುಣಯುಕ್ತನಾದ ನೀನೇ ದೇವತೆಗಳಿಗೂ ಅಧಿಕನಾಗಿರುವೆ. ಬೇಗನೆ ಸಾರಥ್ಯವನ್ನು ವಹಿಸಿಕೊಂಡು ಆ ಉತ್ತಮ ಕುದುರೆಗಳನ್ನು ನಿಯಂತ್ರಿಸು.”

ಹೀಗೆ ತ್ರಿಲೋಕೇಶ ಪಿತಾಮಹನಿಗೆ ಶಿರಬಾಗಿ ನಮಸ್ಕರಿಸಿ ದೇವತೆಗಳು ಸಾರಥಿಯಾಗಲು ಅವನನ್ನು ಒಪ್ಪಿಸಿದರು. ಬ್ರಹ್ಮನು ಹೇಳಿದನು:

“ದಿವೌಕಸರೇ! ನೀವು ಹೇಳಿದ ಮಾತಿನಲ್ಲಿ ಸ್ವಲ್ಪವೂ ಸುಳ್ಳಿಲ್ಲ!

ಕಪರ್ದಿನಿಯು ಯುದ್ಧಮಾಡುವಾಗ ನಾನು ಕುದುರೆಗಳನ್ನು ನಿಯಂತ್ರಿಸುತ್ತೇನೆ.”

ಆಗ ಲೋಕಸ್ರಷ್ಟಾ ಭಗವಾನ್ ದೇವ ಪಿತಾಮಹನು ದೇವತೆಗಳಿಂದ ಮಹಾತ್ಮ ಈಶಾನನ ಸಾರಥಿಯಾಗಿ ಕಲ್ಪಿತನಾದನು. ಆ ಲೋಕಪೂಜಿತ ರಥದಲ್ಲಿ ಅವನು ಬೇಗನೇ ಹತ್ತಿ ಕುಳಿತುಕೊಳ್ಳಲು ವಾಯುವಿನ ವೇಗಯುಕ್ತ ಕುದುರೆಗಳು ಕೂಡಲೇ ಮುಗ್ಗರಿಸಿದವು. ಮಹಿಯನ್ನು ಕಾಲುಗುರಿನಿಂದ ಮೆಟ್ಟಿ ಮಹೇಶ್ವರನು ಮೇಲೇರಲು ತ್ರಿಲೋಕೇಶ ಪ್ರಪಿತಾಮಹನು ಕಡಿವಾಣಗಳನ್ನು ಹಿಡಿದುಕೊಂಡು ಆ ಮನೋಮಾರುತಹಂಸಗಳಂತೆ ಓಡುವ ಕುದುರೆಗಳನ್ನು ಪ್ರಚೋದಿಸಿದನು.  ಆ ವರದನು ರಥಾಧಿರೂಢನಾಗಿ ಅಸುರರ ಕಡೆ ಹೊರಡಲು ವಿಶ್ವೇಶನು ನಸುನಗುತ್ತಾ “ಸಾಧು ! ಸಾಧು !” ಎಂದು ಹೊಗಳಿದನು.

“ದೇವ ! ಸಾವಧಾನವಾಗಿ ಕುದುರೆಗಳನ್ನು ದೈತ್ಯರಿರುವಲ್ಲಿಗೆ ಕೊಂಡೊಯ್ಯಿ. ರಣದಲ್ಲಿ ಶತ್ರುಗಳನ್ನು ಸಂಹರಿಸುವ ನನ್ನ ಬಾಹುಬಲವನ್ನು ಇಂದು ನೋಡು !”

ಆಗ ಬ್ರಹ್ಮನು ವೇಗದಲ್ಲಿ ವಾಯುವೇಗಸಮನಾದ ಆ ಅಶ್ವಗಳನ್ನು ದೈತ್ಯದಾನವರಿಂದ ರಕ್ಷಿತ ತ್ರಿಪುರದ ಕಡೆಗೆ ನಡೆಸಿದನು. ಕೂಡಲೆ ಶರ್ವನು ಧನುಸ್ಸಿಗೆ ಹೆದೆಯನ್ನೇರಿಸಿ ಆ ಶರವನ್ನು ಹೂಡಿ ಪಾಶುಪತಾಸ್ತ್ರವನ್ನು ಅನುಸಂಧಾನಮಾಡಿ ತ್ರಿಪುರವನ್ನು



ನೆನೆಸಿಕೊಂಡನು. ಹಾಗೆ ಧನುಸ್ಸನ್ನು ಎಳೆದು ಕ್ರುದ್ಧನಾಗಿ ಅವನು ನಿಂತಿರಲು ಕಾಲಾಂತರದಲ್ಲಿ ಆ ಪುರಗಳು ಒಂದೇ ಸಾಲಿನಲ್ಲಿ ಬಂದವು. ತ್ರಿಪುರಗಳು ಒಂದೇ ಸಾಲಿನಲ್ಲಿ ಬಂದು ಸೇರಲು ಮಹಾತ್ಮ ದೇವತೆಗಳಲ್ಲಿ ತುಮುಲ ಹರ್ಷೋದ್ಗಾರವಾಯಿತು. ಆಗ ದೇವಗಣಗಳೆಲ್ಲವೂ, ಸಿದ್ಧ-ಪರಮ ಋಷಿಗಳೂ ಮುದಾನ್ವಿತರಾಗಿ ಜಯ ಜಯ ಎಂದು ಉದ್ಗರಿಸಿದರು. ಆಗ ಅಸುರರನ್ನು ಸಂಹರಿಸುತ್ತಿದ್ದ ಅವರ್ಣನೀಯ, ಉಗ್ರರೂಪೀ, ಸಹಿಸಲಸಾಧ್ಯ ತೇಜಸ್ಸಿನಿಂದ ಕೂಡಿದ್ದ ದೇವನ ಎದುರಿಗೆ ತ್ರಿಪುರಗಳು ಒಟ್ಟಿಗೇ ಪ್ರಕಟವಾದವು. ಭಗವಾನ್ ಲೋಕೇಶ್ವರನು ಆ ಧನುಸ್ಸನ್ನು ಸೆಳೆದು ತ್ರೈಲೋಕ್ಯಸಾರವಾಗಿದ್ದ ಆ ಬಾಣವನ್ನು ತ್ರಿಪುರದ ಕಡೆ ಪ್ರಯೋಗಿಸಿದನು. ಅದು ಅಲ್ಲಿರುವ ಅಸುರಗಣಗಳೊಂದಿಗೆ ತ್ರಿಪುರಗಳನ್ನು ಸುಟ್ಟು ಪಶ್ಚಿಮಸಮುದ್ರದಲ್ಲಿ ಹಾಕಿಬಿಟ್ಟಿತು. ಹೀಗೆ ದಾನವರ್ಯಾರನ್ನೂ ಉಳಿಸದೇ ತ್ರೈಲೋಕ್ಯದ ಹಿತೈಷಿಣಿಯಾದ ಮಹೇಶ್ವರನು ಕ್ರೋಧದಿಂದ ಆ ತ್ರಿಪುರಗಳನ್ನು ಸುಟ್ಟುಹಾಕಿದನು. ಆತ್ಮಕ್ರೋಧದಿಂದ ಹುಟ್ಟಿದ ಅಗ್ನಿಯನ್ನೂ ಅವನು ಹಾಹಾ ಎಂದು ಪ್ರಶಮನಗೊಳಿಸಿ, ಅದಕ್ಕೆ "ಲೋಕಗಳನ್ನೆಲ್ಲ ಭಸ್ಮೀಕೃತವನ್ನಾಗಿಸಬೇಡ!" ಎಂದನು.

ಆಗ ಪ್ರಕೃತಿಯನ್ನೂ ಸೇರಿ ದೇವತೆಗಳೂ, ಮೂರು ಲೋಕಗಳೂ, ಋಷಿಗಳೂ ಸಂತೋಷಗೊಂಡು ಅಮಿತ ತೇಜಸ್ವಿ ಸ್ಥಾಣುವನ್ನು ಸ್ತುತಿಗಳಿಂದ ಸ್ತೋತ್ರಮಾಡಿದರು. ಭಗವಂತನ ಅನುಜ್ಞೆಯನ್ನು ಪಡೆದು ಪ್ರಜಾಪತಿಯ ನಾಯಕತ್ವದಲ್ಲಿದ್ದ ಸುರರು ಎಲ್ಲರೂ ಬಯಸಿದುದು

ಆಯಿತೆಂದು ಪ್ರಸನ್ನರಾಗಿ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

# ಪರಶುರಾಮನು ಅಸ್ತ್ರಗಳನ್ನು ಪಡೆದುದು

[ಪರಶುರಾಮನು ಅಸ್ತ್ರಗಳನ್ನು ಪಡೆದ ಈ ಕಥೆಯು ವ್ಯಾಸ ಮಹಾಭಾರತದ ಕರ್ಣಪರ್ವ (ಅಧ್ಯಾಯ ೨೪) ದಲ್ಲಿ ಬರುತ್ತದೆ. ಪರಶುರಾಮನ ಶಿಷ್ಯನಾದ ಕರ್ಣನ ಮಹತ್ತನ್ನು ಹೇಳುತ್ತಾ ಈ ಕಥೆಯನ್ನು ದುರ್ಯೋಧನನು ಶಲ್ಯನಿಗೆ ಹೇಳಿದನು.]

ಭಾರ್ಗವರ ಕುಲದಲ್ಲಿ ಮಹಾತಪಸ್ವಿ ಜಮದಗ್ನಿಯು ಜನಿಸಿದನು. ಅವನ ತೇಜೋಗುಣಾನ್ವಿತ ಮಗನು ರಾಮನೆಂದು ವಿಖ್ಯಾತನಾದನು. ಅಸ್ತ್ರಗಳಿಗೋಸ್ಕರವಾಗಿ ಅವನು ಪ್ರಸನ್ನಾತ್ಮನಾಗಿ, ನಿಯತಾತ್ಮನಾಗಿ ಮತ್ತು ಇಂದ್ರಿಯಗಳನ್ನು ಸಂಯಮದಲ್ಲಿರಿಸಿಕೊಂಡು ತೀವ್ರ ತಪಸ್ಸನ್ನಾಚರಿಸಿ ಅವನು ಭವನನ್ನು ತೃಪ್ತಿಗೊಳಿಸಿದನು. ಅವನ ಭಕ್ತಿ ಮತ್ತು ಸಂಯಮಗಳಿಗೆ ಮೆಚ್ಚಿದ ಮಹಾದೇವ ಶಂಕರನು ಅವನ ಹೃದಯದಲ್ಲಿರುವುದನ್ನು ತಿಳಿದು ಪ್ರತ್ಯಕ್ಷನಾದನು. ಈಶ್ವರನು ಹೇಳಿದನು:

> “ರಾಮ! ಸಂತುಷ್ಟನಾಗಿದ್ದೇನೆ. ನಿನಗೆ ಮಂಗಳವಾಗಲಿ! ನೀನು ಬಯಸಿರುವುದು ನನಗೆ ತಿಳಿದಿದೆ. ನಿನ್ನನ್ನು

> ಪರಿಶುದ್ಧಗೊಳಿಸಿಕೋ! ಬಯಸಿದುದೆಲ್ಲವನ್ನೂ ಪಡೆದುಕೊಳ್ಳುವೆ! ನೀನು ಪವಿತ್ರನಾದಾಗ ನಾನು ನಿನಗೆ ಆ ಅಸ್ತ್ರಗಳನ್ನು ನೀಡುತ್ತೇನೆ. ಅಸ್ತ್ರಗಳು ಅಪಾತ್ರನನ್ನು ಮತ್ತು ಅಸಮರ್ಥನನ್ನು ಸುಟ್ಟುಬಿಡುತ್ತವೆ.”

ದೇವದೇವ ಶೂಲಿಯು ಹೀಗೆ ಹೇಳಲು ಜಾಮದಗ್ನಿ ರಾಮನು ಮಹಾತ್ಮ ಪ್ರಭುವಿಗೆ ಶಿರಸಾವಹಿಸಿ ಪ್ರತ್ಯುತ್ತರಿಸಿದನು:

> “ದೇವೇಶ! ನಾನು ಅಸ್ತ್ರಧಾರಣೆಗೆ ಪಾತ್ರನೆಂದು ನಿನಗೆ ಎಂದು ಅನಿಸುತ್ತದೆಯೋ ಆಗಲೇ ನೀನು ನಿನ್ನ ಶುಶ್ರೂಷಣೆಯಲ್ಲಿ ನಿರತನಾದ ನನಗೆ ದಯಪಾಲಿಸಬೇಕು!”

ಆಗ ಅವನು ತಪಸ್ಸು, ದಮ, ನಿಯಮ, ಪೂಜನ, ಉಪಾಹಾರ, ಬಲಿ, ಹೋಮ, ಮತ್ತು ಮಂತ್ರಾದಿಗಳಿಂದ ಶರ್ವನನ್ನು ಅನೇಕ ವರ್ಷಗಳವರೆಗೆ ಆರಾಧಿಸಿದನು. ಮಹಾತ್ಮ ಭಾರ್ಗವನ ಮೇಲೆ ಮಹಾದೇವನು ಪ್ರಸನ್ನನಾದನು. ಶಂಕರನು ದೇವಿಯ ಸಮೀಪದಲ್ಲಿಯೇ

> “ದೃಢವ್ರತನಾದ ಈ ರಾಮನಿಗೆ ನನ್ನಲ್ಲಿ ಸತತ ಭಕ್ತಿಯಿದೆ!”

ಎಂದು ರಾಮನ ಅನೇಕ ಗುಣಗಳನ್ನು ವರ್ಣಿಸಿದನು. ಈ ರೀತಿಯ ಅವನ ಗುಣಗಳನ್ನು ಸಂತೋಷಗೊಂಡ ಅರಿಸೂದನ ಪ್ರಭುವು ಅನೇಕ ಬಾರಿ ದೇವತೆಗಳು ಮತ್ತು ಪಿತೃಗಳ ಸಮಕ್ಷಮದಲ್ಲಿ ಹೇಳಿದನು.

ಇದೇ ಸಮಯದಲ್ಲಿ ದೈತ್ಯರು ಮಹಾಬಲಶಾಲಿಗಳಾದರು. ಅವರು ದರ್ಪಮೋಹಗಳಿಂದ ದಿವೌಕಸರನ್ನು ಬಾಧಿಸುತ್ತಿದ್ದರು. ಆಗ ದೇವತೆಗಳೆಲ್ಲರೂ ಒಟ್ಟಾಗಿ ಅವರನ್ನು ಸಂಹರಿಸಲು ನಿಶ್ಚಯಿಸಿ ಶತ್ರುವಧೆಗಾಗಿ ಬಹಳ ಪ್ರಯತ್ನನಡೆಸಿದರು. ಆದರೆ ಅವರನ್ನು ಗೆಲ್ಲರು ಸಾಧ್ಯವಾಗಲಿಲ್ಲ. ಆಗ ದೇವತೆಗಳು ಮಹೇಶ್ವರನಲ್ಲಿಗೆ ಹೋಗಿ ಅವನನ್ನು ಭಕ್ತಿಯಿಂದ ಪ್ರಸನ್ನಗೊಳಿಸಿ ಶತ್ರುಗಣಗಳನ್ನು ಸಂಹರಿಸೆಂದು ಕೇಳಿಕೊಂಡರು. ಶತ್ರುಗಳ ಕ್ಷಯವಾಗುವುದೆಂದು ದೇವತೆಗಳಿಗೆ ಪ್ರತಿಜ್ಞೆಮಾಡಿ ದೇವ ಶಂಕರನು ಭಾರ್ಗವ ರಾಮನನ್ನು ಕರೆದು ಹೀಗೆ ಹೇಳಿದನು:

> “ಭಾರ್ಗವ! ಒಂದಾಗಿರುವ ದೇವತೆಗಳ ರಿಪುಗಳೆಲ್ಲರನ್ನೂ ಸಂಹರಿಸು! ಲೋಕಗಳ ಕಾಮಾರ್ಥಹಿತಕ್ಕಾಗಿ ಮತ್ತು ನನ್ನ ಪ್ರೀತಿಗಾಗಿ ಈ ಕೆಲಸವನ್ನು ಮಾಡು!”

ರಾಮನು ಹೇಳಿದನು:

> “ದೇವೇಶ! ಅಸ್ತ್ರವಿದೆಯನ್ನೇ ತಿಳಿಯದಿರುವ ನನಗೆ ಕೃತಾಸ್ತ್ರರೂ ಯುದ್ಧದುರ್ಮದರೂ ಆದ ದಾನವರೆಲ್ಲರನ್ನೂ ಸಂಹರಿಸಲು ಹೇಗೆ ಸಾಧ್ಯ?”

ಈಶ್ವರನು ಹೇಳಿದನು:

> “ಹೋಗು! ನನ್ನ ಅನುಧ್ಯಾನದಿಂದ ನೀನು ದಾನವರನ್ನು

ಸಂಹರಿಸುತ್ತೀಯೆ. ಆ ರಿಪುಗಳೆಲ್ಲರನ್ನೂ ಜಯಿಸಿ ಪುಷ್ಕಲ ಗುಣಗಳನ್ನೂ ಪಡೆಯುವೆ!”

ಅವನ ಈ ಮಾತನ್ನು ಕೇಳಿ ಎಲ್ಲವನ್ನೂ ಸ್ವೀಕರಿಸಿ ರಾಮನು ಸ್ವಸ್ತಿವಾಚನಗಳನ್ನು ಮಾಡಿಸಿಕೊಂಡು ದಾನವರಿದ್ದಲ್ಲಿಗೆ ಹೋದನು. ಭಾರ್ಗವನು ಮದದರ್ಪಬಲಾನ್ವಿತ ದೇವಶತ್ರುಗಳನ್ನು ವಜ್ರಾಯುಧ ಸ್ಪರ್ಷಕ್ಕೆ ಸಮಾನ ಪ್ರಹಾರಗಳಿಂದಲೇ ವಧಿಸಿದನು. ದ್ವಿಜೋತ್ತಮ ಜಾಮದಗ್ನನ ದೇಹವನ್ನು ದಾನವರು ಗಾಯಗೊಳಿಸಿದ್ದರು. ಸ್ಥಾಣುವು ಅವನನ್ನು ಸ್ಪರ್ಶಿಸಿದ ಮಾತ್ರದಿಂದ ಅವನು ಗಾಯಗಳಿಲ್ಲದವನಾದನು. ಅವನ ಕರ್ಮಗಳಿಂದ ಪ್ರೀತನಾದ ಭಗವಾನನು ಆ ಮಹಾತ್ಮ ಬ್ರಹ್ಮವಿದು ಭಾರ್ಗವನಿಗೆ ವರಗಳನ್ನಿತ್ತನು. ಪ್ರೀತಿಯುಕ್ತ ದೇವದೇವ ಶೂಲಿಯು ಹೇಳಿದನು:

“ಭೃಗುನಂದನ! ಶಸ್ತ್ರಗಳ ನಿಪಾತಗಳಿಂದ ನಿನ್ನ ಶರೀರದಲ್ಲಿ ಆಗಿರುವ ಗಾಯಗಳಿಂದ ಮನುಷ್ಯಸಂಬಧವಾದ ನಿನ್ನ ಕರ್ಮಗಳೆಲ್ಲವೂ ಕಳೆದುಹೋದವು (ನೀನೀಗ ಪೂತನಾಗಿ ದೇವಸದೃಶನಾಗಿರುವೆ!). ನಿನ್ನ ಇಚ್ಛೆಯಂತೆಯೇ ನನ್ನಿಂದ ದಿವ್ಯಾಸ್ತ್ರಗಳನ್ನು ಸ್ವೀಕರಿಸು!”

ಆಗ ಮನಸ್ಸಿನಲ್ಲಿ ಬಯಸಿದ ಬಹುವಿಧದ ಅಸ್ತ್ರಗಳನ್ನೂ ವರಗಳನ್ನೂ ಪಡೆದ ರಾಮನು ಶಿವನಿಗೆ ಶಿರಸಾ ಪ್ರಣಾಮಮಾಡಿ ದೇವೇಶನ ಅನುಜ್ಞೆಯನ್ನು ಪಡೆದು ಹೊರಟುಹೋದನು.

# ಪ್ರಭಾಸಕ್ಷೇತ್ರ ಮಹಾತ್ಮೆ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 34ರಲ್ಲಿ ಹೇಳುತ್ತಾನೆ.

ದಕ್ಷನಿಗೆ ಅನೇಕ ಕನ್ಯೆಯರಿದ್ದರು. ಅವರಲ್ಲಿ ಇಪ್ಪತ್ತೇಳು ಕನ್ಯೆಯರನ್ನು ದಕ್ಷನು ಸೋಮನಿಗೆ ಕೊಟ್ಟನು. ಗಣನೆಯ ಸಲುವಾಗಿ ಸೋಮನ ಆ ಶುಭಲಕ್ಷಣ ಪತ್ನಿಯರು ನಕ್ಷತ್ರಯೋಗನಿರತರಾಗಿದ್ದರು. ಆ ವಿಶಾಲಾಕ್ಷಿಯರೆಲ್ಲರೂ ಭುವಿಯಲ್ಲಿಯೇ ಅಪ್ರತಿಮ ರೂಪವುಳ್ಳವರಾಗಿದ್ದರು. ಅವರೆಲ್ಲರಲ್ಲಿ ರೋಹಿಣಿಯು ಅತ್ಯಂತ ರೂಪಸಂಪದೆಯಾಗಿದ್ದಳು. ಆದುದರಿಂದ ಭಗವಾನ್ ನಿಶಾಕರನು ಅವಳಲ್ಲಿಯೇ ಹೆಚ್ಚು ಪ್ರೀತಿಯನ್ನಿಟ್ಟಿದ್ದನು. ಅವಳೂ ಕೂಡ ಅವನ ಹೃದಯ ವಲ್ಲಭೆಯಾಗಿದ್ದಳು. ಅವನು ಸದಾ ಅವಳೊಂದಿಯೇ ಭೋಗಿಸುತ್ತಿದ್ದನು. ಮೊದಲಿನಿಂದಲೂ ಸೋಮನು ರೋಹಿಣಿಯಲ್ಲಿಯೇ ವಾಸಿಸುತ್ತಿದ್ದನು. ಇದರಿಂದ ನಕ್ಷತ್ರಗಳು ಆ ಮಹಾತ್ಮನ ಮೇಲೆ ಕುಪಿತರಾದರು. ಆ ಅತಂದ್ರಿತರು ತಂದೆ ಪ್ರಜಾಪತಿಯಲ್ಲಿಗೆ ಹೋಗಿ ಹೇಳಿದರು:

> “ಸೋಮನು ನಮ್ಮಲ್ಲಿ ವಾಸಿಸುವುದೇ ಇಲ್ಲ. ಸದಾ ರೋಹಿಣಿಯನ್ನೇ ಪ್ರೀತಿಸುತ್ತಾನೆ. ನಾವೆಲ್ಲರೂ ನಿನ್ನ ಬಳಿಯಲ್ಲಿಯೇ ಒಟ್ಟಿಗೇ ಇದ್ದುಬಿಡುತ್ತೇವೆ. ನಿನ್ನ


RAVI VARMA PRESS PICTURE DEPOT
BOMBAY

ಚರಣತತ್ಪರರಾಗಿ ನಿಯತಾಹಾರದಿಂದ ತಪಸ್ಸನ್ನು ಮಾಡುತ್ತಾ ವಾಸಿಸುತ್ತೇವೆ.”

ಅವರ ಆ ಮಾತನ್ನು ಕೇಳಿದ ದಕ್ಷನು ಸೋಮನಿಗೆ ಹೇಳಿದನು:

“ಭಾರ್ಯೆಯರಲ್ಲಿ ಸಮನಾಗಿ ವರ್ತಿಸು. ಇಲ್ಲದಿದ್ದರೆ ಮಹಾ ಅಧರ್ಮವು ತಾಗೀತು!”

ಅವರೆಲ್ಲರಿಗೂ ದಕ್ಷನು ಹೇಳಿದನು:

“ಸೋಮನ ಬಳಿ ಹೋಗಿ. ನನ್ನ ಶಾಸನದಂತೆ ಅವನು ಎಲ್ಲರಲ್ಲಿಯೂ ಸಮನಾಗಿ ವರ್ತಿಸುತ್ತಾನೆ.”

ಬೀಳ್ಕೊಡಲ್ಪಟ್ಟ ಅವರು ನಂತರ ಶೀತಾಂಶುವಿನ ಭವನಕ್ಕೆ ತೆರಳಿದರು. ಆದರೂ ಕೂಡ ಭಗವಾನ್ ಸೋಮನು ಮೊದಲಿನಂತೆ ರೋಹಿಣಿಯೊಡನೆಯೇ ವಾಸಿಸುತ್ತಿದ್ದನು ಮತ್ತು ಪುನಃ ಪುನಃ ಅವಳನ್ನೇ ಪ್ರೀತಿಸುತ್ತಿದ್ದನು. ಆಗ ಅವರೆಲ್ಲರೂ ಒಟ್ಟಿಗೇ ಪುನಃ ತಂದೆಯಲ್ಲಿ ಹೇಳಿಕೊಂಡರು:

“ನಿನ್ನ ಶುಶ್ರೂಷಣೆಯಲ್ಲಿ ನಿನ್ನ ಆಶ್ರಮದಲ್ಲಿಯೇ ವಾಸಿಸುತ್ತೇವೆ. ಸೋಮನು ನಮ್ಮೊಡನೆ ವಾಸಿಸುತ್ತಿಲ್ಲ. ನಿನ್ನ ವಚನದಂತೆ ಅವನು ಮಾಡುತ್ತಿಲ್ಲ.”

ಅವರ ಆ ಮಾತನ್ನು ಕೇಳಿ ದಕ್ಷನು ಸೋಮನಿಗೆ ಹೇಳಿದನು:

> “ವಿರೋಚನ! ಭಾರ್ಯೆಯರಲ್ಲಿ ಸಮವಾಗಿ ವರ್ತಿಸು. ಇಲ್ಲವಾದರೆ ನಾನು ನಿನ್ನನ್ನು ಶಪಿಸುತ್ತೇನೆ.”

ದಕ್ಷನ ಆ ಮಾತನ್ನು ಅನಾದರಿಸಿ ಭಗವಾನ್ ಶಶಿಯು ರೋಹಿಣಿಯ ಜೊತೆಯಲ್ಲಿಯೇ ವಾಸಿಸುತ್ತಿದ್ದನು. ಇದರಿಂದ ಅವರು ಪುನಃ ಕುಪಿತರಾದರು. ತಂದೆಯಲ್ಲಿಗೆ ಹೋಗಿ ಶಿರಬಾಗಿ ನಮಸ್ಕರಿಸಿ ಹೇಳಿದರು:

> “ಸೋಮನು ನಮ್ಮೊಡನೆ ವಾಸಿಸುತ್ತಿಲ್ಲ. ಆದುದರಿಂದ ನಮಗೆ ನೀನೇ ಶರಣು. ಚಂದ್ರಮನು ಸದಾ ರೋಹಿಣಿಯಲ್ಲಿಯೇ ವಾಸಿಸುತ್ತಾನೆ. ಸೋಮನು ನಮ್ಮನ್ನು ಸ್ವೀಕರಿಸುವಂತೆ ಮಾಡಿ ನೀನೇ ನಮ್ಮೆಲ್ಲರನ್ನೂ ಕಾಪಾಡಬೇಕು.”

ಅದನ್ನು ಕೇಳಿ ಭಗವಾನನು ಕ್ರುದ್ಧನಾಗಿ ರೋಷದಿಂದ ಯಕ್ಷ್ಮ ರೋಗವನ್ನು ಸೃಷ್ಟಿಸಿದನು. ಅದು ಉಡುಪತಿ ಚಂದ್ರನನ್ನು ಪ್ರವೇಶಿಸಿತು. ಯಕ್ಷ್ಮದಿಂದ ಪೀಡಿತನಾದ ಶಶಿಯು ದಿನದಿನವೂ ಕ್ಷೀಣಿಸಿದನು. ಯಕ್ಷ್ಮದಿಂದ ಮುಕ್ತಿಯನ್ನು ಪಡೆಯಲು ಪ್ರಯತ್ನವನ್ನೂ ಮಾಡಿದನು. ನಿಶಾಕರನು ವಿವಿಧ ಯಜ್ಞ-ಯಾಗಾದಿಗಳನ್ನೂ ಮಾಡಿದನು. ಆದರೂ ಆ ಶಾಪದಿಂದ ವಿಮೋಚನೆಹೊಂದದೇ ಕ್ಷಯವಾಗುತ್ತಾ ಹೋದನು. ಸೋಮನು ಕ್ಷೀಣನಾಗುತ್ತಿರಲು ಔಷಧಿಗಳೂ ಬೆಳೆಯಲಿಲ್ಲ. ಎಲ್ಲೆಡೆ ಎಲ್ಲ ಔಷಧಿಗಳಲ್ಲಿನ ಋಚಿ-ರಸ-ಶಕ್ತಿಗಳು ಉಡುಗಿಹೋದವು. ನಿಶಾಕರನು ಕ್ಷೀಣಿಸುತ್ತಿರಲು ಔಷಧಿಗಳ

ಕ್ಷಯಯೂ ಉಂಟಾಗಲು ಪ್ರಾಣಿಗಳೂ ಸರ್ವ ಪ್ರಜೆಗಳೂ ಕೃಶರಾಗಿ ನಾಶವಾಗತೊಡಗಿದವು. ಆಗ ದೇವತೆಗಳು ಒಟ್ಟಾಗಿ ಸೋಮನಿಗೆ ಹೇಳಿದರು:

> "ನಿನ್ನ ರೂಪವು ಹೀಗೇಕಾಯಿತು? ಪ್ರಕಾಶಿಸುತ್ತಿಲ್ಲವಲ್ಲ? ನಮಗೆ ಇದರ ಕಾರಣವೆಲ್ಲವನ್ನೂ ಈ ಮಹಾ ಭಯವು ಎಲ್ಲಿಂದ ಉಂಟಾಯಿತೆನ್ನುವುದನ್ನೂ ಹೇಳು. ನಿನ್ನ ಮಾತನ್ನು ಕೇಳಿ ನಾವು ಮಾಡಬೇಕಾದುದನ್ನು ಮಾಡುತ್ತೇವೆ."

ಅವರ ಮಾತಿಗೆ ಶಶಲಕ್ಷಣನು ಉತ್ತರಿಸಿ ಅವರೆಲ್ಲರಿಗೆ ಶಾಪದ ಕಾರಣವನ್ನೂ ಮತ್ತು ತನಗೆ ಯಕ್ಷ್ಮರೋಗವು ಹೇಗೆ ಬಂದಿತೆನ್ನುವುದನ್ನೂ ಹೇಳಿದನು. ಅವನ ಮಾತನ್ನು ಕೇಳಿ ದೇವತೆಗಳು ದಕ್ಷನಲ್ಲಿಗೆ ಹೋಗಿ ಹೇಳಿದರು:

> "ಭಗವನ್! ಪ್ರಸನ್ನನಾಗು! ಸೋಮನ ಶಾಪವನ್ನು ಹಿಂದೆತೆಗೆದುಕೋ! ಚಂದ್ರನು ಕ್ಷೀಣನಾಗಿ ಹೋಗಿದ್ದಾನೆ. ಒಂದು ಸ್ವಲ್ಪಮಾತ್ರ ಉಳಿದುಕೊಂಡಿರುವವನಂತಿದ್ದಾನೆ. ಅವನ ಕ್ಷಯದಿಂದಾಗಿ ಪ್ರಜೆಗಳೂ ಕೂಡ ಕ್ಷಯಿಸಿ ಹೋಗುತ್ತಿದ್ದಾರೆ. ವಿವಿಧ ಬೇರು-ಔಷಧ-ಬೀಜಗಳು ಮತ್ತು ನಾವು ಕ್ಷಯವಾಗಿ ಹೋಗುತ್ತಿದ್ದೇವೆ. ಆದುದರಿಂದ ಪ್ರಸನ್ನನಾಗಬೇಕು!"

ಹೀಗೆ ಹೇಳಲು ಪ್ರಜಾಪತಿಯು ಯೋಚಿಸಿ ಈ ಮಾತನ್ನಾಡಿದನು:

“ನನ್ನ ಮಾತಿನ ಹೊರತಾಗಿ ನಡೆಯುವಂತೆ ಮಾಡಲು ಸಾಧ್ಯವಿಲ್ಲ. ಮಹಾಭಾಗರೇ! ಆದರೆ ಯಾವುದೋ ಒಂದು ಕಾರಣದಿಂದ ಅದು ಪರಿಹಾರಗೊಳ್ಳುತ್ತದೆ. ಶಶಿಯು ನಿತ್ಯವೂ ಸರ್ವ ಭಾರ್ಯೆಯರಲ್ಲಿ ಸಮನಾಗಿ ನಡೆದುಕೊಳ್ಳಲಿ. ಶ್ರೇಷ್ಠ ಸರಸ್ವತೀ ತೀರ್ಥದಲ್ಲಿ ಶಶಲಕ್ಷಣನು ಮುಳುಗಲಿ. ಆಗ ಅವನು ಪುನಃ ವರ್ಧಿಸುತ್ತಾನೆ. ನನ್ನ ಈ ಮಾತು ಸತ್ಯ. ಅರ್ಧಮಾಸ ಸೋಮನು ನಿತ್ಯವೂ ಕ್ಷಯಿಸುತ್ತಾ ಹೋಗುತ್ತಾನೆ. ಮಾಸಾರ್ಧದಲ್ಲಿ ಅವನು ಸದಾ ವೃದ್ಧಿಯನ್ನೂ ಹೊಂದುತ್ತಾನೆ. ನನ್ನ ಈ ಮಾತು ಸತ್ಯ. ಅವನು ಪಶ್ಚಿಮ ಸಮುದ್ರಕ್ಕೆ ಹೋಗಿ ಅಲ್ಲಿ ಸರಸ್ವತೀ ನದಿಯು ಸಮುದ್ರವನ್ನು ಸೇರುವಲ್ಲಿ ದೇವೇಶ ಶಿವನನ್ನು ಆರಾಧಿಸಲಿ. ಆಗ ಅವನು ಕಾಂತಿಯನ್ನು ಹೊಂದುತ್ತಾನೆ.”

ಅನಂತರ ಋಷಿಶಾಸನದಂತೆ ಸೋಮನು ಸರಸ್ವತಿಯ ಪರಮ ತೀರ್ಥವಾದ ಪ್ರಭಾಸಕ್ಕೆ ಹೋದನು. ಆ ಮಹಾದ್ಯುತಿಯು ಅಲ್ಲಿ ಅಮವಾಸ್ಯೆಯಂದು ಮುಳುಗಿ ಮಹಾತೇಜಸ್ಸಿನಿಂದ ಲೋಕಗಳನ್ನು ಬೆಳಗತೊಡಗಿದನು ಮತ್ತು ಶೀತಲಕಿರಣಗಳನ್ನೂ ಪಡೆದನು. ದೇವತೆಗಳೆಲ್ಲರೂ ಪುಷ್ಕಲ ಪ್ರಭೆಗಳನ್ನು ಪಡೆದು ಸೋಮನೊಂದಿಗೆ ದಕ್ಷನ ಎದಿರು ಬಂದರು. ಆಗ ಭಗವಾನ್ ಪ್ರಜಾಪತಿಯು ಸರ್ವ ದೇವತೆಗಳನ್ನೂ ಕಳುಹಿಸಿ, ಪ್ರೀತನಾಗಿ ಸೋಮನಿಗೆ ಇನ್ನೊಮ್ಮೆ ಹೇಳಿದನು:

“ಪುತ್ರ! ಸ್ತ್ರೀಯರನ್ನು ಮತ್ತು ವಿಪ್ರರನ್ನು ಎಂದೂ ಅವಮಾನಿಸಬೇಡ! ಸದಾ ಜಾಗರೂಕತೆಯಲ್ಲಿದ್ದುಕೊಂಡು ನನ್ನ ಶಾಸನದಂತೆ ಮಾಡು. ಹೋಗು!”

ಬೀಳ್ಕೊಂಡ ಅವನು ತನ್ನ ಭವನಕ್ಕೆ ತೆರಳಿದನು. ಪ್ರಜೆಗಳೂ ಭೋಜನಗಳೂ ಹಿಂದಿನಂತೆ ಮುದಿತಗೊಂಡವು.

ಶ್ರೀಮಾನ್ ಶಶಲಕ್ಷಣನು ನಿತ್ಯವೂ ಅಮಾವಾಸ್ಯೆಯಂದು ಉತ್ತಮ ತೀರ್ಥ ಪ್ರಭಾಸದಲ್ಲಿ ಸ್ನಾನಮಾಡಿ ಪುಷ್ಟನಾಗುತ್ತಾನೆ. ಇದರಲ್ಲಿ ಮುಳುಗಿ ಚಂದ್ರಮನು ಪರಮ ಪ್ರಭೆಯನ್ನು ಪಡೆದುದರಿಂದಲೇ ಇದನ್ನು ಪ್ರಜೆಗಳು ಪ್ರಭಾಸ ಎಂದು ಕರೆಯುತ್ತಾರೆ.

# ತ್ರಿತಾಖ್ಯಾನ

ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 35ರಲ್ಲಿ ಹೇಳುತ್ತಾನೆ.

ಪೂರ್ವಯುಗದಲ್ಲಿ ಆದಿತ್ಯಸನ್ನಿಭರಾದ ಮೂವರು ಸಹೋದರ ಮುನಿಗಳಿದ್ದರು: ಏಕತ, ದ್ವಿತ ಮತ್ತು ತ್ರಿತ. ಅವರೆಲ್ಲರೂ ಪ್ರಜಾಪತಿಯ ಸಮನಾಗಿದ್ದರು ಮತ್ತು ಹಾಗೆಯೇ ಪ್ರಜಾವಂತರಾಗಿದ್ದರು. ತಪಸ್ಸಿನಿಂದಾಗಿ ಎಲ್ಲರೂ ಬ್ರಹ್ಮಲೋಕವನ್ನು ಗೆದ್ದ ಬ್ರಹ್ಮವಾದಿಗಳಾಗಿದ್ದರು. ಸದಾ ಧರ್ಮರತನಾಗಿದ್ದ ಅವರ ತಂದೆ

ಗೌತಮನು ಅವರ ತಪಸ್ಸು-ನಿಯಮ-ದಮಗಳಿಂದ ಪ್ರೀತನಾಗಿದ್ದನು. ದೀರ್ಘಕಾಲದವರೆಗೆ ಅವರಿಗೆ ಪ್ರೀತಿಯನ್ನಿತ್ತು ಭಗವಾನ್ ಗೌತಮನು ತನಗೆ ಅನುರೂಪ ಸ್ಥಾನಕ್ಕೆ ಹೊರಟುಹೋದನು. ಅವನು ಸ್ವರ್ಗಕ್ಕೆ ಹೋಗಲು ಆ ಮಹಾತ್ಮನಿಂದ ಮೊದಲು ಯಜ್ಞಯಾಗಾದಿಗಳನ್ನು ನಡೆಸಿಕೊಳ್ಳುತ್ತಿದ್ದ ರಾಜರುಗಳು ಅವನ ಪುತ್ರರನ್ನು ಗೌರವಿಸತೊಡಗಿದರು. ಅವರಲ್ಲಿ ತನ್ನ ತಂದೆಯಂತೆಯೇ ತ್ರಿತನು ಕರ್ಮ ಮತ್ತು ಅಧ್ಯಯನಗಳಲ್ಲಿ ಅತ್ಯಂತ ಶ್ರೇಷ್ಠತೆಯನ್ನು ಪಡೆದಿದ್ದನು. ಪುಣ್ಯಲಕ್ಷಣ ಮಹಾಭಾಗ ಮುನಿಗಳೆಲ್ಲರೂ ಆ ಮಹಾಭಾಗನ ವಿದ್ವತ್ತನ್ನೇ ಗೌರವಿಸುತ್ತಿದ್ದರು. ಒಮ್ಮೊಮ್ಮೆ ಸಹೋದರರಾದ ಏಕ ಮತ್ತು ದ್ವಿತರು ವಿಶೇಷ ಧನಕ್ಕಾಗಿಯೇ ಯಜ್ಞಗಳನ್ನು ನಡೆಸಿಕೊಡುತ್ತಿದ್ದರು. ಅವರು ಹೀಗೆ ಯೋಚಿಸಿದರು:

> “ತ್ರಿತನನ್ನು ಕರೆದುಕೊಂಡು ಯಜ್ಞಗಳನ್ನು ನಡೆಸಿ ನಂತರ ಗೋವುಗಳನ್ನು ಪ್ರತಿಗ್ರಹಿಸೋಣ! ಯಜ್ಞದ ಮಹಾಫಲವನ್ನು ಪಡೆದು ಹೃಷ್ಟರಾಗಿ ಸೋಮವನ್ನು ಸೇವಿಸೋಣ!”

ಹೀಗೆ ಆ ಮೂವರು ಸಹೋದರರು ಮಾಡಿದರು ಕೂಡ. ಗೋವುಗಳಿಗಾಗಿ ಎಲ್ಲರೂ ಸೇರಿ ಯಜ್ಞಗಳನ್ನು ನಡೆಸಿದರು. ಯಜ್ಞಗಳನ್ನು ಮುಗಿಸಿ ಅನೇಕ ಗೋವುಗಳನ್ನು ಅವರು ಪಡೆದರು. ಯಜ್ಞಕರ್ಮಗಳಿಂದ ವಿಧಾನಪೂರ್ವಕವಾಗಿ ಗೋವುಗಳನ್ನು ಸ್ವೀಕರಿಸಿ ಆ ಮಹಾತ್ಮ ಮಹರ್ಷಿಗಳು ಪೂರ್ವದಿಕ್ಕಿನಲ್ಲಿ ಪ್ರಯಾಣಮಾಡಿದರು.

ಅವರಲ್ಲಿ ಹರ್ಷಿತ ತ್ರಿತನು ಮುಂದುಗಡೆ ಹೋಗುತ್ತಿದ್ದನು. ಏಕತ ಮತ್ತು ದ್ವಿತರು ಹಿಂದಿನಿಂದ ಗೋವುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಆ ಮಹಾ ಪಶುಗಣವನ್ನು ನೋಡಿ ಅವರಿಬ್ಬರಿಗೂ ಒಂದು ಯೋಚನೆಯುಂಟಾಯಿತು:

> "ತ್ರಿತನಿಗೆ ದೊರಕದಂತೆ ನಾವು ಈ ಎಲ್ಲ ಗೋವುಗಳನ್ನೂ ಹೇಗೆ ನಮ್ಮದಾಗಿಸಿಕೊಳ್ಳಬಹುದು?"

ಎಂದು. ಆ ಪಾಪಿ ಏಕತ ಮತ್ತು ದ್ವಿತರು ಅನ್ಯೋನ್ಯರಲ್ಲಿ ಮಾತನಾಡಿಕೊಂಡರು:

> "ತ್ರಿತನು ಯಜ್ಞಗಳಲ್ಲಿ ಕುಶಲನು. ತ್ರಿತನು ವೇದಗಳಲ್ಲಿ ನಿಷ್ಠಿತನು. ತ್ರಿತನು ಇನ್ನೂ ಇತರ ಬಹುರೀತಿಯ ಯಜ್ಞಗಳನ್ನು ಮಾಡಿಸಿ ಅನೇಕ ಗೋವುಗಳನ್ನು ಸಂಪಾದಿಸಿಕೊಳ್ಳಬಹುದು. ನಾವಿಬ್ಬರೂ ಒಟ್ಟಾಗಿ ಗೋವುಗಳನ್ನು ಹೊಡೆದುಕೊಂಡು ಹೊರಟುಹೋಗೋಣ. ನಮ್ಮಿಂದ ಬೇರ್ಪಟ್ಟ ತ್ರಿತನು ಬೇಕಾದಲ್ಲಿಗೆ ಹೋಗಲಿ."

ರಾತ್ರಿ ವೇಳೆ ಅವರು ಹೋಗುತ್ತಿದ್ದ ದಾರಿಯಲ್ಲಿ ತೋಳವೊಂದಿತ್ತು. ಅಲ್ಲಿಯೇ ಹತ್ತಿರದಲ್ಲಿ ಸರಸ್ವತೀ ತೀರದಲ್ಲಿ ಒಂದು ದೊಡ್ಡ ಬಾವಿಯೂ ಇದ್ದಿತು. ದಾರಿಯಲ್ಲಿ ಎದುರಿಗೇ ನಿಂತಿದ್ದ ತೋಳವನ್ನು ನೋಡಿ ತ್ರಿತನು ಭಯದಿಂದ ಓಡುತ್ತಾ ಆ ಅಗಾಧ-ಮಹಾಘೋರ-

ಸರ್ವಭೂತಭಯಂಕರ ಬಾವಿಯಲ್ಲಿ ಬಿದ್ದನು. ಬಾವಿಯಲ್ಲಿ ಬಿದ್ದ ಮುನಿಸತ್ತಮ ಮಹಾಭಾಗ ತ್ರಿತನು ಆರ್ತನಾದಗೈದನು. ಅದನ್ನು ಅವನ ಅಣ್ಣಂದಿರಿಬ್ಬರೂ ಕೇಳಿಸಿಕೊಂಡರು. ಅವನು ಬಾವಿಯಲ್ಲಿ ಬಿದ್ದುದನ್ನು ತಿಳಿದೂ ಕೂಡ ಸಹೋದರರಾದ ಏಕತ-ದ್ವಿತರು ತೋಳದ ಭಯದಿಂದ ಮತ್ತು ಲೋಭದಿಂದ ಅವನನ್ನು ಅಲ್ಲಿಯೇ ಬಿಟ್ಟು ನಡೆದರು. ಗೋವುಗಳ ಆಸೆಬುರುಕರಾದ ಅಣ್ಣಂದಿರಿಂದ ತೊರೆಯಲ್ಪಟ್ಟ ಆ ಮಹಾತಪಸ್ವಿ ತ್ರಿತನು ನೀರಿಲ್ಲದ, ಧೂಳಿನಿಂದ ಮುಕ್ಕಿ ಹೋಗಿದ್ದ ಆ ಬಾವಿಯಲ್ಲಿ ಒದ್ದಾಡಿದನು.

ಪಾಪಕರ್ಮಿಯು ನರಕದಲ್ಲಿ ಹೇಗೋ ಹಾಗೆ ಬೇರು-ಹುಲ್ಲುಗಳಿಂದ ತುಂಬಿಹೋಗಿದ್ದ ಆ ಬಾವಿಯಲ್ಲಿ ಬಿದ್ದಿದ್ದ ತ್ರಿತನು ತನ್ನ ದುಃಸ್ಥಿತಿಯ ಕುರಿತು ಯೋಚಿಸಿದನು. ಮೃತ್ಯುಭೀತಿಯಿಂದ ಮತ್ತು ಸೋಮವು ದೊರಕದೇ ಇದ್ದುದರಿಂದ ಆ ಪ್ರಾಜ್ಞನು ಬುದ್ಧಿಯನ್ನುಪಯೋಗಿಸಿ

> "ಇನ್ನು ಇಲ್ಲಿಯೇ ಇದ್ದುಕೊಂಡು ಹೇಗೆ ಸೋಮರಸವನ್ನು ಪಡೆಯಬಹುದು?"

ಎಂದು ಯೋಚಿಸತೊಡಗಿದನು. ಹೀಗೆ ಆ ಬಾವಿಯಲ್ಲಿ ಯೋಚಿಸುತ್ತಿದ್ದ ಆ ಮಹಾತಪಸ್ವಿಯು ಅದೃಷ್ಟವೋ ಎಂಬಂತೆ ಅಲ್ಲಿ ನೇತಾಡುತ್ತಿದ್ದ ಒಂದು ಉದ್ದನೆಯ ಬಳ್ಳಿಯನ್ನು ನೋಡಿದನು. ಆಗ ಧೂಳಿನಿಂದ ತುಂಬಿಹೋಗಿದ್ದ ಆ ಬಾವಿಯಲ್ಲಿ ಮುನಿಯು ನೀರನ್ನು ಸ್ಮರಿಸಿಕೊಂಡನು. ಅಗ್ನಿಗಳನ್ನೂ ಮತ್ತು ತನ್ನಲ್ಲಿ ಹೋತ್ರನನ್ನು

ಸಂಕಲ್ಪಿಸಿಕೊಂಡನು. ಅನಂತರ ಮಹಾತಪಸ್ವಿಯು ಆ ಬಳ್ಳಿಯನ್ನೇ ಸೋಮವೆಂದು ಸಂಕಲ್ಪಿಸಿಕೊಂಡನು. ಋಗ್-ಯಜು-ಸಾಮಗಳನ್ನು ಆ ಮುನಿಯು ಮನಸ್ಸಿನಲ್ಲಿಯೇ ಸ್ಮರಿಸಿಕೊಂಡನು. ಅಲ್ಲಿದ್ದ ಕಲ್ಲುಗಳನ್ನೇ ಗ್ರಾವಾಣಗಳನ್ನಾಗಿಸಿಕೊಂಡು ಅಭಿಷವವನ್ನು ಪ್ರಾರಂಭಿಸಿದನು. ನೀರನ್ನೇ ಆಜ್ಯವನ್ನಾಗಿ ಮಾಡಿಕೊಂಡು ತ್ರಿದಿವೌಕಸರಿಗೆ ಭಾಗಗಳನ್ನಿತ್ತನು. ಸೋಮದ ಅಭಿಷವವನ್ನು ಮಾಡಿ ತುಮುಲ ಧ್ವನಿಮಾಡಿದನು. ತ್ರಿತನು ಮಾಡಿದ ಆ ಸ್ವರವು ಸ್ವರ್ಗವನ್ನೂ ಸೇರಿತು. ಅವನು ಬ್ರಹ್ಮವಾದಿಗಳು ಹೇಳಿಟ್ಟಿದ್ದಂತೆ ಯಜ್ಞವನ್ನು ನಡೆಸಿದನು.

ಮಹಾತ್ಮ ತ್ರಿತನ ಆ ಯಜ್ಞವು ಹಾಗೆ ನಡೆಯುತ್ತಿರಲು ತ್ರಿದಿವದಲ್ಲಿದ್ದ ಎಲ್ಲರಿಗೂ ಉದ್ವಿಗ್ನತೆಯುಂಟಾಯಿತು. ಆದರೆ ಕಾರಣಮಾತ್ರ ತಿಳಿಯಲಿಲ್ಲ. ಆ ತುಮುಲ ಶಬ್ಧವು ಬೃಹಸ್ಪತಿಗೂ ಕೇಳಿಸಿತು. ಅದನ್ನು ಕೇಳಿದ ದೇವಪುರೋಹಿತನು ಸರ್ವ ದೇವಗೆಗಳಿಗೆ ಹೀಗೆಂದನು:

> "ಸುರರೇ! ತ್ರಿತನ ಯಜ್ಞವು ನಡೆಯುತ್ತಿರುವಲ್ಲಿಗೆ ಹೋಗೋಣ! ಇಲ್ಲವಾದರೆ ಕ್ರುದ್ಧನಾದ ಆ ಮಹಾತಪಸ್ವಿಯು ಅನ್ಯ ದೇವತೆಗಳನ್ನೂ ಸೃಷ್ಟಿಸಬಲ್ಲನು!"

ಅವನ ಆ ಮಾತನ್ನು ಕೇಳಿ ಸರ್ವದೇವತೆಗಳೂ ಒಟ್ಟಿಗೇ ತ್ರಿತನ ಯಜ್ಞವು ನಡೆಯುತ್ತಿರುವಲ್ಲಿಗೆ ಬಂದರು. ತ್ರಿತನಿದ್ದ ಆ ಬಾವಿಗೆ ಹೋಗಿ ದೇವತೆಗಳು ಅಲ್ಲಿ ಯಜ್ಞಕರ್ಮಗಳಲ್ಲಿ ದೀಕ್ಷಿತನಾಗಿದ್ದ ಆ ಮಹಾತ್ಮನನ್ನು ಕಂಡರು. ಪರಮಶ್ರೀಯಿಂದ ಕೂಡಿದ್ದ ಆ

ಮಹಾತ್ಮನನ್ನು ಕಂಡು ಆ ಮಹಾಭಾಗನಿಗೆ ಹೇಳಿದರು:

> “ಹವಿಸ್ಸಿನ ಭಾಗಾರ್ಥಿಗಳಾಗಿ ನಾವು ಇಲ್ಲಿಗೆ ಬಂದಿದ್ದೇವೆ.”

ಆಗ ಋಷಿಯು ದೇವತೆಗಳಿಗೆ –

> “ದಿವೌಕಸರೇ! ಈ ಭಯಂಕರ ಬಾವಿಯಲ್ಲಿ ಬಿದ್ದು
> ಚೇತನವನ್ನೇ ಕಳೆದುಕೊಂಡಿರುವ ನನ್ನನ್ನು ನೋಡಿ!”

ಎಂದು ಹೇಳಿದನು. ಆಗ ತ್ರಿತನು ಅವರಿಗೆ ಯಥಾವಿಧಿಯಾಗಿ ಮಂತ್ರಯುಕ್ತ ಯಜ್ಞ ಭಾಗಗಳನ್ನಿತ್ತನು. ಅದರಿಂದ ಅವರು ತೃಪ್ತರಾದರು ಕೂಡ. ಯಥಾವಿಧಿಯಾಗಿ ಯಜ್ಞಭಾಗಗಳನ್ನು ಪಡೆದ ದಿವೌಕಸರು ಪ್ರೀತಾತ್ಮರಾಗಿ ಅವನ ಮನಸ್ಸಿನಲ್ಲಿ ಬಯಸಿದ ವರಗಳನ್ನು ಕೊಟ್ಟರು.

> “ದೇವತೆಗಳೇ! ನನ್ನನ್ನು ಇಲ್ಲಿಂದ ಮೇಲೆತ್ತಿ. ಮತ್ತು ಈ
> ಬಾವಿಯಲ್ಲಿಯ ನೀರನ್ನು ಯಾರು ಸ್ಪರ್ಶಿಸುತ್ತಾನೋ ಅವನಿಗೆ
> ಸೋಮಪಗತಿಯು ದೊರೆಯಲಿ”

ಎಂದು ವರಗಳನ್ನು ಕೇಳಿದನು. ಕೂಡಲೇ ಅಲೆಗಳೊಂದಿಗೆ ಸರಸ್ವತಿಯು ಮೇಲೆ ಉಕ್ಕಿಬಂದಳು. ಅದರಿಂದ ಮೇಲೆತ್ತಲ್ಪಟ್ಟ ತ್ರಿತನು ಎದಿರು ನಿಂತು ದಿವೌಕಸರನ್ನು ಪೂಜಿಸಿದನು. ಹಾಗೆಯೇ ಆಗಲೆಂದು ಹೇಳಿ ವಿಬುಧರು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು. ತ್ರಿತನಾದರೋ

ಪ್ರೀತನಾಗಿ ತನ್ನ ಮನೆಗೆ ಸೇರಿದನು.

ಅನಂತರ ಆ ಮಹಾತಪಸ್ವಿ ಋಷಿಯು ತನ್ನ ಅಣ್ಣಂದಿರನ್ನು ಭೇಟಿಮಾಡಿ ಕ್ರುದ್ಧನಾಗಿ ಕಠೋರ ಮಾತುಗಳನ್ನಾಡಿ ಶಪಿಸಿದನು:

> “ಪಶುಲುಬ್ಧರಾಗಿ ನನ್ನನ್ನು ಬಿಟ್ಟು ಓಡಿ ಹೋದ ನೀವಿಬ್ಬರೂ ಅದೇ ಕೋರೆದಾಡೆಗಳುಳ್ಳ ಪ್ರಾಣಿಗಳಾಗಿ ಸಂಚರಿಸಿ! ನಿಮ್ಮ ಪಾಪಕರ್ಮದಿಂದ ನನ್ನಿಂದ ಶಪಿತರಾದ ನಿಮ್ಮ ಮಕ್ಕಳೂ ಕೂಡ ಗೋಲಾಂಗೂಲ-ಕರಡಿ-ವಾನರರಾಗಿ ಹುಟ್ಟುತ್ತಾರೆ.”

ಹೀಗೆ ಹೇಳಲು ಕ್ಷಣದಲ್ಲಿಯೇ ಅವರು ರೂಪದಲ್ಲಿ ಆ ಸತ್ಯವಾದಿಯ ವಚನದಂತೆಯೇ ಆದರು.

# ಸಾರಸ್ವತೋಪಾಖ್ಯಾನ

**ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 36ರಲ್ಲಿ ಹೇಳುತ್ತಾನೆ.**

ಹಿಂದೆ ಕೃತಯುಗದಲ್ಲಿ ನೈಮಿಷಾರಣ್ಯದ ತಪಸ್ವಿಗಳು ದ್ವಾದಶವಾರ್ಷಿಕದ ಅತಿ ದೊಡ್ಡ ಸತ್ರದಲ್ಲಿ ತೊಡಗಿರಲು ಅಲ್ಲಿ ಅನೇಕ ಋಷಿಗಳು ಭಾಗವಹಿಸಿದ್ದರು. ಆ ಸತ್ರದಲ್ಲಿ ಯಥಾವಿಧಿಯಾಗಿ ಉಳಿದುಕೊಂಡ ಆ ಮಹಾಭಾಗರು ನೈಮಿಷಾರಣ್ಯದಲ್ಲಿ ಸತ್ರದ

ಹನ್ನೆರಡು ವರ್ಷಗಳೂ ಉಳಿದುಕೊಂಡಿದ್ದರು. ಅನೇಕ ಋಷಿಗಳು ತೀರ್ಥಕಾರಣದಿಂದ ಅಲ್ಲಿ ಆಗಮಿಸಿದ್ದರು. ಅನೇಕ ಋಷಿಗಳಿಂದ ಕೂಡಿದ್ದ ಸರಸ್ವತಿಯ ಆ ದಕ್ಷಿಣ ತೀರ್ಥಸಮೂಹಗಳು ನಗರಗಳಂತೆ ತೋರುತ್ತಿದ್ದವು. ತೀರ್ಥಲೋಭರಾದ ಆ ದ್ವಿಜಸತ್ತಮರು ಸರಸ್ವತೀ ತೀರದಲ್ಲಿ ಸಮಂತಪಂಚಕದವರೆಗೆ ವಾಸಮಾಡಿಕೊಂಡಿದ್ದರು. ಹವನಗೈಯುತ್ತಿದ್ದ ಆ ಭಾವಿತಾತ್ಮ ಮುನಿಗಳ ಸ್ವಾಧ್ಯಾಯಗಳು ಜೋರಾಗಿ ದಿಕ್ಕುಗಳನ್ನೇ ತುಂಬಿಕೊಂಡವು. ಆಗ್ನಿಹೋತ್ರಗಳಲ್ಲಿ ಹೋಮಮಾಡುತ್ತಿದ್ದ ಆ ಮಹಾತ್ಮರಿಂದ ಶ್ರೇಷ್ಠ ನದಿಯು ಎಲ್ಲ ಕಡೆಗಳಿಂದ ಬೆಳಗಿ ಶೋಭಿಸಿತು. ವಾಲ್ಯಖಿಲ್ಯರು, ಅಶ್ಮಕುಟ್ಟ ತಾಪಸರು, ದಂತೋಲೂಖಲಿಗಳು, ಸಂಪ್ರಕ್ಷಾಲರು, ವಾಯುಭಕ್ಷಕರು, ಜಲಾಹಾರಿಗಳು, ಪರ್ಣಭಕ್ಷಕ ತಾಪಸರು, ಸ್ಥಂಡಿಲಶಾಯಿಗಳು ಮತ್ತು ಹಾಗೆಯೇ ನಾನಾ ನಿಯಮಯುಕ್ತ ತಾಪಸರು ಅಲ್ಲಿದ್ದರು. ಸರಸ್ವತಿಯ ಸಮೀಪದಲ್ಲಿಯೇ ವಾಸಿಸುತ್ತಿದ್ದ ಆ ಮುನಿಗಳು ನದಿಶ್ರೇಷ್ಠೆ ಗಂಗೆಯ ಬಳಿಯಿದ್ದ ದಿವೌಕಸರಂತೆಯೇ ಶೋಭಿಸಿದರು. ಸತ್ರದಲ್ಲಿ ಯಾಜಿಗಳಾಗಿ ಅಲ್ಲಿಗೆ ಬಂದು ಸೇರಿದ್ದ ಮಹಾವ್ರತ ಋಷಿಗಳಿಗೆ ಕುರುಕ್ಷೇತ್ರದಲ್ಲಿ ಸ್ನಾನಮಾಡಲು ಅವಕಾಶವೇ ದೊರಕಲಿಲ್ಲ. ಆಗ ಅವರು ಯಜ್ಞೋಪವೀತಗಳಲ್ಲಿಯೇ ತೀರ್ಥಗಳನ್ನು ಸಂಕಲ್ಪಿಸಿ ಅಗ್ನಿಹೋತ್ರದಲ್ಲಿ ಆಹುತಿಗಳನ್ನು ವಿಧಿವತ್ತಾಗಿ ನೀಡಿದರು.

ಋಷಿಗಳಿಗಾದ ನಿರಾಶೆಯಿಂದ ಚಿಂತಾನ್ವಿತಳಾದ ಸರಸ್ವತಿಯು ಅವರಿಗೋಸ್ಕರವಾಗಿ ಅಲ್ಲಿ ಕಾಣಿಸಿಕೊಂಡಳು. ಪುಣ್ಯತಪಸ್ವಿ ಋಷಿಗಳ

ಮೇಲಿನ ಕಾರುಣ್ಯದಿಂದ ಆ ಸರಿದ್ವರೆಯು ಅವರಿಗೆ ಅನೇಕ ವಿಶ್ರಾಮ ಕುಂಜರಗಳನ್ನು ಕಲ್ಪಿಸಿಕೊಟ್ಟು ಹಿಂದಿರುಗಿದಳು. ಅವರಿಗೋಸ್ಕರವಾಗಿ ಅಲ್ಲಿಗೆ ಬಂದ ನದಿಶ್ರೇಷ್ಠೆ ಸರಸ್ವತಿಯು ಪುನಃ ಪಶ್ಚಿಮಾಭಿಮುಖಳಾಗಿ ಪ್ರವಹಿಸತೊಡಗಿದಳು. ಆವರ ಆಗಮನವನ್ನು ಸಫಲಗೊಳಿಸಿ ಪುನಃ ಹಿಂದಿನಂತೆಯೇ ಹರಿಯುತ್ತೇನೆ ಎಂದು ಸಂಕಲ್ಪಿಸಿದ್ದ ಆ ಮಹಾನದಿಯು ಆ ಅದ್ಭುತ ಕ್ರಿಯೆಯನ್ನು ಮಾಡಿದಳು. ಆ ಕುಂಜವು ನೈಮಿಷೇಯ ಎಂದು ಕರೆಯಲ್ಪಟ್ಟಿತು.

ಇಡೀ ಜಗತ್ತೇ ಸಪ್ತ ಸರಸ್ವತಿಯರಿಂದ ವ್ಯಾಪ್ತವಾಗಿದೆ. ಏಕೆಂದರೆ ತಪೋಬಲರು ಕರೆದಲ್ಲಿಯೆಲ್ಲ ಸರಸ್ವತಿಯೂ ಹೋಗುತ್ತಾಳೆ. ಹಾಗೆ ಹೋಗುವಾಗ ಸರಸ್ವತಿಯು ಈ ಏಳು ನಾಮಧೇಯಗಳನ್ನು ಪಡೆದಳು: ಸುಪ್ರಭಾ, ಕಾಂಚನಾಕ್ಷೀ, ವಿಶಾಲಾ, ಮನೋಹ್ರದ, ಓಘವತೀ, ಸುವೇಣು ಮತ್ತು ವಿಮಲೋದಕ. ಮಹೀತಲದಲ್ಲಿ ಪಿತಾಮಹ ಬ್ರಹ್ಮನ ಮಹಾ ಯಜ್ಞವು ನಡೆಯುತ್ತಿತ್ತು. ಆ ವಿಶಾಲ ಯಜ್ಞವಾಟಿಯಲ್ಲಿ ದ್ವಿಜಾತಿಯವರು ಸೇರಿಕೊಂಡಿದ್ದರು. ಪುಣ್ಯಾಹ ಘೋಷಗಳಿಂದ, ವಿಮಲ ವೇದ ನಿನಾದಗಳಿಂದ ಮತ್ತು ದೇವತೆಗಳು ಯಜ್ಞವಿಧಿಗಳಲ್ಲಿ ತೋರಿಸಿದ ಉತ್ಸಾಹಗಳಿಂದ ಆ ಯಜ್ಞವಾಟಿಯು ತುಂಬಿಹೋಗಿತ್ತು. ಪ್ರಪಿತಾಮಹನು ಯಜಮಾನನಾಗಿ ದೀಕ್ಷಿತನಾಗಿದ್ದ ಆ ಸತ್ರದಲ್ಲಿ ಸರ್ವಕಾಮನೆಗಳೂ ಪೂರೈಸಿಕೊಳ್ಳುತ್ತಿದ್ದವು. ಮನಸ್ಸಿನಲ್ಲಿ ಚಿಂತಿಸಿದ ಧರ್ಮಾರ್ಥ ಕುಶಲಗಳೆಲ್ಲವೂ ದ್ವಿಜಾತಿಯವರ ಬಳಿ ಎದ್ದು ನಿಲ್ಲುತ್ತಿದ್ದವು. ಅಲ್ಲಿ ಗಂಧರ್ವರು ಹಾಡುತ್ತಿದ್ದರು. ಅಪ್ಸರಗಣಗಳು

ನರ್ತಿಸುತ್ತಿದ್ದವು. ದಿವ್ಯ ವಾದ್ಯಗಳನ್ನು ಹಿತಕರವಾಗಿ ಬಾರಿಸುತ್ತಿದ್ದರು. ಆ ಯಜ್ಞದ ವೈಭವದಿಂದ ತೃಪ್ತರಾಗಿ ದೇವತೆಗಳೂ ಕೂಡ ಪರಮ ವಿಸ್ಮಿತರಾದರು. ಇನ್ನು ಮನುಷ್ಯ ಯೋನಿಯಲ್ಲಿ ಹುಟ್ಟಿದವರ ವಿಷಯದಲ್ಲಿ ಏನು? ಪುಷ್ಕರದಲ್ಲಿ ಪಿತಾಮಹನ ಈ ಮಹಾಯಜ್ಞವು ನಡೆಯುತ್ತಿರುವಾಗ ಋಷಿಗಳು

> "ನದಿಶ್ರೇಷ್ಠೇ ಸರಸ್ವತಿಯು ಇಲ್ಲ
> ಕಾಣಿಸುವುದಿಲ್ಲವಾದುದರಿಂದ ಈ ಯಜ್ಞದ ಮಹಾಫಲವು
> ಉಂಟಾಗಿಲ್ಲ!"

ಎಂದರು. ಅದನ್ನು ಕೇಳಿ ಪ್ರೀತನಾದ ಭಗವಾನನು ಸರಸ್ವತಿಯನ್ನು ಸ್ಮರಿಸಿದನು. ಪುಷ್ಕರದಲ್ಲಿ ಪಿತಾಮಹನ ಯಾಗದಲ್ಲಿ ಕರೆಯಲ್ಪಟ್ಟ ಸರಸ್ವತಿಯು ಸುಪ್ರಭಾ ಎಂಬ ಹೆಸರಿನವಳಾದಳು. ವೇಗಯುಕ್ತಳಾದ ಸರಸ್ವತಿಯನ್ನು ನೋಡಿ ಮುನಿಗಳು ತುಷ್ಟರಾಗಿ ಪಿತಾಮಹನ ಆ ಕ್ರತುವು ಬಹಳ ಮಾನ್ಯತೆವುಳ್ಳದ್ದು ಎಂದು ಗೌರವಿಸಿದರು. ಹೀಗೆ ಸರಿತಶ್ರೇಷ್ಠೆ ಸರಸ್ವತಿಯು ಪಿತಾಮಹನಿಗಾಗಿ ಮತ್ತು ಋಷಿಗಳ ಸಂತೃಪ್ತಿಗಾಗಿ ಪುಷ್ಕರದಲ್ಲಿ ಕಾಣಿಸಿಕೊಂಡಳು.

ನೈಮಿಷದಲ್ಲಿ ಸಮಾಗಮಿಸಿದ್ದ ಮುನಿಗಳ ಮಧ್ಯೆ ವೇದದ ಕುರಿತು ವಿಚಿತ್ರ ಚರ್ಚೆಗಳು ನಡೆದವು. ಅಲ್ಲಿದ್ದ ನಾನಾ ಸ್ವಾಧ್ಯಾಯಗಳನ್ನು ತಿಳಿದುಕೊಂಡಿದ್ದ ಮುನಿಗಳು ಒಂದಾಗಿ ಸರಸ್ವತಿಯನ್ನು ಸ್ಮರಿಸಿದರು. ಸೇರಿ ಸತ್ರದಲ್ಲಿ ತೊಡಗಿದ್ದ ಮಹಾತ್ಮರು ಧ್ಯಾನಿಸಲು ಅವರ

ಸಹಾಯಾರ್ಥವಾಗಿ ಪುಣ್ಯೆ ಮಹಾಭಾಗೆ ಸರಸ್ವತಿಯು ಅಲ್ಲಿಗೆ ಬಂದಳು. ನೈಮಿಷದಲ್ಲಿ ಸತ್ರಯಾಜಿ ಮುನಿಗಳ ಬಳಿ ಆಗಮಿಸಿದ ಸರಿತಶ್ರೇಷ್ಠೆಯು ಕಾಂಚನಾಕ್ಷೀ ಎಂದು ಪೂಜಿತಳಾದಳು. ಗಯದ ರಾಜ ಗಯನೂ ಕೂಡ ಮಹಾಕ್ರತು ಗಯಯಜ್ಞದಲ್ಲಿ ಸರಿತಶ್ರೇಷ್ಠೆ ಸರಸ್ವತಿಯನ್ನು ಆಹ್ವಾನಿಸಿದನು. ಹಿಮವತ್ಪರ್ವದದ ತಪ್ಪಲಿನಲ್ಲಿ ಹುಟ್ಟಿದ ಆ ಶೀಘ್ರಗಾಮಿನೀ ನದಿಗೆ ಗಯೆಯಲ್ಲಿ ಸಂಶಿತವ್ರತ ಋಷಿಗಳು ವಿಶಾಲಾ ಎಂದು ಕರೆದರು. ಔದ್ಧಾಲಕನು ಯಜ್ಞವನ್ನು ಯಾಜಿಸುತ್ತಿದ್ದಾಗ ಅಲ್ಲಿಗೆ ಎಲ್ಲಕಡೆಗಳಿಂದ ಆಗಮಿಸಿದ ಮುನಿಗಳ ಮಂಡಲವು ಸೇರಿತ್ತು. ಕೋಸಲದ ಪುಣ್ಯ ಉತ್ತರ ಭಾಗದಲ್ಲಿ ಮಹಾತ್ಮ ಔದ್ದಾಲಕನು ಯಜ್ಞದ ಮೊದಲು ಸರಸ್ವತಿಯನ್ನು ಧ್ಯಾನಿಸಿದನು. ಋಷಿಗಳ ಕಾರಣದಿಂದ ಅಲ್ಲಿಗೈತಂದ ಸರಿಶ್ರೇಷ್ಠೆಯು ವಲ್ಕಲ-ಜಿನಧಾರೀ ಮುನಿಗಣಗಳಿಂದ ಪೂಜಿಸಲ್ಪಟ್ಟು ಅವರ ಮನಸ್ಸನ್ನು ಅಪಹರಿಸಿದುದಕ್ಕಾಗಿ ಮನೋಹ್ರದಾ ಎಂದು ವಿಖ್ಯಾತಳಾದಳು. ರಾಜರ್ಷಿಸೇವಿತ ಪುಣ್ಯ ಋಷಭದ್ವೀಪದಲ್ಲಿ ಅವಳು ಸುವೇಣುವೆನಿಸಿದಳು. ಮಹಾತ್ಮ ಕುರುವು ಯಜಮಾನನಾಗಿದ್ದ ಕುರುಕ್ಷೇತ್ರಕ್ಕೆ ಸರಿತಶ್ರೇಷ್ಠೆ ಮಹಾಭಾಗೆ ಸರಸ್ವತಿಯು ಹರಿದುಬಂದಳು. ಕುರುಕ್ಷೇತ್ರದಲ್ಲಿ ಆ ದಿವ್ಯನದೀ ಸರಸ್ವತಿಯನ್ನು ಮಹಾತ್ಮ ವಸಿಷ್ಠನು ಓಘವತಿ ಎಂದು ಕರೆದನು. ಗಂಗಾದ್ವಾರದಲ್ಲಿ ದಕ್ಷನು ಯಜ್ಞಮಾಡುತ್ತಿರುವಾಗ ಯಜಮಾನನಾಗಿದ್ದ ದಕ್ಷಬ್ರಹ್ಮನು ಕರೆಯಲು ಭಗವತಿಯು ಪುಣ್ಯ ಹೈಮವತ ಗಿರಿಗಳಿಂದ ವಿಮಲೋದೆಯಾಗಿ

ಅಲ್ಲಿಗೆ ಹರಿದುಬಂದಳು. ಆ ತೀರ್ಥದಲ್ಲಿ ಒಂದಾಗಿ ಸೇರಿ, ಅಲ್ಲಿಂದ ಮುಂದೆ ಅದು ಸಪ್ತಸಾರಸ್ವತ ತೀರ್ಥವೆಂದು ಭುವಿಯಲ್ಲಿ ಪ್ರಸಿದ್ಧವಾಯಿತು.

ಒಮ್ಮೆ ಸುಂದರ ಕಡೆಗಣ್ಣಿನ ದಿಕ್ಕುಗಳನ್ನೇ ಬಟ್ಟೆಗಳಾಗಿ ಧರಿಸಿದ್ದ ಅನಿಂದಿತೆ ಸ್ತ್ರೀಯೊಬ್ಬಳು ಸರಸ್ವತೀ ನದಿಯ ನೀರಿನಲ್ಲಿ ಸ್ವೇಚ್ಛೆಯಿಂದ ಸ್ನಾನಮಾಡುತ್ತಿರುವುದನ್ನು ನೋಡಿ ಮಂಕಣಕನ ವೀರ್ಯಸ್ಖಲನವಾಗಿ ನೀರಿನಲ್ಲಿ ಬಿದ್ದಿತು. ಆ ಮಹಾತಪಸ್ವಿಯು ಆ ರೇತಸ್ಸನ್ನು ಕಲಶದಲ್ಲಿ ಸಂಗ್ರಹಿಸಿ, ಕಲಶದಲ್ಲಿದ್ದುದನ್ನು ಏಳು ಭಾಗಗಳನ್ನಾಗಿಸಿ ಹೋದನು. ಅಲ್ಲಿಂದ ಸಪ್ತ ಋಷಿ ಮರುದ್ಗಣಗಳು ಹುಟ್ಟಿದವು. ಅಲ್ಲಿಂದ ವಾಯುವೇಗ, ವಾಯುಬಲ, ವಾಯುಹಾ, ವಾಯುಮಂಡಲ, ವಾಯುಜ್ವಾಲ, ವಾಯುರೇತ ಮತ್ತು ವಾಯುಚಕ್ರರೆಂಬ ವೀರ್ಯವಾನ್ ಮರುತ್ತರು ಜನಿಸಿದರು.

# ಮಂಕಣಕ

**ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 37ರಲ್ಲಿ ಹೇಳುತ್ತಾನೆ.**

ಹಿಂದೆ ಸಿದ್ಧ ಮಂಕಣಕನು ದರ್ಭೆಯ ಅಗ್ರಭಾಗವು ಕೈಗೆ ಚುಚ್ಚಿ ಗಾಯಗೊಂಡಾಗ ಅಲ್ಲಿಂದ ಶಾಕರಸವು ಸುರಿಯಿತು ಎಂದು

ಕೇಳಿದ್ದೇವೆ. ಆ ಶಾಕರಸವನ್ನು ನೋಡಿದ ಮಂಕಣಕನು ಹರ್ಷಾವಿಷ್ಟನಾಗಿ ಕುಣಿದಾಡತೊಡಗಿದನು. ಅವನು ಕುಣಿಯುತ್ತಿದ್ದಾಗ ಅವನ ತೇಜಸ್ಸಿನಿಂದ ಮೋಹಗೊಂಡ ಸ್ಥಾವರ-ಜಂಗಮಗಳೆರಡೂ ಕುಣಿಯತೊಡಗಿದವು. ಬ್ರಹ್ಮನೇ ಮೊದಲ್ಗೊಂಡು ಸುರರು, ಋಷಿಗಳು ಮತ್ತು ತಪೋಧನರು ಆ ಋಷಿಯ ಕುರಿತು ಮಹಾದೇವನಲ್ಲಿ

> "ದೇವ! ಇವನು ಕುಣಿಯದಂತೆ ಏನಾದರೂ ಮಾಡಬೇಕು!"

ಎಂದು ವಿಜ್ಞಾಪಿಸಿಕೊಂಡರು. ಸುರರ ಹಿತವನ್ನು ಬಯಸಿದ ದೇವ ಮಹಾದೇವನು ಅತೀವ ಹರ್ಷಾವಿಷ್ಟನಾಗಿದ್ದ ಮುನಿಯನ್ನು ನೋಡಿ ಕೇಳಿದನು:

> "ಭೋ! ಭೋ! ಬ್ರಾಹ್ಮಣ! ನೀನೇಕೆ ಹೀಗೆ ಕುಣಿಯುತ್ತಿರುವೆ? ಇಷ್ಟೊಂದು ಹರ್ಷಿತನಾಗಲು ಕಾರಣವೇನೆಂದು ಹೇಳು! ತಪಸ್ವಿಯಾದ ನೀನು ಧರ್ಮಪಥದಲ್ಲಿಯೇ ಇದ್ದೀಯೆ!"

ಋಷಿಯು ಹೇಳಿದನು:

> "ಬ್ರಹ್ಮನ್! ಕೈಯಿಂದ ಶಾಕರಸವು ಸುರಿಯುತ್ತಿರುವುದು ನಿನಗೆ ಕಾಣುತ್ತಿಲ್ಲವೇ? ಇದನ್ನು ನೋಡಿ ನಾನು ಮಹಾ ಹರ್ಷದಿಂದ ಕುಣಿಯುತ್ತಿದ್ದೇನೆ."

ರಾಗದಿಂದ ಮೋಹಿತನಾಗಿದ್ದ ಆ ಮುನಿಗೆ ದೇವನು ನಗುತ್ತಾ



"ವಿಪ್ರ! ನಾನು ಸ್ವಲ್ಪವೂ ವಿಸ್ಮಿತನಾಗಿಲ್ಲ. ನನ್ನನ್ನು ನೋಡು!"

ಎಂದು ಹೇಳಿದನು. ಮುನಿಶ್ರೇಷ್ಠನಿಗೆ ಹೀಗೆ ಹೇಳಿ ಧೀಮಂತ ಮಹಾದೇವನು ಬೆರಳಿನ ತುದಿಯಿಂದ ತನ್ನ ಎಡಗೈ ಹೆಬ್ಬೆರಳನ್ನು ಒತ್ತಿದನು. ಗಾಯಗೊಂಡ ಆ ಹೆಬ್ಬೆರಳಿನಿಂದ ಹಿಮಸದೃಶ ಭಸ್ಮವು ಹೊರಹೊಮ್ಮಿತು. ಅದನ್ನು ನೋಡಿ ಮುನಿಯು ನಾಚಿ ಮಹಾದೇವನ ಪಾದಗಳಿಗೆರಗಿದನು. ಋಷಿಯು ಹೇಳಿದನು:

"ರುದ್ರನಿಗಿಂತಲೂ ಅಧಿಕನಾದ ಬೇರೆ ಯಾವ ದೇವನನ್ನೂ ನಾನು ಮನ್ನಿಸುವುದಿಲ್ಲ. ಶೂಲಪಾಣೇ! ನೀನೇ ಸುರಾಸುರ ಜಗತ್ತಿನ ಗತಿ! ನಿನ್ನಿಂದಲೇ ಈ ವಿಶ್ವವು ಸೃಷ್ಟಿಸಲ್ಪಟ್ಟಿದೆಯೆಂದು ಮನೀಷಿಗಳು ಹೇಳುತ್ತಾರೆ. ಪುನಃ ಯುಗಕ್ಷಯದಲ್ಲಿ ನೀನೇ ಎಲ್ಲವನ್ನೂ ನಿನ್ನೊಳಗೆ ಸೇರಿಸಿಕೊಳ್ಳುತ್ತೀಯೆ! ದೇವತೆಗಳಿಗೂ ನಿನ್ನನ್ನು ಅರಿತುಕೊಳ್ಳಲು ಸಾಧ್ಯವಾಗದಿರುವಾಗ ನಾನು ಹೇಗೆ ನಿನ್ನನ್ನು ಅರಿಯಬಲ್ಲೆ? ಬ್ರಹ್ಮಾದಿ ಸುರರೂ ಎಲ್ಲವೂ ನಿನ್ನಲ್ಲಿಯೇ ಕಾಣುತ್ತಿವೆ. ದೇವತೆಗಳ ಕರ್ತ ಮತ್ತು ಎಲ್ಲವನ್ನೂ ಮಾಡಿಸುವವನೂ ನೀನೇ ಆಗಿರುವೆ. ನಿನ್ನ ಪ್ರಸಾದದಿಂದಲೇ ಸುರರೆಲ್ಲರೂ ಭಯವೇ ಇಲ್ಲದವರಾಗಿ ಆನಂದಿಸುತ್ತಾರೆ."

ಮಹಾದೇವನನ್ನು ಹೀಗೆ ಸ್ತುತಿಸಿ ನಮಸ್ಕರಿಸಿ ಆ ಋಷಿಯು

“ಭಗವನ್! ನಿನ್ನ ಪ್ರಸಾದದಿಂದ ನನ್ನ ತಪಸ್ಸು ಕ್ಷಯವಾಗದಿರಲಿ!”

ಎಂದು ಕೇಳಿಕೊಂಡನು. ಆಗ ಪ್ರೀತಮನಸ್ಕನಾದ ದೇವನು ಪುನಃ ಋಷಿಗೆ ಹೇಳಿದನು:

“ವಿಪ್ರ! ನನ್ನ ಪ್ರಸಾದದಿಂದ ನಿನ್ನ ತಪಸ್ಸು ಸಾವಿರಪಟ್ಟು ವರ್ಧಿಸಲಿ. ಮತ್ತು ನಿನ್ನೊಡನೆ ನಾನೂ ಕೂಡ ಈ ಆಶ್ರಮದಲ್ಲಿ ಇದ್ದುಬಿಡುತ್ತೇನೆ! ಈ ಸಪ್ತಸಾರಸ್ವತದಲ್ಲಿ ನನ್ನನ್ನು ಅರ್ಚಿಸುವ ನರನಿಗೆ ಇಲ್ಲಿ ಅಥವ ನಂತರದಲ್ಲಿ ಯಾವುದೂ ದುರ್ಲಭವಾಗಲಾರದು. ಅವನು ಸಾರಸ್ವತ ಲೋಕಕ್ಕೆ ಹೋಗುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ!”

ಇದು ಭೂರಿತೇಜಸ ಮಂಕಣಕನ ಚರಿತ್ರೆ. ಅವನೇ ವಾಯುವಿಗೆ ಸುಜನ್ಯೆಯಲ್ಲಿ ಹುಟ್ಟಿದ ಮಗ.

# ಕಪಾಲಮೋಚನ ತೀರ್ಥ ಮಹಾತ್ಮೆ

ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 38ರಲ್ಲಿ ಹೇಳುತ್ತಾನೆ.

ಹಿಂದೆ ಮಹಾತ್ಮ ರಾಘವನು ದಂಡಕಾರಣ್ಯದಲ್ಲಿ ವಾಸಿಸುತ್ತಿದ್ದಾಗ

ಅಲ್ಲಿ ರಾಕ್ಷಸರನ್ನು ಸಂಹರಿಸಿದನು. ಜನಸ್ಥಾನದಲ್ಲಿ ದುರಾತ್ಮ ರಾಕ್ಷಸನ ಶಿರವನ್ನು ಕ್ಷುರದ ಶಿತಧಾರೆಯಿಂದ ಕತ್ತರಿಸಲ್ಪಡಲು ಅದು ಮಹಾವನದಲ್ಲಿ ಬಿದ್ದಿತು. ದೈವಯೋಗದಿಂದ ಅದು ಅಲ್ಲಿ ಸಂಚರಿಸುತ್ತಿದ್ದ ಮಹೋದರನ ಮೊಣಕಾಲನ್ನು ಸೀಳಿ ಅಲ್ಲಿಯೇ ಅಂಟಿಕೊಂಡಿತು. ಅದು ಅವನಿಗೆ ಅಂಟಿಕೊಂಡಿದ್ದುದರಿಂದ ಆ ಬ್ರಾಹ್ಮಣ ಮಹಾಪ್ರಾಜ್ಞನು ತೀರ್ಥ-ದೇವಾಲಯಗಳಿಗೆ ಹೋಗಲು ಅಸಮರ್ಥನಾದನು. ಕೀವು ಹರಿದು ವೇದನೆಯಿಂದ ಆರ್ತನಾಗಿದ್ದ ಆ ಮಹಾಮುನಿಯು ಭೂಮಿಯ ಸರ್ವತೀರ್ಥಗಳಿಗೆ ಹೋದನು. ಆ ಮಹಾತಪಸ್ವಿಯು ಸರ್ವ ನದಿ-ಸಮುದ್ರಗಳಿಗೆ ಹೋಗಿ ಅಲ್ಲಿ ಸರ್ವ ಭಾವಿತಾತ್ಮ ಋಷಿಗಳಿಗೆ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದನು. ಸರ್ವತೀರ್ಥಗಳಲ್ಲಿ ಮುಳುಗಿದರೂ ಅವನಿಗೆ ಆ ಶಿರದಿಂದ ಮೋಕ್ಷವು ದೊರಕಲಿಲ್ಲ. ಆಗ ಆ ವಿಪ್ರೇಂದ್ರನು ಮುನಿಗಳ ಈ ಮಹಾ ವಚನವನ್ನು ಕೇಳಿದನು:

> “ಸರಸ್ವತೀ ತೀರದಲ್ಲಿ ಔಶನಸವೆಂಬ ಪ್ರಖ್ಯಾತ ಶ್ರೇಷ್ಠ ತೀರ್ಥವಿದೆ. ಆ ಅನುತ್ತಮ ಸಿದ್ಧಕ್ಷೇತ್ರದಲ್ಲಿ ಎಲ್ಲ ಪಾಪಗಳೂ ಪ್ರಶಮನಗೊಳ್ಳುತ್ತವೆ.”

ಆಗ ಆ ದ್ವಿಜನು ಔಶಸನ ತೀರ್ಥಕ್ಕೆ ಹೋಗಿ ಔಶಸನ ತೀರ್ಥದಲ್ಲಿ ಸ್ನಾನಮಾಡುತ್ತಿರಲು ಆ ಶಿರವು ಅವನ ಕಾಲನ್ನು ಬಿಟ್ಟು ನೀರಿನೊಳಗೆ ಬಿದ್ದಿತು. ಪೂತಾತ್ಮನೂ ಕಲ್ಮಷಗಳನ್ನು ಕಳೆದುಕೊಂಡವನೂ,

ಶಿರದಿಂದ ಮುಕ್ತನಾದವನೂ ಆದ ಕೃತಕೃತ್ಯ ಮಹೋದರನು ಪ್ರೀತನಾಗಿ ತನ್ನ ಆಶ್ರಮಕ್ಕೆ ಮರಳಿದನು. ತನ್ನ ಪುಣ್ಯ ಆಶ್ರಮಕ್ಕೆ ಹೋಗಿ ಮುಕ್ತನಾದ ಮಹಾತಪಸ್ವಿ ವಿಪ್ರನು ನಡೆದುದೆಲ್ಲವನ್ನೂ ಅಲ್ಲಿದ್ದ ಭಾವಿತಾತ್ಮ ಋಷಿಗಳಿಗೆ ಹೇಳಿದನು. ಅವನ ಆ ಮಾತನ್ನು ಕೇಳಿ ಅಲ್ಲಿ ಸೇರಿದ್ದ ಮುನಿಗಳು ಆ ತೀರ್ಥಕ್ಕೆ ಕಪಾಲಮೋಚನ ಎಂಬ ಹೆಸರಿನ್ನಿತ್ತರು.

# ವಿಶ್ವಾಮಿತ್ರ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 39ರಲ್ಲಿ ಹೇಳುತ್ತಾನೆ.

ಭೂಮಿಯ ಮೇಲೆ ಗಾಧಿ ಎಂಬ ಹೆಸರಿನ ಪ್ರಸಿದ್ಧ ಕ್ಷತ್ರಿಯನಿದ್ದನು. ಅವನ ಪುತ್ರನೇ ಪ್ರತಾಪವಾನ್ ವಿಶ್ವಾಮಿತ್ರನಾಗಿದ್ದನು. ಮಹಾತಪಸ್ವಿಯೂ ಮಹಾಯೋಗಿಯೂ ಆಗಿದ್ದ ಆ ಕೌಶಿಕ ರಾಜನು ಮಗ ವಿಶ್ವಾಮಿತ್ರನನ್ನು ಅಭಿಷೇಕಿಸಿದನು. ದೇಹನ್ಯಾಸದ ಮನಸ್ಸು ಮಾಡಿದ್ದ ಅವನಿಗೆ ಪ್ರೀತಿಯಿಂದ ಪ್ರಜೆಗಳು ಹೇಳಿದರು:

> "ಮಹಾಪ್ರಾಜ್ಞ! ಹೋಗಬೇಡ! ಮಹಾಭಯದಿಂದ ನಮ್ಮನ್ನು ಕಾಪಾಡು!"

ಅದಕ್ಕೆ ಪ್ರತಿಯಾಗಿ ಗಾಧಿಯು ಪ್ರಜೆಗಳಿಗೆ ಹೇಳಿದನು:

“ನನ್ನ ಮಗನು ವಿಶ್ವದ ರಕ್ಷಕನಾಗುತ್ತಾನೆ!”

ಹೀಗೆ ಹೇಳಿ ಗಾಧಿಯು ವಿಶ್ವಾಮಿತ್ರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ತ್ರಿದಿವಕ್ಕೆ ಹೊರಟುಹೋದನು. ಆಗ ವಿಶ್ವಾಮಿತ್ರನು ರಾಜನಾದನು. ಆದರೆ ಪ್ರಯತ್ನಪಟ್ಟರೂ ಅವನಿಗೆ ಪೃಥ್ವಿಯನ್ನು ರಕ್ಷಿಸಲು ಆಗಲಿಲ್ಲ. ಒಮ್ಮೆ ಆ ರಾಜನು ರಾಕ್ಷಸರ ಮಹಾಭಯದ ಕುರಿತು ಕೇಳಿ, ಚತುರಂಗಬಲಾನ್ವಿತನಾಗಿ ನಗರದಿಂದ ಹೊರಟನು. ಬಹಳ ದೂರ ಗಮಿಸಿ ಅವನು ವಸಿಷ್ಠನ ಆಶ್ರಮದ ಬಳಿ ಹೋದನು. ಅಲ್ಲಿ ಅವನ ಸೈನಿಕರು ಅನೀತಿಯಿಂದ ಅನೇಕ ಅಪಚಾರಗಳನ್ನೆಸಗಿದರು. ಭಗವಾನ್ ವಿಪ್ರ ವಸಿಷ್ಠನು ಆಶ್ರಮಕ್ಕೆ ಹಿಂದಿರುಗಲು ಅಲ್ಲಿ ಮಹಾವನವೆಲ್ಲವೂ ಧ್ವಂಸವಾದುದನ್ನು ನೋಡಿದನು. ಅದರಿಂದ ಕ್ರುದ್ಧನಾದ ಮುನಿಸತ್ತಮ ವಸಿಷ್ಠನು

“ಘೋರ ಶಬರರನ್ನು ಸೃಷ್ಟಿಸು!”

ಎಂದು ತನ್ನ ಗೋವಿಗೆ ಹೇಳಿದನು. ಹಾಗೆ ಹೇಳಲು ಆ ಹಸುವು ಘೋರರಾಗಿ ಕಾಣುತ್ತಿದ್ದ ಪುರುಷರನ್ನು ಸೃಷ್ಟಿಸಿದಳು. ಅವರು ವಿಶ್ವಾಮಿತ್ರನ ಸೇನೆಯನ್ನು ಎಲ್ಲಕಡೆಗಳಿಂದ ಆಕ್ರಮಣಿಸಿ ನಾಶಪಡಿಸಿದರು. ಪಲಾಯನಮಾಡುತ್ತಿದ್ದ ತನ್ನ ಸೇನೆಯನ್ನು ನೋಡಿ ಗಾಧಿಯ ಮಗ ವಿಶ್ವಾಮಿತ್ರನು ತಪೋಬಲವೇ ಹೆಚ್ಚಿನದೆಂದು ತಿಳಿದು ತಪಸ್ಸನ್ನಾಚರಿಸಲು ಮನಸ್ಸುಮಾಡಿದನು. ಅವನು ಸರಸ್ವತಿಯ ಆ ಶ್ರೇಷ್ಠ ತೀರ್ಥಕ್ಕೆ ಹೋಗಿ ಅಲ್ಲಿ ಉಪವಾಸ ನಿಯಮಗಳಿಂದ ತನ್ನ

ದೇಹವನ್ನು ಕೃಶಗೊಳಿಸಿದನು. ಜಲಾಹಾರಿಯಾಗಿ, ವಾಯುಭಕ್ಷಕನಾಗಿ, ಪರ್ಣಾಹಾರಿಯಾಗಿದ್ದನು. ಹಾಗೆಯೇ ನೆಲದ ಮೇಲೆಯೇ ಮಲಗುವುದು ಮುಂತಾದ ಅನ್ಯ ಅನೇಕ ನಿಯಮಗಳನ್ನೂ ಆಚರಿಸಿದನು.

ದೇವತೆಗಳಾದರೋ ಅವನ ವ್ರತವಿಘ್ನವನ್ನುಂಟು ಮಾಡಲು ಬಹಳವಾಗಿ ಪ್ರಯತ್ನಿಸಿದರು. ಆದರೂ ಆ ಮಹಾತ್ಮನ ಬುದ್ಧಿಯು ನಿಯಮಗಳಿಂದ ವಿಚಲಿತಗೊಳ್ಳಲಿಲ್ಲ. ಆಗ ಪರಮ ಪ್ರಯತ್ನದಿಂದ ಬಹುವಿಧದ ತಪಸ್ಸನ್ನು ತಪಿಸಿ ಗಾಧಿಜನು ತೇಜಸ್ಸಿನಲ್ಲಿ ಭಾಸ್ಕರಾಕಾರನಾಗಿ ಬೆಳೆದನು. ಹಾಗೆ ತಪಸ್ಸಿನಲ್ಲಿ ಯುಕ್ತನಾಗಿರುವ ವಿಶ್ವಾಮಿತ್ರನಿಗೆ ಮಹಾತೇಜಸ್ವಿ ವರದ ಪಿತಾಮಹನು ವರವನ್ನೀಯಲು ನಿಶ್ಚಯಿಸಿದನು.

“ನಾನು ಬ್ರಾಹ್ಮಣನಾಗಬೇಕು!”

ಎಂದು ಅವನು ವರವನ್ನು ಕೇಳಿಕೊಳ್ಳಲು ಸರ್ವಲೋಕಪಿತಾಮಹ ಬ್ರಹ್ಮನು

“ಹಾಗೆಯೇ ಆಗಲಿ!”

ಎಂದನು. ಉಗ್ರತಪಸ್ಸಿನಿಂದ ಬಾಹ್ಮಣತ್ವವನ್ನು ಪಡೆದು ಆ ಮಹಾಯಶಸ್ವಿಯು ಸುರರಂತೆ ಆಸೆಯನ್ನೀಡೇರಿಸಿಕೊಂಡು ಇಡೀ ಪೃಥ್ವಿಯಲ್ಲಿ ಸಂಚರಿಸಿದನು.

# ಬಕ ದಾಲ್ಭ್ಯನ ಚರಿತ್ರೆ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 40ರಲ್ಲಿ ಹೇಳುತ್ತಾನೆ.

ದಾಲ್ಭ್ಯ ಬಕನು ಘೋರರೂಪದ ತಪಸ್ಸಿನಿಂದ ತನ್ನ ದೇಹವನ್ನು ಕೃಶಗೊಳಿಸಿದ್ದನು. ಆದರೆ ಆ ಧರ್ಮಾತ್ಮ ಪ್ರತಾಪವಾನನು ಮಹಾಕ್ರೋಧಿಷ್ಟನಾಗಿದ್ದನು. ಹಿಂದೆ ನೈಮಿಷವಾಸಿಗಳ ಹನ್ನೆರಡು ವರ್ಷಗಳ ಸತ್ರವು ನಡೆಯುತ್ತಿರಲು ವಿಶ್ವಜಿತು ಯಾಗವು ಸಂಪೂರ್ಣಗೊಳ್ಳಲು ಋಷಿಗಳು ಪಾಂಚಾಲರಲ್ಲಿಗೆ ಹೋದರು. ಅಲ್ಲಿಗೆ ಹೋಗಿ ರಾಜನಿಂದ ದಕ್ಷಿಣೆಯನ್ನು ಕೇಳಿ ಆ ಮುನಿಗಳು ಬಲಾನ್ವಿತ, ರೋಗರಹಿತ ಇಪ್ಪತ್ತೊಂದು ಹೋರಿಕರುಗಳನ್ನು ಪಡೆದರು. ಆಗ ವೃದ್ಧ ಬಕನು ಅವರಿಗೆ

> “ಪಶುಗಳನ್ನು ನೀವೇ ಹಂಚಿಕೊಳ್ಳಿರಿ. ನನ್ನ ಪಾಲಿನ ಪಶುವನ್ನು ನಿಮಗೇ ಬಿಟ್ಟುಕೊಟ್ಟು, ನಾನು ಇನ್ನೊಬ್ಬ ರಾಜಸತ್ತಮನಲ್ಲಿ ಭಿಕ್ಷೆಯಾಗಿ ಪಡೆಯುತ್ತೇನೆ!”

ಹೀಗೆ ಆ ಋಷಿಗಳೆಲ್ಲರಿಗೆ ಹೇಳಿ ಆ ಪ್ರತಾಪವಾನ್ ಬ್ರಾಹ್ಮಣೋತ್ತಮನು ಧೃತರಾಷ್ಟ್ರನ ಭವನಕ್ಕೆ ಹೋದನು. ಜನೇಶ್ವರ ಧೃತರಾಷ್ಟ್ರನ ಸಮೀಪ ಹೋಗಿ ದಾಲ್ಭ್ಯನು ಪಶುಗಳನ್ನು

ಯಾಚಿಸಿದನು. ಆಗ ರಾಜನು ರೋಷಗೊಂಡು ಅವನೊಂದಿಗೆ ಮಾತನಾಡಿದನು. ಆ ನೃಪಸತ್ತಮನು ದೈವೇಚ್ಛೆಯಿಂದ ಮೃತಗೊಂಡಿದ್ದ ಗೋವುಗಳನ್ನು ನೋಡಿ

> "ಬ್ರಹ್ಮಬಂಧುವೇ! ನಿನಗೆ ಇಷ್ಟವಾದರೆ ಈ ಪಶುಗಳನ್ನು ಬೇಗನೇ ಕೊಂಡೊಯ್ಯಿ!"

ಎಂದನು. ಆ ಮಾತನ್ನು ಕೇಳಿ ಧರ್ಮವಿದು ಋಷಿಯು

> "ಅಯ್ಯೋ! ಸಂಸದಿಯಲ್ಲಿ ಇಂತಹ ಕಠೋರ ಮಾತುಗಳನ್ನು ಕೇಳಬೇಕಾಯಿತಲ್ಲ!"

ಎಂದು ಚಿಂತಿಸಿದನು. ಮುಹೂರ್ತಕಾಲ ಚಿಂತಿಸಿ ರೋಷಾವಿಷ್ಟನಾದ ಆ ದ್ವಿಜೋತ್ತಮನು ಭೂಪತಿ ಧೃತರಾಷ್ಟ್ರನ ವಿನಾಶದ ಕುರಿತು ನಿಶ್ಚಯಿಸಿದನು. ಆ ದ್ವಿಜಸತ್ತಮನು ಮೃತ ಪಶುಗಳನ್ನೆತ್ತಿಕೊಂಡು ಹೋಗಿ ನರಪತಿ ಧೃತರಾಷ್ಟ್ರನ ರಾಜ್ಯವನ್ನು ಹೋಮಮಾಡಿದನು. ಮಹಾತಪಸ್ವಿ ದಾಲ್ಭ್ಯ ಬಕನು ನಿಯಮಾಸ್ಥಿತನಾಗಿದ್ದುಕೊಂಡು ಸರಸ್ವತಿಯ ಅವಕೀರ್ಣ ತೀರ್ಥದಲ್ಲಿ ಯಜ್ಞೇಶ್ವರನನ್ನು ಪ್ರಜ್ವಲಿಸಿ ಅದರಲ್ಲಿಯೇ ಮಾಂಸಗಳಿಂದ ರಾಷ್ಟ್ರವನ್ನು ಆಹುತಿಯಾಗಿತ್ತನು. ಆ ಸುದಾರುಣ ಸತ್ರವು ವಿಧಿವತ್ತಾಗಿ ಮುಂದುವರೆಯುತ್ತಿದ್ದ ಹಾಗೇ ಧೃತರಾಷ್ಟ್ರನ ರಾಷ್ಟ್ರವು ಕ್ಷೀಣಿಸುತ್ತಾ ಬಂದಿತು. ಕೊಡಲಿಯಿಂದ ಕತ್ತರಿಸಲ್ಪಡುತ್ತಾ ಅರಣ್ಯವು ಕ್ಷೀಣಗೊಳ್ಳುವಂತೆ ಧೃತರಾಷ್ಟ್ರನ

ರಾಷ್ಟ್ರವು ಕ್ಷೀಣಿಸುತ್ತಾ ಬಂದಿತು. ತನ್ನ ರಾಷ್ಟ್ರವು ಕ್ಷೀಣಿಸುತ್ತಿರುವುದನ್ನು ನೋಡಿದ ಪ್ರಭು ಮನುಜಾಧಿಪನು ಚಿಂತಿಸಿ ದುಃಖಿತನಾದನು. ಸಂಕಟ ವಿಮೋಚನೆಗಾಗಿ ಬ್ರಾಹ್ಮಣರೊಂದಿಗೆ ಪ್ರಯತ್ನಪಟ್ಟನು. ಆದರೂ ಪಾರ್ಥಿವ ಮತ್ತು ವಿಪ್ರರು ಖಿನ್ನರಾಗಿಯೇ ಇದ್ದರು. ರಾಷ್ಟ್ರವನ್ನು ಆ ಸಂಕಟದಿಂದ ಮುಕ್ತಗೊಳಿಸಲು ಸಾಧ್ಯವಿಲ್ಲದಾದಾಗ ಅವನು ವೈಪ್ರಾಶ್ನಿಕರನ್ನು ಕೇಳಿದನು. ಆಗ ವೈಪ್ರಾಶ್ನಿಕರು ಹೇಳಿದರುಃ

> “ನೀನು ವಿಪ್ರನಿಗೆ ನೀಡಿದ ಪಶುಗಳ ಮಾಂಸಗಳಿಂದ ಮುನಿ ಬಕನು ನಿನ್ನ ರಾಷ್ಟ್ರವನ್ನು ಆಹುತಿಯನ್ನಾಗಿ ಕೊಟ್ಟು ಹೋಮಿಸುತ್ತಿದ್ದಾನೆ. ಅವನು ಹಾಗೆ ಹೋಮ ಮಾಡುತ್ತಿರುವುದರಿಂದ ನಿನ್ನ ಮಹಾ ರಾಷ್ಟ್ರವು ಕ್ಷಯವಾಗುತ್ತಿದೆ. ಆ ತಪಸ್ವಿಯ ಕರ್ಮದಿಂದಲೇ ನಿನಗೆ ಈ ಮಹಾ ನಷ್ಟವುಂಟಾಗುತ್ತಿದೆ. ಪಾರ್ಥಿವ! ಸರಸ್ವತೀ ನದಿಯ ತೀರದ ಕುಂಜಗಳಲ್ಲಿರುವ ಅವನನ್ನು ಪ್ರಸನ್ನಗೊಳಿಸು!”

ಅನಂತರ ರಾಜನು ಸರಸ್ವತೀ ತೀರಕ್ಕೆ ಹೋಗಿ ಭೂಮಿಯ ಮೇಲೆ ಶಿರಸಾ ಬಿದ್ದು ಕೈಮುಗಿದು ಬಕನಿಗೆ ಹೇಳಿದನುಃ

> “ಭಗವನ್! ನೀನು ಪ್ರಸನ್ನನಾಗು. ಈ ದೀನ-ಲುಬ್ಧನು ಮೂರ್ಖತನದಿಂದಾಗಿ ಚೇತನವನ್ನೇ ಕಳೆದುಕೊಂಡು ಮಾಡಿದ್ದ ಅಪರಾಧವನ್ನು ಕ್ಷಮಿಸು. ನಾಥ! ನನಗೆ ನೀನೇ ಗತಿ! ನನ್ನ ಮೇಲೆ ಪ್ರಸನ್ನನಾಗಬೇಕು!”

ಶೋಕೋಪಹತಚೇತಸನಾಗಿ ಹಾಗೆ ವಿಲಪಿಸುತ್ತಿರುವ ಅವನನ್ನು ನೋಡಿ ಬಕನಲ್ಲಿ ಕೃಪೆಯುಂಟಾಯಿತು. ಅವನ ರಾಷ್ಟ್ರವನ್ನು ಮುಕ್ತಗೊಳಿಸಿದನು. ಋಷಿಯು ಕೋಪವನ್ನು ತೊರೆದು ಪ್ರಸನ್ನನಾದನು. ಅವನ ರಾಜ್ಯದ ವಿಮೋಚನೆಗಾಗಿ ಪುನಃ ಆಹುತಿಯನ್ನು ಹೋಮಿಸಿದನು. ರಾಷ್ಟ್ರವನ್ನು ಮುಕ್ತಗೊಳಿಸಿ, ಅನೇಕ ಪಶುಗಳನ್ನು ಸ್ವೀಕರಿಸಿ, ಹೃಷ್ಟಾತ್ಮನಾಗಿ ಮುನಿಯು ಪುನಃ ನೈಮಿಷಾರಣ್ಯಕ್ಕೆ ತೆರಳಿದನು. ಧರ್ಮಾತ್ಮಾ ಮಹಾಮನಸ್ವಿ ರಾಜಾ ಧೃತರಾಷ್ಟ್ರನೂ ಕೂಡ ತನ್ನ ಸಮೃದ್ಧ ನಗರಕ್ಕೆ ಪ್ರಯಾಣಿಸಿದನು.

# ವಸಿಷ್ಠಾಪವಾಹ ಚರಿತ್ರೆ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 41ರಲ್ಲಿ ಹೇಳುತ್ತಾನೆ.

ತಪಸ್ಸಿನಲ್ಲಿ ಪರಸ್ಪರರ ಸ್ಪರ್ಧೆಯುಂಟಾದುದರಿಂದ ವಿಶ್ವಾಮಿತ್ರ ಮತ್ತು ಋಷಿ ವಸಿಷ್ಠರಲ್ಲಿ ತುಂಬಾ ವೈರವು ಬೆಳೆಯಿತು. ಸರಸ್ವತಿಯ ಪೂರ್ವದಿಕ್ಕಿನ ಸ್ಥಾಣುತೀರ್ಥವು ವಸಿಷ್ಠನ ಮಹಾ ಆಶ್ರಮವಾಗಿತ್ತು. ನದಿಯ ಪಶ್ಚಿಮದಲ್ಲಿ ಧೀಮತ ವಿಶ್ವಾಮಿತ್ರನ ಆಶ್ರಮವಿತ್ತು. ಅಲ್ಲಿಯೇ ಸ್ಥಾಣುವು ಮಹಾತಪಸ್ಸನ್ನು ತಪಿಸಿದ್ದನು. ಅಲ್ಲಿ ಅವನು ಘೋರ ತಪಸ್ಸಿನಲ್ಲಿ ತೊಡಗಿದ್ದನು. ಭಗವಾನ್ ಸ್ಥಾಣುವು ಸರಸ್ವತಿಯನ್ನು ಪೂಜಿಸಿ ಅಲ್ಲಿ ಸ್ಥಾಪಿಸಿದುದರಿಂದ ಆ ತೀರ್ಥವು

ಸ್ಥಾಣುತೀರ್ಥವೆಂದಾಯಿತು. ಅಲ್ಲಿಯೇ ಸರ್ವ ಸುರರೂ ಸುರಾರಿ ಸ್ಕಂದನನ್ನು ಮಹಾ ಸೇನಾಪತಿಯಾಗಿ ಅಭಿಷೇಕಿಸಿದರು. ಅದೇ ಸರಸ್ವತೀ ತೀರ್ಥದಲ್ಲಿ ಮಹಾಮುನಿ ವಿಶ್ವಾಮಿತ್ರನು ಉಗ್ರ ತಪಸ್ಸಿನಿಂದ ವಸಿಷ್ಠನನ್ನು ವಿಚಲಿತನನ್ನಾಗಿಸಿದನು. ತಪೋಧನ ವಿಶ್ವಾಮಿತ್ರ-ವಸಿಷ್ಠರಿಬ್ಬರೂ ದಿನನಿತ್ಯವೂ ಉಗ್ರ ತಪಸ್ಸನ್ನು ಮಾಡುತ್ತಾ ಸ್ಪರ್ಧಿಸುತ್ತಿದ್ದರು. ತಾನು ಅಧಿಕವಾಗಿ ತಪಿಸುತ್ತಿದ್ದರೂ ಮಹಾಮುನಿ ವಿಶ್ವಾಮಿತ್ರನು ವಸಿಷ್ಠನ ತೇಜಸ್ಸನ್ನು ನೋಡಿ ಚಿಂತಾಪರನಾದನು. ಆ ಧರ್ಮನಿತ್ಯನಲ್ಲಿ ಈ ಯೋಚನೆಯು ಮೂಡಿತು:

> “ಈ ಸರಸ್ವತಿಯು ಅತಿವೇಗದಿಂದ ಕೂಡಲೇ ತಪೋಧನ ಜಪಿಶ್ರೇಷ್ಠ ವಸಿಷ್ಠನನ್ನು ನನ್ನ ಸಮೀಪಕ್ಕೆ ಕರೆತರುತ್ತಾಳೆ. ಇಲ್ಲಿಗೆ ಬಂದ ದ್ವಿಜಶ್ರೇಷ್ಠನನ್ನು ನಾನು ಸಂಹರಿಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ!”

ಈ ರೀತಿ ನಿಶ್ಚಯಿಸಿದ ಮಹಾಮುನಿ ವಿಶ್ವಾಮಿತ್ರನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಸರಿತಶ್ರೇಷ್ಠೆ ಸರಸ್ವತಿಯನ್ನು ಸ್ಮರಿಸಿದನು. ವಿಶ್ವಾಮಿತ್ರ ಮುನಿಯು ತನ್ನನ್ನು ಧ್ಯಾನಿಸುತ್ತಿದ್ದಾನೆಂದೂ ಆ ಮಹಾವೀರ್ಯನು ಮಹಾಕೋಪದಿಂದಿದ್ದಾನೆಂದೂ ತಿಳಿದ ಭಾಮಿನೀ ಸರಸ್ವತಿಯು ವ್ಯಾಕುಲಗೊಂಡಳು. ವಿವರ್ಣಳಾಗಿ ನಡುಗುತ್ತಾ ಸರಸ್ವತಿಯು ಕೈಮುಗಿದು ಮುನಿವರ ವಿಶ್ವಾಮಿತ್ರನ ಬಳಿ ಉಪಸ್ಥಿತಳಾದಳು. ವೀರನನ್ನು ಕಳೆದುಕೊಂಡ ನಾರಿಯಂತೆ ತುಂಬಾ

ದುಃಖಿತಳಾಗಿದ್ದ ಅವಳು

"ಏನು ಮಾಡಬೇಕು?"

ಎಂದು ಮುನಿಸತ್ತಮನಿಗೆ ಕೇಳಿದಳು.

"ವಸಿಷ್ಠನನ್ನು ಶೀಘ್ರದಲ್ಲಿಯೇ ಇಲ್ಲಿಗೆ ಕರೆತಾ! ಅವನನ್ನು ಇಂದು ಸಂಹರಿಸುತ್ತೇನೆ!"

ಎಂದು ಕ್ರುದ್ಧ ಮುನಿಯು ಅವಳಿಗೆ ಹೇಳಲು, ಅದನ್ನು ಕೇಳಿದ ನದಿಯು ವ್ಯಥಿತಳಾದಳು. ಕಮಲದಂತಹ ಕಣ್ಣುಳ್ಳ ಅವಳು ಕೈಮುಗಿದು ಸುಂಟರಗಾಳಿಗೆ ಸಿಲುಕಿದ ಲತೆಯಂತೆ ಭೀತಳಾಗಿ ನಡುಗುತ್ತಾ ವಿವ್ಯಥಳಾದಳು. ಅವಳು ಹೋಗದೇ ಇನ್ನೂ ಕೈಮುಗಿದು ನಡುಗುತ್ತಾ ನಿಂತಿರುವುದನ್ನು ನೋಡಿ ಕ್ರುದ್ಧ ವಿಶ್ವಾಮಿತ್ರನು

"ವಸಿಷ್ಠನನ್ನು ಶೀಘ್ರವಾಗಿ ಇಲ್ಲಿಗೆ ಕರೆತಾ!"

ಎಂದು ಪುನಃ ಹೇಳಿದನು. ಇಬ್ಬರ ಶಾಪಗಳಿಂದಲೂ ಭೀತಳಾದ ಸರಿತ ಶ್ರೇಷ್ಠೆಯು ಮುಂದೇನಾಗುವುದು ಎಂದು ಚಿಂತಿಸತೊಡಗಿದಳು. ಆಗ ಆ ಸರಿತಶ್ರೇಷ್ಠೆಯು ವಸಿಷ್ಠನ ಬಳಿಹೋಗಿ ಧೀಮಂತ ವಿಶ್ವಾಮಿತ್ರನು ಹೇಳಿದುದೆಲ್ಲವನ್ನೂ ಅವನಿಗೆ ತಿಳಿಸಿದಳು. ಇಬ್ಬರ ಶಾಪದಿಂದಲೂ ಭೀತಳಾಗಿ ಪುನಃ ಪುನಃ ನಡುಗುತ್ತಿದ್ದ ಅವಳು ಋಷಿಯ ಮಹಾಶಾಪದ ಕುರಿತು ಬಹಳವಾಗಿ ಚಿಂತಿಸಿದಳು.

ಕೃಶಳೂ, ವಿವರ್ಣಳೂ, ಚಿಂತಾಸಮಾನ್ವಿತಳೂ ಆದ ಅವಳನ್ನು ನೋಡಿ ನರರಲ್ಲಿಯೇ ಶ್ರೇಷ್ಠ ಧರ್ಮಾತ್ಮಾ ವಸಿಷ್ಠನು ಹೀಗೆ ಹೇಳಿದನು:

> “ಸರಿತಶ್ರೇಷ್ಠೇ! ಮೊದಲು ನಿನ್ನ ರಕ್ಷಣೆ ಮಾಡಿಕೊಳ್ಳಬೇಕು. ಶೀಘ್ರವಾಗಿ ಹರಿದು ನನ್ನನ್ನು ಅವನಿರುವಲ್ಲಿಗೆ ತೇಲಿಸಿಕೊಂಡು ಹೋಗು. ಇಲ್ಲವಾದರೆ ವಿಶ್ವಾಮಿತ್ರನು ನಿನ್ನನ್ನು ಶಪಿಸಬಹುದು. ಇದರ ಕುರಿತು ನೀನು ವಿಚಾರಣೆ ಮಾಡಬೇಡ!”

ಕೃಪಾಶೀಲನ ಆ ಮಾತನ್ನು ಕೇಳಿದ ನದೀ ಸರಸ್ವತಿಯು

> “ಏನು ಮಾಡಿದರೆ ಒಳ್ಳೇಯದಾದೀತು?”

ಎಂದು ಚಿಂತಿಸತೊಡಗಿದಳು. ಅವಳಲ್ಲಿ ಈ ವಿಚಾರವು ಹುಟ್ಟಿಕೊಂಡಿತು:

> “ವಸಿಷ್ಠನು ನನ್ನ ಮೇಲೆ ಅತೀವ ದಯೆಯನ್ನು ಮಾಡಿದ್ದಾನೆ. ಅವನಿಗೆ ಹಿತವಾದ ಕಾರ್ಯವನ್ನು ನಾನೂ ಈಗ ಮಾಡಬೇಕಾಗಿದೆ.”

ತನ್ನ ತೀರದಲ್ಲಿ ಜಪಿಸುತ್ತಿದ್ದ ಮತ್ತು ಹವನಗೈಯುತ್ತಿದ್ದ ಋಷಿಸತ್ತಮ ಕೌಶಿಕನನ್ನು ನೋಡಿ ಸರಸ್ವತಿಯು ಯೋಚಿಸಿದಳು. ಇದೇ ಸಮಯವೆಂದು ತಿಳಿದು ಸರಿತ ಶ್ರೇಷ್ಠೆ ಸರಸ್ವತಿಯು ತನ್ನ ವೇಗದಿಂದ

ವಸಿಷ್ಠನ ಆಶ್ರಮವನ್ನೇ ಕೊಚ್ಚಿಕೊಂಡು ಹೋದಳು. ತನ್ನ ಇಡೀ ಆಶ್ರಮವೇ ತೇಲಿಕೊಂಡು ಹೋಗುತ್ತಿರುವುದರಿಂದ ಮೈತ್ರಾವರುಣಿ ವಸಿಷ್ಠನಿಗೆ ಯಾವ ತೊಂದರೆಯೂ ಆಗಲಿಲ್ಲ. ಅದರಿಂದ ತೃಪ್ತ ವಸಿಷ್ಠನು ಸರಸ್ವತಿಯನ್ನು ಈ ರೀತಿ ಸ್ತುತಿಸಿದನು:

> “ಸರಸ್ವತೀ! ಪಿತಾಮಹನ ಸರೋವರದಿಂದ ಹರಿದುಬಂದಿರುವೆ. ನಿನ್ನ ಉತ್ತಮ ನೀರಿನಿಂದ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ದೇವೀ! ನೀನೇ ಆಕಾಶದಲ್ಲಿ ಹರಿದು ಮೇಘಗಳಲ್ಲಿ ನೀರನ್ನು ತುಂಬಿಸುವೆ! ಹಾಗೆ ಸರ್ವ ನೀರೂ ನೀನೇ ಆಗಿರುವೆ. ನಿನ್ನಿಂದಲೇ ನಾವು ವೇದಾಧ್ಯಯನ ಮಾಡಬಹುದಾಗಿದೆ. ನೀನು ಪುಷ್ಟಿ, ದ್ಯುತಿ, ಕೀರ್ತಿ, ಸಿದ್ಧಿ, ವೃದ್ಧಿ ಮತ್ತು ಉಮಾ. ನೀನೇ ವಾಣೀ, ನೀನೇ ಸ್ವಾಹಾ! ನಿನ್ನಿಂದಲೇ ಈ ಜಗತ್ತು ನಡೆಯುತ್ತಿದೆ. ನೀನೇ ಎಲ್ಲ ಪ್ರಾಣಿಗಳಲ್ಲಿಯೂ ಚತುರ್ವಿಧೆಯಾಗಿ ವಾಸಿಸುತ್ತಿರುವೆ!”

ಮಹರ್ಷಿಯಿಂದ ಹೀಗೆ ಸ್ತುತಿಸಲ್ಪಡುತ್ತಿದ್ದ ಸರಸ್ವತಿಯು ವೇಗದಿಂದ ಆ ವಿಪ್ರನನ್ನು ವಿಶ್ವಾಮಿತ್ರನ ಆಶ್ರಮದ ಕಡೆ ಕೊಂಡೊಯ್ದು ಅವನು ಬಂದಿರುವುದನ್ನು ಮುನಿ ವಿಶ್ವಾಮಿತ್ರನಿಗೆ ನಿವೇದಿಸಿದಳು. ಸರಸ್ವತಿಯು ಅವನನ್ನು ಕರೆತಂದಿರುವುದನ್ನು ನೋಡಿದ ವಿಶ್ವಾಮಿತ್ರನು ಕೋಪಸಮನ್ವಿತನಾಗಿ ವಸಿಷ್ಠನನ್ನು ಕೊಲ್ಲಲು ಆಯುಧವನ್ನು ಹುಡುಕತೊಡಗಿದನು. ಅವನು ಕ್ರುದ್ಧನಾಗಿರುವುದನ್ನು ನೋಡಿ

ಬ್ರಹ್ಮಹತ್ಯೆಯ ಭಯದಿಂದ ಆ ನದಿಯು ವಸಿಷ್ಠನನ್ನು ಪೂರ್ವದಿಕ್ಕಿನೆಡೆಗೆ ತೇಲಿಸಿಕೊಂಡು ಹೋದಳು. ಅವಳು ಇಬ್ಬರ ಮಾತಿನಂತೆಯೂ ಮಾಡಿದಳು. ಆದರೆ ಗಾಧಿಜನು ಮಾತ್ರ ವಂಚಿತನಾದನು. ಋಷಿಸತ್ತಮ ವಸಿಷ್ಠನನ್ನು ತೇಲಿಸಿಕೊಂಡು ಹೋದುದನ್ನು ನೋಡಿ ಸಂಕ್ರುದ್ಧನಾದ ಅಸಹನಶೀಲ ವಿಶ್ವಾಮಿತ್ರನು ಇಂತೆಂದನು:

> “ಸರಿತಶ್ರೇಷ್ಠೇ! ನನ್ನನ್ನು ವಂಚಿಸಿ ಪುನಃ ಹಿಂದಿರುಗಿದ ನೀನು ರಕ್ತವಾಹಿನಿಯಾಗಿ ರಾಕ್ಷಸಗಣಕ್ಕೆ ಅತ್ಯಂತ ಪ್ರಿಯಳಾಗು!”

ಧೀಮತ ವಿಶ್ವಾಮಿತ್ರನಿಂದ ಶಪಿತಳಾದ ಸರಸ್ವತಿಯು ಒಂದು ವರ್ಷಕಾಲ ರಕ್ತ-ಮಿಶ್ರಿತ ನೀರಾಗಿ ಹರಿದಳು. ಸರಸ್ವತಿಯು ಹಾಗಾಗಿದ್ದುದನ್ನು ನೋಡಿ ಋಷಿ-ದೇವತೆ-ಗಂಧರ್ವರು, ಮತ್ತು ಹಾಗೆಯೇ ಅಪ್ಸರೆಯರು ಅತ್ಯಂತ ದುಃಖಿತರಾದರು. ಹೀಗೆ ವಸಿಷ್ಠಾಪವಾಹವು ಲೋಕದಲ್ಲಿ ಪ್ರಖ್ಯಾತವಾಯಿತು. ಆ ಸರಿತ ಶ್ರೇಷ್ಠೆಯು ಪುನಃ ತನ್ನ ಮಾರ್ಗದಲ್ಲಿಯೇ ಹರಿಯತೊಡಗಿದಳು.

ಕ್ರುದ್ಧ ಧೀಮತ ವಿಶ್ವಾಮಿತ್ರನಿಂದ ಶಪಿತಳಾದ ಆ ಶುಭ್ರ ಶ್ರೇಷ್ಠ ತೀರ್ಥದಲ್ಲಿ ರಕ್ತವು ಹರಿಯತೊಡಗಿತು. ಎಲ್ಲ ರಾಕ್ಷಸರು ಅಲ್ಲಿಗೆ ಹೋಗಿ ರಕ್ತವನ್ನು ಕುಡಿದು ಸುಖವನ್ನು ಹೊಂದುತ್ತಿದ್ದರು. ತುಂಬಾ ತೃಪ್ತರಾಗಿ, ಚಿಂತೆಗಳನ್ನು ಕಳೆದುಕೊಂಡು ಸುಖಿಗಳಾಗಿ ಅವರು ಸ್ವರ್ಗವನ್ನೇ ಜಯಿಸಿದರೋ ಎನ್ನುವಂತೆ ನಗುತ್ತಾ ಕುಣಿದಾಡುತ್ತಿದ್ದರು. ಸ್ವಲ್ಪ

ಕಾಲದ ನಂತರ ತಪೋಧನ ಋಷಿಗಳು ತೀರ್ಥಯಾತ್ರೆಗೈಯುತ್ತಾ ಸರಸ್ವತೀ ತೀರಕ್ಕೆ ಬಂದರು. ಅಲ್ಲಿದ್ದ ಎಲ್ಲ ತೀರ್ಥಗಳಲ್ಲಿ ಮುಳುಗಿ ಮುನಿಪುಂಗವರು ಪರಮ ಸಂತೋಷವನ್ನು ಹೊಂದಿದರು. ತಪೋಲುಬ್ಧರಾದ ಆ ವಿಶಾರದರು ಆ ತೀರ್ಥಕ್ಕೂ ಬಂದರು. ಅಲ್ಲಿಗೆ ಬಂದು ಆ ಮಹಾಭಾಗರು ದಾರುಣ ಸರಸ್ವತಿಯ ನೀರು ರಕ್ತದಿಂದ ಕೂಡಿದ್ದುದನ್ನೂ ಅನೇಕ ರಾಕ್ಷಸರು ಅದನ್ನು ಕುಡಿಯುತ್ತಿರುವುದನ್ನೂ ನೋಡಿದರು. ಆ ರಾಕ್ಷಸರನ್ನು ನೋಡಿ ಸಂಶಿತವ್ರತ ಮುನಿಗಳು ಸರಸ್ವತಿಯನ್ನು ಉದ್ಧರಿಸಲು ಪರಮ ಪ್ರಯತ್ನಗಳನ್ನು ಮಾಡಿದರು. ಆ ಮಹಾಭಾಗ ಮಹಾವ್ರತರೆಲ್ಲರೂ ಒಟ್ಟಾಗಿ ಸರಿತ ಶ್ರೇಷ್ಠೆಯನ್ನು ಕರೆದು ಇಂತೆಂದರು:

> “ಕಲ್ಯಾಣೀ! ನಿನ್ನ ಈ ಮಡುವು ರಾಕ್ಷಸರಿಂದ ಸಮಾಕುಲವಾಗಿರಲು ಕಾರಣವೇನೆಂದು ಹೇಳು! ಅದನ್ನು ಕೇಳಿ ನಾವು ಅದಕ್ಕೆ ಪರಿಹಾರದ ಪ್ರಯತ್ನವನ್ನು ಮಾಡುತ್ತೇವೆ.”

ನಡುಗುತ್ತಾ ಅವಳು ನಡೆದುದೆಲ್ಲವನ್ನೂ ಅವರಿಗೆ ಹೇಳಿದಳು. ದುಃಖಿತಳಾಗಿದ್ದ ಅವಳನ್ನು ನೋಡಿ ತಪೋಧನರು ಹೇಳಿದರು:

> “ಅನಘೇ! ಶಾಪದ ಕಾರಣವನ್ನು ನಾವು ಕೇಳಿದೆವು. ನಾವೆಲ್ಲ ತಪೋಧನರೂ ಇರುವ ಪ್ರಯತ್ನಗಳನ್ನು ಮಾಡುತ್ತೇವೆ!”

ಸರಿತಶ್ರೇಷ್ಠೆಗೆ ಹೀಗೆ ಹೇಳಿ ಅವರು

> “ನಾವೆಲ್ಲರೂ ಈ ಸರಸ್ವತಿಯನ್ನು ಶಾಪದಿಂದ ವಿಮೋಚನೆಗೊಳಿಸೋಣ!”

ಎಂದು ಪರಸ್ಪರರಲ್ಲಿ ಮಾತನಾಡಿಕೊಂಡರು. ಅವರ ಆ ಮಾತಿನಿಂದಲೇ ಸರಸ್ವತಿಯು ತನ್ನ ಸ್ವಭಾವವನ್ನು ಪಡೆದು ಹಿಂದಿನಂತೆ ಪ್ರಸನ್ನ ನೀರಾಗಿ ಹರಿಯತೊಡಗಿದಳು. ಆ ಸರಿತಶ್ರೇಷ್ಠೆಯು ಶಾಪವಿಮುಕ್ತಳಾಗಿ ಮೊದಲಿನಂತೆಯೇ ಆದಳು. ಸರಸ್ವತಿಯ ನೀರಿಗೆ ಮುನಿಗಳು ಮಾಡಿದುದನ್ನು ನೋಡಿ ಹಸಿವು-ಬಾಯಾರಿಕೆಗಳಿಂದ ಬಳಲಿದ್ದ ರಾಕ್ಷಸರು ಅಂಜಲೀ ಬದ್ಧರಾಗಿ ಆ ಕೃಪಾಯುಕ್ತ ಮುನಿಗಳೆಲ್ಲರಲ್ಲಿ ಪುನಃ ಪುನಃ ಕೇಳಿಕೊಂಡರು.

> “ನಾವು ಹಸಿವಿನಿಂದ ಸಂಕಟಪಡುತ್ತಿದ್ದೇವೆ. ಶಾಶ್ವತವಾಗಿ ಧರ್ಮಹೀನರೂ ಆಗಿದ್ದೇವೆ. ಸ್ವ-ಇಚ್ಛೆಯಿಂದ ನಾವು ಈ ಪಾಪಕಾರ್ಯಗಳನ್ನು ಮಾಡುತ್ತಿಲ್ಲ. ನಿಮ್ಮಂಥವರ ಅಪ್ರಸನ್ನತೆಯಿಂದಾಗಿಯೇ ನಾವು ದುಷ್ಕರ್ಮಗಳನ್ನು ಮಾಡುತ್ತಾ ಹೋಗುತ್ತೇವೆ. ನಮ್ಮ ಪಾಪವು ಸದಾ ವರ್ಧಿಸುತ್ತಾ ಬಂದು ಈಗ ನಾವು ಬ್ರಹ್ಮರಾಕ್ಷಸರಾಗಿದ್ದೇವೆ. ಬ್ರಾಹ್ಮಣರನ್ನು ದ್ವೇಷಿಸುವ ವೈಶ್ಯ-ಶೂದ್ರ-ಕ್ಷತ್ರಿಯರು ಇಲ್ಲಿ ರಾಕ್ಷಸರಾಗಿ ಹುಟ್ಟುತ್ತಾರೆ. ಆಚಾರ್ಯ-ಋತ್ವಿಜ-ಗುರು-ವೃದ್ಧಜನ ಮತ್ತು ಪ್ರಾಣಿಗಳನ್ನು ಯಾರು

ಅಪಮಾನಿಸುತ್ತಾರೋ ಅವರು ಇಲ್ಲಿ ರಾಕ್ಷಸರಾಗುತ್ತಾರೆ. ಸ್ತ್ರೀಯರ ಯೋನಿದೋಷದಿಂದಾಗಿ ಪಾಪಗಳು ಹೆಚ್ಚಾಗುತ್ತವೆ. ಲೋಕಗಳನ್ನೇ ಉದ್ಧರಿಸಬಲ್ಲ ನೀವು ದ್ವಿಜಸತ್ತಮರು ನಮ್ಮ ಮೇಲೆ ಕಾರುಣ್ಯವನ್ನು ತೋರಿಸಬೇಕು."

ಅವರ ಮಾತನ್ನು ಕೇಳಿ ಮುನಿಗಳು ಮಹಾನದಿ ಸರಸ್ವತಿಯನ್ನು ಸ್ತುತಿಸಿ ತೃಪ್ತಿಗೊಳಿಸಿದರು. ಅನಂತರ ಪ್ರಸನ್ನಮನಸ್ಕರಾದ ಅವರು ರಾಕ್ಷಸರ ಮೋಕ್ಷಕ್ಕಾಗಿ ಹೀಗೆ ಹೇಳಿದರು:

"ಉಗುಳಾಗಲೀ ಕೀಟವಾಗಲೀ ಬಿದ್ದಿರುವ, ತಿಂದು ಮಿಕ್ಕಿದ, ಕೂದಲಿರುವ, ತಿರಸ್ಕಾರಪೂರ್ವಕವಾಗಿ ಕೊಟ್ಟಿರುವ, ಅಳುವಿನ ಕಣ್ಣೀರು ಬಿದ್ದಿರುವ, ನಾಯಿಯು ಮುಟ್ಟಿರುವ ಅನ್ನಗಳೆಲ್ಲವೂ ರಾಕ್ಷಸರು ಭಕ್ಷಿಸಲು ಯೋಗ್ಯವಾದವುಗಳು. ಆದುದರಿಂದ ವಿಧ್ವಾಂಸನು ಅಂಥಹ ದೋಷಗಳಿರುವ ಅನ್ನವನ್ನು ಯಾವಾಗಲೂ ಪ್ರಯತ್ನಪೂರ್ವಕವಾಗಿ ವರ್ಜಿಸಬೇಕು. ಇಂತಹ ಅನ್ನವನ್ನು ತಿನ್ನುವವನು ರಾಕ್ಷಸಾನ್ನವನ್ನು ತಿಂದಂತೆ!"

ಅನಂತರ ಆ ತೀರ್ಥವನ್ನು ಶುದ್ಧಿಗೊಳಿಸಿ ರಾಕ್ಷಸರ ಮೋಕ್ಷಕ್ಕಾಗಿ ಆ ತಪೋಧನ ಋಷಿಗಳು ಪುನಃ ನದೀ ಸರಸ್ವತಿಯನ್ನು ಪ್ರಚೋದಿಸಿದರು. ಋಷಿಗಳ ಇಂಗಿತವನ್ನು ಅರಿತ ಸರಿತಶ್ರೇಷ್ಠೆಯು ತನ್ನ ಶರೀರವನ್ನು ಎಣೆಗೆಂಪಾಗಿ ಪರಿವರ್ತಿಸಿಕೊಂಡಳು. ರಾಕ್ಷಸರು ಅವಳಲ್ಲಿ ಸ್ನಾನಮಾಡಿ

ಶರೀರತ್ಯಾಗ ಮಾಡಿ ಸ್ವರ್ಗಕ್ಕೆ ಹೋದರು. ಆ ಅರುಣಾ ತೀರ್ಥವು ಬ್ರಹ್ಮಹತ್ಯಾದೋಷವನ್ನೂ ಹೋಗಲಾಡಿಸುವಂಥಹುದು. ಇದರ ಅರ್ಥವನ್ನು ಅರಿತುಕೊಂಡಿದ್ದ ಶತಕ್ರತು ದೇವರಾಜನು ಆ ಶ್ರೇಷ್ಠ ತೀರ್ಥದಲ್ಲಿ ಸ್ನಾನಮಾಡಿ ಬ್ರಹ್ಮಹತ್ಯಾಪಾಪದಿಂದ ವಿಮುಕ್ತನಾದನು.

# ಕುಮಾರನ ಪ್ರಭಾವ-ಅಭಿಷೇಕ

### ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 43-45ರಲ್ಲಿ ಹೇಳುತ್ತಾನೆ.

ಹಿಂದೆ ಮಹೇಶ್ವರನ ವೀರ್ಯವು ಸ್ಖಲನವಾಗಿ ಅಗ್ನಿಯಲ್ಲಿ ಬಿದ್ದಿತು. ಸರ್ವಭಕ್ಷಕನಾಗಿದ್ದರೂ ಭಗವಾನ್ ಅಗ್ನಿಯು ಆ ಅಕ್ಷಯ ತೇಜಸ್ಸನ್ನು ದಹಿಸಲು ಸಮರ್ಥನಾಗಲಿಲ್ಲ. ಅದರಿಂದಾಗಿ ಹವ್ಯವಾಹನನು ತೇಜಸ್ವಿಯೂ ದೀಪ್ತಮಾನನೂ ಆದನು. ಆದರೆ ಅವನಿಗೆ ಆ ತೇಜೋಮಯ ಗರ್ಭವನ್ನು ಧರಿಸಲಾಗಲಿಲ್ಲ. ಪ್ರಭು ಬ್ರಹ್ಮನ ನಿಯೋಗದಂತೆ ಆ ದಿವ್ಯ ಭಾಸ್ಕರತೇಜಸ್ಸುಳ್ಳ ಗರ್ಭವನ್ನು ಗಂಗಾನದಿಗೆ ಹೋಗಿ ಅಲ್ಲಿ ಹಾಕಿಬಿಟ್ಟನು. ಗಂಗೆಯೂ ಕೂಡ ಆ ಗರ್ಭವನ್ನು ಧರಿಸಿಕೊಂಡಿರಲು ಸಾಧ್ಯವಾಗಲಿಲ್ಲ. ಅವಳು ಅದನ್ನು ಅಮರರು ಪೂಜಿಸುವ ರಮ್ಯ ಹಿಮವತ್ ಗಿರಿಗಳಲ್ಲಿ ವಿಸರ್ಜಿಸಿದಳು. ಆ

ಅಗ್ನಿಪುತ್ರನು ಲೋಕಗಳನ್ನೆಲ್ಲಾ ಆವರಿಸಿ ಬೆಳೆಯತೊಡಗಿದನು. ಜ್ವಲನಾಕಾರದ ಆ ಗರ್ಭವನ್ನು ಕೃತ್ತಿಕೆಯರು ನೋಡಿದರು. ಆ ಪುತ್ರಾರ್ಥಿಗಳೆಲ್ಲರೂ ಜೊಂಡುಹುಲ್ಲಿನ ಮಧ್ಯದಲ್ಲಿದ್ದ ಅನಲಾತ್ಮಜ ಈಶ್ವರ ಮಹಾತ್ಮನನ್ನು ನನ್ನವನು ನನ್ನವನು ಎಂದು ಕೂಗಿಕೊಂಡರು. ಅವರ ಮಾತೃಭಾವವನ್ನು ಅರಿತುಕೊಂಡ ಪ್ರಭು ಭಗವಾನನು ಅವರ ಸ್ತನಗಳಿಂದ ಸ್ರವಿಸುತ್ತಿದ್ದ ಹಾಲನ್ನು ತನ್ನ ಆರು ಮುಖಗಳಿಂದಲೂ ಕುಡಿದನು. ದಿವ್ಯರೂಪವನ್ನು ಧರಿಸಿದ್ದ ಕೃತ್ತಿಕಾ ದೇವಿಯರು ಆ ಬಾಲಕನ ಪ್ರಭಾವವನ್ನು ನೋಡಿ ಪರಮ ವಿಸ್ಮಿತರಾದರು. ಗಂಗೆಯು ಯಾವ ಗಿರಿಶಿಖರದ ಮೇಲೆ ಆ ಭಗವಾನನನ್ನು ಬಿಟ್ಟಿದ್ದಳೋ ಆ ಶೈಲವೆಲ್ಲವೂ ಕಾಂಚನಮಯವಾಯಿತು. ವರ್ಧಿಸುತ್ತಿರುವ ಆ ಗರ್ಭದಿಂದ ಪೃಥ್ವಿಯೂ ರಂಜಿತಳಾದಳು. ಸುತ್ತಲಿನ ಎಲ್ಲ ಗಿರಿಗಳೂ ಕಾಂಚನಮಯವಾದವು. ಆ ಮಹಾವೀರ್ಯ ಕುಮಾರನು ಕಾರ್ತಿಕೇಯನೆಂದು ವಿಶ್ರುತನಾದನು. ಮಹಾಯೋಗಬಲಾನ್ವಿತನು ಮೊದಲು ಗಾಂಗೇಯನೆನಿಸಿಕೊಂಡಿದ್ದನು.

ಅತೀವ ತಪಸ್ಸು-ವೀರ್ಯಗಳಿಂದ ಸಮನ್ವಿತನಾಗಿದ್ದ ಆ ದೇವನು ಪ್ರಿಯದರ್ಶನ ಚಂದ್ರನಂತೆ ಬೆಳೆಯತೊಡಗಿದನು. ಅವನು ಆ ದಿವ್ಯ ಕಾಂಚನ ಜೊಂಡುಹುಲ್ಲಿನ ಮಧ್ಯೆ ಶ್ರೀಯಿಂದ ಸಮಾವೃತನಾಗಿ ಗಂಧರ್ವ-ಮುನಿಗಳಿಂದ ಸ್ತುತಿಸಲ್ಪಡುತ್ತಾ ಮಲಗಿದ್ದನು. ದಿವ್ಯ ವಾದ್ಯ-ನೃತ್ಯಗಳಲ್ಲಿ ಪರಿಣಿತ ಸಾವಿರಾರು ಸುಂದರ ದೇವಕನ್ಯೆಯರು ಅವನನ್ನು ಸ್ತುತಿಸಿ ಸಮೀಪದಲ್ಲಿ ನರ್ತಿಸುತ್ತಿದ್ದರು. ಸರಿತೆಯರಲ್ಲಿ ಶ್ರೇಷ್ಠೆ ನದೀ

ಗಂಗೆಯು ಅವನ ಹತ್ತಿರ ಕುಳಿತುಕೊಂಡಿದ್ದಳು. ಪೃಥ್ವಿಯು ಉತ್ತಮ ರೂಪವನ್ನು ತಾಳಿ ಬೆಳಗುತ್ತಾ ಅವನನ್ನು ಎತ್ತಿಕೊಂಡಿದ್ದಳು. ಬೃಹಸ್ಪತಿಯು ಅವನ ಜಾತಕರ್ಮಾದಿ ಕ್ರಿಯೆಗಳನ್ನು ನಡೆಸಿದನು. ಚತುರ್ಮೂರ್ತಿ ವೇದವೂ ಕೂಡ ಕೈಮುಗಿದು ಅವನ ಬಳಿ ಕುಳಿತು ಪೂಜಿಸಿತು. ನಾಲ್ಕು ಪಾದಗಳ ಧನುರ್ವೇದ, ಶಸ್ತ್ರಗ್ರಾಮ ಸಂಗ್ರಹವೂ, ಸಾಕ್ಷಾದ್ ವಾಣಿಯೂ ಅಲ್ಲಿ ಸೇರಿ ಅವನನ್ನು ಉಪಾಸಿಸುತ್ತಿದ್ದರು. ಅವನು ಭೂತ ಸಮೂಹಗಳಿಂದ ಸಮಾವೃತನಾಗಿ ಶೈಲಪುತ್ರಿಯ ಸಹಿತ ಕುಳಿತಿದ್ದ ಮಹಾವೀರ್ಯ ದೇವದೇವ ಉಮಾಪತಿಯನ್ನು ನೋಡಿದನು. ಆ ಭೂತಸಂಘಗಳ ಶರೀರಗಳು ಪರಮಾದ್ಭುತವಾಗಿ ತೋರುತ್ತಿದ್ದವು. ವಿಕೃತರು ಮತ್ತು ವಿಕೃತಾಕಾರದವರು ವಿಕೃತ ಆಭರಣ-ಧ್ವಜಗಳನ್ನು ಧರಿಸಿದ್ದರು. ಹುಲಿ-ಸಿಂಹ-ಕರಡಿಯ ಮುಖಗಳಿದ್ದವು. ಬೆಕ್ಕು-ಮೊಸಳೆಗಳ ಮುಖವನ್ನು ಹೊಂದಿದ್ದರು. ಅನ್ಯರಿಗೆ ಚೇಳಿನ ಮುಖವಿದ್ದರೆ ಅನ್ಯರಿಗೆ ಆನೆ-ಒಂಟೆಗಳ ಮುಖಗಳಿದ್ದವು. ಕೆಲವರ ಮುಖಗಳು ಗೂಬೆಗಳಂತಿದ್ದರೆ ಇನ್ನು ಇತರರ ಮುಖಗಳು ರಣಹದ್ದು-ಗುಳ್ಳೇನರಿಗಳಂತೆ ತೋರುತ್ತಿದ್ದವು. ಕ್ರೌಂಚ-ಪಾರಿವಾಳ-ಜಿಂಕೆ ಇವೇ ಮೊದಲಾದವುಗಳ ಮುಖಗಳನ್ನೂ ಹೊಂದಿದ್ದರು. ನಾಯಿ-ಮುಳ್ಳುಹಂದಿ-ನೀರುಡ-ಆಡು-ಕುರಿ-ಹಸು ಮೊದಲಾದ ಪ್ರಾಣಿಗಳ ಮುಖಗಳನ್ನೂ ಅಲ್ಲಿದ್ದ ಭೂತಗಣಗಳು ಧರಿಸಿದ್ದವು. ಕೆಲವರು ಮೇಘ-ಪರ್ವತಗಳಂತೆ ಕಾಣುತ್ತಿದ್ದರು. ಕೆಲವರು ಚಕ್ರ-ಗದೆ ಮೊದಲಾದ ಆಯುಧಗಳನ್ನು ಹಿಡಿದಿದ್ದರು.

ಕೆಲವರು ಅಂಜನದ ರಾಶಿಯಂತೆ ಕಪ್ಪಾಗಿದ್ದರು. ಕೆಲವರು ಶ್ವೇತಪರ್ವತ ಪ್ರಭೆಯಿಂದ ಕೂಡಿದ್ದರು. ಸಪ್ತಮಾತೃಗಣಗಳು, ಸಾಧ್ಯರು, ಮರುತರು, ವಸವರು ಮತ್ತು ಪಿತೃಗಳು ಅಲ್ಲಿಗೆ ಬಂದು ಸೇರಿದರು. ಕುಮಾರವರ, ಅಚ್ಯುತನನ್ನು ನೋಡಲು ರುದ್ರರು, ಆದಿತ್ಯರು, ಸಿದ್ಧ-ನಾಗ-ದಾನವ-ಪಕ್ಷಿಗಳು, ವಿಷ್ಣು ಮತ್ತು ಮಕ್ಕಳೊಂದಿಗೆ ಭಗವಾನ್ ಸ್ವಯಂಭೂ ಬ್ರಹ್ಮ, ಶಕ್ರ, ನಾರದ ಪ್ರಮುಖರು, ದೇವ-ಗಂಧರ್ವಸತ್ತಮರು, ದೇವರ್ಷಿಗಳು, ಬೃಹಸ್ಪತಿಪ್ರಮುಖ ಸಿದ್ಧರು, ಯಾಮರು, ಧಾಮರು ಮತ್ತು ಎಲ್ಲರೂ ಅಲ್ಲಿಗೆ ಬಂದು ಸೇರಿದರು. ಮಹಾಯೋಗಬಲಾನ್ವಿತ ಭಗವಾನ್ ಬಾಲಕನಾದರೋ ದೇವೇಶ ಶೂಲಹಸ್ತ ಪಿನಾಕಿನಿಯ ಕಡೆ ಹೊರಟನು. ಅವನು ಬರುವುದನ್ನು ನೋಡಿ ಶಿವ, ಶೈಲಪುತ್ರಿ, ಗಂಗೆ ಮತ್ತು ಪಾವಕರು ಏಕಕಾಲದಲ್ಲಿ

> "ಈ ಬಾಲಕನು ಜನ್ಮಕೊಟ್ಟಿದುದಕ್ಕಾಗಿ ಗೌರವಿಸಲು
> ಯಾರಬಳಿಗೆ ಮೊದಲು ಬರುತ್ತಾನೆ?"

ಎಂದು ಆಲೋಚಿಸಿದರು.

> "ಮೊದಲು ನನ್ನ ಬಳಿಗೆ ಬರುತ್ತಾನೆ!"

ಎಂಬುದು ಅವರೆಲ್ಲರ ಮನೋಗತವಾಗಿತ್ತು. ಆ ನಾಲ್ವರ ಅಭಿಪ್ರಾಯಗಳನ್ನು ತಿಳಿದ ಕುಮಾರನು ಯೋಗಬಲದಿಂದ ಒಂದೇ ಬಾರಿಗೆ ವಿವಿಧ ಶರೀರಗಳನ್ನು ಸೃಷ್ಟಿಸಿದನು. ಕ್ಷಣದಲ್ಲಿಯೇ ಆ ಪ್ರಭು

ಭಗವಾನನು ಚತುರ್ಮೂರ್ತಿಯಾದನು – ಶಾಖ, ವಿಶಾಖ, ನೈಗಮೇಷರು ಸ್ಕಂದನನ್ನು ಅನುಸರಿಸಿದರು. ಹೀಗೆ ಪ್ರಭು ಭಗವಾನನು ತನ್ನನ್ನು ತಾನೇ ನಾಲ್ಕು ಮೂರ್ತಿಗಳನ್ನಾಗಿ ವಿಭಾಗಿಸಿಕೊಂಡನು. ಅದೊಂದು ಅದ್ಭುತವಾಗಿತ್ತು. ಸ್ಕಂದನು ರುದ್ರನಿರುವಲ್ಲಿಗೆ ಹೋದನು. ವಿಶಾಖನು ದೇವೀ ಗಿರಿವರಾತ್ಮಜೆಯಿರುವಲ್ಲಿಗೆ ಹೋದನು. ಭಗವಾನ್ ಶಾಖನು ವಾಯುಮೂರ್ತಿ ವಿಭಾವಸುವಿರುವಲ್ಲಿಗೆ ಹೋದನು. ಪಾವಕಪ್ರಭ ಕುಮಾರ ನೈಗಮೇಷನು ಗಂಗೆಯ ಬಳಿ ಹೋದನು.

ಆ ಎಲ್ಲ ನಾಲ್ಕು ದೇಹಗಳೂ ಸಮರೂಪಿಯಾಗಿ ಹೊಳೆಯುತ್ತಿದ್ದವು ಮತ್ತು ಏಕಕಾಲದಲ್ಲಿ ಆ ನಾಲ್ವರ ಬಳಿ ಹೋದವು. ಅದೊಂದು ಅದ್ಭುತವಾಗಿತ್ತು. ಮಹದಾಶ್ಚರ್ಯವೂ ರೋಮಹರ್ಷಣವೂ ಆದ ಆ ಅದ್ಭುತವನ್ನು ನೋಡಿ ದೇವ-ದಾನವ-ರಾಕ್ಷಸರಲ್ಲಿ ಮಹಾ ಹಾಹಾಕಾರವುಂಟಾಯಿತು. ಆಗ ಗಂಗೆಯ ಸಹಿತ ರುದ್ರ, ದೇವೀ ಮತ್ತು ಪಾವಕರು ಎಲ್ಲರೂ ಜಗತ್ಪತಿ ಪಿತಾಮಹನಿಗೆ ನಮಸ್ಕರಿಸಿದರು. ವಿಧಿವತ್ತಾಗಿ ಅವನಿಗೆ ನಮಸ್ಕರಿಸಿ ಅವರು ಕಾರ್ತಿಕೇಯನಿಗೆ ಪ್ರೀತಿಯನ್ನುಂಟುಮಾಡಲು ಬಯಸಿ ಹೇಳಿದರು:

> “ದೇವೇಶ ! ನಮ್ಮ ಪ್ರೀತ್ಯರ್ಥ್ಯವಾಗಿ ನಿನಗಿಷ್ಟವಾದ ಯಾವುದಾದರೂ ಅಧಿಕಾರವನ್ನು ಈ ಬಾಲಕನಿಗೆ ಕೊಡಬೇಕು !”

ಆಗ ಆ ಭಗವಾನ್ ಧೀಮಾನ ಸರ್ವಲೋಕಪಿತಾಮಹನು ಇವನಿಗೆ

ಏನನ್ನು ಕೊಡಲಿ ಎಂದು ಮನಸ್ಸಿನಲ್ಲಿಯೇ ಚಿಂತಿಸಿದನು. ಈ ಮೊದಲೇ ಸರ್ವ ಐಶ್ವರ್ಯಗಳಿಗೆ ದೇವ-ಗಂಧರ್ವ-ರಾಕ್ಷಸ-ಭೂತ-ಯಕ್ಷ-ಪಕ್ಷಿ-ಪನ್ನಗರೆಲ್ಲರ ಮಹಾತ್ಮರನ್ನೂ ಅಧಿಪತಿಯರನ್ನಾಗಿ ಅಧಿಕಾರ ಕೊಟ್ಟಾಗಿದೆ. ಇವನಾದರೋ ಆ ಎಲ್ಲ ಐಶ್ವರ್ಯಗಳ ಅಧಿಪತಿಯಾಗಲು ಸಮರ್ಥ ಎಂದು ಆ ಮಹಾಮತಿಯು ಅಭಿಪ್ರಾಯಪಟ್ಟನು. ಮುಹೂರ್ತಕಾಲ ಯೋಚಿಸಿ ದೇವತೆಗಳ ಶ್ರೇಯಸ್ಸನ್ನೇ ಬಯಸುತ್ತಿದ್ದ ಅವನು ಕುಮಾರನಿಗೆ ಸರ್ವಭೂತಗಳ ಸೇನಾಪತ್ಯವನ್ನು ಕೊಟ್ಟನು. ಸರ್ವದೇವತೆಗಳ ಸಮೂಹದಲ್ಲಿ ಯಾರೆಲ್ಲ ರಾಜರೆಂದು ಪ್ರಸಿದ್ಧರಾಗಿದ್ದರೋ ಅವರೆಲ್ಲರನ್ನು ಸರ್ವಭೂತಪಿತಾಮಹನು ಕುಮಾರನ ವಶಕ್ಕೊಪ್ಪಿಸಿದನು. ಆಗ ಬ್ರಹ್ಮನನ್ನು ಮುಂದಿರಿಸಿಕೊಂಡು ದೇವತೆಗಳು ಅಭಿಷೇಕಕ್ಕಾಗಿ ಕುಮಾರನನ್ನು ಕರೆದುಕೊಂಡು ಹಿಮವತ್ಪರ್ವತಕ್ಕೆ ತೆರಳಿದರು.

ಅಲ್ಲಿ ಸಮಂತಪಂಚಕದಲ್ಲಿ ಮೂರುಲೋಕಗಳಲ್ಲಿ ವಿಶ್ರುತಳಾಗಿದ್ದ ಹೈಮವತಿ ದೇವೀ ಸರಿತಶ್ರೇಷ್ಠೆ ಸರಸ್ವತಿಯು ಹರಿಯುತ್ತಿದ್ದಳು. ಆ ಸರ್ವಗುಣಾನ್ವಿತೆ ಪುಣ್ಯೇ ಸರಸ್ವತಿಯ ತೀರದಲ್ಲಿ ಸರ್ವ ದೇವ-ಗಂಧರ್ವರು ಸಂಪೂರ್ಣಮಾನಸರಾಗಿ ತಂಗಿದರು. ಅನಂತರ ಬೃಹಸ್ಪತಿಯು ಶಾಸ್ತ್ರಸಮ್ಮತವಾದ ಎಲ್ಲ ಅಭಿಷೇಕಸಾಮಾಗ್ರಿಗಳನ್ನೂ ಸಂಗ್ರಹಿಸಿ ಯಥಾವಿಧಿಯಾಗಿ ಅಗ್ನಿಯಲ್ಲಿ ಸಮಿತ್ತು-ತುಪ್ಪಗಳ ಆಹುತಿಗಳನ್ನಿತ್ತನು. ಆಗ ಹಿಮವತನು ನೀಡಿದ್ದ ಮಣಿಪ್ರವರಶೋಭಿತ ದಿವ್ಯರತ್ನಗಳಿಂದ ಅಲಂಕೃತ ದಿವ್ಯ ಪರಮಾಸನದಲ್ಲಿ ಕುಮಾರನನ್ನು

ಕುಳ್ಳಿರಿಸಿ ದೇವಗಣಗಳು ವಿಧಿವತ್ತಾಗಿ ಮಂತ್ರಪೂರ್ವಕವಾಗಿ ಅಭಿಷೇಕಕ್ಕೆ ಬೇಕಾಗುವ ಸರ್ವ ಮಂಗಲದ್ರವ್ಯಗಳನ್ನೂ ಹಿಡಿದು ಬಂದರು. ಮಹಾವೀರ್ಯ ಇಂದ್ರ ಮತ್ತು ವಿಷ್ಣು, ಸೂರ್ಯ-ಚಂದ್ರರು, ಧಾತಾ-ವಿಧಾತರು, ಅನಿಲ-ಅನಲರು, ಪೂಷ್ಣಾ-ಭಗಾರ್ಯಮರು, ಅಂಶ-ವಿವಸ್ವತರು, ಧೀಮಾನ್ ರುದ್ರನೊಂದಿಗೆ ಮಿತ್ರ-ವರುಣರು, ರುದ್ರ-ವಸು-ಆದಿತ್ಯ-ಅಶ್ವಿನಿಯರಿಂದ ಸುತ್ತುವರೆಯಲ್ಪಟ್ಟ ಪ್ರಭು ರುದ್ರ, ವಿಶ್ವೇದೇವರು, ಮರುತರು, ಸಾಧ್ಯರು, ಪಿತೃಗಳು, ಗಂಧರ್ವರು, ಅಪ್ಸರೆಯರು, ಯಕ್ಷರು, ರಾಕ್ಷಸರು, ಪನ್ನಗಗಳು, ಅಸಂಖ್ಯ ದೇವರ್ಷಿಗಳು, ಬ್ರಹ್ಮರ್ಷಿ ಶ್ರೇಷ್ಠರು, ವೈಖಾನಸರು, ವಾಲಖಿಲ್ಯರು, ಯಾಯ್ವಾಹಾರರು, ಮರೀಚಿಪರು, ಭೃಗುಗಳು, ಆಂಗೀರಸರು, ಮಹಾತ್ಮ ಯತಿಗಳು, ಸರ್ವ ವಿದ್ಯಾಧರರು, ಪುಣ್ಯಯೋಗಸಿದ್ಧರು, ಮಹಾತಪಸ್ವಿ ಪುಲಸ್ತ್ಯ-ಪುಲಹ-ಅಂಗಿರಸ-ಕಶ್ಯಪ-ಅತ್ರಿ-ಮರೀಚಿ-ಭೃಗುಗಳಿಂದ ಆವೃತನಾದ ಪಿತಾಮಹ, ಕ್ರತು, ಹರ, ಪ್ರಚೇತಸರು, ಮನು, ದಕ್ಷ, ಋತುಗಳು, ಗ್ರಹಗಳು, ನಕ್ಷತ್ರಗಳು, ಮೂರ್ತಿಮತ್ತಾದ ನದಿಗಳು ಮತ್ತು ಸನಾತನ ವೇದಗಳು, ಸಮುದ್ರ-ಸರೋವರಗಳು, ವಿವಿಧ ತೀರ್ಥಗಳು, ಪೃಥ್ವಿ-ಆಕಾಶ-ದಿಕ್ಕು-ವೃಕ್ಷಗಳು, ದೇವಮಾತೆ ಅದಿತಿ, ಹ್ರೀ, ಶ್ರೀ, ಸ್ವಾಹಾ, ಸರಸ್ವತೀ, ಉಷಾ, ಶಚೀ, ಸಿನೀವಾಲೀ, ಅನುಮತಿ, ಕುಹೂ, ರಾಕಾ, ದಿಷಣಾ, ಮತ್ತು ಅನ್ಯ ದೇವಪತ್ನಿಯರು, ಹಿಮವಂತ, ವಿಂಧ್ಯ ಮತ್ತು ಅನೇಕ ಶಿಖರಗಳ ಮೇರು, ಅನುಚರರೊಂದಿಗೆ ಐರಾವತ, ಕಲಾ, ಕಾಷ್ಠ, ಮಾಸ, ಪಕ್ಷ, ಋತು,

ರಾತ್ರಿ, ಹಗಲು, ಕುದುರೆಗಳಲ್ಲಿ ಶ್ರೇಷ್ಠ ಉಚ್ಛೈಃಶ್ರವಸ್, ನಾಗರಾಜ ವಾಸುಕಿ, ಅರುಣ, ಗರುಡ, ಔಷಧಿಯುಕ್ತ ವೃಕ್ಷಗಳು, ಭಗವಾನ್ ಧರ್ಮದೇವ, ಕಾಲ, ಯಮ, ಮೃತ್ಯು, ಯಮನ ಅನುಯಾಯಿಗಳು - ಇವರೆಲ್ಲರೂ ಕುಮಾರನ ಅಭಿಷೇಕಾರ್ಥವಾಗಿ ಅಲ್ಲಿ ನೆರೆದಿದ್ದರು. ಎಲ್ಲ ದಿವೌಕಸರೂ ಅಭಿಷೇಕಕ್ಕಾಗಿ ಮಂಗಲ ದ್ರವ್ಯಗಳ ಪಾತ್ರೆಗಳನ್ನು ಹಿಡಿದು ಎಲ್ಲೆಡೆ ನಿಂತಿದ್ದರು. ದಿವ್ಯಸಂಭಾರಸಂಯುಕ್ತ ಕಾಂಚನ ಕಲಶಗಳಲ್ಲಿ ಸರಸ್ವತಿಯೇ ಮೊದಲಾದ ಪುಣ್ಯ ತೀರ್ಥಗಳನ್ನು ತುಂಬಿಸಿ ಸಂಪ್ರಹೃಷ್ಟ ದಿವೌಕಸರು ಅಸುರರಿಗೆ ಭಯಂಕರನಾದ ಮಹಾತ್ಮ ಕುಮಾರನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿದರು. ಹಿಂದೆ ಜಲೇಶ್ವರ ವರುಣನನ್ನು ಹೇಗೆ ಅಭಿಷೇಕಿಸಿದ್ದನೋ ಹಾಗೆ ಲೋಕಪಿತಾಮಹ ಭಗವಾನ್ ಬ್ರಹ್ಮ, ಮಹಾತೇಜಸ್ವಿ ಕಶ್ಯಪ ಮತ್ತು ಇಲ್ಲಿ ಹೆಸರಿಸದ ಅನ್ಯರು ಕುಮಾರನನ್ನು ಅಭಿಷೇಕಿಸಿದರು.

ಅವನ ಮೇಲೆ ಪ್ರೀತನಾದ ವಾತರಂಹಸ ಪ್ರಭುವು ಕುಮಾರನಿಗೆ ಬೇಕಾದ ವೀರ್ಯಸಂಪತ್ತನ್ನು ಪಡೆದುಕೊಳ್ಳಬಲ್ಲ ಬಲಶಾಲೀ ನಾಲ್ಕು ಸಿದ್ಧರನ್ನು ಮಹಾ ಪಾರಿತೋಷವಾಗಿ ಕೊಟ್ಟನು. ನಂದಿಷೇಣ, ಲೋಹಿತಾಕ್ಷ, ಘಂಟಕರ್ಣಾ ಮತ್ತು ಕುಮುದಮಾಲಿನಿ ಇವರೇ ಕುಮಾರನ ವಿಖ್ಯಾತ ನಾಲ್ವರು ಅನುಚರರು. ಆಗ ಸ್ಥಾಣುವು ಮಹಾವೇಗಯುಕ್ತ, ನೂರಾರು ಮಾಯೆಗಳನ್ನು ಅರಿತಿದ್ದ, ಬೇಕಾದ ವೀರ್ಯಬಲಗಳನ್ನು ಪಡೆಯಬಲ್ಲ, ಸುರಾರಿಗಳನ್ನು ಸಂಹರಿಸಬಲ್ಲ ಕಾಮನನ್ನು ಸ್ಕಂದನಿಗೆ ಮಹಾ ಪಾರಿತೋಷವಾಗಿ ನೀಡಿದನು. ಆ

ಭೀಮಕರ್ಮಿಯೇ ದೇವಾಸುರ ಯುದ್ಧದಲ್ಲಿ ಸಂಕ್ರುದ್ಧನಾಗಿ ತನ್ನ ಎರಡು ಬಾಹುಗಳಿಂದಲೇ ಹದಿನಾಲ್ಕು ದಶಲಕ್ಷ ದೈತ್ಯರನ್ನು ಸಂಹರಿಸಿದನು. ಹಾಗೆಯೇ ದೇವತೆಗಳು ಅವನಿಗೆ ನೈರೃತ್ತರಿಂದ ಕೂಡಿದ್ದ ದೇವಶತ್ರುಗಳನ್ನು ನಾಶಪಡಿಸಬಲ್ಲ, ಅಜೇಯವಾದ ವಿಶ್ವರೂಪಿಣೀ ಸೇನೆಯನ್ನು ಒಪ್ಪಿಸಿದರು. ವಾಸವನೊಂದಿಗೆ ಸರ್ವ ದೇವತೆಗಳೂ, ಗಂಧರ್ವ-ಯಕ್ಷ-ರಾಕ್ಷಸರೂ, ಮುನಿ-ಪಿತೃಗಳೂ ಜಯಕಾರ ಮಾಡಿದರು. ಯಮನು ಸ್ಕಂದನಿಗೆ ಯಮ-ಕಾಲರಂತಿದ್ದ ಉನ್ಮಾಥ-ಪ್ರಮಾಥರೆಂಬ ಇಬ್ಬರು ಮಹಾವೀರ್ಯ ಮಹಾದ್ಯುತೀ ಅನುಚರರನ್ನು ಕೊಟ್ಟನು. ಪ್ರತಾಪವಾನ್ ಸೂರ್ಯನು ಪ್ರೀತಿಯಿಂದ ಕಾರ್ತಿಕೇಯನಿಗೆ ಸೂರ್ಯಾನುಯಾಯಿಗಳಾಗಿದ್ದ ಸುಭ್ರಾಜ-ಭಾಸ್ಕರರನ್ನು ಒಪ್ಪಿಸಿದನು. ಸೋಮನು ಕೈಲಾಸಶೃಂಗದಂತಿದ್ದ, ಶ್ವೇತಮಾಲೆ-ಲೇಪನಗಳನ್ನು ಧರಿಸಿದ್ದ ಮಣಿ-ಸುಮಣಿ ಎನ್ನುವ ಇಬ್ಬರು ಅನುಚರರನ್ನು ನೀಡಿದನು. ಹುತಾಶನನು ತನ್ನ ಮಗನಿಗೆ ಜ್ವಾಲಾಜಿಹ್ವ ಮತ್ತು ಜ್ಯೋತಿ ಎನ್ನುವ ಇಬ್ಬರು ಶೂರ ಪರಸೈನ್ಯ ಪ್ರಮಥಿಗಳನ್ನು ಅನುಚರರನ್ನಾಗಿ ಕೊಟ್ಟನು. ಅಂಶನೂ ಕೂಡ ಪರಿಘ, ವಟ, ಮಹಾಬಲ ಭೀಮ, ದಹತಿ, ಮತ್ತು ದಹನ ಎನ್ನುವ ಪ್ರಚಂಡ ವೀರಸಮನ್ವಿತ ಐವರನ್ನು ಅನುಚರರನ್ನಾಗಿ ಧೀಮತ ಸ್ಕಂದನಿಗೆ ನೀಡಿದನು.

ಪರವೀರಹ ವಾಸವನು ಉತ್ಕ್ರೋಶ ಮತ್ತು ಪಂಕಜ ಎನ್ನುವ ಇಬ್ಬರು ವಜ್ರ-ದಂಡಧಾರಿಗಳನ್ನು ಅನಲಪುತ್ರನಿಗೆ ನೀಡಿದನು. ಅವರಿಬ್ಬರೂ ಸಮರದಲ್ಲಿ ಅನೇಕ ಮಹೇಂದ್ರ ಶತ್ರುಗಳನ್ನು ಸಂಹರಿಸಿದರು.

ಮಹಾಯಶಸ್ವಿ ವಿಷ್ಣುವು ಸ್ಕಂದನಿಗೆ ಚಕ್ರ, ವಿಕ್ರಮಕ ಮತ್ತು ಮಹಾಬಲ ಸಂಕ್ರಮ ಈ ಮೂವರು ಅನುಚರರನ್ನು ನೀಡಿದನು. ಅಶ್ವಿನಿಯರು ಪ್ರೀತಿಯಿಂದ ಸ್ಕಂದನಿಗೆ ಸರ್ವವಿದ್ಯಾವಿಶಾರದರಾದ ವರ್ಧನ ಮತ್ತು ನಂದನರನ್ನು ನೀಡಿದರು. ಆ ಮಹಾತ್ಮನಿಗೆ ಧಾತನು ಕುಂದನ, ಕುಸುಮ, ಕುಮುದ ಮತ್ತು ಮಹಾಯಶರಾದ ಡಂಬರ-ಆಡಂಬರರನ್ನು ನೀಡಿದನು. ತ್ವಷ್ಟನು ಸ್ಕಂದನ ಅನುಚರರನ್ನಾಗಿ ಶ್ರೇಷ್ಠ-ಬಲೋತ್ಕಟ-ಮೇಷದ ಮುಖವುಳ್ಳ-ಬಲಶಾಲೀ ವಕ್ರ-ಅನುವಕ್ರರನ್ನು ನೀಡಿದನು. ಪ್ರಭು ಮಿತ್ರನು ಮಹಾತ್ಮ ಕುಮಾರನಿಗೆ ಮಹಾತ್ಮರೂ, ತಪೋವಿದ್ಯಾಧರರೂ ಆದ ಸುವ್ರತ ಮತ್ತು ಸತ್ಯಸಂಧರನ್ನು ನೀಡಿದನು. ವಿಧಾತನು ಕಾರ್ತಿಕೇಯನಿಗೆ ಮೂರುಲೋಕಗಳಲ್ಲಿ ವಿಶ್ರುತರಾದ, ನೋಡಲು ಸುಂದರರಾಗಿದ್ದ, ಲೋಕವಿಶ್ರುತ ಸುಪ್ರಭ ಮತ್ತು ಮಹಾತ್ಮ ಶುಭಕರ್ಮರನ್ನು ನೀಡಿದನು. ಪೂಷನು ಕಾರ್ತಿಕೇಯನಿಗೆ ಪಾಲಿತಕ ಮತ್ತು ಕಾಲಿಕರೆಂಬ ಇಬ್ಬರು ಮಹಾ ಮಾಯಾವಿಗಳನ್ನು ಪಾರ್ಷದರನ್ನಾಗಿ ನೀಡಿದನು. ವಾಯುವು ಕಾರ್ತಿಕೇಯನಿಗೆ ಮಹಾಮುಖಗಳುಳ್ಳ ಮಹಾಬಲಶಾಲೀ ಬಲ ಮತ್ತು ಅತಿಬಲರನ್ನು ಕೊಟ್ಟನು. ಸತ್ಯಸಂಗರ ವರುಣನು ತಿಮಿಂಗಿಲಗಳ ಮುಖವುಳ್ಳ ಮಹಾಬಲಶಾಲೀ ಘಸ ಮತ್ತು ಅತಿಘಸರನ್ನು ಕೊಟ್ಟನು. ಹಿಮವಾನನು ಹುತಾಶನಸುತನಿಗೆ ಮಹಾತ್ಮ ಸುವರ್ಚಸ ಮತ್ತು ಹಾಗೆಯೇ ಅತಿವರ್ಚಸರನ್ನು ಕೊಟ್ಟನು. ಮೇರುವು ಅಗ್ನಿಪುತ್ರನಿಗೆ ಮಹಾತ್ಮ ಕಾಂಚನ ಮತ್ತು ಮೇಘಮಾಲಿನಿಯರನ್ನು ಅನುಚರರನ್ನಾಗಿ

ಕೊಟ್ಟನು. ವರಲ್ಲದೇ ಮೇರುವು ಮಹಾತ್ಮ ಅಗ್ನಿಪುತ್ರನಿಗಾಗಿ ಮಹಾಬಲಪರಾಕ್ರಮಗಳುಳ್ಳ ಸ್ಥಿರ ಮತ್ತು ಅತಿಸ್ಥಿರರಿಬ್ಬರನ್ನೂ ಕೊಟ್ಟನು.

ವಿಂಧ್ಯನು ಅಗ್ನಿಪುತ್ರನಿಗೆ ದೊಡ್ಡ ಬಂಡೆಗಳಿಂದ ಯುದ್ಧಮಾಡಬಲ್ಲ ಉಚ್ಛ್ರಿತ್ರ ಮತ್ತು ಜಾತಿಶ್ರುಂಗರನ್ನು ಪಾರಿಶದರನ್ನಾಗಿ ಕೊಟ್ಟನು. ಸಮುದ್ರನೂ ಕೂಡ ಅಗ್ನಿಪುತ್ರನಿಗೆ ಗದಾಧರರಾದ ಸಂಗ್ರಹ ಮತ್ತು ವಿಗ್ರಹರನ್ನು ಮಹಾಪಾರ್ಷದ (ಸಭಸದ) ರಾಗಿ ಕೊಟ್ಟನು. ಶುಭದರ್ಶನೆ ಪಾರ್ವತಿಯು ಅಗ್ನಿಪುತ್ರನಿಗೆ ಉನ್ಮಾದ, ಪುಷ್ಪದಂತ ಮತ್ತು ಶಂಕುಕರ್ಣರನ್ನು ಕೊಟ್ಟಳು. ಪನ್ನಗೇಶ್ವರ ವಾಸುಕಿಯು ಜ್ವಲನಸೂನುವಿಗೆ ಜಯ ಮತ್ತು ಮಹಾಜಯರೆಂಬ ನಾಗರನ್ನು ಕೊಟ್ಟನು. ಹಾಗೆಯೇ ಸಾಧ್ಯರು, ರುದ್ರರು, ವಸುಗಳು, ಪಿತೃಗಳು, ಸಾಗರಗಳು, ನದಿಗಳು, ಮತ್ತು ಮಹಾಬಲ ಗಿರಿಗಳು ಸೇನಾಗಣಾಧ್ಯಕ್ಷನಿಗೆ ಶೂಲ-ಪಟ್ಟಿಶಗಳನ್ನು ಹಿಡಿದಿದ್ದ, ನಾನಾ ವೇಷವಿಭೂಷಿತ ದಿವ್ಯ ಪ್ರಹರಿಗಳನ್ನು ಕೊಟ್ಟರು. ವಿವಿಧ ಆಯುಧಸಂಪನ್ನರೂ ವಿಚಿತ್ರ ಆಭರಣ-ಕವಚಧಾರಿಗಳೂ ಆದ ಸ್ಕಂದನ ಅನ್ಯ ಸೈನಿಕರ ಹೆಸರುಗಳನ್ನು ಕೇಳು. ಶಂಕುಕರ್ಣ, ನಿಕುಂಭ, ಪದ್ಮ, ಕುಮುದ, ಅನಂತ, ದ್ವಾದಶಭುಜ, ಕೃಷ್ಣ, ಉಪಕೃಷ್ಣ, ದ್ರೋಣಶ್ರವ, ಕಪಿಸ್ಕಂಧ, ಕಾಂಚನಾಕ್ಷ, ಜಲಂಧಮ, ಅಕ್ಷ, ಸಂತರ್ಜನ, ಕುನದೀಕ, ತಮೋಭ್ರಕೃತ್, ಏಕಾಕ್ಷ, ದ್ವಾದಶಾಕ್ಷ, ಏಕಜಟ, ಪ್ರಭು, ಸಹಸ್ರಬಾಹು, ವಿಕಟ, ವ್ಯಾಘ್ರಾಕ್ಷ, ಕ್ಷಿತಿಕಂಪನ, ಪುಣ್ಯನಾಮ, ಸುನಾಮ,

ಸುವಕ್ತ್ರ, ಪ್ರಿಯದರ್ಶನ, ಪರಿಶ್ರುತ, ಕೋಕನದ,
ಪ್ರಿಯಮಾಲ್ಯಾನುಲೇಪನ, ಅಜೋದರ, ಗಜಶಿರ, ಸ್ಕಂಧಾಕ್ಷ,
ಶತಲೋಚನ, ಜ್ವಾಲಜಿಹ್ವ, ಕರಾಲ, ಸಿತಕೇಶ, ಜಟೀ, ಹರಿ,
ಚತುರ್ದಂಷ್ಟ್ರ, ಅಷ್ಟಜಿಹ್ವ, ಮೇಘನಾದ, ಪೃಥುಶ್ರವ, ವಿದ್ಯುದಕ್ಷ,
ಧನುವ್ರಕ್ತ್ರ, ಜಠರ, ಮಾರುತಾಶನ, ಉದರಾಕ್ಷ, ಝುಷಾಕ್ಷ, ವಜ್ರನಾಭ,
ವಸುಪ್ರಭ, ಸಮುದ್ರವೇಗ, ಶೈಲಕಂಪೀ, ಪುತ್ರಮೇಷ, ಪ್ರವಾಹ, ನಂದ,
ಉಪನಂದಕ, ಧೂಮ್ರ, ಶ್ವೇತ, ಕಲಿಂಗ, ಸಿದ್ಧಾರ್ಥ, ವರದ, ಪ್ರಿಯಕ,
ನಂದ, ಪ್ರತಾಪವಾನ್ ಗೋನಂದ, ಆನಂದ, ಪ್ರಮೋದ, ಸ್ವಸ್ತಿಕ,
ಧ್ರುವಕ, ಕ್ಷೇಮವಾಪ, ಸುಜಾತ, ಸಿದ್ಧಯಾತ್ರ, ಗೋವ್ರಜ, ಕನಕಾಪೀಡ,
ಮಹಾಪಾರಿದೇಶ್ವರ, ಗಾಯನ, ಹಸನ, ಬಾಣ, ವೀರ್ಯವಾನ್ ಖಡ್ಗ,
ವೈತಾಲೀ, ಜಾತಿತಾಲೀ, ಕತಿಕ, ಅತಿಕ, ಹಂಸಜ, ಪಂಕದಿಗ್ಧಾಂಗ,
ಸಮುದ್ರ, ಉನ್ಮಾದನ, ರಣೋತ್ಕಟ, ಪ್ರಹಾಸ, ಶ್ವೇತಶೀರ್ಷ, ನಂದಕ,
ಕಾಲಕಂಠ, ಪ್ರಭಾಸ, ಕುಂಭಾಂಡಕ, ಅಪರ, ಕಾಲಕಾಕ್ಷ, ಸಿತ,
ಭೂತಲೋನ್ಮಥ, ಯಜ್ಞವಾಹ, ಪ್ರವಾಹ, ದೇವಯಾಜೀ, ಸೋಮಪ,
ಸಜಾಲ, ಮಹಾತೇಜ ಕ್ರಥ, ಅಕ್ರಥ, ತುಹನ, ತುಹಾನ, ವೀರ್ಯವಾನ್
ಚಿತ್ರದೇವ, ಮಧುರ, ಸುಪ್ರಸಾದ, ಕಿರೀಟೀ, ಮಹಾಬಲ, ಮಸನ,
ಮಧುವರ್ಣ, ಕಲಶೋದರ, ಧಮಂತ, ಮನ್ಮಥಕರ, ವೀರ್ಯವಾನ್
ಸೂಚೀವಕ್ತ್ರ, ಶ್ವೇತವಕ್ತ್ರ, ಸುವಕ್ತ್ರ, ಚಾರುವಕ್ತ್ರ, ಪಾಂಡುರ, ದಂಡಬಾಹು,
ಸುಬಾಹು, ರಜ, ಕೋಕಿಲ, ಅಚಲ, ಕನಕಾಕ್ಷ, ಬಾಲಾನಾಮಯಿಕ,
ಪ್ರಭು, ಸಂಚಾರಕ, ಕೋಕನದ, ಗೃಧ್ರವಕ್ತ್ರ, ಜಂಬುಕ, ಲೋಹಾಶವಕ್ತ್ರ,

ಜಠರ, ಕುಂಭವಕ್ತ್ರ, ಕುಂಡಕ, ಮದ್ಗುಗ್ರೀವ, ಕೃಷ್ಣೌಜ, ಹಂಸವಕ್ತ್ರ, ಚಂದ್ರಭ, ಪಾಣಿಕೂರ್ಮ, ಶಂಬೂಕ, ಪಂಚವಕ್ತ್ರ, ಶಿಕ್ಷಕ, ಚಾಷವಕ್ತ್ರ, ಜಂಬೂಕ, ಶಾಕವಕ್ತ್ರ, ಮತ್ತು ಕುಂಡಕ. ಆ ಎಲ್ಲ ಮಹಾತ್ಮರೂ ಯೋಗಯುಕ್ತರೂ ಸತತ ಬ್ರಾಹ್ಮಣಪ್ರಿಯರೂ ಆಗಿದ್ದರು. ಮಹಾತ್ಮ ಪಿತಾಮಹನು ನೀಡಿದ ಮಹಾ ಪಾರಿಷದರೂ ಬಾಲ-ಯುವಕ-ವೃದ್ಧ ಪಾರಿಷದರೂ ಸಹಸ್ರಾರು ಸಂಖ್ಯೆಗಳಲ್ಲಿ ಕುಮಾರನ ಸೇವೆಯಲ್ಲಿ ನಿರತರಾಗಿದ್ದರು. ನಾನಾವಿಧದ ಮುಖಗಳಿದ್ದ ಅವರ ಕುರಿತು ಹೇಳುತ್ತೇನೆ ಕೇಳು. ಆಮೆ-ಕೋಳಿಯ ಮುಖದವರು, ಮೊಲ-ಗೂಬೆಯ ಮುಖದವರು, ಕತ್ತೆ-ಒಂಟೆಯ ಮುಖದವರು, ಹಂದಿಯ ಮುಖದವರು, ಮನುಷ್ಯ-ಆಡಿನ ಮುಖದವರು, ಮೊಲದ ಮುಖದವರು, ಸೃಗಾಲದ ಮುಖವುಳ್ಳವರು, ಭಯಂಕರ ಮೊಸಳೆಯ ಮುಖವುಳ್ಳವರು, ಶಿಂಶುಮಾರದ ಮುಖವುಳ್ಳವರು, ಬೆಕ್ಕು-ಮೊಲಗಳ ಮುಖವುಳ್ಳವರು, ಉದ್ದನೆಯ ಮುಖವುಳ್ಳವರು, ಮುಂಗಸಿ-ಗೂಬೆಯ ಮುಖವುಳ್ಳವರು, ನಾಯಿಯ ಮುಖವುಳ್ಳವರು, ಕಾಗೆ-ಇಲಿಗಳ ಮುಖವುಳ್ಳವರು, ನವಿಲಿನ ಮುಖವುಳ್ಳವರು, ಮೀನು-ಆಡುಗಳ ಮುಖವುಳ್ಳವರು, ಕುರಿ-ಎಮ್ಮೆಗಳ ಮುಖವುಳ್ಳವರು, ಭಯಂಕರ ಆನೆಗಳ ಮುಖವುಳ್ಳವರು, ಗರುಡನ ಮುಖವುಳ್ಳವರು, ಖಡ್ಗದಂತಹ ಮುಖವುಳ್ಳವರು, ತೋಳ-ಕಾಗೆಗಳ ಮುಖವುಳ್ಳವರು, ಗೋವು-ಕತ್ತೆ-ಒಂಟೆಗಳ ಮುಖವುಳ್ಳವರು, ಕಾಡುಬೆಕ್ಕಿನ ಮುಖದವರೂ ಇದ್ದರು. ಕೆಲವರಿಗೆ ದೊಡ್ಡ ದೊಡ್ಡ ಹೊಟ್ಟೆ-ಕಾಲುಗಳಿದ್ದವು. ಕೆಲವರಿಗೆ

ನಕ್ಷತ್ರಗಳಂತೆ ಹೊಳೆಯುವ ಕಣ್ಣುಗಳಿದ್ದವು. ಕೆಲವರ ಮುಖಗಳು ಪಾರಿವಾಳಗಳಂತಿದ್ದರೆ ಇನ್ನು ಕೆಲವರಿಗೆ ಎತ್ತಿನ ಮುಖಗಳಿದ್ದವು. ಅನ್ಯರು ಕೋಕಿಲವದನರೂ, ಗಿಡುಗ-ಅಗ್ನಿಪಕ್ಷಿಗಳ ಮುಖಗಳುಳ್ಳವರೂ, ಓತಿಕೇತದ ಮುಖವುಳ್ಳವರೂ ಆಗಿದ್ದು ಧೂಳಿಲ್ಲದ ಶುಭ್ರ ವಸ್ತ್ರಗಳನ್ನು ಧರಿಸಿದ್ದರು. ಹಾವಿನ ಮುಖದವರು, ಶೂಲಮುಖರು, ಚಂಡವಕ್ತ್ರರು, ಶತಾನನರು, ನಾಗರಹಾವಿನ ಮುಖದವರು ಮತ್ತು ಹಾಗೆಯೇ ಗೋವಿನ ಮೂಗನ್ನು ಹೊಂದಿದ್ದ ಅವರು ನಾರುಮಡಿಗಳನ್ನು ಧರಿಸಿದ್ದರು. ನಾನಾ ಸರ್ಪಗಳಿಂದ ವಿಭೂಷಿತರಾದ ಅವರು ದೊಡ್ಡ ಹೊಟ್ಟೆಯುಳ್ಳವರೂ, ಬಡಕಲು ದೇಹದವರೂ, ದಪ್ಪ ಅಂಗಾಂಗಗಳು ಮತ್ತು ಸಣ್ಣ ಹೊಟ್ಟೆಯವರು, ಗಿಡ್ಡ ಕತ್ತುಳ್ಳವರೂ, ಮಹಾಕಿವಿಯುಳ್ಳವರೂ ಆಗಿದ್ದರು.

ಗಜೇಂದ್ರ ಚರ್ಮ-ಕೃಷ್ಣಾಜಿನಗಳನ್ನು ಉಡುಪಾಗಿ ಉಟ್ಟಿದ್ದರು. ಕೆಲವರ ಮುಖಗಳು ಭುಜಗಳಲ್ಲಿದ್ದರೆ ಇನ್ನು ಕೆಲವರ ಮುಖಗಳು ಹೊಟ್ಟೆಯಲ್ಲಿದ್ದವು. ಅನೇಕರ ಮುಖಗಳು ದೇಹದ ನಾನಾಕಡೆಗಳಲ್ಲಿದ್ದವು: ಬೆನ್ನಿನಲ್ಲಿ ಮುಖಗಳಿದ್ದವು, ಬಾಯಿಯ ಪಕ್ಕದಲ್ಲಿ ಮುಖಗಳಿದ್ದವು, ಮೊಣಕಾಲಿನಲ್ಲಿ ಮುಖಗಳಿದ್ದವು. ಕೆಲವು ಗಣೇಶ್ವರ ಮುಖಗಳು ಕೀಟ-ಪತಂಗಗಳಂತೆ ಇದ್ದವು. ಅನ್ಯರ ಮುಖಗಳು ಹಾವುಗಳಂತಿದ್ದವು. ಅನೇಕ ಬಾಹು-ಶಿರ-ಹೊಟ್ಟೆಗಳಿದ್ದವು. ಕೆಲವರಿಗೆ ವೃಕ್ಷಗಳಂತೆ ನಾನಾಭುಜಗಳಿದ್ದವು. ಇನ್ನು ಕೆಲವರ ತಲೆಗಳು ಕಟೀಪ್ರದೇಶದಲ್ಲಿದ್ದವು. ನಾಗರ ಹಾವಿನ ಹೆಡೆಯ

ಮುಖಗಳಿದ್ದವು. ನಾನಾ ಗುಲ್ಮಗಳಲ್ಲಿ ವಾಸಿಸುವರಾಗಿದ್ದರು. ನಾರುಮಡಿಗಳನ್ನು ದೇಹಕ್ಕೆ ಸುತ್ತಿಕೊಂಡಿದ್ದರು. ಹಾಗೆಯೇ ಕೆಲವರು ಚಿನ್ನದ ವಸ್ತ್ರಗಳನ್ನು ಧರಿಸಿದ್ದರು. ನಾನಾವೇಷಗಳನ್ನು ದರಿಸಿದ್ದ ಕೆಲವರು ಚರ್ಮಗಳನ್ನೇ ವಸ್ತ್ರವಾಗಿ ಉಟ್ಟಿದ್ದರು. ಕೆಲವರು ಮುಂಡಾಸುಗಳನ್ನು ಧರಿಸಿದ್ದರು. ಕೆಲವರು ಮುಕುಟಗಳನ್ನು ಧರಿಸಿದ್ದರು. ಕೆಲವರಿಗೆ ಸುಂದರ ಕಂಠಗಳಿದ್ದವು. ಸುಂದರ ಮುಖಗಳಿದ್ದವು. ಕಿರೀಟಗಳನ್ನು ಧರಿಸಿದ್ದರು. ಐದು ಜುಟ್ಟುಗಳಿದ್ದವು. ಚಿನ್ನದ ಕೂದಲಿನವರಿದ್ದರು. ಮೂರು ಜುಟ್ಟುಗಳು, ಎರಡು ಜುಟ್ಟುಗಳು ಮತ್ತು ಇತರರಿಗೆ ಏಳು ಜುಟ್ಟುಗಳು ಇದ್ದವು. ಕೆಲವರು ನವಿಲುಗರಿಯನ್ನು ಧರಿಸಿದ್ದರು. ಕೆಲವರು ಮುಕುಟಗಳನ್ನು ಧರಿಸಿದ್ದರು. ಕೆಲವರು ಬೋಳಾಗಿದ್ದರು. ಕೆಲವರು ಜಟೆಯನ್ನು ಧರಿಸಿದ್ದರು. ಬಣ್ಣಬಣ್ಣದ ಮಾಲೆಗಳನ್ನು ಕೆಲವರು ಧರಿಸಿದ್ದರೆ ಇನ್ನು ಕೆಲವರ ಮುಖದ ತುಂಬಾ ಕೂದಲುಗಳಿದ್ದವು. ದಿವ್ಯಮಾಲಾಂಬರಗಳನ್ನು ಧರಿಸಿದ್ದ ಕೆಲವರು ಸತತವೂ ಸುಂದರರಾಗಿ ಕಾಣುತ್ತಿದ್ದರು. ಕಪ್ಪಾಗಿದ್ದವರು, ಮಾಂಸವೇ ಇಲ್ಲದ ಮುಖವುಳ್ಳವರು, ಉದ್ದವಾದ ಕುಂಡೆಗಳುಳ್ಳ, ಉದ್ದವಾದ ದೇಹಗಳುಳ್ಳ, ದೊಡ್ಡ ಕುಂಡೆಗಳುಳ್ಳ, ಸಣ್ಣ ಕುಂಡೆಗಳುಳ್ಳ, ಉದ್ದವಾದ ಹೊಟ್ಟೆಗಳುಳ್ಳವರು ಅಲ್ಲಿದ್ದರು. ಮಹಾಭುಜಗಳುಳ್ಳವರು, ಸಣ್ಣ ಭುಜಗಳುಳ್ಳವರು, ಸಣ್ಣದೇಹದವರು, ವಾಮನರು, ಕುಬ್ಜರು, ದೀರ್ಘ ಮೊಣಕಾಲಿನವರು, ಆನೆಯ ಕಿವಿ-ಶಿರಗಳನ್ನು ಧರಿಸಿದವರು, ಆನೆಯ ಮೂಗಿರುವ, ಆಮೆಯ ಮೂಗಿರುವ,

ತೋಳದ ಮೂಗಿರುವ, ಉದ್ದ ತುಟಿಗಳುಳ್ಳ, ಉದ್ದ ನಾಲಗೆಯ, ವಿಕಾರಮುಖವುಳ್ಳ, ಅಧೋಮುಖವುಳ್ಳ, ದೊಡ್ಡ ಹಲ್ಲುಗಳಿದ್ದ, ಸಣ್ಣ ಹಲ್ಲುಗಳಿದ್ದ, ನಾಲ್ಕು ಹಲ್ಲುಗಳಿದ್ದ, ಮತ್ತು ಆನೆಗಳಂತೆ ಭಯಂಕರರಾಗಿ ಕಾಣುತ್ತಿದ್ದ ಸಹಸ್ರಾರು ಪಾರ್ಷದರು ಅಲ್ಲಿದ್ದರು.

ಸರಿಯಾದ ಅಳತೆಯಲ್ಲಿದ್ದ ಶರೀರಿಗಳೂ, ಅಲಂಕಾರಗಳಿಂದ ಬೆಳಗುತ್ತಿದ್ದವರೂ, ಪಿಂಗಾಕ್ಷರೂ, ಶಂಖುಕರ್ಣರು, ವಕ್ರಮೂಗುಳ್ಳವರೂ, ದಪ್ಪ ಹಲ್ಲಿರುವವರು, ಮಹಾದಂಷ್ಟ್ರಗಳುಳ್ಳವರು, ದಪ್ಪ ತುಟಿಗಳಿದ್ದವರು, ಹಸಿರು ಕೂದಲಿದ್ದವರು, ನಾನಾ ಪಾದ-ತುಟಿ-ಹಲ್ಲುಗಳಿದ್ದವರು, ನಾನಾ ಹಸ್ತ-ಶಿರಗಳಿದ್ದವರು, ನಾನಾ ಕವಚಗಳನ್ನು ಧರಿಸಿದ್ದವರು, ನಾನಾಭಾಷೆಗಳುಳ್ಳವರು, ದೇಶ-ಭಾಷೆಗಳಲ್ಲಿ ಕುಶಲರಾದವರು, ಅನ್ಯೋನ್ಯರೊಂದಿಗೆ ಮಾತನಾಡಿಕೊಳ್ಳುತ್ತಿದ್ದವರು ಹೃಷ್ಟರಾಗಿ ಎಲ್ಲಕಡೆಗಳಲ್ಲಿ ಸಂಚರಿಸುತ್ತಿದ್ದವರು ಆ ಮಹಾಪರಿಷದದಲ್ಲಿದ್ದರು. ಉದ್ದ ಕಂಠಗಳುಳ್ಳವರು, ಉದ್ದ ಉಗುರುಗಳುಳ್ಳವರು, ಉದ್ದವಾದ ಪಾದ-ಶಿರ-ಭುಜಗಳುಳ್ಳವರು, ಪಿಂಗಾಕ್ಷರು, ನೀಲಕಂಠರು, ಲಂಬಕರ್ಣರು ಅಲ್ಲಿದ್ದರು. ತೋಳದ ಹೊಟ್ಟೆಯವರಿದ್ದರು. ಕೆಲವರು ಕಾಡಿಗೆಯಂತೆ ಕಪ್ಪಾಗಿದ್ದರು. ಕೆಲವರು ಬಿಳಿಯಾಗಿದ್ದರು. ಕೆಲವರ ಕತ್ತುಗಳು ಕೆಂಪಾಗಿದ್ದವು. ಇನ್ನು ಇತರರ ಕಣ್ಣುಗಳು ಪಿಂಗಳ ವರ್ಣದ್ದಾಗಿದ್ದವು. ಅನೇಕರು ಮಿಶ್ರವಾದ ವಿಚಿತ್ರ ಬಣ್ಣದವರಾಗಿದ್ದರು. ಕೆಲವರು ಚಾಮರಗಳಂತೆ ಶ್ವೇತವರ್ಣದವರಾಗಿದ್ದರು ಇನ್ನು ಕೆಲವರು

ಬಿಳಿಪು-ಕೆಂಪುಬಣ್ಣದವರಾಗಿದ್ದರು. ಕೆಲವರು ನವಿಲುಗಳಂತೆ ನಾನಾವರ್ಣಗಳು ಮತ್ತು ಸುವರ್ಣದ ಬಣ್ಣವನ್ನು ಹೊಂದಿದ್ದರು. ಬಾಯಿಗಳನ್ನು ತೆರೆದಿದ್ದ ಕೆಲವರು ಕತ್ತೆಗಳ ಮುಖಗಳುಳ್ಳವರು, ಅಗಲ ಕಣ್ಣುಗಳುಳ್ಳವರು, ನೀಲಕಂಠರು ಮತ್ತು ಪರಿಘದಂತಹ ಬಾಹುಗಳುಳ್ಳವರು ಪಾಶಗಳನ್ನು ಎತ್ತಿಹಿಡಿದಿದ್ದರು. ಆ ಮಹಾಕಾಯ ಮಹಾಬಲರು ಶತಘ್ನೀ-ಚಕ್ರಗಳನ್ನು ಹಿಡಿದಿದ್ದರು. ಮುಸಲಗಳನ್ನು ಹಿಡಿದಿದ್ದರು. ಶೂಲ-ಖಡ್ಗಗಳನ್ನು ಹಿಡಿದಿದ್ದರು. ಗದೆ-ಭುಶುಂಡಿಗಳನ್ನು ಹಿಡಿದಿದ್ದರು. ತೋಮರಗಳನ್ನು ಹಿಡಿದಿದ್ದರು. ಖಡ್ಗ-ಮುದ್ಗರಗಳನ್ನು ಹಿಡಿದಿದ್ದರು. ಮತ್ತು ದಂಡಗಳನ್ನು ಹಿಡಿದಿದ್ದರು. ವಿವಿಧ ಘೋರ ಆಯುಧಗಳನ್ನು ಹಿಡಿದ ಮಹಾತ್ಮ, ಮಹಾವೇಗವುಳ್ಳ ಮಹಾಬಲ ಮಹಾವೇಗರು ಆ ಮಹಾಪಾರಿಷದರಲ್ಲಿದ್ದರು. ಕುಮಾರನ ಅಭಿಷೇಕವನ್ನು ನೋಡಿ ಹೃಷ್ಟರಾಗಿ ಆ ರಣಪ್ರಿಯ ಮಹೌಜಸರು ಘಂಟೆಗಳ ಬಲೆಯನ್ನು ಶರೀರಕ್ಕೆ ಸುತ್ತಿಕೊಂಡು ನೃತ್ಯಮಾಡುತ್ತಿದ್ದರು. ಇವರು ಮತ್ತು ಅನ್ಯ ಅನೇಕ ಮಹಾಪಾರಿಷದರು ಯಶಸ್ವಿ ಮಹಾತ್ಮ ಕಾರ್ತಿಕೇಯನ ಉಪಸ್ಥಿತಿಯಲ್ಲಿದ್ದರು.

ಸ್ವರ್ಗ-ಅಂತರಿಕ್ಷ-ಭೂಲೋಕಗಳ ವಾಯುಸದೃಶ ಪರಿಷದ್ವರ್ಗದವರು ದೇವತೆಗಳ ಆದೇಶದಂತೆ ಸ್ಕಂದನ ಅನುಚರರಾದರು. ಅಂತಹ ಸಹಸ್ರಾರು ಲಕ್ಷೋಪಲಕ್ಷ ಕೋಟ್ಯಾನುಕೋಟಿ ಮಹಾಪಾರ್ಷದರು ಅಭಿಷಿಕ್ತನಾದ ಆ ಮಹಾತ್ಮನನ್ನು ಸುತ್ತುವರೆದು ನಿಂತಿದ್ದರು.

ಯಾರಿಂದ ಈ ಚರಾಚರ ಲೋಕಗಳು ವ್ಯಾಪ್ತವಾಗಿಯೋ ಆ ಯಶಸ್ವಿನೀ-ಕಲ್ಯಾಣೀ ಮಾತೃಗಳ ಹೆಸರುಗಳು: ಪ್ರಭಾವತೀ, ವಿಶಾಲಾಕ್ಷೀ, ಪಾಲಿತಾ, ಗೋನಸೀ, ಶ್ರೀಮತೀ, ಬಹುಲಾ, ಬಹುಪುತ್ರಿಕಾ, ಅಪ್ಸುಜಾತಾ, ಗೋಪಾಲೀ, ಬೃಹದಂಬಾಲಿಕಾ, ಜಯಾವತೀ, ಮಾಲತಿಕಾ, ಧ್ರುವರತ್ನಾ, ಭಯಂಕರೀ, ವಸುದಾಮಾ, ಸುದಾಮಾ, ವಿಶೋಕಾ, ನಂದಿನೀ, ಏಕಚೂಡಾ, ಮಹಾಚೂಡಾ, ಚಕ್ರನೇಮಿ, ಉತ್ತೇಜನೀ, ಜಯತ್ಸೇನಾ, ಕಮಲಾಕ್ಷೀ, ಶೋಭನಾ, ಶತ್ರುಂಜಯಾ, ಕ್ರೋಧನಾ, ಶಲಭೀ, ಖರೀ, ಮಾಧವೀ, ಶುಭವಕ್ತ್ರಾ, ತೀರ್ಥನೇಮಿ, ಗೀತಪ್ರಿಯಾ, ಕಲ್ಯಾಣೀ, ಕದ್ರುಲಾ, ಅಮಿತಾಶನಾ, ಮೇಘಸ್ವನಾ, ಭೋಗವತೀ, ಸುಭ್ರೂ, ಕನಕಾವತೀ, ಅಲಾತಾಕ್ಷೀ, ವೀರ್ಯವತೀ, ವಿದ್ಯುಜ್ಜಿಹ್ವಾ, ಪದ್ಮಾವತೀ, ಸುನಕ್ಷತ್ರಾ, ಕಂದರಾ, ಬಹುಯೋಜನಾ, ಸಂತಾನಿಕಾ, ಕಮಲಾ, ಮಹಾಬಲಾ, ಸುದಾಮಾ, ಬಹುದಾಮಾ, ಸುಪ್ರಭಾ, ಯಶಸ್ವಿನೀ, ನೃತ್ಯಪ್ರಿಯಾ, ಶತೋಲೂಖಲಮೇಖಲ, ಶತಘಂಟಾ, ಶತಾನಂದಾ, ಭಗನಂದಾ, ಭಾಮಿನೀ, ವಪುಷ್ಮತೀ, ಚಂದ್ರಶೀತಾ, ಭದ್ರಕಾಲೀ, ಸಂಕಾರಿಕಾ, ನಿಷ್ಕುಟಿಕಾ, ಭ್ರಮಾ, ಚತ್ವರವಾಸಿನೀ, ಸುಮಂಗಲಾ, ಸ್ವಸ್ತಿಮತೀ, ವೃದ್ಧಿಕಾಮಾ, ಜಯಪ್ರಿಯಾ, ಧನದಾ, ಸುಪ್ರಸಾದಾ, ಭವದಾ, ಜಲೇಶ್ವರೀ, ಏಡೀ, ಭೇಡೀ, ಸಮೇಡೀ, ವೇತಾಲಜನನೀ, ಕಂಡೂತೀ, ಕಾಲಿಕಾ, ದೇವಮಿತ್ರಾ, ಲಂಬಸೀ, ಕೇತಕೀ, ಚಿತ್ರಸೇನಾ, ಬಲಾ, ಕುಕ್ಕುಟಿಕಾ, ಶಂಖನಿಕಾ, ಜರ್ಜರಿಕಾ, ಕುಂಡಾರಿಕಾ, ಕೋಕಲಿಕಾ,

ಕಂಡರಾ, ಶತೋದರೀ, ಉತ್ಕ್ರಾಥಿನೀ, ಜರೇಣಾ, ಮಹಾವೇಗಾ, ಕಂಕಣಾ, ಮನೋಜವಾ, ಕಂಟಕಿನೀ, ಪ್ರಘಸಾ, ಪೂತನಾ, ಖಶಯಾ, ಚುರ್ವ್ಯಟೀ, ವಾಮಾ, ಕ್ರೋಶನಾಥ, ತಡಿತ್ಪ್ರಭಾ, ಮಂಡೋದರೀ, ತುಂಡಾ, ಕೋಟರಾ, ಮೇಘವಾಸಿನೀ, ಸುಭಗಾ, ಲಂಬಿನೀ, ಲಂಬಾ, ವಸುಚೂಡಾ, ವಿಕತ್ಥನೀ, ಊರ್ಧ್ವವೇಣೀಧರಾ, ಪಿಂಗಾಕ್ಷೀ, ಲೋಹಮೇಖಲಾ, ಪೃಥುವಕ್ತ್ರಾ, ಮಧುರಿಕಾ, ಮಧುಕುಂಭಾ, ಪಕ್ಷಾಲಿಕಾ, ಮಂಥನಿಕಾ, ಧಮಧಮಾ, ಖಂಡಖಂಡಾ, ಪೂಷಣಾ, ಮಣಿಕುಂಡಲಾ, ಅಮೋಚಾ, ಲಂಬಪಯೋಧರಾ, ವೇಣುವೀಣಾಧರಾ, ಪಿಂಗಾಕ್ಷೀ, ಲೋಹಮೇಖಲಾ, ಶಶೋಲೂಕಮುಖೀ, ಕೃಷ್ಣಾ, ಖರಜಂಘಾ, ಮಹಾಜವಾ, ಶಿಶುಮಾರಮುಖೀ, ಶ್ವೇತಾ, ಲೋಹಿತಾಕ್ಷೀ, ವಿಭೀಷಣಾ, ಜಟಾಲಿಕಾ, ಕಾಮಚರೀ, ದೀರ್ಘಜಿಹ್ವಾ, ಬಲೋತ್ಕಟಾ, ಕಾಲೇಡಿಕಾ, ವಾಮನಿಕಾ, ಮುಕುಟಾ, ಲೋಹಿತಾಕ್ಷೀ, ಮಹಾಕಾಯಾ, ಹರಿಪಿಂಡೀ, ಏಕಾಕ್ಷರಾ, ಸುಕುಸುಮಾ, ಕೃಷ್ಣಕರ್ಣೀ, ಕ್ಷುರಕರ್ಣೀ, ಚತುಷ್ಕರ್ಣೀ, ಕರ್ಣಪ್ರಾವರಣಾ, ಚತುಷ್ಪಥನಿಕೇತಾ, ಗೋಕರ್ಣೀ, ಮಹಿಷಾನನಾ, ಖರಕರ್ಣೀ, ಮಹಾಕರ್ಣೀ, ಭೇರೀಸ್ವನಮಹಾಸ್ವನಾ, ಶಂಖಕುಂಭಸ್ವನಾ, ಭಂಗದಾ, ಮಹಾಬಲಾ, ಗಣಾ, ಸುಗಣಾ, ಕಾಮದಾ, ಚತುಷ್ಪಥರತಾ, ಭೂತಿತೀರ್ಥಾ, ಅನ್ಯಗೋಚರಾ, ಪಶುದಾ, ವಿತ್ತದಾ, ಸುಖದಾ, ಪಯೋದಾ, ಗೋಮಹಿಷದಾ, ಸುವಿಷಾಣಾ, ಪ್ರತಿಷ್ಠಾ, ಸುಪ್ರತಿಷ್ಠಾ, ರೋಚಮಾನಾ, ಸುರೋಚನಾ, ಗೋಕರ್ಣೀ,

ಸುಕರ್ಣೀ, ಸಸಿರಾ, ಸ್ಥೇರಿಕಾ, ಏಕಚಕ್ರಾ, ಮೇಘರವಾ, ಮೇಘಮಾಲಾ, ವಿರೋಚನಾ. ಇವರು ಮತ್ತು ಇನ್ನೂ ಅನೇಕ ಸಹಸ್ರ ನಾನಾರೂಪೀ ಮಾತೃಗಳು ಕಾರ್ತಿಕೇಯನ ಅನುಯಾಯಿಗಳಾಗಿದ್ದರು.

ಅವರ ಉಗುರುಗಳು ದೀರ್ಘವಾಗಿದ್ದವು, ಹಲ್ಲುಗಳು ದೀರ್ಘವಾಗಿದ್ದವು, ಮುಖಗಳೂ ದೀರ್ಘವಾಗಿದ್ದವು. ಅವರು ಸುಂದರಿಯರೂ, ಮಧುರರೂ, ಯೌವನಸ್ಥರೂ, ಸ್ವಲಂಕೃತರೂ ಆಗಿದ್ದರು. ಮಹಾತ್ಮೆಗಳಿಂದ ಸಂಯುಕ್ತರಾಗಿದ್ದರು. ಬೇಕಾದ ರೂಪಗಳನ್ನು ಧರಿಸಬಲ್ಲವರಾಗಿದ್ದರು, ದೇಹಗಳಲ್ಲಿ ಮಾಂಸಗಳೇ ಇರಲಿಲ್ಲ. ಬಿಳುಪಾಗಿ ಬಂಗಾರದ ಕಾಂತಿಯನ್ನು ಹೊಂದಿದ್ದರು. ಕೆಲವರು ಕಪ್ಪುಮೋಡಗಳ ಕಾಂತಿಯುಕ್ತರಾಗಿದ್ದರೆ, ಇನ್ನು ಕೆಲವರು ಹೊಗೆ ಮತ್ತು ಕೆಂಪು ಬಣ್ಣಗಳನ್ನು ಹೊಂದಿದ್ದರು. ಆ ಮಹಾಭಾಗೆಯರ ಕೂದಲುಗಳು ಉದ್ದವಾಗಿದ್ದವು, ಮತ್ತು ಅವರು ಬಿಳಿಯ ವಸ್ತ್ರಗಳನ್ನು ಧರಿಸಿದ್ದರು. ಕೆಲವರು ತಲೆಗೂದಲನ್ನು ಮೇಲಕ್ಕೆ ಕಟ್ಟಿದ್ದರು. ಕಣ್ಣುಗಳು ಕಂದುಬಣ್ಣದ್ದಾಗಿದ್ದವು. ಉದ್ದವಾದ ಒಡ್ಯಾಣಗಳನ್ನು ಧರಿಸಿದ್ದರು. ಕೆಲವರಿಗೆ ನೀಳವಾದ ಹೊಟ್ಟೆ, ನೀಳವಾದ ಕಿವಿಗಳು ಮತ್ತು ನೀಳವಾದ ಮೊಲೆಗಳಿದ್ದವು. ರಕ್ತಾಕ್ಷಿಯರೂ, ರಕ್ತವರ್ಣದವರೂ ಆಗಿದ್ದರು. ಇನ್ನು ಕೆಲವರ ಕಣ್ಣುಗಳು ಹಸಿರುಬಣ್ಣದ್ದಾಗಿದ್ದವು. ವರಗಳನ್ನೀಯುವ ಅವರು ಬೇಕಾದಲ್ಲಿಗೆ ಹೋಗುವವರೂ ನಿತ್ಯ ಪ್ರಮೋದದಲ್ಲಿರುವವರೂ ಆಗಿದ್ದರು. ಆ ಮಹಾಬಲರು ಯಮ-ರುದ್ರ-ಸೋಮ-ಕುಬೇರ-ವರುಣ-ಮಹೇಂದ್ರ-ಅಗ್ನಿ-ವಾಯು-ಕುಮಾರ-ಬ್ರಹ್ಮರ ಶಕ್ತಿಗಳನ್ನು ಹೊಂದಿದ್ದರು.

ರೂಪದಲ್ಲಿ ಅಪ್ಸರೆಯರಿಗೆ ಸಮನಾಗಿದ್ದರು ಮತ್ತು ವೇಗದಲ್ಲಿ ವಾಯುವಿಗೆ ಸಮನಾಗಿದ್ದರು. ಅವರು ಮಾತಿನಲ್ಲಿ ಕೋಗಿಲೆಗಳಂತೆ, ಸಂಪತ್ತಿನಲ್ಲಿ ಕುಬೇರನಂತೆ, ವೀರ್ಯದಲ್ಲಿ ಶಕ್ರನಂತೆ, ಕಾಂತಿಯಲ್ಲಿ ಅಗ್ನಿಯಂತೆ ಇದ್ದರು. ಅವರು ವೃಕ್ಷಗಳಲ್ಲಿಯೂ, ಮನೆಯ ಮುಂಬಾಗದ ಅಂಗಳಗಳಲ್ಲಿಯೂ, ನಾಲ್ಕು ದಾರಿಗಳು ಸೇರುವ ಚೌಕಗಳಲ್ಲಿಯೂ, ಗುಹೆಗಳಲ್ಲಿಯೂ, ಶ್ಮಶಾನಗಳಲ್ಲಿಯೂ, ಪರ್ವತಗಳಲ್ಲಿಯೂ, ಝರಿಗಳು ಹರಿಯುವಲ್ಲಿಯೂ ವಾಸಮಾಡುವರು. ನಾನಾಭರಣಗಳನ್ನು ಧರಿಸಿದ್ದರು. ಹಾಗೆಯೇ ನಾನಾ ಮಾಲೆ-ವಸ್ತ್ರಗಳನ್ನು ಧರಿಸಿದ್ದರು. ನಾನಾ ವಿಚಿತ್ರ ವೇಷಗಳನ್ನು ಧರಿಸಿದ್ದ ಅವರು ನಾನಾ ಭಾಷೆಗಳಲ್ಲಿ ಮಾತನಾಡುತ್ತಿದ್ದರು. ಇವರು ಮತ್ತು ಇನ್ನೂ ಅನೇಕ ಶತ್ರುಭಯಂಕರ ಗಣಗಳು ತ್ರಿದಶೇಂದ್ರನ ಸಮ್ಮತಿಯಂತೆ ಮಹಾತ್ಮ ಸ್ಕಂದನನ್ನು ಬಂದು ಸೇರಿದವು.

ಅನಂತರ ಸುರದ್ವೇಷಿಗಳ ವಿನಾಶಕ್ಕಾಗಿ ಭಗವಾನ್ ಪಾಕಶಾಸನನು ಗುಹನಿಗೆ ಶಕ್ತಿಯನ್ನೂ, ಬಿಳೀ ಪ್ರಭೆಯಿಂದ ಬೆಳಗುತ್ತಿದ್ದ ಮಹಾಧ್ವನಿಯ ಮಹಾಘಂಟವನ್ನೂ, ಉದಯಿಸುವ ಸೂರ್ಯನ ಬಣ್ಣದ ಪತಾಕೆಯನ್ನೂ ಕೊಟ್ಟನು. ಪಶುಪತಿಯೂ ಕೂಡ ಆ ಸರ್ವಭೂತಗಳ ಮಹಾಸೇನೆಗೆ ಉಗ್ರವೂ ತಪೋವೀರ್ಯಬಲಾನ್ವಿತವೂ ಆದ ನಾನಾ ಆಯುಧಗಳನ್ನಿತ್ತನು. ವಿಷ್ಣುವು ಬಲವನ್ನು ವರ್ಧಿಸುವ ವೈಜಯಂತೀ ಮಾಲೆಯನ್ನು ಕೊಟ್ಟನು. ಉಮೆಯು ಸೂರ್ಯಪ್ರಭೆಯುಳ್ಳ ನಿರ್ಮಲ ವಸ್ತ್ರಗಳನ್ನಿತ್ತಳು. ಗಂಗೆಯು ಅಮೃತವನ್ನು ನೀಡುವ ಉತ್ತಮ

ಕಮಂಡಲುವನ್ನು, ಮತ್ತು ಬೃಹಸ್ಪತಿಯು ದಂಡವನ್ನು ಪ್ರೀತಿಯಿಂದ ಕುಮಾರನಿಗೆ ಕೊಟ್ಟರು. ಗರುಡನು ಪ್ರೀತಿಯ ಪುತ್ರ, ಬಣ್ಣಬಣ್ಣದ ಗರಿಗಳ ಮಯೂರನನ್ನು ಮತ್ತು ಅರುಣನು ಕೆಂಪು ಪುಚ್ಛದ, ಪಂಜುಗಳೇ ಆಯುಧವಾಗಿದ್ದ ಹುಂಜವನ್ನು ನೀಡಿದರು. ವರುಣನು ಬಲವೀರ್ಯಸಮನ್ವಿತ ಪಾಶವನ್ನೂ ಹಾಗೆಯೇ ಪ್ರಭು ಲೋಕಭಾವನ ಬ್ರಹ್ಮನು ಆ ಬ್ರಹ್ಮಣ್ಯನಿಗೆ ಕೃಷ್ಣಾಜಿನವನ್ನೂ ಸಮರದಲ್ಲಿ ಜಯವನ್ನೂ ನೀಡಿದನು. ದೇವಗಣದ ಸೇನಾಪತ್ಯವನ್ನು ಪಡೆದ ಸ್ಕಂದನು ಎರಡನೇ ಪಾವಕನೋ ಎನ್ನುವಂತೆ ತೇಜಸ್ಸಿನಿಂದ ಪ್ರಜ್ವಲಿಸಿ ಶೋಭಿಸಿದನು. ಆಗ ಪಾರಿಷದರು ಮತ್ತು ಮಾತೃಗಣಗಳಿಂದ ಸಮಾವೃತವಾದ ಆ ನೈಋತೀ ಸೇನೆಯು ಗಂಟೆಗಳು ಮತ್ತು ಹಾರಾಡುತ್ತಿದ್ದ ಧ್ವಜಗಳಿಂದ, ಭೇರೀ-ಶಂಖಗಳ ಧ್ವನಿಗಳಿಂದ ಕೂಡಿ ಭಯಂಕರವಾಗಿತ್ತು. ಆಯುಧ-ಪತಾಕೆಗಳಿಂದ ಕೂಡಿದ ಆ ಸೇನೆಯು ನಕ್ಷತ್ರಗಳಿಂದ ಕೂಡಿದ ಶರತ್ಕಾಲದ ಆಕಾಶದಂತೆ ಪ್ರಕಾಶಿಸುತ್ತಿತ್ತು. ಆಗ ದೇವಸೇನೆ ಮತ್ತು ಭೂತಸೇನಾಗಣಗಳು ಅವ್ಯಗ್ರ ಮಹಾಸ್ವನ ಭೇರೀ-ಶಂಖ-ಪಟಹ-ಝರ್ಝರ-ಕೃಕಚ-ಗೋವಿಷಾಣಿಕ-ಆಡಂಬರ-ಗೋಮುಖ-ಡಿಂಡಿಮಗಳನ್ನು ಬಾರಿಸಿದರು. ವಾಸವನೊಂದಿಗೆ ಸರ್ವದೇವತೆಗಳೂ ಕುಮಾರನನ್ನು ಸ್ತೋತ್ರಮಾಡಿದರು. ದೇವ-ಗಂಧರ್ವ-ಅಪ್ಸರಗಣಗಳು ನೃತ್ಯಮಾಡಿದವು. ಆಗ ಪ್ರೀತನಾದ ಮಹಾಸೇನನು ತ್ರಿದಶರಿಗೆ

> “ನಿಮ್ಮನ್ನು ವಧಿಸಲು ಬಯಸಿರುವ ರಿಪುಗಳನ್ನು ಸಮರದಲ್ಲಿ ಸಂಹರಿಸುತ್ತೇನೆ!”



ಎಂದು ವರವನ್ನಿತ್ತನು. ಆ ವಿಬುಧಸತ್ತಮನಿಂದ ವರವನ್ನು ಪಡೆದ ಮಹಾತ್ಮ ದೇವತೆಗಳು ಪ್ರೀತಾತ್ಮರಾಗಿ ರಿಪುಗಳು ಹತರಾದರೆಂದೇ ತಿಳಿದರು. ಮಹಾತ್ಮನು ಆ ವರವನ್ನು ನೀಡಲು ಸರ್ವ ಭೂತಸಂಘಗಳೂ ಹರ್ಷನಾದಗೈಯಲು ಅದು ಮೂರು ಲೋಕಗಳನ್ನೂ ತುಂಬಿತು. ಮಹಾಸೇನೆಯಿಂದ ಆವೃತನಾಗಿ ಮಹಾಸೇನನು ಯುದ್ಧದಲ್ಲಿ ದೈತ್ಯರನ್ನು ವಧಿಸಲು ಮತ್ತು ದಿವೌಕಸರನ್ನು ರಕ್ಷಿಸಲು ಹೊರಟನು. ವ್ಯವಸಾಯ, ಜಯ, ಧರ್ಮ, ಸಿದ್ಧಿ, ಲಕ್ಷ್ಮಿ, ಧೃತಿ, ಸ್ಮೃತಿಗಳು ಮಹಾಸೇನನ ಸೇನೆಯ ಮುಂದೆ ನಡೆದರು. ಶೂಲ-ಮುದ್ಗರ-ಗದೆ-ಮುಸಲ-ನಾರಾಚ-ಶಕ್ತಿ-ತೋಮರಗಳನ್ನು ಹಿಡಿದು ದೃಪ್ತರಾಗಿ ಸಿಂಹನಾದಗೈಯುತ್ತಾ ಗರ್ಜಿಸುತ್ತಾ ಆ ಭಯಂಕರ ಸೇನೆಯೊಂದಿಗೆ ದೇವ ಗುಹನು ಪ್ರಯಾಣಿಸಿದನು. ಅವನನ್ನು ನೋಡಿ ಸರ್ವ ದೈತ್ಯ-ರಾಕ್ಷಸ-ದಾನವರೂ ಭಯೋದ್ವಿಗ್ನರಾಗಿ ಸರ್ವ ದಿಕ್ಕುಗಳಲ್ಲಿಯೂ ಓಡತೊಡಗಿದರು. ದೇವತೆಗಳು ವಿವಿಧ ಆಯುಧಗಳನ್ನು ಹಿಡಿದು ಅವರನ್ನು ಬೆನ್ನಟ್ಟಿ ಹೋದರು. ಆಗ ಅವರನ್ನು ನೋಡಿ ಕ್ರುದ್ಧನಾಗಿ ತೇಜೋಬಲಾನ್ವಿತ ಭಗವಾನ್ ಸ್ಕಂದನು ಪುನಃ ಪುನಃ ಭಯಂಕರ ಶಕ್ತ್ಯಾಸ್ತ್ರವನ್ನು ಪ್ರಕಟಿಸಿ ಹವಿಸ್ಸನ್ನು ಪಡೆದ ಅಗ್ನಿಯು ಹೇಗೋ ಹಾಗೆ ಆತ್ಮತೇಜಸ್ಸನ್ನು ಪ್ರಕಟಿಸಿದನು. ಅಮಿತತೇಜಸ್ವಿ ಸ್ಕಂದನ ಆ ಶಕ್ತ್ಯಾಸ್ತ್ರವು ಉಲ್ಕೆಯಂತೆ ಉರಿಯುತ್ತಾ ವಸುಧಾತಲದಲ್ಲಿ ಬಿದ್ದಿತು. ಅಂತಕಾಲ ಸಮಯದಲ್ಲಿ ಮಹಾಶಬ್ಧದೊಂದಿಗೆ ಸಿಡಿಲು ಬೀಳುವಂತೆ ಆಗ ಭಯಂಕರ

ಗರ್ಜನೆಯೊಂದಿಗೆ ಸಿಡಿಲುಗಳು ಭೂಮಿಯ ಮೇಲೆ ಬಿದ್ದವು. ಅಗ್ನಿಪುತ್ರನು ಒಂದೊಂದು ಬಾರಿ ಘೋರ ಶಕ್ತಿಯನ್ನು ಪ್ರಯೋಗಿಸಿದಾಗಲೂ ಅದರಿಂದ ಕೋಟಿ ಕೋಟಿ ಶಕ್ತಿಗಳು ಹೊರಬರುತ್ತಿದ್ದವು. ಭಗವಾನ್ ಪ್ರಭುವು ಸಂಗ್ರಾಮದಲ್ಲಿ ಶಕ್ತ್ಯಾಸ್ತ್ರದಿಂದ ಬಲಿಷ್ಠರಾದ ಒಂದು ಲಕ್ಷ ದೈತ್ಯರಿಂದ ಆವೃತನಾದ ತಾರಕನೆಂಬ ಹೆಸರಿನ ಮಹಾಬಲಪರಾಕ್ರಮಿ ದೈತ್ಯೇಂದ್ರನನ್ನು ಸಂಹರಿಸಿದನು.  ಬಳಿಕ ಅವನು ಎಂಟು ಪದ್ಮ ಸಂಖ್ಯಾತ ದೈತ್ಯರಿಂದ ಪರಿವೃತನಾಗಿದ್ದ ಮಹಿಷನನ್ನೂ ರಣದಲ್ಲಿ ವಧಿಸಿದನು. ಅನಂತರ ಹತ್ತು ಲಕ್ಷ ಅಸುರರಿಂದ ಆವೃತನಾಗಿದ್ದ ತ್ರಿಪಾದನನ್ನೂ ಸಂಹರಿಸಿದನು. ಈಶ್ವರನು ವಿವಿಧ ಆಯುಧಗಳನ್ನು ಹಿಡಿದಿದ್ದ ಹತ್ತು ನಿಖರ್ವ ಅನುಚರರೊಂದಿಗೆ ಹ್ರದೋದರನನ್ನೂ ಸಂಹರಿಸಿದನು. ಶತ್ರುಗಳು ವಧಿಸಲ್ಪಡಲು ಕುಮಾರನ ಅನುಚರರು ಹತ್ತು ದಿಕ್ಕುಗಳನ್ನೂ ಮೊಳಗಿಸುವಂತೆ ವಿಪುಲ ಸಿಂಹನಾದಗೈದರು. ಸರ್ವತ್ರ ಪಸರಿಸುತ್ತಿದ್ದ ಶಕ್ತ್ಯಾಸ್ತ್ರದ ಮಹಾಜ್ವಾಲೆಯಿಂದ ಸಹಸ್ರಾರು ದೈತ್ಯರು ಭಸ್ಮೀಭೂತರಾದರು. ಇತರರು ಸ್ಕಂದನ ಸಿಂಹನಾದದಿಂದಲೇ ನಾಶಹೊಂದಿದರು. ಕೆಲವು ಸುರದ್ವಿಷರು ಪತಾಕೆಯ ಹಾರಾಡುವಿಕೆಗೆ ಸಿಲುಕಿ ಹತರಾದರು. ಕೆಲವರು ಘಂಟಾರವವನ್ನು ಕೇಳಿಯೇ ವಸುಧಾತಲದಲ್ಲಿ ಬಿದ್ದರು. ಇನ್ನು ಕೆಲವರು ಆಯುಧಪ್ರಹರಗಳಿಂದ ಛಿನ್ನರಾಗಿ ಪ್ರಾಣತೊರೆದು ಬಿದ್ದರು. ಹೀಗೆ ಮಹಾಬಲ ವೀರ ಕಾರ್ತಿಕೇಯನು ಸಮರದಲ್ಲಿ ಅನೇಕ ಬಲವಾನ್ ಸುರದ್ವೇಷೀ

ಆತತಾಯಿಗಳನ್ನು ಸಂಹರಿಸಿದನು. ಆಗ ದೈತ್ಯ ಬಲಿಯ ಪುತ್ರ ಬಾಣನೆಂಬ ಮಹಾಬಲನು ಕ್ರೌಂಚಪರ್ವತವನ್ನೇರಿ ದೇವಸಂಘಗಳನ್ನು ಬಾಧಿಸಿದನು. ಉದಾರಧೀ ಮಹಾಸೇನನು ಆ ಸುರಶತ್ರುವನ್ನು ಹಿಂಬಾಲಿಸಿ ಹೋಗಲು ಕಾರ್ತಿಕೇಯನ ಭಯದಿಂದ ಅವನು ಕ್ರೌಂಚವನ್ನೇ ಮೊರೆಹೊಕ್ಕನು. ಆಗ ಮಹಾಕುಪಿತನಾದ ಭಗವಾನ್ ಕಾರ್ತಿಕೇಯನು ಅಗ್ನಿಯು ಕೊಟ್ಟಿದ್ದ ಶಕ್ತಿಯಿಂದ ಕ್ರೌಂಚಪಕ್ಷಿಗಳ ನಿನಾದಗಳಿಂದ ತುಂಬಿದ್ದ ಕ್ರೌಂಚಪರ್ವತವನ್ನೇ ಸೀಳಿದನು. ವಿಶಾಲವೃಕ್ಷಗಳಿಂದ ಹಚ್ಚಹಸಿರಾಗಿದ್ದ ಆ ಪರ್ವತದಲ್ಲಿ ವಾಸಿಸುತ್ತಿದ್ದ ವಾನರರು ಮತ್ತು ಆನೆಗಳು ನಡುಗಿದವು. ಭಯಗೊಂಡ ಪಕ್ಷಿಗಳು ಹಾರಿದವು. ಹಾವುಗಳು ಬಿದ್ದವು. ಲಕ್ಷಾನುಗಟ್ಟಲೆ ಗೋಲಾಂಗೂಲ ಕಪಿಗಳು ಮತ್ತು ಕರಡಿಗಳು ಚೀತ್ಕರಿಸಿ ಕೂಗುತ್ತಾ ಓಡಿಹೋಗುತ್ತಿದ್ದಾಗ ಅವುಗಳ ಚೀತ್ಕಾರವು ಪರ್ವತದಲ್ಲಿ ಪ್ರತಿಧ್ವನಿಸಿದವು. ಶೋಚನೀಯ ದಶೆಯನ್ನು ಹೊಂದಿದ್ದರೂ ಆ ಪರ್ವತವು ರಾರಾಜಿಸುತ್ತಿತ್ತು. ಅದರ ಶೃಂಗದಲ್ಲಿ ವಾಸಿಸುತ್ತಿದ್ದ ವಿದ್ಯಾಧರರು ಆಕಾಶಕ್ಕೆ ಹಾರಿದರು. ಶಕ್ತಿಯ ಪತನದಿಂದ ಉದ್ವಿಗ್ನರಾದ ಕಿನ್ನರರೂ ಮೇಲೆ ಹಾರಿದರು. ಆಗ ವಿಚಿತ್ರಾಭರಣ ಮಾಲೆಗಳನ್ನು ಧರಿಸಿದ್ದ ನೂರಾರು ಸಹಸ್ರಾರು ದೈತ್ಯರು ಉರಿಯುತ್ತಿದ್ದ ಆ ಶ್ರೇಷ್ಠ ಪರ್ವತದಿಂದ ಹೊರಬಿದ್ದರು. ಕುಮಾರನ ಅನುಚರರು ಅವರನ್ನು ಆಕ್ರಮಿಸಿ ಯುದ್ಧದಲ್ಲಿ ಸಂಹರಿಸಿದರು. ಪರವೀರಹ ಪಾವಕಿಯು ಶಕ್ತಿಯಿಂದ ಕ್ರೌಂಚವನ್ನು ತುಂಡುಮಾಡಿದನು. ತನ್ನನ್ನು ತಾನೇ ಒಬ್ಬನಾಗಿಯೂ ಅನೇಕನಾಗಿಯೂ

ಮಾಡಿಕೊಂಡು ಮಹಾತ್ಮನು ರಣದಲ್ಲಿ ಶಕ್ತಿಯನ್ನು ಪ್ರಯೋಗಿಸುತ್ತಿರಲು ಪುನಃ ಪುನಃ ಬಂದು ಅದು ಅವನ ಕೈಸೇರುತ್ತಿತ್ತು. ಈ ರೀತಿ ಪ್ರಭಾವಶಾಲಿ ಭಗವಾನ್ ಪಾವಕಿಯು ಮತ್ತೊಮ್ಮೆ ಕ್ರೌಂಚವನ್ನು ಒಡೆಯಲು ನೂರಾರು ದೈತ್ಯರು ಹತರಾದರು. ಅನಂತರ ವಿಬುಧದ್ವೇಷಿಗಳನ್ನು ಸಂಹರಿಸಿ ಭಗವಾನ್ ದೇವನು ವಿಬುಧರಿಂದ ಸ್ತುತಿಸಲ್ಪಟ್ಟು ಪರಮ ಹರ್ಷಿತನಾದನು. ಆಗ ದುಂದುಭಿ-ಶಂಖಗಳು ಮೊಳಗಿದವು. ದೇವಸ್ತ್ರೀಯರು ಮೇಲಿಂದ ಅನುತ್ತಮ ಪುಷ್ಪವೃಷ್ಟಿಯನ್ನು ಸುರಿಸಿದರು. ಮಾರುತನು ಪುಣ್ಯ ದಿವ್ಯಗಂಧಗಳನ್ನು ಹೊತ್ತು ಬೀಸಿದನು. ಗಂಧರ್ವರು ಮತ್ತು ಯಜ್ಞಪರಾಯಣ ಮಹರ್ಷಿಗಳು ಅವನನ್ನು ಸ್ತುತಿಸಿದರು. ಕೆಲವರು ಆ ಪ್ರಭುವನ್ನು ಪಿತಾಮಹನ ಸುತನೆಂದೂ ಎಲ್ಲರಿಗೂ ಮೊದಲು ಬ್ರಹ್ಮಯೋನಿಯಲ್ಲಿ ಹುಟ್ಟಿದ ಸನತ್ಕುಮಾರನೆಂದೂ ಹೇಳುತ್ತಿದ್ದರು.

ಕೆಲವರು ಅವನನ್ನು ಮಹೇಶ್ವರ ಸುತನೆಂದೂ ಕೆಲವರು ವಿಭಾವಸುವಿನ ಪುತ್ರನೆಂದು, ಉಮೆ, ಕೃತ್ತಿಕರು ಮತ್ತು ಗಂಗೆಯ ಪುತ್ರನೆಂದೂ ಹೇಳುತ್ತಿದ್ದರು. ಯೋಗಿಗಳ ಈಶ್ವರನಾದ ಆ ದೇವ ಮಹಾಬಲನನ್ನು ಒಬ್ಬನನ್ನಾಗಿಯೂ, ಇಬ್ಬರನ್ನಾಗಿಯೂ, ನಾಲ್ವರನ್ನಾಗಿಯೂ, ನೂರಾರು ಸಹಸ್ರಾರು ರೂಪಗಳಲ್ಲಿ ಕಾಣುತ್ತಿದ್ದರು. ಕುಮಾರನಿಂದ ಸುರಶತ್ರುಗಳು ಹತರಾಗಲು ಆ ಶ್ರೇಷ್ಠ ತೀರ್ಥವು ಇನ್ನೊಂದು ಸ್ವರ್ಗದಂತೆಯೇ ಆಯಿತು. ಅಲ್ಲಿದ್ದ ಪಾವಕಾತ್ಮಜ ಈಶನು ಐಶ್ವರ್ಯಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೈರೃತನೇ ಮೊದಲಾದ ಲೋಕಪಾಲಕರಿಗಿತ್ತನು. ಹೀಗೆ

ಆ ತೀರ್ಥದಲ್ಲಿ ದೈತ್ಯಕುಲಾಂತಕ ಭಗವಾನನು ದೇವಸೇನಾಪತಿಯಾಗಿ ಸುರರಿಂದ ಅಭಿಷಿಕ್ತನಾಗಿದ್ದನು.

# ಬದರಿಪಾಚನ ತೀರ್ಥ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 47ರಲ್ಲಿ ಹೇಳುತ್ತಾನೆ.

ವಿಶಾಲಾಕ್ಷೀ ಅಪ್ಸರೆ ಘೃತಾಚಿಯು ಬರುತ್ತಿರುವುದನ್ನು ನೋಡಿದ ಮಹಾತ್ಮ ವಿಪ್ರರ್ಷಿ ಭಾರದ್ವಾಜನ ವೀರ್ಯ ಸ್ಖಲನವಾಯಿತು. ಜಪಿಗಳಲ್ಲಿ ಶ್ರೇಷ್ಠನು ಆ ರೇತಸ್ಸನ್ನು ತನ್ನ ಕರಗಳಲ್ಲಿ ಹಿಡಿದನು. ಆದರೆ ಅದು ಎಲೆಯ ದೊನ್ನೆಯಲ್ಲಿ ಬಿದ್ದಿತು. ಅಲ್ಲಿಯೇ ಓರ್ವ ಶುಭೆಯು ಹುಟ್ಟಿದಳು. ತಪೋಧನನು ಜಾತಕರ್ಮಾದಿ ಎಲ್ಲ ಕರ್ಮಗಳನ್ನೂ ಅವಳಿಗೆ ಮಾಡಿಸಿದನು. ಮಹಾಮುನಿ ಭಾರದ್ವಾಜನು ಅವಳಿಗೆ ಹೆಸರನ್ನೂ ಇಟ್ಟನು. ದೇವರ್ಷಗಣ ಸಂಸದಿಯಲ್ಲಿ ಆ ಧರ್ಮಾತ್ಮನು ಅವಳಿಗೆ ಸ್ರುಚಾವತೀ ಎಂಬ ಹೆಸರನ್ನಿಟ್ಟು, ಅವಳನ್ನು ಆ ಆಶ್ರಮದಲ್ಲಿಯೇ ಇರಿಸಿ ಹಿಮವದ್ವನಕ್ಕೆ ತೆರಳಿದನು. ಭುವಿಯಲ್ಲಿಯೇ ಅಪ್ರತಿಮ ರೂಪವತಿಯಾದ ಸ್ರುಚಾವತಿಯು ಬ್ರಹ್ಮಚಾರಿಣಿಯಾಗಿದ್ದಳು. ದೇವರಾಜನೇ ತನ್ನ ಪತಿಯೆಂದು ನಿಶ್ಚಯಿಸಿದ ಆ ಭಾಮಿನಿಯು ಅನೇಕ ನಿಯಮಯುಕ್ತ ಉಗ್ರ ತಪಸ್ಸನ್ನು ತಪಿಸಿದಳು. ಸ್ತ್ರೀಯರಿಗೆ ಅನುಷ್ಠಾನ ಮಾಡಲು ದುಷ್ಕರವಾದ ಅನೇಕ

ನಿಯಮಗಳನ್ನು ಪಾಲಿಸುತ್ತಾ ಅವಳು ಅನೇಕ ವರ್ಷಗಳನ್ನು ಕಳೆದಳು. ಅವಳ ತಪಸ್ಸು, ನಡತೆ ಮತ್ತು ಪರಮ ಭಕ್ತಿಗಳಿಗೆ ಭಗವಾನ್ ಪಾಕಶಾಸನನು ಪ್ರೀತನಾದನು. ಪ್ರಭು ತ್ರಿದಶಾಧಿಪತಿಯು ಮಹಾತ್ಮ ವಿಪ್ರರ್ಷಿ ವಸಿಷ್ಠನ ರೂಪವನ್ನು ಧರಿಸಿ ಅವಳ ಆಶ್ರಮಕ್ಕೆ ಹೋದನು. ಆ ಉಗ್ರತಪಸ್ವಿ ತಪಸ್ವಿಗಳಲ್ಲಿ ಶ್ರೇಷ್ಠ ವಸಿಷ್ಠನನ್ನು ನೋಡಿ ಅವಳು ಮುನಿಗಳಿಗೆ ಉಚಿತವಾದ ವಿಧಿಗಳಿಂದ ಸತ್ಕರಿಸಿದಳು. ನಿಯಮಗಳನ್ನು ತಿಳಿದಿದ್ದ ಆ ಪ್ರಿಯಂವದೆ ಕಲ್ಯಾಣಿಯು

> “ಭಗವನ್! ಮುನಿಶಾರ್ದೂಲ! ಅಪ್ಪಣೆಯೇನು ಪ್ರಭೋ!”

ಎಂದಳು.

> “ಸುವ್ರತ! ಇಂದು ನಿನಗೆ ಯಥಾಶಕ್ತಿಯಾಗಿ ಎಲ್ಲವನ್ನೂ ಕೊಡುತ್ತೇನೆ. ಶಕ್ರನ ಮೇಲಿನ ಭಕ್ತಿಯಿಂದ ನಿನಗೆ ನನ್ನ ಕೈಯನ್ನು ಮಾತ್ರ ಎಂದೂ ಕೊಡುವುದಿಲ್ಲ. ವ್ರತ-ನಿಯಮ-ತಪಸ್ಸುಗಳಿಂದ ಆ ತ್ರಿಭುವನೇಶ್ವರ ಶಕ್ರನನ್ನು ತೃಪ್ತಗೊಳಿಸಬೇಕಾಗಿದೆ.”

ಅವಳು ಹೀಗೆ ಹೇಳಲು ಭಗವಾನ್ ದೇವನು ನಸುನಗುತ್ತಾ ಅವಳನ್ನು ನೋಡಿ ನಿಯಮಜ್ಞೆಯಾದ ಅವಳನ್ನು ಸಂತವಿಸುವಂತೆ ಹೇಳಿದನು:

> “ಸುವ್ರತೇ! ನೀನು ಉಗ್ರ ತಪಸ್ಸನ್ನು ಮಾಡುತ್ತಿರುವೆಯೆಂದು ನನಗೆ ತಿಳಿದಿದೆ. ನೀನು ಅದನ್ನು ಯಾವ ಕಾರಣದಿಂದ

ಆರಂಭಿಸಿರುವೆಯೆನ್ನುವುದೂ ನನಗೆ ಹೃದ್ಗತವಾಗಿದೆ. ಅವೆಲ್ಲವೂ ಹೇಗಾಗಬೇಕೋ ಹಾಗೆಯೇ ಆಗುತ್ತದೆ. ತಪಸ್ಸಿನಿಂದ ಎಲ್ಲವೂ ದೊರೆಯುತ್ತವೆ. ಎಲ್ಲವೂ ತಪಸ್ಸಿನ ಮೇಲೆಯೇ ನಿಂತಿವೆ. ದೇವತೆಗಳ ದಿವ್ಯ ಸ್ಥಾನಗಳೂ ಕೂಡ ತಪಸ್ಸಿನಿಂದಲೇ ಪ್ರಾಪ್ತವಾಗುತ್ತವೆ. ಮಹಾ ಸುಖಕ್ಕೆ ತಪಸ್ಸೇ ಮೂಲ. ಇಲ್ಲಿ ಘೋರ ತಪಸ್ಸನ್ನಾಚರಿಸಿ ದೇಹವನ್ನು ತೊರೆದು ಮಾನವರು ದೇವತ್ವವನ್ನು ಪಡೆಯುತ್ತಾರೆ. ನನ್ನ ಈ ಮಾತನ್ನು ಕೇಳು. ಇಗೋ ಈ ಐದು ಬದರೀ (ಎಲಚೀ) ಹಣ್ಣುಗಳನ್ನು ಬೇಯಿಸು!"

ಹೀಗೆ ಹೇಳಿ ಭಗವಾನ್ ಬಲಸೂದನನು ಹೊರಟು ಹೋದನು. ಹಾಗೆ ಆ ಕಲ್ಯಾಣಿಗೆ ಸಲಹೆಯನ್ನಿತ್ತು, ಅಲ್ಲಿಯೇ ಸ್ವಲ್ಪ ದೂರದಲ್ಲಿದ್ದ ಶ್ರೇಷ್ಠ ತೀರ್ಥದಲ್ಲಿ ಮಿಂದು ಜಪವನ್ನು ಜಪಿಸಿದನು. ಆ ತೀರ್ಥವು ಮೂರು ಲೋಕಗಳಲ್ಲಿ ಇಂದ್ರತೀರ್ಥವೆಂದು ಪ್ರಖ್ಯಾತವಾಯಿತು. ಅವಳನ್ನು ಪರೀಕ್ಷಿಸಲೋಸುಗ ವಿಭುಧಾಧಿಪ ಭಗವಾನ್ ಪಾಕಶಾಸನನು ಆ ಎಲಚೀಹಣ್ಣುಗಳು ಬೇಯದಂತೆ ಮಾಡಿದನು. ಆಗ ಆ ಶುಚಿಸಂವೀತೆ-ಬಳಲಿಕೆಯಿಲ್ಲದ-ಮಹಾವ್ರತೆಯು ಮೌನವನ್ನು ಧರಿಸಿ ಬೆಂಕಿಯ ಮೇಲಿಟ್ಟು ಆ ಎಲಚೀಹಣ್ಣುಗಳನ್ನು ಬೇಯಿಸುವುದರಲ್ಲಿ ತತ್ಪರಳಾದಳು. ಅವುಗಳನ್ನು ಬೇಯಿಸುತ್ತಾ ಬಹಳ ಸಮಯ ಕಳೆಯಿತು. ಆದರೂ ಅವುಗಳು ಬೇಯಲಿಲ್ಲ. ಒಂದು ದಿನವೇ ಕಳೆದುಹೋಯಿತು. ಅವಳಲ್ಲಿದ್ದ ಕಟ್ಟಿಗೆಗಳೆಲ್ಲವೂ ಬೆಂಕಿಯಲ್ಲಿ ಸುಟ್ಟುಹೋದವು.

ಕಟ್ಟಿಗೆಗಳಿಲ್ಲವೆನ್ನುವುದನ್ನು ನೋಡಿದ ಅವಳು ತನ್ನ ಶರೀರವನ್ನೇ ಸುಡಲು ತೊಡಗಿದಳು. ಆ ಚಾರುದರ್ಶನೆ ಅನಘೆಯು ತನ್ನ ಪಾದಗಳನ್ನೇ ಮುಂದೆಚಾಚಿ ಬೆಂಕಿಯಲ್ಲಿಟ್ಟು ಉರಿಸಿ ಹಣ್ಣುಗಳನ್ನು ಬೇಯಿಸತೊಡಗಿದಳು. ಕಾಲುಗಳು ಸುಟ್ಟುಹೋಗಲು, ಮೊಣಕಾಲುಗಳನ್ನು ಚಾಚಿದಳು. ಮಹರ್ಷಿ ವಸಿಷ್ಠನಿಗೆ ಪ್ರಿಯವನ್ನುಂಟುಮಾಡಲೋಸುಗ ಆ ಅನಿಂದಿತೆಯು ಚರಣಗಳು ಸುಟ್ಟುಹೋಗುವ ದುಃಖದ ಕುರಿತು ಸ್ವಲ್ಪವೂ ಚಿಂತಿಸಲಿಲ್ಲ. ಅವಳ ಆ ಕೃತ್ಯವನ್ನು ನೋಡಿ ಪ್ರೀತನಾದ ತ್ರಿಭುವನೇಶ್ವರನು ತನ್ನ ನಿಜಸ್ವರೂಪದಲ್ಲಿ ಆ ಕನ್ಯೆಗೆ ಸಂದರ್ಶನವನ್ನಿತ್ತನು. ಸುರಶ್ರೇಷ್ಠನು ಆ ದೃಢವ್ರತೆ ಕನ್ಯೆಗೆ ಹೇಳಿದನು:

> “ಶುಭೇ! ನಿನ್ನ ಭಕ್ತಿ-ತಪಸ್ಸು-ನಿಯಮಗಳಿಂದ ನಾನು ಪ್ರೀತನಾಗಿದ್ದೇನೆ. ಆದುದರಿಂದ ನೀನು ಬಯಸಿದುದೆಲ್ಲವೂ ಕೈಗೂಡುತ್ತವೆ. ದೇಹವನ್ನು ತೊರೆದು ನೀನು ತ್ರಿದಿವದಲ್ಲಿ ನನ್ನೊಡನೆ ವಾಸಿಸುತ್ತೀಯೆ. ಈ ಶ್ರೇಷ್ಠ ತೀರ್ಥವು ಸರ್ವಪಾಪಗಳನ್ನೂ ಕಳೆಯುವ ಬದರಪಾಚನವೆಂಬ ಹೆಸರಿನಿಂದ ಲೋಕದಲ್ಲಿ ಸ್ಥಿರವಾಗಿರುತ್ತದೆ. ಮೂರು ಲೋಕಗಳಲ್ಲಿಯೂ ವಿಖ್ಯಾತ ಈ ತೀರ್ಥದಲ್ಲಿ ಬ್ರಹ್ಮರ್ಷಿಗಳೂ ಸ್ನಾನಮಾಡಿದ್ದಾರೆ. ಹಿಂದೆ ಈ ಶುಭ ಶ್ರೇಷ್ಠ ತೀರ್ಥದಲ್ಲಿಯೇ ಸಪ್ತರ್ಷಿಗಳು ಅರುಂಧತಿಯನ್ನು ಬಿಟ್ಟು ಹಿಮಾಲಯಕ್ಕೆ ಹೋಗಿದ್ದರಲ್ಲವೇ? ಆ ಮಹಾಭಾಗ ಸಂಶಿತವ್ರತರು

ಜೀವನವನ್ನು ನಡೆಸಲು ಫಲ-ಮೂಲಗಳನ್ನು ಒಟ್ಟುಗೂಡಿಸಿ ತರಲು ಅಲ್ಲಿಗೆ ಹೋಗಿದ್ದರು. ಅವರು ಜೀವನಾರ್ಥವಾಗಿ ಹಿಮವದ್ವನದಲ್ಲಿ ವಾಸಿಸುತ್ತಿರುವಾಗ ಹನ್ನೆರಡು ವರ್ಷಗಳ ಅನಾವೃಷ್ಟಿಯು ಉಂಟಾಯಿತು. ಆ ತಪಸ್ವಿಗಳು ಅಲ್ಲಿ ಆಶ್ರಮವನ್ನು ಮಾಡಿಕೊಂಡು ವಾಸಿಸುತ್ತಿರಲು ಇತ್ತ ಕಲ್ಯಾಣೀ ಅರುಂಧತಿಯು ನಿತ್ಯವೂ ತಪೋನಿರತಳಾದಳು. ತೀವ್ರ ನಿಯಮಸ್ಥಳಾಗಿದ್ದ ಅರುಂಧತಿಯನ್ನು ನೋಡಿ ತ್ರಿನಯನ ವರದನು ಸುಪ್ರೀತನಾಗಿ ಅಲ್ಲಿಗೆ ಬಂದನು. ಮಹಾಯಶಸ್ವಿ ದೇವ ಮಹಾದೇವನು ಬ್ರಾಹ್ಮಣನ ರೂಪಧರಿಸಿ ಅವಳ ಬಳಿಬಂದು “ಶುಭೇ! ಭಿಕ್ಷೆಯನ್ನು ಬಯಸುತ್ತೇನೆ!” ಎಂದನು. ಆ ಚಾರುದರ್ಶನೆಯು ಬ್ರಾಹ್ಮಣನಿಗೆ ಹೇಳಿದಳು: “ವಿಪ್ರ! ನಾನು ಕೂಡಿಟ್ಟಿದ್ದ ಅಕ್ಕಿಯೆಲ್ಲವೂ ಮುಗಿದುಹೋಗಿದೆ. ಇಗೋ! ಈ ಬದರೀ ಹಣ್ಣುಗಳನ್ನೇ ತಿನ್ನು!” ಆಗ ಮಹಾದೇವನು “ಸುವ್ರತೇ! ಇವುಗಳನ್ನು ಬೇಯಿಸಿ ಕೊಡು!” ಎಂದನು. ಇದನ್ನು ಕೇಳಿ ಬ್ರಾಹ್ಮಣನಿಗೆ ಪ್ರಿಯವಾದುದನ್ನು ಮಾಡಲು ಬಯಸಿ ಆ ಯಶಸ್ವಿನಿಯು ಅಗ್ನಿಯನ್ನು ಪ್ರಜ್ವಲಿಸಿ ಅದರಲ್ಲಿ ಬದರೀ ಹಣ್ಣುಗಳನ್ನು ಬೇಯಿಸತೊಡಗಿದಳು. ಆಗ ಅವಳು ದಿವ್ಯ ಮನೋರಮ ಪುಣ್ಯ ಕಥೆಗಳನ್ನು ಕೇಳುತ್ತಿದ್ದಳು. ಹಾಗೆಯೇ ಆ ಹನ್ನೆರಡು ವರ್ಷಗಳ ಘೋರ ಅನಾವೃಷ್ಟಿಯೂ ಕಳೆದುಹೋಯಿತು. ಊಟಮಾಡದೇ ಶುಭ ಕಥೆಗಳನ್ನು

ಕೇಳುತ್ತಾ ಹಣ್ಣುಗಳನ್ನು ಬೇಯಿಸುತ್ತಿದ್ದ ಅವಳಿಗೆ ಆ ಸುದಾರಣ ಸಮಯವು ಒಂದೇ ದಿನದಂತೆ ಕಳೆದುಹೋಯಿತು. ಆಗ ಪರ್ವತದಿಂದ ಫಲಗಳನ್ನು ತೆಗೆದುಕೊಂಡು ಮುನಿಗಳು ಹಿಂದಿರುಗಲು ಪ್ರೀತನಾದ ಭಗವಾನನು ಅರುಂಧತಿಗೆ ಹೇಳಿದನು: "ಧರ್ಮಜ್ಞೇ! ಹಿಂದಿನಂತೆಯೇ ಈ ಋಷಿಗಳನ್ನು ಸೇರು. ಧರ್ಮಜ್ಞೇ! ನಿನ್ನ ತಪಸ್ಸು-ನಿಯಮಗಳಿಂದ ಪ್ರೀತನಾಗಿದ್ದೇನೆ." ಆಗ ಭಗವಾನ್ ಹರನು ತನ್ನ ಸ್ವರೂಪವನ್ನು ತೋರಿಸಿ ಅವಳ ಮಹಾ ನಡತೆಯ ಕುರಿತು ಋಷಿಗಳಿಗೆ ಹೇಳಿದನು: "ವಿಪ್ರರೇ! ಹಿಮವತ್ಪರ್ವತದಲ್ಲಿ ನೀವು ಏನು ತಪಸ್ಸನ್ನು ತಪಿಸಿದರೋ ಅದು ಇಲ್ಲಿ ಇವಳು ಮಾಡಿದ ತಪಸ್ಸಿಗೆ ಸಮನಲ್ಲ ಎಂದು ನನ್ನ ಅಭಿಪ್ರಾಯ. ಈ ತಪಸ್ವಿನಿಯು ಅತಿಕಷ್ಟಕರ ತಪಸ್ಸನ್ನು ತಪಿಸಿದ್ದಾಳೆ. ಆಹಾರವನ್ನು ಸೇವಿಸಿದೇ ಹಣ್ಣುಗಳನ್ನು ಬೇಯಿಸುತ್ತಾ ಹನ್ನೆರಡು ವರ್ಷಗಳನ್ನು ಕಳೆದಳು." ಆಗ ಭಗವಾನನು ಪುನಃ ಅರುಂಧತಿಗೆ ಹೇಳಿದನು: "ಕಲ್ಯಾಣೀ! ನಿನ್ನ ಹೃದಯದಲ್ಲಿ ಬಯಸಿದ ವರವನ್ನು ಕೇಳು!" ಆ ವಿಶಾಲಾಕ್ಷೀ ಅರುಣನೇತ್ರೆಯು ಸಪ್ತರ್ಷಿಗಳ ಮಧ್ಯೆ ದೇವನಿಗೆ ಹೇಳಿದಳು: "ಭಗವಾನ್! ನನ್ನ ಮೇಲೆ ಪ್ರೀತನಾಗಿರುವೆಯಾದರೆ ಈ ಉತ್ತಮ ತೀರ್ಥವು ಬದರಪಾಚನವೆಂಬ ಹೆಸರಿನಿಂದ ಸಿದ್ಧದೇವರ್ಷಿಗಳಿಗೆ

ಪ್ರಿಯವಾದ ಉತ್ತಮ ತೀರ್ಥವಾಗಲಿ. ದೇವದೇವೇಶ! ಹಾಗೆಯೇ ಇಲ್ಲಿ ಶುಚಿಯಾಗಿ ಉಪವಾಸಮಾಡಿಕೊಂಡು ಮೂರು ರಾತ್ರಿ ಕಳೆದವರಿಗೆ ಹನ್ನೆರಡು ವರ್ಷ ಹಾಗೆ ಮಾಡಿದುದರ ಫಲವು ದೊರೆಯಲಿ!" "ಅದು ಹಾಗೆಯೇ ಆಗುತ್ತದೆ!" ಎಂದು ಅವಳಿಗೆ ಹೇಳಿ ಹರನು ದಿವಕ್ಕೆ ತೆರಳಿದನು. ಹಸಿವು-ಬಾಯಾರಿಕೆಗಳಿದ್ದರೂ ಅರುಂಧತಿಯು ಬಳಲದೇ ಮುಖಕಾಂತಿಯನ್ನು ಕಳೆದುಕೊಳ್ಳದೇ ಇದ್ದುದನ್ನು ನೋಡಿ ಋಷಿಗಳು ವಿಸ್ಮಿತರಾದರು. ಮಹಾಭಾಗೇ! ನನಗಾಗಿ ನೀನು ಹೇಗೋ ಹಾಗೆ ಹಿಂದೆ ವಿಶುದ್ಧಾತ್ಮೆ ಅರುಂಧತಿಯು ಸಿದ್ಧಿಯನ್ನು ಪಡೆದಳು. ಈ ವ್ರತದಲ್ಲಿ ನಿನ್ನನ್ನೇ ನೀನು ಸಮರ್ಪಿಸಿರುವೆ! ನಿನ್ನ ನಿಯಮಗಳಿಂದ ಸಂತುಷ್ಟನಾದ ನಾನು ನಿನಗೆ ಇಂದು ಈ ವರವನ್ನು ನೀಡುತ್ತೇನೆ. ಮಹಾತ್ಮನು ಅರುಂಧತಿಗೆ ನೀಡಿದ ವರಕ್ಕಿಂತಲೂ ವಿಶೇಷ ವರವನ್ನು ಕೇಳು. ನಿನಗೆ ಕೊಡುತ್ತೇನೆ. ಯಥಾವಿಧಿಯಾಗಿ ಸಮಾಹಿತನಾಗಿ ಒಂದು ರಾತ್ರಿ ಈ ತೀರ್ಥದಲ್ಲಿದ್ದು ಸ್ನಾನಮಾಡಿದವನಿಗೆ ದೇಹತ್ಯಾಗದ ನಂತರ ದುರ್ಲಭ ಲೋಕಗಳು ದೊರೆಯುತ್ತವೆ."

ಪುಣ್ಯೆ ಸ್ರುಚಾವತಿಗೆ ಹೀಗೆ ಹೇಳಿ ಭಗವಾನ್ ದೇವ ಪ್ರತಾಪವಾನ್ ಸಹಸ್ರಾಕ್ಷನು ಪುನಃ ತ್ರಿದಿವಕ್ಕೆ ತೆರಳಿದನು. ವಜ್ರಧರನು ಹೊರಟುಹೋಗಲು ಅಲ್ಲಿ ದಿವ್ಯಸುವಾಸನೆಯುಳ್ಳ ದಿವ್ಯ ಪುಷ್ಪಗಳ

ಮಳೆಯು ಸುರಿಯಿತು. ಎಲ್ಲಕಡೆಗಳಲ್ಲಿ ಮಹಾಸ್ವನದ ದುಂಧುಭಿಗಳು ಮೊಳಗಿದವು. ಪುಣ್ಯಸುವಾಸನೆಯುಕ್ತ ಗಾಳಿಯೂ ಬೀಸಿತು. ಉಗ್ರ ತಪಸ್ಸಿನಿಂದ ಅವಳು ಆ ಶುಭದೇಹವನ್ನು ತ್ಯಜಿಸಿ ಇಂದ್ರನ ಭಾರ್ಯೆಯಾಗಿ ಅವನೊಂದಿಗೆ ರಮಿಸಿದಳು.

# ಅಸಿತದೇವಲ-ಜೈಗೀಷವ್ಯರ ಕಥೆ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 49ರಲ್ಲಿ ಹೇಳುತ್ತಾನೆ.

ಆದಿತ್ಯತೀರ್ಥದಲ್ಲಿ ಹಿಂದೆ ಧರ್ಮಾತ್ಮ ತಪೋಧನ ಅಸಿತದೇವಲನು ಗೃಹಸ್ಥಾಶ್ರಮ ಧರ್ಮವನ್ನು ಆಶ್ರಯಿಸಿ ವಾಸಿಸುತ್ತಿದ್ದನು. ಆ ಧರ್ಮನಿತ್ಯ-ಶುಚಿ-ದಾಂತ-ಮಹಾತಪಸ್ವಿಯು ಯಾರನ್ನೂ ಹಿಂಸಿಸದೇ ಕರ್ಮ-ಮನಸ್ಸು-ಮಾತುಗಳಲ್ಲಿ ಸರ್ವ ಜೀವಿಗಳೊಂದಿಗೆ ಸಮನಾಗಿ ನಡೆದುಕೊಂಡಿದ್ದನು. ಅಕ್ರೋಧನನಾದ ಆ ಮಹಾತಪಸ್ವಿಯು ಪ್ರಿಯ-ಅಪ್ರಿಯ ನಿಂದನೆಗಳನ್ನು ಮತ್ತು ಕಾಂಚನ-ಕಲ್ಲುಗಳನ್ನು ಒಂದೇ ಸಮನಾಗಿ ಕಾಣುತ್ತಿದ್ದನು. ದ್ವಿಜರೊಂದಿಗೆ ನಿತ್ಯವೂ ದೇವತೆ-ಅತಿಥಿಗಳನ್ನು ಪೂಜಿಸುತ್ತಿದ್ದನು ಮತ್ತು ಆ ಧರ್ಮಪರಾಯಣನು ನಿತ್ಯವೂ ಬ್ರಹ್ಮಚರ್ಯದಲ್ಲಿ ನಿರತನಾಗಿದ್ದನು. ಆಗ ಒಮ್ಮೆ ಧೀಮಾನ್ ಮುನಿ ಜೈಗೀಷವ್ಯನು ಯೋಗವನ್ನಾಶ್ರಯಿಸಿ ಭಿಕ್ಷುಕನಾಗಿ ಆ ತೀರ್ಥಕ್ಕೆ ಆಗಮಿಸಿದನು. ಆ ಮಹಾದ್ಯುತಿ ಮಹಾತಪಸ್ವಿಯು ದೇವಲನ

ಆಶ್ರಮದಲ್ಲಿ ವಾಸಮಾಡಿದ್ದುಕೊಂಡು ಯೋಗನಿತ್ಯನಾಗಿ ಸಿದ್ಧಿಯನ್ನು ಪಡೆದನು. ಅವನು ಅಲ್ಲಿ ವಾಸಿಸುತ್ತಿರಲು ಮಹಾಮುನಿ ಜೈಗೀಷವ್ಯನನ್ನು ದೇವಲನು ನೋಡುತ್ತಲೇ ಇದ್ದನು. ಆದರೆ ಗೃಹಸ್ಥಾಶ್ರಮ ಧರ್ಮವನ್ನು ಪಾಲಿಸುತ್ತಿದ್ದ ಅವನು ಯೋಗಸಾಧನೆಗೆ ತೊಡಗುತ್ತಿರಲಿಲ್ಲ. ಹೀಗೆ ಅವರಿಬ್ಬರೂ ಇರುತ್ತಾ ಬಹಳಕಾಲ ಕಳೆಯಿತು. ಕೆಲವು ಸಮಯಗಳು ದೇವಲನು ಜೈಗೀಷವ್ಯ ಮುನಿಯನ್ನು ಕಾಣುತ್ತಲೇ ಇರಲಿಲ್ಲ. ಆಹಾರಕಾಲದಲ್ಲಿ ಪರಿವ್ರಾಜಕ ಮತಿಮಾನ್ ಧರ್ಮಜ್ಞ ಜೈಗೀಷವ್ಯನು ಭಿಕ್ಷೆಬೇಡುತ್ತಾ ದೇವಲನ ಬಳಿ ಬರುತ್ತಿದ್ದನು. ಭಿಕ್ಷುರೂಪದಲ್ಲಿದ್ದ ಆ ಮಹಾಮುನಿಯು ಬಂದುದನ್ನು ನೋಡಿ ದೇವಲನು ಪರಮ ಗೌರವವನ್ನಿತ್ತು ಬಹಳ ಸಂತೋಷಪಟ್ಟುಗೊಳ್ಳುತ್ತಿದ್ದನು. ದೇವಲನಾದರೋ ಯಥಾಶಕ್ತಿಯಾಗಿ ಋಷಿಗಳಿಗೆ ಅನುಗುಣವಾದ ವಿಧಿಗಳಿಂದ ಸಮಾಹಿತನಾಗಿ ಪೂಜಿಸುತ್ತಿದ್ದನು.

ಒಮ್ಮೆ ಮಹಾದ್ಯುತಿ ಮುನಿ ಜೈಗೀಷವ್ಯನನ್ನು ನೋಡಿ ಮಹಾತ್ಮ ದೇವಲನಲ್ಲಿ ಮಹಾ ಚಿಂತೆಯು ಮೂಡಿತು.

> “ಅನೇಕ ವರ್ಷಗಳು ನಾನು ವಿಧಿವತ್ತಾಗಿ ಇವನನ್ನು ಪೂಜಿಸುತ್ತಲೇ ಬಂದಿದ್ದೇನೆ. ಆದರೆ ಈ ಆಲಸಿ ಭಿಕ್ಷುವು ನನ್ನೊಡನೆ ಏನೊಂದು ಮಾತನ್ನೂ ಆಡಲೇ ಇಲ್ಲವಲ್ಲ!”

ಹೀಗೆ ಆಲೋಚಿಸುತ್ತಾ ಶ್ರೀಮಾನ್ ದೇವಲನು ಕಲಶವನ್ನೆತ್ತಿಕೊಂಡು

ಆಕಾಶಮಾರ್ಗವಾಗಿ ಸಮುದ್ರಕ್ಕೆ ಹೋದನು. ಸರಿತ್ತುಗಳ ಒಡೆಯ ಸಮುದ್ರವನ್ನು ತಲುಪುತ್ತಲೇ ಆ ಧರ್ಮಾತ್ಮನು ತನಗಿಂದ ಮೊದಲೇ ಅಲ್ಲಿಗೆ ಬಂದಿದ್ದ ಜೈಗೀಷವ್ಯನನ್ನು ಕಂಡನು. ಆಗ ಪ್ರಭುವು ವಿಸ್ಮಿತನಾಗಿ ಈ ರೀತಿ ಚಿಂತಿಸತೊಡಗಿದನು:

> “ಈ ಭಿಕ್ಷುವು ಹೇಗೆ ತಾನೇ ಸಮುದ್ರವನ್ನು ತಲುಪಿ
> ಸ್ನಾನವನ್ನೂ ಮುಗಿಸಿದ್ದಾನೆ?”

ಮಹರ್ಷಿ ಅಸಿತನು ಹೀಗೆ ಚಿಂತಿಸುತ್ತಿದ್ದನು. ಸಮುದ್ರದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಜಪವನ್ನೂ ಜಪಿಸಿದನು. ಆಹ್ನಿಕವನ್ನೂ ಪೂರೈಸಿ, ನೀರಿನಿಂದ ತುಂಬಿದ ಕಲಶವನ್ನು ಹಿಡಿದುಕೊಂಡು ಶ್ರೀಮಾನ್ ದೇವಲನು ಆಶ್ರಮಕ್ಕೆ ಹಿಂದಿರುಗಿದನು. ತನ್ನ ಆಶ್ರಮವನ್ನು ಪ್ರವೇಶಿಸುತ್ತಲೇ ಆ ಮುನಿಯು ಆಶ್ರಮದಲ್ಲಿ ಕುಳಿತಿದ್ದ ಜೈಗೀಷವ್ಯನನ್ನು ನೋಡಿದನು. ಆದರೆ ಜೈಗೀಷ್ಯವ್ಯನು ದೇವಲನೊಂದಿಗೆ ಯಾವುದೇ ರೀತಿಯಲ್ಲಿಯೂ ವ್ಯವಹರಿಸಲಿಲ್ಲ. ಆಶ್ರಮಪದದಲ್ಲಿ ಆ ಮಹಾತಪಸ್ವಿಯು ಕಟ್ಟಿಗೆಯಂತೆ ಮೌನಿಯಾಗಿದ್ದನು. ಸಾಗರದ ಗಾಂಭೀರ್ಯದಿಂದ ಅವನು ಸಾಗರದ ನೀರಿನಲ್ಲಿ ತನಗಿಂತಲೇ ಮೊದಲು ಸ್ನಾನಮಾಡಿದುದನ್ನೂ ಮತ್ತು ತನಗಿಂತ ಮೊದಲೇ ಆಶ್ರಮವನ್ನು ಪ್ರವೇಶಿಸಿದುದನ್ನು ನೋಡಿ ಬುದ್ಧಿಮಾನ್ ಅಸಿತ ದೇವಲನು ಚಿಂತಿಸತೊಡಗಿದನು. ತಪಸ್ಸು-ಯೋಗಗಳಿಂದುಂಟಾದ ಜೈಗೀಷವ್ಯನ ಪ್ರಭಾವವನ್ನು ನೋಡಿ ಮುನಿಸತ್ತಮನು

“ಇವನನ್ನು ನಾನು ಸಮುದ್ರ ಮತ್ತು ಆಶ್ರಮಗಳಲ್ಲಿ ಹೇಗೆ ನೋಡುತ್ತಿರುವೆ?”

ಎಂದು ಆಲೋಚಿಸತೊಡಗಿದನು. ಹೀಗೆ ಲೆಖ್ಕ ಹಾಕುತ್ತಲೇ ಮಂತ್ರಪಾರಗ ಮುನಿ ದೇವಲನು ಭಿಕ್ಷು ಜೈಗೀಷವ್ಯನ ಕುರಿತು ಚರ್ಚಿಸಲು ಅಲ್ಲಿಂದ ಅಂತರಿಕ್ಷಕ್ಕೇರಿದನು. ಅಂತರಿಕ್ಷದಲ್ಲಿ ಹೋಗುತ್ತಿರುವಾಗ ಅವನು ಸಮಾಹಿತ ಸಿದ್ಧರನ್ನೂ, ಆ ಸಿದ್ಧರು ಜೈಗೀಷವ್ಯನನ್ನು ಪೂಜಿಸುತ್ತಿರುವುದನ್ನೂ ಕಂಡನು. ಆಗ ವ್ಯವಸಾಯೀ ದೃಢವ್ರತ ಅಸಿತನು ತುಂಬಾ ಕುಪಿತನಾದನು. ದೇವಲನು ಜೈಗೀಷವ್ಯನು ದಿವಕ್ಕೆ ಹೋಗುತ್ತಿರುವುದನ್ನೂ ನೋಡಿದನು. ಅವನು ಪಿತೃಲೋಕಕ್ಕೆ ಹೋಗುತ್ತಿರುವುದನ್ನೂ ನೋಡಿದನು. ಮತ್ತು ಪಿತೃಲೋಕದಿಂದ ಯಮಲೋಕಕ್ಕೆ ಹೋಗುತ್ತಿರುವುದನ್ನೂ ನೋಡಿದನು. ಮಹಾಮುನಿ ಜೈಗೀಷವ್ಯನು ಅಲ್ಲಿಂದಲೂ ಮೇಲೆ ಹಾರಿ ಸೋಮಲೋಕಕ್ಕೆ ಹೋಗುತ್ತಿರುವುದನ್ನೂ ದೇವಲನು ನೋಡಿದನು.

ಅಲ್ಲಿಂದ ಅವನು ಏಕಾಂತಯಾಜಿಗಳ ಶುಭ ಲೋಕಗಳಿಗೆ ಹಾರಿದುದನ್ನೂ, ಅಲ್ಲಿಂದ ಅಗ್ನಿಹೋತ್ರಿಗಳ ಲೋಕಗಳಿಗೆ ಹಾರಿದುದನ್ನೂ ನೋಡಿದನು. ಜೈಗೀಷವ್ಯನನ್ನು ದರ್ಶ-ಪೌರ್ಣಮಾಸ ಯಜ್ಞಗಳನ್ನು ಮಾಡಿದ ತಪೋಧನ ಧೀಮಂತರಿಗೆ ದೊರಕುವ ಲೋಕಗಳಲ್ಲಿಯೂ ನೋಡಿದನು. ಅಲ್ಲಿಂದ ಅವನು ಪಶುಯಾಜಿಗಳಿಗೆ ಲಭ್ಯವಾಗುವ ಅಮಲ ದೇವಪೂಜಿತ ಲೋಕಗಳಿಗೆ ಹೋಗುವುದನ್ನೂ

ನೋಡಿದನು. ಅನಂತರ ಜೈಗೀಷವ್ಯನು ಬಹುವಿಧದ ಚಾತುರ್ಮಾಸ್ಯಗಳನ್ನು ಮಾಡುವ ತಪೋಧನರ ಸ್ಥಾನಗಳಿಗೆ ಹೋಗುತ್ತಿರುವುದನ್ನೂ, ಹಾಗೆಯೇ ಅಗ್ನಿಷ್ಟೋಮ ಮತ್ತು ಅಗ್ನಿಷ್ಟುತ ಯಾಗಗಳನ್ನು ಮಾಡುವ ತಪೋಧನರ ಸ್ಥಾನಗಳಿಗೆ ತಲುಪಿದುದನ್ನೂ ದೇವಲನು ನೋಡಿದನು. ಬಹುಸುವರ್ಣಗಳ ದಕ್ಷಿಣೆಗಳನ್ನಿತ್ತು ಕ್ರತುಶ್ರೇಷ್ಠ ವಾಜಪೇಯವನ್ನು ಮಾಡಿದ್ದ ಮಹಾಪ್ರಾಜ್ಞರ ಲೋಕಗಳಲ್ಲಿಯೂ ದೇವಲನು ಜೈಗೀಷವ್ಯನನ್ನು ಕಂಡನು. ಪುಂಡರೀಕ ಮತ್ತು ರಾಜಸೂಯಯಾಗಗಳನ್ನು ಮಾಡಿದವರ ಲೋಕಗಳಲ್ಲಿಯೂ ಜೈಗೀಷವ್ಯನನ್ನು ದೇವಲನು ನೋಡಿದನು. ಕ್ರತುಶ್ರೇಷ್ಠ ಅಶ್ವಮೇಧ ಮತ್ತು ಹಾಗೆಯೇ ನರಮೇಧ ಯಜ್ಞಗಳನ್ನು ಪೂರೈಸಿದ ನರಶ್ರೇಷ್ಠರಿಗೆ ದೊರಕುವ ಲೋಕಗಳಲ್ಲಿಯೂ ಅವನನ್ನು ನೋಡಿದನು. ಸರ್ವಮೇಧ ಮತ್ತು ಮಾಡಲು ಕಷ್ಟಕರವಾದ ಸೌತ್ರಾಮಣಿ ಯಜ್ಞಮಾಡಿದವರ ಲೋಕಗಳಲ್ಲಿಯೂ ದೇವಲನು ಜೈಗೀಷವ್ಯನನ್ನು ನೋಡಿದನು. ವಿವಿಧ ದ್ವಾದಶಾಹ ಸತ್ರಗಳಿಂದ ಯಜಿಸುವವರಿಗೆ ದೊರೆಯುವ ಲೋಕಗಳಲ್ಲಿಯೂ ದೇವಲನು ಜೈಗೀಷವ್ಯನನ್ನು ನೋಡಿದನು. ಹಾಗೆಯೇ ಅಸಿತನು ಮಿತ್ರಾವರುಣರ ಲೋಕ, ಆದಿತ್ಯರ ಲೋಕಗಳಿಗೆ ಹೋದಾಗ ಅಲ್ಲಿಯೂ ಜೈಗೀಷವ್ಯನನ್ನು ನೋಡಿದನು. ರುದ್ರರ, ವಸುಗಳ ಮತ್ತು ಬೃಹಸ್ಪತಿಯ ಸ್ಥಾನಗಳಲ್ಲಿ ಎಲ್ಲ ಕಡೆ ಅಸಿತನು ಅವನನ್ನು ನೋಡಿದನು. ಜೈಗೀಷವ್ಯನು ಗೋಲೋಕಕ್ಕೆ ಹಾರಿ ಅಲ್ಲಿಂದ ಬ್ರಹ್ಮಸತ್ರಿಗಳಿಗೆ ದೊರಕುವ ಲೋಕಗಳಿಗೆ ಹೋಗುತ್ತಿರುವುದನ್ನೂ

ಅಸಿತನು ನೋಡಿದನು. ಆ ವಿಪ್ರನು ತನ್ನ ತೇಜಸ್ಸಿನಿಂದ ಮೂರು ಲೋಕಗಳನ್ನೂ ದಾಟಿ ಪತಿವ್ರತೆಯರ ಲೋಕಗಳಿಗೆ ಹೋಗುತ್ತಿರುವುದನ್ನೂ ನೋಡಿದನು. ಅನಂತರ ಅಸಿತನು ಯೋಗಸ್ಥನಾಗಿ ಅಂತರ್ಧಾನನಾಗಿದ್ದ ಜೈಗೀಷ ಮುನಿವರನನ್ನು ಕಾಣಲಿಲ್ಲ. ಆಗ ಮಹಾಭಾಗ ದೇವಲನು ಜೈಗೀಷವ್ಯನ ವ್ರತತ್ವ, ಪ್ರಭಾವ, ಮತ್ತು ಯೋಗದ ಅತುಲ ಸಿದ್ಧಿಯ ಕುರಿತೂ ಚಿಂತಿಸಿದನು.

ಆಗ ಧೀರ ಅಸಿತನು ಅಂಜಲೀಬದ್ಧನಾಗಿ ಪ್ರಯಾಣಿಸುತ್ತಿದ್ದ ಬ್ರಹ್ಮಸತ್ರಿ ಲೋಕಸತ್ತಮ ಸಿದ್ಧರನ್ನು ಪ್ರಶ್ನಿಸಿದನು:

> "ಮಹೌಜಸ ಜೈಗೀಷವ್ಯನು ಕಾಣುತ್ತಿಲ್ಲವಲ್ಲ! ಇದರ ಕುರಿತು ಕೇಳಲು ಬಯಸುತ್ತೇನೆ. ನನಗೆ ಪರಮ ಕುತೂಹಲವಾಗಿದೆ!"

ಸಿದ್ಧರು ಹೇಳಿದರು:

> "ದೇವಲ! ದೃಢವ್ರತ! ನಾವು ಹೇಳುವುದರ ಅರ್ಥವನ್ನು ಕೇಳು! ಜೈಗೀಷವ್ಯನು ಅವ್ಯಯವೂ ಶಾಶ್ವತವೂ ಆದ ಬ್ರಹ್ಮಲೋಕಕ್ಕೆ ಹೋಗಿದ್ದಾನೆ."

ಬ್ರಹ್ಮಸತ್ರಿ ಸಿದ್ಧರ ಆ ಮಾತನ್ನು ಕೇಳಿ ತಕ್ಷಣವೇ ಅಸಿತ ದೇವಲನು ಮೇಲಕ್ಕೆ ಹಾರಿ, ಬಿದ್ದನು. ಆಗ ಸಿದ್ಧರು ದೇವಲನಿಗೆ ಪುನಃ ಹೇಳಿದರು:

> "ದೇವಲ! ತಪೋಧನ! ವಿಪ್ರ! ಬ್ರಹ್ಮಸದನಕ್ಕೆ ಜೈಗೀಷವ್ಯನು

ಪಡೆದುಕೊಂಡಿರುವ ಮಾರ್ಗದಲ್ಲಿ ನೀನು ಹೋಗಲಿಕ್ಕಾಗುವುದಿಲ್ಲ.”

ಸಿದ್ಧರ ಆ ಮಾತನ್ನು ಕೇಳಿ ದೇವಲನು ಪುನಃ ಅನುಕ್ರಮವಾಗಿ ಆ ಎಲ್ಲ ಲೋಕಗಳಿಂದಲೂ ಕೆಳಗಿಳಿದನು. ಪತಂಗದಂತೆ ತನ್ನ ಪುಣ್ಯ ಆಶ್ರಮಪದಕ್ಕೆ ತಲುಪಿದ ದೇವಲನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿ ಕೂಡ ಜೈಗೀಷವ್ಯನನ್ನು ನೋಡಿದನು. ಆಗ ದೇವಲನು ಧರ್ಮಯುಕ್ತ ಬುದ್ಧಿಯಿಂದ ಆಲೋಚಿಸಿ ತಪಸ್ವಿ ಜೈಗೀಷವ್ಯನ ಯೋಗದಿಂದುಂಟಾದ ಪ್ರಭಾವವನ್ನು ಕಂಡನು. ಆಗ ದೇವಲನು ವಿನಯಾವನತನಾಗಿ ಮಹಾಮುನಿ ಜೈಗೀಷವ್ಯನ ಬಳಿಸಾರಿ ಆ ಮಹಾತ್ಮನಿಗೆ

“ಭಗವನ್! ಮೋಕ್ಷಧರ್ಮವನ್ನು ಆಶ್ರಯಿಸುವ ಇಚ್ಛೆಯುಂಟಾಗಿದೆ”

ಎಂದು ಹೇಳಿದನು. ಅವನ ಆ ಮಾತನ್ನು ಕೇಳಿ ಜೈಗೀಷವ್ಯನು ಅವನಿಗೆ ಯೋಗದ ಪರಮ ವಿಧಿಯನ್ನೂ, ಕಾರ್ಯಾಕಾರ್ಯಗಳನ್ನು ಶಾಸ್ತ್ರತಃ ಉಪದೇಶಿಸಿದನು. ಸಂನ್ಯಾಸವನ್ನು ತೆಗೆದುಕೊಳ್ಳಲು ನಿಶ್ಚಯಿಸಿದ್ದ ಅವನನ್ನು ನೋಡಿ ಮಹಾತಪಸ್ವಿ ಜೈಗೀಷವ್ಯನು ಅವನಿಗೆ ವಿಧಿದೃಷ್ಠ ಕರ್ಮಗಳಿಂದ ಎಲ್ಲ ಕ್ರಿಯೆಗಳನ್ನೂ ನಡೆಸಿದನು. ಅವನ ಸನ್ಯಾಸ ನಿಶ್ಚಯವನ್ನು ನೋಡಿ ಪಿತೃಗಳೊಂದಿಗೆ ಎಲ್ಲ ಪ್ರಾಣಿಗಳೂ

“ಇನ್ನು ನಮಗೆ ಯಾರು ಅನ್ನವನ್ನು ವಿಭಜಿಸಿ ಕೊಡುತ್ತಾರೆ?”

ಎಂದು ರೋದಿಸಿದರು. ಹತ್ತು ದಿಕ್ಕುಗಳಿಂದಲೂ ಕೇಳಿಬರುತ್ತಿರುವ ಭೂತಗಳ ಕರುಣ ಮಾತುಗಳನ್ನು ಕೇಳಿ ದೇವಲನು ಸನ್ಯಾಸವನ್ನು ತ್ಯಜಿಸುವ ಮನಸ್ಸು ಮಾಡಿದನು. ಆಗ ಸಹಸ್ರಾರು ಪುಣ್ಯ ಫಲಮೂಲಗಳು ಪುಷ್ಪ-ಔಷಧಿಗಳು ರೋದಿಸತೊಡಗಿದವು.

> "ಕ್ಷುದ್ರ ದುರ್ಮತಿ ದೇವಲನು ಪುನಃ ಗೃಹಸ್ಥಾಶ್ರಮದಲ್ಲಿದ್ದುಕೊಂಡು ನಮ್ಮನ್ನು ಕತ್ತರಿಸುತ್ತಾನೆ. ಸನ್ಯಾಸಾಶ್ರಮದ ಪೂರ್ವಾಂಗ ಕರ್ಮದಲ್ಲಿ ಎಲ್ಲ ಭೂತಗಳಿಗೂ ಅಭಯವನ್ನಿತ್ತುದನ್ನು ಇವನು ಗಮನಕ್ಕೆ ತೆಗೆದುಕೊಂಡಿಲ್ಲ!"

ನಂತರ ಇನ್ನೊಮ್ಮೆ ಸ್ವಬುದ್ಧಿಯಿಂದ ಮೋಕ್ಷ ಮತ್ತು ಗೃಹಸ್ಥಧರ್ಮಗಳಲ್ಲಿ ಯಾವುದು ಶ್ರೇಯಸ್ಕರವೆನ್ನುವುದನ್ನು ಅಲೋಚಿಸಿದನು. ಹೀಗೆ ಮನಸಾರೆ ನಿಶ್ಚಯಿಸಿ ದೇವಲನು ಗ್ರಹಸ್ಥಧರ್ಮವನ್ನು ತೊರೆದು ಮೋಕ್ಷಧರ್ಮವನ್ನು ಆರಿಸಿಕೊಂಡನು. ಇದನ್ನು ಮೊದಲೇ ಯೋಚಿಸಿ ನಿಶ್ಚಯಿಸಿ ದೇವಲನು ಪರಮ ಸಿದ್ಧಿಯನ್ನೂ ಪರಮ ಯೋಗವನ್ನೂ ಪಡೆದನು. ಆಗ ಬೃಹಸ್ಪತಿಯನ್ನು ಮುಂದಿಟ್ಟುಕೊಂಡು ದೇವತೆ-ತಪಸ್ವಿಗಳು ಒಂದುಗೂಡಿ ಜೈಗೀಷವ್ಯನ ತಪಸ್ಸನ್ನು ಪ್ರಶಂಸಿಸಿದರು. ಆಗ ಋಷಿವರ ನಾರದನು ದೇವತೆಗಳಿಗೆ

> "ಜೈಗೀಷವ್ಯನಲ್ಲಿ ತಪಸ್ಸಿಲ್ಲ; ಅಸಿತನನ್ನು ವಿಸ್ಮಯಗೊಳಿಸಿದ್ದಾನೆ ಅಷ್ಟೆ!"

ಎಂದನು. ಅವರೊಂದಿಗೆ ವಾದಿಸುತ್ತಿದ್ದ ಆ ಧೀರ ನಾರದನಿಗೆ ಹಾಗೆ ಹೇಳಬೇಡವೆಂದು ಹೇಳಿ ದಿವೌಕಸರು ಮಹಾಮುನಿ ಜೈಗೀಷವ್ಯನನ್ನು ಪ್ರಶಂಸಿಸಿದರು.

# ಮಹರ್ಷಿ ದಧೀಚಿ ಮತ್ತು ಸಾರಸ್ವತ ಮುನಿ

**ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 50ರಲ್ಲಿ ಹೇಳುತ್ತಾನೆ.**

ಸೋಮತೀರ್ಥದಲ್ಲಿ ಉಡುಪತೀ ಚಂದ್ರನು ರಾಜಸೂಯವನ್ನು ನಡೆಸಿದ್ದನು. ಅಲ್ಲಿ ಹಿಂದೆ ಸಾರಸ್ವತ ಮುನಿಯು ಹನ್ನೆರಡು ವರ್ಷಗಳ ಅನಾವೃಷ್ಟಿಯಿಂದ ಪೀಡಿತರಾಗಿದ್ದ ದ್ವಿಜೋತ್ತಮರಿಗೆ ವೇದಾಧ್ಯಯವನ್ನು ಮಾಡಿಸಿದ್ದನು.

ಹಿಂದೆ ದಧೀಚ ಎಂದು ವಿಖ್ಯಾತನಾದ ಬ್ರಹ್ಮಚಾರೀ ಜಿತೇಂದ್ರಿಯ ಮಹಾತಪಸ್ವಿ ಧೀಮಾನ್ ಮುನಿಯಿದ್ದನು. ಅವನ ತಪಸ್ಸಿನಿಂದ ಶಕ್ರನು ಸತತವೂ ಭಯಪಡುತ್ತಿದ್ದನು. ಬಹುವಿಧದ ಫಲಗಳಿಂದಲೂ ಅವನನ್ನು ಲೋಭಗೊಳಿಸಲು ಶಕ್ಯವಾಗಲಿಲ್ಲ. ಅವನನ್ನು ಲೋಭಗೊಳಿಸಲು ಪಾಕಶಾಸನನು ದಿವ್ಯ ಪುಣ್ಯೆ ಸುಂದರಿ ಅಪ್ಸರೆ

ಅಲಂಬುಸಳನ್ನು ಕಳುಹಿಸಿದನು. ಆ ಮಹಾತ್ಮನು ಸರಸ್ವತೀ ತೀರದಲ್ಲಿ ದೇವತೆಗಳಿಗೆ ತರ್ಪಣೆಗಳನ್ನು ನೀಡುತ್ತಿರುವಾಗ ಆ ಭಾಮಿನಿಯು ಅವನ ಸಮೀಪ ಹೋದಳು. ಅವಳ ದಿವ್ಯ ದೇಹವನ್ನು ಕಂಡು ಭಾವಿತಾತ್ಮ ಋಷಿಯ ರೇತಸ್ಸು ಸರಸ್ವತಿಯಲ್ಲಿಯೇ ಸ್ಖಲನವಾಯಿತು. ಅದನ್ನು ಆ ನದಿಯು ಸ್ವೀಕರಿಸಿದಳು. ತನ್ನ ಮಡಿಲಲ್ಲಿ ಬಿದ್ದ ಆ ರೇತಸ್ಸನ್ನು ನೋಡಿ ಪುತ್ರನಿಗೋಸ್ಕರ ಆ ಮಹಾನದಿಯು ಅದನ್ನು ಗರ್ಭದಲ್ಲಿ ಧರಿಸಿದಳು. ಸಮಯಾನಂತರದಲ್ಲಿ ಆ ಶ್ರೇಷ್ಠ ನದಿಯು ಹೆತ್ತು, ಮಗನನ್ನು ಎತ್ತಿಕೊಂಡು ಋಷಿಯ ಬಳಿ ಹೋದಳು. ಋಷಿಸಂಸದಿಯಲ್ಲಿದ್ದ ಆ ಮುನಿಸತ್ತಮನನ್ನು ಕಂಡು ಅವನಿಗೆ ಪುತ್ರನನ್ನು ನೀಡುತ್ತಾ ನದಿಯು ಹೇಳಿದಳು:

> “ಬ್ರಹ್ಮರ್ಷೇ! ಇವನು ನಿನ್ನ ಮಗ. ಹಿಂದೆ ಅಪ್ಸರೆ ಅಲಂಬುಸಳನ್ನು ನೋಡಿ ನಿನ್ನ ರೇತಸ್ಕಲನವಾದಾಗ ನಿನ್ನ ಮೇಲಿನ ಭಕ್ತಿಯಿಂದ ಇವನನ್ನು ನನ್ನ ಗರ್ಭದಲ್ಲಿ ಧರಿಸಿದ್ದೆ. ನಿನ್ನ ತೇಜಸ್ಸು ನಾಶವಾಗಬಾರದೆಂದು ನಿಶ್ಚಯಿಸಿ ನಿನ್ನ ಮೇಲಿನ ಭಕ್ತಿಯಿಂದ ನಾನು ಅದನ್ನು ನನ್ನ ಉದರದಲ್ಲಿ ಧರಿಸಿದ್ದೆ. ನಾನು ನಿನಗೊಪ್ಪಿಸುತ್ತಿರುವ ನಿನ್ನ ಈ ಅನಿಂದಿತ ಮಗನನ್ನು ಸ್ವೀಕರಿಸು!”

ಹೀಗೆ ಹೇಳಲು ಸಂತೋಷದಿಂದ ಆ ದ್ವಿಜೋತ್ತಮನು ಪುತ್ರನನ್ನು ಕೈಗೆತ್ತಿಕೊಂಡು ಪ್ರೀತಿಯಿಂದ ಅವನ ನೆತ್ತಿಯನ್ನು ಆಘ್ರಾಣಿಸಿದನು,

ಅವನನ್ನು ಬಹಳ ಹೊತ್ತು ಅಪ್ಪಿಕೊಂಡೇ ಇದ್ದ ಆ ಮಹಾಮುನಿಯು ಪ್ರೀತಿಯಿಂದ ಸರಸ್ವತಿಗೆ ವರವನ್ನಿತ್ತನು:

> "ಸುಭಗೇ! ನಿನ್ನ ನೀರಿನಿಂದ ತರ್ಪಣೆಯನ್ನು ಸ್ವೀಕರಿಸಿದ ವಿಶ್ವೇದೇವರು, ಮತ್ತು ಪಿತೃಗಣಗಳೊಂದಿಗೆ ಗಂಧರ್ವಾಪ್ಸರ ಗಣಗಳು ತೃಪ್ತಿಹೊಂದುತ್ತಾರೆ."

ಹೀಗೆ ಹೇಳಿ ಪರಮಹೃಷ್ಟನಾದ ಅವನು ಆ ಮಹಾನದಿಯನ್ನು ಸ್ತುತಿಸಿದನು:

> "ಮಹಾಭಾಗೇ! ಹಿಂದೆ ನೀನು ಬ್ರಹ್ಮಸರಸ್ಸಿನಿಂದ ಹರಿದುಬಂದೆ. ನದಿಶ್ರೇಷ್ಠಳೇ! ಸಂಶಿತವ್ರತ ಮುನಿಗಳು ನಿನ್ನನ್ನು ತಿಳಿದಿದ್ದಾರೆ. ಪ್ರಿಯದರ್ಶನೇ! ನನಗೆ ಕೂಡ ನೀನು ಸತತವೂ ಪ್ರಿಯವನ್ನುಂಟುಮಾಡುತ್ತಿರುವೆ. ಆದುದರಿಂದ ವರವರ್ಣಿನೀ! ನಿನ್ನ ಈ ಮಗನು ಮಹಾನ್ ಸಾರಸ್ವತನೆಂದಾಗುತ್ತಾನೆ. ನಿನ್ನ ಲೋಕಭಾವನ ಮಗನು ನಿನ್ನದೇ ಹೆಸರಿನಿಂದ ಪ್ರಥಿತನಾಗುವನು. ಸಾರಸ್ವತನೆಂದು ಖ್ಯಾತನಾಗಿ ಮಹಾತಪಸ್ವಿಯಾಗುತ್ತಾನೆ. ಈ ಸಾರಸ್ವತನು ಹನ್ನೆರಡು ವರ್ಷಗಳ ಅನಾವೃಷ್ಟಿಯಾದಾಗ ದ್ವಿಜರ್ಷಭರಿಗೆ ವೇದಾಧ್ಯಯವನ್ನು ನೀಡುತ್ತಾನೆ. ಸರಸ್ವತೀ! ನನ್ನ ಪ್ರಸಾದದಿಂದ ನೀನು ಎಲ್ಲ ಪುಣ್ಯ ನದಿಗಳಿಗಿಂತಲೂ ಹೆಚ್ಚಿನ ಪುಣ್ಯೆಯಾಗುತ್ತೀಯೆ."

ಹೀಗೆ ಅವನಿಂದ ಸ್ತುತಿಸಲ್ಪಟ್ಟು ಮತ್ತು ವರವನ್ನು ಪಡೆದು ಮಹಾನದಿಯು ಸಂತಸದಿಂದ ಪುತ್ರನನ್ನು ಕರೆದುಕೊಂಡು ಹೋದಳು.

ಇದೇ ಸಮಯದಲ್ಲಿ ದೇವ-ದಾನವರ ವಿರೋಧವುಂಟಾಗಲು ಶಕ್ರನು ಆಯುಧಗಳನ್ನು ಹುಡುಕುತ್ತಾ ಮೂರು ಲೋಕಗಳಲ್ಲಿಯೂ ಸಂಚರಿಸತೊಡಗಿದನು. ಆದರೆ ದೇವದ್ವೇಷಿಗಳನ್ನು ವಧಿಸಲು ಯೋಗ್ಯವಾದ ಆಯುಧಗಳು ಅವನಿಗೆ ದೊರಕಲೇ ಇಲ್ಲ. ಆಗ ಶಕ್ರನು ಸುರರಿಗೆ ಹೇಳಿದನು:

> “ದಧೀಚಿಯ ಅಸ್ಥಿಯಲ್ಲದೇ ಬೇರೆ ಯಾವುದರಿಂದಲೂ ದೇವದ್ವೇಷೀ ಮಹಾಸುರರನ್ನು ಸಂಹರಿಸಲು ನನಗೆ ಶಕ್ಯವಿಲ್ಲ. ಆದುದರಿಂದ ಋಷಿಶ್ರೇಷ್ಠ ದಧೀಚಿಯಲ್ಲಿಗೆ ಹೋಗಿ ಅಸ್ಥಿಯನ್ನು ನೀಡೆಂದು ಪ್ರಾರ್ಥಿಸಿಕೊಳ್ಳಿ. ಅದರಿಂದ ನಾವು ಶತ್ರುಗಳನ್ನು ವಧಿಸಬಲ್ಲೆವು.”

ದೇವತೆಗಳು ಪ್ರಯತ್ನಪಟ್ಟು ಅಸ್ಥಿಗಳನ್ನು ಕೇಳಲು ಆ ಋಷಿವರನು ಏನೂ ವಿಚಾರಮಾಡದೇ ಪ್ರಾಣತ್ಯಾಗಮಾಡುತ್ತೇನೆಂದು ಹೇಳಿ ಹಾಗೆಯೇ ಮಾಡಿದನು. ದೇವತೆಗಳ ಪ್ರಿಯವಾದುದನ್ನು ಮಾಡಿದ ಅವನು ಅಕ್ಷಯಲೋಕಗಳನ್ನು ಪಡೆದನು. ಅವನ ಅಸ್ಥಿಗಳಿಂದ ಸಂತೋಷಗೊಂಡ ಶಕ್ರನು ಅದರಿಂದ ನಾನಾರೀತಿಯ ದಿವ್ಯ ಆಯುಧಗಳನ್ನು – ಅನೇಕ ವಜ್ರಗಳನ್ನೂ, ಚಕ್ರಗಳನ್ನೂ, ಗದೆಗಳನ್ನೂ, ಗುರುದಂಡಗಳನ್ನೂ ಮಾಡಿಸಿದನು. ಪ್ರಜಾಪತಿಸುತ ಲೋಕಭಾವನ

ಪರಮಋಷಿ ಭೃಗುವು ದಧೀಚಿಯನ್ನು ತೀವ್ರ ತಪಸ್ಸಿನಿಂದ ಪಡೆದುಕೊಂಡಿದ್ದನು. ಲೋಕಗಳ ಸಾರಗಳಿಂದ ನಿರ್ಮಿತನಾಗಿದ್ದ ಅವನು ಅತಿಕಾಯನೂ ತೇಜಸ್ವಿಯೂ ಆಗಿದ್ದನು. ಪರ್ವತದಂತೆ ಎತ್ತರವಾಗಿಯೂ ಭಾರವಾಗಿಯೂ ಇದ್ದನು. ಆ ಪ್ರಭುವು ತನ್ನ ಮಹಿಮೆಯಿಂದ ಸರ್ವತ್ರ ವಿಖ್ಯಾತನಾಗಿದ್ದನು. ಪಾಕಶಾಸನ ಇಂದ್ರನು ಅವನ ಮಹಾತೇಜಸ್ಸಿಗೆ ಹೆದರಿ ಸದಾ ಉದ್ವಿಗ್ನನಾಗುತ್ತಿದ್ದನು. ಮಂತ್ರಯುಕ್ತವಾದ ಬ್ರಹ್ಮತೇಜಸ್ಸಿನಿಂದ ಹುಟ್ಟಿದ್ದ ಆ ವಜ್ರವನ್ನು ತುಂಬಾ ಕ್ರೋಧದಿಂದ ಪ್ರಯೋಗಿಸಿ ಬಗವಾನ್ ಇಂದ್ರನು ಎಂಟುನೂರಾಹತ್ತು ದೈತ್ಯ-ದಾನವ ವೀರರನ್ನು ಸಂಹರಿಸಿದನು.

ಅನಂತರ ಕಾಲವು ಕಳೆಯಲು ಮಹಾಭಯಂಕರವಾದ ಹನ್ನೆರಡು ವರ್ಷಗಳ ಅನಾವೃಷ್ಟಿಯು ಬಂದೊದಗಿತು. ಹನ್ನೆರಡು ವರ್ಷಗಳ ಆ ಬರಗಾಲದಲ್ಲಿ ಹಸಿವು ಬಾಯಾರಿಕೆಗಳಿಂದ ಬಳಲಿದ ಮಹರ್ಷಿಗಳು ಜೀವಿಕೆಗಾಗಿ ಎಲ್ಲ ದಿಕ್ಕುಗಳಿಗೂ ಓಡಿ ಹೋದರು. ದಿಕ್ಕಾಪಾಲಾಗಿ ಓಡಿ ಹೋಗುತ್ತಿರುವ ಅವರನ್ನು ನೋಡಿ ಸಾರಸ್ವತ ಮುನಿಯು ತಾನೂ ಹೋಗಲು ಮನಸ್ಸುಮಾಡಿದನು. ಆಗ ಸರಸ್ವತಿಯು ಅವನಿಗೆ ಹೇಳಿದಳು:

> “ಮಗನೇ! ಇಲ್ಲಿಂದ ಹೋಗಬೇಡ! ನಿನಗೆ ಆಹಾರವಾಗಿ
> ಸದಾ ಉತ್ತಮ ಮೀನುಗಳನ್ನು ಇಲ್ಲಿಯೇ ನೀಡುತ್ತೇನೆ!”

ಹೀಗೆ ಹೇಳಲು ಅವನು ನಿತ್ಯವೂ ಆಹಾರವನ್ನು ಸೇವಿಸಿಕೊಂಡು

ಪ್ರಾಣಗಳನ್ನೂ ವೇದಗಳನ್ನೂ ಉಳಿಸಿಕೊಂಡು ಪಿತೃ-ದೇವತೆಗಳನ್ನು ತೃಪ್ತಿಪಡಿಸಿದ್ದನು. ಆ ಅನಾವೃಷ್ಟಿಯು ಮುಗಿಯಲು ಮಹರ್ಷಿಗಳು ಪುನಃ ವೇದಾಧ್ಯಯನದ ಕಾರಣದಿಂದ ಅನ್ಯೋನ್ಯರನ್ನು ಪ್ರಶ್ನಿಸತೊಡಗಿದರು. ಹಸಿವುಬಾಯಾರಿಕೆಗಳಿಂದ ಬಳಲಿದ್ದ ಆ ವಿಧ್ವಾಂಸರಲ್ಲಿ ವೇದವು ನಷ್ಟವಾಗಿ ಹೋಗಿತ್ತು. ಅವರೆಲ್ಲರಲ್ಲಿ ವೇದಗಳನ್ನು ತಿಳಿದಿದ್ದ ಒಬ್ಬ ಪ್ರತಿಭಾವಂತನೂ ಇರಲಿಲ್ಲ. ಅವರಲ್ಲಿಯೇ ಒಬ್ಬ ಋಷಿಯು ವೇದಾಧ್ಯಯನ ಮಾಡುತ್ತಿದ್ದ ಸಂಶಿತಾತ್ಮ ಋಷಿಸತ್ತಮ ಸಾರಸ್ವತನ ಬಳಿ ಬಂದನು. ಅವನು ಹೋಗಿ ಇತರರಿಗೆ ನಿರ್ಜನ ವನದಲ್ಲಿ ಸ್ವಾಧ್ಯಾಯಮಾಡುತ್ತಿರುವ ಅತಿಪ್ರಭೆಯುಳ್ಳ, ಅಮರನಂತಿದ್ದ ಸಾರಸ್ವತ ಮುನಿಯ ಕುರಿತು ಹೇಳಿದನು. ಆ ಎಲ್ಲ ಮಹರ್ಷಿಗಳೂ ಅಲ್ಲಿಗೆ ಒಟ್ಟಾಗಿ ಹೋಗಿ ಮುನಿಶ್ರೇಷ್ಠ ಸಾರಸ್ವತನಿಗೆ ಹೇಳಿದರು:

> “ನಮಗೂ ವೇದಾಧ್ಯಯನ ಮಾಡಿಸು!”

ಎಂದು ಅವರು ಹೇಳಲು ಮುನಿಯು

> “ನೀವುಗಳು ವಿಧಿವತ್ತಾಗಿ ನನ್ನ ಶಿಷ್ಯತ್ವವನ್ನು ಅಂಗೀಕರಿಸಿರಿ!”

ಎಂದನು. ಆಗ ಆ ಋಷಿಗಣವು

> “ಪುತ್ರಕ! ನೀನು ಬಾಲಕನಾಗಿರುವೆ!”

ಎಂದು ಹೇಳಿದರು. ಆಗ ಅವನು ಪುನಃ ಮುನಿಗಳಿಗೆ ಹೇಳಿದನು:

> “ಇದರಿಂದ ಧರ್ಮವು ನಶಿಸುವುದಿಲ್ಲ! ಅಧರ್ಮದಿಂದ ಯಾರು ಹೇಳಿಕೊಡುತ್ತಾರೋ, ಅಧರ್ಮದಿಂದ ಮತ್ತೆ ಯಾರು ಅದನ್ನು ಸ್ವೀಕರಿಸುತ್ತಾರೋ ಅವರಿಬ್ಬರೂ ಬೇಗನೆ ನಾಶಹೊಂದುತ್ತಾರೆ ಅಥವಾ ವೈರಿಗಳಾಗುತ್ತಾರೆ. ಸಣ್ಣವರು ದೊಡ್ಡವರೆಂದಾಗಲೀ, ಸಂಪತ್ತಿರುವವರಿಗಾಗಲೀ, ಬಂಧುಗಳಿಗಾಗಲೀ ಋಷಿಗಳು ಧರ್ಮವನ್ನು ಮಾಡಿಟ್ಟಿರುವುದಿಲ್ಲ. ಧರ್ಮವನ್ನು ಅನುಸರಿಸುವವನೇ ದೊಡ್ಡವನು!”

ಅವನ ಆ ಮಾತನ್ನು ಕೇಳಿ ಮುನಿಗಳು ವಿಧಿಪೂರ್ವಕವಾಗಿ ಅವನಿಂದ ವೇದಗಳನ್ನು ಪಡೆದು ಪುನಃ ಧರ್ಮನಿರತರಾದರು. ಅರವತ್ತು ಸಾವಿರ ಮುನಿಗಳು ವೇದಾಧ್ಯಯನ ಕಾರಣದಿಂದ ವಿಪ್ರರ್ಷಿ ಸಾರಸ್ವತನ ಶಿಷ್ಯತ್ವವನ್ನು ವಹಿಸಿಕೊಂಡರು. ಬಾಲಕನಾಗಿದ್ದರೂ ಗುರುಸ್ಥಾನದಲ್ಲಿದ್ದ ಆ ವಿಪ್ರರ್ಷಿಯ ಆಸನಾರ್ಥವಾಗಿ ಎಲ್ಲರೂ ಮುಷ್ಟಿ ಮುಷ್ಟಿ ದರ್ಭೆಗಳನ್ನು ಹಿಡಿದುಕೊಂಡು ಬರುತ್ತಿದ್ದರು.

# ವೃದ್ಧಕನ್ಯೆ

ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ

ಪರ್ವದ ಸಾರಸ್ವತಪರ್ವದ ಅಧ್ಯಾಯ 51ರಲ್ಲಿ ಹೇಳುತ್ತಾನೆ.

ಮಹಾವೀರ್ಯನಾದ ಮಹಾಯಶಸ್ವಿಯಾದ ಕುಣಿರ್ಗಾಗ್ಯ ಎಂಬ ಋಷಿಯಿದ್ದನು. ತಪಸ್ವಿಗಳಲ್ಲಿ ಶ್ರೇಷ್ಠನಾದ ಆ ವಿಭುವು ವಿಪುಲ ತಪಸ್ಸನ್ನು ತಪಿಸಿ ಸುಂದರ ಹುಬ್ಬಿನ ಮಗಳೋರ್ವಳನ್ನು ಮನಸ್ಸಿನಿಂದಲೇ ಸೃಷ್ಟಿಸಿದನು. ಅವಳನ್ನು ನೋಡಿ ಮಹಾಯಶಸ್ವಿ ಕುಣಿರ್ಗಾಗ್ಯನು ಪರಮ ಪ್ರೀತನಾದನು. ದೇಹವನ್ನು ತ್ಯಜಿಸಿ ಅವನು ಸ್ವರ್ಗಕ್ಕೆ ತೆರಳಿದನು. ಸುಂದರ ಹುಬ್ಬಿನ, ಕಮಲದ ಎಸಳುಗಳಂತಹ ಕಣ್ಣುಗಳಿದ್ದ ಆ ಕಲ್ಯಾಣೀ ಅನಿಂದಿತೆಯು ಒಂದು ಆಶ್ರಮವನ್ನು ಮಾಡಿಕೊಂಡು ಉಗ್ರ ತಪಸ್ಸಿನಲ್ಲಿ ತೊಡಗಿದಳು. ಮೊದಲು ಅವಳು ಉಪವಾಸಾದಿಗಳಿಂದ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದಳು. ಅವಳ ಉಗ್ರ ತಪಸ್ಸು ದೀರ್ಘ ಕಾಲದವರೆಗೆ ನಡೆಯಿತು. ಅವಳ ತಂದೆಯು ಕೊಡಲು ಬಯಸಿದ್ದರೂ ಆ ಅನಿಂದಿತೆಯು ಯಾರನ್ನೂ ಗಂಡನನ್ನಾಗಿ ಇಚ್ಛಿಸಿರಲಿಲ್ಲ. ತನ್ನ ಸದೃಶ ಪತಿಯನ್ನು ಅವಳು ಕಂಡಿರಲಿಲ್ಲ. ಹೀಗೆ ನಿರ್ಜನ ವನದಲ್ಲಿ ಪಿತೃ-ದೇವತೆಗಳ ಅರ್ಚನೆಯಲ್ಲಿ ನಿರತಳಾಗಿ ಆ ಉಗ್ರ ತಪಸ್ಸಿನಿಂದ ತನ್ನ ದೇಹವನ್ನು ಪೀಡಿಸಿಕೊಂಡಿರುತ್ತಿದ್ದಳು. ತನ್ನನ್ನು ಕೃತಕೃತ್ಯಳೆಂದು ಭಾವಿಸಿದ್ದರೂ ಶ್ರಮಾನ್ವಿತಳಾದ ಅವಳು ತಪಸ್ಸಿನಿಂದ ಮತ್ತು ವೃದ್ಧಾಪ್ಯದಿಂದ ಕೃಶಳಾದಳು. ಅವಳಿಗೆ ತಾನಾಗಿಯೇ ಹೆಜ್ಜೆ-ಹೆಜ್ಜೆ ಮುಂದೆಹೋಗಲೂ ಸಾಧ್ಯವಾಗುತ್ತಿರಲಿಲ್ಲ. ಆಗ ಅವಳು ಪರಲೋಕಕ್ಕೆ ಹೋಗಲು

ಮನಸ್ಸುಮಾಡಿದಳು. ದೇಹತ್ಯಾಗಮಾಡಲು ಬಯಸಿದ ಅವಳನ್ನು ನೋಡಿ ನಾರದನು ಹೇಳಿದನು:

> "ಅನಘೇ! ಅಸಂಸ್ಕೃತೆಯಾದ ಕನ್ಯೆಯು ಹೇಗೆ ತಾನೇ ಪುಣ್ಯಲೋಕಗಳನ್ನು ಪಡೆಯುವಳು? ನೀನು ಪರಮ ತಪಸ್ಸನ್ನು ಸಾಧಿಸಿದ್ದೀಯೆ ಎಂದು ನಾವು ದೇವಲೋಕದಲ್ಲಿ ಕೇಳಿದ್ದೇವೆ. ಆದರೆ ನಿನಗೆ ಪುಣ್ಯಲೋಕಗಳು ದೊರೆಯಲಾರವು!"

ನಾರದನ ಆ ಮಾತನ್ನು ಕೇಳಿ ಅವಳು ಋಷಿಸಂಸದಿಯಲ್ಲಿ

> "ಸತ್ತಮರೇ! ನನ್ನ ಪಾಣಿಗ್ರಹಣಮಾಡಿಕೊಳ್ಳುವವನಿಗೆ ತಪಸ್ಸಿನ ಅರ್ಧಭಾಗವನ್ನು ಕೊಡುತ್ತೇನೆ"

ಎಂದಳು. ಅವಳು ಹೀಗೆ ಹೇಳಲು ಗಾಲವನಲ್ಲಿ ಹುಟ್ಟಿದ್ದ ಶೃಂಗವಾನ್ ಎಂಬ ಹೆಸರಿನ ಋಷಿಯು ಅವಳ ಪಾಣಿಗ್ರಹಣ ಮಾಡಿ ಕರಾರಾಗಿ ಈ ಮಾತನ್ನಾಡಿದನು:

> "ಶೋಭನೇ! ಒಂದು ಒಪ್ಪಂದದ ಮೇರೆಗೆ ನಾನು ನಿನ್ನ ಪಾಣಿಗ್ರಹಣ ಮಾಡಿಕೊಳ್ಳುತ್ತೇನೆ. ನೀನು ನನ್ನೊಡನೆ ಒಂದೇ ಒಂದು ರಾತ್ರಿಯನ್ನು ಕಳೆಯಬೇಕು."

ಹಾಗೆಯೇ ಆಗಲೆಂದು ಹೇಳಲು ಅವಳು ಅವನಿಗೆ ತನ್ನ ಕೈಯನ್ನಿತ್ತಳು.

ಗಾಲವಿಯೂ ಕೂಡ ಅವಳ ಕೈಯನ್ನು ಹಿಡಿದುಕೊಂಡನು. ರಾತ್ರಿಯಲ್ಲಿ ಅವಳು ದಿವ್ಯಾಭರಣ ವಸ್ತ್ರಗಳನ್ನು ಧರಿಸಿ, ದಿವ್ಯ ಗಂಧಗಳನ್ನು ಲೇಪಿಸಿಕೊಂಡು ತರುಣಿಯೂ, ದೇವವರ್ಣಿನಿಯೂ ಆದಳು. ತನ್ನನ್ನೇ ಬೆಳಗಿಸುವಂತಿದ್ದ ಅವಳನ್ನು ನೋಡಿ ಗಾಲವಿಯು ಪ್ರೀತನಾಗಿ ಅವಳೊಂದಿಗೆ ಏಕಾಂತ ವಾಸವನ್ನು ಮಾಡಿದನು. ಬೆಳಗಾಗುತ್ತಲೇ ಅವಳು ಅವನಿಗೆ ಹೇಳಿದಳು:

> "ವಿಪ್ರ! ನೀನೇ ಮಾಡಿಕೊಂಡ ಒಪ್ಪಂದದಂತೆ ನಾನು ನಿನ್ನೊಡನೆ ವಾಸಿಸಿದ್ದೇನೆ. ನಿನಗೆ ಮಂಗಳವಾಗಲಿ. ನಾನಿನ್ನು ಹೊರಡುತ್ತೇನೆ."

ಬೀಳ್ಕೊಂಡ ಅವಳು ಪುನಃ ಹೇಳಿದಳು:

> "ಈ ತೀರ್ಥದಲ್ಲಿ ಸಮಾಹಿತರಾಗಿ ದಿವೌಕಸರಿಗೆ ತರ್ಪಣಗಳನ್ನಿತ್ತು ಒಂದು ರಾತ್ರಿ ವಾಸಿಸುವವರಿಗೆ ಐವತ್ತೆಂಟು ವರ್ಷಗಳವರೆಗೆ ಬ್ರಹ್ಮಚರ್ಯವನ್ನು ಪಾಲಿಸಿದ ಫಲವು ದೊರೆಯುತ್ತದೆ."

ಹೀಗೆ ಹೇಳಿ ಆ ಸಾಧ್ವಿಯು ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ಹೋದಳು. ಋಷಿಯಾದರೋ ಅವಳ ರೂಪವನ್ನೇ ಸ್ಮರಿಸಿಕೊಳ್ಳುತ್ತಾ ದೀನನಾದನು. ಒಪ್ಪಂದದಂತೆ ಬಹಳ ಕಷ್ಟದಿಂದ ಅವಳ ತಪಸ್ಸಿನ ಅರ್ಧಫಲವನ್ನು ಸ್ವೀಕರಿಸಿದನು. ಅವಳ ರೂಪಬಲ ಮತ್ತು ಆಕರ್ಷಣೆಯ ದುಃಖದಿಂದ

ಅವನು ತನ್ನನ್ನು ಕೂಡ ಸಾಧನೆಗೆ ತೊಡಗಿಸಿಕೊಂಡು ಅವಳ ದಾರಿಯಲ್ಲಿಯೇ ಹೋದನು.

# ಕುರುಕ್ಷೇತ್ರ ಮಹಾತ್ಮೆ

## ಈ ಕಥೆಯನ್ನು ವೈಶಂಪಾಯನನು ಜನಮೇಜಯನಿಗೆ ಶಲ್ಯ ಪರ್ವದ ಸಾರಸ್ವತಪರ್ವದ ಅಧ್ಯಾಯ 52ರಲ್ಲಿ ಹೇಳುತ್ತಾನೆ.

ಸನಾತನ ಸಮಂತಪಂಚಕವನ್ನು ಪ್ರಜಾಪತಿಯ ಉತ್ತರವೇದಿಯೆಂದು ಕರೆಯುತ್ತಾರೆ. ಮಹಾವರಪ್ರದ ದಿವೌಕಸರೇ ಹಿಂದೆ ಇಲ್ಲಿ ಶ್ರೇಷ್ಠ ಸತ್ರಗಳನ್ನು ಯಾಜಿಸಿದ್ದರು. ಹಿಂದೆ ರಾಜರ್ಷಿಶ್ರೇಷ್ಠ ಧೀಮತ ಅಮಿತ ತೇಜಸ್ವಿ ಮಹಾತ್ಮ ಕುರುವು ಅನೇಕ ವರ್ಷಗಳು ಹೂಳುತ್ತಿದ್ದುದರಿಂದ ಈ ಪ್ರದೇಶವು ಕುರುಕ್ಷೇತ್ರವೆಂದು ಪ್ರಸಿದ್ಧವಾಯಿತು.

ಹಿಂದೆ ಸತತವೂ ನಿಂತು ಉಳುತ್ತಿದ್ದ ಕುರುವನ್ನು ಶಕ್ರನು ತ್ರಿದಿವದಿಂದ ಬಂದು ಭೇಟಿಮಾಡಿ ಇದರ ಕಾರಣವನ್ನು ಕೇಳಿದ್ದನು:

> "ರಾಜನ್! ಯಾವ ಕಾರಣದಿಂದ ಈ ಮಹಾಪ್ರಯತ್ನವನ್ನು ಮಾಡುತ್ತಿದ್ದೀಯೆ? ಈ ಭೂಮಿಯನ್ನು ಸತತವಾಗಿ ಉಳುತ್ತಿರುವ ಉದ್ದೇಶವಾದರೂ ಏನು?"
>
> ಕುರುವು ಹೇಳಿದನು: "ಶತಕ್ರತೋ! ಈ ಕ್ಷೇತ್ರದಲ್ಲಿ ಯಾರು

ಮರಣಹೊಂದುತ್ತಾರೋ ಅವರು ಪಾಪಗಳನ್ನು
ಕಳೆದುಕೊಂಡು ಸುಕೃತ ಲೋಕಗಳಿಗೆ ಹೋಗುತ್ತಾರೆ.”

ಆಗ ಪ್ರಭು ಶಕ್ರನು ಅಪಹಾಸ್ಯಮಾಡಿ ತ್ರಿದಿವಕ್ಕೆ ತೆರಳಿದನು. ರಾಜರ್ಷಿಯಾದರೋ ಸ್ವಲ್ಪವೂ ನಿರ್ವಿಣ್ಣನಾಗದೇ ಭೂಮಿಯನ್ನು ಉಳುತ್ತಲೇ ಇದ್ದನು. ಶತಕ್ರತುವು ಪುನಃ ಪುನಃ ಬಂದು ಅವನನ್ನು ಅಪಹಾಸ್ಯಮಾಡಿ ಕೇಳುತ್ತಿದ್ದನು. ಅವನು ನಿರ್ವಿಣ್ಣನಾಗದೇ ಮತ್ತೆ ಮತ್ತೆ ಅದೇ ಉತ್ತರವನ್ನು ನೀಡುತ್ತಿದ್ದನು. ನೃಪನಾದರೋ ಉಗ್ರ ತಪಸ್ಸಿನಂತೆ ಭೂಮಿಯನ್ನು ಉಳುತ್ತಿದ್ದನು. ಆಗ ಶಕ್ರವು ರಾಜರ್ಷಿಯ ಉದ್ದೇಶವನ್ನು ದೇವತೆಗಳಿಗೆ ತಿಳಿಸಿದನು. ಅದನ್ನು ಕೇಳಿ ದೇವತೆಗಳು ಸಹಸ್ರಾಕ್ಷನಿಗೆ ಈ ಮಾತನ್ನಾಡಿದರು:

“ಶಕ್ರ! ಸಾಧ್ಯವಾದರೆ ರಾಜರ್ಷಿಗೆ ವರದಾನವನ್ನಿತ್ತು
ಅವನನ್ನು ಒಲಿಸಿಕೋ! ಒಂದುವೇಳೆ ಮಾನವರು ಇಲ್ಲಿ
ಮರಣಹೊಂದಿ ಸ್ವರ್ಗಕ್ಕೆ ಹೋಗುತ್ತಾರೆಂದಾದರೆ ನಮಗೆ
ಕ್ರತುಗಳಲ್ಲಿ ಭಾಗವು ದೊರೆಯದಂತಾಗುತ್ತದೆ.”

ಆಗ ಶಕ್ರನು ರಾಜರ್ಷಿಯಲ್ಲಿಗೆ ಬಂದು ಹೇಳಿದನು:

“ಇನ್ನು ನೀನು ಕಷ್ಟಪಡಬೇಡ! ನನ್ನ ಮಾತಿನಂತೆ ಮಾಡು!
ನೃಪ! ಇಲ್ಲಿ ಮಾನವರು ನಿರಾಹಾರರಾಗಿ ಅತಂದ್ರಿತರಾಗಿ
ದೇಹತ್ಯಾಗಮಾಡುತ್ತಾರೋ ಅಥವಾ ಯುದ್ಧದಲ್ಲಿ

ಹತರಾಗುತ್ತಾರೋ ಅವರೆಲ್ಲರೂ ಸ್ವರ್ಗಕ್ಕೆ ಹೋಗುತ್ತಾರೆ. ಅವರೆಲ್ಲರೂ ಸ್ವರ್ಗಕ್ಕೆ ಭಾಗಿಗಳಾಗುತ್ತಾರೆ.”

ಅನಂತರ ಹಾಗೆಯೇ ಆಗಲೆಂದು ರಾಜ ಕುರುವು ಶಕ್ರನಿಗೆ ಹೇಳಿದನು. ಆಗ ಅವನಿಂದ ಅನುಮತಿಯನ್ನು ಪಡೆದು ಒಳಗಿಂದೊಳಗೇ ಪ್ರಹೃಷ್ಟನಾಗಿ ಬಲನಿಷೂದನನು ಬೇಗನೆ ತ್ರಿದಿವಕ್ಕೆ ತೆರಳಿದನು. ಹೀಗೆ ಹಿಂದೆ ಉಳುತ್ತಿದ್ದ ರಾಜರ್ಷಿಯು ಶಕ್ರನಿಂದ ಅನುಜ್ಞಾತನಾಗಿ ಪುಣ್ಯ ಪ್ರಾಣಗಳನ್ನು ತೊರೆದನು. ಕುರುಕ್ಷೇತ್ರಕ್ಕೆ ಸಂಬಂಧಿಸಿದಂತೆ ಸ್ವಯಂ ಸುರಾಧಿಪನೇ ಹಾಡಿದ ಈ ಶ್ಲೋಕಗಳಿವೆ!

“ಗಾಳಿಯಿಂದ ತೂರಿಕೊಂಡೊಯ್ಯಲ್ಪಟ್ಟ ಕುರುಕ್ಷೇತ್ರದ ಧೂಳು ಕೂಡ ದುಷ್ಕರ್ಮಿಗಳಾಗಿದ್ದವರನ್ನು ಪರಮ ಗತಿಗೆ ಕೊಂಡೊಯ್ಯುತ್ತದೆ. ನರಸಿಂಹರಾದ ಬ್ರಾಹ್ಮಣಸತ್ತಮರೂ ಮತ್ತು ನೃಗಾದಿ ನರದೇವಮುಖ್ಯರೂ ಮಹಾವೆಚ್ಚದ ಇಷ್ಟಿ ಕ್ರತುಗಳನ್ನು ಮಾಡಿ ದೇಹಗಳನ್ನು ತೊರೆದು ಸರ್ಗವನ್ನು ಪಡೆದರು. ತರಂತುಕ, ಕಾರಂತುಕ, ರಾಮಹ್ರದ ಮತ್ತು ಮಚಕ್ರುಕಗಳ ಮಧ್ಯದಲ್ಲಿರುವ ಇದೇ ಕುರುಕ್ಷೇತ್ರ ಸಮಂತಪಂಚಕವನ್ನು ಪ್ರಜಾಪತಿಯ ಉತ್ತರವೇದಿ ಎಂದು ಕರೆಯಲ್ಪಡುತ್ತದೆ. ಮಹಾಪುಣ್ಯವೂ ಮಂಗಳಕರವೂ ಆಗಿರುವ ಇದು ಸ್ವರ್ಗದ ಗುಣಗಳನ್ನು ಹೊಂದಿದ್ದು ದಿವೌಕಸರಿಗೆ ಸುಸಮ್ಮತವಾಗಿದೆ. ಆದುದರಿಂದ ಅಲ್ಲಿ

ಹತರಾದ ಸರ್ವ ರಾಜರೂ ಮಹಾತ್ಮರ ಗತಿಯನ್ನು ಹೊಂದುತ್ತಾರೆ."

